ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೮-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ... ೦ ೪-೦
ವಿ.ಪಿ.ಯಿಂದ ಹಣ ತರುವವರು
ವಿ. ಪಿ. ವೆಚ್ಚ [illegible] ಹೆಚ್ಚಿಗೆ
ಕೊಡಬೇಕು.
ವರ್ಗಣಿಯು ಮುಂಗಡ ಕೊಟ್ಟಿರತಕ್ಕದ್ದು

Reg. No. B 1270. Monday, 7th January, 1946.

ಕಾನಡಾವೃತ್ತ

ವರ್ಷ ೨೮] **THE KANARA NEWS.** [ಸಂಚಿಕೆ ೨೬.

ಕುಮಟಾ:- ಸೋಮವಾರ. ತಾ. ೭ ನೆಯ ಜನವರಿ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪೈಕಾ ೧೩ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲ್ ಪೈಕಾ ೧೩ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ಠರಾಯಿಸಬೇಕು.

ನೇತಾಜಿ ಸುಭಾಸರು ಎಲ್ಲಿ ?

(ಪ್ರೇಕ್ಷಕನು ಬರೆದುದು)

ನಾನೇನು ಹೇಳಲಿ! ಈ ವಿಷಯದಲ್ಲಿ ನನ್ನ ಮನ [illegible] ದೇಶಗೌರವ ಸುಭಾಷಚಂದ್ರ ಬೋಸರು ವಿಮಾನ ಹತ್ತಿ ಟೋಕಿಯೋಕ್ಕೆ ಹೋಗುತ್ತಿರುವಾಗ ಜಪಾನದೇಶದ ತಾಯ್‌ಹೋಕ್ ಊರ ಸಮೀಪ ವಿಮಾನ ಮುರಿದು ಬಿದ್ದುದರಿಂದ ಗಾಯಗೊಂಡ ಸುಭಾಷರು ಚಿಕಿತ್ಸಾಲಯದಲ್ಲಿ ಕಳೆದ ಆಗೋಸ್ತ ತಾ ೧೮ನೇ ತೀರಿಕೊಂಡರೆಂದು ತಾ ೨೪ನೇಗೆ ಹಿಂದುಸ್ಥಾನಕ್ಕೆ ಸುದ್ದಿ ಬಂತು. ಆದಾಗ್ಯೂ ಸುಭಾಷರ ಮರಣದ ಸಂಬಂಧದಲ್ಲಿ ಚರ್ಚೆ ನಡೆದಿದೆ. ಮುಂಬಯಿಯಲ್ಲಿ ಸೇರಿದ ಅ॥ ಭಾ॥ ಕೊಂಗ್ರೆಸ ಸಮಿತಿಯ ಸಭೆಯಲ್ಲಿ ಶ್ರೀ ಸುಭಾಷಚಂದ್ರ ಬೋಸರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲಿಲ್ಲ. ಸುಭಾಷರ ಮರಣದ ವಾರ್ತೆ ನಿಜವಿರುತ್ತದೆಂದು ತಮ್ಮ ಮಾಹಿತಿಯಾಗಿ [illegible] ರಾಷ್ಟ್ರಪತಿ ಮೌಲಾನಾ ಅಬುಲ್‌ಕಲಮ ಆಝಾದರು ಹೇಳಿ ಆಕ್ಷೇಪಕರ ಬಾಯಿ ಮುಚ್ಚಿದ್ದು ನೀವು ಅರಿತಿರಬೇಕು. ಸುಭಾಷರ ಅಸ್ಥಿಗಳನ್ನು ಹಿಂದುಸ್ಥಾನಕ್ಕೆ ಕಳುಹುವ [illegible] ಟೋಕಿಯೋದಲ್ಲಿ ಇಟ್ಟಿರುವರೆಂದು "ಮುಂಬಯಿ ಕ್ರೋನಿಕಲ್" ಪತ್ರಿಕೆಯ ದಿಲ್ಲಿ ಬಾತ್ಮೀದಾರರು ತಿಳಿಸುತ್ತಾರೆ. ಸುಭಾಷಚಂದ್ರರು ಹಿಂದುಸ್ಥಾನದಿಂದ ಗುಪ್ತವಾಗಿ ವಿದೇಶಗಳಿಗೆ ಹೋಗಿ, ಮುಂದೆ ರಂಗೂನ ಪತನವಾದ ಮೇಲೆ [illegible] ತಾತ್ಕಾಲಿಕ ಹಿಂದುಸ್ಥಾನದ ಸ್ವತಂತ್ರ ರಾಷ್ಟ್ರೀಯ ಸರಕಾರ ಸ್ಥಾಪಿಸಿದರೆಂದೂ, ಅಂತಹ ಸರಕಾರಕ್ಕೆ [illegible] ಮಾನ್ಯತೆಯನ್ನು [illegible] ನೀಡಿದರೆಂದೂ, [illegible] ಆಗಿ ೧ ಪ್ರಧಾನ ಮಂಡಲವನ್ನು, ೧ ಸೇನಾ ಮಂಡಲವನ್ನೂ, ೧ ರಾಷ್ಟ್ರೀಯ ಬೇಂಕನ್ನು [illegible] ಟಂಕಶಾಲೆಯಿಂದ ನಾಣ್ಯಗಳನ್ನು ಹೊರಡಿಸಿದರೆಂದೂ, ಜಗತ್ತಿನ ಸೇನಾಪತಿಗಳು ಕೂಡ ಪ್ರಶಂಸಿಸುವಂತೆ ಮಲಾಯಾ, ಸಿಂಗಾಪುರ ಬ್ರಹ್ಮದೇಶ ಪ್ರದೇಶಗಳಿಂದ ಆಂಗ್ಲರು ಓಡಿ ಹೋದ ಮೇಲೆ ಉಳಿದ ಹಿಂದೀ ಪ್ರಜೆಗಳನ್ನು ಸಂರಕ್ಷಿಸಿದರೆಂದೂ, ಎಲ್ಲ ಅಧಿಕಾರವನ್ನು ಜನರ ಸಮ್ಮತಿಯಿಂದಲೂ ಸಮರ್ಥರಿಂದಲೂ ನಡಿಸಿದರೆಂದೂ, ಬರ್ಮಾ ಸರಕಾರವು ಅಂದಮಾನ್ ನಿಕೋಬಾರ ದ್ವೀಪಗಳನ್ನು ಆಝಾದ ಹಿಂದೀ ಸರಕಾರಕ್ಕೆ ಒಪ್ಪಿಸಿದ್ದರೂ, ಸುಭಾಷರು ಜಪಾನದ ಕೈಗೊಂಬೆಯಾಗಿ ನಡೆಯದೆ ಸ್ವತಂತ್ರ ಹಿಂದುಸ್ಥಾನದ ಪ್ರತಿನಿಧಿಯಾಗಿ ವ್ಯವಹರಿಸಿದರೆಂದೂ ಈವಾಗ ಪ್ರಚುರವಾಗಿದೆ. ಇಷ್ಟಾಗಿ ಶ್ರೀ ಸುಭಾಷರು ಆ ಗೌರವವನ್ನಾಗಲಿ [illegible] ಅಪೇಕ್ಷಿಸಲಿಲ್ಲ. ಪರತಂತ್ರ ಹಿಂದುಸ್ಥಾನವನ್ನು ತ್ವರ್ಯವೇ ಸ್ವತಂತ್ರಗೊಳಿಸುವದಕ್ಕಾಗಿ ಸರ್ವ [illegible] ಅವರು ಸತತೋದ್ಯೋಗ ನಡಿಸುತ್ತಿದ್ದರು. ಅವರು [illegible] ತಾಸುಗಳಲ್ಲಿ [illegible] ಮಲಗಿದರೆ ಹೆಚ್ಚಾಯಿತು. ಅವರು ಸಹ ರಾತ್ರಿ ಕಾಲದಲ್ಲೇ ಎಂದು ಹೇಳಬಹುದಿಲ್ಲ. ಹಗಲು ಇಲ್ಲವೆ ರಾತ್ರಿ ಸಮಯಾನುಕೂಲವಾದಾಗ ಸುಭಾಷರು ಒರಗಿಕೊಳ್ಳುತ್ತಿದ್ದರು. ಹಿಂದೀ ರಾಷ್ಟ್ರೀಯ ಸೈನಿಕರೊಳಗೆ ತಾವೂ ಒಬ್ಬ ಸೈನಿಕರೆಂದು ಎಣಿಸಿ, ಅವರಂತೆಯೇ ತಾವು ಅವರಷ್ಟೇ ಆಹಾರ ಊಟಮಾಡುತ್ತಿದ್ದರು. ಸುಭಾಷರಿಗೆ ಎಳ್ಳಷ್ಟೂ ಸ್ವಾರ್ಥವಿದ್ದಿಲ್ಲ. ಮಲಾಯಾ, ಬ್ರಹ್ಮದೇಶಗಳಲ್ಲಿ ವಾಸಿಸುವ ಹಿಂದೀಯರು ನಾಲ್ಕು ಸಲ ಸುಭಾಷರ ತುಲಾಭಾರ ಮಾಡಿ ಚಿನ್ನವನ್ನು ಅವರಿಗೆ ಅರ್ಪಿಸಿದ್ದರು. ಅದನ್ನು ಸುಭಾಷರು ಹಿಂದೀ ರಾಷ್ಟ್ರೀಯ ಸೈನ್ಯದ ನಿಧಿಗೆ ಕಾಣಿಕೆ ಕೊಟ್ಟರು. ಸುಭಾಷರ ಹುಟ್ಟು-ಹಬ್ಬದ ದಿನ ಅಂದರೆ ಜನವರಿ ತಾ. ೨೩ಕ್ಕೆ ಬ್ರಹ್ಮದೇಶದ ವರ್ತಕರೊಬ್ಬರು ವಜ್ರದ ಕಿರೀಟವನ್ನು ತಯಾರಿಸಿ ಸುಭಾಷರಿಗೆ ಅರ್ಪಿಸಿದ್ದರು. ಅದನ್ನು ಧರಿಸಲು ಸುಭಾಷರು ನಿರಾಕರಿಸಿ ಕಿರೀಟ ಹಾಕಿಕೊಳ್ಳುವ ಇಚ್ಛೆ ತಮಗಿಲ್ಲವಾಗಿ ಸ್ಪಷ್ಟಗೊಳಿಸಿದರು.

ಸುಭಾಷರು ರಂಗೂನದಲ್ಲಿದ್ದಾಗ ಅವರನ್ನು ಸೆರೆಹಿಡಿಯಬೇಕೆಂದು ಬ್ರಿಟಿಶ ಅಧಿಕಾರಿಗಳು ಯತ್ನಿಸಿದರು. ಈ ಸುದ್ದಿ ತಿಳಿದೊಡನೆ ಅವರು ಬ್ರಿಟಿಶ್ ಸೈನಿಕರ ವೇಷಧಾರಣ ಮಾಡಿ ಕುದುರೆ ಹತ್ತಿ ರಂಗೂನದಿಂದ ಪಾರಾದರು. ಹಿಂದೀ ರಾಷ್ಟ್ರೀಯ ಸೈನಿಕರಿಗೆ ಅವರು " ದಿಲ್ಲಿ ಚಲೋ " ಎಂಬ ಮಂತ್ರ ಕಲಿಸಿ ಕೊಟ್ಟಿದ್ದರು. ಹಿಂದೀ-ಬ್ರಿಟಿಶ ಗಡಿಯ ಮೇಲೆ ರಣ ಕಹಳೆಯನ್ನು ಊದಿ ಈ ಸೈನಿಕರು ಕಾದಾಟ ಮಾಡಿ ಬಂದಿದ್ದರು. ಮುಂದೆ ಜಪಾನದ ಸಾಮ್ರಾಜ್ಯವಾದಿಗಳ ಪರವಾಗಿ ಹಿಂದುಸ್ಥಾನದ ಮೇಲೆ ಈ ದಾಳಿಯಾಗುತ್ತದೆಂಬ ಭಾವನೆಯಾಗಿ ಇಲ್ಲಿ ವಿರೋಧವಾದ್ದರಿಂದ ಹಿಂದೀ ರಾಷ್ಟ್ರೀಯ ಸೈನ್ಯ ಮುಂದರಿಯಲಿಲ್ಲವಂತೆ.

ಪರತಂತ್ರ ಹಿಂದುಸ್ಥಾನವನ್ನು ಸ್ವತಂತ್ರಗೊಳಿಸಬೇಕೆಂಬ ಪಣತೊಟ್ಟ ಶ್ರೀ ಸುಭಾಷರಿಗೆ ಮರಣವಿಲ್ಲೆಂದೂ ನಾವು ಕೇಳುತ್ತಿರುವ ಮರಣ-ವಾರ್ತೆಗಳು ಸಟೆಯೆಂದೂ ಬ್ರಹ್ಮದೇಶದಿಂದ ಬಿಡುಗಡೆಯಾಗಿ ಭಾರತಕ್ಕೆ ಬಂದ ಹಿಂದೀ ರಾಷ್ಟ್ರೀಯ ಸೈನ್ಯದೊಳಗಿನ ಜನರು ಹೇಳುತ್ತಾರೆ. ಸುಭಾಷರು ತೀರಿಕೊಂಡ ಸುದ್ದಿ ನಂಬಿಗೆಗೆ ಪಾತ್ರವಿರುತ್ತದೆಂದು ಅವರ ಅಣ್ಣಂದಿರಾದ ಶ್ರೀ ಶರತ್ಚಂದ್ರ ಬೋಸರು ಹೇಳುತ್ತಿದ್ದರೂ ಸುಭಾಷರು ತೀರಿಕೊಂಡದ್ದು ಪೂರ್ತಿ ನಿಜವೆಂದು ಖಾತ್ರಿಯಾಗುವ ವರೆಗೆ ಅವರ ಶ್ರಾದ್ಧಾದಿಗಳನ್ನು ಮಾಡಕೂಡದಾಗಿ [illegible] ಅವರ ಮನೆಯವರು ಅಭಿಪ್ರಾಯಪಟ್ಟಿದ್ದರಂತೆ. ಸುಭಾಷರ ಹಿಂದೀ ರಾಷ್ಟ್ರೀಯ ಸೈನ್ಯದ ಪ್ರಮುಖರಾದ ಕರ್ನಲ್ ಹಬೀಬುರ ರೆಹಮಾನರು ಜಪಾನದಿಂದ ಸುಭಾಷರ ಮುಂಗೈ ಗಡಿಯಾರವನ್ನು ತಂದು ಅವರ ಮನೆಯವರಿಗೆ ಒಪ್ಪಿಸುವದಕ್ಕಾಗಿ ಪಂ॥ ಜವಾಹರಲಾಲರಿಗೆ ಕೊಟ್ಟಿದ್ದರು. ಪಂ॥ ಜವಾಹರಲಾಲರು ಕಳೆದ ತಿಂಗಳಲ್ಲಿ ಕಲಕತ್ತೆಗೆ ಹೋದಾಗ ಅದನ್ನು ಶ್ರೀ ಶರತ್ಚಂದ್ರರಿಗೆ ಕೊಟ್ಟರು. ಆ ಕಾಲದಲ್ಲಿ ಮನೆಯವರೆಲ್ಲ ನೆರೆದಿದ್ದರಂತೆ. ಆದರೆ ಆ ಗಡಿಯಾರವನ್ನು ಪಡಕೊಳ್ಳಲು [illegible] ಯಾರೂ ಮುಂದೆ ಬರಲಿಲ್ಲವೆಂದು [illegible] ಬಂದಿರುವದಾಗಿ ಪ್ರಕಟವಾಗಿದೆ. ಆ ಗಡಿಯಾರದ ಮೇಲೆ ಬೆಂಕಿಯ [illegible] ಗುರುತುಗಳಿದ್ದುವಂತೆ. ಸುಭಾಷರ ಕಾರ್ಯದರ್ಶಿ [illegible] ಶ್ರೀ [illegible] ಸುಭಾಷರ ಸತ್ತದ್ದು ಸಟೆಯೆಂದು ಹೇಳಿದ್ದಾರೆ. ಇದಕ್ಕೆ ಆಧಾರವೇನೆಂದು ಪತ್ರಿಕಾ ಪ್ರತಿನಿಧಿಗಳು ಕೇಳಲಾಗಿ, ಈಗ ನಾವು ಹೇಳಲಾರೆವೆಂದು ಶ್ರೀ [illegible] ತಿಳಿಸಿದರು. ಮಹಾತ್ಮರು ಪೂರ್ವ ಬಂಗಾಲ ಪ್ರದೇಶದಲ್ಲಿ ಸಂಚಾರ ಮಾಡಿ ನೆನ್ನೆ ಕೊಂಟಾಯಿಗೆ ಬಂದಾಗ ರಾಷ್ಟ್ರಸಭೆಯ ಕಾರ್ಯಕರ್ತರೊಡನೆ ಮಾತನಾಡುವಾಗ ಸುಭಾಷರು ಇನ್ನೂ ಬದುಕಿರುವರೆಂದೂ ಎಲ್ಲೋ ಅಡಗಿರುವರೆಂದೂ ನಿರ್ಧಾರದಿಂದ ಹೇಳಿದ್ದಾರೆ. ಮಹಾತ್ಮರ ಮಾತಿನಲ್ಲಿ [illegible] ಇರಲಾರದು. ಸುಭಾಷರು ಜೀವಂತರಿದ್ದಾರೆಂದು ಕೇಳಲು ನಿಜವಾಗಿಯೂ ನಾನು ಸಂತೋಷಪಡುತ್ತೇನೆ. ನಾಗಪುರದ " ಹಿತವಾದ " ಪತ್ರಿಕೆಯ ಸಂಪಾದಕ ಶ್ರೀ ಮಾಣೆಯವರು ಸದ್ಯಕ್ಕೆ ಬ್ರಹ್ಮದೇಶದಿಂದ ಮರಳಿದ್ದಾರೆ. ಸುಭಾಷರು ಸತ್ತ ಸುದ್ದಿ ಸಟೆಯೆಂದು ಅವರೂ ಅಭಿಪ್ರಾಯಪಡುತ್ತಾರೆ. ಆಗೋಸ್ತ ತಾ ೧೮ಕ್ಕೆ ಒದಗಿದ ವಿಮಾನ ಅಪಘಾತವನ್ನು ಅವರು ಒಪ್ಪಿಕೊಳ್ಳುವದಿಲ್ಲ. ಆ ದಿನ ಸಿಂಗಾಪುರದಿಂದ ಹೊರಟ ವಿಮಾನಗಳ ಸಂಖ್ಯೆ ೩ ಇತ್ತಾಗಿಯೂ, ಅವುಗಳಲ್ಲಿ ೧ ವಿಮಾನ [illegible] ಇನ್ನೊಂದು ವಿಮಾನ ಸುರಕ್ಷಿತವಾಗಿ ಮುಂದರಿಯಿತೆಂದೂ ಶ್ರೀ ಮಾಣೆಯವರು ಹೇಳುತ್ತಾರೆ.

ಆಗೋಸ್ತ ತಾ. ೧೬ಕ್ಕೆ ಜಪಾನ ಶರಣಾಗತವಾಯಿತು. ಮರುದಿನ ಜಪಾನಿ ಸೈನಿಕರೆಲ್ಲರೂ ತಮ್ಮ ತಮ್ಮ ಶಸ್ತ್ರಗಳನ್ನು ಒಪ್ಪಿಸುತ್ತಿದ್ದರು. ಆ ಕಾಲದಲ್ಲಿ ಸುಭಾಷರು ಸಿಂಗಾಪುರದಲ್ಲಿದ್ದರು. ಮರುದಿನ ಮಧ್ಯಾಹ್ನ ಯಾರಿಗೂ ತಿಳಿಸದೆ ಅವರು ಟೋಕಿಯೋಕ್ಕೆ ಹೊರಟರು. ಅಲ್ಲಿ ಯಾರೊಡನೆಯೂ ಮಾತಾಡಲಿಲ್ಲವೆಂದೂ ತಮ್ಮ ಚಟುವಟಿಕೆಗಳಲ್ಲಿ ಗುಪ್ತವಾಗಿರಬೇಕಾಗಿ ಬಯಸಿದರೆಂದೂ ಜಪಾನದೊಳಗೆ ವಾರ್ತೆ ಹಬ್ಬಿತು. ಇದನ್ನು ಶ್ರೀ ಮಾಣೆಯವರು ಸ್ಥಿರಪಡಿಸುತ್ತಾರೆ. ವಿಮಾನಕ್ಕೆ ಅಪಘಾತವಾಗಿ ಅದರಲ್ಲಿ ಸುಭಾಷರು ಗಾಯಪಟ್ಟರೆಂಬ ಸುದ್ದಿ ಮಾತ್ರ ಜನರಿಗೆ [illegible]. ಅವರನ್ನು ನೋಡಿದ್ದಕ್ಕೆ ಯಾರೂ [illegible] ಸಮಾಚಾರವೆಲ್ಲ ಗುಪ್ತದಿಂದಲೇ ನಡೆಯಿತು. ಸುಭಾಷರಂತಹ ಶ್ರೇಷ್ಠ ದೇಶ ವೀರರ ಸಂಬಂಧದಲ್ಲಿ ಇಷ್ಟು ರಹಸ್ಯವಿಡುವ ಕಾರಣವಿದ್ದಿಲ್ಲ. ಇದರ ಮೇಲಿಂದ ಅವರ ವಿಮಾನದ ಅಪಘಾತ ಪೂರ್ವ ಸಂಕೇತದಂತೆ ಒದಗಿರಬಹುದಾಗಿ ಅನಿಸುತ್ತದೆ. ಸುಭಾಷರು [illegible] ಅಂತೂ, ಹಿಂದುಸ್ಥಾನದಲ್ಲಿ ಸಂರಕ್ಷಿತ ಸ್ವತಂತ್ರ ಸರಕಾರವನ್ನು ರಚಿಸಿಕೊಂಡು ಹಿಂದೀ ರಾಷ್ಟ್ರೀಯ ಸೇನಾಧಿಪತ್ಯವನ್ನು ನಿರ್ವಹಿಸಿಕೊಂಡು ಸ್ವತಂತ್ರ ಹಿಂದುಸ್ಥಾನವನ್ನು ಅವರು ರಕ್ಷಿಸಲೆಂದೂ ನನ್ನದೊಂದು ಪ್ರಾರ್ಥನೆ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿ.
[ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದುದು]
ಸ್ಥಾಪನೆ 1934
ಅಭಿನಂದನೆ.

1945ರಲ್ಲಿ ಬ್ಯಾಂಕಿಗೆ ನೀಡಿದ ಸಹಕಾರ ಮತ್ತು ಸಹಾಯಗಳಿಗೋಸ್ಕರ ತಮ್ಮ ಪಾಲುದಾರರು, ಠೇವಣಾತಿದಾರರು ಹಾಗೂ ಹಿತಚಿಂತಕರನ್ನು ಬ್ಯಾಂಕಿನ ಡೈರೆಕ್ಟರರು ಮನವಾರೆ ಅಭಿನಂದಿಸುತ್ತಾರೆ ಮತ್ತು ನವ ವರ್ಷವು ಅವರಿಗೆ ಶುಭದಾಯಕವಾಗಲೆಂದು ಬಯಸುವದರೊಂದಿಗೆ 1946ರಲ್ಲಿ ಅವರ ದ್ವಿಗುಣಿತ ಸಹಕಾರ ಮತ್ತು ಸಹಾಯಗಳನ್ನು ಮುಂಗಾಣುತ್ತಿದ್ದಾರೆ.

Coondapoor,
1-1-1946

K. VAMAN SHENAI,
President.

ಯುಂಟು. ಸುಭಾಷರು ಅಡಗಿರುವ ತನಕ ಹಿಂದುಸ್ಥಾನದಲ್ಲಿಯೇ ಅವರು ಅಡಗಿರಬಹುದೇ? ಬಂಗಾಲ ಪ್ರಾಂತದಲ್ಲಿ ವೇಷ ಪಲ್ಲಟ ಮಾಡಿ ವ್ಯವಹರಿಸುತ್ತಿರಬಹುದೇ? ಮಹಾತ್ಮರನ್ನು ಅವರು ಕಂಡಿರಬಹುದೇ? ಸುಭಾಷರನ್ನು ಕಾಣದೆ ಮಹಾತ್ಮರು ಬರೇ ಗಾಳಿ ವಾರ್ತೆಗಳನ್ನು ನಂಬಿ ಸುಭಾಷರು ಬದುಕಿದ್ದಾರೆಂಬ ವಿಧಾನ ಮಾಡಲು ಶಕ್ಯವಿದೆಯೇ? ಅವರ ಸಮೀಪದ ಅನುಯಾಯಿಗಳು ಅವರ ನಿಧನದ ಸುದ್ದಿ ಸುಳ್ಳಿರುತ್ತದೆಂದು ತಿರುತಿರುಗಿ ಜಾಹೀರ ರೀತಿಯಿಂದ ಪ್ರತಿಪಾದಿಸುವದು ಸಾಧ್ಯವಿದೆಯೇ? ಎಂಬೀ ಪ್ರಶ್ನೆಗಳು ನನ್ನನ್ನು ಕಾಡುತ್ತಿರುವವು. ನನಗಂತೂ ಏನೂ ಹೊಳೆಯುವದಿಲ್ಲ. ಆದರಿಂದಲೇ ನಾನಿನ್ನೂ ಪ್ರಶ್ನೆ ಮಾಡುತ್ತೇನೆ "ನೇತಾಜಿ ಸುಭಾಷರು ಎಲ್ಲಿ?"ಯೆಂದು

ಆರನ್ನು ಆರಿಸಬೇಕು?

ನಮ್ಮ ಮುಂಬಯಿ ಪ್ರಾಂತದ ಎಸೆಂಬ್ಲಿಯ ಸಾರ್ವತ್ರಿಕ ಚುನಾವಣೆಯೂ ಮೇಲ್ ಸಭೆ ಯಾನೆ ಕೌನ್ಸಿಲದ ಸದಸ್ಯರಾಗಿದ್ದ ಶ್ರೀ ಹಳದೀಪುರ ಸಬ್ರಾಯರ ನಿಧನದಿಂದ ತೆರವಾಗಿರುವ ಧಾರವಾಡ ಕಾನಡಾ ಮತದಾರ ಸಂಘದ ೧ ಸ್ಥಳದ ಉಪಚುನಾವಣೆಯೂ ಇನ್ನೆರಡು ತಿಂಗಳಲ್ಲಿ ಜರುಗಲಿವೆಯಷ್ಟೇ. ಕೊಂಗ್ರೆಸ್ಸು ಈ ಚುನಾವಣೆಗಳಲ್ಲಿ ಎಲ್ಲ ಸ್ಥಳಗಳಿಗೂ ತನ್ನ ಹುರಿಯಾಳುಗಳನ್ನು ನಿಲ್ಲಿಸಿ ಗೆಲ್ಲಬೇಕೆಂದು ನಿರ್ಧರಿಸಿದುದನ್ನು ನಾವೆಲ್ಲರೂ ಬಲ್ಲೆವು. ಅದರಂತೆ ಆಯಾ ಪ್ರಾಂತಗಳೊಳಗಿನ ಸ್ಥಳಗಳಿಗೆ ಕೊಂಗ್ರೆಸ ಪರವಾಗಿ ಯಾರ್ಯಾರನ್ನು ನಿಲ್ಲಿಸಬೇಕೆಂಬ ಬಗ್ಗೆ ಮಧ್ಯವರ್ತಿ ಪಾರ್ಲಿಮೆಂಟರಿ ಬೋರ್ಡಿಗೆ ನಿರ್ಣಾಯಕ ಶಿಫಾರಸು ಮಾಡಲು ಆಯಾ ಪ್ರಾಂತಗಳಲ್ಲಿ ಪ್ರಾಂತಿಕ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡುಗಳು ನೇಮಕಗೊಂಡಿವೆ. ನಮ್ಮ ಕರ್ನಾಟಕದಲ್ಲೂ ಅಂಥದೊಂದು ಬೋರ್ಡು ನೇಮಕವಾಗಿದ್ದು, ಕರ್ನಾಟಕದಲ್ಲಿ ಕೊಂಗ್ರೆಸ ವತಿಯಿಂದ ಚುನಾವಣೆಗಳಿಗೆ ನಿಲ್ಲಬಯಸುವ ಜನರ ಅರ್ಜಿಗಳು ಕಳೆದ ಸೋಮವಾರದೊಳಗಾಗಿ ಬೋರ್ಡಿನ ಕಡೆ ತಲ್ಪಿವೆ. ಅವುಗಳ ಪರಿಶೀಲನೆ ಈ ವಾರದಲ್ಲಾಗಿ ಅರ್ಜಿದಾರರೊಳಗಿಂದ ಇಷ್ಟ ಕಂಡವರನ್ನು ಪಾರ್ಲಿಮೆಂಟರಿ ಬೋರ್ಡು ಆರಿಸುವದು. ಪ್ರಾಂತಿಕ ಬೋರ್ಡಿನ ಈ ಆಯ್ಕೆಗೆ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಮಂಜೂರಿ ಸಿಗುವದು ಅವಶ್ಯವಿದ್ದರೂ ಪ್ರಾಂತಿಕ ಬೋರ್ಡಿನ ಆಯ್ಕೆಯನ್ನೇ ಬಹುತರವಾಗಿ ಕೇಂದ್ರದೊಳಗಿನ ಬೋರ್ಡಿನವರು ಸ್ಥಿರಪಡಿಸುವರೆಂದು ತಿಳಿಯಲಡ್ಡಿಯಿಲ್ಲ. ಆದ್ದರಿಂದ ಪ್ರಾಂತಿಕ ಬೋರ್ಡಿನವರು ದೂರದೃಷ್ಟಿಯನ್ನಿಟ್ಟು ಸಾಂಗೋಪಾಂಗ ವಿಚಾರ ಮಾಡಿ, ಎಲ್ಲ ಭಾಗಗಳಿಗೂ ವರ್ಗಗಳಿಗೂ ಸಮಾಧಾನವಾಗುವಂತೆ, ಮುಂದೆ ಕೊಂಗ್ರೆಸ ಸಂಸ್ಥೆಗೆ ಏನೊಂದೂ ಅಪಕೀರ್ತಿ ಬರದಂತೆ ಜಾಗ್ರತೆ ತಕ್ಕೊಂಡು ಸಂಪೂರ್ಣ ತಾರತಮ್ಯ ವಿಚಾರದಿಂದ ತಮ್ಮ ಕಾರ್ಯ ನಿರ್ವಹಿಸಬೇಕಾಗಿ ನಮ್ಮ ಸೂಚನೆಯಿದೆ. ಯಾವದೇ ಅರ್ಜಿದಾರರ ಭಿಡೆಗೆ ಬಲಿಬಿದ್ದು, ಇಲ್ಲವೆ ಯಾರೊಬ್ಬರ ಬಾಹ್ಯ ವೇಷ ಆಡಂಬರಗಳಿಗೆ ಅಥವಾ ಕ್ಷಣಿಕ ಓಡಾಟ ಹಾರಾಟ ಒದ್ದಾಟಗಳಿಗೆ ಮರುಳಾಗಿ ಬೋರ್ಡಿನವರು ಯಾರನ್ನೂ ಆರಿಸಬಾರದಾಗಿಯೂ ನಾವು ಅವರಿಗೆ ಮುಂಜಾಗ್ರತೆ ಕೊಡಬಯಸುತ್ತೇವೆ. ಕೊಂಗ್ರೆಸ ಪರವಾಗಿ ನಿಲ್ಲಿಸಿದ ಹುರಿಯಾಳುಗಳಿಗೇ ಬಹುಸಂಖ್ಯ ಮತದಾರರು ತಮ್ಮ ಮತಗಳನ್ನು ಕೊಟ್ಟು ಆರಿಸಿ ತರುವರೆಂಬ ಭರವಸೆಯಿದ್ದಾಗ್ಯೂ ಆರಿಸತಕ್ಕ ವ್ಯಕ್ತಿಗಳಲ್ಲಿ ಕಾನೂನ ಮಂಡಳದ ಸದಸ್ಯರಿಗಿರಬೇಕಾಗುವ ಗುಣಗಳು, ಲೋಕಸೇವೆಯ ತತ್ಪರತೆ, ದೇಶಸೇವೆ-ಲೋಕಸೇವೆ ಮಾಡುವ ಪಾತ್ರತೆ, ನಿಸ್ವಾರ್ಥ ಮತ್ತು ನಿಶ್ಚಯ ಕೊಂಗ್ರೆಸ ನಿಷ್ಠೆ ಇದ್ದರೆ ಮಾತ್ರ ಜನಸಾಮಾನ್ಯರು ಅವರಿಗೆ ಸಂತೋಷದಿಂದ ಬೆಂಬಲ ಕೊಟ್ಟಾರೆಂಬುದನ್ನು ನಾವು ಮರೆಯಲಾಗದು. ಪಾತ್ರಾಪಾತ್ರತೆಯ ವಿಚಾರ ಮಾಡದೆ ಬೋರ್ಡ ಹುರಿಯಾಳುಗಳನ್ನು ಆರಿಸಿ ನಿಲ್ಲಿಸಿದರೆ ಚುನಾವಣೆಯಲ್ಲಿ ಮತಸಂಗ್ರಹ ಮಾಡಲು ಕಷ್ಟವಾದೀತೆಂಬುದನ್ನೂ ನಾವು ಪ್ರಾಂತಿಕ ಬೋರ್ಡಿನವರ ಲಕ್ಷಕ್ಕೆ ತರಲಿಚ್ಛಿಸುತ್ತೇವೆ.

ನಮ್ಮ ಜಿಲ್ಲೆಯ ಪಾಲಿಗೆ ಎಸೆಂಬ್ಲಿಯಲ್ಲಿ ೩ ಸ್ಥಳಗಳೂ ಧಾರವಾಡ ಕಾನಡಾ ಮತದಾರ ಸಂಘದ ೧ ಸ್ಥಳ ನಮ್ಮ ಜಿಲ್ಲೆಯ ಪಾಲಿಗೆ ಹಾಕಿದರೆ — ಅದು ನಮ್ಮ ಪಾಲಿಗೇ ಸಿಗಬೇಕೆಂದು ನಮ್ಮ ಅಪೇಕ್ಷೆಯುಂಟು. ಸಿಗುವದೆಂಬ ವಿಶ್ವಾಸವೂ ಉಂಟು — ಕಳೆದ ಕೌನ್ಸಿಲ್-ಮಂಡಳಗಳಲ್ಲಿ ನಮ್ಮ ಜಿಲ್ಲೆಯವರಿಗೆ ೪ ಸ್ಥಳಗಳು ಸಿಗುತ್ತಿದ್ದವು. ಎಸೆಂಬ್ಲಿಯ ೩ ಸ್ಥಳಗಳಿಗಾಗಿ ೧೦ ಜನರು ಮತ್ತು ಕೌನ್ಸಿಲದ ೧ ಸ್ಥಳಕ್ಕಾಗಿ ೩ ಜನರು ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿಗೆ ಅರ್ಜಿ ಕಳಿಸಿದ್ದಾರೆಂದು ಸುದ್ದಿಯುಂಟು. ಈ ಅರ್ಜಿದಾರರಲ್ಲಿ ಹಳೆಯ (ವಿದ್ಯಮಾನ) ಸದಸ್ಯರಿಬ್ಬರು ಸಹ ಇದ್ದಾರೆಂದು ಕೇಳುತ್ತೇವೆ. ಇವರೆಲ್ಲರ ಗುಣದೋಷಗಳ ವಿಚಾರವನ್ನಾಗಲಿ ಕೊಂಗ್ರೆಸ ನಿಷ್ಠೆಯ ಸ್ಥಿರತೆ-ಅಸ್ಥಿರತೆಗಳ ಸಂಬಂಧವನ್ನಾಗಲಿ ನಾವು ಮಾಡಲಿಳಿಸುವದಿಲ್ಲ. ಸ್ಥಳಿಕ ಕೊಂಗ್ರೆಸ ಕಾರ್ಯಕರ್ತರ ನಂಬಿಗಸ್ತ ಸಲಹೆ ತಕ್ಕೊಂಡು ಅವನ್ನು ಗೊತ್ತುಹಚ್ಚುವ ಕೆಲಸವನ್ನು ನಾವು ಬೋರ್ಡಿಗೇ ಬಿಟ್ಟುಕೊಡುತ್ತೇವೆ. ಇಲ್ಲ ಸಾಮಾನ್ಯ ಸೂಚನೆಗಳನ್ನಷ್ಟೇ ಕೊಡ್ಬಿಡುತ್ತೇವೆ.

ಮೇಲೆ ಹೇಳಿದಂತೆ ನಮ್ಮ ಜಿಲ್ಲೆಯ ಪಾಲಿಗೆ ೪ ಸ್ಥಳಗಳುಂಟು. ಅವುಗಳಲ್ಲಿ ಒಂದನ್ನು ಘಟ್ಟದ ಮೇಲಿನ ಭಾಗಕ್ಕೆ — ಅಂದರೆ ಹಳಿಯಾಳ ಯಲ್ಲಾಪುರ, ಮುಂಡಗೋಡ, ಶಿರ್ಸಿ ಸಿದ್ದಾಪುರ ತಾಲೂಕುಗಳಿಗೂ ಸುಪಾ ಪೇಟೆಗೂ ಕೂಡಿ — ಮತ್ತು ಉಳಿದ ಮೂರನ್ನು ಘಟ್ಟದ ಕೆಳಗಿನ ತಾಲೂಕ ಪೇಟೆಗಳಿಗೆ ಹಂಚಿ ಹಾಕುವದು ಸಮಂಜಸವೆಂದು ನಮ್ಮ ಗ್ರಹಿಕೆಯುಂಟು. ೧೯೩೭ರ ಚುನಾವಣೆಯ ಕಾಲಕ್ಕೆ ಹೀಗೆಯೇ ವ್ಯವಸ್ಥೆಯಾಗಿತ್ತು. ಈ ಭಾಗಗಳಲ್ಲಿ ಪುನಃ ಎರಡೆರಡು ವಿಭಾಗಗಳನ್ನಾಗಿ ಮಾಡಿ ಕಾರವಾರ-ಅಂಕೋಲಾ ತಾಲೂಕ ವಿಭಾಗಕ್ಕೆ ೧, ಕುಮಟಾ ಹೊನ್ನಾವರ ಭಟಕಳ ವಿಭಾಗಕ್ಕೆ ೧, ಶಿರ್ಸಿ ಸಿದ್ದಾಪುರ ವಿಭಾಗಕ್ಕೆ ೧ ಮತ್ತು ಮುಂಡಗೋಡ ಯಲ್ಲಾಪುರ ಹಳಿಯಾಳ ಸುಪಾ ವಿಭಾಗಕ್ಕೆ ೧ ಹೀಗೆ ಸಮಾನ್ಯವಾಗಿ ಪಾಲುಮಾಡುವದು ಹಿತ ಮತ್ತು ಶ್ರೇಯಸ್ಕರವೆಂದು ನಮ್ಮ ಮತವಿದೆ. ೧೯೩೭ರಲ್ಲಿ ಹೇತುಪುರಸ್ಸರವಾಗಲಿ ಯದೃಚ್ಛೆಯಿಂದಾಗಲಿ ಹೀಗೆಯೇ ಪಾಲುಪಟ್ಟಿಯಾದದ್ದು ಕಂಡುಬರುತ್ತಿದೆ. ಕಾರವಾರ ಅಂಕೋಲಾ ವಿಭಾಗದಿಂದ ವೈ|| ವಾ| ಹಳದೀಪುರಕರರು, ಕುಮಟಾ-ಹೊನ್ನಾವರ-ಭಟಕಳ ವಿಭಾಗದಿಂದ ಶ್ರೀ|| ಗೋಪಿಯವರು, ಶಿರ್ಸಿ-ಸಿದ್ದಾಪುರ ವಿಭಾಗದಿಂದ ಶ್ರೀ|| ಕೇಶವೈನರು ಮತ್ತು ಹಳಿಯಾಳ-ಯಲ್ಲಾಪುರ-ಸುಪಾ-ಮುಂಡಗೋಡ ವಿಭಾಗದಿಂದ ಕೈ|| ವಾ|| ಹಳ್ಳಿಕೇರಿಯವರು ಆರಿಸಲ್ಪಟ್ಟಿದ್ದರು. ಈ ವಿಭಾಗಗಳಲ್ಲೂ ಕೂಡ ಸಾಧ್ಯವಿದ್ದರೆ ಪರ್ಯಾಯಗಳನ್ನು ಕಲ್ಪಿಸಿ, ಎಲ್ಲ ತಾಲೂಕ ಪೇಟೆಗಳಿಗೆ ನ್ಯಾಯ ಮಾಡಬೇಕೆಂದುದು ಧರ್ಮ. ಉದಾಹರಣಾರ್ಥ ೧೯೩೭ರಲ್ಲಿ ಹುರಿಯಾಳುತನದ ಮಾನ-ಗೌರವಗಳು ಕಾರವಾರ ಮತ್ತು ಕುಮಟಾ ತಾಲೂಕುಗಳಿಗೆ (ಶ್ರೀ|| ಹಳದೀಪುರ ಮತ್ತು ಗೋಪಿಯವರನ್ನು ಆಯ್ದು) ಕೊಡಲ್ಪಟ್ಟಿದ್ದವು. ಈ ಬಾರಿ ಅಂಕೋಲಾ ಮತ್ತು ಹೊನ್ನಾವರ ತಾಲೂಕುಗಳಿಗೆ ಅದು ಸಿಗುವದುಚಿತ. ಈ ತಾಲೂಕುಗಳಿಂದ ಪಾತ್ರ ಉಮೇದವಾರರು ಮುಂದೆ ಬಂದಿರುವಲ್ಲಿ ಅವರಿಗೇ ಈ ಸಲ ಪ್ರಾಶಸ್ತ್ಯ ಸಿಗಬೇಕಾಗಿ ನಮ್ಮ ಆಗ್ರಹದ ಹೇಳಿಕೆಯಿದೆ. ಹಾಗೆ ಮಾಡಿದಲ್ಲಿ ಎಲ್ಲರಿಗೂ ನ್ಯಾಯ ಸಿಕ್ಕೀತೆಂಬ ಸಮಾಧಾನ ನೆಲೆಗೊಳ್ಳುವಂತಿದೆ. ಇನ್ನೊಂದು ಸೂಚನೆಯನ್ನೂ ನಾವು ಮಾಡಬಯಸುತ್ತೇವೆ. ಪಾತ್ರತೆಯುಳ್ಳ ಹೊಸಬರು ಹುರಿಯಾಳುಗಳಾಗಲು ಮುಂದೆ ಬಂದಲ್ಲಿ ಹಳಬರನ್ನು ಬಿಟ್ಟುಬಿಡುವದು ಲೇಸು. ಕಾನೂನ ಮಂಡಳದ ಸದಸ್ಯತ್ವವು ಯಾರೊಬ್ಬರ ಮೂಲಗೇಣಿಯ ಹಕ್ಕಾಗಬಾರದು. ಅದರಂತೆ ಜಾತಿ-ವರ್ಗಗಳ ವಿಚಾರವೂ ಉಂಟು. ರಾಜಕಾರಣದಲ್ಲಿ ಜಾತಿಗಳ ವಿಚಾರ ಸಯುಕ್ತಿಕವಲ್ಲೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಆ ವಿಚಾರ ಬಿಟ್ಟುಬಿಡಲು ಬರುವಂತಿಲ್ಲ. ಕಾರಣ ಆ ವಿಚಾರವನ್ನೂ ನಾವು ವಿವರಿಸಿರುವ ಸ್ಥೂಲ ಸೂಚನೆಗಳನ್ನೂ ವಿಶಾಲ ಮತ್ತು ವಿಕಾರರಹಿತ ದೃಷ್ಟಿಯಿಂದ ಪ್ರಾಂತಿಕ ಬೋರ್ಡಿನವರು ಪರ್ಯಾಲೋಚಿಸಿ ಎಲ್ಲ ಬಗೆ ವಿಭಾಗಗಳ ಜಾತಿ ವರ್ಗಗಳ, ಪಕ್ಷ ಪಂಗಡಗಳ, ಮತದಾರರಿಗೆ ಸಮಾಧಾನ ಸಂತೋಷವಾಗುವಂತೆ ಹುರಿಯಾಳುಗಳನ್ನು ಚುನಾಯಿಸುವರೆಂದು ನಾವು ಆಶಿಸುತ್ತೇವೆ.

ಜಾಹೀರ ನೋಟೀಸು.

ಕಮಲಿ ಕೋಂ ಸತ್ಯನಾರಾಯಣಭಟ್ಟ, ಸಾ|| ಹೊನ್ನಾವರ ತಾಲೂಕ ಕರ್ಕಿ ಇವಳ ಜಾಹೀರ ಪಡಿಸುವದೇನಂದರೆ —

ನನಗೆ ೧ ಗಣಪತಿ — ಶಂಕರ ಹೀಗೆ ಇಬ್ಬರು ಗಂಡು ಮತ್ತು ಸುಬ್ಬಿಯೆಂಬ ೧ ಹೆಣ್ಣು ಹೀಗೆ ೩ ಮಕ್ಕಳಿದ್ದು ಇವರ ರಕ್ಷಣೆ ನಾತೆಯಿಂದ ನಾನು ಕುಟುಂಬದ ಯಾವತ್ತೂ ವ್ಯವಾಟನ್ನು ನನ್ನ ಪತಿಗಳ ಪಶ್ಚಾತ್ ಮಾಡುತ್ತಾ ಬಂದಿರುತ್ತೇನೆ. ನಮ್ಮ ಕುಟುಂಬಕ್ಕೆ ಅಜಮಾಸ ರೂ. ೭೦೦ ಪಾಟ್ಟಿಗೆ ತೀರ್ವೆ ಭೂಮಿಯೂ, ೪ ಸಾವಿರ ರೂ. ಬೆಲೆಬರುವ ಮನೆಗಳೂ ಇವೆ. ೨ನೇ ಮಗನ ವಿದ್ಯಾಭ್ಯಾಸವೂ, ಮಗಳ ಲಗ್ನ-ಕಾರ್ಯವೂ ಆಗತಕ್ಕದ್ದಿದ್ದು ಅವರಿಬ್ಬರೂ ನನ್ನ ಸಂರಕ್ಷಣೆಯಲ್ಲಿದ್ದಾರೆ. ಹೀಗಿರುತ್ತಾ ನನ್ನ ಹಿರೇ ಮಗನಾದ ಗಣಪತಿ ಸತ್ಯನಾರಾಯಣ ಭಟ್ಟನು ದುಷ್ಟ ಜನರ ಸಹವಾಸಕ್ಕೆ ಬಿದ್ದು ದುಂದುಗಾರನಾಗಿ ಕುಟುಂಬಕ್ಕೆ ಒದಗತಕ್ಕ ಬರುವಳಿಗಳನ್ನು ಸಿಕ್ಕ ಸಿಕ್ಕಂತೆ ವಸೂಲ ಮಾಡುತ್ತ ಕುಟುಂಬದಿಂದ ಸ್ವತಃ ತಕ್ಕ ಗೇಣಿ ಕೊಡದೆ ಕುಟುಂಬಕ್ಕೆ ಹಾನಿಗೊಳಿಸುತ್ತಿದ್ದಾನೆ. ಇವನಲ್ಲದೆ ಕುಟುಂಬದ ಆಸ್ತಿಗಳನ್ನು ಗಿರವು ಇಲ್ಲದೆ ಹೀನ ಕಿಮ್ಮತ್ತಿಗೆ ಮಾರಾಟ ಮಾಡುವ ತಯಾರಿಯಲ್ಲಿದ್ದಾನೆ. ನಾಗಿ ಸಹ ತಾಯಿಯಾದ ನಾನು ಜೀವಂತವಿರುವದರಿಂದ ಕುಟುಂಬದ ಆಸ್ತಿಯನ್ನು ಯಾರೂ ಕ್ರಯ, ಆಧಾರ ವಗೈರೆ ಖರೀದಿ ಮಾಡಿಕೊಳ್ಳಕೂಡದು. ಹಾಗೆ ಮಾಡಿಕೊಂಡಲ್ಲಿ ಅದು ಅಪ್ರಯೋಜಕ ವ ನನ್ನ ಹಕ್ಕಿಗೂ ಅಂಶಗಳಿಗೂ ಬಾಧಕವಾಗಲಾರದು. ನಮ್ಮ ಕುಟುಂಬದ ಸಾಲಗಾರರೂ ಗೇಣಿದಾರರೂ ಕುಟುಂಬಕ್ಕೆ ಸಲ್ಲತಕ್ಕ ಸಾಲ ಯಾ ಗೇಣಿಯನ್ನು ಅಪ್ರಯೋಜಕ ರಕ್ಷಕನಾಗಿರುವ ನನ್ನ ಹಿರಿಯ ಮಗ ಗಣಪತಿಯೊಬ್ಬನಿಗೆ ಕೊಡತಕ್ಕದ್ದಲ್ಲ. ಕೊಟ್ಟರೆ ಅವರು ಜವಾಬ್ದಾರರಾಗುವರಲ್ಲದೆ ಈಗಾಗಲೇ ಗಣಪತಿಯು ವಸೂಲ ಮಾಡಿ ದುಂದು ಮಾಡಿದ ಸಾಲ, ಗೇಣಿಗಳ ಬಗ್ಗೆ ಗಣಪತಿಯ ಮೇಲೂ ವಸೂಲ ಕೊಟ್ಟವರ ಮೇಲೂ ನಾನು ದಾವೆ ಮಾಡುವವಳಿದ್ದೇನೆ ಎಂದು ಈ ಮೂಲಕ ಜಾಹೀರ ಮಾಡುತ್ತೇನೆ. ತಿಳಿಯುವದು.

ತಾ ೬—೧—೧೯೪೬

● ಇದು ಕಮಲಿ ಕೋಂ ಸತ್ಯನಾರಾಯಣ ಭಟ್ಟ

ಸಾ|| ಕರ್ಕಿ ಇವಳ ಎಡಗೈ ಹೆಬ್ಬೆಟ್ಟಿನ ಗುರುತು

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಕರಾವಳಿಯ ಜನರ ಉದ್ಯೋಗವನ್ನು ಸರಕಾರವು ಮತ್ತೊಂದು ರೀತಿಯಿಂದಲೂ ಅಪಹರಿಸಿದೆ. ಅಡಿಕೆ ಸುಂಕ ಹೇರಿದಂದಿನಿಂದ ತೋಟಿಗರಿಗೆ ಸಿಗತಕ್ಕ ಆದಾಯ ಕುಗ್ಗಿದೆ. ತೋಟಿಗರಿಗೆ ಅಗತ್ಯ ಗೈವಾಳಿಕೆಯೂ ಕಡಿಮೆಯಾಗಿದೆ. ಅದರಿಂದ ಕರಾವಳಿಯೊಳಗಿನ ಕೂಲಿಯಾಳುಗಳಿಗೆ ಹಿಂದೆ ಸಿಗುತ್ತಿದ್ದ ಕೆಲಸ ಈಗ ಸಿಗುವದಿಲ್ಲ. ತೋಟಿಗರಿಗೆ ಎರಡು ಬಗೆಯ ನಷ್ಟವುಂಟಾಗಿದೆ. ಅಡಿಕೆ ಸುಂಕ ತೆತ್ತು ಒದಗುವ ನಷ್ಟ ಪ್ರತ್ಯಕ್ಷ ನಷ್ಟ. ಅಡಿಕೆ ಸುಂಕದ ಮಾನ ಹೆಚ್ಚು ಇದ್ದದರಿಂದ ಸುಂಕದಷ್ಟು ಬೆಲೆ ಹುಟ್ಟದ ಅಡಿಕೆ ನಶಿಸಿಹೋಗುವ ಪ್ರಸಂಗ ಬರುತ್ತದೆ. ಸಾಮಾನ್ಯವಾಗಿ ಹುಟ್ಟುವ ಅಡಿಕೆಯಲ್ಲಿ ೪ನೇ ೧ ಪಾಲು ಕನಿಷ್ಟ ತರದ್ದು. ಸುಂಕ ಹೇರುವ ಮುಂಚೆ ಇದೂ ಮಾರಾಟವಾಗುತ್ತಿತ್ತು. ಅಡಿಕೆ ಸುಂಕದಲ್ಲಿ ತಾರತಮ್ಯವಿಲ್ಲ. ಹಿಟ್ಟಿಗೂ ಬೂದಿಗೂ ಒಂದೇ ದರ! ಉತ್ಕೃಷ್ಟ ಅಡಿಕೆಗೂ ಕನಿಷ್ಟ ಅಡಿಕೆಗೂ ಒಂದೇ ಸುಂಕವಿದ್ದದರಿಂದ ಕನಿಷ್ಟ ಅಡಿಕೆಯನ್ನು ಗೊಬ್ಬರ ಕುಳಿಗೆ ಹಾಕಬೇಕಾಗಿದೆ! ಹೀಗೆ ಹೇರಿಕೆಯಿಂದ ತೋಟಿಗರಿಗೆ ಒದಗಿದ ಅಪ್ರತ್ಯಕ್ಷ ನಷ್ಟವಿದು. ತೋಟಿಗರ ಸರತ್ತು ಈ ಪರಿ ಕುಗ್ಗಿದ್ದರಿಂದ ಕರಾವಳಿಯ ಕೂಲಿಯಾಳುಗಳಿಗೆ ಉದ್ಯೋಗ ದೊರಕದಂತಾಗಿದೆ. ನಮ್ಮ ಜಿಲ್ಲೆಯೊಳಗೆ ತೋಟಗಳ ಗೇಣಿ ಮುಖ್ಯ ಉದ್ದಿಮೆ. ತೋಟಿಗರು ಸಮೃದ್ಧರಿದ್ದರೆ ಸಕಲರೂ ಸಮೃದ್ಧರು. ಅಡಿಕೆಯು ಬೇಸಾಯದ ಉತ್ಪತ್ತಿಯಾದ್ದರಿಂದ ಅದರ ಮೇಲೆ ಕಾನೂನಿನಂತೆ ಕರ ಹೇರಬರುವದಿಲ್ಲೆಂದು ಕಾಯದೆ ಪಂಡಿತರ ಅಂಬೋಣ. ತೋಟಿಗರಿಗೆ ಸ್ಥಳಿಕರಾಯ ೦ ಪಾರ್ಟಿ ಎತ್ತುವಳಿಯಾಗುತ್ತಿರುವಾಗ ಅಡಿಕೆ ಸುಂಕವೆಂದು ಬೇರೆ ಪ್ರತ್ಯೇಕ ಎತ್ತುವಳಿ ಮಾಡಬರುವದಿಲ್ಲೆಂದು ಅವರು ವಾದಿಸುತ್ತಾರೆ. ಈ ಕುರಿತು ಪತ್ರಗಳೂ ಟಿಪ್ಪಣಿಗಳೂ ನಡೆದಿವೆ. ಸರಕಾರದ ಕಡೆ ಸತ್ಯಯುಕ್ತಿಯುಂಟು, ಕಾಯದೆ-ಪಂಡಿತ ಬುದ್ಧಿವಂತರ ಕಡೆ ಯುಕ್ತಿಯುಂಟು. ಬುದ್ಧಿವಂತರು ಸತ್ಯಾಧೀಶ ಸರಕಾರಕ್ಕೆ ನ್ಯಾಯಸ್ಥಾನಕ್ಕೆ ಎಳೆದೊಯ್ದು ಅನ್ಯಾಯ ಪರಿಹರಿಸಲು ಸಿದ್ಧರಾಗುವದಿಲ್ಲ. ಅದರಿಂದ ಬುದ್ಧಿವಂತರ ಬುದ್ಧಿವಾದದಿಂದ ತೋಟಿಗರಿಗೆ ಪ್ರಯೋಜನ ಕಡಿಮೆ. [illegible] ಮಾತ್ರ ಪ್ರತ್ಯೇಕ ಅವರ ಕೈಗಾರಿಕೆಗಳನ್ನು ಹೆಚ್ಚಿಸಬೇಕಾಗಿ ಹೋರಾಡಬೇಕು, ಹೊರದೇಶದ ಕೈಗಾರಿಕೆಗಳಿಗೆ ಜಾಸ್ತಿ ಹೆಚ್ಚು ಪ್ರೋತ್ಸಾಹ ಕೊಡಬೇಕು, ಹಳ್ಳಿ ಹಳ್ಳಿಗಳಲ್ಲಿ ಕೈಗಾರಿಕೆಗಳು ಹಬ್ಬಬೇಕು, ಎಂದು ಜಾಹೀರಾಗಿ ಕೂಡುವ ಸರಕಾರ ಜನರೊಳಗೆ ಈಗಾಗಲೇ ರೂಢವಿರುವ ಕೈಗಾರಿಕೆಗಳನ್ನು ನಷ್ಟಗೊಳಿಸುತ್ತಿರುವದು ವಿಷಾದಕರವಲ್ಲವೇ? ಕೈಗಾರಿಕೆಗಳ ಉದ್ಧಾರಕ್ಕೆ ಸರಕಾರವು ಹೇರಳ ಹಣ ವೆಚ್ಚ ಮಾಡುತ್ತದಂತೆ. ಅಡಿಕೆ ಸುಂಕದ ವಿಷಯವನ್ನೂ ಕೈಗಾರಿಕೆಗಳ ದೃಷ್ಟಿಯಿಂದ ಸರಕಾರವು ವಿಮರ್ಶಿಸಬಾರದೇಕೆ?

* * *

ನಿಜಾಮ ರಾಜ್ಯದಲ್ಲಿ ಮನುಷ್ಯರಂತೆ ದನಗಳದೂ ದುರವಸ್ಥೆಯಾಗಿದೆ. ಕೊಬ್ಬರಿ ಹಿಂಡಿ, ಕುಸುಬಿ ಹಿಂಡಿ, ಹುರುಳಿ ಪತ್ತಿಕಾಳು ಇವೇ ದನಗಳ ಪುಷ್ಟಿಕಾರಕ ಆಹಾರ. ಬೇಸಾಯಗಾರರೂ, ಗಾಡಿಕಾರರೂ ಇವನ್ನೇ ತಮ್ಮ ದನಗಳಿಗೆ ಕೊಟ್ಟು ಉದ್ದಿಮೆ ನಡಿಸುತ್ತಾರೆ. ಕೊಬ್ಬರಿ ಹಿಂಡಿ ಈವಾಗ ಕೊಟ್ಟೆಯಿಂದ ಬರುವದಿಲ್ಲ. ಈಗಿನ ಬರಗಾಲದಲ್ಲಿ ಅವು ಮನುಷ್ಯರ ಆಹಾರಸಾಮಗ್ರಿಗಳಲ್ಲಿ ಸೇರಿಸಲ್ಪಟ್ಟವೆ! ೬ ಮಣದ ಚೀಲ ಒಂದಕ್ಕೆ ಹಿಂದೆ ೪ ೫ ರೂ ಇತ್ತು. ಈಗ ಅದಕ್ಕೆ ೨೫-೩೦ ರೂ. ಆಗಿದೆ. ಕುಸುಬಿ ಹಿಂಡಿ ಮಣ ಒಂದಕ್ಕೆ ಹಿಂದೆ ೧॥ ಆಣೆಯಿಂದ ೧ರೂ ತನಕ ದರವಿತ್ತು. ಈಗ ಮಣ ಒಂದಕ್ಕೆ ರೂ ೪ ಕೊಟ್ಟರೂ ಸಿಗುವದಿಲ್ಲ. ನೆಲಗಡಲೆಯ (ಸೇಂಗಾ) ಹಿಂಡಿ ಮೈಲಾರ ಸೀಮೆಯಲ್ಲಿ ಸಿಗುತ್ತದೆ. ಹುಬ್ಬಳ್ಳಿ, ದಾವಣಗೇರಿ ಕಡೆ ಗಿರಣಿಗಳಲ್ಲಿ ಈ ಹಿಂಡಿ ಇಡಲು ಸ್ಥಳವಿಲ್ಲವಂತೆ! ಗಿರಣಿಯವರು ಹಿಂಡಿಯನ್ನು ರಫ್ತು ಮಾಡಗೊಡಬೇಕಾಗಿ ಸರಕಾರಕ್ಕೆ ಪ್ರಾರ್ಥನೆ ಮಾಡುತ್ತಾರೆ. ಅಲ್ಲಿ ಈ ಹಿಂಡಿಗೆ ಗಿರಾಕಿಯಿಲ್ಲ. ಗೊಬ್ಬರವಾಗಿ ಅದನ್ನು ಉಪಯೋಗಿಸಲು ಅನುಕೂಲವಾಗಬೇಕೆಂದು ಸರಕಾರವು ರಫ್ತು ಮಾಡಲು ಕೊಡುವದಿಲ್ಲವಾಗಿ [illegible] ಅಲ್ಲಿ ದನವಿನ ಗೊಬ್ಬರ ಬೇಕಷ್ಟು ಸಿಗುತ್ತದೆ. ಅದರಿಂದ ಗಿರಾಕಿಯಿಲ್ಲದೆ ಅದು ರಾಶಿಯಾಗಿ ಬಿದ್ದಿದೆ. ಈ ಹಿಂಡಿ ನಮ್ಮಲ್ಲಿಯ ದನಗಳಿಗೆ ಈ ಬರಗಾಲದಲ್ಲಿ ಒಳ್ಳೇ ತಿಂಡಿಯಾಗಬಹುದು. ಘಟ್ಟದ ಮೇಲೆ ೬ ಮಣದ ಚೀಲ ಒಂದಕ್ಕೆ ೪॥-೫ ರೂ. ಇದಕ್ಕೆ ದರವುಂಟು. ನಮ್ಮ ಜಿಲ್ಲೆಯೊಳಗೆ ಅದೇ ಚೀಲಕ್ಕೆ ರೂ ೧೧ ಉಂಟು! ಹುಬ್ಬಳ್ಳಿಯಲ್ಲಿ ಪತ್ತಿಕಾಳು ಬೇಕಷ್ಟು ಸಿಗುತ್ತದೆ. ೫ ಮಣದ ಚೀಲ ಒಂದಕ್ಕೆ ರೂ ೧೦ ದರವುಂಟು. ಇಲ್ಲಿ ನಮ್ಮಲ್ಲಿ ನಿಯಂತ್ರಣ ಧರ್ಮರಾಜ್ಯ ನಡೆದಿರುವದರಿಂದ ೧೭-೧೮ ರೂ ಕೊಟ್ಟರೂ ಪತ್ತಿಕಾಳು ಸಿಗುವದಿಲ್ಲ! ಬಂದೋಬಸ್ತಿನ ಘೋಳೀಸರೂ ಧಾರಕ ರಕ್ಷಕ! (ಆತ್ಮ ಧಾರಕರೋ ಬೇರಾವ ಧಾರಕರೋ ದೇವರೇ ಬಲ್ಲ!) ಬೂಡುವ ನಿಯಂತ್ರಣಾಧಿಕಾರಿಗಳೂ ಇಲ್ಲದಿದ್ದರೆ ಈ ಪತ್ತಿಕಾಳು ರೂ ೧೪ ಯಾ ಕಡಿಮೆ ದರದಿಂದ ನಮ್ಮ ಜನರಿಗೆ ಸಿಗುತ್ತಿತ್ತು. ಇದೇ ಪ್ರಕಾರ ಹುಬ್ಬಳ್ಳಿ ಪೇಟೆಯಲ್ಲಿ ತೊಗರಿಬೇಳೆ, ಕಡ್ಲೆ, ಹುರುಳಿ ಬೇಕಷ್ಟು ಸಿಗುತ್ತಿದೆ. ಅವುಗಳಿಗೆ ದರ ನಿಯಂತ್ರಣವಿಲ್ಲ. ಈಗಣ ಕಾಲಮಾನಕ್ಕೆ ಸರಿಯಾಗಿ ಇವು

(೪ನೇ ಪುಟದ ನೋಡಿ ಮುಂದರಿಸಿದೆ)

ಹಿಂದುಸ್ಥಾನಿ ಪಾಠಗಳು.

ಸಬಕ ದಸ (ಪಾಠ ೧೦)

ನದೀ

ನದೀ ಪಹಾಡ ಯಾ ಝೀಲಸೇ ನಿಕಲತೀ ಹೈ (ಹೊಳೆ ಗುಡ್ಡ ಅಥವಾ ಕೆರೆಯಿಂದ ಹೊರಡುತ್ತದೆ) ಪಹಾಡಸೆ ನಿಕಲಕರ ನದೀ ಮೈದಾನಮೇಂ ಬಹತೀ ಹೈ (ಗುಡ್ಡದಿಂದ ಹೊರಟು ಹೊಳೆಯು ಬೈಲಲ್ಲಿ ಹರಿಯುತ್ತದೆ) ಫಿರ ಸಮುದ್ರಮೇಂ ಗಿರತೀ ಹೈ (ತಿರುಗಿ ಸಮುದ್ರಕ್ಕೆ ಕೂಡುತ್ತದೆ) ಕಈ ನದಿಯಾಂ ದೂಸರೀ ನದೀಮೇಂ ಗಿರತೀ ಹೈಂ (ಕೆಲವು ನದಿಗಳು ಬೇರೆ ನದಿಗೆ ಕೂಡುತ್ತವೆ) ನದೀಸೇ ಬಹುತ ಫಾಯದೇ ಹೈಂ (ಹೊಳೆಯಿಂದ ಬಹಳ ಪ್ರಯೋಜನಗಳಾಗುತ್ತವೆ) ನದೀಕಾ ಪಾನೀ ಸಾಫ ಹೋತಾ ಹೈ (ಹೊಳೆಯ ನೀರು ಸ್ವಚ್ಛವಾಗಿರುತ್ತದೆ) ಉಸಮೇಂ ನಹಾನಾ ತನದುರುಸ್ತೀಕೇ ಲಿಯೇ ಅಚ್ಛಾ ಹೈ (ಅದರಲ್ಲಿ ಮೀಯುವದು ಆರೋಗ್ಯಕ್ಕೆ ಒಳಿತು) ನದೀಕಾ ಪಾನೀ ಪೀನಾ ಚಾಹಿಯೇ (ನದಿಯ ನೀರ ಕುಡಿಯಬೇಕು) ನದೀಕೇ ಪಾನೀಸೇ ಖೇತ ಸೀಂಚತೇ ಹೈಂ (ನದಿಯ ನೀರಿನಿಂದ ಗದ್ದೆ ತೋಟ ತಣಿಸುತ್ತಾರೆ) ಖೇತೋಂಮೇಂ ಅನಾಜ, ಈಖ ಔರ ಕಪಾಸ ಪೈದಾ ಹೋತೇ ಹೈಂ (ಗದ್ದೆಗಳಲ್ಲಿ ಧಾನ್ಯಗಳು ಕಬ್ಬು ಮತ್ತು ಹತ್ತಿ ಬೆಳೆಯುತ್ತವೆ) ನದಿಸೇಂ ನಹರೇಂ ನಿಕಲೀ ಹೈಂ (ನದಿಯಿಂದ ಕಾಲುವೆಗಳು ಹೊರಟಿವೆ) ನಹರೋಂಕೇ ಜರಿಯೇ ಪಾನೀ ಖೇತೋಂ ಮೇಂ ಜಾತಾ ಹೈ (ಕಾಲುವೆಗಳ ಮೂಲಕ ನೀರು ಹೊಲಗಳಿಗೆ ಹೋಗುತ್ತದೆ) ಗಹರೀ ನದಿಯೋಂಮೇಂ ನಾವೇಂ ಚಲತೀ ಹೈಂ (ಆಳವಾದ ನದಿಗಳಲ್ಲಿ ನಾವೆಗಳು ನಡೆಯುತ್ತವೆ) ಬಡೀ ಬಡೀ ನದಿಯೋಂಮೇಂ ಜಹಾಜ ಭೀ ಚಲತೇ ಹೈಂ (ದೊಡ್ಡ ದೊಡ್ಡ ನದಿಗಳಲ್ಲಿ ಹಡಗಗಳೂ ನಡೆಯುತ್ತವೆ) ಇಸ ತರಹ ನದೀ ವ್ಯಾಪಾರಕೇ ಕಾಮ ಆತೀ ಹೈ (ಈ ರೀತಿ ನದಿಯು ವ್ಯಾಪಾರದ ಕೆಲಸಕ್ಕೂ ಬರುತ್ತದೆ) ಆಜಕಲ ನದಿಯೋಂಪರ ಬಾಂಧ ಬಾಂಧತೇ ಹೈಂ (ಈಗಣ ಕಾಲದಲ್ಲಿ ನದಿಗೆ ಒಡ್ಡು ಹಾಕುತ್ತಾರೆ) ಉಸಸೇ ಬಿಜಲೀ ಬನಾತೇ ಹೈಂ ಔರ ಬಿಜಲೀಸೇ ಬಡೇ ಬಡೇ ಕಾರಖಾನೇ ಚಲತೇ ಹೈಂ (ಅದರಿಂದ ವಿದ್ಯುತ್ ಶಕ್ತಿ ತಯಾರಿಸುತ್ತಾರೆ ಮತ್ತು ವಿದ್ಯುಚ್ಛಕ್ತಿಯಿಂದ ದೊಡ್ಡ ದೊಡ್ಡ ಕಾರಖಾನೆಗಳು ನಡೆಯುತ್ತವೆ) ಗಾಂವೋಂ ವ ಶಹರೋಂಕೋ ರೋಶನೀ ದೇತೀ ಹೈ (ಹಳ್ಳಿ ಮತ್ತು ಪಟ್ಟಣಗಳಿಗೆ ಪ್ರಕಾಶ ಕೊಡುತ್ತದೆ) ಹಿಂದುಸ್ಥಾನಮೇಂ ಬಡೀ ಬಡೀ ನದಿಯಾಂ ಹೈಂ (ಹಿಂದುಸ್ಥಾನದಲ್ಲಿ ದೊಡ್ಡ ದೊಡ್ಡ ಹೊಳೆಗಳಿವೆ) ಉತ್ತರಮೇಂ ಗಂಗಾ, ಜಮುನಾ, ಸಿಂಧು, ಬ್ರಹ್ಮಪುತ್ರಾ ಔರ ದಕ್ಷಿಣಮೇಂ ಗೋದಾವರೀ, ಕೃಷ್ಣಾ, ಕಾವೇರೀ ಮಶಹೂರ ಹೈಂ (ಉತ್ತರದಲ್ಲಿ ಗಂಗಾ ಯಮುನಾ ಸಿಂಧು ಬ್ರಹ್ಮಪುತ್ರಾ ಮತ್ತು ದಕ್ಷಿಣದಲ್ಲಿ ಗೋದಾವರಿ ಕೃಷ್ಣಾ ಕಾವೇರಿ ಇವು ಪ್ರಸಿದ್ಧವಿವೆ) ಹಿಂದೂ ಲೋಗ ಗಂಗಾಜೀಕೀ ಪೂಜಾ ಕರತೇ ಹೈಂ (ಹಿಂದೂ ಜನರು ಗಂಗೆಯ ಪೂಜೆ ಮಾಡುತ್ತಾರೆ)

ಸಬಕ ಗ್ಯಾರಹ (ಪಾಠ ೧೧)

ಜಾನತೇ ಹೋ ಮೈ ಕೌನ ಹೂಂ?

(ಬಲ್ಲಿರಾ ನಾನ್ಯಾರೆಂದು?)

ಜಾನತೇ ಹೋ ಮೈ ಕೌನ ಹೂಂ? (ಬಲ್ಲಿರಾ ನಾನು ಯಾರು ಎಂದು?) ಮೈ ತಡಕೇ ಉಠತಾ ಹೂಂ (ನಾನು ಬೆಳಿಗ್ಗೆ ಏಳುತ್ತೇನೆ) ಗಾಯ ದುಹತಾ ಹೂಂ (ಆಕಳ ಹಾಲು ಹಿಂಡುತ್ತೇನೆ) ಖೇತ ಪರ ಹಲ ಲೇ ಜಾತಾ ಹೂಂ (ಹೊಲಕ್ಕೆ ನೇಗಿಲು ತಕ್ಕೊಂಡು ಹೋಗುತ್ತೇನೆ) ಸೂಖೀ ರೋಟೀ ಖಾತಾ ಹೂಂ (ಒಣ ರೊಟ್ಟಿ ತಿನ್ನುತ್ತೇನೆ) ಧೂಪಮೇಂ ಕಾಮ ಕರತಾ ಹೂಂ (ಬಿಸಿಲಲ್ಲಿ ಕೆಲಸ ಮಾಡುತ್ತೇನೆ) ಖೇತ ಜೋತತಾ ಹೂಂ (ಹೊಲ ಹೂಡುತ್ತೇನೆ) ಖೇತ ಸೀಂಚತಾ ಹೂಂ (ಗದ್ದೆ – ನೀರು ಬಿಟ್ಟು – ತಣಿಸುತ್ತೇನೆ) ಬೋತಾ ಹೂಂ (ಬೀಜ ಬಿತ್ತುತ್ತೇನೆ) ಖಾದ ದೇತಾ ಹೂಂ (ಗೊಬ್ಬರ ಹಾಕುತ್ತೇನೆ) ಜಾನತೇ ಹೋ ಮೈ ಕೌನ ಹೂಂ? (ಬಲ್ಲಿರಾ ನಾನು ಯಾರೆಂಬುದನ್ನು?) ಧೂಪ ಸಹತಾ ಹೂಂ (ಬಿಸಿಲು ಸಹಿಸುತ್ತೇನೆ) ಕಡೀ ಸರದೀ ಸಹತಾ ಹೂಂ (ಉಗ್ರ ಚಳಿಯನ್ನು ಸಹಿಸುತ್ತೇನೆ) ಪೇಡ ಲಗಾತಾ ಹೂಂ (ಗಿಡ ನೆಡುತ್ತೇನೆ) ರಖವಾಲೀ ಕರತಾ ಹೂಂ (ಕಾವಲು ಮಾಡುತ್ತೇನೆ) ಅನಾಜ ಪೈದಾ ಕರತಾ ಹೂಂ (ಧಾನ್ಯ ಬೆಳೆಸುತ್ತೇನೆ) ಕಪಾಸ ಪೈದಾ ಕರತಾ ಹೂಂ (ಹತ್ತಿ ಹುಟ್ಟಿಸುತ್ತೇನೆ) ಖುದ ಭೂಖಾ ರಹತಾ ಹೂಂ (ಸ್ವತಃ ಹಸಿದವನಾಗಿರುತ್ತೇನೆ) ನಂಗಾ ರಹತಾ ಹೂಂ (ಬತ್ತಲೆಯಾಗಿರುತ್ತೇನೆ) ಜಮೀನದಾರಕೋ ಅನಾಜ ದೇತಾ ಹೂಂ (ಜಮೀನದಾರನಿಗೆ ಧಾನ್ಯ ಕೊಡುತ್ತೇನೆ) ಮಹಾಜನಕೋ ಪೈಸಾ ದೇತಾ ಹೂಂ (ಸಾವಕಾರನಿಗೆ ಹಣ ಕೊಡುತ್ತೇನೆ) ಜಾನತೇ ಹೋ ಮೈ ಕೌನ ಹೂಂ? ([illegible]?) ಬಾದಲ ಆತೇ ಹೈಂ, (ಮೋಡಗಳು ಬರುತ್ತವೆ) ಗರಜತೇ ಹೈಂ (ಗುಡುಗುತ್ತವೆ) ತಬ ಮೈ ಖುಶ ಹೋತಾ ಹೂಂ (ಆಗ ನಾನು ಹರುಷಪಡುತ್ತೇನೆ) ಮೆಹನತ ಕರತಾ ಹೂಂ (ಪರಿಶ್ರಮ ಮಾಡುತ್ತೇನೆ) ರಾತಕೋ ಸುಖಸೇ ಸೋತಾ ಹೂಂ (ರಾತ್ರಿ ಸುಖದಿಂದ ಮಲಗುತ್ತೇನೆ) ಮುಝೇ ಬೈಲೋಂಸೇ ಮುಹಬ್ಬತ ಹೈ (ನನಗೆ ಎತ್ತುಗಳ ಮೇಲೆ ಪ್ರೀತಿಯುಂಟು) ಗಾಯಸೇ ಮುಹಬ್ಬತ ಹೈ (ಆಕಳ ಮೇಲೆ ಪ್ರೇಮವಿದೆ) ಫಸಲಕೀ ಫಿಕ್ರ ಹೈ (ಫಸಲಿನ ಚಿಂತೆಯಿದೆ) ಜಾನತೇ ಹೋ ಮೈ ಕೌನ ಹೂಂ? (ಗೊತ್ತಿದೆಯೋ ನಾನ್ಯಾರೆಂದು?) ಮುಝೇ ರುಪಯಾ ನಹೀಂ ಚಾಹಿಯೇ (ನನಗೆ ರೂಪಾಯಿ ಬೇಕಾಗಿಲ್ಲ) ಕಪಡಾ ನಹೀಂ ಚಾಹಿಯೇ (ಬಟ್ಟೆ ಬೇಕಾಗಿಲ್ಲ) ಮಿಠಾಈ ನಹೀಂ ಚಾಹಿಯೇ (ಸಿಹಿ ತಿಂಡಿ ಬೇಕಾಗಿಲ್ಲ) ಪಕವಾನ ನಹೀಂ ಚಾಹಿಯೇ (ಹೋಳಿಗೆ ಬೇಕಾಗಿಲ್ಲ) ರಂಗ ನಹೀಂ ಚಾಹಿಯೇ (ರಂಗು ಬೇಡ) ಝೂಠೀ ಬಾತೇಂ ಔರ ಕಪಟ ನಹೀಂ ಚಾಹಿಯೇ (ಸುಳ್ಳು ಮಾತುಗಳೂ ಕಪಟಗಳೂ ಬೇಕಾಗಿಲ್ಲ) ಮುಝೇ ಪ್ರೇಮ ಚಾಹಿಯೇ (ನನಗೆ ಪ್ರೇಮ ಬೇಕು) ಸಚ್ಚಾಈ ಚಾಹಿಯೇ (ಸತ್ಯತನ ಬೇಕು) ಈಮಾನದಾರೀ ಚಾಹಿಯೇ (ಪ್ರಾಮಾಣಿಕತೆ ಬೇಕು) [illegible] ಚಾಹಿಯೇ, ([illegible] ಬೇಕು) ಔರ ಆಜಾದೀ ಚಾಹಿಯೇ (ಮತ್ತು ಸ್ವಾತಂತ್ರ್ಯ ಬೇಕು) ಜಾನತೇ ಹೋ ಮೈ ಕೌನ ಹೂಂ? (ಬಲ್ಲಿರಾ ನಾನ್ಯಾರೆಂದು?) ಮೈಂ ಹಿಂದುಸ್ಥಾನ ಕಾ ಭೂಖಾ ಕಿಸಾನ ಹೂಂ (ನಾನು ನಿಮ್ಮ ಹಸಿದ ಸಹೋದರನಾದ ಒಕ್ಕಲಿಗನಿದ್ದೇನೆ) ಕ್ಯಾ ತುಮ ಮೇರೀ ಇಚ್ಛಾ ಪೂರೀ ಕರೋಗೇ? (ನೀವು ನನ್ನ ಇಚ್ಛೆ ಪೂರ್ಣಗೊಳಿಸುವಿರಾ)

THE BANK OF RURAL INDIA, LTD.
(Incorporated in British India under the Indian Companies Act, 1913)
HEAD OFFICE - KARWAR
Offices at KARWAR KUMTA HONAVAR & SIRSI
Authorised Capital Rs 10 00 000
Subscribed Capital Rs 5 00 000
Paid-up Capital Rs 2 60,000
Rates of Interest on Deposits
Current a/c @ 1% p a *Savings Bank a/c @ 2½%*
Fixed Deposits for 3 months @ 3% per annum
for 6 months @ 3½%
for 12 months or more @ 4%
The Board of Directors have pleasure to announce that
a sub-Branch has been opened at YELLAPUR on 21st December 1945
All Kinds of modern Banking business transacted
P. X. GRACIOUS.
MANAGING DIRECTOR
Karwar
22-12-1945

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯುಂಟು; ಗಾಳಿಯುಂಟು ವರ್ತಕರಿಗೆ ನೀರು ಹಾಕಲಿಕ್ಕೆ ನೀರಿಗೆ ಮಾತ್ರ ಬರಗಾಲ ಜಿಲ್ಲಾಧಿಪರು ನಗರಸಭೆಯವರಿಗೆ ಇನ್ನೊಮ್ಮೆ ಬುದ್ಧಿ ಹೇಳಬೇಕು

ಕಳೆದ ಗುರುವಾರ ಇಲ್ಲಿಯ ವರ್ತಕರು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಸ್ವಸಿಸೇರಿ, ಮುಂಬಯಿ ಸರಕಾರದವರು ಹೇರಲು ಸಂಕಲ್ಪಿಸಿರುವ ವ್ಯಾಪಾರ ಕರದ ಯೋಜನೆಯನ್ನು ನಿಷೇಧಿಸುವ ಗೊತ್ತುವಳಿಯನ್ನು ಕೈಕೊಂಡರು ಬೇಗನೇ ಲೋಕಪ್ರತಿನಿಧಿ ಸರಕಾರವು ಅಧಿಕಾರಾರೂಢವಾಗಲಿರುವಾಗ ಜನತೆಯ ಪ್ರತಿನಿಧ್ಯದ ಬೆಂಬಲವಿಲ್ಲದ ಬಿಲ್ಲಿ ಸರಕಾರವು— ಹಿಂದುಸ್ಥಾನ ಸರಕಾರದ ಕಟ್ಟಳೆಯ ೯೩ನೇ ಕಲಮಿನನ್ವಯ ಸರಕಾರಿ ಆಡಳಿತೆಯನ್ನು ಸಾಗಿಸಿಕೊಂಡು ಹೋಗಲು ನೇಮಿಸಿಟ್ಟ ಹಂಗಾಮಿ ಸರಕಾರವು— ಹೇಯವಾದ ಗಾಬರಿಯಿಂದ ಈ ಹೊಸ ಕರವನ್ನು, ಅದು ಕೂಡ ತೀವ್ರವಾದ ಅವಶ್ಯಕತೆಯಿಲ್ಲದೆ, ಹೇರುವದೇಕೆಂದು ವರ್ತಕರ ಪ್ರಶ್ನೆ

ಪ್ರಾಂತಿಕ ಎಸೆಂಬ್ಲಿಯ ಚುನಾವಣೆಯ ಯಾದಿಗಳನ್ನು ಪರಿಶೀಲಿಸಲಾಗಿ, ಮೂರೂರ ಕಲ್ಲಬ್ಬೆ ಕರ್ಗಿನಮಕ್ಕಿ ಹೊಸಾಡ ಬಂಡಿವಳ್ಳಿ, ಅಳಿವಳ್ಳಿ, ಮಣಕಿ (ಮುಗ್ಗಿಯ ಹೊರಗಿನ ಭಾಗ), ಮುಡ್ಕೆಮೈಲ ಈ ಗ್ರಾಮಗಳನ್ನು ಅಂಕ್ರವಳ್ಳಿ ಗ್ರಾಮದ ಸೊಂದಿ ಹಿತ್ತಲ ಧರ್ಮಶಾಲೆಯ ಮತಗಟ್ಟೆಗೆ ಜೋಡಿಸಿದ್ದು ಕಂಡು ಬರುತ್ತಿದೆ ಮೇಲ್ಕಾಣಿಸಿದ ಎಂಟೂ ಗ್ರಾಮಗಳಲ್ಲಿ ಸುಮಾರು ೫೦೦ ರಷ್ಟು ಮತದಾರರಿದ್ದಾರೆ ಮತ ನೋಂದಿಸಲು ಆವರೆಲ್ಲರೂ ಹೊಳೆಯಾಚೆಗಿರುವ ಸೊಂದಿಹಿತ್ತಲಕ್ಕೆ ಹೋಗುವದು ಬಹಳ ಕಷ್ಟ ಈ ಬಗ್ಗೆ ಅವಶ್ಯವುಳ್ಳ ದೂರಗಳನ್ನು ಸಂಪಾದಿಸುವದೂ ಅವಶ್ಯ ಕಾರಣ ಜಿಲ್ಲಾಧಿಪರು ಈ ಗ್ರಾಮಗಳ ಭೌಗೋಲಿಕ ಪರಿಸ್ಥಿತಿಯನ್ನು, ಸೊಂದಿ ಹಿತ್ತಲಕ್ಕೂ ಈ ಗ್ರಾಮಗಳ ನಡುವಿನ ಅಂತರವನ್ನೂ ಪರಾಂಬರಿಸಿ, ಮೂರೂರ ಗ್ರಾಮಪಂಚಾಯತಿಯ ಕಚೇರಿಯಲ್ಲಿ ಹೊಸ ಪ್ರತ್ಯೇಕ ಮತಗಟ್ಟೆಯನ್ನು ಇಟ್ಟು ಮೇಲೆ ಹೇಳಿದ ಗ್ರಾಮಗಳನ್ನು ಆ ಮತಗಟ್ಟೆಗೆ ಜೋಡಿಸುವ ವ್ಯವಸ್ಥೆ ಮಾಡಬೇಕಾಗಿ ಅರಿಕೆಯುಂಟು

ಈ ತಾಲೂಕಿನ ಜಂಗಲ ಕಂಟ್ರಾಕ್ಟರರೊಬ್ಬರು ೧೯೪೪ ವರ್ಷದ ಹಿಂದೆ ಯುದ್ಧಸಂಬಂಧ ಜಂಗಲ ಕಾಮಗಿರಿಯಲ್ಲಿ ದುಡಿಯುತ್ತಿರುವ ಕೂಲಿಕಾರರಿಗೆ ಅವಶ್ಯವುಳ್ಳ ಅಕ್ಕಿ ಪೂರೈಸುವ ಬಗ್ಗೆ ಸರಕಾರದಿಂದ ಖಾಯಲಿ ೧೪೭ ರೂ ೧ ೮-೦ ರಂತೆ ಕೊಂಡರು. ೨೫೦೦ ರೂಗಳ ಅಕ್ಕಿ ಪಡೆದುಕೊಂಡಿದ್ದರು ಅದನ್ನು ಅವರು ಕೂಲಿಕಾರರಿಗೆ ಅಸಲ ಬೆಲೆಗೆ ಮಾರಲು ಕಾಯಿದೆಯಂತೆ ಬದ್ಧರಾಗಿದ್ದರು ಆದರೆ ಆ ಅಕ್ಕಿಯನ್ನು ಅವರು ರೂ ೧೦-೦ ರಕ್ಕೆ ೧ ಖಾಯಲಿಯಂತೆ ಮಾರಾಟ ಮಾಡಿ ಅಧಿಕವಾಗಿ ರೂ ೬೦೦೦ರಷ್ಟು ಲಾಭ ಮಾಡಿದ್ದು ಅವರ ಲೆಕ್ಕದ ಪುಸ್ತಕದಿಂದಲೇ ಕಂಡುಬರುತ್ತಿದೆ ಈ ಬಗ್ಗೆ ಜಿಲ್ಲಾಧಿಪರ ಕಡೆ ಅರ್ಜಿಯಾಗಿ, ಜಿಲ್ಲಾಧಿಪರು ಆ ಫಿರ್ಯಾದಿ— ಅರ್ಜಿಯನ್ನು ಪೋಲೀಸರ ಕಡೆ ಚೌಕಶಿಗೆ ಕಳಿಸಿದ್ದರು ಆ ಚೌಕಶಿಯ ಕೆಲಸ ಇಲ್ಲಿ ಆಗ ಕಂಟ್ರೋಲ ಫೌಜದಾರರಾಗಿರುವ ರಾ॥ ಅಹಮ್ಮದಖಾನ— ಹಿಂದೆ ಹೊನ್ನಾವರ ತಾಲೂಕಿನಲ್ಲಿ ಹವಾಲದಾರರಾಗಿದ್ದಾಗ ಅದ್ಭುತ ವಿಕ್ರಮ— ಸಾಹಸಗಳನ್ನು ಮಾಡಿ ಹೆಸರುವಾಸಿಯಾದವರಿವರು— ಇವರಿಗೆ ಒಪ್ಪಿಸಲ್ಪಟ್ಟಿತು. ಕಂಟ್ರಾಕ್ಟರರು ಅಕ್ಕಿ ಕೊಂಡ ದರ, ಅದನ್ನು ಕಾಮಗಾರಿ ಪ್ರದೇಶಕ್ಕೆ ಒಯ್ಯಲು ತಗಲಿದ ಖರ್ಚು (ಇದು ಖಾಯಲಿ ೧೦ ಮೇಲೆ ಸರಾಸರಿ ೩ ೭ ಪ್ರದೇಶ ಹತ್ತಿದೆ), ಅವರು ಮಾಡಿದ ದರ ಈ ವ್ಯಾಪಾರದಲ್ಲಿ ಮಾಡಿದ ಲಾಭ ಇವೆಲ್ಲ ಕಂಟ್ರಾಕ್ಟರರ ಲೆಕ್ಕದಲ್ಲಿ ಸಮಯ್ಯನ ಬರಹಕ್ಕಿಂತ ಹೆಚ್ಚಿಗೆ ಸ್ಪಷ್ಟ ಕಂಡುಬರುತ್ತಿದ್ದಾಗ್ಯೂ, ಮತ್ತು ಬೇಕಷ್ಟು ಸಾಕ್ಷಿಗಳು ದೊರೆಯುವವನ್ನು ನಿರ್ಧಾರಗೊಳಿಸಲು ಸಿಕ್ಕುವಂತಿದ್ದಾಗ್ಯೂ ರಾ॥ ಅಹಮ್ಮದಖಾನರು ಕಂಟ್ರಾಕ್ಟರರು ಗುನ್ಹೆ ಪುರಾವೆಯಿಂದ ಸಿದ್ಧವಾಗುವದಿಲ್ಲವಾಗಿ ವರದಿ ಮಾಡಿರುವರಂತೆ! ಇಷ್ಟೆಲ್ಲ ಪುರಾವೆಯಿರುವಾಗ ಗುನ್ಹೆ ಪುರಾವೆಯಿಂದ ಸಾಬೀತ ಆಗುವದಿಲ್ಲವಾಗಿ ವರದಿಯಾದದ್ದು ಕಂಡು ಜಿಲ್ಲಾಧಿಪರು ಆಶ್ಚರ್ಯಗೊಂಡರೆಂದು ತಿಳಿಯುತ್ತದೆ ರಾ॥ ಅಹಮ್ಮದಖಾನರು ಹೀಗೆ ಫಲಿತ ವರದಿಯನ್ನು ಒಪ್ಪಿಸಿದ್ದರ ಬಗ್ಗೆ ಚೌಕಶಿಯಾಗುವದು ಅವಶ್ಯವು ಕಾರಣ ಜಿಲ್ಲಾಧಿಪರು ಆ ಚೌಕಶಿಯನ್ನು ಮೊದಲು ಮಾಡಿಸಬೇಕಾಗಿ ಅರಿಕೆಯಿದೆ

ಹೊನ್ನಾವರ— (ತಾ ೧-೧-೧೯೪೬) ಕಾಸರಕೋಡದಲ್ಲಿ ಮೈಲಿ ಬೇನೆಯು ಪ್ರಾರಂಭವಾಗಿದೆ ಅದರೂ ಚಹಾ ಅಂಗಡಿಯವರು ಎಳ್ಳಿನಲ್ಲಿ ಹಾರಿಸು ತಿಂಡಿ ಮಾಡುವದನ್ನು ಬಿಡುವದಿಲ್ಲ ಎಳ್ಳು ಹುರಿದ ವಾಸನೆಯೂ ಉಗಿಯೂ ವಾತಾವರಣದಲ್ಲಿ ಸೇರಿದರೆ ಮೈಲಿಯು ಬೇನೆ ಹೆಚ್ಚುತ್ತದೆಯೆಂದು ಅನುಭವಿಕರ ಹೇಳುತ್ತಾರೆ ಅಧಿಕಾರಿಗಳಾಗಲಿ ಊರ ಪ್ರಮುಖರಾಗಲಿ ಚಹಾ ಅಂಗಡಿಯವರಿಗೆ ಬುದ್ಧಿ ಹೇಳಿ ಎಳ್ಳಿನಲ್ಲಿ ಹುರಿಯುವದನ್ನು ಕೆಲ ಕಾಲ ವಾದರೂ ನಿಲ್ಲಿಸುವಂತೆ ವ್ಯವಸ್ಥೆ ಮಾಡಬೇಕಾಗಿ ಕಾಸರಕೋಡದ ಓದುಗರ ಅರಿಕೆಯುಂಟು

ಮಾರ್ಗಶೀರ್ಷದಲ್ಲಿ ಮೈಲಿಯಿದೆ ಆದರೂ ಇಲ್ಲಿಯ ಮೀನುಗಾರರು ಒಣಗಿದ ಮೀನುಗಳನ್ನು ಹಲವಳ್ಳಿ, ಮಾರಬಳ್ಳಿ, ಹಲವಳ್ಳಿ-ಕರ್ಕಿ, ಇಡಗುಂಜಿ, ಬಳಕೂರು ವಗೈರೆ ಹಳ್ಳಿಗಳಲ್ಲಿ ಒಂದು ಮಾರುತ್ತಾರೆ ಅದರಿಂದ ಮಂಕಿಯೊಳಗಿನ ಮೈಲಿ ಆ ಸೀಮೆಯಲ್ಲೆಲ್ಲ ಹಬ್ಬುವ ಭೀತಿಯಿದೆ ಇಡಗುಂಜಿಯಲ್ಲಿ ಈಗಾಗಲೇ ಮೈಲಿಯು ಪ್ರವೇಶವಾಗಿದೆ ಅಧಿಕಾರಿಗಳು ಮಂಕಿಯ ಮೀನು ಆ ಸೀಮೆಯಲ್ಲಿ ಬರದಂತೆ ಪ್ರತಿಬಂಧಿಸುವದೊಳಿತು

ಮುರ್ಡೇಶ್ವರ— (ತಾ ೩-೧ ೪೬) ಈ ವಾರದ ಪ್ರಾರಂಭಕ್ಕೆ ಗೋಕರ್ಣ ಮಠಾಧೀಶ ಶ್ರೀಮದ್ ... ತೀರ್ಥ ಗುರುಗಳ ... ಈ ಊರಲ್ಲಿಗೆ ಕಳೆದ ಸೋಮವಾರ ಇಲ್ಲಿಯ ಶ್ರೀ ಮುರ್ಡೇಶ್ವರ ದೇವಸ್ಥಾನದ ... ವೈಭವ ಸಹಿತ ಶ್ರೀ ... ನ್ನು ಶ್ರೀದೇವರ ದರ್ಶನಕ್ಕೆ ... ದೇವಾಲಯದ ನ್ನು ... ಲಿಂಗವನ್ನು ತೋರಿಸಲು ಗುರುಗಳು ಶ್ರೀ ಲಿಂಗದ ಸಮೀಪ ... ಲಿಂಗವನ್ನು ನೀರೆಯನ್ನು ಸೂಕ್ಷ್ಮ ರೀತಿಯಿಂದ ನೋಡಿಕೊಂಡು ... ಹೊರದ ... ಗುರುಗಳು ದೇವರ ಸೇವೆ ... ಯೆಂಬುವ ... ಸಂಭಾವನೆಗಳನ್ನಿತ್ತರು

ಭಟಕಳ— (ತಾ ೩-೧-೪೬) ಹಿಂದೆ ಸಿಧಾ— ಪದ್ಧತಿ ಪ್ರಾರಂಭಿಸುವಾಗ ಕೆಲವು ಯುವಕರನ್ನು ಅಧಿಕಾರಿಗಳು ಕೆಲಸಕ್ಕೆ ನೇಮಿಸಿಕೊಂಡಿದ್ದರಂತೆ ಅವರಿಗೆ ಇನ್ನೂ ಸಂಬಳ ಕೊಟ್ಟಿಲ್ಲವಂತೆ! ಜಿಲ್ಲಾಧಿಪರು ಚೌಕಶಿ ಮಾಡಿ ಆ ಬಡ ಯುವಕರು ದುಡಿದುದಕ್ಕೆ ಪ್ರತಿಫಲ ಅವರಿಗೆ ಕೊಡಿಸಬೇಕಾಗಿ ಕೋರಿಕೆಯಿದೆ

ಅಬಕಾರಿ ಸಬ್ ಇನ್ಸಪೆಕ್ಟರರು ಅಂಗಡಿಗಳಲ್ಲಿ ಕೊಂಡುಕೊಂಡ ಜೀನಸುಗಳ ಬಗ್ಗೆ ಸರಿಯಾದ ಬೆಲೆ ಕೊಡುವದಿಲ್ಲವಾಗಿಯೂ ಪೂರ್ಣ ಹಣ ಕೇಳಿದರೆ ಸಿಟ್ಟು ಮಾಡುತ್ತಾರಾಗಿ ಮಾತು ಕೇಳಬರುತ್ತಿದೆ ಮೇಲಾಧಿಕಾರಿಗಳು ಈ ಅಕ್ರಮ ನಿಲ್ಲಿಸುವದೊಳಿತು

ಹಡೀಲ, ಕೋಣಾರ ವಗೈರೆ ಹಳ್ಳಿಗಳಿಗೆ ಸೀಧಾ ಸರಕು ಪೂರೈಸಲು ಮಾರುಕೇರಿಯಲ್ಲಿ ಒಂದು ಸೀಧಾ ಅಂಗಡಿಯನ್ನಿಟ್ಟದ್ದಾರೆ ಆದರೆ ಸೀಧಾ ಸರಕು ಬಡಬಗ್ಗರಿಗೆ ಸರಿಯಾಗಿ ಸಿಗುವದಿಲ್ಲ ಒಂದು ದಿನ ಹೋದರೆ ಸಕ್ಕರೆ, ಎಣ್ಣೆ ವಗೈರೆ ಇನ್ನೂ ಬಂದಿಲ್ಲವೆಂದು ಅಂಗಡಿಯವರು ಹೇಳುತ್ತಾರಂತೆ ಇನ್ನೊಂದು ದಿನ ಹೋದರೆ "ಬಂದ ಸರಕು ಮುಗಿಯಿತು! ಇನ್ನೊಮ್ಮೆ ಬೇಕಾದರೆ ಬನ್ನಿ" ಎಂದು ಹೇಳುತ್ತಾರೆ ಒಂದು ವೇಳೆ ಕೊಟ್ಟರೆ ತೂಕದಲ್ಲಿ ಕಡಿಮೆ ... ಇದಕ್ಕೆ ಯಾರು ... ಅಧಿಕಾರಿಗಳು ಚೌಕಶಿ ಮಾಡಿ ಬಡಬಗ್ಗರ ಸೀಧಾ ಅವರಿಗೆ ಸರಿಯಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕಾಗಿ ಅರಿಕೆ

ಶಿರಶಿ— (ತಾ. ೫-೧-೪೬) ಮೊನ್ನೆ ಇಲ್ಲಿಯ ಎಲ್ಲ ವರ್ತಕರೂ ದಲಾಲರೂ ಆಡಿಕೆ ಧರ್ಮಶಾಲೆಯ ಅಟ್ಟದ ಮೇಲೆ ಸಭೆಗೂಡಿ, ಮುಂಬಯಿ ಸರಕಾರದವರ ಹೊಸ "ವ್ಯಾಪಾರ ಕರ" ಹೇರುವ ಯೋಜನೆಯನ್ನು ನಿಷೇಧಿಸಿದರು (೧) ಲೋಕಪ್ರತಿನಿಧಿಗಳ ಸರಕಾರವು ಬೇಗನೇ ಅಸ್ತಿತ್ವದಲ್ಲಿ ಬರಲಿರುವಾಗ ಅವಸರದಿಂದ ಹೊಸ ಕರ ಹೇರುವದು ಅನ್ಯಾಯ್ಯವೆಂದೂ, (೨) ಹೊಸ ಕರದ ಯೋಜನೆಯು ವ್ಯಾಪಾರವರ್ಗಕ್ಕೆ ಹಾನಿಕರವಿರುತ್ತದೆಂದೂ (೩) ಇದ್ದ ಕರ ಭಾರ ಮೊದಲೇ ಹೆಚ್ಚಾಗಿರುವಾಗ ಹೊಸ ಕರ ಹೇರುವದು ಅನುಚಿತವೆಂತಲೂ ಸಭೆಯಲ್ಲಿ ಗೊತ್ತುವಳಿಗಳಾಗಿವೆ

(ತಾ ೩-೧-೪೬) ಇಲ್ಲಿಯ ಕೋರ್ಟಿನ ನ್ಯಾಯಾಧೀಶರ ನಂಗೇರಿ ಮಾಲಗಳ್ಳಿಯವರು ಕಳೆದ ಗುರುವಾರದಿಂದ ಕಣ್ಮರೆಯಾಗಿದ್ದರು ಶನಿವಾರ ಸಂಜೆ ಹಾಲು ಹೊಂದಿದ ಒಂದು ಬಾವಿಯಲ್ಲಿ ೧ ಹೆಣ ತೇಲುತ್ತಿದ್ದುದು ಕಂಡು ಬಂತು ಪಂಚನಾಮೆ ವಗೈರೆ ಮಾಡಿ ಅದನ್ನು ಮೇಲಕ್ಕೆತ್ತಿ ನೋಡಲಾಗಿ ಅದು ಮಾಲಗಳ್ಳಿಯವರದಿದ್ದದ್ದು ಕಂಡು ಬಂತು ಮಾಲಗಳ್ಳಿಯವರು ಬಾವಿಯಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡರೋ ಯಾರೋ ಅವರ ಕೊಲೆ ಮಾಡಿ ಶವವನ್ನು ಬಾವಿಯಲ್ಲಿ ಒಗೆದರೋ ತಿಳಿಯದು ರೀತಿ ಕಂಡ ... ಮಾರಕೋರ್ತದ ... ಇಂದು ಅವರ ಅಂತ್ಯಸಂಸ್ಕಾರವಾಯಿತು ಮೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಿದ್ದಿಲ್ಲವೆಂತಲೂ ಯಾರೋ ಅವರ ಕೊಲೆ ಮಾಡಿದ್ದರಬೇಕೆಂತಲೂ ಅವರ ಆಪ್ತೇಷ್ಟರ ಅಂಬೋಣವುಂಟು

ಅಕ್ಕಿಯ ಮಾರಾಟದ ಧಾರಣೆಯನ್ನು ಈಗ ಪ್ರತಿ ಖಾಯಲಿ ೧೪ ೧ | ಇತ್ಯಾದಿ ಏರಿಸಿದ್ದಾರೆ! ಯುದ್ಧ ನಿಂತು ಬೃಹ್ಮದೇಶದಿಂದ ಅಕ್ಕಿ ಬರಹತ್ತಿದಾಗ ಹೀಗೆ ದರವನ್ನೇರಿಸುವದು ನ್ಯಾಯ್ಯವೇ?

ನಗರ ಸಭೆಯವರು ... ಕೂಲಿಕಾರರಿಗೆ ಸರಕಾರಿ ಸ್ಕೇಲಿನಂತೆ ತುಟ್ಟಿ ಭತ್ತೆ ಕೊಡಲೊಪ್ಪಿದ್ದಾರೆ ಆದರೆ ಪಂಡಿತ ದವಾಖಾನೆಯ ನೌಕರರಿಗೆ ... ಮಾಡಲು ಅವರು ಸಿದ್ಧರಿಲ್ಲ! ... ಸರಕಾರಿ ಗ್ರಾಂಟ ಸಿಗುವ ದವಾಖಾನೆಗೂ ಗ್ರಾಂಟ ಸಿಗುತ್ತಿರುವಾಗ ತುಟ್ಟಿಭತ್ತೆ ಕೊಡುವಲ್ಲಿ ಈ ಪಕ್ಷಪಾತವೇಕೆ?

ಯಲ್ಲಾಪುರ— ಮಂಚೀಕೇರಿ ಸೀಮೆಯ ಅಡಿಕೆ ಪೇಟೆಗೆ ಹೋಗುತ್ತಿದೆ ಶಿರ್ಶಿಯಿಂದ ೩ ಮೈಲು ಈಚೆಗೆ ಅಪ್ಪಿಗೆ ಎಂಬಲ್ಲಿ ಮಾರ್ಗ ಬಹಳ ಇಕ್ಕಟ್ಟಿನದು ಅಲ್ಲಿ ಕೆಲವು ದರೋಡೆಕೋರರು ತಿಳಿದು ಅಡಿಕೆ ತೆಗೆದುಕೊಂಡು ಹೋಗುವ ಗಾಡಿಗಳನ್ನು ತಡೆದು ಬಹಳ ಲೂಟಿ ಮಾಡುತ್ತಾರೆ ಆ ೧೦ ಗಾಡಿಗಳಾಗಿ ಹೋದರೆ ಮಾತ್ರ ... ಕಳೆದ ವರ್ಷ ... ಇದೇ ಸ್ಥಳದಲ್ಲಿ ಅನೇಕರು ಕಳ್ಳರ ಕೈಯಿಂದ ಪೆಟ್ಟು ತಿಂದು ಶಿರ್ಶಿಯ ಆಸ್ಪತ್ರೆಯಲ್ಲಿ ... ಉಪಚಾರ ... ದ್ದುಂಟು ಪೋಲೀಸ ಅಧಿಕಾರಿಗಳು ಆ ದರೋಡೆಕೋರರ ಪತ್ತೆ ಹಚ್ಚಿ ಅವರ ಹಾವಳಿ ನಿಲ್ಲಿಸಬೇಕಾಗಿ ಅರಿಕೆಯಿದೆ

(೩ನೇ ಪುಟದಿಂದ ಮುಂದುವರಿದ್ದು)

ಗಳ ಧಾರಣೆಗಳವೆ ಇವನ್ನು ನಮ್ಮ ಜಿಲ್ಲೆಗೆ ತರಿಸಲು ಅನುಕೂಲವಾಗ ... ಮೇಲಧಿಕಾರಿಗಳು ... ಈ ಜೀನಸುಗಳು ಸುಸೂತ್ರವಾಗಿ ಸಿಗಬಹುದು ವರ್ತಕರಿಗೆ ತರಿಸಲು ಅಪ್ಪಣೆ ಕೊಟ್ಟು ಇಲ್ಲವೆ ಸೀಧಾ ಅಂಗಡಿಯವರಿಗೆ ಹಣ ಕೊಟ್ಟು ಇವುಗಳ ಪೂರೈಕೆ ಮಾಡಬಹುದು ಅಥವಾ ಈ ಜೀನಸುಗಳ ಆಮದು ನಿರ್ಯಾತಗಳ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕಲಬಹುದು ಅಂತೂ ಪೋಲೀಸ ಬಂದೋಬಸ್ತಿನ ಬಲದಿಂದ ಜನರನ್ನು ಪರಿಣಾಮಕಾರಿಯಾಗಿ ದಂಡಿಸದಿದ್ದರೆ ಈ ಸರಕುಗಳ ಪೂರೈಕೆಯೂ ಅನುಕೂಲವಾಗುವದಿಲ್ಲ

WANTED for the Veterinary Dispensary, Karwar —

1 A Compounder — Pay Rs 30-1/1-45 plus dearness allowance Rs 15

Qualifications Must have studied upt the Matric & have a good knowledge of Kannad and Marathi

2 An Attendant — Pay Rs 14 plus dearness allowance Rs 15

Qualifications Should have good knowledge of Kannad and working knowledge of Marathi

Apply to the Hon Secretary S P C A Karwar before 20-1-46 stating age, caste and previous experience, if any Candidates will have to come at their own expense if called for interview

Karwar,
23-12-45

V NANJAPPA,
Collector and Ex Officio
President, S P C A Karwar

WANTED Agents & Stockist for our High Class Cosmetics and Quality Inks in every town in Karnatak & Kanara Districts
Apply for terms to —

The Karnatak Sales & Agencies
17 Karani Bldg Forjet Hill Rd
BOMBAY

ಇದನ್ನು ... (ಸಂಪಾದಕ) ಇವರು ... ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ ಯಿಂದ ಹಣ ತರುವವರು ವ್ಹಿ. ಪಿ ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿಯು ಮುಂಗಡ ಕಳಿಸತಕ್ಕದ್ದು

Reg. No. B 1270 Monday, 14th January, 1946

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೨೮.

ಕುಮಟಾ:- ಸೋಮವಾರ, ತಾ ೧೪ ಮಾಹೆ ಜನವರಿ ೧೯೪೬ನೇ ಇಸವಿ.

ಜಾಹೀರಾತುಗಳ ದರ.
ಪ್ರತಿ ೧" ಇಂಚ್ ಉದ್ದ
೧ ಸಾರಿಗೆ ೬ ಆಣೆಯಂತೆ
ಕಾಲಮ್ನಾ ಜಾ ೧" ಇಂಚ್ ಉದ್ದ
೧ ಸಾರಿಗೆ ೮ ಆಣೆಯಂತೆ
ನಿಶ್ಚಿತ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ
● ತಿಳಿಸಲಾದೀತು.

ಸ್ಥಾನಿಕ ವೃತ್ತಾಂತ.

(೩ನೇ ಪುಟದಿಂದ ಮುಂದರಿಸಿದ್ದು)

ಠರಾವ (೩) ಅಡಿಕೆ ಬೇಸಾಯಗಾರರಿಗೆ ಯೋಗ್ಯ ಪೇಟೆಯೂ ಧಾರಣೆಗಳೂ ಸಿಗುವಂತೆ ಆಲ್ ಇಂಡಿಯಾ ಸುಪಾರಿ ಮಾರ್ಕೆಟಿಂಗ ಸಂಸ್ಥೆಯೊಂದನ್ನು ನಿರ್ಮಿಸಲು ಭಾವಿ ಆಲ್ ಇಂಡಿಯಾ ಸಂಯುಕ್ತ ಸಂಘಕ್ಕೆ ಶಿಫಾರಸು (೪) ಅಡಿಕೆ ಬೇಸಾಯಗಾರರ ಹೋರಾಟಕ್ಕೆ ಸಹಾನುಭೂತಿಯಿಂದ ಸಹಾಯ ಮಾಡಲಿಕ್ಕೂ ಶಾಸನ-ಮಂಡಳಗಳಲ್ಲಿ ಅಡಿಕೆ ಬೇಸಾಯಗಾರರ ತರ್ಫೆಯಿಂದ ಠರಾವಗಳಿಕ್ಕೆ ತಮ್ಮ ತಮ್ಮ ಪಕ್ಷಗಳ ಸದಸ್ಯರಿಗೆ ಆಜ್ಞಾಪಿಸಲಿಕ್ಕೂ ಸಮಸ್ತ ರಾಜಕೀಯ ಪಕ್ಷಗಳಿಗೆ ವಿನಂತಿ (೫) ಎರೆಡಿ ಅಡಿಕೆಯು ಈ ದೇಶಕ್ಕೆ ಬಂದಲ್ಲಿ ಅಡಿಕೆ ಧಾರಣೆ ಕುಗ್ಗಿ ತೋಟಗಾರರಿಗೆ ಹಾನಿಯಾಗುವ ಭೀತಿಯಿರುವದರಿಂದ ಆಯಾತವಾಗುವ ಅಡಿಕೆಯ ಪ್ರತಿ ರತ್ತಲ ಒಕ್ಕೆ ೩ ಆಣೆಯಷ್ಟು ಸುಂಕ ಹೇರಬೇಕೆಂದೂ ಆಯಾತವಾಗಬಹುದಾದ ಅಡಿಕೆಯ ಪರಿಮಾಣವನ್ನು ಕೂಡ ನಿಯಮಿಸಬೇಕೆಂದೂ ಸರಕಾರಕ್ಕೆ ಪ್ರಾರ್ಥನೆ (೬) ಅಡಿಕೆಗಿಡಗಳ ಜೋಪಾನದ ಹಾಗೂ ಅಡಿಕೆಯ ಸಂಸ್ಕರಣದ ಕ್ರಮಗಳ ಶಾಸ್ತ್ರೀಯ ಸಂಶೋಧನೆಯನ್ನೂ, ಅಡಿಕೆಯನ್ನು ಔಷಧಗಳಿಗೆ ಇಲ್ಲವೆ ಬೇರೆ ಉದ್ದಿಮೆಗಳಿಗೆ ಉಪಯೋಗಿಸಿಕೊಳ್ಳಲು ಬರುತ್ತದೋ ಹೇಗೆಂಬುದರ ಸಂಶೋಧನೆಯನ್ನೂ ಮಾಡಿಸಲಿಕ್ಕೆ ಸರಕಾರಕ್ಕೆ ಸೂಚನೆ (೭) (೮) ಅಡಿಕೆ ಬೆಳೆಯುವಲ್ಲೇ ವೇರ-ಹೌಸ ಯಾನೆ ಉಗ್ರಾಣಗಳನ್ನು ಇಟ್ಟು, ಅಡಿಕೆ ಚೀಲಗಳಿಗೆ ಕ್ರಮಾಂಕಗಳನ್ನು ಹಾಕುವ ಪದ್ಧತಿ ನಿಲ್ಲಿಸಿ, ಉಗ್ರಾಣಗಳಲ್ಲಿ ಅಡಿಕೆ ಹಾಕುವಾಗ ಅಧಿಕಾರಿಗಳ ಮುಂದೆ ಅದರ ತೂಕ ಮಾಡತಕ್ಕದ್ದೆಂಬ ನಿರ್ಬಂಧ ರದ್ದುಗೊಳಿಸಿ, ತೋಟದಿಂದ ಉಗ್ರಾಣಕ್ಕೆ ಅಡಿಕೆ ಸ್ಥಳಾಂತರಿಸುವ (ಟಿ ಪಿ ೩) ಪರವಾನೆಯ ಅವಧಿಯನ್ನು ಕನಿಷ್ಟ ೭ ದಿನಗಳಷ್ಟಾದರೂ ಇಟ್ಟು, ಸರಕಾರಿ ಖಜಾನೆಗಳು ಇಲ್ಲದಿದ್ದಲ್ಲಿ ದಲಾಲಿ (ಕಮಿಶನ) ಕೊಡದೆ ಮುನಿಯಾರ್ಡರ ಮಾಡಿ ಇಲ್ಲವೆ ಸ್ಥಾನಿಕ ಬೇಂಕುಗಳಲ್ಲಿ ಹಣ ತುಂಬಿ ಅಡಿಕೆ ಸುಂಕ ತುಂಬಲು ಬರುವಂತೆ ಅನುಕೂಲ ಮಾಡಿ ತೋಟಗಾರರ ಕಷ್ಟ ಕಡಿಮೆ ಮಾಡಬೇಕೆಂದು ಸರಕಾರಕ್ಕೆ ಅರಿಕೆ (೯) ಅಡಿಕೆ ಎಳಸುವ ಪ್ರದೇಶಗಳಲ್ಲಿ ಕ್ವೋಟಾ ಪದ್ಧತಿಯನ್ನು ಅಮಲಿನಲ್ಲಿ ತಂದು ಹಾಗೂ ಅಡಿಕೆಯನ್ನು ಪರವಾನೆ ಚೀಟಿಗಳಲ್ಲಿ ತೋರಿಸಿದ ಅವಧಿಯೊಳಗೆ ಆಯಾ ಸ್ಥಳಕ್ಕೆ ಮುಟ್ಟಿಸುವ ವ್ಯವಸ್ಥೆ ಮಾಡಿ ತೋಟಗಾರರಿಗೆ ಸಹಾಯ ಮಾಡಬೇಕೆಂದು ರೇಲ್ವೆ ಮತ್ತು ಮೋಟರ ಕಂಪನಿಗಳಿಗೆ ವಿನ್ನಹ

ಇದೇ ಬರುವ ತಾ ೩೧-೧-೪೬ಕ್ಕೆ ದೇಶದೊಳಗಿನ ಎಲ್ಲ ಅಡಿಕೆ ತೋಟಗಾರರು ತಮ್ಮ ತಮ್ಮ ನಗರ ಹಳ್ಳಿಗಳಲ್ಲಿಯೂ 'ಅಡಿಕೆ ತೆರಿಗೆಯ ನಿಷೇಧ ದಿನ'ವನ್ನು ಆಚರಿಸಬೇಕೆಂದೂ, ಅಂದು ಅಡಿಕೆ ವ್ಯಾಪಾರಿಗಳೆಲ್ಲರೂ ಹರತಾಳವನ್ನು ಆಚರಿಸಬೇಕೆಂದೂ, ಸಭೆ ಕೂಡಿಸಿ ಅಡಿಕೆ ತೆರಿಗೆಯ ನಿಷೇಧ ಮಾಡುವ ಠರಾವುಗಳನ್ನು ಮಾಡಬೇಕೆಂದೂ, ಅವನ್ನು ಹಿಂದುಸ್ಥಾನ ಸರಕಾರದ ಅರ್ಥ-ಸಚಿವರಿಗೆ ಕಳಿಸಿಕೊಡಬೇಕೆಂದೂ ಆಲ್ ಇಂಡಿಯಾ ಅಡಿಕೆ ಬೇಸಾಯಗಾರರ ಸಮ್ಮೇಲನದವರು ನೇಮಿಸಿದ ಸ್ಥಾಯಿ ಸಮಿತಿಯವರ ಒಂದು ಪರಿಪತ್ರ ಹೊರಡಿಸಿದ್ದಾರೆ

ಇಲ್ಲಿಯ ಕಸಬಾ ಕನ್ನಡ ಶಾಲೆಯಲ್ಲಿ ಶಿಕ್ಷಕರಲ್ಲೂ ವಿದ್ಯಾರ್ಥಿಗಳಲ್ಲೂ ಮುಖ್ಯಾಧ್ಯಾಪಕರ ನಡತೆಯ ಬಗ್ಗೆ ತೀವ್ರ ಅಸಂತೋಷವುಂಟಾಗಿದೆ. ವಿದ್ಯಾರ್ಥಿಗಳು ಹಿಂದೆ ತಮ್ಮಲ್ಲೇ ವರ್ಗಣಿ ಕೂಡಿಸಿ, ಧಂಡವಲು ಹಾಕಿ ವಿದ್ಯಾರ್ಥಿಗಳಿಗೆ ಬೇಕಾದ ಪುಸ್ತಕ, ಪಾಟಿ, ಕಾಗದ ಮುಂತಾದ್ದು ಅಗ್ಗ ಬೆಲೆಗೆ ಪೂರೈಸಲು ಒಂದು "ಸ್ಟೋರ್ಸ್" ಸ್ಥಾಪಿಸಿದ್ದರು ಅದರಂತೆ ಒಂದು ವಾಚನಾಲಯವನ್ನೂ ತೆರೆದಿದ್ದರು ಮುಖ್ಯಾಧ್ಯಾಪಕರು ಅವನ್ನು ಈಗ ತಮ್ಮ ಖಾಸಗಿ ಸೊತ್ತು ಮಾಡಿ ಬಿಟ್ಟಿದ್ದಾರೆ! ಶಾಲೆಗೂ ಈ ಸ್ಟೋರ-ವಾಚನಾಲಯಗಳಿಗೂ ಸಂಬಂಧವಿಲ್ಲವಂತೆ! ಇದರಿಂದ ಅನೇಕ ಶಿಕ್ಷಕರೂ ವಿದ್ಯಾರ್ಥಿಗಳೂ ಉದ್ವಿಗ್ನರಾಗಿದ್ದಾರೆ ಮೇಲಧಿಕಾರಿಗಳು ಚೌಕಶಿ ಮಾಡಿ ವಿದ್ಯಾರ್ಥಿಗಳ ರೊಕ್ಕಗಳನ್ನು ಸೊತ್ತನ್ನು ವಿದ್ಯಾರ್ಥಿಗಳ ವಶಕ್ಕೆ ಕೊಡಿಸಬೇಕಾಗಿ ಸೂಚನೆಯಿದೆ

ಮಾರ್ಗಗಳಲ್ಲಿ ಧೂಳು ವಿಪರೀತವಾಗಿದೆ. ಗಾಳಿ ಬೀಸಿದರೆ ಇಲ್ಲವೆ ಮೋಟಾರಬಂಡಿಗಳು ಓಡಾಡಿದರೆ ಸುತ್ತುಮುತ್ತಲಿನ ವಾತಾವರಣವೆಲ್ಲ ಧೂಳಿಮಯವಾಗಿ ಉಸಿರಾಡಲಿಕ್ಕೆ ಸಹ ಕಷ್ಟವಾಗುತ್ತದೆ! ಆದರೂ ಮಾರ್ಗಗಳ ಮೇಲೆ ನೀರು ಹಾಕುವದಿಲ್ಲ ನೀರು ಹಾಕಲೆಂದು ನಗರ ಸಭೆಯವರು ಒಂದು ಮೋಟಾರಬಂಡಿ ತರಿಸಿಟ್ಟಿದ್ದುಂಟು ಅದು ಹಾಗೆಯೇ ಬಿದ್ದುಕೊಂಡಿದೆ!

ಕಾರವಾರ— (ತಾ ೧೨-೧-೪೬) ಇಲ್ಲೂ ನೆರೆಹೊರೆಯ ಕೆಲವು ಹಳ್ಳಿಗಳಲ್ಲೂ ದನಗಳ ಕಾಲು ಬಾಯಿ ಒಡೆಯುವ ಬೇನೆ ಬಂದಿದೆ ಇದೊಂದು ಸೋಂಕು ಬೇನೆ ಆದ್ದರಿಂದ ಬೇನೆ ಬಂದ ದನಗಳಿಂದ ಬೇನೆ ಬಾರದ ದನಗಳನ್ನು ಪ್ರತ್ಯೇಕಿಸುವ ವ್ಯವಸ್ಥೆಯನ್ನು ಜನರು ಮೊದಲು ಮಾಡಬೇಕು ಬೇನೆಯಾದ ದನಗಳಿಗೆ ಏನು ಔಷಧೋಪಚಾರ ಮಾಡಬೇಕೆಂಬದನ್ನು ಇಲ್ಲಿಯ ಪಶು ಚಿಕಿತ್ಸಾಲಯದಲ್ಲಿ ಕೇಳಿಕೊಂಡು ಅದರಂತೆ ಮಾಡಿದರೆ ಹಾನಿಯಾಗುವದು ತಪ್ಪುವದು.

ಕಿರಾಣಿ ಅಂಗಡಿಗಳಲ್ಲಿ ಈಗ ಗೋದಿ ಸಿಗುವದಿಲ್ಲ! ಗೋದಿ ಸ್ಟಾಕ ಪೂರ್ಣ ತೀರುವ ವರೆಗೆ ಸ್ವಸ್ಥ ಕುಳಿತುಕೊಂಡು, ಅದು ತೀರಿದ ಬಳಿಕ ಹೊಸ ಗೋದಿ ತರಿಸುವ ಆಲೋಚನೆ ಮಾಡುವದು ಕಾರ್ಯ-ಕೌಶಲ್ಯ (efficiency) ದ ಲಕ್ಷಣವೇ ?

ಮುಂಬಯಿಯ ನಿಯಂತ್ರಣಾಧಿಕಾರಿಗಳ ಅಪ್ಪಣೆ ಪಡೆದುಕೊಂಡು ಇಲ್ಲಿಯ ಹಲವು ಜವಳಿ ವರ್ತಕರು ಮುಂಬಯಿಯಿಂದ ಕೆಲವು ಹೊಸ ಜವಳಿ ತರಿಸಿದ್ದಾರೆ ಅದು ಸರಕಾರವನ್ನು ಜವಳಿಗಾಗಿ ಅರ್ಜಿ ಹಾಕಿದ ಜನರಿಗೂ [illegible] ಗಂಟು ಒಡೆದು ಜನರಿಗೆ ಕೆಲವು ಜವಳಿ ಕೊಡುತ್ತಿರೆಂದು ಗಿರಾಕಿಗಳು [illegible] ಅದರ ಈ ಜವಳಿ ಮಾರಾಟಕ್ಕೆಲ್ಲಿ ತಮ್ಮ ಸರಕಾರ ಪ್ರಮಾದದ ಸರಕಾರವನ್ನು ಅವರ ಕೊಳೆಯುತ್ತ, ಬೇಕಬೇಕಾದವರಿಗೆ ಹಿಡಿದಿಟ್ಟುಕೊಂಡಿದಲೋ ಏನೋ! ಈ ಹೊಸ ಜವಳಿಯನ್ನು ಮಾರಾಟಕ್ಕೆ ತೆಗೆಯುವದೆಂದು ಜಿಲ್ಹಾಧಿಪರು ಕಟ್ಟಪ್ಪಣೆ ಮಾಡಿದ್ದಾರೆ! ಲೋಕಾನುಕೂಲತೆಗಾಗಿ ವಿಶಿಷ್ಟ ನಿಯಂತ್ರಣವಿದು!

ಅಂಕೋಲಾ— ತಾ ೧೦-೧-೪೬) ೧೯೪೨ರ ಕಾಂಗ್ರೆಸ ಆಂದೋಲನದಲ್ಲಿ ಪ್ರಮುಖ ಭಾಗವನ್ನು ವಹಿಸಿ ಬಗೆಬಗೆಯ ಕಷ್ಟಗಳನ್ನೂ ವನವಾಸವನ್ನೂ ಅನುಭವಿಸಿದ ತರುಣ ಕಾಂಗ್ರೆಸ ಭಕ್ತ ರಾ. ದಯಾನಂದ ಯಾನೆ ರಾಮಚಂದ್ರ ಮುಕುಂದ ಪ್ರಭು ಇವರು ಕಳೆದ ತಾ ೨೯-೧೨-೪೫ಕ್ಕೆ ಮುಂಬಯಿಯಲ್ಲಿ ಮುಂಬಯಿಯ ಓರ್ವ ಪ್ರಸಿದ್ಧ ಕಾಂಗ್ರೆಸ ಸೇವಕರಾಗಿರುವ ರಾ. ಕೃಷ್ಣರಾವ ನಾರಾಯಣ ಗಾಯತೊಂಡೆ ಇವರ ಸುಶಿಕ್ಷಿತ ಮಗಳಾದ ಕುಮಾರಿ ಸುನಂದೆಯೊಡನೆ ಲಗ್ನವಾದರು ಕರ್ನಾಟಕದಿಂದ ಹಲವು ಪ್ರಮುಖ ಕಾಂಗ್ರೆಸ್ಸಿಗರು ಈ ಸಮಾರಂಭಕ್ಕೆ ಹೋಗಿದ್ದರು ಮುಂಬಯಿಯ ಕಾಂಗ್ರೆಸ್ಸಿಗರೂ ಅನೇಕರು ಮದುವೆಯ ಕಾಲಕ್ಕೆ ಹಾಜರ ಇದ್ದು ವಧೂ ವರರನ್ನು ಆಶೀರ್ವದಿಸಿದರು ಹಾಗೆ ಆಶೀರ್ವಾದ ಪತ್ರವನ್ನು ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ರಾ. ನಗೀನದಾಸ ಮಾಸ್ತರರು ಮ. ಕಾ. ಕಾರ್ಯದರ್ಶಿ ರಾ. ಎಸ್ ಕೆ ಪಾಟೀಲ ಇವರು ಪ್ರಮುಖದಿಂದ ಕಳಿಸಿದ್ದರು. ರಾ. ಗಾಯತೊಂಡೆಯವರು ವಿವಾಹ ಸಮಾರಂಭದ ಎಲ್ಲ ವ್ಯವಸ್ಥೆಯನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದರು ಮದುವೆಯ ಮರುದಿನ ರಾ. ಮುಕುಂದ ಪ್ರಭುರವರು ಮದುವೆಗೆ ಬಂದಿದ್ದ ಮಹನೀಯರಿಗೆಲ್ಲ ಫಲಕೀವಾಡಿಯಲ್ಲಿ ಚಹಾ-ಪಾರ್ಟಿಯನ್ನಿತ್ತರು ಫಲಕೀವಾಡಿಯು ಆಗ ರಾಷ್ಟ್ರೀಯ ಪತಾಕೆಗಳಿಂದಲೂ ರಾಷ್ಟ್ರವೀರರ ಭಾವಚಿತ್ರಗಳಿಂದಲೂ ಮೆರೆಯುತ್ತ ನಿಂತಿತ್ತು. ಬಳಿಗೆ ಕಾಂಗ್ರೆಸ ವಾತಾವರಣವನ್ನುಂಟು ಮಾಡಿತ್ತು, ಹಾಗೆ ಮಿತ್ರ ನಿಮಂತ್ರಿತರು ಬಂದಿದ್ದರು ಚಹಾಪಾನವಾದ ಮೇಲೆ ರಾ. ರಾ. ನಗಿನದಾಸ ಮಾಸ್ತರ, ಎಸ್ ಕೆ ಪಾಟೀಲ, ಆರ್ ಕೆ ಪ್ರಭು (ಕ್ರಾನಿಕಲ ಪತ್ರಿಕೆಯ ಸಂಪಾದಕ ವರ್ಗದವರು), ಕಾನಡಾ ಜಿಲ್ಲಾ ವೃತ್ತ ಶಿವರಾಮ ಕಾಮತ ಮುಂತಾದವರು ಮಾತಾಡಿ ವಧೂವರರಿಗೆ ಆಶೀರ್ವಾದವಿತ್ತರು. ರಾ. ಪಾಟೀಲರು ತಮ್ಮ ಭಾಷಣದಲ್ಲಿ, ಕಾಂಗ್ರೆಸ ಆಂದೋಲನದ ಕಾಲಕ್ಕೆ ಕಾರವಾರ ಜಿಲ್ಲೆಯವರು ಅನುಭವಿಸಿದ ಕಷ್ಟಗಳ ಬಗ್ಗೆ ಮಾಡಿದ ತ್ಯಾಗದ ಬಗ್ಗೆ ಜಿಲ್ಲೆಯವರನ್ನು ತುಂಬಾ ಅಭಿನಂದಿಸಿದರು ರಾ. ದಯಾನಂದ ಪ್ರಭುರವರು ಸಮಯೋಚಿತ ಪ್ರತ್ಯುತ್ತರ ಕೊಟ್ಟ ಮೇಲೆ ಈ ಸಮಾರಂಭದ ಮುಕ್ತಾಯವಾಯಿತು

THE BOARD OF DIRECTORS
OF
The Agricultural & Industrial Bank, Ltd.
beg to announce the opening of a Branch of
the Bank (for regular Business) at
384 M, JAIPURIA HOUSE,
DABHOLKARWADI, KALBADEVI ROAD,
BOMBAY
on 22nd January 1946.
All kinds of Banking Business Transacted
Total Resources as on 31-12-1945 exceeds Rs 60,00,000
Coordapoor
8-1-1946
K. VAMAN SHENAI,
CHAIRMAN

ಸ್ಥಳಿಕ ವಿಷಯಗಳು.

ಲೇಖಕ:- ಸ್ಥಳವಂತಿಕ.

ಶಿರಸಿಯೊಳಗಿನ ರೆಸಿಡೆಂಟ ಮೆಜಿಸ್ಟ್ರೇಟರು ಹಿಂದೆ ಶಿರಸಿ, ಕುಮಟಾ, ಹೊನ್ನಾವರ ನಗರಗಳಲ್ಲಿ ಸರತಿಯಂತೆ ಕೋರ್ಟು ಮಾಡಿ ಆಯಾ ಭಾಗದ ಖಟ್ಲೆಗಳ ವಿಚಾರಣೆಯನ್ನು ಆ ಆ ಭಾಗದಲ್ಲೇ ಮಾಡುತ್ತಿದ್ದರು. ಕಳೆದ ವರ್ಷದ ಪ್ರಾರಂಭಕ್ಕೆ ಕುಮಟಾ, ಹೊನ್ನಾವರ ಭಾಗಗಳ ಖಟ್ಲೆಗಳ ಸಂಖ್ಯೆ ಕಡಿಮೆಯಾದ್ದರಿಂದಲೂ ಶಿರಸಿ, ಸಿದ್ದಾಪುರ ತಾಲೂಕಗಳ ಖಟ್ಲೆಗಳೇ ಹೆಚ್ಚು ಉಳಿದದ್ದರಿಂದಲೂ ಸದರಿ ಮೆಜಿಸ್ಟ್ರೇಟರ ಕುಮಟಾ, ಹೊನ್ನಾವರ ಮುಕ್ಕಾಮುಗಳನ್ನು ರದ್ದುಗೊಳಿಸಿ ಅವರ ಕಚೇರಿಯನ್ನು ಶಿರಸಿಯಲ್ಲಿ ಕಾಯಂ ಮಾಡಲಾಯಿತು. ಕಳೆದ ೧೨ ತಿಂಗಳಲ್ಲಿ ಹಿಂದೆ ಶಿಲ್ಕಾಗಿ ಬಿದ್ದ ಶಿರಸಿ, ಸಿದ್ದಾಪುರ ತಾಲೂಕುಗಳ ಖಟ್ಲೆಗಳಲ್ಲಿ ಬಹುತೇಕ ಖಟ್ಲೆಗಳು ನಿಕಾಲೆಯಲ್ಲಿ ಬಂದಿವೆ. ಬರೇ ೧೦-೧೨ ರಾಜಕೀಯ ಖಟ್ಲೆಗಳು (೧೯೪೨-೪೩ರ ಆಂದೋಲನಕ್ಕೆ ಸಂಬಂಧಪಟ್ಟಂಥವು) ಈಗ ಶಿಲ್ಕು ಇವೆ. ಈ ಖಟ್ಲೆಗಳಲ್ಲಿ ಕೂಡ ಫಿರ್ಯಾದಿ ಪಕ್ಷದಿಂದ ಪ್ರತ್ಯಕ್ಷ ಪುರಾವೆ ಕೊಡುವದು ಸಾಧ್ಯವಿಲ್ಲದ್ದರಿಂದಲೂ ಆರೋಪಿತರ ಅಪರಾಧ ಸಿದ್ಧಗೊಳಿಸುವದು ಕಠಿಣವಾದ್ದರಿಂದಲೂ ಅವನ್ನು ಹಿಂತೆಗೆದ್ದುಕೊಳ್ಳುವ ಆಲೋಚನೆ ನಡೆದಿದ್ದು, ಆ ಬಗ್ಗೆ ಅವಶ್ಯವುಳ್ಳ ಅನುಮತಿ ಕೊಡಲು ಮೇಲಧಿಕಾರಿಗಳಿಗೆ ಬರೆದು ಹೋಗಿದೆಯೆಂದು ಹೇಳುತ್ತಾರೆ. ಮೇಲಧಿಕಾರಿಗಳು ಒಂದು ವೇಳೆ ಅನುಮತಿ ಕೊಡದೆ ಖಟ್ಲೆಗಳ ವಿಚಾರಣೆ ನಡೆಯಲೇ ಬೇಕೆಂದು ಆಗ್ರಹಪಡಿಸಿದರೂ ಈ ಎಲ್ಲ ಖಟ್ಲೆಗಳು ಒಂದೆರಡು ವಾರಗಳಲ್ಲಿ ನಿಕಾಲೆಯಲ್ಲಿ ಬರುವಂತಿವೆ. ಹೀಗೆ ಶಿರಸಿ, ಸಿದ್ದಾಪುರ ಕಡೆಯ ಖಟ್ಲೆಗಳು ಕಡಿಮೆಯಾದ್ದರಿಂದ ರೆಸಿಡೆಂಟ ಮೆಜಿಸ್ಟ್ರೇಟರಿಗೆ ಶಿರಸಿಯಲ್ಲಿ ಈಗ ಏನೂ ಕೆಲಸವಿಲ್ಲದಂತಾಗಿದೆ

ಕೆಲಸದ ಈ ಕೊರತೆಯನ್ನು ನೀಗಿಸುವದಕ್ಕಾಗಿ ಜಿಲ್ಲಾ ಮೆಜಿಸ್ಟ್ರೇಟರೂ ಸಬ-ಡಿವ್ಹಿಜನಲ್ ಮೆಜಿಸ್ಟ್ರೇಟರೂ ಹೊನ್ನಾವರ, ಭಟಕಳ ಕಡೆಯ ಖಟ್ಲೆಗಳನ್ನು ಇತ್ತಲಾಗಿ ರೆಸಿಡೆಂಟ ಮೆಜಿಸ್ಟ್ರೇಟರ ಕಡೆ ವರ್ಗಾಯಿಸಿ ಕೊಟ್ಟಿದ್ದಾರೆ ಆದರೆ ಆ ಮೆಜಿಸ್ಟ್ರೇಟರ ಕಚೇರಿಯನ್ನು ಹೊನ್ನಾವರಕ್ಕಾಗಲಿ ಭಟಕಳಕ್ಕಾಗಲಿ ಸ್ಥಳಾಂತರಿಸುವ ವ್ಯವಸ್ಥೆಯನ್ನು ಮಾಡಿಲ್ಲ ಅವರ ಕಚೇರಿ ಶಿರಸಿಯಲ್ಲೇ ಉಂಟು! ಆದರಿಂದ ಹೊನ್ನಾವರ ಭಟಕಳ ಕಡೆಯ ಪಕ್ಷಗಾರರಿಗೂ ಸಾಕ್ಷಿಗಾರರಿಗೂ ಬಹಳ ಕಷ್ಟ-ನಷ್ಟಗಳಾಗಹತ್ತಿವೆ ಈ ಕೋರ್ಟಿನಲ್ಲಿ ಸಾಕ್ಷಿ ನುಡಿಯಲಿಕ್ಕೆ ಭಟಕಳ ಕಡೆಯ ಸಾಕ್ಷಿಗಾರರು ಖಟ್ಲೆಯ ವಿಚಾರವಿದ್ದ ಮುನ್ನಿನ ದಿನವೇ ಮನೆಯಿಂದ ಹೊರಡಬೇಕು, ಮತ್ತು ಸಾಕ್ಷಿಯಾದ ಮರು ದಿನ ಊರಿಗೆ ಮುಟ್ಟಬೇಕು ಒಂದೇ ದಿನದಲ್ಲಿ ಅವರ ಸಾಕ್ಷಿಯಾಗಿ ಬಿಡುಗಡೆಯಾದರೂ, ಆ ಸಾಕ್ಷಿ ಹೇಳುವದಕ್ಕೆ ಅವರು ೩ ದಿನವಾದರೂ ಕಳೆಯಬೇಕು, ಮತ್ತು ಭಟಕಳದಿಂದ ಶಿರಸಿಗೆ ಹಾಗೂ ಶಿರಸಿಯಿಂದ ತಿರುಗಿ ಭಟಕಳಕ್ಕೆ ಹೀಗೆ ಒಟ್ಟು ಸುಮಾರು ೧೪೦ ಮೈಲು ಪ್ರವಾಸ ಮಾಡಬೇಕು ಆದರಿಂದ ಒಬ್ಬೊಬ್ಬ ಸಾಕ್ಷಿಗಾರರಿಗೆ ಪ್ರವಾಸ ವೆಚ್ಚ ಮತ್ತು ಹೊಟ್ಟೆಯ ವೆಚ್ಚ ಕೂಡಿ ೧೦-೧೧ ರೂ. ತನಕ ಕೊಡುವ ಪ್ರಸಂಗ ಪಕ್ಷಗಾರರ ಮೇಲೆ ಬರುತ್ತಿದೆ! ಹೀಗೆ ಸಾಕ್ಷಿಗಾರರು ಉದ್ಯೋಗ ಬಿಟ್ಟು ತಿರುಗುವ ಕಷ್ಟ ಮತ್ತು ಪಕ್ಷಗಾರರು ತಿರುಗಾಟದ ಕಷ್ಟದ ವಿನಹ ಸಾಕ್ಷಿಗಾರರಿಗೆ ಹೇರಳ ಭತ್ತೆ ತೆತ್ತು ಬಡವರಾಗುವ ಕಷ್ಟ ಅನುಭವಿಸಬೇಕಾಗಿ ಬಂದಿದೆ! ನ್ಯಾಯದಾನ ಅಗ್ಗ ಮತ್ತು ಸುಲಭವಾಗಿರಬೇಕೆಂಬ ಜಗನ್ಮಾನ್ಯ ತತ್ವಕ್ಕೆ ಈ ಸ್ಥಿತಿಗೂ ಮೇಳ ಹಾಕುವದು ಹೇಗೆಂದು ತಿಳಿಯುವದಿಲ್ಲ. ಶಿರಸಿ ಇಲ್ಲವೆ ಹಳಿಯಾಳ ತಾಲೂಕಿನ ಸೆಶನ್ಸ ಖಟ್ಲೆಗಳ ವಿಚಾರಣೆಯನ್ನು ಜಿಲ್ಲಾ ನ್ಯಾಯಾಧೀಶರು ಕಾಯಂ ಕಚೇರಿಯುಳ್ಳ ಕಾರವಾರದಲ್ಲೇ ನಡಿಸಿದರೆ ಸಾಕ್ಷಿಗಾರರಿಗೆ ತೊಂದರೆಯೂ ಆಗುತ್ತದೆಂತಲೂ ವೆಚ್ಚ ಹೆಚ್ಚು ಬರುತ್ತದೆಂತಲೂ ವಾದಿಸಿ ಶಿರಸಿಯ ಖಟ್ಲೆಗಳ ವಿಚಾರ ಶಿರಸಿಯಲ್ಲಿ ಮತ್ತು ಹಳಿಯಾಳ ಖಟ್ಲೆಗಳ ವಿಚಾರ ಹಳಿಯಾಳದಲ್ಲಿ ಮಾಡುವ ಪ್ರಘಾತ ನಡೆದು ಬಂದದ್ದು ಅಧಿಕಾರಿಗಳಿಗೆ ಗೊತ್ತಿರದೆ ಇರಲಿಕ್ಕಿಲ್ಲ. ಅದೇ ತತ್ವವನ್ನು ರೆಸಿಡೆಂಟ ಮೆಜಿಸ್ಟ್ರೇಟರಿಗೂ ಅನ್ವಯಿಸಿ ಭಟಕಳ, ಹೊನ್ನಾವರ ಕಡೆಯ ವಿಚಾರಣೆಯನ್ನು ಅವರು ಭಟಕಳ, ಹೊನ್ನಾವರಗಳಲ್ಲಿ ಇಲ್ಲವೆ ಇವುಗಳಲ್ಲಿ ಅನುಕೂಲವಾದ ಒಂದು ಸ್ಥಳದಲ್ಲಿ ನಡೆಸುವಂತೆ ವ್ಯವಸ್ಥೆ ಮಾಡಬಾರದೇ? ಈ ಸಂಬಂಧದ ದೂರು "ವೃತ್ತ"ದಲ್ಲಿ ಪ್ರಕಟವಾಗಿ ಈಗ ೨ ತಿಂಗಳಾಗುತ್ತ ಬಂದರೂ ಅಧಿಕಾರಿಗಳು ಆ ಕಡೆ ಲಕ್ಷವನ್ನೀಯದೆ ಸ್ವಸ್ಥ ಕೂತುಕೊಂಡಿರುವದು ತೀರ ವ್ಯಸನಕರ. ರೆಸಿಡೆಂಟ ಮೆಜಿಸ್ಟ್ರೇಟರಿಗೆ ಭಟಕಳ ಇಲ್ಲವೆ ಹೊನ್ನಾವರದಲ್ಲಿ ಕಚೇರಿ ಮಾಡಲಿಕ್ಕೆ ಹುಕುಮು ಕೊಟ್ಟರೆ ಆ ಬಗ್ಗೆ ಸರಕಾರಕ್ಕೆ ವಿಶೇಷ ಖರ್ಚು ಬರುವದಿಲ್ಲ; ಯಾವದೊಂದು ವಿಶೇಷ ವ್ಯವಸ್ಥೆ ಮಾಡುವ ಕಷ್ಟವೂ ಬೀಳುವದಿಲ್ಲ. ಹೀಗೆ ಸರಕಾರಕ್ಕೆ ಖರ್ಚು ಯಾ ಕಷ್ಟವಿಲ್ಲದೆ ಜನರಿಗೆ ಬೇಕಾದ ಸೌಕರ್ಯ ಒದಗಿಸಿ ಕೊಡುವ ಅನುಕೂಲತೆ ಇದ್ದಾಗಲೂ ಅದನ್ನು ಅಧಿಕಾರಿಗಳು ಒದಗಿಸಿ ಕೊಡದಿರುವದು ಯಾತರ ಲಕ್ಷಣವೆಂದು ತಿಳಿಯಬೇಕು?

* * *

ನಮ್ಮ ಜಿಲ್ಲೆಯ ದನಗಳಿಗೂ ದನ ಸಾಕುವವರಿಗೂ ಬಂದ ಕಷ್ಟಗಳು ದಿನೇ ದಿನೇ ಹಿರಿದಾಗುತ್ತ ನಡೆದಿವೆ. ಹತ್ತಿಕಾಳು ಈಗ ಎಲ್ಲೂ ಸಿಗುವದಿಲ್ಲ! ಹಿಂಡಿಯ ಧಾರಣೆ ಏರೇರುತ್ತ ನಡೆದಿದೆ! ನೆಲಗಡಲೆಯ ಹಿಂಡಿ ತರಿಸಲಿಕ್ಕೆ ಪರವಾನಗಿಗಳು ಸಿಗುವದಿಲ್ಲ! ಈ ಹಿಂಡಿ ಗೊಬ್ಬರಕ್ಕೆಂದು ಬೇಡಿದರೆ ಮಾತ್ರ ಪರವಾನಗಿಗಳು ಸಿಗುವವೆಂದು ಅಧಿಕಾರಿಗಳು ಹೇಳುತ್ತಾರೆ ಕೊಬರಿ ಹಿಂಡಿ ಮನುಷ್ಯನ ಆಹಾರದಲ್ಲಿ ಸೇರ್ಪಡೆಯಾಗಿರುವದರಿಂದ ಅದು ಬರುವದೂ ವಿರಳ; ತಪ್ಪಿ ಬಂದರೂ ಅತಿಶಯ ತುಟ್ಟಿ ಬೀಳುತ್ತಿದೆ. ಹಳ್ಳಿಗಳಲ್ಲಿ ಭತ್ತ ಸೊರೆಯುವ ಅನುಕೂಲತೆ ಇರುತ್ತಿದ್ದರೆ ಭತ್ತ ಸೊರೆಯುವಾಗ ಸಿಗುವ ತೌಡಿನಿಂದ ತುಸುವಾದರೂ ದನಗಳ ನಿರ್ವಾಹವಾಗುತ್ತಿತ್ತು. ಆದರೆ ಆ ಉದ್ದಿಮೆಯನ್ನು ಸರಕಾರದವರು ಈಗ ಹಳ್ಳಿಗರಿಂದ ಕಸಕೊಂಡಿದ್ದಾರೆ. ಗಿರಣಿಗಳಲ್ಲಿ ಹೊರಡುವ ತೌಡು ಅಷ್ಟು ಹಸನವಿರುವದಿಲ್ಲ ಅದರಲ್ಲಿ ಉಮ್ಮಿಯ ಅಂಶ ಹೆಚ್ಚಿಗೆ ಇರುವದರಿಂದ ದನಗಳಿಗೆ ಅದು ಒಗ್ಗುವದಿಲ್ಲ. ಹೀಗಾಗಿ ದನಗಳಿಗೆ — ಹಾಲು ಹಿಂಡುವ ಎಮ್ಮೆ-ಆಕಳುಗಳಿಗೂ ಚಕ್ಕಡಿಗಳನ್ನೆಳೆಯುವ ಎತ್ತುಗಳಿಗೂ ಕೂಡ — "ತೃಣಂ ಭಕ್ಷ ಜಲಂ ಪಿಬ" ಎಂದು ಹೇಳುವ ದುರ್ಧರ ಪ್ರಸಂಗ ಬಂದಿದೆ! ಮಳೆಗಾಲದಲ್ಲಿ ಹಸಿ ಹುಲ್ಲಿನ ಮೇವಿತ್ತು. ಈಗ ಅದು ಸಿಗುವದಿಲ್ಲ ಆದರಿಂದ ದನಗಳು ಬರೇ ಒಣ ಹುಲ್ಲು-ಕರಡಗಳನ್ನು ತಿಂದು ಮತ್ತು "ಆದಮನ ಪಾನೀಯ" (ಶುದ್ಧ ನೀರು)ವನ್ನು ಕುಡಿದು ಕಾಲ ಕಳೆಯಬೇಕಾಗಿದೆ! ಇಂತಹ ಆಹಾರವನ್ನುಂಡು ಬದುಕಬೇಕಾದ ದನಗಳು ಹಾಲು ಕೊಡುವದೆಂತು? ಅಥವಾ ಗಾಡಿಗಳನ್ನೆಳೆದು ಮಾನವನ ಸೇವೆ ಮಾಡುವದೆಂತು? ನಾಡಿನಲ್ಲಿ ಭೀಕರ ಬರಗಾಲ ಬಂದಾಗ ಇಂತಹ ದೃಶ್ಯಗಳು ಕಣ್ಣಿಗೆ ಬೀಳುವದು ಸಹಜ ಆದರೆ ದಯಾಘನ ದೇವರ ದಯೆಯಿಂದ ಅಷ್ಟು ಭೀಕರ ಬರಗಾಲ ನಮ್ಮ ನಾಡಿನಲ್ಲಿ ಬಂದಿಲ್ಲ ಧಾರವಾಡ ಜಿಲ್ಲೆಯಲ್ಲಿ ಬೇಕಷ್ಟು ಹತ್ತಿಕಾಳುಂಟು. ಗದಗ, ಬಳ್ಳಾರಿ, ದಾವಣಗೆರೆ ಭಾಗದಲ್ಲಿ ಬೇಕಷ್ಟು ಹಿಂಡಿಯುಂಟು. ಆದರೆ ಅವನ್ನು ತರಿಸಿಕೊಳ್ಳಲು ಅವಶ್ಯವುಳ್ಳ ಪರವಾನಗಿಗಳನ್ನು ಕೊಡದೆ ಅಥವಾ ಕೊಡಲು ಕಾಲವಿಳಂಬ ಮಾಡಿ, ನಿಯಂತ್ರಣಾಧಿಕಾರಿಗಳು ನಮ್ಮ ಜಿಲ್ಲೆಯಲ್ಲಿ ಮನುಷ್ಯ ನಿರ್ಮಿತ ಬರಗಾಲವನ್ನು ನಿರ್ಮಾಣ ಮಾಡಿದ್ದಾರೆ! ದನಗಳ ಆಹಾರ-ಸಾಮುಗ್ರಿಯ ನಿಯಂತ್ರಣ ಮಾಡಲು ಮುಂಬಯಿ ಸರಕಾರದವರು ಇತ್ತಲಾಗಿ " ಡಾಯ
ಒಫ್ ಮಿಲ್ಕ ಸಪ್ಲಾಯ " ಎಂಬ ಅಧಿಕಾರಿಯನ್ನು
ಸಿದ್ದಾರಂತೆ. ಈ ಜಿಲ್ಲೆಯಲ್ಲಿ ದನಗಳ ಆಹಾರದ—
ಕಾಳು, ಹಿಂಡಿ, ಹುರಳಿ ಮುಂತಾದವುಗಳ—
ಯುಂಟಾಗಿದೆಯೆಂದೂ ಬೇಗನೇ ಅವನ್ನು ತರಿಸಿಕೊ
ಪರವಾನಗಿಗಳನ್ನು ಕೊಡಬೇಕೆಂದೂ ಜಿಲ್ಲಾಧಿಪರ
ಯವರು ತಿರುತಿರುಗಿ ಬರೆದಾಗ್ಯೂ, ತಂತಿಯ ಮೇಲೆ
ಕಳಿಸಿ ಬಿನ್ನವಿಸಿನಾಗ್ಯೂ ಈ ನೂತನ ಅಧಿಕಾರಿಗಳು
ದೊಂದು ವ್ಯವಸ್ಥೆಯನ್ನೂ ಮಾಡದೆ ಸುಮ್ಮಗೆ ಕುಳಿ
ತಿದ್ದಾರೆಂದು ಬಲ್ಲವರು ಹೇಳುತ್ತಾರೆ. ಮನುಷ್ಯರ
ದಿಂದ ದನಗಳ ಆಹಾರ ಪ್ರತ್ಯೇಕಿಸಿ,
ಆಹಾರದ ನಿಯಂತ್ರಣಾಧಿಕಾರವನ್ನಷ್ಟೇ ಸದರಿ
ಕಾರಿಗಳ ಕಡೆ ಕೊಟ್ಟಿರುವದರಿಂದ ಅವರು ಮನು
ಪೂರ್ಣ ಕಳಕೊಂಡು ಈಗ ಬರೇ ಪಶು-ಬುದ್ಧಿಯನ್ನ
ತಮ್ಮ ಸಂಗ್ರಹದಲ್ಲಿಟ್ಟುಕೊಂಡಿರುವರೋ ಏನೋ!
ರಲ್ಲಿ ಮನುಷ್ಯತ್ವವಿದ್ದಿದ್ದರೆ ಜಿಲ್ಲೆಯಲ್ಲಿ ದನಗಳ ಆ
ಕೊರತೆಯಾಗಿ ಹಾಹಾಕಾರವುಂಟಾದಾಗ್ಯೂ, ಆ ಹಾ
ರದ ಪ್ರತಿಧ್ವನಿ ಜಿಲ್ಲಾಧಿಪರ ಕಚೇರಿಯ ಮುಖಾ
ಅವರ ಕಿವಿಯ ಮೇಲೆ ತಿರುತಿರುಗಿ ಅಪ್ಪಳಿಸುತ್ತಿದ್ದಾ
ಅವರು ಆ ಕೊರತೆಯನ್ನು ಹೋಗಲಾಡಿಸುವ ವ್ಯವಸ್ಥೆ
ನ್ನಾಗಲಿ ಪ್ರಯತ್ನವನ್ನಾಗಲಿ ಮಾಡದೆ ಇರುತ್ತಿದ್ದಿಲ್ಲ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬೀಳುತ್ತಿದೆ. ನ
ಧೂಳುಗಳ ಉಪದ್ರವ ಹಾಗೆಯೇ ಉಂಟು.
ತಾ. ೧ರಿಂದ ನಗರ ಸಭೆಯವರು ಕೆಲವೊಂದು ರಸ್ತೆ
ಮೇಲೆ ನೀರು ಹಾಕಿಸುವರಂತೆ. ಕೋರ್ಟ, ಕ
ಹಾಯಸ್ಕೂಲುಗಳಿಗೆ ಹೋಗುವ ನೂರಾರು ಜನರು
ಯುವ ಹಾಗೂ ಹೆಚ್ಚಿಗೆ ರಹದಾರಿಯುಳ್ಳ ಗುಡಿಗಾರ
ಯ ಮಾರ್ಗದ ಮೇಲೆ ನೀರು ಹಾಕಿಸುವ ಆಲೋಚನೆ
ಸಭೆಗೆ ಇಲ್ಲವಾಗಿ ಹೇಳುತ್ತಾರೆ. ಈ ಮಾರ್ಗದ ಮೇಲಿನ
ಧೂಳು ಮತ್ತು ಧೂಳಿನ ಕಾಟ ಇನ್ನಾವ ಮಾರ್ಗದ
ಇಲ್ಲ ಆದರೂ ಅದಕ್ಕೆ ನೀರು ಹಾಕಿಸುವ ಅಗತ್ಯ
ಯಾಕೆಂದರೆ ಆ ಮಾರ್ಗದ ಪಕ್ಕದಲ್ಲಿ ಯಾವ ನಗರ
ಮನೆಯೂ ಇಲ್ಲ; ಅಂಗಡಿ-ವಖಾರಿಗಳೂ ಇಲ್ಲ !!

ಸೀಧಾ-ಅಂಗಡಿಗಳಲ್ಲಿ ಈಗ ಹತ್ತಿಕಾಳು ಇಲ್ಲ
ಲ್ಲೂ ಅದು ಸಿಗದಂತಾಗಿದೆ. ಗೋದಿ-ಜೋಳಗಳೂ ಸಿ
ದಿಲ್ಲ. ಹೊಸ ಗೋದಿ-ಜೋಳಗಳನ್ನು ಕಳಿಸಿಕೊಡಲು
ದು ಹೋಗಿದೆಯಂತೆ

ಕಳೆದ ಗುರು-ಶುಕ್ರವಾರ ಇಲ್ಲಿಯ ಲೋಕಲ್ ಬೋ
ಕಚೇರಿಯಲ್ಲಿ ಜಿಲ್ಲಾ ಲೋಕಲ್ ಬೋರ್ಡಿನ ಸಭೆಯಾ
ತು. ಈ ಸಭೆಯಲ್ಲಿ, ಅಧ್ಯಕ್ಷರ ಸಂಬಳ-ಭತ್ಯೆ
(ವಾರ್ಷಿಕ) ರೂ. ೧೫೦೦ರಿಂದ ರೂ. ೮೦೦ಕ್ಕೆ ಇ
ಯಿತು, ಬೋರ್ಡ ಶಿಬಂದಿಯವರಿಗೆ ಶಿಕ್ಷೆ, ದಂಡ
ರದ್ದು ಮಾಡುವ ಅಧಿಕಾರವನ್ನು ಅಧ್ಯಕ್ಷರಿಂದ
ತೆಗೆದುಕೊಳ್ಳಲಾಯಿತು. ಬೋರ್ಡಿನ ಸಭೆ ನಡೆದಾಗ
ಮಿಕ ಶಿಕ್ಷಕರ ಶಿಷ್ಟಮಂಡಳವೊಂದು ಸಭಿಕರನ್ನು
ಯಾಗಿ, ಎಲ್ಲ ಶಿಕ್ಷಕರಿಗೆ ಸರಕಾರ ಪಟ್ಟಿಯಂತೆ ತುಟ್ಟಿ
ದಯಪಾಲಿಸಬೇಕೆಂದು ಬಿನ್ನವಿಸಿತು. ಹೊಸ
ಹುಕುಮಿನಂತೆ ಎಲ್ಲ ಶಿಕ್ಷಕರಿಗೆ ತಿಂ. ರೂ. ೧೮ರಷ್ಟು
ಭತ್ತೆ ಸಿಗಬೇಕು ಆದರೆ ಈಗ ಬೋರ್ಡಿನವರು
ರಂತೆ ಕೊಡುತ್ತಾರೆ ೧೮ ರೂ ಭತ್ಯೆಯಲ್ಲಿ ತಮ್ಮ
ಡ್ಡಿ ಅಂದರೆ ರೂ ೧೨ ಕೊಡಲಿಕ್ಕೆ ಸರಕಾರದವರು ಸಿದ್ಧ
ಆಕಪಟ್ಟಿಯನ್ನು ವಿಧಿಸಿರುವ ಜಿಲ್ಲೆಗಳಲ್ಲಿ ಸರಕಾರ
ಈ ರೀತಿ ತಮ್ಮ ಪಾಲು ಕೊಡುತ್ತಿದ್ದಾರಂತೆ ಆದರೆ
ಜಿಲ್ಲೆಯಲ್ಲಿ ಆಕಪಟ್ಟಿಯನ್ನು ವಿಧಿಸದ್ದರಿಂದ ತಮ್ಮ
ನ ಪೂರ್ಣ ಹಣ ಕೊಡದೆ ಬರೇ ೧/೩ ಅಂದರೆ
ಕೊಡುತ್ತಿರುವರು. ಸರಕಾರವು ತಮ್ಮ ಪಾಲಿನ ಪೂರ್ಣ

ಕೊಟ್ಟಿಲ್ಲಿ ಶಿಕ್ಷಕರಿಗೆ ಪೂರ್ಣ ಪಟ್ಟಿ ಭತ್ತ ಕೊಡುವ ವ್ಯವಸ್ಥೆ ಮಾಡಲ್ಪಡ್ಡಿಯಲ್ಲವಾಗಿ ಸಕ್ಕರೆ ಶಿಸ್ತಿಂಗೆ ತಿಳಿಸಿದಂತಾಗಿ ತಿಳಿಯುತ್ತದೆ ಅಣೆಕಟ್ಟೆಯನ್ನು ಅಭ್ಯುದಿ ಮಾಡುವ ಬಗ್ಗೆ ಹಿಂದೆ ಕಾರವಾರ ಸಭೆಯಲ್ಲಾದ ತೀರ್ಮಾನದ ಪುನರ್ವಿಚಾರ ಮಾಡುವ ಬಗ್ಗೆ ಬೋರ್ಡಿನ ವಿಶೇಷ ಬೈಠಕ ಈ ತಿಂಗಳ ಕೊನೆಗೆ ಗೋಕರ್ಣದಲ್ಲಿ ಕೂಡಲಿದೆಯಂತೆ

ಅಲ್ಲಿ ಕುದುರೆ ಟಾಂಗೆ ನಡಿಸುತ್ತಿದ್ದ ಬಾಬು ಈತನು ಮೊನ್ನೆ ಮುಂಜಾನೆ ಮನೆಯಲ್ಲೇ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು. ಮನೆಯ ಮಕ್ಕಳು ಆಗ ಹೊರ ಜಗಲಿಯ ಮೇಲೆ ಕೆಲಸದಲ್ಲಿ ತೊಡಗಿದ್ದರಂತೆ

ಸರಕಾರಿ ಭತ್ತವನ್ನು ಗಿರಣಿಯಲ್ಲೇ ಕೊಟ್ಟು ಅಕ್ಕಿ ಮಾಡಿಸಬೇಕೆಂದು ಜಿಲ್ಲಾಧಿಪತಿಗಳ ಕಚೇರಿಯವರ ನಿಗ್ರಹವಿಲ್ಲೆಂದೂ ತಾಲುಕಾಧಿಕಾರಿಗಳು ಯೋಗ್ಯ ಜಾಮೀನು ತಕ್ಕೊಂಡು ಕಳೆದ ವರ್ಷದಂತೆಯೇ ತಾಲೂಕಿನ ಜನರಿಗೆ ಭತ್ತ ಕೊಟ್ಟು ಅಕ್ಕಿ ಮಾಡಿಸಬಹುದೆಂದು ಸ್ಥಾನಿಕ ಅಧಿಕಾರಿಗಳಿಗೆ ತಿಳಿಸಲಾಗಿದೆಯೆಂದೂ ಜಿಲ್ಲಾಧಿಪರ ಕಚೇರಿಯಿಂದ ಬಂದವರು ಹೇಳುತ್ತಾರೆ. ಮೊದಲು ಭತ್ತ ಕೊಂಡವರು ಇಂತಿಂತಹ ಭತ್ತಕ್ಕೆ ಇಂತಿಷ್ಟು ಪ್ರಮಾಣದಿಂದ ಅಕ್ಕಿ ಕೊಡಬೇಕಾಗಿಯೂ ಇಂತಿಷ್ಟು ಕೂಲಿ ಕೊಳ್ಳಬೇಕಾಗಿಯೂ ಕಳೆದ ವರ್ಷ ನಿರ್ಧರಿಸಿದ್ದುಂಟು ಆ ಪ್ರಮಾಣದಲ್ಲಾಗಲಿ ಕೂಲಿಯ ದರಗಳಲ್ಲಾಗಲಿ ಈ ವರ್ಷ ಹೆಚ್ಚು-ಕಡಿಮೆ ಮಾಡಿದ್ದು ಕಾಣುವದಿಲ್ಲ; ವ್ಯತ್ಯಾಸ ಮಾಡುವಂತಹ ಪರಿಸ್ಥಿತಿಯೂ ಉಂಟಾಗಿಲ್ಲ. ಆದರೆ ಸ್ಥಾನಿಕ ಅಧಿಕಾರಿಗಳು ಹೋದ ವರ್ಷದ ಪ್ರಮಾಣ ಈ ವರ್ಷ ಉಳಿದಿಲ್ಲವೆಂದೂ, ಭತ್ತ ಕುಟ್ಟಿ ತಯಾರಾಗುವ ಎಲ್ಲ ಅಕ್ಕಿಯನ್ನು ಸರಕಾರಕ್ಕೆ ಕೊಡತಕ್ಕದ್ದೆಂದು ಈ ಸಲ ನೇಮ ಮಾಡಲ್ಪಟ್ಟಿದೆಯೆಂದೂ, ಆದ ಅಕ್ಕಿಯೆಲ್ಲ ಸರಕಾರಕ್ಕೇ ಸಿಗುತ್ತಿರುವದನ್ನು ನೋಡಿಕೊಳ್ಳಲಿಕ್ಕೆ ಭತ್ತದ ಅಕ್ಕಿ ಮಾಡಿಸುವವರಲ್ಲಿ ಸರಕಾರಿ ಕಾವಲುಗಾರ ಅಧಿಕಾರಿಯನ್ನು ನೇಮಿಸತಕ್ಕದ್ದೆಂದು ಅಪ್ಪಣೆಯಾಗಿದೆಯೆಂದೂ ಆ ಕಾವಲುಗಾರ ಅಧಿಕಾರಿಯ ಸಂಬಳವನ್ನು ಭತ್ತ ಒಯ್ಯುವವರು ಕೊಡಬೇಕಾಗುವದೆಂದೂ ಹೇಳುತ್ತಾರೆ! ಅಕ್ಕಿ ಮಾಡುವ ಗಿರಣಿಗಳಲ್ಲಿ ಸರಕಾರದವರು ಈ ಪ್ರಕಾರ ಕಾವಲುಗಾರರನ್ನು ಇಟ್ಟು ಭತ್ತದಿಂದ ಹೊರಡುವ ಎಲ್ಲ ಅಕ್ಕಿಯನ್ನು ಸರಕಾರದವರೇ ತಗೊಳ್ಳುತ್ತಾರೆಂದು ಹೇಳಿ ಅವರು ತಮ್ಮ ಮಾತಿಗೆ ಪುರಾವೆಯ ಪುಷ್ಟಿ ಕೊಡುತ್ತಾರೆ! ಸ್ಥಾನಿಕ ಅಧಿಕಾರಿಗಳ ಈ ಮಾತುಗಳಲ್ಲಿ ತಥ್ಯಾಂಶವುಂಟೋ ಏನೆಂಬದು ತಿಳಿಯದಾಗಿದೆ ಕಾರಣ ಜಿಲ್ಲಾಧಿಪರ ಕಚೇರಿಯವರು ಬೇಗನೇ ಒಂದು ಜಾಹೀರ ಪ್ರಕಟನೆ ಹೊರಡಿಸಿ, ಯಾವ ಕರಾರುಗಳ ಮೇಲೆ ಒಕ್ಕಲಿಗರಿಗೆ ಮರಗೂಲಿಗೆ ಭತ್ತ ಕೊಡಲಾಗುವದೆಂಬುದನ್ನು ವಿಶದಗೊಳಿಸಬೇಕಾಗಿ ಸೂಚನೆಯಿದೆ

ಮುಂಬಯಿ ಸರಕಾರದವರು ಹೇರಬಯಸಿರುವ ಹೊಸ "ಮಾರಾಟ ಕರ"ದ ನಿಷೇಧ ಮಾಡುವದಕ್ಕಾಗಿ ಕಳೆದ ಗುರುವಾರ ಇಲ್ಲಿಯ ಎಲ್ಲ ಅಂಗಡಿಕಾರರೂ ವರ್ತಕರೂ ತಮ್ಮ ಅಂಗಡಿಗಳನ್ನು ಮುಚ್ಚಿ ಸಂಪೂರ್ಣ ಹರತಾಳವನ್ನಾಚರಿಸಿದರು. ಸಂಜೆಯ ೫ಕ್ಕೆ ವ್ಯಾಪಾರಿಗಳ ದೊಡ್ಡ ತಲೆಯ ಮೆರವಣಿಗೆಯಾಯಿತು. ಮೆರವಣಿಗೆಯು ಶ್ರೀ ಶಾಂತೇರಿ ಕಾಮಾಕ್ಷಿ ದೇವಾಲಯಕ್ಕೆ ಬಂದು ಮುಟ್ಟಿದ ಮೇಲೆ ಅಲ್ಲಿ ರಾ|| ಜನಾರ್ದನ ವಾಮನ ಶಾನಭಾಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ, ಮಾರಾಟ ಕರದ ಹೇರಿಕೆಯನ್ನೂ ಯೋಜನೆಯನ್ನೂ ನಿಷೇಧಿಸುವ ಗೊತ್ತುವಳಿಯಾಯಿತು.

ಚಿಮಣಿ ಎಣ್ಣೆಯ ಕಂಪನಿಯ ದರವೀಗ ಡಬ್ಬಿ ೧ಕ್ಕೆ ೮ ಆಣೆಯಂತೆ ಇಳಿದಿದೆ. ಡಬ್ಬಿ ೧ರ ದರ (ಖಾಲಿ ಡಬ್ಬಿ ಸಹಿತ) ರೂ ೪-೫-೯ ಉಂಟು ಖಾಲಿ ಡಬ್ಬಿಯ ದರ (ನಿಯಂತ್ರಿತ) ೧೨ ಆಣೆ ಇದೆ ಆದರಿಂದ ಡಬ್ಬಿಯೊಳಗಿನ ೩೨ ಪಾಯಿಂಟ ಎಣ್ಣೆಗೆ ರೂ ೩-೯-೯ ಬೀಳುತ್ತದೆ. ಡಬ್ಬಿಯಲ್ಲಿ ೩೨ ಪಾಯಿಂಟ ಎಣ್ಣೆ ಸಿಗುವದಿಲ್ಲ. ಸರಾಸರಿ ೩೦ ಪಾಯಿಂಟ ಎಣ್ಣೆ ಸಿಗುತ್ತದೆ ಎಂದು ವ್ಯಾಪಾರಿಗಳ ಅಂಬೋಣವುಂಟು. ಅದನ್ನು ಮಾನ್ಯ ಮಾಡಿ ಲೆಕ್ಕಾಚಾರದಿಂದ ೧ ಪಾಯಿಂಟ ಎಣ್ಣೆಗೆ ೧ ಆಣೆ ೧೧ ಪೈ ಬೀಳುತ್ತದೆ. ಈ ಎಣ್ಣೆಯನ್ನು ೨|| ಆಣೆಗೆ ಮಾರುವದು ಸುಲಿಗೆಯಲ್ಲವೇ? ಸರಕಾರದ ಕೃಪಾ-ಛತ್ರದಲ್ಲೇ ಹೀಗೆ ಸುಲಿಗೆಯಾಗುತ್ತಿರುವದು ವಿಚಾರದಮಾತೇ ಅಲ್ಲವೇ?

ಅ|| ಭಾ|| ರಾಷ್ಟ್ರೀಯ ಮುಸಲ್ಮಾನ ಸಂಸ್ಥೆಯ ಕಾರ್ಯದರ್ಶಿಗಳಾದ ರಾ|| ಅಹಮದ ಅಲಿ ಇವರು ಕಳೆದ ಮಂಗಳವಾರ ಇಲ್ಲಿ ಬಂದಿದ್ದರು. ಸಂಜೆಯ ೫ಕ್ಕೆ ಗಾಂಧಿ-ಚೌಕದಲ್ಲಿ ಅವರದೊಂದು ಭಾಷಣವಾಯಿತು. ಈಗ ಭಾರತದ ಮುಂದಿರುವ ಒಂದೇ ಒಂದು ಮಹತ್ವದ ಪ್ರಶ್ನೆಯೆಂದರೆ ಸ್ವಾತಂತ್ರ್ಯಪ್ರಾಪ್ತಿಯದೆಂದೂ, ಎಲ್ಲರೂ ಒಗ್ಗಟ್ಟಿನಿಂದ ದುಡಿದರೆ ಮಾತ್ರ ಸ್ವಾತಂತ್ರ್ಯ ಗಳಿಸಬಹುದೆಂದೂ, ಪಾಕಿಸ್ತಾನ, ಸಿಖಿಸ್ತಾನ ವಗೈರೆ ಅಂತರಿಕ ಭೇದದ ಪ್ರಶ್ನೆಗಳನ್ನು ಎಬ್ಬಿಸಿ ಜಗಳಾಡುತ್ತ ಕೂಡ್ರುವದು ಸ್ವಾತಂತ್ರ್ಯ-ಪ್ರಾಪ್ತಿಗೆ ವಿಘ್ನವನ್ನುಂಟು ಮಾಡುತ್ತದೆಂದೂ ಅವರು ತರ್ಕ-ಶುದ್ಧವಾಗಿ ಪ್ರತಿಪಾದಿಸಿದರು.

ಜಿಲ್ಲಾಧಿಪತಿಗಳಾದ ರಾ|| ನಂಜಪ್ಪ ಇವರಿಗೆ [illegible] ವರ್ಗವಾಗಿದೆಯೆಂತಲೂ ಅವರ ಸ್ಥಳದಲ್ಲಿ ರಾ|| ಜಾಧವರು ಬರುತ್ತಾರೆಂತಲೂ ಸುದ್ದಿಯುಂಟು ರಾ|| ಜಾಧವರು ಬಂದು ಮುಟ್ಟುವ ವರೆಗೆ ಕಾರವಾರ ವಿಭಾಗದ ಪ್ರಾಂತಸಾಹೇಬ ರಾ| ಶೇಖ ಇವರು ಬದ್ಲಿ-ಜಿಲ್ಲಾಧಿಪರಾಗುವರಂತೆ.

ಹೊನ್ನಾವರ— (ತಾ. ೧೧-೧-೪೬) ಶ್ರೀ ಗೋಕರ್ಣ ಮಠಾಧೀಶರು ಕಳೆದ ವಾರ ಕಾಸರಕೋಡ, ಬಳಕೂರ, ಗೇರಸಪ್ಪೆ ಗ್ರಾಮಗಳಲ್ಲಿ ಸಂಚಾರ ಮಾಡಿ ಕಳೆದ ಮಂಗಳವಾರ ಮಾವಿನಕುರ್ವೆಗೆ ಚಿತ್ತೈಸಿದ್ದಾರೆ ಮಾವಿನಕುರ್ವೆಯಿಂದ ನಾಳೆ ಯಾ ನಾಡದು ಹೊಸಾಡಕ್ಕೆ ಹೋಗುವರು. ಅಲ್ಲಿ ೩-೪ ದಿನ ಉಳಿದು ಮುಂದೆ ಇಲ್ಲಿ ದಯಮಾಡಿಸುವರೆಂದು ಸುದ್ದಿಯುಂಟು.

ಮಂಕಿಯಿಂದ ಹೇರಳ ಒಣ ಮೀನು ಘಟ್ಟಕ್ಕೆ ಹೋಗಲು ಗೇರಸಪ್ಪೆಗೆ ಹೋಗುತ್ತದೆಂತಲೂ ಅದರಿಂದ ಗೇರಸಪ್ಪೆಯಲ್ಲಿ ಪ್ಲೇಗಿನ ಪ್ರಾದುರ್ಭಾವವಾಗುವ ಭೀತಿಯುಂಟೆಂತಲೂ ಅಧಿಕಾರಿಗಳು ಪ್ಲೇಗ-ದೂಷಿತ ಮಂಕಿ ವಗೈರೆ ಗ್ರಾಮಗಳಿಂದ ಹಸಿ ಯಾ ಒಣ ಮೀನು ಹೊರಗೆ ಹೋಗದಂತೆ ಪ್ರತಿಬಂಧಕ ವ್ಯವಸ್ಥೆ ಮಾಡಬೇಕೆಂತಲೂ ಗೇರಸಪ್ಪೆಯವರು ಬಿನ್ನವಿಸುತ್ತಾರೆ.

ಚಿಮಣಿ ಎಣ್ಣೆ ಕಂಪನಿಯವರು ಈಚೆ ತಮ್ಮ ಧಾರಣೆಗಳನ್ನು ಇಳಿಸಿದ್ದಾರೆ. ಆದರೂ ಸೀಧಾ ಅಂಗಡಿಯವರ ದರ ಪಾಯಿಂಟಿಗೆ ೨|| ಆಣೆ ಇದ್ದದ್ದು ಇಳಿಯಲೊಲ್ಲದು! ಎಣ್ಣೆಯ ದರ ಇಳಿದದ್ದು ಜಿಲ್ಲಾಧಿಕಾರಿಗೆ ತಿಳಿದಿಲ್ಲವೇ? ಸಕ್ಕರೆಯ ಧಾರಣೆ ಸ್ವಲ್ಪ ಹೆಚ್ಚುತ್ತಲೇ ರತ್ತಲ ೧ಕ್ಕೆ ೪ ಆಣೆ ಇದ್ದ ದರವನ್ನು ೧|| ಪೈಗಳಿಂದ ಏರಿಸಿಕೊಟ್ಟವರಿಗೆ ಬಡವರ ಎಣ್ಣೆಯ ದರವನ್ನೂ ಹಾಗೆಯೇ ಇಳಿಸಿಕೊಡಬೇಕೆಂಬ ವಿಚಾರ ಯಾಕೆ ಬರುವದಿಲ್ಲ?

(ತಾ. ೧೨-೧-೪೬) ಅಬಕಾರಿ ಅಧಿಕಾರಿಗಳು ನಿನ್ನೆ ಕಾಸರಕೋಡ ಮತ್ತು ಮಲ್ಲುಕುರ್ವೆಯ ಬೇಲೆಗಳಲ್ಲಿ ಹುಗಿದಿಟ್ಟ ಸರಾಯಿಯ ಕೆಲವು ಭರಣಿಗಳನ್ನೂ ಪೀಪಾಯಿಗಳನ್ನೂ ಹೊರಗೆ ತೆಗೆದು ಜಪ್ತ ಮಾಡಿದ್ದಾರೆ. ಸುಮಾರು ೧೦೦ ಗ್ಯಾಲನ ಗೋವಾ ಸರಾಯಿ ಸಿಕ್ಕಿದೆಯಂತೆ! ಸಮುದ್ರದಲ್ಲಿ ಕಾವಲಿಗೆ ಲೋಂಚ ಇರುವಾಗಲೂ ಗೋವೆಯಿಂದ ಸರಾಯಿ ಬರುತ್ತಿರುವದನ್ನು ನೋಡಿದರೆ ಲೋಂಚಿನ ಶಿಬಂದಿ ಅಷ್ಟು ಜಾಗರೂಕವಿರುವದಿಲ್ಲೆಂದು ಹೇಳಬಹುದು.

ಈಗ ೧೫ ದಿನಗಳಿಂದ ಸೀಧಾ-ಅಂಗಡಿಗಳಲ್ಲಿ ಗೋದಿ-ಜೋಳಗಳಿಲ್ಲ. ಆದರಿಂದ ಅಕ್ಕಿಯ ಹೊರಗೆ ಸೀಧಾ ಧಾನ್ಯ ಬೇಕಾದರೆ ರಾಗಿಯನ್ನೇ ಒಯ್ಯಬೇಕು! ಗುಜರಾಥ ಕಡೆಯ ಮಾರವಾಡಿಯವರು (ಇವರು ರಾಗಿ ಉಪಯೋಗಿಸುವದಿಲ್ಲ, ರಾಗಿ ಉಪಯೋಗಿಸುವ ಕ್ರಮವನ್ನೂ ಅವರು ಅರಿಯರು) ತಮಗೆ ರಾಗಿಯ ಬದಲು ಅಕ್ಕಿಯನ್ನೇ ಕೊಡಬೇಕಾಗಿ ಜಿಲ್ಲಾಧಿಪರಿಗೆ ಅರ್ಜಿ ಮಾಡಿದ್ದರು. ಜಿಲ್ಲಾಧಿಪರು ಆ ಅರ್ಜಿ ಮಂಜೂರ ಮಾಡಬರುವದಿಲ್ಲವಾಗಿ ಜವಾಬ ಮಾಡಿದ್ದಾರೆ!

ಮುರುಡೇಶ್ವರ— ಈ ಭಾಗದಲ್ಲಿ ಕೆಲವು ಪೋಲಿಗಳು ತಮ್ಮದೊಂದು ಕೂಟ ರಚಿಸಿಕೊಂಡು, ಭೂಮಿಗಳ ಒಡೆಯರಿಗೆ ಗೇಣಿ ಕೊಡಬೇಡೆಂದು ಒಕ್ಕಲಿಗರಲ್ಲಿ ಪ್ರಚಾರ ನಡಿಸಿದ್ದಾರೆ. ಗೇಣಿ ಕೊಡಹೋಂಟವರನ್ನು ಅಡ್ಡಗಟ್ಟಿ ಹಿಂದಕ್ಕಟ್ಟುತ್ತಾರೆ! ಗೇಣಿ ಕೊಟ್ಟವರಿಗೆ ಬಹಿಷ್ಕಾರ ಹಾಕುವ ಬೆದರಿಕೆಯನ್ನೂ ಹಾಕುತ್ತಾರೆ! ಒಡೆಯರಿಗೆ ಕೊಡತಕ್ಕ ಗೇಣಿ-ಹಣವನ್ನು ತಮ್ಮ ಕೂಟದಲ್ಲಿ ಜಮಾ ಮಾಡಿರೆಂದು ಹೇಳುತ್ತಾರೆ! ಹೀಗೆ ಕೂಟದಲ್ಲಿ ಹಣ ಜಮೆಯಾದರೆ ಅದನ್ನು ಈ ಕೂಟದವರು ನುಂಗಿ ಬಿಡುವರೆಂದು ಹೇಳುವದೇ ಬೇಡ! ರೈತರ ಮೇಲೆ ಗೇಣಿ ಬಾಕಿ ದಾವೆಗಳಾಗಿ ಎಷ್ಟೋ ಫೈಸಲೆಗಳಾಗಿ ಬಿದ್ದುಕೊಂಡಿವೆ! ಅವುಗಳ ಅಮಲಬಜಾವಣಿಯಾಗದಿದ್ದದ್ದು ನೋಡಿ ರೈತರಿಂದ ಗೇಣಿ ವಸೂಲ ಮಾಡಿಕೊಡುವ ಶಕ್ತಿಯೂ ಬಲವೂ ಸರಕಾರದಲ್ಲಿಲ್ಲವಾಗಿ ಅನೇಕ ಒಕ್ಕಲಿಗರ ಗ್ರಹಿಕೆಯಾಗಿರುವದರಿಂದ, ಮೇಲೆ ಹೇಳಿದ ಕೂಟದ ಪೋಲಿಗಳ ಪ್ರಚಾರಕ್ಕೆ ಒಳ್ಳೇ ಅವಕಾಶ ಸಿಕ್ಕಿದೆ.

ಶಿರಸಿ— ಕಳೆದ ಡಿಶಂಬರ ತಿಂಗಳ ತಾ. ೨೯ ೩೦ರ ವೆಗ್ಗೆಯಲ್ಲಿ ಕೂಡಿದ ಅ|| ಭಾ|| ಅಡಿಕೆ ಬೇಸಾಯಗಾರರ ಸಮ್ಮೇಲನದಲ್ಲಿ ಸ್ವೀಕರಿಸಲ್ಪಟ್ಟ ಗೊತ್ತುವಳಿಗಳ ಸಾರಾಂಶ ಈ ಕೆಳಗೆ ಕೊಡಲ್ಪಟ್ಟಿದೆ.— (೧) ಅಡಿಕೆ ಬೇಸಾಯಗಾರರ ಹಿತಸಂರಕ್ಷಣೆ ಮಾಡಲಿಕ್ಕೂ ಅವರ ಆರ್ಥಿಕ, ವ್ಯಾವಸಾಯಿಕ ಹಾಗೂ ಬೇಸಾಯ ಸಂಬಂಧಿ ಉನ್ನತಿ ಸಾಧಿಸಲಿಕ್ಕೂ "ಅಖಿಲ ಭಾರತೀಯ ಸುಪಾರಿ ಸಂಯುಕ್ತ-ಸಂಘ" ಸ್ಥಾಪಿಸುವದವಶ್ಯವುಂಟೆಂದು ತೀರ್ಮಾನಿಸಿ, ಆ ಸಂಘದ ಘಟನೆಯನ್ನೂ ನಿಯಮಾವಲಿಯನ್ನೂ ಸಿದ್ಧಗೊಳಿಸಲಿಕ್ಕೆ ಶ್ರೀ ಜಿ. ಕೇ. ಗೋವಿಂದಭಟ್ಟ, ಎಮ್. ಎಸ್. ಭಿಡೆ ಮತ್ತು ಶಂಕರ ಭಟ್ಟ ಈ ಮೂವರದೊಂದು ಮಂಡಳ ನೇಮಿಸಿದೆ, ಹಾಗೂ ಆ ಘಟನೆಯನ್ನು ಪರಿಶೀಲಿಸಿ ಮಂಜೂರ ಮಾಡಲಿಕ್ಕೂ, ಸಂಯುಕ್ತ ಸಂಘದ ಪ್ರಥಮಾಧಿವೇಶನ ಕೂಡುವ ತನಕ — ಈ ಅಧಿವೇಶನ ತಾ ೧-೧-೧೯೪೭ರ ಮುಂಚೆಯೇ ಕೂಡಿಸಬೇಕೆಂದು ನಿರ್ಣಯವಾಗಿದೆ — ಅಡಿಕೆ ಬೇಸಾಯಗಾರರ ಪರವಾಗಿ ಅವಶ್ಯವುಳ್ಳ ಚಳವಳಿ ನಡಿಸಲಿಕ್ಕೂ ಶ್ರೀ ಬಸಪ್ಪಾ ಚಂದ್ರಶೇಖರಯ್ಯ ವಗೈರೆ ೩೧ ಗೃಹಸ್ಥರ ಸ್ಥಾಯಿ ಸಮಿತಿಯನ್ನು ನೇಮಿಸಲಾಗಿದೆ. ಸಮಿತಿಯ ನಿಮಂತ್ರಕರು ಶ್ರೀ ಜಿ. ಕೇ. ಗೋವಿಂದ ಭಟ್ಟರು. ಅವರ ಮುಖ್ಯ ಕಚೇರಿ ಮಂಗಳೂರದಲ್ಲಿರುವದು. (೨)(ಅ) ಅಡಿಕೆ ತೆರಿಗೆಯು ಮೂಲತಃ ಕರಶಾಸ್ತ್ರಕ್ಕೆ ವಿರುದ್ಧವಿರುವದರಿಂದಲೂ, ತೆರಿಗೆ ಹೇರಲಿಕ್ಕೆ ಕಾರಣವಾದ ಪರಿಸ್ಥಿತಿಯು ಈಗ ಉಳಿದಿಲ್ಲವಾದ್ದರಿಂದಲೂ ಆ ತೆರಿಗೆಯನ್ನು ಕೂಡಲೇ ರದ್ದುಗೊಳಿಸಬೇಕಾಗಿ ಸರಕಾರಕ್ಕೆ ವಿನಂತಿ (ಬ) ೧೯೪೪ನೇ ಇಸವಿಯ ಕಾಯಿದೆಯಲ್ಲಿ ಸೇರಿಸಿದ ತಿದ್ದುಪಡಿಯಿಂದ ತಾ. ೩೧-೩-೧೯೪೫ರ ನಂತರ ಅಡಿಕೆ ತೆರಿಗೆ ವಸೂಲ ಮಾಡಲು ಕಾನೂನಿನಂತೆ ಬರುವಂತಿಲ್ಲದ್ದರಿಂದ ಈಗ ನಡೆದಿರುವ ವಸೂಲಿಯನ್ನು ಕೂಡಲೇ ನಿಲ್ಲಿಸಿ, ಕಾನೂನಬಾಹ್ಯವಾಗಿ ವಸೂಲ ಮಾಡಿದ ತೆರಿಗೆ-ಹಣವನ್ನೆಲ್ಲ ತಿರುಗಿ ಕೊಡಬೇಕಾಗಿ ಹಿಂದುಸ್ಥಾನ ಸರಕಾರಕ್ಕೆ ಆಗ್ರಹದ ಅರಿಕೆ. (ಕ) ತಾಜಾ ಅಡಿಕೆಯ ಬಗ್ಗೆ ಸುಂಕ ವಸೂಲ ಮಾಡಲು ಕಾಯಿದೆಯಲ್ಲಿ ಆಧಾರವಿಲ್ಲದಿದ್ದಾಗ್ಯೂ ಬರೇ ಮೊಂಡತನದಿಂದ ಅದನ್ನು ವಸೂಲ ಮಾಡುತ್ತಿರುವ ಅಧಿಕಾರಿಗಳ ವರ್ತನೆಯ ಖಂಡನೆ (ಡ) ೧೯೪೩—೪೪ರಲ್ಲಿ ಬೆಳೆದ ಅಡಿಕೆಯ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬಂಗಾಲದಲ್ಲೂ ವಸೂಲ ಮಾಡಿದ ತೆರಿಗೆ ಹಣವನ್ನು ತಿರುಗಿ ಕೊಡಲು ಸರಕಾರಕ್ಕೆ

(೧ನೇ ಪುಟದ ಮೇಲ ಮುಂದರಿಸಿದೆ.)

ಜಿಲ್ಲಾ ಸಮಾಚಾರ.

ಬನವಾಸಿ— (ತಾ ೨೫-೧೨-೪೫) ಕಳೆದ ತಾ ೨೨ನೇಗೆ ಬನವಾಸಿ ಸೀಮೆಯ ಶಾಲಾ ವಿದ್ಯಾರ್ಥಿಗಳು ಇಲ್ಲಿ ರಾ॥ ಎಮ್ ಸಿ ಒಡೆಯರ್ ಇವರ ಅಧ್ಯಕ್ಷತೆಯಲ್ಲಿ ಶಾರೀರಿಕ ಶಿಕ್ಷಣ ದಿನವನ್ನಾಚರಿಸಿದರು. ಬಗೆಬಗೆಯ ಆಟಪಾಟಗಳೂ ವಿನೋದಾವಳಿಗಳೂ ಪಂದ್ಯಾಟಗಳೂ ನಡೆದವು. ಮೇಲ್ಪಂಕ್ತಿ ಪಡೆದವರಿಗೆ ಇನಾಮುಗಳನ್ನು ಹಂಚಲಾಯಿತು.

ಸಿದ್ದಾಪುರ— (ತಾ ೧-೧-೪೬) ಹಾರೇಸರ ಗ್ರಾಮದ ಹೆಗ್ಗಾರಬೈಲು ಮಜರೆಯಲ್ಲಿ ಹುಲಿ ಹಾವಳಿ ಹೆಚ್ಚಾಗಿದೆ. ೩ ವಾರಗಳ ಹಿಂದೆ ಒಂದು ದಿನ ೩ ಘಂಟೆಯ ಸುಮಾರಿಗೆ ೧ ಹುಲಿಯು ೩ ಎಮ್ಮೆಗಳನ್ನು ಮುರಿದು ಹಾಕಿತು! ೨ ವಾರಗಳ ಹಿಂದೆ ಹಿರೇಕೈಯಲ್ಲಿ ೧ ಎಮ್ಮೆ ಹಾಳಾಯಿತು. ಹೀಗೆಲ್ಲ ಹುಲಿ ಹಾವಳಿ ನಡೆದಿದ್ದರೂ ಅಧಿಕಾರಿಗಳು ಹುಲಿ-ಬೇಟೆ ಮಾಡಿ ಜನರನ್ನು ಕಾಯುವ ವ್ಯವಸ್ಥೆ ಮಾಡುವದಿಲ್ಲ! ನಿಧಿಸಂಗ್ರಹದಲ್ಲೇ ಅವರು ಮಗ್ನರಾಗಿದ್ದಾರೆ!

ಮುಂಡಗೋಡ— (ತಾ ೨೯-೧೨-೪೫) ಕಳೆದ ತಾ ೨೨ನೇಗೆ ಬಗಳ್ಯ ಗ್ರಾಮದ ಶಾಲೆಯಲ್ಲಿ ಶಾರೀರಿಕ ಶಿಕ್ಷಣ ದಿನದ ಆಚರಣೆ ರಾ॥ ಫಕೀ ಇವರ ಅಧ್ಯಕ್ಷತೆಯಲ್ಲಾಗಿ, ವಿದ್ಯಾರ್ಥಿಗಳ ಆಟ-ಪಾಟ ಮುಂತಾದವುಗಳಾದವು. ಅಧ್ಯಕ್ಷರು ಹುಡುಗರಿಗೆ ಮಿಠಾಯಿ ಹಂಚಿಸಿದರು.

ನಿನ್ನೆ ಪುನಃ ಬಗಳ್ಯದಲ್ಲಿ ರಾ॥ ಫಕೀರಪ್ಪಾ ನರೇಗಲ್ಲ ಇವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ರತ್ನ ಮಹೋತ್ಸವದ ಪ್ರೀತ್ಯರ್ಥ ಕೀರ್ತನ-ವ್ಯಾಖ್ಯಾನ ಮುಂತಾದವುಗಳಾದವು.

ಕಾರವಾರ— (ತಾ ೫-೧-೪೬) ಕಳ್ಳರ ಕಾಟ ಹೆಚ್ಚುತ್ತಾ ಇದೆ. ಅವರದೊಂದು ಸುಸಂಘಟಿತ ಸಂಸ್ಥೆಯೇ ಉಂಟೆಂದೂ, ಸಂಸ್ಥೆಯವರು ತಮ್ಮದೊಂದು ಗುಪ್ತಚಾರರ ಶಾಖೆಯನ್ನಿಟ್ಟು ಆ ಶಾಖೆಯ ಮುಖಾಂತರ ಯಾವ ಮನೆಯವರು ಸಿನೆಮಾಕ್ಕೆ ಹೋಗುತ್ತಾರೆ, ಯಾವ ಮನೆಯವರು ಸಂಚಾರಕ್ಕೆ ಹೋಗಿದ್ದಾರೆ, ಎಲ್ಲಿ ಕನ್ನಾ ಕೊರೆದು ಕಳವು ಮಾಡಲು ಅವಕಾಶವಿದೆ ಎಂಬುದರ ಮಾಹಿತಿ ಸಂಗ್ರಹಿಸುತ್ತಿರಬೇಕೆಂದೂ ಸ್ಪಷ್ಟವಾಗಿ ತೋರುತ್ತಿದೆ. ಕಳೆದ ವಾರ ಇಲ್ಲಿಯ ಸರ್ವೇ ಕಚೇರಿಯ ಮುಖ್ಯಸ್ಥರಾದ ರಾ॥ ಶಾನಭಾಗರು ಹೊರಗೆ ಸಂಚಾರಕ್ಕೆ ಹೋದ ಸಮಯ ಸಾಧಿಸಿ, ಅವರ ಹೆಂಡರು-ಮಕ್ಕಳು ನೆಂಟರ ಮನೆಗೆ ತಿರುಗಾಡಲಿಕ್ಕೆ ಹೋದಾಗ ಕಳ್ಳರು ಅವರ ಮನೆಯಲ್ಲಿ ಕಳವು ಮಾಡಿ ಬೆಳ್ಳಿ-ಬಂಗಾರಗಳ ದಾಗಿನಗಳಿದ್ದ ಪೆಟ್ಟಿಗೆಯನ್ನು ಅಪಹರಿಸಿಕೊಂಡು ಹೋಗಿದ್ದಾರೆ! ಈ ತನಕ ಆದ ಯಾವ ಕಳವಿನ ಪತ್ತೆಯನ್ನೂ ಪೋಲೀಸರು ಹಿಡಿದಿಲ್ಲ! ಅಂದಮೇಲೆ ಪೋಲೀಸರು ತಮ್ಮ ಕೆಲಸಕ್ಕೆ ಅಯೋಗ್ಯರೆನಬೇಕೋ, ಕಳ್ಳರು ಅಷ್ಟು ಚತುರ ಮತ್ತು ಬುದ್ಧಿಶಾಲಿಗಳಿದ್ದಾರೆಂದು ಹೊಗಳಬೇಕೋ ತಿಳಿಯದು. ಪೋಲೀಸ ಅಧಿಕಾರಿಗಳೇ ಈ ಸಮಸ್ಯೆಯನ್ನು ಬಿಡಿಸುವದುತ್ತಮ.

ಮೊನ್ನೆ ಸುಪೆಯಿಂದ ಸದಾಶಿವಗಡಕ್ಕೆ ಬರುತ್ತಿದ್ದ ಕರ್ನಾಟಕ ಎಕ್ಸಪ್ರೆಸ್ ಸರ್ವಿಸ್ಸಿನ ಒಂದು ಮೋಟಾರ ಬಂಡಿಯು ಅಣಶಿ ಘಟ್ಟದಲ್ಲಿ ಹಾದಿ ತಪ್ಪಿ ಮಾರ್ಗದ ಪಕ್ಕದಲ್ಲಿದ್ದ ಒಂದು ಮರಕ್ಕೆ ಅಪ್ಪಳಿಸಿತಂತೆ. ಈ ಅನಾಹುತದಲ್ಲಿ ಡ್ರಾಯವ್ಹರನು ಹಾರಿಹೋಗಿ ಒಂದು ಮರದ ಟೊಂಗೆಯಲ್ಲಿ ಸಿಲುಕಿದ್ದನಂತೆ! ಅಲ್ಲಿಂದಲ್ಲೇ ಅವನ ಪ್ರಾಣೋತ್ಕ್ರಮಣವಾಯಿತು. ಒಳಗಿದ್ದ ೬ ಪ್ರವಾಸಿಗರಿಗೂ ಗಾಯಗಳಾಗಿವೆ. ಒಬ್ಬಳದೊಂದು ಕಾಲೇ ಮುರಿದು ಹೋಗಿದೆ. ಗಾಯಗೊಂಡವರನ್ನೆಲ್ಲ ಇಲ್ಲಿ ತಂದು ಸಿವ್ಹಿಲ ಆಸ್ಪತ್ರೆಯಲ್ಲಿಟ್ಟಿದ್ದಾರೆ. ಅನಾಹುತದ ಪೂರ್ವ ಕಾರಣ ತಿಳಿದು ಬಂದಿಲ್ಲ. ಡ್ರಾಯವ್ಹರನು ಚತುರನೂ ದಕ್ಷನೂ ಇದ್ದನೆಂದು ಬಲ್ಲವರು ಹೇಳುತ್ತಾರೆ. ಅವನ ಸಾಹಸದಿಂದಲೇ ಪ್ರವಾಸಿಗಳು ಬದುಕಿ ಉಳಿದರೆಂದೂ ಕೆಲವರ ಅಂಬೋಣ. ಮೋಟಾರಯಂತ್ರದಲ್ಲಿ ಆಯಾತ ಹೊತ್ತಿಗೆ ಏನೋ ದೋಷವುಂಟಾಗಿ ವೇಗದಲ್ಲಿದ್ದ ಗಾಡಿ ಡ್ರಾಯವ್ಹರನ ಅಂಕೆಯ ಹೊರಗೆ ಹೋಯಿತೆಂತಲೂ, ಆಗ ಗಾಡಿಯು ಎಲ್ಲಾದರೂ ಕಂದಕದಲ್ಲಿ ಬಿದ್ದು ನುಚ್ಚುನೂರಾಗುವದನ್ನು ತಪ್ಪಿಸಲು ಡ್ರಾಯವ್ಹರನು ಗಾಡಿಯನ್ನು ಮರಕ್ಕೆ ಅಪ್ಪಳಿಸಿ ಆ ಘೋರತರ ಗಂಡಾಂತರ ತಪ್ಪಿಸಿದನೆಂತಲೂ ಅವರು ಹೇಳುತ್ತಾರೆ.

ಶಿರಾಲಿ— ಕಳೆದ ತಾ ೨೪ರಿಂದ ತಾ ೩ರ ವರೆಗೆ ಶ್ರೀ ಚಿತ್ರಾಪುರ ಮಠದಲ್ಲಿ ಸಾಧನ-ಸಪ್ತಾಹ ನಡೆಯಿತು. ಅದೇ ಕಾಲಕ್ಕೆ ರಾ॥ ಸಾನಾಡಿ ಸದಾನಂದರಾಯರು ಮಹಾರುದ್ರ ಮಾಡಿಸಿದರು. ಎರಡೂ ಅನುಷ್ಠಾನಗಳ ಮಂಗಲ ತಾ ೩ಕ್ಕೆ ನಡೆದು ಅಂದು ರಾತ್ರಿ ಪಲ್ಲಕ್ಕಿ-ಉತ್ಸವವಾಯಿತು. ಇದೇ ಕಾಲದಲ್ಲಿ ಸಾರಸ್ವತ ವೈದಿಕರದೊಂದು ಸಮ್ಮೇಲನವೂ ಜರುಗಿತು.

ತೆರನಮಕ್ಕಿ— ಈ ಭಾಗದಲ್ಲಿ ಈಗ ಕೆಲವು ಸಂದಿ ರೈತ ಸಭೆಗಳನ್ನು ನಡಿಸಿ ಭೂಮಿಗಳ ಒಡೆಯರಿಗೆ ಘಟ್ಟ್ಯಾ ಕೆಳಸುವ ಮಂತ್ರವನ್ನು ಒಕ್ಕಲಿಗರಿಗೆ ಕಲಿಸಿಕೊಡಹತ್ತಿದ್ದಾರೆ. ಮೊದಲೇ ಒಡೆಯರಿಗೆ ಗೇಣಿ ಕೊಡದೆ ದಣಿಸುತ್ತಿದ್ದ ಕೆಲವು ಒಕ್ಕಲಿಗರಿಗೆ ಈ ಮಂತ್ರೋಪದೇಶವೆಂಬುದು ಬಹಳ ಪಥ್ಯಕ್ಕೆ ಬೀಳುತ್ತಿದೆ. ಹೊಲದಲ್ಲಿ ಬೆಳೆದ ಪೈರಿನಲ್ಲಿ ಸರಕಾರವು ಬೇಡುವಷ್ಟು (ಲೆವ್ಹಿ ಧಾನ್ಯವೋ? ಕೀವೋಯೋ? ಎಂಬುದು ಸರಿಯಾಗಿ ತಿಳಿಯುವದಿಲ್ಲ!) ಕೊಟ್ಟು ಇನ್ನುಳಿದದ್ದರಲ್ಲಿ ನಾಲ್ಕು ಪಾಲು ಮಾಡಿ, ೧ ಪಾಲು ಮಾತ್ರ ಒಡೆಯರಿಗೆ ಕೊಟ್ಟು ೩ ಪಾಲು ರೈತನು ಇಟ್ಟುಕೊಳ್ಳಬೇಕೆಂಬರ್ಥದ ಠರಾವುಗಳು ಮೇಲೆ ಹೇಳಿದ ಸಭೆಗಳಲ್ಲಿ ಆಗತೊಡಗಿವೆ! ಆದರಿಂದ ಒಡೆಯರೆಲ್ಲ ಹೌಹಾರಿ ಹೋಗಿದ್ದಾರೆ. ತಮ್ಮ ಭೂಮಿ ತಾವೇ ಕಬಜೆಯಲ್ಲಿ ತಕ್ಕೊಂಡು ತಾವೇ ಅನುಕೂಲವಿದ್ದಂತೆ ಸಾಗುವಳಿ ಮಾಡುವದು ಇಲ್ಲವೆ ಮಾಡಿಸುವದು ಒಳಿತಲ್ಲವೇ ಎಂದು ಆಲೋಚನೆಯಲ್ಲಿ ಬಿದ್ದಿದ್ದಾರೆ. ಆದರೆ ಗೇಣಿ-ಭಕ್ಷಕ ರೈತರಿಂದ ಹೊಲಗಳ ಕಬಜೆ ಸುರಕ್ಷಿತ ಸಿಗುವದು ಸಾಧ್ಯವುಂಟೇನೆಂಬುದೂ ಒಂದು ಗಹನ ಪ್ರಶ್ನೆ. ಅದರಿಂದ ಮುಂದೆ ರೈತ-ಒಡೆಯರೊಳಗೆ ತಿಕ್ಕಾಟ, ಜಗ್ಗಾಟ, ಬಡಿದಾಟಗಳಾಗುವ ಸಂಭವವುಂಟು. ಅಧಿಕಾರಿಗಳೂ ಲೋಕಪ್ರಮುಖರೂ ಈ ಭಾವಿ ಅನರ್ಥಗಳ ಬೀಜವನ್ನು ಈಗಲೇ ಜಾಣತನದಿಂದ ಕಿತ್ತೊಗೆಯುವದು ಅವಶ್ಯ.

ಹಿಂದುಸ್ಥಾನಿ ಪಾಠಗಳು.

ಸಬಕ ಬಾರಹ (ಪಾಠ ೧೨)

ಜೀತ ಕೀ ಹಾರ (ಗೆಲುವಿನ ಸೋಲು)

ಕೋಶಲ ಕಭೀ ಏಕ ಛೋಟಾಸಾ ರಾಜ್ಯ ಥಾ (ಕೋಶಲವು ಎಂದೋ ಒಂದು ಚಿಕ್ಕ ರಾಜ್ಯವಾಗಿತ್ತು) ವಹಾಂಕಾ ಏಕ ರಾಜಾ ಥಾ (ಅಲ್ಲಿಯವನೊಬ್ಬ ರಾಜನಿದ್ದನು) ವಹ ಬಡಾ ದಯಾಲು ಔರ ನೇಕಿವಾನ ಥಾ (ಅತ ಬಹಳ ದಯಾವಂತನೂ ನೀತಿವಂತನೂ ಆಗಿದ್ದನು) ಅಪನೀ ರಿಆಯಾಕೋ ಬಹುತ ಚಾಹತಾ ಥಾ (ತನ್ನ ಪ್ರಜೆಗಳನ್ನು ಬಹಳ ಪ್ರೀತಿಸುತ್ತಿದ್ದನು) ರಿಆಯಾಭೀ ಉಸಕೇ ಲಿಯೇ ಸಬ ಕುಛ ಕರನೇಕೋ ತೈಯಾರ ಥೀ (ಪ್ರಜೆಗಳು ಕೂಡ ಅವನ ಬಗ್ಗೆ ಏನು ಬೇಕಾದುದನ್ನು ಮಾಡಲು ಸಿದ್ಧರಿದ್ದರು) ಕೋಶಲವಾಲೋಂಕೇ ಪಾಸ ಬಹುತ ಧನ-ದೌಲತ ಥೀ (ಕೋಶಲದ ಜನರ ಕಡೆ ಬಹಳ ಹಣ ಸಂಪತ್ತಿಯಿತ್ತು) ವೇ ಸಬ ಬಡೇ ಸುಖೀ ಥೇ (ಅವರೆಲ್ಲ ಬಹಳ ಸುಖಿ ಇದ್ದರು) ಕೋಶಲಕೇ ಪಡೋಸಮೇಂ ಕಾಶೀಕಾ ರಾಜಾ ಥಾ (ಕೋಶಲದ ನೆರೆಯಲ್ಲಿ ಕಾಶಿಯ ರಾಜನಿದ್ದನು) ವಹ ಕೋಶಲಸೇ ಜಲತಾ ಥಾ (ಅವನು ಕೋಶಲದ ಬಗ್ಗೆ ಉರಿ ಕಾರುತ್ತಿದ್ದನು) ವಹ ಉಸೇ ಜೀತನಾ ಚಾಹತಾ ಥಾ (ಅವನು ಅದನ್ನು ಗೆಲ್ಲಲು ಇಚ್ಛಿಸುತ್ತಿದ್ದನು) ಏಕ ಬಾರ ಕಾಶೀಕೇ ರಾಜಾನೇ ಕೋಶಲಪರ ಚಢಾಈ ಕರದೀ (ಒಂದು ಸಲ ಕಾಶಿಯ ರಾಜನು ಕೋಸಲದ ಮೇಲೆ ದಾಳಿ ಮಾಡಿಬಿಟ್ಟನು) ಕೋಶಲಕೀ ಸೇನಾ ಥೋಡೀ ಥೀ (ಕೋಸಲದ ಸೇನೆ ಸ್ವಲ್ಪವಿತ್ತು) ರಿಆಯಾ ಔರ ಸೇನಾ ಕಾಶೀಕೀ ಫೌಜಸೇ ಖೂಬ ಲಡೀ (ಪ್ರಜೆಗಳೂ ಸೇನೆಯೂ ಕಾಶಿಯ ದಂಡಿನೊಡನೆ ಬಹಳ ಹೋರಾಡಿದರು) ಕೋಶಲ ಹಾರ ಗಯಾ (ಕೋಸಲವು ಸೋತಿತು) ರಾಜಾ ಜಂಗಲಮೇಂ ಭಾಗ ಗಯಾ. (ಅರಸನು ಕಾಡಿಗೆ ಓಡಿಹೋದನು) ಕಾಶೀಕಾ ರಾಜಾನೇ ತಬ ಕಹಾ-ಜೋ ಕೋಶಲಕೇ ರಾಜಾಕಾ ಸಿರ ಲಾಯೇಗಾ ಉಸೇ ಸವಾ ಸೌ ಮನ ಸೋನಾ ಇನಾಮಮೇಂ ದೂಂಗಾ (ಕಾಶಿಯ ಅರಸನು ಆಗ ಹೇಳಿದನು — ಯಾರು ಕೋಸಲದ ರಾಜನ ಶಿರಸ್ಸನ್ನು ತರುವರೋ ಅವನಿಗೆ ಒಂದೂಕಾಲು ನೂರು ಮಣ ಬಂಗಾರ ಬಕ್ಷೀಸ ಕೊಡುವೆನು.) ಕಾಶೀಕಾ ಏಕ ಬಡಾ ವ್ಯಾಪಾರೀ ಥಾ (ಕಾಶಿಯವನೊಬ್ಬ ದೊಡ್ಡ ವ್ಯಾಪಾರಿ ಇದ್ದನು) ಬಾಹರ ದೇಶೋಂಮೇಂ ವಹ ವ್ಯಾಪಾರ ಕರತಾ ಥಾ (ಹೊರ ದೇಶಗಳಲ್ಲಿ ಆತ ವ್ಯಾಪಾರ ಮಾಡುತ್ತಿದ್ದನು) ಉಸ ಸಾಲ ಉಸಕೋ ಬಹುತ ನುಕಸಾನ ಹುವಾ (ಆ ವರ್ಷ ಅವನಿಗೆ ಬಹಳ ಹಾನಿಯಾಯಿತು) ಉಸನೇ ಕರ್ಜ ಲಿಯಾ ಔರ ವ್ಯಾಪಾರ ಕಿಯಾ (ಅವನು ಸಾಲ ತಕ್ಕೊಂಡನು ಮತ್ತು ವ್ಯಾಪಾರ ಮಾಡಿದನು) ಫಿರಭೀ ನುಕಸಾನ ಹುವಾ (ಪುನಃ ನಷ್ಟವಾಯಿತು) ಕರ್ಜ ದೇನೇವಾಲೋಂನೇ ಅಪನಾ ರುಪಯಾ ಮಾಂಗಾ (ಸಾಲ ಕೊಟ್ಟವರು ತಮ್ಮ ಹಣ ಬೇಡಿದರು) ವ್ಯಾಪಾರೀನೇ ಸುನಾ ಥಾ — ಕೋಶಲಕಾ ರಾಜಾ ಬಡಾ ದಯಾಲು ಹೈ. (ವ್ಯಾಪಾರಿಯು ಕೇಳಿದ್ದನು — ಕೋಶಲದ ರಾಜನು ಬಹಳ ದಯಾಳುವಿದ್ದಾನೆಂದು) ವಹ ಕೋಶಲಕೀ ಓರ ಗಯಾ (ಅವನು ಕೋಶಲದ ಕಡೆ ಹೋದನು) ರಾಸ್ತೇಮೇಂ ಏಕ ಸಾಧುಕೇ ಆಶ್ರಮಮೇಂ ಠಹರಾ (ಹಾದಿಯಲ್ಲಿ ಓರ್ವ ಸಾಧುವಿನ ಆಶ್ರಮದಲ್ಲಿ ಇಳಕೊಂಡನು) ಸಾಧುನೇ ಪೂಛಾ ಭಾಈ, ತುಮ ಕಹಾಂ ಜಾತೇಹೋ? (ಸಾಧುವು ಕೇಳಿದನು ತಮ್ಮಾ, ನೀನೆಲ್ಲಿ ಹೋಗುವಿ?) ವ್ಯಾಪಾರೀ — ಕೋಶಲ ಜಾನಾ ಚಾಹತಾ ಹೂಂ (ಕೋಸಲಕ್ಕೆ ಹೋಗಬೇಕೆಂದಿದ್ದೇನೆ) ವಹಾಂಕೇ ರಾಜಾ ಕೇ ಪಾಸ ಮದದ ಮಿಲೇಗೀ (ಅಲ್ಲಿಯ ಅರಸನ ಸಹಾಯ ಸಿಗುವದು.) ಸುನಾ ಹೈ ವೇ ಬಡೇ ದಯಾಲು ಹೈಂ (ನಾನು ಕೇಳಿದ್ದೇನೆ ಅವರು ದೊಡ್ಡ ದಯಾವಂತರಿದ್ದಾರೆಂದು.) ಮೈಂ ಇಸ ವಕ್ತ ಬಡೀ ಮುಸೀಬತಮೇಂ ಹೂಂ (ನಾನು ಈ ಸಮಯದಲ್ಲಿ ದೊಡ್ಡ ಕಷ್ಟದಲ್ಲಿದ್ದೇನೆ) ಸಾಧು — ಅಚ್ಛಾ ವಹಾಂ ಜಾನೇಕೀ ಜರೂರತ ನಹೀಂ ಹೈಂ. (ಒಳ್ಳೇದು, ಅಲ್ಲಿ ಹೋಗುವ ಅವಶ್ಯಕತೆ ಇಲ್ಲ.) ಮೇರೇ ಸಾಥ ಚಲೋ. (ನನ್ನ ಸಂಗಡ ನಡೆ) ಭಗವಾನ ಚಾಹೇಂಗೇ ತೋ ತುಮ್ಹಾರಾ ಕಾಮ ಹೋ ಜಾಯೇಗಾ (ಭಗವಂತನಿಚ್ಛೆಯಿದ್ದರೆ ನಿನ್ನ ಕೆಲಸ ಆಗಿಹೋಗುವದು) ಕಾಶೀಕಾ ರಾಜಾ ಅಪನೇ ದರಬಾರಮೇಂ ಬೈಠಾ ಥಾ (ಕಾಶಿಯ ರಾಜನು ತನ್ನ ದರಬಾರದಲ್ಲಿ ಕೂತಿದ್ದನು) ಏಕ ಸಾಧು ಔರ ಏಕ ವ್ಯಾಪಾರಿ ಉಸಕೇ ಸಾಮನೇ ಖಡೇ ಥೇ. (ಒಬ್ಬ ಸಾಧುವೂ ಒಬ್ಬ ವ್ಯಾಪಾರಿಯೂ ಅವರ ಮುಂದೆ ನಿಂತುಕೊಂಡಿದ್ದರು) ಸಾಧುಕೇ ಬಾಲ ಸಫೇದ ಥೇ. (ಸಾಧುವಿನ ತಲೆಗೂದಲು ಬೆಳ್ಳಗಿತ್ತು) ಸಫೇದ ದಾಢೀ ಲಟಕ ರಹೀ ಥೀ. (ಬಿಳೇ ಗಡ್ಡ ತೂಗಾಡುತ್ತಿತ್ತು) ಮುಖ ಪರ ತೇಜ ಥಾ ಔರ ಆಂಖೋಂಸೇ ಜ್ಯೋತಿ ನಿಕಲತೀ ಥೀ (ಮೋರೆಯಲ್ಲಿ ತೇಜಸ್ಸಿತ್ತು ಹಾಗೂ ಕಣ್ಣುಗಳಿಂದ ಪ್ರಕಾಶ ಹೊರಡುತ್ತಿತ್ತು) ಸಾಧು—ರಾಜನ್, ಯಹ ವ್ಯಾಪಾರೀ ದುಃಖೀ ಹೈ (ನೃಪಾಲರೇ ಈ ವ್ಯಾಪಾರಿ ಕಷ್ಟದಲ್ಲಿದ್ದಾನೆ) ಇಸಕೋ ಸವಾ ಸೌ ಮನ ಸೋನಾ ದೀಜಿಯೇ ಔರ ಉಸಕೀ ಮದದ ಕೀಜಿಯೇ. (ಈತಗೆ ಒಂದೂಕಾಲು ನೂರು ಮಣ ಚಿನ್ನ ಕೊಡಿರಿ ಮತ್ತು ಅವನಿಗೆ ಸಹಾಯ ಮಾಡಿರಿ) ಕೋಶಲಕೇ ರಾಜಾಕೇ ಸಿರ ಆಪ ಚಾಹತೇ ಥೇ. (ಕೋಸಲದ ಅರಸನ ರುಂಡ ತಾವು ಬೇಕೆಂದಿದ್ದಿರಿ) ವಹ ಆಪಕೇ ಸಾಮನೇ ಮೌಜೂದ ಹೈ (ಅವನು ತಮ್ಮ ಮುಂದೆ ಜೀವಂತ ನಿಂತಿದ್ದಾನೆ) ಅಪನೀ ತಲವಾರಸೇ ಉಸೇ ಕಾಟ ದೀಜಿಯೇ (ತಮ್ಮ ಕತ್ತಿಯಿಂದ ಅವನನ್ನು ಕಡಿದುಕೊಳ್ಳಿರಿ) ಸಾಧುಕೀ ಯಹ ಬಾತ ಸುನಕರ ಕಾಶೀಕೇ ರಾಜಾಕೀ ಆಂಖೋಂಸೇ ಆಂಸೂ ಗಿರನೇ ಲಗೇ (ಸಾಧುವಿನ ಈ ಮಾತು ಕೇಳಿ ಕಾಶಿಯ ಅರಸನ ಕಣ್ಣುಗಳಿಂದ ಕಣ್ಣೀರು ಬೀಳಹತ್ತಿತು) ಉನ್ಹೋನೇ ಉಠಕರ ಸಾಧುಕೇ ಪೈರ ಛುಯೇ ಔರ ಉನ್ಹೇಂ ಸಿಂಹಾಸನ ಪರ ಬಿಠಾ ದಿಯಾ (ಅವನು – ಅರಸನು – ಎದ್ದು ಸಾಧುವಿನ ಕಾಲು ಮುಟ್ಟಿದನು ಮತ್ತು ಆತನನ್ನು ಸಿಂಹಾಸನದ ಮೇಲೆ ಕೂಡ್ರಿಸಿದನು) ಅಪನಾ ಮುಕುಟ ಉತಾರಕರ ಉನಕೇ ಸಿರಪರ ರಖ ದಿಯಾ ಔರ ಕಹಾ—(ತನ್ನ ಕಿರೀಟವನ್ನು – ತಲೆಯಿಂದ ಇಳಿಸಿ – ಆತನ – ಆ ಸಾಧುವಿನ – ತಲೆಯ ಮೇಲೆ ಇಟ್ಟನು ಮತ್ತು ಹೇಳಿದನು –) ಮಹಾರಾಜ, ಮೈಂ ಆಪಸೇ ಹಾರ ಗಯಾ (ಮಹಾರಾಜರೇ, ನಾನು ತಮ್ಮ ಮುಂದೆ ಸೋತಿರುವೆ) ಆಪ ಹೀ ಸಚ್ಚೇ ರಾಜಾ ಹೈಂ (ತಾವು ನಿಜವಾದ ರಾಜರು) ಚಾರೋಂ ತರಫಸೇ "ಕಾಶೀಕೇ ರಾಜಾಕೀ ಜಯ, ಕೋಶಲಕೇ ರಾಜಾಕೀ ಜಯ" ಕೀ ಆವಾಜ ಆನೇ ಲಗೀ (ನಾಲ್ಕೂ ಕಡೆಯಿಂದ "ಕಾಶಿಯ ಅರಸರಿಗೆ ಜಯವಾಗಲಿ, ಕೋಶಲದ ರಾಜರಿಗೆ ಜಯವಾಗಲಿ" ಎಂಬ ಧ್ವನಿ ಬರಹತ್ತಿತು)

ಆಜಾದ ಹಿಂದ.

ಸುಭಾಸ ಸೇನೆಯ ತ್ಯಾಗ, ಶೌರ್ಯ, ಸಾಹಸಯುಕ್ತ ರೋಮಾಂಚಕಾರಿ ಸಚಿತ್ರ-ಇತಿಹಾಸ.

ನೇತಾಜಿ ಸುಭಾಸ, ಕ್ಯಾ. ಲಕ್ಷ್ಮೀ, ರಾಸಬಿಹಾರಿ, ಶಹಾನವಾಜ, ಭೋಸಲೆ, ಢಿಲನರ ಜೀವನ ಸಾಹಸ, ಸಮರಗೀತೆ, ಕೆಂಪುಕೋಟೆ ವಿಚಾರಣೆ, ಭೂಲಾಭಾಯಿ ವಾದ ಇವನ್ನೊಳಗೊಂಡ ತಿದ್ದಿ ಬೆಳೆಸಿದ ಎರಡನೇ ಆವೃತ್ತಿ.

ಬೆಲೆ ೧ ರೂ. (ವಿ. ಪಿ. ವೆಚ್ಚ ಬೇರೆ)

೧-೪ ೦ ಮನಿಯಾರ್ಡರು ಮಾಡುವವರಿಗೆ ರಜಿಸ್ಟರ ಮೂಲಕ ಪುಸ್ತಕ ರವಾನಿಸುತ್ತೇವೆ.

ಸಮಾಜ ಪುಸ್ತಕಾಲಯ, ಧಾರವಾಡ.

WANTED Agents & Stockists for our High Class Cosmetics and Quality Inks in every town in Karnatak & Kanara Districts

Apply for terms to —

The Karnatak Sales & Agencies,
17, Karani Bldg., Forjet Hill Rd
BOMBAY 26

ಇದನ್ನು ಪಾಂಡುರಂಗ ಕೃಷ್ಣ ಕಾಸರ್ಕೋಡ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಪರಊರವರಿಗೆ ವರ್ಷಕ್ಕೆ ೩-೦-೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ .. ೦-೦-೯
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತರಬೇಕು.
ವರ್ಗಣಿಮುಂಗಡ ಕೊಡತಕ್ಕದ್ದು

Reg. No. B 1270 Monday, 21st January, 1946

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೨೯.

ಕುಮಟಾ:- ಸೋಮವಾರ, ತಾ. ೨೧ ಮಾಹೆ ಜನವರಿ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ ೧ ಸಾರಿಗೆ ೬ ಆಣೆಯಂತೆ
ಸ್ಮಾಲಪ್ಯಾಕಾ ೧೫ ಎಮ್ ಉದ್ದ ೧ ಸಾರಿಗೆ ೪ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು

ಸ್ಥಾನಿಕ ವೃತ್ತಾಂತ.

(೩ನೇ ಪುಟದಿಂದ ಮುಂದರಿಸಿದ್ದು.)

ಊರಲ್ಲಿ ಚಿಕ್ಕ-ಪುಟ್ಟ ಕಳವುಗಳಾಗುತ್ತಿವೆ ಗಸ್ತಿ ತಿರುಗುವ ಪೋಲೀಸರು ಸಿನೆಮಾ ಮಂದಿರಕ್ಕೆ ಹೋಗಿ ಕುಳಿತುಕೊಳ್ಳುವದರಿಂದ ಕಳ್ಳರಿಗೆ ಭಯ ಕಡಿಮೆಯಾಗಿದೆ

ಹೇರೂರ ಸೀಧಾ ಅಂಗಡಿಯಿಂದ ೧೬ ಗ್ರಾಮಗಳಿಗೆ ಸೀಧಾ-ಸಾಮಗ್ರಿಯ ಪೂರೈಕೆಯಾಗುತ್ತಿದೆ ಇತ್ತೀಚೆಗೆ ಅಂಗಡಿಯಲ್ಲಿ ಸೀಧಾ ಕೊಳ್ಳಬಂದವರಿಗೆ ಕೂಡಲೆ ಸೀಧಾ-ಸಾಮಗ್ರಿ ಸಿಗುವದಿಲ್ಲೆಂದೂ ೫-೬ ಮೈಲು ನಡೆದು ಬಂದವರಿಗೂ ಒಮ್ಮೊಮ್ಮೆ ಸಾಯಂಕಾಲದ ವರೆಗೆ ಕೂಡ್ರಿಸಿಕೊಂಡು "ಈಗ ಸಂಜೆಯಾಯಿತು, ನಾಳೆ ಬನ್ನಿ" ಎಂದು ಹೇಳುತ್ತಾರೆಂತಲೂ ಒಂದು ದೂರು ಕೇಳಬರುತ್ತಿದೆ ಅಂಗಡಿಯ ಸಿಬ್ಬಂದಿ ಕಡಿಮೆಯಾಗಿ ಹೀಗಾಗುತ್ತದೋ ಅಥವಾ ಇದ್ದ ಸಿಬ್ಬಂದಿಯ ಮೈಗಳ್ಳತನ ಯಾ ಸೋಮಾರಿತನದಿಂದ ಆಗುತ್ತದೋ ಎಂಬುದರ ಚೌಕಶಿಯಾಗಬೇಕು

ಕರ್ಜಗಿ, ಬಾಳೀಸರ ಮತ್ತು ಕಮ್ಮನೆಯ ಪಟೇಲಕಿಯನ್ನು ಈಗ ಈ ಗ್ರಾಮಗಳಿಂದ ೪-೫ ಮೈಲು ದೂರ ಹೇರೂರದಲ್ಲಿರುವ ಮುದುಕರೊಬ್ಬರಿಗೆ ಒಪ್ಪಿಸಿದ್ದಾರೆ ಅದರಿಂದ ಈ ಊರವರಿಗೆ ಪಟೇಲರ ಭೆಟ್ಟಿಯಾಗುವದೂ ಅವರಿಂದ ಆಗಬೇಕಾದ ಕೆಲಸ ಮಾಡಿಸಿಕೊಳ್ಳುವದೂ ಕಠಿಣವಾಗಿದೆಯಂತೆ. ಪಟೇಲಕಿ ಮಾಡಲು ಸರಕಾರಕ್ಕೆ ಊರಲ್ಲೀ ಯಾರೂ ಸಿಗಲಿಲ್ಲವೇ?

ಕಾರವಾರ— (ತಾ ೧೮-೧-೪೬) ಕಳೆದ ತಾ [illegible] ಸಂಜೆ ಶ್ರೀ॥ ವಾ॥ ಶಂಕರರಾವ ಕುಲಕರ್ಣಿಯವರ ಮನೆಯಲ್ಲಿ ಒಂದು ಘೋರ ಅನಾಹುತವಾಯಿತು ರಾ॥ ಸದಾನಂದ ಕುಲಕರ್ಣಿಯವರ ಹೆಂಡತಿಯು ಒಂದು ದೀಪದ ಬತ್ತಿಯನ್ನು ಸರಿಸುತ್ತಿದ್ದಳು ಆಗ ಹಿಂದಿನ ದೀಪಕ್ಕೆ ತಾಗಿ ಅವಳ ಸೀರೆಯ ಸೆರಗು ಉರಿಯಹತ್ತಿತು ಬೆಂಕಿ ದೊಡ್ಡದಾಗುವ ವರೆಗೂ ಬೆಂಕಿ ಬಿದ್ದದ್ದು ಅವಳ ಲಕ್ಷಕ್ಕೆ ಬರಲಿಲ್ಲ! ಮುಂದೆ ಬೆಂಕಿ ನೋಡಿ ಆಕೆ ಬೆಚ್ಚಿಹೋದಳು ನೋಡ ನೋಡುವಷ್ಟರಲ್ಲಿ ಇಡೀ ಸೀರೆಗೆ ಬೆಂಕಿ ಹಬ್ಬಿ ಅವಳ ಮೈ ಸುಟ್ಟುಹೋಯಿತು ಎಷ್ಟು ಉಪಚಾರ ಮಾಡಿದರೂ ಪ್ರಯೋಜನವಾಗದೆ ರಾತ್ರಿ ೮॥ ಘಂಟೆಗೆ ಆಕೆಯ ಪ್ರಾಣೋತ್ಕ್ರಮಣವಾಯಿತು

ನಿನ್ನೆ ಹುಣ್ಣಿವೆಯ ದಿನ ಕೋಡಿಬಾಗ ಜಾತ್ರೆಯಿತ್ತು ಇಲ್ಲಿಯ ರಾ॥ ಗೋಪಿನಾಥ ಪೈರ ಮನೆಯವರು ಆ ಜಾತ್ರೆಗೆ ಹೋಗಿದ್ದರು ಜಾತ್ರೆಯಿಂದ ಅವರು ತಿರುಗಿ ಬರುವ ವರೆಗೆ ಕಳ್ಳರು ಕನ್ನಾ ಕೊರೆದು ಮನೆಯೊಳಗಿನ ಒಂದು ಪೆಟ್ಟಿಗೆಯನ್ನು ಫರಾರಿ ಮಾಡಿ ಬಿಟ್ಟಿದ್ದಾರಂತೆ!

ಕುಮಟಾ, ಬಂಕಿಕೋಡ್ಲ, ಸಿದ್ದಾಪುರ, ಮಳಗಿ, ಮುಂಕಿ ಈ ಊರುಗಳೊಳಗಿನ ರಾಷ್ಟ್ರ ಸೇವಾದಲದ ಶಾಖೆಯವರು ತಮ್ಮ ಮಾಸಿಕ ವರದಿಗಳನ್ನು ಕಳಿಸದ್ದರಿಂದಲೂ ಕೆಲವು ಶಾಖೆಗಳ ವರದಿಗಳು ತಡವಾಗಿ ಬಂದದ್ದರಿಂದಲೂ ಜಿಲ್ಲೆಯೊಳಗಿನ ಸಜೀವವಾದ ಚಿತ್ರವನ್ನು ಪ್ರಾಂತಿಕ ದಲಕ್ಕೆ ತಿಳಿಸಲಾಗಲಿಲ್ಲೆಂದು ಜಿಲ್ಲಾ ದಳಪತಿಗಳು ವ್ಯಸನಪಡುತ್ತಾರೆ

ಅಂಕೋಲಾ—(ತಾ ೨೦-೧-೪೬) ಸರಕಾರಿ ಅಕ್ಕಿ ಭತ್ತ ಖರೇದಿಗಳ ನಿಯಮ ಕಟ್ಟಳೆಗಳೇನೂ ಈ ತಾಲೂಕಿನ ಹಳ್ಳಿಗಳಲ್ಲಿ ಈಗ ನಡೆಯುವ ಖರೇದಿಯ [illegible] ೩ ಎಕರೆಗಿಂತ ಕಡಿಮೆ ಹೊಲ ಸಾಗುವಳಿ ಮಾಡುವವರ ಕಡೆಯಿಂದಲೂ ೨॥ ಖಂಡಿಗಿಂತ ಕಡಿಮೆ ಅಕ್ಕಿ ಬೆಳೆಸಿದವರಿಂದಲೂ ಅಕ್ಕಿ-ಭತ್ತ ಖರೇದಿಸತಕ್ಕದ್ದಲ್ಲವಾಗಿ ಸರಕಾರದವರ ಕಟ್ಟಳೆಯುಂಟು. ಒತ್ತಿಗೆ ಬೆಳೆಸಿದವನಿಂದ ಖರೇದಿ ಮಾಡುವಾಗ ಕೂಡ ಕೆಲವೊಂದು ಪ್ರಮಾಣ-ಪಟ್ಟಿಯಂತೆಯೇ ಖರೇದಿಸಬೇಕಾಗಿ ನೇಮವುಂಟು. ಆದರೆ ಈಗ ಈ ತಾಲೂಕಿನಲ್ಲಿ ಭತ್ತ ಖರೇದಿಗೆ ಹೊರಟ ಅಧಿಕಾರಿಗಳಿಗೆ ಯಾವ ನೇಮವೂ ಗೊತ್ತಿಲ್ಲ, ಯಾವ ಕಟ್ಟಳೆಯೂ ಗೊತ್ತಿಲ್ಲ!! ರೈತನು ಸಾಗುವಳಿ ಮಾಡಿದ ಹೊಲವೆಷ್ಟು, ಅವನ ಕೈಗೆ ಸಿಕ್ಕ ಭತ್ತವೆಷ್ಟು, ಅವನಿಂದ ಹೊರಗೆ ಗೇಣಿ ಬಗ್ಗೆ ಸಲ್ಲತಕ್ಕ ಭತ್ತವೆಷ್ಟು, ಅವನ ಮನೆಯಲ್ಲಿ ಎಷ್ಟು ಜನರಿದ್ದಾರೆ, ಅವರ ಜೀವನಕ್ಕೆ ಎಷ್ಟು ಅಕ್ಕಿ ಬೇಕು ಈ ಯಾವದೇ ವಿಚಾರವನ್ನು ಈ ಖರೇದಿ-ಅಧಿಕಾರಿಗಳು ಮಾಡುವದಿಲ್ಲ! ಇಂತಿಷ್ಟು ಭತ್ತ ನೀನು ಕೊಡಬೇಕು, ಇಲ್ಲವಾದರೆ ಜಪ್ತಿ ಮಾಡಿ ಒಯ್ಯುತ್ತೇವೆ; "ನಿನ್ನ ಮನೆಯವರ ಜೀವನದ ಪರಿವೆ ನಮಗಿಲ್ಲ, ನೀವು ಉಣ್ಣಿ ಯಾ ಉಪವಾಸ ಬೀಳಿ, ನಿಮ್ಮ ಹೊಟ್ಟೆಯ ವಿಚಾರ ನಮಗಿಲ್ಲ," ಎಂದು ಮುಂತಾದ ಬೆದರಿಕೆ ಹಾಕಿ ಈ ಗ್ರಾಮ-ಕಂಟಕ ಅಧಿಕಾರಿಗಳು ನಿರಕ್ಷರಕುಕ್ಷಿಗಳಾದ ಅಜ್ಞ ಬಡ ಒಕ್ಕಲಿಗರಲ್ಲಿ ಸಿಕ್ಕಸಿಕ್ಕಂತೆ ಭತ್ತ ಖರೇದಿಸುತ್ತಿದ್ದಾರೆ! ಒಂದು ಉದಾಹರಣೆಯನ್ನೇ ಇಲ್ಲಿ ಕೊಡಬಹುದು ಓರ್ವ ಒಕ್ಕಲಿಗನಲ್ಲಿ ೫ ಮಂದಿ ಇದ್ದಾರೆ ಅವರು ಸುಮಾರು ೨॥ ಎಕರೆ ಹೊಲ ಸಾಗುವಳಿ ಮಾಡಿ ೫೪॥ ಖಂಡಗ ಭತ್ತ ಬೆಳೆಸಿದ್ದಾರೆ ಆ ಬಗ್ಗೆ ೧೪॥ ಖಂಡಗ ಅಕ್ಕಿ (ಇಲ್ಲವೆ ೨೯॥ ಖಂಡಗ ಭತ್ತ) ಗೇಣಿ ಕೊಡತಕ್ಕದ್ದುಂಟು ಈ ಮನೆಯವರು ೩೦ ಖಂಡಗ ಭತ್ತ ಸರಕಾರಕ್ಕೆ ಕೊಡಬೇಕಾಗಿ ಖರೇದಿ ಅಧಿಕಾರಿಯ ಆಗ್ರಹ! ನಮ್ಮ ಜಿಲ್ಹೆಯಲ್ಲಿ ಒತ್ತಾಯದಿಂದ ಭತ್ತ ಖರೇದಿಸಕೂಡದಾಗಿ ಸರಕಾರದವರು ತಿಳಿಸಿದ್ದುಂಟು. ಇದನ್ನು ಒಂದು ವೇಳೆ ಮರೆತು ಒತ್ತಾಯದಿಂದಲೇ ಭತ್ತ ಖರೇದಿಸುವದಾದರೂ, ಸರಕಾರದವರೇ ಮಾಡಿದ ನಿಯಮಗಳಂತೆ ಈ ರೈತನಿಂದ ಸರಕಾರಕ್ಕೆ ಸಲ್ಲತಕ್ಕ ಭತ್ತ ೩೦ ಖಂಡಗವಾಗುತ್ತದೆಯೋ? ಅವನಿಂದ ಭತ್ತ ಖರೇದಿಸಲಿಕ್ಕಾದರೂ ಬರುತ್ತದೆಯೋ? ಎಂಬೀ ವಿಚಾರವನ್ನು ಜಿಲ್ಹಾಧಿಕಾರಿಗಳು ಮಾಡಬೇಕು. ಇನ್ನೊಂದು ಸಂಗತಿಯೂ ಗಮನಾರ್ಹವಿದೆ ಒಂದೊಂದು ಕಡೆ ಒಡೆಯರಿಗೆ ಸಲ್ಲತಕ್ಕ ಗೇಣಿಯ ಅಕ್ಕಿ-ಭತ್ತಗಳನ್ನು ಈ ಅಧಿಕಾರಿಯು ಖರೇದಿಸಿ ಅದರ ಹಣವನ್ನು ಒಡೆಯರಿಗೆ ಕೊಡದೆ ಆ ಒಕ್ಕಲಿಗನಿಗೇ ಕೊಡುತ್ತಾನೆ ಇತ್ತ ಆ ಒಡೆಯನು ಕೂಸು-ಮಕ್ಕಳ ಭಿಕ್ಷೆ ಬೇಡಿ ನಿರ್ವಾಹ ಮಾಡಬೇಕು! ಅತ್ತ ಒಕ್ಕಲಿಗನು ಹಣ ದುಂದು ಮಾಡಿ ಕೂತರೆ ಗೇಣಿ ಹಣ ಮುಳುಗಿತೆಂದು ಮೇಲೆ ಅಳಬೇಕು! ಭತ್ತ ಖರೇದಿಯ ಅಧಿಕಾರಿಗಳ ಈ ಹಾವಳಿಯನ್ನು ಜಿಲ್ಹಾಧಿಕಾರಿಗಳು ಕೂಡಲೆ ನಿರ್ಬಂಧಿಸಬೇಕಾಗಿ ಆಶಿಸುವೆ ಅವರು ಹಾಗೆ ನಿರ್ಬಂಧಿಸದಿದ್ದರೆ ಜಿಲ್ಹಾಧಿಕಾರಿಗಳ ಅಂತಃಪ್ರೇರಣೆಯಿಂದಲೇ ಈ ಹಾವಳಿ ನಡೆದಿರುವದೆಂದು ಜನರ ಭಾವನೆಯಾಗದೆ ಇರಲಿಕ್ಕಿಲ್ಲ

ನಮ್ಮ ಜಿಲ್ಹೆಯ ಜನಸಂಖ್ಯೆಯ ಪ್ರಮಾಣದಿಂದ ಕೊಂಗ್ರೆಸ್ಸಿಗೆ ೪ ಪ್ರತಿನಿಧಿಗಳನ್ನು ಆರಿಸಕೊಳ್ಳುವ ಹಕ್ಕು ನಮ್ಮ ಜಿಲ್ಹೆಗೆ ಸಿಕ್ಕಿದೆ. ಶಿರ್ಸಿ-ಸಿದ್ದಾಪುರ-ಮುಂಡಗೋಡ-ಯಲ್ಲಾಪುರ ಭಾಗದಿಂದ ೧, ಹೊನ್ನಾವರ-ಭಟಕಳ ಭಾಗದಿಂದ ೧, ಕುಮಟಾ-ಅಂಕೋಲಾ ತಾಲೂಕುಗಳಿಂದ ೧ ಮತ್ತು ಕಾರವಾರ-ಸುಪಾ-ಹಳಿಯಾಳ ಭಾಗದಿಂದ ೧ ಹೀಗೆ ಅಂತು ೪ ಪ್ರತಿನಿಧಿಗಳನ್ನು ಆರಿಸತಕ್ಕದ್ದೆಂದು ಕರ್ನಾಟಕ ಪ್ರಾಂ॥ ಕೊಂ॥ ಕಮಿಟಿಯವರು ಠರಾಯಿಸಿದ್ದಾರೆ ಹೊನ್ನಾವರದ ರಾ॥ ಕಲ್ಲಾಪುರ, ಅಂಕೋಲೆಯ ಡಾ॥ ಎನ್. ಜಿ ನಾಡಕರ್ಣಿ ಮತ್ತು ಡಾ॥ ಬಿ ಎನ್ ನಾಡಕರ್ಣಿ ಇವರು ಚುನಾವಣೆ ಪಂಚರಾಗಿಯೂ, ಕುಮಟೆಯ ವಕೀಲ ರಾ॥ ಲಕ್ಷ್ಮಣ ಕಾಮತರು ರಿಟರ್ನಿಂಗ ಆಫೀಸರ ಯಾನೆ ಚುನಾವಣೆ-ಅಧಿಕಾರಿಗಳಾಗಿಯೂ ನೇಮಿಸಲ್ಪಟ್ಟಿದ್ದಾರೆ

ಆವರ್ಸೆಯ ಶ್ರೀ ಲಕ್ಷ್ಮೀನಾರಾಯಣ ದೇವರ ಗುಡಿಯ ಜೀರ್ಣೋದ್ಧಾರದ ಕಾರ್ಯಕ್ಕೆ ಬಾಳಿ ಅನಂತ ಪಾಂಡುರಂಗ ಶೇಟಿಯಾ ಮತ್ತು ಪುರುಷೋತ್ತಮ ಗೋವಿಂದ ಹೆಗಡೆ ಇವರು ಪ್ರತಿಯೊಬ್ಬರು ರೂ ೧೦೮ ಮತ್ತು ಗೋವಿಂದ ಮುದ್ಗಿರಿ ಹೆಗಡೆಯವರು ರೂ. ೫೧ ವಂತಿಕೆ ಕೊಟ್ಟಿದ್ದಾರಂತೆ!

ಸುಪಾ— (ತಾ ೧೬-೧-೪೬) ಜಗಲಬೇಟದ ರಾ॥ ಗೋವಿಂದರಾವ ಪರುಳೇಕರರು ಪ್ರಾಂತಿಕ ಎಸೆಂಬ್ಲಿಗೆ ಕೊಂಗ್ರೆಸ ಹುರಿಯಾಳಾಗಿ ನಿಲ್ಲಲು ತಮಗೊಂದು ತಿಕೀಟು ಕೊಡಬೇಕೆಂದು ಅರ್ಜಿ ಮಾಡಿದ್ದರು. ಪಾರ್ಲಿಮೆಂಟರಿ ಬೋರ್ಡಿನವರು ಅವರನ್ನು ಆರಿಸದಿದ್ದದ್ದು ಕಂಡು ಇಲ್ಲಿಯ ಕಿಸಾನ ಸಭೆಯವರು ಅಸಂತೋಷಗೊಂಡಿದ್ದಾರೆ ಕಿಸಾನರೂ ರಾ॥ ಪರುಳೇಕರರೂ ಈಗ ಕೇಂದ್ರ ಬೋರ್ಡಿಗೆ ಅಪೀಲು ಮಾಡಿದ್ದಾರಂತೆ. ಸುಪಾ ಪೇಟೆಯವರಿಗೆ ಬಹಳ ಅನ್ಯಾಯವಾಗಿದೆಯೆಂದು ಅವರ ದೂರು

ಯಲ್ಲಾಪುರ— (ತಾ ೩-೧-೪೬) ಪ್ರಾಂತಾಧಿಪರ ಓರ್ವ ಸಲಹೆಗಾರರಾಗಿರುವ ಮಿ॥ ಟಿಂಬೆಟನ ಇವರು ಮೊನ್ನೆ ಇಲ್ಲಿಗೆ ಆಗಮಿಸಿದ್ದರು. ಆಗ "ರಿಮಾಂಡ ಹೋಮ" ದ ಬಗ್ಗೆ ರೂ ೧೦೦೦ನ್ನು ಜಂಗಲ-ಕಂಟ್ರಾಕ್ಟರ ರಾ॥ ವೈದ್ಯರು ಅವರಿಗೆ ಅರ್ಪಿಸಿದರು ಯಲ್ಲಾಪುರ ತಾಲೂಕಿನ ಪರವಾಗಿ ರಾ॥ ನಾರಾಯಣ ಕಾಡಲೇಯವರೂ ರೂ ೧೦೦೦ ಕೊಟ್ಟರು

ಕಳೆದ ತಿಂಗಳ ಪೂರ್ವಾರ್ಧದಲ್ಲಿ ಹತ್ತಿಕಾಳಿನ ದರ ಚೀಲ ೧ಕ್ಕೆ ರೂ ೧೦॥ ಇತ್ತು. ಈಗ ರೂ ೧೬-೩-೦ ಆಗಿದೆ! ಅದೂ ಕೂಡ ಅಂತಹ ಪುಣ್ಯಾತ್ಮರಿಗೇ ಸಿಗುತ್ತಿದೆ ಈ ತಾಲೂಕಿನಲ್ಲಿ ಹೆಚ್ಚುಕಡಿಮೆ ೧೦೦೦೦ ಗಾಡಿ ಎತ್ತುಗಳೂ ೧೫೦೦ ರಷ್ಟು ಹಾಲು ಹಿಂಡುವ ದನಗಳಿವೆ ಆದರೆ ಕಳೆದ ತಿಂಗಳ ಕೊನೆಗೆ ಬರೀ ೪೦ ಚೀಲ ಹತ್ತಿಕಾಳು ಬಂದಿದೆ! ದನ ೧ಕ್ಕೆ ೦॥ ರತ್ತಲು ಕೊಟ್ಟಂತಾಯಿತು!! ಹತ್ತಿಕಾಳಿನ ಪೇಟೆಯು ನೆರೆಹೊರೆಯಲ್ಲೇ ಹೀಗೆ ಹತ್ತಿಕಾಳಿಗೆ ಬರಗಾಲ ಬಂದಿದೆ!!!

THE BOARD OF DIRECTORS
OF
The Agricultural & Industrial Bank, Ltd.
beg to announce the opening of a Branch of
the Bank (for regular Business) at
384 M, JAIPURIA HOUSE,
DABHOLKARWAD, KALBADEVI ROAD,
BOMBAY
on 22nd January 1946.
All kinds of Banking Business Transacted
Total Resources as on 31-12-1945 exceeds Rs 60,00,000

Coondapoor, 8-1-1946

K. VAMAN SHENAI,
CHAIRMAN

ದೊಡ್ಡ ಬೆಲೆಯ ನೋಟುಗಳು.

ದೊಡ್ಡ ಬೆಲೆಯ ಅಂದರೆ ೫೦೦, ೧೦೦೦, ೧೦೦೦೦ ರೂಪಾಯಿಗಳ ಕರೆನ್ಸಿ ನೋಟುಗಳನ್ನು ಸಂಗ್ರಹದಲ್ಲಿಟ್ಟುಕೊಂಡವರಿಗೆ ಈಗ ತೀವ್ರ ಕಳವಳವುಂಟಾಗಿದೆ. ಹಿಂದುಸ್ಥಾನ ಸರಕಾರದವರು ಆಚೆಯ ವಾರದ ಕೊನೆಗೆ ಹೊರಡಿಸಿದ ೨ ರಾಜಶಾಸನಗಳೇ ಈ ಕಳವಳಕ್ಕೆ ಕಾರಣ. ೧ನೇ ರಾಜಶಾಸನದಿಂದ ಶನಿವಾರ ತಾ ೧೨ಕ್ಕೆ ದೇಶದೊಳಗಿನ ಎಲ್ಲ ಬ್ಯಾಂಕುಗಳಿಗೆ ಸರಕಾರದವರು ರಜೆ ಕೊಟ್ಟು ಜನವರಿ ತಾ ೧೧ರ ಸಾಯಂಕಾಲಕ್ಕೆ ವ್ಯವಹಾರ ನಿಲ್ಲಿಸಿದಾಗ ತಮ್ಮ ತ್ರಿಜೋರಿಗಳಲ್ಲಿರುವ ೫೦೦, ೧೦೦೦ ಮತ್ತು ೧೦೦೦೦ ರೂಪಾಯಿಗಳ ಕರೆನ್ಸಿ ನೋಟುಗಳು ಎಷ್ಟುಂಟೆಂಬುದನ್ನು ಶನಿವಾರ ಮಧ್ಯಾಹ್ನ ೩ರೊಳಗೆ ಸರಕಾರಕ್ಕೆ ತಿಳಿಸಬೇಕಾಗಿ ಎಲ್ಲ ಬ್ಯಾಂಕುಗಳಿಗೂ ಸರಕಾರಿ ಖಜಾನೆಗಳಿಗೂ ಕಟ್ಟಪ್ಪಣೆಯಾಯಿತು. ಸುಳ್ಳು ಲೆಕ್ಕ ಕೊಟ್ಟವರಿಗೆ ೩ ವರ್ಷಗಳ ಸೆರೆಮನೆವಾಸದ ಶಿಕ್ಷೆ ಯಾ ದಂಡ ಇಲ್ಲವೆ ಎರಡೂ ಬಗೆಯ ಶಿಕ್ಷೆ ವಿಧಿಸಲಾಗುವದೆಂದು ರಾಜಶಾಸನದಲ್ಲುಂಟು. ೨ನೆಯ ರಾಜಶಾಸನದಿಂದ ಸರಕಾರದವರು ೫೦೦, ೧೦೦೦ ೧೦೦೦೦ ರೂಪಾಯಿಗಳ ಕರೆನ್ಸಿ ನೋಟುಗಳನ್ನು ರದ್ದುಗೊಳಿಸಿ ಅವನ್ನು ವ್ಯವಹಾರದಲ್ಲಿ ಯಾರೂ ಕೊಡಕೊಳ್ಳಬಾರದಾಗಿ ವಿಧಿಸಿದ್ದಾರೆ. ಈ ಉದ್ದೇಶದಿಂದ ಬ್ಯಾಂಕುಗಳ ವ್ಯವಹಾರಕ್ಕೆ ತೊಂದರೆಯಾಗಬಾರದೆಂದು ಜನವರಿ ತಾ ೧೪ಕ್ಕೆ ಪುನಃ ಎಲ್ಲ ಬ್ಯಾಂಕುಗಳಿಗೆ ರಜೆ ಕೊಟ್ಟು ಶನಿವಾರದ ವರದಿಯಲ್ಲಿ ತಿಳಿಸಿದಷ್ಟು ದೊಡ್ಡ ಬೆಲೆಯ ನೋಟುಗಳನ್ನು ರಿಝರ್ವ ಬ್ಯಾಂಕಿಗೆ ಇಲ್ಲವೆ ರಿಝರ್ವ ಬ್ಯಾಂಕಿನಿಂದ ಮಾನ್ಯತೆ ಪಡೆದ ಶೆಡ್ಯೂಲ್ಡ ಬ್ಯಾಂಕಿಗೆ ಕೊಟ್ಟು ಅವುಗಳ ಮೊತ್ತವನ್ನು ಸಣ್ಣ ನೋಟುಗಳ ರೂಪದಿಂದ ಪಡೆಕೊಳ್ಳಲು ಎಲ್ಲ ಬ್ಯಾಂಕುಗಳಿಗೂ ಸರಕಾರಿ ಖಜಾನೆಗಳಿಗೂ ತಿಳಿಸಲಾಯಿತು. ಬ್ಯಾಂಕುಗಳ ಮಾತಾಯಿತು. ಸರಕಾರಿ ಖಜಾನೆಗಳ ಮಾತಾಯಿತು. ಇನ್ನುಳಿದ ಸಾಮಾನ್ಯ ವ್ಯಕ್ತಿಗಳು, ಪೇಢಿಗಳು, ಕಂಪನಿಗಳು ಸಂಸ್ಥೆಗಳು ಇವುಗಳ ಕಡೆಗಿದ್ದ ದೊಡ್ಡ ನೋಟುಗಳ ವ್ಯವಸ್ಥೆಯೇನ ? ಇವರೆಲ್ಲರೂ ತಮ್ಮ ಕಡೆಗಿದ್ದ ದೊಡ್ಡ ನೋಟುಗಳನ್ನು ನಾಳೆ ಮಂಗಳವಾರ ತಾ ೨೨ರೊಳಗಾಗಿ ರಿಝರ್ವ ಬ್ಯಾಂಕ, ಶೆಡ್ಯೂಲ್ಡ ಬ್ಯಾಂಕ ಇಲ್ಲವೆ ಸರಕಾರಿ ಖಜಾನೆಗಳಲ್ಲಿ ತಂದೊಪ್ಪಿಸಿ ಅವನ್ನು ಮಟಾಯಿಸಿ ಕೊಡಲು ಅರ್ಜಿ ಮಾಡಬೇಕಂತೆ. ಅರ್ಜಿದಾರರು ಆಗ ಸರಕಾರದವರು ಕೇಳುವ ಪ್ರಶ್ನೆಗಳಿಗೆ ವಿವರ ಪೂರ್ಣ ಮಾಹಿತಿ ಕೊಡಬೇಕಾಗುತ್ತದೆ. ಬ್ಯಾಂಕಿನವರಿಗಾಗಲಿ ಖಜಾನೆಯ ಅಧಿಕಾರಿಗಳಿಗಾಗಲಿ ಆ ವಿವರಗಳಿಂದ ಸಮಾಧಾನವಾಗದಿದ್ದರೆ ಅವರು ಅರ್ಜಿಯನ್ನು ಹಿಂದುಸ್ಥಾನ ಸರಕಾರಕ್ಕೆ ಕಳಿಸಿಕೊಟ್ಟು ಅದರ ನಿರ್ಣಯದಂತೆ ನಡೆಯುವರು. ಮಂಗಳವಾರ ತಾ ೨೨ರೊಳಗಾಗಿ ತಮ್ಮ ಕಡೆಗಿದ್ದ ದೊಡ್ಡ ನೋಟುಗಳನ್ನು ನಿರ್ದಿಷ್ಟ ಬ್ಯಾಂಕ ಇಲ್ಲವೆ ಖಜಾನೆಗಳಿಗೆ ತಂದೊಪ್ಪಿಸಲಾಗದವರು ನಾಳೆ ಬರುವ ಶನಿವಾರ ತಾ ೨೬ರೊಳಗೆ ಮುಂಬಯಿ ಮದ್ರಾಸ ಯಾ ಕಲಕತ್ತಾ ನಗರಗಳಲ್ಲಿರುವ ರಿಝರ್ವ ಬ್ಯಾಂಕಿನ ಕಚೇರಿಗಳಿಗೆ ಟಪಾಲ ದ್ವಾರಾ ಅರ್ಜಿ ಮಾಡಬಹುದು. ಅರ್ಜಿದಾರರು ಅರ್ಜಿಯ ಸಂಗಡ ತಮ್ಮ ಹೆಸರು, ವಿಳಾಸ ದರ್ಜೆ, ತಾವಿರುವ ಇನಕಮ್ ಟೆಕ್ಸ ಸರ್ಕಲಿನ ಹೆಸರು, ತಮ್ಮ ವ್ಯಾಪಾರ ಉದ್ಯೋಗದ ವರ್ಣನೆ, ನೌಕರನಿದ್ದರೆ ನೌಕರಿಯ ಪೂರ್ಣ ಮಾಹಿತಿ, ತಮ್ಮ ಕಡೆಗಿದ್ದ ದೊಡ್ಡ ಬೆಲೆಯ ನೋಟುಗಳ ತಪಶೀಲು ಅಷ್ಟು ಬೆಲೆಯ ನೋಟುಗಳನ್ನು ಸಂಗ್ರಹದಲ್ಲಿಟ್ಟುಕೊಂಡದ್ದರ ಕಾರಣ ಇವೇ ಮೊದಲಾದ ಮಾಹಿತಿಯನ್ನು ಪ್ರತಿಜ್ಞೆಯ ಮೇರೆ ಬರೆದುಕೊಡಬೇಕು. ಅರ್ಜಿಯ ಸಂಗಡ ಇಂಥ ಪ್ರತಿಜ್ಞಾ ಪತ್ರಗಳನ್ನು ಸಲಿಸಬೇಕಂತೆ. ಹಾಗೂ ಅರ್ಜಿದಾರನೇ ಮಟಾಯಿಸಲಿಕ್ಕೆ ಕೊಟ್ಟ ಆ ನೋಟುಗಳ ಮಾಲೀಕನೆಂಬುದರ ಬಗೆ ಮಜಿಸ್ಟ್ರೇಟರಿಂದಾಗಲಿ ಬ್ಯಾಂಕಿನವರಿಂದಾಗಲಿ ಪೋಲೀಸ ಇನ್‌ಸ್ಪೆಕ್ಟರರಿಂದಾಗಲಿ ಪ್ರಶಂಸಾ ಪತ್ರ ಪಡೆದೊಂದು ಅರ್ಜಿಯ ಸಂಗಡ ಕಳಿಸಿಕೊಡಬೇಕು. ಪ್ರತಿಜ್ಞಾ ಪತ್ರದಲ್ಲಿ ಬರೆದ ಮಾಹಿತಿ ಸುಳ್ಳೆಂದು ಕಂಡು ಬಂದರೆ ಖಟ್ಲೆಯಾಗುವದು, ಮೇಲೆ ಹೇಳಿದಂತೆ ಶಿಕ್ಷೆಯಾಗುವದು.

ಈ ರಾಜಶಾಸನಗಳನ್ನು ಹೊರಡಿಸುವದರಲ್ಲಿ ಸರಕಾರದ ಉದ್ದೇಶವೇನೆಂಬುದು ಅಧಿಕೃತ ರೀತಿಯಿಂದ ಪ್ರಕಟವಾಗಿಲ್ಲ. ಲಂಚಕೋರ ಅಧಿಕಾರಿಗಳ ಕೊಳಕನ್ನೂ ಕಳ್ಳ ಪೇಟೆ ಮಾಡಿ ಕುಬೇರರಾದವರ ಕಳ್ಳತನವನ್ನೂ ಹೊರಗೆಡಹಲಿಕ್ಕೆ ಈ ರಾಜಶಾಸನಗಳು ಹೊರಟಿವೆಯೆಂದು ಸರ್ವ ಸಾಮಾನ್ಯ ತರ್ಕವುಂಟು. ಸಿಗರೇಟ ಪೆಟ್ಟಿಗೆಗಳಲ್ಲಿ, ಯಾವದೊಂದು ಸಮಾರಂಭದ ನಿಮಂತ್ರಣ ಪತ್ರಿಕೆಯ ಸಂಗಡ ಅಥವಾ ಬೇರೊಂದು ಬಗೆಯಿಂದ ೫೦೦, ೧೦೦೦ ೧೦೦೦೦ ರೂಪಾಯಿಗಳ ನೋಟುಗಳನ್ನು ಲಂಚಕ್ಕಾಗಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಕೊಟ್ಟ ಕಥೆಗಳು ಪೇಟೆಯಲ್ಲಿ ಕಿವಿಯ ಮೇಲೆ ಬೀಳುತ್ತಿವೆ. ಈ ನೋಟುಗಳನ್ನು ಬ್ಯಾಂಕಿಗೆ ಕಳಿಸಿಕೊಟ್ಟರೆ ತಮ್ಮ ಪಾಪವೆಲ್ಲಾದರೂ ಹೊರಬೀಳಬಹುದೆಂಬ ಭಯದಿಂದ ಲಂಚ ತಿಂದ ಈ ಅಧಿಕಾರಿಗಳು ಆ ನೋಟುಗಳನ್ನು ತಮ್ಮ ಪೆಟ್ಟಿಗೆಯಲ್ಲೇ ಇಟ್ಟುಕೊಂಡಿರುವ ಸಂಭವವುಂಟು. ಅದೇ ಮೇರೆಗೆ ಕಳ್ಳ ಪೇಟೆಯಲ್ಲಿ ವ್ಯಾಪಾರ ಮಾಡಿ ಕಲ್ಪನಾತೀತ ಹಣ ಸಂಪಾದಿಸಿದ ವ್ಯಾಪಾರಿಗಳೂ ಕಂಟ್ರಾಕ್ಟರರೂ, ವ್ಯಾಪಾರ-ಕಂಟ್ರೋಲ್ಲರರ ಸೋಗು ಹಾಕಿಕೊಂಡವರೂ ಇದ್ದಾರೆ. ತಮ್ಮ ಈ ಹಣವನ್ನು ಬ್ಯಾಂಕಿಗೆ ಕಳಿಸಿ ಕೊಟ್ಟರೆ ತಮ್ಮ ಸಂಪಾದನೆಯ ಮಿತಿಯೂ ಬಗೆಯೂ ಹೊರಬೀಳಬಹುದೆಂಬ ಅಂಜಿಕೆಯಿಂದ ಇವರೂ ಕೂಡ ತಮ್ಮ ಹಣವನ್ನು ಹೆಚ್ಚಾಗಿ ದೊಡ್ಡ ನೋಟುಗಳಲ್ಲಿ ರೂಪಾಂತರಿಸಿ ಸ್ವಂತ ಪೆಟ್ಟಿಗೆಯಲ್ಲೇ ಇಟ್ಟುಕೊಂಡಿರುವ ಸಂಭವವಿದೆ. ಈ ಕಳ್ಳ ಸಂಪಾದನೆಯು ಇನಕಮ್ ಟೆಕ್ಸ ಅಧಿಕಾರಿಗಳ ಕಣ್ಣನ್ನು ತಪ್ಪಿಸಿಕೊಂಡಿರುವ ಸಂಭವವೂ ಅದೆ. ಈ ಎಲ್ಲ ಪಾಪಗಳ ಪತ್ತೆ ಹಚ್ಚುವದಕ್ಕಾಗಿ ಮೇಲ್ಕಾಣಿಸಿದ ರಾಜಶಾಸನಗಳು ಹೊರಟಿರಬೇಕೆಂದು ಹೇಳುತ್ತಾರೆ. ಆದರೆ ವಿಚಾರಿ ಮತ್ತು ದೂರದೃಷ್ಟಿಯ ಪಾಪಾತ್ಮರು ತಮ್ಮ ಕಡೆಗಿದ್ದ ಭಾರಿ ಬೆಲೆಯ ನೋಟುಗಳನ್ನು ಬ್ಯಾಂಕುಗಳಲ್ಲಿ ಹಾಜರಪಡಿಸುವ ಸಂಭವ ತೀರ ಕಡಿಮೆ. ನೋಟುಗಳನ್ನು ಹೊರಗೆ ತೆಗೆದು ಅವರು ತಮ್ಮ ಪಾಪಗಳ ಚೌಕಶಿ ಮಾಡಿಸಿಕೊಳ್ಳಲಾರರು. ಪಾಪಕರ್ಮದಿಂದ ಗಳಿಸಿದ ಆ ನೋಟುಗಳನ್ನು ಒಳಗಿಂದೊಳಗೆ ಸುಟ್ಟು ಹಾಕಿ ಪಾಪದ ಆ ಪ್ರತ್ಯಕ್ಷ ಪುರಾವೆಯನ್ನು ನಷ್ಟಗೊಳಿಸುವರೆಂತಲೇ ವಿಚಾರವಂತರು ಊಹಿಸುತ್ತಾರೆ. ಈ ರೀತಿ ಕನಿಷ್ಠ ೫೦ ಕೋಟಿ ರೂಪಾಯಿಗಳ ನೋಟುಗಳಾದರೂ ಬೂದಿಯಾಗಬಹುದೆಂದು ಹೊಸ ದಿಲ್ಲಿಯ ರಾಜಕಾರಣಿಗಳು ತರ್ಕಿಸಿದ್ದಾರೆ. ಈಗ ವ್ಯವಹಾರದಲ್ಲಿ ದೊಡ್ಡ ಬೆಲೆಯ ನೋಟುಗಳು ಎಷ್ಟು ಉಂಟೆಂಬುದರ ಲೆಕ್ಕ ರಿಝರ್ವ ಬ್ಯಾಂಕಿನ ಕಡೆಗೆ ಉಂಟು. ಅವುಗಳಲ್ಲಿ ಎಷ್ಟು ನೋಟುಗಳು ತಿರುಗಿ ರಿಝರ್ವ ಬ್ಯಾಂಕಿನ ಕಡೆಗೆ ಬರುತ್ತವೆ ಮತ್ತು ಎಷ್ಟು ಒಲೆಯಲ್ಲಿ ಬಿದ್ದು ಭಸ್ಮವಾಗುತ್ತವೆ ಎಂಬುದು ಈ ತಿಂಗಳ ಕೊನೆಯೊಳಗಾಗಿ ನಿಚ್ಚಳವಾಗಿ ತಿಳಿಯುವದು.

ಸರಕಾರದ ಈ ಕಠೋರ ರಾಜಶಾಸನಗಳು ಹೊರಬಿದ್ದಂದಿನಿಂದ ಕಳ್ಳ ಶ್ರೀಮಂತರು ಕಳವಳಗೊಂಡು ತಮ್ಮ ಕಡೆಗಿದ್ದ ಭಾರಿ ಬೆಲೆಯ ನೋಟುಗಳನ್ನು ಮಟಾಯಿಸಿಕೊಳ್ಳಲಿಕ್ಕೆ ಪೇಚಾಡುತ್ತಿದ್ದಾರೆ. ಆದರಿಂದ ಕಳೆದ ವಾರದ ಪ್ರಾರಂಭದಲ್ಲಿ ಮುಂಬಯಿ ಕರಾಚಿ ವಗೈರೆ ನಗರಗಳಲ್ಲಿ ಸಾವಿರ ರೂಪಾಯಿಗಳ ನೋಟುಗಳು ರೂ ೪೦೦ಕ್ಕೆ ಸಿಗಲಾರಂಭಿಸಿದ್ದವೆಂದು ಸುದ್ದಿಯುಂಟು. ಕರಾಚಿಯಲ್ಲಿ ಓರ್ವ ಹೆಂಗಸಿನ ಕಡೆ ೧೦ ಲಕ್ಷ ರೂಪಾಯಿಗಳಷ್ಟು ದೊಡ್ಡ ಬೆಲೆಯ ನೋಟುಗಳೇ ಅವಳ ಬಳಿ ಹೆಟ್ಟಿದ್ದವು. ಅವುಗಳ [illegible] ಒಮ್ಮೆಲೇ ಇಳಿದದ್ದು ಕಂಡು ಆಕೆ ಹೌಹಾರಿ ಅಕಸ್ಮಾತ್ ಪ್ರಕೃತಿಯು ಕೆಟ್ಟು ಸತ್ತಳೆಂದು ಪ್ರಕಟವಾಗಿದೆ! ಸರಕಾರದವರ ೧ನೆಯ ರಾಜಶಾಸನದಲ್ಲಿ ೧೦೦ ರೂಗಳ ನೋಟುಗಳ ನಿರ್ದೇಶವೂ ಉಂಟು. ಆದರಿಂದ ಈ ನೋಟುಗಳೂ ರದ್ದಾಗುತ್ತವೋ ಏನೋ ಎಂಬ ಭೀತಿಯುಂಟಾಗಿ ಅವುಗಳ ಬೆಲೆ ಕೂಡ ೮-೧೦ ರೂಗಳಿಂದ ಇಳಿದಿತ್ತಂತೆ. ಆದರೆ ಮುಂದೆ ಅವು ರದ್ದಾಗಿಲ್ಲವೆಂದು ನಿಚ್ಚಳವಾದ್ದರಿಂದಲೂ, ದೊಡ್ಡ ಬೆಲೆಯ ನೋಟುಗಳನ್ನು ಮಟಾಯಿಸಲಿಕ್ಕೆ ಇವು ಬೇಕಾದ್ದರಿಂದಲೂ ಅವುಗಳ ಬೆಲೆ ೧೦ ರೂಗಳಿಂದ ಏರಿತಂತೆ! ಈ ಏರಿಳಿತಗಳನ್ನು ಪ್ರತಿಬಂಧಿಸಲಿಕ್ಕೆ ಹಿಂದುಸ್ಥಾನ ಸರಕಾರದವರು ಕಳೆದ ಗುರುವಾರ ಒಂದು ಪ್ರಕಟನೆ ಹೊರಡಿಸಿ ನೋಟುಗಳನ್ನು ಹೆಚ್ಚು ಯಾ ಕಡಿಮೆ ಬೆಲೆಗೆ ಕೊಡ ಕೊಳ್ಳುವದು ಭಾರತ ರಕ್ಷಣಾ ಕಾಯಿದೆಯ ೯೦ನೆಯ ನಿಯಮದಂತೆ ಅಪರಾಧವಾಗುತ್ತದೆಂದೂ ಆ ಅಪರಾಧಕ್ಕೆ ೫ ವರ್ಷಗಳ ಶಿಕ್ಷೆ ಮತ್ತು ದಂಡ ಹೇಳಲಾಗಿದೆಯೆಂದೂ ಜಾಹೀರಪಡಿಸಿದ್ದಾರೆ. ರೂ ೧೦೦ ರ ನೋಟುಗಳನ್ನು ರದ್ದುಗೊಳಿಸುವ ವಿಚಾರ ಸರಕಾರಕ್ಕೆ ಇಲ್ಲವೆಂದೂ ಸಾರಿದ್ದಾರೆ.

ನೋಟುಗಳ ಈ ರದ್ದಿಯತಿಯಿಂದ ಚಿನ್ನದ ಪೇಟೆಯಲ್ಲಿ ಕಲ್ಪನಾತೀತ ಸ್ಥಿತ್ಯಂತರಗಳಾಗಿವೆ. ಒಂದು ದಿನ ತೊಲೆ ೧ಕ್ಕೆ ರೂ ೮೨-೮೩ರ ನಡುವೆ ಇದ್ದ ಚಿನ್ನದ ಧಾರಣೆಯು ಒಮ್ಮೆಲೇ ರೂ ೧೧೦ಕ್ಕೆ ಏರಿತಂತೆ! ಬೆಳ್ಳಿಯ ದರ ಅಷ್ಟು ಏರಲಿಲ್ಲ. ರೂ ೧೩೩-೧೩೪ ಇದ್ದದ್ದು (೧೦೦ ತೊಲೆಗಳಿಗೆ) ರೂ ೧೪೦ರ ವರೆಗಷ್ಟೇ ಏರಿತು.

ಲಂಚಗೋರ ಅಧಿಕಾರಿಗಳ ಪಾಪಕರ್ಮಗಳನ್ನು ಬೈಲಿಗೆಳೆಯುವ ಉದ್ದೇಶ ಮಾತ್ರ ಈ ರಾಜಶಾಸನಗಳಿಂದ ಈಡೇರಲಿಕ್ಕಿಲ್ಲೆಂದು ಧಾರಾಳವಾಗಿ ಹೇಳಬಹುದು. ಈ ಅಧಿಕಾರಿಗಳು ತಮ್ಮ ಕಡೆಗೆ ಭಾರಿ ಬೆಲೆಯ ನೋಟುಗಳನ್ನು ಇಟ್ಟುಕೊಂಡಿರುವರೆಂದು ತಿಳಿಯುವದು ತಪ್ಪು. ಅವರು ಬಂಗಾರವನ್ನು ಕೊಂಡುಕೊಂಡಿರಬೇಕೆಂದೂ ಬಂಗಾರದ ದರ ತೇಜಿಯಲ್ಲಿರಲಿಕ್ಕೆ ಇವರು ಮಾಡುತ್ತಿರುವ ಬಂಗಾರದ ಖರೀದಿ ಸಹ ಒಂದು ಕಾರಣವಿರಬೇಕೆಂದೂ ಬಲ್ಲವರ ಅಂಬೋಣವುಂಟು. ಭಾರಿ ಬೆಲೆಯ ನೋಟುಗಳಲ್ಲಿ ಸಂಶಯಕ್ಕೆ ಆಸ್ಪದ ಸಿಗಬಹುದೆಂಬ ಅಂಜಿಕೆಯಿಂದ ಲಂಚಕ್ಕಾಗಿ ಬಂದ ನೋಟುಗಳನ್ನು ಆಗಿಂದಾಗ ಕೆಲವರು ಮಟಾಯಿಸಿದಲಿಕ್ಕೂ ಸಾಕು. ಇನ್ನು ಎಲ್ಲಾದರೂ ಅಂಥ ನೋಟುಗಳು ತಪ್ಪಿ ಉಳಿದಲ್ಲಿ ದಿಲ್ಲಿಯ ರಾಜಕಾರಣಿಗಳು ಊಹಿಸಿದಂತೆ ಇಟ್ಟುಕೊಂಡ ಅಧಿಕಾರಿಗಳು ಅವುಗಳ ಹೋಮ ಮಾಡಿ ತಮ್ಮ ಪಾಪದ ಪ್ರಾಯಶ್ಚಿತ್ತ ತಗೊಳ್ಳುವರೆಂದು ಹೇಳಲಡ್ಡಿಯಿಲ್ಲ. ಆದರಿಂದ ಅಧಿಕಾರಿಗಳ ಲಂಚಗೋರತನ ಹೊರಗೆಡಹಲಿಕ್ಕೆ ಈ ರಾಜಶಾಸನಗಳು ಸಮರ್ಥವಾಗಲಾರವು. ಅದಕ್ಕೆ ಬೇರೆ ಬಗೆಯ ಉಪಾಯಗಳನ್ನೇ ಯೋಚಿಸಬೇಕಾಗುವದು.

ಯಾವ ಬೇಕಾದ ನೋಟುಗಳನ್ನು ರದ್ದುಗೊಳಿಸಿ ಅವುಗಳ ಧನರೂಪವನ್ನು ನಷ್ಟಗೊಳಿಸಲಿಕ್ಕೆ (Den onetise) ಸರಕಾರಕ್ಕೆ ಅಧಿಕಾರವುಂಟೆಂಬುದರ ಬಗ್ಗೆ ಯಾರ ಆಕ್ಷೇಪವೂ ಇಲ್ಲ. ಆದರೆ ಹಿಂದೆ ಹೊರಡಿಸಿ ಚಲಾವಣೆಯಲ್ಲಿ ಹಾಕಿದ ನೋಟುಗಳ ಹಣವನ್ನು ಧಾರಣ ಮಾಡಿದವರು ಕೇಳಿದಾಗ ಈ ನೋಟುಗಳು ನಿನ್ನ ಕಡೆಗೆ ಹ್ಯಾಗೆ ಬಂದವು, ಯಾಕೆ ನಿನ್ನಲ್ಲಿ ಉಳಿದವು ಎಂದು [illegible] ಪ್ರಶ್ನೆ ಮಾಡಿ ನೋಟುಗಳ ಬೆಲೆ ಕೊಡಲಿಕ್ಕೆ ತಕರಾರು ಮಾಡಲಿಕ್ಕೆ ಇಲ್ಲವೆ ನಿರಾಕರಿಸಲಿಕ್ಕೆ ಸರಕಾರಕ್ಕಾಗಲಿ ರಿಝರ್ವ ಬ್ಯಾಂಕಿಗಾಗಲಿ ಅಧಿಕಾರವಿಲ್ಲವಾಗಿಯೂ, ನೋಟುಗಳನ್ನು ಹಾಜರಪಡಿಸಿದ ಕೂಡಲೇ (on demand) ಅವುಗಳ ಮೊತ್ತವನ್ನು ಬಿನ್ ತಕ್ರಾರ ಕೊಡಲು ಸರಕಾರ ಬ್ಯಾಂಕುಗಳು ಬದ್ಧರಿರುತ್ತವೆಂತಲೂ, ಅನೇಕ ಕಾಯಿದೆ ಪಂಡಿತರು ವಾದಿಸುತ್ತಾರೆ. ಕಳೆದ ವಾರ ಓರ್ವ ಸಾವಕಾರರ ತರ್ಫೆನಿಂದ ಈ ಅರ್ಥದ ಒಂದು ವಾದವನ್ನು

ಮುಂಬಯಿಯ ಪ್ರಸಿದ್ಧ ವಕೀಲರಾದ ಶ್ರೀ ಕನ್ಹಯ್ಯಾಲಾಲ ಮುನಶಿಯವರು ಮುಂಬಯಿಯ ಹಾಯಕೋರ್ಟಿನಲ್ಲಿ ನ್ಯಾಯಮೂರ್ತಿ ಕನಿಯಾ ಇವರ ಮುಂದೆ ದಾಖಲ ಪಡಿಸಿದ್ದಾಂಟು ನೋಟುಗಳನ್ನು ವಟಾಯಿಸಿಕೊಳ್ಳಲಿಕ್ಕೆ ಸರಕಾರವು ಕೊಟ್ಟ ಅವಧಿ ನಾಳೆ ಮಂಗಳವಾರ ತೀರುತ್ತದ್ದರಿಂದ ಈ ಹೊತ್ತಿನೊಳಗಾಗಿ ವಾದದ ತೀರ್ಪು ಕೊಡಬೇಕೆಂದು ಶ್ರೀ ಮುನಶಿಯವರು ಅರಿಕೆ ಮಾಡಿಕೊಂಡಂತೆ ಈ ಹೊತ್ತೇ ತೀರ್ಪು ಕೊಡುತ್ತೇನಾಗಿ ನ್ಯಾ॥ ಕನಿಯಾರವರು ಆಶ್ವಾಸನೆ ಕೊಟ್ಟಿದ್ದಾರೆ ಹಾಯಕೋರ್ಟಿನ ತೀರ್ಪು ಸರಕಾರದ ವಿರುದ್ಧ ಆದರೆ ಸರಕಾರದ ಉದ್ದಿಷ್ಟವು ಬಹಳ ಮಟ್ಟಿಗೆ ನಿರರ್ಥಕವಾಗುವದೆಂಬುದರಲ್ಲಿ ಸಂಶಯವಿಲ್ಲ

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬಹಳ ಗಾಳಿಯೂ ಬಹಳ ಊರಲ್ಲಿ ಕೆಲಕೆಲವು ಕಡೆ ಸಿಡುಬಿನ ಬೇನೆಯುಂಟು

ನಿನ್ನೆ ಮಧ್ಯಾಹ್ನ ಜಿಲ್ಲಾ ಕಾಂಗ್ರೆಸ ಸಮಿತಿಯ ಕಾರ್ಯಕಾರಿ ಮಂಡಳವು ಜಿಲ್ಲಾಧ್ಯಕ್ಷ ರಾ॥ ಶಿವರಾವ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಮುಂಬರುವ ಪ್ರಾಂತಿಕ ಶಾಸನ ಮಂಡಳಗಳ ಚುನಾವಣೆಯ ಸಂಬಂಧದಲ್ಲಿ ಪಾರ್ಟಿಯ ಸಂಘಟನೆ, ಪ್ರಚಾರ ಮುಂತಾದವುಗಳ ಆಲೋಚನೆ ಮಾಡಿ ಚುನಾವಣ ಕಚೇರಿಯನ್ನು ಅಂಕೋಲೆಯಲ್ಲಿಡಬೇಕೆಂದು ತೀರ್ಮಾನಿಸಿದೆ ಪ್ರಚಾರ ಪ್ರಕಟನೆ ಧನಸಂಗ್ರಹಗಳಿಗಾಗಿ ಉಪ-ಸಮಿತಿಗಳನ್ನೂ ನೇಮಿಸಿದೆ ನಮ್ಮ ಜಿಲ್ಲೆಯಿಂದ ಪ್ರಾಂತಿಕ ಎಸೆಂಬ್ಲಿಗೆ ಆರಿಸತಕ್ಕ ಸಾಮಾನ್ಯ ಮತದಾರ ಸಂಘದ ೩ ಸ್ಥಾನಗಳಿಗೆ ಕರ್ನಾಟಕ ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿನವರು ಜಿಲ್ಲಾಧ್ಯಕ್ಷ ರಾ। ಶಿವರಾವ ಶಾಸ್ತ್ರಿ, ಶಿರಸಿಯ ರಾ॥ ದಯಾನಂದ ಯಾನೆ ರಾಮಚಂದ್ರ ಮುಕುಂದ ಪ್ರಭು ಮತ್ತು ರಾ॥ ಸಣ್ಣಪ್ಪಾ ಪರಮೇಶ್ವರ ಗಾಂವಕಾರ ಇವರನ್ನು ಕಾಂಗ್ರೆಸ ಪರವಾಗಿ ನಿಲ್ಲಿಸತಕ್ಕದ್ದೆಂದು ತೀರ್ಮಾನಿಸಿ ಆ ರೀತಿ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿಗೆ ಶಿಫಾರಸು ಮಾಡಿದ್ದಾರೆ ಪಾರ್ಲಿಮೆಂಟರಿ ಬೋರ್ಡಿನ ಈ ಆಯ್ಕೆಯಿಂದ ಸಾಮಾನ್ಯವಾಗಿ ಜಿಲ್ಲೆಯಲ್ಲಿ ಸಮಾಧಾನವಾಗಿದೆಂದು ಸುದ್ದಿಯುಂಟು ಜಿಲ್ಲಾಧ್ಯ ರಾ॥ ಶಾಸ್ತ್ರಿಯವರು ಅಡಿಕೆ ತೋಟಿಗರ ಸ್ಥಿತಿಗತಿಗಳ ಪೂರ್ಣ ಅಭ್ಯಾಸ ಮಾಡಿರುವದರಿಂದಲೂ, ತೋಟಿಗಾರರ ಸುಖದುಃಖಗಳಲ್ಲಿ ಸಮರಸವಾಗಿರುವದರಿಂದಲೂ, ಅವರ ಹಿತಸಂಬಂಧಗಳನ್ನು ಸಂರಕ್ಷಿಸಲು ಸಮರ್ಥರಿರುವದರಿಂದಲೂ ತೋಟಿಗಾರ ವರ್ಗವೇ ಪ್ರಧಾನವಾಗಿರುವ ಶಿರ್ಸಿ ಸಿದ್ದಾಪುರ ತಾಲೂಕುಗಳಿಗೆ ರಾ॥ ಶಾಸ್ತ್ರಿಯವರ ಆಯ್ಕೆಯಿಂದ ಸಮಾಧಾನವಾಗಿದೆ ರಾ॥ ಗಾಂವಕಾರರು ಸ್ವತಃ ಹಿಂದುಳಿದ ವರ್ಗಕ್ಕೆ ಸೇರಿದವರು, ಹಿಂದುಳಿದ ವರ್ಗಗಳ ಏಳಿಗೆಗಾಗಿ ಅಹರ್ನಿಶ ದುಡಿಯುವವರು ಆದರಿಂದ ಹಿಂದುಳಿದ ವರ್ಗಗಳಿಗೂ ರೈತರ ವರ್ಗಕ್ಕೂ ಅವರಲ್ಲಿ ಪಕ್ಕಾ ಪ್ರತಿನಿಧಿ ಸಿಕ್ಕಿದವನೆಂದು ಹೇಳಬಹುದು ರಾ॥ ಪ್ರಭುರವರು ತರುಣ ರಕ್ತದ ಪ್ರತಿನಿಧಿಗಳಾಗಲು ಯೋಗ್ಯರಿದ್ದಾರೆ ಹೀಗೆ ಕಾಂಗ್ರೆಸ ವರ್ಗಗಳಲ್ಲಿ ಹೇಳಾಡುತ್ತಾರೆ ಹಿರಿಯರ ಸಭೆಯ (ಕೌನ್ಸಿಲ) ಸ್ಥಳಕ್ಕೆ ನಿಲ್ಲಿಸತಕ್ಕ ವ್ಯಕ್ತಿಯ ಆಯ್ಕೆ ಇನ್ನೂ ಆಗಿಲ್ಲವಂತೆ

ಇದೇ ಬರುವ ಬುಧವಾರ ತಾ ೨೩ನೇತೆ ನೇತಾಜಿ ಸುಭಾಷಚಂದ್ರ ಬೋಸರ ಜನನದ ಹುಟ್ಟುಹಬ್ಬ ಆ ದಿನವನ್ನು ವಿಜೃಂಭಣೆಯಿಂದ ಆಚರಿಸಿ, ಸುಭಾಷರು ತಾಯ್ನಾಡಿನ ದಾಸ್ಯವಿಮೋಚನೆಗಾಗಿ ನಡಿಸಿದ ಪ್ರಯತ್ನಗಳ ಬಗ್ಗೂ ಮಾಡಿದ ತ್ಯಾಗದ ಬಗ್ಗೂ ಯೋಗ್ಯ ಗೌರವಾದರಗಳನ್ನು ತೋರಿಸಬೇಕೆಂದು ಕರ್ನಾಟಕ ಪ್ರಾಂ। ಕಾಂ॥ ಕಮಿಟಿಯವರು ಪ್ರಕಟನೆ ಹೊರಡಿಸಿ ತಿಳಿಸಿದ್ದಾರೆ ಅದರಂತೆ ಅಂದು ಧ್ವಜವಂದನೆ ಮೆರವಣಿಗೆ, ಸಭೆ, ನೇತಾಜಿಯವರ ಸ್ವಾತಂತ್ರ್ಯ ನಿಶ್ಚಯ ಗಾಯನ ವಾಚನ ಇತ್ಯಾದಿ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಎಲ್ಲೆಲ್ಲೂ ನಡಿಸಬೇಕೆಂದು ಜಿಲ್ಲಾಧ್ಯಕ್ಷರು ಬಿನ್ನವಿಸುತ್ತಾರೆ

ಅದೇ ಮೇರೆಗೆ ತಾ ೨೬ಕ್ಕೆ ಸ್ವಾತಂತ್ರ್ಯ ದಿನ ಕಳೆದ ಮೂರು ವರ್ಷಗಳಲ್ಲಿ ಬಹಿರಂಗವಾಗಿ ಸ್ವಾತಂತ್ರ್ಯ ದಿನವನ್ನಾಚರಿಸಲು ಸಾಧ್ಯವಿದ್ದಿಲ್ಲ ಈ ವರ್ಷ ಸಾಧ್ಯವಾಗಿದೆ ಅದನ್ನು ಭಕ್ತಿಪೂರ್ವಕವಾಗಿ ಆಚರಿಸಿ ಸ್ವಾತಂತ್ರ್ಯ ಪ್ರತಿಜ್ಞೆಯ ಪುನರುಚ್ಚಾರವನ್ನು ಸಮಸ್ತರೂ ಮಾಡಬೇಕಾಗಿ ಜಿಲ್ಲಾಧ್ಯಕ್ಷರ ಸೂಚನೆಯುಂಟು

ಇದೇ ಬರುವ ತಾ ೩೧ನೇ ಗುರುವಾರ “ಅ। ಭಾ॥ ಅಡಿಕೆ ಬೆಳೆಗಾರರ ದಿನ” ವನ್ನಾಚರಿಸಬೇಕೆಂದು ಅ॥ ಭಾ॥ ಸುಪಾರಿ ಫೆಡರೇಶನ್ನಿನ (ಸಂಯುಕ್ತ ಸಂಘ) ನಿರ್ಣಯವಾಗಿದೆ ನಮ್ಮ ಜಿಲ್ಲೆಯ ಸಾಂಪತ್ತಿಕ ಕಲ್ಯಾಣ ಅಡಿಕೆ ತೋಟಿಗರನ್ನೂ ತೋಟಿಗಾರರ ಉದ್ಯೋಗವನ್ನೂ ಅವಲಂಬಿಸಿಕೊಂಡಿರುತ್ತದೆಂಬುದು ಎಲ್ಲರೂ ಒಪ್ಪಬೇಕಾದ ಮಾತು ಆದ್ದರಿಂದ ಜಿಲ್ಲೆಯ ಸಮಸ್ತ ತೋಟಿಗರೂ ಇತರರೂ ಅಂದು ಹರತಾಳ ಮಾಡಿ, ಎಲ್ಲೆಲ್ಲೂ ಸಭೆಗಳನ್ನು ಸೇರಿಸಿ ಅಡಿಕೆ ತೆಂಗೆಯ ನಿಷೇಧದ ಗೊತ್ತುವಳಿಗಳನ್ನು ಕೈಕೊಳ್ಳಬೇಕಾಗಿಯೂ ತೋಟಿಗರ ಚಳವಳಿಗೆ ಬೆಂಬಲವನ್ನೀಯಬೇಕೆಂತಲೂ ಜಿಲ್ಲಾಧ್ಯಕ್ಷರು ವಿನಂತಿ ಮಾಡುತ್ತಾರೆ ಸಭೆಯಲ್ಲಾದ ಗೊತ್ತುವಳಿಗಳನ್ನು ಉತ್ತರ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರ ಸಂಘ, ಶಿರ್ಸಿ ಇವರಿಗೆ ಕಳಿಸಿಕೊಡಬೇಕಂತೆ

ಸೀಧಾ ಅಂಗಡಿಗಳಲ್ಲೀಗ ಚಿಮಣಿ ಎಣ್ಣೆ ಸಿಗುವದಿಲ್ಲ ಕಂಪನಿಯ ಏಜಂಟರಿಗೆ ಇನ್ನೂ ಕ್ವೋಟಾ ನಿಶ್ಚಿತವಾಗಿ ಬರೆದು ಬಂದಿಲ್ಲವಾದ್ದರಿಂದ ಏಜಂಟರು ಎಣ್ಣೆ ಕೊಟ್ಟಿಲ್ಲವಂತೆ! ಅಲ್ಲಿಗೆ ಇಂತಾ ಕತ್ತಲೆಯಲ್ಲಿ ಕಾಲ ಕಳೆಯುವ ಪ್ರಸಂಗ!

ಇಲ್ಲಿಯ ಗಿಬ್ಬ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ರಾ॥ ಬಿ ಕೆ ಬಾಳಿಗಾರವರು ಕಳೆದ ತಾ ೧೧ನೇಗೆ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನವಾಗುತ್ತದೆ ಮೃತರು ವಿದ್ಯಾರ್ಥಿ ವರ್ಗದಲ್ಲೂ ಊರ ತರುಣರಲ್ಲೂ ಲೋಕಪ್ರಿಯರಾಗಿದ್ದರು ಅವರಿಗೆ ಶಾಂತಿ ಸದ್ಗತಿಯನ್ನೀಯಲಿ!

ಈ ವರ್ಷದ ಹೆಣ್ಣು ಮಕ್ಕಳ ಕನ್ನಡ ಮರಾಠಿ ಉರ್ದು ಮುಲ್ಕೀ ಪರೀಕ್ಷೆ ತಾ ೪-೩ ೧೯೪೬ಕ್ಕೆ ಜರಗುವದಂತೆ ಪರೀಕ್ಷೆಗೆ ಕುಳ್ಳುವವರು ೧೨ ತಾರೀಖಿನೊಳಗೆ ಅರ್ಜಿ ಮಾಡಬೇಕಂತೆ

ಹೊನ್ನಾವರ— ಇಲ್ಲಿಯ ನಗರಸಭೆಯ ಮನೆತೆರಿಗೆಯ ವಸೂಲಿಯ ಬಗ್ಗೆ ಪ್ರತ್ಯೇಕ ಇಸಮನ ನೇಮಿಸಿಕೊಳ್ಳಬೇಕೆಂದು ಆ ಆಲೋಚನೆ ನಡೆದು ೬-೮ ತಿಂಗಳಾಯಿತು ಆದರೆ ಇನ್ನೂ ಆ ಆಲೋಚನೆ ಕೃತಿಯಲ್ಲಿಳಿಯುವದಿಲ್ಲ ಈ ವರ್ಷದ ಮನೆತೆರಿಗೆ ಇನ್ನೂ ವಸೂಲ ಗಲಿಲ್ಲವಂತೆ ಬೀಲ ಗಳೇನೋ ಹೊರಡಹತ್ತಿವೆಯಂತೆ! ಮನೆತೆರಿಗೆ ವಸೂಲಿಯು ಹೀಗೆ ಬಾಕಿಯುಳಿಯುತ್ತಲಿದ್ದರೆ ಮುಂದೆ ೨ ವರ್ಷಗಳ ಹಿಂದೆ ನೇಮಿಸಿಕೊಂಡಂತೆ ಸ್ಪೇಶಲ್ ರಿಕವ್ಹರಿ ಆಫೀಸರರನ್ನು ನೇಮಿಸಿಕೊಳ್ಳುವ ಪ್ರಸಂಗ ಬರದೆ ಇರಲಾರದು!

ಕಾಸರಕೋಡದಲ್ಲಿ ತರಿಯ ಬಳಿ ಒಂದು ವಿಶ್ರಾಂತಿ ಗೃಹವಿಲ್ಲ ೫೦ ವರ್ಷದಿಂದ ಪ್ರಯಾಣಿಕರು ಹಿಂದೇ ಮಾರ್ಗದ ಮೇಲೆ ನಿಲ್ಲಬೇಕು ಇಲ್ಲವೆ ಪಕ್ಕದ ಮೇಲಿದ್ದ ಚಹಾ ಅಂಗಡಿಗಳಲ್ಲಿ ಹೊಕ್ಕಿ ಕೂಡಬೇಕು! ಇಂಜಿನಿಯರ ಇಲಾಖೆಯವರು ಇತ್ತ ಗಮನಿಸಿ ಬೇಗನೇ ಒಂದು ವಿಶ್ರಾಂತಿಗೃಹವನ್ನು ಕಟ್ಟಬೇಕಾಗಿ ಅರಿಕೆಯಿದೆ

ಭಟಕಳ— (ತಾ ೧೬-೧ ೪೬) ಇಲ್ಲಿ ಮಹಾಲಕರಿಗಾರಿದ್ದ ರಾ॥ ವ್ಹಿ ಎಸ್ ಗಾಮುಕರರಿಗೆ ಕಾರವಾರದಲ್ಲಿ ಕಲೆಕ್ಟರ ಕಚೇರಿಗೆ ವರ್ಗವಾಗಿದ್ದು ರಾ॥ ಅವರ್ಸೇಕರರು ಇಲ್ಲಿ ಮಹಾಲಕರಿಗಳಾಗಿ ಬಂದಿದ್ದಾರೆ

ಹೆಬಳೆ ಗ್ರಾಮದಲ್ಲಿ ಊರ ಪಟೇಲರಿಗೆ ಸಹ ತಿಳಿಸದೆ ಸರ್ಕಲ ಇನ್ಸಪೆಕ್ಟರರು ಭತ್ತ ವಸೂಲಿಯ ಕ್ರಮ ನಡಿಸಿದ್ದರೆ ಸಂಸಾರಕ್ಕೆ ಸಾಲದಷ್ಟು ಭತ್ತ ಬೆಳೆಸಿದವರಿಂದಲೂ ಅವರು ಜಪ್ತಿಯ ಧಾಕ ಹಾಕಿ ಭತ್ತ-ವಿಕ್ರಯದ ವಚನ ಪತ್ರ ಬರೆಯಿಸಿಕೊಳ್ಳುತ್ತಾರಂತೆ! ಮೇಲಧಿಕಾರಿಗಳು ಅವರಿಗೆ ಮೂಗದಾರ ಹಾಕುವದೊಳಿತು ಇಲ್ಲದಿದ್ದರೆ ಬಡವರ ಗೋಳು ಹೆಚ್ಚಾದೀತು

ಕಳೆದ ಸೋಮವಾರ ಸಂಕ್ರಾಂತಿ ಹಬ್ಬದ ದಿನ ಶ್ರೀ ಮಾರುತಿ ಗುಡಿಯಲ್ಲಿ ವರ್ಷಾನವರಂತೆ ಸಪ್ತ-ಪ್ರಹರ ಭಜನೆಯ ಉತ್ಸವ ನಡೆಯಿತು

ಶಿರ್ಸಿ— (ತಾ ೧೮-೧-೪೬) ಸೀಧಾ ಅಂಗಡಿಗಳಲ್ಲಿ ಈಗ ಹತ್ತಿಕಾಳು ಸಿಗುವದಿಲ್ಲ ಕಳ್ಳ ಪೇಟೆಯಲ್ಲಿ ಹತ್ತಿಕಾಳಿನ ಬೆಲೆ ೧ಕ್ಕೆ ರೂ ೩೦ ಹೇಳುತ್ತಾರಂತೆ

ಸೀಧಾ ಅಂಗಡಿಗಳಲ್ಲಿ ಇತ್ತೀಚೆಗೆ ಗೋದಿ-ಜೋಳಗಳಿಲ್ಲ ಆದರೂ ಗೋದಿ ಜೋಳಗಳ ಬದಲು ಅಕ್ಕಿ ಕೊಡುವದಿಲ್ಲ! ಹಾಗೆ ಇಲ್ಲವೆ ಅಕ್ಕಿಯ ನುಚ್ಚು ಒಯ್ಯಬೇಕಂತೆ! ಅದನ್ನು ತಿನ್ನಲಾಗದವರು ಆರಿಕೊಟ್ಟ ಉಂಡು ದಿನಹರಣ ಮಾಡಬೇಕು ಇಲ್ಲವೆ ೪ ದಿನಗಳಲ್ಲೊಂದು ದಿನ ಏಕಾದಶಿ ಮಾಡಬೇಕು !!

ಕಸಬಾ ಕನ್ನಡ ಶಾಲೆಯೊಳಗಿನ ಗೊಂದಲದ ಪೂರ್ಣ ವಿವರಗಳನ್ನು ತಿಳಕೊಂಡು ಲೋಕಲ್‌ಬೋರ್ಡ ಸದಸ್ಯರಾದ ರಾ॥ ಒಡೆಯರ ಇವರು ವಿದ್ಯಾಧಿಕಾರಿಗಳಿಗೆ ವರದಿ ಕಳಿಸಿ ಕೊಟ್ಟಿದ್ದಾರಂತೆ

ಹಳ್ಳಿಗಳಿಂದ ಇಲ್ಲವೆ ತೋಟಗಳಿಂದ ಅಡಿಕೆಯನ್ನು ಪೇಟೆಗೆ ತರಬೇಕಾದರೆ ಈಗ ತೋಟಿಗಾರರು ಟಿ ಪಿ ೩ ಎಂಬ ಫಾರ್ಮ ತುಂಬಿ ಅದನ್ನು ಸಂಗಡ ಇಟ್ಟುಕೊಳ್ಳಬೇಕು. ಈ ಫಾರ್ಮುಗಳು ಇಂಗ್ಲಿಷ ಭಾಷೆಯಲ್ಲಿವೆ ಅವನ್ನು ತುಂಬಿ ಕೊಡುವವರು ಹಳ್ಳಿಗಳಲ್ಲಿ ಸಿಗುವದು ಕಷ್ಟ ಕಾರಣ ಹಳ್ಳಿಗರಿಗೆ ತಿಳಿಯುವಂಥ ಕನ್ನಡ ಭಾಷೆಯಲ್ಲಿ ಅವನ್ನು ಮುದ್ರಿಸಬೇಕಾಗಿ ತೋಟಿಗರು ಬಿನ್ನವಿಸುತ್ತಾರೆ ಅಡಿಕೆ ಸುಂಕದ ವಸೂಲಿಯ ಅಧಿಕಾರಿಗಳು ಇತ್ತ ಗಮನ ಕೊಡುವರೇ ?

ಇದೇ ಬರುವ ತಾ ೩೦ನೇ ಬುಧವಾರ ಮಧ್ಯಾಹ್ನ ೪ ಘಂಟೆಗೆ ಉತ್ತರ ಕನ್ನಡ ಜಿಲ್ಲಾ ಅಡಿಕೆ ಬೆಳೆಗಾರರ ಸಂಘ (ಶಿರ್ಸಿ)ದ ವಾರ್ಷಿಕ ಮಹಾಸಭೆ ತಾಲೂಕ ಸಂಘದ ಕಚೇರಿಯಲ್ಲಿ ಕೂಡುವದೆಂದೂ ಎಲ್ಲ ಸದಸ್ಯರು ಸಭೆಗೆ ಬರಬೇಕೆಂದೂ ಸದರಿ ಸಂಘದ ಸೆಕ್ರೆಟರಿಗಳು ಬಿನ್ನವಿಸುತ್ತಾರೆ

ಸಿದ್ದಾಪುರ— (ತಾ ೧೭-೧-೪೬) “ಮಾರಾಟ ಕರ”ದ ನಿಷೇಧಕ್ಕಾಗಿ ನಿನ್ನೆ ಇಲ್ಲಿಯ ವ್ಯಾಪಾರಿಗಳೆಲ್ಲ ಸಂಪೂರ್ಣ ಹರತಾಳವನ್ನಾಚರಿಸಿದ್ದರು ಸಂಜೆಯ ಕಡೆಗೆ ರಾ॥ ಎಸ್ ಎಸ್ ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಸದ್ಯದ ಹೀನ ದೀನ ಪರಿಸ್ಥಿತಿಯಲ್ಲಿ “ಮಾರಾಟ ಕರ”ದಂತಹ ಅಂಟಿಕರತ್ರಿಯ ಕರವನ್ನು ಹೇರುವದು ಅನುಚಿತವೆಂದ ಗೊತ್ತುವಳಿಯಾಯಿತು. ಇದೇ ಸಭೆಯಲ್ಲಿ ಸುಭಾಷ ಸೇನೆಯ ಅಧಿಕಾರಿಗಳಾದ ಕ್ಯಾ॥ ಶಹಾನವಾಜ ಕ್ಯಾ॥ ಸೈಗಲ ಮತ್ತು ಲೆ॥ ಧಿಲ್ಲನ ಇವರಿಗೆ ಲಷ್ಕರಿ ನ್ಯಾಯಾಲಯದವರು ವಿಧಿಸಿದ ಕಠಿಣ ಶಿಕ್ಷೆಯನ್ನು ಕ್ಷಮಿಸಿ ಸದರಿಯವರ ಬಿಡುಗಡೆ ಮಾಡಿದ ಬಗ್ಗೆ ಭಾರತದ ಮುಖ್ಯ ಸೇನಾಪತಿ ಲಾರ್ಡ ಆಚಿನಲೆಕರವರಿಗೆ ಧನ್ಯವಾದಗಳನ್ನು ಸಲ್ಲಿಸುವ ಹಾಗೂ ಇನ್ನುಳಿದ ಆ॥ ಹಿಂ॥ ಸೇನೆಯ ಅಧಿಕಾರಿಗಳ ಮುಕ್ತತೆಯನ್ನು ಸರಕಾರವು ಬೇಗನೇ ಮಾಡಬೇಕೆಂದು ಅಪೇಕ್ಷಿಸುವ ಇನ್ನೊಂದು ಗೊತ್ತುವಳಿಯೂ ಆಗಿದೆ

ಇಲ್ಲಿಯ ಕನ್ನಡ ಶಾಲೆಯ ಇಮಾರತು ಪೂರ್ಣ ಜೀರ್ಣವಾಗಿದೆ ಆದರೂ ಅದರ ಜೀರ್ಣೋದ್ಧಾರದ ಗುತ್ತಿಗೆ ಪಡಕೊಂಡವರು ಈ ಕಟ್ಟಡದ ಕೆಲಸಕ್ಕೆ ಕೈಹಾಕದೆ ಬೇರೆ ಕೆಲಸಗಳಲ್ಲೇ ತೊಡಗಿದ್ದಾರೆ ಶಾಲೆಯ ಕೆಲಸ ನೋಡಲು ಮಾಡಲಾಗದಿದ್ದರೆ ಅವರು ಅದನ್ನು ಬಿಟ್ಟುಕೊಟ್ಟು ಬೇರೆಯವರಿಗೆ ಗುತ್ತಿಗೆ ಕೊಡಲು ಹೇಳಕೊಳ್ಳಬಾರದೇ ?

(೯ನೇ ಪುಟದ ಮೇಲೆ ಮುಂದರಿಸಿದೆ)

ಹಿಂದುಸ್ಥಾನಿ ಪಾಠಗಳು.

ಸಬಕ ತೇರಹ. (ಪಾಠ ೧೩)

ಕೇಲಾ (ಬಾಳೆ)

ಕೇಲಾ ಏಕ ಫಲ ಹೈ. (ಬಾಳೆ ಒಂದು ಹಣ್ಣು.) ವಹ ಮೀಠಾ ಹೋತಾ ಹೈ. (ಅದು ಸಿಹಿಯಾಗಿರುತ್ತದೆ.) ಪಕಾ ಫಲ ಹಮ ಖಾತೇ ಹೈಂ. (ಮಾಗಿದ ಹಣ್ಣು ನಾವು ತಿನ್ನುತ್ತೇವೆ.) ಕಚ್ಚೇ ಫಲಕೀ ತರಕಾರೀ ಬನಾತೇ ಹೈಂ. (ಮಾಗದಿದ್ದ ಕಾಯಿಯು ಪಲ್ಯ ಮಾಡುತ್ತೇವೆ.) ತರಕಾರೀ ಬಡೀ ಜಾಯಕೇದಾರ ಹೋತೀ ಹೈ. (ಪಲ್ಯ ಬಹಳ ರುಚಿಕರವಾಗುತ್ತದೆ.) ಕೇಲೀಕಾ ಪೇಡ ಲಗಬಗ ದಸ ಫೀಟ ಊಂಚಾ ಹೋತಾ ಹೈ. (ಬಾಳೆಯ ಗಿಡ ಸುಮಾರು ೧೦ ಅಡಿ ಎತ್ತರವಿರುತ್ತದೆ.) ಉಸಕಾ ತನಾ ಗೋಲ, ಸೀಧಾ ಔರ ಚಿಕನಾ ಹೋತಾ ಹೈ. (ಅದರ ಕಂಬವು ಗುಂಡು, ನೆಟ್ಟಗೆ ಮತ್ತು ನುಣುಪಾಗಿರುತ್ತದೆ) ಕೇಲೇಕೇ ಪತ್ತೇ ಪರ ಖಾನಾ ಖಾತೇ ಹೈಂ. (ಬಾಳೆಯ ಎಲೆಯ ಮೇಲೆ ಊಟ ಮಾಡುತ್ತೇವೆ.) ತನೇಸೇ ನಾರ ನಿಕಾಲತೇ ಹೈಂ. (ಕಂಬದಿಂದ ನಾರು ತೆಗೆಯುತ್ತೇವೆ.) ಉಸಸೇ ಮಾಲಾ ಗೂಂಥತೇ ಹೈಂ. (ಅದರಿಂದ ಹೂವಿನ ಮಾಲೆಗಳನ್ನು ಪೋಣಿಸುತ್ತೇವೆ) ಪುಡಿಯಾಂ ಭೀ ಬಾಂಧತೇ ಹೈಂ. (ಪೊಟ್ಟಣಗಳನ್ನೂ ಕಟ್ಟುತ್ತೇವೆ) ಕೇಲೇಕೇ ಖೇತ ಬಂಗಾಲ ಔರ ಮದ್ರಾಸ ಮೇ ಜ್ಯಾದಾ ಹೈಂ. (ಬಾಳೆಯ ತೋಟಗಳು ಬಂಗಾಲ ಮತ್ತು ಮದ್ರಾಸ ಪ್ರಾಂತಗಳಲ್ಲಿ ಹೆಚ್ಚು ಇವೆ.) ಉಸಕೇ ಲಿಯೇ ಪಾನೀ ಬಹುತ ಚಾಹಿಯೇ. (ಅದಕ್ಕೆ ನೀರು ಬಹಳ ಬೇಕು) ಕೇಲೇ ಏಕ ಸಾಲಮೇ ಏಕ ಬಾರ ಫಲತಾ ಹೈ. (ಬಾಳೆಯು ಒಂದು ವರ್ಷದಲ್ಲಿ ೧ ಸಲ ಫಲಿಸುತ್ತದೆ.) ಫಿರ ಉಸೇ ಕಾಟ ಡಾಲತೇ ಹೈಂ. (ಪುನಃ ಅದನ್ನು ಕಡಿದು ಒಗೆಯುತ್ತಾರೆ.) ಕೇಲೇ ಕೀ ಫಲಿಯಾಂ ಏಕ ದಂಡೇಕೇ ಚಾರೋಂ ತರಫ ಲಗೀ ರಹತೀ ಹೈಂ. (ಬಾಳೆಯ ಹಣ್ಣುಗಳು ೧ ದಂಟಿನ ನಾಲ್ಕು ಬದಿಗೆ ಇರುತ್ತವೆ.) ಉಸೇ ಘವರ ಕಹತೇ ಹೈಂ. (ಅದಕ್ಕೆ ಗೊನೆ ಎಂದು ಹೇಳುತ್ತಾರೆ.) ಫಲಿಯಾಂ ಪೇಡ ಪರ ನಹೀಂ ಪಕತೀಂ (ಕಾಯಿಗಳು ಗಿಡದ ಮೇಲೆ ಹಣ್ಣಾಗುವದಿಲ್ಲ) ಉನ್ಹೇಂ ಏಕ ಕಮರೇ ಮೇಂ ರಖದೇತೇ ಹೈಂ (ಅವನ್ನು ೧ ಕೋಣೆಯಲ್ಲಿ ಇಡುತ್ತಾರೆ.) ವಹಾಂ ವೇ ಪಕ ಜಾತೀ ಹೈಂ. (ಅಲ್ಲಿ ಅವು ಮಾಗುತ್ತವೆ.) ಕೇಲೇಕೀ ಕಈ ಜಾತಿಯಾಂ ಹೈಂ. (ಬಾಳೆಯ ಅನೇಕ ಜಾತಿಗಳುಂಟು.) ಮದ್ರಾಸಕಾ ಪಚಾಡೀ, ಮಲಬಾರಕಾ ನೇತ್ರಂ, ಬಂಬಯೀಕಾ ಲಾಲ ಕೇಲಾ ಔರ ಬಂಗಾಲಕಾ ಚಿನಿಯಾಂ ಕೇಲಾ ಮಶಹೂರ ಹೈಂ (ಮದ್ರಾಸಿನ ಚಿಪ್ಪುಬಾಳೆ, ಮಲಬಾರದ ನೇತ್ರಂಬಾಳೆ, ಮುಂಬಯಿಯ ಕೆಂಪು ಬಾಳೆ ಮತ್ತು ಬಂಗಾಲದ "ಚಿನಿಯಾ" ಬಾಳೆ ಇವು ಸುಪ್ರಸಿದ್ಧವಿವೆ.) ಕೇಲೇಕೇ ಪೇಡಕೇ ಆಸಪಾಸ ಅಂಕುರ ನಿಕಲತೇ ಹೈಂ. (ಬಾಳೆಯ ಗಿಡದ ಸುತ್ತಲೂ ಮೊಳಕೆಗಳು ಹೊರಡುತ್ತವೆ.) ಉನ ಅಂಕುರೋಂಕೋ ಹೀ ಉಖಾಡಕರ ಖೇತಮೇಂ ಲಗಾತೇ ಹೈಂ. (ಆ ಮೊಳಕೆಗಳನ್ನು ತೆಗೆದು ತೋಟದಲ್ಲಿ ನೆಡುತ್ತಾರೆ.) ಕೇಲೇಮೇಂ ಬೀಜ ನಹೀಂ ಹೋತಾ. (ಬಾಳೆ ಹಣ್ಣಿನಲ್ಲಿ ಬೀಜವಿರುವದಿಲ್ಲ.) ಕೇಲೇಕೀ ಖೇತೀಸೇ ಬಹುತ ಫಾಯದಾ ಹೈ (ಬಾಳೆಯ ಸಾಗುವಳಿಯಿಂದ ಬಹಳ ಲಾಭವುಂಟು.)

ಸಬಕ ಚೌದಹ (ಪಾಠ ೧೪)

ಚಂದ್ರಕುಮಾರಕಾ ಖ್ಯಾಲ.

(ಚಂದ್ರಕುಮಾರನ ವಿಚಾರ)

ಶಂಕರ— ಕ್ಯೋಂರೇ, ತೂ ಆಜ ಭಂಗೀಕೇ ಲಡಕೋಂಕೇ ಸಾಥ ಖೇಲ ರಹಾ ಥಾ? ಜಾ, ನಹಾಕರ ಆ. (ಏನೋ, ನೀನು ಇಂದು ಧೂಡಮಾಲಿಗಳ ಮಕ್ಕಳ ಸಂಗಡ ಆಡುತ್ತಿದ್ದೆಯಾ? ಹೋಗು, ಜಳಕಮಾಡಿ ಬಾ)

ಚಂದ್ರಕುಮಾರ— ಹಾಂ, ಮೈಂ ತೋ ಆಜ ಭಂಗೀಕೇ ಲಡಕೋಂಕೇ ಸಾಥ ಖೇಲ ರಹಾ ಥಾ. (ಹೌದು, ನಾನಿಂದು ಭಂಗಿಗಳ ಮಕ್ಕಳೊಡನೆ ಆಡುತ್ತಿದ್ದೆ. ಸಿರ್ಫ ಮೈಂ ಹೀ ನಹೀಂ ಥಾ. (ನಾನೊಬ್ಬನೇ ಅಲ್ಲ;) ಬಹಿನ ಸುಶೀಲಾಭೀ ಥೀ. (ತಂಗಿ ಸುಶೀಲೆಯೂ ಇದ್ದಳು) ಭಾಈ, ಉಸಮೇಂ ಕ್ಯಾ ಹರ್ಜ ಹೈ? ಕ್ಯಾ, ವೇ ಲಡಕೇ ನಹೀಂ ಹೈಂ? (ಅಣ್ಣಾ, ಅದರಲ್ಲೇನು ತಪ್ಪಿದೆ? ಅವರು ಮಕ್ಕಳಲ್ಲವೇ?)

ಶಂಕರ— ಅರೇ, ಭಂಗೀ ಪಾಖಾನಾ ಸಾಫ ಕರತೇ ಹೈಂ. ಕೈಸಾ ಗಂದಾ ಕಾಮ ಕರತೇ ಹೈಂ! (ಭಂಗಿಗಳು ಪಾಯಖಾನೆ ಸ್ವಚ್ಛಗೊಳಿಸುತ್ತಾರೆ ಎಂತಹ ಹೊಲಸು ಕೆಲಸ ಮಾಡುತ್ತಾರೆ!) ಉನ್ಹೇಂ ಕೋಈ ಛೂತಾ ಹೈ? (ಅವರನ್ನು ಯಾರಾದರೂ ಮುಟ್ಟುತ್ತಾರೆಯೋ?

ಚಂದ್ರಕುಮಾರ— ತೋ ಫಿರ ಮೈಂ ಉನಕೋ ಭೀ ನ ಛೂಊಂಗಾ. ಔರ ಆಪಭೀ ಮುಝೇ ನ ಛೂಇಯೇ (ಹಾಗಾದರೆ ನಾನು ನಿಮಗೂ ಮುಟ್ಟುವದಿಲ್ಲ. ಮತ್ತು ನೀವೂ ನನ್ನನ್ನು ಮುಟ್ಟಬೇಡಿರಿ.) ಸುಶೀಲಾ ತುಮಭೀ ಭಾಈಕೋ ನ ಛೂನಾ. ಕ್ಯೋಂಕೀ ಭಾಈ ಭೀ ಪಾಖಾನಾ ಸಾಫ ಕರತೇ ಹೈಂ. (ಸುಶೀಲಾ, ನೀನೂ ಅಣ್ಣನನ್ನು ಮುಟ್ಟಬಾರದು. ಯಾಕೆಂದರೆ ಅಣ್ಣನವರೂ ಪಾಯಖಾನೆ ಸ್ವಚ್ಛ ಮಾಡುತ್ತಾರೆ.)

ಶಂಕರ— ತೂ ಪಾಗಲ ಹೈ. ಅಪನಾ ಮೈಲಾ ಸಭೀ ಸಾಫ ಕರತೇ ಹೈಂ. (ನೀನು ಹುಚ್ಚನಿದ್ದೀ. ತಮ್ಮ ಹೊಲಸು ಎಲ್ಲರೂ ತೊಳೆದುಕೊಳ್ಳುತ್ತಾರೆ) ಔರ ಭಂಗೀ ದೂಸರೋಂಕಾ ಮೈಲಾ ಸಾಫ ಕರತೇ ಹೈಂ. (ಮತ್ತು ಭಂಗಿಗಳು ಬೇರೆಯವರ ಹೊಲಸು ತೊಳೆಯುತ್ತಾರೆ.) ಯಹೀ ವಜಹ ಹೈ ಕಿ ಲೋಗ ಭಂಗಿಯೋಂಕೋ ನಹೀಂ ಛೂತೇ, ಸಮಝೇ? (ಇದೇ ಕಾರಣ ಜನರು ಭಂಗಿಗಳನ್ನು ಮುಟ್ಟುವದಿಲ್ಲ, ತಿಳಿಯಿತೇ?)

ಚಂದ್ರಕುಮಾರ— ಹಾಂ, ಸಮಝಾ (ಹೌದು, ತಿಳಿಯಿತು.)

ಚಂದ್ರಕುಮಾರ ದಿಲಮೇಂ ಸೋಚ ರಹಾ ಹೈ ಕಿ ಮಾಂ ಭೀ ಬಚ್ಚೋಂಕಾ ಪಾಖಾನಾ ಸಾಫ ಕರತೀ ಹೈ. (ಚಂದ್ರಕುಮಾರನು ಮನಸ್ಸಿನಲ್ಲೇ ಆಲೋಚಿಸಹತ್ತಿದನು— ತಾಯಿಯೂ ಮಕ್ಕಳ ಪಾಯಖಾನೆಯನ್ನು ತೊಳೆಯುತ್ತಾಳೆ.) ಲೇಕಿನ ಉಸೇ ಕೋಈ ಅಛೂತ ನಹೀಂ ಸಮಝತಾ. ಭಾಈಸೇ ಪೂಛನೇ ಜಾತಾ ಹೈ, ಲೇಕಿನ ಪೂಛನೇಕೀ ಹಿಮ್ಮತ ನಹೀಂ ಹೋತೀ (ಆದರೆ ಯಾರೂ ಅವಳನ್ನು ಅಸ್ಪೃಶ್ಯಳನ್ನಾಗಿ ತಿಳಿಯುವದಿಲ್ಲ. ಅಣ್ಣನಿಗೆ ಕೇಳಬೇಕೆಂದು ಮಾಡುತ್ತಾನೆ, ಆದರೆ ಕೇಳುವ ಧೈರ್ಯವಿಲ್ಲ)

ಚಂದ್ರಕುಮಾರ— ಅಚ್ಛಾ ಭಾಈ, ಮೈಂ ನಹಾಕರ ಅಭೀ ಆತಾ ಹೂಂ. ತಬ ಆಪಸೇ ಕುಛ ಸವಾಲ ಪೂಛೂಂಗಾ. (ಒಳ್ಳೇದು ಅಣ್ಣಾ, ನಾನು ಮಿಂದು ಈಗಲೇ ಬರುವೆನು. ಆಮೇಲೆ ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳುವೆನು) [ನಾಹಕರ ಫಿರ ಆನೇಕೇ ಬಾದ ಮಿಂದು ತಿರುಗಿ ಬಂದ ಮೇಲೆ] ಆಪ ಚಮಾರಕೇ ಲಡಕೋಂಕೇ ಸಾಥ ಖೇಲನೇಸೇ ಮುಝೇ ಕ್ಯೋಂ ಮನಾ ಕರತೇ ಹೈಂ? (ತಾವು ಚಮಗಾರರ ಮಕ್ಕಳೊಡನೆ ಆಡಲಿಕ್ಕೆ ನನಗೆ ಯಾಕೆ ಪ್ರತಿಬಂಧ ಮಾಡುತ್ತೀ(ರಿ) ಹೇಳಿರಿಯೋ, ಮುನ್ನಾ ಚಮಾರಕಾ ಲಡಕಾ ಹೈ. ಕೈಸಾ ಸಾಫ ಸುಥರಾ ರಹತಾ ಹೈ! (ನೋಡಿರಿ, ಮುನ್ನನು ಚಮಗಾರನ ಹುಡುಗ. ಎಷ್ಟು ಚೊಕ್ಕಟವಾಗಿದ್ದಾನೆ!) ಮೈಂ ಉಸಕೇ ಸಾಥ ಖೇಲೂಂ ತೋ ಕ್ಯಾ ಹರ್ಜ ಹೈ? (ನಾನು ಅವನೊಡನೆ ಆಡಿದರೆ ಏನು ತಪ್ಪಾಗುತ್ತದೆ?)

ಶಂಕರ— ಚಮಾರ ಜಾನವರೋಂಕೇ ಚಮಡೇ ನಿಕಾಲತೇ ಹೈಂ. ಇಸ ವಜಹ ಉನ್ಹೇಂ ಲೋಗ ನಹೀಂ ಛೂತೇ. (ಚಮಗಾರರು ಜಾನುವಾರಗಳ ಚರ್ಮ ತೆಗೆಯುತ್ತಾರೆ ಈ ಕಾರಣದಿಂದ ಅವರಿಗೆ ಜನರು ಮುಟ್ಟಿಕೊಳ್ಳುವದಿಲ್ಲ) ಕ್ಯಾ ತೂ ನಹೀಂ ಜಾನತಾ ಕಿ ಮರೇ ಹುಯೇ ಜಾನವರೋಂಕಾ ಚಮಡಾ ನಿಕಾಲನಾ ಛೂತ ಹೈ? (ಏನು ನೀನು ಅರಿಯದೇ ಸತ್ತ ಜಾನುವಾರಗಳ ಚರ್ಮ ತೆಗೆಯುವದು ಮೈಲಿಗೆ ಎಂದು?)

ಚಂದ್ರಕುಮಾರ— ಅಚ್ಛಾ, ಅಗರ ಯಹ ಬಾತ ಹೈ ತೋ ಡಾಕ್ಟರೋಂಕೋ ಲೋಗ ಕ್ಯೋಂ ಛೂತೇ ಹೈಂ? (ಒಳಿತು, ಈ ಮಾತು ಹೌದಾದರೆ ಡಾಕ್ಟರರನ್ನು ಜನರು ಯಾಕೆ ಮುಟ್ಟುತ್ತಾರೆ?) ವೇ ತೋ ನ ಮಾಲೂಮ ಕಿತನೇ ಮುರ್ದೋಂಕೋ ಚೀರ ಫಾಡಕರ "ಡಾಕ್ಟರ ಸಾಹಬ" ಬನತೇ ಹೈಂ (ಅವರು ಎಷ್ಟು ಹೆಣಗಳನ್ನು ಕತ್ತರಿಸಿ ಡಾಕ್ಟರ ಸಾಹೇಬರಾಗುತ್ತಾರೆ ಗೊತ್ತಿಲ್ಲ.)

ಶಂಕರ— ಜಾನವರೋಂಕಾ ಕಾಟನಾ ಹೀ ಛೂತ ಹೈ ಆದಮಿಯಾ ನಹೀಂ. (ಜಾನುವಾರಗಳನ್ನು ಕೊಯ್ಯುವದು ಮೈಲಿಗೆ, ಮನುಷ್ಯರನ್ನಲ್ಲ) ಡಾಕ್ಟರ ಲೋಗ ಮರೇ ಹುಯೇ ಆದಮಿಯೋಂಕೋಹೀ ಚೀರತೇ ಫಾಡತೇ ಹೈಂ. (ಡಾಕ್ಟರರು ಸತ್ತ ಮನುಷ್ಯರನ್ನೇ ಕೊಯ್ಯುತ್ತಾರೆ, ಕತ್ತರಿಸುತ್ತಾರೆ.)

ಚಂದ್ರಕುಮಾರ— ಅಚ್ಛಾ, ಮೈಂ ಬಾಬೂಜೀಸೇ ಪೂಛೂಂಗಾ. (ಒಳಿತು, ನಾನು ತಂದೆಯವರನ್ನು ಕೇಳುವೆ.)

ಚಂದ್ರಕುಮಾರ— ಬಾಬೂಜೀ, ಶಂಕರ ಮುಝೇ ಖೇಲನೇ ನಹೀಂ ದೇತೇ. (ಅಪ್ಪಾ, ಶಂಕರನು ನನಗೆ ಆಡಗೊಡುವದಿಲ್ಲ.) ಕಹತೇ ಹೈಂ ಕಿ ಭಂಗೀ, ಚಮಾರಕೇ ಸಾಥ ಮತ ಖೇಲೋ. (ಭಂಗಿ, ಚಮಗಾರರೊಡನೆ ಆಡಬೇಡೆಂದು ಹೇಳುತ್ತಾನೆ.)

ಬಾಬೂಜೀ— ತುಮನೇ ಉನಸೇ ಕ್ಯಾ ಕಹಾ? (ನೀನು ಅವನಿಗೆ ಏನು ಹೇಳಿದೆ?)

ಚಂದ್ರಕುಮಾರ— ಮೈಂನೇ ಕಹಾ ಕಿ ವೇಭೀ ಹಮಾರೀ ಜೈಸೇ ಲಡಕೇ ಹೈ. (ನಾನು ಹೇಳಿದೆ ಅವರೂ ನಮ್ಮಂತೆಯೇ ಹುಡುಗರು.) ಉನಕೋ ಛೂನೇಮೇಂ ಕೋಈ ಹರ್ಜ ನಹೀಂ ಹೈ. (ಅವರನ್ನು ಮುಟ್ಟಿಕೊಳ್ಳುವದರಲ್ಲಿ ಏನೂ ತಪ್ಪಿಲ್ಲ.) ಲೇಕಿನ ಭಾಈ ಕಹತಾ ಹೈ ಕಿ ಹಮಾರೇ ಬಾಪದಾದೋಂನೇ ಉನಕೋ ನಹೀಂ ಛುಆ ಹೈ. (ಆದರೆ ಅಣ್ಣ ಹೇಳುತ್ತಾನೆ, ನಮ್ಮ ತಂದೆ-ಮುತ್ತಾತರು ಅವರನ್ನು ಮುಟ್ಟಿಕೊಳ್ಳುತ್ತಿದ್ದಿಲ್ಲ.)

ಬಾಬೂಜೀ— ಯಹ ಠೀಕ ನಹೀಂ ಹೈ. (ಇದು ಸರಿಯಲ್ಲ.) ಸಬಸೇ ಹಮಕೋ ಮುಹಬ್ಬತ ಕರನೀ ಚಾಹಿಯೇ; (ಎಲ್ಲರ ಮೇಲೂ ನಾವು ಪ್ರೀತಿ ಮಾಡಬೇಕು;) ಕಿಸೀಸೇ ಜಲನಾ ನಹೀಂ ಚಾಹಿಯೇ. (ಯಾರ ಮೇಲೂ ಉರಿಕಾರುವದು ಬೇಡ.

ಚಂದ್ರಕುಮಾರ— ಲೇಕಿನ ವಹ ಗಂದೇ ಕಾಮ ಕರತೇ ಹೈಂ. (ಆದರೆ ಅವರು ಹೊಲಸು ಕೆಲಸ ಮಾಡುತ್ತಾರೆ.)

ಬಾಬೂಜೀ— ಸಫಾಈ ಕರನಾ ಗಂದಾ ಕಾಮ ನಹೀಂ ಹೈ. (ಸ್ವಚ್ಛತೆ ಮಾಡುವದು ಹೊಲಸು ಕೆಲಸವಲ್ಲ.) ಹಮೇಂ ಚಾಹಿಯೇ ಕಿ ಉನಕೋ ಸಾಫ ರಹನೇಕೇ ಲಿಯೇ ಕಹೇಂ (ಅವರಿಗೆ ಸ್ವಚ್ಛರಾಗಿರಲು ನಾವು ಹೇಳಬೇಕು.) ಥೋಡೇಹೀ ದಿನೋಂಮೇಂ ವೇಭೀ ವೈಸೇಹೀ ರಹೇಂಗೇ ಜೈಸೇ ಹಮ ರಹತೇ ಹೈಂ (ಕೆಲವೇ ದಿನಗಳಲ್ಲಿ ಅವರೂ ನಾವು ಹ್ಯಾಗೆ ಉಳಿಯುವೆವೋ ಹಾಗೆಯೇ ಉಳಿಯುವರು.)

ಆಜಾದ ಹಿಂದ.

ಸುಭಾಷ ಸೇನೆಯ ತ್ಯಾಗ, ಶೌರ್ಯ, ಸಾಹಸಯುಕ್ತ ರೋಮಾಂಚಕಾರಿ ಸಚಿತ್ರ-ಇತಿಹಾಸ.

ನೇತಾಜಿ ಸುಭಾಷ, ಕ್ಯಾ. ಲಕ್ಷ್ಮೀ, ರಾಸಬಿಹಾರಿ, ಶಹಾನವಾಜ, ಭೋಸಲೆ, ಧಿಲನರ ಜೀವನ ಸಾಹಸ, ಸಮರಗೀತ, ಕೆಂಪುಕೋಟೆ ವಿಚಾರಣೆ, ಭೂಲಾಭಾಯಿ ವಾದ ಇವನ್ನೊಳಗೊಂಡ ತಿದ್ದಿ ಬೆಳೆಸಿದ ಎರಡನೇ ಆವೃತ್ತಿ.

ಬೆಲೆ ೧ ರೂ. (ವಿ. ಪಿ. ವೆಚ್ಚ ಬೇರೆ)

೧ ೪-೦ ಮನಿಯಾರ್ಡರು ಮಾಡುವವರಿಗೆ ರಜಿಸ್ಟರ ಮೂಲಕ ಪುಸ್ತಕ ರವಾನಿಸುತ್ತೇವೆ.

ಸಮಾಜ ಪುಸ್ತಕಾಲಯ, ಧಾರವಾಡ.

THE BANK OF RURAL INDIA, LTD.,

[Incorporated in *British India* under the Indian Companies Act, 1913]

HEAD OFFICE:- **KARWAR.**

Offices at:- KARWAR, KUMTA, HONAVAR & SIRSI.

Authorised Capital	Rs. 10,00,000;
Subscribed Capital	Rs. 5,00,000;
Paid-up Capital	Rs. 2,60,000.

Rates of Interest on Deposits:

Current a/c. @ 1% p. a. *Savings Bank a/c @ 2½%.*

Fixed Deposits for 3 months @ 3% per annum

" " for 6 months @ 3½% "

" " for 12 months or more @ 4% "

The Board of Directors have pleasure to announce that a sub-Branch has been opened at YELLAPUR on 21st December 1945.

All Kinds of modern Banking business transacted.

Karwar,
22-12-1945.

P. X. GRACIOUS.
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲವ್ಯಯ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೪
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 28th January, 1946

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೩೦

ಕುಮಟಾ:- ಸೋಮವಾರ, ತಾ. ೨೮ ನೇ ಜನವರಿ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೪ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಮಾಲಪ್ಯಾಕಾ ೧೪ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು.

ಭೂಲೋಕದ ಶಾಂತಿಕಾರಣ.

(ನಿರೀಕ್ಷಕನು ಬರೆದುದು)

ಭೂಲೋಕದ ಶಾಂತಿಸ್ಥಾಪನೆಯ ಕಾರ್ಯ ಸುಧಾರಿಸುತ್ತಿದೆಯೆಂದು ನಾ ಹೇಳಲಾರೆ. ಯುದ್ಧವೇನೋ ನಿಂತಿದೆ; ಆದರೆ ಯುದ್ಧಪ್ರವೃತ್ತಿಗೆ ಕಾರಣವಾದ ಬೇರೆ ಬೇರೆ ಜನಾಂಗಗಳ ಸ್ವಾರ್ಥ-ವೃತ್ತಿ ಇನ್ನೂ ಊರ್ಜಿತವುಂಟು. ಲಂಡನ್ನಿನೊಳಗೆ ಸಂಯುಕ್ತ ರಾಷ್ಟ್ರಸಂಘವನ್ನು ಸಂಘಟಿಸಿ, ಅದರ ಮುಖಾಂತರ ಲೋಕದೊಳಗಿನ ವಿವಾದ-ಕಾರಣಗಳನ್ನು ಶಾಂತ ವಿಚಾರದಿಂದ ಬಗೆಹರಿಸಿಕೊಳ್ಳಬೇಕಾಗಿ ರುಶ್ಯ-ಬ್ರಿಟಿಶ-ಅಮೇರಿಕೆಯವರೂ ಇತರರೂ ಆಲೋಚನೆ ನಡಿಸುತ್ತಿದ್ದಾರೆ. ಸಣ್ಣ ಸಣ್ಣ ಜನಾಂಗಗಳನ್ನು ದೊಡ್ಡ ದೊಡ್ಡ ಜನಾಂಗಗಳ ಚಕ್ರದಿಂದ ಕಾಪಾಡುವ ಸೋಗು ಹಾಕಿ ರುಶ್ಯ ಪ್ರಭೃತಿ ದೊಡ್ಡ ಮೂರು ಜನಾಂಗಗಳು ಸ್ವಂತ ಸ್ವಾರ್ಥ ಸಾಧಿಸಿಕೊಳ್ಳುವ ಹವಣಿಕೆಯಲ್ಲಿವೆ. ಸಂಯುಕ್ತ ರಾಷ್ಟ್ರಸಂಘದ ಕಚೇರಿಯನ್ನು ಅಮೇರಿಕೆಯಲ್ಲಿಡಬೇಕೆಂದು ಒಂದು ನಿರ್ಣಯವಾಗಿದೆ. ಆದರೆ ಅದರ ಮುಖ್ಯಾಧಿಕಾರಿ ಯಾವ ಜನಾಂಗದವನಿರಬೇಕೆಂಬ ಬಗ್ಗೆ ಇನ್ನೂ ನಿರ್ಣಯವಾಗಲೊಲ್ಲದು! ಬ್ರಿಟಿಶರನ್ನು ನೇಮಿಸಲು ರುಶ್ಯರು ಒಡಂಬಡುವದಿಲ್ಲ; ರುಶ್ಯರನ್ನು ನೇಮಿಸಲು ಬ್ರಿಟಿಶರ ಒಪ್ಪಿಗೆಯಿಲ್ಲ! ಇಬ್ಬರ ಈ ಬಡಿದಾಟದಲ್ಲಿ ಮೂರನೆಯವರಾದ ತಮಗೆ ಹಿತವಾಗುವದೆಂದು ಅಮೇರಿಕೆಯವರು ಎಣಿಸಿ ತಟಸ್ಥವೃತ್ತಿಯಿಂದಿದ್ದಾರೆ. ಹೀಗಾಗಿ ಈ ವಿಷಯದಲ್ಲಿ ಈತನಕ ಯಾವದೊಂದು ನಿರ್ಣಯವಾಗಿಲ್ಲ. ಹಾಗೆಯೇ ಉಳಿದಿದೆ! ಇರಾಣದೊಳಗೆ ರುಶ್ಯರು ಕಣ್ಣುಮುಚ್ಚಾಲೆಯ ಆಟ ನಡಿಸಿದ್ದಾರೆ. ಇರಾಣದೊಳಗಿನ ಎಣ್ಣೆ-ಗಣಿಗಳ ಮಾಲಿಕತ್ವವನ್ನು ಪಡೆಯುವದಕ್ಕಾಗಿ ಬೇರೆ ಬೇರೆ ಪಂಚಿಕೆಗಳನ್ನು ಅವರು ಹೂಡುತ್ತಿದ್ದಾರೆ. ಬ್ರಿಟಿಶರು ಎಷ್ಟೇ ವಿರೋಧಿಸಿದರೂ ಪ್ರಯೋಜನವಾಗುವದಿಲ್ಲ. ಅಮೇರಿಕೆಯವರು ಈ ಪ್ರಕರಣದಲ್ಲಿ ರುಶ್ಯರ ಪಕ್ಷ ಹಿಡಿದಿದ್ದಾರೆ. ಹೇಗೂ ರುಶ್ಯರು ಗೆಲ್ಲುತ್ತಾರೆ; ಅವರನ್ನು ವಿರೋಧಿಸಿದರೆ ತಮಗೆ ಎಣ್ಣೆಗಣಿಗಳಲ್ಲಿ ಪಾಲು ಸಿಗಲಿಕ್ಕೆ ತೊಂದರೆಯಾದೀತು ಎಂದು ಅಮೇರಿಕೆಯವರು ಎಣಿಸಿ ತಟಸ್ಥ ಉಳಿದಿರುವರು! ಇರಾಣದ ಮುಖ್ಯ ಪ್ರಧಾನರಾದ ಇಬ್ರಾಹಿಮ ಹಕೀಮಿಯವರು ರಾಜಿನಾಮೆ ಕೊಟ್ಟು ರುಶ್ಯರಿಗೆ ಇರಾಣದೊಳಗೆ ಕಾಲು ಬಿಡಲು ಅಂಬು ಮಾಡಿಕೊಟ್ಟಿದ್ದಾರೆ. ಹೊಸ ಮುಖ್ಯ ಪ್ರಧಾನರಾದ ಘವಾಮ ಸುಲ್ತಾನರವರು ರುಶ್ಯರಿಗೆ ಎಣ್ಣೆ-ಖನಿಯಗಳನ್ನು ಒದಗಿಸಿಕೊಡಲು ಒಡಂಬಡಲಿಕ್ಕಿಲ್ಲೆಂದು ಲಂಡನ್ನಿನ ಪರಿಷತ್ತಿನಲ್ಲಿದ್ದ ಇರಾಣ ಪ್ರತಿನಿಧಿಗಳು ಹೇಳುತ್ತಿದ್ದರೂ ಆ ಮಾತಿನಲ್ಲಿ ನನಗೆ ಅಷ್ಟೇನು ಸ್ವಾರಸ್ಯ ಕಾಣದು. ಇರಾಣ ಸರಕಾರವು ರುಶ್ಯರ ಆಗ್ರಹವನ್ನು ಪ್ರತಿಭಟಿಸುವಷ್ಟು ಬಲಶಾಲಿಯಾಗಿದ್ದರೆ ಹಿಂದಿನ ಮುಖ್ಯ ಪ್ರಧಾನರು ರಾಜಿನಾಮೆ ಕೊಡುತ್ತಿರಲಿಲ್ಲ. ರುಶ್ಯ-ಬ್ರಿಟಿಶರೊಳಗೆ ವಿರೋಧವುಂಟಾದ್ದರಿಂದ ಹಿಂದುಸ್ಥಾನಕ್ಕೊಂದು ಪ್ರಾಧಾನ್ಯ ಬಂದಿದೆ. ರುಶ್ಯರ ನೆರೆಹೊರೆಯಲ್ಲಿರುವ ಯುಗೋಸ್ಲಾವಿಯಾ, ಝೆಕೋಸ್ಲೊವ್ಹಾಕಿಯಾ ಮೊದಲಾದ ಬಾಲ್ಕನ್ ಜನಾಂಗಗಳನ್ನು ರುಶ್ಯ ಸರಕಾರವು ತನ್ನ ಕೈಗೊಂಬೆಗಳನ್ನಾಗಿ ಸ್ವಂತ ಸ್ವಾರ್ಥಕ್ಕೆ ಉಪಯೋಗಿಸುತ್ತದೆಂದೂ, ಇದು ಭೂಲೋಕ-ಶಾಂತಿಯ ಪಾಲನೆಗೆ ಪ್ರತಿಕೂಲವೆಂದೂ ವಾದಿಸಿ ಬ್ರಿಟಿಶರು ರುಶ್ಯರನ್ನು ಪ್ರತಿಭಟಿಸುತ್ತಾರೆ. ಹಿಂದುಸ್ಥಾನ ದೇಶಕ್ಕೆ ಸಂಯುಕ್ತ ರಾಷ್ಟ್ರಸಂಘದ ಸದಸ್ಯತ್ವದ ಸ್ಥಾನ-ಮಾನಗಳುಂಟು. ಆದರೆ ಇಲ್ಲಿಯ ಸರಕಾರ ಪ್ರಜಾಪ್ರತಿನಿಧಿಯಲ್ಲ; ಇದು ರಾಷ್ಟ್ರೀಯ ಸರಕಾರವಲ್ಲ; ಹೀಗೆ ರುಶ್ಯ ಪತ್ರಿಕೆಗಳು ಟೀಕಿಸಿ, ಬ್ರಿಟಿಶರ ಮುಂದೆ ಕನ್ನಡಿ ಹಿಡಿದು ಅವರ ನಡಾವಳಿಯ ಚಿತ್ರವನ್ನು ತೋರಿಸತೊಡಗಿವೆ. ಅಮೇರಿಕೆಯವರು ಗಟ್ಟಿಯಾಗಿ ಬ್ರಿಟಿಶರ ಪಕ್ಷ ಎತ್ತಿ ಹಿಡಿದರೆ ರುಶ್ಯರು ಒಂದು ವೇಳೆ ಬಗ್ಗಬಹುದು. ಆದರೆ ರುಶ್ಯರನ್ನು ವಿರುದ್ಧಗೊಳಿಸಲು ಅಮೇರಿಕೆಯವರು ಸಿದ್ಧರಿಲ್ಲ. ರುಶ್ಯ-ಬ್ರಿಟಿಶರೊಳಗಿನ ಜಗ್ಗಾಟದಲ್ಲಿ ತಟಸ್ಥ ನಿಂತು ಗೆದ್ದವರ ಪಕ್ಷ ಸೇರಲು ಅವರು ನೋಡುತ್ತಿದ್ದಾರೆ. ನಮ್ಮ ಹಿಂದುಸ್ಥಾನಕ್ಕೆ ಬ್ರಿಟಿಶ ಪಾರ್ಲಮೆಂಟಿನ ಶಿಷ್ಟಮಂಡಳ ಆಗಮಿಸಿದಲಿಕ್ಕೆ ಈ ರುಶ್ಯರ ಟೀಕೆಯೇ ಕಾರಣವೆಂದು ಹೇಳಲಾಗುತ್ತಿದೆ. ಹಿಂದೀ ರಾಜಕಾರಣವು ಕೂಡ ಭೂಲೋಕದ ಶಾಂತಿ ಕಾರಣದ ಒಂದು ಅಂಗವೆಂದು ಈವಾಗ ಎಣಿಸಲ್ಪಡುತ್ತಿದೆ.

ಬ್ರಿಟಿಶ ಶಿಷ್ಟರು ಮುಂಬಯಿ, ಮದ್ರಾಸ, ಕಲಕತ್ತೆ ಮೊದಲಾದ ಕಡೆಗಳಲ್ಲಿ ತಿರುಗಾಡತೊಡಗಿದ್ದಾರೆ. ಗ್ರಾಮಗಳಿಗೆ ಹೋಗಿ ಹಳ್ಳಿಗರನ್ನೂ ಮಾತಾಡಿಸುತ್ತಿದ್ದಾರೆ. ಸಮ್ರಾಟ ಜೋರ್ಜ ಭೂಪತಿಗಳ ಹೆಸರು ಎಷ್ಟೋ ಹಳ್ಳಿಗರಿಗೆ ಗೊತ್ತಿಲ್ಲ! ದೇಶದಲ್ಲೀಗ ಬ್ರಿಟಿಶ ರಾಜ್ಯವಿದೆ; ಆ ರಾಜ್ಯದಲ್ಲಿ ಸುಖವಿಲ್ಲ; ಸ್ವಾತಂತ್ರ್ಯ ಬೇಕು; ಎಂಬ ಸಂಗತಿಗಳನ್ನಷ್ಟು ಹಳ್ಳಿಗರು ಶಿಷ್ಟರ ಕಡೆ ಹೇಳಿದಂತಾಗಿ ಪ್ರಕಟವಾಗಿದೆ. ಅತ್ತ ಸರ್ವಾಧಿಕಾರಿ ವೆವ್ಹೆಲ್ ದೊರೆಗಳೂ ಇತ್ತ ಶಿಷ್ಟರೂ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮೌಲಾನಾ ಅಬುಲ್ ಕಲಾಮ ಆಝಾದ, ಸರದಾರ ವಲ್ಲಭಭಾಯಿ ಪಟೇಲ, ಪಂಡಿತ ಜವಾಹಿರಲಾಲ ನೆಹರು, ಮಹಾತ್ಮಾ ಗಾಂಧಿ ಮೊದಲಾದವರೊಡನೆ ಗೌಪ್ಯದಿಂದ ಮಾತುಕತೆ ನಡಿಸಿ, ಹಿಂದುಸ್ಥಾನದೊಳಗೆ ಈಗ ಲೋಕಮತಾನುವರ್ತಿ ರಾಜ್ಯಭಾರ ನಡೆದಿದೆಯೆಂಬ ಆಭಾಸವನ್ನುಂಟು ಮಾಡಲು ಕೈಕೊಳ್ಳಬೇಕಾದ ಯೋಜನೆಯ ವಿಚಾರ ಮಾಡುತ್ತಿದ್ದಾರೆ. ಹಿಂದುಸ್ಥಾನ ದೇಶ ತಮ್ಮ ಕೈತಪ್ಪಿ ಹೋಗಬಾರದು; ಆದರೆ ಅದರ ಮೇಲಿನ ಸತ್ತೆ ತಮ್ಮ ಕೈಯೊಳಗಿರುತ್ತದೆಂಬ ಲೋಕಾಪವಾದ ನಷ್ಟವಾಗಬೇಕು; ಎಂದೀ ದೃಷ್ಟಿಯಿಂದಲೇ ಈ ಸಂಭಾಷಣೆಗಳು ನಡೆಯುತ್ತವೆಂದು ನಾನು ಎಣಿಸುತ್ತೇನೆ. ಆದರೆ ಈ ಯೋಜನೆ ಸಾಧ್ಯವಾಗುವ ಲಕ್ಷಣಗಳು ಕಡಿಮೆ. ಬ್ರಿಟಿಶರು ಹಿಂದುಸ್ಥಾನವನ್ನು ಬಿಟ್ಟು ಹೊರಡಬೇಕೆಂಬ ಮಹಾತ್ಮರ ನಿರ್ಧಾರ ಈಗಲೂ ಊರ್ಜಿತವುಂಟು. ನೇತಾಜಿ ಸುಭಾಷರ ಹಿಂದೀ ಸೇನೆಯ ಪ್ರಮುಖ ಅಧಿಕಾರಿಗಳಾದ ಶ್ಯಾಹನವಾಜ, ಪ್ರೇಮಕುಮಾರ ಸೈಗಲ, ಗುರುಬಕ್ಷ ಢಿಲನ ಇವರ ವಿರುದ್ಧ ಹಿಂದುಸ್ಥಾನ ಸರಕಾರವು ನಡಿಸಿದ ಖಟ್ಲೆಗಳಿಂದ ಹಿಂದುಸ್ಥಾನದ ರಾಜಕಾರಣಕ್ಕೆ ಹೊಸ ಕಳೆಯೇರಿದೆ. ನೇತಾಜಿ ಸುಭಾಷರ ಹಿಂದೀ ರಾಷ್ಟ್ರೀಯ ಸೈನಿಕರಿಗೆ ಹೋದಕಡೆಯಲ್ಲಿ ಅಭೂತಪೂರ್ವವಾದ ಸತ್ಕಾರವಾಗುತ್ತಿದೆ. ಬ್ರಿಟಿಶರು ಗಂಟುಮೂಟೆ ಕಟ್ಟಿಕೊಂಡು ಹೊರಟೊಡನೆ ಸಯಾಮ, ಮಲಯಾ, ಬ್ರಹ್ಮದೇಶ ಮೊದಲಾದ ಪ್ರದೇಶಗಳಲ್ಲಿ ಜಾತೀಯ ಬಡಿದಾಟಗಳೆಲ್ಲ ತಂತಾನೇ ದೂರವಾದವೆಂದು ಕ್ಯಾ. ಢಿಲನರು ನೇತಾಜಿ ಸುಭಾಷರ ಜಯಂತಿಯ ದಿನ ಮುಂಬಯಿಯೊಳಗೆ ನೆರೆದ ಸಭೆಯಲ್ಲಿ ಉದ್ಗರಿಸಿ, ಹಿಂದು-ಮುಸಲ್ಮಾನ ಜಗಳಗಳೂ ಇತರ ದ್ವೇಷಾಸೂಯೆ-ಮತ್ಸರಗಳೂ ಬ್ರಿಟಿಶ ರಾಜ್ಯಧೋರಣವೇ ಕಾರಣವೆಂದು ಸ್ಪಷ್ಟಗೊಳಿಸಿ, ಬ್ರಿಟಿಶರು ಹೊರಟುಹೋದ ದಿನವೇ ಹಿಂದೀ ಜನಾಂಗಕ್ಕೆ ಕ್ಷೇಮವಾಗುವದೆಂದು ಸಾರಿದ್ದಾರೆ. ಸೈನಿಕ ಸಮಾಜದಲ್ಲೂ ಈಗ ವಿಚಾರಕ್ರಾಂತಿಯುಂಟಾಗಿದೆ. ಹಿಂದೀ ರಾಷ್ಟ್ರೀಯ ಸೈನ್ಯದ ಪ್ರಮುಖರನ್ನ [illegible] ಬ್ರಿಟಿಶರಾಜ್ಯದ ಪ್ರಭುತ್ವವನ್ನು ಪುನಃ ಪ್ರಸ್ಥಾಪಿಸಬೇಕೆಂಬ ಉದ್ದೇಶದಿಂದ ಆಂ. ಸರ. ನಡಿಸಿದ ಖಟ್ಲೆಗಳಿಂದ ಹಿಂದುಸ್ಥಾನದೊಳಗೆ ಕ್ಷೋಭೆಯಿಂದ ಲೋಕಮತವನ್ನು [illegible] ದೀರ್ಘವಿಚಾರದಿಂದ ಸಮಾಧಾನಗೊಳಿಸಿ, ಹಿಂದೀ ರಾಜಕಾರಣದ ಸಮಸ್ಯೆಯನ್ನು ಸಾಮ್ರಾಜ್ಯವಾದಿಗಳು ಸಾಹಿತ್ಯದಿಂದ ಬಗೆಹರಿಸಬಹುದೆಂದು ಅತಿಬಯಸ್ಸು ತೋರಿಸಿದ್ದಾರೆ. ಆದರೆ ಕೃತಿಗಳು ಪ್ರಾಬಲ್ಯದಿಂದಲೂ ನಿಗ್ರಹದಿಂದಲೂ ನಡೆಕೊಂಡರೆ ಮಾತ್ರ ಜನಾಂಗಕ್ಕೆ ಪ್ರಯೋಜನವುಂಟು. ಬ್ರಿಟಿಶ ಅಧಿಕಾರಿಗಳ ಸೊಕ್ಕು ಇನ್ನೂ ಕಡಿಮೆಯಾಗಿಲ್ಲ. ರಾಷ್ಟ್ರೀಯ ಸಭೆಯು ಪ್ರಾಗಿ ದಿಲ್ಲಿಯೊಳಗಿನ ಕೇಂದ್ರ ಎಸೆಂಬ್ಲಿ ಸಭೆಯ ಅಧ್ಯಕ್ಷಸ್ಥಾನಕ್ಕೆ ನಿಲ್ಲಿಸಲ್ಪಟ್ಟ ಶ್ರೀ ಗಣೇಶ ವಾಸುದೇವ ಮಾವಳಂಕರರು ೬೬ ವಿರುದ್ಧ ೬೬ ಮತಗಳಿಂದ ಅಂದರೆ ೩ ಮತಗಳಿಂದ ಗೆದ್ದರು. ಆದರೆ ಅವರನ್ನು ಸೋಲಿಸಲು ಸರಕಾರ ಪಕ್ಷದ ಪ್ರಮುಖರಾದ ಸರ್ ಬೆಂಥಾಲರವರು ಮುಸ್ಲಿಮ ಲೀಗಿನವರೊಡನೆ ಒಳಸಂಚು ಮಾಡಿ ಕೊನೆಯ ವರೆಗೂ ಕಾರಸ್ಥಾನ ನಡಿಸಿದ್ದರೆಂಬುದನ್ನು ಮರೆಯಲಾಗದು. ಬೆಂಥಾಲರವರ ಪ್ರೇರಣೆ, ಪ್ರೋತ್ಸಾಹ ಮತ್ತು ಬೆಂಬಲವಿರದಿದ್ದರೆ ಲೀಗಿನವರು ಶ್ರೀ ಮಾವಳಂಕರರನ್ನು ಎಂದೂ ವಿರೋಧಿಸುತ್ತಿದ್ದಿಲ್ಲ. ಶ್ರೀ ಮಾವಳಂಕರರು ಹಿಂದೆ ಮುಂಬಯಿ ಎಸೆಂಬ್ಲಿಯ ಅಧ್ಯಕ್ಷರಾಗಿ ದುಡಿದು ಸದಭಿಪ್ರಾಯ ಗಳಿಸಿದವರು; ನಿರ್ಮಲಚಿತ್ತರು, ನಿಷ್ಪಕ್ಷಪಾತಿಗಳು, ನಿತಾಂತ ನ್ಯಾಯಾಧೀಶರು ಎಂಬುದಾಗಿ ಕೀರ್ತಿಯನ್ನು ಪಡೆದವರು. ಅಂಥವರನ್ನು ಬೆಂಥಾಲ ಪ್ರಭೃತಿ ಸರಕಾರ ಪಕ್ಷದವರು ವಿರೋಧಿಸಿದ್ದು ಕ್ಷುದ್ರಬುದ್ಧಿಯ ಲಕ್ಷಣ. ಈ ಆಯ್ಕೆಯಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಇಬ್ಬ ಸಭಾಸದರು ತಟಸ್ಥ ನಿಂತರು; ಮೂವರು ಶ್ರೀ ಮಾವಳಂಕರರಿಗೆ ಮತ ಕೊಟ್ಟು ರಾಷ್ಟ್ರೀಯ ಸಭೆಯ ಅಭಿಮಾನವನ್ನು ವ್ಯಕ್ತಗೊಳಿಸಿದರು. ಸರಕಾರದ ಕಿಡಿಗೇಡಿತನವನ್ನು ಈ ಸಾರೆ ತಿರಸ್ಕರಿಸಿ, ಅವರು ಹಿಂದೀ ರಾಜ್ಯಭಾರವನ್ನು ಸುಧಾರಿಸಿಕೊಳ್ಳಲು ಸರಕಾರಕ್ಕೆ ತಿಳಿಸಿದ್ದಾರೆಂದು ಹೇಳಬಹುದು. ರಾಷ್ಟ್ರೀಯ ಸಭೆಯು ಪ್ರಪಂಚ ಈವಾಗ ಎಲ್ಲೆಲ್ಲೂ ಹಬ್ಬತೊಡಗಿದೆ. ಎಲ್ಲ ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಗಳಲ್ಲಿ ಕೊಂಗ್ರೆಸ್ಸಿಗೇ ಪ್ರಚಂಡ ಬಹುಮತ ಸಿಗುವದೆಂದು ತೋರುತ್ತದೆ. ಲೋಕ-ಶಾಲಿಗೆಯೇ ಸಾಮ್ರಾಜ್ಯಶ್ಯರ ಗುರಿ. ಲೋಕದೊಳಗಿನ ಎಲ್ಲ ಸಂಪತ್ತು ಅವರಿಗೆ ಬೇಕು! ತನ್ನ ಸುಖವೇ ಸರ್ವರ ಸುಖವೆಂದು ಅವರ ಕಲ್ಪನೆ! ಶಾಂತಿಯ ಆಲೋಚನೆ ನಡೆದಾಗ ಈ ಶಾಲಿಗೆಗಳು ತಮ್ಮೊಳಗೆ ಬಡಿದಾಡಿಕೊಂಡರೆ ದುರ್ಬಲ ಜನಾಂಗಗಳಿಗೆ ಹಿತವಿದೆ. ಭೂಲೋಕದ ಶಾಂತಿಕಾರಣ ಬಗೆಹರಿಯುವಾಗ ಹಿಂದೀ ಸಮಸ್ಯೆಯೂ ಬಗೆಹರಿಯುವದೆಂದು ನನಗೊಂದು ಆಶೆ. ಆ ಮಾತು ಹೇಗೂ ಇರಲಿ. ಬ್ರಿಟಿಶರು ನಮ್ಮ ದೇಶದಿಂದ ಹೋಗಬೇಕು ಎಂಬುದೇ ಭಾರತೀಯರ ಬೇಡಿಕೆ. ಬ್ರಿಟಿಶ ಸರಕಾರವು ಹಿಂದುಸ್ಥಾನದೊಳಗಿಂದ ಕಾಲ್ತೆಗೆಯಬೇಕೆಂಬ ಠರಾವನ್ನು ರಾಷ್ಟ್ರೀಯ ಸಭೆಯವರು ಕೇಂದ್ರ ಎಸೆಂಬ್ಲಿಯ ಸಭೆಯಲ್ಲಿ ಸದ್ಯಕ್ಕೇ ತೂಗಿಸುವವರಿದ್ದಾರೆ. ಆಗೇನು ನಡೆಯುತ್ತದೆಂದು ನೋಡುವಾ.

(೨ನೇ ಪುಟದಿಂದ ಮುಂದರಿಸಿದ್ದು.)

ದ್ಲಿ ಉಳಿಯಲಿಲ್ಲವೆಂಬ ನೆವದ ಮೇಲೆ ಸಸ್ಪೆಂಡ ಆದವರುಂಟು! ಬಹುತರವಾಗಿ ಶ್ಯಾನಭೋಗರ ವಿರುದ್ಧ ನೆವ ಹುಡುಕಬೇಕೆಂದು ಮಾಮಲೇದಾರ ಪ್ರಾಂತಸಾಹೇಬರು ಮನಸ್ಸು ಮಾಡಿದರೆ ಒಂದಿಲ್ಲೊಂದು ನೆವ ಸಿಕ್ಕೇ ಸಿಗುತ್ತದೆ. ಶಿಳ ತಾಲೂಕುಗಳಲ್ಲಿ ಕಳಿಸತಕ್ಕ ವರದಿ ಎಳೆ ತಾಲೂಕುಗಳಲ್ಲಿ ಮುಟ್ಟಿ ಭಯಂಕರ ಪ್ರಮಾದವಾಗುತ್ತದೆ! ಮೇಲಧಿಕಾರಿಗಳು ಫಕ್ಕನೆ ಬಂದಾಗ ಸರಬರಾಯಿ,ಮುಂತಾದ್ದರಲ್ಲಿ ನ್ಯೂನತೆಯುಂಟಾದರೆ ಶ್ಯಾನಭೋಗರನ್ನು ಉದ್ಧಟತನದಲ್ಲಿ ಸೇರಿ ಶಾಸನವಾಗುವದುಂಟು. ೩೦ - ೩೦ ವರ್ಷ ನೌಕರಿ ಮಾಡಿದವರು ಸಸ್ಪೆಂಡ ಆದ ಉದಾಹರಣೆಗಳಿವೆ! ಆದ್ದರಿಂದ ಶ್ಯಾನಭೋಗರು ಸಂಘ ಮಾಡಿ ತಮ್ಮ ದೂರುಗಳನ್ನು ಅರುಹಿಕೊಳ್ಳುವವರಿದ್ದಾರೆ. ಈ ಸಂಘಕ್ಕೆ ಸರಕಾರದ ಮಾನ್ಯತೆ ದೊರೆತಿದೆ. ಸಂಘದ ಸಭೆ ಸದ್ಯಕ್ಕೆ ಜರುಗಲಿದೆಯಂತೆ.

ಕುಮಟೆಯ ಸೀಧಾ ಅಂಗಡಿಗಳಲ್ಲೀಗ ಗೋಧಿ, ಜೋಳ, ಸಕ್ಕರೆ ಸಿಗುವದಿಲ್ಲ. ಅವು ಬಿಲ್ಕುಲ್ ಇಲ್ಲವಂತೆ. ಕೊಡುವ ಪಡಿತರ ಅಕ್ಕಿಯಾದರೂ ಚಲೋ ತರದ್ದಲ್ಲ.

The Agricultural & Industrial Bank, Ltd.
beg to announce the opening of a Branch
at 384 M, JAIPURIA HOUSE.
DABHOLKARWADI, KALBADEVI ROAD, **BOMBAY**
on 22nd January 1946.
Total Resources as on 31-12-1945 exceeds Rs. 60,00,000

K. VAMAN SHENAI.
CHAIRMAN

Coondapoor,
8-1-1946

ಸ್ಥಳಿಕ ವಿಷಯಗಳು.

ಲೇಖಕ:- ಸ್ಥಳವಂತಿಕ.

ಜಿಲ್ಲಾಧಿಪರಾದ ರಾ| ವ್ಹಿ. ನಂಜಪ್ಪನವರಿಗೆ ವರ್ಗವಾಗಿ ಅವರ ಸ್ಥಳದಲ್ಲಿ ರಾ| ಶಕ್ತೀಸಿಂಗ ದಾನಾ ಎಂಬವರು ಕಲೆಕ್ಟರರಾಗಿ ಇಲ್ಲಿ ನೇಮಿಸಲ್ಪಟ್ಟಿದ್ದಾರೆ. ಇವರು ಪುಣೆಯ ಕಲೆಕ್ಟರರ ಪರ್ಸನಲ್ ಅಸಿಸ್ಟಂಟರಿದ್ದರು. ಠಾಣೆ, ಅಹಮ್ಮದನಗರ, ಪುಣೆ ಜಿಲ್ಲೆಗಳಲ್ಲಿ ಇವರು ಪ್ರಾಂತ ಆಫೀಸರರಾಗಿ ಕೆಲಸ ಮಾಡಿದ್ದಾರೆ. ತೀರ ಎಳೆ ಪ್ರಾಯದವರು; ವಯಸ್ಸು ೩೨ ವರ್ಷದೊಳಗೆ; ಕೆಲಸ ಮಾಡಬೇಕೆಂಬ ಲವಲವಿಕೆಯುಂಟು. ಪೂರೈಕೆ ಇಲಾಖೆಯಲ್ಲಿ ಇವರು ಕೆಲಸ ಮಾಡಿದ್ದಾರೆ. ಪುಣೆ ಜಿಲ್ಲೆಯಲ್ಲಿ ಯುದ್ಧೋತ್ತರ ನಡೆಯಲಿದ್ದ ಪುನರ್ರಚನಾ ಕೆಲಸದ ಬಗ್ಗೆ ವಿಶೇಷಾಧಿಕಾರಿಯಾಗಿ ಇವರಿಗೆ ನೇಮಿಸಿತ್ತು. ಇವರು ಸಭ್ಯರಿದ್ದಾರೆ, ಉತ್ಸಾಹಿಗಳಿದ್ದಾರೆ, ಆಟ-ಓಟಗಳ ಒಲವುಂಟು; ಬೇಟೆಯಲ್ಲಿ ನುರಿತವರಿದ್ದಾರೆ; ಹೀಗೆ ಮುಂಬಯಿ 'ಟ್ಯಾಮ್ಸ' ಪತ್ರಿಕೆಯ ಪುಣೆ ವರದಿಯ ಸುದ್ದಿಗಾರರು ಬರೆಯುತ್ತಾರೆ. ರಾ| ದಾನಾರವರು ಇಂದು-ನಾಳೆ ಕೆಲಸದ ಮೇಲೆ ಹಾಜರಾಗಬಹುದು. ಹೊಸ ಜಿಲ್ಲಾಧಿಪರ ಕಾರಕೀರ್ದಿಯಲ್ಲಿ ನಿಯಂತ್ರಣದ ಆಡಳಿತ ಲೋಕರ ಸೌಕರ್ಯವನ್ನು ಲಕ್ಷಿಸಿ ನಡೆಯಬಹುದಾಗಿ ಹೇಳುತ್ತಾರೆ.

⁂

ನಿಯಂತ್ರಣ ರಾಜ್ಯದಲ್ಲಿ ಲೋಕೋಪಯೋಗದ ಸೋರಿಗೆ ಮಿತಿ ಇಲ್ಲ. ಭತ್ತಕ್ಕೆ ಅರ್ಧದಷ್ಟು ಅಕ್ಕಿಯಾಗುತ್ತದೆಂದು ನಿಯಂತ್ರಣದಲ್ಲಿ ಗಣಿತ ಉಂಟು. ಸಾಮಾನ್ಯವಾಗಿ ರೈತರ ಅನುಭವ ಸಹ ಹಾಗೆ ಉಂಟು ಆದರೂ ಅಷ್ಟು ಅಕ್ಕಿ ಕೊಡುತ್ತೇನೆಂದು ಗ್ರಾಮದವರು ಒಪ್ಪಂಬಟ್ಟರೆ ಅಧಿಕಾರಿಗಳು ಮರಗೂಲಿಗೆ ಭತ್ತ ಕೊಡಲೊಪ್ಪುವದಿಲ್ಲ. ಗಿರಣಿಗೆ ಭತ್ತ ಹಾಕಿದರೆ ಒಂದೇ ಕಡೆಗೆ ಮೇಲ್ವಿಚಾರ ಇಡಬರುತ್ತದೆ; ಹುಟ್ಟಿದ ಪೂರ್ತಿ ಅಕ್ಕಿ, ತೌಡು, ಕಡಿಯಕ್ಕಿ ಸಹಿತ ಸರಕಾರಕ್ಕೆ ಸಿಗುತ್ತದೆ. ಬಡಬಗ್ಗರಿಗೆ ಅದರ ಪ್ರಯೋಜನ ದೊರೆಯುತ್ತದೆ; ಹಳ್ಳಿಗಳಲ್ಲಿ ಭತ್ತ ಹಂಚಿದರೆ ಮೇಲ್ವಿಚಾರ ಮಾಡಲಿಕ್ಕೆ ಸಾಧ್ಯವಿರುವದಿಲ್ಲ, ಕಳ್ಳಾಟಿಕೆಗೆ ಅವಕಾಶವುಂಟು; ಎಂಬಹೊಂದು ಕಲ್ಪಿತ ತರ್ಕವುಂಟು. ಗಿರಣಿ ಸಾಹುಕಾರರಿಗೂ ನಿಯಂತ್ರಣ ಇಲಾಖೆಯವರಿಗೂ ಒಳಸೂತ್ರ ಉಂಟೆಂಬ ಟೀಕೆಕಾರರ ಉಂಟು. ಈಗಿನ ರಾಜ್ಯಭಾರದಲ್ಲಿ ಸನ್ಯಾಸಿಗೆ ಸಹ ಲಂಚ ತಿನ್ನುವ ಆಶೆ ಹುಟ್ಟುವಂಥ ಪರಿಸ್ಥಿತಿ ಉಂಟು. ಪೋಲೀಸಖಾತೆಯ ಮರೆಯಲ್ಲಿ ಅನೇಕ ವ್ಯವಹಾರಗಳು ನಡೆಯುತ್ತವೆ. ಹತ್ತಿ ಕಾಳು ನಮ್ಮ ಜಿಲ್ಲೆಯೊಳಗೆ ಬಹಿರಂಗವಾಗಿ ಸಿಗುವದಿಲ್ಲ ಆದರೆ ಧಾರವಾಡ ಜಿಲ್ಲೆಯಿಂದ ಕಳ್ಳಾಟಿಕೆಯಿಂದ ಬಂದ ಹತ್ತಿಕಾಳು ಧಡೆಗಳ್ಳರೂ. ಇರುತ ಮಾರಾಟವಾಗುತ್ತದೆ ಈ ಸಂಗತಿ ಪೋಲೀಸರಿಗೆ ಗೊತ್ತುಂಟು; ನಿಯಂತ್ರಣಾಧಿಕಾರಿಗಳಿಗೆ ಹೊಟ್ಟೆ ಉಂಟು; ಪ್ರಾಂತಿಕ ಸರಕಾರಕ್ಕೆ ಕಿವಿಯಿದ್ದರೆ ಕೇಳುತ್ತದೆ. ಆದರೂ ನಿಯಂತ್ರಣ ಪುರಾಣದಲ್ಲಿ ಕಳ್ಳ ಪೇಟೆಯ ಅಧ್ಯಾಯವಿಲ್ಲ. ಗಿರಣಿಯವರು ಹುಟ್ಟಿದ ಅಕ್ಕಿ ಕೊಡುತ್ತಾರೆಂದು ಎಣಿಸಬಹುದು ಆದರೆ ಅದಕ್ಕೊಂದು ಪ್ರಮಾಣವಿರಬೇಕು. ಆ ಪ್ರಮಾಣಕ್ಕೆ ಅನುಸರಿಸಿ ಹಳ್ಳಿಗರು ಅಕ್ಕಿ ಕೊಟ್ಟರೆ ಭತ್ತವನ್ನು ಅವರಿಗೆ ಕೊಡಲು ಅಧಿಕಾರಿಗಳು ಸಂಕೋಚಪಡಬೇಕು. ಹಳ್ಳಿಗರು ಬಡವರು; ಗಿರಣಿಯವರು ದೊಡ್ಡವರ; ಆದಾಗ್ಯೂ ಗಿರಣಿಯವರ ಮೇಲೆ ನಂಬಿಗೆ, ಹಳ್ಳಿಗರ ಮೇಲೆ ಅಪನಂಬಿಗೆ. ದೊಡ್ಡವರ ದೊಡ್ಡಸ್ಥಿಕೆಯು ಮೂಲ ಮಾರಕವೆಂದು ಹೇಳುವದುಂಟು. ಸಂಪ್ರದಾಯದಿಂದ ನಡಿಸಿದ ರೀತ್ಯ, ದೊಡ್ಡಸ್ಥಿಕೆ, ಅಪರಾಧಗಳು ದೊಡ್ಡಸ್ಥಿಕೆಯ ಮೂಲವೆಂದು ವ್ಯವಹಾರಿಕರ ಅನುಭವವುಂಟು. ದೊಡ್ಡ ಬೆಲೆಯ ನೋಟುಗಳನ್ನು ಸರಕಾರವು ರದ್ದು ಮಾಡಬಯಸಿದಂದಿನಿಂದ ಸಭ್ಯ, ಶಿಷ್ಟ, ದೊಡ್ಡವರು ಗಡಿಬಿಡಿ ಮಾಡಿ ಕಂಡವರಿಂದ ನೋಟುಗಳನ್ನು ಪಾಸುಮಾಡಿಸಲು ಹವಣಿಸಿದ ಉದಾಹರಣಗಳು ಉಂಟು. ಆದರೂ ಬಡವರನ್ನು ನಂಬುವ ನ್ಯಾಯವಾರ ದುರ್ಲಭ.

ಅಂಕೋಲೆಯ ಮಾಮಲೇದಾರರು ಹೊಸ ಉಪಕ್ರಮವನ್ನು ಕೈಕೊಂಡಿದ್ದಾರೆ. ಸೀದಾ ಅಂಗಡಿಗಳಲ್ಲಿ ಅಕ್ಕಿಯ ಜೊತೆಗೆ ಭತ್ತವನ್ನಿಟ್ಟಿದ್ದಾರೆ. ಅಕ್ಕಿಯ ಸೀದಾ ಇದ್ದವರು ಭತ್ತವನ್ನು ಬಯಸಿದ್ದಲ್ಲಿ ಅಕ್ಕಿಯ ಇಮ್ಮಡಿ ಭತ್ತವನ್ನು ಸೀದಾ-ಅಂಗಡಿಯವರು ಕೊಡುತ್ತಾರೆ. ಅಕ್ಕಿಯ ಇಮ್ಮಡಿ ಭತ್ತ, ಭತ್ತದ ಅರ್ಧ ಅಕ್ಕಿ ಎಂಬ ಕೋಷ್ಟಕ ಅಂಕೋಲೆಯಲ್ಲಿ ರೂಢಿಯುಂಟು. ಅದನ್ನು ಎಲ್ಲ ತಾಲೂಕುಗಳಲ್ಲಿ ಮಾನ್ಯ ಮಾಡಿ ಭತ್ತವನ್ನು ಹಂಚಿಕೊಟ್ಟಲ್ಲಿ ಕೈಕುಟ್ಟಿದ ಅಕ್ಕಿ ಮಾಡಿಕೊಳ್ಳಲು ಜನರಿಗೆ ಅನುಕೂಲವುಂಟು. ಬಡ ಹಳ್ಳಿಯವರು ಸರಕಾರದ ಉಗ್ರಾಣಕ್ಕೆ ಅಕ್ಕಿ ತಂದುಕೊಟ್ಟಲ್ಲಿ ಇಮ್ಮಡಿ ಭತ್ತವನ್ನು ಅವರಿಗೆ ಕೊಟ್ಟು ಮರಗೂಲಿಯ ಉದ್ದಿಮೆಗೆ ರಾಜಾಶ್ರಯ ಕೊಡಲು ಅನುಕೂಲವುಂಟು. ಅಧಿಕಾರಿಗಳು ಹಳ್ಳಿಗರ ಮೇಲೆ ನಂಬಿಗೆ ಇಡುವ ಪ್ರಸಂಗವಿಲ್ಲ. ಅಕ್ಕಿಯ ಅಳತೆ ಮಾಡಿಕೊಂಡು ಭತ್ತವನ್ನು ಅದೇ ಅಳತೆಯಿಂದ ಅಳೆದು ಕೊಡಬಹುದು. ಮೇಲ್ವಿಚಾರ ಮಾಡುವ ಖರ್ಚು ಉಳಿಯುತ್ತದೆ. ತೌಡು ತಿನ್ನುವ ಬಯಕೆಯನ್ನು ನಿಯಂತ್ರಣಾಧಿಕಾರಿಗಳು ಬಿಟ್ಟುಬಿಡಬೇಕು; ಅಂದರೆ ಎಲ್ಲ ವ್ಯವಹಾರ ಸರಿಹೋಗುತ್ತದೆ.

⁂

ಹೊನ್ನಾವರ ತಾಲೂಕಿನ ಮುರ್ಕಿಯಲ್ಲಿ ಗ್ರಾಮಾಧಿಕಾರಿಗಳು ಅವಲಕ್ಕಿ ಕುಟ್ಟುವವರ ಜನಗಣತಿ ಮಾಡತೊಡಗಿದ್ದಾರೆಂದು ತಿಳಿಯುತ್ತದೆ. ಭತ್ತದ ನಿಯಂತ್ರಣದಲ್ಲಿ ಅವಲಕ್ಕಿ ಕುಟ್ಟುವವರು ಗತಿಗೆಟ್ಟರು. ನಮ್ಮ ಜಿಲ್ಲೆಯೊಳಗೆ ಗೋದಿ ತಿನ್ನುವ ರೂಢಿ ಕಡಿಮೆ. ಒಂದಾವರ್ತಿ ಆ ಪ್ರಕಾರ ನಿಷ್ಠರೂ ಗೋದಿಯ ಅಭಾವವುಂಟು. ಅದರಿಂದ ಅವಲಕ್ಕಿ ತಿನ್ನುವ ಪ್ರಘಾತ ಈ ಕಡೆ ಜನಸಾಮಾನ್ಯರಲ್ಲುಂಟು. ಸಾಮಾನ್ಯವಾಗಿ ಅವಲಕ್ಕಿಯ ದರ ಅಕ್ಕಿಯ ಅರ್ಧದಷ್ಟು ಇರುತ್ತಿತ್ತು. ನಿಯಂತ್ರಣ ರಾಜ್ಯದಲ್ಲಿ ಅವಲಕ್ಕಿ ಅಪರೂಪ. ಅವಲಕ್ಕಿಯ ದರ ಅಕ್ಕಿಯ ದರಕ್ಕೆ ತಪ್ಪಿದೆ ಭತ್ತ ಸಿಗುವದು ಕಠಿಣ ಸರಕಾರಕ್ಕೆ ಕಡಿಯಕ್ಕಿ, ತೌಡಿನ ಬಯಕೆಯಾದ್ದರಿಂದ ನಿಯಂತ್ರಣ ಪೇಟೆಯಲ್ಲಿ ಅವಲಕ್ಕಿ ಕುಟ್ಟುವವರಿಗೆ ಭತ್ತ ಸಿಗುವದಿಲ್ಲ ಕಳ್ಳ ಪೇಟೆಯಿಂದಲೇ ಅವಲಕ್ಕಿ ಕುಟ್ಟುವವರ ಅಭ್ಯುದಯವಾಯಿತು. ಭತ್ತ ಹಿಂದಿ ಇಕ್ಕೆ ಪ್ರಸಂಗದಲ್ಲಿ ರೂ ೩೦ ಕ್ಕೆ ಕೊಡುವ ಪ್ರಸಂಗ ಉಂಟೆಂದು ಅವಲಕ್ಕಿ ಕುಟ್ಟುವವರು ಹೇಳುತ್ತಾರೆ ಈ ಜನರ ಬಾಳುವೆ ಬಹು ಕಠಿಣವಾಗಿದೆ ಕಳ್ಳ ಪೇಟೆಯವರು ಕಳ್ಳ ಲಾಭವನ್ನು ಹೊಡೆದ್ದು ನೋಟುಗಳಾಗಿಟ್ಟರೂ ಆ ನೋಟುಗಳನ್ನು ಸರಕಾರವು ರದ್ದುಪಡಿಸಿ ಕಳ್ಳ ಪೇಟೆಯವರಿಗೆ ಶಾಸನ ಮಾಡಿದ್ದರೆಂಬರೂ ಕೇಳಿ ಬರುವ ಕಷ್ಟ ಗಂಭೀರವಾಗುವದಿಲ್ಲ. ಕಳ್ಳನ ಕಳ್ಳ ಧನವನ್ನು ಪೋಲೀಸ ಕಳ್ಳನು ಕಸಕೊಂಡದ್ದರಿಂದ ಕದ್ದೊಯ್ದ ಧನ ಮೂಲ ಒಡೆಯನಿಗೆ ಸಿಗುವ ಕ್ರಮವಿಲ್ಲ

⁂

“ ಒಡವನ ಮೆಂಡೆ ಎಷ್ಟಾದರೂ ಅಷ್ಟಿಗೆ ” ಸಾಮಾನ್ಯವಾಗಿ ಗ್ರಾಮಾಧಿಕಾರಿಗಳ ಸ್ಥಿತಿ ಈ ದಾಯಾದ್ದಿದೆ. ಬ್ರಿಟಿಶ ರಾಜ್ಯ ಪ್ರಾರಂಭದಲ್ಲಿ ಪಟೇಲರು ಗಣಮಾನ್ಯ ಜನ ಮಮನಿಸಿಯಾಗಿದ್ದರು. ಸರಕಾರದ ದರಬಾರದಲ್ಲಿ ಪಟೇಲರಿಗೆ ಗೌರವವಿತ್ತು. ವಾಸಿತನಸ್ಥರು ಪಟೇಲರಾಗಿ ನೇಮಿಸಲ್ಪಡುತ್ತಿದ್ದರು. ಗ್ರಾಮದ ಆಗು-ಹೋಗುಗಳನ್ನು ಸರಕಾರಕ್ಕೆ ಅರಿಕೆ ಮಾಡಿಕೊಳ್ಳುವ ಅಧಿಕಾರಿವ್ಯಕ್ತಿ ಪಟೇಲನು. ಮುಂದೆ ಕಲ್ಪನೆ ಹೀಗಿತ್ತು. ಆದರೆ ರಾಜ್ಯ ಸ್ಥಿರವಾದ ಹಾಗೆ ಧೋರಣ ಬದಲಿತು. ಜನಕುಲಿಗೆ ಈಗಿನ ರಾಜ್ಯದ ಮೂಲ ಪಟೇಲರು ಜನಪಕ್ಷಪಾತಿಯಾಗಿ ವ್ಯವಹರಿಸತೊಡಗಿದರೆಂದು ಮೇಲಧಿಕಾರಿಗಳು ವಿಮನಸ್ಕರಾದರು ವಿಮನಸ್ಕತೆ ವಿಕೋಪದಲ್ಲಿ ಪರಿಣಮಿಸಿತು ವಿಕೋಪದಿಂದ ತರತಮ್ಯವುಂಟಾಯಿತು ಪಟೇಲನಿಗೆ ಸಹಾಯಕನೆಂದು ಶಾನಭೋಗರಿಗೆ ನೇಮಿಸಲಾಯಿತು ಶಾನಭೋಗರು ಪಟೇಲರ ಮೇಲೂ ಗ್ರಾಮದವರ ಮೇಲೂ ಗುಪ್ತಚಾರರಂತೆ ಕಾವಲಿರುವ ಅಧಿಕಾರಿಗಳಾಗಿ ಪರಿಣಮಿಸಿದರು ಸರಕಾರದ ಹುಕುಮುಗಳನ್ನು ಜನಸಮೂಹದ ಲೆಕ್ಕಪತ್ರ ಇಟ್ಟುಕೊಳ್ಳುವ ವ್ಯಕ್ತಿಗೆ ಪ್ರಾಧಾನ್ಯ ದೊರೆಯಿತು ಅಧಿಕಾರಿಗಳ ಸರಬರಾಯಿ ಮಾಡುವ ಮಾನ, ಧನ, ಕುಲಹೀನ ವ್ಯಕ್ತಿಗಳು ಅಧಿಕಾರಿಗಳಿಗೆ ಇಷ್ಟರಾದರು. ಪಟೇಲರು ಗ್ರಾಮಸ್ಥರನ್ನು ಸಲಹು ಅಧಿಕಾರಿಗಳ ಸರಬರಾಯಿ, ತಮ್ಮ ನಿರ್ವಾಹ ಮಾಡಿಕೊಳ್ಳುವ ಪ್ರಸಂಗ ಬಂದಿದೆ ಆದರಿಂದ ಸಭ್ಯರು ಪಟೇಲಿಗೆ ಹೇಸುತ್ತಾರೆ. ಪರಂಪರೆಯಿಂದ ನಡೆದುಬಂದ ಗೌರವವೆಂದು ಹಲವರು ಅದನ್ನು ಕಾಪಾಡಿಕೊಂಡಿದ್ದಾರೆ. ಒಮ್ಮೆ ಕಳ್ಳಿದರೆ ಪುನಃ ಆ ಗೊಡವೆಗೆ ಹೋಗುವದಿಲ್ಲ. ಅಧಿಕಾರಿಗಳ ಉಪದ್ರವದ ಮೂಲಕ ಪಟೇಲಿಗೆ ಇನಾಮುಗಳು ದೊರೆಯುವದಿಲ್ಲ ಗೋಕರ್ಣ ಕ್ಷೇತ್ರದ ಪಟೇಲರು ಉಗ್ರಾಣದಾರರಾಗಿ ನೇಮಿಸಲ್ಪಟ್ಟು ತಳ ಕುಟ್ಟಿಗೆ ಒಂದು ವರುಷವಾಯಿತು ಹನೇಹಳ್ಳಿಯ ಪಟೇಲರು ಹನೇಹಳ್ಳಿಯಲ್ಲಿ ಉಳಿದು ಗೋಕರ್ಣದ ಪಟೇಲಿಯನ್ನು ನಡಿಸುತ್ತಾರೆ. ಕುಮಟೆಯೊಳಗಿನ ಪಟೇಲರು ರಾಜಿನಾಮೆ ಕೊಡುವ ಪ್ರಸಂಗ ಸದ್ಯಕ್ಕೆ ಬಂದಿತ್ತು. ಬಹುಕಾಲದಿಂದ ಹೆಗಡೆ ಮನೆತನದವರು ಅಲ್ಲಿ ಪಟೇಲರಿದ್ದಾರೆ. ಕಳೆದ ಡಿಸೆಂಬರ ತಿಂಗಳಲ್ಲಿ ಚೇ ಜ್ವರ ನಿವಾರಣೆಯ ಅಧಿಕಾರಿಗಳೊಬ್ಬರು ಹಳಿಯಾಳದೊಳಗಿಂದ ಅಲ್ಲಿ ಮುಕ್ಕಾಮು ಮಾಡಿದ್ದರು. ಇವರ ಆಗಮನವನ್ನು ಪಟೇಲ ಶಾನಭೋಗರು ಹಾರ್ದಿಕವಾಗಿ ಅಪ್ಪಣೆಯಾದಂತೆ ಹೊತ್ತಿಗೆ ಸರಿಯಾಗಿ ಕಾದುಕೊಂಡು ಉಳಿದರು ಬಹುಕಾಲದ ತನಕ ಅವರು ಬಂದು ತಲ್ಪದ್ದರಿಂದ ಗ್ರಾಮಾಧಿಕಾರಿಗಳು ತಮ್ಮ ಕೆಲಸಕ್ಕೆ ಹೋದರು. ಅತ್ತ ರಾತ್ರಿ ಅಧಿಕಾರಿಗಳು ಬಂದು ತಲ್ಪಿದರು; ಊಟ ಮಾಡಿ ಒರಗಿದರು; ಒರಗಿದವರಿಗೆ ಗಾಢ ನಿದ್ರೆ ಹತ್ತಿತು. ಅಧಿಕಾರಿಗಳು ಬಂದ ವಾರ್ತೆ ತಿಳಿದ ಬಳಿಕ ಪಟೇಲ-ಶಾನಭೋಗರು ಬಂಗ್ಲೆಗೆ ಹೋದರು. ಸಂಜೆ ೫ ಘಂಟೆ ತನಕ ಕಾದುಕೊಂಡರೂ ಅಧಿಕಾರಿಗಳಿಗೆ ಎಚ್ಚರಾಗದ್ದರಿಂದ ಪಟೇಲ-ಶಾನಭೋಗರು ತಮ್ಮ ಕೆಲಸಕ್ಕೆ ಹೋದರು. ಎದ್ದೊಡನೆ ಪಟೇಲ-ಶಾನಭೋಗರು ತಮ್ಮ ಉಸಾಬರಿಗೆ ಬರಲಿಲ್ಲವೆಂದು ಅಧಿಕಾರಿಗಳಿಗೆ ಕೋಪ ಬಂತು. ಮರುದಿನ ಅಧಿಕಾರಿಗಳು ಆ ಸೇಡು ತೀರಿಸಿಕೊಂಡ ಬಗೆ ಹೀಗುಂಟು:-

ಮರುದಿನ ಮೂರು ಜನ ಆಳು ಬೇಕೆಂದು ಅಧಿಕಾರಿಗಳ ಅಪ್ಪಣೆಯಾಯಿತು. ಸುಗ್ಗಿ ಪೇಟೆ ನಿರ್ಜನ ಪ್ರದೇಶ. ಅದರೊಳಗೂ ಅಲ್ಲೊಂದು ಕಟ್ಟಿಗೆ ಕೆಲಸದ ಕಾರಖಾನೆ ಸ್ಥಾಪನೆಯಾಗಿದೆ ಅದರಿಂದ ಕೂಲಿಯಾಳು ಸಿಗುವದು ಕಠಿಣ. ಪಟೇಲರು ಬಹುಪ್ರಯತ್ನ ಮಾಡಿ ಮೂರು ಜನ ಕೂಲಿಯಾಳುಗಳನ್ನು ಹಿಡಿದು ತಂದರು. ಅವರಲ್ಲೊಬ್ಬನು ಗಿಡ್ಡನಿದ್ದನು. ಎಳೆಯ ಹುಡುಗನಂತೆ ಕಾಣುತ್ತಿದ್ದನು. ಅಧಿಕಾರಿಗಳಿಗೆ ನೆವ ಸಿಕ್ಕಿತು. “ಈತ ಸಣ್ಣ ಹುಡುಗನು; ದೊಡ್ಡವರು ಸಿಗುವದಿಲ್ಲವೇ? ದೊಡ್ಡವರನ್ನು ಯಾಕೆ ತರಲಿಲ್ಲ? ಈತನಿಗೂ ಪೂರ್ಣ ಸಂಬಳ ಕೊಡಬೇಕೇನು”? ಎಂದು ಅಧಿಕಾರಿಗಳು ಗದ್ದರಿಸಿದರು. “ಇಲ್ಲಿ ಕೂಲಿಯಾಳು ಸಿಗುವದಿಲ್ಲ; ಜನಬಲವಿಲ್ಲ ಈತ ಹುಡುಗನಾಗಿ ಕಂಡರೂ ವಯಸ್ಸು ಕಡಿಮೆಯಿಲ್ಲ; ಈತ ಅರೆಯುದವ, ಹರೆಯದವನಂತೆ. ಕೆಲಸ ಮಾಡುತ್ತಾನೆ; ಗಿಡ್ಡ ಪ್ರಾಣಿ ಇಷ್ಟೇ. ಊರಲ್ಲಿ ಇವನಿಗೆ ಪೂರ್ಣ ಸಂಬಳ ಕೊಡುತ್ತಾರೆ. ಆದರೂ ಸರಕಾರದಿಂದ ಪೂರ್ಣ ಸಂಬಳ ಕೊಡಬರದಿದ್ದರೆ ಅರ್ಧ ಸಂಬಳವನ್ನು ನಾನು ಕೈಯಿಂದ ಕೊಡುತ್ತೇನೆ. ಬೇರೆ ಆಳು ಸಿಗುವದಿಲ್ಲ” ಹೀಗೆ ಪಟೇಲರು ಅಧಿಕಾರಿಗಳಿಗೆ ಅರಿಕೆ ಮಾಡಿಕೊಂಡರು. “ನಾನು ಯಾರೆಂದು ತಿಳಿದಿ? ತೋರಿಸುತ್ತೇನೆ.” ಎಂಬದಾಗಿ ಅಧಿಕಾರಿಗಳು ಪಟೇಲರಿಗೆ ಜನರ ಮುಂದೆ ಹುಬ್ಬುಗಂಟಿಕ್ಕಿ ಗದ್ದರಿಸಿದರು. ಇದರಿಂದ ಪಟೇಲರಿಗೆ ಬಹಳ ಅಪಮಾನವೆನಿಸಿತು. “ಬಂದ ಬಂದ ಅಧಿಕಾರಿಗಳಿಗೆ ತಲೆಬಾಗಿಸಿ, ಕೈಜೋಡಿಸಿ ಪಡೆಯುವ ಅಪಮಾನ ಸಾಕು; ರಾಜೀನಾಮೆ ಕೊಡುವದು ಲೇಸು; ವರ್ಷಾವಧಿ ಸಿಗುವ ವೇತನ ಇತ್ತ ಕರಬಂದಾಯಿಗೆ ಸಾಲುವದಿಲ್ಲ; ಅತ್ತ ತಿಂಡಿ-ತಿನಸುಗಳಿಗೆ ಸಾಲುವದಿಲ್ಲ; ಎಲ್ಲರಿಂದಲೂ ಹೆದರಿಸಿಕೊಳ್ಳಬೇಕು; ವೇಳೆ-ಅವೇಳೆಗೆ ಅಧಿಕಾರಿಗಳ ಮಾರ್ಗ ಕಾಯುತ್ತಿರಬೇಕು; ಕಚೇರಿಗೆ ಹೋದರೆ ಪಟ್ಟೇವಾಲನಿಂದಲೂ ಹೆದರಿಸಿಕೊಳ್ಳಬೇಕು; ಊರಲ್ಲಿ ಬಂದರೆ ಪಟ್ಟೇವಾಲನ ಸರಬರಾಯಿ ಮಾಡಬೇಕು ಪಟೇಲಿಯ ಬಾಳ್ವೆ ಸಾಕು. ಪರಂಪರೆಯಿಂದ ನಡೆದುಬಂದಿದೆಯೆಂದು ಈ ವರೆಗೆ ಸಹಿಸಿದೆ, ಇನ್ನು ಈ ಪರ ಬೇಡ.” ಹೀಗೆಂಬ ವಿಚಾರ ಪಟೇಲರ ಮನಸ್ಸಿನಲ್ಲಿ ಭರಭರನೆ ಬಂದು ಅವರು ರಾಜಿನಾಮೆ ಕೊಡಲು ತಯಾರಾದರೆಂದೂ ಊರವರು ಪಟೇಲಿಯನ್ನು ಹಯಾತ ಪರ್ಯಂತವಾದರೂ ನಡಿಸಬೇಕೆಂದು ಪಟೇಲರಿಗೆ ಅರಿಕೆ ಮಾಡಿಕೊಂಡಿದ್ದರಿಂದ ರಾಜಿನಾಮೆಯ ವಿಚಾರ ರದ್ದಾಯಿತೆಂದೂ ತಿಳಿಯುತ್ತದೆ. ಪಟೇಲರ ಪರಿಸ್ಥಿತಿ ಈ ಪರಿಯಾಗಿದೆ.

⁂

ಶಾನಭೋಗರ ಪರಿ ಅದಕ್ಕಿಂತ ಹೊಸ ಪರಿ. ಇವರು ಸರಕಾರ ನೌಕರರು ಬ್ರಿಟಿಶ ಸರಕಾರದ ಅಧಿಕಾರಿಗಳ ಅಂತಸ್ತಿನಲ್ಲಿ ಇವರು ತೀರ ಕೆಳಗಿನವರು ಇವರ ಕೆಲಸಕ್ಕೆ ಪರಿಮಿತಿ ಇಲ್ಲ. ಪರಿಪರಿಯ ಕೆಲಸಗಳನ್ನು ಇವರು ಮಾಡಬೇಕು. ಇವರಿಗೆ ಯಾವದೇ ವಿಷಯ ಗೊತ್ತಿರುವದಿಲ್ಲ. ಆದರೆ ಎಲ್ಲ ವಿಷಯಗಳ ಗ್ರಹಿಕೆ ಇವರಿಂದಲೇ ಸರಕಾರಕ್ಕೆ ಆಗಬೇಕು. ಅಜ್ಞರೂ ಇವರೇ; ತಜ್ಞರು ಇವರೇ. ಇವರಿಗೆ ಸರಕಾರದ ಕೆಲಸ ಮಾಡಲು ಕೂಡಿಸಿಕೊಳ್ಳುವ ಚಾವಡಿಯಿಲ್ಲ; ಉಳಿಯಲಿಕ್ಕೆ ಮನೆಗಳು ಸಿಗುವದಿಲ್ಲ ಆದರೆ ಗ್ರಾಮಗಳಲ್ಲಿ ವಾಸ್ತವ್ಯ ಮಾಡಬೇಕು. ಚಾವಡಿಗಳಲ್ಲಿ ಗ್ರಾಮಕ್ಕೆ ಸಂಬಂಧಪಟ್ಟ ಪ್ರಕಟನೆಗಳನ್ನು ಹಚ್ಚಬೇಕು ಎಂಬ ನಿಯಮಗಳುಂಟು. ಚಾವಡಿಗಳನ್ನು ಬಾಡಿಗೆಗೆ ಕೊಂಡರೆ ಅವುಗಳ ಬಾಡಿಗೆ ಸರಕಾರದಿಂದ ಸಿಗುವದಿಲ್ಲ ಕೆಲಸ ಬಹಳವೆಂದು ಸಂಬಳ ಬಹಳ ಕೊಡುವ ಪ್ರಘಾತವಿಲ್ಲ. ಕೆಲಸ ಸ್ವಲ್ಪವಿದ್ದವರಿಗೆ ಮಾತ್ರ ಸಂಬಳ ಬಹಳ ಸಿಗುತ್ತದೆ. ಆದರಿಂದ ಗ್ರಾಮಾಧಿಕಾರಿಗಳಿಗೆ ಮರ್ಯಾದೆಯಿಂದಲೂ, ಪ್ರಾಮಾಣಿಕತೆಯಿಂದಲೂ ನಿರ್ವಾಹ ಮಾಡುವದು ಬಲು ಕಠಿಣವಾಗಿದೆ ಇತ್ತ ಪ್ರಸ್ತುತ ಕಾರಣಗಳ ಮೇಲೆ ಪ್ರಾಂತ ಸಾಹೇಬರು ಇವರಿಗೆ ಸಸ್ಪೆಂಡ ಮಾಡುತ್ತಾರೆ. ವರ್ಷಾವಧಿ ಕಳೆದರೂ ಸಸ್ಪೆಂಡಿನ ವಿಚಾರ ನಡೆಯುವದಿಲ್ಲ! ಗ್ರಾಮಗಳ

(೧ನೇ ಪುಟದ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಪ್ರಾರಂಭಕ್ಕೆ ೧-೨ ದಿನ ಚಳಿ ಕಡಿಮೆಯಾಗಿ ಮುಗಿಲಿನ ನೋಟಗಳಾಗಿದ್ದವು ಈಗ ಪುನಃ ಚಳಿಯ ಚಳಿ ಬೀಳುತ್ತಿದೆ. ನೆಗಡಿ-ಕೆಮ್ಮುಗಳ ಕಾಟವಂತೂ ಉಂಟೇ ಉಂಟು.

ಸೀಧಾ ಅಂಗಡಿಗಳಲ್ಲೀಗ ನಿಯಂತ್ರಿತ ತೆಂಗಿನ ಎಣ್ಣೆ ಸಿಗಲಾರಂಭಿಸಿದೆ. ಸೀಧಾ-ಚೀಟಿಯಲ್ಲಿ ಎಷ್ಟೇ ಜನರಿರಲಿ, ಚೀಟಿಯೊಂದಕ್ಕೆ ೩೦ ತೊಲೆ ಎಣ್ಣೆ ಕೊಡುತ್ತಾರೆ. ಇದೂ ೧೫ ದಿನಕ್ಕೊಂದಾವರ್ತಿ! ಈ ೩೦ ತೊಲೆಗೆ ೭| ಆಣೆ ಕೊಡಬೇಕು. ಇಷ್ಟಾಗಿಯೂ ಈ ಎಣ್ಣೆಯಲ್ಲಿ ನೆಲಗಡ್ಲೆಯ (ಶೇಂಗಾ) ಎಣ್ಣೆ ಬೆರಸಿದ ವಾಸನೆ ಬರುತ್ತದಾಗಿ ಜನರು ಹೇಳುತ್ತಾರೆ. ಶೇಂಗಾ ಎಣ್ಣೆಯ ದರ ಪೇಟೆಯಲ್ಲಿ ಹಂಡೆ ಒಂದಕ್ಕೆ (೩೪ ರತ್ತಲು) ೧೧|| ರೂ. ಉಂಟು. ಕೊಬ್ಬರಿ ಶುದ್ಧ ತೆಂಗಿನ ಎಣ್ಣೆಯ ಹಂಡೆ ಒಂದಕ್ಕೆ ರೂ. ೩-೨-೦ ಹೇಳುತ್ತಾರೆ. ಡಬ್ಬಿಯೊಳಗಿಂದ ೧ ಹಂಡೆ ತೆಂಗಿನೆಣ್ಣೆ ತೆಗೆದು ಮಾರಿ, ಆ ಎಣ್ಣೆಯ ಬದಲಿಗೆ ಶೇಂಗಾ ಎಣ್ಣೆ ಬೆರೆಸಿದ್ದರೆ ರೂ. ೧-೩-೦ ರಷ್ಟು ಮುನಾಫೆ ಸಿಗುತ್ತದೆ! ಈ ಬೆರಕೆಯನ್ನು ಯಾರು ಮಾಡುತ್ತಾರೆಂಬುದರ ಪತ್ತೆ ಹಚ್ಚುವದು ಅವಶ್ಯವುಂಟು.

ಕಳೆದ ಬುಧವಾರ ತಾ. ೨೩ಕ್ಕೆ ಜಿಲ್ಲಾ ಧ್ವಜ್ಞರ ಅಪ್ಪಣೆಯಂತೆ ಈ ಊರಲ್ಲಿ ನೇತಾಜಿ ಸುಭಾಷಚಂದ್ರ ಬೋಸರ ಜಯಂತೀ-ಉತ್ಸವವಾಯಿತು. ಸಂಜೆಯ ಕಡೆಗೆ ನೇತಾಜಿಯವರ ಛಾಯಾಚಿತ್ರದ ಮೆರವಣಿಗೆಯಾಯಿತು. ಮೆರವಣಿಗೆಯ ಮಾರ್ಗದ ಮೇಲೆಲ್ಲ ತಳಿರು-ತೋರಣಗಳು ಕಂಗೊಳಿಸುತ್ತಿದ್ದವು. ಮೆರವಣಿಗೆಯು ಗಾಂಧಿ-ಚೌಕಿಗೆ ಬಂದಮೇಲೆ ಅಲ್ಲಿ ಸಭೆಯಾಗಿ, ನೇತಾಜಿಯವರ ಜೀವನ ಚರಿತ್ರೆಯನ್ನೂ ಅವರ ಅಪ್ರತಿಮ ಸಾಹಸ, ತ್ಯಾಗ, ಸ್ವಾತಂತ್ರ್ಯ ನಿಷ್ಠೆಗಳನ್ನೂ ತಿಳಿಸಿ ಹೇಳುವ ಭಾಷಣಗಳಾದವು. ಗಾಂಧಿ-ಚೌಕಿನಲ್ಲಿ ಆಗ ದೀಪಗಳ ತೋರಣಗಳು ರಾರಾಜಿಸುತ್ತಿದ್ದವು.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ ಸುಭಾಸ-ಜಯಂತಿಯ ದಿನ ಪ್ರಭಾತ-ಫೇರಿ, ಮೆರವಣಿಗೆ, ರಾ|| ಗೋಪಿಯವರ ಅಧ್ಯಕ್ಷತೆಯಲ್ಲಿ ಸಭೆ, ಸುಭಾಸರ ಗುಣ-ಗೌರವಗಳ ಕೀರ್ತನೆ ಮೊದಲಾದ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತೆಂದು ಸುದ್ದಿ ಬಂದಿದೆ.

ಮೊನ್ನೆ ಶನಿವಾರ ಸ್ವಾತಂತ್ರ್ಯ-ದಿನದ ನಿಮಿತ್ತ ಮುಂಜಾನೆ, ಪ್ರಭಾತ-ಫೇರಿ ಧ್ವಜವಂದನೆಗಳೂ ಸಂಜೆ ಸಭೆ, ಸ್ವಾತಂತ್ರ್ಯಪ್ರತಿಜ್ಞೆಯ ಸ್ವೀಕಾರಗಳೂ ನಡೆದವು.

ಉಪ್ಪಿನಪಟ್ಟಣ ಬದಿಯಲ್ಲಿ ಹುಲಿಗಳ ಕಾಟ ಬಹಳವಾಗಿದೆ ಈಗೆರಡು ತಿಂಗಳಿಂದ ಹುಲಿ-ಬಾಯಿಗೆ ಬಿದ್ದ ಎಮ್ಮೆ-ಆಕಳುಗಳ ಬೆಲೆ ರೂ. ೧೦೦೦ಕ್ಕೆ ಮಿಕ್ಕುತ್ತಿದೆ. ಜಿಲ್ಲಾಧಿಕಾರಿಗಳು ಯಾವನೊಬ್ಬ ನುರಿತ ಬೇಟೆಗಾರನನ್ನು ನೇಮಿಸಿ ಹುಲಿಬಾಧೆಯಿಂದ ಹಳ್ಳಿಗರನ್ನು ಕಾಯುವ ವ್ಯವಸ್ಥೆ ಮಾಡಬಾರದೇ?

ಹಳದೀಪುರ— (ತಾ. ೧೮-೧-೪೬) ಮೊನ್ನೆ ಬುಧವಾರ ಉಪ್ಪಿನ ಗ್ರಾಮದ ತೇರು ಆಯಿತು. ಜಾತ್ರೆಯಲ್ಲಿ ಗಡಗಡೆ ಆಟ ಕಟ್ಟಿದ್ದರು. ಈ ಸೀಮೆಯ ಊರ ಪೋಲೀಸ ಪಟೇಲರ ಮುಂದೆಯೇ ಈ ಆಟ ನಡೆದಿತ್ತು. ಆದರೆ ಅವರು ಅದನ್ನು ನಿಲ್ಲಿಸಲು ಎಳ್ಳಷ್ಟೂ ಪ್ರಯತ್ನಿಸಲಿಲ್ಲ! ಆಟ ಹಚ್ಚಿದವರು ಅವರಿಗೆ ತಮ್ಮ ಬಗಲೊಳಗೆ ಹಾಕಿಕೊಂಡಿದ್ದರೇ ನಿನೋ! ಕೊನೆಗೆ ದೇವಸ್ಥಾನದ ಚಾಲಕರು ಬಂದು ಗಡಗಡೆಯವರಿಗೆ ಓಡಿಸಿದರು. ಈಗ ಆ ಗಡಗಡೆಯವರು ಧರ್ಮಶಾಲೆಗೆ ಹೋಗಿ ಕಳಪ್ರಾರಿದ್ದಾರೆ. ಧರ್ಮಶಾಲೆಯಲ್ಲಿ ಈಗ ಕೋಳಿಜೂಜುಗಳೂ ನಡೆದಿವೆ. ನೂರಾರು, ಸಾವಿರಾರು ಜನರು ಕೂಡುತ್ತಾರೆ ಮುರೂರ, ಕಲ್ಲಬ್ಬೆ, ಹೆಗಡೆ, ಮಾಣಿಕಿ ಮುಂತಾದ ದೂರದೂರದ ಹಳ್ಳಿಗಳಿಂದಲೂ ಜನರು ಬರುತ್ತಾರೆ. ನಿನ್ನೆ ಓರ್ವನು ಈ ಜೂಜಾಗಲ್ಲಿ ರೂ. ೧೦೦೦ ಕಳಕೊಂಡನೆಂದು ಹೇಳುತ್ತಾರೆ! ಕೋಳಿ-ಜೂಜಿನ ಕಾಲಕ್ಕೆ ಬೆಳಕು ಮಾಡಲು ಮತ್ತಿನ ದೀವಿಗೆಗಳನ್ನು ಹೊತ್ತಿಸುತ್ತಾರೆ ಆದ್ದರಿಂದ ಮತ್ತಿಗೆ ಬಹಳ ಬೆಲೆ ಬಂದಿದೆಯಂತೆ. ಹಣ್ಣದೊಂದು ಜೋಡಿಗೆ ೨ ಆಣೆಯವರೆಗೆ ಬೆಲೆ ಕೊಟ್ಟು ಜೂಜುಗಾರರು ಕೊಂಡುಕೊಳ್ಳುತ್ತಾರಂತೆ. ಇತ್ತೀಚೆ ವಾರಗಳಲ್ಲಿ ಹೊಸಾಕುಳ, ಇಡಗುಂಜಿ, ಧಾರೇಶ್ವರ ಊರುಗಳ ಜಾತ್ರೆಗಳು ನೇರುವವು. ಅಲ್ಲೂ ಕೂಡ ಬಗೆಬಗೆಯ ಜೂಗಾರಾಟಗಳು ನಡೆಯುತ್ತವೆ. ಇವುಗಳನ್ನು ನಿಲ್ಲಿಸಲು ಸ್ಥಾನಿಕ ಪೋಲೀಸರಿಂದ ಸಾಧ್ಯವಾಗದಿಲ್ಲ. ಜಿಲ್ಹಾ ಪೋಲೀಸ ಸಾಹೇಬರು ಸ್ವತಃ ಆಗ ಈ ಕಡೆ ಸಂಚಾರವು ಇಟ್ಟು ಪ್ರಯತ್ನ ಮಾಡಿದರೆ ಮಾತ್ರ ಅದು ನಿಲ್ಲುವಂತುಂಟು. ಜಿಲ್ಲಾ ಪೋಲೀಸ ಸಾಹೇಬರು ಆ ಪ್ರಯತ್ನ ಮಾಡ್ಯಾರೆಂದು ನಿರೀಕ್ಷಿಸಬಹುದೇ?

ಇತ್ತಿಂದ ಹೆಬ್ಬನಕೇರಿಗೆ ಹೋಗುವ ರಸ್ತೆಯಾಚ್ಛಿರುವ ಗೋಟಿನಲ್ಲಿ ಸಂಕ ತೀರ ಜೀರ್ಣವಾಗಿ ಹೋಗಿದೆ. ಅದರಿಂದ ಜನರಿಗೆ ತಿರುಗಾಡಲು ಬಹಳ ತೊಂದರೆಯಾಗುತ್ತದೆ. ಶಾಲೆಗೆ ಹೋಗುವ ಮಕ್ಕಳಂತೂ ಶಾಲೆ ಬಿಟ್ಟು ಮನೆಯಲ್ಲೇ ಕೂಡ್ರುವ ಪ್ರಸಂಗ ಬಂದಿದೆ. ಜೀರ್ಣಸಂಕವು ಎಷ್ಟರೋ ದೇವರೇ ಬಲ್ಲ!

ಊರಲ್ಲೀಗ ಹೊಸ ಸೀಧಾ-ಚೀಟಿಗಳನ್ನು ಹಂಚುವರಂತೆ. ಹಳೆಯ ಚೀಟಿಗಳನ್ನು ತಕ್ಕೊಂಡು ಹೋಗುತ್ತಾರೆ ಅದರಿಂದ ಹೊಸ ಚೀಟಿಗಳು ಸಿಗುವ ವರೆಗೆ ಸೀಧಾ ಸಿಗುವದು ಕಷ್ಟ! ಅಷ್ಟಕ್ಕೇ ಸೀಧಾ ಚೌಕಿಗಳು ಅಂಗಡಿಯವರ ಕೈಯ್ತ ಉಳಿಯುವದರಿಂದ ಸಕ್ಕರೆ ಮುಂತಾದ ಜಾತ್ರೆಯಲ್ಲಿ ಮಾರಾಯ ವ್ಯಾಪಾರವರಿಗೆ ಬೇಕಷ್ಟು ಸಕ್ಕರೆ (ಕಳ್ಳಪೇಟೆಯ ದರದಿಂದ) ಪೂರೈಸಲು ಅನುಕೂಲವಾಗಿದೆ.

ಹೊನ್ನಾವರ— (ತಾ. ೨೪-೧-೪೬) ಈಚೆರ ಕೋರದಲ್ಲೂ ಸರಾಯಿಯ ವ್ಯಾಪಾರ ಮೇರೆದಪ್ಪಿದೆ. ಅಬಕಾರಿ ಅಧಿಕಾರಿಗಳು ಪುನಃ ಪುನಃ ಹಾಗಿದಿಟ್ಟ ಸರಾಯಿ ಹುಡುಕಿ ತೆಗೆದು ನಾಶಗೊಳಿಸುತ್ತಿದ್ದರೂ ಕುಡುಕರಿಗೆ ಬೇಕಷ್ಟು ಸರಾಯಿ ಸಿಗುತ್ತದೆ! ಸರಾಯಿ ಕುಡಿದು ರಾತ್ರಿಯ ಮೇಲೆ ಸಹ ಗೊಂದಲ ಹಾಕುವ ಜನರು ದಿನಾಲೂ ಎಂಬಂತೆ ಕಣ್ಣಿಗೆ ಬೀಳುತ್ತಾರೆ. ಅದರಿಂದ ರಸ್ತೆಯ ಮೇಲೆ ತಿರುಗುವದು ಒಮ್ಮೊಮ್ಮೆ ಭೀತಿಪ್ರದವಾಗುತ್ತಿದೆ.

ಇದೇ ಕಳೆದ ತಾ ೨೦ಕ್ಕೆ ಕ್ರೈಸ್ತ ಬಾಂಧವರ ಹಬ್ಬವಾಯಿತು. ಅಂದಿನಿಂದಂತೂ ಸರಾಯಿಯ ಹಾವಳಿ ಹೆಚ್ಚಾಗಿದೆ. ಆದರೂ ಪೋಲೀಸರು ಈ ಕುಡುಕರ ಸಮಾಚಾರ ತಕ್ಕೊಳ್ಳುವದಿಲ್ಲ! ಯಾರಾದರೂ ರಾತ್ರಿ ಕಾಲದಲ್ಲಿ ಇವರ ಸಹಾಯ ಬೇಡಹೋದರೆ ಅವರು ಅಲ್ಲಿ ಇರುವದೂ ಇಲ್ಲ ಇತ್ಯಾದಿ ಕಾಸರಕೋಡ ಗ್ರಾ. ಸು. ಕ. ಯುವರೊಬ್ಬರು ಬರೆಯುತ್ತಾರೆ.

ಶಿರಾಲಿ— (ತಾ. ೨೫-೧-೪೬) ೩ ದಿನ ಜಾತ್ರೆಯಾಯಿತು. ಈಗ ಚಳಿ ಬೀಳುತ್ತಿದೆ ಊರಲ್ಲಿ ಆರೋಗ್ಯ ನೆಟ್ಟಗಿಲ್ಲ.

"ಬಿಡ್ಸ" ಎಂಬ ಜುಗಾರಾಟ ಪುನಃ ತಲೆಯೆತ್ತಿದೆ. ಅಧಿಕಾರಿಗಳು ಮನಸ್ಸುಗೊಟ್ಟು ಈ ಮಾರಿಯನ್ನು ನಿರ್ಮೂಲಗೊಳಿಸಬೇಕಾಗಿ ಇದೆ.

ಇಲ್ಲಿಂದ ಹೇರಳ ಸಕ್ಕರೆ ಕಳ್ಳತನದಿಂದ ಬೇರೂರಿಗೆ ಹೋಗುತ್ತಿದೆಯಂತೆ. ಊರವರಿಗೆ ಸಿಗುವದು ಕಷ್ಟವಾಗಿದೆ

ಹುಂಡಿಯ ಛತ್ರದ ಲೆಕ್ಕ ಈ ೨-೩ ವರ್ಷಗಳಿಂದ ಪ್ರಕಟವಾಗುವದಿಲ್ಲ. ಯಾಕೆ?

ಛತ್ರದ ಶ್ರೀ ಹನುಮಂತ ದೇವರ ಗುಡಿಯ ಬಾಗಿಲಲ್ಲೇ ವಿಮಾನ ಬುಟ್ಟಿಗಳನ್ನಿಟ್ಟು ವಿಮಾನುಗಾರರು ವಿಮಾನ ಮಾಡುತ್ತಿದ್ದುದರಿಂದ ಗುಡಿಗೆ ಹೋಗ-ಬರುವವರಿಗೆ ಬಹಳ ತೊಂದರೆಯಾಗುತ್ತಿದೆ. ಜನಮಾನ ಕೆಡುತ್ತಿದೆ. ಈ ವ್ಯಾಪಾರಕ್ಕೆ ಊರ ಹೊರಭಾಗದಲ್ಲಿ ನಿರ್ದಿಷ್ಟ ಸ್ಥಾನ ನೇಮಿಸಿ ಕೊಡುವದು ಅವಶ್ಯವುಂಟು

ಭಟಕಳ— (ತಾ ೨೫-೧-೪೬) ನಗರ ಸಭೆಯ ಸಭಾಸದರಾದ ರಾ|| ದೇವಿದಾಸ ಪೈ ಇವರು ನಿನ್ನೆ ಬೆಳಿಗ್ಗೆ ಎದ್ದು ಚಹಾ ಕುಡಿದು ಕಚೇರಿಗೆ ಹೋಗಹೊರಟಿದ್ದರು. ಆಗ ಹೊಟ್ಟೆಯಲ್ಲಿ ನೋಯುತ್ತದೆಂದು ತುಸು ಒರಗಿದರು. ಒರಗಿದವರೇ ಗತಪ್ರಾಣರಾದರು!

ಉಗ್ರಾಣದಿಂದ ಸೀಧಾ ಅಂಗಡಿಗಳಿಗೆ ಗೋದಿ ಕೊಡುವದರಲ್ಲಿ ತತ್ತರಾಟವಾಗುತ್ತದೆಂದು ಅಂಗಡಿಕಾರರು ಹೇಳುತ್ತಾರೆ.

ಸಿದ್ದಾಪುರ— (ತಾ. ೨೩-೧-೪೬) ಇಂದು ಇಲ್ಲಿ ನೇತಾಜಿ ಸುಭಾಸರ ಜಯಂತಿ-ಉತ್ಸವವಾಯಿತು. ಪ್ರಭಾತ-ಫೇರಿ, ಧ್ವಜವಂದನೆ, ಮೆರವಣಿಗೆ ರಾ|| ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಸುಭಾಸರ ಗುಣಗಾನ ವಗೈರೆ ಕಾರ್ಯಕ್ರಮ ನಡೆಯಿತು.

ಹತ್ತಿಕಾಳು ಸಿಗುವದು ಕಷ್ಟ. ಕಳ್ಳ ಪೇಟೆಯಲ್ಲಿ ಹಿಂದೆ ರೂ. ೨೪-೨೫ಕ್ಕೆ ೧ ಚೀಲದಂತೆ ಸಿಗುತ್ತಿತ್ತು. ಈಗ ಅಲ್ಲಿ ಚೀಲ ೧ರ ದರ ರೂ. ೩೫-೩೬ ಆಗಿದೆಯಂತೆ.

ಪ್ರಾಂತಿಕ ಎಸೆಂಬ್ಲಿಯ ಚುನಾವಣೆಗೆ ಘಟ್ಟದ ಮೇಲಿನ ಯಾರಾದರೂ ಕಾಂಗ್ರೆಸ ಪರವಾಗಿ ಆರಿಸಲ್ಪಡಬೇಕೆಂದು ಕೆಲವರು ಅಪೇಕ್ಷಿಸುತ್ತಾರೆ.

ಕನ್ನಡ ಶಾಲೆಯ ಜೀರ್ಣೋದ್ಧಾರ ಮಾಡಿಸುವದಕ್ಕೆ ಒಂದು ಕಮಿಟಿ ನೇಮಿಸಲ್ಪಟ್ಟಿದೆ. ಇಲ್ಲೊಂದು ಹಾಯಸ್ಕೂಲ ಮಾಡಬೇಕೆಂದೂ ಬೋರ್ಡಿನವರ ವಿಚಾರವುಂಟು. ಎರಡೂ ಕಾರ್ಯಗಳಿಗೆ ೧ ಲಕ್ಷ ರೂ. ತಗಲುವದೆಂದು ಅವರು ಲೆಕ್ಕ ಹಾಕಿ ಊರಲ್ಲಿ ವಂತಿಗೆ ಕೂಡಿಸುತ್ತಿದ್ದಾರೆ.

ಹೇರೂರ ದೊಡ್ಡಿಯಲ್ಲಿ ಬಿದ್ದ ದನಗಳಿಗೆ ಹುಲ್ಲು ಹಾಕುವದಿಲ್ಲವಂತೆ. ದೊಡ್ಡಿಯ ರಕ್ಷಕನು "ಜಾಮಾಫೀ" ಮಾತ್ರ ಒಂದು ಪೈ ಸಹ ಬಿಡದೆ ವಸೂಲ ಮಾಡುತ್ತಾನೆ.

ಹೆಗ್ಗರಣಿ ಕನ್ನಡ ಶಾಲೆಯ ಹುಡುಗರ ಆಟ-ಪಾಠಗಳನ್ನು ನೋಡಿ ಸಂತಸಗೊಂಡ ಶಾಲಾಪಂಚರು ಅವರಿಗೆ ೨೫ ರೂ. ಗಳ ಆಟ-ಪುಸ್ತಕಗಳನ್ನು ಹಂಚಿದರಂತೆ.

ಯಲ್ಲಾಪುರ— (ತಾ. ೨೫-೧-೪೬) ಜಿಲ್ಲಾಧಿಕಾರಿಯಾದ ಶ್ರೀ ನಂಜಪ್ಪನವರು ವರ್ಗವಾಗಿ ಹೋಗುವಾಗ ತಾ. ೨೨ನೇಗೆ ಇಲ್ಲಿಯ ಮಂಗಲ ಕಂಟ್ರಾಕ್ಟರರಾದ ರಾ|| ವೈದ್ಯ, ರಾ|| ಮಂತ್ರಿ ಮೊದಲಾದವರು ಚಹಾಪಾನ-ಛಾಯಾಚಿತ್ರ ಮೊದಲಾದ ಸಂಭ್ರಮಗಳನ್ನು ಏರ್ಪಡಿಸಿ ಶ್ರೀ ನಂಜಪ್ಪನವರನ್ನು ಬೀಳ್ಕೊಟ್ಟರು. ಊರ-ಪ್ರಮುಖರಾದ ರಾ|| ಕುದರೀಯವರ ರಾ|| ವಿಜಯಶಾಲಿಗಳಾದ ಮಂತ್ರಿಯವರೂ ಶ್ರೀ ನಂಜಪ್ಪನವರಿಗೆ ಊರ-ಪರ್ವದಿಂದ ಸತ್ಕಾರಗಳನ್ನು ಸಲ್ಲಿಸಿ ಊರವರನ್ನು ಕೃತಾರ್ಥ ಮಾಡಿದರು. ಮರುದಿನ ನೇತಾಜಿ-ಸುಭಾಸರ ೫೦ನೇ ವರ್ಧಂತಿ-ಉತ್ಸವ. ಊರ-ಪ್ರಮುಖರಾದ ರಾ|| ಕುದರೀಯವರಾಗಲಿ ರಾ|| ವಿಜಯಶಾಲಿಗಳಾದ ಮಂತ್ರಿಯವರಾಗಲಿ ವೇ|| ಮಾಣಿ ಭಿಕ್ಕು ಭಟ್ಟರಾಗಲಿ ಈ ಸಮಾರಂಭದಲ್ಲಿ ಊರವರ ಪ್ರಮುಖರಾಗಿ ರಾಷ್ಟ್ರ ಸೇವಾದಲದ ಉದ್ಘಾಟನಾ ಸಮಾರಂಭವನ್ನು ನೇತಾಜಿಯವರ ಹುಟ್ಟುಹಬ್ಬದ ಪ್ರೀತ್ಯರ್ಥ ನೆರವೇರಿಸಬೇಕಾಗಿ ಸೇವಾದಲದ ನಾಯಕರಾದ ರಾ|| ಪ್ರಭುರವರು ವಿನಂತಿ ಮಾಡಿಕೊಂಡರು. ಆದರೆ ಒಬ್ಬರಾಗಲಿ ಈ ಸಮಾರಂಭದಲ್ಲಿ ಸೇರುವ ಧೈರ್ಯವಾಗಲಿಲ್ಲ. ಹೀಗಾಗಿ ಮುಂಜಾನೆಯ ಕಾರ್ಯಕ್ರಮ ನಡೆಯಲಿಲ್ಲ ಅಪರಾಹ್ನ ೪ ಘಂಟೆಗೆ ರಾ|| ಅನಂತರಾಮ ಭಟ್ಟರು ಬಂದ ಬಳಿಕ ೪ ಘಂಟೆ ಸುಮಾರಿಗೆ ಅವರ ಅಧ್ಯಕ್ಷತೆಯಲ್ಲಿ ನೇತಾಜಿಯವರ ಅಲಂಕೃತ ಛಾಯಾಚಿತ್ರದ ಮೆರವಣಿಗೆ ಸಂಭ್ರಮದಿಂದ ನಡೆದು ಅಝಾದ-ಹಿಂದ ಬೈಲಲ್ಲಿ ಕಟ್ಟಿದ ಸಭಾಮಂಟಪದಲ್ಲಿ ಬಹು ದೊಡ್ಡ ಸಭೆ ಸೇವಾ ಸಮಾರಂಭ ಶಾಂತವಾಗಿ ನೆರವೇರಿತು. ಇಷ್ಟು ದೊಡ್ಡ ಸಭೆ ಈ ಊರಲ್ಲಿ ಸೇರಿದ್ದು ಇತ್ತಲಾಗಿ ಇದೇ ಮೊದಲನೆ ಸಲ. ಸಭೆಯಲ್ಲಿ ರಾ|| ಬಾಳಿಗ, ರಾ|| ಪದ್ಮನಾಭ ಪ್ರಭು ಮತ್ತು ಅಧ್ಯಕ್ಷರು ನೇತಾಜಿಯವರ ಗುಣವರ್ಣನೆ ಮಾಡಿದ ಬಳಿಕ ರಾಷ್ಟ್ರಘೋಷದೊಳಗೆ ಸಭಾಕಾರ್ಯ ಮುಕ್ತಾಯ ಹೊಂದಿತು.

ಜಾಹೀರ ವಿನಂತಿ.

ಕುಮಟಾ ಶ್ರೀ ರಾಮೇಶ್ವರ ಕಾಮಾಕ್ಷಿ ಕಾಲಭೈರವ ದೇವಸ್ಥಾನದಿಂದ- ಶ್ರೀ ದೇವರ ಸಮಸ್ತ ಭಕ್ತರಲ್ಲಿ ವಿನಂತಿ.

ಶ್ರೀ ರಾಮೇಶ್ವರ-ಕಾಲಭೈರವ ದೇವರ ಗುಡಿಯ ಜೀರ್ಣೋದ್ಧಾರ ಹಾಗೂ ಭೋಜನಶಾಲೆ-ಚಂದ್ರಶಾಲೆಗಳ ಕಟ್ಟೋಣಗಳ ಕಾರ್ಯವನ್ನು, ಸದ್ರಿ ದೇವರ ಪ್ರತಿಷ್ಠಾ ಕಾರ್ಯವನ್ನೂ ಈ ವರ್ಷ ನೆರವೇರಿಸಬೇಕಾಗಿ ನಿಶ್ಚಯಿಸಿದ್ದು, ಈ ಕಾರ್ಯಕ್ಕೆ ಬೇಕಾಗುವ ಹಣದ ಅನುಕೂಲತೆಗಾಗಿ, ಶ್ರೀ ದೇವರ ಅಪ್ಪಣೆಯಾದಂತೆ, ವರ್ಗಣಿ ಕೂಡಿಸಲು ಶ್ರೀ|| ಶ್ರೀಧರ ಪಾಂಡುರಂಗ ಬಾಳಿಗ (ಕಮಿಟಿಯ ಅಧ್ಯಕ್ಷ) ಹಾಗೂ ಶ್ರೀ|| ದಾಮೋದರ ಅಚ್ಯುತ ಶೆಟ್ಟಿ (ಟ್ರಸ್ಟಿದಾರ) ಇವರು ಬೇಗನೇ ಮುಂಬಯಿಯತ್ತ ಸಂಚರಿಸುವವರಿದ್ದಾರೆ. ಶ್ರೀ ದೇವರ ಭಕ್ತ ಜನರು ಶಕ್ತಿ ಮೀರಿ ಧನಸಹಾಯ ಮಾಡಿ ಕೃತಾರ್ಥರಾಗಬೇಕಾಗಿಯೂ ಟಪಾಲು ದ್ವಾರಾ ವಂತಿಗೆ ಕಳಿಸುವವರು ಶ್ರೀ|| ಗೋವಿಂದ ವೆಂಕಪ್ಪ ಶೆಟ್ಟಿ ಕುಮಟಾ (ಮೋಕ್ತೇಸರ) ಇವರ ವಿಳಾಸಕ್ಕೆ ಕಳಿಸಬೇಕಾಗಿಯೂ ಅರುಹುತ್ತೇವೆ.

ಕುಮಟಾ, ತಾ ೨೬-೧-೧೯೪೬.

ದಾಮೋದರ ಅಚ್ಯುತ ಶೆಟ್ಟಿ, ಹೆಗಡೆ.
ಗೋವಿಂದ ವೆಂಕಪ್ಪ ಶೆಟ್ಟಿ, ಕುಮಟಾ.

ಆಜಾದ ಹಿಂದ.

ಸುಭಾಷ ಸೇನೆಯ ತ್ಯಾಗ, ಶೌರ್ಯ, ಸಾಹಸಯುಕ್ತ ರೋಮಾಂಚಕಾರಿ ಸಚಿತ್ರ-ಇತಿಹಾಸ.

ನೇತಾಜಿ ಸುಭಾಷ, ಕ್ಯಾ. ಲಕ್ಷ್ಮೀ, ರಾಸಬಿಹಾರಿ, ಶಹಾನವಾಜ, ಧಿಲ್ಲೋ, ಸೆಹಗಲರ ಜೀವನ ಸಾರಸ, ಸಮರಗೀತೆ, ಕೆಂಪುಕೋಟೆ ವಿಚಾರಣೆ, ಭೂಲಾಭಾಯಿ ವಾದ ಇವನ್ನೊಳಗೊಂಡ ತಿದ್ದಿ ಬೆಳಸಿದ ಎರಡನೇ ಆವೃತ್ತಿ.

ಬೆಲೆ ೧ ರೂ. (ವಿ. ಪಿ. ಖರ್ಚ ಬೇರೆ)

೧ ೪-೦ ಮನಿಯಾರ್ಡರು ಮಾಡುವವರಿಗೆ ರಜಿಸ್ಟರ ಮೂಲಕ ಪುಸ್ತಕ ರವಾನಿಸುತ್ತೇವೆ.

ಸಮಾಜ ಪುಸ್ತಕಾಲಯ, ಧಾರವಾಡ.

ಜಿಲ್ಲಾ ಸಮಾಚಾರ.

ಕುಮಟಾ— ಒಬ್ಬರು ತಿಳಿಸುತ್ತಾರೆ - ನಾಲು ಕಟ್ಟು, ಕಡತೋಕಾ ಗ್ರಾಮಗಳಲ್ಲಿ ಖಾರ ಬೆಳೆ ಪೂರ್ಣ ಕೆಟ್ಟಿದೆ. ಬೆಳೆಗೆ ಬೇಕಾದ ನೀರಿಗೆ ಬರ ಬಿದ್ದಿದೆ. ಹೊಳೆಯಲ್ಲಿ ಬೇಕಷ್ಟು ನೀರಿಲ್ಲ. ಇದ್ದ ನೀರೂ ಉಪ್ಪಾಗಿದೆ. ಬಡಗಣ ಹೊಳೆಯ ಸಂಕಕ್ಕೆ ಇಂಜಿನಿಯರ ಇಲಾಖೆಯವರು ರೂ ೯೦೦೦ ಖರ್ಚು ಮಾಡಿ ಬಾಗಿಲುಗಳನ್ನು ಇಟ್ಟರು. ಈ ಬಾಗಿಲುಗಳನ್ನು ಮುಚ್ಚಿದರೆ ಹೊರಗಿನ ಉಪ್ಪು ನೀರು ಒಳಗೆ ಬರಲಿಕ್ಕಿಲ್ಲೆಂದೂ, ಒಳಗಿನ ಸೀ ನೀರು ಹೊರಗೆ ಹೋಗಲಿಕ್ಕಿಲ್ಲೆಂದೂ ಹೇಳಿದರು. ಆದರೆ ಬಾಗಿಲು ಹಾಕಿದಾಗ್ಯೂ ಒಳಗಿನ ನೀರು ಹೊರಹೋಗುತ್ತದೆ, ಹೊರಗಿನ ಉಪ್ಪು ನೀರು ಒಳಸೇರುತ್ತದೆ! ಪ್ರಾಂತಾಧಿಪತಿಗಳ ಸಲಹೆಗಾರರಾದ ಸರ್ ಸ್ಲ್ಯಾಟರವರು ಈ ಜಿಲ್ಲೆಯಲ್ಲಿ ಸಂಚಾರಕ್ಕೆ ಬಂದಾಗ ಇಂಜಿನಿಯರ ಇಲಾಖೆಯು ಈ ಕೌಶಲ್ಯ ಚನ್ನಾಗಿ ನೋಡಿಕೊಂಡು ಹೋಗಿದ್ದರು. ಆ ಮಾತಿಗೆ ಈಗೊಂದು ವರುಷವಾಯಿತು. ಆದರೆ ದುರುಸ್ತಿಯ ವ್ಯವಸ್ಥೆ ಇವತ್ತೂ ಆಗಿಲ್ಲ. ಬಾಗಿಲುಗಳನ್ನೇನೋ ಮುಚ್ಚಿದರು. ಆದರೆ ಅವುಗಳಿಂದ ನೀರಿನ ಹರಿದಾಟಕ್ಕೆ ಪ್ರತಿಬಂಧವಾಗುವದಿಲ್ಲ. ಇಂಜಿನಿಯರ ಇಲಾಖೆಯವರಿಗೆ ಅದರ ಚಿಂತೆಯಿಲ್ಲ, ಅವರ ಮೇಲೆ ಯಾವ ಹೊಣೆಯೂ ಇಲ್ಲ! ಸಂಕಕ್ಕೆ ಈಗ ಕೂಡ್ರಿಸಿದ ಬಾಗಿಲುಗಳಿಗೆ ರೂ ೯೦೦೦ ವೆಚ್ಚ ತಗಲಿತೆಂಬ ಮಾತನ್ನು ಜನಸಾಮಾನ್ಯರು ನಂಬುವದಿಲ್ಲ. ಈ ಬಾಗಿಲುಗಳ ದುರುಸ್ತಿ ಮಾಡಿಸಲಿಕ್ಕೆ ಈಗ ಪುನಃ ೩-೪ ಸಾವಿರರೂ ಬೇಕೆಂತೆ. ಇತ್ತಲಾಗಿ ಒಂದು ಸಹಕಾರಿ ಸಂಘ ಮಾಡಿ ಈ ಬಾಗಿಲುಗಳ ಕಾರುಬಾರು ಅವರಿಗೊಪ್ಪಿಸಿದ್ದಾರೆ. ಬಾಗಿಲುಗಳು ಭದ್ರವಾಗುಳಿದಿದ್ದರೆ ಸುಮಾರು ೨೦೦ ಎಕರೆ ಹೊಲಕ್ಕೆ ನೀರಿನ ಪುರವಠೆಯಾಗಿ ಬೆಳೆ ಬರುತ್ತಿತ್ತು. ಇದೀಗ ಒಣಗುತ್ತಿರುವ ಬೆಳೆಯನ್ನು ನೋಡಲಾಗದೆ ರೈತರು ಹೊಳೆಯಿಂದ ನೀರು ತೋಡಿಹಾಕುತ್ತಿದ್ದಾರೆ. ಆದರೂ ಬೆಳೆ ಒಣಗುತ್ತಿದೆ. ೪೦೦ ಎಕರೆಗಳಷ್ಟು ಹೊಲಗಳು ಹಾಳುಸುರಿಯುತ್ತಿವೆ. ಸಂಕದ ಬಾಗಿಲುಗಳನ್ನು ಮಾಡಿಕೊಟ್ಟ ಬಗ್ಗೆ ಹೊಳೆಯಂಚಿನ ಎಕರೆಗಕ್ಕೆ ರೂ ೧ ರಂತೆ ಹೆಚ್ಚಿಗೆ ಸಾರಾಘ ತೆರಲು ರೈತರು ಒಪ್ಪಿದ್ದುಂಟು. ಆದರೂ ಈಗ ಮೇಲಿನ ಗತಿಯಾಗಿದೆ. ವೇವೆಲ ದೊರೆಗಳಿಗೆ ಬೇಸಾಯದ ಮೇಲೂ ದನಗಳ ಮೇಲೂ ಬಹಳ ಮಮತೆಯಂತೆ. ಸರಕಾರಕ್ಕಂತೂ ಬೇಸಾಯೋತ್ಪಾದನದ್ದೇ ಹಂಬಲ. ಆದರೆ ಬೇಸಾಯಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವ ಬುದ್ಧಿ ಯಾರಿಗೂ ಹುಟ್ಟುವದಿಲ್ಲ! ತಂತಾನೇ ಅದರ ಉದ್ಧಾರವಾಗಬೇಕೆಂದು ಅವರ ಮನೀಷೆಯೋ ಏನೋ! ಇತ್ಯಾದಿ

ಹೊನ್ನಾವರ— (ತಾ ೨೫-೧-೪೬) ಮಂಕಿಯಲ್ಲಿ ಮೈಲಿಯ ಹಾವಳಿ ಬಹಳವಾಗಿದೆ. ಜನರು ಹೌಹಾರಿ ಹೋಗಿದ್ದಾರೆ. ಭಂಡಸಾಲೆ ಕೇರಿಯಲ್ಲಿ ನವಾಯತರವೇ ವಸತಿ ಇದ್ದು ಅವರ ೧೦೦-೧೫೦ ಮನೆಗಳಿವೆ. ಈಗಾಗಲೇ ಆ ಕೇರಿಯಲ್ಲಿ ೧೦ಕ್ಕೂ ಮಿಕ್ಕಿ ಮರಣಗಳಾಗಿವೆ. ತೀರಿಕೊಂಡವರು ಹೆಚ್ಚಾಗಿ ಮಕ್ಕಳು. ಕಬರಸ್ತಾನದಲ್ಲಿ ಈಗ ಹೆಣ ಹೂಳಲು ಅವಕಾಶವಿಲ್ಲವಂತೆ. ಹೋದ ವರ್ಷ ಜನ್ಮೋದದ ಶ್ರೀ ಅಮ್ಮನವರ ಪಲ್ಲಕ್ಕಿ ರೀತಿಯಂತೆ ಸಂಚಾರ ಮಾಡುತ್ತಾ ಬಂದಾಗ ನವಾಯತ ಕೇರಿಯ ಬಳಿ ಕೆಲವು ಪುಂಡರು ಅಮ್ಮನವರ ಪಲ್ಲಕ್ಕಿಯನ್ನು ಅಡ್ಡಗಟ್ಟಿ ಅಪಮಾನ ಮಾಡಿದ್ದರೆಂದೂ ಆಗ ದೇವಿಯು ಅರ್ಚಕನಿಗೆ ಸಂಚರ ಬಂದು "ಈ ಮಾನಭಂಗದ ಫಲ ಬೇಗನೇ ನಿಮಗುಣ್ಣಿಸುವೆನು!" ಎಂದು ಅಪ್ಪಣೆಯಾಗಿತ್ತೆಂದೂ ಜನರು ಹೇಳುತ್ತಾರೆ. ಈಗ ನಡೆದಿರುವ ಹಾವಳಿಗೆ ದೇವಿಯ ಈ ಶಾಪವೇ ಕಾರಣವಾಗಿರಬೇಕೆಂದು ನಂಬಿ ಕೆಲವು ನವಾಯತರು ಅಮ್ಮನವರ ಪಲ್ಲಕ್ಕಿಯನ್ನು ಕರೆತಂದು ಕ್ಷಮಾಪಣೆ ಬೇಡಬೇಕೆಂದು ಆಲೋಚಿಸಿದ್ದಾರೆ. ಆದರೆ ಪಲ್ಲಕ್ಕಿಯನ್ನು ಅತ್ತ ಕಡೆಗೆ ಒಯ್ಯಲು ಅಮ್ಮನವರು ಅಪ್ಪಣೆಯನ್ನೇ ಕೊಡುವದಿಲ್ಲವಂತೆ. ದಿನಾಲು ಮೈಲಿಯಿಂದ ೧-೨ ಮರಣಗಳಾಗುತ್ತಲೇ ಇವೆ. ಸದ್ಯಕ್ಕೇ ಕೆಲಸಿಗನೊಬ್ಬನು ತೀರಿಕೊಂಡನು. ಅವನ ಶವದ ಅಂತ್ಯವಿಧಿ ಮಾಡಲು ಜಾತಿಯವರೂ ಸಿಗಲಿಲ್ಲ! ಕೊನೆಗೆ ಗ್ರಾಮಸ್ಥರೇ ಅದರ ವ್ಯವಸ್ಥೆ ಮಾಡಿಸಬೇಕಾಯಿತು. ಹಿಂದುಗಳಲ್ಲಿ ಆದ ಮೈಲಿಯ ಮರಣ ಇದೊಂದೇ ಅಂತೆ. ದೇವತಾ ಕ್ಷೋಭದ ಮಾತು ಹೇಗೂ ಇರಲಿ. ನವಾಯತ ಕೇರಿಯ ಹೊಲಸು ಸ್ಥಿತಿ ಮತ್ತು ಅವರ ಮಾಂಸಾಹಾರ ಇವೇ ಮೈಲಿಯ ಬೆಳವಣಿಗೆಗೆ ಮುಖ್ಯ ಕಾರಣವೆಂದು ಅನುಭವಿಕರು ಹೇಳುತ್ತಾರೆ. ನವಾಯತ ಬಂಧುಗಳು ತಮ್ಮ ಕೇರಿಯಲ್ಲೂ ಮನೆ ಹಿತ್ತಲುಗಳಲ್ಲೂ ಸಂಪೂರ್ಣ ಸ್ವಚ್ಛತೆಯನ್ನಿಟ್ಟು ಕೆಲ ದಿನಗಳ ಮಟ್ಟಿಗಾದರೂ ಮಾಂಸಾಹಾರ ಬಿಟ್ಟರೆ ಮೈಲಿಯ ಬೇನೆ ಖಂಡಿತ ನೀಗುವದು ಎಂದೂ ಅವರ ಅಂಬೋಣವುಂಟು.

ಭಟಕಳ— (ತಾ ೧೯-೧-೪೫) ಮುಂಬಯಿ ಪ್ರಾಂತದ ಮುಸ್ಲಿಂ ಲೀಗ ಪಾರ್ಲಿಮೆಂಟರಿ ಬೋರ್ಡಿನವರು ಎಸೆಂಬ್ಲಿ ಚುನಾವಣೆಗೆ ಲೀಗದ ಪರವಾಗಿ ನಿಲ್ಲಿಸಲು ಆರಿಸಿದ ಜನರ ನಾಮಾವಳಿ ನೋಡಿ ಇಲ್ಲಿಯ ಮಜಲಿಸ ಇ ಇಸ್ಲಾಹ-ಓ ತಾಂಝೀಮ ಸಂಘದವರಿಗೆ ಸಂತಾಪವುಂಟಾಗಿದೆ. ಬೋರ್ಡಿನವರು ಕಾರವಾರ ಜಿಲ್ಲೆಯ ಬಗ್ಗೆ ಮುಂಬಯಿಯಲ್ಲಿ ವ್ಯಾಪಾರ-ಉದ್ಯೋಗ ಮಾಡಿಕೊಂಡಿರುವ ಮಿ॥ ಎಚ್ ಎ ಕಾದರ ಇವರನ್ನು ಆರಿಸಿದ್ದಾರೆ. ಅವರು ಈ ಜಿಲ್ಲೆಯ ಮುಸಲ್ಮಾನರಿಗೆ ಸೇವೆ ಸಲ್ಲಿಸಿದ್ದು ತೀರ ವಿರಳವೆಂದೂ, ಅವರಿಂದ ಜಿಲ್ಲೆಯವರಿಗೆ ಏನೂ ಪ್ರಯೋಜನವಾಗುವಂತಿಲ್ಲೆಂದೂ, ಅವರ ಬದಲಿಗೆ ಮಿ॥ ಜೇ ಎಚ್ ಶಮಸುದ್ದಿನ (ವಕೀಲ) ಇವರನ್ನು ಆರಿಸಬೇಕಾಗಿಯೂ ತಾಂಝೀಮದವರು ಕಳೆದ ತಾ ೧೬ಕ್ಕೆ ಒಂದು ಠರಾವು ಮಾಡಿ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿಗೆ ಕಳಿಸಿದ್ದಾರೆ.

ಬನವಾಸಿ— (ತಾ ೨೦-೧-೪೬) ಇಲ್ಲಿಯ ಮೂಲಭೂತ ಶಿಕ್ಷಣ ತಾಲೀಮು ಶಿಕ್ಷಕ ರಾ॥ ಫರ್ನಾಂಡಿಸ ಇವರ ಪ್ರಯತ್ನದ ಫಲವಾಗಿ ಒಂದು ಹಿಂದೀ ಶಿಕ್ಷಣದ ವರ್ಗ ತೆರೆಯಲ್ಪಟ್ಟಿದೆ. ಶ್ರೀ ಮಧುಕೇಶ್ವರ ದೇವಾಲಯದಲ್ಲಿ ಒಂದು ಪೂಜೆ ಮಾಡಿಸಿ, ಇಂದು ರಾ॥ ಎಮ್ ಸಿ ಒಡೆಯರ್ ಇವರ ನೇತೃತ್ವದಲ್ಲಿ ಅದರ ಉದ್ಘಾಟನವಾಯಿತು. ೩೦ಕ್ಕೆ ಮಿಕ್ಕಿ ಹುಡುಗರು ವರ್ಗದಲ್ಲಿ ದಾಖಲಾಗಿದ್ದಾರೆ.

ಅಂಕೋಲಾ— (ತಾ ೨೧-೧-೪೬) ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಸಂಘಟನೆ, ಸಂಪತ್ತಿನ ಸುಧಾರಣೆ ಮುಂತಾದ ವಿಷಯಗಳ ಬಗ್ಗೆ ಒಂದು ಸಭೆ ಕರೆಯಿಸಬೇಕೆಂದು ಜಿಲ್ಲಾ ಶಿಕ್ಷಕ ಸಂಘದವರ ಕಾರ್ಯನಿರ್ವಾಹಕ [illegible] ಅವರಂತೆ ಸಂಘದ [illegible] ಪುಸ್ತಕಗಳು ಅಧಿಕಾರದಲ್ಲಿ ಶಿಕ್ಷಕರಿಗೆ ಕೊಡುವ [illegible] ಅಭಿಮಾನ ಮತ್ತು ಸಹಾನುಭೂತಿ [illegible] ನಿಧಿ ತುಂಬಿ ಧನಸಹಾಯ ನೀಡಬೇಕಾಗಿ ಸಂಘದ ಅಧ್ಯಕ್ಷರು ಅರಿಕೆ ಮಾಡುತ್ತಾರೆ.

ಮುಂಡಗೋಡ— (ತಾ ೨೫-೧೨-೪೫) ಇಲ್ಲಿಯ ಮಾಮಲೇದಾರ ರಾ॥ ಅಂಬಲೇಯವರ ಕಚೇರಿಗೆ ಕಾಲ ನಿಯಮವಿಲ್ಲ! ಒಂದೊಂದು ದಿನ ಅವರು ಕಚೇರಿಗೆ ಬರುವದಿಲ್ಲ, ಮನೆಯಲ್ಲೇ ಕೂತು ಕೆಲಸ ಮಾಡುತ್ತಾರಂತೆ. ಅವರು ಕಚೇರಿಗೆ ಬರುವದು ಹೆಚ್ಚಾಗಿ ಸಂಜೆ ೪ ಘಂಟೆಗೆ! ಮತ್ತು ಖಟ್ಲೆಗಳ ವಿಚಾರ ಮಾಡುವದು ರಾತ್ರಿ ಹೊತ್ತಿನಲ್ಲಿ! ಮಧ್ಯಾಹ್ನಕ್ಕೆ ಬಂದ ಸಾಕ್ಷಿಗಾರ-ಪಕ್ಷಗಾರರು ಮಧ್ಯರಾತ್ರಿಯವರೆಗೆ ಕಚೇರಿಯಲ್ಲಿ ಕೂಡ್ರಬೇಕು!!

ಅಧಿಕಾರಿಗಳ ಸರಬರಾಯಿ ಮಾಡಿ ಹಳ್ಳಿಗರು ಸೋತು ಹೋಗಿದ್ದಾರೆ. ಅಧಿಕಾರಿಗಳಿಗೆ ಬೇಕಾಗುವ ಹುಲ್ಲು, ಕೋಳಿ, ತತ್ತಿ, ಮುಂತಾದ್ದನ್ನೆಲ್ಲ ಹಳ್ಳಿಗರು ಪುಕ್ಕಟೆಯಾಗಿ ಪೂರೈಸಬೇಕು.

ಭತ್ತದ ಉಗ್ರಾಣಗಳಿಗೆ ತಂದ ಭತ್ತದಲ್ಲಿ ಅಳತೆಯಾದ ಮೇಲೆ ಉಳಿಯುವ ಭತ್ತವನ್ನು ಉಗ್ರಾಣದ ಪೇದೆಗಳಿಗೆ ಕೊಡಬೇಕಾಗುತ್ತದೆ. ಕೊಡದಿದ್ದರೆ ಪುನಃ ಭತ್ತ ತಂದಾಗ ಅಳತೆ ಮಾಡುವಲ್ಲಿ ಕೈಚಳಕ ನಡೆಯುತ್ತದೆ! ಇಲ್ಲವೆ ಅಳತೆ ಮಾಡಿಕೊಳ್ಳಲು ವಿಳಂಬ ಮಾಡಿ ದಣಿಸುತ್ತಾರೆ! ಇದಲ್ಲದೆ ಅಳತೆ ಮಾಡುವವರಿಗೆ ಚೀಲ ೧ಕ್ಕೆ ೨ ಆಣೆಯಂತೆ ಮರ್ಯಾದೆ ಕೊಡಬೇಕಂತೆ! ಭತ್ತ ತಂದವರು ತಾನೇ ಅಳತೆ ಮಾಡಿಕೊಡುತ್ತೇವಾಗಿ ಹೇಳಿದರೆ ಉಗ್ರಾಣದಾರರು ಒಪ್ಪುವದಿಲ್ಲ! ಅಧಿಕಾರಿಗಳನ್ನು ಪ್ರಸನ್ನ ಮಾಡಿಕೊಳ್ಳದಿದ್ದರೆ ೧ನೇ ತರಗತಿಯ ಭತ್ತ ೨ನೇ ತರಗತಿಯದಾಗುತ್ತದೆ!

ಸೀದಾ ಅಂಗಡಿಗಳಲ್ಲಿ ಸಿಗುವ ಸಕ್ಕರೆ ಮುದ್ದೆಯಾದದ್ದು! ಅವರು ಕೊಡುವ ಚಿಮಣಿ ಎಣ್ಣೆ ದೀಪಕ್ಕೆ ಹಾಕಿದರೆ ಚಟ್ ಚಟ್ ಆಗಿ ಪ್ರಕಾಶ ಮಂದವಾಗುತ್ತದಂತೆ. ಅವುಗಳಲ್ಲಿ ಏನು ಮಿಶ್ರವಾಗುತ್ತದೆಂದು ದೇವರೇ ಬಲ್ಲ!

ಹಿಂದುಸ್ಥಾನಿ ಪಾಠಗಳು.

ಸಬಕ ಪಂದ್ರಹ (ಪಾಠ ೧೫)

ಅಖಬಾರ (ವರ್ತಮಾನ ಪತ್ರ)

ಅಖಬಾರಕೇ ಪಢನೇ ಕೋ ದುನಿಯಾಕೀ ಖಬರೇಂ ಮಿಲ ಸಕತೀ ಹೈ (ಸಮಾಚಾರ ಪತ್ರಿಕೆಯಿಂದ ನಮಗೆ ಜಗತ್ತಿನ ವರ್ತಮಾನಗಳು ದೊರೆಯುವವು) ಬಡೇ ಬಡೇ ಶಹರೋಂಮೇ ತೋ ಆಪ ದೇಖೇಂಗೇ ಶಾಮಕೋ ಅಖಬಾರ ನಿಕಲತೇ ಹೈಂ (ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನೀವು ನೋಡುವಿರಿ, ಸಂಜೆಯ ಹೊತ್ತಿಗೆ ಪತ್ರಿಕೆಗಳು ಹೊರಡುತ್ತವೆ) ಲಡಕೇ ಸಡಕಪರ ದೌಡತೇ ಹೈಂ, ಬಸಕೇ ಪಾಸ ಆತೇ ಹೈಂ, ಸ್ಟೇಶನಪರ ಜಾತೇ ಹೈಂ, ಔರ ಅಖಬಾರ ಬೇಚತೇ ಹೈಂ (ಹುಡುಗರು ಮಾರ್ಗಗಳ ಮೇಲೆ ಓಡಾಡುತ್ತಾರೆ, ಮೋಟರ ಬಂಡಿಯ ಹತ್ತರ ಬರುತ್ತಾರೆ, ರೇಲ್ವೆ ನಿಲ್ದಾಣದ ಮೇಲೆ ಹೋಗುತ್ತಾರೆ ಮತ್ತು ಪತ್ರಿಕೆಗಳನ್ನು ಮಾರುತ್ತಾರೆ) ಕ್ಯಾ, ತುಮ ಜಾನತೇ ಹೋ ಯಹ ಸಾರೀ ಖಬರೇಂ ಕೈಸೇ ಆತೀ ಹೈಂ? (ಏನು, ನೀವು ಬಲ್ಲಿರಾ ಈ ಎಲ್ಲ ಸುದ್ದಿಗಳು ಹ್ಯಾಗೆ ಬರುತ್ತವೆಂದು?) ಹರ ದೇಶಮೇಂ ಖಬರ ಭೇಜನೇವಾಲೀ ಏಕ ಕಂಪನೀ ಹೈ (ಪ್ರತಿಯೊಂದು ದೇಶದಲ್ಲೂ ಸುದ್ದಿ ಕಳಿಸುವ ಒಂದು ಸಂಘವುಂಟು) ಉಸಕಾ ಅಪನಾ ತಾರ ಹೈ, (ಅದರ ಸ್ವಂತ ತಂತಿಯುಂಟು,) ಅಪನಾ ಕೇಬಲ ಹೈ (ಸ್ವಂತ ಕೇಬಲ - ಸಮುದ್ರ ಮಾರ್ಗವಾಗಿ ಹೋಗುವ ತಂತಿ-ಉಂಟು) ಉಸಸೇ ಖಬರೇಂ ಭೇಜತೇ ಹೈಂ (ಅದರ ಮುಖಾಂತರ ವಾರ್ತೆಗಳನ್ನು ಕಳಿಸುತ್ತಾರೆ) ಅಖಬಾರಕೇ ದಫ್ತರಮೇಂ ಏಕ ಮಶೀನ ಹೋತೀ ಹೈಂ (ಪತ್ರಿಕೆಯ ಕಚೇರಿಯಲ್ಲಿ ಒಂದು ಯಂತ್ರವಿರುತ್ತದೆ) ವಹ ಅಪನೇ ಆಪ ಖಬರೇಂ ಟೈಪ ಕರತೀ ಹೈ (ಅದು ತಂತಾನೇ ಸುದ್ದಿಗಳನ್ನು "ಟ್ಯಾಪ್" ಮಾಡುತ್ತದೆ) ಯಹೀ ಖಬರೇಂ ಅಖಬಾರಮೇಂ ಛಪತೀ ಹೈಂ (ಈ ಸುದ್ದಿಗಳನ್ನು ಪತ್ರಿಕೆಯಲ್ಲಿ ಮುದ್ರಿಸುತ್ತಾರೆ) ಯಹ ಮಶೀನ ಬಿಜಲೀಸೇ ಚಲತೀ ಹೈ (ಈ ಯಂತ್ರ ವಿದ್ಯುಚ್ಛಕ್ತಿಯಿಂದ ನಡೆಯುತ್ತದೆ) ಅಖಬಾರ ಹಮಕೋ ಬತಲಾತೇ ಹೈಂ ಕಿ ದೇಶಕೇ ನೇತಾ ಕ್ಯಾ ಕರತೇ ಹೈಂ (ಪತ್ರಿಕೆಯು ನಮಗೆ ತಿಳಿಸುತ್ತದೆ, ದೇಶದ ಮುಂದಾಳುಗಳು ಏನು ಮಾಡುತ್ತಿದ್ದಾರೆ) ಬಾಜಾರಮೇಂ ಚೀಜೋಂಕಾ ಕ್ಯಾ ದಾಮ ಹೈ, ಕಹಾಂ ಕ್ಯಾ ಹೈ (ಪೇಟೆಯಲ್ಲಿ ಜಿನಸುಗಳ ದರ ಏನು, ಎಲ್ಲಿ ಏನುಂಟು ಎಂಬುದನ್ನು) ಇಸ ಅಖಬಾರೋಂಕೋ ಪಢಕರ ವ್ಯಾಪಾರೀ ಚೀಜೋಂಕೋ ಖರೀದತೇ ಹೈಂ (ಈ ವಾರ್ತೆಗಳನ್ನು ಓದಿ ವರ್ತಕರು ಜಿನಸುಗಳನ್ನು ಖರೀದಿಸುತ್ತಾರೆ) ಔರ ಬೇಚತೇ ಹೈಂ (ಮತ್ತು ಮಾರುತ್ತಾರೆ) ನಫಾ ಉಠಾತೇ ಹೈಂ (ಲಾಭ ಗಳಿಸುತ್ತಾರೆ) ಕಭೀ ಕಭೀ ನುಕಸಾನಭೀ ಉಠಾತೇ ಹೈಂ (ಒಮ್ಮೊಮ್ಮೆ ಹಾನಿಯನ್ನೂ ಹೊಂದುತ್ತಾರೆ) ಕುಛ ಅಖಬಾರ ರೋಜ ನಿಕಲತೇ ಹೈಂ (ಕೆಲವು ಪತ್ರಿಕೆಗಳು ದಿನಾಲೂ ಹೊರಡುತ್ತವೆ) ಕುಛ ಹಫ್ತೇಮೇಂ ಏಕ ಬಾರ, ಕುಛ ಮಹಿನೇಮೇಂ ಏಕ ಬಾರ (ಕೆಲವು ವಾರಕ್ಕೊಂದಾವರ್ತಿ, ಕೆಲವು ತಿಂಗಳಿಗೊಂದಾವರ್ತಿ) ಮಾಹವಾರೀ ಔರ ಹಫ್ತೇವಾರ ಅಖಬಾರೋಂಮೇಂ ಖಬರೇಂ ಕಮ ಛಪತೀ ಹೈಂ (ಮಾಸಿಕ ಮತ್ತು ವಾರದ ಪತ್ರಿಕೆಗಳಲ್ಲಿ ವಾರ್ತೆಗಳನ್ನು ಕಡಿಮೆಯಾಗಿ ಮುದ್ರಿಸುತ್ತಾರೆ) ಪುರಾನೇ ಜಮಾನೇಮೇಂ ಅಖಬಾರಕೋ ಹಾಥಸೇ ಲಿಖತೇ ಥೇ (ಹಿಂದಿನ ಕಾಲದಲ್ಲಿ ಪತ್ರಿಕೆಗಳನ್ನು ಕೈಯಿಂದ ಬರೆಯುತ್ತಿದ್ದರು) ಚೀನಮೇಂ ಸಬಸೇ ಪಹಲಾ ಅಖಬಾರ ಛಪಾ ಥಾ (ಚೀನದಲ್ಲಿ ಎಲ್ಲಕ್ಕೂ ಮೊದಲಿನ ಪತ್ರಿಕೆಯನ್ನು ಛಾಪಿಸಿದ್ದರು) ಆಜಕಲ ಸಬ ಅಖಬಾರ ಮಶೀನಪರ ಛಪತೇ ಹೈಂ (ಈ ದಿನಗಳಲ್ಲಿ ಎಲ್ಲ ಪತ್ರಿಕೆಗಳನ್ನು ಯಂತ್ರದ ಮೇಲೆ ಮುದ್ರಿಸುತ್ತಾರೆ) ಏಕ ಘಂಟೇಮೇಂ ಹಜಾರೋಂ ಕಾಪಿಯಾಂ ಛಪತೀ ಹೈಂ (ಒಂದು ತಾಸಿನಲ್ಲಿ ಸಾವಿರಾರು ಪ್ರತಿಗಳು ಮುದ್ರಿಸಲ್ಪಡುತ್ತವೆ) ಇಸಲಿಯೇ ಅಖಬಾರ ಸಸ್ತಾ ಹೈ (ಇದರಿಂದಲೇ ಪತ್ರಿಕೆ ಅಗ್ಗವಾಗಿದೆ) ಅಚ್ಛಾ ಅಖಬಾರ ದೇಶಕೀ ಏಕ ತಾಕತ ಹೈ (ಒಳ್ಳೆಯ ಪತ್ರಿಕೆ ದೇಶದ ಒಂದು ಶಕ್ತಿ) ಹಮಾರೇ ದೇಶಮೇಂ ದೇಶೀ ಜಬಾನೋಂಮೇಂ ಅಖಬಾರ ನಿಕಲತೇ ಹೈಂ (ನಮ್ಮ ದೇಶದಲ್ಲಿ ದೇಶೀಯ ಭಾಷೆಗಳಲ್ಲಿ ಪತ್ರಿಕೆಗಳು ಹೊರಡುತ್ತವೆ) ಅಂಗ್ರೇಜೀಮೇಂ ಭೀ ನಿಕಲತೇ ಹೈಂ (ಇಂಗ್ಲಿಷಿನಲ್ಲಿ ಹೊರಡುತ್ತವೆ) ವೇ ಪರದೇಶೋಂಕೋ ಭೀ ಜಾತೇ ಹೈಂ (ಅವು ಪರದೇಶಗಳಿಗೂ ಹೋಗುತ್ತವೆ) ಹಮ ಸಬಕೋ ರೋಜ ಅಖಬಾರ ಪಢನಾ ಚಾಹಿಯೇ (ನಾವೆಲ್ಲರೂ ದಿನಾ ಪತ್ರಿಕೆಗಳನ್ನು ಓದಬೇಕು)

ಗಿನತೀ (ಲೆಕ್ಕ)

ಏಕ (೧), ದೋ (೨) ತೀನ (೩), ಚಾರ (೪), ಪಾಂಚ (೫), ಛೇ (೬), ಸಾತ (೭), ಆಠ (೮), ನೌ (೯), ದಸ (೧೦), ಗ್ಯಾರಹ (೧೧), ಬಾರಹ (೧೨), ತೇರಹ (೧೩), ಚೌದಹ (೧೪), ಪಂದ್ರಹ (೧೫), ಸೋಲಹ (೧೬), ಸತ್ರಹ (೧೭), ಅಠಾರಹ (೧೮), ಉನ್ನೀಸ (೧೯), ಬೀಸ (೨೦), ಇಕ್ಕೀಸ (೨೧), ಬಾಈಸ (೨೨), ತೇಈಸ (೨೩), ಚೌಬೀಸ (೨೪), ಪಚ್ಚೀಸ (೨೫), ತೀಸ (೩೦), ಚಾಲೀಸ (೪೦), ಪಚ್ಚಾಸ (೫೦), ಸಾಠ (೬೦), ಸತ್ತರ (೭೦), ಅಸ್ಸೀ (೮೦), ನಬ್ಬೇ (೯೦), ಸೌ (ನೂರು) ಹಜಾರ (ಸಾವಿರ) ಲಾಖ (ಲಕ್ಷ) ಕರೋಡ (ಕೋಟಿ) ಪಾವ (ಕಾಲು) ಆಧಾ (ಅರ್ಧ), ಪೌನ (ಮುಕ್ಕಾಲು) ಸವಾ (೧।) ಡೇಢ (೧॥), ಪೌನೇ ದೋ (೧॥।), ಢಾಈ (೨॥), ಸಾಢೇ ತೀನ (೩॥),

ಇದನ್ನು ಪಾಂಡುರಂಗ ಕೃಷ್ಣ ಶಿರಸಿಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩ ೪ ೦
ಟಪಾಲದ್ವಾರಾ ವರ್ಷಕ್ಕೆ ೪-೧ ೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ .. ೦-೦ ೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡ ಕಟ್ಟತಕ್ಕದ್ದು

Reg. No. B 1270 Monday, 11th February, 1946

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೩೨

ಕುಮಟಾ:- ಸೋಮವಾರ, ತಾ ೧೧ ಮಾಹೆ ಫೆಬ್ರುವರಿ ೧೯೪೬ನೇ ಇಸವಿ

ಜಾಹೀರಾತುಗಳ ದರ.
ಪ್ರತಿ ೧ ಇಂಚ ಎರ್ ಉದ್ದ
೧ ಸಾರಿಗೆ ೬ ಆಣೆಯಂತೆ
ಕಾಲಮ್‌ದ್ವಾರಾ ೧ ಇಂಚ ಎರ್ ಉದ್ದ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು

ಸ್ಥಾನಿಕ ವೃತ್ತಾಂತ.

(೪ನೇ ಪುಟದಿಂದ ಮುಂದರಿಸಿದ್ದು)

ಪ್ರಾಂತದ ಕೆಲವೊಂದು ಭಾಗಗಳಲ್ಲಿ ಬರಗಾಲ ಬಿದ್ದಿರುವದರಿಂದ ಮೈಸೂರ ಸರಕಾರದವರು ಹುಲ್ಲಿನ ನಿರ್ಯಾತವನ್ನು ಪ್ರತಿಬಂಧಿಸಿದ್ದಾರೆ ಅದರಿಂದ ಈ ತಾಲೂಕಿಗೆ ಬೇಕಾದ ಹುಲ್ಲು ಎಲ್ಲಿಂದ ಪೂರೈಸಿಕೊಳ್ಳಬೇಕೆಂಬುದೊಂದು ಸಮಸ್ಯೆಯಾಗಿದೆ ಹುಲ್ಲಿನ ಕೊರತೆಯನ್ನು ಹತ್ತಿಕಾಳಿನ ಪೂರೈಕೆಯಿಂದ ಕೆಲಮಟ್ಟಿಗಾದರೂ ಸುಧಾರಿಸಿಕೊಳ್ಳುವಾ ಎಂದರೆ ಆ ಹತ್ತಿಕಾಳಿಗೇ ಮೊದಲು ಬರಗಾಲ ಬಂದಿದೆ! ಜಿಲ್ಹಾಧಿಕಾರಿಗಳು ಮೇವಿನ ಪೂರೈಕೆಯ ವ್ಯವಸ್ಥೆಯನ್ನು ಸಕಾಲದಲ್ಲಿ ಮಾಡದಿದ್ದರೆ ಈ ತಾಲೂಕಿನ ದನಕರುಗಳು ಉಪವಾಸ ಸಾಯುವ ಪ್ರಸಂಗ ಬರದೆ ಇರಲಾರದು

ಕಳೆದ ತಾ ೪ಕ್ಕೆ ಅಡಿಕೆ ತೆರಿಗೆಯ ನಿಷೇಧಾರ್ಥ ಪರಕಾಳವೂ ಸಭೆಯೂ ತೆರಿಗೆ-ನಿಷೇಧದ ಗೊತ್ತುವಳಿಗಳೂ ಆದವು ಮರುದಿನ ಅಡಿಕೆ ಬೇಸಾಯಗಾರ ಸಂಘದ ಸಭೆಯಾಗಿ ಹೊಸ ಕಾರ್ಯಕಾರಿ ಮಂಡಳದ ಆಯ್ಕೆಯಾದವು ತಾ ಹೇರೂರ ಗ್ರಾಮದಲ್ಲೂ ಗುರುವಾರ ಅಪರಾಹ್ನದಲ್ಲಿ ೪೦೦-೫೦೦ ಮಂದಿ ತೋಟಿಗ ಬಾಂಧವರು ರಾ। ಹೋಬಳಿ ಗಣಪ ಭಟ್ಟರ ನಾಯಕತ್ವದಲ್ಲಿ ಸಭೆಗೂಡಿ ತೆರಿಗೆಯ ನಿಷೇಧ ಮಾಡಿದರೆಂದು ತಿಳಿಯುತ್ತದೆ

ಶಿರಸಿ— (ತಾ ೬-೨-೪೬) ಕಳೆದ ತಾ ೨ಕ್ಕೆ ಶಿರಸಿ ತಾಲೂಕ ಅಡಿಕೆ ಬೇಸಾಯಗಾರ ಸಂಘದ ಸಭೆಯಾಗಿ, ಹೋದ ವರುಷದ ವರದಿಯ ವಾಚನ, ಆಯ-ವ್ಯಯಗಳ ಪರಿಶೀಲನೆ, ಹೊಸ ಕಾರ್ಯಕಾರಿ ಮಂಡಳದ ಆಯ್ಕೆ ಮುಂತಾದ ಕಾರ್ಯಕ್ರಮಗಳಾದವು. ರಾ। ತಿಮ್ಮಪ್ಪ ಹೆಗಡೆ ಮೋಟಿನಸರದವರು ಈ ವರ್ಷದ ಅಧ್ಯಕ್ಷರಾಗಿದ್ದಾರೆ

ಮರುದಿನ ತಾ ೩ಕ್ಕೆ ಜಿಲ್ಹಾ ಅಡಿಕೆ ಬೇಸಾಯಗಾರ ಸಂಘದ ವಾರ್ಷಿಕ ಮಹಾಸಭೆ ಸೇರಿ ಹೊಸ ವರ್ಷದ ಕಾರ್ಯಕರ್ತರ ಆಯ್ಕೆ ವಗೈರೆ ಕಾರ್ಯಕ್ರಮ ನಡೆಯಿತು. ರಾ। ನಿಲೇಕಣಿ ವೆಂಕಟರಾಯರು ಹೊಸ ವರ್ಷದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ ಜಿಲ್ಹಾದ್ಯಂತ ೧೦೦ ಪ್ರಮುಖ ವ್ಯಕ್ತಿಗಳು ಈ ಸಭೆಗೆ ಬಂದಿದ್ದರು

ಗುರುವಾರ ತಾ ೭ಕ್ಕೆ ಊರಲ್ಲಿ ಸಂಪೂರ್ಣ ಹರತಾಳ ಪಾಳಲು ಸಂಜೆಯಲ್ಲಿ ಅಡಿಕೆ ಧರ್ಮಶಾಲೆಯ ಕಟ್ಟೆಯ ಮೇಲೆ ರಾ। ಕೇಶವೈನರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಅಡಿಕೆ ತೆರಿಗೆಯನ್ನು ನಿಷೇಧಿಸುವ ಗೊತ್ತುವಳಿಗಳಾದವು ರಾ। ರಾ। ಸೋಳಗಾರ ವೆಂಕಟರಮಣ ಹೆಗಡೆಯವರೂ ಅಲೇಸರ ಗಜಾನನ ಹೆಗಡೆಯವರೂ ಅಡಿಕೆ ತೆರಿಗೆಯಿಂದ ತೋಟಿಗರ ಮೇಲೆ ಬಂದ ಬಗೆಬಗೆಯ ಕಷ್ಟಗಳನ್ನೆಲ್ಲ ಹೃದಯದ್ರಾವಕವಾಗಿ ವಿವರಿಸಿದರು ಅಡಿಕೆ ವ್ಯಾಪಾರಿ ಸಂಘದವರೂ ಮುಂಜಾನೆಯ ಹೊತ್ತಿಗೆ ತಮ್ಮ ಸಂಘದ ಸಭೆ ಮಾಡಿ ತೋಟಿಗರ ಬಗ್ಗೆ ಸಹಾನುಭೂತಿಯನ್ನು ತೋರಿಸುವ ಹಾಗೂ ತೆರಿಗೆ-ನಿಷೇಧದ ಗೊತ್ತುವಳಿಗಳನ್ನು ಮಾಡಿದ್ದರು ಇದೇ ರೀತಿ ಮುಂಡಗೇಸರ, ಬನಸೆಕೊಪ್ಪ, ಹೀಪನಳ್ಳಿ, ಸೀನಗಳ್ಳಿ ವಗೈರೆ ಹಳ್ಳಿಗಳಲ್ಲೂ ತೆರಿಗೆ ನಿಷೇಧದ ಸಭೆಗಳಾದ ವಾರ್ತೆಗಳು ಬಂದಿವೆ

ಕಳೆದ ವರ್ಷದ ಫೆಬ್ರುವರಿಯಲ್ಲಿ ಎಷ್ಟು ಅಡಿಕೆಯು ವಿಕ್ರಿಯಾಗಿತ್ತೋ ಅದರ ಅರ್ಧದಷ್ಟು ಅಡಿಕೆ ಮಾತ್ರ ಈ ತಿಂಗಳಲ್ಲಿ ಮಾರತಕ್ಕದ್ದೆಂದು ಸರಕಾರದವರ ಹುಕುಮವಾಗಿದೆಯಂತೆ ಇತ್ತ ೧೫ ದಿನಗಳಿಂದ ಇಲ್ಲಿ ಅಡಿಕೆ ವ್ಯಾಪಾರ ನಡೆದಿಲ್ಲ ಮೊನ್ನೆಯೇ ಪುನಃ ಪ್ರಾರಂಭವಾಗಿದೆ ಆದರೂ ಧಾರಣೆಗಳು ಇಳಿಮುಖವಾಗಿವೆ. ಮುಂಬಯಿಯಲ್ಲಿ ಸಿಂಗಾಪುರದಿಂದ ಹೇರಳ ಅಡಿಕೆ ಮುಂಬಯಿ ಬಂದರಕ್ಕೆ ಬಂದು ಇಳಿದದೆಯಂತೆ ಆದರಿಂದ ಧಾರಣೆಗಳು ಇನ್ನೂ ಇಳಿದು ಇಲ್ಲಿಯ ತೋಟಿಗರೂ ವ್ಯಾಪಾರಿಗಳೂ ವಿಪರೀತ ಹಾನಿಗೆ ಒಳಗಾಗುವರೆಂಬ ಆಂಜಿಕೆಯುಂಟಾಗಿದೆ ತೋಟಿಗರಂತೂ ಪೂರ್ಣ ಹತಾಶರಾಗಿ ಕೈಕಾಲು ಬಿಟ್ಟಿದ್ದಾರೆ!

ಇಲ್ಲಿಯವರು ತಮ್ಮ ಗೇಣಿಯ ಭತ್ತ ಹೊರಗಿಂದ ತರಬೇಕಾದರೆ ಸಿ. ಎ. ಅಧಿಕಾರಿಗಳ ಪರವಾನೆ ಚೀಟಿ ಬೇಕು ಅವರ ಸಿ. ಎ. ಅಧಿಕಾರಿಗಳ ಮರ್ಜಿ ದೊಡ್ಡದಾಗಿದೆ ಅವರಿಂದ ಪರವಾನೆಗೆಯ ಸಿಗುವದೇ ಕಷ್ಟವಂತೆ!

ಸರಕಾರಿ ಭತ್ತ ಬಂಡಿಯಲ್ಲಿ ಹೇರಲಿಕ್ಕೂ ಇಳಿಸಲಿಕ್ಕೂ ಪ್ರತಿ ಚೀಲಕ್ಕೆ ೧॥-೧॥ ಆಣೆಯಂತೆ ಕೂಲಿ ಕೊಡುತ್ತಿದ್ದುದರಿಂದ ಪೇಟೆಯಲ್ಲಿ ಕೂಲಿಯಾಳುಗಳು ಸಿಗುತ್ತಿದ್ದಿಲ್ಲ ಪ್ರತಿಯೊಬ್ಬ ಕೂಲಿಯಾಳುವಿಗೆ ಸರಾಸರಿ ೮-೫ ರೂ ದಿನಮಜೂರಿ ಸಿಗುತ್ತಿತ್ತಂತೆ ವರ್ತಕರ ಬೇಡಿಕೆಯಂತೆ ಇತ್ತಲಾಗಿ ಅಧಿಕಾರಿಗಳು ಮಜೂರಿಯನ್ನು ಚೀಲ ಒಂದಕ್ಕೆ ಆಣೆ - ೧ ಆಣೆ ಇಟ್ಟಿದ್ದರು ಆದರಿಂದ ಹಿಂದಿನ ಕೂಲಿಯವರು ಸಿಟ್ಟಿಗೆದ್ದು ಕಟ್ಟು ಮಾಡಿದರು ಆದರೆ ಹೊಸ ಕೂಲಿಕಾರರು ಬರಹತ್ತಿದ್ದರಿಂದ ಅವರ ಕಟ್ಟು ಮುರಿದು ಹೋಗಿದೆ

ನಿನ್ನೆ ಕುಂಟೇಮನೆ ಜಾತ್ರೆಯಾಗುವದಿತ್ತು. ಆದರೆ ಅದು ಆಗಲಿಲ್ಲವಂತೆ ಈ ಜಾತ್ರೆಯಲ್ಲಿ ಕುರಿ-ಕೋಣ-ಕೋಳಿಗಳ ವಧೆಯಾಗದಂತೆ ಪ್ರತಿಬಂಧ ಮಾಡಬೇಕಾಗಿಯೂ ವಧೆಯಾದಲ್ಲಿ ದಂಗೆಯಾಗುವ ಭೀತಿಯುಂಟೆಂತಲೂ ಹಿಂಸಾ-ವಿರೋಧಿಗಳು ಕೆಲವರು ಜಿಲ್ಹಾಧಿಕಾರಿ ಮನವಿ ಮಾಡಿದ್ದರು ಆಗ ಜಿಲ್ಹಾಧಿಪರು ಜಾತ್ರೆಗೆ ಪ್ರತಿಬಂಧ ಮಾಡಿದರು ನಿವರ ವಧೆಯಿಲ್ಲದೆ ಜಾತ್ರೆ ಜರುಗಿಸಬಹುದೆಂದು ಹಿಂದಿನಿಂದ ಪೂಜಕರ ಹುಕುಮು ಹೊರಡಿಸಿದ್ದರಂತೆ ತಿಳಿಯುತ್ತದೆ. ಆದರೂ ಹಿಂಸೆಯಾಗಬಾರದೆಂಬ ಹಟ ಹಿಡಿದ ಬಾಲಕರು ಜಾತ್ರೆಯನ್ನೇ ಮಾಡಬಾರದಾಗಿ ತೀರ್ಮಾನಿಸಿದ್ದಾರಂತೆ!

ಸ್ವಾತಂತ್ರ್ಯ ದಿನದ ಸಾಲಕ್ಕೆ ರಾಷ್ಟ್ರಧ್ವಜಗಳ ವಿಕ್ರಿಯಿಂದ ರೂ ೧೦೪ ಕೂಡಿದ್ದು ಅಲ್ಲದಾಗಿಯೂ, ಈ ರೂ ೧೦೪ ಸ್ವತಂತ್ರವಾಗಿ ಕೂಡಿತ್ತಾಗಿಯೂ, ಧ್ವಜ ವಿಕ್ರಿಯಿಂದ ಕೂಡಿದ ಹಣ ಬೇರೆಯವ್ರು ಆದು ಬಾಡಿ ಅಂಗಡಿಯಲ್ಲಿ ಜಮೆಯಾಗಿದೆಯೆಂತಲೂ ತಿಳಿದುಬಂದಿದೆ

ರಾಯರಪೇಟೆಯಲ್ಲಿ ಇಂದು ಒಂದು ಅಪಘಾತವಾಗಿದೆ ಚಿಕ್ಕ ಹುಡುಗಿಯೊಬ್ಬಳು ರಸ್ತೆಯಲ್ಲಿದ್ದಾಗ ಗೊಬ್ಬರ ಹೇರಿದ ಚಕ್ಕಡಿಯೊಂದು ಅವಳನ್ನು ಕೆಡವಿ ಗಾಯಗೊಳಿಸಿದಯಂತೆ ಹುಡುಗಿಯು ಸರಕಾರಿ ದವಾಖಾನೆಯಲ್ಲಿದ್ದಾಳೆ ಅವಳ ಪ್ರಕೃತಿ ಚಿಂತಾಜನಕವಿರುತ್ತದಂತೆ ಚಕ್ಕಡಿಯವನು ಫರಾರಿಯಾಗಿದ್ದಾನೆ

ಯಲ್ಲಾಪುರ— (ತಾ ೬-೨-೪೬) ಊರಲ್ಲಿ ಏನೇನೂ ಹತ್ತೀಕಾಳು ಸಿಗುವದಿಲ್ಲ. ಹುರಳಿಯಾದರೂ ಸಿಗುತ್ತಿದ್ದರೆ ಒಳಿತಾಗುತ್ತಿತ್ತು. ಅದೂ ಸಿಗುವದಿಲ್ಲ. ೧೦೦೦ ಚೀಲ ಹುರಳಿ ತರಿಸಲು ತಾವು ಪರವಾನೆ ಕೊಡುತ್ತೇವೆ ಬೇಕಾದ ಮದತ್ತು ಮಾಡುತ್ತೇವೆ ಎಂದು ೨ ತಿಂಗಳ ಹಿಂದೆ ರಾ। ಕಲ್ಲೇಕಾರ ಮಾಮಲೇದಾರರು ಜಂಗಲ ಕಂಟ್ರಾಕ್ಟರರ ಸಭೆಯಲ್ಲಿ ಬಡಾಯಿ ಹೊಡೆದಿದ್ದರಂತೆ! ಆದರೆ ಈವರೆಗೆ ಅವರು ೧೦೦೦ ಹುರಳಿಕಾಳು ಸಹ ತಂದುಕೊಟ್ಟಿಲ್ಲ!

ಚಹಾ ಅಂಗಡಿಯವರ ಕಡೆಯಿಂದ "ಯುದ್ಧ ವಿಜಯ ಕೃತಜ್ಞತಾ ನಿಧಿ"ಗೆ ತಾವು ಹಣ ಕೂಡಿಸಿದ ಶ್ರಮವನ್ನು "ವ್ಯಕ್ತ"ಪು ಹೊರಗೆಡಹಿದ್ದು ಕಂಡು ರಾ। ಕಲ್ಲೇಕಾರರು ಈಗ ಬಡ ಚಹಾ-ಅಂಗಡಿಯವರ ಮೇಲೆ ತಮ್ಮ ಕಣ್ಣು ಹಿಡಿದಿದ್ದಾರೆ! ಅವರ ಸಕ್ಕರೆ-ಕೋಟಾಗಳನ್ನು ೩ಕ್ಕೊಂದು, ೨ಕ್ಕೊಂದು ಇಳಿಸಿದ್ದಾರೆ! ಕಾಕಾ-ಹೋಟೆಲಿನ ಕೋಟಾ ಮಾತ್ರ ಏರಿಸಲ್ಪಟ್ಟಿದೆಯಂತೆ! ತಾಲೂಕಿನ ಪಾಲಿಗೆ ಇಲ್ಲವೆ ಯಲ್ಲಾಪುರ ಶಹರದ ಪಾಲಿಗೆ ಬಂದ ಸಕ್ಕರೆ ಕಡಿಮೆಯಾಗಿರುವದರಿಂದ ಚಹಾ-ಅಂಗಡಿಯವರ ಕೋಟಾ ಕಡಿಮೆ ಮಾಡಿರಬಹುದೆಂದು ಯಾರೂ ತರ್ಕಿಸಬೇಕಾಗಿಲ್ಲ ಆ ಸಕ್ಕರೆ ಕಡಿಮೆ ಬಂದಿಲ್ಲ ಮಾಮಲೇದಾರರ "ಹಮ ಕರೇಸೋ ಕಾಯದಾ" ಎಂಬ ಧೋರಣೆ ಚಹಾ-ಅಂಗಡಿಯವರ ಸಕ್ಕರೆಗೆ ಕತ್ತರಿ ಹೊಡೆಯಲಿಕ್ಕೆ ಕಾರಣವಾಗಿದೆ ಈ ಸಂದರ್ಭಕ್ಕೆ ಕೂಡಲೆ ಯೋಗ್ಯ ನಿಯಂತ್ರಣ ಬೀಳದಿದ್ದರೆ ಊರವರಿಗೆ ಕ್ಷೇಮವಾಗುವಂತಿಲ್ಲ, ಸರಕಾರದ ಗೌರವವೂ ಉಳಿಯುವಂತಿಲ್ಲ ಜಿಲ್ಹಾಧಿಪರು ಇತ್ತ ಗಮನಿಸಬೇಕು.

ಹಳಿಯಾಳ— (ತಾ ೬-೨-೪೬) ಇಲ್ಲಿಯ ಇಂಗ್ಲೀಷ ಶಾಲೆಯಲ್ಲಿ ಈಗ ೮-೫ ತಿಂಗಳಿಂದ ಶಿಕ್ಷಕರ ಕೊರತೆಯಾಗಿದ್ದು ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಿದೆ ಆದರೂ ಹೊಸ ಶಿಕ್ಷಕರನ್ನು ನೇಮಿಸಿಕೊಳ್ಳುವ ಬುದ್ಧಿ ಮ್ಯು॥ ಯವರಿಗೆ ಆಗಬೊಲ್ಲದು! ಅವರು ಅರ್ಜಿಗಳನ್ನು ಕರೆಯುವ ಫಾರ್ಸನ್ನಷ್ಟು ಮಾಡುತ್ತಾರೆ ತಾ ೩೦-೧-೪೬ರೊಳಗಾಗಿ ಉಮೇದವಾರರು ಅರ್ಜಿ ಮಾಡಬೇಕಾಗಿ ತಾ ೨೯-೧-೪೬ರ ಪತ್ರಿಕೆಗಳಲ್ಲಿ ಜಾಹೀರಾತು ಕೊಡುತ್ತಾರೆ ಆ ಜಾಹೀರಾತು ಓದಿ ಉಮೇದವಾರರು ಅರ್ಜಿ ಮಾಡುವದು ಯಾವಾಗ ಮತ್ತು ಅವು ತಾ ೩೦-೧-೪೬ರೊಳಗೆ ಮ್ಯು॥ಯ ಆಫೀಸಿಗೆ ಮುಟ್ಟುವದು ಹೇಗೆ ಎಂಬುದರ ಆಲೋಚನೆಯೂ ಜಾಹೀರಾತು ಕೊಡುವವರಿಗೆ ಇಲ್ಲ! ವಿದ್ಯಾಧಿಕಾರಿಗಳು ಅವರಿಗೆ ತುಸು ಬುದ್ಧಿ ಕಲಿಸಿಕೊಟ್ಟರೆ ವಿದ್ಯಾರ್ಥಿಗಳೂ ಅವರ ಪಾಲಕರಿಗೂ ಉಪಕಾರವಾದೀತು

The Agricultural & Industrial Bank, Ltd.
(Incorporated in British India, Liability of Members limited)
Head Office. COONDAPOOR. S. I.

The Head Office and Branches of the Bank now accept
Season Deposits from three to six months at the following rates -
Three Months at 2¼% per annum
Six Months at 2½% per annum
Now such deposit will be allowed to run beyond 30th September 1946

Coondapoor
8-2-1946

K VAMAN SHENAI,
CHAIRMAN

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಹೊಸ ಹೊಸ ಗ್ರಾಮೋದ್ಯೋಗಗಳನ್ನು ಕಲ್ಪಿಸಿ ನಿರುದ್ಯೋಗಿ ರೈತರಿಗೂ ಇತರರಿಗೂ ಒಂದಿಲ್ಲೊಂದು ಉದ್ಯೋಗ ದೊರಕಿಸಿ ಕೊಡಬೇಕೆನ್ನುವ ಗ್ರಾಮೋದ್ಧಾರವಾದಿ ಸರಕಾರಕ್ಕೆ ಹಳ್ಳಿಗಳೊಳಗಿನ ಭತ್ತ ಖರೇದಿಯಿಂದ ಸಾವಿರಗಟ್ಟಲೆ ಸ್ತ್ರೀ ಪುರುಷರು ಇತ್ತ [illegible] ಉದ್ಯೋಗಹೀನರಾಗಿ ಉಪವಾಸ ಬೀಳುವ ಪ್ರಸಂಗ ಬಂದದ್ದು— ಈಚೆಗೆ ಪತ್ರಿಕೆಗಳಲ್ಲಿ ಕಿರುಕಿರುಗಿ ಮತ್ತು ಮೇಲಿಂದ ಮೇಲೆ ದೂರುಗಳು ಪ್ರಕಟವಾಗುತ್ತಿದ್ದಾಗ್ಯೂ— ಕಂಡು ಬರದೆ ಇರುವದು ಶಾಪರ್ಯದ ಸಂಗತಿಯೇ ಸರಿ. ಸರಕಾರಿ ಖರೇದಿಯ ಭತ್ತವನ್ನು ಅವಶ್ಯವಿರುವಷ್ಟಕ್ಕೆ ಭತ್ತ ಕುಟ್ಟಿ ಅಕ್ಕಿ ಮಾಡುವ ರೈತ ಜನರಿಗೇ ಕೊಟ್ಟು ಅಕ್ಕಿ ಮಾಡಿಸಬೇಕಾಗಿ ಸರಕಾರದವರ ಪರಿಪತ್ರದಲ್ಲಿಯೆಂದು ಹೇಳುತ್ತಾರೆ. ಆದರೆ ಗಿರಣಿಗಳ ಒಡೆಯರಿಗೂ ಸ್ಥಾನಿಕ ಅಧಿಕಾರಿಗಳಿಗೂ ಅತ್ಯಂತ ಬಹಳ [illegible] ಯ ಸಹಕಾರದ ಗೆಳೆತನ ಬೆಳೆಸಿಕೊಂಡರೆ ಏನಾದರೂ ಪ್ರಯೋಜನವಾಗುತ್ತದೆ. ಭತ್ತ ಖರೆದಿ ಮಾಡಿ [illegible] ಸುವ ಒಕ್ಕಲಿಗರ ಇಲ್ಲವೆ ಕೂಲಿಯಾಳುಗಳ ಕಡೆಗೆ ಆ ಪ್ರಯೋಜನ ಸಿಗುವಂತಿಲ್ಲ. ಅಂತೆಯೇ ಅಧಿಕಾರಿಗಳು ರೈತರಿಗೂ ಕೂಲಿಕಷ್ಟ ಮಾಡಿ ಜೀವನ ಸಾಗಿಸುವ ಬಡವರಿಗೂ ಭತ್ತ ಕೊಡಲು ಮನಸ್ಸು ಮಾಡುವದಿಲ್ಲ. ಒಂದಿಲ್ಲೊಂದು ನೆವ ಹೇಳಿ ಇಲ್ಲವೆ ಅಡಚಣೆಗಳನ್ನು ಮುಂದೊಡ್ಡಿ ರೈತರಿಗೆ ಭತ್ತ ಕೊಡುವ ಕ್ರಮವನ್ನು ತಪ್ಪಿಸುತ್ತಾರೆ. ಮಾಮಲೇದಾರರಿಗೆ ಕೇಳಿದರೆ ಕಲೆಕ್ಟರ ಕಡೆಗೆ ತೋರಿಸುತ್ತಾರೆ! ಕಲೆಕ್ಟರ ಕಛೇರಿಯಲ್ಲಿ ಚೌಕಶಿ ಮಾಡಿದರೆ ಮಾಮಲೇದಾರರಿಗೆ ಎಲ್ಲ ಅಧಿಕಾರ ಕೊಟ್ಟಿದೆಯಾಗಿದೆ ಅಲ್ಲೇ ನೀವು ಹೋಗಿ ಪ್ರಯತ್ನ ಮಾಡಿರಿ ಎಂದು ಹೇಳಲಾಗುತ್ತದೆ! ಭತ್ತ ಮರೆದು ಜೀವಿಸುವ ಜನರಿಗೆ ಭತ್ತ ಕೊಡಿಸಲಿಕ್ಕೆ ಇವರೂ ತಯಾರಾಗುವದಿಲ್ಲ ಅವರೂ ಸಿದ್ಧರಾಗುವದಿಲ್ಲ! ಉಪವಾಸ ಸಾಯುತ್ತಿರುವ ಜನರಿಗೆ ಏನಾದರೂ ಉದ್ಯೋಗ ಒದಗಿಸಿಕೊಟ್ಟು ಸಲಹುವ ಎಂಬ ಕನಿಕರ ಆ ಯೋಚನೆ ಕೂಡ ಇತ್ತಟ್ಟಿನವರಿಗೂ ತೋಚುವದಿಲ್ಲ! ಇಂತಹ ಅಧಿಕಾರಿಗಳ ಕೈಯಿಂದ ಗ್ರಾಮೋದ್ಧಾರವೇನಾದೀತು? ಹಳ್ಳಿಯ ಜನರ ಉದ್ಧಾರವೇನಾದೀತು?

* *

"ಹೆಚ್ಚೆಚ್ಚು ಭತ್ತ ಬೆಳೆಸಿ ಭಾಗ್ಯವಂತರಾಗಿರಿ" ಎಂಬ ಪ್ರಚಾರಕ್ಕೇನು ಕಡಿಮೆಯಿಲ್ಲ. ಆದರೆ ಹೆಚ್ಚಿನ ಭತ್ತ ಬೆಳೆಸಲಿಕ್ಕೆ ಅವಶ್ಯವಿರುವ ಸಾಧನ ಸಾಮಗ್ರಿಗಳನ್ನು ರೈತರಿಗೆ ಒದಗಿಸಿ ಕೊಡುವ ವಿಚಾರ ಆ ಪ್ರಚಾರಕ ಅಧಿಕಾರಿಗಳ ತಲೆಯಲ್ಲಿ ಸುಳಿಯುವದಿಲ್ಲ. ಬೆಳೆಗೆ ಗೊಬ್ಬರ ಬೇಕು. ಗೊಬ್ಬರವಿಲ್ಲದಿದ್ದರೆ ಹೊಲದಲ್ಲಿ ಬೆಳೆ ಹೇಗೆ ಬರುವದು? ಹೆಚ್ಚು ಭತ್ತ ಬೆಳೆಸಲಿಕ್ಕೆ ರೈತರಿಗೆ ಹೊರಗಿಂದ ಹೆಚ್ಚಿನ ಗೊಬ್ಬರ ತಂದು ಪೂರೈಸುವ ಮಾತು ಒತ್ತಟ್ಟಿಗಿರಲಿ, ಹಿರಿಯರ ಕಾಲದಿಂದ ರೈತರಿಗೆ ಪುಕ್ಕಟೆ ಮತ್ತು ವಿಪುಲವಾಗಿ ಸಿಗುತ್ತಿದ್ದ ಗೊಬ್ಬರವನ್ನೂ ಕೂಡ ಭತ್ತ ಖರೇದಿ ಗಿರಣಿಗಳಿಗೆ ಕೊಡುವ ಹಟದಿಂದ ಅಧಿಕಾರಿಗಳು ಕಸಿದುಕೊಂಡಿದ್ದಾರೆ. ಹಳ್ಳಿಗಳಲ್ಲೇ ಭತ್ತ ಮರೆಯುವ ಉದ್ದಿಮೆ ಹಿಂದಿನಂತೆ ಈಗಲೂ ನಡೆದಿದ್ದರೆ ಭತ್ತ ಮರೆಯುವಾಗ ಹೊರಡುವ ಉಮ್ಮಿ ರೈತರ ಗೊಬ್ಬರದ ಪ್ರಯೋಜನಕ್ಕೆ ಬರುತ್ತಿತ್ತು. ಆ ಭತ್ತವೆಲ್ಲ ಗಿರಣಿಗಳಿಗೆ ಸಾಗುತ್ತಿರುವದರಿಂದ ಒಕ್ಕಲಿಗರಿಗೆ ಆ ಗೊಬ್ಬರ ಸಿಗದಂತಾಗಿದೆ. ಇನ್ನೊಂದು ಮಾತೂ ಮಹತ್ವದ್ದು. ಹೊಲ ಹೂಡುವ ಎತ್ತುಗಳಿಗೂ ಹಳ್ಳಿಗಳೊಳಗಿನ ದನಗಳಿಗೂ ಭತ್ತದ [illegible] ವಲ್ಲಿ ಸಿಗವದೇ ಮುಖ್ಯವಾಗಿ [illegible] ಒಳ್ಳೆ ಗರಿಲ್ಲ. ಈಗಂತೂ ಆ ಹತ್ತಿಕಾಳು ಸಿಗುವದೂ ಕಷ್ಟವಾಗಿದೆ, ಸಿಕ್ಕಿದರೂ ಅಪೂರ್ವದ ಬೆಲೆ. ಒಕ್ಕಲಿಗರ ಕೊಂಡುಕೊಳ್ಳುವ ಶಕ್ತಿಗೆ ನಿಲುಕದಷ್ಟು ದುಬಾರಿ. ಭತ್ತವನ್ನು ಗಿರಣಿಗಳಿಗೇ ಕೊಡುವ ಕ್ರಮದಿಂದ ಒಕ್ಕಲಿಗರಿಗೆ ಸಿಗುತ್ತಿದ್ದ ಆ ಅಮೂಲ್ಯ ಹಿಂಡಿ ಈಗ ಅವರಿಗೆ ಸಿಗದಂತಾಗಿದೆ ಮತ್ತು ಕಾಳಿನ ಅಭಾವದಿಂದ ಅವರ ದನಕರುಗಳೂ ಹೂಡುವ ಎತ್ತುಗಳೂ ಸೊರಗಿ ಸೊರಗಿ ಸಾವಿನ ಬರವನ್ನು ಪ್ರತೀಕ್ಷಿಸುತ್ತ ಕಾಲ ಕಳೆಯುತ್ತಿವೆ. ಒಕ್ಕಲಿಗರ ಗೋಧನವು ಹೀಗೆ ಕ್ರಮೇಣ ಕಡಿಮೆಯಾಗುತ್ತ ಹೋದರೆ ಅವರು ಹೊಲದಲ್ಲಿ ಹೆಚ್ಚು ಬೆಳೆ ಬೆಳಸುವದೆಲ್ಲಿಂದ?

* *

ಮೇಲಾಗಿ ಭತ್ತವನ್ನು ಗಿರಣಿಗಳಿಗೆ ಕೊಡುತ್ತಿರುವದರಿಂದ ಅಕ್ಕಿ ಮಾಡಿಸುವ ಖರ್ಚು ಹೆಚ್ಚುತ್ತಿದೆ ಮತ್ತು ಖರ್ಚಿನ ಪ್ರಮಾಣದಿಂದ ಅಕ್ಕಿಯೂ ತುಟ್ಟಿ ಬೀಳುತ್ತಿದೆ. ಹಳ್ಳಿಗಳಲ್ಲಿ ಖರೇದಿಸಿದ ಭತ್ತ ಮೋಟಾರ ಬಂಡಿಯಲ್ಲಿ ಹೇರಿ ಗಿರಣಿಗೆ ಒಯ್ಯಬೇಕು ಮತ್ತು ಅಕ್ಕಿಯಾದ ಮೇಲೆ ಅದನ್ನು ತಿರುಗಿ ಹಳ್ಳಿಗೆ ಮುಟ್ಟಿಸಬೇಕು. ಮೋಟಾರ ಹತ್ತಿಸಲಿಕ್ಕೆ ಮಜೂರಿ, ಮೋಟಾರಿಂದ ಇಳಿಸಲಿಕ್ಕೆ ಮಜೂರಿ, ಹೋಗಿ ಬರುವ ಮೋಟಾರ ಬಾಡಿಗೆ ಹೀಗೆಲ್ಲ ಬೇರೆ ಲೆಕ್ಕ [illegible] ಅನವಶ್ಯಕ ಖರ್ಚು [illegible] ಅದನ್ನು ಮುಂದೆ ಬಡವರ ತಲೆಯ ಮೇಲೆ — ಅಕ್ಕಿಯ ದರ ಹೆಚ್ಚಿಸಿ — ಹೇರುವದು ನ್ಯಾಯ್ಯವೇನು? ಒಂದರ [illegible] ಹೊಸ [illegible] ಬಂದ [illegible] ಈ ಇಬ್ಬರ [illegible] ಆಮೂಲಾಗ್ರ ಅಭ್ಯಸಿಸಿ ಒಕ್ಕಲಿಗರ ಪಕ್ಷ [illegible] ಯಾವ ಆಲೋಚನೆ ಮಾಡಬಲ್ಲರು?

* *

ಸರ್ಕಾರದವರು ನೇಮಿಸುವ ಕೆಲ ತಾಲೂಕು ಮೆಜಿಸ್ಟ್ರೇಟರಿಗೆ ಕಾಯದೆ ಕಾನೂನುಗಳ ಜ್ಞಾನವಿರಲಿ, ಅವುಗಳ ಅರ್ಥ ಮಾಡುವ ಕ್ರಮಬದ್ಧ ಸಂಗತಿಯ ಅರಿವು ಇರುವದಿಲ್ಲ. [illegible] ಮಂತ್ರಿ [illegible] (ಪ್ರೆಸ ಎಕ್ಟ) ರದ್ದಾದ [illegible] ವರ್ಷಗಳ [illegible] ಕಾಯದೆಯನ್ವಯ ಹಿಂದೆ ಒಬ್ಬರು [illegible] ಓರ್ವ ಮೆಜಿಸ್ಟ್ರೇಟರು ಕ್ರಮ ನಡೆಸಲು ತಯಾರಾಗಿದ್ದರು. [illegible] ಕಾಯದೆ ರದ್ದಾಗಿದೆಯಲ್ಲ ಎಂದು ಅವರ ಜ್ಞಾನಕ್ಕೆ ತರಲಾಗಿ, ಕಾಯದೆಯು ಹೊಸ [illegible] ರದ್ದಾಗಿದೆ, ಕಾಯದೆ ರದ್ದಾಗಿಲ್ಲವೆಂದು ಆ ಮಹಾಪಂಡಿತರು ವಾದಿಸಿದ್ದರಂತೆ! ಇಂದಿಗೂ ನಮ್ಮ ಜಿಲ್ಲೆಯಲ್ಲಿ ಅಂತಹ ಪಂಡಿತ ಮೆಜಿಸ್ಟ್ರೇಟರು ಅನೇಕರಿದ್ದಾರೆ. [illegible] ನಾಗರಿಕರೊಬ್ಬರ ಕೋವಿ [illegible] ಅವಧಿ [illegible] ವರ್ಷಗಳ ಹಿಂದೆ ತೀರಿ ಹೋಗಿತ್ತು. [illegible] ಪತ್ರಿಯಲ್ಲಿ ಆ ಪರವಾನೆಯ ಅವಧಿಯನ್ನು ಬೆಳೆಸಿಕೊಳ್ಳಲು ಅವರು ಮರೆತರಂತೆ. ಕಾರವಾರ ವಿಭಾಗದ ಅಧಿಕಾರಿಗಳು ಏತಕ್ಕೋ ಆ ನಾಗರಿಕರ ಶಸ್ತ್ರಾಸ್ತ್ರಗಳನ್ನು ಹುಡುಕುತ್ತಿದ್ದರು. ಆ ನಾಗರಿಕರು ಕೋವಿ ಪರವಾನೆಯ ಅವಧಿಯನ್ನು ಮೀರಿದಾಗ್ಯೂ ಅದನ್ನು ಬೆಳೆಸಿಕೊಳ್ಳದೆ ಇದ್ದುದು ಕಣ್ಣಿಗೆ ಬಿದ್ದ ಕೂಡಲೇ ಆ ಅಧಿಕಾರಿಗಳು ಪರವಾನೆ ಇಲ್ಲದೆ ಕೋವಿಯನ್ನು ಇಟ್ಟುಕೊಂಡ ಆರೋಪ ಹೊರಿಸಿ ನಾಗರಿಕರ ಮೇಲೆ ಖಟ್ಲೆ ಹೂಡಿದರು. ಇನ್ನೊಂದು ಬಾರಿಗೆ ನಾಗರಿಕರು ಕಲೆಕ್ಟರ ಸಾಹೇಬರಿಗೆ ಅರ್ಜಿ ಮಾಡಿ ತಮ್ಮ ಪರವಾನೆಯ ಅವಧಿಯನ್ನು ಬೆಳೆಸಿಕೊಂಡರು. ಹಿಂದಿನ ಅವಧಿ ಮುಗಿದ ತಾರೀಕಿನಿಂದ [illegible] ವರ್ಷದ ವರೆಗೆ ಕಲೆಕ್ಟರ ಸಾಹೇಬರು ಅವಧಿ ಬೆಳೆಸಿಕೊಟ್ಟಿದ್ದುಂಟು. ಈ ಕಾರಣದಿಂದ ನಾಗರಿಕರ ಕೋವಿ ಧಾರಣೆಯು ಮೊದಲಿಂದ ಕಾನೂನಬದ್ಧವಾಗುತ್ತದೆಂದು [illegible] ಕಾಯದೆಯ ಸೂಕ್ಷ್ಮ ಅರ್ಥ ಮಾಡಲಾರದ [illegible] ವ್ಯವಹಾರ ಜ್ಞಾನಿಯೂ ಈ ಮಾತನ್ನು ಹೇಳಬಲ್ಲನು. ಆದರೆ ಕಾರವಾರ ವಿಭಾಗದ ಸಬ್ ಡಿವಿಜನಲ್ ಮೆಜಿಸ್ಟ್ರೇಟರಿಗೆ ಇಷ್ಟು ಸಾದಾ ಮತ್ತು ಸರಳ ಸಂಗತಿ ತಾನಾಗಿ ತಿಳಿಯುವದು ಒತ್ತಟ್ಟಿಗಿರಲಿ, ನಿಷ್ಣಾತ ವಕೀಲರು ಬಿಡಿಸಿ ಹೇಳಿದಾಗ್ಯೂ ಅವರ ತಲೆಯಲ್ಲಿ ಹೊಗಲಿಲ್ಲ! "ಹಿಂದಿನಿಂದ ಪರವಾನೆ ಸಿಕ್ಕಿದರೂ ಪರವಾನೆಯಿಲ್ಲದೆ ಆರೋಪಿಯು ಕೆಲಕಾಲ ಕೋವಿಯಿಟ್ಟುಕೊಂಡದ್ದು ಸಿದ್ಧವಾಗುತ್ತದಲ್ಲವೇ?" ಎಂದೇ ಆ ಮೆಜಿಸ್ಟ್ರೇಟರು ಖಾಲುಸದ ಹಾಡುತ್ತ ಕುಳಿತುಕೊಂಡರಂತೆ! ಮುಂದೆ ನಾಗರಿಕರು ಎಲ್ಲ ಸಂಗತಿಗಳನ್ನು ಜಿಲ್ಹಾ ಮೆಜಿಸ್ಟ್ರೇಟರಿಗೆ ಅರುಹಿ ತಮ್ಮ ಮೇಲಿನ ಖಟ್ಲೆಯನ್ನು ಹಿಂತೆಗೆದುಕೊಳ್ಳಹಚ್ಚಿದ್ದರಿಂದ ನಾಗರಿಕರ ರಕ್ಷಣೆಯಾಯಿತು. ಇಲ್ಲವಿದ್ದರೆ ಅವರಿಗೆ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಶಿಕ್ಷೆಯನ್ನು ವಿಧಿಸಿಯೇ ಬಿಡುತ್ತಿದ್ದರಂತೆ!

* *

ಯಲ್ಲಾಪುರದ ತಿನೇ ವರ್ಗದ ಮೆಜಿಸ್ಟ್ರೇಟರಾದ ಮಾಮಲೇದಾರರೂ ಅದೇ ವರ್ಗದವರು. ತಮ್ಮ ಮಾತು ಕೇಳದ ಇಲ್ಲವೆ ತಮ್ಮಂತೆ ನಡೆಯದ ಮಂದಿಯ ಮೇಲೆ ಇವರ ಒಂದಿಲ್ಲೊಂದು ದೂರು ದಾಖಲಪಡಿಸಿಕೊಂಡು ಖಟ್ಲೆ ನಡೆಸುತ್ತಾರೆ! ಖಟ್ಲೆಗೆ ಕಾಯದೆಯ ಬಲವೂ ಬೇಡ, ಖಟ್ಲೆಯ ವಿಚಾರಣೆಯ ಕ್ರಮದ ಕಲ್ಪನೆಯ ಅವಶ್ಯವೂ ಬೇಡ! ೧ ತಿಂಗಳ ಹಿಂದೆ ಈ ಮೆಜಿಸ್ಟ್ರೇಟರು ತಾರೀಮಕ್ಕಿ ಗ್ರಾಮದ ಓರ್ವ ಹಳ್ಳಿಗನಿಗೆ ಆರೋಪಿಸಿ ಸಮನ್ಸ್ ಹೊರಡಿಸಿ "ಇವನ ಹೆಂಡತಿಯು ಇವನ ಕೂಡ ಮಾಡಿಕೊಂಡ ವ್ಯಭಿಚಾರ ದೋಷಕ್ಕಾಗಿ ಸವಿಲ ಇದ್ದು ಊರಲ್ಲಿ ದುಃಖ ಎಬ್ಬಿಸುವ ಅಪರಾಧದ" ಹೊರಿಸಿ ಜಾಮೀನು ಕೊಡಲಿಕ್ಕೆ ತಮ್ಮ [illegible] ಜಾಮೀನು ಮಾಡಿದ್ದಾರೆ! ಸಮನ್ಸಿನಲ್ಲಿ ಕಾಯದೆಯ ಕಲಮು ಇಲ್ಲ! ಫಿರ್ಯಾದಿ ಯಾರೆಂಬುದರ ನಿರ್ದೇಶವಿಲ್ಲ! ಯಾವ ದಿನ ಅಪರಾಧವಾಯಿತೆಂಬುದರ ಸ್ಪಷ್ಟೀಕರಣವೂ ಇಲ್ಲ! ಹೆಂಡತಿಯ ವ್ಯಭಿಚಾರದ ಬಗ್ಗೆ ದೂರು ದಾಖಲಿಸುವ ಅಧಿಕಾರ ಕಾಯದೆಯಂತೆ ಗಂಡನಿಗೆ ಮಾತ್ರ ಉಂಟು. ಬೇರಾವನೂ ಫಿರ್ಯಾದಿ ಕೊಡಬರುವದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಪತಿಯು ಫಿರ್ಯಾದಿಯಲ್ಲ ಎಂದು ತಿಳಿಯುತ್ತದೆ. ಆದರೂ ಮಾಮಲೇದಾರರು ಫಿರ್ಯಾದನ್ನು ಹಿಡಿದು ವಿಚಾರ ನಡಿಸಿದ್ದಾರೆ! ಫಿರ್ಯಾದಿಯೊಳಗಿನ ವಿಧಾನಗಳು ಎಷ್ಟರ ಮಟ್ಟಿಗೆ ನಿಜ ಅಥವಾ ಸುಳ್ಳು ಇರತಕ್ಕವೆಂಬುದರ ಪ್ರಶ್ನೆ ಈಗಿಲ್ಲ. ಅದರ ಚರ್ಚೆ ಈಗ ಮಾಡಲಿಕ್ಕೂ ಬರುವಂತಿಲ್ಲ. ಮೆಜಿಸ್ಟ್ರೇಟರು ಹೊರಡಿಸಿದ ಸಮನ್ಸಿನ ಮೇಲಿಂದ ಕಂಡುಬರುವ ಸಂಗತಿಗಳನ್ನಷ್ಟೇ ಇಲ್ಲಿ ನಮೂದಿಸಲಾಗಿದೆ.

* *

ಮಾಮಲೇದಾರರು ತಮ್ಮ ಕೋರ್ಟ ಮಾಡುವ ನಮೂನೆಯೂ ನಮೂದಿಸತಕ್ಕಂಥಾದ್ದಿದೆ. ತಾಲೂಕ ಕಚೇರಿಯಲ್ಲಿ ಅವರು ಕೋರ್ಟ ಮಾಡುವದು ಕಡಿಮೆ! ಅವರು ಖಟ್ಲೆಗಳ ವಿಚಾರಣೆ ಮಾಡುವದು ಹೆಚ್ಚಾಗಿ ತಮ್ಮ ವಾಸ್ತವ್ಯದ ಬಿಡಾರದಲ್ಲಿ. ತಮ್ಮ ಬಿಡಾರದ ಸಣ್ಣದೊಂದು ಕೋಣೆಯಲ್ಲಿ ಕುಳಿತುಕೊಂಡು ಅವರು ವಿಚಾರಣೆ ಮಾಡುತ್ತಾರೆ. ಪಕ್ಷಗಾರರು ಸಾಕ್ಷಿಗಾರರು ಮತ್ತು ವಕೀಲರ ವಿನಹ ಬೇರೆ ಯಾರಿಗೂ ಅಲ್ಲಿ ಕೂಡ್ರಲಿಕ್ಕಾಗಲಿ ನಿಲ್ಲಲಿಕ್ಕಾಗಲಿ ಸ್ಥಳವಿಲ್ಲ! "ನಾವು ಮೆಜಿಸ್ಟ್ರೇಟರು; ನಾವು ಕೂತಲ್ಲಿ ನಮ್ಮ ಕೋರ್ಟ! ನಮಗೆ ಕೇಳುವವರಾರು ಹೇಳುವವರಾರು?" ಎಂಬೀ ದರ್ಪದಿಂದ ಮಾಮಲೇದಾರರು ನಡೆಯುತ್ತಿದ್ದಾರೆ. ಅಂತಹ ಅಪವಾದಕ ಪ್ರಸಂಗವಿಲ್ಲದಿದ್ದಲ್ಲಿ — ಇದಕ್ಕೆ ಯೋಗ್ಯ ಕಾರಣ ಕೊಡಬೇಕೆಂದು ಕಾಯದೆಯುಂಟು — ಜಾಹೀರಾದ ಪ್ರಶಸ್ತ ಸ್ಥಳದಲ್ಲಿ ಕೋರ್ಟ ಮಾಡಬೇಕೆಂದೂ ಖಟ್ಲೆ ಕೇಳಬಯಸುವ ಸರ್ವಜನರಿಗೆ ಮುಕ್ತ ದ್ವಾರವಿಟ್ಟು ಕೋರ್ಟ ಮಾಡಬೇಕೆಂತಲೂ ಕಾಯದೆಯಲ್ಲೇನೋ ಉಂಟು! [illegible] ಆದರ ಪರಿವೆ ಮಾಮಲೇದಾರರಿಗಿಲ್ಲ! ಆ ಕಾಯದೆಗಳೆಲ್ಲ ಬೇರೆ ಮೆಜಿ

ಸ್ಪೇಟಿಂಗ ನಮ್ಮಂತವರಿಗೆ ಅತ್ಯ ಅವಶ್ಯವಿರುವದಿಲ್ಲ!" ಎಂದು ಅವರು [illegible] ಬಿಡಿಸುತ್ತಾರೆ! ಇಂತಹ ಮೆಜಿಸ್ಟ್ರೇಟರಿಂದ ಪ್ರಜೆಗಳಿಗೆ ನ್ಯಾಯದಾನದ ಗುಣದಿಂದ [illegible] ಅದರ ನಿರ್ಣಯವನ್ನು ಸರಕಾರವು [illegible] ಪದ್ಧತಿಯಲ್ಲಿ ಆ ಬಗ್ಗೆ ನೇರ ಕಲ್ಪಿಸುವ ಶಿಬಂದಿಯಲ್ಲಿ ಬೇಗನೇ ಸುಧಾರಣೆ ಮಾಡಿ [illegible] ಸೂಚಿಸುವದೇ ಈ ಬರವಣಿಗೆಯ ತಾತ್ಪರ್ಯ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಈಗ ತುಸು ಕಡಿಮೆಯಾಗಿದೆ ಹಗಲು ಹೊತ್ತಿಗೆ ಸೆಕೆಯಾಗುತ್ತಿದೆ.

ತೀರ್ಪೆಯ ೧ನೇ ಹಪ್ತೆಯ ನಗರದ ನಡೆದ ಸರಕಾರದವರ ಹೊಸ ಕಾಯಿದೆಯಂತೆ ಈ ವರ್ಷ [illegible] ಸಂಡಗ್ಗು [illegible] ಅತಿ [illegible] ಜರುಗಿತು.

ಶ್ರೀ ವೆಂಕಟರಮಣ ದೇವರ ರಥೋತ್ಸವವು ಕಳೆದ ಶುಕ್ರವಾರ ವಾಡಿಕೆಯಂತೆ ವಿಜೃಂಭಣೆಯಿಂದ ನೆರವೇರಿತು ಈ ವರ್ಷದ ಜಾತ್ರೆಯಲ್ಲಿ ಜನದಟ್ಟಣೆ ಸ್ವಲ್ಪ ಹೆಚ್ಚಿಗೆ.

ಇಲ್ಲಿಯ ಮ್ಯುನಿಸಿಪಲ ಚಿಕಿತ್ಸಾಲಯದ ಡಾ॥ ಶೆಟ್ಟಿಯವರು ಸೇವಾನಿವೃತ್ತರಾಗಿದ್ದು ಅವರ ಸ್ಥಳದಲ್ಲಿ ೪ ವರ್ಷಗಳ ಹಿಂದೆ ಇಲ್ಲಿದ್ದ ಡಾ॥ ವಿಟ್ಠಲ ಪಿ ಮಂಗಳೇಕರವರು ಬಂದಿದ್ದಾರೆ ಡಾ॥ ಶೆಟ್ಟಿಯವರು ಇಲ್ಲೇ ಉಳಿದು ಖಾಸಗಿ ಚಿಕಿತ್ಸಾಲಯ ನಡಿಸುವರೆಂದು ಸುದ್ದಿಯುಂಟು.

ಸೀಧಾ ಅಂಗಡಿಯಲ್ಲಿ ಹೊಸ ರೆಶನಿಂಗ್ ಗೋದಿ ಮಾರಾಟಕ್ಕಿಟ್ಟಿದ್ದಾರೆ ಪ್ರತಿಯೊಬ್ಬರಿಗೆ ೧ ಇಡಲ್ಪಟ್ಟಿದೆ.

ವೈ॥ ವಾ॥ ಹುಬ್ಬಳ್ಳಿಯ ಸುಬ್ಬರಾಯರ ನಿಧನದಿಂದ ತೆರವಾದ ಧಾರವಾಡ-ಕಾನಡಾ ಮತದಾರ ವಿಭಾಗದ ಮುಂಬಯಿಯ ಕಾನೂನ-ಮಂಡಳದ ಜಾಗಕ್ಕೆ ಕಾಂಗ್ರೆಸ ಪರವಾಗಿ ಹುರಿಯಾಳಾಗಿ ಶ್ರೀ॥ ಮಹಾಬಲೇಶ್ವರ ಭಟ್ಟ ಗೋಪಿಯವರು ಆರಿಸಲ್ಪಟ್ಟಿದ್ದರು ಕಳೆದ ಗುರುವಾರ ತಾ ೭ಕ್ಕೆ ಆ ಸ್ಥಳದ ನಾಮಪತ್ರ ಕೊಡುವದಿತ್ತು. ರಾ॥ ಗೋಪಿಯವರೂ ಅವರ ನಾಮಪತ್ರ ಒಂದೊಮ್ಮೆ ಯಾವದೇ ದೋಷದ ಮೂಲಕ ನಿರಾಕರಿಸಲ್ಪಟ್ಟಲ್ಲಿ ಕಾಂಗ್ರೆಸ ಪರವಾಗಿ ಇನ್ನೊಂದು ಇರಲೆಂದು ರಾ॥ ಮಾವಿನಕುರ್ವೆಯವರೂ ಧಾರವಾಡ ಜಿಲ್ಲೆಯ ಕಲೆಕ್ಟರರ ಮುಂದೆ ಹುರಿಯಾಳು ಪತ್ರಗಳನ್ನು ಹಾಜರಪಡಿಸಿದ್ದರು ಮತ್ತ್ಯಾರೂ ಹುರಿಯಾಳಾಗಿ ಮುಂದೆ ಬರಲಿಲ್ಲ ಪರಿಶೀಲನೆಯಲ್ಲಿ ರಾ॥ ಗೋಪಿಯವರ ಹುರಿಯಾಳು ಪತ್ರ ಕ್ರಮಬದ್ಧವಿರುತ್ತದೆಂದು ನಿರ್ಣಯವಾದ ನಂತರ ರಾ॥ ಮಾವಿನಕುರ್ವೆಯವರು ತಮ್ಮ ಉಮೇದವಾರಿಯನ್ನು ಹಿಂತೆಗೆದುಕೊಂಡರು ಹೀಗಾಗಿ ರಾ॥ ಗೋಪಿಯವರು ಅವಿರೋಧ ಆರಿಸಿಬಂದಿದ್ದಾರೆ.

ಹಳ್ಳಿಗರೊಬ್ಬರು ಬರೆಯುತ್ತಾರೆ "ನಾನು ಕಳೆದ ತಾ ೬ಕ್ಕೆ ಕುಮಟೆಯ ೩ನೇ ವರ್ಗದ ಮೆಜಿಸ್ಟ್ರೇಟರಲ್ಲಿ ಒಂದು ಕೆಲಸದ ನಿಮಿತ್ತ ಹೋಗಿದ್ದೆ ಬಾಗಿಲಲ್ಲಿ ಶಿಪಾಯಿ ಕುಳಿತುಕೊಂಡಿದ್ದರು ನನ್ನ ತಲೆಯ ಮೇಲಿನ ಗಾಂಧಿಟೊಪ್ಪಿ ಕಂಡು ಅವರಿಗೆ ಸಿಟ್ಟು ಬಂತು! ಒಮ್ಮೆಲೇ ಪಟ್ಟೇವಾಲನಿಗೆ ಕರೆದು ಗಾಂಧಿ ಟೊಪ್ಪಿಗೆ ಹಾಕಿಕೊಂಡವರಿಗೆ ಹೇಗೆ ಒಳಗೆ ಬಿಟ್ಟೆ ಎಂದು ಅವರು ವಿಚಾರಿಸಿದರು! ಗಾಂಧಿ ಟೊಪ್ಪಿಗೆ ಹಾಕಿಕೊಳ್ಳುವವರು 'ಬದಮಾಷ' ಇರುತ್ತಾರೆಂದು ಬಾಯಿಂದ ಕೆಲವು ಮುತ್ತುಗಳನ್ನೂ ಉದುರಿಸಿದರು! ನಾನು ಬೆಪ್ಪನಾದೆ ಅಷ್ಟರಲ್ಲಿ ವಕೀಲರು ಕರೆದದ್ದರಿಂದ ನಾನು ಹಾಗೆಯೇ ಒಳಗೆ ಹೋದೆ ಆಗಂತೂ ಆ ಸಾಹೇಬರ ಸಿಟ್ಟು ಇನ್ನೂ ಹೆಚ್ಚಿ ಪಟ್ಟೇವಾಲನಿಗೆ ಬಾಯಿಗೆ ಬಂದಂತೆ ಬೈದರು! ಈ ಪ್ರಜಾಸತ್ತೆಯ ಬೇಗನೇ ವಿಲಯಕ್ಕೆ ಕಳಿಸಿಕೊಡುವದುತ್ತಮ ಇಲ್ಲದಿದ್ದರೆ ಗಾಂಧಿ ಟೊಪ್ಪಿಗೆ ಹಾಕುವ ವ್ಯಕ್ತಿಗಳು ಯಾನೇ ಅಧಿಕಾರದ [illegible] ಬರದೆ ಇರುವುದೇ ಇವರ ದಿನ ಕೆಲ್ಸ ಹೋಗುವ ಸಂಭವವಿದೆ ಇತ್ಯಾದಿ.

ಈ ವರ್ಷದ ಗಂಡುಮಕ್ಕಳ ಶಾಲೆಯ ವಾರ್ಷಿಕ ಪರೀಕ್ಷೆ ತಾ ೨೪ ೨೧೪೬ಕ್ಕೆ ಪ್ರಾರಂಭವಾಗುವದಾಗಿ ತಿಳಿಯುತ್ತದೆ.

ಹೊನ್ನಾವರ— (ತಾ ೯-೨-೪೬) ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್ ದ್ವಾರಕಾನಾಥ ತೀರ್ಥ ಗುರುಗಳು ಇಂದು ಪ್ರಾತಃ ಇಲ್ಲಿಂದ ಹೊರಟು ಗೇರಸಪ್ಪೆಗೆ ಚಿತ್ತೈಸಿದ್ದಾರೆ ನಂತರ ಅಲ್ಲಿಂದ ಜೋಗಿಗೆ ಹೋಗುವರು ಅಲ್ಲಿ ಒಂದು ದಿನ ಮುಕ್ಕಾಮು ಮಾಡಿ ಮುಂದೆ ಬಿಳಗಿ ಸಿದ್ದಾಪುರ ಸಂಚಾರವನ್ನು ಆರಂಭಿಸುವವರಿದ್ದಾರೆ.

ಕಳೆದ ತಾ ೪ರಂದು ಇಲ್ಲಿಯ ಹವ್ಯಕ ಸಹಕಾರಿ ಬ್ಯಾಂಕಿನವರೂ ಕೂಡ ಅಡಿಕೆ ತೆರಿಗೆಯ ವಿರೋಧ ಮಾಡುವ ಗೊತ್ತುವಳಿಯನ್ನು ಮಾಡಿದ್ದು ತಿಳಿಯುತ್ತದೆ.

ಭಟಕಳ— (ತಾ ೬-೨ ೧೯೪೬) ಕಳೆದ ವಾರ ಪುನಃ ಆಬಕಾರಿ ಅಧಿಕಾರಿಗಳು ತೆಂಗಿನಗುಂಡಿಯಲ್ಲಿ ಸರಾಯಿ ಶೋಧ ನಡಿಸಲು ಮುತ್ತಿಗೆ ಹಾಕಿ ಕೆಲವು ರಸಾಯನ ಹಿಡಿದಿದ್ದರು. ಅದರಿಂದ ರೊಚ್ಚಿಗೆದ್ದ ಸರಾಯಿಗಳ್ಳರು ಮುಂದೆ ಒಂದೆ ದಿನ ಅಬಕಾರಿ ಸಬ್ ಇನ್ಸಪೆಕ್ಟರರು ತಮ್ಮಲ್ಲಿ ಬಂದಾಗ ಅವರ ಕೈಯೊಳಗಿನ ಪಿಸ್ತೂಲನ್ನೂ ತಲೆಯ ಮೇಲಿನ ಹ್ಯಾಟನ್ನೂ ಕಸಕೊಂಡು ಸಬ್ ಇನ್ಸಪೆಕ್ಟರರನ್ನೂ ಅವರ ಶಿಪಾಯಿಗಳನ್ನೂ ಚೆನ್ನಾಗಿ ಪೆಟ್ಟು ಕೊಟ್ಟರಂತೆ ಈ ಸುದ್ದಿ ಜಿಲ್ಲಾ ಪೋಲೀಸ ಸುಪರಿಂಟೆಂಡರಿಗೆ ಮುಟ್ಟಿತು ಅವರು ಕೂಡಲೆ ಇಲ್ಲಿ ಬಂದು, ಪೋಲೀಸ ಪಡೆ ಸಹಿತ ತೆಂಗಿನಗುಂಡಿಗೆ ಹೋಗಿ ಚೌಕಸಿ ನಡಿಸಿ, ಸರಾಯಿಗಳ್ಳರ ಪ್ರಮುಖನೆಂದು ವ್ಯಕ್ತಿಯೊಂದ ಮಾಸ್ತಪ್ಪನನ್ನೂ ಬೇರೆ ೫ ೬ ಜನರನ್ನೂ ಹಿಡಿದಿಟ್ಟಿದ್ದಾರೆ.

ಊರೊಳಗಿನ ಕೆಲವು ಹುಡುಗರು ಅಂತರಂಗದಿಂದ "ದಿಲ್ಲಿ ಚಲೋ" ಯೆಂಬಂತೆ ಪೋಲೀಸರು ಈ ಹುಡುಗರ ಪತ್ತೆ ಹಚ್ಚಿ ಅವರ ದುಷ್ಟಚಟಕ್ಕೆ ತಡೆ ಹಾಕಬೇಕು.

ಸೀಧಾ ಅಂಗಡಿಗಳಲ್ಲಿ ಜೋಳಾಕ್ಕಿ ಕೊಡುವ ಅಕ್ಕಿ ಬಂದಿದೆ ಅದೇ ಮೇರೆಗೆ ಜೋಳಾಕ್ಕಿ ಬದಲಿಗೆ ಅಕ್ಕಿಯನ್ನು ಕೊಡುವಂತೆ ಮಾಡಬೇಕಾಗಿ ಅನೇಕರ ಬೇಡಿಕೆಯಿದೆ.

ಊರಲ್ಲಿ ಸಿಡುಬು ಮತ್ತು ಬೇನೆಗಳಿದೆ ಕೋಳಿಗಳದೂ ಒಂದು ತರದ ಬೇನೆ ಬಂದಿದೆ ದಿನಾಲೂ ಬಹಳ ಕೋಳಿಗಳು ಸಾಯುತ್ತಿವೆ ಜನರು ಸತ್ತ ಕೋಳಿಗಳ ವ್ಯವಸ್ಥೆ ಸರಿಯಾಗಿ ಮಾಡದೆ ಹಾದಿಯ ಮೇಲೆ ಒಗೆಯುತ್ತಾರೆ ಮ್ಯುನಿಸಿಪಾಲಿಟಿಯವರಾದರೂ ಅವನ್ನು ಅಗೆದು ಹೂಳುವ ವ್ಯವಸ್ಥೆ ಮಾಡಬಹುದೋ?

(ತಾ ೯ ೨ ೪೬) ಮುಸ್ಲಿಮ ಲೀಗಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ರಾ॥ ಖಾದರ ಇವರ ಮರಿಯಾಡುವ [illegible] ಈ ಜಿಲ್ಲೆಯ ಪರವಾಗಿ ಎಸೆಂಬ್ಲಿಯ ಚುನಾವಣೆಗೆ ರಾ॥ ಜೇ ಎಚ್ ಶಮಸುದ್ದೀನ ಇವರಿಗೆ ಲೀಗದ ಹುರಿಯಾಳಾಗಿ ನಿಲ್ಲಿಸತಕ್ಕದ್ದೆಂದು ನಿರ್ಣಯಿಸಿದ್ದಾರೆ.

ಸಿದ್ದಾಪುರ— (ತಾ ೬ ೨ ೪೬) ಹೊಸ ಜಿಲ್ಲಾ ಧಿಕಾರಿಗಳಾದ ರಾ॥ ರಾಣಾ ಇವರು ಇಲ್ಲಿಯ ತಾಲೂಕ ಪಹಣಿಗಾಗಿ ಇದೇ ತಾ ೧೪ಕ್ಕೆ ಇಲ್ಲಿಗೆ ಬರುವರು ಅವರ ಕಾರ್ಯಕ್ರಮ ಈ ರೀತಿ ಇದೆ — ತಾ ೧೪ರಂದ ೧೬ ಸಿದ್ದಾಪುರ ತಾ ೧೭ ೧೮ ಬಿಳಗಿ ತಾ ೧೯-೨೦ ಪುನಃ ಸಿದ್ದಾಪುರ ತಾ ೨೧ರಿಂದ ೨೪ ಶಿರ್ಸಿ ತಾ ೨೫ ೨೬ ಕೋಟ ತಾ ೨೭ ೨೮ ಧಟಿಕೆ ಮಾರ್ಚ ತಾ ೧ ೨ ರಿಂದ ೪ ಹೊನ್ನಾವರ ತಾ ೫ ೬ ಏಲ್ಲಾಪುರ ತಾ ೬ ರಿಂದ ಮುಂದೆ ಕಾರವಾರ.

ಹುಸೂರ ಗ್ರಾಮದ ಸಾಮಧ ರಿ ಜಾತಿಯವನೊಬ್ಬನು ಕರಡ ಕೊಯ್ಯಲು ಬೆಟ್ಟಕ್ಕೆ ಹೋದಾಗ ಹಾವೊಂದು (ಹೆಬ್ಬಾವು?) ಆತನನ್ನು ಮುತ್ತಿ ನೂರಾರು ತಿಂದು ಹಾಕಿದ ಯಾವ ಅದ್ಭುತ ಸುದ್ದಿ ಬಂದಿದೆ ಈ ಬಗ್ಗೆ ಪಂಚನಾಮೆ ಮಾಡಿ ಆಗಿದೆಯಂತೆ.

ಈ ತಾಲೂಕು ಮುಸ್ಲಿಮರಿಗಾಗಿ ಪೃಥ್ವಿಯಿಂದ ಕೊರತೆಯೆದು ತಾಲೂಕಿಗೆ ಬೇಕಾದ ಹುಲ್ಲು ಈ ವರೆ ಮೈಸೂರ ಸೀಮೆಯಿಂದ ಬರುತ್ತಿತ್ತು ಆದರೆ ಈ ವರ್ಷ ಮೈಸೂರ

(೧ನೇ ಪುಟದ ಮೇಲೆ ಮುಂದರಿಸಿದೆ)

R

ಜಾಹೀರನಾಮೆ.

ಗೋಕರ್ಣ ಜಾತ್ರೆ.

No 74 R

ಕಾನಡಾ ಜಿಲ್ಲಾ ಮೆಜಿಸ್ಟ್ರೇಟರಿಂದ ಹೊರಡಿಸಿದ ಪ್ರಕಟನೆ ನಂ ೭೪ ತಾರೀಖು ೨೪-೧ ೧೯೪೬ನೇದರ ಪ್ರಕಾರ ಗೋಕರ್ಣ ಸೀಧಾ ಕ್ಷೇತ್ರದಲ್ಲಿ ತಾ ೧೬-೨ ೧೯೪೬ನೇದರಿಂದ ತಾ ೧೫-೪-೧೯೪೬ನೇದರ ವರೆಗಿರುವ ಅವಧಿಯಲ್ಲಿ ಏಳು (೭) ದಿವಸಗಳಿಗಿಂತ ಹೆಚ್ಚಿಗೆ ಇರುವ ಸಂಘವನಿಲ್ಲದಿದ್ದ ಯಾವದೊಂದು ಉಳಕೊಳ್ಳೋಣದ ಅವಧಿಯ ಬಗ್ಗೆ ರೇಶನ್ ತಿಕೀಟು ಕೊಡಲಿಕ್ಕೆ ಬರುವದಿಲ್ಲ ಕಾರಣ ಮೇಲೆ ಹೇಳಿದ ಅವಧಿಯಲ್ಲಿ ಈ ವರ್ಷ ಗೋಕರ್ಣ ಸೀಧಾ ಕ್ಷೇತ್ರದಲ್ಲಿ ಜರುಗಲಿರುವ ಜಾತ್ರೆಗೆ ಬರುವ ಯಾತ್ರಿಕರು ತಮ್ಮ ಸಂಗಡ ಮೇಲಿನ ಅವಧಿಯಲ್ಲಿ ಏಳು (೭) ದಿವಸಗಳ ವರೆಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ತರುವದು ಅವುಗಳ ಹಿಟ್ಟನ್ನು ಪರವಾನಗಿ ಸಿವಾಯ್ ತರಲು ಮನಾಯಿ ಇರುವದಿಲ್ಲ.

ಕಾರವಾರ, ತಾ ೨-೨-೧೯೪೬

F. N. RANA.

District Magistrate Kanara

ಜಾಹೀರ ವಿನಂತಿ.

ಕೇ ಲಕ್ಷ್ಮೀಬಾಯಿ ಕೋಂ ಕೃಷ್ಣಪ್ಪ ನಾರಾಯಣ ಕಾನಭಾಗ ಜಲವಳ್ಳಿ ಸಾ॥ ಹೊನ್ನಾವರ ಇವಳು ಈ ಮೂಲಕ ತಿಳಿಸುವದೇನೆಂದರೆ —

ನನ್ನ ಪತಿಗಳಾದ ಕೇ ಕೃಷ್ಣಪ್ಪ ಕಾನಭಾಗರು ಅಜಮಾಸ ೫ ವರ್ಷಗಳ ಹಿಂದ ತೀರಿಕೊಂಡಿರುತ್ತಾರೆ ಕುಟುಂಬದಲ್ಲಿ ನನ್ನನ್ನು ಮನೆಯವರು ಸರಿಯಾಗಿ ನಡಿಸಿಕೊಳ್ಳುವದಿಲ್ಲದ್ದರಿಂದ ನಾನು ನಿರುಪಾಯವಾಗಿ ತವರಮನೆಯಲ್ಲಿ ಉಳಕೊಂಡು ಬಂದಿರುತ್ತೇನೆ ನನ್ನ ಮನೆಯವರು ನನಗೆ ಮೋಸ ನಡಿಸುವ ಇರಾದೆಯಿಂದ ಕುಟುಂಬದ ಒಟ್ಟು ಆಸ್ತಿಯನ್ನು ಸ್ವಾಧೀನ ಮಾಡುವ ಆಲೋಚನೆಯಲ್ಲಿರುತ್ತಾರೆಂದು ತಿಳಿಯುತ್ತೇನೆ ಕುಟುಂಬದ ಆಸ್ತಿಗೆ ನಾನು ಸಹ ಹಕ್ಕುದಾರಳಿದ್ದು ನನ್ನ ಸೇರಿಕೆ ಮತ್ತು ಅನುಮತಿ ಇಲ್ಲದೆ ನಡೆದ ಯಾವದೇ ಸ್ವಾಧೀನತೆ ನನ್ನ ವಿರುದ್ಧ ಸಿಂಧು ಆಗಲಿಕ್ಕಿಲ್ಲ ತಿಳಿಯ ಬೇಕು. ಹೊನ್ನಾವರ, ತಾ ೯-೨-೪೬

● ಈ ಎಡಗೈ ಹೆಬ್ಬೆಟ್ಟಿನ ಗುರ್ತು

ಕೇ ಲಕ್ಷ್ಮೀಬಾಯಿ ಕೋಂ ಕೃಷ್ಣಪ್ಪ

ನಾರಾಯಣ ಕಾನಭಾಗ ಇವಳದು

ನಮ್ಮಲ್ಲಿ (ಪ್ಲಾಟಿನಮ್) ಕೋಟ (ಬಟನ್) ಚಿಕ್ಕರೆ

ಡಿನೇಚರ್ಡ ಸ್ಪಿರಿಟ್

ಮಾರಲಿಕ್ಕೆ ಸಿಗುತ್ತದೆ

ವಿ ಎಮ್. ಮಿಜಾರನಕರ,

ಬ ಯಸಪ್ಪ ಮೋಟರ ಸ್ಟೇಂಡ, ಕುಮಟಾ

ದಿ ಕೊಮರ್ಶಿಯಲ್ ಕೊಪ್ರೋರೇಶನ್,

ಕುಮಟಾ

ನಮ್ಮಲ್ಲಿ ಬ ಸೆಲ್ ಮಿಲ್ಸ ಕಂಪನಿಯ

ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ

ವಿ ಎಮ್ ಮಿಜಾರನಕರ,

ಮೋಟರ ಸ್ಟೇಂಡ ಕುಮಟಾ

ಹಿಂದುಸ್ತಾನಿ ಪಾಠಗಳು

ಸಬಕ ಅಠಾರಹ (ಪಾಠ ೧೮)

ರಹಜನ್ (ದರೋಡೆ)

ಚೇನಪುರಂ ಏಕ ಜಮೀನದಾರ ರಹತಾ ಥಾ (ಚೇನಪುರದಲ್ಲಿ ಒಬ್ಬ ಜಮೀನದಾರನಿದ್ದನು) ಉಸಕೇ ಪಾಸ ಬಡೀ ಜಾಯದಾದ ಥೀ. (ಅವನ ಕಡೆ ಬಹಳ ಆಸ್ತಿಯಿತ್ತು) ಉಸಸೇ ಉಸಕೋ ಬಹುತ ಆಮದನೀ ಥೀ (ಅದರಿಂದ ಅವನಿಗೆ ಬಹಳ ಉತ್ಪತ್ತಿಯಿತ್ತು) ಉಸಕೀ ಜಮೀನ ಇತನೀ ಬಡೀ ಥೀ ಕಿ ವಹ ಖುದ ಉಸಕೀ ಮಾಲಗುಜಾರೀ ವಸೂಲ ನಹೀಂ ಕರ ಸಕತಾ ಥಾ (ಅವನ ಭೂಮಿ ಇಷ್ಟು ದೊಡ್ಡದಿತ್ತು, ಅವನು ಸ್ವತಃ ಅದರ ಕಂದಾಯವನ್ನು ವಸೂಲ ಮಾಡಲು ಶಕ್ಯನಾಗುತ್ತಿದ್ದಿಲ್ಲ) ಉಸಕೇ ಯಹಾಂ ಏಕ ಕಾರಿಂದಾ ಥಾ (ಅವನಲ್ಲಿ ಓರ್ವ ಗುಮಾಸ್ತನಿದ್ದನು.) ಕಾರಿಂದಾ ಹೀ ತಹಸೀಲ ವಸೂಲ ಕರತಾ ಥಾ (ಗುಮಾಸ್ತನೇ ಕಂದಾಯವನ್ನು ವಸೂಲ ಮಾಡುತ್ತಿದ್ದನು.) ಲೇಕಿನ ಜಮೀನದಾರ ಬಡಾ ಕಠೋರ ಥಾ (ಆದರೆ ಜಮೀನದಾರನು ಬಹಳ ಕಠೋರನಿದ್ದನು) ಅಸಾಮಿಯೋಂಸೇ ಮಾಲಗುಜಾರೀ ಕೇ ಅಲಾವಾ ನಜರ ಭೀ ಲೇತಾ ಥಾ (ರೈತರಿಂದ ಕಂದಾಯವನ್ನಲ್ಲದೆ ಕಾಣಿಕೆಯನ್ನೂ ಕೊಳ್ಳುತ್ತಿದ್ದನು.) ಕಾರಿಂದಾ ಜಬ ವಸೂಲೀ ಕೇ ಲಿಯೇ ಜಾತಾ ತಬ ಜಮೀನದಾರ ಉಸಸೇ ಪೂಛತಾ ಥಾ— ಕ್ಯಾ ಚಾಹಿಯೇ, ಗಾಂವವಾಲೋಂಸೇ ಕ್ಯಾ ಲಾಯೇ? (ಗುಮಾಸ್ತನು ಯಾವಾಗ ವಸೂಲಿಗಾಗಿ ಹೊರಡುತ್ತಿದ್ದನೋ ಆಗ ಜಮೀನದಾರನಿಗೆ ಕೇಳುತ್ತಿದ್ದನು – ಏನು ಬೇಕು, ಹಳ್ಳಿಯೊಳಗಿಂದ ಏನು ತರಲಿ?) ಹಮೇಶಾಕೀ ತರಹ ಏಕ ದಿನ ಜಮೀನದಾರಸೇ ವಹೀ ಸವಾಲ ಕಿಯಾ ತೋ ಉಸನೇ ಕಹಾ — ಬಾರ ಬಾರ ಕ್ಯಾ ಬತಾವೂಂ ? (ಪ್ರತಿ ಸಾರೆಯಂತೆ ಒಂದು ದಿನ ಜಮೀನದಾರನಿಗೆ ಅವನು ಪ್ರಶ್ನೆ ಮಾಡಲಾಗಿ ಅವನು — ಜಮೀನದಾರನು — ಅಂದನು — ಬಾರಿಬಾರಿಗೂ ಏನು ಹೇಳಲಿ ?) ಘರಮೇಂ ಜಿಸ ಚೀಜಕೀ ಜರೂರತ ಹೋ ಉಸೇ ಲೇ ಆನಾ (ಮನೆಯಲ್ಲಿ ಯಾವ ವಸ್ತುವಿನ ಅಗತ್ಯವಿದೆಯೋ ಅದನ್ನು ತರಬೇಕು) ಯಹ ಸುನಕರ ಕಾರಿಂದಾ ಚಲಾ ಗಯಾ (ಇದನ್ನು ಕೇಳಿ ಗುಮಾಸ್ತನು ಹೊರಟು ಹೋದನು) ವಹ ಗಾಂವ ಮೇಂ ಪಹುಂಚಾ. (ಅವನು ಹಳ್ಳಿಯೊಳಗೆ ತಲ್ಪಿದನು) ಅಸಾಮಿಯೋಂಕೋ ಬುಲಾಯಾ (ರೈತರಿಗೆ ಕರೆ ಕಳಿಸಿದನು) ಔರ ಕಹಾ ಕೀ ಬಾಕೀ ಲಗಾನ ದೇ ಜಾಓ (ಮತ್ತು ಹೇಳಿದ್ದೇನಂದರೆ, ಕಂದಾಯ ಕೊಟ್ಟು ಹೋಗಿರಿ.) ಸಭೀ ಅಸಾಮಿ ಬೋಲೇ ಇಸ ಸಾಲ ಹಮಾರೇ ಖೇತಮೇಂ ಕುಛಭೀ ಪೈದಾ ನಹೀಂ ಹುವಾ ಹೈ (ಎಲ್ಲ ರೈತರು ಹೇಳಿದರು – ಈ ವರ್ಷ ನಮ್ಮ ಹೊಲಗಳಲ್ಲಿ ಏನೂ ಬೆಳೆ ಆಗಿಲ್ಲ) ಪಾನೀ ಬರಸಾ ನಹೀಂ (ಮಳೆ ಆಗಲಿಲ್ಲ) ಸಾರೀ ಫಸಲ ಸೂಖ ಗಯೀ (ಇಡೀ ಪೈರು ಒಣಗಿ ಹೋಯಿತು) ಹಮಾರೇ ಪಾಸ ಖಾನೇಕೋ ಭೀ ನಹೀಂ ಹೈ (ನಮ್ಮ ಬಳಿ ಉಣ್ಣಲಿಕ್ಕೂ ಇರುವದಿಲ್ಲ) ಆಪಕೋ ಕ್ಯಾ ದೇಂ ? (ತಮಗೆ ಏನು ಕೊಡುವದು ?) ಕಾರಿಂದಾ ಸಾಹಬ ಬೋಲೇ ಹಮಾರೇ ಮಾಲಿಕ ಬಡೇ ರಹಮ-ದಿಲ ಹೈ (ಗುಮಾಸ್ತ ಸಾಹೇಬರು ಹೇಳಿದರು – ನಮ್ಮ ಧನಿಗಳು ಬಹಳ ದಯಾಳುಗಳಿದ್ದಾರೆ) ಉನ್ಹೋಂನೇ ತುಮ್ಹಾರೀ ತಕಲೀಫ ಜಾನ ಲೀ ಹೈ (ಅವರು ನಿಮ್ಮ ಕಷ್ಟ ತಿಳಕೊಂಡಿದ್ದಾರೆ) ಔರ ಉನ್ಹೋಂನೇ ಲಗಾನ ಮಾಫ ಕರ ದಿಯಾ ಹೈ (ಮತ್ತು ಅವರು ಕಂದಾಯ ಮಾಫಿ ಮಾಡಿದ್ದಾರೆ) ಲೋಗ ಬಡೇ ಖುಶ ಹುಯೇ. (ಜನರು ಬಹಳ ಸಂತುಷ್ಟರಾದರು) ಈಶ್ವರಸೇ ಮಾಲಿಕಕೇ ಲಿಯೇ ಮಂಗಲ ಕರನೇ ಲಗೇ. (ದೇವರ ಕಡೆ ಒಡೆಯನ ಮೇಲೆ ಕೃಪೆ ಮಾಡಲು ಬೇಡಿಕೊಳ್ಳಲಾರಂಭಿಸಿದರು) ಕಾರಿಂದಾ ಲೌಟಕರ ಜಮೀನದಾರಕೇ ಘರ ಗಯಾ (ಗುಮಾಸ್ತನು ಮರಳಿ ಜಮೀನದಾರನ ಮನೆಗೆ ಹೋದನು) ಮಾಲಿಕನೇ ಪೂಛಾ— ಗಾಂವಸೇ ಕ್ಯಾ ಲಾಯೇ ಹೋ ? (ಒಡೆಯನು ಕೇಳಿದನು– ಹಳ್ಳಿಯಿಂದ ಏನು ತಂದಿರುವಿ?) ಕಿತನಾ ವಸೂಲ ಕಿಯಾ ? (ಎಷ್ಟು ವಸೂಲ ಮಾಡಿದಿ ?) ಕಾರಿಂದೇನೇ ಕಹಾ– ಆಪನೇ ಕಹಾ ಥಾ ಕಿ ಘರಮೇಂ ಜಿಸ ಚೀಜಕೀ ಜರೂರತ ಹೋ ಲೇ ಆನಾ. (ಗುಮಾಸ್ತನಂದನು – ಮನೆಯಲ್ಲಿ ಯಾವ ವಸ್ತುವಿನ ಅಗತ್ಯವಿದೆಯೋ ಅದನ್ನು ತರಬೇಕೆಂದು ತಾವು ಹೇಳಿದ್ದಿರಿ) ವಹೀ ಮೈಂ ಲಾಯಾ ಹೂಂ (ಅದನ್ನೇ ನಾನು ತಂದಿದ್ದೇನೆ.) ಇತನಾ ಕಹಕರ ಕಿಸಾನೋಂಕೀ ಗರೀಬೀಕಾ ಹಾಲ ಸುನಾಯಾ,) ಅಷ್ಟು ಹೇಳಿ ಒಕ್ಕಲಿಗರ ಬಡತನದ ಕಷ್ಟಗಳನ್ನು ಅರುಹಿದನು,) ಔರ ಕಹಾ ಕಿ ಮೈಂನೇ ಲಗಾನ ಮಾಫ ಕರ ದಿಯಾ ಹೈ.) ಮತ್ತು ತಾನು ಕಂದಾಯ ಮಾಫಿ ಮಾಡಿದ್ದೇನೆಂದು ಹೇಳಿದನು) ಜಮೀನದಾರಕೋ ಬಡಾ ಗುಸ್ಸಾ ಆಯಾ, (ಜಮೀನದಾರನಿಗೆ ಬಹಳ ಸಿಟ್ಟು ಬಂತು,) ಔರ ಕಾರಿಂದೇಕೋ ನಿಕಾಲ ದಿಯಾ (ಮತ್ತು ಗುಮಾಸ್ತನಿಗೆ ಹೊರತಳ್ಳಿದನು) ಕುಛ ದಿನ ಬಾದ ಖುದ ಗಾಂವಕೋ ಗಯಾ (ಕೆಲವು ದಿನಗಳ ನಂತರ ಸ್ವತಃ ಹಳ್ಳಿಗೆ ಹೋದನು) ಅಸಾಮಿಯೋಂನೇ ಜಮೀನದಾರಕೀ ಬಡೀ ಇಜ್ಜತ ಕೀ, (ರೈತರು ಜಮೀನದಾರನಿಗೆ ಒಳ್ಳೇ ಸತ್ಕಾರ ಮಾಡಿದರು,) ಬಡೇ ಪ್ರೇಮಸೇ ಸ್ವಾಗತ ಕಿಯಾ ಔರ ಅಕಾಲಕೇ ವಕ್ತ ಮದದ ಕೇ ಲಿಯೇ ಧನ್ಯವಾದ ದಿಯಾ (ಒಳ್ಳೇ ಪ್ರೇಮದಿಂದ ಸ್ವಾಗತ ಮಾಡಿದರು ಮತ್ತು ಬರಗಾಲದ ಕಾಲಕ್ಕೆ ಮಾಡಿದ ಸಹಾಯದ ಬಗ್ಗೆ ಧನ್ಯವಾದಗಳನ್ನರ್ಪಿಸಿದರು.) ತಬ ಜಮೀನದಾರಕೋ ಮಾಲೂಮ ಹುಆ ಕಿ ಕಾರಿಂದೇನೇ ಠೀಕ ಕಿಯಾ ಥಾ (ಆಗ ಜಮೀನದಾರನಿಗೆ ತಿಳಿಯಿತು ಗುಮಾಸ್ತನು ಮಾಡಿದ್ದು ಯೋಗ್ಯವಿತ್ತೆಂದು) ಉಸೇ ಫಿರ ಬುಲಾ ಲಿಯಾ ಔರ ನೌಕರೀ ದೇ ದೀ. (ಅವನಿಗೆ ತಿರುಗಿ ಕರೆಸಿದನು ಮತ್ತು ಅವನಿಗೆ ನೌಕರಿ ಕೊಟ್ಟನು)

ಜಾಹೀರ ನೋಟೀಸು.

(O 1 R 8 C P C) Exhibit 24

ಹೊನ್ನಾವರ ಸಿವ್ಹಿಲ್ ಜಜ್ಜ ಕೋರ್ಟಿನಲ್ಲಿ ಮುಕ್ಕಾಮು ಹೊನ್ನಾವರ ಇಲ್ಲಿ

ಮೂಲ ದಾವಾ ನಂಬರ 333—1944

ಹನುಮಂತ ಪಾಂಡುರಂಗ ಭಟ್ಟ, ಗೌಡಸಾರಸ್ವತ ಬ್ರಾಹ್ಮಣ, ರೈತ, ಪ್ರಾಯ ಅ [illegible] ವರ್ಷ, ಹೊನ್ನಾವರ ತಾಲೂಕ ಮಾವಿನಕುರ್ವೆ ಗ್ರಾಮದ ನಿವಾಸಿ	ವಾದಿ

— ವಿರುದ್ಧ —

೧ ತುಳಸೀ ಯಾನೆ ಪದ್ಮಾವತೀ ಕೋಂ ಅನಂತ ನಾಯಕ, ಗೌಡಸಾರಸ್ವತ ಬ್ರಾಹ್ಮಣ, ಮನೆವಾರ್ತೆ, ಪ್ರಾಯ ಅ [illegible] ವರ್ಷ, ಹೊನ್ನಾವರ ತಾಲೂಕ ಚಿಕ್ಕನಕೋಡ ಗ್ರಾಮದ ನಿವಾಸಿ ೨ ವಿಠೋಬ ವೆಂಕಟೇಶ ನಾಯಕ, ಗೌಡಸಾರಸ್ವತ ಬ್ರಾಹ್ಮಣ, ವ್ಯಾಪಾರಿ, ಪ್ರಾಯ ಅಜಮಾಸ ೪೩ ವರ್ಷ, ಭಟ್ಕಳ ಪೇಟಾ ಮುರ್ಡೇಶ್ವರ ಗ್ರಾಮದ ನಿವಾಸಿ	ಪ್ರತಿವಾದಿರು.

ದಾವಾ ರಕಮು ೫—೦—೦

ಉಕ್ತ ದಾವಾ ಫಿರ್ಯಾದಿಯಂತೆ ಸದರಿ ವಾದಿಯು ತನ್ನ ಸ್ವತಃದ ಪತಿಯಿಂದ ವ ಮೃತ ಅನಂತ ವೆಂಕಟರಮಣ ನಾಯಕ ಮತ್ತು ಆತನ ಹೆಂಡತಿ ೧ನೇ ಪ್ರತಿವಾದಿ ತುಳಸೀ ಯಾನೆ ಪದ್ಮಾವತೀ ಕೋಂ ಅನಂತ ನಾಯಕರು ಯಾವತ್ತೂ ಧನಕೋ ಜನರ ಪತಿಯಿಂದ ೧ ವ ೨ನೇ ಪ್ರತಿವಾದಿರ ಅಂದರೆ ೧ನೇ ತುಳಸೀ ಯಾನೆ ಪದ್ಮಾವತೀ ಕೋಂ ಅನಂತ ನಾಯಕ ವ ೨ನೇ ವಿಠೋಬ ವೆಂಕಟೇಶ ನಾಯಕರ ಮೇಲೆ ದಾವೆ ಮಾಡಲಿಕ್ಕೆ ಪರವಾನಗಿ ಈ ಕೋರ್ಟಿನಿಂದ ಪಡೆದಿರುತ್ತಾನೆ ಕಾರಣ ಈ ದಾವೆಯಲ್ಲಿ ಮೃತ ಅನಂತ ವೆಂಕಟರಮಣ ನಾಯಕ ಮತ್ತು ಆತನ ಹೆಂಡತಿ ೧ನೇ ಪ್ರತಿವಾದಿ ತುಳಸೀ ಯಾನೆ ಪದ್ಮಾವತಿ ಕೋಂ ಅನಂತ ನಾಯಕ ಇವರ ಯಾವತ್ತೂ ಧನಕೋ ಜನರ ಪತಿಯಿಂದ ಯಾರಿಗಾದರೂ ಹಾಜರಾಗಿ ವ್ಯವಹರಿಸತಕ್ಕದ್ದಿದ್ದಲ್ಲಿ ಅಂಥವರು ಸ್ವತಃ ಯಾ ಯೋಗ್ಯ ಮಾಹಿತಿ ಪಡೆದ ವಕೀಲರ ಮುಖಾಂತರ ಸನ್ ೧೯೪೬ನೇ ಇಸವಿಯ ಮಾರ್ಚ ತಿಂಗಳ ೧೯ನೇ ತಾರೀಖಿನ ದಿವಸ ಬೆಳಗಿನ ೧೧ ಗಂಟೆಗೆ ಈ ಕೋರ್ಟಿನಲ್ಲಿ ಹಾಜರ ಆಗತಕ್ಕದ್ದು ತಿಳಿಯುವದು ಇದರಂತೆ ಸದರಿಯವರು ಹಾಜರಾಗದಿದ್ದರೆ ಕೋರ್ಟಿಗೆ ಯುಕ್ತ ಕಂಡಂತೆ ನಿಕಾಲು ಮಾಡಲಾಗುವದು

ಈ ಹೊತ್ತು ೧೯೪೬ನೇ ಇಸವಿಯ ಫೆಬ್ರುವರಿ ತಿಂಗಳ ೫ನೇ ತಾರೀಖಿನ ದಿನ ನಮ್ಮ ಸಹಿ ವ ಕೋರ್ಟಿನ ಮೊಹರು ಮಾಡಿಕೊಡಲ್ಪಟ್ಟಿತು

R A. Amladi,
Clerk of the Court.

ಹೊನ್ನಾವರ ಸಿವ್ಹಿಲ್ ಜಜ್ಜ (ಜ್ಯೂನಿಯರ್) ಕೋರ್ಟಿನಲ್ಲಿ.

ಮೂಲ ದಾವಾ ನಂಬರ ೩೩೩—೧೯೪೪

ಹನುಮಂತ ಪಾಂಡುರಂಗ ಭಟ್ಟ, ಗೌಡ ಸಾರಸ್ವತ, ರೈತ, ವಯ [illegible] ವರುಷ, ಸಾಕಿನ ಮಾವಿನಕುರ್ವೆ, ತಾಲೂಕ ಹೊನ್ನಾವರ, ಈತನು ತನ್ನ ಸ್ವತಃದ ಪತಿಯಿಂದ ವ ಮೃತ ಅನಂತ ವೆಂಕಟರಮಣ ನಾಯಕ ಮತ್ತು ಆತನ ಹೆಂಡತಿ ೧ನೇ ಪ್ರತಿವಾದಿರ ಯಾವತ್ತೂ ಧನಕೋ ಜನರ ಪತಿಯಿಂದ	ವಾದಿ

— ವಿರುದ್ಧ —

೧ ತುಳಸಿ ಯಾನೆ ಪದ್ಮಾವತಿ ಕೋಂ ಅನಂತ ನಾಯಕ ಗೌಡ ಸಾರಸ್ವತ ಬ್ರಾಹ್ಮಣ, ಮನೆವಾರ್ತೆ ಕಸಬು, [illegible] ವರುಷ ಸಾಕಿನ ಚಿಕ್ಕನಕೋಡ, ತಾಲೂಕ ಹೊನ್ನಾವರ ೨ ವಿಠೋಬ ವೆಂಕಟೇಶ ನಾಯಕ ಗೌಡ ಸಾರಸ್ವತ ಬ್ರಾಹ್ಮಣ, ವ್ಯಾಪಾರಿ ೪೪ ವರುಷ, ಸಾಕಿನ ಮುರ್ಡೇಶ್ವರ, ಪೇಟಾ ಭಟ್ಕಳ	ಪ್ರತಿವಾದಿರು

ದಾವಾ ರೂ ೫—೦—೦ ಕೋರ್ಟ ಫೀ ಬಗ್ಗೆ ರೂ ೨೦೦—೦—೦ ಕೋರ್ಟ ಅಧಿಕಾರದ ಬಗ್ಗೆ

ವಾದಿಯು ಈ ಮೂಲಕ ಮೇಲ್ಕಂಡ ಯಾವತ್ತೂ ಜನರಿಗೆ ತಿಳಿಸುವದೇನಂದರೆ —

೧ ೧ನೇ ಪ್ರತಿವಾದಿಯು ಪರರ ಮುಖೋಧನಿಗೋಸ್ಕರ ವಾದಿಯು ಮತ್ತು ಮೇಲ್ಕಂಡ ಇತರ ಧನಕೋ ಜನರ ಹಕ್ಕವನ್ನು ಮುಳುಗಿಸುವ ಹೇತುವಿನಿಂದ ತನ್ನ ಸರ್ವಾದಿ ಆಸ್ತಿಯನ್ನು ತನ್ನ ಸ್ವಂತ ವಾಸ್ತವ್ಯದ ಮನೆ ಸಹ ತನ್ನ ನಿಕಟ ಸಂಬಂಧಿಕನಾದ ೨ನೇ ಪ್ರತಿವಾದಿಯ ಹೆಸರಿಗೆ ತಾ ೨೫ ೫—೧೯೪೪ನೇ ದಿವಸ ರೂ ೪೦೦ಕ್ಕೆ ಕ್ರಯಪತ್ರ ಕೊಟ್ಟು ಆ ಬಗ್ಗೆ ರಜಿಸ್ಟ್ರ ಕ್ರಯದಸ್ತು ಸಹ ಬರಕೊಟ್ಟಿರುತ್ತಾಳೆ ಕ್ರಯದ ರಕಮು ನಿಜವಾಗಿ ೨ನೇ ಪ್ರತಿವಾದಿಯಿಂದ ೧ನೇ ಪ್ರತಿವಾದಿಗೆ ಸಲ್ಲಿಕೆಯೆಂಬ ಉದ್ದೇಶದಿಂದ ಕ್ರಯದಸ್ತು ಆದದ್ದು ಅಲ್ಲ ಧನಕೋ ಜನರ ಜಕ್ತಿಗೆ ಸಿಗದಂತೆ ಆಸ್ತಿಯನ್ನು ಮರೆ ಮಾಡಿಸುವ ಪೂರ್ತಿ ಕ್ರಯವಸ್ತು ಆದದ್ದಾಗಿರುತ್ತದೆ ಕಾರಣ ದಾವಾ ಸ್ಥಳಗಳು ಮೇಲ್ಕಂಡ ಯಾವತ್ತೂ ಧನಕೋ ಜನರಿಗೆ ಬರತಕ್ಕ ಸಾಲಗಳ ಜಕ್ತಿಯ ಬಗ್ಗೆ ಪಾತ್ರವೆಂಬ ದರಾಯಿಸಿಕೊಳ್ಳುವ ಬಗ್ಗೆ ವಾದಿಯು ಈ ದಾವೆಯನ್ನು ಕೋರ್ಟಿನ ಪರವಾನಗಿಯಿಂದ ತಂದಿರುತ್ತದೆ ವಾದಿಯು ಮಾಡಿದ ಪ್ರಕೃತ ದಾವೆಯು T P Act S 53 & C P Code O 1 R 8ರ ಪ್ರಕಾರದ್ದಿರುತ್ತದೆ

ಕಾರಣ ವಾದಿಯು ಮಾಡಿದ ಈ ದಾವೆಯನ್ನು ವ್ಯವಹರಿಸುವರೆ ಯಾವದೇ ಧನಕೋ ಮನುಷ್ಯನು ಇಚ್ಛಿಸುವಲ್ಲಿ ಆತನು ಬಂದು ಸೇರಿಸಿಕೊಳ್ಳತಕ್ಕದ್ದು ಎಂತಾ ಇದರ ಮೂಲಕ ಜಾಹೀರ ಮಾಡುತ್ತೇನೆ

ದಾವಾ ಆಸ್ತಿಯ ವರ್ಣನೆ —

ಚಿಕ್ಕನಕೋಡ ಗ್ರಾಮದ್ದು

ಸರ್ವೆ ನಂ	ಹಿಸ್ಸಾ
೩೭	೧
೬೩	೧
೮೪	೧
೩೧೩	–
೩೧೪	೫
೩–೩	೫
೬೩	೩ ಪೈಕಿ

ಮುಟ್ಟಾ ಗ್ರಾಮದ ಬಾಬ್ತು —

ಸರ್ವೆ ನಂ	ಹಿಸ್ಸಾ
೩೮	೩
೩೮	೪
೪೧	೩
೪೧	೮
೪೬	೪
೫೧	೨
೫೨	೧
೫೨	೫
೫೯	೧
೫೯	೮
೬೪	೨

[illegible]

ಈ ಪ್ರಕಾರ ಆಗಿರುತ್ತದೆ

R N Kamat, Pleader for Plaintiff

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೪
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ಕಳುಹುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B-1270. Monday, 18th February, 1946

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೩೩.

ಕುಮಟಾ:- ಸೋಮವಾರ, ತಾ. ೧೮ ಮಾಹೆ ಫೆಬ್ರುವರಿ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೨ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಸ್ಮಾಲ್ ಪ್ಯಾಕಾ ೧೨ ಎಮ್ ಉದ್ದ
೧ ಸಾಲಿಗೆ ೨ ಆಣೆಯಂತೆ
ವಿಶಿಷ್ಟ ಅಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲವೆ ಪತ್ರದ್ವಾರಾ
ತಿಳಿಸಬಹುದು.

ಕೊಂಗ್ರೆಸ್ಸಿಗೇ ಮತ ಕೊಡಿರಿ.

*

ನಮ್ಮ ಪ್ರಾಂತದೊಳಗಿನ ಎಸೆಂಬ್ಲಿಯ ಸಾಮಾನ್ಯ ಮತದಾರ ಸಂಘದ ಚುನಾವಣೆಯು ಇದೇ ಬರುವ ಮಾರ್ಚ ತಾ ೧೧ಕ್ಕೆ ಜರುಗಲಿದೆ. ಈ ಚುನಾವಣೆಗೆ ನಿಲ್ಲಲಿರುವ ಹುರಿಯಾಳುಗಳ ನೇಮಣೂಕಿಗಳು ಕಳೆದ ಸೋಮವಾರ ಆಗಿವೆ. ನಮ್ಮ ಜಿಲ್ಲೆಯ ಪಾಲಿನ ಮೂರೂ ಸ್ಥಳಗಳನ್ನು ಗೆಲ್ಲಬೇಕೆಂಬ ಅಪೇಕ್ಷೆ ಹಿಡಿದು ಕೊಂಗ್ರೆಸ್ಸಿನವರು ರಾ|| ಶಿವರಾವ ಶಾಸ್ತ್ರಿ, ಸ. ಪ. ಗಾಂವಕರ ಮತ್ತು ದಯಾನಂದ ಯಾನೆ ರಾಮಚಂದ್ರ ಮುಕುಂದ ಪ್ರಭು ಇವರನ್ನು ನಿಲ್ಲಿಸಿದ್ದಾರೆ. ಕೊಂಗ್ರೆಸ್ಸಿನವರ ಆಯ್ಕೆಯು ಸರ್ವಸಾಮಾನ್ಯವಾಗಿ ಸಮಾಧಾನಕರವಿದ್ದುದರಿಂದಲೂ ಕಾನಡಾ ಜಿಲ್ಲೆಯ ಜನರು ನಿಜವಾದ ಕೊಂಗ್ರೆಸ ನಿಷ್ಠರಿರುವದರಿಂದಲೂ ಕೊಂಗ್ರೆಸ್ಸಿನ ಹುರಿಯಾಳುಗಳು ಅವಿರೋಧವಾಗಿ ಆರಿಸಿಬರುವರೆಂದು ಜನಸಾಮಾನ್ಯರ ನಿರೀಕ್ಷೆಯಿತ್ತು. ಮತ್ತು ಹಾಗೆ ಅವರು ಆರಿಸಿಬಂದಿದ್ದರೆ ಜಿಲ್ಲೆಯವರಿಗೆ ಅದೊಂದು ಭೂಷಣವೂ ಇತ್ತು. ಆದರೆ ಕೊಂಗ್ರೆಸ್ಸಿಗೆ ಇದಿರಾಗಿ ಒನೇಯವರೊಬ್ಬರು ಆಯಾ ಜೊತೆಗೆ ಹುರಿಯಾಳು-ಪತ್ರ ದಾಖಲ ಮಾಡಿದ್ದರಿಂದ ಚುನಾವಣೆ, ಮತದಾನ ಮುಂತಾದವುಗಳ ಕಷ್ಟಗಳನ್ನು ನಮ್ಮ ಜಿಲ್ಲೆಯವರು — ಅಧಿಕಾರಿಗಳೂ ಜನರೂ ಕೂಡಿ — ಅನುಭವಿಸುವ ಪ್ರಸಂಗ ಪ್ರಾಪ್ತವಾಗಿದೆ. ಅದಕ್ಕೆ ಯಾರ ಉಪಾಯವಿಲ್ಲ. ಈಗ ಬಂದ ಪ್ರಸಂಗವು ಸ್ವಲ್ಪ ಕಷ್ಟಕರವಿದ್ದರೂ ಅನಿಷ್ಟವಲ್ಲ. ಚುನಾವಣೆ ನಡೆದರೆ ಜಿಲ್ಲೆಯ ಜನರ ಕೊಂಗ್ರೆಸ-ನಿಷ್ಠೆಯೂ ಸ್ವಾತಂತ್ರ್ಯಪ್ರೇಮವೂ ಇನ್ನಷ್ಟು ವ್ಯಕ್ತವಾಗಿ ಜಿಲ್ಲೆಯವರ ಕೀರ್ತಿ ಮತ್ತಷ್ಟು ಉಜ್ವಲವಾಗುವದೆಂದೆಣಿಸಿ ನಾವು ಈ ಪ್ರಸಂಗವನ್ನು ನಿರ್ಮಲಚಿತ್ತದಿಂದ ಸ್ವಾಗತಿಸುವೆವು.

ಕೇಂದ್ರ ಎಸೆಂಬ್ಲಿಯ ಚುನಾವಣೆಯ ಕಾಲಕ್ಕೆ ನಾವು ವಿಸ್ತಾರವಾಗಿ ಹೇಳಿರುವಂತೆ ಮುಂಬರುವ ಚುನಾವಣೆಯಲ್ಲಿ ಸ್ವಾತಂತ್ರ್ಯಪ್ರಾಪ್ತಿಯದೇ ಮಹತ್ವದ ಹಾಗೂ ಒಂದೇ ಒಂದಾದ ಪ್ರಶ್ನೆಯಾಗಿದೆ. ಇನ್ನಿತರ ಪ್ರಶ್ನೆಗಳು ತೀರ ಗೌಣವಾಗಿವೆ. "Quit India" (ಭಾರತದಿಂದ ಹೊರಬಿದ್ದು ಹೋಗಿರಿ) ಎಂದು ಬ್ರಿಟಿಶ ಆಳರಸರಿಗೆ ನಿರ್ಧಾರವಾಗಿ ಜನತೆಯು ಹೇಳುತ್ತದೋ ಅಥವಾ ಇನ್ನೂ ಕೆಲಕಾಲ ನಮ್ಮನ್ನು ತುಳಿಯುತ್ತ ಆಳುತ್ತ ಸಾಮ್ರಾಜ್ಯ ಮಾಡಿರಿ ಎಂದು ಅವರನ್ನು ಬೇಡಿಕೊಳ್ಳುತ್ತದೋ ಎಂಬುದು ಈ ಚುನಾವಣೆಯಲ್ಲಿ ಸ್ಪಷ್ಟವಾಗಬೇಕಾಗಿದೆ. ಬ್ರಿಟಿಶ ಆಳರಸರನ್ನು ರಾಷ್ಟ್ರದಿಂದ ಹೊರದೂಡಲು ಈಗ ಸಿದ್ಧವಾಗಿರುವ ಒಂದೇ ಒಂದು ಸಂಸ್ಥೆಯೆಂದರೆ ಹಿಂದೀ ರಾಷ್ಟ್ರೀಯ ಸಭೆ ಎಂಬುದನ್ನು ನಾವು ಪುನಃ ಹೇಳಬೇಕಾಗಿಲ್ಲ. ಹಿಂದ ರಾಷ್ಟ್ರಕ್ಕೆ ಅವಶ್ಯವಿರುವ ಸ್ವಾತಂತ್ರ್ಯವನ್ನು — ಈ ಸ್ವಾತಂತ್ರ್ಯ ದೊರೆತರೆ ಉಳಿದ ಎಲ್ಲ ಸಮಸ್ಯೆಗಳು ತಾವಾಗಿಯೇ ಬಗೆಹರಿಯುವವು ಮತ್ತು ಇಡೀ ಜನಾಂಗಕ್ಕೆ ನೆಮ್ಮದಿಯಾಗುವದು; ಮತ್ತು ಆ ಸ್ವಾತಂತ್ರ್ಯ ಸಿಗದಿದ್ದರೆ ದಾರಿದ್ರ್ಯ, ನಿರುದ್ಯೋಗ, ಸುಲಿಗೆ, ಅವಮಾನ, ಅಜ್ಞಾನ, ಅನಾರೋಗ್ಯ, ಅಧಃಪಾತ ಮೊದಲಾದ ಎಲ್ಲ ಕಷ್ಟಗಳು ಪರಿಹಾರವಾಗಲಿಕ್ಕಿಲ್ಲವಷ್ಟೇ ಅಲ್ಲ, ಅವು ಇನ್ನೂ ಹೆಚ್ಚಾಗುವವೆಂಬುದು ನಿರ್ವಿವಾದ ಮಾತು — ದೊರಕಿಸುವ ನಿರ್ಧಾರವೂ, ತಾತ್ಪರ್ಯವೂ, ಬುದ್ಧಿಬಲವೂ, ಸಾಮರ್ಥ್ಯವೂ ಹಿಂದೀ ರಾಷ್ಟ್ರೀಯ ಸಭೆಯ ವಿನಹ ಬೇರೆ ಯಾವ ಸಂಸ್ಥೆಯಲ್ಲೂ ಪಕ್ಷ-ಪಂಗಡ-ಕೂಟಗಳಲ್ಲೂ ಕಂಡುಬರುವದಿಲ್ಲವೆಂದು ನಾವು ಬಿಡಿಸಿ ಹೇಳಬೇಕಾದ ಅವಶ್ಯಕತೆ ನಮಗೆ ತೋರುವದಿಲ್ಲ. ಆದ್ದರಿಂದ ನಮ್ಮೀ ಜಿಲ್ಲೆಯ ಜನರಿಗೂ ಮತದಾರ-ಲೋಕಕ್ಕೂ ರಾಷ್ಟ್ರಸ್ವಾತಂತ್ರ್ಯದ ಅಭಿಮಾನ ಮತ್ತು ಆಸಕ್ತಿಯಿರುವದಾದರೆ — ಅದು ಉಂಟೆಂದೇ ನಮ್ಮ ನಂಬುಗೆ — ಮುಂಬರುವ ಚುನಾವಣೆಯಲ್ಲಿ ಕೊಂಗ್ರೆಸ ಹುರಿಯಾಳುಗಳಿಗೇ ತಮ್ಮ ಎಲ್ಲ ಮತಗಳನ್ನು ಅವರು ಕೊಡಬೇಕಾದುದು ಧರ್ಮ.

ಕೊಂಗ್ರೆಸ ಪಕ್ಷದಿಂದ ನಿಂತ ಉಮೇದವಾರರಿಗೆ ಮತ ಕೊಡುವದೆಂದರೆ ಕೊಂಗ್ರೆಸ್ಸಿಗೆ ಮತ್ತು ಕೊಂಗ್ರೆಸ್ಸಿನ ಸ್ವಾತಂತ್ರ್ಯದ ಹೋರಾಟಕ್ಕೆ ಮತ ಕೊಟ್ಟಂತೆ ಎಂದು ನಾವು ಒಮ್ಮೆ ಗ್ರಹಿಸಿದರೆ, ಕೊಂಗ್ರೆಸ್ಸು ನಿಲ್ಲಿಸಿದ ಹುರಿಯಾಳುಗಳ ಗುಣ-ದೋಷಗಳ ಚರ್ಚೆಯನ್ನಾಗಲಿ ಪರೀಕ್ಷಣವನ್ನಾಗಲಿ ಮಾಡುವದು ಅಪ್ರಸ್ತುತ ಮತ್ತು ಅಪ್ರಾಸಂಗಿಕವೇ ಸರಿ. ಕೊಂಗ್ರೆಸ ಹುರಿಯಾಳುಗಳು ಅಜ್ಞರಿರಲಿ ಸುಜ್ಞರಿರಲಿ, ಬಡವರಿರಲಿ ಬಲ್ಲಿದರಿರಲಿ, ತರುಣರಿರಲಿ ಮುದುಕರಿರಲಿ, ಬ್ರಾಹ್ಮಣರಿರಲಿ ಅಬ್ರಾಹ್ಮಣರಿರಲಿ, ಯಾವ ಬೇಕಾದ ಜಾತಿಯವರಿರಲಿ ನಾವು ಮತ ಕೊಡುವದು ಕೊಂಗ್ರೆಸ್ಸಿಗೆ, ಕೊಂಗ್ರೆಸ್ಸಿನ ಧ್ಯೇಯಕ್ಕೆ, ಕೊಂಗ್ರೆಸ್ಸಿನ ಲೋಕಕಲ್ಯಾಣಕಾರಿ ಕಾರ್ಯಕ್ರಮಕ್ಕೆ ಎಂಬ ಭಕ್ತಿ-ಭಾವ ಹಿಡಿದು ಆ ಕೊಂಗ್ರೆಸ ಹುರಿಯಾಳುಗಳಿಗೇ ಮತ ಕೊಡಬೇಕು. ಅನ್ಯ ವಿಚಾರಗಳಿಗೆ ಅಲ್ಲಿ ಆಸ್ಪದವೇ ಇಲ್ಲ. ಅದು ನಿಜವಿರುತ್ತಿದ್ದರೂ ಈ ಸಲ ಕೊಂಗ್ರೆಸ್ಸಿನವರು ವಿಚಾರಪೂರ್ವಕ ಆರಿಸಿ ನಮ್ಮ ಜಿಲ್ಲೆಯಲ್ಲಿ ಚುನಾವಣೆಗೆ ನಿಲ್ಲಿಸಿದ ಹುರಿಯಾಳುಗಳು ಆಯ್ಕೆಗೆ ಪಾತ್ರರಿದ್ದಾರೆಂದೇ ಹೇಳಬೇಕು. ರಾ|| ಶಿವರಾವ ಶಾಸ್ತ್ರಿಯವರು ಈಗ ೨೫ ವರ್ಷಗಳಿಂದ ದೃಢಭಕ್ತಿಯಿಂದ ಕೊಂಗ್ರೆಸ ಸೇವೆಯನ್ನೂ ಲೋಕಸೇವೆಯನ್ನೂ ಮಾಡುತ್ತ ಬಂದಿದ್ದಾರೆ, ಆ ಬಗ್ಗೆ ಸ್ವಾರ್ಥ-ಸ್ವಹಿತಗಳ ತ್ಯಾಗವನ್ನು ಮಾಡಿದ್ದಾರೆ, ಮೂರಾವರ್ತಿ ಕಾರಾಗೃಹವಾಸದ ತಪಶ್ಚರ್ಯೆ ಮಾಡಿದ ತಪಸ್ವಿಗಳಾಗಿದ್ದಾರೆ. ರೈತರ ಹಾಗೂ ಗೇಣಿಗರ ಸಮಸ್ಯೆಗಳನ್ನು ಅವರಷ್ಟು ಗಾಢವಾಗಿ ಅಭ್ಯಸಿಸಿದವರಾಗಲಿ, ರೈತ ಕೂಲಿಗರ ಕಷ್ಟಗಳ ನಿವಾರಣೆಗಾಗಿ ದುಡಿದವರಾಗಲಿ ಜಿಲ್ಲೆಯಲ್ಲಿ ಬೇರೊಬ್ಬರಿಲ್ಲ. ರಾ|| ಸಣ್ಣಪ್ಪ ಗಾಂವಕರರು ವಿದ್ಯಾ ಇಲಾಖೆಯಲ್ಲಿ ಅವಿಶ್ರಾಂತ ದುಡಿದು, ಮಕ್ಕಳ ಶಿಕ್ಷಣದಲ್ಲಿ ರಾಷ್ಟ್ರೀಯ ಪ್ರವೃತ್ತಿಯನ್ನು ಹುಟ್ಟಿಸಲು ಹೆಣಗಾಡಿದ್ದಾರೆ. ಕರ್ನಾಟಕದಲ್ಲೆಲ್ಲ ಅವರ ಕೀರ್ತಿ ಹಬ್ಬಿದೆ. ಹುಬ್ಬಳ್ಳಿಯ ವಿದ್ಯಾರ್ಥಿ-ಸಮಾಜದಲ್ಲಿ ಅವರು ನಿರ್ಮಿಸಿದ ಶಿಸ್ತು-ಸಂಘಟನೆಗಳನ್ನು ಕಂಡು ಹಿಂದೆ ಕೊಂಗ್ರೆಸ ಮಹಾಪ್ರಧಾನರಾಗಿದ್ದ ಶ್ರೀ ಬಾಳಾಸಾಹೇಬ ಖೇರರು ಮನದಣಿ ಪ್ರಶಂಸಿಸಿದ್ದುಂಟು. ರಾ|| ಗಾಂವಕರರು ಈಗ ವೃದ್ಧರಾಗಿರುವರಾದರೂ ಜನಸೇವೆಯ, ರಾಷ್ಟ್ರಸೇವೆಯ, ದೀನ-ದರಿದ್ರರ ಸೇವೆಯ ಅವರ ಹಂಬಲ ಕಡಿಮೆಯಾಗಿಲ್ಲ. ಪ್ರಸಿದ್ಧಿಯನ್ನಪೇಕ್ಷಿಸದೆ ನಿರಂತರ ಉದ್ಯೋಗದಲ್ಲೇ ಅವರು ಇರುತ್ತಾರೆ. ಸರಕಾರದ ಅವಕೃಪೆಗೆ ಬಲಿಯಾಗಿ ಇವರೂ ಕಾರಾಗೃಹವಾಸ ಅನುಭವಿಸಿದ್ದುಂಟು, ಕೆಲಕಾಲ ಸೇವಾ-ನಿವೃತ್ತಿ-ವೇತನವನ್ನೂ ಕಳಕೊಂಡದ್ದುಂಟು. ಮೂರನೆಯ ಕೊಂಗ್ರೆಸ-ಹುರಿಯಾಳುಗಳಾದ ರಾ|| ರಾಮಚಂದ್ರ ಪ್ರಭುರವರು ಎಳೆ ಪ್ರಾಯದವರು, ಸಮಾಜಸತ್ತಾವಾದಿಗಳು. ೧೯೩೦—೩೧ರ ಸತ್ಯಾಗ್ರಹದ ಕಾಲಕ್ಕೆ ಅವರು ಅಂಕೋಲೆಯ ಹಾಯಸ್ಕೂಲಿನಲ್ಲಿದ್ದರು. ಆಗ ಅವರು ತಮ್ಮ ಸಂಗಡಿಗ ವಿದ್ಯಾರ್ಥಿಗಳಲ್ಲಿ ಸತ್ಯಾಗ್ರಹದ ದೀಕ್ಷೆ ಬಿತ್ತಿ ಶಾಲೆಯ ಅಧಿಕಾರಿಗಳಿಗೆ ಕೊಟ್ಟ ಕಷ್ಟಗಳು ಅಷ್ಟಿಷ್ಟಲ್ಲ. ೧೯೪೨ರ ಆಂದೋಲನದಲ್ಲಂತೂ ಅವರು ಅಜ್ಞಾತವಾಸದ ವ್ರತ ಕೈಕೊಂಡು, ಜಟಿಲ [illegible], ಬಗೆಬಗೆಯ ಕಷ್ಟಗಳನ್ನು ಅನುಭವಿಸಿದ್ದು ಜಿಲ್ಲೆಯಲ್ಲೆಲ್ಲ ಹಾಡಲು ಹಾಕಿದ್ದು ಇತ್ತೀಚಿನ ಕಥೆಯಾಗಿರುತ್ತದೆ. ಮೂರೂ ಹುರಿಯಾಳುಗಳು ವಿಶ್ವವಿದ್ಯಾಲಯದ ಪದವೀಧರರಿರುತ್ತಾರೆ; ವಿದ್ವಾಂಸರಿದ್ದಾರೆ. ರಾಜಕಾರಣ-ಅರ್ಥಕಾರಣ-ಸಮಾಜಕಾರಣಗಳ ಅಭ್ಯಾಸ ಮಾಡಿದವರಿದ್ದಾರೆ. ಇಂತಹ ಹುರಿಯಾಳುಗಳಿಗೆ ನಾವು ಮತ ಕೊಡದೆ ಇನ್ನಾರಿಗೆ ಕೊಡುವದು?

ಕೊಂಗ್ರೆಸ್ಸಿಗೆ ಪ್ರತಿಸ್ಪರ್ಧಿಗಳಾಗಿ ನಿಂತ ಉಮೇದವಾರರಲ್ಲಿ ಮೇಲೆ ಹೇಳಿದ ಯಾವದೇ ಗುಣಗಳಿಲ್ಲ. ವಿದ್ಯೆಯಲ್ಲಾಗಲಿ ಪ್ರತಿಷ್ಠೆಯಲ್ಲಾಗಲಿ ಅವರು ಯಾವ ಕೊಂಗ್ರೆಸ ಹುರಿಯಾಳುವನ್ನೂ ಸರಿಗಟ್ಟಲಾರರು. ಕೊಂಗ್ರೆಸ-ಭಕ್ತಿ ಅಷ್ಟಕ್ಕಷ್ಟೇ! ಕೊಂಗ್ರೆಸ-ಅಭಿಮಾನವಿದ್ದರೆ ಅವರು ಕೊಂಗ್ರೆಸ್ಸನ್ನು ಎಂದೂ ಎದುರಿಸುತ್ತಿದ್ದಿಲ್ಲ. ಅವರ ಲೋಕಸೇವೆಯೆಂಬುದು ಕೂಜಳ್ಳಿಯ ಪಂಚಾಯತದ ಹೊರಗೆ ಹೋಗಿಲ್ಲ. ಯುದ್ಧಕಾಲದಲ್ಲಿ ಅಧಿಕಾರಿಗಳೊಡನೆ ಓಡಾಡಿ ಕೆಲವೊಂದು ನಿಧಿಗಳನ್ನು ಎತ್ತುವಳಿ ಮಾಡಲು ಸಹಾಯ ನೀಡಿದ ಶ್ರೇಯಸ್ಸಷ್ಟೇ ಅವರ ಕಡೆಗಿದೆ! ರಾಜಕಾರಣದ ಗಂಧವೂ ಅವರಿಗಿಲ್ಲ. ತಾವು ಯಾವ ಪಕ್ಷದವರೂ ಅಲ್ಲವೆಂದು ಅವರೇ ಹೇಳುತ್ತಾರೆ. ಪಕ್ಷವಿಲ್ಲದವರಂತೆ ರಾಜಕಾರಣವಿರಲಾರದು. ಜಿಲ್ಲೆಯೊಳಗಿನ ಯಾವದೇ ಸಮಸ್ಯೆಯ ಅಭ್ಯಾಸವನ್ನು ತಾವು ಮಾಡಿದ್ದೇವೆಂದು ಹೇಳುವ ಧೈರ್ಯವನ್ನು ಅವರೆಂದೂ ಮಾಡಲಿಕ್ಕಿಲ್ಲೆಂದು ನಾವು ಹೇಳಬಹುದು. ಹೀಗೆ ಯಾವ ಗುಣ-ವಿಶೇಷಗಳೂ ಇಲ್ಲದೆ ಉಮೇದವಾರರು ಮತ ಬೇಡಲು ಹೇಗೆ ಧೈರ್ಯಗೊಳ್ಳುತ್ತಾರೋ ನಾವು ತಿಳಿಯೆವು. ಮತದಾರರು ಅವರಿಗೆ ಚೊಕ್ಕ ಉತ್ತರ ಕೊಟ್ಟಾರೆಂದು ನಾವು ನಂಬುತ್ತೇವೆ

The Agricultural & Industrial Bank, Ltd.
(Incorporated in British India, Liability of Members limited)
Head Office. COONDAPOOR. S. I
The Head Office and Branches of the Bank now accept
Season Deposits from three to six months at the following rates:-
Three Months at 2½% per annum.
Six Months at 2¾% per annum
No such deposit will be allowed to run beyond 30th September 1946
Coondapoor, 8-2-1946
K. VAMAN SHENAI,
CHAIRMAN.

ವಿಕಾರವಶರಾಗಬೇಡಿರಿ.

ಅಭಿಮಾನದಲ್ಲಿ (೧) ಸದಭಿಮಾನ, (೨) ದುರಭಿಮಾನ ಹೀಗೆ ಎರಡು ವಿಧಗಳುಂಟು. ಸದಭಿಮಾನದಲ್ಲಿ ವಿಚಾರಕ್ಕೆ ಪ್ರಾಧಾನ್ಯವುಂಟು; ದುರಭಿಮಾನದಲ್ಲಿ ವಿಕಾರಕ್ಕೇ ಪ್ರಾಮುಖ್ಯವಿದೆ. ರಾಷ್ಟ್ರೀಯ ಸಭೆಯ ಸಕಲ ಅಭಿಮಾನಿಗಳು ಸದಭಿಮಾನವನ್ನೇ ತಳೆಯಬೇಕು. ರಾಷ್ಟ್ರೀಯ ಸಭೆಯವರು ಸ್ವಾತಂತ್ರ್ಯವನ್ನು ಸತ್ಯ ಮತ್ತು ಶಾಂತ ಮಾರ್ಗದಿಂದಲೇ ಸಂಪಾದಿಸಲು ನಿರ್ಧರಿಸಿದ್ದಾರೆ. ಸತ್ಯ-ಶಾಂತ ಸಾಧನೆಯಲ್ಲಿ ವಿಕಾರಕ್ಕೆ ಎಡೆಯೇ ಇಲ್ಲ; ವಿಚಾರಕ್ಕೇ ಮೇಲ್ಮೆ. ಚುನಾವಣೆಯಲ್ಲಿ ಸಾಧನಗಳ ಪರಿವೆ ಹಿಡಿಯಬಾರದೆಂಬದೊಂದು ಪಾಶ್ಚಾತ್ಯರ ಸಿದ್ಧಾಂತವುಂಟು ಚುನಾವಣೆ ಗೆಲ್ಲುವದೇ ಮುಖ್ಯ; ಅದಕ್ಕಾಗಿ ಕೈಕೊಳ್ಳುವ ಸಾಧನಗಳು ಗೌಣ; ಹೀಗೆ ಅವರು ಹೇಳುತ್ತಾರೆ. ಆದರೆ ರಾಷ್ಟ್ರೀಯ ಸಭೆಯ ಧ್ಯೇಯಸಾಧನೆಗೆ ರಾಷ್ಟ್ರೀಯರು ಪುರಸ್ಕರಿಸತಕ್ಕ ಮಾರ್ಗಗಳೂ ಸಭ್ಯತನದವು ಇರಬೇಕು. ರಾಷ್ಟ್ರೀಯ ಸಭೆಯವರ ಕಟಾಕ್ಷ ಧ್ಯೇಯದಷ್ಟೇ ಮಾರ್ಗಗಳ ಮೇಲೂ ಉಂಟು. ಮುಂಬರುವ ಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯವರೂ ರಾಷ್ಟ್ರೀಯ ಸಭೆಯ ಅಭಿಮಾನವಿರುವ ವಿಶಾಲ ಜನಸಮೂಹವೂ ಈ ಸಂಗತಿಯನ್ನು ಒಳ್ಳೆತಾಗಿ ಲಕ್ಷದಲ್ಲಿಡಬೇಕು

ನಮ್ಮ ಜಿಲ್ಹೆಯೊಳಗೆ ರಾಷ್ಟ್ರೀಯ ಸಭೆಯ ಉಮೇದವಾರರಿಗೆ ಇದಿರಾಗಿ ಬೇರೊಬ್ಬರು ನಿಂತಿದ್ದಾರೆ. ಅವರನ್ನು ಹೀಯಾಳಿಸುವ ಇಲ್ಲವೆ ಹಳಿಯುವ ಕ್ರಮವನ್ನು ಯಾರೂ ಎಂದಿಗೂ ಕೈಕೊಳ್ಳತಕ್ಕದ್ದಲ್ಲ. ಹುಡುಗರು ಕೆಲವರು ವಿಚಾರಶೂನ್ಯರಾಗಿ ಹುಡುಗಾಟಿಕೆ ಮಾಡಿದ್ದಾರೆ. ಅದೂ ಕೂಡ ರಾಷ್ಟ್ರೀಯ ಸಭೆಯ ಅಭಿಮಾನದ ಪರಿಣಾಮವಾದ್ದರಿಂದ ಅದರಿಂದ ಪರ್ಯಾಯವಾಗಿ ರಾಷ್ಟ್ರೀಯ ಸಭೆಯ ಕೀರ್ತಿಗೂ ಕಲಂಕ ಹತ್ತುತ್ತದೆ. ರಾಷ್ಟ್ರೀಯ ಸಭೆಯ ಅಭಿಮಾನಿಗಳು ಈ ಸಂಗತಿಯನ್ನು ಮರೆಯಕೂಡದು. ಚುನಾವಣೆಯಲ್ಲಿ ಹೋರಾಟ ನಡಿಯುವದು ಸ್ವಾಭಾವಿಕ. ಹೋರಾಟದಲ್ಲೇ ರಾಷ್ಟ್ರೀಯ ಸಭೆಯ ಮೇಲ್ಮೆ ಸಿದ್ಧ ಮಾಡಲು ಅವಕಾಶ ಸಿಗುತ್ತದೆ; ರಾಷ್ಟ್ರೀಯ ಸಭೆಯ ಬಗ್ಗೆಗೆ ಜನರಲ್ಲಿ ಇರಬಹುದಾದ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಲಿಕ್ಕೂ ಅವಕಾಶ ದೊರೆಯುತ್ತದೆ. ಇಂಥ ಪ್ರಸಂಗಗಳನ್ನು ರಾಷ್ಟ್ರೀಯ ಸಭೆಯವರು ಸಂತೋಷದಿಂದ ಬರಮಾಡಿಕೊಳ್ಳಬೇಕು. ಎದುರಾಳಿಯಾಗಿ ನಿಂತ ಉಮೇದವಾರರ ಬಗ್ಗೆ ಅಸಹಿಷ್ಣುತೆಯನ್ನು ಅವರೆಂದೂ ತಳೆಯಕೂಡದು. ತಾಳ್ಮೆಯಿಂದಲೇ ರಾಷ್ಟ್ರೀಯ ಸಭೆಯ ಸ್ವಾತಂತ್ರ್ಯಸಂದೇಶವನ್ನು ಜಿಲ್ಹೆ ತುಂಬ ಬೀರಿ ರಾಷ್ಟ್ರೀಯ ಸಭೆಯ ಪ್ರಭುತ್ವವನ್ನು ಅವರು ಜಿಲ್ಹೆಯೊಳಗೆ ಸ್ಥಿರಪಡಿಸಬೇಕು. ಎದುರಾಳಿಯಾಗಿ ನಿಂತವರಾದರೂ ಸ್ವದೇಶಬಾಂಧವರೇ. ಯುಕ್ತಾಯುಕ್ತತೆಯ ವಿಚಾರ ಕಡಿಮೆಯಾಗಿ ಅವರು ರಾಷ್ಟ್ರೀಯ ಸಭೆಯ ಉಮೇದವಾರರಿಗೆ ಇದಿರಾಗಲು ಮುಂದಾಗಿದ್ದಾರೆ. ಅವರ ನಡತೆ ಹುಡುಗಾಟಿಕೆಯೆಂದು ಕೆಲವರಿಗೆ ಅನಿಸಬಹುದು ಆದರೆ ಯಾವ ಬೇಕಾದ ಮತದಾರನಿಗೆ ಚುನಾವಣೆಯಲ್ಲಿ ಹೋರಾಡುವ ಹಕ್ಕುಂಟು. ಅದನ್ನವರು ನಡಿಸುವಲ್ಲಿ ರಾಷ್ಟ್ರೀಯ ಸಭೆಯ ಅಭಿಮಾನಿಗಳು ಅಸಭ್ಯತನದಿಂದ ವಿಘ್ನಗಳನ್ನುಂಟು ಮಾಡಕೂಡದು. ರಾಷ್ಟ್ರೀಯ ಸಭೆಗೆ ಯಾರದೂ ದ್ವೇಷವಿಲ್ಲ; ಯಾರದೂ ಮತ್ಸರವಿಲ್ಲ. ಪ್ರೀತಿಯಿಂದಲೇ ಸ್ವಾತಂತ್ರ್ಯ ಕಾರ್ಯವನ್ನು ಸಾಧಿಸಲು ರಾಷ್ಟ್ರೀಯ ಸಭೆಯು ಚುನಾವಣೆಯ ಕಣಕ್ಕೆ ಇಳಿದಿದೆ. ಚುನಾವಣೆಯಲ್ಲ್ಯಾದರೂ ಪವಿತ್ರ ಮಾರ್ಗಗಳಿಂದಲೇ ರಾಷ್ಟ್ರಕಾರ್ಯ ಸಾಧಿಸಲು ರಾಷ್ಟ್ರೀಯ ಸಭೆ ಮುಂದಾಗಿದೆ. ಅಲ್ಲಿಯ ರಾಷ್ಟ್ರೀಯ ಸಭೆಯ ಅಭಿಮಾನಿಗಳು ಸ್ವಸಂತೋಷದಿಂದಲೂ ಸದಭಿಮಾನದಿಂದಲೂ ತಾವೇ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಾಗಿ ಮತದಾರರಿಗೆ ಸದ್ಬೋಧೆಯನ್ನಿತ್ತು ರಾಷ್ಟ್ರೀಯ ಸಭೆಯ ಉಮೇದವಾರರಿಗಾಗಿ ತಮ್ಮ ಕಡೆಯ ಯಾವತ್ತೂ ಮತಗಳನ್ನು ಸಂಗ್ರಹಿಸಬೇಕು. ಅಂದರೆ ಮಾತ್ರ ರಾಷ್ಟ್ರೀಯ ಸಭೆಯ ಕಾರ್ಯ ಸಿದ್ಧವಾಗುವದು. ಚುನಾವಣೆಯಲ್ಲಿ ವಿಕಾರ ತಲೆದೋರುವದು ಸಹಜವಿದೆ. ಆದರೆ ಅದು ಸ್ವಾರ್ಥಿ ವ್ಯಕ್ತಿಗಳ ಗುದ್ದಾಟದಲ್ಲಿ. ಹಿಂದಲೋಕದ ಪ್ರಭುತ್ವವನ್ನು ಲೋಕಕ್ಕೆ ಸತ್ಯ ಮತ್ತು ಶಾಂತ ಮಾರ್ಗದಿಂದ ತೋರಿಸ ಹೊರಟ ರಾಷ್ಟ್ರೀಯ ಸಭೆಯವರಿಗೆ ವಿಕಾರವಶತೆ ಹೇಳಿದ್ದಲ್ಲ. ಆ ಸಭೆಗೆ ಒಪ್ಪಿದ ಸಕಲ ಕಾರ್ಯಗಳಲ್ಲಿ ವಿಚಾರಕ್ಕೇ ಪ್ರಾಧಾನ್ಯವಿರಬೇಕು.

ನೋಟೀಸು.

ಉತ್ತರ ಕಾನಡಾ ಜಿಲ್ಹಾ ಎಗ್ಜಿಕ್ಯುಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ:—

ಕೆಳಗೆ ತೋರಿಸಿದ ಈ ಜಿಲ್ಹೆಯೊಳಗಿನ ತಾರಿಗಳನ್ನು ಉತ್ತಮ ರೀತಿಯಿಂದ ನಡಿಸುವ ಮತ್ತು ತಾರಿ-ಹಾಸಲು ವಸೂಲ ಮಾಡುವ ಹಕ್ಕಿನ ದೆಸೆಯಿಂದ ೧೯೪೬ನೇ ಇಸವಿಯ ಏಪ್ರಿಲ ತಾರೀಖು ೧ನೇಯಿಂದ ಒಂದು ವರ್ಷದ ಬಾಬತು ಮಕ್ತೆಗಳು ಈ ಕೆಳಗೆ ತೋರಿಸಿದ ತಾರೀಖಿಗೆ, ಈ ಕೆಳಗೆ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾನ್ಹ ೩ ಘಂಟೆಗೆ ಬಹಿರಂಗವಾಗಿ ಲಿಲಾಂವ ಮಾಡಲ್ಪಡುವವು. ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲು ಮಾಡಬಹುದು.

೨. ಮಕ್ತೆ ಬೇಡುವವರ ಹತ್ತರ ತಮ್ಮ ಲಾಯಕಿ ಬಗ್ಗೆ, ಅವರ ಸ್ಥಿರ ಆಸ್ತಿ ಎಲ್ಲಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಮಹಾಲಕರಿಯವರ ಸಹಿಯ ಸರ್ಟಿಫಿಕೇಟು ಇರಬೇಕು. ಮತ್ತು ಪ್ರತಿ ಒಂದು ಮಕ್ತೆಯ ಬಾಬತು ಇನ್ನೂರು (೨೦೦) ರೂಪಾಯಿ ನಗದಿಯಾಗಿ ಹಾಜರ ಮಾಡಲು ಅವರು ಸಿದ್ಧರಾಗಿರಬೇಕು. ಅಂದರೆನೇ ಅಂಥವರ ಸವಾಲು ಅವರ ಲಾಯಕಿ ರಕಮಿನ ವರೆಗೆ ಮಾತ್ರ ತಕ್ಕೊಳ್ಳಲಾದೀತು. ಸವಾಲು ಮಂಜೂರ ಆಗದಿದ್ದರೆ ನಗದಿಯಾಗಿ ಹಾಜರ ಮಾಡಿದ ಹಣ ಪರತ ಕೊಡಲ್ಪಡುವದು. ಮಂಜೂರ ಆದರೆ ಸದರಿ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತೂ ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವ ಬಗ್ಗೆ ಅನಾಮತವಾಗಿ ಇಟ್ಟುಕೊಳ್ಳಲ್ಪಡುವದು ಮತ್ತು ಮಕ್ತೆಯ ಮುದ್ದತು ತೀರಿದ ಬಳಿಕ, ಎಲ್ಲ ಶರ್ತುಗಳನ್ನು ಪಾಲಿಸಿದಲ್ಲಿ ಮಾತ್ರ, ಸದರಿ ರಕಮು ಪರತ ಕೊಡಲ್ಪಡುವದು

೩. ಲಿಲಾಂವಿನ ಉಳಿದ ಯಾವತ್ತೂ ಶರ್ತುಗಳು ಪ್ರತ್ಯೇಕವಾಗಿ ಛಾಪಿಸಿದ ಜಾಹೀರನಾಮೆಯಲ್ಲಿ ನಮೂದಿಸಿದಂತೆಯೇ ಇರುವವು. ಮಕ್ತೆ ಮಾಡುವ ಇಚ್ಛೆಯುಳ್ಳವರು ತಮಗೆ ಬೇಕಾದ ಎಲ್ಲ ಮಾಹಿತಿಯನ್ನು ಮೆ॥ ಎ. ಇಂ. ಸಾಹೇಬ, ಕಾರವಾರ, ಅಥವಾ ಸಬಡಿವ್ಹಿಜನಲ್ ಆಫೀಸರ, ಪಿ. ಡಬ್ಲ್ಯು. ಡಿ., ಕುಮಟಾ ಇವರ ಕಚೇರಿಗಳಲ್ಲಿ, ಕಚೇರಿಯ ವೇಳೆಯಲ್ಲಿ ತಿಳಕೊಳ್ಳಬಹುದು. ಲಿಲಾಂವಿನ ಯಾವತ್ತೂ ಶರ್ತುಗಳನ್ನು ಲಿಲಾಂವಿನ ಕಾಲದಲ್ಲಿ ಓದಿ ತಿಳಿಸುವದರಲ್ಲಿ ಬರುವದು.

೪. ಶರಾವತಿ ತಾರಿಯ ಬಗ್ಗೆ ಪವರ ಬೋಟ ಸರ್ವಿಸಿಗೆ ಲಿಲಾಂವ ಮಾಡಲಿಚ್ಛಿಸುವವರಿಗೆ ಪ್ರಾಶಸ್ತ್ಯ ಕೊಡಲಾಗುವದು.

ಅ.ನಂ	ತಾರಿಯ ಹೆಸರು	ತಾರಿಯ ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
೧	ಶರಾವತಿ (ಮಲ್ಲುಕುರ್ವೆ ಪೋಟ ತಾರಿಯ ಸಹಿತ)	೨ನೇ	ಹೊನ್ನಾವರ	೨೫—೨—೧೯೪೬.	ಪಿ. ಡಬ್ಲ್ಯು. ಡಿ. ಆಫೀಸ, ಕುಮಟಾ.	ಮೆ॥ ಎಗ್ಜಿಕ್ಯುಟಿವ್ಹ ಇಂಜಿನಿಯರ ಸಾಹೇಬ, ಕಾನಡಾ.
೨	ದೀವಗಿ (ಮಣ್ಕಿ)	೩ನೇ	ಕುಮಟಾ			
೩	ವೆಂಕಟಾಪುರ (ಹೆಬಳೆ ಮತ್ತು ತೆಂಗಿನಗುಂಡಿ ಪೋಟ ತಾರಿಗಳ ಸಹಿತ)	೩ನೇ	ಭಟಕಳ			

ಕಾರವಾರ,
ತಾ. ೬-೨-೪೬.

R. L. Deshpande,
Executive Engineer, Kanara Division.

ನಂ. ೭೦೫೫

ಜಾಹೀರ ನೋಟೀಸು.

ಮುಂಬಯಿ ಕಾಯದೆ ಮಂಡಳದ (ಮುಂಬಯಿ ಲೆಜಿಸ್ಲೇಟಿವ್ಹ ಎಸೆಂಬ್ಲಿ) ಚುನಾವಣೆಗೆ ಕಾನಡಾ ಜಿಲ್ಹೆಯ ಜನರಲ್ ಮತ್ತು ಮುಸಲ್ಮಾನ ಮತದಾರ ಸಂಘಗಳ ಬಗ್ಗೆ ಈ ಕೆಳಗೆ ನಮೂದಾದ ಜನರು ಉಮೇದವಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಜನರಲ್ ಮತದಾರ ಸಂಘದ ಬಗ್ಗೆ (೨. ಸ್ಥಳಗಳು)

	ಉಮೇದವಾರರ ಹೆಸರು.	ಗುರ್ತು
(೧)	ಗಣಪತಿ ಶ್ರೀಧರ ಹೆಗಡೆ, ಕುಮಟಾ	ನೇಗಿಲು
(೨)	ರಾಮಚಂದ್ರ ಮುಕುಂದ ಪ್ರಭು ಶಿರೂರ, ಅಂಕೋಲಾ	ಚಕ್ಕಡಿ
(೩)	ಶಿವರಾವ ಶಿವರಾಮ ಶಾಸ್ತ್ರಿ, ಹೊನ್ನಾವರ	ಮರ
(೪)	ಸಣ್ಣಪ್ಪ ಪರಮೇಶ್ವರ ಗಾಂವಕಾರ, ಅಂಕೋಲಾ	ಎತ್ತು

ಮುಸಲ್ಮಾನ ಮತದಾರ ಸಂಘದ ಬಗ್ಗೆ (ಒಂದು ಸ್ಥಳ)

(೧)	ಅಬ್ದುಲ ಕಾದಿರ ಬಾದಶಾ ಮೈದಿನ ಕಾಜೀಮನೆ, ಭಟಕಳ	ಗಡಿಯಾರ
(೨)	ಮಹಮ್ಮದ ಅಕಬರ ಅಬ್ದುಲ ರಹೀಮ, ಕಂಟ್ರಾಕ್ಟರ ಹಳಿಯಾಳ	ತಕ್ಕಡಿ
(೩)	ಶಂಸುದ್ದೀನ ಹುಸೇನ ಜುಕಾಕು, ಭಟಕಳ	ಛತ್ರಿ

ಮೇಲಿನ ಎರಡೂ ಸಂಘಗಳ ಚುನಾವಣೆಯ ಕಾರ್ಯಕ್ರಮ ಈ ಕೆಳಗಿನಂತಿದೆ:—

ಮತದಾನ ಮಾಡುವ ತಾರೀಖು ಮತ್ತು ವೇಳೆ:—

	ಸಂಘ	ತಾರೀಖು	ವೇಳೆ
(೧)	ಜನರಲ್ ಮತದಾರ ಸಂಘ	ಸೋಮವಾರ ೧೧—೩—೧೯೪೬.	ಬೆಳಗಿನ ೮ ಘಂಟೆಯಿಂದ ಸಂಜೆ ೬ ಘಂಟೆಯ ವರೆಗೆ.
(೨)	ಮುಸಲ್ಮಾನ ಮತದಾರ ಸಂಘ	ಸೋಮವಾರ ೨೫—೩—೧೯೪೬.	— ಡಿ —

ಮತದಾನ ಮಾಡಲಿಚ್ಛಿಸುವವರು ಮತ ಕೊಡಲಿಕ್ಕೆ ನೇಮಿಸಿದ ತಾರೀಖಿನ ದಿವಸ ಸಂಜೆ ಹೊತ್ತಿಗೆ ಗುಂಪಾಗದಂತೆ ಆದಷ್ಟು ಬೆಳಗ್ಗಿನ ಹೊತ್ತಿಗೇ ಮತಗಟ್ಟೆ (ಪೋಲಿಂಗ ಸ್ಟೇಶನ್)ಗಳಿಗೆ ಹೋಗಬೇಕಾಗಿ ವಿನಂತಿಯುಂಟು.

ಮತಗಟ್ಟೆ (ಪೋಲಿಂಗ ಸ್ಟೇಶನ್)ಗಳ ಮತ್ತು ಅವುಗಳ ಕೆಳಗೆ ಬರುವ ಗ್ರಾಮಗಳ ಯಾದಿಗಳನ್ನು ಆಯಾಯ ಮಾಮಲೇದಾರ ಯಾ ಮಹಾಲಕರಿ ಸಾ॥ರವರು ತಮ್ಮ ತಮ್ಮ ತಾಲೂಕ ಯಾ ಪೇಟೆಯಲ್ಲಿ ಫಾಯಸ ಮಾಡುವರು, ಅವು ಕಚೇರಿಯ ಹೊತ್ತಿನಲ್ಲಿ ಅವರ ಕಚೇರಿಗಳಲ್ಲಿ ನೋಡಲಿಕ್ಕೆ ಸಿಗುವವು

ಕಾರವಾರ,
ತಾ. ೧೩—೨—೧೯೪೬.

F. N. RANA,
ಕಲೆಕ್ಟರ ಮತ್ತು ರಿಟರ್ನಿಂಗ ಆಫೀಸರ, ಕಾನಡಾ

ಜಾಹೀರ ಪ್ರಕಟಣೆ.

ನೀಲಗಿರಿ ಗುಡ್ಡಗಳ ಸುವಾಸಿಕ ಮನೋಹರ ಚಹಾ ವಿಕ್ರಿ ಮಾಡುವ ದೆಸೆಯಿಂದ ಡೀಲರ್ಸ (Dealers)ರನ್ನು ಕುಮಟಾ, ಹೊನ್ನಾವರ, ಗೋಕರ್ಣ ಮತ್ತು ಅಂಕೋಲಾ ಶಹರುಗಳಲ್ಲಿ ನೇಮಕ ಮಾಡುವದಿದೆ.

ಆದ್ದರಿಂದ ಚತುರ ವ್ಯಾಪಾರಸ್ಥರು ಸಂಪಲ್ಸಗಳ ಬಗ್ಗೆ, ಇತರ ಶರ್ತುಗಳ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆ ಸಮಕ್ಷ ಇಲ್ಲವೆ ಪತ್ರವ್ಯವಹಾರ ಮಾಡಿ ತಿಳಕೊಳ್ಳುವದು.

ಹುಬ್ಬಳ್ಳಿ, **H. A. Oosman,**
ತಾ. ೧೧-೨-೪೬ Agent,
The Planters Co., Ltd., Nilgiris, Hubli.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಚಳಿಗಾಲ ತೀರಿದಂತೆಯೇ, ಒಂದು ದಿನ ಸೆಕೆಯಾದರೆ ಇನ್ನೊಂದು ದಿನ ಚಳಿಯಾಗುತ್ತಿದೆ.

ದಕ್ಷಿಣ ಭಾಗದ ಕಮಿಶನರ ರಾ॥ ವ್ಹಿ. ಎಸ್. ಭಿಡೇಯವರು ಗುರುವಾರ-ಶುಕ್ರವಾರ ಈ ಭಾಗದಲ್ಲಿ ಸಂಚಾರ ಮಾಡಿ, ಶನಿವಾರ ಮುಂಜಾನೆ ಶಿರ್ಶಿಗೆ ತೆರಳಿದರು.

ಜಿಲ್ಹಾ ನ್ಯಾಯಾಧೀಶರ ಮುಕ್ಕಾಮು ನಿನ್ನೆಯಿಂದ ಇಲ್ಲುಂಟು. ಇಂದಿನಿಂದ ಕೆಲವು ಕೊಲೆ-ಖಟ್ಲೆಯ ವಿಚಾರಣೆಯಾಗುವದು. ಪ್ರಾಂತ ಸಾಹೇಬ ರಾ॥ ಕುರವತ್ತಿಯವರ ಕಚೇರಿಯೂ ಈಗ ಈ ಊರಲ್ಲುಂಟು.

ಕೈಯಿಂದ ಕುಟ್ಟಿ ಭತ್ತ ಮೊರೆಯುವವರಿಗೆ ಭತ್ತ ಕೊಡಿಸುವದಿಲ್ಲೆಂದು "ವೃತ್ತ"ವು ಈಗ ಎರಡು ತಿಂಗಳಿಂದ ಶಂಖನಾದ ಮಾಡುತ್ತಿದೆಯಷ್ಟೇ. ಹಳ್ಳಿಗಳಿಂದಲೂ ಈ ದೂರು ಕೇಳಬರುತ್ತಿದೆ. "ವೃತ್ತ"ದಲ್ಲಿ ಪ್ರಕಟವಾದ ದೂರು ನಿರಾಧಾರವಿರುತ್ತದೆಂದು ನಿರಾಕರಿಸುವ ಧೈರ್ಯವನ್ನಾಗಲಿ ಧಾರ್ಷ್ಟ್ಯವನ್ನಾಗಲಿ ಈ ತನಕ ಯಾವ ಸ್ಥಾನಿಕ ಅಧಿಕಾರಿಯೂ ಮಾಡಿರುವದಿಲ್ಲ. ಜಿಲ್ಹಾಧಿಕಾರಿಗಳ ಕಚೇರಿಯವರೂ ಮಾಡಿಲ್ಲ. ಆದರೂ ನಾವು ಕೈಯಿಂದ ಕುಟ್ಟಿ ಭತ್ತ ಮೊರೆಯುವವರಿಗೆ ಶಕ್ಯವಿದ್ದಷ್ಟು ಭತ್ತ ಕೊಡುತ್ತಿದ್ದೇವೆಂದು ಮೊನ್ನೆಯೇ ವರ್ಗವಾಗಿ ಹೋದ ಕಲೆ॥ ವ್ಹಿ. ನಂಜಪ್ಪ ಇವರು ಮುಂಬಯಿಯೊಳಗಿನ ಜನತಾ ಆಹಾರ ಸಮಿತಿಯ ಕಾರ್ಯದರ್ಶಿಗಳಾಗಿರುವ ರಾ॥ ವೈಕುಂಠಲಾಲ ಮೆಹತಾ ಇವರಿಗೆ ತಾ. ೧೭-೧-೧೯೪೬ಕ್ಕೆ ಒಂದು ಪತ್ರ ಬರೆದಿದ್ದಾರೆ! ಅವರ ಪತ್ರ ಈ ಕೆಳಗಿನಂತುಂಟು:-

Office of the Collector of Kanara,
Karwar, 17th Jan., 1946.

Dear Mr. Mehta,

Your letter dated 22nd Dec. 1945.

In Kanara also we are giving as much paddy as possible to hand-pounders for milling. Last year large quantities were milled in this way. The same policy is being followed this year also

I am sorry I could not meet you before I left Honavar

Yours sincerely,
V. Nanjappa.

ಮೇಲಿನ ಪತ್ರದ ಕನ್ನಡ ಅನುವಾದ ಈ ಕೆಳಗಿನಂತಿದೆ:-

“ಪ್ರಿಯ ರಾ॥ ಮೆಹತಾಯವರೇ,

ತಮ್ಮ ತಾ. ೨೨-೧೨-೪೫ರ ಪತ್ರ ತಲ್ಪಿತು. ಕಾನಡಾ ಜಿಲ್ಹೆಯಲ್ಲೂ ಕೂಡ ನಾವು ಕೈಯಿಂದ ಭತ್ತ ಮೊರೆಯುವವರಿಗೆ ಅಕ್ಕಿ ಮಾಡುವದಕ್ಕೆ ಶಕ್ಯವಿದ್ದಷ್ಟು ಹೆಚ್ಚಿಗೆ ಭತ್ತ ಕೊಡುತ್ತಿದ್ದೇವೆ. ಕಳೆದ ವರ್ಷ ಈ ರೀತಿ ಹೇರಳ ಭತ್ತದ ಅಕ್ಕಿ ಮಾಡಿಸಿತ್ತು. ಈ ಸಲವೂ ಅದೇ ಕ್ರಮ ಅನುಸರಿಸಲ್ಪಡುತ್ತಿದೆ. ಹೊನ್ನಾವರದಿಂದ ಹೊರಡುವ ಮುಂಚೆ ತಮ್ಮನ್ನು ಕಾಣಲಾಗಲಿಲ್ಲಾದ ಬಗ್ಗೆ ವಿಷಾದನೆನಿಸುತ್ತದೆ”

ಇದೇ ಕಳೆದ ನವಂಬರ, ಡಿಸೆಂಬರ, ಜನವರಿ ತಿಂಗಳಲ್ಲಿ ಯಾವ ಯಾವ ತಾಲೂಕ-ಪೇಟೆಗಳಲ್ಲಿ ಮತ್ತು ಯಾವ ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಭತ್ತವನ್ನು ಮೊರೆಯುವವರಿಗೆ ಕೊಟ್ಟು ಅಕ್ಕಿ ಮಾಡಿಸಲಾಯಿತೆಂಬುದರ ವಿವರಗಳನ್ನು ಜಿಲ್ಹಾಧಿಪರ ಕಚೇರಿಯವರು ಪ್ರಕಟಿಸಬೇಕು. ಕಳೆದ ವರ್ಷದ ಅಂಕಿಗಳನ್ನು ಈ ವರ್ಷದ ಅಂಕಿಗಳೊಡನೆ ಪ್ರಕಟಿಸಿದರೆ ಮತ್ತಷ್ಟು ಒಳಿತಾಗುವದು!

ಕಾರವಾರ, ಕೋಡಿಬಾಗ, ಸದಾಶಿವಗಡ, ಅಂಕೋಲಾ, ತದಡಿ, ಕುಮಟಾ, ಉಪ್ಪಿನಪಟ್ಟಣ, ಹೊನ್ನಾವರ, ಭಟಕಳ, ವೆಂಕಟಾಪುರ, ಶಿರಾಲಿ, ಮುರ್ಡೇಶ್ವರ ಊರುಗಳಲ್ಲೂ ಈ ಊರುಗಳಿಂದ ೫ ಮೈಲು ಯಾ ಕಡಿಮೆ ಅಂತರದಲ್ಲಿರುವ ಹಳ್ಳಿಗಳಲ್ಲೂ ತಾ. ೫-೨-೧೯೪೬ರಿಂದ ಚಿಮಣಿ ಎಣ್ಣೆಯ ದರವನ್ನು ಪೈಂಟಿಗೆ ೨॥ ಆಣೆಯಿಂದ ೨॥ ಆಣೆಗೆ ಇಳಿಸಿದ್ದಾರೆ.

ತಾ. ೪-೨-೪೬ರ “ವೃತ್ತ”ದಲ್ಲಿ ಪ್ರಕಟವಾದಂತೆ ನಾವು ಮಾದನಗೇರಿ ಉಗ್ರಾಣದಲ್ಲಿ ರೈತರ ಭತ್ತ ಅಳೆದುಕೊಳ್ಳುವಾಗ ಇಲ್ಲವೆ ತೂಕ ಮಾಡಿಕೊಳ್ಳುವಾಗ ಯಾವದೇ ಪಾಂದ್ರಜಾಲ ವಿದ್ಯೆ ಮಾಡಿಲ್ಲವೆಂದು ಮಾದನಗೇರಿಯ ಉಗ್ರಾಣದಾರರು ತಿಳಿಸುತ್ತಾರೆ. ಹೊಳ್ಳು-ಭತ್ತ, ಚಿಂಡಿ ಇಲ್ಲವೆ ಸುಂಗು ತುಂಬಿದ ಭತ್ತ ತಂದು ಕೆಲವರು ತಮಗೆ ಮೋಸ ಮಾಡಿದರೆಂತಲೂ, ಈಗ ನಾವು ಜಾಡಾಗಿ ಭತ್ತ ಚನ್ನಾಗಿ ಗೇರಿಸಿಕೊಳ್ಳುತ್ತೇವೆಂತಲೂ, ಭತ್ತ ತಂದ ರೈತರದೇ ಕೈತಪ್ಪಾಲಿ ಭತ್ತ ಅಳೆಯಿಸಿ, ಅದರ ಸಹಾಯದಿಂದ ಅಳೆದ ಭತ್ತ ತೂಕ ಮಾಡಿಕೊಳ್ಳುತ್ತೇವೆಂತಲೂ, ತೂಗುವ ಬಗ್ಗೆ ನಾವು ಪ್ರತ್ಯೇಕ ಭತ್ತ ತೆಗೆದಿಟ್ಟದ್ದು ಇರುವದಿಲ್ಲೆಂತಲೂ ಈ ಉಗ್ರಾಣದಾರರ ಅಂಬೋಣ

ಇಲ್ಲಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಕಳೆದವಾರ ತಮ್ಮದೊಂದು ಸಂಘ ಸ್ಥಾಪಿಸಿಕೊಂಡಿದ್ದಾರೆ.

ತಾ. ೧೬ಕ್ಕೆ ಮಾಸ್ಕೇರಿಯಲ್ಲೊಂದು ರೈತರ ಸಭೆಯಾಯಿತು. ಸರಕಾರದವರು ೧೯೩೯ರ ಲಾವಣಿ ಕಾನೂನನ್ನು ನಮ್ಮ ಜಿಲ್ಹೆಗೆ ಇನ್ನೂ ಅನ್ವಯಿಸದಿದ್ದರ ನಿಷೇಧ ಮಾಡುವ ಒಂದು ಗೊತ್ತುವಳಿಯಾಯಿತು. ಮಾಸ್ಕೇರಿ ಬದಿಯ ಹಳ್ಳಿಗಳ ರೈತರು ತಮಗೆ ಬೇಕಾದ ತರಕು, ಉರುವಲಗಳನ್ನು (ಅಂಕೋಲಾ ತಾಲೂಕ) ಗುಂಡಬಾಳ ಬೆಟ್ಟದಿಂದ ತರುತ್ತಾರೆ. ಇತ್ತಲಾಗಿ ಉಳವರೆಯಲ್ಲಿರುವ ‘ವನಪಾಲ’ (ಫಾರೆಸ್ಟರ) ಯು ಈ ರೈತರ ದೋಣಿಗಳನ್ನು ಗುಂಡಬಾಳೆಗೆ ಹೋಗುವಾಗಲೂ ಗುಂಡಬಾಳೆಯಿಂದ ಬರುವಾಗಲೂ ತಡೆಹಿಡಿದು ದಣಿಸುತ್ತಾನೆಂಬುದೆಂದು ದೂರು ಸಭೆಯಲ್ಲಿ ಬಂದಿತ್ತು. ಏನಾದರೂ ಎತ್ತುವಳಿ ಮಾಡುವದಕ್ಕಾಗಿಯೇ ಸದರಿ ವನಪಾಲನು ಈ ರೀತಿ ವರ್ತಿಸುತ್ತಾನೆಂದು ಸಭಿಕರು ತೀರ್ಮಾನಿಸಿ ಈ ಬಗ್ಗೆ ಮೇಲಧಿಕಾರಿಗಳ ಕಣ್ಣ ದೊರಕೊಳ್ಳಬೇಕೆಂದು ಠರಾಯಿಸಿದ್ದಾರೆ.

ದರ್ಶನೀಯ (ವ್ಹಿಜ್ಯುಅಲ್) ಶಿಕ್ಷಣಾಧಿಕಾರಿಗಳಾದ ರಾ॥ ಉಲ್ಲಾಳರವರು ಕಳೆದ ಗುರುವಾರ-ಶುಕ್ರವಾರ ಈ ಊರಲ್ಲಿದ್ದರು. ಗುರುವಾರ ಅವರು ಗಿಬ್ಬ ಹಾಯಸ್ಕೂಲಿನ ಧೇಂಪೆ ಸಭಾಮಂದಿರದಲ್ಲಿ ಮಾಯಾದೀಪದ ಸಹಾಯದಿಂದ ಒಂದು ವ್ಯಾಖ್ಯಾನವಿತ್ತರು. ಮರುದಿನ ಸಂಜೆ ಚಿತ್ರಾಂಜನ ಚಲಚ್ಚಿತ್ರಮಂದಿರದಲ್ಲಿ ಚಲಚಿತ್ರದ ಸಹಾಯದಿಂದ ಇನ್ನೊಂದು ವ್ಯಾಖ್ಯಾನ ಕೊಟ್ಟರು; ಮತ್ತು ತೆಂಗಿನ ಮರವೂ ಅದರ ಅಂಗೋಪಾಂಗಗಳೂ ಎಂತೆಂತಹ ಉಪಯೋಗಕ್ಕೆ ಬರುತ್ತವೆಂಬುದನ್ನು ತೋರಿಸಿ ಕೊಟ್ಟರು

ಕಾರವಾರ— (ತಾ. ೧೬-೨-೪೬) ಕಳೆದ ಸೋಮವಾರ ಮಧ್ಯಾಹ್ನ ಇಲ್ಲಿ ಜಿಲ್ಹಾಧಿಪರ ಮುಂದೆ ಪ್ರಾಂತಿಕ ಎಸೆಂಬ್ಲಿಯ ಚುನಾವಣೆಗೆ ನಿಲ್ಲುವ ಹುರಿಯಾಳುಗಳ ನೇಮನೂಕಿ-ಪತ್ರಗಳು ದಾಖಲಾದವು. ಮುಸಲ್ಮಾನೇತರ ಸಾಮಾನ್ಯ ಮತದಾರ ಸಂಘದ ೩ ಸ್ಥಳಗಳಿಗೆ ಕೊಂಗ್ರೆಸ ಪರವಾಗಿ ರಾ॥ ರಾ॥ ಶಿವರಾವ ಶಾಸ್ತ್ರಿ, ಸಣ್ಣಪ್ಪ ಪರಮೇಶ್ವರ ಗಾಂವಕಾರ ಮತ್ತು ದಯಾನಂದ ಯಾನೆ ರಾಮಚಂದ್ರ ಮುಕುಂದ ಪ್ರಭು ಶಿರೂರ ಈ ಮೂವರೂ, ಕುಮಟೆಯ ವಕೀಲ ರಾ॥ ಗಣಪತಿ ಶ್ರೀಧರ ಹೆಗಡೆ ಇವರೂ ನಾಮಪತ್ರಗಳನ್ನು ಒಪ್ಪಿಸಿದರು. ಅದೇ ಸುಮಾರಿಗೆ ಮುಸಲ್ಮಾನ ಮತದಾರ ಸಂಘದ ೧ ಸ್ಥಳಕ್ಕೆ ಮುಸ್ಲಿಮ್ ಲೀಗಿನ ಪರವಾಗಿ ಭಟಕಳದ ರಾ॥ ಜೇ. ಎಚ್. ಶಮಸುದ್ದೀನ, ಅಬದುಲ ಕಾದಿರ ಬಾದಶಾ ಶಾಹಿಮಾಜಿ ಮತ್ತು ಹಳಿಯಾಳದ ರಾ॥ ಮಹಮ್ಮದ ಅಕಬರ ಕಂಟ್ರಾಕ್ಟರ ಹೀಗೆ ಮೂವರು ನಾಮಪತ್ರಗಳನ್ನು ಹಾಜರಪಡಿಸಿದರು. ಪರಿಶೀಲನೆಯಲ್ಲಿ ಎಲ್ಲ ನಾಮಪತ್ರಗಳು ಸರಿಯಾಗಿವೆಯೆಂದು ನಿರ್ಣಯವಾಯಿತು. ಸಾಮಾನ್ಯ ಮತದಾರ ಸಂಘಕ್ಕೆ ಕೊಂಗ್ರೆಸ್ಸಿಗೆ ಎದುರಾಳಿಯಾಗಿ ಯಾರೂ ನಿಲ್ಲಲಿಕ್ಕಿಲ್ಲೆಂದು ಸೋಮವಾರ ಅಪರಾಹ್ನದ ವರೆಗೆ ಸಮಸ್ತರ ನಿರೀಕ್ಷೆಯಿತ್ತು. ಆಯಿತ ಹೊತ್ತಿಗೆ ರಾ॥ ಹೆಗಡೆಯವರು ಮುಂದಾದ್ದು ನೋಡಿ ಎಲ್ಲರಿಗೂ ಆಶ್ಚರ್ಯವೆನಿಸಿತು.

ಇದೇ ಬರುವ ಸೋಮವಾರದಿಂದ ಕೊಂಗ್ರೆಸ ಹುರಿಯಾಳುಗಳು ತಮ್ಮ ಪ್ರಚಾರಮತಸಂಗ್ರಹಕ್ಕಾಗಿ ಜಿಲ್ಹೆಯಲ್ಲೆಲ್ಲ ಸಂಚರಿಸುವವರಿದ್ದಾರೆ. ಯಲ್ಲಾಪುರದಿಂದ ಅವರ ಸಂಚಾರಕ್ಕೆ ಪ್ರಾರಂಭವಾಗುವದಂತೆ.

ಕಳೆದ ತಾ. ೧೯ಕ್ಕೆ ಜಿಲ್ಹಾಧಿಪರಾಗಿದ್ದ ರಾ॥ ನಂಜಪ್ಪ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಪ್ರಮುಖ ನಾಗರಿಕರು ಸಭೆ ಸೇರಿ ಇಲ್ಲೊಂದು “ರಿಮಾಂಡ ಹೋಮ” (ದುರ್ಮಾರ್ಗಕ್ಕೆ ಬಿದ್ದ ಹುಡುಗಿಯರ ರಕ್ಷಣಾಲಯ) ಸ್ಥಾಪಿಸುವ ನಿರ್ಣಯ ಮಾಡಿರುತ್ತಾರೆ; ಮತ್ತು ಆ ಬಗ್ಗೆ ಒಂದು ಸಮಿತಿಯನ್ನೂ ನೇಮಿಸಿದ್ದಾರೆ. ಈ ಬಗ್ಗಾಗಿಯೇ ಇನ್ಸಪೆಕ್ಟರ ಮಿ॥ ಖಾನ ಇವರು ಪುಣೆಯಿಂದ ಇಲ್ಲಿಗೆ ಬಂದಿದ್ದರು. ಈ ಜಿಲ್ಹೆಯಿಂದ ಎಷ್ಟೋ ಅಲ್ಪ-ವಯಸ್ಕ ತರುಣಿಯರು ಮುಂಬಯಿಗೆ ಹೋಗಿ ಹೇಗೆ ವ್ಯಭಿಚಾರದ ಹೊಲಸು ವ್ಯಾಪಾರದಲ್ಲಿ ತೊಡಗಿಸಲ್ಪಡುತ್ತಾರೆಂಬುದನ್ನು ರಾ॥ ಖಾನರು ವಿವರಿಸಿದರು.

ಈ ವಾರ ಕಲಕತ್ತೆಯಲ್ಲಾದ ಗೋಳಿಬಾರಿನ ನಿಷೇಧ ಮಾಡುವದಕ್ಕಾಗಿ ನಿನ್ನೆ ಇಲ್ಲೊಂದು ಸಭೆಯಾಯಿತು. ರಾ॥ ದಿನಕರ ದೇಸಾಯಿಯವರು ಮುಖ್ಯ ಭಾಷಣ ಮಾಡಿ, ಸ್ವತಂತ್ರ ದೇಶಗಳಲ್ಲಿ ಕಲಕತ್ತೆ, ಮುಂಬಯಿಗಳಲ್ಲಾದಂತಹ ದುರ್ಘಟನೆಗಳು ಆಗುವದಿಲ್ಲೆಂದೂ ದೇಶವು ಸ್ವತಂತ್ರವಾದರೆನೇ ಈ ಅನಾಹುತಗಳು ತಪ್ಪುವವೆಂದೂ ತಿಳಿಸಿಹೇಳಿದರು.

ಶಿರ್ಶಿ— (ತಾ. ೮-೨-೪೬) “ಅಕ್ಕಿ ಕೊಂಡು ಕೊಳ್ಳುವದಕ್ಕಾಗಿ ಉತ್ತರ ಕನ್ನಡ ಜಿಲ್ಹೆಯ ಜನರನೇಕರು ತಮ್ಮ ದನ-ಕರುಗಳನ್ನು ಮಾರುತ್ತಿದ್ದಾರೆ ಎಂದು ಕೇಂದ್ರ ಎಸೆಂಬ್ಲಿಯ ಸಭೆಯೊಂದರಲ್ಲಿ ಜನಾಬ ಅಹಮ್ಮದ ಜಾಫರರು ಉದ್ಗರಿಸಿದ್ದರು. ಈ ಮಾತು ದಿಟವಲ್ಲೆಂದೂ ಈ ಜಿಲ್ಹೆಯಲ್ಲಿ ಬರಗಾಲದ ಭಯವಿಲ್ಲೆಂದೂ ಕಳೆದ ವಾರ ಜಿಲ್ಹಾಧಿಪರು ಓರ್ವ ಪತ್ರಿಕಾ-ಪ್ರತಿನಿಧಿಯ ಮುಖಾಂತರ ಜಾಹೀರಪಡಿಸಿದ್ದಾರೆ. ಆದರೆ ಜನಾಬ ಜಾಫರರ ಮಾತು ಪೂರ್ಣ ದಿಟವಿರುತ್ತದೆಂದು ಅಡಿಕೆ ತೋಟಗಾರರ ಪರಿಸ್ಥಿತಿಯ ಪೂರ್ಣ ಪರಿಚಯವುಳ್ಳ ರಾ॥ ವಿಶ್ವಾಮಿತ್ರ ವಕೀಲರು ತಿಳಿಸುತ್ತಾರೆ. ಅಡಿಕೆ ರೋಗದಿಂದಲೂ, ಅಡಿಕೆಯ ಧಾರಣೆಯ ಇಳಿತದಿಂದಲೂ ಹತಾಶರಾಗಿರುವ ತೋಟಗಾರರನೇಕರು ತಮ್ಮ ಉಪಜೀವಿಕೆಗಾಗಿ ದನಗಳನ್ನು ಮಾರುತ್ತಿದ್ದಾರೆಂದು ಅವರು ಹೇಳುತ್ತಾರೆ. ಹತ್ತಿಕಾಳು ವಗೈರೆ ದನಗಳ ಆಹಾರವೀಗ ದುರ್ಲಭವಾದ್ದರಿಂದಂತೂ ದನಗಳ ವಿಕ್ರಯವಿತ್ತಲಾಗಿ ಹೆಚ್ಚಾಗಿದೆಯಂತೆ.

ಸಿದ್ದಾಪುರ— (ತಾ. ೧೪-೨-೪೬) ಈ ತಾಲೂಕಿನ ಉಂಬಳಮನೆ ಫಿರ್ಕಾಯ ಶಾನಭೋಗರು ತಮ್ಮ ಫಿರ್ಕಾಯೊಳಗಿನ ಬಡ ಜನರ ಸೀಧಾ-ಚೀಟಿಗಳನ್ನು ಬಲುಮೆಯಿಂದ ತೆಗೆದುಕೊಂಡು ಹೋಗಿ ಅವುಗಳಲ್ಲಿ ಕಾಣಿಸಿದ ಸಕ್ಕರೆ, ಎಣ್ಣೆ, ಅಕ್ಕಿ ಇತ್ಯಾದಿಗಳನ್ನು ತಾವೇ ಕೊಂಡು ಕೊಂಡು ಕಳ್ಳಪೇಟೆ ಮಾಡುತ್ತಿದ್ದುದಾಗಿ ಆ ಫಿರ್ಕಾಯಲ್ಲೆಲ್ಲ ಗಲಭೆ ಕೇಳಬರುತ್ತದಂತೆ. ಜಿಲ್ಹಾಧಿಪರು ಮುಂದಿನ ವಾರ ಇಲ್ಲಿ ಬಂದಾಗ ಅದರ ಸ್ವತಂತ್ರ ಮತ್ತು ಪಕ್ಕಾ ಚೌಕಶಿ ಮಾಡಬೇಕಾಗಿ ಅರಿಕೆಯುಂಟು.

ಬಿಳಗಿಯೊಳಗಿನ ಯೋಗ್ಯ ಧಾರಣೆಯ ಅಂಗಡಿಯಲ್ಲಿ ಅಜ್ಞ, ಅಸ್ಪೃಶ್ಯ ಜನರು ಸೀಧಾ-ಚೀಟಿಗಳನ್ನು ತಕ್ಕೊಂಡು ಬಂದಾಗ ಅಕ್ಕಿಗಾಗಿ ಖರ್ಚ ಬರೆಯುವಾಗ ಚೀಟಿಗಳಲ್ಲಿ ಆ ಜನರ ಸಕ್ಕರೆ ಮತ್ತು ಚಿಮಣಿ ಎಣ್ಣೆ ಕೂಡ ಖರ್ಚ ಬರೆದು, ಆ ಸರಕುಗಳನ್ನು ಶಿರ್ಶಿಗೆ ಕಳಿಸಿ ಕಳ್ಳ ಸಂತೆ ಮಾಡುತ್ತಾರೆಂದು ಓರ್ವ ‘ಅಸ್ಪೃಶ್ಯ’ನು ಬರೆಯುತ್ತಾನೆ. ಈ ದೂರಿನ ಚೌಕಶಿಯೂ ಆಗಬೇಕು.

ಹೆಗ್ಗರಣಿ ಹಳ್ಳಿಯಲ್ಲಿ ಪ್ರತಿ ಸೋಮವಾರ (ತಾ. ೨೫-೨-೪೬ರಿಂದ ಮುಂದೆ ಸಂತೆ ಕೂಡಿಸಲು ಜಿಲ್ಹಾಧಿಪರು ಅಪ್ಪಣೆ ಕೊಟ್ಟಿದ್ದಾರೆ.

ಹಿಂದುಸ್ಥಾನಿ ಪಾಠಗಳು

ಸಬಕ ಉನ್ನೀಸ (ಪಾಠ ೧೯)

ಖಾನಾ-ಪೀನಾ (ಆಹಾರ-ಪಾನೀಯ)

ಜಿಂದಾ ರಹನೇಕೇ ಲಿಯೇ ಖಾನಾ ಖಾನಾ ಔರ ಪಾನೀ ಪೀನಾ ಬಹುತ ಜರೂರೀ ಹೈ. (ಬದುಕಿ ಉಳಿಯುವದಕ್ಕೆ ಊಟ ಉಣ್ಣುವದೂ ನೀರು ಕುಡಿಯುವದೂ ಅತ್ಯವಶ್ಯವಿದೆ.) ಆದಮೀ ಖಾನಾ ಖಾತೇ ಹೈಂ; (ಮನುಷ್ಯರು ಊಟ ಮಾಡುತ್ತಾರೆ;) ಜಾನವರ ಘಾಸ ಖಾತೇ ಹೈಂ, (ದನಗಳು ಹುಲ್ಲು ಮೇಯುತ್ತವೆ;) ಔರ ಕುಛ ಮಾಂಸ ಭೀ ಖಾತೇ ಹೈಂ. (ಮತ್ತು ಕೆಲವು ಮಾಂಸವನ್ನೂ ತಿನ್ನುತ್ತವೆ.) ಗಾಯ, ಭೈಂಸ, ಘೋಡಾ ಔರ ಹಿರನ ಘಾಸ ಖಾತೇ ಹೈಂ. (ಆಕಳು, ಎಮ್ಮೆ, ಕುದುರೆ ಮತ್ತು ಜಿಗರಿ ಇವು ಹುಲ್ಲು ತಿನ್ನುತ್ತವೆ.) ಕುತ್ತಾ, ಬಿಲ್ಲೀ, ಸಿಯಾರ, ಭೇಡಿಯಾ ಔರ ಶೇರ ಮಾಂಸ ಖಾತೇ ಹೈಂ (ನಾಯಿ, ಬೆಕ್ಕು, ನರಿ, ತೋಳ ಮತ್ತು ಸಿಂಹ ಇವು ಮಾಂಸ ತಿನ್ನುತ್ತವೆ) ಆದಮೀ ಮಾಂಸ ಭೀ ಖಾತಾ ಹೈ ಔರ ಅನಾಜ ಭೀ ಖಾತಾ ಹೈ; (ಮನುಷ್ಯನು ಮಾಂಸವನ್ನೂ ತಿನ್ನುತ್ತಾನೆ, ಧಾನ್ಯವನ್ನೂ ತಿನ್ನುತ್ತಾನೆ;) ಬಂದರ, ತೋತಾ ಔರ ಗಿಲಹರೀಕೇ ತರಹ ಫಲಭೀ ಖಾತಾ ಹೈ. (ಮಂಗ, ಗಿಳಿ, ಮತ್ತು ಅಳಿಲುಗಳಂತೆ ಹಣ್ಣುಗಳನ್ನೂ ತಿನ್ನುತ್ತಾನೆ.) ದೂಧ ಔರ ಫಲ ಖಾನಾ ಅಚ್ಛಾ ಹೈ (ಹಾಲು ಮತ್ತು ಹಣ್ಣು ಸೇವಿಸುವದು ಒಳ್ಳೆಯದು) ಬಚ್ಚೆ ದೂಧಹೀ ಪೀತೇ ಹೈ.(ಕೂಸು ಹಾಲನ್ನೇ ಕುಡಿಯುತ್ತದೆ) ದೂಧ ಜಲ್ದೀ ಹಜಮ ಹೋ ಜಾತಾ ಹೈ. (ಹಾಲು ಬಲು ಬೇಗ ಜೀರ್ಣವಾಗುತ್ತದೆ.) ಫಲಭೀ ಜಲ್ದೀ ಹಜಮ ಹೋ ಜಾತಾ ಹೈ (ಹಣ್ಣು ಕೂಡ ಬೇಗ ಅರಗುತ್ತದೆ) ಅನಾಜಕೋ ಹಜಮ ಕರನಾ ಕುಛ ಮುಶ್ಕಿಲ ಹೈ (ಧಾನ್ಯ ಜೀರ್ಣಿಸಿಕೊಳ್ಳುವದು ತುಸು ಕಠಿಣ.) ಖೂಬ ಚಬಾ ಚಬಾಕರ ಖಾನಾ ಚಾಹಿಯೇ. (ಚನ್ನಾಗಿ ಜಗಿದು ಜಗಿದು ತಿನ್ನಬೇಕು) ಖೂಬ ಚಬಾಯಾ ಹುವಾ ಖಾನಾ ಜಲ್ದೀ ಹಜಮ ಹೋತಾ ಹೈ. (ಒಳ್ಳೆಯಾಗಿ ಜಗಿದು ತಿಂದ ತಿಂಡಿ ಬೇಗ ಅರಗುತ್ತದೆ.) ಚಾವಲಕಾ ಭಾತ ಬನಾತೇ ಹೈಂ. (ಅಕ್ಕಿಯ ಅನ್ನ ಮಾಡುತ್ತಾರೆ.) ಗೇಹೂಂಕೀ ರೋಟೀ ಬನಾತೇ ಹೈಂ (ಗೋಧಿಯ ರೊಟ್ಟಿ ಮಾಡುತ್ತಾರೆ.) ಸರ್ದ ಮುಲ್ಕೋಂಕೇ ಲೋಗ ಮಾಂಸ ಖಾತೇ ಹೈಂ. (ಚಳಿ ದೇಶಗಳ ಜನರು ಮಾಂಸ ತಿನ್ನುತ್ತಾರೆ.) ಮಾಂಸ ಜಲ್ದೀ ಹಜಮ ನಹೀಂ ಹೋತಾ. (ಮಾಂಸ ಬೇಗ ಜೀರ್ಣವಾಗುವದಿಲ್ಲ) ಮಾಂಸಕೋ ಉಬಲಾಕರ ಯಾ ಭುನಕರ ಖಾತೇ ಹೈಂ (ಮಾಂಸವನ್ನು ಬೇಯಿಸಿ ಇಲ್ಲವೆ ಹುರಿದು ತಿನ್ನುತ್ತಾರೆ.) ಖಾನೇಕೇ ಸಾಥ ಪಾನೀ ಪೀನಾಭೀ ಜರೂರೀ ಹೈ. (ಉಣ್ಣುವದರ ಜೊತೆಗೆ ನೀರು ಕುಡಿಯುವದೂ ಅವಶ್ಯವುಂಟು.) ಆದಮೀಕೋ ಪ್ಯಾಸ ಲಗತೀ ಹೈ ತಬ ಪಾನೀ ಪೀತಾ ಹೈ (ಮನುಷ್ಯನಿಗೆ ನೀರಡಿಕೆ ಆದಾಗ ನೀರು ಕುಡಿಯುತ್ತಾನೆ.) ಜಾನವರ ಔರ ಚಿಡಿಯಾಂ ಭೀ ಪಾನೀ ಪೀತೇ ಹೈಂ. (ಜಾನುವಾರ ಮತ್ತು ಹಕ್ಕಿಗಳು ಸಹ ನೀರು ಕುಡಿಯುತ್ತವೆ.) ಪೀನೇಕಾ ಪಾನೀ ಸಾಫ ಹೋನಾ ಚಾಹಿಯೇ. (ಕುಡಿಯುವ ನೀರು ಸ್ವಚ್ಛವಾಗಿರಬೇಕು) ಉಸೇ ಛಾನ ಲೇನಾ ಚಾಹಿಯೇ. (ಅದನ್ನು ಸೋಸಿ ಕುಡಿಯಬೇಕು.) ಪಾನೀ ಉಬಾಲನಾ ಭೀ ಅಚ್ಛಾ ಹೈ (ನೀರು ಕುದಿಸುವದೂ ಒಳಿತು) ಹರ ಆದಮೀಕೋ ಹರ ದಿನ ದಸ ಗಿಲಾಸ ಪಾನೀ ಜರೂರ ಪೀನಾ ಚಾಹಿಯೇ (ಪ್ರತಿಯೊಬ್ಬ ಮನುಷ್ಯನು ಪ್ರತಿ ನಿತ್ಯ ೧೦ ಗ್ಲಾಸು ನೀರು ಅವಶ್ಯ ಕುಡಿಯಬೇಕು.) ಗಂದೇ ಪಾನೀಸೇ ಬೀಮಾರೀ ಆಜಾತೀ ಹೈ. (ಹೊಲಸು ನೀರಿನಿಂದ ಬೇನೆ ಬರುತ್ತದೆ) ಕುಛ ಲೋಗ ಚಾಯ ಔರ ಕಾಫೀ ಪೀತೇ ಹೈಂ (ಕೆಲವು ಜನರು ಚಹಾ ಮತ್ತು ಕಾಫಿ ಕುಡಿಯುತ್ತಾರೆ.) ಕುಛ ಲೋಗ ಶರಾಬಭೀ ಪೀತೇ ಹೈಂ. (ಕೆಲವು ಮಂದಿ ಸರಾಯಿಯನ್ನೂ ಕುಡಿಯುತ್ತಾರೆ.) ಯೇ ಚೀಜೇಂ ಬಹುತ ಬುರೀ ಹೈಂ.(ಈ ವಸ್ತುಗಳು ಬಹಳ ಕೆಟ್ಟವು ಇರುತ್ತವೆ) ತಂದುರುಸ್ತೀಕೋ ಬಿಗಾಡತೀ ಹೈಂ. (ಪ್ರಕೃತಿಯನ್ನು ಕೆಡಿಸುತ್ತವೆ.) ಚಾಯ ಔರ ಕಾಫೀಸೇ ಹಾಜಮಾ ಖರಾಬ ಹೋತಾ ಹೈ. (ಚಹಾ ಮತ್ತು ಕಾಫಿಯಿಂದ ಜೀರ್ಣಶಕ್ತಿ ಹಾಳಾಗುತ್ತದೆ.) ನೀಂದ ಭೀ ಖರಾಬ ಹೋತೀ ಹೈ (ನಿದ್ದೆಯೂ ಹಾಳಾಗುತ್ತದೆ.) ಶರಾಬ ತೋ ಔರ ಭೀ ಬುರೀ ಹೈ. (ಸರಾಯಿ ಮತ್ತಿಷ್ಟು ಹಾಳು) ವಹ ನಶಾ ಲಾತೀ ಹೈ. (ಅದು ಮತ್ತತೆಯನ್ನುಂಟು ಮಾಡುತ್ತದೆ) ನಶೇಮೇಂ ಆದಮೀಕೀ ಅಕ್ಲ ಕಾಮ ನಹೀಂ ಕರತೀ (ಮತ್ತತೆಯಲ್ಲಿ ಮನುಷ್ಯನ ಬುದ್ಧಿಶಕ್ತಿ ಕೆಲಸ ಮಾಡುವದಿಲ್ಲ.) ಇಸಲಿಯೇ ಐಸೀ ಚೀಜೋಂಸೇ ದೂರ ರಹನಾ ಚಾಹಿಯೇ.) (ಅದ್ದರಿಂದ ಇಂತಹ ವಸ್ತುಗಳಿಂದ ದೂರವಿರಬೇಕು)

ಜಾಹೀರ ನೋಟೀಸು.

ನಾನು ಲಕ್ಷ್ಮೀನಾರಾಯಣ ಪದ್ಮನಾಭ ಹೆಗಡೆ ಅವರ್ಸಾ ಇವನು ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ:— ನನ್ನ ತಂದೆ ಪದ್ಮನಾಭ ನಗು ಹೆಗಡೆ ಅವರ್ಸಾ ಇವರಿಗೆ ಇಬ್ಬರು ಹೆಂಡಂದಿರಿದ್ದು, ಹಿರೇ ಹೆಂಡತಿಯಿಂದ ಉಪೇಂದ್ರನೆಂಬ ಒಬ್ಬ ಮಗ ಹಾಗೂ ಕಿರೇ ಹೆಂಡತಿಯಿಂದ ನಾನು ಮತ್ತು ಅಚ್ಯುತ ಗೋಪಾಲಕೃಷ್ಣ ಹೀಗೆ ಇಬ್ಬ ಮಕ್ಕಳು, ಹೀಗೆ ಮೂರು ಮಂದಿ ಮಕ್ಕಳಿರುತ್ತಾರೆ. ಆದರೆ ನನ್ನ ತಂದೆಯವರು ಬಹಳ ವರ್ಷಗಳಿಂದ ಇಬ್ಬರೂ ಹೆಂಡಂದಿರಿಗೆ ಮನೆಯಿಂದ ಹೊರಗೆ ಹಾಕಿದ್ದಾರೆ. ಕಿರೇ ಹೆಂಡತಿಯ ಮಕ್ಕಳಾದ ನನಗೂ ಹೊರಗೆ ಹಾಕಿ ಹಿರೇ ಮಗ ಉಪೇಂದ್ರನಿಗೆ ಮಾತ್ರ ತಮ್ಮ ಸಂಗಡ ಇಟ್ಟುಕೊಂಡಿದ್ದಾರೆ. ಹೀಗಿರುವಲ್ಲಿ ಕಳೆದ ತಾ. ೬-೨-೧೯೪೬ನೇಗೆ ನನ್ನ ತಂದೆಯವರು ತಮ್ಮ ತಮ್ಮನ ಕೂಡ ಪಾಲುಪಟ್ಟಿ ಮಾಡಿಕೊಂಡಿದ್ದಾರೆಂತಲೂ, ಬೇರೆಯವರ ದುರ್ಬೋಧನೆಗೆ ಒಳ ಬಿದ್ದು ಒಂದು ಮೃತ್ಯುಪತ್ರ ಮಾಡಿಟ್ಟು ತಮ್ಮ ಪಾಲಿಗೆ ಬಂದ ಆಸ್ತಿಯ ವಿಲೆವಾಟ ಮಾಡುವವರಿದ್ದಾರೆಂತಲೂ ತಿಳಿಯುತ್ತದೆ. ಈಗ ನನ್ನ ತಂದೆಯವರು ವೃದ್ಧರಾಗಿದ್ದು ಅವರ ಬುದ್ಧಿ ಸಹ ಚಂಚಲವಾಗಿದೆ, ತಮ್ಮ ಕೃತಿಗಳಿಂದ ಆಗಬಹುದಾದ ಹಿತಾಹಿತಗಳ ಗ್ರಹಿಕೆಯಾಗುವಷ್ಟು ವಿವೇಕ ಅವರಲ್ಲಿ ಉಳಿದಿಲ್ಲ. ಇಂಥ ಸಂಧಿಯ ದುರ್ಲಾಭ ಪಡೆದು ಯಾರಾದರೂ ಅವರಿಂದ ನನ್ನ ಕುಟುಂಬದ ಸ್ಥಾವರ-ಜಂಗಮ ಆಸ್ತಿಯನ್ನು ದಾನ, ಕ್ರಯ, ಆಧಾರ, ಗೇಣಿ ಮುಂತಾದ್ದು ಬರಿಸಿಕೊಂಡರೆ, ಅಥವಾ ನನಗೂ ನನ್ನ ತಮ್ಮನಿಗೂ ವಂಚಿಸಲಿಕ್ಕೆ ಅವರಿಂದ ಮೃತ್ಯುಪತ್ರ ವಗೈರೆ ಮಾಡಿಸಿಕೊಂಡಲ್ಲಿ ಅದು ನಿರುಪಯೋಗವಾಗುವಂತಿದ್ದು, ಹಾಗೂ ಕುಟುಂಬದ ಆಸ್ತಿಯಲ್ಲಿ ನನಗೂ ಗೋಪಾಲಕೃಷ್ಣನಿಗೂ ಇರುವ ಹಕ್ಕಿಗೆ ಬಾಧಕವಾಗಲಾರದು ಎಂದು ಈ ಮೂಲಕ ಜಾಹೀರ ಮಾಡುತ್ತೇನೆ.

ಮುಂಬಯಿ, ತಾ ೧೩-೨-೧೯೪೬

L. P Hegde.

R

ಗೋಕರ್ಣ ಜಾತ್ರೆ.

No. 74 R ಈ ಮೂಲಕ ಇನ್ನೊಮ್ಮೆ ಜಾಹೀರ ರೀತಿಯಿಂದ ತಿಳಿಸುವದೇನಂದರೆ: ಈ ವರ್ಷ ತಾ. ೧೬-೨-೪೬ರಿಂದ ತಾ. ೧೫-೩-೪೬ನೇ ವರೆಗಿನ ಅವಧಿಯಲ್ಲಿ ಗೋಕರ್ಣ ತೀರ್ಥ ಕ್ಷೇತ್ರದಲ್ಲಿ ಜರುಗಲಿರುವ ಶಿವರಾತ್ರಿ ಜಾತ್ರೆಗೆ ಬರುವ ಯಾತ್ರಿಕರಿಗೆ ಏಳು (೭) ದಿವಸಗಳಿಗಿಂತ ಹೆಚ್ಚಿಗೆ ಇರುವ ಸಂಭವವಿಲ್ಲದಿದ್ದ ಯಾವದೇ ವಾಸ್ತವ್ಯದ ಅವಧಿಯ ಬಗ್ಗೆ ರೇಶನ್-ತಿಕೀಟು ಕೊಡಲಿಕ್ಕೆ ಬರುವದಿಲ್ಲ. ಕಾರಣ ಮೇಲಿನ ಅವಧಿಯಲ್ಲಿ ಸದರಿ ಜಾತ್ರೆಗೆ ಬರುವ ಯಾತ್ರಿಕರು ತಮ್ಮ ಸಂಗಡ ಏಳು (೭) ದಿವಸಗಳ ವರೆಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಯಾ ಅವುಗಳ ಹಿಟ್ಟನ್ನು ಪರವಾನಗಿಯಿಲ್ಲದೆ ತರಲಿಕ್ಕೆ ಪ್ರತಿಬಂಧವಿಲ್ಲ.

ಕಾರವಾರ, ತಾ ೧೩-೨-೪೬.

F. N. RANA.
ಜಿಲ್ಲಾ ಮ್ಯಾಜಿಸ್ಟ್ರೇಟ, ಕಾನಡಾ.

ನಮ್ಮಲ್ಲಿ (ಹೋಲಸೇಲ) ರೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಲಾಯಸನ್ಸಿ, ಮೋಟರ ಸ್ಟೆಂಡ, ಕುಮಟಾ.

ದಿ ಕೊಮರ್ಶಿಯಲ್ ಕೊರ್ಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತವೆ.
ವಿ. ಎಮ್. ಮಿಜಾರನಕರ,
ಮೋಟರ ಸ್ಟೆಂಡ, ಕುಮಟಾ

ಮುಂಬಯಿ ಲೆಜಿಸ್ಲೇಟಿವ್ಹ ಜನರಲ್ ಮತದಾರರಲ್ಲಿ ಬಿನ್ನಹ.

ದೊಡ್ಡ ದೊಡ್ಡ ಜಮಿನಾನುದಾರ ಬಂಡವಾಳಶಾಹಿಗಳನ್ನು ಬಗ್ಗುಬಡಿದು ಜಮೀನು ಕೊಚ್ಚು ಪಾಲುಗಳನ್ನು ಒಕ್ಕಲುಮಾಡಿ ಜನತೆಯ ಸರ್ವಸಾಮಾನ್ಯ ಹಕ್ಕು, ಅಡಿಕೆ ತೋಟಗಾರರ ಸಂಪೂರ್ಣ ಹಿತ, ಬಡರೈತರ ಯಾವತ್ತೂ ಕಷ್ಟಗಳ ಪರಿಹಾರ, ಸಾಜನ ಬಾಂಧವರ ಹಿತ, ಇಂಡಿಯನ ಕ್ರಿಶ್ಚನ್, ನಾಮಧಾರಿ, ಗಾಮವಕ್ಕಲ, ಕೊಂಕಣ ಮರಾಠಾ ವೀರ ಬಾಂಧವರ ಹಿತ, ರೈತ ಸಂಘ, ಬೇಸಾಯ ಸಂಘ, ಕಲಾ ಪ್ರೋತ್ಸಾಹ, ಯಕ್ಷಗಾನ ದಶಾವತಾರ, ಸಂಗೀತ, ಭರತ ನಾಟ್ಯ ನೃತ್ಯ ಮುಂತಾದ ಸಂಘಗಳು- ಅಂಥ ಸಂಘಗಳ ಘಟನೆಗೆ ಸರಕಾರದ ಸಹಾಯ ಪಡೆಯಲು ಬ್ರಿಟಿಶ ಸರಕಾರದ ವಿರುದ್ಧ ಹೋರಾಡುವದಕ್ಕಾಗಿಯೂ ಜನತಾ ಸ್ವಾತಂತ್ರ್ಯದ ಸಂಗ್ರಾಮಕ್ಕಾಗಿ ಜೀವನದ ಹಂಗು ತೊರೆದು ಕಾದಾಡಲು ವೀರ ಪ್ರತಿಜ್ಞೆ ಮಾಡಿ ಈ ವರೆಗೆ ವರೆಗೆ ಬೆಳ್ಳಿ ಬನಾಗಿರುವ ಮೇಲ್ಮನಸಿಸ ಸಂಘ, ಪಕ್ಷ-ಪಂಗಡಗಳ ನುಡಿಂಥ ಪ್ರೇರಣೆಯಿಂದ ಅವರವರ ಬಗ್ಗೆ ನನ್ನ ತನು-ಮನ-ಧನದಿಂದ ಕಾದಾಡುವ ನಿಶ್ಚಿತ ಗುರಿಯನ್ನು ಸಾಧಿಸುವದಕ್ಕಾಗಿ ನಾನು ಒಂದು ಉಮೇದವಾರನಾಗಿ ನಿಂತಿದ್ದೇನೆ. ನಿಮ್ಮ ಬಗ್ಗಾಗಿ ಇಂದೇ ನನ್ನ ಜೀವನಸರ್ವಸ್ವವನ್ನು ಧಾರೆಯೆರೆದು ನಿಮ್ಮ ಸೇವೆಯೇ ನನ್ನ ಪ್ರಾಣಾಂತಿಕ ಧ್ಯೇಯ ಎಂದು ವೀರ ಪ್ರತಿಜ್ಞೆ ಮಾಡಿ ಆಶ್ವಾಸನೆ ಕೊಡುತ್ತೇನೆ.

ಕೊಂಗ್ರೆಸ್ಸಿನ ಮುಖ್ಯ ಧ್ಯೇಯವಾದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಜಿಲ್ಲೆಯ ಮೊದಲನೇ ಆಹುತಿ ನನ್ನದೇ ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ

ಜನತಾ ಸ್ವಾತಂತ್ರ್ಯವೇ (ನಿಜವಾದ ಲೋಕನಿಯಂತ್ರಿತ ಸ್ವರಾಜ್ಯವೇ) ತಮ್ಮ ಧ್ಯೇಯವೆನ್ನುವವರು ಮೇಲ್ಕಾಣಿಸಿದ ಸಂಘ-ಪಕ್ಷ-ಪಂಗಡದವರು ನಿಮ್ಮ ಹಿತವನ್ನು ನನ್ನ ಕೈಯಿಂದ ಮಾಡಿಸಿಕೊಳ್ಳುವದಕ್ಕಾಗಿ ನಿಮಗಿರುವ ಮೂರೂ ಮತಗಳನ್ನು ನನಗೇ ದಾನ ಮಾಡಬೇಕೆಂದು ಅತ್ಯಂತ ನಮ್ರನಾಗಿ ಪ್ರಾರ್ಥಿಸುತ್ತೇನೆ

ನೇಗಿಲ ಗುರ್ತು ಇರುವ ಒಂದನೇ ನಂಬರಿನ ಕಣದಲ್ಲಿ ಯಾವದೇ ಗೆರೆಗಳಿಗೆ ತಾಗದಂತೆ × × × ಹೀಗೆ ಮೂರು ಗುರುತುಗಳನ್ನು ಹಾಕಿರಿ,

ಇತಿ ನಿಮ್ಮ ಸೇವಕ,

ಗಣಪತಿ ಶ್ರೀಧರ ಹೆಗಡೆ, ವಕೀಲ, ಕುಮಟಾ.

THE BANK OF RURAL INDIA, LTD.,
(Incorporated in *British* India under the Indian Companies Act, 1913)
HEAD OFFICE:- **KARWAR.**
Offices at:- KARWAR KUMTA, HONAVAR & SIRSI.
Authorised Capital -- Rs. 10,00,000;
Subscribed Capital -- Rs. 5,00,000;
Paid-up Capital -- Rs. 2,60,000.
Rates of Interest on Deposits:
Current a/c. @ 1% p. a. ***Savings Bank a/c @ 2½%.***
Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "
All Kinds of modern Banking business transacted.
Karwar,
22-12-1945.
P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ಒಂದು ವರ್ಷಕ್ಕೆ ರೂ. ೩-೪-೦
ಟಪಾಲವ್ಯಯವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು.
ವರ್ಗಣಿಮುಂಗಡ ಕೊಟ್ಟುಕೊಳ್ಳದ್ದು

Reg. No. B 1270. Monday, 25th February, 1946.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೩೪.

ಕುಮಟಾ:- ಸೋಮವಾರ, ತಾ. ೨೫ ಮಾಹೆ ಫೆಬ್ರುವರಿ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ.
ಸ್ಮಾಲಪ್ಯಾಕಾ ೧೫ಎಮ್‌ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ - ತಿಳಿಸಲಾದೀತು.

ಒಂದು ಸುದ್ದಿಯೋಲೆ.

('ಪ್ರವಾಸಿ ಸುದ್ದಿಗಾರರಿಂದ ಬಂದದ್ದು.)

ಶಿರಸಿ, ತಾ. ೨೨-೨-೪೬.

ರಾಷ್ಟ್ರೀಯ ಸಭೆಯವರು ತಮ್ಮ ಚುನಾವಣೆ-ಪ್ರಚಾರ ಯಲ್ಲಾಪುರದಿಂದ ಪ್ರಾರಂಭಿಸಿದ್ದಾರೆ. ಚುನಾವಣೆಯ ಕಾಲದಲ್ಲಿ ಉಮೇದವಾರರು ಲೋಕಸಂಕಟಗಳ ಗ್ರಹಿಕೆ ಮಾಡಿಕೊಳ್ಳುವ ಪ್ರಸಂಗವುಂಟು. ಲೋಕಸಂಕಟಗಳ ನಿವಾರಣೆಗಾಗಿ ಲೋಕಸಭೆಯಲ್ಲಿ ಸರಕಾರದೊಡನೆ ಹೋರಾಡಿ ಲೋಕಸುಖ ಉಂಟುಮಾಡುತ್ತೇನೆಂದು ಹೇಳುವದು ಮತಸಂಗ್ರಹ ಮಾಡುವ ಒಂದು ಉಪಾಯ. ರಾಷ್ಟ್ರೀಯ ಸಭೆಯವರ ಪ್ರಚಾರದಲ್ಲಿ ಈ ವಿಷಯ ಪ್ರಾಮುಖ್ಯವಾಗಿ ಹೇಳಲ್ಪಡುತ್ತದೆ. ರಾಷ್ಟ್ರೀಯ ಸಭೆಯ ಮೇಲೆ ಬಹುಜನ ಸಮಾಜದ ಭಕ್ತಿಯುಂಟು. ರಾಷ್ಟ್ರೀಯ ಸಭೆಯವರು ದೀನ, ಹೀನರ ರಕ್ಷಕರಾಗಿ, ಲೋಕೋಪಕಾರಿಗಳಾಗಿ ಚುನಾವಣೆಯಲ್ಲಿ ಸೇರಿದ್ದಾರೆಂದು ಲೋಕಪ್ರಸಿದ್ಧಿ ಸಹ ಉಂಟು. ಅದರಿಂದ ಯಲ್ಲಾಪುರದ ಚುನಾವಣೆ-ಪ್ರಚಾರದ ಸಭೆಯಲ್ಲಿ ನಿಯಂತ್ರಣ ರಾಜ್ಯದೊಳಗಿನ ಬಾಧಕಮಾರ್ಗಗಳ ಉಲ್ಲೇಖವಾಗುವದು ಸಹಜ.

ಮಹಾತ್ಮರು ಕಳೆದ ಸೋಮವಾರ ಮುಂಬಯಿಯಲ್ಲಿ ಪ್ರಾರ್ಥನೆಯ ಸಮಯ ನುಡಿದಂತೆ:—

"God would know the wrong-doers."
(ಪಾಪಿಗಳು ಪರಮಾತ್ಮನ ಕಣ್ಣು ತಪ್ಪಿಸಲಾರರು.) ಪಾಪಿಗಳಿಗೆ ದೇವರು ಶಾಸನ ಮಾಡುವನೆಂಬ ಮಾತು ನಿಜ; ಆಸ್ತಿಕರೆಲ್ಲರೂ ಆ ಭಾವನೆ ಹಿಡಿದು ಬಂದ ಕಷ್ಟ ಸಹಿಸಬೇಕೆಂಬುದೂ ನಿಜ. ಆದರೂ ಸಾಮಾನ್ಯ ಜನರಿಗೆ ಅಷ್ಟೊಂದು ದೃಢ ಭಾವನೆ ಇರುವದಿಲ್ಲ. ಅದರಿಂದ ಅವರು ಬಹಳ ನೊಂದುಕೊಳ್ಳುತ್ತಾರೆ. ಈಗ ಭತ್ತದ ಎತ್ತುವಳಿಯ ಹಂಗಾಮು. ನಮ್ಮದು ಒಂದು ಜಿಲ್ಹೆ; ನಮ್ಮ ಜಿಲ್ಹಾಧಿಪರೂ ಒಂದೇ. ಆದರೆ ಮಾಮಲೇದಾರರು ಭಿನ್ನರಾದಂತೆ ಎತ್ತುವಳಿಯ ಕ್ರಮದಲ್ಲಿ ಅಭ್ಯಂತರ ಉಂಟಾಗಿ ಲೋಕಹಾನಿಯಾಗುತ್ತದೆ. ಮಾಮಲೇದಾರರು ಅನ್ಯಾಯಕಾರರೆಂದು ಹೇಳುವದು ಅಶಕ್ಯ; ಪ್ರಾಮಾಣಿಕರೆಂದು ನಂಬುವದೂ ಅಶಕ್ಯ. ಅಧಿಕಾರಿಗಳ ಆಚಾರ-ವಿಚಾರಗಳನ್ನು ಪರಿಶೀಲಿಸಿದರೆ ಅವರ ಕಳ್ಳಾಟಿಕೆಯ ಸಿದ್ಧಾಂತ ತಾನಾಗಿ ಹೊರಡುತ್ತದೆ.

ತೂಕಳತೆಯ ಕಾನೂನಿನಂತೆ ಪಾಯಲಿ ೧ಕ್ಕೆ ೪ ಸೇರು; ಚೀಲ ೧ಕ್ಕೆ ಅಂಥ ೩೨ ಪಾಯಲಿ ಹೀಗೆ ಕೋಷ್ಟಕವುಂಟು. ನಮ್ಮ ಜಿಲ್ಹಾಧಿಪರು ಒಂದು ಪರಿಪತ್ರ ಹೊರಡಿಸಿ, ಚೀಲ ೧ಕ್ಕೆ ೧೫೬ ರತ್ತಲ ತೂಕ ಮಾಡಿ ಭತ್ತ ಕೊಳ್ಳಬೇಕೆಂದು ವಿಧಿಸಿದ್ದಾರೆ. ಹಳಿಯಾಳದ ರೈತರು ಈ ಹುಕುಮನ್ನು ವಿರೋಧಿಸಿದರು. ಇದು ತೂಕದಿಂದ ನಮಗೆ ನಷ್ಟವಾಗುತ್ತದೆಂದೂ ದೂರು ಮಾರಾಟಕ್ಕೆಂತ ತಂದ ಭತ್ತವನ್ನು ಮಾರಾಟ ಮಾಡದೆ ತಿರುಗಿ ಒಯ್ಯತೊಡಗಿದರು. ಅಳತೆ-ತೂಕಗಳಲ್ಲಿ ವ್ಯತ್ಯಾಸವಿದೆ. ೧೫೬ ರತ್ತಲ ಭತ್ತ ಅಳತೆ ಮಾಡಿದರೆ ೧೩೦ ಸೇರು ಆಗುತ್ತದೆ; ಅಂದರೆ ತೂಕದಲ್ಲಿ ೨ ಸೇರು ಭತ್ತ ಹೆಚ್ಚು ಹೋಗುತ್ತದೆ. ಸರಕಾರದವರ ದರಗಳು ತೂಕದ ಮೇಲೆ ನಿರ್ಧರಿಸಲ್ಪಟ್ಟಿಲ್ಲ. ಅಳತೆಯ ಮೇಲೆ ಬೆಲೆ ಕೊಡಲಾಗುತ್ತದೆ. ಅದರಿಂದ ಹಳಿಯಾಳದೊಳಗೆ ಅಲ್ಲಿಯ ಮಾಮಲೇದಾರರು ಅಳತೆ ಮಾಡಿ ಭತ್ತ ಕೊಳ್ಳುವ ರೂಢಿಯಿಟ್ಟಿದ್ದಾರೆ. ರೈತರ ಆಕ್ಷೇಪ ಯೋಗ್ಯವಾದದ್ದೆಂದು ಅವರಿಗೆ ಮನವರಿಕೆಯಾಗಿದೆ.

ಆದರೆ ಯಲ್ಲಾಪುರದೊಳಗಿನ ವ್ಯವಹಾರ ಇನ್ನೊಂದು ಪರಿಯದು. ಜಿಲ್ಹಾಧಿಪರ ಪರಿಪತ್ರದಲ್ಲಿ ಚೀಲಕ್ಕೆ ೧೫೬ ರತ್ತಲ ಇದ್ದರೆ ಯಲ್ಲಾಪುರದ ಮಾಮಲೇದಾರರ ಹುಕುಮು ೧೬೦ ರತ್ತಲ ತಕ್ಕೊಳ್ಳಬೇಕೆಂದುಂಟು! ಆದರೆ ಪ್ರತ್ಯಕ್ಷ ವ್ಯವಹಾರದಲ್ಲಿ ೧೬೧ ರತ್ತಲ ತಕ್ಕೊಳ್ಳುತ್ತಾರೆ! ಮಂಚಿಕೇರಿಯಲ್ಲಿ ಕೊಂಗ್ರೆಸ ಉಮೇದವಾರರು ಹೋದಾಗ ಮಾಮಲೇದಾರರ ಈ ವರ್ತನ ಹೊರಬಿತ್ತು. ಕರ್ನಾಟಕ ಭಾಗದ ಉಗ್ರಾಣಗಳ ತಪಾಸಣೆ-ಅಧಿಕಾರಿಗಳಾದ ರಾ|| ಪಟ್ಟಣರವರು ಕಳೆದ ತಾ. ೧೪-೨-೪೬ನೇಗೆ ಅಲ್ಲಿಯ ಉಗ್ರಾಣದ ತಪಾಸಣೆ ಮಾಡಿದ್ದರು. ೩೨ ಪಾಯಲಿಗಳ ಚೀಲ ೧೬೦ ರತ್ತಲ ಇರಬೇಕೆಂದು ಎಣಿಸಿ, ಅದರಂತೆ ಭತ್ತ ತೂಕ ಮಾಡಿಕೊಳ್ಳಬೇಕೆಂದು ಮಾಮಲೇದಾರರು ಹೊರಡಿಸಿದ ಹುಕುಮನ್ನು ಆಗ ರಾ|| ಪಟ್ಟಣರವರು ನೋಡಿದರಂತೆ! ಭತ್ತವನ್ನು ಗಿರಣಿಯಿಂದ ಗೇರಿಸಿಕೊಳ್ಳುವ ಪದ್ಧತಿಯೂ ಉಂಟು. ಗೇರುವ ಕೂಲಿ ರೈತರು ತೆರಬೇಕಂತೆ! ಹೀಗೆ ಗೇರಿದರೂ ಕಳ್ಳ-ಜೊಳ್ಳು ಭತ್ತವೆಂದು ಸರಕಾರಕ್ಕೆ ನಷ್ಟವಾಗಬಹುದೆಂಬ ಭೀತಿಯಿಂದ ಮೇಲೊಂದು ರತ್ತಲ ಭತ್ತ ಹೆಚ್ಚಿಗೆ ಕೊಳ್ಳುವ ವ್ಯವಹಾರವೂ ಇದೆ. ಇದಕ್ಕೆ ಲೇಖಿ ಆಧಾರವಿಲ್ಲ. ಆದರೂ ರಾ|| ಪಟ್ಟಣರವರು ಉಗ್ರಾಣದ ತಪಾಸಣೆ ಮಾಡಿ ಬರೆದ ದಾಖಲೆಗಳಿಗೆ ಚೀಲಕ್ಕೆ ೧೬೧ ರತ್ತಲ ಕೊಳ್ಳುವ ಪ್ರಸಂಗ ಉಂಟೆಂದು ನಮೂದಿಸಿದ್ದಾರೆ. ೧೬೧ ರತ್ತಲ ಎಂದರೆ ೧೩೩ ಸೇರು ಆಗುತ್ತದೆ. ಗಿರಣಿಯಿಂದ ಗೇರಿದ ಘಟ್ಟಿ ಭತ್ತವಿದು. ೧೩೩ ಸೇರಿಗೆ ೧೨೮ ಸೇರಿನ ಬೆಲೆ ರೈತರಿಗೆ ಸಿಗುತ್ತದೆ! ಮೇಲೆ ಗೇರಿದ ಕೂಲಿ ಮುರಕೊಳ್ಳಲ್ಪಡುತ್ತದೆ. ೧೨೮ ಸೇರು ಅಳತೆಯ ಎರಡು ಚೀಲಗಳನ್ನು ರಾ|| ಪಟ್ಟಣರವರು ತೂಕ ಮಾಡಿ ನೋಡಿದರು. ಒಂದು ಚೀಲ ೧೫೩ ರತ್ತಲ ಮತ್ತು ಇನ್ನೊಂದು ಚೀಲ ೧೫೫ ರತ್ತಲ ತೂಗಿತೆಂದು ರಾ|| ಪಟ್ಟಣರವರು ತಮ್ಮ ಪುಸ್ತಕದಲ್ಲಿ ಬರೆದದ್ದನ್ನು ಕೊಂಗ್ರೆಸ ಪ್ರಚಾರಕ್ಕಾಗಿ ಹೋದ ಮಾನ್ಯರು ನೋಡಿದ್ದಾರೆ. ಗಿರಣಿಯಿಂದ ಗೇರಿಸಿ ಭತ್ತ ಕೊಳ್ಳುವದು ಅನ್ಯಾಯವೆಂದೂ ರೈತರ ಸುಲಿಗೆಯೆಂದೂ ಒಬ್ಬ ಶಾನಭೋಗರು ಮಾಮಲೇದಾರರಿಗೆ ಅರಿಕೆ ಮಾಡಿಕೊಂಡದ್ದಕ್ಕೆ ಮಾಮಲೇದಾರರು ಅವರನ್ನು ಕಚೇರಿ ಪ್ರವೇಶಕ್ಕೆ ವರ್ಜ್ಯಮಾಡಿದ ಸಂಗತಿಯನ್ನೂ ಮಾನ್ಯರಿಗೆ ಒಬ್ಬರು ಹೇಳಿದರು.

ಈ ಬಗೆ ಎತ್ತುವಳಿ ಮಾಡಿದ ಭತ್ತದ ಮುಂದಿನ ಅವಸ್ಥೆ ಮಾನ್ಯರಿಗೆ ತಿಳಿಯಿತು. ಗಿರಣಿಗಳಲ್ಲಿ ಸರಕಾರದ ಭತ್ತದಿಂದ ಹುಟ್ಟುವ ಜೊಳ್ಳು, ಅಕ್ಕಿಯನ್ನು, ತೌಡು-ತಡಿಯಕ್ಕಿ ಸಹಿತ, ಸರಕಾರವು ಕೊಳ್ಳುತ್ತದೆ. ೧೦೦ಕ್ಕೆ ಸರಾಸರಿ ೫೪ರಷ್ಟು ಚೊಕ್ಕ ಅಕ್ಕಿ ಹುಟ್ಟುತ್ತದೆಂದು ಹಳಿಯಾಳದೊಳಗಿನ ಅನುಭವವಿದೆ. ಇದರೊಳಗೆ ವಂಚನೆ ಮಾಡಿ ಲಂಚ ತಿನ್ನುವ ಅಭಿಲಾಷೆಯಿಂದ ಹಳಿಯಾಳದೊಳಗಿನ ನಿಯಂತ್ರಣ ಇಲಾಖೆಯ ಮುಖ್ಯಾಧಿಕಾರಿಗಳು ೫೪ರ ಬದಲಿಗೆ ೫೦-೫೨ರಷ್ಟು ಪ್ರಮಾಣ ಬೀಳುತ್ತವಾಗಿ ವರದಿ ಮಾಡಲು ಒತ್ತಾಯ ಮಾಡಿದರೆಂದೂ, ಕಾರಕೂನರು ಈ ಕೆಲಸ ತಮ್ಮಿಂದಾಗದೆಂದು ನಿಷೇಧಿಸಿ ರಾಜೀನಾಮೆ ಕೊಟ್ಟರೆಂದೂ, ಪ್ರಕರಣ ವಿಕೋಪಕ್ಕೆ ಮುಟ್ಟಿ ಈ ಸಂಗತಿ ಮಾಮಲೇದಾರರಿಗೆ ತಿಳಿದು, ಮಾಮಲೇದಾರರು ಸ್ವತಃ ಚೌಕಶಿ ನಡಿಸಿ, ಕಾರಕೂನರಿಗೆ ಸಮಾಧಾನ ಹೇಳಿ, ನಿಯಂತ್ರಣ ಮುಖ್ಯಾಧಿಕಾರಿಗೆ ಶಾಸನ ಮಾಡಲು ಜಿಲ್ಹಾಧಿಪರಿಗೆ ಬರೆಕೊಂಡಿದ್ದಾರೆಂದೂ ಹಳಿಯಾಳದಿಂದ ಬಂದವರೊಬ್ಬರು ಮಾನ್ಯರಿಗೆ ತಿಳಿಸಿದರು. ಇವೆಲ್ಲ ಅಟ್ಟಲಂಚ ತಿನ್ನುವ ದೆಸೆಯಿಂದಲೇ ನಡೆಯುತ್ತಾಗಿ ಮಾನ್ಯರಿಗೆ ತಿಳಿಸಿ ಹೇಳಲಾಯಿತು.

ಯಲ್ಲಾಪುರದ ಮಾಮಲೇದಾರರು ಪ್ರಾಮಾಣಿಕರೆಂದು ಗ್ರಹಿಸಿ ಹಿಡಿಯಬಹುದು. ಆದರೆ ಅವರ ಆಚಾರ ನೋಡಿದರೆ ಅವರು ಲಂಚ ತಿನ್ನುತ್ತಾರೆಂಬ ಲೋಕಪ್ರವಾದ ಸಾಧಾರವಾಗುತ್ತದೆ. ರೈತರ ಭತ್ತ ತೂಕ ಮಾಡಿ ಚೀಲಕ್ಕೆ ೧೬೧ ರತ್ತಲ ತೆಗೆದರೂ ಗಿರಣಿಯ ಅಕ್ಕಿಯನ್ನು ಅವರು ತೂಕ ಮಾಡಿಕೊಳ್ಳುವದಿಲ್ಲ. ತೂಕಕ್ಕೂ ಅಳತೆಗೂ ಇರುವ ಅಭ್ಯಂತರ ಕಳ್ಳ ಪೇಟೆ ಸೇರಿ ಅದರ ಪ್ರತಿಫಲ ಗಿರಣಿ ಮಾರ್ಗವಾಗಿ ಮಾಮಲೇದಾರರ ತನಕ ತಲ್ಪುತ್ತದೆಂದು ಜನಪ್ರವಾದ ಉಂಟು. ಯಲ್ಲಾಪುರದ ಭತ್ತ ಹಳಿಯಾಳದ ಭತ್ತದ ಮಾದರಿಯದಿರುತ್ತದೆ. ಅದರಿಂದ ೧೦೦ಕ್ಕೆ ೫೮ರಷ್ಟು ಅಕ್ಕಿ ಸಿಗಲಿಕ್ಕೆ ತೊಂದರೆಯಿಲ್ಲ. ೧೬೧ ರತ್ತಲ ಭತ್ತಕ್ಕೆ ೭೦|| ಸೇರುಗಳಿಗೆ ಮಿಕ್ಕಿ ಅಕ್ಕಿ ಹುಟ್ಟುತ್ತದೆ. ಮಾಮಲೇದಾರರು ೧೬೧ ರತ್ತಲ ಭತ್ತ ೧೨೮ ಸೇರೆಂದು ಮುಂಚೆ ಎಣಿಸಿ ಚೀಲಕ್ಕೆ ೫ ಸೇರು ಭತ್ತ ನುಂಗಲು ಅವಕಾಶ ಮಾಡಿಕೊಟ್ಟಿದ್ದಾರೆ. ಆ ಮೇಲೆ ೧೨೮ ಸೇರಿಗೆ ೬೬|| ಸೇರು ಅಕ್ಕಿ ಕೊಡಬೇಕೆಂದು ಗಿರಣಿಯವರಿಗೆ ಗುತ್ತಿಗೆ ಕೊಟ್ಟಿದ್ದಾರೆ! ಅಂದರೆ ಪ್ರತಿ ಚೀಲಕ್ಕೆ ೫| ಸೇರು ಅಕ್ಕಿ ಕಳ್ಳ ಪೇಟೆ ಸೇರುತ್ತದೆ. ಮಾಮಲೇದಾರರ ಆಶ್ರಯದಲ್ಲಿ ಈ ವ್ಯವಹಾರ ಬಹಿರಂಗವಾಗಿ ನಡೆಯುವದರಿಂದ ಮಾಮಲೇದಾರರೂ ಅವರ ಕೈಕೆಳಗಿನವರೂ ಒಂದು ಸಂಚು ಮಾಡಿ ಲಂಚ ತಿನ್ನುತ್ತಾರೆಂದು ಜನರು ಹೇಳತೊಡಗಿದ್ದಾರೆ. ಮಾಮಲೇದಾರರ ಕರ್ಮಗಳು ಇನ್ನೂ ಅನೇಕ ಉಂಟು. ಪ್ರಾಂತ ಸಾಹೇಬರು ಇವರನ್ನು ನಿಯಂತ್ರಿಸದೆ ಪ್ರೋತ್ಸಾಹಿಸಿದ್ದು ಕಂಡು ಬರುತ್ತದೆ. ಪ್ರಾಂತ ಸಾಹೇಬರಿಗೂ ಮಾಮಲೇದಾರರಿಗೂ ಸಮಾನವೂ ಒಳಸಂಚು ಇರಬೇಕೆಂದು ಹೇಳುತ್ತಾರೆ. ಸರಕಾರವು ಉಭಯ ಅಧಿಕಾರಿಗಳನ್ನು ಸ್ಥಳಾಂತರ ಮಾಡಿ ಚೌಕಶಿ ನಡಿಸದಿದ್ದರೆ ಯಲ್ಲಾಪುರ ತಾಲೂಕಿನ ರೈತರಿಗೆ ಉಳಿಗಾಲವಿಲ್ಲ.

ಮಾಮಲೇದಾರರು ಸ್ವತಂತ್ರರಿದ್ದರೆ ಏನಾಗುತ್ತದೆಂಬದನ್ನು ಅಂಕೋಲೆಯವರೊಬ್ಬರು ಸಹಜ ಮಾತಾಡುತ್ತ ವಿವರಿಸಿದರು. ಅಂಕೋಲಾ ತಾಲೂಕಿನೊಳಗೆ ಒಂದು ಹಳ್ಳಿಯಲ್ಲಿ ಉಗ್ರಾಣ ಉಂಟು. ಆ ಊರಿನ ಹೆಸರು ಸದ್ಯಕ್ಕೆ ಬಹಿರಂಗ ಮಾಡಬಾರದೆಂದು ಹೇಳಿದ್ದರಿಂದ ಅದರ ಹೆಸರು ಹೇಳುವದಿಲ್ಲ. ಈ ಉಗ್ರಾಣದಲ್ಲಿ ಅಳತೆ ಮಾಡಿಕೊಳ್ಳುವಾಗ ಕೂಲಿಯಾಳುಗಳು ಬಹಳ ಲೂಟಿ ಮಾಡುತ್ತಾರೆ. ಪಾಯಲಿಯನ್ನು ಒತ್ತಿ ಒತ್ತಿ ತುಂಬುತ್ತಾರೆ. ೩೨ ಪಾಯಲಿಗೆ ೩೩ ಪಾಯಲಿಯಷ್ಟು ಭತ್ತ ಕೊಳ್ಳಲ್ಪಡುತ್ತದೆ. ಹೀಗೆ ಅಳತೆ ಮಾಡಿದ ಭತ್ತವನ್ನು ಚೀಲದಲ್ಲಿ ತುಂಬಿ ಅಂಗಳದಲ್ಲಿ ಬಾಯಿ ಕಟ್ಟದೆ ಇಡುತ್ತಾರೆ. ಮತ್ತು ಸಂಜೆ ಪ್ರತಿ ಚೀಲದಿಂದ ೧-೧ ಪಾಯಲಿ ಭತ್ತ ತೆಗೆದು ಆ ಮೇಲೆ ಬಾಯಿ ಹೊಲಿದು ಗಿರಣಿಗೆ ಕಳಿಸುತ್ತಾರೆ. ಈ ದೂರು ಮಾಮಲೇದಾರರಿಗೆ ತಲ್ಪಿತು. ಮಾಮಲೇದಾರರು ಒಂದು ದಿನ ಥಟ್ಟನೆ ನೋಟೀಸ ಹತ್ತಿ ಹೋಗಿ ತಾವು ಒಯ್ದ ಪಾಯಲಿಯಿಂದ ಅಳತೆ ಮಾಡಿ ನೋಡಿದರು. ಹೊಲಿದ ಚೀಲಗಳೆಲ್ಲ ೩೨ ಪಾಯಲಿಗೂ ಕಡಿಮೆಯಾಗಿದ್ದವು. ಆದರೆ ಭತ್ತ ತುಂಬಿದ ಒಂದು ಚೀಲ ಹೆಚ್ಚಿಗೆ ಇತ್ತು. ಇದ್ಯಾರದೆಂದು ಮಾಮಲೇದಾರರು ಕೇಳಿದರೆಂದೂ, ಸ್ವಂತ ಭತ್ತದ ಉತ್ಪತ್ತಿಯಿಲ್ಲದೆ ಬರೇ ಗೇಣಿ ಪಡೆಯುವ ಒಬ್ಬ ಸಾವಕಾರರ ಹೆಸರು ಅವರಿಗೆ ಹೇಳಿದರೆಂದೂ, ಅದರಿಂದ ಸಮಾಧಾನವಾಗದೆ ಮಾಮಲೇದಾರರು ಇನ್ನೂ ಚೌಕಶಿ ನಡಿಸುತ್ತಿದ್ದಾರೆಂದೂ ಅಂಕೋಲೆಯವರು ಮಾನ್ಯರಿಗೆ ಪ್ರಾಮಾಣಿಕ ಮಾಮಲೇದಾರರ ವರ್ತನವನ್ನು ಉದಾಹರಿಸಿದರು. ಬಾಯಿ ಕಟ್ಟದ ಅಂಗಳದಲ್ಲಿ ಇದ್ದ ಚೀಲಗಳ ಮರ್ಮ ಮಾಮಲೇದಾರರಿಗೆ ಗೊತ್ತಾಗಿದ್ದರೆ ಮಾಮಲೇದಾರರು ಆ ಚೀಲಗಳನ್ನೂ ಅಳತೆ ಮಾಡಿಸುತ್ತಿದ್ದರು. ಆ ಪ್ರಸಂಗ ತಪ್ಪಿತು. ಆದರೂ ಅಂಕೋಲೆಯ ಮಾಮಲೇದಾರರಿಗೆ ವಂಚನೆಯ ಗ್ರಹಿಕೆ ಬಂದಿದೆ.

ಸರಕಾರಕ್ಕೆ ಭತ್ತ ಕೊಡಲು ಜನರಿಗೆ ಅಸಮಾಧಾನವಿಲ್ಲ. ಆದರೆ ಅಧಿಕಾರಿಗಳ ವಂಚನೆ, ಬಲಾತ್ಕಾರ, ಸುಲಿಗೆಗಳಿಗೆ ರೈತರು ಹೆದರಿದ್ದಾರೆ, ಭತ್ತ ತಂದರೆ ಗೇಣಿ ಕೊಡಬೇಕು;

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. I.
The Head Office and Branches of the Bank now accept
Season Deposits from three to six months at the following rates:-
Three Months at 2½% per annum.
Six Months at 2¾% per annum.
No such deposit will be allowed to run beyond 30th September 1946
K. VAMAN SHENAI,
CHAIRMAN.
Coondapoor.
8-2-1946.

ಒಣಗಿಸಿ ಕೊಡಬೇಕ, ಕೂಗ ಮಾಡಿಕೊಡಬೇಕು! ಒಣಗಿದ ಭತ್ತ ತಂದರೂ ಅದು ಹಸಿಯೆಂದು ಉಗ್ರಾಣದವರ ಆಕ್ಷೇಪ! ಅಳತೆ ಮಾಡುವ ಕೂಲಿಯಾಳುಗಳ ಗ್ರಹಚಾರ! ಆಳುಗಳಿಗೆ ಬೇಲ ೧೯ — ಇತಿಯಂತೆ ಕೂಲಿ ಸಲ್ಲುತ್ತದೆ. ದಿನ ೧೯ ಅವರಿಗೆ ೪-೫ ರೂಪಾಯಿ [illegible]ಯಾಗುತ್ತದೆ ಆದರೂ ಅವರಿಗೆ ಸಂತೋಷವಿಲ್ಲ! ಅಳತೆಯಲ್ಲಿ ಸುಳಿಗೆಯಂತೂ ಇದ್ದೇ ಇದೆ. ಮೇಲಾಗಿ ಹೆದರಿಸಿ ದಣಿಸುತ್ತಾರೆ! ಭತ್ತ ತಂದಾಗ ಸಮಯವಿಲ್ಲವೆಂದೂ, ಇನಾಮು(ಲಂಚ) ಕೊಟ್ಟರೆ ಅಳತೆ ಮಾಡಿಕೊಳ್ಳುವೆನೆಂದೂ, ಇಲ್ಲದಿದ್ದರೆ ೨-೩ ದಿನ ತನಕ ದಾರಿ ಕಾಯಬೇಕಾಗುವದೆಂದೂ, ದೂರದೂರದಿಂದ ಬಂದ ಹಳ್ಳಿಗರಿಗೆ ಉಗ್ರಾಣದವರೂ ಆಳುಗಳೂ ಹೆದರಿಸಿ ಸುಲಿಯುತ್ತಾರೆ. ಮಾಮಲೇದಾರರು ಈ ದೂರುಗಳನ್ನು ಪರಾಂಬರಿಸಿದರೆ ಮಾತ್ರ ಏನಾದರೊಂದು ಸಂಹಾರ ಸಿಗುತ್ತದೆ. ಯಲ್ಲಾಪುರದಂಥ ಮಾಮಲೇದಾರರಿದ್ದರೆ ಈ ಪೀಡನೆಗೆ ಪುಟ ದೊರೆತು ಬಹಳ ಕಷ್ಟ ಒದಗುತ್ತದೆ. ಈ ಕರ್ಮಗಳನ್ನು ಪುರಾವೆಯಿಂದ ಸಿದ್ಧಪಡಿಸುವದು ಕೆಲವಟ್ಟಿಗೆ ಕಠಿಣವಾದದ್ದು. ಮಹಾತ್ಮರು ನುಡಿದಂತೆ “God would know the wrong-doers” ಆ ದೀನದಯಾಘನ ಪರಮಾತ್ಮನೇ ಇಂಥ ದುಷ್ಟರಿಗೆ ಶಾಸನ ಮಾಡಬೇಕು! ಎಂದು ಸುಮ್ಮನಿರಬೇಕಾಗಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಹಿಂದಾಗಿ ಹಗಲು-ರಾತ್ರಿ ಸೆಕೆಯಾಗುತ್ತದೆ.

ನೆಲಸ್ಸ ಬಜಾರ ಮುಂದೆ ನಡೆದಿರುವ ಕಳ್ಳಬಟ್ಟಿ ಕೊಲೆಯ ಖಟ್ಲೆಯ ವಿಚಾರಣೆಗೆ ಅನಿರೀಕ್ಷಿತ ತಡೆಯುಂಟಾಗಿದೆ. ಗುರುವಾರ ಸಂಜೆ ಫಿರ್ಯಾದಿ ಪಕ್ಷದ ಪುರಾವೆ ಮುಗಿದು ೧ ನೇ ಆರೋಪಿಗಳ ಜಬಾನಿಗಳೂ ಆಗಿದ್ದವು. ಗುರುವಾರ ರಾತ್ರಿ ೪ನೇ ಆರೋಪಿಗೆ ಅಕಸ್ಮಾತ ಮೂರ್ಛೆ ಹತ್ತಿದ್ದರಿಂದ ಶುಕ್ರವಾರ, ಶನಿವಾರ ಏನೂ ಕೆಲಸವಾಗಲಿಲ್ಲ. ಇಂದು ಖಟ್ಲೆಯ ಮುಂದಿನ ವಿಚಾರವಾಗಲಿದೆ.

ದೇಶದ ಕೆಲವು ಭಾಗಗಳಲ್ಲಿ ಬರಗಾಲ ಬಿದ್ದಿದ್ದರಿಂದಲೂ, ಕೆಲವು ಭಾಗಗಳಲ್ಲಿ ಸಾಕಷ್ಟು ಮಳೆಯಾಗದ್ದರಿಂದಲೂ ಈ ವರ್ಷ ದೇಶದಲ್ಲಿ ಆಹಾರದ ಕೊರತೆಯಾಗುವದೆಂಬದು ನಿಚ್ಚಳವಾಗಿದೆ. ಇಡೀ ಹಿಂದುಸ್ಥಾನದಲ್ಲಿ ೪೦ ಲಕ್ಷ ಟನ್ನಗಳಷ್ಟು ಕಾಳು-ಕಡಿಯ ಕೊರತೆಯುಂಟಾಗುವದೆಂದು ಸರ್ವಾಧಿಕಾರಿ ವೆವ್ಹೆಲ್ ದೊರೆಗಳು ಹೇಳುತ್ತಾರೆ. ನಮ್ಮ ಮುಂಬಯಿ ಪ್ರಾಂತದಲ್ಲಿ, ಮುಂದಿನ ಮಳೆಗಾಲದ ಬೆಳೆ ಕೈಗೆ ಬರುವ ತನಕ (ಅಂದರೆ ೧೯೪೬ನೇ ಇಸವಿಯ ಡಿಸೆಂಬರ ತಿಂಗಳ ಕೊನೆಯ ವರೆಗೆ) ೩,೨೩,೦೦೦ ಟನ್ನ ಆಹಾರ-ಧಾನ್ಯಗಳ ಕೊರತೆಯಾಗುವದೆಂದು ಪ್ರಾಂತಾಧಿಪರ ಸಲಹೆಗಾರರಾದ ಸರ್ ಹೆನ್ರಿ ನೈಟರು ತಿಳಿಸಿದ್ದಾರೆ. ಈ ಕೊರತೆಯನ್ನು ತುಂಬಿ ತರಲಿಕ್ಕೂ ಬರಗಾಲ-ಪ್ರದೇಶಗಳ ಜನರಿಗೂ ಸಾಕಷ್ಟು ಆಹಾರ ಪೂರೈಸಲಿಕ್ಕೂ ಈಗಿನಿಂದಲೇ ಸೀಧಾ-ಪರಿಮಾಣವನ್ನು ೩/೪ಕ್ಕಿಳಿಸುವದು ಅಗತ್ಯವಿರುತ್ತದೆಂದು ಸರಕಾರದವರು ನಿರ್ಣಯಿಸಿ, ತಾ. ೨೧ರಿಂದ ಪ್ರಾಂತದಲ್ಲೆಲ್ಲ ಧಾನ್ಯಗಳ ಸೀಧೆಯಲ್ಲಿ ಸದರಿಯಂತೆ ಕಡಿತ ಮಾಡಿದ್ದಾರೆ. ತಾ ೨೧ರಿಂದ ಈ ಕಡಿತವಾಗುವದೆಂದು ಪ್ರಾಂತಾಧಿಪರು ತಮ್ಮ ಆಕಾಶವಾಣಿ ಭಾಷಣದಲ್ಲಿ ಹೇಳಿದ್ದರೂ ಈ ಜಿಲ್ಲೆಯಲ್ಲಿ ಈ ಕಡಿತಕ್ಕೆ ಬುಧವಾರ ಸಾಯಂಕಾಲದಿಂದ ಪ್ರಾರಂಭವಾಗಿದೆ! ಫೆಬ್ರುವರಿ ತಿಂಗಳ ಉತ್ತರಾರ್ಧದ ಸೀಧೆಯನ್ನು ಬುಧವಾರ ಸಾಯಂಕಾಲದ ಪೂರ್ವದಲ್ಲಿ ಒಯ್ಯದವರಿಗಂತೂ ತಾ ೧೬ರಿಂದ ಪ್ರಾರಂಭವಾದಂತಾಗಿದೆ!

ಪ್ರಾಥಮಿಕ ಶಾಲಾ ಶಿಕ್ಷಕರ ಪ್ರಾಂತಿಕ ಸಂಘದ ವಿನಂತಿಯ ಮೇರೆಗೆ ಕಳೆದ ಬುಧವಾರ ತಾ ೨೦ಕ್ಕೆ ಪ್ರಾಂತದಲ್ಲೆಲ್ಲ “ಪ್ರಾಥಮಿಕ ಶಾಲಾ ಶಿಕ್ಷಕರ ದಿನ” ದ ಆಚರಣೆಯಾದಂತೆ ಇಲ್ಲೂ ಆ ದಿನವಾಚರಿಸಲ್ಪಟ್ಟಿತು. ಅಂಗಡಿಕಾರರು ಹರತಾಳ ಮಾಡಿದರು. ಮುಂಜಾನೆಯೂ ಸಂಜೆಯಲ್ಲೂ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ನಾಗರಿಕರು ಇವರ ಮೆರವಣಿಗೆಗಳಾದವು. ಸಂಜೆಯ ಕಡೆಗೆ ಗಾಂಧಿ-ಚೌಕದಲ್ಲಿ ಸಾರ್ವಜನಿಕ ಸಭೆಯಾಯಿತು

ಮುಂಬಯಿ ಸ್ಟೀಮ ನೆವಿಗೇಶನ್ ಕಂಪನಿಯ ‘ಸೇಂಟ ಎಂಥೋನಿ’ ಎಂಬ ಪ್ರಯಾಣಿಕರ ಹಡಗವು ನಾಳೆ ಮಧ್ಯಾಹ್ನ ಮುಂಬಯಿ ಬಿಟ್ಟು ನಾಡದು ಸಂಜೆ ೬ಗೆ ಇಲ್ಲಿ ಬರುವದಂತೆ. ಈ ಹಡಗ ಸದ್ಯಕ್ಕೆ ಪ್ರತಿ ವಾರ ಮುಂಬಯಿ, ವೆಂಗುರ್ಲಾ, ಕಾರವಾರ, ಕುಮಟಾ, ಭಟಕಳ ಮತ್ತು ಮಲ್ಪಿ ಈ ಬಂದರಗಳನ್ನು ಮಾತ್ರ ಮಾಡುವದು.

ಉಪ್ಪಿನಪಟ್ಟಣದ ಹತ್ತಿರ ಬರಗದ್ದೆಯಲ್ಲಿ ಕೆಲವು ದಿನಗಳಿಂದ ಒಂದು ಹುಲಿಯು ಬಹಳ ಹಾವಳಿ ಹಾಕುತ್ತಿತ್ತು. ಏನಿಲ್ಲೆಂದರೂ ೫೦ ದನಗಳನ್ನು ಅದು ಮುರಿದಿದೆಯಂತೆ. ಅಲ್ಲಿಯ ರೈತರು ಇಲ್ಲಿಂದ ಹುಲಿ ಪಂಜರವನ್ನೊಯ್ದು ಕಳೆದ ಶುಕ್ರವಾರ ರಾತ್ರಿ ಆ ಹುಲಿಯನ್ನು ಹಿಡಿದು ಇಲ್ಲಿ ತಂದಿಟ್ಟಿದ್ದಾರೆ.

ಜಿಲ್ಲೆಯೊಳಗಿನ ಸಮಸ್ತ ನಾಮಧಾರಿ ಬಾಂಧವರು ಚುನಾವಣೆಯಲ್ಲಿ ಕೊಂಗ್ರೆಸ ಉಮೇದವಾರರುಗಳಿಗೇ ಬೆಂಬಲ ಕೊಡಬೇಕೆಂದು ನಿರ್ಣಯವಾಗಿದೆಯಾಗಿ ಇಲ್ಲಿಯ ನಾಮಧಾರಿ ಸಮಾಜದ ಪ್ರಮುಖರು ತಿಳಿಸುತ್ತಾರೆ.

ಹೊನ್ನಾವರ— (ತಾ ೨೩-೨-೪೬) ಸೀಧಾ ಅಂಗಡಿಗಳಲ್ಲಿ ಈಗ ಗೋದಿಯ ದರ ೨ ಆಣೆ ಹೆಚ್ಚಿಸಿ ರೂ. ೧-೨-೦ಕ್ಕೆ ಪಾಯಲಿ ೧ರಂತೆ ಮಾರುತ್ತಾರೆ

ಹೊಸಕಾಲದ ಜಾತ್ರೆ ಕಳೆದ ತಾ. ೯ಕ್ಕೆ ಜರುಗಿತು. ಹುರು ದಿನದಿಂದ ಒಂದು ವಾರದ ವರೆಗೆ ಗದಗದ ಆಟವೂ ಕೋಳಿ ಜೂಜುಗಳೂ ರಭಸದಿಂದ ನಡೆದವು. ಸರಾಯಿಯ ವ್ಯಾಪಾರವೂ ಬಹಳ ನಡೆಯಿತು. ಜಾತ್ರೆಯ ಕಾಲಕ್ಕೆ ಇಬ್ಬ ಹವಾಲ್ದಾರರೂ ಇಬ್ಬ ಪೋಲೀಸ-ಪೇದೆಗಳೂ ಹಾಜರಿದ್ದರು!

(ತಾ. ೨೪-೨-೪೬) ಇಲ್ಲಿಯ ದತ್ತ ಹವಾಲದಾರನ ಹಾವಳಿ ಮೇರೆವಟ್ಟಿದೆ. ಅಗ್ರಹಾರದೊಳಗೆ ರಥೋತ್ಸವ ನಡೆ

(ಪುರವಣಿಯ ಮೇಲೆ ಮುಂದರಿಸಿದೆ.)

ಕುಮಟಾ ಸಿವ್ಹಿಲ್ ಕೋರ್ಟಿನಲ್ಲಿ.

ಸ್ಮಾಲ ಕಾಜ ನಂಬರ ೮-೧೯೪೫.

ದಾವೆಯನ್ನು ನಿರ್ಣಯಿಸಲಿಕ್ಕೆ ಸಮನ್ಸು

(ಆ. ೫, ರೂಲುಗಳು ೧-೫)

(೧) ಅಪ್ರಾಪ್ತವಯಸ್ಕ ಬಾಬು, ಪ್ರಾಯ ವರ್ಷ ೧೪ } ಬಿನ್ ವೆಂಕಟೇಶ ಶಾನಭಾಗ
(೨) " ಸದಾನಂದ " " ೮ } ಚಿತ್ರಾಲ
(೩) ದೇವಕೀ ಕೋಂ ವೆಂಕಟೇಶ ಶಾನಭಾಗ ಚಿತ್ರಾಲ ಪ್ರಾಯ ೩೬ ಎಲ್ಲರೂ
ಗೌಡಸಾರಸ್ವತ ರೈತರು ಸಾ॥ ಹನೇಹಳ್ಳಿ ತಾ॥ ಕುಮಟಾ ಅಪ್ರಾಪ್ತವಯಸ್ಕ ರಕ್ಷಕನ
ನೈಮಾಟಿದಾರ ಕಾನಡಾ ಡಿಸ್ಟ್ರಿಕ್ಟ ಕೋರ್ಟ ಡೆಪ್ಯುಟಿ ನಾಝರ } ವಾದಿಯರು
ವ॥ ಮಿ॥ ಎಚ್. ಕೆ. ಶಾನಭಾಗ.

ವಿರುದ್ಧ.

ಮನೋಹರ ಶಂಕರ ವಾಸುದೇವ ಶೆಟ್ಟಿ, ಪ್ರಾಯ ಅಜಮಾಸ ವರ್ಷ ೪೫ ದೈವಜ್ಞ ಜಾತಿ
ಬನಿವಾರಿಕೆ ಕಸಬು ಸಾ॥ ಕಣಸಗದ್ದೆ ತಾಲೂಕ ಅಂಕೋಲಾ ಇವರಿಗೆ— } ಪ್ರತಿವಾದಿ
ದಾವಾ ರೂಪಾಯಿ ೪೮-೦-೦.

೧ ವಾದಿಯರ ಕುಟುಂಬದ ಮಾಲ್ಕಿ ಹಕ್ಕಿನ ಹನೇಹಳ್ಳಿ ಸರ್ವೇ ನಂಬರ ೫೧೫ ಹಿಸ್ಸಾ ೨ ಬ ಕ್ಷೇತ್ರ ೦-೬-೦ ಆಕಾರ ೧-೧-೦ನೇ ಸ್ಥಳವು ಪ್ರತಿವಾದಿಗೆ ದರಸಾಲ ಮಾಘ ಬ ೩೦ಕ್ಕೆ ಸಿಪ್ಪುಗೂಡಿದ ತೆಂಗಿನಕಾಯಿ ೨೦೦ ಕೊಡುವ ಶರ್ತದ ಮೇಲೆ ಪ್ರತಿವಾದಿಯಾದ ನಿನಗೆ ಮೂಲಗೇಣಿಗೆ ಇರುತ್ತಿದ್ದು, ನಿನ್ನಿಂದ ವಾದಿಯರಿಗೆ ಕಳೆದ ವೃಷ, ಚಿತ್ರಭಾನು, ಸುಭಾನು ಸಂವತ್ಸರಗಳ ಗೇಣಿ ಬಾಬು ಬರತಕ್ಕ ಅಂತೂ ತೆಂಗಿನಕಾಯಿ ೬೦೦ರ ಕಿಮ್ಮತ್ತು ರೂ ೪೮-೦-೦ರ ವಸೂಲಿ ಬಗ್ಗೆ ನಿನ್ನ ಮೇಲೆ ದಾವೆ ಇರುತ್ತದೆ.

ಕಾರಣ ಸದರಿ ದಾವೆಗೆ ಜವಾಬು ಕೊಡಲಿಕ್ಕೆ ಈ ಲೇಖದಿಂದ ನಿನಗೆ ಸಮನ್ಸು ಮಾಡಲ್ಪಟ್ಟಿದೆ. ನೀನು ಸ್ವತಃ ಯಾ ವ್ಯಾಜ್ಯದ ಪ್ರಶ್ನೆ ಮಾಹಿತಿಯುಳ್ಳ ವಕೀಲರ ಮುಖಾಂತರ ಸನ್ ೧೯೪೬ ಮಾರ್ಚ ತಿಂಗಳ ೨೮ನೇ ತಾರೀಖಿನ ಬೆಳಗಿನ ೧೧ ಘಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಬೇಕು ನೀನು ಹಾಜರಾಗುವ ಬಗ್ಗೆ ಗೊತ್ತುಪಡಿಸಿದ ದಿವಸವೇ ದಾವೆಯ ಕೊನೆಯ ನಿರ್ಣಯ ಮಾಡುವದು ಗೊತ್ತುಪಡಿಸಿರುವ ಕಾರಣ, ಆ ದಿವಸ ನಿನ್ನ ಜವಾಬಿನ ಪುರಾವೆಗಾಗಿ ನೀನು ಆಶ್ರಯಿಸಲು ಅಪೇಕ್ಷಿಸುವಂಥ ಯಾವತ್ತೂ ಸಾಕ್ಷಿದಾರರನ್ನು ಮತ್ತು ಎಲ್ಲಾ ದಸ್ತೈವಜುಗಳನ್ನು ಹಾಜರ ಪಡಿಸಲಿಕ್ಕೆ ನೀನು ಸಿದ್ಧನಾಗಿರಬೇಕು.

ಸದರಿ ದಿವಸ ನೀನು ಹಾಜರಾಗದಿದ್ದರೆ ನಿನ್ನ ಪರೋಕ್ಷ ದಾವೆಯ ಚೌಕಶಿಯಾಗಿ ಅದು ನಿರ್ಣಯಿಸಲ್ಪಡುವದು.

ನೀನು ನಿನ್ನ ಪತ್ತೆಯನ್ನು ನಿರ್ದಿಷ್ಟ ಮಾಡಿದ ತಾರೀಖಿನೊಳಗಾಗಿ ತುಂಬಿ ಕೊಡಲಿಕ್ಕೆ ತಪ್ಪಿದರೆ ಪ್ರತಿವಾದಿ ಎಂಬ ನಿಮ್ಮ ಪಕ್ಷವನ್ನು ತೆಗೆದುಹಾಕಲಾದೀತು.

ಈ ಹೊತ್ತು ಸನ್ ೧೯೪೬ ಫೆಬ್ರುವರಿ ತಿಂಗಳ ೨೨ನೇ ತಾರೀಖಿಗೆ ನನ್ನ ಸಹಿ ಮಾಡಿ ಮತ್ತು ಕೋರ್ಟಿನ ಮೊಹರು ಮಾಡಿ ಕೊಡಲ್ಪಟ್ಟಿದೆ

ಕೋರ್ಟಿನ ಮೊಹರು

H S. Baindur.
Clerk of the Court,
Civil Judge's Court, Kumta.

ಪ್ರಕಟನೆ.

ದನ ಕರುಗಳ ತಿನಸನ್ನು (cattle-feed) ಸಾಧ್ಯವಿದ್ದ ಮಟ್ಟಿಗೆ ಯೋಗ್ಯ ರೀತಿಯಿಂದ ಹಂಚಬೇಕಾಗಿಯೂ, ಜನರಿಗೆ ಆಹಾರ ಧಾನ್ಯವನ್ನು ಪೂರೈಸುವ ಸೀಧಾ ಪದ್ಧತಿಯಂತೆಯೇ ಅವನ್ನು ಪೂರೈಸಬೇಕಾಗಿಯೂ ಮೆ॥ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಕಾನಡಾ ಇವರು ಆಲೋಚಿಸಿದ್ದಾರೆ. ಕಾರಣ ದನ-ಕರುಗಳ ಮಾಲಿಕರೆಲ್ಲ ತಮ್ಮ ತಮ್ಮ ತಾಲೂಕಿನ ಮಾಮಲೇದಾರ ಇಲ್ಲವೆ ಪೇಟೆಯ ಮಹಾಲಕರಿ ಇವರ ಕಡೆಗೆ ಇದೇ ಬರುವ ಮಾರ್ಚ ತಾ. ೫ರೊಳಗಾಗಿ ದನ ಕರುಗಳ ತಿನಸುಗಳ ಬಗ್ಗೆ ಈ ಕೆಳಗೆ ತೋರಿಸಿದಂತೆ ಮಾಹಿತಿ ಕೊಟ್ಟು ಅರ್ಜಿ ಮಾಡಿಕೊಳ್ಳತಕ್ಕದ್ದು.

(೧) ಹಿಂಡುವ ಆಕಳು, ಎಮ್ಮೆಗಳ ಸಂಖ್ಯೆ,
(೨) ನಿಜವಾಗಿ ಬೇಸಾಯಕ್ಕೆ ಉಪಯೋಗಿಸಲ್ಪಡುವ ಎತ್ತುಗಳ ಸಂಖ್ಯೆ.

ಅರ್ಜಿಗಳನ್ನು ಮಾಡುವಾಗ ಯಾರಾದರೂ ತಪ್ಪು ಮಾಹಿತಿ ಕೊಟ್ಟಲ್ಲಿ ಅವರಿಗೆ ಏನೂ ಸಿಗಲಿಕ್ಕಿಲ್ಲ; ಹಾಗೆಯೇ ಯಾರಾದರೂ ಮುದ್ದತ್ತಿನಲ್ಲಿ ಅರ್ಜಿ ಮಾಡಿಕೊಳ್ಳದಿದ್ದರೆ ಅವರ ಅರ್ಜಿಯು ವಿಚಾರ ಮಾಡಲ್ಪಡಲಿಕ್ಕಿಲ್ಲ.

ಸೀಧಾ ಕ್ಷೇತ್ರಗಳೊಳಗಿನ ಜನರು ಮೇಲಿನಂತೆ ಅರ್ಜಿಯನ್ನು ತಮ್ಮ ತಮ್ಮ ರೇಶನಿಂಗ ಆಫೀಸರರ ಕಡೆಗೆ ಮುದ್ದತ್ತಿನಲ್ಲಿ ಕಳುಹಿಸಬೇಕು

ಕಾರವಾರ,
ತಾ ೨೦-೨-೪೬ }

F. N. RANA.
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

ಕಾನಡಾ ಜಿಲ್ಲೆಯ ಮುಸಲ್ಮಾನ ಮತದಾರರಲ್ಲಿ ವಿಜ್ಞಾಪನೆ.

ಮಿ॥ ಶಮಸುದ್ದೀನ ಹುಸೇನ ಜುಕಾಕು, ಬಿ.ಎ., ಎಲ್‌ಎಲ್ ಬಿ., ವಕೀಲ, ಇವರು ನಮ್ಮ ಜಿಲ್ಲೆಯ ವತಿಯಿಂದ ಮುಸ್ಲಿಮ್ ಲೀಗದ ಪರವಾಗಿ ಮುಂಬಯಿ ಲೆಜಿಸ್ಲೇಟಿವ್ಹ ಎಸೆಂಬ್ಲಿಯ ಚುನಾವಣೆಗೆ ಹುರಿಯಾಳಾಗಿ ನಿಲ್ಲಿಸಲ್ಪಟ್ಟಿದ್ದಾರೆ. ಲೀಗಿನ ತರ್ಫೆಸಿಂದ ಇನ್ನಾರಿಗೂ ನೇಮಿಸಿರುವದಿಲ್ಲ. ಎಲ್ಲ ಮುಸ್ಲಿಮ ಬಂಧುಗಳು ತಮ್ಮ ಮತಗಳನ್ನು ಮಿ॥ ಜುಕಾಕು ಇವರಿಗೇ ಕೊಟ್ಟು ಲೀಗಿನ ಬಗ್ಗೆ ತಮಗಿರುವ ಭಕ್ತಿಯನ್ನೂ ನಿಷ್ಠೆಯನ್ನೂ ಪ್ರದರ್ಶಿಸಬೇಕಾಗಿ ಅರಿಕೆಯಿದೆ. ಮತಪತ್ರಿಕೆಯಲ್ಲಿ ಮಿ॥ ಜುಕಾಕು ಇವರ ಗುರುತು ಛತ್ರಿ (ಕೊಡೆ)ಯಾಗಿರುತ್ತದೆ. ಅಂಕೋಲಾ, ತಾ. ೨೩-೨-೪೬.

ಸಯ್ಯದ ಮೋಹಿದ್ದೀನ ಪಾಶಾ ಪೀರಜಾದೆ. ಬಿ ಎ.,ಎಲ್‌ಎಲ್.ಬಿ.,
ಅಧ್ಯಕ್ಷ, ಕಾನಡಾ ಜಿಲ್ಲಾ ಮುಸ್ಲಿಮ ಲೀಗ

ಹಿಂದುಸ್ಥಾನಿ ಪಾಠಗಳು

ಸರಳ ರೀತಿ (ಪಾಠ ೨೦)

ಕಪಡೇಕೀ ಕಹಾನೀ (ಬಟ್ಟೆಯ ಕಥೆ)

ಯಹ ಕಪಡಾ ಹೈ. (ಇದು ಬಟ್ಟೆ.) ಯಹ ಹಮಾರೇ ಶರೀರಕೋ ಢಕ್ತಾ ಹೈ ಔರ ಸರ್ದೀ ಔರ ಗರಮೀಸೇ ಬಚಾತಾ ಹೈ. (ಇದು ನಮ್ಮ ಶರೀರವನ್ನು ಮುಚ್ಚುತ್ತದೆ, ಮತ್ತು ಚಳಿ ಹಾಗೂ ಉಷ್ಣತೆಗಳಿಂದ ಕಾಪಾಡುತ್ತದೆ.) ಜಾನತೇ ಹೋ ಇಸಕೀ ಕ್ಯಾ ಕಹಾನೀ ಹೈ? (ನೀವು ಬಲ್ಲಿರಾ ಇದರ ಕಥೆ ಏನೆಂದು?) ಕಿಸಾನ ಅಪನೇ ಖೇತಮೇಂ ಏಕ ಪೌಧಾ ಪೈದಾ ಕರತಾ ಹೈ. (ಒಕ್ಕಲಿಗನು ತನ್ನ ಹೊಲದಲ್ಲಿ ಒಂದು ಸಸಿಯನ್ನು ಬೆಳೆಸುತ್ತಾನೆ.) ಉಸಮೇಂ ಪೀಲಾ ಫೂಲ ಆತಾ ಹೈ; (ಅದಕ್ಕೆ ಒಂದು ಹಳದಿ ಬಣ್ಣದ ಹೂವು ಬರುತ್ತದೆ;) ಔರ ಬಾದ ಗೋಲ ಫಲ ನಿಕಲತಾ ಹೈ. (ಮತ್ತು ಒಂದು ಗುಂಡನ್ನ ಫಲ ಕೊಡುತ್ತದೆ.) ಉಸಪರ ಧೂಪಕೀ ಗರಮೀ ಪಡ

ಆಜ್ಞೆ.

ನಂ. ೪೯೦೫.

ಕಾರವಾರ, ತಾ. ೫-೨-೧೯೪೬.

ಹಿಂದುಸ್ಥಾನ-ಸಂರಕ್ಷಣ ಕಾನೂನಿನ ೮೧ನೇ ನಿಯಮದ ೨ನೇ ಉಪ-ನಿಯಮದ ಹಾಗೂ ತಾ. ೧೫-೯-೧೯೪೪ರ ಗೃಹ ಖಾತೆ (ಪೊಲಿಟಿಕಲ್-ಯುದ್ಧ) ಯ ಸರಕಾರಿ ಪ್ರಕಟನೆ ನಂ. ಎಸ್. ಡಿ. II – ೧೪೭೦ ಇವುಗಳನ್ವಯ ಸಿಕ್ಕ ಅಧಿಕಾರವನ್ನೂ ಹೀಗೆ ನಡೆಸಲು ನನಗೆ ದೊರೆತ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ, ಕಾನಡಾ ಜಿಲ್ಹೆಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟನು, ಕೆರೋಸಿನ್ ಎಣ್ಣೆಯ ಧಾರಣೆಗಳನ್ನು ನಿರ್ದಿಷ್ಟಗೊಳಿಸಿದ ಈ ಹಿಂದಿನ ಹುಕುಮುಗಳನ್ನೆಲ್ಲ ರದ್ದುಗೊಳಿಸಿ, ಈ ಮೂಲಕ ಹುಕುಮು ಮಾಡುವದೇನೆಂದರೆ:—

(೧) ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದ ೧ನೇ ಸ್ತಂಭದಲ್ಲಿ ಕಾಣಿಸಿರುವ ಸ್ಥಳಗಳಲ್ಲಿ ಅವುಗಳ ಎದುರಿಗೆ ಕಾಣಿಸಿರುವ ಧಾರಣೆಗಳಿಗಿಂತ ಹೆಚ್ಚಿಗೆ ದರದಿಂದ ಸಾರ್ವಜನಿಕರಿಗೆ ಬಿಡೀ ಕೆರೋಸಿನ್ ಎಣ್ಣೆಯನ್ನು ಮಾರಕೂಡದು.

(೨) ಯೋಗ್ಯ ಅಧಿಕಾರಿಯು ಕೊಟ್ಟ ಪರವಾನ-ಚೀಟಿಯನ್ನಾಗಲಿ ಅಧಿಕಾರ-ಪತ್ರವನ್ನಾಗಲಿ ತಕ್ಕೊಂಡು ಬಂದು ಮತ್ತು ಮೇಲೆ ಹೇಳಿದ ಧಾರಣೆ ಕೊಡಲೊಪ್ಪಿ ಯಾವದೇ ಮನುಷ್ಯನು ಕೆರೋಸಿನ್ ಎಣ್ಣೆ ಬೇಕಿದ್ದಲ್ಲಿ ಆತನಿಗೆ ಎಣ್ಣೆ ಕೊಡುವದಿಲ್ಲೆಂದು ಕೆರೋಸಿನ್ ಎಣ್ಣೆಯ ವ್ಯಾಪಾರಿಗಳು ಹೇಳಕೂಡದು;

(೩) ಇಂಥ ವ್ಯಾಪಾರಿಗಳು ಮೇಲ್ಕಾಣಿಸಿದ ಪರಿಶಿಷ್ಟದ ಒಂದು ಪ್ರತಿಯನ್ನು ತಮ್ಮ ಅಂಗಡಿಗಳ, ಉಗ್ರಾಣಗಳ ಇಲ್ಲವೆ ವ್ಯಾಪಾರ ಮಾಡುವ ಸ್ಥಳಗಳ ಪ್ರಮುಖ ಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಹಚ್ಚತಕ್ಕದ್ದು; ಮತ್ತು

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು.)

ಸಾಗ ಜಾತ್ರೆಯಲ್ಲಿ ಆತ ತುಂಬ ಸರಾಯಿ ಕುಡಿದವನಂತೆ ಗೊಂದಲ ಹಾಕಿದನು. ಜುಗಾರಮಂಡಗಳಿಗೆ ಆತ ರಕ್ಷಣೆ ಕೊಟ್ಟು ಎಷ್ಟುವಳಿ ಮಾಡುತ್ತಾನೆ. ನಿನ್ನೆ ಶನಿವಾರ ಆತ ಕೋಳಿಗದ್ದೆ ಜಾತ್ರೆಗೆ ಹೋಗಿದ್ದನು. ಅಲ್ಲಿ ೭-೮ ಜುಗಾರ ಮಂಡಗಳು ನಡೆದಿದ್ದವು. ಹೊಸ ಹುರುಪಿನ ಕೆಲ ಹುಡುಗರು ಆ ಮಂಡಗಳನ್ನು ಚದರಿಸಲು ಯತ್ನಿಸಿದರು. ತಕ್ಷಣ ಹವಾಲದಾರನು ಆ ಹುಡುಗರ ಮೈಮೇಲೆ ಬಿದ್ದು ಜುಗಾರಿಗಳನ್ನು ಕಾಪಾಡಿದನಂತೆ. ಹವಾಲದಾರನ ಬಾಯಿಗೆ ಆಗ ತುಂಬ ಸರಾಯಿಯ ವಾಸನೆ ಬರುತ್ತಿತ್ತಂತೆ. ಫೌಜದಾರರು ಅವನ ಕಡೆ ಸ್ವಲ್ಪ ಲಕ್ಷಗೊಡಬೇಕು.

ಕಾಸರಕೋಡ ಪಟ್ಟಿ ೬ ಗ್ರಾಮಗಳಿಗೆ ಕೆಳಗಿನೂರಿನಲ್ಲಿ ಒಂದೇ ಯೋಗ್ಯ ದರದ ಅಂಗಡಿಯುಂಟು. ಈ ಅಂಗಡಿಯಿಂದ ೧೩೪೮ ಕಾರ್ಡ್‌ಧಾರಿಗಳಿಗೆ ಸೀಧಾ ಸಾಮಗ್ರಿಯು ಪುರವಠೆಯಾಗಬೇಕು. ಆದರಿಂದ ಅಂಗಡಿಯಲ್ಲಿ ಗದ್ದಲ ಬಹಳವಾಗುತ್ತಿದೆ. ತಾಸುಗಟ್ಟಲೆ ನಿಂತರೂ ಸೀಧಾ ಸಿಗುವದಿಲ್ಲ. ಆದರಿಂದ ಬೇರೊಂದು ಅಂಗಡಿ ತೆರೆಯಬೇಕಾಗಿ ಅಧಿಕಾರಿಗಳೇ ನಿರ್ಣಯಿಸಿ ೪ ತಿಂಗಳ ಹಿಂದೆ ಒಂದು ಕಮಿಟಿ ಸಹ ನೇಮಿಸಿದ್ದರು. ಆದರೆ ಇನ್ನೂ ಆ ಅಂಗಡಿಗೆ ಪರವಾನೆ ಬಂದಿಲ್ಲ! ಜನರ ದುರ್ದೈವ!!

ಶಿರ್ಸಿ— (ತಾ. ೨೩-೨-೪೬) ಈಗೊಂದು ವಾರದಿಂದ ಟಿಸಾಲ ಶಾಲೆಯ ನೌಕರರು "ಹಸಿದ್‌ವರ ಬಿಲ್ಲ" ವರಿಕೆ [illegible]ತ್ತಿದ್ದಾರೆ.

ತಾ. ೨೦ಕ್ಕೆ ಪ್ರಾ॥ ಶಿಕ್ಷಕರ ದಿನದ ಆಚರಣೆಯಾಯಿತು: ಪರತಾಳ, ಮೆರವಣಿಗೆ, ಸಭೆಗಳಾದವು.

ಕೊಂಗ್ರೆಸ ಚುನಾವಣ-ಪ್ರಚಾರಕರು ಮೊನ್ನೆ ಇಲ್ಲಿ ಬಂದು ತಲ್ಪಿದರು. ನಿನ್ನೆ ಮುಂಜಾನೆ ಅವರು ಬನವಾಸಿ, ಮುಡೇಕಲ್ಲ ಸೀಮೆಗಳಲ್ಲಿ ಸಂಚರಿಸಿ ಸಂಜೆಯ ಹೊತ್ತಿಗೆ ತಿರುಗಿ ಇಲ್ಲಿ ಬಂದರು.

ಇಲ್ಲಿಯ ಪ್ರಸಿದ್ಧ ಅಡಿಕೆ ವ್ಯಾಪಾರಿಗಳಾದ ರಾ॥ ಘೋರಪ್ಪನೆ ವಾಸುದೇವರಾಯರು ನಿನ್ನೆ ಶುಕ್ರವಾರ ಅಕಸ್ಮಾತ್ತದಲ್ಲಿ ವಿಷಮಜ್ವರದಿಂದ ವೈಕುಂಠವಾಸಿಗಳಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಮೃತಾತ್ಮರು ಕೆಲವು ವರ್ಷ ನಗರಾಧ್ಯಕ್ಷರಾಗಿ ಲೋಕಸೇವೆ ಮಾಡಿದ್ದುಂಟು. ಅವರು ಏಕನಿಷ್ಠ ಕೊಂಗ್ರೆಸಭಕ್ತರಿದ್ದರು. ೧೯೩೦-೩೨ರ ಆಂದೋಲನದಲ್ಲಿ ಸೆರೆಮನೆಗೂ ಹೋಗಿದ್ದರು. ಅವರ ನಿಧನದ ವಾರ್ತೆ ಕೇಳಿ ಎಲ್ಲ ಅಂಗಡಿಗಳೂ ಶಾಲೆಗಳೂ ಕೂಡಲೇ ಮುಚ್ಚಲ್ಪಟ್ಟವು. ಅಡಿಕೆ ವ್ಯಾಪಾರಿಗಳು ಇಂದು ಸಭೆ ಸೇರಿ, ವಾಸುದೇವರಾಯರ ನಿಧನದ ನಿಮಿತ್ತ, ಸೋಮವಾರದ ವರೆಗೆ ಅಡಿಕೆ ವ್ಯಾಪಾರ ನಿಲ್ಲಿಸಬೇಕೆಂದು ಠರಾವಿಸಿದ್ದಾರೆ. ಮೃತಾತ್ಮರಿಗೆ ಸದ್ಗತಿ ದೊರೆಯಲಿ.

ಇಲ್ಲಿಯ ಗಿರಣಿಯವರಿಗೂ ಅಧಿಕಾರಿಗಳಿಗೂ ಭತ್ತದಿಂದ ಹುಟ್ಟುವ ಅಕ್ಕಿಯ ಪ್ರಮಾಣದ ಬಗ್ಗೆ ಬೇರೆ ಕೆಲವು ವಿಷಯಗಳ ಬಗ್ಗೆ ಮತಭೇದವುಂಟಾಗಿ, ಗಿರಣಿಯವರು ಈಗ ಅಕ್ಕಿ ಮಾಡಿಕೊಡುವದನ್ನು ನಿಲ್ಲಿಸಿದ್ದಾರೆ. ಈಗ ಸಿಗುವ ಸೀಧಾ ಅಕ್ಕಿ ಬನವಾಸಿಯ ಗಿರಣಿಯಲ್ಲಾದದ್ದು. ಅದು ತೀರ ಪ್ರೊಮ್ಡ್ ಇರುತ್ತದೆ. ಕುಟ್ಟಿಕೊಂಡ ವಿನಹ ಅದನ್ನು ಉಣ್ಣಬರುವದಿಲ್ಲ! ಅಂಗಡಿಯವರ ಅಳತೆಯ ಕೈಚಳಕದಿಂದ ಒಂದು ಅಕ್ಕಿ ಪೂರ್ಣ ಸಿಗುವದಿಲ್ಲ. ಅಂಗಡಿಯಿಂದ ೧ ಪ್ಯಾಲಿ ತಕ್ಕೊಂಡು ಹೋಗಿ ಕುಟ್ಟಿ ಹಸನ ಮಾಡಿದರೆ ಸರಾಸರಿ ೩ ಸೇರು ಉಳಿಯುತ್ತದೆ! ಜಿಲ್ಹಾಧಿಪರು ಇತ್ತ ಗಮನವೀಯಬೇಕಾಗಿ ವಿನಂತಿ.

ಇಲ್ಲಿಯ ದಿವಾಣಿ ಕೋರ್ಟಿಗೆ ರಾ॥ ಪವಾರ ಇವರನ್ನು ಜಡ್ಜರನ್ನಾಗಿ ನೇಮಿಸುತ್ತದೆ. ಇಲ್ಲಿ ಮಾರ್ಚ ೧ನೇ ತಾರೀಖಿನಿಂದ ಕೋರ್ಟಿನ ಕೆಲಸ ಪ್ರಾರಂಭವಾಗುತ್ತದೆ.

ಮುಂಬಯಿಯ ದಂಗೆಯಲ್ಲಿ ಕೆಲವು ಬೇಂಕುಗಳೂ ಟಪಾಲಕಟ್ಟೆಗಳೂ ಸುಟ್ಟು ಹೋದ್ದರಿಂದ ಮುಂಬಯಿ ಬೇಂಕುಗಳ ಮೇಲೆ ಹುಂಡಿ ಕಳಿಸಬಾರದೆಂದು ಇಲ್ಲಿಯ ವರ್ತಕರಿಗೆ ಮುಂಬಯಿಯವರು ತಿಳಿಸಿದ್ದಾರಾಗಿ ತಿಳಿಯುತ್ತದೆ.

ಕಾರವಾರ— (ತಾ. ೨೨-೨-೪೬) ಇಂದು ಇಲ್ಲಿಯ ರಾಷ್ಟ್ರಸೇವಾದಳದ ೩ನೇ ಹುಟ್ಟುಹಬ್ಬ. ದಳದವರು ಧ್ವಜವಂದನೆ, ಕವಾಯತ, ಸಭೆ ಮುಂತಾದ ಕಾರ್ಯಕ್ರಮವನ್ನು ಇಟ್ಟುಕೊಂಡು ಆ ಹಬ್ಬವನ್ನಾಚರಿಸಿದರು. ರಾ॥ ಮಾವಿನಕುರ್ವೆಯವರು ಭಾಷಣದಲ್ಲಿ ಮುಂಬರುವ ಚುನಾವಣೆಯತ್ತ ಹೊರಳಿ, ಈ ಚುನಾವಣೆಯಲ್ಲಿ ರಾಷ್ಟ್ರಸೇವಾದಳದ ಪ್ರತಿಯೊಬ್ಬ ಸೈನಿಕನೂ ಸೈನಿಕೆಯೂ ತಮ್ಮ ತಮ್ಮ ಸೀಮೆಯೊಳಗಿನ ಪ್ರತಿಯೊಬ್ಬ ಮತದಾರರಿಗೆ ಮತಪಟ್ಟಿಗೆ ಕರೆತಂದು ಕೊಂಗ್ರೆಸ ಹುರಿಯಾಳುಗಳಿಗೆ ಮತ ಹಾಕಿಸಬೇಕಾಗಿ ಬೋಧಿಸಿದರು.

ಕಳೆದ ರವಿವಾರ (ತಾ. ೧೭) ಇಲ್ಲಿಯ ಹಾಯಸ್ಕೂಲಿನಲ್ಲಿ ಪಾಲಕರ ದಿನದ ಆಚರಣೆಯಾಯಿತು. ವಿದ್ಯಾರ್ಥಿ-ವಿದ್ಯಾರ್ಥಿನಿಗಳ ಭಾಷಣ, ಗಾಯನ, ನರ್ತನಗಳಾದ ಮೇಲೆ ಅಧ್ಯಕ್ಷ ಡಾ॥ ಶೇಕರವರ ಪತ್ನಿಯು ಪ್ರಾವೀಣ್ಯ ತೋರಿಸಿದವರಿಗೆ ಇನಾಮುಗಳನ್ನು ಕೊಟ್ಟರು. ಮುಖ್ಯಾಧ್ಯಾಪಕರು ತಮ್ಮ ಭಾಷಣದಲ್ಲಿ, ಶಾಲೆಯೊಳಗೆ ಮುಸಲ್ಮಾನ ಮತ್ತು ಹರಿಜನ ವರ್ಗದ ಒಬ್ಬಳೂ ವಿದ್ಯಾರ್ಥಿನಿ ಇಲ್ಲವೆಂದು ವ್ಯಸನಪಟ್ಟರು. ಅಧ್ಯಕ್ಷರು ಅದೇ ವಿಷಯವನ್ನೆತ್ತಿ, ಮುಸಲ್ಮಾನ ಹೆಂಗಸರು ಪರದೆ-ಪದ್ಧತಿಯನ್ನು ಬಿಟ್ಟು ಮುಂದೆ ಬರಬೇಕೆಂದೂ ಶಿಕ್ಷಣ ಪಡೆಯಲು ಮುಂದಾಗಬೇಕೆಂದೂ ಹೇಳಿದರು.

ಜಿಲ್ಹಾಧಿಪರ ಕುಮಟಾ ಮುಕ್ಕಾಮು ರದ್ದಾಗಿದೆ. ತಾ. ೧-೩-೪೬ನೇಗೆ ಜಿಲ್ಹಾಧಿಪರು ಇಲ್ಲಿ ಮರಳುತ್ತಾರೆ.

ಮುಂಬಯಿಯಿಂದ ಟಪಾಲ ತರಿಸಿದ ವರ್ತಕರು ತಮ್ಮ ಅಪ್ಪಣೆ ಪಡೆಯದೆ ಟಪಾಲ ಗಂಟುಗಳನ್ನು ಒಡೆದು ಮಾರಬಾರದಾಗಿ ಜಿಲ್ಹಾಧಿಪರು ಈ ಹಿಂದೆ ಹೊರಡಿಸಿದ ಹುಕುಮು ಈಗ ರದ್ದಾಗಿದೆ. ಮುಂಬಯಿಯಿಂದ ಬಂದ ಟಪಾಲ ಜಿಲ್ಹೆಯಲ್ಲಿ ಎಲ್ಲಿ ಬೇಕಾದಲ್ಲಿ ಒಯ್ಯಲು ಜಿಲ್ಹಾಧಿಪರ ಪ್ರತಿಬಂಧವಿಲ್ಲದಿರುವದಾಗಿ ಸದ್ಯಕ್ಕೆ ಕೂಡಿದ ಟಪಾಲ ಸಲಹೆಗಾರ ಕಮಿಟಿಯಲ್ಲಿ ತೀರ್ಮಾನವಾಗಿದೆ.

ಎಸ್ಸುವವನಿಗೆ ಕೊಡತಾ ಹೈ.) ಧುನಕರ ಉಸೇ ಸಾಫ ಕರತಾ ಹೈ. (ಎಸ್ಸುವವನು ಅದನ್ನು ಚೊಕ್ಕ ಮಾಡುತ್ತಾನೆ.) ಉಸಕಾ ಏಕ ಧನುಷ ಗಾತಾ ಹೈ — ತುಕ್ಕ ತುಕ್ಕ, ಝಾಂಯ ಝಾಂಯ; (ಅವನದೊಂದು ಧನುಸ್ಸು ಹಾಡುತ್ತದೆ — ತುಕ್ಕ ತುಕ್ಕ, ಝಾಂಯ ಝಾಂಯ;) ಔರ ರೂಈ ಉಸಕೇ ತಾಲಪರ ನಾಚತೀ ಹೈ. (ಮತ್ತು ಹತ್ತಿಯು ಅದರ ತಾಳಕ್ಕೆ ಸರಿಯಾಗಿ ಕುಣಿಯುತ್ತದೆ.) ನಾಚ ನಾಚಕರ ವಹ ಬಹುತಹೀ ಸುಂದರ ಔರ ಮುಲಾಯಮ ಬನ ಜಾತೀ ಹೈ. (ಕುಣಿಕುಣಿದು ಅದು ಬಹಳ ಸುಂದರ ಮತ್ತು ಮೃದುವಾಗುತ್ತದೆ.) ಧುನಕರ ಇಸಕೋ ಸಿರಕೀ ಪರ ರಖಕರ ಪತಲೀ ಪತಲೀ ಪೋನೀ ಬನಾ ದೇತಾ ಹೈ. (ಎಸ್ಸುವವನು ಇದನ್ನು ಉದ್ದ ಕಡ್ಡಿಗಳ ಮೇಲೆ ಸುತ್ತಿ ತೆಳ್ಳನ್ನ ಉಂಡೆಗಳನ್ನು ಮಾಡುತ್ತಾನೆ.) ಫಿರ ಬುಢಿಯಾಕೋ ಕಾತನೇಕೋ ದೇತಾ ಹೈ. (ಮತ್ತು ಮುದುಕಿಗೆ ನೂಲಲು ಕೊಡುತ್ತಾನೆ.) ಅಬ ಬುಢಿಯಾ

(೫ನೇ ಪುಟದ ಮೇಲೆ ಮುಂದರಿಸಿದೆ.)

ಸದಾಶಿವಗಡ, ಹೋದಿಬಾಗ	೪—೭—೩	೦—೨—೩	೦—೩—೬
ಕದ್ರ	೪—೬—೯	೦—೨—೩	೦—೩—೬
ಕುಮಟಾ, ಉಪ್ಪಿನಪಟ್ಟಣ	೪—೭—೬	೦—೨—೩	೦—೩—೬
ಹೊನ್ನಾವರ	೪—೭—೩	೦—೨—೩	೦—೩—೬
ಭಟಕಳ	೪—೮—೦	೦—೨—೩	೦—೩—೬
ವೆಂಕಟಾಪುರ	೪—೭—೦	೦—೨—೩	೦—೩—೬
ಶಿರಾಲಿ	೪—೭—೩	೦—೨—೩	೦—೩—೬
ಮುರ್ಡೇಶ್ವರ	೪—೭—೯	೦—೨—೩	೦—೩—೬
ಸಿದ್ದಾಪುರ	೫—೬—೯	೦—೨—೯	೦—೪—೦
ಶಿರ್ಸಿ	೫—೦—೩	೦—೨—೬	೦—೪—೦
ಯಲ್ಲಾಪುರ	೫—೧—೯	೦—೨—೯	೦—೪—೦
ಮುಂಡಗೋಡ	೪—೧೫—೦	೦—೨—೬	೦—೩—೯
ಹಳಿಯಾಳ	೪—೧೨—೦	೦—೨—೬	೦—೩—೯
ಸುಪಾ	೫—೧೨—೦	೦—೩—೦	೦—೪—೩

F. N. RANA,

ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ.

ಒದಗಿಸಿ ಕೊಡಬೇ[illegible] ಕಾರ ಸೂಚಿಸಿರುತ್ತೇನೆ। ಒಟ್ಟು [illegible]ದ ಧಣ್ಯ ಕಂದರೂ ಇದು ಹಸಿವೆಯಿಂದ [illegible] [illegible] ಅಲ್ಲದೆ [illegible] ರೈತರ [illegible] ಆಳುಗಳಿಗೆ ಬೇಲ [illegible] ಕಲ್ಲುತ್ತದೆ ದಿನ ದಿನಕ್ಕೆ ಅವರಿಗೆ [illegible] ಆದರೂ ಅವರಿಗೆ ಸಂತೋಷವಿಲ್ಲ ಆಳತೆಯಲ್ಲಿ [illegible] ಯಂತೂ ಇದ್ದೇ ಇದೆ ಮೇಲಿಂದ ಹೆದರಿಸಿ ದಣಿಸುತ್ತಾರೆ। ಭತ ಕಂದಾಯ [illegible] ಇನಾಮು (ಬಂಚ) ಕೊಟ್ಟರೆ [illegible] ಇಲ್ಲದಿದ್ದರೆ [illegible] ದಿನ ದಿನಕ್ಕೆ [illegible] ಗುವದೆಂದೂ ದೂರದೂರದಿಂದ ಬಂದ ಹಳ್ಳಿಗರಿಗೆ ಉಗ್ರಾಣದ ದರೂ ಆಳುಗಳೂ ಹೆದರಿಸಿ ಸುಲಿಯುತ್ತಾರೆ ಮಾಮಲೇದಾರರು ಈ ದೂರುಗಳನ್ನು ಪರಾಂಬರಿಸಿದರೆ ಮಾತ್ರ ಏನ ದರೊಂದು ಪರಿಹಾರ ಸಿಗುತ್ತದೆ ಯಲ್ಲಾಪುರದಂಥ ಮಾಮಲೇದಾರರಿದ್ದರೆ ಈ ಪೀಡನೆಗೆ ಪುಟ ದೊರಕಿ ಬಹಳ ಕಷ್ಟ ಒದಗುತ್ತದೆ ಈ [illegible]

[illegible] ಇದ್ದು ಹಿಡಿದು ಇಲ್ಲಕಂಡಿಟ್ಟದ್ದಾರೆ [illegible] ಸಾಮಾಧಾನ [illegible] ಕಾಂಗ್ರೆಸ ಕಾರ್ಯಕರ್ತರಿಗೇ [illegible] ಗಿರಿಯಾಗಿ ಇಲ್ಲಿಯ [illegible] ತಿಳಿಸುತ್ತ

ಹೊನ್ನಾವರ— (ತಾ ೨೪-೧-೪೬) ಸಿಂಧ ಅಂಗಡಿಗಳಲ್ಲಿ ಈಗ ಗೋದಿಯು ದರ ೩ ಆಣೆ ಹೆಚ್ಚಿಗೆ [illegible] ರಕ್ಕೆ ಮಾಯಲಿ ದರಂತೆ ಮಾರುತ್ತಾರೆ

[illegible] ಜಾತ್ರೆ ಕಳೆದ ತಾ [illegible] ಕ್ಕೆ ಜರುಗಿತು ಮೂರ ದಿನದಿಂದ ಒಂದು ವಾರದ ವರೆಗೆ ಗಡಗಡೆ ಆಟವೂ ಕೋಳಿ ಜೂಜುಗಳೂ ರಭಸದಿಂದ ನಡೆದವು ಸರಾಯಿಯ ವ್ಯಾಪಾರ ಬಹಳ ನಡೆಯಿತು ಜಾತ್ರೆಯ ಕಾಲಕ್ಕೆ ಇಟ್ಟ ಹಣ [illegible] ಪೇಟೆಗಳೂ ಹಾಕಿದ್ದರು'

(ತಾ ೨೪-೧-೪೬) ಇಲ್ಲಿಯ ದತ್ತ [illegible] ನ [illegible] ವೇರಿದವ್ಪನೆ ಅಗ್ರಹಾರದೊಳಗೆ ರಥೋತ್ಸವ ನಡೆ

(ಪುರವಣಿಯ ಪೇಜಿ ಮುಂದರಿಸಿದೆ)

ಕುಮಟಾ ಸಿವ್ಹಿಲ್ ಕೋರ್ಟಿನಲ್ಲಿ

ಸ್ಪೆಶಲ ಕೇಸ ನಂಬರ ೮ ೧೯೪೫

ದಾವೆಯು[illegible] ನೋಟೀಸ [illegible]

(ಅ [illegible] ನಂಬರುಗಳು ೧-೩)

(೧) ಅಪ್ಪಯ್ಯ [illegible] ವರ್ಷ ೧೪ } ಬಿನ್ ವೆಂಕಟೇಶ ಶಾನಭಾಗ ಚಿತ್ರಾಲ

(೨) [illegible] ಆನಂದ " " ೮ }

(೩) ದೇವಕಿ ಕೋಂ ವೆಂಕಟೇಶ ಶಾನಭಾಗ ಚಿತ್ರಾಲ ವ್ಯಾಯ ೩೬ ಎಲ್ಲರೂ } ವಾದಿರು

ಗೌಡ ಸಾರಸ್ವತರು ಸಾ ಮನೇಹ[illegible] ತಾ। ಕುಮಟಾ [illegible] ರಕ್ಷಕ

ಅಂಕೋಲಿ— ತಾ [illegible] ೨-೪೬ [illegible] ಅಂಕೋಲೆಯ [illegible] ಶಾಲೆಗಳ [illegible] ಹಾಗೂ [illegible] ಬೆಳೆಸಿದರು, [illegible] ಶಿಕ್ಷಕರ [illegible] ಬೇಡಿಕೆಗಳನ್ನು [illegible] ಶಿಕ್ಷಕರ ದಿನ [illegible] ದರು ಮುಂಜಾನೆ ಇಲ್ಲಿ ಮೆರವಣಿಗೆ ಪ್ರಾರ್ಥನೆಗಳ ದವು. ಸಂಜೆಯಲ್ಲಿ ಬಂಕ [illegible] ದೀಕ್ಷಿತರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಸಭೆಯಾಗಿ ಶಿಕ್ಷಕರ ಆಂದೋಲನಕ್ಕೆ ಬೆಂಬಲ ಕೊಡುವ ಗೊತ್ತುವಳಿಯಾಯಿತು [illegible] ಗೇರ ಶಾಲೆಯವರು [illegible] ವರು ಈ ಹೊತ್ತು ಇಲ್ಲಿಯ ನಗರದವರು [illegible] ಎಸ್ ನಾಡಕರ್ಣಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರಾಥಮಿಕ ಶಿಕ್ಷಕರನ್ನು ಸಂತೈಸಿ ಅವರು ಸಂಪು ಮಾಡುವದನ್ನು ತಪ್ಪಿಸಬೇಕೆಂದು ಸರಕಾರಕ್ಕೆ ಆಗ್ರಹ ಮಾಡುವ ಠರಾವು ಮಾಡಿದ್ದಾರೆ

ಕಳೆದ ತಾ ೧೬ಕ್ಕೆ ಇಲ್ಲಿ [illegible] ಸ್ವಯಂಸೇವಕ ದಳದ ಶಿಬಿರ [illegible] ಯಾಯಿತು [illegible] ದವರು ಸ್ವಯಂಸೇವಕರಾಗಿ ದುಡಿದು ಎಲ್ಲ [illegible] ಕಾಂಗ್ರೆಸ ಕಾರ್ಯಕರ್ತರಿಗೆ ಸಿಗುವಂತೆ ಮಾಡಬೇಕೆಂದು [illegible] ಸಂಘಟಿತ [illegible] ಕಾರರೂ ಬೋಧಿಸಿದರು

ನಮ್ಮಲ್ಲಿ (ವ್ಹೋಲಸೇಲ) ರೀಟೇಲ (ರಿಟೇಲ) ದಲ್ಲಿ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ ಎಮ್ ಮಿಜಾರನಕರ,
ಲಾಯಸನ್ಸ ಮೋಟರ ಸ್ಟೆಂಡ ಕುಮಟಾ.

ದಿ ಕೊಮರ್ಶಿಯಲ್ ಕೊಪೋರೇಶನ್,
ಕುಮಟಾ
ನಮ್ಮಲ್ಲಿ ಒ ಸೆಲ್ ವಿ ಕ್ಸ್ ಕಂಪನಿಯ
ಎಲ್ಲ ತರದ ಪಂಪು ಯೋಗ್ಯ ದರದಿಂದ ಸಿಗುತ್ತದೆ
ವಿ ಎಮ್ ಮಿಜಾರನಕರ,
ಮೋಟರ ಸ್ಟೆಂಡ, ಕುಮಟಾ

[illegible] ಪ್ರಾಥಮಿಕ ಶಿಕ್ಷಕರಿಗೆ [illegible] ಶಿಕ್ಷಕರ [illegible] ಶಿಕ್ಷಕರ [illegible] ಶಿಕ್ಷಕರು ಬರೆಯುತ್ತಾರೆ

ಹಳಿಯಾಳ— (ತಾ ೨೨-೧-೪೬) ಇಲ್ಲೂ ತಾ [illegible] ಕ್ಕೆ ಶಿಕ್ಷಕ ದಿನದ ಆಚರಣೆಯಾಯಿತು ಸಂಜೆ ಪೇಟೆಯಲ್ಲಿ [illegible] ಸಿಂಗ ರಜಪೂತ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ಶಿಕ್ಷಕರ ಬೇಡಿಕೆಗೆ ಬೆಂಬಲ ಕೊಡುವ ಠೀರ್ಮಾನವಾಯಿತು

— ಮುಂಬಯಿಯಲ್ಲಿ ನೌಕಾ ಸೈನಿಕರ ಸಂಬಳವನ್ನೇರಿಸಬೇಕೆಂದು ಮಾಡಿದ ಪ್ರಯತ್ನ ವಿಫಲವಾದ್ದರಿಂದ ಸೋಮವಾರದಿಂದ [illegible] ಸೈನಿಕರು [illegible] ಎಂಬುವದು ಅಶಕ್ಯವೆಂದು ಹೇಳುತ್ತಾರೆ ಸುಮಾರು ೧೨೦೦೦ ಜನರು ಈ ದೊಂಬಿಯಲ್ಲಿ ಸೇರಿದ್ದಾರೆ. ಬ್ರಿಟಿಶ ಸರಕಾರವು ಬ್ರಿಟಿಶನಾವಿಕರಿದ್ದ ಯುದ್ಧ ಹಡಗಗಳನ್ನು ಕಳಿಸಿ ದೊಂಬಿ ಮುರಿಯಲೆತ್ನಿಸಿದೆ ರಾಷ್ಟ್ರೀಯ ಸಭೆಯವರ ಮಧ್ಯಸ್ಥಿಕೆಯಿಂದ ದೊಂಬಿ ಶಾಂತವಾಯಿತೆಂದು ಎಣಿಸಲಿಟ್ಟಿತ್ತು ಆದರೆ ಸಮಾಧಾನವಾಗದೆ ದೊಂಬಿ ಯಥಾ ಪ್ರಕಾರ ನಡೆದಿದೆ ಇಷ್ಟ್ರತ್ತಿಗೆ ೨೧೦ ಜನರು ಸತ್ತರೆಂದೂ ೧೨೦೦ ಜನರು ಗಾಯಗೊಂಡರೆಂದೂ ತಿಳಿಯುತ್ತದೆ

ಮುಂಬಯಿ ಲೆಜಿಸ್ಲೇಟಿವ್ಹ ಜನರಲ್ ಮತದಾರರಲ್ಲಿ ಬಿನ್ನಹ.

ದೊಡ್ಡ ದೊಡ್ಡ ಜಮೀನುದಾರಿ ಬಂಡವಾಳಶಾಹಿಗಳನ್ನು ಬಗ್ಗುಬಡಿದು ಜಮೀನು ಕೊಡಿಸ್ಸು [illegible]ಗಳನ್ನು ಒಕ್ಕಟ್ಟು ಮಾಡಿ ಜನತೆಯ ಸರ್ವಸಾಮಾನ್ಯ ಹಕ್ಕು ಅಧಿಕ ಕೋಟಿಗರ ಸಂಪೂರ್ಣ ಹಿತ, ಬಡ ರೈತರ ಯಾವತ್ತೂ ಕಷ್ಟಗಳ ಪರಿಹಾರ ಹರಿಜನ ಬಾಂಧವರ ಹಿತ ಇಂಡಿಯನ್ ಕ್ರಿಶ್ಚನ್ ಸಾಮುದಾಯ, ಗಾಮವಕ್ಕಲ ಕೊಂಕಣಿ ಮರಾಠಿ [illegible] ಬಾಂಧವರ ಹಿತ ರೈತ ಸಂಘ ದೇಸಾಯಿ ಸಂಘ ಕಲಾ ಪ್ರೋತ್ಸಾಹ ಯಕ್ಷಗಾನ ದಶಾವತಾರ, ಸಂಗೀತ ಭರತ ನಾಟ್ಯ ನೃತ್ಯ ಮುಂತಾದ ಸಂಘಗಳ ಅಂಥ ಸಂಘಗಳ ಘಟನೆಗೆ ಸರಕಾರದ ಸಹಾಯ ಪಡೆಯಲು ಬ್ರಿಟಿಷ ಸರಕಾರದ ವಿರುದ್ಧ ಹೋರಾಡುವದಕ್ಕಾಗಿಯೂ ಜನತಾ ಸ್ವಾತಂತ್ರ್ಯದ ಸಂಗ್ರಾಮಕ್ಕಾಗಿ ಜೀವನದ ಹಂಗು ದೊರೆದು ಕಾದಾಡಲು ವೀರ ಪ್ರತಿಜ್ಞೆ ಮಾಡಿ ಈ ವರೆಗೆ ನನಗೆ ಭೆಟ್ಟಿಯಾಗಿರುವ ಮೇಲ್ಕಾಣಿಸಿದ ಸಂಘ ಪಕ್ಷ ಪಂಗಡಗಳ ಮುಖಂಡರ ಪ್ರೇರಣೆಯಿಂದ ಅವರವರ ಒಗ್ಗೆ ನನ್ನ ತನು ಮನ ಧನದಿಂದ ಕಾದಾಡುವ ನಿಶ್ಚಿತ ಗುರಿಯನ್ನು ಸಾಧಿಸುವದಕ್ಕಾಗಿ ನಾನು ಒಂದು ಉಮೇದವಾರನಾಗಿ ನಿಂತಿದ್ದೇನೆ ನಿಮ್ಮ ಬಗ್ಗೆ ಇಂದೇ ನನ್ನ ಜೀವನಸರ್ವಸ್ವವನ್ನು ಧಾರೆಯೆರೆದು ನಿಮ್ಮ ಸೇವೆಯೇ ನನ್ನ ಜೀವನದ ಧ್ಯೇಯ ಎಂದು ವೀರ ಪ್ರತಿಜ್ಞೆ ಮಾಡಿ ಆಶ್ವಾಸನೆ ಕೊಡುತ್ತೇನೆ

ಹಿಂದೀ ಜನಾಂಗದ ಮುಖ್ಯ ಧ್ಯೇಯವಾದ ಜನತಾ ಸ್ವಾತಂತ್ರ್ಯ ಸಂಗ್ರಾಮ ವಲ್ಲಿ ನಮ್ಮ ಜಿಲ್ಲೆಯ ಮೊದಲನೇ ಆಹುತಿ ನನ್ನದೇ ಆಗಲೆಂದು ದೇವರನ್ನು ಪ್ರಾರ್ಥಿಸುತ್ತೇನೆ

ಜನತಾ ಸ್ವಾತಂತ್ರ್ಯವೇ (ಪ್ರಜಾ ದ ಲೋಕನಿಯಂತ್ರಿತ ಸ್ವರಾಜ್ಯವೆ) ನಮ್ಮ ಧ್ಯೇಯವೆನ್ನುವವರು ಮೇಲ್ಕಾಣಿಸಿದ ಸಂಸ್ಥೆ ಪಕ್ಷ ಪಂಗಡದವರು ನಿಮ್ಮ ಹಿತವನ್ನು ನನ್ನ ಕೈಯಿಂದ ಮಾಡಿಸಿಕೊಳ್ಳುವದಕ್ಕಾಗಿ ನಿಮಗಿರುವ ಎಲ್ಲಾ ಮತಗಳನ್ನು ನನಗೇ ದಾನ ಮಾಡಬೇಕಾಗಿ ಅತ್ಯಂತ ನಮ್ರನಾಗಿ ಪ್ರಾರ್ಥಿಸುತ್ತೇನೆ

ನೇಗಿಲ ಗುರ್ತು ಇರುವ ಒಂದನೇ ನಂಬರಿನ ಚೌಕದಲ್ಲಿ ಯಾವದೇ ಗೆರೆಗಳಿಗೆ ತಾಗದಂತೆ × × ×
ಹೀಗೆ ಮೂರು ಗುರುತುಗಳನ್ನು ಹಾಕಿರಿ

ಇತಿ ನಿಮ್ಮ ಸೇವಕ

ಗಣಪತಿ ಶ್ರೀಧರ ಹೆಗಡೆ, ವಕೀಲ ಕುಮಟಾ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯ [illegible] "ಸ್ವರಾಜ್ಯ ಕೆನರಾ ಪ್ರೆಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ದಂತೆ ಇಲ್ಲೂ ಆ ದಿನವಾಚರಿಸಲ್ಪಟ್ಟಿತು ಅಂಗಡಿಕಾರರು ಹರತಾಳ ಮಾಡಿದರು ಮಧ್ಯಾಹ್ನದ ಮೆರವಣಿಗೆಯೂ ನಡೆಯಿತು. ವಿದ್ಯಾರ್ಥಿಗಳ, ಶಿಕ್ಷಕರು ಮತ್ತು ನಾಗರಿಕರು ಇವರ ಮೆರವಣಿಗೆಗಳು ದವು. ಸಂಜೆಯ ಹೊತ್ತಿಗೆ ಗಾಂಧಿ ಚೌಕದಲ್ಲಿ ಸಾರ್ವಜನಿಕ ಸಭೆಯಾಯಿತು

ಮುಂಬಯಿ ಸ್ಟೀಮ ನೇವಿಗೇಶನ್ ಕಂಪನಿಯ ಸೇಂಟ ಎಂಥೋನಿ [illegible] ಮಧ್ಯಾಹ್ನ ಮುಂಬಯಿ [illegible] ಸಂಜೆ [illegible] ಬರುವದಂತೆ ಈ ಹಡಗ [illegible] ಮುಂಬಯಿ ವೆಂಗುರ್ಲಾ ಕಾರವಾರ, ಕುಮಟಾ ಭಟಕಳ ಮತ್ತು [illegible] ಈ ಬಂದರಗಳನ್ನು [illegible] ಮಾಡುವದು

ಉಪ್ಪಿನಪಟ್ಟಣದ ಹತ್ತಿರ ಬರಗದ್ದೆಯಲ್ಲಿ ಕೆಲವು ದಿನಗಳಿಂದ ಒಂದು ಹುಲಿಯು ಬಹಳ ಹಾವಳಿ ಹಾಕುತ್ತಿತ್ತು [illegible] ದನಗಳನ್ನು ಅದು ಮುರಿದಿದೆಯಂತೆ ಅಲ್ಲಿಯ ರೈತರು ಇಲ್ಲಿಂದ ಹುಲಿ ಪಂಜರವನ್ನೊಯ್ದು ಕಳೆದ

ಕಾನಡಾ ಜಿಲ್ಲೆಯ ಮುಸಲ್ಮಾನ ಮತದಾರರಲ್ಲಿ ವಿಜ್ಞಾಪನೆ.

ಮಿ॥ ಶಮಸುದ್ದೀನ ಹುಸೇನ ಜುಕಾಕು, ಬಿ ಎ, ಎಲ್‌ಎಲ್ ಬಿ ವಕೀಲ, ಇವರು ನಮ್ಮ ಜಿಲ್ಲೆಯ ವತಿಯಿಂದ ಮುಸ್ಲಿಮ್ ಲೀಗದ ಪರವಾಗಿ ಮುಂಬಯಿ ಲಜಿಸ್ಲೇಟಿವ್ಹ ಎಸೆಂಬ್ಲಿಯ ಚುನಾವಣೆಗೆ ಹುರಿಯಾಳಾಗಿ ನಿಲ್ಲಿಸಲ್ಪಟ್ಟಿದ್ದಾರೆ ಲೀಗಿನ ತರ್ಫೆನಿಂದ ಇನ್ನಾರಿಗೂ ನೇಮಿಸಿರುವದಿಲ್ಲ ಎಲ್ಲ ಮುಸ್ಲಿಮ ಬಂಧುಗಳು ತಮ್ಮ ಮತಗಳನ್ನು ಮಿ॥ ಜುಕಾಕು ಇವರಿಗೇ ಕೊಟ್ಟು ಲೀಗಿನ ಬಗ್ಗೆ ತಮಗಿರುವ ಭಕ್ತಿಯನ್ನೂ ನಿಷ್ಠೆಯನ್ನೂ ಪ್ರದರ್ಶಿಸಬೇಕಾಗಿ ಅರಿಕೆಯಿದೆ. ಮತಪತ್ರಿಕೆಯಲ್ಲಿ ಮಿ॥ ಜುಕಾಕು ಇವರ ಗುರುತು ಛತ್ರಿ (ಕೊಡೆ)ಯಾಗಿರುತ್ತದೆ ಅಂಕೋಲಾ, ತಾ ೨೩-೨-೪೬

ಸಯ್ಯದ ಮೋಹೆದ್ದೀನ ಪಾಶಾ ಪೀರಜಾದೆ ಬಿ ಎ, ಎಲ್‌ಎಲ್ ಬಿ,
ಅಧ್ಯಕ್ಷ ಕಾನಡಾ ಜಿಲ್ಲಾ ಮುಸ್ಲಿಮ ಲೀಗ

ಹಿಂದುಸ್ಥಾನಿ ಪಾಠಗಳು

ಸಬಕ ಬೀಸ (ಪಾಠ ೨೦)

ಕಪಡೇಕೀ ಕಹಾನೀ (ಬಟ್ಟೆಯ ಕಥೆ)

ಯಹ ಕಪಡಾ ಹೈ (ಇದು ಬಟ್ಟೆ) ಯಹ ಹಮಾರೇ ಶರೀರಕೋ ಢಕತಾ ಹೈ ಔರ ಸರ್ದೀ ಔರ ಗರಮೀಸೇ ಬಚಾತಾ ಹೈ (ಇದು ನಮ್ಮ ಶರೀರವನ್ನು ಮುಚ್ಚುತ್ತದೆ, ಮತ್ತು ಚಳಿ ಹಾಗೂ ಉಷ್ಣತೆಗಳಿಂದ ಕಾಪಾಡುತ್ತದೆ.) ಜಾನತೇ ಹೋ ಉಸಕೀ ಕ್ಯಾ ಕಹಾನೀ ಹೈ ? (ನೀವು ಬಲ್ಲಿರಾ ಅದರ ಕಥೆ ಏನುಂಟೆಂದು ?) ಕಿಸಾನ ಅಪನೇ ಖೇತಮೇಂ ಏಕ ಪೌಧಾ ಪೈದಾ ಕರತಾ ಹೈ (ಒಕ್ಕಲಿಗನು ತನ್ನ ಹೊಲದಲ್ಲಿ ಒಂದು ಸಸಿಯನ್ನು ಬೆಳಸುತ್ತಾನೆ) ಉಸಮೇಂ ಪೀಲಾ ಫೂಲ ಆತಾ ಹೈ, (ಅದಕ್ಕೆ ಒಂದು ಹಳದಿ ಬಣ್ಣದ ಹೂವು ಬರುತ್ತದೆ,) ಔರ ಏಕ ಗೋಲ ಫಲ ನಿಕಲತಾ ಹೈ (ಮತ್ತು ಒಂದು ಗುಂಡನ್ನ ಫಲ ಹೊರಡುತ್ತದೆ) ಉಸಪರ ಧೂಪಕೀ ಗರಮೀ ಪಡತೀ ಹೈ (ಅದರ ಮೇಲೆ ಬಿಸಿಲಿನ ಉಷ್ಣತೆ ಬೀಳುತ್ತದೆ) ವಹ ಪಕ ಜಾತಾ ಹೈ (ಅದು ಹಣ್ಣಾಗುತ್ತದೆ) ಔರ ಫಟ ಜಾತಾ ಹೈ (ಮತ್ತು ಅದು ಒಡೆಯುತ್ತದೆ) ಉಸಮೇಂಸೆ ಏಕ ಬಚ್ಚಾ ಪೈದಾ ಹೋತಾ ಹೈ (ಅದರೊಳಗಿಂದ ಒಂದು ಮಗು ಹುಟ್ಟುತ್ತದೆ) ಭೇಡಕೇ ಶರೀರಪರ ಜೈಸೇ ಊನ ಹೋತೀ ಹೈ ಉಸೀ ತರಹ ಇಸಮೇಂ ಭೀ ಊನ ಹೋತೀ ಹೈ (ಕುರಿಯ ಶರೀರದ ಮೇಲೆ ಹೇಗೆ ಉಣ್ಣೆ ಇರುತ್ತದೋ ಅದೇ ರೀತಿ ಇದರಲ್ಲಿಯೂ ಉಣ್ಣೆ ಇರುತ್ತದೆ) ಯಹ ಭೇಡ ಕೀ ಊನಸೇ ಭೀ ಮುಲಾಯಮ ಹೋತೀ ಹೈ (ಇದು ಕುರಿಯ ಉಣ್ಣೆಗಿಂತ ಮೃದು ಇರುತ್ತದೆ) ಕಿಸಾನ ಜಬ ಇಸ ಬಚ್ಚೇಕೋ ಪೌಧೇಪರ ಹಂಸತಾ ಖೇಲತಾ ದೇಖತಾ ಹೈ ತೋ ಬಡಾ ಖುಶ ಹೋತಾ ಹೈ (ಒಕ್ಕಲಿಗನು ಯಾವಾಗ ಆ ಮಗುವು ಗಿಡದ ಮೇಲೆ ನಗುತ್ತ ನಲಿಯುತ್ತಿರುವದನ್ನು ನೋಡುತ್ತಾನೋ ಆಗ ಅತಿ ಬಹಳ ಆನಂದಪಡುತ್ತಾನೆ) ವಹ ಅಪನೇ ಲಡಕೇ ಔರ ಲಡಕಿಯೋಂಕೋ ಭೇಜ ದೇತಾ ಹೈ ಕಿ ಉಸ ನಯೇ ಬಚ್ಚೇಕೋ ಘರ ಲಾವೋಂ (ಆಗ ಅವನು ತನ್ನ ಹುಡುಗರಿಗೂ ಹುಡುಗಿಯರಿಗೂ ಕಳಿಸಿ ಕೊಡುತ್ತಾನೆ ಆ ಹೊಸ ಮಗುವನ್ನು ಮನೆಗೆ ತನ್ನಿ ಎಂದು) ಲಡಕೇ ಲಡಕಿಯಾಂ ಬಡೇ ಚಾವಸೇ ಝೋಲಿಯೋಂಮೇಂ ರಖಕರ ಉಸೇ ಘರ ಲಾತೇ ಹೈಂ. (ಹುಡುಗ ಹುಡುಗಿಯರು ಬಹಳ ಪ್ರೇಮದಿಂದ ಜೋಳಿಗೆಯಲ್ಲಿಟ್ಟು ಅವನನ್ನು ಮನೆಗೆ ಒಯ್ಯುತ್ತಾರೆ) ಘರಕೀ ಬುಢಿಯಾ ಉಸೇ ಟಟೋಲತೀ ಹೈ (ಮನೆಯ ಮುದುಕಿಯು ಅದನ್ನು ಬಿಡಿಸುತ್ತಾಳೆ) ಉಸಮೇಂ ಬೀಜ ಜ್ಯಾದಾ ಹೈ (ಅದರಲ್ಲಿ ಬೀಜ ಹೆಚ್ಚಿಗೆ ಇದೆ) ಉಸೇ ಧೂಪ ದಿಖಾತೀ ಹೈ ಔರ ಏಕ ಚರಖೇಮೇಂ ಓಟತೀ ಹೈ (ಅದನ್ನು ಬಿಸಿಲಲ್ಲಿ ಹಾಕುತ್ತಾಳೆ ಮತ್ತು ಒಂದು ರಾಟಿಯಲ್ಲಿ ಹಿಂಡುತ್ತಾಳೆ) ಸಬ ರೇಶೋಂಸೇ ಬೀಜ ಅಲಗ ಹೋ ಜಾತಾ ಹೈ (ಆಗ ಹತ್ತಿಯಿಂದ ಬೀಜ ಬೇರೆಯಾಗುತ್ತದೆ) ಪಹಲೇ ಇಸೇ ಕಪಾಸ ಕಹತೇ ಥೇ (ಮುಂಚೆ ಇದಕ್ಕೆ ಹತ್ತಿ ಎನ್ನುತ್ತಿದ್ದರು) ಅಬ ಇಸೇ ನಯಾ ನಾಮ ದೇತೇ ಹೈಂ— ರೂಈ ! (ಈಗ ಇದಕ್ಕೆ ಹೊಸ ಹೆಸರು ಕೊಡುತ್ತಾರೆ ಅದು ಹತ್ತಿಯೆಂದು !) ದೇಹಾತಮೇಂ ಬಂಗಾಲಾ ಕಹತೇ ಹೈಂ (ಹಳ್ಳಿಗರು ಹತ್ತಿಕಾಯಿ ಎನ್ನುತ್ತಾರೆ)

ಸಬಕ ಇಕ್ಕೀಸ (ಪಾಠ ೨೧)

ಕಪಡೇಕೀ ಕಹಾನೀ ೨ (ಬಟ್ಟೆಯ ಕಥೆ ೨)

ಬುಢಿಯಾ ಉಸ ರೂಈಕೋ ಬಡಾ ಪ್ಯಾರ ಕರತೀ ಹೈ (ಮುದುಕಿ ಆ ಹತ್ತಿಯನ್ನು ಬಹಳ ಪ್ರೀತಿಸುತ್ತಾಳೆ) ಉಸಕೋ ಸಾಫ ಕರತೀ ಹೈ (ಅದನ್ನು ಸ್ವಚ್ಛಗೊಳಿಸುತ್ತಾಳೆ) ಫಿರ ಧುನಕರಕೋ ದೇತೀ ಹೈ (ಮತ್ತು ಹತ್ತಿ ಎಕ್ಕುವವನಿಗೆ ಕೊಡುತ್ತಾಳೆ) ಧುನಕರ ಉಸೇ ಖೂಬ ಪೀಂಜತಾ ಹೈ (ಎಕ್ಕುವವನು ಅದನ್ನು ಬಹಳ ಪಿಂಜುತ್ತಾನೆ) ಉಸಕಾ ಏಕ ಧನುಷ ಗಾತಾ ಹೈ — ಟುಕ್ಕ ಟುಕ್ಕ ಠಾಂಯ್ ಠಾಂಯ್, (ಅವನದೊಂದು ಧನುಷ್ಯ ಹಾಡುತ್ತದೆ — ಟುಕ್ಕ ಟುಕ್ಕ, ಠಾಂಯ್ ಠಾಂಯ್,) ಔರ ರೂಈ ಉಸಕೇ ತಾಲಪರ ನಾಚತೀ ಹೈ (ಮತ್ತು ಹತ್ತಿಯು ಅದರ ತಾಳಕ್ಕೆ ಸರಿಯಾಗಿ ಕುಣಿಯುತ್ತದೆ) ನಾಚ ನಾಚಕರ ವಹ ಬಹುತಹೀ ಸುಂದರ ಔರ ಮುಲಾಯಮ ಬನ ಜಾತೀ ಹೈ (ಕುಣಿಕುಣಿದು ಅದು ಬಹಳ ಸುಂದರ ಮತ್ತು ಮೃದುವಾಗುತ್ತದೆ) ಧುನಕರ ಇಸಕೀ ಸೀಂಕೋಂ ಪರ ರಖಕರ ಪೂನಿಯಾಂ ಬನಾ ದೇತಾ ಹೈ (ಎಕ್ಕುವವನು ಇವನ್ನು ಉದ್ದ ಕಡ್ಡಿಗಳ ಮೇಲೆ ಇಟ್ಟು ಚಿಕ್ಕಚಿಕ್ಕ ಪಿಂಡಿಗಳನ್ನು ಮಾಡುತ್ತಾನೆ.) ಫಿರ ಬುಢಿಯಾಕೋ ವಾಪಸ ದೇ ದೇತಾ ಹೈ (ಮತ್ತು ಮುದುಕಿಗೆ ತಿರುಗಿ ಕೊಟ್ಟುಬಿಡುತ್ತಾನೆ) ಅಬ ಬುಢಿಯಾ

(೪ನೇ ಪುಟದ ಮೇಲೆ ಮುಂದರಿಸಿದೆ.)

ಆಜ್ಞೆ.

ನಂ ೪೯೦೫

ಕಾರವಾರ, ತಾ ೫ ೨ ೧೯೪೩

ಹಿಂದುಸ್ಥಾನ ಸಂರಕ್ಷಣ ಕಾನೂನಿನ ೮೧ನೇ ನಿಯಮದ ೨ನೇ ಉಪ-ನಿಯಮವು ಹಾಗೂ ತಾ. ೧೫-೯-೧೯೪೨ರ ಗೃಹ ಖಾತೆ (ಪೊಲಿಟಿಕಲ್ ಯುದ್ಧ) ಯ ಸರಕಾರಿ ಪ್ರಕಟಣೆ ನಂ ಎಸ್ ಡಿ II—೧೩೬೦ ಇವುಗಳನ್ವಯ ಸಿಕ್ಕ ಅಧಿಕಾರವನ್ನು ಹೀಗೆ ಮಾಡಲು ನನಗೆ ದೊರೆತ ಬೇರೆ ಎಲ್ಲ ಅಧಿಕಾರಗಳನ್ನು ಉಪಯೋಗಿಸಿ, ಕಾನಡಾ ಜಿಲ್ಲೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟನು, ಕೆರೋಸಿನ್ ಎಣ್ಣೆಯ ಧಾರಣೆಗಳನ್ನು ನಿರ್ದಿಷ್ಟಗೊಳಿಸಿದ ಈ ಹಿಂದಿನ ಹುಕುಮುಗಳನ್ನೆಲ್ಲ ರದ್ದುಗೊಳಿಸಿ, ಈ ಮೂಲಕ ಹುಕುಮು ಮಾಡುವದೇನಂದರೆ—

(೧) ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದ ೧ನೇ ಸ್ತಂಭದಲ್ಲಿ ಕಾಣಿಸಿರುವ ಸ್ಥಳಗಳಲ್ಲಿ ಅವುಗಳ ಎದುರಿಗೆ ಕಾಣಿಸಿರುವ ಧಾರಣೆಗಳಿಗಿಂತ ಹೆಚ್ಚಿಗೆ ದರದಿಂದ ಸಾರ್ವಜನಿಕರಿಗೆ ಬಿಡಿ ಕೆರೋಸಿನ್ ಎಣ್ಣೆಯನ್ನು ಮಾರಕೂಡದು

(೨) ಯೋಗ್ಯ ಅಧಿಕಾರಿಯು ಕೊಟ್ಟ ಪರವಾನೆ ಚೀಟಿಯನ್ನಾಗಲಿ ಅಧಿಕಾರ ಪತ್ರವನ್ನಾಗಲಿ ತಕ್ಕೊಂಡು ಬಂದು ಮತ್ತು ಮೇಲೆ ಹೇಳಿದ ಧಾರಣೆ ಕೊಡಲೊಪ್ಪಿ ಯಾವದೇ ಮನುಷ್ಯನು ಕೆರೋಸಿನ್ ಎಣ್ಣೆ ಬೇಡಿದಲ್ಲಿ ಅವನಿಗೆ ಎಣ್ಣೆ ಕೊಡುವದಿಲ್ಲೆಂದು ಕೆರೋಸಿನ್ ಎಣ್ಣೆಯ ವ್ಯಾಪಾರಿಗಳು ಹೇಳಕೂಡದು,

(೩) ಇಂಥ ವ್ಯಾಪಾರಿಗಳು ಮೇಲ್ಕಾಣಿಸಿದ ಪರಿಶಿಷ್ಟದ ಒಂದು ಪ್ರತಿಯನ್ನು ತಮ್ಮ ಅಂಗಡಿಗಳ, ಉಗ್ರಾಣಗಳ ಇಲ್ಲವೆ ವ್ಯಾಪಾರ ಮಾಡುವ ಸ್ಥಳಗಳ ಪ್ರಮುಖ ಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಹಚ್ಚತಕ್ಕದ್ದು, ಮತ್ತು

(೪) ಇಂಥ ವ್ಯಾಪಾರಿಗಳು ಸದರಿ ಸರಕನ್ನು (ಎಣ್ಣೆಯನ್ನು) ಕೊಂಡುಕೊಂಡ ಪ್ರತಿಯೊಬ್ಬನಿಗೆ ಅವನು ಬೇಡಿದಲ್ಲಿ ನಗದಿ ಪಾವತಿಯನ್ನು ಇಲ್ಲವೆ ವಿಕ್ರಯದ ಬೇರೆ ಪಾವತಿಯನ್ನು ಕೊಡತಕ್ಕದ್ದು ಹಾಗೂ ಆ ಪಾವತಿ ಪಾಲುಗಳಲ್ಲಿ (i) ಮಾರಿದ ಕೆರೋಸಿನ ಎಣ್ಣೆಯ ಜಾತಿ (ii) ಮಾರಿದ ಎಣ್ಣೆಯ ಪರಿಮಾಣ ಮತ್ತು (iii) ಸದರಿ ಮಾರಾಟದ ಬಗ್ಗೆ ಕೊಂಡುಕೊಂಡ ಬೆಲೆ ವಿವರವಾಗಿ ಹಾಗೂ ಸರಿಯಾಗಿ ತೋರಿಸತಕ್ಕದ್ದು

ಯಾರಾದರೂ ಈ ಆಜ್ಞೆಯೊಳಗಿನ ಯಾವದೇ ಅಂಗವನ್ನು ಉಲ್ಲಂಘಿಸಿದರೆ ಆಗ ಅವನು ಬೇರೆ ಯಾವದೇ ಶಿಕ್ಷೆಗೆ ಪಾತ್ರನಾದರೂ ಅವನ ಅಪರಾಧದ ಚೌಕಶಿ ಮಾಡುವ ನ್ಯಾಯಾಧೀಶರು, ಯಾವ ಕೆರೋಸಿನ್ ಎಣ್ಣೆಯ ಸಂಗ್ರಹದ ಸಂಬಂಧದಲ್ಲಿ ಸದರಿ ಅಪರಾಧವಾಗಿದೆಯೆಂದು ಸದರಿ ನ್ಯಾಯಾಧೀಶರಿಗೆ ಮನವರಿಕೆಯಾಗುವದೋ ಆ ಸಂಗ್ರಹವನ್ನು, ಅದರ ಆವರಣ ಪಾತ್ರೆಗಳ ಸಹಿತ ಸರಕಾರ ಜಪ್ತ ಮಾಡಲು ವಿಧಿಸಬಹುದು

ಇನ್ನೂ ಹುಕುಮು ಮಾಡುವದೇನಂದರೆ —

(೧) ಎಲ್ಲ ಜಾಗೆಗಳ ಕೆಂಪು ಕೆರೋಸಿನ್ ಎಣ್ಣೆಯ ಮಾರಾಟದ ದರವು ೪ ಇಂಪೀರಿಯಲ್ ಗೆಲನಗಳುಳ್ಳ ಪ್ರತಿಯೊಂದು ಡಬ್ಬಿಗೆ (ಬಿಳೆ ಎಣ್ಣೆಯ ದರಕ್ಕಿಂತ) ೩। ಆಣೆ ಕಡಿಮೆಯಿರುತ್ತದೆ ಹಾಗೂ ಪ್ರತಿಯೊಂದು ಕ್ವಾರ್ಟ (೧/೪ ಗೆಲನ)ದ ದರ ೧ ದಿಡ್ಡಿ ಕಡಿಮೆಯಿರುತ್ತದೆ

(೨) ಖಾಲಿ ಡಬ್ಬಿಯ ದರ ೧೨ ಆಣೆ ಎಂದು ತಿಳಿಯತಕ್ಕದ್ದು. ಚಿಲ್ಲರೆ ವ್ಯಾಪಾರಿಗಳೂ ಬೇರೆ ಗಿರಾಕಿಗಳೂ ತಾವು ಕೊಂಡ ಎಣ್ಣೆಯ ಖಾಲಿ ಡಬ್ಬಿಗಳನ್ನು ಈ ದರದಿಂದ ಎಣ್ಣೆಯ ಏಜಂಟರಿಗೆ ಅವರು ಹಾಗೆ ಬೇಡಿದಲ್ಲಿ, ತಿರುಗಿ ಕೊಡಲು ಬದ್ಧರಿರುತ್ತಾರೆ.

(೩) ಕೆರೋಸಿನ್ ಎಣ್ಣೆಯ ಪ್ರತಿಯೊಂದು ಮಾರಾಟದ ಸಂಬಂಧ ಕೊಡಬೇಕಾದ ರಕಮು ಸಮೀಪದ ಪೂರ್ಣ ದಿಡ್ಡಿಗೆ ಪರಿವರ್ತಿಸಲ್ಪಡತಕ್ಕದ್ದು. ಈ ಬಗ್ಗೆ ಕೆಳದಂತೆ ಅರ್ಧ ದಿಡ್ಡಿ ಯಾ ಹೆಚ್ಚಿಗೆ ಬರುವ ಹಣ ಪೂರ್ಣ ದಿಡ್ಡಿಯೆಂದು ತಿಳಿಯಲ್ಪಡಬೇಕು ಅರ್ಧ ದಿಡ್ಡಿಗಿಂತ ಕಡಿಮೆ ಇರುವ ಹಣವನ್ನು ಬಿಟ್ಟುಬಿಡತಕ್ಕದ್ದು

ಹಿಂದುಸ್ಥಾನ ಸಂರಕ್ಷಣ ಕಾನೂನಿನ ೧೧೯ನೇ ನಿಯಮದ ೧ನೇ ಉಪ ನಿಯಮಕ್ಕನುಸಾರವಾಗಿ ಈ ಆಜ್ಞೆಯು ಈ ಕೆಳಗಿನಂತೆ ಪ್ರಕಟಿಸಲ್ಪಡಬೇಕು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರ ಗಿಝೆಟಿನ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸತಕ್ಕದ್ದು,

(ಬ) ಒಂದು ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟನೆಗಾಗಿ ಕೊಡತಕ್ಕದ್ದು —

- (i) ಜನತಾ ವೃತ್ತ ಕುಮಟ (ಕನ್ನಡದಲ್ಲಿ)
- (ii) ವಿಚಾರಿ ಕಾರವಾರ (ಕನ್ನಡದಲ್ಲಿ)

(ಕ) ಆಜ್ಞೆಯ ಇಂಗ್ಲಿಷ ಪ್ರತಿಗಳನ್ನು ಮುಖ್ಯ ಪೋಲೀಸ ಮತ್ತು ರೆವಿ. ಕಚೇರಿಗಳಲ್ಲಿ ಈ ಬಗ್ಗೆ ಇಡಲ್ಪಟ್ಟ ನೋಟೀಸ ಬೋರ್ಡಗಳಿಗೆ ಅಂಟಿಸಬೇಕು

(ಡ) ಆಜ್ಞೆಯ ಕನ್ನಡ ಪ್ರತಿಗಳನ್ನು ಎಲ್ಲ ತಾಲೂಕಾ ಪೇಟೆಗಳಲ್ಲಿರುವ ಕೆರೋಸಿನ ಕಂಪನಿಗಳ ಎಲ್ಲ ಏಜಂಟರಿಗೂ ಎಣ್ಣೆಯ ಠೋಕ ವ್ಯಾಪಾರಿಗಳಿಗೂ ಕಿರಕೋಳ ವ್ಯಾಪಾರಿಗಳಿಗೂ ಪೂರೈಸಬೇಕು

ಪರಿಶಿಷ್ಟ

ಎಲ್ಲ ಮುದ್ರೆಗಳ ಬಿಳೆ ಕೆರೋಸಿನ ಎಣ್ಣೆ

ಪೇಟೆಯ ಹೆಸರು ಇಲ್ಲವೆ ಊರು	೪ ಗೆಲನುಗಳ ಡಬ್ಬಿಗಳಿಗೆ (ಡಬ್ಬಿಸಹಿತ) ನಿರ್ದಿಷ್ಟಗೊಳಿಸಿದ ಠೋಕ ಧಾರಣೆ	೧ನೇ ಸ್ತಂಭದಲ್ಲಿ ಕಾಣಿಸಿದ ಸ್ಥಳಗಳಲ್ಲೂ ಅದರ ಸುತ್ತ ೫ ಮೈಲು ಅಂತರದಲ್ಲಿರುವ ಸ್ಥಳಗಳಲ್ಲೂ ಪ್ಯಾಂಟಿನ ಕಿರಕೋಳ ದರ.	೩ನೇ ಸ್ತಂಭದಲ್ಲಿ ತೋರಿಸಿದ ಸ್ಥಳಗಳ ವಿನಹ ಉಳಿದ ಕಡೆಯಲ್ಲಿ ಪ್ಯಾಂಟಿನ ಕಿರಕೋಳ ದರ
(೧)	( )	(೩)	(೪)
	ರೂ. ಆ. ಪೈ	ರೂ ಆ ಪೈ	ರೂ ಆ ಪೈ
ಕಾರವಾರ ಅಂಕೋಲಾ	೪—೮—೦	೦—೨—೩	೦—೨—೬
ಸದಾಶಿವಗಡ ಕೋಡಿಬಾಗ	೪—೭—೩	೦—೨—೩	೦—೨—೬
ಕದ್ರಾ	೪—೬—೯	೦—೨—೩	೦—೨—೬
ಕುಮಟಾ, ಉಪ್ಪಿನಪಟ್ಟಣ	೪—೭—೬	೦—೨—೩	೦—೨—೬
ಹೊನ್ನಾವರ	೪—೭—೩	೦—೨—೩	೦—೨—೬
ಭಟಕಳ	೪—೮—೦	೦—೨—೩	೦—೨—೬
ವೆಂಕಟಾಪುರ	೪— —೦	೦— ೨—೩	೦— —೬
ಶಿರಾಲಿ	೪—೭—೩	೦— —೩	೦—೨—೬
ಮುರ್ಡೇಶ್ವರ	೪—೭—೯	೦—೨—೩	೦—೨—೬
ಸಿದ್ದಾಪುರ	೫—೬—೯	೦—೨—೯	೦—೩—೦
ಶಿರ್ಸಿ	೫—೦—೩	೦—೨—೬	೦—೩—೦
ಯಲ್ಲಾಪುರ	೫—೧—೯	೦—೨—೯	೦—೩—೦
ಮುಂಡಗೋಡ	೪ ೧೫—೦	೦—೨—೬	೦—೨—೯
ಹಳಿಯಾಳ	೪—೧೨—೦	೦—೨—೬	೦—೨—೯
ಸುಪಾ	೫—೧೨—೦	೦—೩—೦	೦—೩—೩

F. N. RANA.

ಜಿಲ್ಲಾ ಮೆಜಿಸ್ಟ್ರೇಟ ಕಾನಡಾ.

(೩ನೇ ಪುಟದಿಂದ ಮುಂದರಿಸಿದ್ದು.)

ಅಪನೇ ಚರಖೇ ಕೋ ಲೇಕರ ಬೈಠತೀ ಹೈ. (ಈಗ ಮುದುಕಿ ತನ್ನ ರಾಟಿ ತೆಗೆದ್ಕೊಂಡು ಕೂಡ್ರುತ್ತಾಳೆ.) ಪೋನಿಯೋಂಕಾ ಸೂತ ಬನಾತೀ ಹೈ (ಹಂಜಿಗಳ ನೂಲು ಮಾಡುತ್ತಾಳೆ) ಬುಢಿಯಾ ಬಡೇ ಪ್ಯಾರೇ ಸ್ವರಮೇಂ ಗಾತೀ ಹೈ (ಮುದುಕಿ ಒಳ್ಳೇ ಇಂಪಾದ ದನಿಯಿಂದ ಹಾಡುತ್ತಾಳೆ.) " ಚರಖಾ ಚಲಾ ಚಲಾ ಕೇ ಲೇಂಗೇ ಸ್ವರಾಜ್ಯ ಲೇಂಗೇ " (ರಾಟಿಯನ್ನು ತಿರುವಿ ತಿರುವಿ ಗಳಿಸುವೆವು ಸ್ವರಾಜ್ಯವಂ.) ಗಾ ಗಾ ಕರ ವಹ ಸಾರೀ ಪೋನಿಯೋಂಕಾ ಸೂತ ಕಾತ ಡಾಲತೀ ಹೈ (ಹಾಡುತ್ತ ಹಾಡುತ್ತ ಅವಳು ಎಲ್ಲ ಹಂಜಿಗಳ ನೂಲು ನೂತು ಹಾಕುತ್ತಾಳೆ) ಸೂತ ದೂಸರೇ ಏಕ ಆದಮೀಕೋ ದೇತೀ ಹೈ. (ನೂಲನ್ನು ಬೇರೊಬ್ಬ ಮನುಷ್ಯನಿಗೆ ಕೊಡುತ್ತಾಳೆ.) ಉಸೇ ಜುಲಾಹಾ ಯಾ ಬುನಕರ ಕಹತೇ ಹೈಂ. (ಅವನಿಗೆ ನೇಯ್ಗೆಯವನೆಂದು ಕರೆಯುತ್ತಾರೆ.) ಜುಲಾಹಾ ಅಪನೇ ಕರಘೇಪರ ಉಸಕೋ ಬುನತಾ ಹೈ. (ನೇಕಾರನು ತನ್ನ ಮಗ್ಗದಮೇಲೆ ಅವನ್ನು ನೇಯುತ್ತಾನೆ.) ತಬ ಉಸಕೋ ನಯಾ ನಾಮ ಮಿಲತಾ ಹೈ — ಕಪಡಾ. (ಆಗ ಇದಕ್ಕೆ ಹೆಸರು ಸಿಗುತ್ತದೆ - ಬಟ್ಟೆಯೆಂದು) ಇಸ ತರಹ ಉಸಕೀ ಪಾಂಚ ಶಕಲೇಂ ಬದಲತೀ ಹೈಂ, (ಈ ರೀತಿ ಅದಕ್ಕೆ ಐದು ಸಾರೆ ರೂಪ ಬದಲಾವಣೆಯಾಗುತ್ತದೆ;) ಔರ ಪಾಂಚ ನಾಮ ಭೀ ರಖೇ ಜಾತೇ ಹೈಂ (ಮತ್ತು ಐದು ಹೆಸರುಗಳೂ ಇಡಲ್ಪಡುತ್ತವೆ.)

— R —

ಕುಮಟಾ ಸೀಧಾ ಕ್ಷೇತ್ರದೊಳಗಿನ ಹೊಲಗಳನ್ನು ಸಾಗು ಮಾಡುವ ರೈತರು ಮತ್ತು ಜಮೀನದಾರರು ಈ ವರ್ಷ ತಮ್ಮ ಹೊಲಗಳ ಬೆಳೆ ಕೊಯ್ದು ಒಡೆದಾದಮೇಲೆ ತಮಗೆ ಎಷ್ಟು ಧಾನ್ಯ ಬಂತೆಂಬ ಮಾಹಿತಿಯನ್ನು ರೇಶನಿಂಗ ಆಫೀಸರಗೆ ಇದೇ ಬರುವ ಮಾರ್ಚ ತಿಂಗಳ ತಾ. ೧೫ರೊಳಗೆ ತಪ್ಪದೆ ತಿಳಿಸುವದಲ್ಲದೆ, ಮುಂದೆ ಪ್ರತಿ ವರ್ಷ ಮಾರ್ಚ ತಾ. ೧೫ರೊಳಗೆ ಸದರಿಯಂತೆ ತಿಳಿಸಿ ತಮ್ಮ ಸೀಧಾ-ಕಾರ್ಡುಗಳೊಳಗಿನ ಭತ್ತದ ಸೀಧೆಯನ್ನು ರದ್ದು ಪಡಿಸಿಕೊಳ್ಳಬೇಕು ಹಾಗೆ ಮಾಡದೆ ಯಾರಾದರೂ ಮಾರ್ಚ ತಾ. ೧೫ರ ನಂತರ ಬೆಳೆ ಬಡಿಸಿದರೆ ಆ ಭತ್ತವನ್ನು ಅವರು ತಮ್ಮ ಕುಟುಂಬಗಳಿಗಾಗಿ ಉಪಯೋಗಿಸಿಕೊಳ್ಳದೆ ಸರಕಾರಕ್ಕೇ ಮಾರಬೇಕಾಗುವದು ತಾ. ೨೦—೨—೧೯೪೬

R. B. NAIK.
ರೇಶನಿಂಗ ಆಫೀಸರ, ಕುಮಟಾ

[ಟಿಪ್ಪಣಿ— ತಾ. ೨೦-೮-೧೯೪೫ರ " ಕಾನಡಾವೃತ್ತ " ದ ಸಂಚಿಕೆಯಲ್ಲಿ ಕೊಟ್ಟ ತಾ. ೧೬-೮-೧೯೪೫ರ ಪ್ರಕಟನೆಯಲ್ಲಿ ತಿದ್ದುಪಡಿ ಮಾಡಿ ಈ ನೋಟಿನ ಹೊಸ ಪ್ರಕಟನೆ ಹೊರಡಿಸಿದೆ]

ಪಾಲಕರಲ್ಲಿ ವಿನಂತಿ.

ಖಾಸಗಿ ಕಲಿತು ಈ ಶಾಲೆಯ ವಾರ್ಷಿಕ ಪರೀಕ್ಷೆಗೆ ಕೂಡ್ರುವ ಹುಡುಗರು ತಮ್ಮ ಹೆಸರುಗಳನ್ನು ಇದೇ ಮಾರ್ಚ ತಾ. ೨೦ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳಿಸಬೇಕು ಬಾಕಿ ವಿಷಯ ಸಮಕ್ಷಮ ತಿಳಕೊಳ್ಳಬಹುದು

ಶಿರಸಿ ಮ್ಯುನಿಸಿಪಾಲಿಟಿ, } ಹೆಡ್‌ಮಾಸ್ತರ,
ತಾ. ೨೧-೨-೧೯೪೬ } ಶ್ರೀಮಾರಿಕಾಂಬಾ ಹೈಸ್ಕೂಲ

ಜಾಹೀರ ಪ್ರಕಟಣೆ.

ನೀಲಗಿರಿ ಗುಡ್ಡಗಳ ಸುವಾಸಿಕ ಮನೋಹರ ಚಹಾ ವಿಕ್ರಿ ಮಾಡುವ ದಸೆಯಿಂದ ಡೀಲರ್ಸ (Dealers)ರನ್ನು ಕುಮಟಾ, ಹೊನ್ನಾವರ, ಗೋಕರ್ಣ ಮತ್ತು ಅಂಕೋಲಾ ಶಹರಗಳಲ್ಲಿ ನೇಮಕ ಮಾಡುವದಿದೆ.

ಅದ್ದರಿಂದ ಚಹದ ವ್ಯಾಪಾರಸ್ಥರು ಕಂಪನ್ನಿಗಳ ಬಗ್ಗೂ ಇತರ ಶರ್ತುಗಳ ಬಗ್ಗೂ ಕೆಳಗೆ ಸಹಿ ಮಾಡಿದವರ ಕಡೆ ಸಮಕ್ಷ ಇಲ್ಲವೆ ಪತ್ರವ್ಯವಹಾರ ಮಾಡಿ ತಿಳಕೊಳ್ಳುವದು

ಹುಬ್ಬಳ್ಳಿ, **H. A Oosman,**
ತಾ ೧೧-೨-೪೬ Agent.
The Planters Co , Ltd , Nilgiris, Hubli

ಶ್ರೀ ಕೃಷ್ಣ ಹೋಮಿಯೋ ಫಾರ್ಮಸಿ, ಪುಣೆ

ಇವರ ಹೋಮಿಯೋಪಥಿ ವ ಹನ್ನೆರಡು ಕ್ಷಾರ ಔಷಧಗಳು, ಕಂಪನಿಯ ದರದಿಂದ ಕಿರಕೋಳ ವ ರೋಖ ನಮ್ಮಲ್ಲಿ ಸಿಗುತ್ತವೆ ಡಾ॥ ಖಲಸುಳೇಯವರ ಕನ್ನಡ, ಮರಾಠಿ " ಜೀವನ ರಸಾಯನ " ಹಾಗೂ " ಹೋಮಿಯೋ ಚಿಕಿತ್ಸಾ ಶಾಸ್ತ್ರ " ಎಂಬ ಪುಸ್ತಕಗಳೂ ದೊರೆಯುತ್ತವೆ. ಕಾರವಾರ ಜಿಲ್ಲೆಯ ಏಜಂಟರು:—

ಎಸ್. ಜಿ. ಮಹಾಲೇ ಎಂಡ್ ಸನ್ಸ,
ಪ್ರೋ. ಅಂಕೋಲಾ

ಆಜ್ಞೆ.

ಕಾರವಾರ,
ತಾ. ೧೨-೨-೧೯೪೬.

ಹಿಂದುಸ್ಥಾನ-ಸಂರಕ್ಷಣ ಕಾನೂನಿನ ೮೧ನೇ ನಿಯಮದ ೨ನೇ ಉಪ ನಿಯಮ ಹಾಗೂ ತಾ. ೧೫-೯-೧೯೪೪ರ ಗೃಹಖಾತೆ (ಪೊಲಿಟಿಕಲ್ ಯಾರ್ಡ್)ಯ ಸರಕಾರಿ ಪ್ರಕಟನೆ ನಂ. ಎಸ್. ಡಿ II-೧೩೬೦ ಇವುಗಳನ್ವಯ ಸಿಕ್ಕ ಅಧಿಕಾರವನ್ನೂ ಹೀಗೆ ಮಾಡಲು ತಮಗಿರುವ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ, ಕಾನಡಾ ಜಿಲ್ಲೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಈ ಮೂಲಕ ಹುಕುಮ **ಮಾಡುತ್ತಾರೇನಂದರೆ**:—

(೧) ತಾ. ೨೦-೨-೧೯೪೬ರಿಂದ ಮುಂದೆ ಕಾನಡಾ ಜಿಲ್ಲೆಯೊಳಗಿನ ಯಾವದೇ ವ್ಯಾಪಾರಿಯಾಗಲಿ ವ್ಯಕ್ತಿಯಾಗಲಿ—

(ಅ) ಕೊಲ್ಹಾಪುರ ಸಂಸ್ಥಾನದಿಂದ ಇಲ್ಲವೆ ದಕ್ಷಿಣೀ (ಡೆಕ್ಕನ) ಜಿಲ್ಹೆಗಳಿಂದ ಆಮದು ಮಾಡಿದ ಬೆಲ್ಲವನ್ನು, ಇದಕ್ಕೆ ಜೋಡಿಸಿದ ಪರಿಶಿಷ್ಟದಲ್ಲಿ ತೋರಿಸುವ ದರಗಳಿಗಿಂತ ಹೆಚ್ಚಿಗೆ ದರ ತೆಗೆದ್ಕೊಂಡು ಮಾರಕೂಡದು ಇಲ್ಲವೆ ಮಾರಿಸಕೂಡದು,

(ಬ) ಹಿಂದುಸ್ಥಾನ-ಸಂರಕ್ಷಣ ಕಾನೂನಿನನ್ವಯ ಅಧಿಕಾರಪ್ರಾಪ್ತ ಅಧಿಕಾರಿಯು ಹೊರಡಿಸಿದ ಹಾಗೂ ಆ ಕಾಲಕ್ಕೆ ಅಮಲಿನಲ್ಲಿರುವ ಆಜ್ಞೆಯ ಆಧಾರವಿಲ್ಲದೆ, ಪರಿಶಿಷ್ಟದಲ್ಲಿ ಕಾಣಿಸಿದ ದರದಿಂದ ಬೆಲೆ ಕೊಟ್ಟು (ಬೆಲ್ಲ) ಬೇಡಿದ ಯಾವಾತನಿಗೂ ತನ್ನ ಕಡೆಗಿರುವ ಅಂತಹ ಬೆಲ್ಲವನ್ನು ಮಾರಾಟ ಮಾಡಲು ನಿರಾಕರಿಸಕೂಡದು.

( ) ಕಾನಡಾ ಜಿಲ್ಲೆಯಲ್ಲಿ ಸದರಿ ಬೆಲ್ಲದ ವ್ಯಾಪಾರ ಮಾಡುವ ಪ್ರತಿಯೊಬ್ಬನು—

(ಅ) ತನ್ನ ಅಂಗಡಿಯ ಇಲ್ಲವೆ ವ್ಯವಹಾರದ ಸ್ಥಳದ ಎದ್ದು ಕಾಣುವ ಭಾಗದಲ್ಲಿ (i) ಈ ಆಜ್ಞೆಯ ಒಂದು ಪ್ರತಿಯನ್ನೂ (ii) ಇದಕ್ಕೆ ಜೋಡಿಸಿದ ಪರಿಶಿಷ್ಟದಲ್ಲಿ ವಿವರಿಸಿದ ತರಗತಿಯ ಬೆಲ್ಲಗಳು ತನ್ನಲ್ಲಿ ಇರುತ್ತಿದ್ದರೆ ಅವುಗಳ ನಮೂನೆಗಳನ್ನೂ ಎಲ್ಲರಿಗೂ ಕಾಣುವಂತೆ ಇಡತಕ್ಕದ್ದು;

(ಬ) ಬೆಲ್ಲದ ಪ್ರತಿ ವಿಕ್ರಯದ ಸಂಬಂಧವಾಗಿ, ಆ ಆ ವ್ಯವಹಾರಕ್ಕೆ ತಕ್ಕಂತೆ, ಬೆಲ್ಲ ಕೊಂಡವನಿಗೆ ನಗದಿ ಪಾವತಿ ಇಲ್ಲವೆ ಬೇರೆ ದಾಖಲೆ ಕೊಡತಕ್ಕದ್ದು; ಮತ್ತು ಇಂಥ ಪಾವತಿ-ದಾಖಲೆಗಳಲ್ಲಿ ವಿಕ್ರಯಿಸಿದ ಬೆಲ್ಲದ ಜಾತಿ ಮತ್ತು ಪರಿಮಾಣಗಳನ್ನೂ, ವಿಕ್ರಯದ ದರವನ್ನೂ, ಮಾರಾಟದ ಬೆಲೆಯನ್ನೂ ಸರಿಯಾಗಿ ಮತ್ತು ಪೂರ್ಣವಾಗಿ ಕಾಣಿಸತಕ್ಕದು

(೩) ಈ ಆಜ್ಞೆಯ (೧) (ಅ) ಕಲಮಿನ ಉಲ್ಲಂಘನೆಯ ಅಪರಾಧದ ತನಿಖಿ ಮಾಡುವ ನ್ಯಾಯಾಧೀಶರು, ಅಪರಾಧಿಗೆ ಬೇರೆ ಯಾವದೇ ಶಿಕ್ಷೆಯಾದಾಗ್ಯೂ, ಯಾವ ಬೆಲ್ಲದ ಸಂಗ್ರಹದ ಸಂಬಂಧದಲ್ಲಿ ಗುನ್ಹೆಯಾಗಿದೆಯೆಂದು ನ್ಯಾಯಾಧೀಶರಿಗೆ ಮನವರಿಕೆಯಾಗುತ್ತದೋ ಆ ಬೆಲ್ಲದ ಸಂಗ್ರಹವನ್ನು ಅದರ ಆವರಣ-ಪಾತ್ರದಾಣಗಳ ಸಹಿತ ಸರಕಾರ ಜಪ್ತ ಮಾಡಲು ವಿಧಿಸಬಹುದು

ಸೂಚನೆ.— ಈ ಆಜ್ಞೆಯ ಸಂಬಂಧವಾಗಿ (ಅ) " ವ್ಯಾಪಾರಿ " ಎಂದರೆ ಬೇರೆ ಯಾವದೇ ವ್ಯಾಪಾರದ ಜೊತೆಗೆ ಯಾ ಅಂಥ ವ್ಯಾಪಾರವಿಲ್ಲದೆ ಬರೇ ಬೆಲ್ಲ ಮಾರಾಟದ ಉದ್ಯೋಗ ಮಾಡುವವನು ಎಂದು ತಿಳಿಯತಕ್ಕದ್ದು; (ಬ) ರೋಖ ಮಾರಾಟವೆಂದರೆ ಒಂದು ಬಂಗಾಲಿ ಮಣ (೮೨⅔ ರತ್ತಲ) ಯಾ ಹೆಚ್ಚಿಗೆ ಪರಿಮಾಣದ ಮಾರಾಟವೆಂದು ತಿಳಿಯತಕ್ಕದ್ದು, (ಕ) ಬೆಲ್ಲದ ಪ್ರತಿಯೊಂದು ವಿಕ್ರಯದ ಬಗ್ಗೆ ಕೊಡಬೇಕಾದ ಹಣವನ್ನು ಸಮೀಪದ ಬಿಲ್ಲಿಗೆ ಪರಿವರ್ತಿಸತಕ್ಕದ್ದು, ಈ ಬಗ್ಗೆ ಲೆಕ್ಕದಲ್ಲಿ ೬ ಯಾ ಹೆಚ್ಚಿಗೆ ಪೈಗಳು ಬಂದರೆ ಅವನ್ನು ೧ ಬಿಲ್ಲೆಯೆಂದು ಹಿಡಿಯಬೇಕು, ೬ ಪೈಗಿಂತ ಕಡಿಮೆಯಿದ್ದ ಪೈಗಳನ್ನು ಬಿಟ್ಟುಬಿಡಬೇಕು.

ಹಿಂದುಸ್ಥಾನ ರಕ್ಷಣ ಕಾನೂನಿನ ೧೧೯ನೇ ನಿಯಮದ ೧ನೇ ಉಪ-ನಿಯಮಕ್ಕನುಸಾರವಾಗಿ ಈ ಆಜ್ಞೆಯನ್ನು ಕೆಳಗಿನಂತೆ ಪ್ರಕಟಿಸಬೇಕು —

(೧) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗೆಝೆಟಿನ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಬೇಕು.

(೨) ಒಂದು ಪ್ರತಿ ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟನೆಗೆ ಕೊಡಬೇಕು—

(i) ಕಾನಡಾ ವೃತ್ತ, ಕುಮಟಾ (ಕನ್ನಡದಲ್ಲಿ), (ii) ಪಚಾರಿ, ಕಾರವಾರ (ಕನ್ನಡದಲ್ಲಿ).

(೩) ಇಂಗ್ಲಿಷ ಹಾಗೂ ಕನ್ನಡ ಪ್ರತಿಗಳನ್ನು ಜಿಲ್ಲೆಯೊಳಗಿನ ಎಲ್ಲ ತಾಲೂಕ-ಪೇಟಾ ಕಚೇರಿಗಳಲ್ಲೂ ಸೀಧಾ ಮತ್ತು ಪೂರೈಕೆ ಅಧಿಕಾರಿಗಳ ಕಚೇರಿಗಳಲ್ಲೂ ಇರುವ ನೋಟೀಸ-ಬೋರ್ಡುಗಳಿಗೆ ಅಂಟಿಸಬೇಕು

(೪) ಕನ್ನಡ ಪ್ರತಿಗಳನ್ನು ಎಲ್ಲ ತಾಲೂಕ ಪೇಟೆಗಳೊಳಗಿನ ಬೆಲ್ಲದ ರೋಖ ಮತ್ತು ಕಿರಕೋಳ ವ್ಯಾಪಾರಿಗಳಿಗೆ ಪೂರೈಸಬೇಕು.

ಪರಿಶಿಷ್ಟ.

ತಾಲೂಕ ಯಾ ಪೇಟೆಯ ಹೆಸರು	೧ ಬಂಗಾಲಿ ಮಣದ ರೋಖ ಧಾರಣೆ		೧ ರತ್ತಲಿನ ಕಿರಕೋಳ ಧಾರಣೆ	
	(ಅ) ಕೊಲ್ಹಾಪುರ ೧ನೇ ತರಗತಿಯ ಬೆಲ್ಲ	(ಬ) ಬೇರೆ ಬೆಲ್ಲ	(ಅ) ಕೊಲ್ಹಾಪುರ ೧ನೇ ತರಗತಿಯ ಬೆಲ್ಲ	(ಬ) ಬೇರೆ ಬೆಲ್ಲ
	ರೂ. ಆ. ಪೈ	ರೂ. ಆ. ಪೈ	ರೂ. ಆ. ಪೈ	ರೂ. ಆ. ಪೈ
ಕುಮಟಾ, ಹೊನ್ನಾವರ, ಭಟಕಳ, ಶಿರಸಿ, ಸಿದ್ದಾಪುರ	೨೨—೦—೦	೧೯—೮—೦	೦—೪—೬	೦—೪—೦
ಯಲ್ಲಾಪುರ, ಮುಂಡಗೋಡ, ಅಂಕೋಲಾ, ಕಾರವಾರ	೨೦—೧೨—೦	೧೮—೬—೦	೦—೪—೩	೦—೩—೯
ಹಳಿಯಾಳ, ಸುಪಾ	೧೯—೮—೦	೧೬—೪—೦	೦—೪—೦	೦—೩—೬

F. N. RANA.
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

NOTICE.

1 Sharawati ferry
2 Mirjan ferry
3 Dirgi (Manaki) ferry
4. Ulware ferry
5 Venkatapur ferry

It is proposed to introduce motor launch services at the marginally noted ferries in this Division, from the earliest date possible in connection with which contracts will be given for three to five years on showing to the undersigned two good launches duly passed by the Marine Department

2. The owners of the motor launches would be allowed to work the launches after three months from the date of the agreements

3 Those desirous of taking contracts should submit their applications to this office quoting their bid per year on or before the 10th March 1946 The conditions of service will be supplied on request

No. G-59 }
Karwar 17-2-46 }

R. L DESHPANDE.
Executive Engineer, Kanara Division

ಇದನ್ನು ಪಾಂಡುರಂಗ ಕೃಷ್ಣ ಕಾಸರಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
೧ ವರ್ಷಕ್ಕೆ ರೂ. ೩-೪-೦
ಟಪಾಲಖರ್ಚುಸಹ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ಕಳುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿಮುಂಗಡ ಕೊಡತಕ್ಕದ್ದು

Reg. No. B. 1270. Monday, 4th March, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೩೫.

ಕುಮಟಾ:- ಸೋಮವಾರ, ತಾ. ೪ ಮಾಹೆ ಮಾರ್ಚ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಮಾಲಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಮತದಾರರ ಕರ್ತವ್ಯ.

ಚುನಾವಣೆಯೊಳಗೆ ಪಕ್ಷಗಳುಂಟು; ಪಂಗಡಗಳುಂಟು. ಎಲ್ಲ ಪಕ್ಷ-ಪಂಗಡಗಳ ಧ್ಯೇಯವು ಲೋಕಕಲ್ಯಾಣ ಸಾಧಿಸುವದು, ಲೋಕಕಲ್ಯಾಣದ ವಿವಿಧ ಕಾರ್ಯ-ಕ್ರಮಗಳನ್ನು ವಿವರಿಸಿ ಮತದಾರರನ್ನು ಆಕರ್ಷಿಸುವದು ಚುನಾವಣೆಯಲ್ಲಿ ಸೇರಿದವರ ಕ್ರಮವಿರುತ್ತದೆ. ಈಗ ಇದೇ ಪ್ರಕಾರ ನಡೆದಿದೆ. ಆದರೆ ಮತದಾರರು ಪಕ್ಷ-ಪ್ರಮುಖರ ಕಾರ್ಯಶಕ್ತಿ ಪರಾಂಬರಿಸಬೇಕು. ಹಿಂದುಸ್ಥಾನದಂಥ ವಿಶಾಲ ದೇಶದಲ್ಲಿ ಅನೇಕ ಪಕ್ಷಗಳಿರುವದು ಸಹಜ. ಮೇಲಾಗಿ ದೇಶವು ಪರತಂತ್ರವಾಗಿರುವದರಿಂದ ಸ್ವಾತಂತ್ರ್ಯ ಗಳಿಸ ಹೊರಟ ಪಕ್ಷಕ್ಕೆ ಸರಕಾರದ ವಿರೋಧವುಂಟು. ಆ ಪಕ್ಷದ ಹೆಚ್ಚಳ ಕುಗ್ಗಿಸುವದಕ್ಕಾಗಿ ಸರಕಾರವು ಬೇರೆ ಬೇರೆ ಪಕ್ಷಗಳನ್ನು ನಿರ್ಮಿಸುತ್ತಿದೆ. ತಮ್ಮ ಸಾಮ್ರಾಜ್ಯ ಸ್ಥಿರಪಡಿಸಿಕೊಳ್ಳುವದಕ್ಕಾಗಿ ಸಾಮ್ರಾಜ್ಯಕಾರಣಿಗಳು ಹಾಗೆ ಕುಹಕ ಹೂಡುವದೂ ಲೋಕರೀತಿ. ರೆಡಿಕಲ್ ಡೆಮೊಕ್ರೆಟಿಕ್ ಪಕ್ಷ, ಕೊಮ್ಯುನಿಸ್ಟ ಪಕ್ಷ ಮೊದಲಾದ ಪಕ್ಷಗಳು ಈ ತರಗತಿಯಲ್ಲಿ ಸೇರುತ್ತಿವೆ. ಇವೆಲ್ಲ ರಾಷ್ಟ್ರೀಯ ಸಭೆಯ ಗೌರವ ಕುಂದಿಸಿ, ಅದರ ರಾಷ್ಟ್ರಸ್ವಾತಂತ್ರ್ಯ-ಪುರಸ್ಕಾರದ ಬಲವನ್ನು ಕುಗ್ಗಿಸುವದಕ್ಕಾಗಿ ಹುಟ್ಟಿದ ಯಾ ನಿರ್ಮಿತ ಪಕ್ಷಗಳು. ರಾಷ್ಟ್ರೀಯ ಸಭೆಯಲ್ಲಿ ತಪ್ಪು-ತಡೆಗಳಿರಬಹುದು, ಕುಂದು-ಕೊರತೆಗಳಿರಬಹುದು. ಮಾನವನು ಸ್ವತಃ ಅಪೂರ್ಣನು. ಆತ ನಿರ್ಮಿಸಿದ ಸಂಸ್ಥೆಯಾದರೂ ಅಪೂರ್ಣವಿರುವದೇ. ಆದರೆ ಪಂಜಾಬದೊಳಗಿನ ಚುನಾವಣೆಯ ಕಾರ್ಯ ಪರಾಂಬರಿಸಿ ನಾಮಾಂಕಿತ ಬ್ರಿಟಿಶ ಪತ್ರಿಕಾ-ಲೇಖಕರಾದ ಮಿ|| ಬ್ರೇಲ್ಸಫರ್ಡರು ರಾಷ್ಟ್ರೀಯ ಸಭೆಯ ಪ್ರಶಂಸೆ ಮಾಡಿದ್ದಾರೆ."Congress has its faults. But it cannot be bought. It expects from its leaders, small as well as great, a spirit of unlimited sacrifice. Schooled by years of imprisonment, the careerists among them are very few. Not all of them share Mahatma Gandhi's lofty ethical outlook. But it has permeated the spirit of this party and given it a creative outlook which its rivals lack" (ರಾಷ್ಟ್ರೀಯ ಸಭೆಯಲ್ಲಿ ದೋಷಗಳುಂಟು. ಆದರೆ ಲಂಚ ಕೊಟ್ಟು ಅದನ್ನು ವಶಪಡಿಸಿಕೊಳ್ಳಬರುವಂತಿಲ್ಲ ತನ್ನೊಳಗಿನ ಚಿಕ್ಕದೊಡ್ಡ ಪ್ರಮುಖರು ಅಪಾರ ಸ್ವಾರ್ಥತ್ಯಾಗ ಮಾಡಬೇಕೆಂದು ಆ ಸಂಸ್ಥೆಯ ಅಪೇಕ್ಷೆಯುಂಟು. ವರ್ಷಾವಧಿ ಕಾರಾಗೃಹವಾಸ ಅನುಭವಿಸಿದ ಇವರಲ್ಲಿ ಸ್ವಾರ್ಥಸಾಧಕರು ತೀರ ಕಡಿಮೆ. ಮಹಾತ್ಮಾ ಗಾಂಧಿಯವರ ಉದಾತ್ತ ನೀತಿದೃಷ್ಟಿ ಅವರೆಲ್ಲರಲ್ಲೂ ಇರದಿರಬಹುದು. ಆದರೆ ಆ ಪ್ರವೃತ್ತಿ ಆ ಪಕ್ಷದೊಳಗೆ ಬೇರೂರಿಕೊಂಡು ಆ ಸಂಸ್ಥೆಗೆ ಒಂದು ಬಗೆಯ ನಿರ್ಮಾಣಶಕ್ತಿ ಪೂರೈಸಿದೆ. ಈ ಶಕ್ತಿ ಅದರ ಪ್ರತಿಪಕ್ಷಿಗಳಲ್ಲಿ ಕಂಡುಬರುವದಿಲ್ಲ.) ಹೀಗೆ ಬ್ರೇಲ್ಸಫರ್ಡರು ಬರೆದಿದ್ದಾರೆ.

ರಾಷ್ಟ್ರೀಯ ಸಭೆಯ ಹೆಚ್ಚಳದ ಮರ್ಮವನ್ನು ಮಿ|| ಬ್ರೇಲ್ಸಫರ್ಡರು ಸ್ವಾನುಭವದಿಂದ ಕಂಡುಹಿಡಿದು ಪ್ರಕಟಿಸಿದ್ದಾರೆ. ಪಂಜಾಬದಲ್ಲೂ ಗಡಿನಾಡಿನಲ್ಲೂ ಚುನಾವಣೆ ನಡೆದಾಗ ಅವರು ಸಂಚರಿಸಿ ಬೇರೆ ಪಕ್ಷಗಳ ಸ್ವಾರ್ಥಿ ವೃತ್ತಿ ನೋಡಿ, ರಾಷ್ಟ್ರೀಯ ಸಭೆಯವರಿಗೆ ಕೊಟ್ಟ ಪ್ರಶಸ್ತಿ-ಪತ್ರವನ್ನು ಮತದಾರರು ಧ್ಯಾನದಲ್ಲಿಡಬೇಕು. ರಾಷ್ಟ್ರೀಯ ಸಭೆ ಕಳೆದ ೬೦ ವರ್ಷಗಳಿಂದ ಸಾಧಿಸಿದ ಲೋಕಕಾರ್ಯವನ್ನೂ ಲಕ್ಷಿಸಬೇಕು ರಾಷ್ಟ್ರೀಯ ಸಭೆಗೆ ಇಂದು ಮಹಾತ್ಮರಂಥ ಲೋಕವಿಭೂತಿಯ ಆಶ್ರಯವುಂಟು ಮೊನ್ನೆ ಮೊನ್ನೆ ಲಂಡನ್ನಿನ "ಟೈಮ್ಸ"ಪತ್ರಿಕೆ ಮಹಾತ್ಮರ ಬಗ್ಗೆ ಈ ರೀತಿ ಬರೆದಿದೆ:- "In this difficult situation the almost legendary influence of Mr. Gandhi is already playing a decisive part" (ಈ ಕಠಿಣ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧಿಯವರ ಪೌರಾಣಿಕ ವರ್ಚಸ್ಸು ಕೊನೆಯ ನಿರ್ಣಯ ಕೊಡುವಷ್ಟು ಸಮರ್ಥವಾಗಿ ತೋರಿದೆ.) ಮೌ|| ಅಬುಲ ಕಲಮ ಆಝಾದರಂಥ ಧರ್ಮನಿಷ್ಠರೂ ಪಂ|| ಜವಾಹಿರಲಾಲರಂಥ ಆದರ್ಶ ಸಮಾಜಸತ್ತಾವಾದಿಗಳೂ ಇಂದು ರಾಷ್ಟ್ರೀಯ ಸಭೆಯ ನಾಯಕರಾಗಿದ್ದಾರೆ. ಪಂ|| ಜವಾಹಿರಲಾಲರು ರಾಷ್ಟ್ರೀಯ ಸಭೆಯ ಉಮೇದ್ವಾರರಿಗೇ ಮತ ಕೊಡಬೇಕೆಂದು ಬೋಧಿಸುತ್ತ ಅನೇಕ ಸಲ ನಾಡಿನಲ್ಲಿ ಸಂಚರಿಸಿದ್ದುಂಟು. ನಮ್ಮ ಜಿಲ್ಲೆಯವರು ರಾಷ್ಟ್ರೀಯ ಸಭೆಯ ಹುರಿಯಾಳುಗಳನ್ನೇ ಆರಿಸಿ ತರಬೇಕೆಂದು ಅವರು ಮೊನ್ನೆಯೇ ಮುಂಬಯಿಯಿಂದ ಅಪ್ಪಣೆ ಕೊಟ್ಟಿದ್ದಾರೆ ರಾಷ್ಟ್ರೀಯ ಸಭೆಯ ಉಮೇದ್ವಾರರಿಗೇ ಮತ ಕೊಡಬೇಕೆಂದು ಮಹಾತ್ಮರು "ಹರಿಜನ"ದಲ್ಲಿ ವಿಧಿಸಿದ್ದಾರೆ. ಪ್ರತಿಯೊಬ್ಬ ಮತದಾರನು ತಾನಾಗಿ ಮತಗಟ್ಟೆಗೆ ಹೋಗಿ ಮತ ಕೊಡಬೇಕು. ಯಾರೂ ಸೋಮಾರಿಯಾಗಕೂಡದು. ರಾಷ್ಟ್ರೀಯ ಸಭೆಯ ಉಮೇದ್ವಾರರು ಹೇಗೂ ಆರಿಸಿ ಬರುತ್ತಾರೆಂದು ಎಣಿಸಿ ಯಾರೂ ಮನೆಯಲ್ಲಿ ಕೂಡ್ರಕೂಡದು ಈ ಚುನಾವಣೆಯ ನಂತರ ಭಾರತದ ಭವಿತವ್ಯ ನಿರ್ಣಯವಾಗಲಿಕ್ಕಿದೆ. ರಾಷ್ಟ್ರೀಯ ಸಭೆಗೆ ಲೋಕಬೆಂಬಲವುಂಟೆಂದು ಈ ಚುನಾವಣೆಯಲ್ಲಿ ಸಿದ್ಧವಾಗಬೇಕಾಗಿದೆ. ಪ್ರತಿಸ್ಪರ್ಧಿಗಳ ಠೇವು ಜಪ್ತಾದರೆ ತೀರಿತೆಂದು ಎಣಿಸಿ ಯಾರೂ ಸುಮ್ಮನಿರಕೂಡದು. ರಾಷ್ಟ್ರೀಯ ಸಭೆಯ ಪ್ರತಿಸ್ಪರ್ಧಿಗಳಿಗೆ ಒಂದೂ ಮತ ಬೀಳದಂತೆ ಜಾಗ್ರತೆ ಕೊಳ್ಳಬೇಕು. ಪ್ರತಿಯೊಬ್ಬನೂ ರಾಷ್ಟ್ರೀಯ ಸಭೆಯ ಪ್ರತಿನಿಧಿಯಾಗಿ ದುಡಿಯಬೇಕು. ಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯ ಉಮೇದ್ವಾರರಿಗೆ ಮತದಾರರು ಖರ್ಚಿಗೆ ಹಾಕಕೂಡದು. ಮಹಾತ್ಮರು "ಹರಿಜನ" ಪತ್ರಿಕೆಯಲ್ಲಿ ಮುಂದಿನಂತೆ ಬರೆದಿದ್ದಾರೆ:— "ಚುನಾವಣೆಗಳ ಬಗ್ಗೆ ರಾಷ್ಟ್ರೀಯ ಸಭೆಗೆ ಹಣ ಖರ್ಚು ಮಾಡುವ ಪ್ರಸಂಗ ಬರಕೂಡದು. ಲೋಕಸಂಸ್ಥೆಯ ಪರವಾಗಿ ನಿಂತ ಉಮೇದ್ವಾರರು ಸ್ವಂತ ಪ್ರಯತ್ನವಿಲ್ಲದೆ ಆರಿಸಿ ಬರಬೇಕು. ಬಡ ಮತದಾರರಿಗೆ ಅವಶ್ಯವುಳ್ಳ ವಾಹನ-ಸೌಕರ್ಯಗಳನ್ನು ಐಪತ್ತುಳ್ಳ ನೆರೆಹೊರೆಯವರು ಪೂರೈಸಬೇಕು. ಉದಾಹರಣೆಗಾಗಿ, "ಕ್ಷ" ಊರಿಂದ "ಯ" ಊರೊಳಗಿನ ಮತಗಟ್ಟೆಗೆ ಮತದಾರರು ಹೋಗತಕ್ಕದ್ದಿದ್ದರೆ "ಕ್ಷ" ದಿಂದ "ಯ" ವರೆಗಿನ ಬಡ ಮತದಾರರ ಉಗಿಬಂಡಿಯ ವೆಚ್ಚವನ್ನು "ಕ್ಷ" ಊರೊಳಗಿನ ಧನಿಕರು ಪೂರೈಸಬೇಕು. ಸುಸಂಘಟಿತ, ಅಹಿಂಸಾವಾದಿ ಲೋಕಸಂಸ್ಥೆಯ ಲಕ್ಷಣವಿಶೇಷವಿದು. ಪ್ರತಿಯೊಂದು ಸಂಗತಿಯಲ್ಲೂ ಹಣ ಬೇಕಾಗುವ ಸಂಸ್ಥೆ ಎಂದೂ ಬಹುಜನಸಮಾಜದ ಸೇವೆ ಮಾಡಲೊಲ್ಲದು. ಲೋಕಸಂಗ್ರಾಮದಲ್ಲಿ ಹಣದ ವೆಚ್ಚ ಮಾಡಿ ವಿಜಯ ದೊರಕಿಸಬರುತ್ತಿದ್ದರೆ ಬೇಕಷ್ಟು ಹಣ ವಿನಿಯೋಗಿಸಬಲ್ಲ ಮತ್ತು ವಿನಿಯೋಗಿಸುತ್ತಿರುವ ಬ್ರಿಟಿಶ ಸರಕಾರವು ಹಿಂದುಸ್ಥಾನದೊಳಗಿನ ಲೋಕಸಂಸ್ಥೆಯಾಗಬಹುದಿತ್ತು. ವಸ್ತುಸ್ಥಿತಿ ಹೇಳಬೇಕಾದರೆ, ದೊಡ್ಡದೊಡ್ಡ ಸಂಬಳ ಪಡೆಯುವ ಸರಕಾರಿ ನೌಕರರು ಕೂಡ ಬ್ರಿಟಿಶ ಸರಕಾರ ಇಲ್ಲವಾಗಬೇಕೆಂದು ತಮ್ಮ ಅಂತಃಕರಣದಲ್ಲಿ ಬಯಸುವದಿಲ್ಲ" ಮಹಾತ್ಮರು ಮತದಾರರಿಗೆ ಕಾಲದಲ್ಲಿ ಈ ಸೂಚನೆ ಕೊಟ್ಟು ಅವರ ಕರ್ತವ್ಯದ ಸ್ಪಷ್ಟ ನಿರ್ದೇಶ ಮಾಡಿದ್ದಾರೆ. ರಾಷ್ಟ್ರೀಯ ಸಭೆಯ ವರ್ಚಸ್ಸು ಈವಾಗ ಮತದಾರರ ಅಧೀನವುಂಟು. ಮತದಾರರೆಲ್ಲರೂ ಇದನ್ನು ನೆನೆದು ಮುಂದಿನ ವಾರದ ಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯ ಉಮೇದ್ವಾರರಿಗೇ ಪುರಸ್ಕಾರ ಮಾಡಬೇಕು.

ರಾಷ್ಟ್ರೀಯ ಸಭೆಯನ್ನು ವಿರೋಧಿಸುವ ಪಕ್ಷಗಳಲ್ಲಿ ಕಾರ್ಯಶಕ್ತಿಯ ಅಭಾವವುಂಟು; ಅವುಗಳ ಕಾರ್ಯಕರ್ತರಲ್ಲಿ ಸ್ವಾರ್ಥವುಂಟು. ಲೋಕಸೇವೆಯ ಸೋಗು ಹಾಕಿ ಸ್ವಂತ ಗೌರವ, ಸ್ವಂತ ಸ್ವಾರ್ಥ ಸಾಧಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಲೋಕ ನಷ್ಟವಾದರೆ ಅವರಿಗೆ ಪರಿವೆಯಿಲ್ಲ! ರಾಷ್ಟ್ರೀಯ ಸಭೆ

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. I
The Head Office and Branches of the Bank now accept
Season Deposits from three to six months at the following rates:-
Three Months at 2½% per annum.
Six Months at 2¾% per annum.
No such deposit will be allowed to run beyond 30th September 1946.
Coondapoor, 8-2-1946
K. VAMAN SHENAI,
CHAIRMAN.

ಯ ಚುನಾವಣೆ ಪ್ರಕಟನೆಯಲ್ಲಿ ಬಹುಜನಸಮಾಜದ ಹಿತ ಸಾಧಿಸುವ ಎಲ್ಲ ವಿಷಯಗಳ ಸೇರ್ಪಡೆಯಾಗಿದೆ. ಕಾಂಗ್ರೆಸ ಮಂತ್ರಿಮಂಡಳಗಳು ಯಥಾಶಕ್ತಿ ಲೋಕಕಲ್ಯಾಣ ಸಾಧಿಸಿದ ಇತಿಹಾಸ ತೀರ ಮೊನ್ನೆಯದು. ರಾಷ್ಟ್ರೀಯ ಸಭೆಗೆ ಮತ ಕೊಡುವದೆಂದರೆ ಮತದಾರರು ಸ್ವಹಿತಕ್ಕೆ ಮತ ಕೊಟ್ಟಂತೆಯೇ ಸರಿ. ಆದ್ದರಿಂದ ಮತದಾರರು ಚಿತ್ತ ಚಾಂಚಲ್ಯವನ್ನು ಸಂಪೂರ್ಣವಾಗಿ ತೊರೆದು ನಿರ್ಮಲ ರಾಷ್ಟ್ರಭಕ್ತಿಯಿಂದಲೂ ನಿಃಸಂದಿಗ್ಧ ಸ್ವಾತಂತ್ರ್ಯಕಾಂಕ್ಷೆಯಿಂದಲೂ ರಾಷ್ಟ್ರೀಯ ಸಭೆಯ ಉಮೇದ್ವಾರರಿಗೇ ಮತ ಕೊಟ್ಟು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಜಿಲ್ಲೆಗಳಿಗಿರುವ ಕೀರ್ತಿಯನ್ನು ಕಾಪಾಡಿಕೊಳ್ಳಬೇಕಾಗಿ ಅರಿಕೆಯಿದೆ

ಹಿಂದೀ ರಾಜಕಾರಣ.

(ನಿರೀಕ್ಷಕನು ಬರೆದುದು)

ಹಿಂದೀ ರಾಜಕಾರಣದ ಮಟ್ಟು ಈಗ ಸುಧಾರಿಸತೊಡಗಿದೆ. ರಾಷ್ಟ್ರೀಯ ಸಭೆಯ ಪ್ರಭಾವ ದೇಶತುಂಬ ಹಬ್ಬಿಕೊಂಡಿದೆಯೆಂಬ ಮಾತು ಈಗ ನಿಶ್ಚಿತವಾಗಿ ಸಿದ್ಧವಾಗಿದೆ. ಕೇಂದ್ರ ಕಾನೂನ ಮಂಡಳದ ಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯ ಉಮೇದ್ವಾರರು ಇತರ ಪಕ್ಷ ಪಂಗಡದವರನ್ನು ಸೋಲಿಸಿ ರಾಷ್ಟ್ರೀಯ ಸಭೆಯ ಪ್ರತಿಷ್ಠೆಯನ್ನು ಸಿದ್ಧಗೊಳಿಸಿದ್ದಾರೆ. ಮುಸ್ಲಿಮ ಲೀಗಿನ ಮುಖಂಡರ ಮುಸಲ್ಮಾನ ಸಮಾಜದೊಡನೆ ಸಖ್ಯ ಬೆಳೆಸಲು ಸಾಧ್ಯವಿಲ್ಲೆಂದು ಕಂಡುಬಂದದ್ದರಿಂದ ರಾಷ್ಟ್ರೀಯ ಸಭೆಯ ನಾಯಕರು ಪ್ರಾಂತಿಕ ಚುನಾವಣೆಗಳಲ್ಲಿ ನೇರವಾಗಿ ಮುಸಲ್ಮಾನ ಲೋಕದಲ್ಲಿ ಪ್ರಚಾರನಡಿಸಿ, ಮುಸ್ಲಿಮ ಲೀಗಿನ ಗೌರವವನ್ನು ಬಹಳಷ್ಟು ಕುಂದಿಸಿದ್ದಾರೆ. ಸಿಂಧ ಆಸಾಮ ಗಡಿನಾಡು, ಪಂಜಾಬ ಪ್ರಾಂತಗಳಲ್ಲಿ ಲೀಗಿನವರು ಪರಮಾವಧಿಯ ಪ್ರಯತ್ನ ಮಾಡಿದಾಗ್ಯೂ ಬಹುಮತದಿಂದ ಆರಿಸಿ ಬರಲು ಅವರಿಗೆ ಸಾಧ್ಯವಾಗಲಿಲ್ಲ. ಆಸಾಮ ಮತ್ತು ಗಡಿನಾಡುಗಳೊಳಗೆ ರಾಷ್ಟ್ರೀಯ ಸಭೆಯವರು ಬಹುಮತ ದೊರಕಿಸಿ ಪ್ರಧಾನ-ಮಂಡಳಗಳನ್ನು ನಿರ್ಮಿಸಿದ್ದಾರೆ. ಸಿಂಧದೊಳಗೆ ಲೀಗೇತರ ಮುಸಲ್ಮಾನ ಸಭಾಸದರು ಲೀಗಿಗೆ ಸೇರುವಂತೆ ಮನವೊಲಿಸಲು ಗವ್ಹರ್ನರರು ವಿಶ್ವಪ್ರಯತ್ನ ನಡಿಸಿದಾಗ್ಯೂ ಲೀಗಿಗೆ ಕೂಡಲು ಒಬ್ಬರೇ ಅವರಿಗೆ ಸಿಕ್ಕರು! ಉಳಿದವರೆಲ್ಲ ತಮ್ಮ ಪಕ್ಷಕ್ಕೆ ಗಟ್ಟಿಯಾಗಿ ಅಂಟಿಕೊಂಡು ಗವ್ಹರ್ನರರ ಅನುಗ್ರಹದಿಂದ ಜನ್ಮವೆತ್ತ ಮಂತ್ರಿಮಂಡಳವನ್ನು ಉರುಳಿಸಿ ಬಿಡಲು ನಿರ್ಧರಿಸಿದ್ದಾರೆ. ಮುಂದಿನ ವಾರದಲ್ಲಿಯ ಎಸೆಂಬ್ಲಿಯ ಅಧಿವೇಶನಕ್ಕೆ ಆರಂಭವಾಗುತ್ತಿದೆ. ಆಗ ಮಂತ್ರಿಮಂಡಳದ ಬಗ್ಗೆ ಅಪನಂಬಿಕೆಯ ಸೂಚನೆ ಸೂಚಿಸಲ್ಪಡುವದೆಂದೂ, ಅದು ಮನ್ನಿಸಲ್ಪಟ್ಟು ಲೀಗಿನ ಮಂತ್ರಿಮಂಡಳ ಪದಚ್ಯುತವಾಗುವದೆಂದೂ ಸಿಂಧ ಪ್ರಾಂತಿಕ ಮುಸ್ಲಿಮ ಲೀಗ ಮಂಡಳದ ಅಧ್ಯಕ್ಷರಾದ ಜನಾಬ ಗಝಧರರವರೇ ಉದ್ಗರಿಸಿದ್ದಾರೆ. ಎಂದ ಮೇಲೆ ಸಿಂಧದಲ್ಲಿ ಲೀಗಿನ ಗೌರವ ಉಳಿಯುವದೆಂದು ನಾನು ಹೇಗೆ ಹೇಳಲಿ? ಪಂಜಾಬದಲ್ಲಿಯೇ ವಿಲಕ್ಷಣ ಪರಿಸ್ಥಿತಿಯುಂಟಾಗಿದೆ. ಎಸೆಂಬ್ಲಿಗೆ ಆರಿಸಲ್ಪಟ್ಟ ೧೭೫ ಮಂದಿ ಸಭಾಸದರಲ್ಲಿ ೭೫ ಜನರು ಲೀಗಿನವರು ೫೧ ಮಂದಿ ಕಾಂಗ್ರೆಸ್ಸಿಗರು, ೨೨ ಅಕಾಲಿಗಳು, ೨೦ ಮಂದಿ ಯೂನಿಯನಿಸ್ಟರು ಮತ್ತು ೭ ಮಂದಿ ಸ್ವತಂತ್ರರು ಇದ್ದಾರೆ. ಲೀಗಿಗೆ ಅಲ್ಲಿ ಬಹುಮತವಿಲ್ಲ. ಬೇರೆ ಪಕ್ಷಗಳೊಡನೆ ಕೂಡಿಕೊಂಡ ಹೊರತು ಮಂತ್ರಿಮಂಡಳ ರಚಿಸಲಿಕ್ಕೆ ಅವರಿಗೆ ಸಾಧ್ಯವಿಲ್ಲ. ಅಕಾಲಿಗಳನ್ನು ಕೂಡಿಸಿಕೊಳ್ಳಬೇಕೆಂದು ಅವರು ಯತ್ನಿಸುತ್ತಿದ್ದಾರೆ. ಆದರೆ ಲೀಗಿನ "ಪಾಕಿಸ್ತಾನ"ದಲ್ಲಿ ತಮಗೊಂದು ಶೀಖಿಸ್ತಾನ ಬೇಕೆಂದು ಅಕಾಲಿಗಳ ಹಂಬೋಣವುಂಟು! ಪಾಕಿಸ್ತಾನದೊಳಗಿಂದ ಶೀಖಿಸ್ತಾನವನ್ನು ಬೇರ್ಪಡಿಸಿದರೆ ಪಂಜಾಬದೊಳಗೆ ಲೀಗಿಗೆ ಉಳಿಯುವ ಸ್ಥಾನ ಅಷ್ಟೆಂದು ಮಹತ್ವದ್ದಲ್ಲ. ಕಾಂಗ್ರೆಸ್ಸಿನೊಡನೆ ಒಡಂಬಡಿಕೆ ಮಾಡಿಕೊಳ್ಳಹವಣಿಸಿದರೆ ರಾಷ್ಟ್ರೀಯ ಮುಸಲ್ಮಾನರನ್ನು ಲೀಗು ಮನ್ನಿಸಲು ಸಿದ್ಧವಿಲ್ಲ! ಲೀಗಿನ ಹೊರಗಿರುವ ಮುಸಲ್ಮಾನರೆಲ್ಲರೂ ಪತಿತರೆಂದು ಅದರ ಹಂಬೋಣ! ರಾಷ್ಟ್ರಪತಿ ಮೌ|| ಅಬುಲ ಕಲಮ ಆಝಾದರು ಈವಾಗ ಲಾಹೋರದಲ್ಲಿದ್ದು, ರಾಷ್ಟ್ರೀಯ ಸಭೆಯ ಚುನಾವಣೆ ಘೋಷಣೆಯೊಳಗಿಂದ ಮೂಲಭೂತ ತತ್ವಗಳನ್ನು ಮನ್ನಿಸಿಕೊಂಡು ಕಾಂಗ್ರೆಸ ಅಕಾಲಿ ಯೂನಿಯನಿಸ್ಟ ಸಂಯುಕ್ತ ಪಕ್ಷ ಸಂಘಟಿಸಲು ಅವರು ಯತ್ನಿಸುತ್ತಿದ್ದಾರೆ. ಪಂಜಾಬದ ಗವ್ಹರ್ನರರು ಲೀಗಿನ ಸಂಖ್ಯಾಬಲ ಬೆಳಸಿ ಲೀಗ ಮಂತ್ರಿಮಂಡಳ ರಚಿಸುವದಕ್ಕಾಗಿ ಪಕ್ಷ-ಪ್ರಮುಖರೊಡನೆ ಒಳಸಂಚು ಮಾಡಹತ್ತಿದ್ದಾರೆಂದು ಲೋಕಪ್ರವಾದವುಂಟು. ಪಂಜಾಬದೊಳಗೆ ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ ಸದಸ್ಯರ ಸಂಖ್ಯೆ ಬರೀ ೧೮ ಇತ್ತು. ಮೊನ್ನೆಯ ಚುನಾವಣೆಯಲ್ಲಿ ಅದು ೫೧ಕ್ಕೆ ಏರಿದ್ದರ ಮೇಲಿಂದ ರಾಷ್ಟ್ರೀಯ ಸಭೆಯ ವರ್ಧಿಷ್ಣು ವರ್ಚಸ್ಸಿನ ಕಲ್ಪನೆ ಸಹಜವಾಗಿ ಮಾಡಬಹುದು. ಚುನಾವಣೆ ಸಮೀಪಿಸಿದಾಗ ಪ್ರಾಂತಿಕ ಕಾಂಗ್ರೆಸ ಸಮಿತಿ ಅಧ್ಯಕ್ಷರಾಗಿದ್ದ ಮೌ|| ಇಫ್ತಿಕರುದ್ದೀನರವರು ಕಾಂಗ್ರೆಸ ಬಿಟ್ಟು ಲೀಗನ್ನು ಸೇರದಿದ್ದರೆ ಮತ್ತು ಇಸ್ಲಾಮ ಧರ್ಮಕ್ಕೆ ಗಂಡಾಂತರ ಬಂದಿದೆಯೆಂಬ ಆಕ್ರೋಶವನ್ನು ಲೀಗಿನವರು ಚುನಾವಣೆಯ ಕಾಲದಲ್ಲಿ ಎಬ್ಬಿಸಿ ಲಕ್ಷಾವಧಿ ರೂಪಾಯಿ ಖರ್ಚು ಮಾಡಿ ಮತದಾರರನ್ನು ಭ್ರಷ್ಟಗೊಳಿಸದಿದ್ದರೆ ಲೀಗಿನ ಸಂಖ್ಯಾಬಲ ಮತ್ತೂ ಕುಗ್ಗುತ್ತಿತ್ತೆಂದು ಹೇಳಬಹುದು. ಅದೇನಿದ್ದರೂ ಈವರೆಗಾದ ಚುನಾವಣೆಗಳಲ್ಲಿ ರಾಷ್ಟ್ರೀಯ ಸಭೆಯವರ ಸಾಮರ್ಥ್ಯವೂ ಪ್ರತಿಷ್ಠೆಯೂ ತುಂಬಾ ಸಿದ್ಧವಾಗಿವೆ. ಇನ್ನುಳಿದ ಪ್ರಾಂತಗಳಲ್ಲಿ ರಾಷ್ಟ್ರೀಯ ಸಭೆಯವರು ಇದಕ್ಕೂ ಹೆಚ್ಚಿನ ಪ್ರಮಾಣದಿಂದ ಗೆಲ್ಲುವರೆಂಬದು ನಿಶ್ಚಿತ. ಎಲ್ಲ ಪ್ರಾಂತಗಳೊಳಗಿನ ಚುನಾವಣೆಗಳು ಈ ತಿಂಗಳ ಕೊನೆಯೊಳಗಾಗಿ ಮುಗಿಯುತ್ತವೆ. ಆಗ ಬೇರೆ ಬೇರೆ ಪಕ್ಷ ಪಂಗಡಗಳ ಬಲದ ಎಣಿಕೆ ಮಾಡಲು ತಕ್ಕಷ್ಟು ಅವಕಾಶ ಸಿಗುತ್ತದೆ. ಈ ಚುನಾವಣೆಗಳ ಫಲಿತಾಂಶ ನೋಡಿ ಸರ್ವಾಧಿಪತಿ ವೆವ್ಹೆಲ ದೊರೆಗಳು ಘಟನಾ ಸಮಿತಿಯ ರಚನೆಯ ಕೆಲಸಕ್ಕೂ ಕೇಂದ್ರ ಸರಕಾರದ ಹಿಂದೀಕರಣಕ್ಕೂ ತೊಡಗುವವರಿದ್ದಾರೆ. ಆ ಕಾಲದಲ್ಲಿ ಸರ್ವಾಧಿಪತಿಗಳಿಗೆ ಮಾರ್ಗದರ್ಶಿಗಳಾಗಲು ಬ್ರಿಟಿಶ ಸರಕಾರವು ಭಾರತ ಮಂತ್ರಿಗಳನ್ನೂ ಇನ್ನಿಬ್ಬ ಮಂತ್ರಿಗಳನ್ನೂ ಹಿಂದುಸ್ಥಾನಕ್ಕೆ ಕಳುಹಿಸಲು ಸಂಕಲ್ಪಿಸಿದೆ. ಬ್ರಿಟಿಶ ಮಂತ್ರಿಮಂಡಳವು ಭಾರತ ಮಂತ್ರಿಗಳಿಗೆ ಸಾಮಾನ್ಯವಾಗಿ ಸರ್ವಾಧಿಕಾರ ಕೊಟ್ಟು ಕಳುಹುವದೆಂದು ನನ್ನ ಊಹೆ. ಈಗ ಬರುವ ತ್ರಿಕೂಟವು ಬ್ರಿಟಿಶ ಸರಕಾರದ ಪ್ರತಿನಿಧಿಭೂತವಿರುತ್ತದೆಂದೂ, ಬ್ರಿಟಿಶ ಸರಕಾರದ ಪರವಾಗಿ ಹಿಂದೀ ಪ್ರಮುಖರೊಡನೆ ಒಡಂಬಡಿಕೆ ಮಾಡಿಕೊಂಡು ಹಿಂದುಸ್ಥಾನವನ್ನು ಸಮಾಧಾನಗೊಳಿಸುವ ಅಧಿಕಾರ ಈ ತ್ರಿಕೂಟಕ್ಕುಂಟೆಂದೂ ಲಂಡನ್ನಿನಲ್ಲಿ ಹೇಳಲಾಗುತ್ತಿದೆ. ಪಂ| ಜವಾಹರಲಾಲರು ಕಳೆದ ವಾರ ಮುಂಬಯಿಯ ಪತ್ರಿಕಾ-ಪ್ರತಿನಿಧಿಗಳ ಸಭೆಯಲ್ಲಿ ನುಡಿದಂತೆ, ಭಾರತದ ಸ್ವಾತಂತ್ರ್ಯವನ್ನು ಭಾರತ ಮಂತ್ರಿಗಳೂ ಅವರ ಜೊತೆಗಾರರೂ ಮನ್ನಿಸಲೇಬೇಕಾದೀತು. ಅದು ಮಾನ್ಯವಾದಲ್ಲಿ ಬ್ರಿಟಿಶ ಹಿತಸಂಬಂಧಗಳಿಗೂ ಹಿಂದೀ ಹಿತಸಂಬಂಧಗಳಿಗೂ ಮೇಳ ಬೀಳುವಂತೆ ಉಭಯ ಪಕ್ಷದವರೂ ಒಂದು ರಾಜ್ಯಯೋಜನೆಯನ್ನು ತಯಾರಿಸಬಹುದು. ಹಿಂದೀ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದೂಡಲಿಕ್ಕೆ ಇನ್ನು ಸಾಧ್ಯವಿಲ್ಲವೆಂದು ಪಂಡಿತಜಿಯವರು ನುಡಿದ ಮಾತು ಸಟೆಯಲ್ಲ. ಹಿಂದುಸ್ಥಾನ ಸರಕಾರದ ಪುನರ್ಘಟನೆಯಾಗಬೇಕಾದ ದಿನಗಳು ಸಮೀಪಿಸಿ ಬಂದಿವೆ. ಲೋಕಪ್ರತಿನಿಧಿಗಳನ್ನು ಸೇರಿಸಿಕೊಂಡು ತಮ್ಮ ಕಾರ್ಯಕಾರಿ ಮಂಡಳವನ್ನು ಹೊಸದಾಗಿ ರಚಿಸಬೇಕೆಂದು ಸರ್ವಾಧಿಪತಿ ವೆವ್ಹೆಲ ದೊರೆಗಳಿಗೂ ಈಗ ಒಪ್ಪಿಗೆಯಾಗಿದೆ. ಅದನ್ನು ಸಂಘಟಿಸುವ ಕ್ರಮ ಭಾರತ ಮಂತ್ರಿಗಳು ಇಲ್ಲಿ ಬಂದ ಮೇಲೆ ನಿಶ್ಚಿತವಾಗುವದು. ಸಿಮ್ಲಾ ಪರಿಷತ್ತು ನಿಷ್ಫಲವಾದದ್ದರ ದೋಷವನ್ನು ವೆವ್ಹೆಲ ದೊರೆಗಳು ಸ್ವತಃ ಹೊತ್ತರೂ ಪರಿಷತ್ತು ಅಯಶಸ್ವಿಗೊಳಿಸಲಿಕ್ಕೆ ಬೆ|| ಜಿನ್ನಾರವರ ಹಟವಾದವೇ ಕಾರಣವಾಯಿತೆಂಬದು ಸ್ಪಷ್ಟವಿದೆ. ಈ ಬಾರಿ ಹಾಗಾಗುವ ಸಂಭವವಿಲ್ಲ. ಯಾವದೇ ಪಕ್ಷ-ಪಂಗಡದ ನಾಯಕರು ತಮ್ಮೊಡನೆ ಶಿಷ್ಟಸಮ್ಮತವಾಗಿ ಸಹಕರಿಸದಿದ್ದರೆ ಭಾರತ ಮಂತ್ರಿಗಳು ಆ ಪಕ್ಷವನ್ನು ದುರ್ಲಕ್ಷಿಸಿ, ತಮಗೆ ಯುಕ್ತ ಕಂಡಂತೆಯೇ ರಾಜ್ಯಘಟನೆಯನ್ನು ಮಾರ್ಪಡಿಸುವರೆಂದು ತಿಳಿಯಲಡ್ಡಿಯಿಲ್ಲ. ಬ್ರಿಟನದಿಂದ ಈ ದೇಶಕ್ಕೆ ಬಂದ ಪಾರ್ಲಿಮೆಂಟಿನ ಶಿಷ್ಟರು ಇಲ್ಲಿಯ ದೇಶ ಪರಿಸ್ಥಿತಿ ಕಣ್ತುಂಬ ನೋಡಿಕೊಂಡು ಬ್ರಿಟಿಶ ಸರಕಾರಕ್ಕೆ ಹಿಂದೀ ಜನಾಂಗದ ಮನೋಗತವನ್ನು ಈಗಾಗಲೇ ತಿಳಿಸಿದ್ದಾರೆ. ರಾಷ್ಟ್ರೀಯ ಸಭೆಯವರ ನಿರ್ಧಾರವನ್ನೂ ಕಾರ್ಯಶಕ್ತಿಯನ್ನೂ ಆ ಶಿಷ್ಟರು ಸ್ವತಃ ನೋಡಿದ್ದುಂಟು. ದೇಶತುಂಬ ಮಹಾತ್ಮಾ ಗಾಂಧಿಯವರ ಬಗ್ಗೆ ಇರುವ ಪೂಜ್ಯಭಾವವನ್ನೂ ಅವರು ಕಂಡದ್ದುಂಟು. ಹಿಂದೀ ಜನತೆಯ ಅಂತಃಕರಣವನ್ನು ಮಹಾತ್ಮರು ಆಕ್ರಮಿಸಿಕೊಂಡಿದ್ದಾರೆಂದೂ ಮಹಾತ್ಮರನ್ನು ಒಲಿಸಿಕೊಳ್ಳುವ ಕ್ರಮವನ್ನು ಬ್ರಿಟಿಶರು ಕೈಕೊಳ್ಳಬೇಕೆಂದೂ ವಿಲಾಯತಿಯಲ್ಲಿ ಈವಾಗ ಲೋಕಾಭಿಪ್ರಾಯ ವ್ಯಕ್ತವಾಗತೊಡಗಿದೆ. ಬ್ರಿಟಿಶರು ಇನ್ನು ವಿಳಂಬ ಮಾಡಿದರೆ ಹಿಂದುಸ್ಥಾನದೊಳಗೆ ಅತಿ ದೊಡ್ಡ ಆಂದೋಲನವುಂಟಾಗಿ ಘೋರ ವಿಪತ್ತು ಒದಗುವದೆಂದು 'ಡೇಲಿ ಹೆರಲ್ಡ' ಪತ್ರಿಕೆಯು, ಕಳೆದ ಸೋಮವಾರ ಅಗ್ರಲೇಖ ಬರೆದು, ಬ್ರಿಟಿಶ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದೆ. ಭಾರತದಲ್ಲಿ ಬ್ರಿಟಿಶ ರಾಜ್ಯದ ಆಯುರ್ದಾಯ ಮುಗಿಯಿತೆಂದು ಬ್ರಿಟಿಶ ಕೂಲಿಕಾರ ಪಕ್ಷದ ಕಾರ್ಯದರ್ಶಿಗಳಾದ ಮಿ|| ಬ್ರೋಕ್ವೇಯವರು ಕಳೆದ ವಾರವೇ ಉದ್ಗರಿಸಿ, ಕಾಲಕ್ಕೆ ತಕ್ಕಂತೆ ನಡೆಕೊಂಡು ಹಿಂದೀಯರನ್ನು ಸಂತೈಸಲು ಬ್ರಿಟಿಶರಿಗೆ ವಿನಂತಿ ಮಾಡಿಕೊಂಡಿದ್ದಾರೆ. ಭಾರತ ಮಂತ್ರಿ ಪೆಥಿಕ್ ಲೋರೆನ್ಸ ದೊರೆಗಳ ಧೋರಣವೇನಿದೆಯೆಂಬದು ಇನ್ನೂ ಬಹಿರಂಗವಾಗಿಲ್ಲ. ಆದರೂ ಆ ಧೋರಣ ಹಿಂದೀಯರಿಗೆ ಸರ್ವಸಾಧಾರಣವಾಗಿ ಅನುಕೂಲವಾಗಿರಬೇಕೆಂದು ನಾನು ತಿಳಿಯುತ್ತೇನೆ. ಯಾರೊಬ್ಬರ ನೆವ ಮುಂದೊಡ್ಡಿ ಅಧಿಕಾರ-ದಾನವನ್ನು ಮುಂದೂಡುವ ದುರಾಲೋಚನೆ ಅವರಿಗಿಲ್ಲ. ರಾಷ್ಟ್ರೀಯ ಸಭೆಯ ಶಕ್ತಿ ಈವಾಗ ಬಹಳ ಬೆಳೆದಿದೆ. ಲಂಡನಿನ ನ್ಯೂಸ ರಿವ್ಯೂ" ಪತ್ರಿಕೆಯು ಈಗಣ ಮಂತ್ರಿಮಂಡಳದ ವಿಚಾರ ಸರಣಿಯದೆಂದು ಲಂಡನಿನಲ್ಲಿ ಹೇಳಾಡುತ್ತಾರೆ. ಭಾರತ ಮಂತ್ರಿಗಳ ಶಿಷ್ಟಾಯಿಯ ಸಂಬಂಧದಲ್ಲಿ ಬರೆಯುವಾಗ ಈ ಪತ್ರಿಕೆಯು ಅವರ ಧೋರಣವನ್ನು ಕೆಲಮಟ್ಟಿಗೆ ಸ್ಪಷ್ಟ ಮಾಡಿದೆ

ಶ್ರೀ ಜಗದ್ಗುರು ಮಹಾಸಂಸ್ಥಾನ
ಧರ್ಮಾಧಿಕಾರ ಸಂಸ್ಥಾನಂ
ಶ್ರೀ ಶೃಂಗೇರಿ ಮಠ

॥ ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ ॥

ಶ್ರೀ ಜಗದ್ಗುರು ಸಂಸ್ಥಾನ ಶ್ರೀ ಶೃಂಗೇರಿ ಶ್ರೀಮಠ

ಧರ್ಮಾಧಿಕಾರಸ್ಥಾನಂ.

(ಶ್ರೀ ವಿದ್ಯಾಶಂಕರಃ ಪ್ರಸನ್ನಃ)

ಸಂಖ್ಯಾ 329

ಶೃಂಗೇರಿ,
(ಮೈಸೂರ ಸಂಸ್ಥಾ)

ಶ್ರೀಯುತ ಶ್ರೀಮದ್ಯಜನಾದಿಷಟ್ಕರ್ಮನಿರತರಾದ ಸಿದ್ಧಾಂತಕೇಸರಿ, ದೈವಜ್ಞಭೂಷಣ, ವಿದ್ಯಾವಾರಿಧಿ
ಇತ್ಯಾದಿ ಬಿರುದಾಂಕಿತರಾದ ವೇ|| ನೊಗೇರಿ ಭಾಸ್ಕರ ಅಡಿಗರವರಿಗೆ—

ನೀವು ಪರಿಷ್ಕರಿಸಿ ಬರೆದಿರುವ "ಆಸ್ತಿಕ ಪಂಚಾಂಗ ನಿರೂಪಣಪೂರ್ವಕ ದೃಕ್ಪಂಚಾಂಗ ಖಂಡನಂ" ಎಂಬ ಗ್ರಂಥವನ್ನು ಆಮೂಲಾಗ್ರವಾಗಿ ವಿಮರ್ಶಿಸಿದೆವು ಈಗಿನ ನವನಾಗರಿಕತೆಯ ಕಾಲದಲ್ಲಿ ಪ್ರಾಪ್ತವಾಗುತ್ತಿರುವ ಧರ್ಮಗ್ಲಾನಿಕರವಾದ ನಾನಾ ವಿಷಯಗಳಲ್ಲಿ ಆಧುನಿಕ ದೃಕ್ಪಂಚಾಂಗವೂ ಒಂದು ಪ್ರಧಾನ ವಿಷಯವಾಗಿದೆ ಇದನ್ನು ಶ್ರುತಿ ಸ್ಮೃತಿ ಸಮ್ಮತವಾಗಿಯೂ ಶಾಸ್ತ್ರಸಿದ್ಧ ಶಿಷ್ಟಾಚಾರ-ಸಂಪ್ರದಾಯವನ್ನು ಅನುಸರಿಸಿ ಶಾಸ್ತ್ರೀಯವಾಗಿಯೂ, ಸಂಯುಕ್ತಿಕವಾಗಿಯೂ ಖಂಡಿಸಿರುವ ಈ ಗ್ರಂಥವು ಸಕಲ ಆಸ್ತಿಕ ಜನರಿಗೂ ಉಪಾದೇಯವಾಗಿದೆ ಸರ್ವರಿಗೂ ವಿಶ್ವಸನೀಯವಾಗಿದೆ ಈ ಗ್ರಂಥದಲ್ಲಿ ಪ್ರಾರಂಭದಲ್ಲಿ ಕಾಣಿಸಿರುವ ಗ್ರಂಥ ಪ್ರತಿಜ್ಞೆಯು ಸನಾತನ ವೈದಿಕ ಧರ್ಮದ ಮುಖ್ಯ ಸಿದ್ಧಾಂತವಾಗಿರುತ್ತದೆ. ಬಾಣ ವೃದ್ಧಿ-ರಸಕ್ಷಯರಹಿತ ತಿಥ್ಯಾದಿಗಳನ್ನು ಉಂಟು ಮಾಡುವ ಪಂಚಾಂಗಗಣನಾ ರೀತಿಯೂ, ಅದರಂತೆ ಸಿದ್ಧವಾಗುವ ದೃಕ್ಪಂಚಾಂಗವೂ ವೈದಿಕಧರ್ಮ-ಕರ್ಮಾನುಷ್ಠಾನಗಳಿಗೆ ಸರ್ವಥಾ ಅಗ್ರಾಹ್ಯವಾಗಿರುವ ಕಾರಣ ಅದು ಧರ್ಮಬಾಹಿರವಾದುದೆಂದು ಸ್ವಯಂಸಿದ್ಧವಾಗುತ್ತದೆ ಆದುದರಿಂದ ಈ ವಿಧವಾಗಿ ಇಂತಹ ದೃಕ್ಪಂಚಾಂಗವನ್ನು ಅನುಸರಿಸುವುದು ವೈದಿಕ ಕರ್ಮಾನುಷ್ಠಾನಪರರಿಗೆ ಯುಕ್ತವಾಗಿಲ್ಲ ಶಾಸ್ತ್ರವಿಹಿತವಾಗಿ ಸೂರ್ಯಸಿದ್ಧಾಂತಾನುಸಾರವಾಗಿರುವ ಸಿದ್ಧಾಂತ ಪಂಚಾಂಗವೇ ಸಕಲ ಕರ್ಮಾನುಷ್ಠಾನಗಳಿಗೂ ಯೋಗ್ಯವಾಗಿದ್ದು ಅದರಂತೆಯೇ ನಮ್ಮ ಶ್ರೀಮಜ್ಜಗದ್ಗುರು ಮಹಾಪೀಠದ ಸತ್ಸಂಪ್ರದಾಯವಾಗಿಯೂ ಇರುತ್ತದೆ ಆದುದರಿಂದ ವೈದಿಕ ಧರ್ಮಾನುಯಾಯಿಗಳೆಲ್ಲರೂ ದೃಢವಿಶ್ವಾಸದಿಂದ ಸಿದ್ಧಾಂತ ಪಂಚಾಂಗವನ್ನು ಅನುಸರಿಸಿ ಧರ್ಮಕರ್ಮಗಳನ್ನು ಆಚರಿಸಿ ಸಕಲ ಶ್ರೇಯಸ್ಸಿಗೂ ಪಾತ್ರರಾಗಬೇಕಾಗಿ ಆಶಿಸುತ್ತೇವೆ

ವಿದ್ವಾನ್ ಕೇ ಶೇಷಶಾಸ್ತ್ರೀ,
ಮಠಾಧೀಶ್ವರಾಜ್ಞಪ್ತಃ ಧರ್ಮಾಧಿಕಾರಿ,
ಶ್ರೀ ಜಗದ್ಗುರು ಸಂಸ್ಥಾನ, ಶ್ರೀ ಮಠ

ತಾರೀಖು 25-7-1945.

ಧಾರ್ಮಿಕ ಮಹಾಜನರಲ್ಲಿ ಜಾಹೀರ ವಿನಂತಿ.

ಸನಾತನ ವೈದಿಕ ಧರ್ಮಾನುಯಾಯಿಗಳ ಧರ್ಮಕರ್ಮಾಚರಣೆಗೆ ಯೋಗ್ಯವಾದ ಪಂಚಾಂಗವು ಹೇಗಿರಬೇಕೆಂಬುದನ್ನು ಶಾಸ್ತ್ರರೀತ್ಯಾ ಸಪ್ರಮಾಣವಾಗಿ ಸಿದ್ಧಾಂತಪಡಿಸಿರುವ "ಆಸ್ತಿಕ ಪಂಚಾಂಗ ನಿರೂಪಣಪೂರ್ವಕ ದೃಕ್ಪಂಚಾಂಗ ಖಂಡನಂ' ಎಂಬ ಗ್ರಂಥವನ್ನು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಈ ಮೊದಲೇ ನಾವು ಪ್ರಕಟಿಸಿದ್ದು, ಅದನ್ನು ಸುಪ್ರಸಿದ್ಧರಾದ ಅನೇಕ ಮಹಾ ಮಹಾ ವಿದ್ವಾಂಸರೂ, ಮದ್ರಾಸಿನ "ಹಿಂದೂ" ಪತ್ರಿಕೆಯಂತಹ ಲೋಕಪ್ರಸಿದ್ಧ ಪತ್ರಿಕೆಯವರೂ ವಿಮರ್ಶಿಸಿ ಪ್ರಶಂಸನೀಯವಾದ ತಮ್ಮ ಸದಭಿಪ್ರಾಯವನ್ನು ಪ್ರಕಟಪಡಿಸಿರುವರಲ್ಲದೆ, ಸನಾತನ ವೈದಿಕ ಧರ್ಮದ ಮತ್ತು ಸದಾಚಾರಗಳ ಸಂರಕ್ಷಕರಾಗಿ ಧರ್ಮಸಿಂಹಾಸನವನ್ನು ಅಲಂಕರಿಸಿರುವ ಸುಪ್ರತಿಷ್ಠಿತರಾದ ಅನೇಕ ಮಠಾಧಿಪತಿಗಳು ಕೂಡ ಅಧಿಕೃತ ರೀತಿಯಿಂದ ತಮ್ಮ ಮಹಾನುಶಾಸನವನ್ನು ನಿರೂಪಿಸಿರುತ್ತಾರೆ. ಹೀಗಿರುವಲ್ಲಿ ಈಗ ಸಿದ್ಧಾಂತ ಶಾಸ್ತ್ರದ ಪ್ರತಿಪಕ್ಷಿಗಳೂ, ಸನಾತನ ಧರ್ಮವಿರೋಧಿಗಳೂ ಆದ ಕೆಲವರು ಕೇವಲ ಸ್ವಾರ್ಥ, ದುರಭಿಮಾನ, ಅಸೂಯಾದಿ ದುರ್ಭಾವನಾಗ್ರಸ್ತರಾಗಿ ಈ ಗ್ರಂಥದ ವಿಷಯವಾಗಿಯೂ, ಸಿದ್ಧಾಂತ-ಪಂಚಾಂಗ ಹಾಗೂ ದೃಕ್ಪಂಚಾಂಗದ ಯುಕ್ತಾಯುಕ್ತತೆಯ ವಿಷಯದಲ್ಲಿಯೂ ಜನರಲ್ಲಿ ವಿಪರೀತ ಭಾವನೆಯುಂಟಾಗುವಂತೆ ಕೇವಲ ಕುತ್ಸಿತ ರೀತಿಯಿಂದ ಕುಚೇಷ್ಟೆಯನ್ನು ನಡಿಸುತ್ತಿರುವರೆಂದು ತಿಳಿಯುತ್ತೇವೆ. ಆದಕಾರಣ ಧರ್ಮಾಭಿಮಾನಿಗಳಾದ ಸಮಸ್ತ ಆಸ್ತಿಕ ಮಹಾಜನರ ತಿಳುವಳಿಕೆಯ ಬಗ್ಗೆ ಶ್ರೀಮದ್ಭಗವದಾದ್ಯ ಶಂಕರಾಚಾರ್ಯರವರ ಮೂಲಪೀಠವಾದ ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾ ಸಂಸ್ಥಾನದವರು ನಮ್ಮ ಮೇಲ್ಕಾಣಿಸಿದ ಈ ಗ್ರಂಥದ ಪರಿಷ್ಕರ್ತರಿಗೆ ಕಳುಹಿಸಿರುವ ಮಹಾನಿರೂಪದ ಯಥಾ ಪ್ರತಿಯನ್ನು ಇದರ ಹಿಂದುಗಡೆಯಲ್ಲಿ ಪ್ರಕಟಿಸಿರುತ್ತೇವೆ ಇದರಿಂದ ಸರ್ವ ಜನರೂ ನಿಃಶಂಕಿತರಾಗಿ, ಶ್ರೀಮಜ್ಜಗದ್ಗುರು ಪೀಠದ ಮಹಾನುಶಾಸನವನ್ನೇ ಅನುವರ್ತಿಸಿ, ಶ್ರೀ ಮದ್ಭಗವದನುಗ್ರಹಕ್ಕೆ ಪಾತ್ರರಾಗಿ, ಇಹ-ಪರ ಶ್ರೇಯಸ್ಸುಗಳನ್ನು ಸಂಪಾದಿಸಬೇಕಾಗಿ ವಿಜ್ಞಾಪಿಸುತ್ತೇವೆ

ತಾರೀಖು 21-2-1946

ರಾಮಚಂದ್ರ ಶಾಸ್ತ್ರಿ ಸೂರಿ,
ಅದ್ವೈತ-ವೇದಾಂತ-ವಿದ್ವಾನ್, ಕಟೀ

ಇದನ್ನು ಪಾಂಡುರಂಗ ಕೃಷ್ಣ ಜನಭಾಗ ಕುಮಟಾ, ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ಮಹತ್ವದ ಸುದ್ದಿಗಳು.

— ಪಂಜಾಬದೊಳಗೆ ಪ್ರಾಂತಿಕ ಎಸೆಂಬ್ಲಿಯ ಇಲೆಕ್ಶನ ನಡೆದಾಗ ಮಿ॥ ಬ್ರೇಲ್ಸಫರ್ಡರು ಹಾಜರಿದ್ದರು. ಒಬ್ಬೊಬ್ಬ ಉಮೇದ್ವಾರರು ಸರಾಸರಿ ರೂ. ೧-೧ ಲಕ್ಷ ಖರ್ಚು ಮಾಡಿರುವರಾಗಿ ಅವರು ಬರೆದಿದ್ದಾರೆ. ೨-೩ ಲಕ್ಷ ಖರ್ಚು ಮಾಡಿದವರೂ ಇದ್ದಾರಂತೆ. ಮತದಾರರಿಗೆ ಹಣ ಕೊಟ್ಟು ಮತ ಸಂಗ್ರಹವಾಗಿರುವದಾಗಿಯೂ ಅವರ ಅಭಿಪ್ರಾಯ. ಲೀಗಿನವರು ತೀರ ಅಸಹ್ಯ ಪ್ರಕಾರಗಳನ್ನು ಸಹ ನಡಿಸಿದ್ದರಂತೆ. ಇಸ್ಲಾಮ ಧರ್ಮದ ಮೇಲೆ ಗಂಡಾಂತರ ಬಂದಿದೆ; ಲೀಗಿನ ಉಮೇದ್ವಾರರಿಗೆ ಮತ ಕೊಟ್ಟರೇನೇ ಇಸ್ಲಾಮ ಧರ್ಮವುಳಿಯುತ್ತದೆ; ಎಂಬುದಾಗಿ ಮುಸಲ್ಮಾನ ಧರ್ಮಬೋಧಕರು ಬೀದಿ-ಬೀದಿಗಳಲ್ಲಿ ಕುರಾಣವನ್ನು ಕೈಯ್ಯಲ್ಲಿ ಹಿಡಿದು ಗುಲ್ಲೆಬ್ಬಿಸಿದರೆಂದು ಮಿ॥ ಬ್ರೇಲ್ಸಫರ್ಡರು ಬರೆಯುತ್ತಾರೆ. ಗಡಿನಾಡಿನಲ್ಲೂ ಲೀಗಿನವರು ಇದೇ ಬಗೆಯ ಪ್ರಚಾರ ನಡಿಸಿದ್ದರೆಂಬೂ ಅವರು ಉಲ್ಲೇಖಿಸಿದ್ದಾರೆ.

— ಸಿಂಧ ಪ್ರಾಂತದಲ್ಲಿ ಈಗ ಲೀಗಿನ ಮಂತ್ರಿಮಂಡಳವಾಗಿದೆ. ಸಿಂಧ ಎಸೆಂಬ್ಲಿಯಲ್ಲಿ ಒಟ್ಟು ಸಭಾಸದರ ಸಂಖ್ಯೆ ೬೦. ಇಲ್ಲಿ ೬ ಪಕ್ಷಗಳಿವೆ. (೧) ಲೀಗ ಪಕ್ಷದ ೨೭,(೨)ಕೊಂಗ್ರೆಸ ಪಕ್ಷದ೨೧, (೩) ಲೀಗಿನಿಂದ ಹೊರಬಿದ್ದ ಸಯ್ಯದರ ಪಕ್ಷದ ೪, (೪) ರಾಷ್ಟ್ರೀಯ ಮುಸಲ್ಮಾನ ಪಕ್ಷದ ೪, (೫) ಯುರೋಪಿಯನ್ ಪಕ್ಷದ ೩, (೬) ಕೊಲಿಕಾರ ಪಕ್ಷದ ೧, ಹೀಗೆ ಸಭಾಸದರು ಆರಿಸಿ ಬಂದಿದ್ದರು ಯಾವ ಪಕ್ಷಕ್ಕೂ ನಿರ್ಣಾಯಕ ಬಹುಮತವಿರಲಿಲ್ಲ. ಸರದಾರ ವಲ್ಲಭಭಾಯಿ ಪಟೇಲರು ಕರಾಚಿಗೆ ಹೋಗಿ ಸಯ್ಯದ, ರಾಷ್ಟ್ರೀಯ ಮುಸಲ್ಮಾನ ಮತ್ತು ಕೊಂಗ್ರೆಸ ಪಕ್ಷಗಳೊಳಗ ಒಡಂಬಡಿಕೆ ಮಾಡಿ ತಂದು ಸಂಯುಕ್ತ ಪಕ್ಷ ಸಂಘಟಿಸಿದರು. ಸಯ್ಯದ ಪಕ್ಷದ ಪ್ರಮುಖರಾದ ಜನಾಬ ಘುಲಾಮ ಮಹಮ್ಮದ ಸಯ್ಯದರು ಸಂಯುಕ್ತ ಪಕ್ಷದ ನಾಯಕರಾಗಿ ಆರಿಸಲ್ಪಟ್ಟರು. ಈ ಪಕ್ಷದಲ್ಲಿ ೨೯ ಜನರಿದ್ದರು. ಕೊಲಿಕಾರ ಪಕ್ಷದ ಸದಸ್ಯರು ಈ ಪಕ್ಷದೊಡನೆ ಸಹಕರಿಸಲು ಒಡಂಬಟ್ಟು ಹಾಗೆ ಲೇಖವನ್ನೂ ಬರಕೊಟ್ಟಿದ್ದರು. ಹೀಗೆ ಸಂಯುಕ್ತ ಪಕ್ಷಕ್ಕೆ ೩೦ ಅರ್ಧ ಸಭಾಸದರ ಬೆಂಬಲವಿತ್ತು. ಆದರೆ ಗವ್ಹರ್ನರರಿಗೆ ಈ ಪಕ್ಷಕ್ಕೆ ಮಂತ್ರಿಪದ ಕೊಡುವ ಮನಸ್ಸಿರಲಿಲ್ಲ! ರಾಷ್ಟ್ರೀಯ ಮುಸಲ್ಮಾನ ಪಕ್ಷದ ಓರ್ವ ಸಭಾಸದರಿಗೆ ಅವರು ದುರುಪದೇಶ ಕೊಟ್ಟು, ಅಧಿಕಾರದ ಸವಿ ಹಚ್ಚಿ ಲೀಗಿಗೆ ಸೇರಲು ಪ್ರೇರೇಪಿಸಿರು! ಯುರೋಪಿಯನ್ ಪಕ್ಷದವರು ಯಾವ ಪಕ್ಷಕ್ಕೂ ಸೇರಲಿಲ್ಲ. ಕೊಲಿಕಾರ ಸಭಾಸದರು ಸಂಯುಕ್ತ ಪಕ್ಷದಲ್ಲಿ ವಿಧಿವತ್ ಸೇರ್ಪಡೆಯಾಗದ್ದರಿಂದ ಲೀಗ ಪಕ್ಷದಲ್ಲೂ ೨೮. ಸಂಯುಕ್ತ ಪಕ್ಷದಲ್ಲೂ ೨೮ ಸದಸ್ಯರು ಇದ್ದರೆಂದು ತೀರ್ಮಾನಿಸಿ, ಲೀಗದವರು ಇಲೆಕ್ಶನಿನಲ್ಲಿ ಬಹುಸಂಖ್ಯರಾಗಿ ಆರಿಸಿ ಬಂದಿದ್ದರೂ ಬೇರೆ ಎಲ್ಲ ಪಕ್ಷಗಳಿಗಿಂತಲೂ ಹೆಚ್ಚಿಗೆ ಉಮೇದ್ವಾರರನ್ನು ಅವರು ನಿಲ್ಲಿಸಿದ್ದರಿಂದ ಲೀಗ-ಪಕ್ಷದ ಪ್ರಮುಖ ಸರ್ ಘುಲಾಮ ಹುಸೇನ ಹಿದಾಯತುಲ್ಲಾರಿಗೇ ಮನ್ನಣೆ ಕೊಟ್ಟು, ಅವರ ಮಂತ್ರಿ ಮಂಡಳವನ್ನು ರಚಿಸಿಕೊಂಡಿದ್ದಾರೆ. ಬಹುಮತದಿಂದ ಆರಿಸಿಬಂದ ಪಕ್ಷವನ್ನು ಅಲಕ್ಷಿಸಿ ಹೆಚ್ಚು ಉಮೇದ್ವಾರರನ್ನು ನಿಲ್ಲಿಸಿದ ಪಕ್ಷಕ್ಕೆ ಮಂತ್ರಿಮಂಡಳ ರಚಿಸಗೊಡುವ ಕ್ರಮ ನವ-ನೂತನವಾದದ್ದು! ರಾಷ್ಟ್ರೀಯ ಸಭೆಯವರಿಗೆ ಅಧಿಕಾರಪದವನ್ನೊಪ್ಪಿಸಕೂಡದೆಂಬ ಸಾಮ್ರಾಜ್ಯಕಾರಣ ಇನ್ನೂ ಊರ್ಜಿತವುಂಟೆಂದು ಇದರಿಂದ ಸಿದ್ಧವಾಗುತ್ತಿದೆ.

— ಹಿಂದೀ ರಾಷ್ಟ್ರೀಯ ಸೈನ್ಯದ ಕ್ಯಾಪ್ಟನ್ ಶಹಾನವಾಜ ಪ್ರಭೃತಿ ಮೂವರ ಪರವಾಗಿ ದಿಲ್ಲಿಯ ಕೆಂಪುಕೋಟೆಯಲ್ಲಿ ವಕೀಲಿ ನಡಿಸಹೋದ ಶ್ರೀ॥ ಭುಲಾಭಾಯಿ ದೇಸಾಯಿಯವರ ಸ್ವಾರ್ಥತ್ಯಾಗದ ವ್ಯಾಪ್ತಿಯನ್ನು ಮುಂಬಯಿಯ 'ಫ್ರೋವರ್' ಪತ್ರಿಕೆಯ ಸಂಪಾದಕ ಶ್ರೀ॥ ಜೋಕಿಮ ಅಲ್ವಾರವರು ಪ್ರಕಟಿಸಿದ್ದಾರೆ. ಶ್ರೀ॥ ಭುಲಾಭಾಯಿಯವರು ಕೆಂಪುಕೋಟೆಗ ಹೋರಟಸಮಯದಲ್ಲಿ ಶ್ರೀ॥ ಅಲ್ವಾರವರು ಅವರಿಗೊಂದು ವಕಾಲತು ಕೊಡಲು ಹೋಗಿದ್ದರು. ನಿಜಾಮ ಹೈದರಾಬಾದದೊಳಗಿನ ಓರ್ವ ದೊಡ್ಡ ಅಧಿಕಾರಿಯ ಮೇಲೆ ಒಂದು ಖಟ್ಲೆ ನಡೆಯುವದಿತ್ತು. ಈ ಖಟ್ಲೆ ಸುಮಾರು ೭ ತಿಂಗಳು ಕಾಲ ನಡೆಯುವಂತಿತ್ತು. ದಿನಕ್ಕೆ ರೂ ೨೦೦೦ದಂತೆ ರುಸುಮು ಕೊಡುತ್ತೇವಾಗಿಯೂ ಶ್ರೀ॥ ಅಲ್ವಾರವರು ತಿಳಿಸಿದರಂತೆ. ಅದರೂ ಶ್ರೀ॥ ಭುಲಾಭಾಯಿಯವರು ಆ ಖಟ್ಲೆ

— [illegible] ಬೊಲ್ಲ ರೌಲಂಡ್ಸರವರು ಕಳೆದ ಗುರುವಾರ ೧೯೪೭-೪೮ನೇ ವರ್ಷದ ಜಮಾ-ಖರ್ಚಿನ ಅಂದಾಜ-ಪತ್ರಿಕೆಯನ್ನು ವರಿಷ್ಠ ಕಾಯದೆ-ಮಂಡಳದಲ್ಲಿ ಮಂಡಿಸಿದರು. ಚಿಮಣಿ ಎಣ್ಣೆ, ಪೆಟ್ರೋಲ ಇವುಗಳ ಮೇಲಿನ ತೆರಿಗ ಕಡಿಮೆ ಮಾಡಲ್ಪಟ್ಟಿದೆ. ರೂ. ೧೫,೦೦೦ಕ್ಕಿಂತ ಕಡಿಮೆಯಿರುವ ಉತ್ಪನ್ನಗಳ ಲಾಭದ ಕರ ಕೆಲ ಮಟ್ಟಿಗೆ ಇಳಿಸಲ್ಪಟ್ಟಿದೆ. ಆಮದಾಗುವ ಚಿನ್ನದ ಮೇಲೆ ತೊಲೆ ೧ಕ್ಕೆ ರೂ. ೬೫ರಂತೆ ಮತ್ತು ಬೆಳ್ಳಿಯ ಮೇಲೆ ೩|| ತೊಲೆಗಳಿಗೆ ೮ ಆಣೆಯಂತೆ ಆಮದು-ತೆರಿಗೆ ಹೇರಲ್ಪಟ್ಟಿದೆ ದೇಶದೊಳಗಿನ ಅಡಿಕೆಯ ಮೇಲಿನ ಸುಂಕ ರದ್ದಾಗಿಲ್ಲ. ವಿದೇಶಿ ಅಡಿಕೆ ಬಂದು ಇಲ್ಲಿಯ ಅಡಿಕೆಯ ಕ್ರಯ ಇಳಿಯಬಾರದೆಂದು ಆಮದಾಗುವ ಅಡಿಕೆಗೆ ರತ್ತಲ ೧ಕ್ಕೆ ೫॥ ಆಣೆಯಂತೆ ತೆರಿಗೆ ಹೇರಲ್ಪಟ್ಟಿದೆ. ರೋಗ ವರ್ತಕರಿಂದ ಅಡಿಕೆ ತೋಟಿಗರಿಗೆ ಆಗುವ ನಷ್ಟ ತಪ್ಪಿಸುವದಕ್ಕಾಗಿ ವರ್ಷಾಶನ ರೂ.೩ ಲಕ್ಷಖರ್ಚುಮಾಡಿಅಡಿಕೆಮಾರಾಟದ ವ್ಯವಸ್ಥೆ ಮಾಡುವ ಏರ್ಪಾಟಾಗಿದೆ. ಈ ಜಮಾ-ಖರ್ಚು ಪತ್ರಿಕೆಯಿಂದ ಯಾರಿಗೂ ಸಮಾಧಾನವಾ[illegible] ಪತ್ರಿಕೆಯ ಚರ್ಚೆ ಈ ವಾರ ನಡೆಯುವದು.

— ಮುಂಬಯಿ ಪ್ರಾಂತದ ಕರಾವಳಿಯಲ್ಲಿರುವ ಸಣ್ಣ ಸಣ್ಣ ಬಂದರಗಳನ್ನು ಸುಧಾರಿಸುವ ವಿಚಾರ ಮಾಡುವದಕ್ಕಾಗಿ ಮುಂಬಯಿ ಸರಕಾರವು ನೇಮಿಸಿದ ಮಂಡಳದ ಸಭೆ ಮುಂಬಯಿಯಲ್ಲಿ ಕಳೆದ ಮಂಗಳ-ಬುಧವಾರ ನಡೆಯಿತು. ಈ ಸಭೆಗೆ ಮೈಸೂರ ಸರಕಾರದ ಧೂಕೆಂದಾರಿಯ ಇಲಾಖೆಯ ಕಾರ್ಯದರ್ಶಿಗಳೂ ಹಾಜರಿದ್ದರು. ಭಟಕಳ ಬಂದರ ಸುಧಾರಿಸುವ ಪ್ರಶ್ನೆಯ ಮೇಲೆ ವಿಚಾರ ವಿನಿಮಯವಾಯಿತು. ಮೈಸೂರ ಸಂಸ್ಥಾನದ ಉದ್ದಿಮೆಗಳ ಅಭಿವೃದ್ಧಿಗಾಗಿ ಭಟಕಳ ಬಂದರ ಅವಶ್ಯವಿರುವದೆಂದೂ ಮುಂಬಯಿ ಸರಕಾರವು ಆ ಬಂದರವನ್ನು ಸಂಸ್ಥಾನಕ್ಕೆ ಒಪ್ಪಿಸಬೇಕೆಂದೂ ಮೈಸೂರ ಅಧಿಕಾರಿಗಳು ಮಂಡಳಕ್ಕೆ ಸೂಚಿಸಿದರಂತೆ.ಆದರೆ ಮಂಡಳದ ನಿರ್ಣಯವೇನಾಯಿತೆಂಬದು ತಿಳಿಯಲಿಲ್ಲ. ಮೈಸೂರ ಸಂಸ್ಥಾನಕ್ಕೆ ಭಟಕಳ ಒಪ್ಪಿಸದಿದ್ದರೂ ಮುಂಬಯಿ ಸರಕಾರವು ಅದನ್ನು ಸ್ವತಂತ್ರವಾಗಿ ರೂಪಿತಗೊಳಿಸುವದೆಂದು ಎಣಿಸಲಾಗಿದೆ.

ಮುಂಬಯಿ ಲೆಜಿಸ್ಲೇಟಿವ್ಹ ಜನರಲ್ ಮತದಾರರಲ್ಲಿ ಬಿನ್ನಹ.

ದೊಡ್ಡ ದೊಡ್ಡ ಜಮೀನುದಾರ ಬಂಡವಾಳಶಾಹಿಗಳನ್ನು ಬಗ್ಗುಬಡಿದು ಜಮೀನು ಕೊಟ್ಟು, ಸಾಲುಗಳನ್ನು ಒತ್ತಟ್ಟು ಮಾಡಿ ಜನತೆಯ ಸರ್ವಸಾಮಾನ್ಯ ಹಕ್ಕು, ಅಡಿಕೆ ತೋಟಗಾರರ ಸಂಪೂರ್ಣ ಹಿತ, ಬಡ ರೈತರ ಯಾವತ್ತೂ ಕಷ್ಟಗಳ ಪರಿಹಾರ, ಹರಿಜನ ಬಾಂಧವರ ಹಿತ, ಇಂಡಿಯನ್ ಕ್ರಿಶ್ಚನ್, ನಾಮಧಾರಿ, ಗಾಮವಕ್ಕಲು, ಕೊಂಕಣ ಮರಾಠಾ ವೀರ ಬಾಂಧವರ ಹಿತ, ರೈತ ಸಂಘ, ಬೇಸಾಯ ಸಂಘ, ಕಲಾ ಪ್ರೋತ್ಸಾಹ, ಯಕ್ಷಗಾನ ದಶಾವತಾರ, ಸಂಗೀತ, ಭರತ ನಾಟ್ಯ-ನೃತ್ಯ ಮುಂತಾದ ಸಂಘಗಳು- ಅಂಥ ಸಂಘಗಳ ಘಟನೆಗೆ ಸರಕಾರದ ಸಹಾಯ ಪಡೆಯಲು ಬ್ರಿಟಿಶ ಸರಕಾರದ ವಿರುದ್ಧ ಹೋರಾಡುವದಕ್ಕಾಗಿಯೂ ಜನತಾ ಸ್ವಾತಂತ್ರ್ಯದ ಸಂಗ್ರಾಮಕ್ಕಾಗಿ ಜೀವನದ ಹಂಗು ದೊರೆದು ಕಾದಾಡಲು ವೀರ ಪ್ರತಿಜ್ಞೆ ಮಾಡಿ ಈ ವರೆಗೆ ನನಗೆ ಭೆಟ್ಟಿಯಾಗಿರುವ ಮೇಲ್ಕಾಣಿಸಿದ ಸಂಘ, ಪಕ್ಷ-ಸಂಗಡಗಳ ಮುಖಂಡರ ಪ್ರೇರಣೆಯಿಂದ ಅವರವರ ಬಗ್ಗೆ ನನ್ನ ತನು-ಮನ-ಧನದಿಂದ ಕಾದಾಡುವ ನಿಶ್ಚಿತ ಗುರಿಯನ್ನು ಸಾಧಿಸುವದಕ್ಕಾಗಿ ನಾನು ಒಂದು ಉಮೇದವಾರನಾಗಿ ನಿಂತಿದ್ದೇನೆ. ನಿಮ್ಮ ಬಗ್ಗಾಗಿ ಇಂದೇ ನನ್ನ ಜೀವನಸರ್ವಸ್ವವನ್ನು ಧಾರೆಯೆರೆದು ನಿಮ್ಮ ಸೇವೆಯೇ ನನ್ನ ಪ್ರಾಣಾಂತಿಕ ಧ್ಯೇಯ ಎಂದು ವೀರ ಪ್ರತಿಜ್ಞೆ ಮಾಡಿ ಆಶ್ವಾಸನೆ ಕೊಡುತ್ತೇನೆ.

ಹಿಂದೀ ಜನಾಂಗದ ಮುಖ್ಯ ಧ್ಯೇಯವಾದ ಜನತಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಜಿಲ್ಲೆಯ ಮೊದಲನೇ ಆಹುತಿ ನನ್ನದೇ ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ

ಜನತಾ ಸ್ವಾತಂತ್ರ್ಯವೇ (ನಿಜವಾದ ಲೋಕನಿಯಂತ್ರಿತ ಸ್ವರಾಜ್ಯವೇ) ತಮ್ಮ ಧ್ಯೇಯವೆನ್ನುವವರು ಮೇಲ್ಕಾಣಿಸಿದ ಸಂಸ್ಥೆ-ಪಕ್ಷ-ಸಂಗಡದವರು ನಿಮ್ಮ ಹಿತವನ್ನು ನನ್ನ ಕೈಯಿಂದ ಕಾಪಾಡಿಕೊಳ್ಳುವದಕ್ಕಾಗಿ ನಿಮಗಿರುವ ಮೂರೂ ಮತಗಳನ್ನು ನನಗೇ ದಾನ ಮಾಡಬೇಕಾಗಿ ಅತ್ಯಂತ ನಮ್ರನಾಗಿ ಪ್ರಾರ್ಥಿಸುತ್ತೇನೆ.

ನೇಗಿಲ ಗುರ್ತು ಇರುವ ಒಂದನೇ ನಂಬರಿನ ಕಣದಲ್ಲಿ ಯಾವದೇ ಗೆರೆಗಳಿಗೆ ತಾಗದಂತೆ
ಹೀಗೆ ಮೂರೂ ಗುರುತುಗಳನ್ನು ಹಾಕಿರಿ.

ಇತಿ ನಿಮ್ಮ ಸೇವಕ,

ಗಣಪತಿ ಶ್ರೀಧರ ಹೆಗಡೆ, ವಕೀಲ, ಕುಮಟಾ.

ಯ ಚ
ಜದ ಹಿ
ಯಾಗಿ
ಶಕ್ತಿ ಲ
ವೊನ್ನೆ
ದೆಂದರೆ
ಯೇ ಸ
ಲ್ಯವನ್ನು
ರಾಷ್ಟ್ರಭ
ಕ್ಷೆಯಿಂ
ರಿಗೇ ವ
ನವ್ನು ಜ
ಕೊಳ್ಳಬೆ

೩೦(

ಹಿಂದಿ
ಸತೊಡಗಿ
ತುಂಬ ಕ
ನಿಚ್ಚ್ರ್ವ-
ವ್-ಡಳದ
ಉಮೇದ
ಸೋಲಿಸಿ
ಸಿದ್ಧಗೊಳಿ
ಕರ ಮುಸ
ನಾದ್ಯವಿಲ್ಲೆ
ಸಭೆಯ ಕ
ನೇರವಾಗಿ
ಮುಸ್ಲಿಮ
ಸಿದ್ದಾರೆ.
ಪ್ರಾಂತಗಳ
ತ್ತ ಮಾಡಿ
ಅವರಿಗೆ ಸಾ
ರುಗಳೊಳ
ದೊರಕಿಸಿ ಕ
ಸಿಂಧದೊಳ
ಲೀಗಿಗೆ ಸೇ
ವಿಶ್ವಪ್ರಯತ್ನ
ಓವ್ಹರೋ ಅ
ಪಕ್ಷಕ್ಕೆ ಗಟ್ಟ
ಅನುಗ್ರಹದಿ
ಉಲುಳಿಸಿ ಬ
ಅಲ್ಲಿಯ ಎಸೆ
ತ್ತಿದೆ. ಆಗ
ಸೂಚನೆ ಸ
ಲ್ಪಟ್ಟು ಲೀ
ವದೆಂದೂ ಸಿ
ಡಳದ ಅಧ್ಯ
ಉದ್ಧರಿಸಿದಾ
ನೌರವ ಉಳಿ
ಪಂಜಾಬದಲ್ಲಿ
ಎಸೆಂಬ್ಲಿಗೆ ಆ
೭೫ ಜನರು ೯
ರು, ೩೩ ಅಕಾ
ರು ಮತ್ತು
ಲೀಗಿಗೆ ಅಲ್ಲಿ
ಕೂಡಿಕೊಂಡ
ಕ್ಕೆ ಅವರಿಗೆ ಕ

ಪಾಕಿಸ್ತಾನಕ್ಕೆ ಮನ್ನಣೆ ಕೊಟ್ಟನಂತರ ರಾಜ್ಯಘಟನೆಯ ವಿಚಾರ ಮಾಡಲು ಮುಸ್ಲಿಮ ಲೀಗು ಒಡಂಬಡದೆ ಹಟಹಿಡಿದರೆ ಲೀಗನ್ನು ಲಕ್ಷಿಸದೆಯೇ ಭಾರತ ಮಂತ್ರಿಗಳು ಘಟನೆಯ ನಿರ್ಣಯ ಮಾಡುವರೆಂದು ಸದರ ಪತ್ರಿಕೆಯು ಬರೆದಿದೆ. ರಾಷ್ಟ್ರೀಯ ಸಭೆಯ ತತ್ವಗಳನ್ನೂ ವಿಚಾರಗಳನ್ನೂ ಶಿಷ್ಟರು ಮನ್ನಿಸುವರೆಂದೂ ಪಾಕಿಸ್ತಾನದ ಬೇಡಿಕೆ ತಿರಸ್ಕರಿಸುವರೆಂದೂ 'ನ್ಯೂಸರಿವ್ಯೂ'' ಪತ್ರಿಕೆ ಆತ್ಮವಿಶ್ವಾಸದಿಂದ ಬರೆಯುತ್ತಿದೆ. 'ಬ್ರಿಟಿಶ ಸರಕಾರದ ಮನೋಭೂಮಿಯಲ್ಲಿ ಈ ಪ್ರಕಾರ ವ್ಯತ್ಯಾಸವಾದದ್ದು ಒಂದು ಶುಭ ಲಕ್ಷಣವೇ. ಬ್ರಿಟಿಶ ಮಂತ್ರಿಮಂಡಳವು ತಮ್ಮ ಶಿಷ್ಟರ ಕಡೆ ಭಾರತೀಯರೊಡನೆ ಆಗಬೇಕಾದ ಒಪ್ಪಂದದ ಒಂದು ಕರಡನ್ನು ತಯಾರಿಸಿ ಕಳಿಸುವದೆಂದೂ ಇದೇ ಬರುವ ತಾ. ೧೫ರ ಸುಮಾರಿಗೆ ಶಿಷ್ಟರು ಹಿಂದುಸ್ಥಾನಕ್ಕೆ ತೆರಳುವರೆಂದೂ ಮುಂಬಯಿ ಕ್ರೊನಿಕಲ ಪತ್ರಿಕೆಯ ಲಂಡನ ಸುದ್ದಿಗಾರರು ತಿಳಿಸುತ್ತಾರೆ. ಚುನಾವಣೆಗಳಲ್ಲಿ ಮತದಾರರು ರಾಷ್ಟ್ರೀಯ ಸಭೆಗೆ ಬೆಂಬಲ ಕೊಟ್ಟು ರಾಷ್ಟ್ರೀಯ ಸಭೆಯು ಪ್ರಪಂಚ ವಿಶಾಲವಾದುದೆಂದು ಬಹಿರಂಗವಾಗಿ ಹೇಳುವದು ಈವಾಗ ಅವಶ್ಯವುಂಟು. ಮತದಾರರೂ ಪ್ರಜೆಗಳೂ ಪ್ರದರ್ಶಿಸುವ ನಿಷ್ಠೆಯೇ ರಾಷ್ಟ್ರೀಯ ಸಭೆಯ ಸಾಮರ್ಥ್ಯದ ಹೆಗ್ಗುರುತೆಂಬದನ್ನು ಮರೆಯಲಾಗದು. ಬ್ರಿಟಿಶ ಶಿಷ್ಟರು ರಾಷ್ಟ್ರೀಯ ಸಭೆಯೊಡನೆ ಸಂಧಾನ ಮಾಡಲು ಬರುತ್ತಿರುವಾಗ ಸಕಲ ಪ್ರಜೆಗಳ ಸ್ವಯಂಸ್ಫೂರ್ತ, ಬೆಂಬಲ ರಾಷ್ಟ್ರೀಯ ಸಭೆಗುಂಟೆಂದು ಇನ್ನೊಮ್ಮೆ ವ್ಯಕ್ತವಾಗುವದು ಲೇಸು. ದೇಶಸ್ವಾತಂತ್ರ್ಯದ ಸಂಬಂಧದಲ್ಲಿ ತಮ್ಮ ಹೃದ್ಗತವೇನುಂಟೆಂದು ಪ್ರದರ್ಶಿಸಿ ರಾಷ್ಟ್ರೀಯ ಸಭೆಗೆ ಬೆಂಬಲ ಕೊಟ್ಟರೆ ಹಿಂದೀ ರಾಜಕಾರಣವು ರಾಷ್ಟ್ರೀಯ ಸಭೆಯ ಮನಸ್ಸಿನಂತೆಯೇ ರೂಪುಗೊಳ್ಳುವದು. ಹಿಂದೀ ಜನಾಂಗದ ಕಷ್ಟಕಾಲ ಮುಗಿಯುತ್ತ ಬಂದಿದೆ; ಸೌಖ್ಯದ ಕಾಲ ನಡೆದು ಬರುತ್ತಿದೆ. ಆ ಕಾಲದ ಸ್ವಾಗತಕ್ಕೆ ಅನುರೂಪವಾಗಿ ಹಿಂದೀಯರು ವರ್ತಿಸಬೇಕು. ಹಿಂದೀ ರಾಜಕಾರಣವನ್ನು ಸುಧಾರಿಸಿಕೊಳ್ಳುವ ಹೊಣೆ ಈವಾಗ ಹಿಂದೀಯರ ಮೇಲೆ — ಮತದಾತರರ ಮೇಲೆ — ಉಂಟು.

ಸ್ಥಾನಿಕ ವೃತ್ತಾಂತ.

ಕುಮಟಾ— ಧಗೆಯಾಗುತ್ತಿದೆ ಊರಲ್ಲಿ ಸೆಖೆಯು, ಸೀತಾಳದ ಬೇನೆಗಳುಂಟು. ನಗರ ಸಭೆಯವರು ಮಾರ್ಗಗಳ ಮೇಲೆ ನೀರು ಹಾಕಿಸುವ ವ್ಯವಸ್ಥೆ ಮಾಡಿರುವರೇನೋ ನಿಜ. ಆದರೆ ಧೂಳಿಯ ಕಾಟ ಮಾತ್ರ ಏನೇನೂ ಕಡಿಮೆಯಾಗಿಲ್ಲ! ನೀರು ಹಾಕುವ ಸಮಾನೆ ಅಷ್ಟು ಪರಿಣಾಮಕಾರಿಯುಂಟು!

ಸೀಧಾ ಅಂಗಡಿಗಳಲ್ಲಿ ಈಗ ಪ್ರತಿಯೊಂದು ಜಾತಿಯ ಅಕ್ಕಿಯ ಬೆಲೆಯನ್ನು ಪ್ಯಾಲಿ ೧ಕ್ಕೆ ೧ ಆಣೆಯಂತೆ ಏರಿಸಿದ್ದಾರೆ. ಗೋದಿಯ ಬೆಲೆಯೂ ಪ್ಯಾಲಿಗೆ ರೂ. ೧-೨-೦ ಆಗಿದೆ. ರಾಗಿ ಇನ್ನೂ ಬಂದಿಲ್ಲ. ಬಡವರು ರಾಗಿಗಾಗಿ ಬಾಯಿ ಬಿಡುತ್ತಿದ್ದಾರೆ.

ಕಳ್ಳಬ್ಬೆ ಕೊಲೆಯ ಖಟ್ಲೆಯಲ್ಲಿ ಮುಗ್ಗೆ-ಹಿಡಿದ ಆನೇ ಆರೋಪಿಯ ಭ್ರಾಂತಿ ನಿಜವಾದ ಭ್ರಾಂತಿಯೋ ಹೇಗೆಂದು ನಿಶ್ಚಯಾತ್ಮಕವಾಗಿ ಹೇಳಲು ಸಿವ್ಹಿಲ್ ಸರ್ಜನರು ಅವಧಿ ಬೇಕೆಂದು ಕೇಳಿದ್ದರಿಂದ ಖಟ್ಲೆಯ ವಿಚಾರ ತಾ. ೧೫-೩-೪೬ಕ್ಕೆ ಮುಂದೂಡಲ್ಪಟ್ಟಿದೆ. ವಿಚಾರಣೆ ಇಲ್ಲೇ ಮುಂದರಿಯುವದು

ಕಾಂಗ್ರೆಸ ಉಮೇದವಾರರಾದ ರಾ|| ಸ. ಪ. ಗಾಂವಕಾರ ಮತ್ತು ರಾ|| ರಾಮಚಂದ್ರ ಪ್ರಭು ಇವರು ಕಳೆದ ಸೋಮವಾರ ಸಾಯಂಕಾಲ ಜಿಲ್ಹಾ ಕಾಂಗ್ರೆಸ ಸಮಿತಿಯ ಉಪಾಧ್ಯಕ್ಷ ರಾ|| ತಿ. ಶ್ರೀ. ನಾಯಕ ಮತ್ತು ಮೇಲ್ಮನೆಯ ಸದಸ್ಯರಾಗಿ ಆರಿಸಲ್ಪಟ್ಟ ರಾ|| ಮಹಾಬಲೇಶ್ವರ ಭಟ್ಟ ಗೋಳಿ ಇವರೊಡನೆ ಚುನಾವಣೆ ಪ್ರಚಾರಕ್ಕಾಗಿ ಇಲ್ಲಿಗೆ ಬಂದಿದ್ದರು. ಗಾಂಧಿ ಚೌಕದಲ್ಲಿ ಅವರೆಲ್ಲರ ಭಾಷಣಗಳಾದವು. ಚುನಾವಣೆಯಲ್ಲಿ ಕಾಂಗ್ರೆಸ್ಸು ಏಕೆ ಬೇಕು? ಕಾಂಗ್ರೆಸ್ಸಿನ ಗೊತ್ತುಗುರಿಗಳೇನು? ಎಂಬದನ್ನು ಅವರು ವಿವರಿಸಿ ಕಾಂಗ್ರೆಸ ಉಮೇದವಾರರಿಗೇ ಮತಗಳನ್ನು ಹಾಕಲು ವಿನಂತಿಸಿದರು. ಮುಸ್ಲಿಮ ಬಂಧುಗಳೆಲ್ಲರು ಇಂಗ್ಲಿಷ

ಕಾರವಾರ ಜಿಲ್ಹೆಯವರಿಗೆ ಪಂ|| ಜವಾಹಿರಲಾಲರ ಆದೇಶ.

I send my good wishes to Shris. S S Shastri, S P Gaonkar and R M Prabhu, the Congress candidates for the Assembly election in North Kanara. As Congress candidates they represent the Congress programme, as laid down in the Election Manifesto, and stand for the independence of India and for peasants' rights in the land Today, even more than before, all voters have to stand by the Congress and thus strengthen the only real army of liberators in the country I hope, therefore, that all voters will vote for the Congress candidates and thus vote for freedom''

Feb 27, 1946

Jawaharlal Nehru.

ಉತ್ತರ ಕನ್ನಡ ಜಿಲ್ಹೆಯಲ್ಲಿ ಎಸೆಂಬ್ಲಿ ಚುನಾವಣೆಗೆ ನಿಂತ ಕಾಂಗ್ರೆಸ ಉಮೇದವಾರರಾದ ಶ್ರೀ|| ಶಿ. ಶಿ. ಶಾಸ್ತ್ರಿ, ಸ. ಪ. ಗಾಂವಕಾರ ಮತ್ತು ರಾ. ಮು. ಪ್ರಭು ಇವರಿಗೆ ನನ್ನ ಆಶೀರ್ವಾದ ಕಳಿಸುತ್ತೇನೆ. ಕಾಂಗ್ರೆಸ ಉಮೇದವಾರರೆಂಬ ನಾತೆಯಿಂದ ಅವರು ಚುನಾವಣೆ – ಘೋಷಣೆಯಲ್ಲಿ ವಿವರಿಸಿದ ಕಾಂಗ್ರೆಸ ಕಾರ್ಯಕ್ರಮವನ್ನು ಪುರಸ್ಕರಿಸುವರಲ್ಲದೆ ಭಾರತ ಸ್ವಾತಂತ್ರ್ಯಕ್ಕಾಗಿಯೂ ನಾಡಿನೊಳಗಿನ ರೈತರ ಹಕ್ಕು-ಬಾಧ್ಯತೆಗಳಿಗಾಗಿಯೂ ಹೋರಾಡುವರು. ಹಿಂದಿನಕ್ಕಿಂತ ಈವಾಗ ಸಮಸ್ತ ಮತದಾರರು ಕಾಂಗ್ರೆಸ್ಸಿನ ಬೆಂಬಲಕ್ಕೆ ನಿಂತು, ದೇಶದಲ್ಲಿರುವ ಒಂದೇ ಒಂದು ಸ್ವಾತಂತ್ರ್ಯ-ಸೇನೆಯ ಶಕ್ತಿಯನ್ನು ಬೆಳಸಬೇಕಾಗಿದೆ. ಆದ್ದರಿಂದ ಎಲ್ಲ ಮತದಾರರು ಕಾಂಗ್ರೆಸ ಉಮೇದವಾರರಿಗೆ ಅಂದರೆ ಸ್ವಾತಂತ್ರ್ಯಕ್ಕೆ ಮತ ಹಾಕುವರೆಂದು ಆಶಿಸುತ್ತೇನೆ.

ತಾ. ೨೭ ಫೆಬ್ರುವರಿ, ೧೯೪೬.

ಜವಾಹಿರಲಾಲ ನೆಹರು.

ಭಾಷಣ ಕೊಟ್ಟು ಸ್ವಾತಂತ್ರ್ಯಕಾಂಕ್ಷಿಗಳು ಕಾಂಗ್ರೆಸ್ಸಿಗೇ ಬೆಂಬಲ ಕೊಡುವದು ಅವಶ್ಯವಿರುತ್ತದೆಂದು ಪ್ರತಿಪಾದಿಸಿದರು. ಅದೇ ರಾತ್ರಿ ಕಾಂಗ್ರೆಸ ಕೆಲಸಗಾರರನ್ನು ಅಭ್ಯಾಗತರು ಭೆಟ್ಟಿಯಾಗಿ ಮತಗಟ್ಟೆಗಳಲ್ಲಿ ಏನೇನು ವ್ಯವಸ್ಥೆ ಮಾಡಬೇಕೆಂಬುದನ್ನು ತಿಳಿಸಿ ಹೇಳಿದರು. ೩ನೆಯ ಉಮೇದವಾರರಾದ ರಾ|| ಶಾಸ್ತ್ರಿಯವರು ಅಸ್ವಸ್ಥರಾಗಿ ಶಿರ್ಶಿಯಲ್ಲಿರಬೇಕಾದ್ದರಿಂದ ಇಲ್ಲಿ ಬಂದು ಮುಟ್ಟಲಿಲ್ಲ. ಮಂಗಳವಾರ ಪ್ರಚಾರಕರು ಕರ್ಕಿ, ಧಾರೇಶ್ವರ, ಹೆಗಡೆ ಊರುಗಳಲ್ಲಿ ಪ್ರಚಾರ ಮಾಡಿ ಅಂಕೋಲಾ ತಾಲೂಕಿಗೆ ತೆರಳಿದರು. ಎಲ್ಲ ಕಡೆ ಕಾಂಗ್ರೆಸ ಉಮೇದವಾರರಿಗೆ ಪ್ರಚಂಡ ಬೆಂಬಲ ಸಿಗುವದಾಗಿ ಆಶ್ವಾಸನೆಗಳು ಸಿಕ್ಕಿವೆ

ಅಧಿಕಾರಿಗಳು ಪ್ರಾಂತಿಕ ಪ್ರಾಥಮಿಕ ಶಿಕ್ಷಕ ಸಂಘದವರೊಡನೆ ಈಗ ಸಂಧಾನ ನಡಿಸುತ್ತಿರುವದರಿಂದ ಸದ್ಯಕ್ಕೆ ಸಂಪು ಹೂಡಬಾರದೆಂದು ತಾ. ೧ಕ್ಕೆ ಸಂಘದ ಅಧ್ಯಕ್ಷರ ತಂತಿ ಬಂದ ಮೇರೆಗೆ ಇಲ್ಲಿ ಯಾರೂ ಸಂಪು ಮಾಡಿಲ್ಲ

ದೀವಗಿ, ಕಡಾವಂತ ಮತ್ತು ವೆಂಕಟಾಪುರ ಕಾಗಳ ಭೂಕೆ ಲಿಲಾಂವು ಕಳೆದ ಸೋಮವಾರ ನಡೆಯಿತು. ಈ ಕಾಗಳಲ್ಲಿ ಭೂಮಿಯ ಲೊಂಚಗಳನ್ನು ಇಡುವ ಆಲೋಚನೆಯುಂಟೆಂದೂ ಆ ಆಲೋಚನೆ ಸಫಲವಾದರೆ ೩ ತಿಂಗಳ ನೋಟೀಸು ಕೊಟ್ಟು ಮಕ್ತಗಳನ್ನು ಅಂತ್ಯಗೊಳಿಸಲಾಗುವದೆಂದೂ ಅಧಿಕಾರಿಗಳು ಹೊಸ ಕರಾರು ಹಾಕಿದ್ದರಿಂದ ಕೆಲವರು ತಮ್ಮ ಲಿಲಾಂವು ಪತ್ರಗಳನ್ನು ತಿರುಗಿ ಬೇಡಿದರು. ಇದೇ ವರ್ಷದ ಹಿಂದಿಯ ವ್ಯವಸ್ಥೆ ಮಾಡಿಕೊಂಡ ಮೇಲೆ ನಡುವೆಯೇ ಮಕ್ತ ಅಂತ್ಯವಾದರೆ ಹಾನಿಯಾಗುವದೆಂದು ಅವರ ಅಂಬೋಣವಾಯಿತು. ಕೆಲವರು ತಮಾಲು ಮಾಡಿದರು. ಆದರೆ ಅವು ಕಾಯಂ ಆಗಲಿಲ್ಲ. ೧೦-೨೦ ವರ್ಷಗಳ ಸರಾಸರಿ ನೋಡಿಕೊಂಡನಂತರ ಕಾಯಂ ಮಾಡಲಾಗುವದಿಲ್ಲವೆಂದು ನಮಗೆ ಹೇಳಲಾಯಿತು. ಎಕ್ಸಿಕ್ಯೂಟಿವ್ಹ ಇಂಜನಿಯರರು ಸ್ವತಃ ಹಾಜರಿದ್ದರೂ ತಮಾಲು ಕಾಯಂ ಆಗದಿದ್ದದ್ದು ನೋಡಿ ಕೆಲವರಿಗೆ ಆಶ್ಚರ್ಯವಾಗಿದೆ.

ಇಲ್ಲಿಯ ಕಲಬಾಗಕರ ಮನೆತನದ ರಾ|| ಗಂಗಾಧರ ಗಣಪಯ್ಯ ಶಾನಭಾಗ ಇವರು ಇಂದು ಉಷಃಕಾಲಕ್ಕೆ ಉದರವೇದನೆಯಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರು ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಬಹಳ ಕಾಲ ಸಭಾಸದರಾಗಿಯೂ ಉಪಾಧ್ಯಕ್ಷರಾಗಿಯೂ ದುಡಿದಿದ್ದರು. ಧರ್ಮಬುದ್ಧಿಯವರೂ, ರಾಷ್ಟ್ರೀಯ ಪ್ರವೃತ್ತಿಯವರೂ ಇದ್ದರು. ಮೃತಾತ್ಮರಿಗೆ ಸದ್ಗತಿ ದೊರೆಯಲಿ!

ತಾ. ೪-೨-೪೬ರ 'ವೃತ್ತ'ದಲ್ಲಿ ಮಾದನಗೇರಿಯ ಉಗ್ರಾಣದ ಬಗ್ಗೆ ಪ್ರಕಟವಾದ ಕಥೆ ಅಕ್ಷರಶಃ ಸತ್ಯವಿರುತ್ತದೆಂದು ರಾ|| ವಾಸುದೇವ ವೈಕುಂಠ ಕಾಮತ ಇವರು ಗೋಕರ್ಣದಿಂದ ಬರೆಯುತ್ತಾರೆ. ಸುಂಗುಆಳ್ಳು, ಹೊಟ್ಟು ಭತ್ತ ತಂದು ತಮಗೆ ಮೋಸ ಮಾಡುತ್ತಾರೆಂದು ಉಗ್ರಾಣದಾರರನ್ನು ವಿದು ತಮ್ಮ ದೋಷ ಮುಚ್ಚಿಕೊಳ್ಳುವದಕ್ಕಾಗಿ ಎಂದು ಅವರು ಹೇಳುತ್ತಾರೆ. ಸುಂಗು ಮುರಿಯುವ ಪ್ರಥಾ ಹಿಂದೆ ಕಾವು ಎಲ್ಲೂ ಕಂಡಿಲ್ಲವೆಂದು ಅವರ ಅಂಬೋಣ. ಈ ಉಗ್ರಾಣದಲ್ಲಿ ನೆನಸಿದ ಭತ್ತವನ್ನು ತಕ್ಕಡಿಯಲ್ಲಿಟ್ಟು ರೈತರ ಭತ್ತ ಕಾಸಿಕೊಳ್ಳುತ್ತಿದ್ದರೆಂದು (ಈಗಲೂ ಹಾಗೆಯೇ ಮಾಡುತ್ತಾರಂತೆ!) ತಾವು, ಮೇಲಧಿಕಾರಿಗಳು ಚೌಕಶಿಗೆ ಬಂದಲ್ಲಿ ಪುರಾವೆಯಿಂದ ಸಿದ್ಧ ಮಾಡಿಕೊಡುತ್ತೇವಾಗಿ ಅವರು ಬರೆಯುತ್ತಾರೆ

ಉಳವರೆ ಕಾರಿಯ ಬಳಿ ನಾಡುಮಾಸ್ಕೇರಿ ಖಗ್ಗರ ಭಾಗದ ರೈತರಿಗೆ ದಣಿಸುತ್ತಿದ್ದವನು ವನವಾಸಿಯಲ್ಲ; ವನರಕ್ಷಕ (ಗಾರ್ಡ) ನಂತೆ. ಈಗ ಅವನ ಹಾವಳಿ ಕಡಿಮೆಯಾಗಿದೆ

ಶಿರ್ಶಿ— (ತಾ. ೨೨-೨-೧೯೪೬) ಶ್ರೀ|| ಶಾಸ್ತ್ರಿ, ಗಾಂವಕಾರ, ಪ್ರಭು, ಗೋಳಿ ಮತ್ತು ಜಿ|| ಕಾಂ|| ಸಮಿತಿಯ ಉಪಾಧ್ಯಕ್ಷ ನಾಯಕ ಇವರು ತಾ. ೧೮ರಿಂದ ಚುನಾವಣೆ ಪ್ರಚಾರವನ್ನಾರಂಭಿಸಿ, ಈ ೫ ದಿನಗಳಲ್ಲಿ ಹಳಿಯಾಳ ತಾಲೂಕ, ಸುಪಾ ಪೇಟಾ, ಯಲ್ಲಾಪೂರ ತಾಲೂಕ ಮತ್ತು ಮುಂಡಗೋಡ ಪೇಟೆಗಳಲ್ಲಿ ಸಂಚಾರ ಮಾಡಿ ಇಲ್ಲಿಗೆ ಬಂದಿದ್ದಾರೆ. ಎಲ್ಲ ಭಾಗಗಳ ಜನರು ಕಾಂಗ್ರೆಸ್ಸಿಗೇ ಬೆಂಬಲ ಕೊಡುವೆವಾಗಿಯೂ, ಕಾಂಗ್ರೆಸ್ಸಿನ ೩ ಉಮೇದವಾರರಿಗೆ ಒಂದೊಂದರಂತೆ ಮತ ಕೊಡುವೆವಾಗಿಯೂ ಆಶ್ವಾಸನೆಯಿತ್ತಿದ್ದಾರೆ. ಹಳಿಯಾಳದಲ್ಲಿ ಚುನಾವಣೆಯ ಎಲ್ಲ ವ್ಯವಸ್ಥೆಯನ್ನು ಮಾಡಲು ರಾ|| ಹುಬ್ಬಾಳಕರ ಮತ್ತು ಘಟಪೀಕರ ವಕೀಲ ಇವರ ನೇತೃತ್ವದಲ್ಲಿ ಒಂದು ಮಂಡಳ ನೇಮಿಸಿದೆ. ಶೀರಗಾಂವ - ಹವಗಿ - ಮಂಗಳವಾಡ - ಮುರಳವಾಡ ಭಾಗದ ಜನರು ಚಕ್ಕಡಿಗಳಲ್ಲಿ ಮೆರವಣಿಗೆಯಿಂದ ಬಂದು ಮತ ಕೊಡುವ ನಿರ್ಧಾರ ಮಾಡಿದ್ದಾರೆ. ಅಲ್ಲಲ್ಲಿಯ ಸೇವಾದಲಗಳು ಮತದಾರರನ್ನು ಮತಗಟ್ಟೆಗಳಿಗೆ ಕರೆ ತರುವ ಹೊಣೆ ಹೊತ್ತಿವೆ. ಈ ಭಾಗದಲ್ಲಿ ಕಾಂಗ್ರೆಸ್ಸೇತರ ಉಮೇದವಾರರಿಗೆ ಒಂದೂ ಮತ ಸಿಗಲಾರದೆಂದು ಖಂಡಿತ ತಿಳಿಯಬಹುದು

(ಪುರವಣಿ ನೋಡಿರಿ.)

ನೋಟೀಸು.

ಸನ್ 1946ನೇ ಇಸವಿಯ ಫೆಬ್ರುವರಿ ತಿಂಗಳ ಬಾಬ್ತು
ತಾ. 28-2-1946ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು

ಪ್ರೊವ್ಹಿನ್ಶಿಯಲ್ ಟೆಕ್ಸ್ಟೈಲ್ ಕಂಟ್ರೋಲರ, ಕಾಳಾ ಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller, opposite Kalachowki Post Office, Parel Road, Bombay) ಇವರಿಗೆ ನೂಲಿನ ಮಾರಾಟದ ಲಾಯಸನ್ಸದಾರರಿಂದ ಮೇಲೆ ನಮೂದಿಸಿದ ಮಾಹಿತಿಯು, ನಿರ್ದಿಷ್ಟಪಡಿಸಿದ ಫಾರ್ಮಿನಲ್ಲಿ, ತಾ. 5—3—1946 ನೇ ದಿವಸದೊಳಗಾಗಿ ತಪ್ಪದೆ ಮುಟ್ಟತಕ್ಕದ್ದಿರುತ್ತದೆ. ಮೇಲ್ಕಾಣಿಸಿದ ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ ನಮೂದ ಮಾಹಿತಿಯನ್ನು ರವಾನಿಸತಕ್ಕದ್ದು. ಕಾರಣ ನೂಲಿನ ಮಾರಾಟದ ಯಾವತ್ತೂ ಲಾಯಸನ್ಸದಾರರು ಸದರ ಮಾಹಿತಿಯನ್ನು ಮುದ್ದತ್ತಿನೊಳಗೆ ತಪ್ಪದೆ ಮುಟ್ಟುವಂತೆ ರವಾನಿಸಬೇಕು

Bombay.
28—2—1946

J. K. THAKORE,
Provincial Textile Controller, Bombay

ಆಭಾರಮನ್ನಣೆ

ನನ್ನ ಅಣ್ಣನ ಮಗ 'ವಾಸುದೇವ ವಾಮನ ಧಾರೇಶ್ವರ' ಇವರ ಅಕಾಲಿಕ ನಿಧನವನ್ನು ಕುರಿತು ನನಗೆ ಸಾಂತ್ವನಪರ ಸಂದೇಶ ಕಳಿಸಿರುವ ಸಂಸ್ಥೆಗಳಿಗೂ, ಎಲ್ಲ ವ್ಯಕ್ತಿಗಳಿಗೂ ವ್ಯಕ್ತಿಶಃ ಆಭಾರ ಮನ್ನಿಸಲು ಶಕ್ಯವಿಲ್ಲದ್ದರಿಂದ ಈ ಮೂಲಕ ಎಲ್ಲರ ಆಭಾರ ಜಾಹೀರ ರೀತಿಯಿಂದ ಮನ್ನಿಸುತ್ತೇನೆ. ಶಿರ್ಸಿ ತಾ ೨೮-೨-೧೯೪೬.

ವೆಂಕಟರಾವ ಕೃಷ್ಣಪ್ಪ ಧಾರೇಶ್ವರ, ಶಿರ್ಸಿ.

ಜಾಹೀರ ವಿನಂತಿ.

॥ ಶ್ರೀ ಪಾರ್ಶ್ವನಾಥ ಪ್ರಸನ್ನ ॥

ತಾ. ೨೭-೧೧-೧೯೪೫ರ "ವೃತ್ತ"ದಲ್ಲಿ ಪ್ರಕಟಿಸಿದಂತೆ ಗೇರಸಪ್ಪಾ ಹಿರೇಬಸ್ತಿಯ ಜೀರ್ಣೋದ್ಧಾರದ ಬಗ್ಗೆ ವರ್ಗಣಿ ಎತ್ತುವ ಸಲುವಾಗಿ ರಾ|| ದೀಪಣ್ಣಾ ಮಂಜಯ್ಯ ಶೆಟ್ಟಿ ಇವರು ಕಾನಡಾ ಜಿಲ್ಲೆಯಲ್ಲೂ ರಾ|| ಪದ್ಮಯ್ಯಾ ಪದ್ಮಯ್ಯ ಗೌಡ ಇವರು ಮೈಸೂರ ಪ್ರಾಂತದಲ್ಲೂ ಸಂಚರಿಸಿ ವಸೂಲಾದ ವರ್ಗಣಿಯ ಹಣವನ್ನು ರಾ|| ರಾ|| ನರಸಿಂಹ ಪಾಂಡುರಂಗ ಪೈ, ಗೇರಸಪ್ಪಾ ಇವರ ತಾಬೆ ಕೊಡಬೇಕಾಗಿಯೂ ಸದರಿ ಪೈರು ಮುಂದಾಗಿ ಕಟ್ಟೋಣದ ಕೆಲಸವನ್ನು ನಡಿಸಬೇಕಾಗಿಯೂ ಜಮಾ-ಖರ್ಚ ಇಡಬೇಕೆಂತಲೂ ಬಸ್ತಿಯ ಭಕ್ತರು ಸಮಾನಮತದಿಂದ ಠರಾಯಿಸಿದಂತೆ ಈಗ ಕಾರ್ಯ ನಡೆದಿದೆ.

ಗೇರಸಪ್ಪಾ ಹಿರೇಬಸ್ತಿಯ ಶ್ರೀಪದ್ಮಾವತಿ ಅಮ್ಮನವರು ತಮ್ಮ ಕುಲದೇವತೆಯೆಂಬುದನ್ನು ಸಮಸ್ತ ನೊಗೇರ ಬಾಂಧವರು ನೆನೆದು ಅಮ್ಮನವರ ಗುಡಿಯ ಜೀರ್ಣೋದ್ಧಾರಕ್ಕೆ ಹಸ್ತ-ಪರಹಸ್ತ ಧನಸಹಾಯ ಮಾಡಬೇಕಾಗಿ ಬಿನ್ನವಿಸುತ್ತೇನೆ. ತಾ ೨೬-೨-೪೬

ದೀಪಣ್ಣಾ ಮಂಜಯ್ಯ ಶೆಟ್ಟಿ

ಪಾಲಕರಲ್ಲಿ ವಿನಂತಿ.

ಖಾಸಗಿ ಕಲಿತು ಈ ಸಾಲಿಯ ವಾರ್ಷಿಕ ಪರೀಕ್ಷೆಗೆ ಕೂಡ್ರುವ ಹುಡುಗರು ತಮ್ಮ ಹೆಸರುಗಳನ್ನು ಇದೇ ಮಾರ್ಚ ತಾ. ೨೦ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳಿಸಬೇಕು ಬಾಕಿ ವಿಷಯ ಸಮಕ್ಷಮ ತಿಳಕೊಳ್ಳಬಹುದು

ಶಿರಸಿ ಮ್ಯುನಿಸಿಪಾಲಿಟಿ,
ತಾ. ೨೧-೨-೧೯೪೬.

ಹೆಡ್ ಮಾಸ್ತರ,
ಶ್ರೀಮಾರಿಕಾಂಬಾ ಹೈಸ್ಕೂಲ

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಬಳಕೂರದಲ್ಲಿರುವ ಕೃಷ್ಣ ಅನಂತ ಭಂಡಾರಿ ಆದ ನಾನು ಇದರ ಮೂಲಕ ಯಾವತ್ತೂ ಜನರಿಗೆ ಜಾಹೀರಪಡಿಸುವದೇನಂದರೆ:— ಹೊನ್ನಾವರ ತಾಲೂಕ ಹೊಸಾಡದಲ್ಲಿರುವ ದಾಮೋದರ ರಾಮಾಚಾರ್ಯ ಇವರಿಗೆ ತಾ. ೨-೫-೧೯೪೦ಕ್ಕೆ ಬಳ್ಕೂರ ಗ್ರಾಮದಲ್ಲಿಯ ನನ್ನ ಪಾಲಿನ ಸ್ಥಿರ-ಚರ ಆಸ್ತಿಗಳನ್ನು ಆಡವು ಬರೆದು ಕೊಟ್ಟು, ಆಡವು-ದಸ್ತನಂತೆ ಅವರಿಗೆ ಸಲ್ಲತಕ್ಕದಾಗುವ ಅಸಲು-ಬಡ್ಡಿ ರಕಮನ್ನು ತಾ. ೩೧-೧೦-೧೯೪೬ನೇಗೆ ಅದ ಕರಾರನಂತೆ ವಸೂಲ ಕೊಳ್ಳಬೇಕಾಗಿಯೂ, ಸದರ ಆಸ್ತಿಗಳ ಕಬಜಾ ಬಿಟ್ಟುಕೊಡಬೇಕಾಗಿಯೂ ಅನೇಕಾವರ್ತಿ ತಿಳಿಸಿದರೂ ಸದ್ರಿಯವರು ಪಾಲಿ ಸಬಬು ಹೇಳಿ, ದಿನಹರಣ ಮಾಡುತ್ತಿದ್ದು, ತಾ. ೪-೨-೧೯೪೬ಕ್ಕೆ ಈ ಬಗ್ಗೆ ನಾನು ಕೊಟ್ಟ ರಜಿಸ್ಟರ ನೋಟೀಸು ತಾ. ೯-೨-೧೯೪೬ಕ್ಕೆ ಅವರಿಗೆ ತಲ್ಪಿದಾಗ್ಯೂ, ಸದ್ರಿಯವರು ತಮ್ಮ ಕರಾರನಂತೆ ವರ್ತಿಸದೆ ನನಗೆ ಮೋಸ ಮಾಡುವ ಇರಾದೆಯಿಂದ ಬೇರೆಯವರ ಹೆಸರಲ್ಲಿ ತೋರಿಕೆ ಪೂರ್ತಿ ಬಿನಾಮಿಯಾಗಿ ಆಸ್ತಿ-ಕ್ರಯ ಮಾಡುವಂತಾಗಿ ಕೇಳುತ್ತೇನೆ. ಆದ್ದರಿಂದ ನನ್ನ ಬಾಬ್ತು ಬಳ್ಕೂರ ಗ್ರಾಮದೊಳಗಿನ ಸದ್ರಿ ಮೇಲ್ಕಾಣಿಸಿದ ತಾರೀಕಿಗೆ ಆಡವು ಮಾಡಿಕೊಟ್ಟ ಆಸ್ತಿಗಳನ್ನು ಯಾರೂ ಕ್ರಯಕ್ಕೆ ಕೊಳ್ಳಬಾರದು ಯಾರಾದರೂ ಕ್ರಯಕ್ಕೆ ಕೊಂಡಲ್ಲಿ ಅದು ಅಸಿಂಧು ಆಗಿರುತ್ತದೆ ಅದು ನನಗೆ ಕಾಯಿದೆಯಂತೆ ಬಾಧಕವಾಗದು ಅದರ ಮೇಲೆ ಹೊನ್ನಾವರ ಕೋರ್ಟಿನಲ್ಲಿ ನನ್ನ ವ್ಯವಹಾರ ನಡಿಸತಕ್ಕದ್ದಿದೆ. ತಿಳಿಯುವದು. ತಾ ೧—೩—೧೯೪೬.

K. A. Bhandarkar, Balkur.

ಶ್ರೀ ಕೃಷ್ಣ ಹೋಮಿಯೋ ಫಾರ್ಮಸಿ, ಪುಣೆ

ಇವರ ಹೋಮಿಯೋಪಥಿ ವ ಹನ್ನೆರಡು ಕ್ಷಾರ ಔಷಧಗಳು ಕಂಪನಿಯ ದರದಿಂದ ಕಿರಕೋಳ ವ ಠೋಕ ನಮ್ಮಲ್ಲಿ ಸಿಗುತ್ತವೆ. ಡಾ|| ಘಸುಳೇಯವರ ಕನ್ನಡ, ಮರಾಠಿ "ಜೀವನ ರಸಾಯನ" ಹಾಗೂ "ಹೋಮಿಯೋಚಿಕಿತ್ಸಾ ಶಾಸ್ತ್ರ" ಎಂಬ ಪುಸ್ತಕಗಳೂ ದೊರೆಯುತ್ತವೆ. ಕಾರವಾರ ಜಿಲ್ಲೆಯ ಏಜಂಟರು:—

ಎಸ್. ಜಿ ಮಹಾಲೇ ಎಂಡ್ ಸನ್ಸ,
ಪ್ರೋ. ಅಂಕೋಲಾ.

ಜಾಹೀರ ನೋಟೀಸು.

ವೆಂಕಟರಮಣ ಲಿಂಗಪ್ಪಶೆಟ್ಟಿ ಸಾ|| ಹಿರೇಗುತ್ತಿ ವಗೈರೆ ಕೆಳಗೆ ಸಹಿ ಮಾಡಿದವರು ಈ ಮೂಲಕ ಜಾಹೀರಪಡಿಸುವದೇನಂದರೆ.- ನಾವು ಅವಿಭಕ್ತ ಕುಟುಂಬದಲ್ಲಿದ್ದು ನಮ್ಮಲ್ಲಿ ವಾಂಟಣಿ ಸಂಬಂಧ ತಕರಾರು ಉಂಟಾಗಿ, ತಾ. ೩-೫-೧೯೪೩ನೇ ದಿವಸ ಸದರ ತಕರಾರು ಗೃಹಸ್ಥರ ಮುಂದಿಟ್ಟು ಪಂಚಾಯತಿ ಆಗಿ ನಾವು ಒಂದು ಕರಾರು ಮಾಡಿಕೊಂಡಿದ್ದೆವು. ಆದರೆ ನಮ್ಮ ಕುಟುಂಬದ ಎಸಿಕೆ ಅಂಶದಾರರು ಆ ಕರಾರನಂತೆ ನಡೆಯದೆ ಉಳಿದದ್ದರಿಂದ ನಮ್ಮೊಳಗೆ ವಾಂಟಣಿ ಆಗುವದು ಉಳಿದುಹೋಗಿದೆ. ಕಾರಣ ನಮ್ಮ ಕುಟುಂಬದ ಯಾವದೇ ಮೆಂಬರರಿಂದ ಯಾರೂ ನಮ್ಮ ಕುಟುಂಬದ ಬಾಬತ್ತು ಆಸ್ತಿಗಳನ್ನು ಅಡವು,ಕ್ರಯ ಮುಂತಾದ ಪರಾಧೀನತೆಗಳನ್ನು ಮಾಡಿಕೊಳ್ಳಬಾರದು, ಮಾಡಿಕೊಂಡಲ್ಲಿ ಅದು ಕುಟುಂಬಕ್ಕೆ ಯಾವದೇ ವಿಧದಿಂದ ಬಾಧಿಸುವಂತಿಲ್ಲ. ಕುಟುಂಬದ ದೃಷ್ಟಿಯಿಂದ ಅಂಥ ಪರಾಧೀನತೆಗಳು ಸಿಂಧು ಆಗಲಾರವು ತಿಳಿಯುವದು

ಹಿರೇಗುತ್ತಿ, ತಾ ೨೬-೨-೪೬

(೧) ವೆಂಕಟರಮಣ ಲಿಂಗಪ್ಪ ಶೆಟ್ಟಿ ಹಿರೇಗುತ್ತಿ
(೨) ಗಣಪತಿ ಲಿಂಗಪ್ಪ ಶೆಟ್ಟಿ
(೩) ಕೃಷ್ಣಾ ಲಿಂಗಪ್ಪ ಶೆಟ್ಟಿ ಹಿರೇಗುತ್ತಿ
(೪) ವಿಠೋಬಾ ವಾಸುದೇವ ಶೆಟ್ಟಿ ಹಿರೇಗುತ್ತಿ

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ

ಡಿನೇಚರ್ಡ ಸ್ಪಿರಿಟ್

ಮಾರಲಿಕ್ಕೆ ಸಿಗುತ್ತದೆ.

ವಿ ಎಮ್. ಮಿಜಾರನಕರ,
ಲಾಯಸನ್ಸಿ, ಮೋಟರ ಸ್ಟಾಂಡ, ಕುಮಟಾ.

— R —

ಗೋಕರ್ಣ ಸೀಧಾ-ಕ್ಷೇತ್ರದೊಳಗಿನ ಹೊಲಗಳನ್ನು ಸಾಗು ಮಾಡುವ ರೈತರು ಮತ್ತು ಜಮೀನದಾರರು ಈ ವರ್ಷ ತಮ್ಮ ಹೊಲಗಳ ಬೆಳೆ ಕೊಯ್ದು ಬಡಿದಾದ ಮೇಲೆ ತಮಗೆ ಎಷ್ಟು ಭತ್ತ ಬಂತೆಂಬ ಮಾಹಿತಿಯನ್ನು ನಮ್ಮ ರೇಶನ ಆಫೀಸಿಗೆ ಇದೇ ಬರುವ ಮಾರ್ಚ ತಾ. ೧೫ ರೊಳಗೆ ತಪ್ಪದೆ ತಿಳಿಸುವದಲ್ಲದೆ, ಮುಂದೆ ಪ್ರತಿ ವರ್ಷ ಮಾರ್ಚ ತಾ. ೧೫ ರೊಳಗೆ ಸದರಿಯಂತೆ ತಿಳಿಸಿ ತಮ್ಮ ಸೀಧಾಕಾರ್ಡುಗಳೊಳಗಿನ ಧಾನ್ಯದ ಕೂಪನ್ನುಗಳನ್ನು ರದ್ದುಪಡಿಸಿಕೊಳ್ಳತಕ್ಕದ್ದು. ಹಾಗೆ ಮಾಡದೆ ಯಾರಾದರೂ ಮಾರ್ಚ ೧೫ರ ನಂತರ ಬೆಳೆ ಬಡಿಸಿದರೆ, ಆ ಭತ್ತವನ್ನು ಅವರು ತಮ್ಮ ಕುಟುಂಬಗಳಿಗಾಗಿ ಉಪಯೋಗಿಸಿಕೊಳ್ಳದೆ ಸರಕಾರಕ್ಕೆ ಮಾರಬೇಕಾಗುವದು. ತಾ. ೨೭—೨—೧೯೪೬.

P. M. Hegdekatte,
ರೇಶನಿಂಗ ಆಫೀಸರ, ಗೋಕರ್ಣ.

ಜಾಹೀರ ಪ್ರಕಟಣೆ.

ನೀಲಗಿರಿ ಗುಡ್ಡಗಳ ಸುವಾಸಿಕ ಮನೋಹರ ಚಹಾ ವಿಕ್ರಿ ಮಾಡುವ ದೆಸೆಯಿಂದ ಡೀಲರ್ಸ್ (Dealers)ರನ್ನು ಕುಮಟಾ, ಹೊನ್ನಾವರ, ಗೋಕರ್ಣ ಮತ್ತು ಅಂಕೋಲಾ ಶಹರಗಳಲ್ಲಿ ನೇಮಕ ಮಾಡುವದಿದೆ.

ಆದ್ದರಿಂದ ಚಹಾದ ವ್ಯಾಪಾರಸ್ಥರು ಸೆಂಪಲ್ಸಗಳ ಬಗ್ಗೂ, ಇತರ ಶರ್ತುಗಳ ಬಗ್ಗೂ ಕೆಳಗೆ ಸಹಿ ಮಾಡಿದವರ ಕಡೆ ಸಮಕ್ಷ ಇಲ್ಲವೆ ಪತ್ರವ್ಯವಹಾರ ಮಾಡಿ ತಿಳಿಸುಕೊಳ್ಳುವದು.

ಹುಬ್ಬಳ್ಳಿ,
ತಾ. ೧೧-೨-೪೬.

H. A. Oosman,
Agent,
The Planters Co., Ltd., Nilgiris, Hubli

ಜಾಹೀರ ವಿನಂತಿ.

ಮೋಟಾರ ಟಾಯರುಗಳ ಕೊರತೆ ಈಗ ಕಡಿಮೆಯಾಗಿರುವದರಿಂದ, "ತದಡಿ-ಗಂಗಾವಳಿ-ಅಂಕೋಲಾ" ಮಾರ್ಗದಲ್ಲಿ ಹೊಸದಾಗಿ ನಮ್ಮ ಸರ್ವಿಸ್ಸನ್ನು ಇದೇ ತಾ. ೧೫-೩-೧೯೪೬ರಿಂದ ಚಾಲು ಮಾಡಲಾಗುವದು.

ಧಾರವಾಡ-ಕೆನರಾ ಮೋಟರ್ಸ ಲಿ.,
ಹುಬ್ಬಳ್ಳಿ.

ನೋಟೀಸು.

ನಂ. ೬೦.
ಕಾರವಾರ, ತಾ. ೨೬-೨-೧೯೪೬.

ತಾ. ೧-೧೨-೧೯೪೫ರಿಂದ ಈ ಜಿಲ್ಲೆಯಲ್ಲಿ ಪ್ರತಿ ವ್ಯಕ್ತಿಗೆ ಪ್ರತಿ ತಿಂಗಳಿಗೆ ಈ ಕೆಳಗಿನಂತೆ ಸಕ್ಕರೆ ಸಿಗುತ್ತಿತ್ತು:

(೧) ಸೀಧಾ ಕ್ಷೇತ್ರದಲ್ಲಿ— ... ೧ ರತ್ತಲ
ಸೀಧಾ ಕ್ಷೇತ್ರವಲ್ಲದ—
(೨) ತಾಲೂಕಿನ/ಪೇಟೆಯ ಕೇಂದ್ರ-ನಗರದಲ್ಲಿ ಮತ್ತು ೨೦೦೦ಕ್ಕಿಂತ ಹೆಚ್ಚು ಜನವಸತಿಯ ಹಳ್ಳಿಗಳಲ್ಲಿ.... ½ ರತ್ತಲ
(೩) ಇನ್ನುಳಿದ ಹಳ್ಳಿಗಳಲ್ಲಿ— ೧೭½ ತೊಲೆ.

ಆದರೆ ಮೇಲೆ ಹೇಳಿದ ಪ್ರಮಾಣದಂತೆ ಸಕ್ಕರೆ ಪುರವಟಿ ಮಾಡಲು ಅಶಕ್ಯವೆಂದು ಕಂಡುಬಂದದ್ದರಿಂದ ತಾ. ೧-೩-೧೯೪೬ರಿಂದ ಮೇಲೆ ನಮೂದಿಸಿದ ೩ನೇ ತರಗತಿಯ ಹಳ್ಳಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಪ್ರತಿ ತಿಂಗಳು ಸಿಗುವ ಸಕ್ಕರೆಯ ಪ್ರಮಾಣವನ್ನು ೧೭½ ತೊಲೆಯಿಂದ ೧೫ ತೊಲೆಗೆ ಇಳಿಸಬೇಕಾಗಿ ಹುಕುಮು ಹೊರಡಿಸಲಾಗಿದೆ.

F. N. RANA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

THE BANK OF RURAL INDIA, LTD.,

[Incorporated in *British India* under the Indian Companies Act, 1913]

HEAD OFFICE:- **KARWAR.**

Offices at:- KARWAR KUMTA, HONAVAR & SIRSI.

Authorised Capital -- Rs. 10,00,000;
Subscribed Capital -- Rs. 5,00,000;
Paid-up Capital -- Rs. 2,60,000.

Rates of Interest on Deposits:

Current a/c. @ 1% p. a. ***Savings Bank a c @ 2½%***

Fixed Deposits for 3 months @ 3% per annum
" " for 6 months @ 3½% "
" " for 12 months or more @ 4% .

All Kinds of modern Banking business transacted.

Karwar,
22-12-1945

P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಮುಂಗಡ
ವರ್ಷಕ್ಕೆ ರೂ. ೩-೪-೦
ಅರ್ಧ ವರ್ಷಕ್ಕೆ ೧-೧೦-೦
ತಿಂಗಳಿಗೆ ೦-೧೦-೦
ಸಂಚಿಕೆಗೆ ೦-೦-೯
ಸಂಚಿಕೆಗೆ ೦-೪-೦
ಮುಂದ ಹಣ ತೆರುವವರು
ಪತ್ರ ೫ ಅರೆ ಚಿಟ್ಟಿಗೆ
ತೆರಬೇಕು.
ಚಂದಾ ಮುಂಗಡ ಕಟ್ಟತಕ್ಕದ್ದು

Reg. No. B 1270. Monday, 11th March, 1946.

ಕಾನಡಾವೃತ್ತ

ವರ್ಷ ೩೮.] THE KANARA NEWS. [ಸಂಚಿಕೆ ೩೬.

ಕುಮಟಾ:-- ಸೋಮವಾರ, ತಾ. ೧೧ ಮಾಹೆ ಮಾರ್ಚ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧ ಇಂ ಎವರ್ ಉದ್ದ
೧ ಸಾಲಿಗೆ ೩ ಅಣೆಯಂತೆ.
ಸ್ಥಾಯಿ ಜಾಹೀರಾತಿಗೆ ಎವರ್ ಉದ್ದ
೧ ಸಾಲಿಗೆ ೮ ಪೈಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಪ ರಾಷ್ಟ್ರೀಯ ಸಭೆಗೆ ವಿಜಯವಾಗಲಿ!

ಲ ಹಿಂದ ಜನಾಂಗದವರು ರಾಷ್ಟ್ರೀಯ ಸಭೆ ಮೋದವಾರವನ್ನು ಪುರಸ್ಕರಿಸಲು ಕರ್ತವ್ಯ ದೆ. ಅಖಿಲ ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಸ್ಥೆ ರಾಷ್ಟ್ರೀಯ ಂದೇ. ರಾಷ್ಟ್ರೀಯ ಸಭೆಯು ವ್ಯಾಪಕ ವಿಶಾಲ ು ಅದಕ್ಕೆ ಪಕ್ಷ-ಪಂಗಡಗಳಿಲ್ಲ; ಪಕ್ಷ-ಪಂಗಡ ವ ವೈಷಮ್ಯಗಳಿಲ್ಲ; ದ್ವೇಷ-ಅಸೂಯೆ-ಗಳೂ ಇಲ್ಲ. ಹಿಂದುಸ್ಥಾನದೊಳಗಿರುವ ಸಕಲ ಸಮದೃಷ್ಟಿಯಿಂದ ನಡಿಸಿಕೊಂಡು, ಲೋಕ ಸಾಧನೆಗಾಗಿ ಸಕಲರ ಹಿತ-ಸಂಬಂಧಗಳ ಾಡಿಕೊಂಡು, ಸಭ್ಯ ಮತ್ತು ಶಿಷ್ಟಸಮ್ಮತ ಗಳಿಂದ ವಿಶಾಲ ಲೋಕಹಿತವನ್ನು ಸಾಧಿ ಸುವ ರಾಷ್ಟ್ರೀಯ ಸಭೆಯದು. ಮಹಾತ್ಮರ ಮಲಿಗೆಯ ನೀತಿ ರಾಷ್ಟ್ರೀಯ ಸಭೆಗೆ ಒಪ್ಪಿ ಸಕಲರು ಸುಖದಿಂದಿರಬೇಕು; ಸಕಲರ ಸುಖ ತ ಸುಖವೂ ಒಂದೇ; ಎಂಬ ವಿಶಾಲ ಭಾವನೆ ರಾಷ್ಟ್ರೀಯ ಸಭೆಯು ಲೋಕಧರ್ಮ ಪ್ರಚುರ . ಈವಾಗ ಯುದ್ಧ ಮುಗಿದರೂ ಪ್ರಪಂಚದ ಹಾಗಿಲ್ಲ. ಬ್ರಿಟನ್-ಅಮೇರಿಕೆಯವರು ಒಂದೆ ಷ್ಯ ಇನ್ನೊಂದೆಡೆ ಹೀಗೆ ಪಕ್ಷಗಳುಂಟಾಗಿ ಮಹಾಯುದ್ಧಕ್ಕೆ ಇನ್ನೊಂದೆರಡು ತಿಂಗಳಲ್ಲೇ ಾಗಬಹುದಾಗಿ ಅಮೇರಿಕೆಯ 'ಜರ್ನಲ್' ಭೀತಿಗೊಂಡು ಬರೆಯುತ್ತಿದೆ. ಭೂಮಧ್ಯ ದ ವರೆಗೂ ತಮ್ಮ ಪ್ರದೇಶ ವಿಸ್ತರಿಸಲು ತುರ್ಕಸ್ಥಾನದ ಮೇಲೆ ದಾಳಿ ಮಾಡುವ , ಆದಾಗಲೇ ತುರ್ಕಸ್ಥಾನದ ರಕ್ಷಣೆಗಾಗಿ ು ಯುದ್ಧದಲ್ಲಿ ಧುಮುಕುವರೆಂದೂ "ಜರ್ನ ಪತ್ರಿಕೆಯ ಅಂಬೋಣ. ಇರಾಣ ದೇಶದೊಳ ದ ಕಾಲದಲ್ಲಿಟ್ಟ ರುಶ್ಯ ಸೇನೆಯನ್ನು ಕರಾ ರಿಗ ಹಿಂತೆಗೆದುಕೊಳ್ಳಲು ರುಶ್ಯವು ಬದ್ಧ . ಆದರೆ ಅದನ್ನು ಹಿಂತೆಗೆದುಕೊಳ್ಳಲು ರುಶ್ಯ ಂಟಬಡುವದಿಲ್ಲ. ಈ ಕುರಿತು ಮೊಸ್ಕೋದಲ್ಲಿ ದ ರಾಯಭಾರಿಗಳಿಗೂ ರುಶ್ಯ ರಾಯಭಾರಿ ನಡೆದ ಮಾತುಕತೆ ನಿಷ್ಫಲವಾಯಿತೆಂದು ಕೇ. ಇನ್ನೊಂದು ಮಹಾಯುದ್ಧ ಇದೀಗಲೇ ವಾಗಬಹುದಾಗಿ ಅನೇಕರು ನಿರೀಕ್ಷಿಸಿದ್ದರು. ಇಷ್ಟರಲ್ಲಿ ರುಶ್ಯ ಸರಕಾರಕ್ಕೆ ಸುದೈವ ಸದ್ಬುದ್ಧಿಯುಂಟಾಗಿ ಇರಾಣ ರಾಯಭಾರಿ ನ ಮಾತುಕತೆ ನಡೆಸಲು ಅದು ಉದ್ಯುಕ್ತ ವಾಗಿ ವಾರ್ತೆ ಬಂದದ್ದರಿಂದ ಮನಸ್ಸಿಗೆ ಸಮಾಧಾನವಾಗುತ್ತಿದೆ. ರಾಷ್ಟ್ರೀಯ ಸಭೆಯು ಲೋಕ-ಧೋರಣವಾಗಿ ಅನುಸರಿಸಿದ ದರೆ ಬೇರೆ ಬೇರೆ ಜನಾಂಗಗಳೊಳಗೆ ಇರುವ ವೈ ತಾವಾಗಿ ನಷ್ಟವಾಗುವವು. ಮಹಾತ್ಮ ಂಧಿಯವರು ಭೂಲೋಕದ ಶಾಂತಿ-ದೂತರು. ಾನ-ದಲ್ಲಿ ಹಬ್ಬಿಕೊಂಡ ಸಾಮ್ರಾಜ್ಯವಾದ , ಹೀನ ದೀನರ ಸುಲಿಗೆ ನಿಂತು ಸಕಲರ ಹಾಗುವಂತೆ ರಾಜ್ಯಭಾರದ ಯೋಜನೆಯಾಯ ಸಭೆ ಮಹಾತ್ಮರ ಲೋಕಶಾಂತಿಯ ಸಂಪ್ರದಾಯದ ಸಂಸ್ಥೆಯಾಗಿರುತ್ತದೆ. ದೇಶದೊಳಗಿನ ಬೇರೆ ಬೇರೆ ಪಕ್ಷ-ಪಂಗಡಗಳಲ್ಲಿ ತಮಗೆ ಸಂಬಂಧಪಟ್ಟ ಜನ-ವಿಭಾಗದ ಹಿತಸಾಧನೆಯ ಸಂಕಲ್ಪಗಳಿವೆ; ತಮಗೆ ವಿರುದ್ಧವಿರುವ ಜನ-ವಿಭಾಗಗಳ ನಾಶವಾಗಬೇಕೆಂಬ ಮನೀಷೆಯೂ ಅವುಗಳಿಗಿದೆ. ಒಡೆಯರ ಹಿತ ಮಾಡುವ ಸಂಘಗಳಿವೆ; ಒಕ್ಕಲಿಗರ ಹಿತ ಕೋರುವ ಸಂಸ್ಥೆಗಳಿವೆ; ಕೂಲಿಕಾರರ ಸುಖಕ್ಕಾಗಿ ದುಡಿಯುವ ಗುಂಪುಗಳಿವೆ; ಸಾವಕಾರರನ್ನು ಕಾಪಾಡುವ ಕೂಟಗಳಿವೆ. ಆದರೆ ಈ ಎಲ್ಲ ಪಕ್ಷ-ಪಂಗಡಗಳಲ್ಲಿ ಕಂಡುಬರುವ ವೈಷಮ್ಯಗಳನ್ನು ಪರಿಹರಿಸಿ, ಸಕಲರ ಹಿತಸಂಬಂಧಗಳನ್ನು ಮೇಳಗೂಡಿಸಿ, ಸಕಲರ ಸುಖ ಸಾಧಿಸಲು ಸಂಕಲ್ಪಿಸುವ ಸಂಸ್ಥೆ ರಾಷ್ಟ್ರೀಯ ಸಭೆಯೊಂದೇ. ರಾಷ್ಟ್ರೀಯ ಸಭೆಯ ಕಾರ್ಯ-ಯೋಜನೆಯಲ್ಲಿ ಬೇರೆ ಎಲ್ಲ ಪಕ್ಷಗಳು ಬಯಸುವ ಹಿತಕರ ಯೋಜನೆಗಳುಂಟು. ಆದರೆ ಆ ಪಕ್ಷಗಳಲ್ಲಿ ಪ್ರತಿಪಕ್ಷಗಳ ಬಗ್ಗೆ ತೋರಿ ಬರುವ ಅಸೂಯೆಯೂ ತತ್ಪರಿಣಾಮವಾಗಿ ಉದ್ಭವಿಸುವ ಹಿಂಸೆ-ಅತ್ಯಾಚಾರ-ದುರಾಚಾರಗಳೂ ರಾಷ್ಟ್ರೀಯ ಸಭೆಯೊಳಗೆ ಕಂಡುಬರುವದಿಲ್ಲ. ಹಿಂಸಾವಾದಿ ಜಗತ್ತಿನಲ್ಲಿ ಅಹಿಂಸೆಯ ಬೆಳಕು ಬೀರಲು ರಾಷ್ಟ್ರೀಯ ಸಭೆ ವ್ಯವಹರಿಸುತ್ತಿದೆ. ಈ ಬೆಳಕು, ಈ ಪ್ರಕಾಶ, ಈ ಉದಾತ್ತ ವಿಚಾರಸರಣಿ ಬೇರೆ ಪಕ್ಷ-ಪಂಗಡಗಳಲ್ಲಿ ಕಂಡುಬರುವದಿಲ್ಲ. ರಾಷ್ಟ್ರೀಯ ಸಭೆಯ ವಿಜಯದಲ್ಲಿ ವಿಶ್ವದ ವಿಜಯವುಂಟು. ರಾಷ್ಟ್ರೀಯ ಸಭೆಯ ವಿಶಾಲ ಭೂಮಿಕೆಯನ್ನು ಮತದಾರರು ಗ್ರಹಿಸಬೇಕು. ರಾಷ್ಟ್ರೀಯ ಸಭೆಯ ಉಮೇದವಾರರು ಚುನಾವಣೆಯೊಳಗೆ ವಿಜಯಶಾಲಿಗಳಾಗಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಪುರಸ್ಕಾರ ಮಾಡಿದರೆ ಲೋಕ-ಮಲಿಗೆಯ ಧೋರಣದಿಂದ ವ್ಯವಹರಿಸುವ ಸಾಮ್ರಾಜ್ಯವಾದ ತೀವ್ರ ಸಂಕಷ್ಟದಲ್ಲಿ ಬರುವದು. ಕೊಂಗ್ರೆಸ ಹುರಿಯಾಳುಗಳು ಗದ್ದಿಗೆ ಲೋಕದಲ್ಲಿ ಗೌರವದಿಂದ ವ್ಯವಹರಿಸಲಿಕ್ಕೆ ರಾಷ್ಟ್ರೀಯ ಸಭೆಗೆ ತಕ್ಕ ಸ್ಥಾನ-ಮಾನ ಸಿಗುವದು. ಹಿಂದ ಜನಾಂಗವು ಇದೀಗ ಸಂಕ್ರಮಣಾವಸ್ಥೆಯಲ್ಲಿದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಅಮೇರಿಕೆಯ ಕೆಲ ಪ್ರಮುಖರು ಬ್ರಿಟಿಶ ಮುಖ್ಯ ಪ್ರಧಾನರಾದ ಮೇಜರ ಎಟ್ಲಿಯವರಿಗೆ ತಂತಿಯಿಂದ ವಿನಂತಿ ಮಾಡಿದ್ದಾರೆ. ಹಿಂದುಸ್ಥಾನದೊಳಗೆ ಒದಗಬಲ್ಲದ ಭೀತಿಯುಂಟಾಗುವದರಿಂದ, ಬ್ರಿಟಿಶರು ಹಿಂದೀಯರಿಗೆ ಸ್ವಾತಂತ್ರ್ಯವಿತ್ತು ಒಡಂಬಡಿಕೆ ಮಾಡಿಕೊಳ್ಳದಿದ್ದರೆ ಬೇಗನೆ ಅದ್ಭುತ ಆಂದೋಲನವುಂಟಾಗಿ ಸರ್ವಘಾತವಾದೀತೆಂದು ಅಮೇರಿಕೆಯವರು ಎಚ್ಚರಿಕೆ ಕೊಟ್ಟಿದ್ದಾರೆ. ಇತ್ತ ಹಿಂದುಸ್ಥಾನದಲ್ಲಿ ಮಹಾತ್ಮಾದಿ ವಿಭೂತಿಗಳ ಪುಣ್ಯ ಪ್ರಭಾವದಿಂದ ರಾಷ್ಟ್ರೀಯ ಸಭೆಯು ವಿಜಯದ ಮೇಲೆ ವಿಜಯ ಹೊಂದುತ್ತಲಿದೆ. ಪಂಜಾಬದಲ್ಲಿ ರಾಷ್ಟ್ರಪತಿ ಮೌ|| ಅಬುಲ ಕಲಾಮ ಆಝಾದರ ಮಧ್ಯಸ್ಥಿಕೆಯಿಂದ ಅಕಾಲಿಗಳೂ ಯೂನಿಯನಿಸ್ಟರೂ ಕೊಂಗ್ರೆಸ್ಸಿಗರೊಡನೆ ಕೂಡಿಕೊಂಡಿದ್ದಾರೆ. ಲೀಗದವರನ್ನೂ ತಮ್ಮ ಜನಹಿತಯೋಜನೆಯಲ್ಲಿ ಸೇರಿಸಿಕೊಂಡು ಅವರೆಲ್ಲರ ಸಹಕಾರದಿಂದ ಸಂಯುಕ್ತ ಸರಕಾರ ಸಂಘಟಿಸಲು ರಾಷ್ಟ್ರಪತಿಗಳು ಸಿದ್ಧರಿದ್ದರು. ಪಂಜಾಬದೊಳಗಿನ ಸ್ಥಾನಿಕ ಲೀಗ ಮುಂದಾಳುಗಳೂ ಪ್ರಾಂತಿಕ ರಾಜ್ಯಭಾರದ ಮಟ್ಟಿಗೆ ಕೊಂಗ್ರೆಸ್ಸಿನೊಡನೆ ಸಹಕರಿಸಲು ಸಿದ್ಧರಾಗಿದ್ದರಂತೆ. ಆದರೆ ಲೀಗಿನ ಸರ್ವಾಧ್ಯಕ್ಷ ಜೆ|| ಜಿನ್ನಾರವರು ರಾಷ್ಟ್ರೀಯ ಸಭೆಯ ಮುನಿಸು ಹಿಡಿದು, ಕೊಂಗ್ರೆಸ್ಸಿನೊಡನೆ ಸಹಕರಿಸಬಾರದಾಗಿ ಆಸಾಮದಿಂದ ಅಪ್ಪಣೆ ಕಳಿಸಿದ್ದರಿಂದ ಈ ಸಹಕಾರದ ಸುಯೋಗ ತಪ್ಪಿಹೋಯಿತು! ರಾಷ್ಟ್ರೀಯ ಸಭೆಗೆ ಅಧಿಕಾರ-ಲಾಲಸೆಯಿಲ್ಲ. ಯಾರ ಹಗೆಯೂ ಇಲ್ಲ. ಸಕಲರ ಹಿತ ಸಾಧಿಸುವದಕ್ಕಾಗಿ, ಕೆಲವೊಮ್ಮೆ ಅಭಿಮಾನ ಬಿಟ್ಟು ಸಹ, ಅನ್ಯರೊಡನೆ ಸಹಕರಿಸಲು ಅದು ಸಿದ್ಧವಿದೆ. ಪಂ|| ಜವಾಹರಲಾಲ ನೆಹರೂರವರು ನುಡಿದಂತೆ, ತನ್ನ ಲೋಕಹಿತ-ಸಾಧನೆಯ ಧೋರಣಕ್ಕೆ ಮುಂಚೆ ಮತದಾರ-ಜನತೆಯ ಅಂಕಿತವನ್ನು ಪಡಕೊಂಡು ಆಮೇಲೆ ಬ್ರಿಟಿಶ ಸರಕಾರದೊಡನೆ ಮಾತುಕತೆ ಪ್ರಾರಂಭಿಸಬೇಕೆಂದು ರಾಷ್ಟ್ರೀಯ ಸಭೆಯು ಈ ಚುನಾವಣೆಗಳಲ್ಲಿ ಸೇರಿದೆ. ರಾಷ್ಟ್ರೀಯ ಸಭೆಗೆ ಸರಕಾರದವರ ವಿರೋಧವುಂಟಾಗಲು ಕಾರಣವಿದೇ. ಲೋಕಹಿತ ಸಾಧನೆಗಾಗಿ ರಾಷ್ಟ್ರೀಯ ಸಭೆಯಷ್ಟು ಹೋರಾಡುವ ಸಂಸ್ಥೆ ಬೇರೊಂದಿಲ್ಲ. ಬೇರೆ ಬೇರೆ ಕೊಂಗ್ರೆಸ-ಸರಕಾರಗಳು ರಾಷ್ಟ್ರೀಯ ಸಭೆಯ ಧೋರಣವನ್ನು ಈ ಹಿಂದೆಯೇ ಚನ್ನಾಗಿ ಸ್ಪಷ್ಟಗೊಳಿಸಿವೆ. ಕೊಂಗ್ರೆಸ್ಸಿನ ಚುನಾವಣೆ-ಘೋಷಣೆಯಲ್ಲೂ ಅದರ ಕಾರ್ಯ-ಧೋರಣೆ ಸ್ಪಷ್ಟಗೊಳಿಸಲ್ಪಟ್ಟಿದೆ. ರಾಷ್ಟ್ರಪತಿ ಆಝಾದ, ಪಂ|| ಜವಾಹರಲಾಲ, ಸರದಾರ ವಲ್ಲಭಭಾಯಿ ಮೊದಲಾದ ಮುಂದಾಳುಗಳು ತಯಾರಿಸಿ ಹೊರಡಿಸಿದ ಘೋಷಣೆಯನ್ನು ಮತದಾರರು ಲಕ್ಷ್ಯಪೂರ್ವಕವಾಗಿ ಪರಾಂಬರಿಸಬೇಕು. ಆಝಾದ-ನೆಹರು-ಪಟೇಲ ಪ್ರಭೃತಿಗಳು ಸಾಮಾನ್ಯರಲ್ಲ. ನುಡಿದಂತೆ ನಡೆಯುವ, ನಡೆದಂತೆ ನುಡಿಯುವ, ನುಡಿ-ನಡೆಗಳಲ್ಲಿ ವ್ಯತ್ಯಾಸ ಬರದಂತೆ ಜಾಗ್ರತೆ ಕೊಳ್ಳುವ ಮಹಾ ಪುರುಷರವರು. ರಾಷ್ಟ್ರೀಯ ಸಭೆಯ ಚುನಾವಣೆ-ಘೋಷಣೆಯಲ್ಲಿ ಹಿಂದವಾಸಿಗಳ ಸಾಮೂಹಿಕ ಕಲ್ಯಾಣದ ವಿಚಾರವುಂಟು. ಆದ್ದರಿಂದ ರಾಷ್ಟ್ರೀಯ ಸಭೆಗೆ ಸಕಲ ಮತದಾರರೂ ಬೆಂಬಲ ಕೊಡುವದ-

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. I
The Head Office and Branches of the Bank now accept
Season Deposits from three to six months at the following rates:-
Three Months at 2½% per annum
Six Months at 2¾% per annum.
No such deposit will be allowed to run beyond 30th September 1946
Coondapoor, K. VAMAN SHENAI,
CHAIRMAN.

ಕರ್ತವ್ಯವುಂಟು. ಈಗ ಎಲ್ಲೆಲ್ಲೂ ರಾಷ್ಟ್ರೀಯ ಸಭೆಗೆ ವಿಜಯವಾಗುತ್ತಿದೆ. ಒರಿಸಾ ಎಸೆಂಬ್ಲಿಯ ಅಂತು ೬೦ ಸ್ಥಾನಗಳಲ್ಲಿ ೩೦ ಸ್ಥಾನಗಳು ವಿರೋಧವಿಲ್ಲದೆ ರಾಷ್ಟ್ರೀಯ ಸಭೆಗೆ ಈಗಾಗಲೇ ದೊರೆತಿವೆ. ಸಂಯುಕ್ತಪ್ರಾಂತ, ಬಿಹಾರ, ಮದ್ರಾಸ, ಮಧ್ಯಪ್ರಾಂತಗಳಲ್ಲಿ ರಾಷ್ಟ್ರೀಯ ಸಭೆಯ ಹುರಿಯಾಳುಗಳಿಗೆ ಅಭೂತಪೂರ್ವ ಬೆಂಬಲ ದೊರಕುತ್ತಿದೆ. ಬಂಗಾಲದಲ್ಲಿ ರಾಷ್ಟ್ರೀಯ ಸಭೆಯವರಿಗೆ ಸಿಗುತ್ತಿರುವ ಬೆಂಬಲ ಸೈರಿಸಲಾಗದೆ ೧೦೦ ಮಂದಿ ಶಸ್ತ್ರಧಾರಿ ಪುಂಡರು ಓಡುವ ಉಗಿಬಂಡಿಯನ್ನು ನಿಲ್ಲಿಸಿ, ರಾಷ್ಟ್ರೀಯ ಸಭೆಯ ಉಮೇದವಾರರಾದ ಹಬಿಬುರ ರಹಮಾನ ಚೌಧರಿಯವರನ್ನು ಎತ್ತಿಕೊಂಡು ಹೋಗಿ ದೂರದ ಒಂದು ಹಳ್ಳಿಯಲ್ಲಿ ಬಂಧಿಸಿಟ್ಟಿರಾಗಿ ವಾರ್ತೆಯುಂಟು. ನಮ್ಮ ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಸಭೆಯ ಎಲ್ಲ ಹುರಿಯಾಳುಗಳು ಅವಿರೋಧ ಆರಿಸಿ ಬಂದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯೊಳಗೂ ರಾಷ್ಟ್ರೀಯ ಸಭೆಯವರು ಅದೇ ರೀತಿ ಅವಿರೋಧ ಆರಿಸಿ ಬಂದಿದ್ದರೆ ನಮಗೆ ಅದೊಂದು ಭೂಷಣವಾಗುತ್ತಿತ್ತು. ಈಗಲಾದರೂ ಹೊತ್ತು ಮಿಂಚಿ ಹೋಗಿಲ್ಲ. ಮತದಾರರೆಲ್ಲ ತಮ್ಮ ಮತಗಳನ್ನು ರಾಷ್ಟ್ರೀಯ ಸಭೆಯ ಉಮೇದವಾರರಿಗೇ ಕೊಟ್ಟು ಎದುರಾಳಿಗೆ ಒಂದು ಮತ ಸಹ ಬೀಳದಂತೆ ಜಾಗ್ರತೆ ಕೊಂಡರೆ, ಅದರಿಂದಲೂ ನಮ್ಮ ಜಿಲ್ಲೆಯ ಕೀರ್ತಿ ಉಜ್ವಲವಾಗುವಂತಿದೆ. ಬ್ರಿಟಿಶ ಪ್ರಧಾನ ಮಂಡಳದ ಒಸ್ತರಾಗಿ ಭಾರತ ಮಂತ್ರಿಗಳೂ ಅವರ ಜತೆಗಾರರೂ ಬರುವ ತಾ ೨೪ನೇ ರವಿವಾರ ವಿಮಾನದಿಂದ ಕರಾಚಿಗೆ ಬಂದು ಮುಟ್ಟುವರೆಂದು ವರದಿ ಬಂದಿದೆ. ಇಂಥ ಸಂದರ್ಭದಲ್ಲಿ ಸಮಸ್ತ ಮತದಾರರು ರಾಷ್ಟ್ರೀಯ ಸಭೆಯ ಉಮೇದವಾರರನ್ನು ಪುರಸ್ಕರಿಸಿ ರಾಷ್ಟ್ರೀಯ ಸಭೆಯ ಬಲವನ್ನು ಬೆಳೆಸುವರೆಂದು ನಾವು ಹಾರೈಸುತ್ತೇವೆ

ಅತ್ಯಾಚಾರಗಳ ಧಿಕ್ಕಾರ.

ಕಾಂಗ್ರೆಸ ಹುರಿಯಾಳುಗಳಿಗೆ ಪ್ರತಿಸ್ಪರ್ಧಿಯಾಗಿ ನಿಂತಿರುವ ರಾ|| ಶಿಗಡೆಯವರಿಗೂ ಅವರ ಪ್ರಚಾರಕರಿಗೂ ಕೆಲವು ಕಿಡಿಗೇಡಿಗಳು ಬಗೆಬಗೆಯ ಹಿಂಸೆ ಕೊಡುತ್ತಾರೆಂದು ತಿಳಿದು ಬಂದಿದೆ. ಸೈಕಲ-ಮೋಟಾರ ಬಂಡಿಗಳ ಟಾಯರುಗಳಿಗೆ ತೂತು ಮಾಡುವದು, ಟಾಯರುಗಳ ಗಾಳಿ ಬಿಟ್ಟುಬಿಟ್ಟು ಅದರ ಮುಚ್ಚಣಿಕೆ ಅಪಹರಿಸುವದು, ಮೈಮೇಲೆ ಕತ್ತಲೆಯಲ್ಲಿ ಕೊಳಕು ಒಗೆಯುವದು ಅನೇ ಮುಂತಾದ ನೀಚ ಕೃತಿಗಳಿಂದ ಈ ಕಿಡಿಗೇಡಿಗಳು ಅವರನ್ನು ಹಿಂಸಿಸುತ್ತಿದ್ದಾರಂತೆ. ಹಾದಿಯಲ್ಲಿ ಅವರು ಭೆಟ್ಟಿಯಾದಾಗ ಅಥವಾ ಕೂಗಿ ಎಬ್ಬಿಸಿ ಅವರಿಗೆ ತೊಂದರೆ ಕೊಡುವಂತೆ ಪ್ರಿನ್ಸಿಪ ಅಲ್ಲಿನ, ಚಿಕ್ಕ ಪ್ರಾಯದ ಶಾಲಾ ವಿದ್ಯಾರ್ಥಿಗಳಿಗೆ ಕೆಲವು ಕಿಡಿಗೇಡಿಗಳು ಕಲಿಸಿಕೊಟ್ಟ ಸುದ್ದಿಯೂ ಉಂಟು. ಇಂಥ ಹಿಂಸಾ-ಕೃತ್ಯಗಳು ಕಾಂಗ್ರೆಸ್ಸಿಗೆ ಎಂದೂ ಮಾನ್ಯವಾಗುವಂತಿಲ್ಲ. ಪ್ರೇಮದಿಂದ ಶತ್ರುಗಳನ್ನು ಜಯಿಸುವದು ಕಾಂಗ್ರೆಸ್ಸಿನ ನೀತಿಯಾಗಿದೆ. ಮೇಲಿನಂತಹ ಅನಾಚಾರ ಅತ್ಯಾಚಾರಗಳಿಗೆ ನಿಜವಾದ ಕಾಂಗ್ರೆಸ್ಸಿಗನು ಅಥವಾ ಕಾಂಗ್ರೆಸ ಭಕ್ತನು ಎಂದೂ ಸಮ್ಮತಿ ಕೊಡಲಾರನು. ರಾ|| ಶಿಗಡೆಯವರಿಗೆ ಕೊಟ್ಟ ಹಿಂಸೆಯ ಕಿರಿಕಿರಿ ನಮ್ಮ ಜಿಲ್ಲಾಧ್ಯಕ್ಷ ಶ್ರೀ|| ಶಾಸ್ತ್ರಿಯವರು ಉಪ್ಪೇಗಳೊಂದು ನಿನ್ನೆ ತಮ್ಮ ಹುರಿಯಾಳುತನ ಹಿಂತೆಗೆದುಕೊಳ್ಳಲು ಸಹ ತಯಾರಾಗಿದ್ದರು. ಆ ಸ್ವಾತಂತ್ರ್ಯವಿದ್ದರೆ ಅವರು ಹಿಂತೆಗೆದುಕೊಂಡು ಸಹ ಬಿಡುತ್ತಿದ್ದರು. ಇನ್ನಾದರೂ ಈ ಕಿಡಿಗೇಡಿತನ ಮಾಡುವ ಜನರು ಆ ದುರ್ಮಾರ್ಗ ಬಿಟ್ಟುಕೊಡುವರೆಂದು ನಂಬಿದ್ದೇವೆ. ಈ ಕಿಡಿಗೇಡಿಗಳು ಯಾರೆಂದು ಕಂಡುಬಂದರೆ ಅವರನ್ನು ಕಾಂಗ್ರೆಸ ಸಂಸ್ಥೆಯಿಂದಲೂ, ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಸೇವಾದಳ ಮೊದಲಾದವುಗಳಿಂದಲೂ ಕೂಡಲೇ ಹೊರಗೆ ಹಾಕುವ ವ್ಯವಸ್ಥೆ ಮಾಡಲಾದೀತೆಂದೂ ಈ ಮೂಲಕ ಎಚ್ಚರಿಕೆ ಕೊಟ್ಟಿದು.

ಕುಮಟೆ ತಾ ೧೦ ೩ ೪೬

ಎಸ್ ಜಿ ಗೋಪಿ. ದಯಾನಂದ ಪ್ರಭು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳವಳಿ ಕಳೆಯಾಗುತ್ತಿದೆ

ಕಾಂಗ್ರೆಸ ಹುರಿಯಾಳುಗಳು ೩-೪ ದಿನಗಳ ಹಿಂದೆ ಇನ್ನೊಮ್ಮೆ ಈ ತಾಲೂಕಿನಲ್ಲಿ ಸಂಚರಿಸಿ, ಕಾಂಗ್ರೆಸ್ಸಿಗೇ ಬೆಂಬಲ ಕೊಡುವಂತೆ ಪ್ರಚಾರ ಮಾಡಿದರು. ಪ್ರತಿಯೊಂದು ಕಡೆ ಅವರಿಗೆ ಸಂಪೂರ್ಣ ಬೆಂಬಲದ ಆಶ್ವಾಸನೆಗಳು ಸಿಕ್ಕಿವೆ. ಕಾಂಗ್ರೆಸ-ಪ್ರತಿಸ್ಪರ್ಧಿಗಳ ಊರಾದ ಕಾಜಳ್ಳಿಯ ಜನರು ಕೂಡ ಕಾಂಗ್ರೆಸ್ಸಿನ ಹಿನಸ ಮತ್ತಾರಿಗೂ ತಾವು ಮತ ಕೊಡಲಾರೆವು ಮತ್ತು ಕೊಡುವಂತಿಲ್ಲವೆಂದು ಸ್ಪಷ್ಟ ಹೇಳಿದ್ದುಂಟು. ರಡಿಕಲ ಪಕ್ಷದ ಪ್ರಚಾರವೂ ನಡೆದಿದೆ. ಆದರೆ ಈ ಪ್ರಚಾರಕರು ಇಂದು ಜಗತ್ತಿಗೇ ವಂದನೀಯರಾಗಿರುವ ಮಹಾತ್ಮಾ ಗಾಂಧಿಯವರನ್ನೂ, ಜಗತ್ತಿನ ರಾಜಕಾರಣದ ನೌಕೆಗೆ ಕರ್ಣಧಾರರಾಗುವ ಯೋಗ್ಯತೆಯುಳ್ಳವರೆಂದು ವಿದೇಶಗಳಲ್ಲಿ ಪುರಸ್ಕರಿಸಿದ ಪಂ| ಜವಾಹಿರಲಾಲ ನೆಹರುರವರನ್ನೂ ಬಾಯಿಗೆ ಬಂದಂತೆ ಬೈಯುತ್ತ ಹೀಯಾಳಿಸುತ್ತ, ಅಪವಾದ ಬರಿಸುತ್ತಿರುವದರಿಂದ ಅವರ ಪ್ರಚಾರವೆಲ್ಲ "ಹೊಳೆಯಲ್ಲಿ ಹುಳಿ ಅರೆದ ನೀರಂಗಾಗುತ್ತಿದೆ!" ಕಾಂಗ್ರೆಸ್ಸಿಗರೂ, ಗಾಂಧಿ-ನೆಹರೂಗಳಿಗೂ ಬೈಯ್ಯುವ ಈ ಮಂದಿ ಪ್ರೋಲೇಟೇರಿಯನ್ ಸರಕಾರದ ಪ್ರಚಾರಕರಾಗಿದ್ದಾರೆಂದು ಹಳ್ಳಿಗಳ ಜನರು ಒಮ್ಮತದಿಂದ ಸಿದ್ಧಾಂತ ಮಾಡಿಬಿಟ್ಟಿದ್ದಾರೆ. ಅಂತು ಈ ತಾಲೂಕಿನಲ್ಲಿ ಬಹುತೇಕ ಎಲ್ಲ ಮತಗಳು ಕಾಂಗ್ರೆಸ್ಸಿಗೇ ಬೀಳುವಂತೆ ಕಾಣುತ್ತದೆ

ಕಳೆದ ಸೋಮವಾರದಿಂದ ಈ ತಾಲೂಕಿನ ಹಲವಾರು ಶಿಕ್ಷಕರೂ ಶಿಕ್ಷಕಿಯರೂ ಸಂಪು ಮಾಡಿದ್ದಾರೆ. ಇಲ್ಲಿಯ ಹೆಣ್ಣುಮಕ್ಕಳ ಮರಾಠಿ ಶಾಲೆ, ಮಲ್ಲಾಪುರ ಶಾಲೆ ವಗೈರೆ ೬ ಶಾಲೆಗಳು ಈಗಾಗಲೇ ಪೂರ್ಣ ಮುಚ್ಚಲ್ಪಟ್ಟಿವೆ. ಸಂಪು ಮಾಡಿದ ಶಿಕ್ಷಕರೂ ವಿದ್ಯಾರ್ಥಿಗಳೂ ದಿನಾಲು ಪ್ರಭಾತಫೇರಿ ತೆಗೆದು ಪ್ರಚಾರ ನಡಿಸಿದ್ದಾರೆ

ಮಹಾಶಿವರಾತ್ರಿಯ ಕಾಲಕ್ಕೆ ಗೋಕರ್ಣಕ್ಕೆ ಹೋಗಿ ಬಂದ ಮಹಾನುಭಾವರೊಬ್ಬರು ತಿಳಿಸುತ್ತಾರೆ - ಜಾತ್ರೆಯ ಕಾಲದಲ್ಲಿ ಮಹಾಬಲೇಶ್ವರ ದೇವಸ್ಥಾನದೊಳಗೆ ಸಾಕಷ್ಟು ಪೋಲೀಸರನ್ನು ಮೊಕ್ತೇಸರರು ಇಟ್ಟಿದ್ದಿಲ್ಲ. ಗುಡಿಯ ಹೊರಗಿನ ಸುತ್ತಿನಲ್ಲಿ ರಾತ್ರಿ ಕಾಲಕ್ಕೆ ಒಂದೂ ದೀಪ ಉರಿಯುತ್ತಿದ್ದಿಲ್ಲ. ದೇವದರ್ಶನಕ್ಕೆ ಬಂದವರು ಕತ್ತಲೆಯಲ್ಲೇ ಎಡಕುತ್ತ ತಡಕುತ್ತ ನಡೆಯಬೇಕಾಗುತ್ತಿತ್ತು! ಗುಡಿಯಲ್ಲಿ ಸ್ವಚ್ಛತೆಯೂ ಇದ್ದಿಲ್ಲ. ಗರ್ಭಾಗಾರದೊಳಗಿನ ನೀರೂ, ಪತ್ರ-ಪುಷ್ಪಗಳೂ ಸರಿಯಾಗಿ ಹಳ್ಳಕ್ಕೆ ಸಾಗಿಹೋಗುತ್ತಿದ್ದಿಲ್ಲ, ನಡುವೆಯೇ ರಾಶಿಯಾಗಿ ಕೊಳೆತು ನಾರುತ್ತಿದ್ದವು. ದೇವರಿಗೆ ಪ್ರದಕ್ಷಿಣೆ ಹಾಕುವವರು ಮೂಗು ಮುಚ್ಚಿಕೊಂಡು ತಿರುಗಬೇಕಾಗುತ್ತಿತ್ತು. ಊರಲ್ಲೂ ಸಾಕಷ್ಟು ಸ್ವಚ್ಛತೆ ಇದ್ದಿಲ್ಲ. ಎಲ್ಲೆಲ್ಲೇ ಕಡೆ ಹೊಲಸು ರಾಶಿಯಾಗಿ ಬಿದ್ದಿತ್ತು. ಅದನ್ನು ಆಗಿಂದಾಗ ತೆಗೆಯಲು ಸಾಕಷ್ಟು ಸಿಬಂದಿಯಿದ್ದಿಲ್ಲ. ಊರ ಸ್ವಚ್ಛತೆಗಾಗಿಯೇ ತಲಾ ೪ ಆಣೆಯಂತೆ ಯಾತ್ರಿಕರಿಂದ ವಸೂಲ ಮಾಡಿದ ಅಧಿಕಾರಿಗಳಿಗೆ ಬೇಕಷ್ಟು ಸಿಬಂದಿ ಇಟ್ಟುಕೊಳ್ಳುವ ಬುದ್ಧಿಯಾಗದಿದ್ದದ್ದು ಊರವರಂತೆಯೇ ಯಾತ್ರಿಕರದೂ ದುರ್ದೈವ! ಇತ್ಯಾದಿ

ಭಟಕಳ— (ತಾ. ೬-೩-೪೬) ಸರಕಾರಿ ಒಪಿಸರ ಮಿ|| ಶೆಟ್ಟಿ ಇವರು ಮೊನ್ನೆ ಸೀಧಾ-ಕೊಡುಗೆಗೆ ತಪಾಸಣೆಗೆಂದು ಬೆಳವಳ್ಳಿಗೆ ಹೋಗಿದ್ದರಂತೆ. ಆಗ ಅವರ ಬಾಯಿಂದ ಉದುರಿದ ಕೆಲವು ಮುತ್ತಿನಂಥ ಮಾತುಗಳನ್ನು ಕೇಳಿ ಜನರು ದಂಗುಬಡೆದರಂತೆ. ಯಾವನೊಂದು ಮನೆಯಲ್ಲಿ ವಿಧವೆಯೊಂದರ "ಇವರನ್ನೇಕೆ ಇಟ್ಟುಕೊಂಡಿದ್ದೀರಿ ಅವಳಿಗೆ ಅವರ (?) ಮನೆಗೆ ಕಳಿಸಿರಿ" ಎಂತಲೂ, ಯಾರೊಬ್ಬರು ಇಬ್ಬ ಹೆಂಡಂದಿರನ್ನು ಮಾಡಿಕೊಂಡದಿದ್ದರೆ, "ಇಬ್ಬರನ್ನೂ ಇಟ್ಟುಕೊಳ್ಳಬೇಡ. ಒಬ್ಬಳಿಗೆ ತವರು ಮನೆಗೆ ಕಳಿಸಿ ಕೊಡು" ಎಂದಲೂ ಅವರು "ಹುಕುಮು" ಕೊಟ್ಟರಂತೆ! ಒಂದು ಮನೆಯಲ್ಲಿ ಗಂಡ, ಹೆಂಡತಿ ಮತ್ತು ೯ ಮಕ್ಕಳು ಕೂಡಿ ೧೧ ಜನ ಇದ್ದರು. ಮನೆಯ ಯಜಮಾನನು ತನ್ನಲ್ಲಿ ೧೧ ಮಂದಿಯಿದ್ದಾರೆಂದು ಹೇಳಲಾಗಿ, "ಸತ್ತವರನ್ನೂ ಕೂಡಿಸಿ ಹೇಳುತ್ತೀಯಾ?" ಎಂದು ಶೆಟ್ಟರು ಆವನನ್ನು ಮೇಲೆ ಹಂಗಿಸಿದರಂತೆ! ಮಿ|| ಶೆಟ್ಟಿಯವರಿಗೆ ಹೀಗೆಯೇ

ಬಿಟ್ಟರೆ ಬೇರೆ ಹಳ್ಳಿಗಳಲ್ಲೂ ಈ ಮಟ್ಟಿನ ಪ್ರಕ
ಭೀತಿಯುಂಟು

ಶಿರಸಿ— (ತಾ ೨೮-೨-೪೬) ತಾ ೨೪
ಲ್ಲಿಯ ಕಾಂಗ್ರೆಸ ಹುರಿಯಾಳುಗಳು ಸಿದ್ದಾಪುರ
ಮುಗಿಸಿ ಇಲ್ಲಿಗೆ ಬಂದು ತಲ್ಪಿದರು. ದಕ್ಷಿಣ ಕನ್ನಡ
ಸಂಚಾರಕ್ಕೆ ಹೋಗಿದ್ದ ರಾ|| ಹಡೀಕರವರೂ ಅಂದೇ
ಇಲ್ಲಿಗೆ ಬಂದು ಮುಟ್ಟಿದ್ದರು. ಸಾಯಂಕಾಲ ದ
ಸಭೆಯಾಗಿ ಅವರೆಲ್ಲರ ಭಾಷಣಗಳಾದವು. ರಾ|| ಕ
ನೋಟಿನಕರ ತಮ್ಮ ಪ್ರಕೃತಿ ಸರಿ ಇಲ್ಲದೆ ಮತ್ತು ಕೃಷ್ಣರಾವ
ಇವರೂ ಮಾತಾಡಿ ಈ ತಾಲೂಕಿನ ನೂರಕ್ಕೆ ನೂ
ಳು ಕಾಂಗ್ರೆಸ್ಸಿಗೇ ಬೀಳುವವೆಂದೂ ಮತಗಳನ್ನು
ಹುರಿಯಾಳುಗಳಿಗೆ ಸರಿಯಾಗಿ ಹಂಚಿ ಹಾಕಲಾಗುವ
ಅಭ್ಯಾಗತ ಹುರಿಯಾಳುಗಳಿಗೆ ತಾಲೂಕಿನ ಜನರ
ಭರವಸೆಯನ್ನಿತ್ತಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಹೋರಾಟಗಳನ್ನು
ಅವರ ಸಂಪಿನ ಪ್ರಸಂಗವನ್ನು ತಪ್ಪಿಸಬೇಕೆಂ
ಪ್ರಯತ್ನಿಸದೆ ಸರಕಾರಕ್ಕೆ ತಂತಿಯಿಂದ ಬಿನ್ನವಿಸಿ

ತಾ ೨೪ನೇಗೆ ಇಲ್ಲಿಯ ಜವಳಿ ವರ್ತಕರ ಸ
ಸಭೆಗೂಡಿ ರಾ|| ವಾಸುದೇವರಾವ ಘಾಣೇಕರ
ನಿಧನದ ಬಗ್ಗೆ ದುಃಖಪ್ರದರ್ಶಕ ಗೊತ್ತುವಳಿ
ರೆಂದು ತಿಳಿಯುತ್ತದೆ

ಹುಬ್ಬಳ್ಳಿಯಿಂದ ಹೊರದೂಡಲ್ಪಟ್ಟ ಪಿಂ
ದವರು ಇಲ್ಲಿ ಬಂದು ತಲ್ಪಿದ್ದಾರೆ. ಅಧಿಕಾರಿಗಳು
ಇಲ್ಲಿ ಆಶ್ರಯ ಕೊಡಬಾರದಾಗಿ ಆರಿಕೆಯಿದೆ

ಪಂಡಿತ ಆಸ್ಪತ್ರೆಗೂ ಮಾರಿಕಾಂಬಾ ಗುಡಿಗೆ
ಸೇರಿನ ಸ್ವರೂಪ ಮಾಡುವದನ್ನು ನಗರ ಸಭೆಯ
ಸಿದ್ದರಂತೆ ಯಾಕೋ, ಏನೋ ತಿಳಿಯದು
ಯವರ ನಡತೆಯಿಂದ ಜನರಿಗೆ ಮಾತ್ರ ಕಷ್ಟವಾ

(ತಾ ೫-೩-೧೯೪೬) ಯಾವದ್ದೇ
ಬೇಸಾಯ ಸಂಘದವರೂ ಅವರ ಕಾರ್ಯಕರ್ತರೂ
ಕಾಂಗ್ರೆಸ ಕೆಲಸಗಾರರೊಡನೆ ಸಹಕರಿಸಿ ತಮ್ಮ
ಭಾಗದಲ್ಲಿ ತಾ ೧೧ರ ಚುನಾವಣೆಯಲ್ಲಿ ಆದಷ್ಟು
ಮತದಾರರು ಮತ ಹಾಕುವಂತೆಯೂ, ಎಲ್ಲರೂ
ಸ್ಸಿಗೇ ಮತ ಕೊಡುವಂತೆಯೂ ನೋಡಿಕೊಳ್ಳ
ಜಿಲ್ಲಾ ಬೇಸಾಯಸಂಘದ ಕಾರ್ಯದರ್ಶಿಗಳು ಬಿನ್ನವಿ

ಸಿದ್ದಾಪುರ— (ತಾ ೧೮-೨-೪೬)
ದಲ್ಲಿ ಉಂಬಳದಾರ ಭೂಮಾಲೀಕರ ವಿರುದ್ಧ ಬ
ಸತ್ಯಾಗ್ರಹವಿರುತ್ತದೆಂದೂ ಈ ಭೂಮಾಲೀಕರು
ಬಂದೂಕುಗಳಿಂದ ಎಂದೂ ೫ ಮಂದಿಯ ಸಹಿಯುಳ್ಳ
ಪತ್ರ ಬಂದಿದೆ. ತದ್ವಿರುದ್ಧವಾಗಿ ಈ ಭೂಮಾಲೀಕ
ರುಗಳನ್ನೆಲ್ಲ ನಿಷೇಧಿಸಿ ಹಾಗೂ ಲಕ್ಷ್ಮ್ಯಾದಿ ಟೀ
ಕೊಟ್ಟು, ಜಿ. ಬಿ. ಬೋರ್ಡಿನ ಸದಸ್ಯ ರಾ
ಗಣಪತಿ ಭಟ್ಟರೂ ಒಂದು ಪತ್ರ ಬರೆದಿದ್ದಾರೆ

(ತಾ ೬-೩-೪೬) ಇಂದು ಬೆಳಗ್ಗೆ ಕ್ಯಾದಗಿ
ಸರಕು ಹೇರಿಕೊಂಡು ಕುಮಟೆಗೆ ಹೋಗುತ್ತಿದ್ದ
ರ ಬಂಡಿಯೊಂದು ಕ್ಯಾದಗಿ ಹಳ್ಳಿಯ ಗಡಿಯ
ಇರುವ ಒಂದು ಮೋರಿಯನ್ನು ದಾಟುತ್ತಿದ್ದಾಗ
ಬಿದ್ದ ವಾರ್ತೆ ಬಂದಿದೆ. ಆಗ ಗಾಡಿಯಲ್ಲಿ ಡ್ರ
ಕ್ಲೀನರ ಕೂಡಿ ೪ ಮಂದಿ ಇದ್ದರಂತೆ! ಸುದೈ
ಯಾರಿಗೂ ವಿಶೇಷ ಗಾಯವಾಗಿಲ್ಲ. ಬಂದಿಯಲ್ಲಿ
ಅಡಿಕೆಯಿತ್ತಂತೆ, ಪ್ರತಿ ಚೀಲದಲ್ಲಿ ೫-೬ ಮಣ
ತ್ತಂತೆ. ಈ ಭಾರ ಸಹಿಸಲಾಗದ ಮೋರಿ ಮುರಿದು
ರಿಂದಲೇ ಈ ಅಪಘಾತವಾಯಿತೆಂದು ನೋಡಿದವ
ತ್ತಾರೆ. ಈ ಮೋರಿಯನ್ನು ಕೂಡಲೆ ದುರುಸ್ತಿಗೊಳಿ
ಕ್ಯಾದಗಿ-ಸಿದ್ದಾಪುರ ರಸ್ತೆ ಕಟ್ಟಿಸಿ ಜನರಿಗೆ ಅನು
ಯಾಗುವದು

ಕಳೆದ ತಾ ೨೦ಕ್ಕೆ ಇಲ್ಲಿಯ ಶಿಕ್ಷಕ ದಿನದ ಆ
ಯಿತು. ಮೊದಲು ಮೆರವಣಿಗೆಯಾಯಿತು. ಆ
ಎಸ್ ಎಸ್ ಪಾಟೀಲ ಇವರ ಹಿರಿಯತನದಲ್ಲಿ
ಸಭೆಯಾಗಿ ಶಿಕ್ಷಕರ ಬಗ್ಗೆ ಸಹಾನುಭೂತಿಯ
ಆಂದೋಲನಕ್ಕೆ ಜನರ ಬೆಂಬಲವೂ ಪ್ರದರ್ಶನಗೊಳ್ಳ

ಕಾರವಾರ— ಕಾಂಗ್ರೆಸ ಕೆಲಸಗಾರ ರಾ
ರೇಣ್ಣಯವರೂ ಬೇರೆಯವರೂ ಹಳ್ಳಿಗಳಲ್ಲಿ
ಮಾಡಿ ಎಲ್ಲ ಮತಗಳು ಕಾಂಗ್ರೆಸ್ಸಿಗೇ ಸಿಗುವವೆ
ಗೆ ಮನವರಿಕೆಯಾಗಿರುತ್ತದೆಂದು ತಿಳಿಸಿದ್ದಾರೆ

ಬನವಸಿ ಎಸ್ಟೇಟಿಯ ಕೆಂಪು ಬದಲು ಪರ ಹುಟ್ಟಿ
ಯುತ್ತ ಇಳವರ ಜಿಲ್ಲಾಧಿಕಾರಿ ಇತ್ತ ಗಮ
ಅಂಗಡಿಗಳೊಳಗಿನ ಮಾರಾಟದ ದರವನ್ನು ನ
ತಿ ಅದೆ ಇದರ ಮೇಲೆ ಸೂಚನೆಯಿದೆ

ಕುಮಟಾ— (ತಾ ೧-೩-೪೬) ಕಾಂಗ್ರೆಸ [illegible] ಪ್ರಚಾರ ಈ ಕಾಲಖಂಡದಲ್ಲಿ [illegible] ಮಾಮಲೇದಾರರ ದೇಶಭಾಂಡೇಯವರೂ [illegible] ಮಾಡಬೇಕಾಗಿದ್ದರೆ [illegible] ನ ಮಂದಿ ಕಾರ್ಯಕರ್ತರ [illegible] ಈ ಕಾಲಖಂಡದಲ್ಲಿ [illegible] ಒಂದು [illegible] ಕಾಂಗ್ರೆಸ [illegible] ಜಿಲ್ಲೆಯಲ್ಲೇ [illegible] ಅಧಿಕಾರದಿಂದ [illegible]

[illegible] ಗಿರಣಿ [illegible] ಕೆಲವು ಕಡೆ [illegible] ಗಿರಣಿಗಳಲ್ಲಿ [illegible] ತಯಾರಾಗಿ [illegible] ಉಗ್ರಾಣಗಳ ಮೊಕ್ತೇಸರರ [illegible] ಬಂದಿದ್ದರಂತೆ! [illegible] ಗಿರಣಿ [illegible] ರಾಜಿನಾಮೆಯನ್ನು [illegible] ಉಗ್ರಾಣ [illegible] ಉಗ್ರಾಣದ [illegible] ಮಾಮಲೇದಾರರ ಕಡೆ [illegible]

ಆಗ ಮಾಮಲೇದಾರರು ಮೊಕ್ತೇಸರರ [illegible] "ನಿಮ್ಮ [illegible]" ಎಂದು [illegible] ಮಾಮಲೇದಾರರ ಈ ವ್ಯವಹಾರ [illegible] ಈ ಮೃದುತ್ವದ [illegible] ಬಲ್ಲ! — [illegible] ಎಂದು [illegible]

ಉಗ್ರಾಣದ ಮೊಕ್ತೇಸರರು [illegible] ಕೆಲವರ [illegible] ಎನು ಮಾಡತಕ್ಕದ್ದು [illegible] ಒಂದು [illegible]!

ಇನ್ನು ೩ ಗಂಟೆಗಳಾಯಿತು. [illegible] ಆಗಿಲ್ಲ [illegible]! [illegible]

ಈ [illegible] ಗಂಟೆಗಳಲ್ಲಿ [illegible] ಈ [illegible] ಬೇಡವೇ?

ಮುಂಡಗೋಡ— [illegible] ಗೋಕರ್ಣ [illegible] ಡಾ. [illegible] ಆತನ ಆತ್ಮಕ್ಕೆ ಶಾಂತಿಯಾಗಲಿ!

ಆಜ್ಞೆ.

ನಂ. [illegible]
ಕಾನಡಾ ಜಿಲ್ಲಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ. [illegible]-೧೯೪೬.

ಹಿಂದುಸ್ಥಾನ ಸಂರಕ್ಷಣೆ ಕಾನೂನಿನ [illegible] ನಿಯಮದ [illegible] ಉಪ ನಿಯಮವು [illegible] ೧೯೪೩ [illegible] ಎಸ್. ಡಿ [illegible] ನಂಬರಿನ [illegible] ಜಿಲ್ಲಾ ಮೆಜಿಸ್ಟ್ರೇಟ, [illegible]

ಜಿಲ್ಲಾ ಮೆಜಿಸ್ಟ್ರೇಟರು ದಯಮಾಡಿ [illegible] ಅಧಿಕಾರದಿಂದ [illegible]—

(ಅ) [illegible] ಮೋಜನಾಸ್ಥಳ [illegible] (caterer) [illegible]

(ಬ) [illegible]

ಈ ಆಜ್ಞೆಗೆ ಜೋಡಿಸಿರುವ ಪರಿಶಿಷ್ಟದಲ್ಲಿ [illegible] ಕ್ಷೇತ್ರಗಳಲ್ಲಿ, [illegible] ಅಥವಾ ([illegible]) [illegible] ಅಥವಾ ಪೂರೈಸಕೂಡದು

ಪರಿಶಿಷ್ಟ

ಕಾರವಾರ ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ಬರುವ ಕ್ಷೇತ್ರ

ಕುಮಟಾ	"	"	"
ಶಿರಸಿ	"	"	"
ಹಳಿಯಾಳ	"	"	"
ಹೊನ್ನಾವರ	"	"	"
ಭಟಕಳ	"	"	"
ಗೋಕರ್ಣ	"	"	"

ಹಾಗೂ (೧) ಅಂಕೋಲಾ, [illegible] ಗ್ರಾಮ [illegible] (೨) [illegible]

ಹಿಂದುಸ್ಥಾನ ರಕ್ಷಣೆಯ ಕಾನೂನಿನ [illegible] ಜಿಲ್ಲಾ ಮೆಜಿಸ್ಟ್ರೇಟ ಕಾರವಾರ [illegible]—

(ಅ) [illegible]
(ಬ) ಆಜ್ಞೆಯ [illegible] (೧) "ಕಾನಡಾ ವೃತ್ತ," ಕುಮಟಾ ಮತ್ತು (೨) "[illegible]" [illegible]
(ಕ) [illegible];
(೧) ಅಂಕೋಲೆಯ [illegible] ಸಂಘ, ಅಂಕೋಲಾ
(೨) ಹೊನ್ನಾವರದ [illegible] ಸಂಘ, ಹೊನ್ನಾವರ.

F. N. RANA,
ಜಿಲ್ಲಾ ಮೆಜಿಸ್ಟ್ರೇಟ, ಕಾರವಾರ.

NOTICE TO CONTRACTORS.

Sealed and separate tenders in B-2 (Item rate) form for the works of "Erecting Lahore Sheds for Grain Godowns" at the following places (one at each place) in the Kanara District are invited

Karwar, Ankola, Bhatkal, Sirsi, Haliyal

Estimated cost of the contract work, for each Lahore Shed	Earnest Money	Security Deposit
Rs 17,970/-	Rs 180/-	Rs 900/-

Tender forms can be had from the office of the undersigned on payment of Rs 2/- (not refundable) each, upto 4 P M on 15-3-1946. Tenders sealed and superscribed as "Tender for Erecting Lahore Shed at (Places)", with chalans for the earnest money, will be received upto 4 P M on 16-3-1946 and will be opened on the same or subsequent day.

No A-31
O/V Karwar,
1st March 1946

R. L. DESHPANDE,
EXECUTIVE ENGINEER,
KANARA DIVISION

[illegible] (ಸ್ಪಿರಿಟ) ಡೋರ [illegible] ಬಿಲ್ಡರ

ಡಿನೇಚರ್ಡ ಸ್ಪಿರಿಟ್

[illegible] ಸಿಗುತ್ತದೆ

ವಿ ಎಸ್. ಮಿಜಾರನಕರ,
[illegible], ಮೋಟರ ಸ್ಟ್ಯಾಂಡ, ಕುಮಟಾ

ಜರೂರ ಪ್ರಕಟನೆ.

[illegible] ಗುಡ್ಡಗಳ [illegible] ಕುಮಟಾ, ಹೊನ್ನಾವರ, [illegible] ಮತ್ತು ಅಂಕೋಲಾ [illegible] ಮಾಡುವದಿದೆ

[illegible]

H. A Oosman,
Agent,
[illegible]nters Co, Ltd, Nilgiris, Hubli

WANTED for our New English [illegible] (Karwar), Graduates in [illegible] Science, and a Matriculate [illegible] Drawing (Int) Apply to the [illegible] stating the minimum [illegible] expected

[illegible] Education [illegible], [illegible] 5-3-46

K.R Haldipurkar,
Chairman.

ಹಿಂದುಸ್ಥಾನಿ ಪಾಠಗಳು.

ಸಬಕ ಬಾರಹ (ಪಾಠ ೧೨)

ಕಪಡೇಕೀ ಕಹಾನೀ (೩) (ಬಟ್ಟೆಯ ಕಥೆ)

[illegible]

ಸಬಕ ತೇರಹ (ಪಾಠ ೧೩).

ಹಮಾರೀ ಜಬಾನ. (ನಮ್ಮ ಭಾಷೆ)

[illegible]

ಬರೆಯುತ್ತೇವೆ— ನಾಗರಿ ಸುಕ್ಕಿ ಫಾರಸಿ) [illegible] (ಅವನ್ನು ನಾವು [illegible]) ಯಾಹೀ ಹಮಾರೀ ರಾಜಭಾಷಾ [illegible] (ಇದೇ ನಮ್ಮ ರಾಜಭಾಷೆಯಾಗುವದು.)

ದಿ ಕೊಮರ್ಶಿಯಲ್ ಕೊಪ್ರೋರೇ

ಕಾ ಮಾ ಟಾ,

ನಮ್ಮಲ್ಲಿ ಡಾಸೆಲ್ ಮಶಿನ್ ಕಂಪನಿ

ಎಲ್ಲ ತರದ ಸಂಚು ಯೋಗ್ಯ ದರದಿಂದ

ವಿ. ಎಮ್. ಹಿಂಜೀಕನ

ಮೋಟರ ಸ್ಟ್ಯಾಂಡ, ಕು

ಆಜ್ಞೆ.

ನಂ. ೧೩೪೮.

ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರ

ಕಾರವಾರ, ತಾ ೨೬ ಫೆಬ್ರುವರಿ,

ಹಿಂದುಸ್ಥಾನ ಸಂರಕ್ಷಣ ಕಾನೂನಿನ [illegible] ನಿಯಮ [illegible] ಉಪ-ನಿಯಮದ [illegible] ೧೯೪೪ನೇ [illegible] (ರಾಷ್ಟ್ರೀಯ-ಯುದ್ಧ) [illegible] ಹೊರಡಿಸಿದ ಸರಕಾರ ಪ್ರಕಟನೆ ನಂ [illegible] ಅಧಿಕಾರಗಳನ್ನು [illegible] ೧೯೪೫ [illegible] ಜಿಲ್ಲಾ ಮೆಜಿಸ್ಟ್ರೇಟ ಕಾನಡಾ [illegible]

[illegible] ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದಲ್ಲಿ [illegible] ಕ್ಷೇತ್ರ [illegible] ಅಂಗಡಿಗಳಲ್ಲಾಗಲಿ [illegible]

[illegible] ಈ ಆಜ್ಞೆಯನ್ನು ಉಲ್ಲಂಘಿಸಿದರೆ, ಅವನು ಬೇರೆ ಯಾವದೇ ಶಿಕ್ಷೆಗೆ ಗುರಿಯಾದಾಗ್ಯೂ [illegible] ಆ ಅಕ್ಕಿಯನ್ನು, ಅದರ [illegible]

ಹಿಂದುಸ್ಥಾನ ಸಂರಕ್ಷಣ ಕಾನೂನಿನ ೧೧೯ನೇ ನಿಯಮದ [illegible] ಉಪ-ನಿಯಮಕ್ಕನುಸಾರವಾಗಿ [illegible] ಯನ್ನು ಈ ಕೆಳಗಿನಂತೆ ಪ್ರಕಟಿಸಲಾಗುವದು.

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗೆಝೆಟದಲ್ಲಿ ಪ್ರಕಟಿಸಬೇಕು;

(ಬ) ಆಜ್ಞೆಯ ಕನ್ನಡ ಅನುವಾದದ ಒಂದು ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು

(i) “ಕಾನಡಾ ವೃತ್ತ” ಕುಮಟಾ (ii) “ವಿಚಾರ” ಕಾರವಾರ,

(ಕ) ಆಜ್ಞೆಯ ಕನ್ನಡ ಪ್ರತಿಗಳನ್ನು ಜಿಲ್ಲೆಯೊಳಗಿನ ಎಲ್ಲ ಮುಖ್ಯ ಕಚೇರಿಗಳಲ್ಲೂ ಜಿಲ್ಲಾ [illegible] ಯಲ್ಲೂ ಇರುವ ನೋಟೀಸ-ಬೋರ್ಡುಗಳಿಗೆ ಅಂಟಿಸತಕ್ಕದ್ದು.

ಪರಿಶಿಷ್ಟ. -

	ಕ್ಷೇತ್ರ		(ತಲೆ ಹೊಡೆದು ಅಳೆದ) ಪ್ರತಿ ಪಾ	
			ಸಗಟು	ದೊ
			ರೂ ಆ ಪೈ	ರೂ.
೧	ಕಾರವಾರ, ಕುಮಟಾ, ಗೋಕರ್ಣ, ಹೊನ್ನಾವರ ಮತ್ತು ಭಟಕಳ ಸೀಧಾ ಕ್ಷೇತ್ರಗಳಲ್ಲಿ ...	ಬೆಸ್ತಗೆ ಅಕ್ಕಿ	೧—೮—೦	೧—
		ಕುಚಗಿ ಅಕ್ಕಿ	೧—೮—೦	೧—
೨	ಶಿರಸಿ ಸೀಧಾ ಕ್ಷೇತ್ರವನ್ನು ಮತ್ತು [illegible]	ಬೆಸ್ತಗೆ ಹಾಗೂ ಕುಚಗಿ ಅಕ್ಕಿ	೧—೬—೦	೧—
೩	ಅಂಕೋಲಾ, ಕಾರವಾರ, ಕುಮಟಾ, ಹೊನ್ನಾವರ ತಾಲೂಕುಗಳೊಳಗಿನ ಹಾಗೂ ಭಟಕಳ ಪೇಟೆಯೊಳಗಿನ ಸೀಧಾ ಕ್ಷೇತ್ರವಲ್ಲದ ಭಾಗಗಳಲ್ಲಿ ...	ಬೆಸ್ತಗೆ ಅಕ್ಕಿ	೧—೫—೦	೧—
		ಕುಚಗಿ ಅಕ್ಕಿ	೧—೫—೦	೧—
೪	ಶಿರಸಿ, ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ಮುಂಡಗೋಡ ತಾಲೂಕುಗಳೊಳಗಿನ ಹಾಗೂ ಸುಪಾ ಪೇಟೆಯೊಳಗಿನ ಸೀಧಾ ಕ್ಷೇತ್ರವಲ್ಲದ ಭಾಗಗಳಲ್ಲಿ	ಬೆಸ್ತಗೆ ಹಾಗೂ ಕುಚಗಿ ಅಕ್ಕಿ	೧—೪—೦	೧—

F. N. RANA

ಜಿಲ್ಲಾ ಮೆಜಿಸ್ಟ್ರೇಟ,

ನೋಟೀಸು.

[illegible] ಈ ಜಿಲ್ಲೆಯ [illegible] ಡಿಕ್ಲೇರೇಶನ್ (declaration) [illegible] “ವಿಚಾರ” ‘ಕಾನಡಾವೃತ್ತ’ಗಳಲ್ಲಿ ಪ್ರಸಿದ್ಧವಾದ ತಾ. ೩-೧೨-೧೯೪೫ರ ನೋಟೀಸು [illegible]

ಕಾರವಾರ,

ತಾ ೫-೩-೧೯೪೬

F N. RANA

ಜಿಲ್ಲಾ ಮೆಜಿಸ್ಟ್ರೇಟ,

NOTICE.

No 4305 (Estt)

Karwar, 1st March

Applications are invited by ***20-3-1946*** for the following temp posts in the Supply Department of Kanara District

(1) 3 Godown Managers on Rs 80-5/2-95-5-120 with Dea Allowance.

(II) 1 Rationing Inspector on Rs 50-3-80 with Dearness Allow

Applications should contain the following particulars. —

(1) Name and address in full

(2) Age.

(3) Educational qualifications.

(4) Record of previous experience, if any.

Applicants called for interview will have to come to Karwar at own expense

Pensioners in receipt of invalid pension need not apply Pe already in service should apply through the heads of their Department

F. N. RANA.

Collector of Kana

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ “ಸ್ಟಾರ ಆಫ್ ಕೆನರಾ ಪ್ರೆಸ್”ನಲ್ಲಿ ಮುದ್ರಿಸಿ ಪ್ರಕಟಿಸಿ

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ಕಳುಹುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು.
ವರ್ಗಣಿಯು ಮುಂಗಡ ಕೊಡತಕ್ಕದ್ದು

Reg. No. B. 1270. Monday, 18th March, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೩೭.

ಕುಮಟಾ:- ಸೋಮವಾರ, ತಾ. ೧೮ ಮಾಹೆ ಮಾರ್ಚ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಕ್ವಾಲಂ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಸ್ಮಾಲ ಕ್ಯಾಪ ೧೫ ಎಮ್ ಉದ್ದ
೧ ಸಾರಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ಠರಾಯಿಸಬೇಕು.

ಚುನಾವಣೆಯ ಫಲಿತಾಂಶ.

(ನಿರೀಕ್ಷಕನು ಬರೆದುದು)

ತಾ. ೧೧ನೇ ಸೋಮವಾರದ ಚುನಾವಣೆಯ ಪರಿಣಾಮ ನಾಡದು ಬುಧವಾರ ತಾ. ೨೦ಕ್ಕೆ ಕಾರವಾರದೊಳಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಕಟವಾಗುವದು. ಅದಕ್ಕೆ ಈಗ ಎರಡೇ ದಿನಗಳಿವೆ. ಆದರೂ ಆ ಪರಿಣಾಮ ಎಂಥಹದಿರಬಹುದೆಂದು ಎಲ್ಲರೂ ತಮ್ಮ ತಮ್ಮ ಪರಿಯಿಂದ ಲೆಕ್ಕ ಹಾಕುತ್ತಿದ್ದಾರೆ. ಅಂತು ಈ ಜಿಲ್ಹೆಯಲ್ಲಿ ಸುಮಾರು ೩೨೦೦೦ ಮತದಾರರು (ಅಂದರೆ ೩/೫ ರಷ್ಟು) ಮತದಾನ ಮಾಡಿದ್ದಾರೆ. ಇವರಲ್ಲಿ ೩೦೦೦೦ ಮಂದಿ ಕಾಂಗ್ರೆಸ್ಸಿಗೆ ಮತ ಕೊಟ್ಟಿದ್ದಾರೆಂದು ಕಾಂಗ್ರೆಸ ಮುಂದಾಳುಗಳ ಲೆಕ್ಕವಿದೆ ೧೮೦೦೦ದಿಂದ ೨೫೦೦೦ರ ವರೆಗೆ ತಮಗೆ ಮತಗಳು ಬಿದ್ದಿವೆಯೆಂದು ಕಾಂಗ್ರೆಸ್ಸೇತರ ಉಮೇದವಾರರು ಲೆಕ್ಕ ಹಾಕಿದ್ದಾರೆ ಈ ಉಮೇದವಾರರಿಗೆ ಇಲ್ಲಿ ಮತ ಸಂಗ್ರಹ ಮಾಡುವವರ ಮಾತು ಒತ್ತಟ್ಟಿಗೆ ಇರಲಿ, ಪ್ರತಿನಿಧಿಗಳಾಗಲು ಸಹ ಜನರು ಸಿಕ್ಕಿಲ್ಲ. ಅವರು ತಮ್ಮ ಏಜಂಟರೆಂದು ನೇಮಿಸಿದ ಬಹುತೇಕ ಮಂದಿ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದರು! ಅಂದಮೇಲೆ ಯಾರ ವರದಿಯ ಆಧಾರದಿಂದ ತಮಗೆ ೧೮-೨೦ ಸಾವಿರ ಮತಗಳು ಬಿದ್ದಿವೆಯೆಂದು ಅವರು ಹೇಳುತ್ತಾರೋ ದೇವರೇ ಬಲ್ಲ! ನನಗೆ ತಿಳಿದ ವರದಿಗಳನ್ನು ನಂಬಿದರೆ ಕಾಂಗ್ರೆಸ ವಿರೋಧಿ ಉಮೇದವಾರರಿಗೆ ೧೫೦೦ ರಿಂದ ೨೫೦೦ಕ್ಕಿಂತ ಹೆಚ್ಚಿಗೆ ಮತಗಳು ಬಿದ್ದಿರುವದಿಲ್ಲ.

ಕಾಂಗ್ರೆಸ್ಸಿಗೆ ಮತ ಕೊಟ್ಟವರಾದರೂ ಮತದಾರರೂ ಸರಿಯಾಗಿ ತಮ್ಮ ಮತ ಹಂಚಿಹಾಕಿಲ್ಲ. ಕಾರವಾರ, ಭಟಕಳ ಮುಂತಾದ ಕಡೆ ಎತ್ತಿಗೆ ಮುಯ್ಯಾರದೆ ಹೆಚ್ಚಿಗೆ ಸಿಕ್ಕಿದೆ ಕೋಟೆಗಳ ಸೀಮೆಯಲ್ಲಿ ಮರಕ್ಕೇ ಪ್ರಾಶಸ್ತ್ಯ ಸಿಕ್ಕಿದೆ ಗಾಡಿಗೂ ಕೆಲವು ಕಡೆ ಬಹುಮಾನ ದೊರಕಿದ್ದುಂಟು ಅಂತು ಬುಧವಾರದ ಮತಗಳ ಎಣಿಕೆಯಲ್ಲಿ, "ಗಾಡಿ, ಮರ, ಎತ್ತು"ಗಳು ತಮ್ಮ ಕ್ರಮವನ್ನು ಬದಲಿಸಿ "ಎತ್ತು, ಮರ, ಗಾಡಿ"ಗಳಾಗಿ ನಿಲ್ಲುವವೋ ಅಥವಾ ನೇಗಿಲು ಮಾಲೀಕರಿಗೆ ಹೋಗಿ ಅದೃಶ್ಯವಾಗುವವೋ ಅಥವಾ ನನ್ನ ಅಂದಾಜು

(೩ನೇ ಪುಟದಿಂದ ಮುಂದರಿದ್ದು)

ನಿರ್ಣಯಿಸಿ ಇಲ್ಲಿಯ ಕೋರ್ಟ ದಾವೆ ತರಿಸ್ಕರಿಸಿತ್ತಷ್ಟೇ ಅಪೀಲಿನಲ್ಲಿ ಈಗ ಮೊದಲ ತೀರ್ಪು ಕಾಯಂ ಆಗಿದೆ. ಇಂತಹ ವ್ಯವಹರಣೆಯಲ್ಲಿ ಸಾರ್ವಜನಿಕ ಹಣ ದುಂದು ಮಾಡುವ ನಗರಸಭೆಯವರ ಚಟಕ್ಕೆ ತಡೆಹಾಕುವವರಾರೂ ಇಲ್ಲವೇ?

ಮನೆಯ ಜನರು ಬೇರೂರಿಗೆ ಹೋದಾಗ ಅವರ ಸಂಬಂಧದ ಸೀಧಾ-ಸಾಮಗ್ರಿ ಪಡಕೊಂಡವರ ಪತ್ತೆ ಹಿಡಿದು ಖಟ್ಲೆ ಮಾಡಿಕೊಡುವ ಇಲ್ಲಿಯ ಕರ್ತವ್ಯದಕ್ಷ ಮತ್ತು ನ್ಯಾಯನಿಷ್ಠುರ ಸೀಧಾ ಅಧಿಕಾರಿಗಳು ಈಗ ೨ ವಾರಗಳಿಂದ ಪರವೂರಿಗೆ ಹೋಗಿರುವ ತಮ್ಮ ಹೆಂಡತಿಯ ಸಂಬಂಧದ ಅಕ್ಕಿ, ಸಕ್ಕರೆ ವಗೈರೆ ಸೀಧಾ-ಅಂಗಡಿಯಿಂದ ಒಯ್ಯುತ್ತಾರೆಂದು ಚಿತ್ರಗುಪ್ತರು ಶೋಧ ಮಾಡಿದ್ದಾರೆ. ಜಿಲ್ಲಾಧಿಕಾರು ಈ ಸೀಧಾ ಅಧಿಕಾರಿಗಳ ಮೇಲೆ ಖಟ್ಲೆ ಮಾಡಿಕೊಡುವಷ್ಟು ನ್ಯಾಯಬುದ್ಧಿ ತೋರಿಸಬೇಕಾಗಿ ಆ ಚಿತ್ರಗುಪ್ತರ ಅಪೇಕ್ಷೆ

(ತಾ. ೪-೩-೪೬) ನವಿಲಗೋಣ- ಅಲ್ಲಿಯ ಸೀಧಾ ಅಂಗಡಿಯಲ್ಲಿ ಬಹಳಷ್ಟು ಕಳ್ಳಾಟಿಕೆ ನಡೆದಿದೆಯೆಂದು ದೂರು ಬಂದಿದೆ. ನವಿಲಗೋಣ ಸರಪಂಚರ ಸಹೋದರನು ಈ ಅಂಗಡಿಯ ಚಾಲಕನಂತೆ. ಈತ ಮೊದಲೇ ವ್ಯಾಪಾರಿ. ಸೀಧಾ ಅಂಗಡಿಯನ್ನು ಅವನು ತನ್ನ ಅಂಗಡಿಗೇ ಜೋಡಿಸಿಕೊಂಡು ಪ್ರತಿ ತಿಂಗಳಿಗೆ ಕನಿಷ್ಟ ೧ ಚೀಲ ಸಕ್ಕರೆ ಮತ್ತು ೨-೩ ಡಬ್ಬಿ ಕಲ್ಲೆಣ್ಣೆಯನ್ನು ಕಳ್ಳಪೇಟೆಗೆ ಕಳಿಸುತ್ತಾನಂತೆ. ಪಾಯಲಿಗೆ ೨ ಆಣೆ ಹೆಚ್ಚಿಗೆ ಕೊಟ್ಟರೆ ಯಾರೊಬ್ಬನಿಗೆ ೧೫-೨೦ ಪಾಯಲಿ ಧಾನ್ಯ ಒಮ್ಮೆಲೇ ಸಿಗುತ್ತದಂತೆ. ಈ ವರೆಗೆ ಸಕ್ಕರೆ ಇಲ್ಲವೆ ಕಲ್ಲೆಣ್ಣೆ ಪಡಕೊಳ್ಳದ ಬಡ ಕುಟುಂಬಗಳೆಷ್ಟೋ ಇದ್ದಾರೆ ಆದರೂ ಲೆಕ್ಕದಲ್ಲಿ ಅವರ ಲೆಕ್ಕಕ್ಕೆ ಸರಾಗವಾಗಿ ಸಕ್ಕರೆ ಮತ್ತು ಎಣ್ಣೆ ಖರ್ಚು ಬಿದ್ದಿದೆ! ಅಂಗಡಿಯ ಲಾಭಾಂಶವನ್ನು ಸಾರ್ವಜನಿಕ ಉಪಯೋಗಕ್ಕೆ ಬಳಸಿಕೊಳ್ಳಬೇಕೆಂದು ಹಿಂದೆ ತೀರ್ಮಾನವಾಗಿತ್ತು. ಆದರೆ ಅಂಗಡಿಯ ಲೆಕ್ಕದಲ್ಲಿ ಲಾಭವೇ ತೋರುವದಿಲ್ಲ! ಈ ಬಗ್ಗೆ ಯಾರಾದರೂ ತಕ್ರಾರು ಮಾಡಿದರೆ ಅವರ ಸೀಧಾ ಕಾರ್ಡಲೇ "ಸಸ್ಪೆಂಡ" ಆಗುತ್ತದೆ! ಪಂಚರು ಇತ್ತ ಲಕ್ಷ್ಯ ಕೊಡುವದಿಲ್ಲ!

ಈ ಅಂಗಡಿಯಲ್ಲಿ ಸದಾಕಾಲ ಕಳ್ಳಪೋಕರು ಕೂಡಿ ಜುಗಾರಾಟ ನಡೆಸುತ್ತಾರೆ. ಕುಮುಟೆಯಿಂದ ಸಹ ದಿನಾಲೂ ರಾತ್ರಿ ಎಷ್ಟೋ ಜುಗಾರಿಗಳು ಇಲ್ಲಿಗೆ ಜುಗಾರ ಆಡಲು ಬರುತ್ತಾರೆ! ಜುಗಾರ ಮಂಡದ ಬಗ್ಗೆ ತಾನು ಪರವಾನಿಗೆ (ಯಾರದು?) ತಂದಿದ್ದೇನೆಂದು ಅಂಗಡಿಯವನು ಜಂಭ ಕೊಚ್ಚುತ್ತಿದ್ದಾನೆ! ಜಿಲ್ಲಾಧಿಕಾರು ಗುಪ್ತ ಚಾರರನ್ನು ಕಳಿಸಿಕೊಟ್ಟಲ್ಲಿ ಸತ್ಯಸ್ಥಿತಿ ಅವರಿಗೆ ತಿಳಿದು ಬಂದೀತು.

ಹಳಿಯಾಳ— (ತಾ. ೧೩-೩-೪೬) ಮುಂಬಯಿ ಎಸೆಂಬ್ಲಿಗೆ ಮುಸ್ಲಿಂ ಲೀಗಿನ ಪರವಾಗಿ ನಿಂತ ಹುರಿಯಾಳುವಿಗೆ ಬೆಂಬಲ ದೊರಕಿಸಲು ಲೀಗಿನ ಪ್ರಾಂತಿಕ ಸಮಿತಿಯ ಅಧ್ಯಕ್ಷ ಮಿ॥ ಚುಂದ್ರಿಗಾರರು ಇಲ್ಲಿಗೆ ಬಂದಿದ್ದಾರೆ. ಇಂದು ಸಂಜೆ ಮಸಜ್ಜಿದಿ ವಾಚನಾಲಯದಲ್ಲಿ ಅವರ ಭಾಷಣವಾಯಿತು. ಅವರ ಭಾಷಣ ಮುಗಿದ ಮೇಲೆ ಲೀಗಿನ ಓರ್ವ ಪ್ರಮುಖ ಕಾರ್ಯಕರ್ತರಾಗಿರುವ ಮಿ॥ ಮೊಹಿಯುದ್ದೀನ ಕಂಟ್ರಾಕ್ಟರ ಇವರು ಮಾತಾಡಿ, ತಾವು ತಮ್ಮ ಗೆಳೆಯರೂ ಮಿ॥ ಮಹಮ್ಮದ ಅಕಬರ ಇವರನ್ನು ಲೀಗಿನ ಅಧಿಕೃತ ಹುರಿಯಾಳುವಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದ್ದೇಕೆ ಎಂಬುದನ್ನು ವಿಸ್ತಾರವಾಗಿ ತಿಳಿಸಿಕೊಟ್ಟರು "ಈ ಜಿಲ್ಹೆಯಲ್ಲಿ ನವಾಯತರಷ್ಟೇ ಇರುವದಿಲ್ಲ. ನವಾಯತರಿಗಿಂತ ಹೆಚ್ಚಿಗೆ ದಖ್ಖನಿಗಳಿದ್ದಾರೆ. ಅಷ್ಟರಿಂದ ಲೀಗಿನ ಹುರಿಯಾಳು ಆರಿಸುವ ಮುಂಚೆ ತಮ್ಮ ಅಭಿಪ್ರಾಯ ಕೇಳಿಕೊಳ್ಳಬೇಕೆಂದು ನಾವು ಜಿಲ್ಹೆಯ ಎಲ್ಲ ದಖ್ಖನಿಗಳ ಪರವಾಗಿ ಪ್ರಾಂತಿಕ ಲೀಗ ಸಮಿತಿಗೆ ಅಂದರೆ ಮಿ॥ ಚುಂದ್ರಿಗಾರರಿಗೆ ಅರ್ಜಿ ಮಾಡಿದೆವು, ತಂತಿ ಕಳಿಸಿದೆವು, ಶಿಷ್ಟರನ್ನು ಕಳಿಸಿಕೊಟ್ಟೆವು ಆದರೆ ಚುಂದ್ರಿಗಾರರು ಯಾವುದಕ್ಕೂ ಲಕ್ಷ್ಯ ಕೊಡಲಿಲ್ಲ! ಚುಂದ್ರಿಗಾರರನ್ನು ಕಾಣಲು ನಾವು ೫-೬ ಸಲ ಮುಂಬಯಿಗೆ ಹೋದೆವು. ಆದರೆ ಅವರು ನಮಗೆ ಭೆಟ್ಟಿ ಸಹ ಕೊಡಲಿಲ್ಲ!! ಈ ಅಪಮಾನ ನಾವು ದಖ್ಖನಿ ಮುಸಲ್ಮಾನರು ಸಹಿಸುವದೆಂತು? ಲೀಗಿನ ನಾಯಕ ಮಂಡಳದವರ ಈ ಅತ್ಯಾಚಾರ ಪ್ರತಿಭಟಿಸುವದಕ್ಕಾಗಿಯೇ ನಾವು ಮಿ॥ ಅಕಬರರನ್ನು ಸ್ವತಂತ್ರ ಹುರಿಯಾಳುವೆಂದು ನಿಲ್ಲಿಸಿದ್ದೇವೆ. ಅವರಿಗೇ ನಾವು ಮತ ಕೊಡುವೆವು" ಎಂದು ಮಿ॥ ಮೊಹಿಯುದ್ದೀನರು ಆವೇಶದಿಂದ ನುಡಿದರು ಮಿ॥ ಚುಂದ್ರಿಗಾರರು ಅವರಿಗೆ ಪ್ರತ್ಯುತ್ತರ ಕೊಡುವ ಧೈರ್ಯವನ್ನೂ ತೋರಿಸಲಿಲ್ಲ!

ಯಲ್ಲಾಪುರ— (ತಾ. ೧೨-೩-೪೬) "ವಿಜಯ ಕೃಷ್ಣಾ ನಿಧಿ"ಗೆ ಯಲ್ಲಾಪುರ ಮಾಮಲೇದಾರರು ಸ್ಥಾನಿಕ ಕಿರಾಣಾ ಅಂಗಡಿಯವರಿಂದ ಒತ್ತಾಯದಿಂದ ಹಣ ವಸೂಲ ಮಾಡಿದರೆಂಬುದಾಗಿ ತಾ ೧೬-೧೨-೧೯೪೫ರ 'ವೃತ್ತ'ದಲ್ಲಿ ಪ್ರಕಟವಾದ ಸುದ್ದಿ ಸುಳ್ಳು ಇರುತ್ತದೆಂದು ಜಿಲ್ಲಾಧಿಕಾರು ಬರೆಯುತ್ತಾರೆ "ಯಲ್ಲಾಪುರ ತಾಲೂಕಿನಲ್ಲಿ ಹಣ ಕೂಡಿಸುವ ಬಗ್ಗೆ ಸರಕಾರಿ- ನೌಕರೇತರ ಒಂದು ಕಮೀಟಿ ಸ್ಥಾಪಿತವಾಗಿದ್ದು, ಆ ಕಮೀಟಿಯ ಒಬ್ಬ ಮೆಂಬರರು ಊರೊಳಗಿನ ವ್ಯಾಪಾರಸ್ಥರ ಹಾಗು ದುಕಾನದಾರರ ಒಂದು ಸಭೆ ಕರೆದಿದ್ದರು ಮಾಮಲೇದಾರರೂ ಆ ಸಭೆಗೆ ಹಾಜರಿದ್ದರು. ಆದರೆ ಹಣ ಕೊಡಿಸುವದರಲ್ಲಿ ಅವರು ಯಾವದೇ ಭಾಗ ವಹಿಸಲಿಲ್ಲ. ಈ ಫಂಡಿಗೆ ಬಹಳಷ್ಟು ಹಣ ಕೊಡದೆ ಇದ್ದಲ್ಲಿ ಸಕ್ಕರೆಯ ಕೋಟಾ ಕಡಿಮೆ ಮಾಡುವೆವಾಗಿ ಅವರು ಕಿರಾಣಾ-ದುಕಾನದಾರರಿಗೆ ಧಮಕಿ ಕೊಟ್ಟದ್ದೂ ಇರುವದಿಲ್ಲ. ಹಾಗೂ ತಮ್ಮ ಮಾಗಣೆಯಂತೆ ಹಣ ಕೊಟ್ಟವರಿಗೆ ಸಕ್ಕರೆ ಕೋಟಾ ಹೆಚ್ಚಿಸುವೆವಾಗಿ ಆಶೆ ಹಚ್ಚಿ ಕೊಟ್ಟದ್ದೂ ಇರುವದಿಲ್ಲ .... ತಮ್ಮ ಸ್ವ-ಇಚ್ಛೆಯಿಂದ ತಾವು ಹಣ ಕೊಟ್ಟಿದ್ದೇವಾಗಿಯೂ ಮಾಮಲೇದಾರರ ಕಡೆಯಿಂದ ಯಾವದೇ ತರದ ಧಮಕಿ ಯಾ ಆಶ್ವಾಸನೆ ಇದ್ದಿಲ್ಲವಾಗಿಯೂ ಸ್ವತಃ ಕಿರಾಣಾ-ದುಕಾನದಾರರೇ ಬರೆದ ಮುಚಲಿಕೆ ಕಳಿಸಿದ್ದಾರೆ"ಂದು ಜಿಲ್ಹಾಧಿಕಾರು ಬರೆಯುತ್ತಾರೆ.

ಇದೇ ಪ್ರಕಾರ ಸಿದ್ದಾಪುರದಲ್ಲಿ ಹಣ ಕೂಡಿಸುವಲ್ಲಿ ಯಾವದೇ ಬಗೆಯ ಸಕ್ತಿಯಾಗಿದ್ದಿಲ್ಲೆಂತಲೂ ಎಲ್ಲ ಹಣಗಳ ಬಗ್ಗೆ ತಪ್ಪದೇ ಪಾವತಿಗಳನ್ನು ಕೊಟ್ಟಿರುತ್ತಾರೆಂತಲೂ, ಸಿದ್ದಾಪುರದಲ್ಲಿ ಹಿಂದೆ ಅಮಲಿನಲ್ಲಿದ್ದ ಕುಟುಂಬ ಅಳತೆಯ ಬದಲು ಈಗ ತಲೆ ಕೂಡಿದ ಅಳತೆ ಜಾರಿಯಲ್ಲಿರುವದರಿಂದ ಸೀಧಾ-ಚೀಟಿಗಳಲ್ಲಿ ಅವಶ್ಯವುಳ್ಳ ದುರುಸ್ತಿ ಮಾಡುವ ಬಗ್ಗೆ ಹಳೆಯ ಸೀಧಾ-ಚೀಟಿಗಳನ್ನು ಹಿಂತೆಗೆದುಕೊಂಡಿತ್ತೆಂತಲೂ, ಹೊಸ ಚೀಟಿಗಳನ್ನು ಕೊಡಬೇಕಾದರೆ ಕೃಷ್ಣಾ ನಿಧಿಗೆ ವಂತಿಗೆ ಕೊಡಬೇಕೆಂದು ಯಾರಿಗೂ ಒತ್ತಾಯ ಮಾಡಿದ್ದಿಲ್ಲವೆಂತಲೂ ಜಿಲ್ಹಾಧಿಕಾರು ತಿಳಿಸುತ್ತಾರೆ. [ಜಿಲ್ಹಾಧಿಕಾರು ಯಾವ ಬಗೆಯ ಚೌಕಶಿ ಮಾಡಿದರೆಂದು ಗೊತ್ತಾಗುವದಿಲ್ಲ. ಸ್ಥಾನಿಕ ಅಧಿಕಾರಿಗಳ ಸಂಪರ್ಕವಿಲ್ಲದ ಸ್ವತಂತ್ರ ತನಿಖೆಗಾರರನ್ನು ಕಳಿಸಿ ಚೌಕಶಿ ಮಾಡಿಸಿದರೋ ಅಥವಾ ಸ್ಥಾನಿಕ ಮಾಮಲೇದಾರರ ಮುಖಾಂತರವೇ ಚೌಕಶಿ ಮಾಡಿದರೋ ತಿಳಿಯಲಿಕ್ಕಿಲ್ಲದು. ಚೌಕಶಿಯ ಕಾಲಕ್ಕೆ ದೂರುಗಾರರಿಗೂ ಹಾಜರಾಗಲು ಹೇಳಿ ಅವರ ಪುರಾವೆಯನ್ನು ತೆಗೆದುಕೊಂಡಿದ್ದರೆ ಆ ಚೌಕಶಿ ಪೂರ್ಣ ಮತ್ತು ಯೋಗ್ಯವಾಗುತ್ತಿತ್ತು. ಮಾಮಲೇದಾರರ ಧಮಕಿಗೆ ಬೆದರಿ ಹಣ ಕೊಟ್ಟ ಪ್ರತಿಯೊಬ್ಬರೂ ಅಂಜುಬುರುಕರೂ ಮುಂದೆ ಅದೇ ಮಾಮಲೇದಾರರು ಬಂದು ಹೀಗೆ ಹೀಗೆ ಬರಕೊಡಬೇಕೆಂದು ಹೇಳಿದರೆ ಬರಕೊಡದೆ ಇರಲಾರರೆಂದು ನಮಗೆ ಗೊತ್ತೇ ಉಂಟು. ಹಾಗೆ ಅವರು ಬರಕೊಟ್ಟ ಸಂಗತಿ ಸಹ ಇದರ ತಿಂಗಳಲ್ಲೇ ನಮಗೆ ಬರೆದು ಬಂದಿತ್ತು, ಕಮೀಟಿಯ ಮೆಂಬರರು ಹಣ ವಸೂಲ ಮಾಡಿದ್ದರೆ ಅದು ಸರಕಾರದಲ್ಲಿ ಇಗಿಂದೀಗ ಜಮಾ ಆಗುತ್ತಿದ್ದಿಲ್ಲ. ಒಂದೆರಡು ದಿನ ತಡವಾಗುತ್ತಿತ್ತು. ಅದಲ್ಲ, ಚಿಟ್ಟಿನ ಪುರಾವೆ ಬೇಕಾದರೆ ಜಿಲ್ಹಾಧಿಕಾರು ಯಲ್ಲಾಪುರದೊಳಗಿನ ಆಯಾ ಕಿರಾಣಾ ಅಂಗಡಿಕಾರರು ನಿಧಿಗೆ ಕೊಟ್ಟ ವಂತಿಗೆಯ ಅಂಕಿಗಳನ್ನೂ ಅವರಿಗೆ ಡಿಸೆಂಬರ ತಿಂಗಳಲ್ಲಿ ಹೆಚ್ಚು ಪಡಿ ಮಾಡಿ ನೇಮಿಸಿಕೊಟ್ಟ ಸಕ್ಕರೆಯ ಕೋಟಾಗಳನ್ನೂ ಹೋಲಿಸಿ ನೋಡಲಿ. ಅಂದರೆ ಅವರಿಗೆ "ವೃತ್ತ"ದೊಳಗಿನ ವರದಿ ಸುಳ್ಳು ಇರುವದಿಲ್ಲೆಂದು ತಂತಾನೇ ತಿಳಿಯುವದು. ಒಂದು ವಿಷಯದ ಬಗ್ಗೆ ಮಾತ್ರ ನಮಗೆ ಆಧಾರವಾದ ಸಿಕ್ಕುತ್ತದೆ "ವೃತ್ತ"ದ ಟೀಕೆಗೆ ತಾವು ಏನೂ ಬೆಲೆ ಕೊಡುವದಿಲ್ಲೆಂದು ತಿಳಿಸಿ ಜಂಭಕೊಚ್ಚುವ ಮಿ॥ ಕಿಲ್ಲೇದಾರರಿಗೆ ಆ ಟೀಕೆಗೆ ಪ್ರತ್ಯುತ್ತರ ಕೊಡುವ ಅವಶ್ಯಕತೆ ತೋರಿದ್ದೇ ಒಂದು ಸಮಾಧಾನದ ಸಂಗತಿ. — ಸಂಪಾದಕ]

The Agricultural & Industrial Bank, Ltd.

(Incorporated in British India, Liability of Members limited)

Head Office: COONDAPOOR. S. I

The Head Office and Branches of the Bank now accept Season Deposits from three to six months at the following rates:-

Three Months at 2½% per annum

Six Months at 2½% per annum.

No such deposit will be allowed to run beyond 30th September 1946

Coondapoor
8-2-1946

K. VAMAN SHENAI,
CHAIRMAN.

ಸ್ಥಳಿಕ ವಿಷಯಗಳು.

ಲೇಖಕ- ಸ್ಥಳವಂತಿಕ.

ಹತ್ತಿಕಾಳಿನ ಸಂಬಂಧದಲ್ಲಿ ಮುಂಬಯಿ ಸರಕಾರದ ಹಾಲಿನ ಕಮಿಶನರ ರಾ॥ ಭಟ್ಟರವರು ಮುಂಬಯಿಯ ಪ್ರಾಂತಿಕ ಜನತಾ ಆಹಾರ ಸಮಿತಿಗೆ ಬರೆದ ಪತ್ರ ಹೀಗಿದೆ

“ಕಳೆದ ವರ್ಷ ಧಾರವಾಡ ಜಿಲ್ಲೆಗೆ ಧಾರವಾಡ ಜಿಲ್ಲೆಯಿಂದ ಕಳಿಸಬೇಕೆಂದು ನೇಮಿಸಿದ ಹತ್ತಿಕಾಳಿಗಿಂತ ೩೦೦ ಟನ್ ಹತ್ತಿಕಾಳು ಹೆಚ್ಚಿಗೆ ಸಿಕ್ಕಿದೆ ದನ ಸಾಕುವವರಿಗಾಗಿ ಬೆಳಗಾಂವ ಜಿಲ್ಲೆಯಿಂದ ಧಾರವಾಡ ಜಿಲ್ಲೆಗೆ ೪೫೦೦ ಟನ್ನು ಹತ್ತಿಕಾಳು ಕಳಿಸುವ ವ್ಯವಸ್ಥೆ ಮಾಡಲಾಗಿದೆ ಸರಕಾರವು ಎಲ್ಲ ಜಿಲ್ಲೆಗಳಿಗೆ ಬೇಕಾದಷ್ಟು ಹತ್ತಿಕಾಳಿನ ಪರಿಮಾಣವನ್ನು ನಿಶ್ಚಯಿಸಿಕೊಂಡಿದೆ ಮುಂಬಯಿ ಪ್ರಾಂತದೊಳಗೆ ಹುಟ್ಟುವ ಹತ್ತಿಕಾಳು ಪ್ರಾಂತದೊಳಗಿನ ಗಿರಾಕಿಗಳಿಗೆ ಕಡಿಮೆ ಬೀಳುತ್ತದೆ ಆದರಿಂದ ಹಿಂಡುವ ಎಮ್ಮೆಗಳಿಗೆ [illegible] ಹಿಂಡುವ ಆಕಳು ಎಮ್ಮೆಗಳಿಗೆ [illegible] ಸೀಘ ಕೊಡಬೇಕೆಂದು ಕಳೆದ ಆಗೋಸ್ಟದಲ್ಲಿ ನಿರ್ಣಯವಾಗಿದೆ ಹೀಗೆ ನಿರ್ಣಯಿಸಿದ ಸೀಘಾಕ್ಕಿಂತ ಹೆಚ್ಚಿಗೆ ಕೊಡಬೇಕಾಗಿ ಜಿಲ್ಲಾಧಿಕಾರಿ ವಿಧಿಸಿದಾರಿಯು ಈ ವರ್ಷ [illegible] ಜಿಲ್ಲೆಗೆ [illegible] ಟನ್ ನಷ್ಟು ಹಿಂಡಿ ಪೂರೈಸು [illegible] ಗೋಕಾಕ [illegible] ಇದನ್ನು ಹಂಚುವ ಕೆಲಸ ಬೇಕು [illegible] ಗಿದೆ [illegible] ಪತ್ರಿಕೆಗಳ [illegible] ಬಹಳ [illegible] ದನಗಳಿಗೆ ಉಪಯೋಗಿಸತಕ್ಕದ್ದು [illegible] ಪೂರೈಸಲಿಕ್ಕೆ ಸಮ್ಮತಿಸ್ಥ ವಿಲ್ಲ.”

ಈ [illegible] ವರು ಬರೆದದ್ದು [illegible] ಇದೇ [illegible] ಆಕಸ್ಮ ತಿಂಗಳಿಂದ ಸೀಘ [illegible] ವರಿಗೆಲ್ಲ ಈ ಸೀಘ ಸಿಗಲಿಲ್ಲ [illegible] ದಲ್ಲಿ ಆಗಿಲ್ಲ [illegible] ಜಿಲ್ಲೆಯಿಂದ ಈವರೆಗೂ ಇಲ್ಲ [illegible] ಹತ್ತಿಕಾಳು ತಮಗೆ ಗೊತ್ತಿಗೆ [illegible] ಯಾರಿಂದಲೂ ಗೊತ್ತಿಲ್ಲ ಅದರಿಂದ ತರಿಸಲು [illegible] ಬೇರೆಯವರಿಗೆ ತರಿಸಲು ಅಪ್ಪಣೆ ಕೊಡಬೇಕು [illegible] ಸರಕಾರ ನೋಟು ರೂಗಳಿಂದ ಹತ್ತಿಕಾಳು ತರಿಸಿ ಸೀಘ [illegible] ಮುಖಾಂತರ ಮಾರಾಟ ಮಾಡಿಸುವ ವ್ಯವಸ್ಥೆಯಾಗ [illegible] ವ್ಯಾಪಾರಿಗಳ ಕಡೆಯಿಂದ ತರಿಸುವದಕ್ಕೆ [illegible] ಬೇರೆ [illegible] ದನಗಳಿಗೆ ಹಾಕುವ [illegible] ಕಡಿಮೆ ಖರ್ಚಿನಿಂದ ತರಿಸಿಕೊಡುವವರಿಗೆ ಅಪ್ಪಣೆ [illegible] ಬಹುದು ಪೂರೈಕೆ ಅಧಿಕಾರಿಗಳ ಮರ್ಜಿ [illegible] ವರಿಗೇ ಸಂಘ ತರಿಸಹೇಳುವದರಿಂದ ಜನರಿಗೆ [illegible] ಯಾಗುತ್ತದೆಂಬುದನ್ನು ಮರೆಯಬಾರದು

⁂

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಹಳ ಗೊಂದಲವುಂಟು ಕಡ ಧಾನ್ಯ ತರಿಸಲಿಕ್ಕೆ ವರ್ತಕರು ಮಾಡಿದ ಅರ್ಜಿಗಳ ಕಡೆಗೆ ಕಚೇರಿಯವರ ಲಕ್ಷ್ಯವಿಲ್ಲ [illegible] ಪರವಾನೆ ಸಿಗುತ್ತಿದೆ! ಧಾರವಾಡಕ್ಕೆ [illegible] ಮಾಡಿದರೆ [illegible] ಸಿಗುತ್ತದಾಗಿ [illegible] ಆ [illegible] ಗ್ರಾಹಕ ಸಾಮಾನ್ಯರಿಗೆ ಅಗಲಿಲ್ಲವು! ತಿಳಿದೂ ತಿಳಿಯುವದಿಲ್ಲವೆಂದು [illegible] ಯೊನ್ನವರ ತಾಲೂಕಿನ ಇಬ್ಬರು [illegible] ಹಚ್ಚಿಸರು, ಉದ್ದು ತೊಗರಿ [illegible] ಕಡ ಧಾನ್ಯಗಳನ್ನು [illegible] ಯಿಂದ ತರಿಸಿದರು [illegible] ರೋಕ [illegible] ಲಾಭಾಂಶ [illegible] ವಾದ ಮೇಲಾಗಿ [illegible] ಜಿಲ್ಲಾಧಿಕಾರ ಕಚೇರಿಯವರು ಇದರ ವರ್ತಕರ [illegible] ಧಾರ ಹೆಚ್ಚಾಯಿತೆಂದು ಹಿಡಿದು [illegible] ವರೆಗೆ ಧಾನ್ಯದ ಮಾರಾಟ ಮಾಡಬಾರದೆಂದು ನಿರ್ಬಂಧಿಸಿದರು [illegible] ವರ್ತಕರು ಹೊಸ್ತವರದಿಂದ ಧಾರವಾಡಕ್ಕೆ [illegible] ನಿರ್ಬಂಧದ [illegible] ಎಲ್ಲ ಧಾನ್ಯ [illegible] ಮಾಡಿದಾಗಿಯೂ ಧಾನ್ಯಗಳು ಪರಸ್ಥಳಗಳಿಗೆ ರಫ್ತಾದವಾಗಿಯೂ ಸುದ್ದಿ ದರ ನಿಶ್ಚಯಿಸುವ [illegible] ನಡೆಸಿ [illegible] ನಡುವೆಯೇ [illegible] ರಫ್ತಾಯಿತೆಂಬುದೆಂದು ಪ್ರಶ್ನೆ [illegible] ಪ್ರಮಾಣ ಕೈಕೊಂಡದ್ದರ [illegible] ತಿಳಿಯದು! ಒಪ್ಪಿಷ್ಟ ವರ್ತಕರಿಗಷ್ಟೇ ಸರಕು ತರಿಸಲು ಅಪ್ಪಣೆ ಸಿಗುವ ಗುಟ್ಟು ಬಟ್ಟುಗುವದವಕ್ಕವಿದೆ [illegible] ಮಾರ್ಕೆಟ್ಟಿನ ಮುಂಬಯಿಯಲ್ಲಿ [illegible] ದರ ರೂ [illegible], ಹುರುಳಿಯ ದರ ರೂ ೩, ಹತ್ತಿಸರು, ಉದ್ದುಗಳ ದರ ರೂ ೪ ಉಂಟು ಈ ಧಾನ್ಯಗಳು ಮಣಕ್ಕೆ ರೂ ೯ [illegible] ಮತ್ತು [illegible] ರಂತೆ ಹೊನ್ನಾವರದಲ್ಲಿ ಮಾರಾಟವಾಗಿವೆ ಜಿಲ್ಲಾಧಿಕಾರ ಕಚೇರಿಯವರು ಮೊದಲು ಒಕ್ಕ್ಯ ಮಾಡಲು ಅಸ್ಪದ ಕೊಟ್ಟು, ಕಡ ಧಾನ್ಯಗಳ ಬರಗಾಲ ನಿರ್ಮಿಸಿ ದರ ನಿಶ್ಚಯಿಸಿ ಕೊಡದೆ ಒಪ್ಪಿಷ್ಟ ವರ್ತಕರಿಗೆ ಉಪಕಾರ ಮಾಡುವ ರಹಸ್ಯದ ಚೌಕಶಿಯಾದರೆ ಒಳ್ಳೆಯದೀತು ಜಿಲ್ಲಾಧಿಕಾರಿ ಕಚೇರಿಯೊಳಗೆ ಭ್ರಷ್ಟಾಚಾರಕ್ಕೆ ಅವಕಾಶ ದೊರೆತರೆ ತಾಲೂಕ ಕಚೇರಿಗಳಲ್ಲಿ ‘ಹಗಲಪಾಡಿ’ ಕಾರಭಾರ ನಡೆಯುವದು ಸ್ವಾಭಾವಿಕ

⁂

ಜವಳಿ ನಿಯಂತ್ರಣದಲ್ಲಿ ಜಿಲ್ಲಾಧಿಕಾರ ಕಚೇರಿಯಲ್ಲಿ ಗೊಂದಲವುಂಟೆಂದು ಕಾರವಾರದಲ್ಲಿ ಸುದ್ದಿ ನಿಯಂತ್ರಣ ಅಧಿಕಾರಿಗಳೊಡನೆ ಜವಳಿ ವ್ಯಾಪಾರಿಗಳು ಜೀವದ ಗೆಳೆತನ ಬೆಳಸಿದ್ದಾರೆಂದೂ, ಗೋವಾಂಕಟ್ಯ, ದಕ್ಷಿಣ ಕನ್ನಡ ಜಿಲ್ಲೆಗಳೂ ಸಮುದ್ರದಾಟಿ ಇರುವ ಇಂಥ ಇಂತಿಗಳಿಗೂ ಸಹ ಈ ಜಿಲ್ಲೆಯಿಂದು ಬಂದ ಹೇರಳ ನಯ ಜವಳಿ ಕಳ್ಳತನದಿಂದ ರಫ್ತಾಗುತ್ತದೆಂದೂ ಹೇಳುತ್ತಾರೆ ಜಿಲ್ಲಾಧಿಕಾರ ಕಚೇರಿಯವರಿಗೆ ಈ ಸಂಗತಿ ಗೊತ್ತಿಲ್ಲೆಂದು ನಂಬುವದು ಕಷ್ಟ ಜನರು “ಬ” ಪರವಾನೆದಾರರು “ಸಿ” ಪರವಾನೆದಾರರಿಗೆ ಜವಳಿ ಹಂಚಿ ಕೊಡುವಾಗ ಬಹಳೇ ಪೀಡಿಸುತ್ತಾರಂತೆ ಜವಳಿ ಗಂಟುಗಳು ತದಡಿಯಲ್ಲಿ ಮತ್ತು ಪರವಾನೆದಾರರ [illegible] ಕುಮಟೆಯಲ್ಲಿ ಇರುವದರಿಂದ “ಸಿ” ಪರವಾನೆದಾರರು ಕುಮಟೆಯಿಂದ ತದಡಿಗೆ, ತದಡಿಯಿಂದ ಕುಮಟೆಗೆ [illegible] ತಿರುಗುತ್ತಾರೆ ಇವರಿಗೆ ಸಿಗುವ ಜವಳಿ [illegible] ಅದು ಬಹುತರವಾಗಿ ಕಳ್ಳಪೇಟೆಗೆ ಹೋಗುತ್ತದಂತೆ ಸದ್ಯಕ್ಕೇ ಕಾರವಾರದಲ್ಲಿ ತಪಾಸು [illegible] ನಿಯಂತ್ರಣ ಪೋಲೀಸರೂ ಒಳ್ಳೇ [illegible] ದಿಂದ ಇಂಥ [illegible] ಕಡೆ [illegible] ತಿದ್ದ [illegible] ಜವಳಿ ಗಂಟುಗಳನ್ನು ಹಿಡಿದು ಪಂಚನಾಮೆ ಮಾಡಿದ್ದಾರೆ ಇದೆಲ್ಲ ನಡೆದಾಗ [illegible] ಜವಳಿಯಂತೆ! [illegible] ರೂಪಾಯಿ ಬೆಲೆಯ ಜವಳಿಯಂತೆ ಇದಕ್ಕೆ ಸಕ್ಕೆ ಇದ್ದಿಲ್ಲವಂತೆ ಸಕ್ಕೆ ಇಲ್ಲವೆ ಮುನ್ನಾ ದಿನ ಜವಳಿ [illegible] ಸಿಕ್ಕಿದ್ದರಿಂದ ಆ [illegible] ನಿಯಂತ್ರಣ ಪೋಲೀಸರೂ ಗುಪ್ತ ಪತ್ತೆ ಹಚ್ಚಿ ಆ ಜವಳಿ ಹಿಡಿದರೆಂದು ತಿಳಿಯುತ್ತದೆ ಜವಳಿ ಕಳಿಸಿದವರ ಮೂಲ ಪರವಾನೆದಾರರಲ್ಲ ಈ ಜವಳಿ ಕಾರವಾರಕ್ಕೆಂದು ತಂದದ್ದಲ್ಲವಾಗಿಯೂ ಘಟ್ಟಗಳಕ್ಕೆ ರಫ್ತು ಮಾಡಲು ತಂದಿತ್ತಾಗಿಯೂ ಮಳೆಗಾಲದಲ್ಲಿ ತರಿಸಿದ ಬಟ್ಟೆ ಜವಳಿಯುತ್ತದಾಗಿಯೂ “ಬಿ” ಪರವಾನೆದಾರರ ಅಭಿಯೋಗವಿದೆ ಆದರೆ ಬರಿ ಜವಳಿ ಹೇಗೆ ನಯ ಜವಳಿಯಾಯಿತು ಮತ್ತು ಮಳೆಗಾಲದಲ್ಲಿ ಎಂದ ಜವಳಿಯು [illegible] ಜನರಿಯ ವಸ್ತ್ರ ಹೇಗೆ ಬಿತ್ತು ಎಂಬುದೊಂದು ಬಿಡಿಸಲಾಗದ ಒಗಟು ತದಡಿಯಿಂದ ಈ ಜವಳಿ ಘಟ್ಟಕ್ಕೆ ಹೋಗುವ ದಾರಿಯಲ್ಲಿ ಹೇಗೆ ಹೋಯಿತು, ಸಕ್ಕೆಯಿಲ್ಲದ ಅದನ್ನು ಇಟ್ಟವರು ಕಚೇರಿಯವರು ಹೇಗೆ ಬಿಟ್ಟುಕೊಟ್ಟರು ಎಂಬುದರ ಚೌಕಶಿಯಾದರೆ ಅನೇಕ ಕಳ್ಳರು ಸಿಗುವಂತಿದ್ದಾರೆ ಅಲ್ಲಿಯವರೆಗೆ ‘ಬಿ’ ಪರವಾನೆದಾರರ ಪರವಾನೆ ರದ್ದು ಪಡಿಸಿ ಅವರ ಕಡೆ ಇಲ್ಲ ಇರುವ ಜವಳಿಯನ್ನು ಜಿಲ್ಲಾಧಿಕಾರ ವಶಪಡಿಸಿಕೊಂಡು “ಸಿ” ಪರವಾನೆದಾರರಿಗೆ ಹಂಚಿಕೊಡುವದೊಳಿತು

ಮುಸಲ್ಮಾನರ ಚುನಾವಣೆ.

(ಬರೆದು ಬಂದದ್ದು)

ಮುಸಲ್ಮಾನರ ಇಲೆಕ್ಷನಿನ ಪರಿಸ್ಥಿತಿ ವಿಲಕ್ಷಣವಾದದ್ದು. ನಮ್ಮ ಜಿಲ್ಲೆಯ [illegible] ಸಲ್ಮಾನರಲ್ಲಿ (೧) ದಖ್ಖನಿ (ದಕ್ಷಿಣ) ಮುಸಲ್ಮಾನರು (೨) ನವಾಯತರು ಹೀಗೆ [illegible] ವಗಳದ ನವಾಯತರು ಭಟಕಳ, ಮುರ್ಡೇಶ್ವರ ಮೊದಲಾದ ಕಡೆ ಭಟಕಳ ಪೇಟೆಯ ಸಿಮೆಯಲ್ಲಿದೆ ದಖ್ಖನಿ ಮುಸಲ್ಮಾನರು ಜಿಲ್ಲೆಯ ಉಳಿದ ಭಾಗಗಳಲ್ಲಿ ಹರಡಿದ್ದಾರೆ ದಖ್ಖನಿಯರು ನವಾಯತರಿಗಿಂತ ಬಡವರು ನವಾಯತರಲ್ಲಿ ಸಹ (೧) ತಾಂಡೆಯ ಪಂಗಡ (೨) ನವಜವಾನ ಪಂಗಡ ಹೀಗೆ ಪಂಗಡಗಳಿವೆ ನವಜವಾನರು ಬಡ ಪಕ್ಷದವರು ಹೊಸ ಹರುಷಿನವರು ತಾಂಡೆಯ ಪಂಗಡದವರು ದಾಢ್ರ್ಯರು ಶ್ರೀಮಂತರ ದೇವಸ್ಥರು ಅಲ್ಲಲ್ಲಿ ಹರಡಿ ಬಿದ್ದಿರುವ ನವಾಯತರು ಒಂದೇ ಕಡೆ ಗುಂಪಾಗಿದ್ದಾರೆ ಆದರಿಂದ ಮುಸಲ್ಮಾನರ ಇಲೆಕ್ಷನುಗಳಲ್ಲಿ ನವಾಯತರಿಗೆ ಯಾವಾಗಲೂ ಮೇಲಾಟಕ್ಕೆ ಅನುಕೂಲವುಂಟು ಮುಸಲ್ಮಾನರಿಗೆ ಕಾದಿಟ್ಟ ಸ್ಥಳ ನವಾಯತರಿಗೇ ಸಿಗುತ್ತದೆ ಹಿಂದೆ ಜಿಲ್ಲಾ ಲೋಕಲ್ ಬೋರ್ಡಿಗೆ ಒಬ್ಬ ಸಭಾಸದರನ್ನು ಆರಿಸಿ ಕಳಿಸುವಾಗ ನವಾಯತರೇ ಈ ಸ್ಥಳವನ್ನು ತಮ್ಮ ಜಹಗೀರಿಯೊಂದಂತೆ ಅನುಭವಿಸಿ ಬಂದಿದ್ದರು ಒಂದು ಸಲ ಸಹ ದಖ್ಖನಿಯರಿಗೆ ಅವರು ಆ ಸ್ಥಳ ಬಿಟ್ಟುಕೊಡಲಿಲ್ಲ! ಹೊಸ ಕಟ್ಟಳೆಯಾಗಿ ಮುಸಲ್ಮಾನರಿಗೆ ೨ ಸ್ಥಳ ದೊರೆತ ಬಳಿಕವೇ ೧ ಸ್ಥಳ ದಖ್ಖನಿಯರಿಗೆ ಸಿಗಹತ್ತಿದೆ ಇದೇ ರೀತಿ ಮುಂಬಯಿ ಎಸೆಂಬ್ಲಿಗೂ ನವಾಯತರೇ ಆರಿಸಿ ಬಂದಿದ್ದಾರೆ ಜನಬಲ, ದ್ರವ್ಯಬಲ ಇವೆರಡೂ ನವಾಯತ ಸಮಾಜದಲ್ಲಿ ಕೂಡಿಕೊಂಡಿದ್ದರಿಂದ ದಖ್ಖನಿಯರಿಗೆ ತಲೆಯೆತ್ತಲು ಅವಕಾಶವಿಲ್ಲ ನವಾಯತರಲ್ಲಿ ೨ ಪಂಗಡಗಳಾದ್ದರಿಂದ ಬಡ ನವಾಯತರ ಹಿತಸಂಬಂಧಗಳೂ ಬಡ ದಖ್ಖನಿಗಳ ಹಿತಸಂಬಂಧಗಳೂ ಒಂದಾಗಿವೆ ನವಾಯತರಲ್ಲಿ ಇಬ್ಬರು ಉಮೇದವಾರರಾಗಿ ನಿಂತದ್ದರಿಂದ ದಖ್ಖನಿಗಳು ಒಕ್ಕಟ್ಟಿನಿಂದ ದಖ್ಖನಿ ಉಮೇದವಾರರನ್ನು ಪುರಸ್ಕರಿಸಿದಲ್ಲಿ ಇಳೆಕ್ಷನಿನೊಳಗೆ ಅವರೇ ಗೆಲ್ಲುವ ಸಂಭವವಿತ್ತು ನವಾಯತರು ಈ ಪರಿಸ್ಥಿತಿಯನ್ನು ಕಂಡು, ತಮ್ಮಲ್ಲಿ ರಾಜಿ ಮಾಡಿಕೊಂಡು ರಾ॥ ಕಾಶಿಮಜಿಯವರ ಉಮೇದವಾರಿಯನ್ನು ಹಿಂತೆಗೆದುಕೊಳ್ಳಿಸಿದ್ದಾರೆ ಆದರಿಂದ ಈ ಚುನಾವಣೆಗೆ ಮುಸಲ್ಮಾನರ ಇಲೆಕ್ಷನಿನಲ್ಲಿ ಇಬ್ಬರೊಳಗೇ ಮೇಲಾಟ ನಡೆಯುವದು (೧) ಮಹಮ್ಮದ ಅಕಬರ ಅಬ್ದುಲ್ ರಹೀಮ ಕಂಟ್ರ್ಯಾಕ್ಟರ ಹಳಿಯಾಳ (೨) ಶಮ್ಸುದ್ದೀನ ಹುಸೇನ ಜುಕಾಕು ಭಟಕಳ ಇವರಲ್ಲಿ ಒಬ್ಬರಿಗೆ ಮುಸಲ್ಮಾನರು ಆರಿಸಬೇಕಾಗಿದೆ ಬರೀ ವ್ಯಕ್ತಿಗಳ ಕಾದಾಟವಿದು ವಿಶಾಲ ರಾಜಕಾರಣದ ಸಂಬಂಧ ಇದಕ್ಕಿಲ್ಲ ಆದರೂ ದಖ್ಖನಿ ಸಮಾಜದ ಉಮೇದವಾರರಾದ ರಾ॥ ಮಹಮ್ಮದ ಅಕಬರ ಇವರು ಆರಿಸಿ ಬಂದರೆ ಬಡವರಿಗೆ ಒಂದು ಬಗೆಯ ಆಶ್ರಯ ಸಿಗಬಹುದು ದಖ್ಖನಿ ಸಮಾಜವು ಸಾಮಾನ್ಯವಾಗಿ ಬಡತನದ್ದಿರುವದರಿಂದ ರಾ॥ ಮಹಮ್ಮದರವರು ಬಡವರಿಗಾಗಿ ದುಡಿಯುವರೆಂದು ಹೇಳಬಹುದು. ತಾಂಡೆಯ ಪಕ್ಷದ ರಾ॥ ಜುಕಾಕುರವರು ಆರಿಸಿ ಬಂದರೆ ಬಡವರಿಗೆ ಅಷ್ಟು ಪ್ರಯೋಜನವಾಗದು ಮುಸ್ಲಿಮ ಲೀಗಿನ ಮಟ್ಟಿಗೆ ಉಭಯತರೂ ಸಮಾನರು ಇಬ್ಬರೂ ಲೀಗಿನ ಅಭಿಮಾನಿಗಳು ಲೀಗಿನ ಪರವಾಗಿ ರಾ॥ ಜುಕಾಕುರವರು ನಿಂತಿದ್ದಾರೆ ಆದರೆ ಅವರ ಆಯ್ಕೆಯ ಬಗ್ಗೆ ಮುಸಲ್ಮಾನ ಸಮಾಜದಲ್ಲಿ ಬಹಳ ಅಸಮಾಧಾನವುಂಟು ರಾ॥ ಜುಕಾಕುರವರಿಗೆ ಮುಂಬಯಿ ಲೀಗಿನ ತಿಕೀಟು ಸಿಕ್ಕಿದ್ದಿಲ್ಲ ನವಜವಾನ ಪಕ್ಷದ ರಾ॥ ಹಾಫಿಸ್ಕಾರವರಿಗೆ ಸಿಕ್ಕಿತ್ತು ಆದರೆ ಜುಕಾಕುರವರು ಲೀಗಿನ ಕೇಂದ್ರ ಪಾರ್ಲಮೆಂಟರಿ ಬೋರ್ಡಿಗೆ ಅಪೀಲ ಮಾಡಿ ಲೀಗಿನ ಉಮೇದವಾರರೆಂದು ತಮಗೆ ನೇಮಿಸಿಕೊಂಡಿದ್ದಾರೆ ರಾ॥ ಹಾಫಿಸ್ಕಾರ ಯೋಗ್ಯತೆ ರಾ॥ ಜುಕಾಕುರವರಿಗಿಂತ ಯಾವ ದೃಷ್ಟಿಯಿಂದಲೂ ಕಡಿಮೆಯಿದ್ದಿಲ್ಲ ಹಾಗೆ ವಿಚಾರ ಮಾಡಿದರೆ ಹಾಫಿಸ್ಕಾರವರು ಜುಕಾಕುರವರಿಗಿಂತ ಹೆಚ್ಚಿಗೆ ಪಾತ್ರರಿದ್ದರು ಆದ್ದರಿಂದ ರಾ॥ ಹಾಫಿಸ್ಕಾರವರನ್ನು ತಿರಸ್ಕರಿಸಿ ಕೇಂದ್ರ ಪಾರ್ಲಮೆಂಟರಿ ಬೋರ್ಡಿನವರು ರಾ॥ ಜುಕಾಕುರವರನ್ನು ನೇಮಿಸಿದ್ದು ತಪ್ಪೆಂದು ನವಜವಾನ ಪಕ್ಷದವರು ಅಭಿಪ್ರಾಯಪಟ್ಟು ಅವರು ರಾ॥ ಕಾಶಿಮಜಿಯವರಿಗೆ ತಮ್ಮ ಉಮೇದವಾರರನ್ನಾಗಿ ನಿಲ್ಲಿಸಿದ್ದರು- ಆದರೆ ನವಾಯತರೊಳಗೆ ಪಂಗಡಗಳು ಬೇಡವೆಂದು ಮಾಡಿಸಿದ ಹಿರಿಯರ ದಾಕ್ಷಿಣ್ಯ ಮುರಿಯಲಾಗದೆ ಅವರು ಈಗ ತಮ್ಮ ಉಮೇದವಾರಿಯನ್ನು ಹಿಂತೆಗೆದುಕೊಂಡಿದ್ದಾರೆ ರಾ॥ ಮಹಮ್ಮದ ಅಕಬರರು ದಖ್ಖನಿ ಮುಸಲ್ಮಾನರ ಪರವಾಗಿ ಹೋರಾಡುತ್ತಿದ್ದಾರೆ ಕಳೆದ ಬಾರಿ ಎಸೆಂಬ್ಲಿಗೆ ತಾಂಡೆಯ ಪಕ್ಷದ ರಾ॥ ಸಿದ್ದಿಕರವರು ಆರಿಸಿ ಬಂದಿದ್ದರು ಈ ಬಾರಿ ದಖ್ಖನಿ ಸಮಾಜದ ಪ್ರತಿನಿಧಿ ಆರಿಸಿ ಬರುವದು ನ್ಯಾಯ್ಯವಿದೆ ರಾ॥ ಮಹಮ್ಮದ ಅಕಬರರು ಏಪ್ರಾಮಾಣಿಕರೂ ನಿರಾಲಸಿಗಳೂ ರದವರೂ ಇದ್ದಾರೆ ರಾ॥ ಜುಕಾಕುರವರ ದೃಷ್ಟಿ ಸಂಕುಚಿತವಿದೆ ಪೋಲೀಸರ ವಕೀಲರಾಗಿ ದುಡಿದದ್ದರಿಂದ ಜನಸಾಮಾನ್ಯರ ಹಿತ ಮಾಡುವ ದೃಷ್ಟಿಯನ್ನು ಅವರು ಕಳೆದುಕೊಂಡಿದ್ದಾರೆ ಆದರಿಂದ ನವಾಯತರೂ ದಖ್ಖನಿಗಳೂ ರಾ॥ ಮಹಮ್ಮದ ಅಕಬರರನ್ನು ಆರಿಸುವ ಸಂಭವವೇ ಹೆಚ್ಚಿದೆ ಮತದಾರರ ಸಂಖ್ಯೆ ದಖ್ಖನಿಗಳಿಗೆ ಅನುಕೂಲವುಂಟು ಇದೇ ಜಿಲ್ಲೆಯೊಳಗೆ [illegible] ಮತದಾರರಿದ್ದಾರೆ ಅವರಲ್ಲಿ ಹೆಚ್ಚುಕಡಿಮೆ ೨೨೦೦ ಜನರು ನವಾಯತ ಸೀಮೆಯೊಳಗಿನವರು ೩೨೦೦ ಮಂದಿ ಇತರರ ಮತದಾರರ ಸಂಖ್ಯಾಬಲ ಪರಾಂಬರಿಸಿದರೆ ರಾ॥ ಅಕಬರರು ಆರಿಸಿ ಬರಬಹುದು ನವಾಯತರಾದರೂ ದುರಭಿಮಾನಕ್ಕೆ ಎಡೆಕೊಡಬಾರದು ಲೀಗಿನ ಅಭಿಮಾನದಲ್ಲಿ ರಾ॥ ಅಕಬರರು ರಾ॥ ಜುಕಾಕುರವರಿಗಿಂತ ಕಡಿಮೆಯಿಲ್ಲ ರಾ॥ ಅಕಬರರನ್ನು ಆರಿಸುವದರಿಂದ ಲೀಗಿನ ಕಾರಭಾರ ಮಂಡಳದ ತುಂಟತನ ಪರಿಹಾರ ಹೊಂದಿ ಲೀಗು ಪವಿತ್ರವಾಗಲು ಅನುಕೂಲವಾದೀತು ರಾ॥ ಜುಕಾಕುರವರಿಗೆ ಶ್ರೀಮಂತರ ಎಂಬಲವುಂಟೆಂದು ಮತದಾರರು ಮೋಸಹೋಗದೆ ಧೈರ್ಯ ಮನಸ್ಸಿನಿಂದ ಮತದಾನ ಮಾಡಬೇಕೆಂದು ಮುಸಲ್ಮಾನ ಸಮಾಜದ ಹಿತ-ಚಿಂತಕರು ವಿನಂತಿ ಮಾಡುತ್ತಾರೆ

ಸ್ಥಾನಿಕ ವೃತ್ತಾಂತ.

ಕುಮಟಾ— ೩-೪ ದಿನಗಳಿಂದ ವಿಪರೀತ ಸೆಕೆ! ಆಕಾಶದಲ್ಲಿ ಮೋಡಗಳೂ ಆಗುತ್ತಿವೆ. ಬೇಗನೇ ಮಳೆಯಾಗುವ ಸಂಭವವುಂಟು

ಕಳೆದ ಸೋಮವಾರ ಶಾಸನಸಭೆ ಮತದಾರ ಸಂಘದ ಚುನಾವಣೆಯಾಯಿತು ಎಲ್ಲ ಕಡೆ ಕಾಂಗ್ರೆಸ್ಸೇ ಕಾಣುತ್ತಿತ್ತು ವಾಲಗಳ್ಳಿ ಮತಗಟ್ಟೆಯು ವಿನಹ ಉಳಿದ ಮತಗಟ್ಟೆಗಳಲ್ಲಿ, ಅವುಗಳ ನೆರೆಹೊರೆಯಲ್ಲಿ ಕಾಂಗ್ರೆಸ್ಸೇತರ ಅಸ್ತಿತ್ವ ಸಹ ಕಂಡುಬರುತ್ತಿದ್ದಿಲ್ಲ ಇದೇ ತಾಲೂಕಿನಲ್ಲಿ ಅಷ್ಟಿಷ್ಟು ಕಾಂಗ್ರೆಸ್ಸೇತರ ಹುರಿಯಾಳಿಗೆ ೨೦೦-೨೫೦ ಮತಗಳು ಬಿದ್ದಿರಬಹುದು.

ಕಲ್ಲಬ್ಬೆ ಕೊಲೆ ಖಟ್ಲೆಯ ವಿಚಾರ ಕಳೆದ ಶುಕ್ರ ಶನಿವಾರ ನಡೆದು, ಇತ್ತಂಡದ ವಕೀಲರ ಪ್ರತಿಪಾದನೆಗಳೂ, ನ್ಯಾಯಾಧೀಶರ ಸಮಾರೋಪವೂ ಆದವು ಪಂಚರ ಅಭಿಪ್ರಾಯ ಕೇಳಲಾಗಿ, ಪಂಚರ ಗೌಡಾ ವಗೈರೆ ೧-೨-೩ನೇ ಆರೋಪಿಗಳು ಇಂ. ಪಿ. ಕೋಡಿನ ಕಲಂ ೩೦೪ ರಂತೆ (ಅಂದರೆ ಬುದ್ಧಿಪೂರ್ವಕ ಕೊಲೆಯ ಸದರಿನಲ್ಲಿ ಬೀಳದ ನರಹತ್ಯೆ ಮಾಡಿದ) ದೋಷಿಗಳು ಮತ್ತು ೪ನೇ ಆರೋಪಿಯು— ಅವನು ನಿಜವಾದ ಭ್ರಾಂತನಲ್ಲೆಂದು ಸಿವ್ಹಿಲ ಸರ್ಜನರು ಅಭಿಪ್ರಾಯ ಕೊಟ್ಟಿದ್ದಾರೆ —ಕಲಂ ೩೨೩ರಂತೆ (ಅಂದರೆ ವ್ಯಾಕಗಟ್ಟು ಗೌಡನಿಗೆ ಬರೇ ೨ ಗುದ್ದು ಕೊಟ್ಟ) ಅಪರಾಧಿಯು ಎಂದು ಅವರು ಅಭಿಪ್ರಾಯ ಕೊಟ್ಟಿದ್ದಾರೆ ನ್ಯಾಯಾಧೀಶರ ತೀರ್ಪು ನಾಳೆ ಮಧ್ಯಾಹ್ನ ಕೊಡಲ್ಪಡುವದು

ಪ್ರಾಥಮಿಕ ಶಾಲಾ ಶಿಕ್ಷಕರ ಸಂಪು ವಿಶಾಲವಾಗುತ್ತ ನಡೆದಿದೆ. ಇಂದಿನವರೆಗೆ ೩೩ರಷ್ಟು ಶಿಕ್ಷಕರು ಸಂಪಿನಲ್ಲಿ ಸೇರಿದ್ದಾರೆ ದಿನ ಹೋದಂತೆ ಅವರ ಸಂಖ್ಯೆ ಬೆಳೆಯುವ ಲಕ್ಷಣಗಳು ತೋರುತ್ತಿವೆ ಗೋಕರ್ಣದೊಳಗಿನ ಶಿಕ್ಷಕ-ಶಿಕ್ಷಕಿಯರು ಮುಂದಿನ ಸೋಮವಾರ (ತಾ ೨೫) ಸಂಪಿಗೆ ಸೇರುವರೆಂದು ಸಾರಿದ್ದಾರೆ ಸಂಪಿಗೆ ಸೇರಿದ ಶಿಕ್ಷಕರ ಸ್ಥಳದಲ್ಲಿ ಯಾರೂ ಸೇರದಂತೆ ಸಂಪು ಹೂಡಿದ ಶಿಕ್ಷಕರೂ ಲೋಕನಾಯಕರೂ ಪ್ರಯತ್ನ ನಡೆಸಿದ್ದಾರೆ "ನೀವು ಸಂಪು ಹೂಡಿದರೆ, ೫ ರೂ ಸಂಬಳ ಕೊಂಡು ದುಡಿಯಲು ಸಿದ್ಧರು ಎಷ್ಟೋ ಜನರಿದ್ದಾರೆ!" ಎಂದು ಮುಂಚಿನಿಂದ ಶಿಕ್ಷಕರ ಸಮ್ಮುಖದಲ್ಲಿ ಶಾಲಾ ಬೋರ್ಡಿನ ಎ ಓ ರವರು ಆಡಿದ ವಿಚಾರಗೇಡಿ ಅಧಿಕಾರ ದರ್ಪದ ಮಾತುಗಳಿಗೆ ತಕ್ಕ ಉತ್ತರವನ್ನು ಸಕಲರೂ ಕೃತಿಯಿಂದ ಕೊಡಬೇಕಾಗಿಯೂ ಸಾಂಪ್ರತ ಎ ಓ ರವರು ತಿಳಿಯುವಷ್ಟು ಸ್ವಾಭಿಮಾನಶೂನ್ಯರಲ್ಲವೆ ಭಿಕ್ಷಾರ್ಥಿಗಳಾಗಿಲ್ಲೆಂದು ತೋರಿಸಿಕೊಡಬೇಕಾಗಿಯೂ ಶಿಕ್ಷಕರ ಹಾಗೂ ಅವರ ಮಿತ್ರರ ಅಪೇಕ್ಷೆಯುಂಟು

ಅಧಿಕಾರಿಗಳು ಹಳ್ಳಿಗಳಲ್ಲಿ ಹೇಗೆ ಅಸಭ್ಯರೀತಿಯಿಂದ ವರ್ತಿಸುತ್ತಾರೆಂಬುದರ ಒಂದು ಉದಾಹರಣೆ ಮೊನ್ನೆಯೇ ಬೆಳಕಿಗೆ ಬಂದಿದೆ ಕಳೆದ ಸೋಮವಾರ ತಾ ೧೧ಕ್ಕೆ ರಾ|| ಜೇ ಪಿ ಸಾಲಭಾನಾ ಎಂಬ ಸರ್ಕಲ ಒಫಿಸರರು ಕೋಡಕಣಿಗೆ ತಲ್ಪಿದ್ದರು ಸಂಜೆಯ ಕಡೆಗೆ, ಅವರು ರಾ|| ಶೇಷಗಿರಿ ಸುಬ್ರಾಯ ಕಾಮತರ ಮನೆಗೆ ತಪಾಸಣೆಗಾಗಿ ಹೋಗಿದ್ದರಂತೆ ರಾ|| ಶೇಷಗಿರಿ ಕಾಮತರು ಅಂದು ಊರಲ್ಲಿದ್ದಿಲ್ಲ ಮನೆಯಲ್ಲಿ ಹೆಂಗಸರಷ್ಟೇ ಇದ್ದರು ಮನೆಯ ಅಂಗಳದಲ್ಲಿ ೩ ಅಡಿಕೆ ಮೊಟ್ಟೆಗಳಿದ್ದವು ಅವು ಯಾರವೆಂದು ಕೇಳಲಾಗಿ, ಬ್ರಹ್ಮೂರಿನಿಂದ ಕುಮಟೆಗೆ ಹೋಗುವ ಕೂಲಿಯಾಳುಗಳು ತಂದಿಟ್ಟಿದ್ದಾರೆಂದೂ ಕೂಲಿಯಾಳುಗಳು ಊಟಕ್ಕೆ ಹೋಗಿದ್ದಾರೆಂದೂ ಮನೆಯವರು ಹೇಳಿದರು ಆಗ ಆ ಮನೆ ಯಾರದೆಂದು ಸರ್ಕಲ ಒಫಿಸರರು ಕೇಳಿದರು. ರಾ|| ಶೇಷಗಿರಿ ಕಾಮತರ ತಾಯಿಯು ಶೇಷಗಿರಿ ಕಾಮತನದು ಎಂದು ಉತ್ತರಕೊಟ್ಟಳು ಕಾಮತರ ತಂದೆಯ ಹೆಸರು— ಅಂದರೆ ತನ್ನ ಗಂಡನ ಹೆಸರು ಆಕೆ ಹೇಳಲಿಲ್ಲ (ಸರ್ಕಲ ಒಫಿಸರರಿಗೆ ಬುದ್ಧಿಯಿದ್ದರೆ ಅವಳು ಯಾಕೆ ಆ ಹೆಸರು ಹೇಳಲಿಲ್ಲೆಂದು ಗೊತ್ತಾಗುತ್ತಿತ್ತು, ಸ್ತ್ರೀ ಸಮಾಜದಲ್ಲೂ ಬಹುತೇಕ ಹೆಂಗಸರು ಗಂಡನ ಹೆಸರು ಹೇಳುವದಿಲ್ಲೆಂದು ಅವರಿಗೆ ಗೊತ್ತಿರಬೇಕಿತ್ತು) ಸರ್ಕಲ ಒಫೀಸರರು ಆಗ "ಶೇಷಗಿರಿ ಕಾಮತರಿಗೆ ತಂದೆಯಿಲ್ಲವೇ? ತಂದೆಯಿಲ್ಲದೆ ಅವರು ಹುಟ್ಟಿದರೇ ?" ಎಂದು ಕೇಳಿದರಂತೆ! ಇದು ಸಹ ಶೇಷಗಿರಿ ಕಾಮತರ ತಾಯಿಯ ಎದುರಿಗೆ! ಇಷ್ಟಕ್ಕೇ ಸರ್ಕಲ ಒಫಿಸರರು ತಡೆಯಲಿಲ್ಲ ಮನೆಯೊಳಗೆ ನುಗ್ಗಿ ಎಲ್ಲಾ ಕಡೆ, ಮಾಳಿಗೆಯ ಮೇಲೂ, ತಪಾಸಣೆ ಮಾಡಲಿಕ್ಕೆ ತಮ್ಮ ಶಿಪಾಯಿಗಳಿಗೆ ಅಪ್ಪಣೆ ಮಾಡಿದರು! ಆ ಬಗ್ಗೆ ಯಾವ ಪಂಚರನ್ನೂ ಕರೆಯಲಿಲ್ಲ! ಅಥವಾ ತಮ್ಮ ಬೇರೆಯಿದ್ದ ಶಿಪಾಯಿಗಳು ಆ ಮನೆಯಲ್ಲಿ ಹೊಕ್ಕರೆ ಮನೆಯವರ ಧಾರ್ಮಿಕ ಭಾವನೆಗಳಿಗೆ ನೋವಾಗುವದೋ ಹೇಗೆಂಬುದರ ವಿಚಾರ ಮಾಡುವ ಬುದ್ಧಿಯೂ ಅವರಿಗೆ ಬರಲಿಲ್ಲ! ಆ ಶಿಪಾಯಿಗಳು ಕೂಡ ಹಿಂದುಮುಂದಿನ ವಿಚಾರ ಮಾಡದೆ ರಾ|| ಕಾಮತರ ದೇವರ ಕೋಣೆ, ಅಡಿಗೆ ಕೋಣೆ ಇವುಗಳನ್ನು ಬಿಡದೆ ಎಲ್ಲ ಕಡೆಗೂ ಧೀಮ ಹೊಕ್ಕೆಂದು ಝಡ್ತಿ ಮಾಡಿದರು ! ಶಿಪಾಯಿಗಳು ಹಾಗೆ ಮನೆಯಲ್ಲೆಲ್ಲ ಪ್ರವೇಶ ಮಾಡಿದ್ದರಿಂದ ಮುಂದೆ ರಾ|| ಕಾಮತರು ಭಟ್ಟರ ಕಡೆಯಿಂದ ಶುದ್ಧಿ ಮಾಡಿಸಿಕೊಂಡರಂತೆ ಮೇಲಧಿಕಾರಿಗಳು ರಾ|| ಸಾಲಭಾನಾರವರಿಗೆ ಚನ್ನಾಗಿ ಬುದ್ಧಿ ಕಲಿಸಿ ಅವರಿಗೂ ಅವರಂತೆಯೇ ವರ್ತಿಸುವ ಇತರರಿಗೂ ಒಂದು ಪಾಠ ಕಲಿಸಿಕೊಡಬೇಕಾಗಿ ಸೂಚನೆಯಿದೆ

ನಾಳೆ ಮಂಗಳವಾರ ಸಂಜೆ ೬ ಘಂಟೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಸಭಾಮಂಟಪದಲ್ಲಿ ಇಲ್ಲಿಯ ಕರ್ನಾಟಕ ಸಂಘದ ವಿದ್ಯಮಾನ ಜಿಲ್ಲಾ ನ್ಯಾಯಾಧೀಶ ಶ್ರೀ ಟಿ ಎಚ್ ಗುಂಡೂರ ಇವರ ಸಾರ್ವಜನಿಕ ಭಾಷಣವಾಗಲಿದೆಯೆಂದೂ ಎಲ್ಲರೂ ಬರಬೇಕೆಂದೂ ಸಂಘದ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಹೊನ್ನಾವರ— (ತಾ ೮-೩-೪೬) ಪತ್ರಿಕೆಗಳು ಇಲ್ಲಿಗೆ ದಿನ-೪ ದುರ್ದೆಸೆಯಾಗಿದೆ ಧಾರವಾಡ, ಬೆಳಗಾಂವಿ ಪತ್ತಿಗಳಿಂದ ಪತ್ರಿಕೆಗಳು ತರಿಸಲಾಗದಿದ್ದರೆ ಗುಜರಾಥ ಇಲ್ಲವೆ ಕರಾಚಿಯಿಂದ ತರಿಸುವ ಪ್ರಯತ್ನ ಜಿಲ್ಲಾಧಿಕಾರಿ ಮಾಡಬಾರದೇ ?

ಪೇಟೆಯಲ್ಲಿ ಕಡಧಾನ್ಯಗಳ ಕೊರತೆಯಾಗಿದೆ ಮುಂಬಯಿಯಿಂದ ತರಿಸಲು ಪರವಾನಿಗೆಯೇ ಸಿಗುವದಿಲ್ಲವಂತೆ ! ಮಾಚವೆಗಳ ಓಡಾಟ ನಿಂತ ಮೇಲೆ ಯಾವ ಹಳ್ಳಿಗಳ ಸಾಮಾನಿಗೆ ಪರವಾನಿಗೆಗಳು ದೊರೆಯುತ್ತವೋ ಏನೋ ! ನಿಯಂತ್ರಣ ಇಲಾಖೆಯವರ ಲೀಲೆ ಅಗಾಧವಾದುದು !

ಸರಕಾರಮಾನ್ಯ ಜವಳಿ ಅಂಗಡಿಯಲ್ಲಿ ಕಳ್ಳಾಟಿಕೆ ಆರಂಭವಾಗಿದೆ ನಯವಾದ ಧೋತರಗಳು ಅಲ್ಲಿ ಸಿಗುವದಿಲ್ಲ! ಬಂದ ಕೂಡಲೇ ಕತ್ತಲೆಯಲ್ಲಿ ಕಳ್ಳ ಪೇಟೆಗೆ ಹೋಗುತ್ತವೆಯಂತೆ ಪ್ರೊಫ್ಲಿ ವಗೈರೆ ಸುಳಾವು ಇರುವ ಕೊಂಡುಕೊಳ್ಳ ಬೇಕಾಗಿ ಅಂಗಡಿಕಾರರು ನಿಗ್ರಹಿಸುತ್ತಾರೆ ಅಧಿಕಾರಿಗಳು ಇತ್ತ ಗಮನಿಸಬೇಕಾಗಿ ಸೂಚನೆಯಿದೆ

(ತಾ ೧೬-೩-೪೬) ಸೋಮವಾರದ ಚುನಾವಣೆಯಲ್ಲಿ ಇಲ್ಲಿ ೯೦% (ನೂರಕ್ಕೆ ೯೦ರಷ್ಟು) ಮತದಾರರು ಮತ ಹಾಕಿದರು ಎಲ್ಲರೂ ಕಾಂಗ್ರೆಸ್ಸಿಗೇ ಹಾಕಿದ್ದಾರೆಂದು ಹೇಳಬಹುದು ಕಾಂಗ್ರೆಸ ವಿರೋಧಿಗಳು ಎಲ್ಲೂ ಕಾಣಿಸುತ್ತಿದ್ದಿಲ್ಲ

ಮನೆ ಕರಿಗೆ ಬಂಕಿಯ ವಸೂಲಿಯ ಬಗ್ಗೆ ಮ್ಯು||ಯವರು ಮಾಡಿದ ಒಂದು ವಾಪಸಿಗೆ ಅವಧಿಯ ಆತಂಕವುಂಟೆಂದು

(೧ನೇ ಪುಟದ ಮೇಲೆ ಮುಂದರಿಸಿದೆ)

ಜಾಹೀರ ವಿನಂತಿ.

ನಾನು ಅಬದುಲ ಖಾದಿರ ಬಂದಶಾ ನೊಕದ್ದಿನ ಕಾಶಿಮಜಿ, ಸಾ। ಭಟಕಳ ಇವನು ಈ ಮೂಲಕ ಜಾಹೀರಪಡಿಸುವದೇನಂದರೆ —

ಇದೇ ಬರುವ ಸೋಮವಾರ ತಾ ೨೫-೩-೪೬ಕ್ಕೆ ಮುಂಬಯಿ ಎಸೆಂಬ್ಲಿಗೆ ಕಾನಡಾ ಜಿಲ್ಲೆಯ ಮುಸಲ್ಮಾನ ಗ್ರಾಮೀಣ ಮತದಾರ ಸಂಘದಿಂದ ಆಗಲಿರುವ ಚುನಾವಣೆಗೆ ನಾನೂ ಓರ್ವ ಉಮೇದವಾರನಾಗಿ ನಿಂತಿದ್ದೆ ಆದರೆ ಮುಸ್ಲಿಮ್ ಲೀಗಿನ ಪರವಾಗಿ ನಿಂತ ಉಮೇದವಾರನನ್ನು ವಿರೋಧಿಸುವದು ಸರಿಯಲ್ಲೆಂದು ಈಗ ನನಗೆ ಮನವರಿಕೆಯಾಗಿ ನಾನು ನನ್ನ ಉಮೇದವಾರಿಯನ್ನು ಹಿಂತೆಗೆದುಕೊಂಡಿದ್ದೇನೆ, ಮತ್ತು ನನ್ನ ಉಮೇದವಾರಿ ರದ್ದುಗೊಳಿಸಬೇಕಾಗಿ ಮೆ। ಕಲೆಕ್ಟರ ಸಾಹೇಬರಿಗೂ ತಿಳಿಸಿದ್ದೇನೆ

ಕಾರಣ ತಾ ೨೫ರ ಚುನಾವಣೆಯ ಕಾಲಕ್ಕೆ ನನಗೆ ಬೆಂಬಲ ಕೊಡಲಿದ್ದ ಯಾವತ್ತೂ ಮತದಾರ ಬಾಂಧವರು ಮುಸ್ಲಿಮ ಲೀಗಿನ ಅಧಿಕೃತ ಉಮೇದವಾರ ಮಿ|| ಜೇ ಎಚ್ ಶಮುಸುದ್ದಿನ ಇವರಿಗೇ ತಮ್ಮ ಮತ ಕೊಟ್ಟು ಅವರನ್ನು ಪ್ರಚಂಡ ಬಹುಮತದಿಂದ ಆರಿಸಿ ತರಬೇಕಾಗಿಯೂ ಲೀಗ ಸಂಸ್ಥೆಯ ಗೌರವವನ್ನು ಕಾಪಾಡಬೇಕಾಗಿಯೂ ಈ ಮೂಲಕ ವಿನ್ನವಿಸುತ್ತೇನೆ ಮತ-ಪತ್ರಿಕೆಯಲ್ಲಿ ಒಂದೊಮ್ಮೆ ನನ್ನ ಹೆಸರು ಹಾಗೆಯೇ ಉಳಿದಾಗ್ಯೂ ಅದರ ಮುಂದೆ ಯಾರೂ ಕತ್ತರಿ ಹಾಕಬಾರದು ನಾನೂ ನನ್ನ ಸಕಲ ಗೆಳೆಯರೂ ಮಿ|| ಶಮುಸುದ್ದಿನರಿಗೇ ಮತ ಕೊಡಬೇಕೆಂದು ನಿರ್ಧರಿಸಿದ್ದೇವೆ

ಭಟಕಳ, ತಾ ೧೫-೩ ೧೯೪೬.

ಅಬದುಲ ಖಾದಿರ ಬಂದಶಾ ಮೊಹದ್ದಿನ
ಕಾಶಿಮಜಿ

ಕೆನರಾ ಕಾಲೇಜ ಸಮಿತಿಯ ವಿನಂತಿ

ಸಮಿತಿಯವರು ಕುಮಟೆಯಲ್ಲಿ ಸ್ಥಾಪಿಸ ಸಂಕಲ್ಪಿಸಿದ ಕಾಲೇಜಿನ ಬಗ್ಗೆ ಜಿಲ್ಲೆಯಲ್ಲೂ ಮುಂಬಯಿಯಲ್ಲೂ ಜನರ ಪ್ರೋತ್ಸಾಹ ದೊರೆತಿದ್ದು, ಈಗಾಗಲೇ ೧ ಲಕ್ಷ ರೂಪಾಯಿಗಳ ವಾಗ್ದಾನಗಳು ಸಿಕ್ಕಿವೆ ಕಾಲೇಜಿನ ಬಗ್ಗೆ ಇದೇ ಬರುವ ಅಗಸ್ಟ ತಾ ೧೫ರೊಳಗೆ ವಿಶ್ವವಿದ್ಯಾಲಯಕ್ಕೆ ಅರ್ಜಿ ಮಾಡಬೇಕಾಗಿರುವದರಿಂದ ಅವಶ್ಯವುಳ್ಳ ಕಟ್ಟೋಣಗಳ ಕೆಲಸ ಕೂಡಲೆ ಕೈಕೊಳ್ಳಬೇಕಾಗಿದೆ. ಆದ್ದರಿಂದ ವಾಗ್ದಾನ ಕೊಟ್ಟ ಮಹನೀಯರೆಲ್ಲ ಬೇಗನೆ ತಮ್ಮ ವಂತಿಗೆ-ಹಣ ವಸೂಲ ಕೊಡಬೇಕಾಗಿಯೂ ಇತರರೂ ಮುಂದಾಗಿ ವಂತಿಗೆಗಳನ್ನು ಕೊಡಬೇಕಾಗಿಯೂ ಅರಿಕೆ

ಈ ಕೆಳಗಿನಂತೆ ಹಣ ವಸೂಲಾಗಿದೆ —

ರಾ|| ನಾರಾಯಣ ತಿ ಹೆಗಡೆ (ವಾಗ್ದಾನದ ರೂ ೧೦೦೦೧ ರಲ್ಲಿ) ರೂ ೫೦೦೦ ಭಗವಾನದಾಸ ಭಾಟಿಯಾ (ವಾಗ್ದಾನದ ರೂ ೩೦೦೧ರಲ್ಲಿ) ರೂ ೧೦೨೬ ವಾ|| ಲಕ್ಷ್ಮಣ ಕಾಮತ ಮತ್ತು ಬಂಧುಗಳು ರೂ ೧೦೦೨ ರಾ|| ವೆಂಕಟರಮಣ ನಾಗಪ್ಪ ನಾಯಕ ರೂ ೬೦೧ ರಾ|| ವಿಶ್ವೇಶ್ವರ ತಿ ಹೆಗಡೆ ಮತ್ತು ತಮ್ಮಣ್ಣ ವಿ ಹೆಗಡೆ (ವಾಗ್ದಾನದ ರೂ ೧೦೦೧ರಲ್ಲಿ) ರೂ. ೬೦೦ ರಾ|| ಒಸ್ತಿ ಅಲ್ಲಿ ಅಹಮ ಸಾಹೇಬ (ವಾಗ್ದಾನದ ರೂ ೧೫೦೦ ರಲ್ಲಿ) ರೂ ೩೦೦ ರಾ|| ಸದಾಶಿವ ಮಾ ಪಾಕಾಳರ ರೂ ೫೦೧ ರಾ|| ರಾಮಚಂದ್ರ ನಾ ವೆರ್ಣೇಕರ ರೂ ೫೦೧ ರಾ|| ಗಣಪತಿ ವೆಂ ಶಾನಭಾಗ ರೂ ೫೦೧ ರಾ|| ಮುಕುಂದ ಶಾನಭಾಗ ಹೆಗಡೇಕರ (ವಾಗ್ದಾನದ ರೂ ೧೦೦೦ ದಲ್ಲಿ) ರೂ ೫೦೦ ಡಾ|| ಸದಾಶಿವ ಚಿಕ್ಕೆರೂರ ರೂ ೫೦೦ ರಾ|| ಗೋಪಾಳಕೃಷ್ಣ ಮಾಡಗೇರಿ (ವಾಗ್ದಾನದ ರೂ ೬೦೧ ರಲ್ಲಿ) ರೂ ೪೦೦ ಹಾಜಿ ಎ ಎಚ್ ಸಿದ್ದಿಕ ರೂ ೩೦೧ ರಾ|| ಗೋಪಾಳಕೃಷ್ಣ ಶಾನಭಾಗ ರೂ ೨೦೫ ರಾ|| ಗೋವಿಂದ ವೆಂ ಪೈ, (ವಾಗ್ದಾನದ ರೂ ೫೦೧ ರಲ್ಲಿ) ರೂ ೧೨೬ ರಾ|| ರಾಘವೇಂದ್ರ ಪಾಕಾಳರ ರೂ ೧೦೧ ರಾ|| ಎಸ್ ಆರ್ ಕ್ರೋಕ್ ರೂ ೧೦೧ ರಾ|| ವ್ಹಿ ವ್ಹಿ ನಗರಕರ ರೂ ೧೦೧. ರಾ|| ಕೃಷ್ಣ ಮಾಧವ ಶಾನಭಾಗ (ವಾಗ್ದಾನದ ರೂ ೬೨೦ರಲ್ಲಿ) ರೂ ೧೦೧ ರಾ|| ಎಚ್ ಶಿವರಾಮ ಶಾಸ್ತ್ರಿ (ವಾಗ್ದಾನದ ರೂ. ೧೫೧ರಲ್ಲಿ) ೧೦೦ ರಾ|| ದೇವಪ್ಪ ರಾಮ ನಾಯಕ ಮತ್ತು ಬಂಧುಗಳು (ವಾಗ್ದಾನದ ರೂ ೨೦೦ರಲ್ಲಿ) ರೂ ೧೦೦ ರಾ|| ಅನಂತ ಗಣೇಶ ಪೈ ರೂ ೫೧ ರಾ|| ಭಟ್ಟ ಗಣಪಯ್ಯ ಪ್ರಭು ರೂ ೫೦ ರಾ|| ಭವಾನಿಶಂಕರ ಬಾರ್ದೆ (ವಾಗ್ದಾನದ ರೂ ೧೫೧ರಲ್ಲಿ) ರೂ ೩೧ ಶಾಹ ಕಾಶಿಮ ಮುಸಾ ರೂ ೫ (ಒಟ್ಟು ವಸೂಲ ರೂ ೧೩೪೦೫)

ಕುಮಟಾ,
ತಾ ೧೬ ೩-೪೬

L S Kamat,
ಕಾರ್ಯದರ್ಶಿ, ಕೆನರಾ ಕಾಲೇಜ ಸಮಿತಿ

ಜಾಹೀರ ನೋಟೀಸು

ನಮ್ಮ ಕುಟುಂಬದಲ್ಲಿ ಇದೇ ಕಳೆದ ಫೇಬ್ರುವರಿಯಲ್ಲಿ ವಾಂಟಣಿಯಾಗಿ ಹೊನ್ನಾವರ ತಾಲೂಕ ಮೊಲಕೋಡ ಗ್ರಾಮದ ಸ।। ನಂ।। ೧೪೩/೨ (ತರಿ) ಹಾಗೂ ಸ।। ನಂ।। ೧೪೭ (ಬಾಗಾಯತ) ಇವು (ಬೇರೆ ಆಸ್ತಿಗಳೊಡನೆ) ನಮ್ಮ ಕುಟುಂಬದ ಅನಂತ ಲಕ್ಷ್ಮಣ ಆಚಾರ್ಯ ಇವರ ಪಾಲಿಗೆ ಹೋಗಿವೆ ಈ ಪೈಕಿ ಸ।। ನಂ।। ೧೪೭ರಲ್ಲಿ ನಮ್ಮ ಕುಟುಂಬದ ಶ್ರೀ ಹನುಮಂತ ದೇವರ ವನಭೋಜನೆಯ ಸಂತರ್ಪಣೆ ಮಾಡುವ ರೂಢಿ ಅನಾದಿಕಾಲದಿಂದ ನಡೆದದ್ದುಂಟು ಅದೇ ಮೇರೆಗೆ ವನಭೋಜನೆಯ ದಿನವೇ ರಾತ್ರೆ ದೇವರು ಸ।। ನಂ।। ೧೪೩/೨ರಲ್ಲಿ ಕೂತು ಯಕ್ಷಗಾನ ಆಟವಾಗುವ ರೂಢಿಯೂ ನಡೆದು ಬಂದಿದೆ ಈ ರೂಢಿಗಳಿಗೆ ವ್ಯತ್ಯಯ ಬಾರದಂತೆ ಸದರಿ ಸ್ಥಳಗಳನ್ನು ಅನುಭವಿಸಲು ಅನಂತ ಆಚಾರ್ಯರು ಬದ್ಧರಿದ್ದಾರೆ ಅಂದರೆ ಸ।। ನಂ ೧೪೩/೨ರಲ್ಲಿ ಬರೇ ಭತ್ತ ಬೆಳೆಸಿ ಅದು ಕಾರ್ತಿಕ ವ।। ಅಮಿಗೆ ಖಾಲಿ ಆಗುವಂತೆ ಮಾಡಲಿಕ್ಕೂ, ೧೪೭ರಲ್ಲಿ ಮನೆ, ದನಕರು ವಗೈರೆ ಕಟ್ಟಿಕೊಳ್ಳದೆ ಅದು ಸ್ವಚ್ಛತೆಯಿಂದ ಇಟ್ಟು ಉಳಿಯುವಂತೆ ಮಾಡಲಿಕ್ಕೂ ಅವರು ಬದ್ಧರಿದ್ದಾರೆ ಆದರೆ ಮೇಲ್ಕಾಣಿಸಿದ ರೂಢಿಗಳಿಗೂ ಕರಾರಿಗೂ ವಿರುದ್ಧವಾಗುವಂತೆ ಸದರಿ ಅನಂತ ಆಚಾರ್ಯರು ಸದರಿ ಸ್ಥಳಗಳನ್ನು ಪರಾಧೀನ ಮಾಡಲು ಸಿದ್ಧರಾದ ಸುದ್ದಿಯುಂಟು ಆದ್ದರಿಂದ ಮೇಲಿನ ರೂಢಿ ಮತ್ತು ಕರಾರುಗಳಿಗೆ ವ್ಯತ್ಯಯವಾಗುವ ಹಾಗೆ ಯಾರೂ ಈ ಸ್ಥಳಗಳನ್ನು ಪಡಕೊಳ್ಳಬಾರದೆಂದೂ ಪಡಕೊಂಡರೆ ಲುಕ್ಸಾನಿಗೆ [illegible] ಈ ಮೂಲಕ ಎಲ್ಲರಿಗೂ ಎಚ್ಚರಿಕೆ ಕೊಡುತ್ತೇವೆ

ಮೊಲಕೋಡ, ತಾ ೧೬-೩-೧೯೪೬

वेंकटदास नारायण आचार्य
नरहरि हनुमंत आचार्य.

ಹಿಂದುಸ್ಥಾನಿ ಪಾಠಗಳು.

ಸಬಕ ಚೌಬೀಸ (ಪಾಠ ೨೪)

ಮೌಲಾನಾ ಆಜಾದ

ಆಜಕಲ ಮೌಲಾನಾ ಆಜಾದಕೋ ಕೌನ ನಹೀಂ ಜಾನತಾ ? (ಈ ದಿನಗಳಲ್ಲಿ ಮೌಲಾನಾ ಆಜಾದರನ್ನು ಅರಿಯದವನಾರು?) ವೇ ಕೊಂಗ್ರೆಸಕೇ ಸಭಾಪತಿ ಹೈಂ; (ಅವರು ಕೊಂಗ್ರೆಸ್ಸಿನ ಅಧ್ಯಕ್ಷರಿರುತ್ತಾರೆ,) ಹಮಾರೇ ರಾಷ್ಟ್ರಪತಿ ಹೈಂ. (ನಮ್ಮ ರಾಷ್ಟ್ರಪತಿಗಳಿರುತ್ತಾರೆ.) ಉನಕಾ ಪೂರಾ ನಾಮ ಮೌಲಾನಾ ಅಬುಲ್ ಕಲಾಂ ಆಜಾದ ಹೈ. (ಅವರ ಪೂರ್ಣ ಹೆಸರು ಮೌಲಾನಾ ಅಬುಲ ಕಲಾಂ ಆಜಾದ ಎಂದಿರುತ್ತದೆ.) ಮೌಲಾನಾ ಸಾಹಬ ಏಕ ಪುರಾನೇ ಫಕೀರ ಖಾನದಾನಮೇಂ ಪೈದಾ ಹುಯೇ. (ಮೌಲಾನಾ ಸಾಹೇಬರು ಪುರಾತನ ಫಕೀರರ ವಂಶದಲ್ಲಿ ಹುಟ್ಟಿದರು.) ಆಪಕೇ ವಾಲಿದ ಮೌಲಾನಾ ಖೈರುದ್ದೀನ ಮುಸಲ್ಮಾನೋಂಕೇ ಏಕ ಗುರು ಥೇ. (ಅವರ ತಂದೆ ಮೌಲಾನಾ ಖೈರುದ್ದೀನರು ಮುಸಲ್ಮಾನರ ಗುರುಗಳಲ್ಲೊಬ್ಬರಾಗಿದ್ದರು) ವೇ ಸೂಫಿ ಥೇ, (ಅವರು ಸೂಫಿಗಳಿದ್ದರು,) ಬಡೇ ಪಂಡಿತ ಥೇ. (ದೊಡ್ಡ ಪಂಡಿತರಾಗಿದ್ದರು) ಉನಕೇ ಚೇಲೇ ಸಾರೇ ಹಿಂದುಸ್ಥಾನಮೇಂ ಫೈಲೇ ಥೇ (ಅವರ ಶಿಷ್ಯರು ಇಡೀ ಭಾರತದಲ್ಲಿ ಹರಡಿದ್ದರು.) ೧೮೫೭ಮೇಂ ವೇ ಮಕ್ಕಾ ಚಲೇ ಗಯೇ (೧೮೫೭ರಲ್ಲಿ ಅವರು ಮಕ್ಕೆಗೆ ಹೊರಟುಹೋದರು.) ವಹಾಂಕೇ ಲೋಗ ಉನಕೀ ಬಡೀ ಇಜ್ಜತ ಕರತೇ ಥೇ (ಅಲ್ಲಿಯ ಜನರು ಅವರನ್ನು ಬಹಳ ಗೌರವಿಸುತ್ತಿದ್ದರು) ಖಲೀಫಾ ಭೀ ಉನಕೋ ಚಾಹತೇ ಥೇ (ಖಲೀಫರು ಕೂಡ ಅವರನ್ನು ಪ್ರೀತಿಸುತ್ತಿದ್ದರು.) ಮೌಲಾನಾ ಖೈರುದ್ದೀನ ಸಿರ್ಫ ಧರ್ಮಗುರು ಹೀ ನಹೀಂ ಥೇ (ಮೌಲಾನಾ ಖೈರುದ್ದೀನರು ಬರೀ ಧರ್ಮಗುರುಗಳಷ್ಟೇ ಆಗಿರಲಿಲ್ಲ.) ವೇ ಸಿಯಾಸೀ ಔರ ಸಾಮಾಜೀ ಕಾಮಭೀ ಖೂಬ ಕರತೇ ಥೇ (ಅವರು ರಾಜಕೀಯ ಮತ್ತು ಸಾಮಾಜಿಕ ಕೆಲಸವನ್ನು ಬಹಳ ಮಾಡುತ್ತಿದ್ದರು) ಉನ್ಹೋಂನೇ ಅರಬೀಮೇಂ ಕಈ ಕಿತಾಬೇಂ ಲಿಖೀಂ (ಅವರು ಅರಬೀ ಗ್ರಂಥಗಳನ್ನು ಬರೆದರು.) ಔರ ರುಪಯಾ ಜಮಾಕರ "ಜಾವೇದಾ" ನಹರಕೀ ಮರಮ್ಮತ ಕರಾಈ. (ಮತ್ತು ಹಣ ಕೂಡಿಸಿ ಜಾವೇದಾ ಕಾಲುವೆಯ ದುರುಸ್ತ ಮಾಡಿಸಿದರು) ಉನಕೀ ಶಾದೀ ಮಕ್ಕೇಕೇ ಏಕ ಮಶಹೂರ ಆಲಿಮ ಶೇಖ ಮುಹಮ್ಮದ ಜಹೀರಕೀ ಲಡಕೀಸೇ ಕರದೀ) (ಅವರ ಮದುವೆಯನ್ನು ಮಕ್ಕೆಯ ಒರ್ವ ಪ್ರಸಿದ್ಧ ಪಂಡಿತರಾದ ಶೇಖ ಮುಹಮ್ಮದ ಜಹೀರ ಇವರು ತಮ್ಮ ಮಗಳೊಡನೆ ಮಾಡಿಸಿದರು) ವಹ ಲಡಕೀ ಪಢೀ ಲಿಖೀ ಥೀ (ಆ ಹುಡುಗಿ ಓದು ಬರಹ ಬಲ್ಲವಳಾಗಿದ್ದಳು) ಉನ್ಹೀಂಕೇ ಹಮಾರೇ ರಾಷ್ಟ್ರಪತಿ ಪೈದಾ ಹುಯೇ (ಅವರಲ್ಲಿ ನಮ್ಮ ರಾಷ್ಟ್ರಪತಿಗಳು ಜನ್ಮತಾಳಿದರು.) ಆಜಾದ ಸಾಹಬಕಾ ಲಡಕಪನ ಮಕ್ಕಾ ಔರ ಮದೀನಾಮೇಂ ಬೀತಾ. (ಆಜಾದ ಸಾಹೇಬರ ಬಾಲ್ಯ ಮಕ್ಕಾ-ಮದೀನಾಗಳಲ್ಲಿ ಕಳೆಯಿತು) ಪಢನಾ, ಲಿಖನಾ ಉನಕೋ ಬಹುತ ಪಸಂದ ಥಾ. (ಓದುವದು, ಬರೆಯುವದು ಅವರಿಗೆ ಬಹಳ ಸೇರುತ್ತಿತ್ತು.) ಮಾಂಸೇ ಅರಬ್ಬೀ ಸೀಖೀ ಔರ ಬಾಪಸೇ ಫಾರಸೀ ಔರ ಉರ್ದು ಸೀಖೀ (ತಾಯಿಯ ಕಡೆಯಿಂದ ಅರಬೀ ಭಾಷೆಯನ್ನು ಕಲಿತರು ಮತ್ತು ತಂದೆ ಕಡೆಯಿಂದ ಫಾರಸಿ ಮತ್ತು ಉರ್ದು ಭಾಷೆಗಳನ್ನು ಕಲಿತರು) ಉನಕೀ ಅಕ್ಲ ಬಹುತ ತೇಜ ಥೀ (ಅವರ ಬುದ್ಧಿ ಬಹಳ ಚುರುಕಾಗಿತ್ತು) ಉನ್ಹೋಂನೇ ಚೌದಹ ಸಾಲಕೀ ಉಮ್ರಮೇಂ ಕೈರೋಕೀ ಅಲ-ಅಜಹರ ಯುನಿವ್ಹರ್ಸಿಟೀಕೀ ಊಂಚೀಸೇ ಊಂಚೀ ಪಢಾಯೀ ಪೂರೀ ಕರ ದೀ (ಅವರು ತಮ್ಮ ೧೪ ವರ್ಷದ ವಯಸ್ಸಿನಲ್ಲಿ ಕೈರೋದೊಳಗಿನ ಅಲ-ಅಜಹರ ವಿಶ್ವವಿದ್ಯಾಲಯದ ಅತ್ಯುನ್ನತ ಅಭ್ಯಾಸವನ್ನು ಮುಗಿಸಿಬಿಟ್ಟರು) ೧೯೦೩ಮೇಂ ಯೇ ಪಂದ್ರಹ ಸಾಲಕೇ ಥೇ. (೧೯೦೩ರಲ್ಲಿ ಇವರು ೧೫ ವರ್ಷದವರಾಗಿದ್ದರು.) ಉಸ ವಕ್ತ ಕಲಕತ್ತಾ ಆಗಯೇ (ಆ ಕಾಲಕ್ಕೆ ಕಲಕತ್ತೆಗೆ ಬಂದರು.) ವಹಾಂ 'ಲಿಸಾನ ಉಲ-ಸಿದ್ದೀಕ'-(ಸಚ್ಚೀ ಜಬಾನ) ನಾಮಕೀ ಏಕ ಮಾಸಿಕ ಪತ್ರಿಕಾ ನಿಕಾಲೀ. (ಅಲ್ಲಿ ಲಿಸಾನ-ಉಲ-ಸಿದ್ದಿಕ ಎಂಬ ಹೆಸರಿನ ಒಂದು ಮಾಸಿಕ ಪತ್ರಿಕೆ ಹೊರಡಿಸಿದರು) ಉಸ ಜಮಾನೇಮೇಂ ಹೀ ವೇ ಕಾಫೀ ಮಶಹೂರ ಹೋಗಯೇ, (ಆ ಕಾಲದಲ್ಲೇ ಅವರು ಪ್ರಸಿದ್ಧರಾದರು) ಬಡೇ ಬಡೇ ಪಂಡಿತ ಉನಕೀ ಇಜ್ಜತ ಕರತೇ ಥೇ.) ದೊಡ್ಡ ದೊಡ್ಡ ವಿದ್ವಾಂಸರು ಅವರನ್ನು ಗೌರವಿಸುತ್ತಿದ್ದರು.) ಯೇ ಉಮ್ರಮೇಂ ಛೋಟೇ ಪರ ಅಕಲಮೇಂ ಬೂಢೇ ಥೇ. (ಅವರು ವಯಸ್ಸಿನಲ್ಲಿ ಚಿಕ್ಕವರಾದರೂ ಲೆಕ್ಕಣಿಕೆಯಲ್ಲಿ ವೃದ್ಧರಾಗಿದ್ದರು) ಉನಕೇ ಖ್ಯಾಲ ಬಹುತ ಊಂಚೇ ಥೇ. (ಅವರ ವಿಚಾರಗಳು ಬಹಳ ಉನ್ನತವಾಗಿದ್ದವು) ಉನಕೀ ಜಬಾನ ಮೇಂ ಬಡಾ ಜೋರ ಥಾ. (ಅವರ ಭಾಷೆಯಲ್ಲಿ ಪ್ರಭಾವವಿತ್ತು.) ಯೇ ನೌಜವಾನ ಮುಸಲ್ಮಾನೋಂಕೇ ನೇತಾ ಬನ ಗಯೇ. (ಇವರು ತರುಣ ಮುಸಲ್ಮಾನರ ಮುಂದಾಳುಗಳಾದರು.) ಸರಕಾರನೇ ಇನಪರ ಕಡೀ ನಿಗಾಹ ರಖನಾ ಶುರೂ ಕರದಿಯಾ (ಸರಕಾರವು ಇವರ ಮೇಲೆ ಕಟ್ಟು ವಕ್ರದೃಷ್ಟಿಯನ್ನಿಡಹತ್ತಿತು.) ೧೯೨೦ಮೇಂ ಗಾಂಧೀಜೀ ಕೇ ಸಾಥ ಮೌಲಾನಾ ಸಾಹಬ ಕಾಂಗ್ರೆಸಮೇಂ ಆಯೇ. (೧೯೨೦ರಲ್ಲಿ ಗಾಂಧಿಜಿಯವರ ಜೊತೆಗೆ ಮೌಲಾನಾ ಸಾಹೇಬರು ಕೊಂಗ್ರೆಸ ಸೇರಿದರು.) ಖಿಲಾಫತಕೀ ಆಂದೋಲನ ಚಲಾಯಾ, ಜೇಲ ಗಯೇ (ಖಿಲಾಫತ ಚಳವಳ ನಡಿಸಿದರು, ಜೇಲಿಗೆ ಹೋದರು.) ತಬಸೇ ಬರಾಬರ ಕೊಂಗ್ರೆಸಕೇ ಹರ ಕಾಮಮೇಂ ಆಗೇ ರಹತೇ ಹೈಂ. (ಅಂದಿನಿಂದ ಸರಿಯಾಗಿ ಕೊಂಗ್ರೆಸ್ಸಿನ ಪ್ರತಿಯೊಂದು ಕೆಲಸದಲ್ಲಿ ಮುಂದಿರುತ್ತಾರೆ.) ಅಬತಕ ವೇ ದೋ ಬಾರ ಕೊಂಗ್ರೆಸಕೇ ಸಭಾಪತಿ ಬನೇ ಹೈಂ. (ಈ ತನಕ ಅವರು ೨ ಸಾರೆ ಕೊಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾರೆ)

— ಜೈ ಹಿಂದ್ —
ಬಹು ದೂರ ಪರಿಮಳ ಹರಡುವ
ಮಹಾವೀರ ಅಗರಬತ್ತಿ ತೊಲಿಗೆ ೦-೫-೦;
ಮಹಾತ್ಮ ಅಗರಬತ್ತಿ —ಡಿ— ೦-೩-೬.
ಪರೀಕ್ಷಿಸಿ ನೋಡಿ, ಆನಂದ ಪಡೆಯಿರಿ !!
ಚಿತ್ತರಂಜನ ಕಂಪನಿ,
ಸಂತೇಪೇಟೆ, ತುಮಕೂರ. (ಮೈಸೂರು)

WANTED for our New English School, Bad (Karwar), Graduates in Arts and Science, and a Matriculate with Drawing (Int). Apply to the undersigned stating the minimum salary expected

PremierEducation Society,
Bad, 8-3-46

K.R.Haldipurkar,
Chairman.

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಲಾಯಸನ್ಸಿ, ಮೋಟರ ಸ್ಟೆಂಡ, ಕುಮಟಾ.

ದಿ ಕೊಮರ್ಶಿಯಲ್ ಕೊರ್ಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಮೋಟರ ಸ್ಟೆಂಡ, ಕುಮಟಾ.

ನೋಟೀಸು.

ನಂ. ೧೦೬

ಈ ಮೂಲಕ ಕಾನಡಾ ಜಿಲ್ಲೆಯ ಯಾವತ್ತೂ ವ್ಯಾಪಾರಸ್ಥರಿಗೆ ತಿಳಿಸುವದೇನಂದರೆ:— ಮುಂಬಯಿಯಿಂದ ಕಾಳು ಕಡಿ (Pulses)ಗಳನ್ನು ತರಿಸಲಿಚ್ಛಿಸುವ ವ್ಯಾಪಾರಿಗಳು, ಈ ಕೆಳಗೆ ಕಾಣಿಸಿದ ಮಾಹಿತಿಯನ್ನು ಪೂರೈಸಿ, ತಾ ೧-೪-೧೯೪೬ರೊಳಗಾಗಿ ನಮ್ಮ ಕಚೇರಿಗೆ ತಲ್ಪುವಂತೆ ಅರ್ಜಿಗಳನ್ನು ಕಳಿಸತಕ್ಕದ್ದು.

೧ ಅರ್ಜಿದಾರನ ಹೆಸರು;
೨ ಊರು ಮತ್ತು ವಿಳಾಸ,
೩ ಲಾಯಸನ್ಸ ನಂಬರ;
೪. ೧೯೪೧—೪೨, ೧೯೪೨—೪೩ನೇ ಇಸ್ವಿಗಳಲ್ಲಿ ವ್ಯಾಪಾರ ಮಾಡಿದ ಪ್ರತಿ ಒಂದು ಧಾನ್ಯದ ಪರಿಮಾಣ;
೫. ಈಗ ತರಿಸಲಿಚ್ಛಿಸುವ ಕಾಳು-ಕಡಿಗಳ ವಿವರ.

(ಜಿನಸುಗಳ ಪರಿಮಾಣವನ್ನು ಬಂಗಾಲಿ ಮಣಗಳಲ್ಲಿ ಕೊಡಬೇಕು.)

ಕಾರವಾರ,
ತಾ ೧೫-೩-೧೯೪೬.

F. N. RANA,
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ.

ನೋಟೀಸು.

ನಂ. ೬
ತಾ. ೧೩-೩-೧೯೪೬.

೧೯೪೪ನೇ ಇಸವಿಯ ಮುಂಬಯಿ ಬಾರಕೋಲ ಮತ್ತು ಫಾಯರವುಡ್ ಟ್ರೇಡ ಲ್ಯಾಯಸನ್ಸಿಂಗ ಆರ್ಡರದಂತೆ ಚಾಲು ಇದ್ದ ಎಲ್ಲ ಪರವಾನೆಗಳ ಅವಧಿಯು ತಾ. ೩೧—೩—೧೯೪೬ಕ್ಕೆ ಮುಗಿಯುತ್ತದೆ. ಕಾರಣ ಎಲ್ಲ ಪರವಾನೆದಾರರು ತಮ್ಮ ಪರವಾನೆಯ ಅವಧಿಯನ್ನು ಬೆಳಸಿಕೊಳ್ಳುವದಕ್ಕಾಗಿ ಮುಂ-ಶಾಸನ ಬುಕ (ಪೂರೈಕೆ ಭಾಗ)ಯ ತಾ ೧೨-೩-೧೯೪೫ ರ ೪೫೫/IV-Dನೇ ನಂಬರದ ಮತ್ತು ತಾ ೨-೧-೧೯೪೬ರ ೩೨/IV-Dನೇ ನಂಬರದ ಸರಕಾರಿ ಪ್ರಕಟನೆಗಳ ಪ್ರಕಾರ ಕೆಳಗೆ ನಮೂದಿಸಿದ ಫೀ-ಹಣವನ್ನು ಸರಕಾರಿ ಖಜಿನೆಯಲ್ಲಿ ತುಂಬಿ ಅರ್ಜಿ ಮಾಡಬೇಕು. ಫೀ-ಹಣ ತುಂಬಿದ ಡುಪ್ಲಿಕೇಟ ಚಲನ ಅರ್ಜಿಯ ಸಂಗಡ ನಮ್ಮ ಕಚೇರಿಗೆ ಕಳಿಸತಕ್ಕದ್ದು. ಎಲ್ಲ ಪರವಾನೆದಾರರು ಚಾಲು ಇದ್ದ ಪರವಾನೆ ಅವಧಿಯನ್ನು ತಾ. ೧—೪—೧೯೪೬ರೊಳಗೆ ಬೆಳಸಿಕೊಳ್ಳತಕ್ಕದ್ದು. ಪರವಾನೆಯ ಅವಧಿ ಬೆಳೆಸಿಕೊಳ್ಳುವ ಅರ್ಜಿಯ ನಮೂನೆ ನಮ್ಮ ಕಚೇರಿಯಲ್ಲಿ ಪುಕ್ಕಟೆಯಾಗಿ ಸಿಗುವದು.

ಪರವಾನೆಯ ಅವಧಿ ಬೆಳೆಸುವ ಬಗ್ಗೆ ಕೊಡಬೇಕಾದ ಫೀ.

೧.	ಬಾರಕೋಲ ಪ್ರೊಡ್ಯೂಸರ್ಸ ಪರವಾನೆ	ರೂ.	೫
೨	ಬಾರಕೋಲ ಇಂಪೋರ್ಟರ್ಸ ಪರವಾನೆ	"	೫.
೩	ಬಾರಕೋಲ ಹೋಲಸೇಲರ್ಸ ಪರವಾನೆ	"	೫.
೪.	ಬಾರಕೋಲ ಡೀಲರ್ಸ ಪರವಾನೆ	"	೧.
೫	ಫಾಯರವುಡ್ ಪ್ರೊಡ್ಯೂಸರ್ಸ ಪರವಾನೆ	"	೫
೬.	ಫಾಯರವುಡ್ ಇಂಪೋರ್ಟರ್ಸ ಪರವಾನೆ	"	೫.
೭.	ಫಾಯರವುಡ್ ಹೋಲಸೇಲರ್ಸ ಪರವಾನೆ	"	೫.
೮.	ಫಾಯರವುಡ್ ರಿಟೇಲರ್ಸ ಪರವಾನೆ	"	೧.

F. N. RANA,
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ.

THE BANK OF RURAL INDIA, LTD.,
[Incorporated in British India under the Indian Companies Act, 1913]
HEAD OFFICE.- "Satyabhama Bhuvanam', **KARWAR.**
Offices at:- KARWAR, KUMTA, SIRSI, HONAVAR & YELLAPUR.
Applications from young, energetic and educated young men with good moral character are invited for training as Clerks and Accountants for the new offices to be opened
Good prospects for really capable hands.
Men with banking experience preferred.

Karwar,
15-3-1946

P. X. GRACIOUS,
MANAGING DIRECTOR.

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
„ ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ. ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿಮುಂಗಡ ಕಟ್ಟತಕ್ಕದ್ದು

Reg. No. B 1270. Monday, 25th March, 1946.

ಕಾನಡಾವೃತ್ತಂ

ವರ್ಷ ೨೮.] THE KANARA NEWS. [ಸಂಚಿಕೆ ೩೮.

ಕುಮಟಾ:- ಸೋಮವಾರ, ತಾ. ೨೫ ಮಾಹೆ ಮಾರ್ಚ ೧೯೪೬ನೇ ಇಸವಿ.

ಜಾಹೀರಾತುಗಳ ದರ:
[illegible] ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
[illegible] ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶೇಷ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ಠರಿಸಲಾದೀತು.

ಜಯ ಹಿಂದ ! ಜಯ ಗಾಂಧಿ ! ಜಯ ಕೊಂಗ್ರೆಸ !

ಬುಧವಾರ ಪ್ರಕಟವಾದ ಚುನಾವಣೆಯ ಪರಿಣಾಮಗಳನ್ನು ನೋಡಿ ನಮಗೊಳ್ಳೇ ಹರುಷವಾಗಿದೆ. ಮುಂಬಯಿ ಪ್ರಾಂತದೊಳಗೆ ಎಲ್ಲಿ ನೋಡಿದಲ್ಲಿ ರಾಷ್ಟ್ರೀಯ ಸಭೆಯ ಉಮೇದವಾರರು ಪ್ರತಿಸ್ಪರ್ಧಿಗಳನ್ನು ಪ್ರಚಂಡ ಬಹುಮತಗಳಿಂದ ಸೋಲಿಸಿ ವಿಜಯಶಾಲಿಗಳಾಗಿದ್ದಾರೆ. ಕರ್ನಾಟಕದಲ್ಲಂತೂ ರಾಷ್ಟ್ರೀಯ ಸಭೆಗೆ ಪೂರ್ಣ ವಿಜಯ ದೊರಕಿದೆ. ರಾಷ್ಟ್ರೀಯ ಸಭೆಯ ಉಮೇದವಾರರೆಲ್ಲರೂ ಆರಿಸಿ ಬಂದಿದ್ದಾರೆ. ಧಾರವಾಡ ಜಿಲ್ಹೆಯಲ್ಲಿ ಸರ್ ಸಿದ್ದಪ್ಪಾ ತೋಟಪ್ಪಾ ಕಂಬಳಿಯವರಂಥ ಸುಪ್ರತಿಷ್ಠಿತ ಮಹಾನುಭಾವರಿಗೆ ೨೫೦೦೦ಕ್ಕಿಂತ ಹೆಚ್ಚು ಮತಗಳು ಕಡಿಮೆ ಬಿದ್ದದ್ದು ನಿಜವಾಗಿಯೂ ಒಂದು ಅದ್ಭುತ ಚಮತ್ಕಾರವೆಂದು ನಾವು ಎಣಿಸುತ್ತೇವೆ. ರಾಷ್ಟ್ರೀಯ ಸಭೆಯ ಪುಣ್ಯಪ್ರಭಾವದಿಂದಲೂ, ಮಹಾತ್ಮರ ಆಶೀರ್ವಾದದಿಂದಲೂ, ಮೌ॥ ಅಬುಲ ಕಲಂ ಅಝಾದ ಪ್ರಭೃತಿ ರಾಷ್ಟ್ರೀಯ ಸಭೆಯ ಕಾರ್ಯಕರ್ತರ ತಪಃಶಕ್ತಿಯಿಂದಲೂ ರಾಷ್ಟ್ರೀಯ ಸಭೆಗೆ ಅಭೂತಪೂರ್ವ ಲೋಕಬೆಂಬಲ ದೊರಕಿ, ಎಲ್ಲೆಲ್ಲೂ ರಾಷ್ಟ್ರೀಯ ಸಭೆಯ ಉಮೇದವಾರರು ಚುನಾವಣೆಗಳನ್ನು ಗೆದ್ದಿದ್ದಾರೆ. ವಿಜಯ ಹೊಂದಿದ ಸಕಲ ಮಹಾನುಭಾವರನ್ನು ನಾವು ಅಂತಃಕರಣಪೂರ್ವಕ ಅಭಿನಂದಿಸುತ್ತೇವೆ.

ನಮ್ಮ ಜಿಲ್ಹೆಯಿಂದ ಶ್ರೀ॥ ಶಿವರಾವ ಶಾಸ್ತ್ರಿ, ಶ್ರೀ॥ ಸಣ್ಣಪ್ಪಾ ಗಾಂವಕಾರ ಮತ್ತು ಶ್ರೀ॥ ರಾಮಚಂದ್ರ ಪ್ರಭು ಈ ಮೂವರೂ ಪ್ರಚಂಡ ಮತಗಳಿಂದ ಆರಿಸಿ ಬಂದಿರುತ್ತಾರೆ. ನಮ್ಮ ಜಿಲ್ಹೆ ನಿತಾಂತ ರಾಷ್ಟ್ರೀಯ ಸಭಾಭಿಮಾನಿ ಜಿಲ್ಹೆಯೆಂದು ಖ್ಯಾತಿಯುಂಟು. ಅಸಹಯೋಗ, ಕರನಿರಾಕರಣೆ, ಸತ್ಯಾಗ್ರಹ, ೧೯೪೨ನೇ ಇಸವಿಯ ಆಗಸ್ಟ ಆಂದೋಲನ ಮೊದಲಾದ ಸ್ವಾತಂತ್ರ್ಯದ ಸಕಲ ಚಳವಳಿಗಳಲ್ಲಿ ನಮ್ಮ ಜಿಲ್ಹೆ ಪ್ರಶಂಸನೀಯ ಕಾರ್ಯ ನೆರವೇರಿಸಿ ಮತ್ತು ರಾಷ್ಟ್ರೀಯ ಸಭೆಯ ಲೋಕಕಾರ್ಯದ ಪುರಸ್ಕಾರ ಮಾಡಿ ದಿಗಂತ ಕೀರ್ತಿ ಪಡೆದಿದೆ. ೧೯೩೭ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಕೊಂಗ್ರೆಸ-ಪ್ರತಿಸ್ಪರ್ಧಿಗಳ ಪರಿಪರಿಯ ಮೋಹಮಂತ್ರಗಳಿಗೆ ಬಲಿಬೀಳದೆ ರಾಷ್ಟ್ರೀಯ ಸಭೆಯ ಉಮೇದವಾರರನ್ನೇ ಪುರಸ್ಕರಿಸಿ ನಮ್ಮ ಜಿಲ್ಹೆ ಹೆಸರುವಾಸಿಯಾಗಿತ್ತು. ಇಂಥ ರಾಷ್ಟ್ರೀಯ ಸಭಾಭಿಮಾನಿ ಪ್ರದೇಶದಲ್ಲಿ ರಾಷ್ಟ್ರೀಯ ಸಭೆಗೆ ಎದುರಾಳಿಯಾಗಿ ಯಾವ ವಿಚಾರಶೀಲನೂ ಈ ಸಲ ನಿಲ್ಲಲಿಕ್ಕಿಲ್ಲೆಂದು ಜನಭಾವನೆಯಿತ್ತು. ಆದರೆ ರಾ। ಗಣಪತಿ ಹೆಗಡೆಯವರು ಅನಪೇಕ್ಷಿತವಾಗಿ ಎದುರಾಳಿಯಾಗಿ ನಿಂತಿದ್ದರಿಂದ ಚುನಾವಣೆಯ ಪ್ರಸಂಗ ಒದಗಿತು. ಆದರೂ ರಾಷ್ಟ್ರೀಯ ಸಭೆಗೆ ಎಲ್ಲೂ ವಿರೋಧವಿರಲಿಲ್ಲ. ವ್ಯಕ್ತಿ-ದೃಷ್ಟಿಯಿಂದಾಗಲಿ, ತತ್ವ-ದೃಷ್ಟಿಯಿಂದಾಗಲಿ ಕೊಂಗ್ರೆಸ-ಪ್ರತಿನಿಧಿಗಳ ವಿರೋಧದೊಳಗೆ ಕಸುವಿರಲಿಲ್ಲ. ರಾಷ್ಟ್ರೀಯ ಸಭೆಯ ಉಮೇದವಾರರು ತಮ್ಮ ತಮ್ಮ ಮಟ್ಟಿಗೆ ಲೋಕಸೇವೆ ನಡಿಸಿ ಬಹುಜನಸಮಾಜಕ್ಕೆ ಪರಿಚಿತರಾಗಿದ್ದರು. ಎದುರಾಳಿಯಾಗಿ ನಿಂತ ರಾ॥ ಹೆಗಡೆಯವರ ಹೆಸರು ಜಿಲ್ಹೆಯ ಇತರ ತಾಲೂಕುಗಳಲ್ಲಿರಲಿ, ಅವರ ಸ್ವಂತ ಕುಮಟಾ ತಾಲೂಕಿನ ಜನಸಾಮಾನ್ಯರಿಗೆ ಕೂಡ ಗೊತ್ತಿರಲಿಲ್ಲ! ಲೋಕಕಾರ್ಯ ಅವರಿಂದ ಆಗಿದ್ದಿಲ್ಲ. ಲೋಕಕಾರ್ಯದ ಅಪೇಕ್ಷೆ ಮಾಡುವಂಥ ವ್ಯಕ್ತಿಯೂ ಅವರಿರಲಿಲ್ಲ. ಮೊದಲು ಇವರು ಸ್ವತಂತ್ರರೆಂದೂ, ಹಿಂದಿನಿಂದ ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದವರೆಂದೂ ಪ್ರಚಾರ ನಡೆಯಿತು. ಡೆಮೊಕ್ರೆಟಿಕ್ ಪಕ್ಷದ ತತ್ವಗಳೇನು, ವ್ಯವಹಾರಗಳೇನು, ಆ ತತ್ವ-ವ್ಯವಹಾರಗಳು ಉಮೇದವಾರ-ವ್ಯಕ್ತಿಯಲ್ಲಿ ಎಷ್ಟರ ಮಟ್ಟಿಗೆ ಮೈಯ್ಗೊಂಡಿವೆ, ಈ ಪಕ್ಷದವರು ಸ್ವಾತಂತ್ರ್ಯ-ಸಾಧನೆಗಾಗಿ ಸಾಧಿಸಿದ ಕಾರ್ಯವೇನು ಇವೇ ಮೊದಲಾದ ಪ್ರಶ್ನೆಗಳಿಗೆ ಬಹುಜನ-ಸಮಾಜಕ್ಕೆ ತಿಳಿಯುವಂಥ ಉತ್ತರಗಳು ಎಲ್ಲೂ ದೊರೆಯಲಿಲ್ಲ. ಉಂಡಾಡಿಗರ ಸಮಾನನೆಯ ಹಲವು ಪ್ರಚಾರಕರು ತಾವು ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದವರೆಂದು ಹೇಳುತ್ತ ಕೆಲವೆಡೆ ಅಡ್ಡಾಡಿ, ರಾಷ್ಟ್ರೀಯ ಸಭೆಗೆ ಬರೇ ದುರುಕ್ತಿಗಳನ್ನಾಡಿ ಜನರ ಸಹಾನುಭೂತಿ ಕಳಕೊಂಡರು. ಹೊರತು ರಾಷ್ಟ್ರೀಯ ಸಭೆಯ ಉಮೇದವಾರರಿಗಿರುವ ಲೋಕಬೆಂಬಲದಲ್ಲಿ ಅವರಿಂದ ನ್ಯೂನತೆಯನ್ನುಂಟು ಮಾಡಲಾಗಲಿಲ್ಲ. ಅದರಿಂದ ಈ ಬಾರಿಯ ಇಲೆಕ್ಶನಿನಲ್ಲಿ ನಿಜವಾದ ಹೋರಾಟದ ಸ್ವಾರಸ್ಯವಿರಲಿಲ್ಲ. ರಾಷ್ಟ್ರೀಯ ಸಭೆಯ ಹುರಿಯಾಳುಗಳು ಹೇಗೂ ಗೆಲ್ಲುತ್ತಾರೆ, ಪ್ರಚಂಡ ಮತಗಳಿಂದ ವಿಜಯ ಹೊಂದುತ್ತಾರೆ ಎಂಬ ಭಾವನೆ ಇಡೀ ಜಿಲ್ಹೆಯಲ್ಲಿ ಹಬ್ಬಿಕೊಂಡಿತ್ತು. ಪರಿಣಾಮದಲ್ಲೂ ಅದೇ ಮಾತು ನಿಚ್ಚಳವಾಗಿದೆ. ಶ್ರೀ॥ ಶಿವರಾವ ಶಾಸ್ತ್ರಿಯವರಿಗೆ [illegible], ಶ್ರೀ॥ ಸಣ್ಣಪ್ಪ ಗಾಂವಕಾರರಿಗೆ [illegible] ಮತ್ತು ಶ್ರೀ॥ ಪ್ರಭುರವರಿಗೆ [illegible] ಮತಗಳು ಬಿದ್ದಾಗ, ಶ್ರೀ॥ ಗಣಪತಿ ಹೆಗಡೆರಿಗೆ ೧॥ ಸಾವಿರ ಮತಗಳು ಸಹ ಬೀಳದಿರುವದು ಮೇಲಿನ ಮಾತನ್ನು ದೃಢಪಡಿಸುತ್ತದೆ. ನಮ್ಮ ಜಿಲ್ಹೆ ರಾಷ್ಟ್ರೀಯ ಸಭೆಯ ಆಧಿರಾಜ್ಯಕ್ಕೆ ಸಂಪೂರ್ಣವಾಗಿ ಸೇರ್ಪಡೆಯಾದ ಪ್ರದೇಶವೆಂದೂ ರಾಷ್ಟ್ರೀಯ ಸಭೆಯ ಎದುರಾಳಿಗಳಿಗೆ ಈ ಜಿಲ್ಹೆಯೊಳಗೆ ಸ್ಥಾನವಿಲ್ಲೆಂದೂ ಈ ಚುನಾವಣೆಯಲ್ಲಿ ಮತ್ತೊಮ್ಮೆ ಸಿದ್ಧವಾಗಿದೆ. ರಾಷ್ಟ್ರೀಯ ಸಭೆಯ ಈ ಹಿರಿತನವನ್ನು ಸಿದ್ಧಗೊಳಿಸಲು ಅವಕಾಶ ಮಾಡಿಕೊಟ್ಟ ಬಗ್ಗೆ ಶ್ರೀ॥ ಹೆಗಡೆಯವರನ್ನೂ ನಾವು ಅಭಿನಂದಿಸುತ್ತೇವೆ.

ಶ್ರೀ॥ ಗಣಪತಿ ಹೆಗಡೆಯವರು ಸ್ವಂತ ಸ್ಥಾನಮಾನಗಳನ್ನೂ, ರಾಷ್ಟ್ರೀಯ ಸಭೆಯ ವ್ಯಾಪಕವನ್ನೂ ದೊಡ್ಡಸ್ತಿಕೆಯನ್ನೂ ಲಕ್ಷಿಸಿ ಇಲೆಕ್ಶನಿನಲ್ಲಿ ಸೇರದಿದ್ದರೆ ಅದೊಂದು ಅವರಿಗೂ ಭೂಷಣವಾಗುತ್ತಿತ್ತು. ಚುನಾವಣೆಯ ವಿಶಾಲ ರಂಗದಲ್ಲಿ ಅವರು ತಮ್ಮ ಸ್ವತಂತ್ರ ಮತ್ತು ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದ ಸ್ಥಾನವನ್ನು ಲೋಕಕ್ಕೆ ನಿರ್ದೇಶಿಸಿ ಕೊಟ್ಟದ್ದಾದರೂ ಇಷ್ಟವೇ. ಇಡುಗಂಟನ್ನು ಅವರು ಕಳೆದುಕೊಂಡದ್ದು ಆಶ್ಚರ್ಯವಲ್ಲ. ಅವರ ಇಡುಗಂಟು ಉಳಿದಿದ್ದರೆ ರಾಷ್ಟ್ರೀಯ ಸಭೆಯ ಉಮೇದವಾರರು ಗೆದ್ದ ಲೆಕ್ಕವಾಗುತ್ತಿರಲಿಲ್ಲ. ಶ್ರೀ॥ ಹೆಗಡೆರೂ ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದವರೂ ಇಲೆಕ್ಶನಿನ ಪರಿಣಾಮದಿಂದ ತಕ್ಕ ಬೋಧ ಕಲಿತು, ಅಡ್ಡ ಹಾದಿಯನ್ನು ಬಿಟ್ಟುಕೊಟ್ಟು, ರಾಷ್ಟ್ರೀಯ ಸಭೆಯು ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹಾಕಿಕೊಟ್ಟ ಮಾರ್ಗವನ್ನು ಹಿಡಿಯಬೇಕಾಗಿ ನಾವು ಸೂಚಿಸುತ್ತೇವೆ.

ಇಲೆಕ್ಶನ ಕಾಲಕ್ಕೆ ನಡೆದ ಪ್ರಚಾರದ ಗುಣ-ದೋಷಗಳನ್ನು ವಿಮರ್ಶಿಸಬಾರದೆಂಬದೊಂದು ತತ್ವವುಂಟು. " Everything is fair in Elections " ಎಂಬದಾಗಿ ಹೇಳುವ ರೂಢಿಯುಂಟು. ಮತಗಳನ್ನು ಸಂಗ್ರಹಿಸುವದಕ್ಕಾಗಿ ಯುಕ್ತ-ಕಂಡ ಉಪಾಯಗಳನ್ನು, ಸಭ್ಯಾಸಭ್ಯತೆಗಳ ವಿಚಾರ ಮಾಡದೆ, ಅನುಸರಿಸಬಹುದಂತೆ. ಸಾಧ್ಯಕ್ಕಾಗಿ ಸಾಧನೆಗಳವೆ; ಸಾಧ್ಯ ಸಾಧಿಸುವದಕ್ಕಾಗಿ ಸಾಧನಗಳನ್ನು ಉಪಯೋಗಿಸುವದಿದೆ; ಸಾಧ್ಯ ಪವಿತ್ರವಿದ್ದರಾಯಿತು; ಸಾಧನ ಅಪವಿತ್ರವಿದ್ದರೂ ಅಡ್ಡಿಯಿಲ್ಲ; ಹೀಗೆ ಭಾವನೆಯುಂಟು. ಆದರೆ ರಾಷ್ಟ್ರೀಯ ಸಭೆಯ ಧರ್ಮ ಇಷ್ಟು ಕ್ಷುದ್ರವಾದದ್ದಲ್ಲ. ಸಾಧ್ಯ ಪವಿತ್ರವಾದದ್ದಿರಬೇಕು; ಅಂತೆಯೇ ಸಾಧನಗಳೂ ಪವಿತ್ರವಿರಬೇಕು. ಅಪವಿತ್ರ ಸಾಧನಗಳಿಂದ ಸಾಧ್ಯವಾದ ಸಾಧ್ಯ ಪವಿತ್ರವಾಗಲಾರದು. ರಾಷ್ಟ್ರೀಯ ಸಭೆಯ ಸೇವಕರು ಹಲವೆಡೆ ಈ ವಿಚಾರ ಕಣ್ಮರೆ ಮಾಡಿ ಪ್ರತಿಸ್ಪರ್ಧಿಯಾಗಿ ನಿಂತ ರಾ॥ ಹೆಗಡೆರಿಗೂ ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದ ಪ್ರಚಾರಕರಿಗೂ ಬೇರೆ ಬೇರೆ ರೀತಿಯಿಂದ ದಣಿಸಿದ್ದು ಸರ್ವದಾ ಅಯೋಗ್ಯವಿದೆ; ಅಕ್ಷಮ್ಯವಿದೆ; ಅರಾಷ್ಟ್ರೀಯವಿದೆ. ರಾಷ್ಟ್ರೀಯ ಸಭೆಯ ಅಭಿಮಾನಿಗಳೆಂದು ಹೇಳಿಸಿಕೊಳ್ಳುವ ಜನರಿಗಂತೂ ಲಾಂಛನಾಸ್ಪದವಿದೆ. ಹೆಗಡೆಯವರಾಗಲಿ ರೆಡಿಕಲ ಪಕ್ಷದವರಾಗಲಿ ಪರಕೀಯರಲ್ಲ. ಅವ

The Agricultural & Industrial Bank, Ltd.

[Incorporated in British India, Liability of Members limited]

Head Office: COONDAPOOR. S. I

The Head Office and Branches of the Bank now accept Season Deposits from three to six months at the following rates:-

Three Months at 2½% per annum.

Six Months at 2¾% per annum.

No such deposit will be allowed to run beyond 30th September 1946

Coondapoor,
8-2-1946

K. VAMAN SHENAI,
CHAIRMAN.

ಮಾರ್ಗ ಹಿಡಿದಾಗ್ಯೂ ಅವರು ನಮ್ಮವರು ಸಭ್ಯತನದಿಂದ ನಮ್ಮವರಿಗೆ ಸರಿ ದಾರಿ ತೋರಿಸಲು ಕರ್ತವ್ಯಬದ್ಧರಿದ್ದೇವೆ ಶ್ರೀ ಹೆಗಡೆಯವರಾಗಲಿ ಅವರ ಪ್ರಚಾರಕರಾಗಲಿ ಇಲೆಕ್ಷನ್-ಪ್ರಚಾರದ ಅತ್ಯುತ್ಸಾಹದಲ್ಲಿ ಕೆಲಮಟ್ಟಿಗೆ ಹುಡುಗಾಟಿಕೆ ಮಾಡಿರುವರೆಂದು ನಾವು ಒಪ್ಪುತ್ತೇವೆ ಆದರೆ ಅದಕ್ಕೆ ಪ್ರತಿಯಾಗಿ ಹುಡುಗಾಟಿಕೆ ಮಾಡಲು ರಾಷ್ಟ್ರೀಯ ಸಭೆಯವರಿಗೆ ಸಾಧ್ಯವಿಲ್ಲ ರಾಷ್ಟ್ರೀಯ ಸಭೆಯ ವ್ಯವಹಾರದಲ್ಲಿ ಅಸಭ್ಯತೆ, ಅನಾಚಾರ, ದುರಾಚಾರಗಳು ಹೇಳಲ್ಪಟ್ಟಿಲ್ಲ ಅಹಿಂಸೆಯ ಪಾರ್ಶ್ವಭೂಮಿಯಲ್ಲಿ ಪರಪೀಡನೆ ಸೇರಿಹೋಗುವದಿಲ್ಲ ಆಗಸ್ಟ ಆಂದೋಲನದೊಳಗೆ ಕಂಡುಬಂದ ಸ್ವಾತಂತ್ರ್ಯದ ಅಭಿನಿವೇಶವನ್ನು ಪೌರುಷವನ್ನೂ ರಾಷ್ಟ್ರೀಯ ಸಭೆಯು ಸ್ವಾಗತಿಸಿದರೂ ಆ ಆಂದೋಲನದೊಳಗಿನ ಹಿಂಸಾಚಾರವನ್ನು ಸರ್ವಥಾ ಮನ್ನಿಸಲಿಲ್ಲ ಮಹಾತ್ಮರು ಅದನ್ನು ಹಳಿದಿದ್ದಾರೆ ಬೇಗಮ ಅರುಣಾ ಅಸಫ ಅಲಿಯವರು ಮಹಾತ್ಮರೊಡನೆ ಗುಪ್ತ ಆಂದೋಲನದ ಗುಣದೋಷಗಳನ್ನು ಚರ್ಚಿಸಿದ ಬಳಿಕ ಮಹಾತ್ಮರು ವಿಚಾರಪೂರ್ವಕ ಕೊಟ್ಟ ಅಭಿಪ್ರಾಯವಿದು. ಹಿಂಸೆಯಿಂದ ಹಿಂಸೆಯ ಪ್ರತೀಕಾರ ಮಾಡುವದು ಒಳ್ಳೆಯದಲ್ಲ ಆದರಿಂದ ಪ್ರೇಮವುಳ್ಳ ಸೇರಿಗೆ ಸವ್ವಾ ಸೇರು ಎಂಬ ನಾಣ್ಣುಡಿ ಲೋಕಪ್ರಸಿದ್ಧವುಂಟು ಹಿಂಸೆಯು ಜಗತ್ತಿನಲ್ಲಿ ಕಂಡುಬರುವ ತತ್ವವು ಹಿಂಸೆಯ ಪ್ರತೀಕಾರವನ್ನು ಅಹಿಂಸೆಯಿಂದ ಮಾಡಬೇಕ, ದುರುಕ್ತಿಗಳನ್ನು ಸದುಕ್ತಿಗಳಿಂದ ಪ್ರತಿಭಟಿಸಬೇಕ ಅಂದರೆ ಮಾತ್ರ ಲೋಕಕ್ಕೆ ಕ್ಷೇಮವುಂಟು ಸಕಲರೂ ಈ ತತ್ವದಿಂದ ಈ ತತ್ವದಂತೆಯೇ ನಡೆಸಿದ ವ್ಯವಹಾರಗಳಿಂದ ಕ್ಷೇಮ ಹೊಂದುತ್ತಾರೆ ರಾಷ್ಟ್ರೀಯ ಸಭೆಯ ಅನೇಕ ಅಭಿಮಾನಿಗಳಲ್ಲಿ ಸಹನಶೀಲತೆಯ ಕೊರತೆಯುಂಟು ಇದನ್ನು ತೋರಿಸಿಕೊಟ್ಟ ರಾಷ್ಟ್ರೀಯ ಸಭೆಯವರಿಗೆ ಆತ್ಮನಿರೀಕ್ಷಣೆ ಮಾಡಹಚ್ಚಿದ ಬಗ್ಗೆ ಶ್ರೀ ಹೆಗಡೆಯವರಿಗೂ ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದವರಿಗೂ ನಾವು ತುಂಬ ಉಪಕೃತರಾಗಿದ್ದೇವೆ

ರಾಷ್ಟ್ರೀಯ ಸಭೆಯ ವಿಜಯಶಾಲಿ ಉಮೇದವಾರರನ್ನು ನಾವು ಇನ್ನೊಮ್ಮೆ ಅಂತಃಕರಣಪೂರ್ವಕ ಅಭಿನಂದಿಸುತ್ತೇವೆ ರಾಷ್ಟ್ರೀಯ ಸಭೆಯವರು ಅವರಿಂದ ಘನವಾದ ಸೇವೆಯನ್ನು ಅಪೇಕ್ಷಿಸುತ್ತಾರೆ ನಮ್ಮ ಜಿಲ್ಲೆ ಹಿಂದೆ ಪ್ರಸಿದ್ಧವಾದ ಭೂಪ್ರದೇಶವಾಗಿತ್ತು ಹೈದರಲ್ಲಿಯು ಹೊನ್ನಾವರದ ತನಕ ಬಂದಿದ್ದನು, ಬಿಳಗಿಯಲ್ಲಿ ರಾಣಿಯ ವಾಸವಿತ್ತು, ಗೇರಸಪ್ಪೆಯೊಳಗೆ ರಾಣಿಯ ರಾಜ್ಯವಿತ್ತು ಬನವಾಸಿ ಪಾವನದ ಸ್ಥಳವಾಗಿತ್ತು, ಅಂಕೋಲೆ ಮಿರ್ಜಾನಗಳಲ್ಲಿ ದೊಡ್ಡ ದೊಡ್ಡ ಕೋಟೆಗಳಿದ್ದವು, ಜನನಿಬಿಡವಾದ ಪ್ರದೇಶವಾಗಿತ್ತು ಇನ್ನೂ ಬಹಳೆಡೆ ದಟ್ಟಡವಿಯಲ್ಲಿ ಹಾಳುಬಿದ್ದ ಗ್ರಾಮಗಳ, ನೆಲಸಮವಾದ ದೇವಾಲಯಗಳ ಹೂಳಿದು ಹೋದ ಕೆರೆಗಳ ಅವಶೇಷಗಳು ಕಂಡುಬರುತ್ತಿವೆ ಆರಿಸಿ ಬಂದ ಉಮೇದವಾರರು ಈಗ ಲೋಕಸೇವೆಯ ದೀಕ್ಷೆ ಪಡೆದ ಮಹಾನುಭಾವರು ಇವರಿಂದ ತಮ್ಮ ಉದ್ಧಾರವಾಗುವದೆಂದು ಜನರು ಎಣಿಸಿ ಉಲ್ಲಾಸದಿಂದಲೂ ಅಭಿಮಾನದಿಂದಲೂ ಇವರಿಗೆ ಮತ ಕೊಟ್ಟಿರುತ್ತಾರೆ ಇವರು ಗ್ರಾಮಗ್ರಾಮಾಂತರಗಳಲ್ಲಿ ಸಂಚರಿಸಿ, ತುತ್ತು ಕೂಳಿಗೆ ತುಟ್ಟಿಯಾದ ಬಡಬಗ್ಗರೊಡನೆ ಸಖ್ಯ ಬೆಳೆಸಿ, ಅವರ ಕೊರತೆಗಳನ್ನು ತಿಳಕೊಂಡು ಅವರೆಲ್ಲರ ಜೀವನ ಸುಧಾರಿಸಿ ಅಂದಗೊಳಿಸಲು ಪ್ರಯತ್ನಿಸಬೇಕಾಗಿ ನಮ್ಮ ವಿನಂತಿಯುಂಟು ಮಹಾತ್ಮರು ನುಡಿದಂತೆ ಕಾನೂನ ಮಂಡಳಗಳಲ್ಲಿ ಸೇರುವದರಿಂದ ಲೋಕಸೇವೆಯಾಗುವದು ತೀರ ಕಡಿಮೆ ರಾಷ್ಟ್ರೀಯ ಸಭೆಯು ಬೇಗನೆ ಸರಕಾರವಾಗಿ ಪರಿಣಮಿಸಲಿರುವದರಿಂದ ಅಲ್ಲಲ್ಲಿಯ ಸಭಾಸದರು ತಮ್ಮ ತಮ್ಮ ಪ್ರದೇಶಗಳ ಪರಿಸ್ಥಿತಿಯ ಅಭ್ಯಾಸ ಮಾಡಿ, ಕಾಲೋಚಿತ ಲೋಕೋದ್ಧಾರದ ಯೋಜನೆಗಳನ್ನು ಕೈಕೊಂಡು ಹೀನ ದೀನರ ದುರ್ದೆಸೆಯನ್ನು ಹೋಗಲಾಡಿಸಬೇಕು ದೀನ ದುರ್ಬಲರ ರಕ್ಷಣೆ-ಪಾಲನೆ-ಪೋಷಣೆಗಳಿಗಾಗಿ ರಾಷ್ಟ್ರೀಯ ಸಭೆಯ ಸತತೋದ್ಯೋಗ ಆದರಿಂದಲೇ ರಾಷ್ಟ್ರೀಯ ಸಭೆಗೆ ವಿಜಯವಾಗಲೆಂದು ನಾವು ಹರಸುತ್ತೇವೆ

ಸ್ಥಾನಿಕ ವೃತ್ತಾಂತ.

ಕುಮಟಾ— ಬಹಳ ಠರಾವಾಗುತ್ತಿದೆ

ಕಳೆದ ಮಂಗಳವಾರ ಸಂಜೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕರ್ನಾಟಕ ಸಂಘದ ವಿದ್ಯಮಾನ ಜಿಲ್ಲಾ ನ್ಯಾಯಾಧೀಶ ರಾ|| ಸಿ ಎಚ್ ಗುಂಜಾಳ ಇವರ ಭಾಷಣ ನಡೆಯಿತು ಗಿಬ್ಬ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿರುವ ರಾ|| ವೈಕುಂಠ ಪ್ರಭು ಇವರು ಅಧ್ಯಕ್ಷತೆ ವಹಿಸಿದ್ದರು ರಾ ಗುಂಜಾಳರು ಹಲವಾರು ಪ್ರಾಂತ, ಸಂಸ್ಥಾನಗಳಲ್ಲಿ ಹರಿದು ಹಂಚಿಹೋದ ಕರ್ನಾಟಕದ ಹೀನ ದೀನ ಸ್ಥಿತಿಯನ್ನು ಬಣ್ಣಿಸಿ ಕರ್ನಾಟಕಸ್ಥರೆಲ್ಲರೂ ಕನ್ನಡ ನುಡಿಯ ಹಾಗೂ ಕನ್ನಡ ನಾಡಿನ ಅಭಿಮಾನ ಹಿಡಿದು ಪ್ರಾಂತದ ಏಳಿಗೆಗಾಗಿ ದುಡಿಯಬೇಕಾಗಿ ಬೋಧಿಸಿದರು ಹೊಸ ರಾಜ್ಯಘಟನೆಯಲ್ಲಿ ಕರ್ನಾಟಕವು ಪ್ರತ್ಯೇಕ ಪ್ರಾಂತವಾಗಲಿರುವದರಿಂದ ಆ ಪ್ರಾಂತದ ರಾಜಭಾಷೆ ಕನ್ನಡವಾಗಲಿರುವದರಿಂದ ಕನ್ನಡವು [illegible]ರಾಗಿರುವ ಜನರು ಕೂಡ ಕನ್ನಡವನ್ನು ಕಲಿತು ಅದರ ಉತ್ಕರ್ಷಕ್ಕಾಗಿ ದುಡಿಯಬೇಕಾಗಿ ಅವರು ತಿಳಿಸಿದರು

ಇಂದು ಎಲ್ಲೆಲ್ಲಿಯೂ ಮುನಸಿಪಾಲ್ಟಿನ ಸ್ಥಳಗಳ ಚುನಾವಣೆಗಳಾಗಲಿವೆ ಎಲ್ಲ. ಈ ಚುನಾವಣೆಗಳು ಬಹಳ ತುರುಸಿನಿಂದ ನಡೆದಿವೆ ಅವುಗಳಿಂದ ದಂಗೆ, ಪುಂಡೆ, ಗೊಂದಲಗಳು ಆಗದಂತೆ ಸಾರ್ವಜನಿಕ ಸುವ್ಯವಸ್ಥೆಯ ಉಪಾಯಗಳನ್ನು ಕೈಕೊಂಡಿದ್ದಾರೆ ನಮ್ಮ ಜಿಲ್ಲೆಯ ಜಿಲ್ಲಾಧಿಪರು ಕೂಡ ಕ್ರಿಮಿನಲ್ ಪ್ರೊಸೀಜರ ಕೋಡಿನ ೧೪೪ನೇ ಕಲಮಿನನ್ವಯ ಹುಕುಮನ್ನು ಹೊರಡಿಸಿ ಚುನಾವಣೆಯಾಗುವ ಸ್ಥಳಗಳಲ್ಲಿ ಜನರು ಗುಂಪುಗೂಡಬಾರದೆಂದು ಮುಂದಾಗಿ ವಿಧಿಸಿದ್ದಾರೆ

ಕಲ್ಲಮ್ಮ ಕೋಮ [illegible] ಖಟ್ಲೆಯ ತೀರ್ಪು ಮಂಗಳವಾರ ಮಧ್ಯಾಹ್ನ ಕೊಡಲ್ಪಟ್ಟಿತು ನ್ಯಾಯಾಧೀಶ ರಾ|| ಗುಂಜಾಳರವರು ೧ನೇ ಆರೋಪಿ ಶಂಕರ ಗಾಣಿಗನೊಬ್ಬನೇ ಇಂ ಪಿ ಕೋಡಿನ ೩೦೨ನೇ ಕಲಮಿನನ್ವಯ (ನರಹತ್ಯೆ ಮಾಡಿದ) ಆಪಾದನೆಯಲ್ಲಿ ಅಪರಾಧಿಯೆಂದು ತೀರ್ಮಾನಿಸಿ ಅವನಿಗೆ ೫ ವರ್ಷಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ ಇನ್ನುಳಿದ ಆರೋಪಿಗಳು ೩೨೫ನೇ ಕಲಮಿನಂತೆ (ನೋವುಗೊಳಿಸಿದ್ದು) ಮಾತ್ರ ತಪ್ಪಿತಸ್ಥರೆಂದು ನಿರ್ಣಯಿಸಿ, ೨ ೩ನೆಯವರಿಗೆ ಮೂರು ತಿಂಗಳ ಕಠಿಣ ಶಿಕ್ಷೆಯನ್ನೂ ಕಲೆಕ್ಟರ ೪ನೇ ಆರೋಪಿಗೆ ೨ ತಿಂಗಳ ಸಾದಾ ಶಿಕ್ಷೆಯನ್ನೂ ವಿಧಿಸಿದ್ದಾರೆ

ಪ್ರಾಥಮಿಕ ಶಿಕ್ಷಕರ ಸಂಪು ದಿನೇ ದಿನೇ ಹಬ್ಬುತ್ತ ಹೋದದ್ದು ಕಂಡು ಜಿಲ್ಲಾ ಶಾಲಾ ಬೋರ್ಡಿನವರು ಮಾಡಿಕೆಗಿಂತ ೧೧ ತಿಂಗಳು ಮುಂಚೆಯೇ ಅಂದರೆ ತಾ ೨೬-೩-೧೯೪೬ರಿಂದಲೇ ಜಿಲ್ಲೆಯೊಳಗಿನ ಎಲ್ಲ ಶಾಲೆಗಳಿಗೆ ಬೇಸಿಗೆಯ ರಜೆಯನ್ನು ಕೊಟ್ಟಿದ್ದಾರೆ! ಆದರಿಂದ ಎಷ್ಟು ಶಿಕ್ಷಕರು ಸಂಪಿನಲ್ಲಿ ಸೇರಿದರು ಮತ್ತು ಎಷ್ಟು ಶಾಲೆಗಳನ್ನು ಮುಚ್ಚುವ ಪ್ರಸಂಗ ಬಂತು ಎಂಬುದು ತಿಳಿಯದಂತಾಗಿದೆ ಸಂಪಿಗೆ ಸೇರಿದ ಇಲ್ಲಿಯ ಮರಾಠಿ ಹೆಣ್ಣುಮಕ್ಕಳ ಶಾಲೆಯ ಶಿಕ್ಷಕಿಯರು, ತಮ್ಮ ಸಂಪಿನಿಂದ ಹುಡುಗಿಯರ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದೆಂಬ ವಿಚಾರದಿಂದ, ಶ್ರೀ ವೆಂಕಟರಮಣ ದೇವಸ್ಥಾನದ ಅಟ್ಟದ ಮೇಲೆ ವರ್ಗಗಳನ್ನು ತೆರೆದಿದ್ದಾರೆ ಸಂಪಿಗೆ ಸೇರಿದ ಎಲ್ಲ ಶಿಕ್ಷಕರೂ ಈ ಮಾದರಿಯನ್ನು ಅನುಸರಿಸಿ ತಮ್ಮ ಬಗ್ಗೆ ಜನತೆಯಲ್ಲಿರುವ ಸಹಾನುಭೂತಿಯನ್ನು ಬೆಳೆಸಿಕೊಳ್ಳಬೇಕಾಗಿ ಸೂಚನೆಯಿದೆ

ಚಂದಾವರ ಗ್ರಾಮದ ನೆರೆಹೊರೆಯಲ್ಲಿ ಹುಲಿ-ಹಾವಳಿ ಪ್ರಾರಂಭವಾದ ಸುದ್ದಿಯುಂಟು ಹಲವಾರು ದನಗಳನ್ನು ಹುಲಿಯು ಕೊಂದು ಹಾಕಿದೆಯಂತೆ ಈ ಹಾವಳಿ ನಿಲ್ಲಿಸಲು ಅಧಿಕಾರಿಗಳಿಂದ ಸಾಧ್ಯವಿಲ್ಲ' ಹಾವಳಿ ನಿಲ್ಲಿಸಲು ಸಮರ್ಥರಿರುವ ಸ್ಥಾನಿಕ ಬೇಟೆಗಾರರಿಗೆ ಬೇಟೆಯ ಪರವಾನಿಗಿ ಕೊಡಲಿಕ್ಕೂ ಅವರು ಸಿದ್ಧರಿಲ್ಲ!!

ದಕ್ಷಿಣ ಕನ್ನಡ ಜಿಲ್ಲೆಯವರೊಬ್ಬರು ಕಳೆದ ವಾರ ಈ ಕಡೆ ಬಂದಾಗ ಇಲ್ಲಿಯ ಅಕ್ಕಿಯ ಧಾರಣೆಗಳನ್ನು ನೋಡಿ ಬಹಳ ವಿಸ್ಮಯಗೊಂಡರು ಅವರ ಜಿಲ್ಲೆಯಲ್ಲಿ ಸೀಧಾ ಕ್ಷೇತ್ರ, ಸೀಧೇತರ ಕ್ಷೇತ್ರ ಎಂಬ ಭೇದಭಾವಗಳಿಲ್ಲವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೆಲ್ಲ ದೊಡ್ಡಕ್ಕಿ ರೂ ೧ಕ್ಕೆ ೪ ಸೇರು (೮೦ ತೊಲೆಗಳದು) ಗಳಂತೆ ಮತ್ತು ಸಣ್ಣಕ್ಕಿ ೩ ಸೇರುಗಳಂತೆ ಮಾರಲ್ಪಡುತ್ತದಂತೆ ಅಂದರೆ ದೊಡ್ಡಕ್ಕಿಯ ಮುಡಿ (ನಮ್ಮಲ್ಲಿಯ ಮಾನಗಿ) ೧ಕ್ಕೆ ರೂ ೧೦|| ಮತ್ತು ಸಣ್ಣಕ್ಕಿಯ ಮುಡಿ ೧ಕ್ಕೆ ರೂ ೧೪ ಬೀಳುತ್ತದೆ ಅದೇ ನಮ್ಮಲ್ಲಿ ದೊಡ್ಡಕ್ಕಿಯ ಮುಡಿ ೧ಕ್ಕೆ (ಸೀಧಾ ಕ್ಷೇತ್ರದಲ್ಲಿ) ರೂ ೧೬। ಮತ್ತು ಸಣ್ಣಕ್ಕಿಯ ಮುಡಿ ೧ಕ್ಕೆ ರೂ ೧೯|| ಕೊಡಬೇಕು! ತಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಯೇ ಇರುವ (ಅಕ್ಕಿ ಬೆಳೆಯುವ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಧಾರಣೆಗಳು ತಮ್ಮಲ್ಲಿಯ ದರದ ಸುಮಾರು ೧|| ಪಟ್ಟಿನಷ್ಟು ಇದ್ದದ್ದು ತೀರ ವಿಚಿತ್ರವೆಂದು ಅಭ್ಯಾಗತರ ಅಭಿಪ್ರಾಯವಾಯಿತು. ಇಲ್ಲಿಯ ದರಗಳು ಸುಲಿಗೆಯ ದರಗಳೆಂದು ಅವರ ಮತವುಂಟು

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಯಜ್ಞಕ್ಕೆ ಪ್ರಾರಂಭವಾಗಿದೆ

ಕಾರವಾರ— (ತಾ ೨೦-೩-೪೬) ಈ ಹೊತ್ತು ಜಿಲ್ಲಾಧಿಪರ ಕಚೇರಿಯಲ್ಲಿ ಮತಗಣನೆಯಾಯಿತು ಜಿಲ್ಲಾಧಿಪರಾದ ರಾ|| ಫತ್ತೇಸಿಂಗ ರಾಣಾರವರು ಸರಿಯಾಗಿ ಬೆಳಗಿನ ೮ ಘಂಟೆಗೆ ಮತಪೆಟ್ಟಿಗೆಗಳನ್ನು ಒಡೆಯಲು ಆಜ್ಞಾಪಿಸಿದ

ಕಾನಡಾ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘ, ಹೆಡ್ ಆಫೀಸು - ಅಂಕೋಲಾ

ನೋಟೀಸು

ತಾರೀಖು ೩೧-೩-೪೬ನೇ ರವಿವಾರ ಮಧ್ಯಾಹ್ನ ೩ ಘಂಟೆಗೆ ಶಿಕ್ಷಕ [illegible] ಮುಖ್ಯ ಕಚೇರಿಯಲ್ಲಿ ಜಿಲ್ಲಾ ಸಂಘದ ವಿಶೇಷ ಸಾಮಾನ್ಯ ಸಭೆ ಇಟ್ಟಿದೆ ಕಾರಣ ಎಲ್ಲ ಸದಸ್ಯರು ಬರಬೇಕಾಗಿ ವಿನಂತಿ

ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು (೧) ಸಂಪು ಪೂರ್ಣ ಯಶಸ್ವಿ ಮಾಡುವ ಬಗ್ಗೆ ಕೈಕೊಳ್ಳಬೇಕಾದ ಉಪಾಯಗಳು (೨) ಸಂಪಿನಲ್ಲಿ ಸೇರಿದ ಶಿಕ್ಷಕ ಶಿಕ್ಷಕಿಯರಿಗೆ ಆರ್ಥಿಕ ಸಹಾಯ ಮಾಡುವದು

ಅಂಕೋಲಾ
ತಾ ೧೯-೩-೧೯೪೬

ಪ ಕೃ ಶೆಟ್ಟಿ,
ಉಪಾಧ್ಯಕ್ಷ

Notice to Motor Owners in the Karnatak Region.

Owners of Motor Vehicles residing in the Karnatak Region are informed that tax for one or more quarters during the ensuing financial year commencing from 1-4-1946 has to be paid so as to reach this office on or before 15-4-1946 in respect of Motor Vehicles bearing regional registration marks and on or before 30-3-1946 (31st being Sunday) in respect of vehicles registered elsewere respectively. Tax should be paid in cash, crossed cheques drawn on the Imperial Bank of India Belgaum only, Chalans or by Money Orders at the Regional Transport Office, Belgaum between 10-30 A. M. and 2-30 P. M. on week days and between 9-30 A. M. and 11-00 A. M. on Saturdays.

2. Payment of tax should be accompanied by (i) Registration Certificates of Vehicles and (ii) Valid Insurance Policies in the case of heavy Transport Vehicles viz. Goods Vehicles and Pessengers Buses.

3. Non use intimations of vehicles which are kept idle should be submitted before the date on which tax tokens already issued for such vehicles expire as required by Rule 26 of the B. M. V. Tax Rules 1940.

Regional Transport Office
Belgaum 15-3-1946

J. B. RABBITT.
Regional Transport Officer
Karnatak Region Belgaum

ದು ೬೦ ರಷ್ಟು ಕಾರಕೂನರು ಈ ಕೆಲಸಕ್ಕೆ ತೊಡಗಿದ್ದರು ಕಾರಕೂನರ ಕೆಲಸದ ಮೇಲ್ವಿಚಾರಕ್ಕೆ ೧೦ ಮಂದಿ ಮೇಲ್ವಿಚಾರಕರನ್ನು ನೇಮಿಸಲಾಗಿತ್ತು. ಮೊದಲು ಮತಪೆಟ್ಟಿಗೆಗಳನ್ನು ಒಡೆದು, ಎಲ್ಲ ಮತ-ಪತ್ರಿಕೆಗಳನ್ನು ರಾಶಿ ಹಾಕಿ ಬೆರಸಿದರು ಆಮೇಲೆ ೧೦೦-೧೦೦ ಪತ್ರಿಕೆಗಳ ಕಟ್ಟುಗಳನ್ನು ಮಾಡಿದರು. ಇಷ್ಟಾಗುವ ವರೆಗೆ ಮಧ್ಯಾಹ್ನದ ೧೨ ಘಂಟೆ ಬಡಿಯಿತು ಕಾರಕೂನರು ಮತಪತ್ರಿಕೆಗಳ ಕಟ್ಟುಗಳನ್ನು ಮಾಡುತ್ತಿದ್ದಾಗ ಮೇಲಿಂದ ಮೇಲೆ ನೋಡಿದವರಿಗೆ ಕಾಂಗ್ರೆಸ ಉಮೇದವಾರರು ಪ್ರಚಂಡ ಬಹುಮತದಿಂದ ಆರಿಸಿ ಬರುವರೆಂದು ತಿಳಿದಿತ್ತು. ಹಾಗೆ ತೆಗೆದ ಮತಪತ್ರಿಕೆಯ ಮೇಲೆ ರಾಷ್ಟ್ರೀಯ ಸಭೆಯ ಉಮೇದವಾರರಿಗೇ ಮತದ ಗುರುತುಗಳು ಬಿದ್ದದ್ದು ಕಂಡು ಬರುತ್ತಿತ್ತು. ೧೦೦ರಲ್ಲಿ ೧ ಪತ್ರಿಕೆಯ ಮೇಲಷ್ಟೇ ಕಾಂಗ್ರೆಸ್ಸೇತರರಿಗೆ ಮತ ಬಿದ್ದದ್ದು ಕಾಣುತ್ತಿತ್ತು. ಅದರಿಂದ ಮಧ್ಯಾಹ್ನದ ಹೊತ್ತಿಗೇ ಪರಿಣಾಮದ ಬಗ್ಗೆ ಇರುವ ಕುತೂಹಲ ಅಂದು ಹೋಗಿತ್ತು. ಎಣಿಕೆಯ ಕಾಲಕ್ಕೆ ನಾಲ್ಕು ಉಮೇದವಾರರೂ ಅವರ ಪ್ರತಿನಿಧಿಗಳೂ ಹಾಜರಿದ್ದರು ೧೨ ಘಂಟೆಯ ಸುಮಾರಿಗೆ ಮತಗಳ ಎಣಿಕೆಗೆ ಪ್ರಾರಂಭವಾಯಿತು ೧-೧ ಪೆಟ್ಟಿಗೆಯ ಮತಗಳು ಎಣಿಸಲ್ಪಟ್ಟವು ಸುಮಾರು ೪ ಘಂಟೆಗೆ ಮತಗಳ ಎಣಿಕೆ ಮುಗಿಯಿತು. ಎಲ್ಲ ಪೆಟ್ಟಿಗೆಗಳೊಳಗಿನ ಮತಗಳ ಎಣಿಕೆಯಾಗಿ, ಪರಿಣಾಮ ಜಾಹೀರ ಆಗಲು ೫ ಘಂಟೆಯಾಯಿತು ಶ್ರೀ ಶಾಸ್ತ್ರಿಯವರಿಗೆ ೩೫೮೬೪, ಶ್ರೀ ಗಾಂವಕಾರರಿಗೆ ೩೦೨೪೪, ಶ್ರೀ ಪ್ರಭುರವರಿಗೆ ೨೭೬೧೮ ಮತಗಳು ದೊರೆತು ಮೂವರೂ ಆರಿಸಿ ಬಂದರೆಂದೂ ಶ್ರೀ ಹೆಗಡೆಯವರಿಗೆ ಬರೇ ೧೩೬೫ ಮತಗಳು ಬಿದ್ದಿದ್ದರಿಂದ ಅವರ ಡಿಪಾಜಿಟು ಸರಕಾರ ಜಮಾ ಆಯಿತೆಂದೂ ಜಿಲ್ಲಾಧಿಪರು ಜಾಹೀರಪಡಿಸಿದರು ಶ್ರೀ ಹೆಗಡೆಗೆ ಇಷ್ಟು ಮತ ಸಿಕ್ಕಿದ್ದಾದರೂ ಆಶ್ಚರ್ಯವೆಂದು ಕೆಲವರು ಉದ್ಗರಿಸಿದರು ಘಟ್ಟದಲ್ಲೂ ಕಾರವಾರದಲ್ಲೂ ಕೆಲವು ಕಾಂಗ್ರೆಸ ವಿರೋಧಿಗಳು ಅವರಿಗೆ ಮತ ಕೊಟ್ಟಿರಬೇಕಂತೆ ೨೦೮ ಮತಗಳು ರದ್ದಾದವು

ಮೆಟ್ರಿಕ್ ಪರೀಕ್ಷೆಗೆ ನಿನ್ನೆಯಿಂದ ಆರಂಭವಾಗಿದೆ ಇಲ್ಲಿಯ ಕೇಂದ್ರದಲ್ಲಿ ೪೨೦ ವಿದ್ಯಾರ್ಥಿಗಳು ಕೂತಿದ್ದಾರೆ

ಕೃತಜ್ಞತಾ ನಿವೇದನ.

ಮೊನ್ನೆಯ ಎಸೆಂಬ್ಲಿ ಚುನಾವಣೆಯೊಳಗೆ ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ದೊರೆತ ಯಶಸ್ಸು ಈಗ ಸರ್ವಶ್ರುತವಿದೆ ಕಾಂಗ್ರೆಸ್ಸಿನ ಆಜ್ಞೆಯಂತೆ ಈ ಚುನಾವಣೆಯಲ್ಲಿ ಹುರಿಯಾಳಾಗಿ ನಿಂತು ಹೋರಾಡುವದು ನಮ್ಮ ಪವಿತ್ರ ಕರ್ತವ್ಯವಾಯಿತು ನಮ್ಮ ಜಿಲ್ಲೆಯ ಕಾಂಗ್ರೆಸನಿಷ್ಠೆಯು ಎಂದೆಂದಿಗೂ ಉಜ್ವಲವಾಗಿರುವದು ಆದರೆ ಸ್ವಲ್ಪ ಅವಧಿಯಲ್ಲಿ ಜನತೆಯಲ್ಲಿದ್ದ ಈ ನಿಷ್ಠೆಯನ್ನು ಸುವ್ಯವಸ್ಥಿತವಾಗಿ ಸಂಘಟಿಸಿ ಕಾರ್ಯಪ್ರವೃತ್ತ ಮಾಡಲು ಆಯಾ ತಾಲೂಕ-ಪ್ರಮುಖರೂ ಜಿಲ್ಲೆಯ ನಿಷ್ಠಾವಂತ ಕಾರ್ಯಕರ್ತರೂ ಹಗಲು-ರಾತ್ರಿಯೆನ್ನದೆ ದುಡಿಯದಿದ್ದರೆ, ಇಷ್ಟು ಪ್ರಚಂಡ ವಿಜಯ ನಮಗೆ ಸಿಗುತ್ತಿದ್ದಿಲ್ಲ ಈ ಕಾರ್ಯದಲ್ಲಿ ಜಿಲ್ಲೆಯ ರಾಷ್ಟ್ರಸೇವಾ ದಳದ ಸ್ವಯಂಸೇವಕರು ಸಲ್ಲಿಸಿದ ಸೇವೆ ವಿಶೇಷ ಪ್ರಶಂಸನಾರ್ಹವಿದೆ ಮತದಾರರೂ ಸಹ ವಾಹನಾದಿ ಸೌಲಭ್ಯಗಳ ನಿರೀಕ್ಷೆ ಮಾಡದೆ, ಕೇವಲ ಕಾಂಗ್ರೆಸ ಪ್ರೇಮದಿಂದ ಪ್ರೇರಿತರಾಗಿ ಮತದಾನದ ಪವಿತ್ರ ಕರ್ತವ್ಯವನ್ನು ನೆರವೇರಿಸಿದ್ದುಂಟು ಅಲ್ಲಲ್ಲಿಯ ಮುಂದಾಳುಗಳು ಸ್ಥಾನಿಕ ಪೆಟ್ಟ ಠಾಣೆ ನಡೆಸಿ ಕಾರ್ಯವನ್ನು ಸುಗಮ ಮಾಡಿಕೊಟ್ಟಿದ್ದುಂಟು ಈ ಪ್ರಕಾರ ಸರ್ವ ಬಗೆಯಿಂದ ದುಡಿದು ನೆರವಾದವರಿಗೆಲ್ಲ ವ್ಯಕ್ತಿಶಃ ಭೆಟ್ಟಿಯಾಗಿ ಕೃತಜ್ಞತೆ ಸಲ್ಲಿಸುವದು ಶಕ್ಯವಿಲ್ಲ ಆದ್ದರಿಂದ ನಾವು ಈ ಮೂಲಕ ಎಲ್ಲ ಕಾರ್ಯಕರ್ತರಿಗೂ ಮುಂದಾಳುಗಳಿಗೂ, ಜನತೆಗೂ, ಸ್ವಯಂಸೇವಕರಿಗೂ ಸೇವಾದಳಗಳ ಸೈನಿಕ ಸೈನಿಕೆಯರಿಗೂ ನಮ್ಮ ಹಾರ್ದಿಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ

ಹಾಗೂ ನಮ್ಮೆಲ್ಲರ ಅಧಿದೈವತವಾದ ಕಾಂಗ್ರೆಸ ಸಂಸ್ಥೆಯ ಆಜ್ಞೆ-ಆದೇಶಗಳಂತೆ ನಡೆಯುತ್ತ ರಾಷ್ಟ್ರಸೇವೆಯನ್ನೂ ಜಿಲ್ಲೆಯ ಸೇವೆಯನ್ನೂ ಮಾಡುವದರಲ್ಲಿ ಮನವಿಟ್ಟು ದುಡಿದು, ತಾವೆಲ್ಲರೂ ನಮ್ಮ ಮೇಲಿಟ್ಟ ಈ ಪ್ರೇಮ ವಿಶ್ವಾಸಗಳಿಗೆ ಪಾತ್ರರಾಗಲು ನಾವು ಸರ್ವ ಪ್ರಯತ್ನ ಮಾಡುವೆವೆಂದು ಆಶ್ವಾಸನೆ ಕೊಡುತ್ತೇವೆ

ಹೊನ್ನಾವರ, ತಮ್ಮ ವಿಧೇಯ,
ತಾ ೨೪-೩-೪೬. ಶಿವರಾವ ಶಿವರಾಮ ಶಾಸ್ತ್ರಿ
ಸಣ್ಣಪ್ಪ ಪರಮೇಶ್ವರ ಗಾಂವಕಾರ
ರಾಮಚಂದ್ರ ಮುಕುಂದ ಪ್ರಭು

ಅಂಕೋಲಾ— (ತಾ ೯-೩-೪೬) ಜಿಲ್ಲಾ ಪ್ರಾ॥ ಶಿಕ್ಷಕ ಸಂಘದ ಅಧ್ಯಕ್ಷರು ಬರೆಯುತ್ತಾರೆ - ಈ ವರೆಗೆ ೧೦೦ ಮಂದಿ ಶಿಕ್ಷಕರು ಸಂಪಿನಲ್ಲಿ ಸೇರಿದ್ದಾರೆ ದಿನಾಲೂ ಹೆಚ್ಚೆಚ್ಚು ಮಂದಿ ಸೇರುತ್ತಿದ್ದಾರೆ ಸಂಪ್ರಾರಂಭಕ್ಕೆ ಜನತೆಯ ಬೆಂಬಲವುಂಟು ಏ ಓ ರವರು ತಮ್ಮ ಧನಿಕ ಮಿತ್ರರ ಸಂಪಿಗೆ ಸೇರದ ಶಿಕ್ಷಕ ಶಿಕ್ಷಕಿಯರ ಆವರಣದಲ್ಲಿ ಶಾಲೆಗಳನ್ನು ನಡೆಸಲು ಪ್ರಯತ್ನಿಸುತ್ತಿರುವಂತೆ ಕಂಡಿದೆ ಸಂಪಿನ ಕಾಲಾವಧಿಯ ವಿದ್ಯಾರ್ಥಿಗಳ ಕಷ್ಟವನ್ನು ಪರಿಹರಿಸಬೇಕು ಸಂಪಿನಲ್ಲಿ ಸೇರಿದವರ ಸ್ಥಳಗಳಲ್ಲಿ ಹೊರಗಿನ ನೇಮಣೂಕಿಗಳಾಗುವ ಸಂಭವವುಂಟು ಈ ಹೊಸಬರನ್ನು ವಿದ್ಯಾರ್ಥಿಗಳೂ ಜನತೆಯೂ ಬಹಿಷ್ಕರಿಸಿ ಸಂತ್ರಸ್ತ ಶಿಕ್ಷಕರಿಗೆ ಸಹಾಯ ಸಹಾನುಭೂತಿಗಳನ್ನು ನೀಡಬೇಕಾಗಿ ಅರಿಕೆಯಿದೆ ಸಂಪಿನಲ್ಲಿ ಸೇರಿದ ಶಿಕ್ಷಕರಾದವರೂ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಬೇಕಾಗಿದೆ ಇತ್ಯಾದಿ

(ತಾ ೨೧-೩-೧೯೪೬) ನಮ್ಮ ಉತ್ತರ ಕರ್ನಾಟಕದ ೪ ಜಿಲ್ಲೆಗಳಲ್ಲಿ ಒಟ್ಟು ೩೪೦೭ ಪ್ರಾಥಮಿಕ ಶಿಕ್ಷಕರಿದ್ದಾರೆ ಅವರಲ್ಲಿ ತಾ ೧೫-೩-೧೯೪೬ರ ವರೆಗೆ ೩೬೪೭ ಶಿಕ್ಷಕರು ಸಂಪಿನಲ್ಲಿ ಸೇರಿರುವರು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೬೯೨ ಶಿಕ್ಷಕರಲ್ಲಿ ೨೧೮ ಅಂದರೆ ಸುಮಾರು ಒಂದು ಮೂರಾಂಶದಷ್ಟು ಶಿಕ್ಷಕರು ಸಂಪಿನಲ್ಲಿ ಸೇರಿದ್ದಾರೆ

ಮುಂಬಯಿ ಪ್ರಾಂತಿಕ ಪ್ರಾಥಮಿಕ ಶಾ. ಶಿಕ್ಷಕರ ಸಂಘದ ಅಧ್ಯಕ್ಷರಾಗಿರುವ ಶ್ರೀಮಾನ್ ಪರಮೇಶ್ವರ ವಾಸುದೇವ ಪೆಂಡಸೆಯವರು ಇದೇ ಬರುವ ತಾ ೩೦ಕ್ಕೆ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಚರಿಸುವವರಿದ್ದಾರೆಂದೂ ಎಲ್ಲ ಶಿಕ್ಷಕರೂ ನಾಗರಿಕರೂ ಅವರ ಈ ಭೆಟ್ಟಿಯ ಲಾಭ ತೆಗೆದುಕೊಳ್ಳಬೇಕೆಂದಲೂ ಜಿಲ್ಲಾ ಪ್ರಾ॥ ಶಿ॥ ಸಂಘದ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ

ಕಾಂಗ್ರೆಸ ಪ್ರತಿನಿಧಿಗಳ ಚುನಾವಣೆ ಇದೇ ಬರುವ ತಾ ೧೨-೪-೪೬ಕ್ಕೆ ಜರುಗಲಿದೆ ಆ ಬಗ್ಗೆ ನಾಮಪತ್ರಗಳನ್ನು ತಾ ೨೬-೩-೪೬ರ ಸಂಜೆಯವರೆಗೆ ಸ್ವೀಕರಿಸುವರು ಈ ಚುನಾವಣೆಯ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಶ್ರೀ ಗಣಪತಿ ವಾಮನ ಕಾಮತ ಇವರಿಗೆ ರಿಟರ್ನಿಂಗ ಆಫೀಸರ (ಚುನಾವಣಾ ಅಧಿಕಾರಿ) ನ್ನಾಗಿ ನೇಮಿಸಿದ್ದಾರೆ

ಶಿರಸಿ— (ತಾ ೨೩-೩-೪೬) ಶ್ರೀ ಗೋಕರ್ಣದ ಶಾಂತೇರಿ ಮಠದ ಮುಖ್ಯಸ್ಥರು ಈಗ ೨ ತಿಂಗಳಿಂದ ಇಲ್ಲಿ ಇದ್ದು ಒಂದು ದಿನ ಮಧ್ಯಾಹ್ನ ಅವರು ಮೋಟಾರ ಮೇಲೆ ನಗರಕ್ಕೆ ಹೋಗಿ ಸಾಯಂಕಾಲ ೪ ರ ಸುಮಾರಿಗೆ ಬಂದರು ಗುರುವಾರ ಪೊಲೀಸಲ್ಲಿಗೆ ಹೋಗಿದ್ದರು ಅಂದು ಸಾಯಂಕಾಲ ಹೋಗುವವರಾದ್ದಾರೆ ಅಲ್ಲಿಂದ ತಿರುಗಿ ಇಲ್ಲಿಗೇ ಬಂದು ಸೋಮವಾರ ಇಲ್ಲವೆ ಮಂಗಳವಾರ ಇಲ್ಲಿಂದ ಯಲ್ಲಾಪುರ, ಕಾರವಾರ ಮಾರ್ಗವಾಗಿ ೧೧ರ ಸುಮಾರಿಗೆ ಮಠಕ್ಕೆ ತಲ್ಪುವರು

ಸಿದ್ದಾಪುರ— (ತಾ ೧೫-೩-೪೬) ಹಾರ್ಸಿಕಟ್ಟೆ ಸೀಮೆಯಲ್ಲಿ ಹುಲಿಯ ಕಾಟ ಮೇರೆಮೀರಿದೆ ಹಿಂದೆ ಹುಲಿಗಳು ದನಕರುಗಳ ಫಲಾಹಾರ ಮಾಡಿಯೇ ಸಮಾಧಾನ ಪಡುತ್ತಿದ್ದವು ಆಗ ಅಧಿಕಾರಿಗಳು ಅವುಗಳ ನಿವಾರಣೆಯ ವ್ಯವಸ್ಥೆ ಮಾಡಲಿಲ್ಲ! ಈಗ ಅದರಿಂದ ಅವು ಕೊಬ್ಬಿ ನರಮಾಂಸದ ಫಲಾಹಾರವನ್ನು ಮಾಡಹತ್ತಿವೆ ಕಳೆದವಾರ ೩ ಜನರು ಹುಲಿಗಳಿಗೆ ಆಹಾರವಾಗಿರುವರು ಜಿಲ್ಲಾಧಿಕಾರಿಗಳೂ ಪೋಲೀಸ ಅಧಿಕಾರಿಗಳೂ ಈಗ ಆ ನರಭಕ್ಷಕರ ಸಮಾಚಾರ ತಿಳಿದುಕೊಳ್ಳಲು ಇಲ್ಲಿಗೆ ಓಡಿ ಬಂದಿರುವರು

(ತಾ ೨೦ ೩ ೪೬) ಪೋಲೀಸರ ಉಪದ್ರವ ಹೆಚ್ಚಾಗಿದೆ ನಿನ್ನೆ ರಾತ್ರಿ ಒಬ್ಬರು ಲಗ್ನದ ಬಗ್ಗೆ ಇಲ್ಲಿಂದ ಒಯ್ದು ಪಾತ್ರೆಗಳನ್ನು ತಿರುಗಿ ತಕ್ಕೊಂಡು ಬರುತ್ತಿದ್ದರು ಊರ-ಸಂಚಾರ ಪೋಲೀಸರು ಅವರನ್ನು ತಡೆಗಟ್ಟಿ ಮಾಲಕರು ಬಂದು ಆ ಪಾತ್ರೆಗಳು ತಮ್ಮವೆಂದು ಖಾತ್ರಿ ಮಾಡಿ ಕೊಟ್ಟು ಒಯ್ಯಬೇಕೆಂದು ಹಟ ಹಿಡಿದರು! ರಾತ್ರಿ ೧೦ ಘಂಟೆಯ ನಂತರ ವಸ್ತುಗಳ ಮೇಲೆ ತಿರುಗಾಡಲು ಪ್ರತಿಬಂಧವುಂಟೆಂದೂ ಅವರು ಹೇಳಿದರಂತೆ! ಅಂದು ಹೋಳೀ ಹುಣ್ಣಿವೆ ೪೦೦-೫೦೦ ಜನರು ಮಧ್ಯರಾತ್ರಿಯ ವರೆಗೂ ಊರಲ್ಲಿ ತಿರುಗಾಡುತ್ತಿದ್ದರು ಆ ಜನರು ಈ ಪೋಲೀಸರಿಗೆ ಕಾಣಲಿಲ್ಲವೋ ಏನೋ! ಮೇಲಧಿಕಾರಿಗಳು ಈ ಹೋಳಿ ಪೋಲೀಸರನ್ನು ಅಂಕೆಯಲ್ಲಿಟ್ಟುಕೊಳ್ಳಬೇಕಾಗಿ ಅರಿಕೆಯುಂಟು

ಬನವಾಸಿ— (ತಾ ೧೫-೩-೪೬) ತಾ ೧೨ರಿಂದ ಇಲ್ಲಿಯ ಹಿಂದುಳಿದ ವರ್ಗದವರ ಕನ್ನಡ ಶಾಲೆಯ ಎಲ್ಲ ಶಿಕ್ಷಕರೂ ಸಂಪು ಹೂಡಿದ್ದಾರೆ ಶಿಕ್ಷಕರೂ ವಿದ್ಯಾರ್ಥಿಗಳೂ ಪ್ರಭಾತ ಫೇರಿ ವಗೈರೆ ನಡಿಸಿದ್ದಾರೆ

ಹೊನ್ನಾವರ— (ತಾ ೧೯ ೩-೪೬) ತಾ ೧೩ರಿಂದ ಈ ತಾಲೂಕಿನಲ್ಲೂ ಪ್ರಾ॥ ಶಿಕ್ಷಕರ ಸಂಪಿಗೆ ಪ್ರಾರಂಭವಾಗಿದೆ ಇಲ್ಲಿಯ ಎಲ್ಲ ಕನ್ನಡ ಶಾಲೆಗಳೂ ನಗರಬಸ್ತಿ, ಹೊಸಾಡ, ಬಳಕೂರ, ಅರೆಗುಂಡ ವಗೈರೆ ೧೮ ಶಾಲೆಗಳೂ ಸಂಪೂರ್ಣ ಮುಚ್ಚಲ್ಪಟ್ಟಿವೆ ಅರ್ಧಕ್ಕಿಂತ ಹೆಚ್ಚಿಗೆ ಶಿಕ್ಷಕ-ಶಿಕ್ಷಕಿಯರು ಸಂಪಿನಲ್ಲಿ ಸೇರಿದ್ದಾರೆ

ಹೊನ್ನಾವರ ತಾಲೂಕಿನಲ್ಲೂ ಭಟಕಳ ಪೇಟೆಯಲ್ಲೂ ಸರಕಾರಕ್ಕೆ ದಿನದಷ್ಟು ಜನರು ಉಪ್ಪು ಮಾಡಿ ಉಪ್ಪಿಗೆ ಅಕ್ಕಿ ಆ ಅಕ್ಕಿಯನ್ನು ಬೇಸಿಗೆಯಲ್ಲೇ ಮಾಡಿಟ್ಟುಕೊಳ್ಳಬೇಕು ಅಧಿಕಾರಿಗಳು ಇತ್ತ ಲಕ್ಷ ಕೊಟ್ಟು ಸಾಕಷ್ಟು ಉಪ್ಪಿಗೆ ಅಕ್ಕಿ ಮಾಡಿಕೊಳ್ಳಬೇಕಾಗಿ ಸೂಚನೆ ಇಲ್ಲಿಯ ಭತ್ತ ಸಾಕಾಗದಿದ್ದಲ್ಲಿ ಘಟ್ಟದ ಮೇಲಿಂದ ಕೊಳ್ಳಲಿಕ್ಕೆಯೂ ಭತ್ತ ತರಿಸಿಕೊಳ್ಳಬಹುದು ಈ ಭತ್ತದ ಪೆಟ್ಟಿಗೆ ಅಕ್ಕಿ ಅಷ್ಟು ಒಳಿತಾಗುವದಿಲ್ಲ ಅಕ್ಕಿಯಲ್ಲಿ ನುಚ್ಚೇ ಹೆಚ್ಚಿಗೆ ಬರುತ್ತದೆ

(ತಾ ೭-೩ ೪೬) ಉಪಲೀ ಮಹಾಲಿಂಗ ದೇವಸ್ಥಾನದ ಹಿಂದಿನ ಮೊಕ್ತೇಸರರು ತಮ್ಮ ೧೦-೨೦ ವರ್ಷಗಳ ವಹಿವಾಟಿನಲ್ಲಿ ಏನೂ ಶಿಲ್ಕು ಇಟ್ಟಿದ್ದಿಲ್ಲ ಅವರಿಗೆ ವಹಿವಾಟು ಯಾಂವ ಕಸ್ಟಿ ೨ ವರ್ಷಗಳ ಹಿಂದೆ ಬೇರೊಬ್ಬರಿಗೆ ನೇಮಿಸಿದ್ದರು ಅವರು ಬರೇ ೧॥ ವರ್ಷದ ವಹಿವಾಟಿಯಲ್ಲಿ ೮೦೦ ನೂರು ರೂ ಉಳಿತಾಯ ತೋರಿಸಿದರು ಆದರೂ ಈಗಿನ ಮೊಕ್ತೇಸರರು ಅವರಮೇಲೆ ಒಂದಿಲ್ಲೊಂದು ತಪ್ಪು ಹೊರಿಸುವರೇ ಈಗ ವಹಿವಾಟು ನೋಡುತ್ತಿದ್ದಾರೆ ಇವರ ನ್ಯಾಯದೆಯೇ ಹೆಚ್ಚು! ದೇವರಿಗೆ ಧರ್ಮ (ಕಾಣಿಕೆ) ಕೊಡದೆ ಕೊಟ್ಟವರು ಸಹಿ ಕೊಡಬೇಕಂತೆ! ಹಾಗೆ ಸಹಿ ಕೊಟ್ಟಲ್ಲಿ ಆ ಕಾಣಿಕೆಯೇ ಒಂದು "ಮಾಮೂಲ" ಆಗಿ ಕೊಡ್ರಲಾಗುವದೆಂದು ಹೆದರಿ ಯಾರೂ ಸಹಿ ಕೊಡಲೊಪ್ಪುವದಿಲ್ಲ. ಸಹಿ ಕೊಟ್ಟ ಹೊರತು ಮೊಕ್ತೇಸರರು ಕೇಳುವದಿಲ್ಲ ಹೀಗಾಗಿ ಧರ್ಮ ಕೊಡಬಂದ ಎಷ್ಟೋ ಜನರು ದೇವರಿಗೆ ಧರ್ಮ ಕೊಡದೆ ತಿರುಗಿ ಹೋದರು ಕಾಣಿಕೆ ಹಣ ಭಕ್ತರ ಮುಂದೆ ಎಣಿಸುವದು ಇಲ್ಲಿಯ ರೂಢಿ ಹೊಸ ಮೊಕ್ತೇಸರರು ಆ ರೂಢಿ ಪಾಲಿಸದೆ ಎಲ್ಲ ಹಣ ಎಣಿಸದೆ ಕಿಸೆಯಲ್ಲಿ ಹಾಕಿ ನಡೆದು ಬಿಟ್ಟರು! ಪದ್ಧತಿಯಂತೆ ಇವರು ಸಂಪ್ರೋಕ್ಷಣದ ಕಾರ್ಯದ ಸಿಕ್ಕ ಹಣದ ಖರ್ಚ ಲೆಕ್ಕ ಓದಿ ತೋರಿಸಲಿಲ್ಲ! ಇವರ ಕೈಯಲ್ಲಿ ಶಾರದಾ ಸಿಕ್ಕರೆ ದೇವರು ಬೇಗನೇ ವನವಾಸಕ್ಕೆ ಹೋಗುವ ಪ್ರಸಂಗ ಬರಬಹುದೆಂದು ಅನೇಕ ಭಕ್ತರು ಭೀತಿಗೊಂಡಿದ್ದಾರೆ

ಶ್ರೀ ಗಣೇಶ ವಿಲಾಸ ಹೊಟೆಲ್,
ತಾರೀಬಾಗಿಲು ರಸ್ತೆ, ಕುಮಟಾ.

ನಮ್ಮಲ್ಲಿ ಇದೇ ಬರುವ ತಾ ೮-೪-೪೬ನೇಗೆ ನಡೆಯಲಿರುವ ಮುಲ್ಕಿ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳ ಊಟ-ವಿಶ್ರಾಂತಿಗಳ ಬಗ್ಗೆ ಮುದ್ದಾಂ ವ್ಯವಸ್ಥೆ ಮಾಡಿರುತ್ತೇವೆ. ವಿದ್ಯಾರ್ಥಿಗಳು ಇದರ ಲಾಭ ಮಾಡಿಕೊಳ್ಳಬೇಕು

ಗಣಪತಿ ಶಿವರಾವ ಕಾಶೀಭಾಗ ಮಾಲಕ

ಹೊನ್ನಾವರ ಶ್ರೀ ಸಮರ್ಥ ಟಾಕೀಜಿನಲ್ಲಿ
— ಗುಬ್ಬಿಯವರ ಸುವರ್ಣ ಕನ್ನಡ ಚಿತ್ರ—
❋— ಹೇಮರಡ್ಡಿ ಮಲ್ಲಮ್ಮ—❋
ಈ ಚಿತ್ರಪಟ ಪ್ರದರ್ಶನದ ೨೫ನೇ ದಿನದ ಉತ್ಸವವು
ತಾ ೨೭-೩-೪೬ಕ್ಕೆ ಗೌರವದಿಂದ ಆಚರಿಸಲ್ಪಡುವದು
Quarter Century s Silver Jubilee Day
Celebration of
HEMARADDI MALLAMMA
will be held at Shri Samarth Talkies
Honavar on 27-3-46 MANAGER

The GENERAL ASSURANCE SOCIETY Ltd , (Ajmer) HUBLI

Applications are invited for the post of an Inspector for Karwar District on salary basis as against definite gaurantee of business

Apply for details to —
Raisahib Brahma Datta,
B Sc LL B F S S (London)
General Manager, Ajmer

B D. Samant,
Divisional Manager
Bombay

P. Venkobachar B A , B T
Branch Secretary Hubli

ಹಿಂದುಸ್ಥಾನಿ ಪಾಠಗಳು

ಸಬಕ ಪಚೀಸ (ಪಾಠ ೨೫)

ಹಿಂದುಸ್ಥಾನ (ಕವಿತೆ)

ಹಿಂದುಸ್ಥಾನ ಹಮಾರಾ ಪ್ಯಾರಾ
(ಹಿಂದುಸ್ಥಾನವು ನಮಗದು ಪ್ರಿಯವು)
ಹೈ ಸಾರೀ ದುನಿಯಾ ಸೇ ನ್ಯಾರಾ ॥
(ಇದೀ ಜಗಕ್ಕಿಂತಹುದದು ಪ್ರಿಯವು)
ಜಿಸಕಾ ಅನ್ನ ಸದಾ ಹಮ ಖಾತೇ,
(ಯಾರ ಅನ್ನವನುದಿನ ನಾವುಣ್ಣುತಿಹೆವು)
ಫೂಲ ಔರ ಫಲ ಜಿಸಮೇಂ ಪಾತೇ,
(ಎಲ್ಲಿಯು ಹೂ-ಹಣ್ಣು ಸೇವಿಸುತಿಹೆವು)
ಜಿಸಕಾ ಹಮ ಪಾನೀ ಪೀತೇ ಹೈಂ
(ಯಾರ ನೀರು ನಾವ್ಕುಡಿಯುತಲಿಹೆವು)
ಜಿಸಕಾ ಗೋದೀಮೇಂ ಹಮ ಜೀತೇ ಹೈಂ,
(ಯಾರ ತೊಡೆಯೊಳು ಬಾಳುತಲಿಹೆವು)
ವಹ ಆಂಖೋಂಕಾ ಹೈ ಉಜಿಯಾರಾ
(ಅದೇ ಕಣ್ಣುಗಳಿಗೊಪ್ಪುವ ಬೆಳಕು)
ಪ್ಯಾರಾ ಹಿಂದುಸ್ಥಾನ ಹಮಾರಾ
(ಅಹುದತಿಪ್ರಿಯವು ಭಾರತವೆಮಗೆ)
ಇಸಕಾ ಮಾನ ಬಢಾಯೇಂಗೇ ಹಮ
(ಗೌರವವಿದರ ನಾವು ಬೆಳಸುವಾ)
ಇಸಕೀ ಶಾನ ಬಢಾಯೇಂಗೇ ಹಮ
(ಹೆಚ್ಚಳವಿದರ ಹೆಚ್ಚಿಸುವಾ)
ಉಸಪರ ಜಾನ ಚಢಾಯೇಂಗೇ ಹಮ,
(ಪ್ರಾಣವದಕ್ಕೆ ನಾವರ್ಪಿಸುವಾ)
ಗೀತ ದೇಶಕೇ ಗಾಯೇಂಗೇ ಹಮ
(ಹಾಡು ಹಾಡುವಾ ದೇಶದ ಕೊರಗೆ)
ಇಸ ಪರ ಹಮನೇ ಸಬ ಕುಛ ವಾರಾ
(ಇದಕಾಗಿ ನಮ್ಮ ಸರ್ವಸ್ವದ ತ್ಯಾಗ)
ಪ್ಯಾರಾ ಹಿಂದುಸ್ಥಾನ ಹಮಾರಾ
(ಅಹುದತಿಪ್ರಿಯವು ಭಾರತವೆಮಗೆ)

ಪ್ರಸಿದ್ಧ ಜ್ಯೋತಿಷಿ
ಕೇ. ಗೋವಿಂದ ಪೊದುವಾಳ್
ಇವರು ಕುಮಟೆಗೆ ಬಂದಿದ್ದಾರೆ ಜಾತಕ ಪ್ರಶ್ನೆಗಳನ್ನು ಕೇಳಿಕೊಳ್ಳುವವರಿಗೆ ಸುಸಂಧಿ! ಮುಕ್ಕಾಂ ಸ್ವಲ್ಪೇ ದಿವಸ!
ಪತ್ತೆ — C/o ಶ್ರೀನಿವಾಸ ವೈದ್ಯ
ಉಡುಪಿ ಹೊಟೆಲ್, ಕುಮಟಾ

WANTED for our New English School Bad (Karwar) Graduates in Arts and Science (preferably B T) and a Matriculate with Drawing (Int) Apply to the undersigned stating the minimum salary expected
Premier Education Society
Bad 8-3-46
K R Haldipurkar
Chairman

— ಜೈ ಹಿಂದ್ —
ಬಹು ದೂರ ಪರಿಮಳ ಹರಡುವ
ಮಹಾವೀರ ಅಗರಬತ್ತಿ ತೊಲಿಗೆ ೦ ೫-೦
ಮಹಾತ್ಮ ಅಗರಬತ್ತಿ —ಡಿ— ೦ ೩ ೬
ಪರೀಕ್ಷಿಸಿ ನೋಡಿ, ಆನಂದ ಪಡೆಯಿರಿ!!
ಚಿತ್ರರಂಜನ ಕಂಪನಿ,
ಸಂತೇಪೇಟೆ ತುಮಕೂರ (ಮೈಸೂರು)

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ ಎಮ್. ಮಿರ್ಜಾನಕರ,
ಲಾಯಗನ್ನಿ, ಮೋಟರ ಸ್ಟೆಂಡ, ಕುಮಟಾ

ದಿ ಕೊಮರ್ಶಿಯಲ್ ಕೊರ್ಪೊರೇಶನ್,
ಕುಮಟಾ.
ನಮ್ಮಲ್ಲಿ ಬಾಟಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತವೆ
ವಿ ಎಮ್ ಮಿರ್ಜಾನಕರ,
ಮೋಟರ ಸ್ಟೆಂಡ, ಕುಮಟಾ

ಆಜ್ಞೆ.

ನಂ ೧೪೪
ಕಾರವಾರ, ತಾ ೧೩-೩-೧೯೪೬

ಹಿಂದುಸ್ಥಾನ ಸಂರಕ್ಷಣ ಕಾನೂನಿನ ೮೧ನೇ ನಿಯಮದ ೨ನೆಯ ಉಪನಿಯಮದೊಳಗಿನ (a a) ಕಲಮಿನಿಂದಲೂ ಗೃಹಖಾತೆ (ರಾಜಕೀಯ ಯುದ್ಧ)ಯವರು ತಾ ೧೫-೯-೧೯೪೪ಕ್ಕೆ ಹೊರಡಿಸಿದ ಎಸ್ ಡಿ II/೧೩೭೦ನೇ ಸರಕಾರಿ ಪ್ರಕಟನೆಯಿಂದಲೂ ತಮಗೆ ದೊರೆತ ಅಧಿಕಾರಗಳನ್ನು ಮತ್ತು ಹಾಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಅಧಿಕಾರಗಳನ್ನು ಉಪಯೋಗಿಸಿ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ಆಜ್ಞೆ ಹೊರಡಿಸುತ್ತಾರೇನೆಂದರೆ —

ಈ ಆಜ್ಞೆಗೆ ಜೋಡಿಸಿರುವ IIನೇ ಪರಿಶಿಷ್ಟದ ೧ನೇ ಸ್ತಂಭದಲ್ಲಿ ಕಾಣಿಸಿದ ಯಾವದೇ ಸರಕು ಇಟ್ಟುಕೊಂಡ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತದ್ದಾಗಿ, ಬೇರೆಯವರದಾಗಿ ಇಲ್ಲವೆ ಬೇರೆಯವರ ಹಾಗೂ ತನ್ನ ಭಾಗೀದಾರಿಗೆ ಒಪ್ಪಿದ್ದಾಗಿ ಸದರಿ ಸರಕಿನ ಸಂಗ್ರಹ ತನ್ನ ಕಡೆಗೆ ಎಷ್ಟುಂಟೆಂಬವನ್ನು ಸರಿಯಾಗಿ ಮತ್ತು ವಿವರವಾಗಿ, ಇದಕ್ಕೆ ಜೋಡಿಸಿರುವ Iನೆಯ ಪರಿಶಿಷ್ಟದಲ್ಲಿ ಕೊಟ್ಟ ನಮೂನೆಯ ಲೇಖದಿಂದ, ಪ್ರತಿ ಸೋಮವಾರ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರಿಗೆ ತಿಳಿಸತಕ್ಕದ್ದು ಸದರಿ ಸರಕಿನ ಸಂಗ್ರಹವು ಸದರಿ IIನೆಯ ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ಕಾಣಿಸಿದಷ್ಟು ಇದ್ದರೆ ಮಾತ್ರ ಮತ್ತು ಅದು ಕೂಡ ಆಯಾ ಸೋಮವಾರದ ಹಿಂದಿನ ಶನಿವಾರ ಆ ಸಂಗ್ರಹವೆಷ್ಟಿತ್ತೆಂದು ತಿಳಿಸಬೇಕಾಗಿರುತ್ತದೆ

ಇನ್ನು ಹುಕುಮು ಮಾಡುವದೇನೆಂದರೆ — ಸದರಿ ಲೇಖದ ಒಂದು ಪ್ರತಿಯನ್ನು ತಾವಿರುವ ತಾಲೂಕಿನ ಮಾಮಲೇದಾರರಿಗೂ (ಇಲ್ಲವೆ ಪೇಟೆಯ ಮಹಾಲಕರಿಗಳಿಗೂ) ಪೂರೈಸಬೇಕು

ಪರಿಶಿಷ್ಟ I

೧ (ಸಂಗ್ರಹವುಳ್ಳ) ವ್ಯಕ್ತಿಯ ಪೂರ್ಣ ಹೆಸರು ಮತ್ತು ವಿಳಾಸ.
೨ ಸರಕಿನ ಜಾತಿ
೩ ಸಂಗ್ರಹವಿರುವ ಉಗ್ರಾಣವು ಉಗ್ರಾಣಗಳು ಇಲ್ಲವೆ ಬೇರೆ ಬಗೆಯ ಸ್ಥಳವು/ಸ್ಥಳಗಳು ಎಲ್ಲಿವೆಯೆಂಬುದರ ಸ್ಪಷ್ಟ ಮತ್ತು ಸವಿಸ್ತಾರ ವರ್ಣನೆ
೪ (೧) ಸದರಿ ಸಂಗ್ರಹ (ಅ) ತನ್ನ ಸ್ವಂತದ್ದೋ, (ಬ) ಬೇರೆಯವರದೋ ಯಾ (ಕ) ತನ್ನ ಹಾಗೂ ಬೇರೆಯವರ ಭಾಗೀದಾರಿಯದೋ ಎಂಬುದರ ನಿರ್ದೇಶ
(೨) ಬೇರೆ ಯಾರ ಬಗ್ಗೆ ಆ ಸಂಗ್ರಹವಿಟ್ಟುಕೊಳ್ಳಲಾಗಿದೆಯೋ ಅಂಥ ವ್ಯಕ್ತಿಗಳ ಪೂರ್ಣ ಹೆಸರುಗಳು ಮತ್ತು ವಿಳಾಸಗಳು ಹಾಗೂ ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಪಟ್ಟ ಸಂಗ್ರಹದ ಪರಿಮಾಣ
(೩) ಭಾಗೀದಾರಿಗೆ ಒಪ್ಪಿದ ಸಂಗ್ರಹವಿದ್ದಲ್ಲಿ ಆ ಭಾಗೀದಾರರ ಪೂರ್ಣ ಹೆಸರುಗಳು ಮತ್ತು ವಿಳಾಸಗಳು, ಹಾಗೂ ಆಯಾ ಭಾಗೀದಾರಿಯ ಸಂಬಂಧದ ಸಂಗ್ರಹದ ಪರಿಮಾಣ

ಪರಿಶಿಷ್ಟ II

	ಸರಕು	ಪರಿಮಾಣ
೧	ತೊಗರಿ	(೨೮ ರತ್ತಲ ತೂಕದ) ೫ ಮಣ ಯಾ ಹೆಚ್ಚು
೨	ತೊಗರಿ ಬೇಳೆ	— ಡಿ —
೩	ಪಚ್ಚೆಸರು	— ಡಿ —
೪	ಪಚ್ಚೆಸರ ಬೇಳೆ	— ಡಿ —
೫	ಮಸೂರ	— ಡಿ —
೬	ಮಸೂರ ಬೇಳೆ	— ಡಿ —
೭	ಉದ್ದು	— ಡಿ —
೮	ಉದ್ದಿನ ಬೇಳೆ	— ಡಿ —
೯	ಮಂಠ (Muth)	— ಡಿ —
೧೦	ಲಾಂಗ	— ಡಿ —
೧೧	ಲಾಂಗ ಬೇಳೆ	— ಡಿ —
೧೨	(ಚವಳ) ಹೆಸರು	— ಡಿ —
೧೩	ವಟಾಣೆ	— ಡಿ —
೧೪	ವಾಲ (ಬಗಡೆ)	— ಡಿ —
೧೫	ಕಡಲೆ	— ಡಿ —
೧೬	ಕಡಲೆ ಬೇಳೆ	— ಡಿ —
೧೭	ಕಡಲೆ ಹಿಟ್ಟು	— ಡಿ —

ಯಾರಾದರೂ ಈ ಆಜ್ಞೆಯನ್ನು ಉಲ್ಲಂಘಿಸಿದರೆ, ಆತನಿಗೆ ಬೇರೆ ಯಾವದೇ ಶಿಕ್ಷೆಯಾದಾಗ್ಯೂ, ಆತನ ಅಪರಾಧದ ತನಿಖೆ ಮಾಡುವ ನ್ಯಾಯಾಧೀಶನು ಯಾವ ಆಹಾರ ಧಾನ್ಯದ ಸಂಗ್ರಹದ ಸಂಬಂಧದಲ್ಲಿ ಸದರಿ ಅಪರಾಧವಾಗಿದೆಯೆಂದು ತನಗೆ ಮನವರಿಕೆಯಾಗುತ್ತದೆಯೋ ಆ ಸಂಗ್ರಹವನ್ನು, ಅದರ ಆವರಣ ದ್ರವ್ಯಗಳ ಸಹಿತ, ಸರಕಾರ ಜಮಾ ಮಾಡಲು ಅಪ್ಪಣೆ ಮಾಡಬಹುದು

ಹಿಂದುಸ್ಥಾನ ಸಂರಕ್ಷಣೆಯ ಕಾನೂನಿನ ೧೧೯ನೇ ನಿಯಮದ ೧ನೇ ಉಪನಿಯಮಕ್ಕನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸತಕ್ಕದ್ದು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗೆಝೆಟಿನ ೧ನೇ ಭಾಗದಲ್ಲಿ ಪ್ರಸಿದ್ಧ ಮಾಡಬೇಕು

(ಬ) ಆಜ್ಞೆಯ ಕನ್ನಡ ಅನುವಾದದ ಒಂದು ಪ್ರತಿಯನ್ನು (೧) "ಕಾನಡಾವೃತ್ತ" ಕುಮಟಾ ಮತ್ತು (೨) 'ವಿಚಾರ' ಕಾರವಾರ ಈ ಪತ್ರಿಕೆಗಳಲ್ಲಿ ಪ್ರಕಟಿಸಬೇಕು

(ಕ) ಕನ್ನಡ ಅನುವಾದದ ಪ್ರತಿಗಳನ್ನು ಜಿಲ್ಲೆಯಲ್ಲಿರುವ ಎಲ್ಲ ಮುಲ್ಕೀ ಕಚೇರಿಗಳಲ್ಲೂ ಜಿಲ್ಲಾ ಪೂರೈಕೆ ಖಾತೆಯ ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಅಂಟಿಸಬೇಕು

F. N. RANA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಕಾನಡಾ ಜಿಲ್ಲಾ ಪ್ರಾ॥ ಶಿ॥ ಕೋ॥ ಅರ್ಬನ್ ಬೇಂಕ, ಲಿಮಿಟೆಡ್.

ಮುಖ್ಯ ಕಚೇರಿ ಅಂಕೋಲಾ. (ಉ ಕನ್ನಡ)

ನೋಟೀಸು.

ತಾ ೩೧-೩-೪೬ನೇ ರವಿವಾರ ಬೆಳಿಗ್ಗೆ ೯ ಘಂಟೆಗೆ ಶಿಕ್ಷಕ ಬೇಂಕಿನ ಮುಖ್ಯ ಕಚೇರಿಯಲ್ಲಿ ವಿಶೇಷ ಮಹಾಸಭೆ ಇಟ್ಟಿದೆ ಕಾರಣ ಸಹಕಾರಿ ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ

ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು (೧) ಸಂಘದಲ್ಲಿ ಸೇರಿದ ಶಿಕ್ಷಕರಿಗೆ ಉಳಿದ ಸದಸ್ಯರಂತೆ ಹುಟ್ಟುವಳಿ ಮುರಿಕೊಂಡು ಸಾಲ ಕೊಡುವದು, (೨) ಮೂರು ತಿಂಗಳ ಸಂಬಳದಷ್ಟು ಜಾಮೀನು ಸಾಲ ಕೊಡುವದು, (೩) ಮೇಲಿನ ಯೋಜನೆ ಕೈಕೊಳ್ಳುವಾಗ ಹಣದ ತುಟಾಗ್ರತೆಯಾದಲ್ಲಿ ಬೇಂಕಿನ ಹೆಸರಲ್ಲಿದ್ದ ಮುದ್ದತಿ ಠೇವು, ಬೊಂಡ ವಗೈರೆ ಡಿಪೋಜಿಟ ಹಣವನ್ನು ಪರತ ಪಡಕೊಳ್ಳುವ ಬಗ್ಗೆ ಬೇರೆ ಬೇಂಕುಗಳಿಂದ ಸಾಲ ವಗೈರೆ ಪಡಕೊಳ್ಳುವ ಬಗ್ಗೆ ಮೆನೇಜಿಂಗ ಕಮಿಟಿಗೆ ಅಧಿಕಾರ ಕೊಡುವದು

ಅಂಕೋಲಾ,
ತಾ ೧೪-೩-೧೯೪೬

ಜಿ ಎಸ್ ಭಟ್ಟ,
ಚೆಅರಮನ್

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ .. ೦-೧-೦
ಹಳೇ ಸಂಚಿಕೆಗೆ .. ೦-೪-೦
ವ್ಹಿ ಪಿ ಯಿಂದ ಹಣ ತರಿಸುವವರು ವ್ಹಿ ಪಿ ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು
ವರ್ಗಣಿಯು ಮುಂಗಡ ಕಳಿಸತಕ್ಕದ್ದು

Reg. No. B 1270

Monday, 1st April, 1946.

ಕಾನಡಾವೃತ್ತ

ವರ್ಷ ೩೮.] THE KANARA NEWS. [ಸಂಚಿಕೆ ೩೯.

ಕುಮಟಾ:- ಸೋಮವಾರ, ತಾ ೧ ಮಾಹೆ ಏಪ್ರಿಲ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತೀರಿಸಲಾದೀತು.

ಸ್ಥಳಿಕ ವಿಷಯಗಳು.

ಲೇಖಕ.– ಸ್ಥಳವಂತಿಕ.

ಕಳೆದ ಮಂಗಳವಾರ ಕಾರವಾರದಲ್ಲಿ ಜಿಲ್ಹಾ ಆಹಾರ ಸಲಹೆಗಾರ ಮಂಡಳದ ಸಭೆಯಾಯಿತು ೪೫೦೦ ಚೀಲ ಪತ್ತಿಕಾಳನ್ನು ಧಾರವಾಡ ಜಿಲ್ಲೆಯಿಂದ ನಮ್ಮ ಜಿಲ್ಲೆಗೆ ಪೂರೈಸುವ ಹುಕುಮು ಪ್ರಾಂತಿಕ ಸರಕಾರವು ಹೊರಡಿಸಿ ದೀರ್ಘ ಕಾಲವಾಯಿತು ಆದರೆ ಆ ಪತ್ತಿಕಾಳು ಇನ್ನೂ ಕೈಸೇರಿಲ್ಲ ಧಾರವಾಡದ ಜಿಲ್ಹಾಧಿಪರು ಅವನ್ನು ಕೊಡಲಿಕ್ಕೆ ಉಪದ್ರವ ಕೊಡುತ್ತಾರೆಂದೂ ಅದು ಸಿಗುವ ಆಶೆ ಕಡಿಮೆಯೆಂದೂ ಜಿಲ್ಹಾಧಿಪರ ಮಾತಿನಿಂದ ತಿಳಿದುಬಂದಿದೆ ಕರಾಚಿಯಲ್ಲೀಗ ಪತ್ತಿಕಾಳು ವಿಪುಲವಾಗಿ ಸಿಗುತ್ತವೆ ಆದರೆ ತರಿಸಲಿಕ್ಕೆ ವೆಚ್ಚ ಹೆಚ್ಚು ಆದರೂ ಅದನ್ನು ತರಿಸಿ ಅಲ್ಪ ಲಾಭಾಂಶದಿಂದ ಮಾರಿಸುವ ವ್ಯವಸ್ಥೆಯಾಗಬೇಕೆಂದು ಅರಿಕೆ ಮಾಡಿಕೊಳ್ಳಲ್ಪಟ್ಟಿತು ಜಿಲ್ಹಾಧಿಪರು ಈ ಯೋಜನೆಗೆ ಒಡಂಬಡಲಿಲ್ಲ ಕೈಯಿಂದ ಕುಟ್ಟುವವರಿಗೆ ಭತ್ತ ಮಾರಿಯಲು ಕೊಡಬೇಕೆಂಬ ಸೂಚನೆ ಬಂದು ಜಿಲ್ಲೆಯಲ್ಲಿ ಕೈಯಿಂದ ಭತ್ತ ಕುಟ್ಟುವ ಸಂಸ್ಥೆಗಳಿಲ್ಲ ಆದರಿಂದ ಭತ್ತ ಮೆರಗೂಲಿಗೆ ಕೊಡಬರುವದಿಲ್ಲವಾಗಿ ಜಿಲ್ಹಾಧಿಪರ ಅಪ್ಪಣೆಯಾಯಿತು ಮುಂಡಳ್ಳಿ ಮತ್ತು ಅವಲಕ್ಕಿ ಕುಟ್ಟಿ ಬಡಬಗ್ಗರನೇಕರು ಜೀವಿಸುತ್ತಾರೆ ಈ ಜನರಿಗೆ ಭತ್ತ ಪೂರೈಸಬೇಕಾಗಿ ಬೇರೆ ಬೇರೆ ಮಾಮಲೇದಾರರಿಂದ ಬಂದ ವರದಿಗಳ ವಿಚಾರ ನಡೆಯಿತು ಪ್ರತಿ ತಿಂಗಳಿಗೆ ೧೭೦೦ ಚೀಲ ಭತ್ತ ಹೀಗೆ ಕೊಡಬೇಕಾದೀತೆಂದು ಮಾಮಲೇದಾರರು ಎಣಿಕೆ ಹಾಕಿದ್ದರು ಇವುಗಳಲ್ಲಿ ಹೊನ್ನಾವರಕ್ಕೆ ೫೦೦, ಕುಮಟೆಗೆ ೨೦೦ ಹೀಗೆ ಬಂದು ಬಿಕ್ಕೆಯಿತ್ತು ಜಿಲ್ಹಾಧಿಪರು ಇದಕ್ಕೆ ಭತ್ತ ಕೊಡಲು ಒಡಂಬಡಲಿಲ್ಲ ಕೆಲ ಸಭಾಸದರು ಅರ್ಧದಷ್ಟಾದರೂ ಭತ್ತ ಕೊಡಿರೆಂದರು ಕೆಲವು ಭತ್ತವನ್ನಾದರೂ ಕೊಡಿರಿ ಎಂದು ಬೇರೆ ಕೆಲವರು ಅಂದರು ವಿಚಾರವಾಗಿ ಯುಕ್ತವೆಂದ ಹುಕುಮು ಹೊರಡಿಸುವೆನಾಗಿ ಜಿಲ್ಹಾಧಿಪರು ಅಪ್ಪಣೆ ಕೊಟ್ಟರು ಸರಕಾರದ ಭತ್ತ ಒಣೆಯುವ ಗಿರಣಿಗಳಲ್ಲಿ ಕಳ್ಳಾಟಿಕೆಯಿಂದ ಅವಲಕ್ಕಿ ತಯಾರಾಗುತ್ತದೆಂದೂ ಅದನ್ನು ನಿಲ್ಲಿಸಬೇಕೆಂದೂ ಕೆಲವರು ಸೂಚಿಸಿದರು ಜಿಲ್ಹಾಧಿಪರಿಗೆ ಈ ಸೂಚನೆ ಮಾನ್ಯವಾಗಲಿಲ್ಲ ರಾಗಿ ಬಡವರಿಗೆ ಅತ್ಯಂತ ಅವಶ್ಯವಾದ ಜೀವನವನ್ನು, ಹಾಲು, ಮೊಸರು ಮೊದಲಾದ ಸ್ನಿಗ್ಧ ಪದಾರ್ಥಗಳ ಅಭಾವದಲ್ಲಿ ರಾಗಿ ಅಂಬಲಿಯಿಂದ ಪೌಷ್ಟಿಕ ಅಂಶವು ದೊರೆಯುತ್ತದೆ ಬಡಬಗ್ಗರು ರಾಗಿ–ಅಂಬಲಿ ಕುಡಿದು ಕಷ್ಟ ಮಾಡುವ ರೂಢಿಯುಂಟು ಸೀಥಾ–ಅನ್ನದಿಂದ ಹೊಟ್ಟೆ ತುಂಬುವದಿಲ್ಲ ಸ್ನಿಗ್ಧ ಪದಾರ್ಥಗಳ ಅಭಾವದಲ್ಲಿ ಹೊಟ್ಟೆಯೊಳಗೆ ಉರಿ ಏಳುತ್ತದೆ ಆದರಿಂದ ರಾಗಿಯನ್ನು ಪೂರೈಸಬೇಕಾಗಿ ಸಭಾಸದರು ಸೂಚಿಸಿದರು ರಾಗಿಯ ಕೊರತೆಯುಂಟು, ಆದರೂ ೫೦೦ ಚೀಲ ರಾಗಿ ಬರುವುದು ಅದಕ್ಕೂ ಹೆಚ್ಚಿಗೆ ಒದಗುವ ಹಾಗಿಲ್ಲ ಪ್ರಯತ್ನಿಸುತ್ತಿದ್ದೇನೆ, ಎಂಬುದಾಗಿ ಜಿಲ್ಹಾಧಿಪರು ಸಭಾಸದರಿಗೆ ಸಮಾಧಾನ ಹೇಳಿದರು ಕಡ–ಧಾನ್ಯಗಳನ್ನು ತರಿಸುವ ಬಗ್ಗೆ ಪರವಾನೆ ಕೊಡುವಲ್ಲಿ ಜಿಲ್ಹಾಧಿಪರ ಕಚೇರಿಯೊಳಗೆ ವಿಳಂಬ ಆಗುತ್ತದಾಗಿ ಆಕ್ಷೇಪ ಎಂದು ತಮ್ಮ ಕಚೇರಿಯಲ್ಲಿ ಯಾವ ಪ್ರಕರಣಗಳೂ ಬಾಕಿಯಲ್ಲಿಲ್ಲವೆಂದೂ, ಮುಂಬಯಿಯ ನಿಯಂತ್ರಣ ಕಚೇರಿಯಲ್ಲಿ ವಿಳಂಬವಾಗುತ್ತದೆಂದೂ, ಅದಕ್ಕೆ ತಾವು ಹೊಣೆಗಾರರಲ್ಲೆಂದೂ ಜಿಲ್ಹಾಧಿಪರು ಖುಲಾಸೆ ಮಾಡಿದರು ಯಲ್ಲಾಪುರದಲ್ಲಿ ತೂಕ ಮಾಡಿ ಭತ್ತ ಕೊಂಡ ವಿಷಯ ಎಂತು ತೂಕದಿಂದ ಭತ್ತ ಕೊಳ್ಳುವ ಕ್ರಮ ತಮಗೆ ಮಾನ್ಯವಿಲ್ಲವಾಗಿ ಜಿಲ್ಹಾಧಿಪರು ತಿಳಿಸಿದರು ತೂಕದಿಂದ ಹೆಚ್ಚಿಗೆ ಪಡೆಕೊಂಡ ಭತ್ತದ ರಕಮನ್ನು ಅವರವರಿಗೆ ತಲ್ಪಿಸಬೇಕಾಗಿ ಅರಿಕೆ ಮಾಡಿಕೊಳ್ಳಲಾಗಿ ಈ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಕಳುಹಿಸಿದೆಂದು ಆಕ್ಷೇಪಕರಿಗೆ ತಿಳಿಸಲಾಯಿತು ೧೨೦ ಸೇರು ಭತ್ತ ೧೨೦ ರಿಂದ ೧೩೧ ರತ್ತಲ ವರೆಗೆ ತೂಗುತ್ತದೆಂದೂ ಅದರಿಂದ ಹೆಚ್ಚಿನ ಭತ್ತ ವಸೂಲ ಬಂದ ಇಸಮುಗಳ ಪತ್ತೆ ಹಚ್ಚುವದು ಕಠಿಣವೆಂದೂ ಹೇಳಿ, ಹೆಚ್ಚಿಗೆ ವಸೂಲಾದ ಭತ್ತ ತಿರುಗಿ ಕೊಡುವದು ಕಠಿಣವೆಂದು ಜಿಲ್ಹಾಧಿಪರನ್ನು ತಾರೆ ಇದ್ದಲಿಯ ದರ ಇಳಿಸುವ ಪ್ರಶ್ನೆಯೂ ಸಭೆಯಲ್ಲಿ ಬಂತು. ನಮ್ಮ ಜಿಲ್ಲೆಯಲ್ಲಿ ಇದ್ದಲಿಯು ಉಪಯೋಗ ಅಪರೂಪವಿರುವದರಿಂದ ಉರುವಲದ ದರದ ವಿಚಾರವೇ ಪ್ರಾಮುಖ್ಯದಿಂದ ನಡೆಯಿತು ಉರುವಲದ ದರ ಏರಿಸಿದರೆ ಬಡಬಗ್ಗರಿಗೆ ಈಗಿನ ದಿನಮಾನದಲ್ಲಿ ಬಹಳ ಕಷ್ಟವಾಗುವದಾದ್ದರಿಂದ ದರ ಏರಿಸಬಾರದಾಗಿ ಸಲಹೆಗಾರರ ಅಭಿಪ್ರಾಯವಾಯಿತು ಅನ್ನಸಾಮಗ್ರಿಗಳ ಕೊರತೆ ಮಿಗಿಲಾಗಿರುವದರಿಂದ ಔತಣ ಸಮಾರಂಭಗಳನ್ನು ಇನ್ನೂ ಸಂಕೋಚಗೊಳಿಸಬೇಕಾಗಿ ಸರಕಾರದಿಂದ ಬರೆದು ಬಂದಿತ್ತು. ೪೦ಕ್ಕಿಂತ ಹೆಚ್ಚು ಮಂದಿಗೆ ಊಟ ಹಾಕಬಾರದೆಂದು ಈಗಿನ ನಿರ್ಬಂಧವುಂಟು ಆ ಸಂಖ್ಯೆ ೨೫ಕ್ಕೆ ಇಳಿಸಬೇಕೆಂದು ಜಿಲ್ಹಾಧಿಪರು ಅಭಿಪ್ರಾಯಪಟ್ಟಂತೆ ಮಂಡಳದ ನಿರ್ಣಯವಾಯಿತು

⁂

'If it is a play of skill no permission is required and if a play of chance, permission cannot be granted'' (ಆಟ ಚಾತುರ್ಯದ್ದಾದರೆ ಅಪ್ಪಣೆ ಅವಶ್ಯವಿಲ್ಲ, ದೈವದ ಮೇಲೆ ಅವಲಂಬಿಸಿದ್ದಾದರೆ ಅಪ್ಪಣೆ ಕೊಡಬರುವದಿಲ್ಲ) ನಮ್ಮ ಜಿಲ್ಹಾಧಿಪರ ಕಚೇರಿಯಿಂದ ಇರಾಣಿ ಜನರಿಗೆ "ಕವ್ವರ ಪ್ಲೇ" ಆಟದ ಸಂಬಂಧ ದೊರೆತ ಅಪ್ಪಣೆಯಿದು ತಮ್ಮ ಆಟವನ್ನು ಜಾತ್ರೆಗಳಲ್ಲಿ ನಡಿಸಿ ಅಜ್ಞರ ಸುಲಿಗೆ ಮಾಡಲು ಅಪ್ಪಣೆ ಕೊಡಬೇಕಾಗಿ ಅರ್ಜಿ ಸಕ್ಕರದು ಇರಾಣಿಗಳು ಜಿಲ್ಹಾಧಿಪರ ಕಡೆಗೆ ಹೋದಾಗ ಸಿಕ್ಕ ಅಪ್ಪಣೆಯಿದು ಜಿಲ್ಹಾಧಿಪರು ಆಟದ ಗುಣ–ದೋಷಗಳನ್ನು ವಿಚಾರಿಸಿ ಒಂದೇ ಅಪ್ಪಣೆ ಕೊಡಬೇಕು, ಇಲ್ಲವೆ ಅಪ್ಪಣೆ ನಿರಾಕರಿಸಬೇಕು ಚಾತುರ್ಯದ ಆಟಗಳಿಗೆ ಅಪ್ಪಣೆ ಅವಶ್ಯವಿಲ್ಲೆಂಬ ಕಟ್ಟಳೆಯುಂಟು, ಜೂಗಾರದ ಆಟಗಳಿಗೆ ಅಪ್ಪಣೆ ಕೊಡಬರುವದಿಲ್ಲವೆಂದೂ ಕಟ್ಟಳೆಯುಂಟು ಈ ಕಟ್ಟಳೆಗಳ ಉಲ್ಲೇಖ ಮಾಡಿ ಇರಾಣಿಗಳಿಗೆ ಕೊಟ್ಟ ಆಜ್ಞಾಪತ್ರದಿಂದ ಪೋಲೀಸರಿಗೂ ಮಾಮಲೇದಾರರಿಗೂ ಇರಾಣಿಗಳ ಕೂಡ ಸಂಚು ಮಾಡಲು ಅನುಕೂಲವಾಗಿದೆ ಜಿಲ್ಹಾಧಿಪರ ಕಚೇರಿಯವರು ಇರಾಣಿಗಳಿಗೆ ಇಂತಹ ಆಜ್ಞಾಪತ್ರ ಕೊಟ್ಟ ಕಾರಣ ಜನಸಾಮಾನ್ಯರಿಗೆ ತಿಳಿಯದು ಜಿಲ್ಹಾಧಿಪರ ಕಚೇರಿಯಲ್ಲೂ ಆಚಾರ ವಿಚಾರಗಳ ಗೊಂದಲವುಂಟಾದ್ದರ ಲಕ್ಷಣವಿದೆಂದು ವಿಚಾರವಂತರ ಅಭಿಪ್ರಾಯವಿದೆ ತಮಗೆ ಸಿಕ್ಕ ಅಪ್ಪಣೆಯಿದು ಎಂದು ಇರಾಣಿಗಳು ಸ್ಥಾನಿಕ ಅಧಿಕಾರಿಗಳಿಗೆ ಗ್ರಹಿಕೆ ಕೊಡಲು ಅದೊಂದು ಸಾಧನವಾಗಿದೆ ಅಧಿಕಾರಿಗಳೇನು ಮೂಢರಿರುವದಿಲ್ಲ ಕಟ್ಟಳೆಗಳ ಉಲ್ಲೇಖವಿದ್ದ ಮಾತ್ರಕ್ಕೆ ಅದು ಅಪ್ಪಣೆಯಾಗುವದಿಲ್ಲೆಂದು ಅವರಿಗೆ ಗೊತ್ತುಂಟು, ಇರಾಣಿಗಳಿಗೂ ಗೊತ್ತುಂಟು ಆದರೆ ಸ್ಥಳೀಕ ಅಧಿಕಾರಿಗಳೊಡನೆ ಸಂಬಂಧ ಬೆಳೆಸಲಿಕ್ಕೆ ಈ ಪತ್ರ ಅನುಕೂಲವಾಗುತ್ತದೆ ಒಂದೆಡೆ ಇರಾಣಿಗಳಿಗೆ ಆಟ ನಡಿಸಲು ಅನುಕೂಲವಾದರೆ ಇನ್ನೊಂದೆಡೆ ಪ್ರತಿಕೂಲವಾಗುತ್ತದೆ ಒಮ್ಮೊಮ್ಮೆ ಪೋಲೀಸರು ಇರಾಣಿಗಳನ್ನು ಧಿಕ್ಕರಿಸಿದರೆ ಮಾಮಲೇದಾರರು ಮನ್ನಿಸುತ್ತಾರೆ ಯಲ್ಲಾಪುರ ತಾಲೂಕಿನ ಇಡಗುಂದಿಯ ರಾಮಲಿಂಗ ದೇವರ ಜಾತ್ರೆಯ ಸಮಯ ಇರಾಣಿಗಳು ಕವ್ವರಪ್ಲೇ ಆಟ ಹಚ್ಚಲು ಬಹಳ ಪ್ರಯತ್ನ ಮಾಡಿದರು ಆದರೆ ಪೋಲೀಸರ ಮನವೊಲಿಸಲು ಅವರಿಗೆ ಸಾಧ್ಯವಾಗಲಿಲ್ಲ ಫೌಜದಾರರು ಗಟ್ಟಿಯಾಗಿ ಆ ಆಟಕ್ಕೆ ಅಪ್ಪಣೆ ಕೊಡಲು ನಿರಾಕರಿಸಿದರು ಆದರೆ ಫೌಜದಾರರು ಅಲ್ಲಿಂದ ಹೊರಟು ಹೋಗುತ್ತಲೇ ಇರಾಣಿಗಳು ಆಟ ಹೂಡಿ ಅಜ್ಞರನ್ನು ಸುಲಿಯತೊಡಗಿದರು! ಅವರು ಆಗ ಅಲ್ಲಿ ಹಾಜರಿದ್ದ ಮೆಜಿಸ್ಟ್ರೇಟರ ಕಡೆ ದೂರಿಕೊಂಡರು ಜಿಲ್ಹಾಧಿಪರ ಅಪ್ಪಣೆ ಇರಾಣಿಗಳ ಕಡೆಗೆ ಉಂಟೆಂದೂ ಅವರನ್ನು ನಿರ್ಬಂಧಿಸಲಿಕ್ಕೆ ತಮ್ಮಿಂದ ಸಾಧ್ಯವಿಲ್ಲೆಂದೂ ಮೆಜಿಸ್ಟ್ರೇಟರು ಆಗ ದೂರುಗಾರರಿಗೆ ತಿಳಿಸಿದರಂತೆ! ಇರಾಣಿಗಳಿಗೂ ಮೆಜಿಸ್ಟ್ರೇಟರಿಗೂ ಒಳಗಿಂದೊಳಗೆ ಸಂಧಾನವಾಗಿಯೇ ಇರಾಣಿಗಳು ತಮ್ಮ ಆಟ ಹೂಡಿದ್ದಾರೆಂದು ಜನರಿಗೆ ಆದರ ಮೇಲಿಂದ ಖಾತ್ರಿಯಾಯಿತು ಆಟ ಪ್ರಾರಂಭವಾದ ೧–೨ ತಾಸುಗಳಲ್ಲೇ ೧೦–೧೨ ಬಡ ಸಿದ್ದಿ ಜನರು ತಮಗೆ ಸಿಕ್ಕ ೪೦ಂದಷ್ಟು ಸಂಬಳದ ಹಣವನ್ನು ಈ ಕವ್ವರಪ್ಲೇ ಜೂಗಾರದಲ್ಲಿ ಕಳಕೊಂಡರು! ಮರುದಿನ ಅವರ ಕೈಯಲ್ಲಿ ಒಂದು ಕಾಸು ಸಹ ಇದ್ದಿಲ್ಲ! ವರ್ಷಾವಧಿ ಬೇಕಾಗುವ ಅರಿವೆ–ಅಂಚಡಿ, ಕಂಡು ತಿಂಡಿ, ದವಸ ಧಾನ್ಯಗಳನ್ನು ಸೆರಿಹೋರಿಯ ಹಳ್ಳಿಗರು ಈ ಜಾತ್ರೆಯಲ್ಲಿ ಖರೀದಿ ಮಾಡಿಟ್ಟುಕೊಳ್ಳುವದು ಪ್ರಘಾತ. ಅದೊಂದೂ ಕೊಂಡು-ಕೊಳ್ಳಲು ಮೇಲಿನ ಸಿದ್ದಿಗಳ ಕಡೆ ಹಣವಿರಲಿಲ್ಲ ಇರಾಣಿ ಜನರ ಹೊಟ್ಟೆ ಮಾತ್ರ ಒಳಿತಾಗಿ ತುಪ್ಪದಲ್ಲಿ ಬಿತ್ತು! ರೂ ೨೦೦೦ಕ್ಕೆ ಮಿಕ್ಕಿ ಅವರು ಪ್ರಾಪ್ತಿ ಮಾಡಿಕೊಂಡು ಹೊರಟುಹೋದರಂತೆ ಜಿಲ್ಹಾಧಿಪರ ಕಚೇರಿಯವರು ತಮ್ಮ ಆಜ್ಞಾಪತ್ರದಿಂದ ಉಂಟಾಗುವ ಈ ಅನರ್ಥವನ್ನು ಪರಾಂಬರಿಸಬೇಕು ಕವ್ವರಪ್ಲೇ ಆಟ ಚಾತುರ್ಯವಾದರೆ ಅದಕ್ಕೆ ಅವರು ಹಾಗೆ ಸ್ಪಷ್ಟ ಅಪ್ಪಣೆ ಕೊಡಬೇಕು ಅದು ಜೂಗಾರವಾದರೆ ಕಠೋರತನದಿಂದ ಅದನ್ನು ನಿರ್ಬಂಧಿಸಬೇಕು ಹೊರತು ಈ ಹಿಡಿ-ಬಿಡಿ ಧೋರಣದಿಂದ ತಾಲೂಕ ಅಧಿಕಾರಿಗಳೂ ಪೋಲೀಸರೂ ಇರಾಣಿಗಳಿಗೆ ಮೇಲಧಿಕಾರಿಗಳ ಆಶ್ರಯವಿದೆಯೆಂದು ಗ್ರಹಿಸಿ, ಸ್ವಾರ್ಥ ಸಾಧಿಸಿಕೊಂಡು, ಜನರನ್ನು ಸುಲಿಯಲು ಅವರಿಗೆ ಅವಕಾಶ ಮಾಡಿಕೊಡುತ್ತಾರೆ

|| ಶ್ರೀ ರಾಮನಾಥ ದಾಮೋದರ ಪ್ರಸನ್ನ ||

ಶ್ರೀ ಸಂಸ್ಥಾನ ಜಾಂಬಾವಲೀ, ಗೋವಾ

ಇದೇ ಬರುವ ಚೈತ್ರ ಶು|| ೬ಯಿಂದ ಶು|| ೯ಮಿಯ ವರೆಗೆ (ತಾ ೭-೪-೪೬ರಿಂದ ೧೦-೪-೪೬ರ ವರೆಗೆ) ೪ ದಿವಸ ಶ್ರೀ ಸನ್ನಿಧಿಯಲ್ಲಿ ವಾಡಿಕೆಯಂತೆ **ಸಿಂಧೀಕಾ–ಜೀರ್ಣೋದ್ಧಾರ ದಿನ ಮತ್ತು ರಾಮನವಮಿಯ** ಉತ್ಸವಗಳು ನಡೆಯುವವು ಆ ಕಾಲಕ್ಕೆ ಶ್ರೀ ರಾಮನಾಥ ದಾಮೋದರ ಪ್ರಾಸಾದಿಕ ಮಹಾಜನ ಸಮಾಜದವರ ನಾಟ್ಯಪ್ರಯೋಗಗಳೂ ಆಗುವವು ಶ್ರೀ ಸಂಸ್ಥಾನದ ಭಜಕರೆಲ್ಲ ಈ ಉತ್ಸವಗಳಿಗೆ ಬಂದು ಕೃತಾರ್ಥರಾಗಬೇಕಾಗಿ ಅರಿಕೆಯಿದೆ ತಾ ೨೫–೩–೪೬

ಶ್ರೀ ಸಂಸ್ಥಾನ ಗಾದೀ ಮಂಡಳ

ದಿ ಕೊಮರ್ಶಿಯಲ್ ಕೊಅಪರೇಶನ್,
ಕುಮಟಾ.
ನಮ್ಮಲ್ಲಿ ಡೀಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಪಂಪು ರಿಪೇರಿ ದರದಿಂದ ಸಿಗುತ್ತವೆ
ವಿ ಎಮ್ ಮುಜುಂದಾರ,
ಮೋಟರ ಸ್ಟೇಂಡ, ಕುಮಟಾ.

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR S. I

The Head Office and Branches of the Bank now accept Season Deposits from three to six months at the following rates -

Three Months at 2¼% per annum

Six Months at 2¾% per annum.

No such deposit will be allowed to run beyond 30th September 1946

Coondapoor, }
8-2-1946 }

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆ ವಿಪರೀತ ಮಳೆಯಾಗುವ ಲಕ್ಷಣಗಳುಂಟು. ಶುಕ್ರವಾರ ಮಧ್ಯರಾತ್ರಿಯ ನಂತರ ಅರ್ಧ ತಾಸಿನ ತನಕ ಮಳೆ ಹನಿಸಿತು.

ಹತ್ತಿ ಕಾಳು, ಹಿಂಡಿ ಮುಂತಾದ ದನಗಳ ಪೋಷಕ ಆಹಾರ ಏನೇನೂ ಸಿಗುವದಿಲ್ಲವಾದ್ದರಿಂದ ದನಗಳಿಗೂ ದನ ಸಾಕುವವರಿಗೂ ಬಹಳ ಕಷ್ಟವಾಗಿದೆ. ಹಾಲಿನ ಪುರವಟಿ ದಿನೇ ದಿನೇ ಕುಗ್ಗುತ್ತ ನಡೆದಿದೆ. ಇದರ ಕೊರತೆಯನ್ನು ನೀಗಿಸುವ ಬುದ್ಧಿ ಸರಕಾರಕ್ಕೆ ಎಂದಾಗುತ್ತದೋ ದೇವರೇ ಬಲ್ಲ!

ಇಂದಿನಿಂದ ಸರಕಾರಿ ಉರುವಲ ಉಗ್ರಾಣದಲ್ಲಿ ಉರುವಲ ಮಣದ ದರ ೬॥ ಆಣೆಯಿಂದ ೭॥ ಆಣೆಗೆ ಏರಿಸಲ್ಪಟ್ಟಿದೆ. ಈ ದರ ಕಕ್ಕೊಂಡಾದರೂ ಉಗ್ರಾಣದಾರರು ಚಲೋ ಉರುವಲ ಪೂರೈಸುತ್ತಾರೋ ಅಥವಾ ಹಿಂದಿನಂತೆ ಹಸಿ, ಒಂದು ಕಡ್ಡಿಯೂ ಒಡೆಯಲಾಗದ ಗಂಟು-ಮುರುಡ ಉರುವಲವನ್ನೇ ಸಾಗಹಾಕುತ್ತಾರೋ ನೋಡಬೇಕು.

ತಾ. ೧೮ ೩ ೧೯೪೬ರ "ವೃತ್ತ"ದಲ್ಲಿ ಕೆನರಾ ಬೋರ್ಡಿಂಗ ಸಮಿತಿಯವರ ವಿನಂತಿ ಮತ್ತು ಅವರು ವಸೂಲ ಪಡೆದ ವಂತಿಗೆ ಹಣದ ಅಂಕಿಗಳು ಪ್ರಕಟವಾಗಿವೆಯಷ್ಟೇ. ರಾ॥ ಕೃಷ್ಣ ಶ್ರೀಧರ ಭಟ್ಟ ಧಾರೇಶ್ವರ ಇವರು ತಮ್ಮ ಪಾಲ್ಗಾಗಿ ನದ ರೂ ೩೮೧ರಲ್ಲಿ ವಸೂಲ ಕೊಟ್ಟ ರೂ. ೧೦೦ ರ ಅಂಕಿ ಮುದ್ರಣದೋಷದಿಂದ ಅದರಲ್ಲಿ ಬಿಟ್ಟುಹೋಗಿದೆ. ಈ ಪ್ರಕಟನೆಯ ನಂತರ ರಾ॥ ಮಂಜುನಾಥ ಕೇ. ಕುಮಟೂಕರ ಇವರು ರೂ ೫೦೧, ರಾ ೧೧೯ರಿಂದ ವೆಂಕಟಪ್ಪ ಇವರು ರೂ. ೧೫೫ ವಸೂಲ ಕೊಟ್ಟಿದ್ದಾರಂತೆ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ ಅಗ್ನಿಹೋತ್ರಿ ಸೋಮಯಾಜಿ ವೇ॥ ಶಾ॥ ಸಂ॥ ಸುಬ್ರಹ್ಮಣ್ಯ ಭಟ್ಟ ಚಿತ್ರಿಗಿಮಠ ಇವರು ಇದೇ ೩ರಿಂದ ಚೈತ್ರ ಶು॥ ೫ರಿಂದ 'ಗರುಡ ಚಯನ'ವೆಂಬ ಮಹಾ ಯಜ್ಞವನ್ನು ಮಾಡುವವರಿದ್ದಾರೆ. ಯಜ್ಞದ ಎಲ್ಲ ಸಿದ್ಧತೆಗಳು ಪೂರ್ಣವಾಗಿವೆ.

ಗೋಕರ್ಣದೊಳಗಿನ ಸೀಧಾ—ಅಧಿಕಾರಿಗಳು ಇತ್ತೀಚೆ ಪೇಟೆಯೊಳಗಿನ ವರ್ತಕರಿಗೆ ತಮ್ಮ ಅಧಿಕಾರದ ದರ್ಪ ತೋರಿಸಿ ಬೆದರಿಕೆ ಹಾಕಹತ್ತಿದ್ದಾರೆ. ಅಂಗಡಿಗಳಿಗೆ ಹೋಗಿ "ನೀವು ಗಿರಾಕಿ ಬೇಕಾದ ಹಚ್ಚುತ್ತೀ! ನನಗೆ ಎಷ್ಟು ಎಲ್ಲಿಂದ ಸಿಕ್ಕಿದೆ! ನಿನ್ನ ಅಂಗಡಿಯಲ್ಲಿ ಝಡತಿ ಮಾಡುತ್ತೇನೆ! ದಂಡ ಮಾಡುತ್ತೇನೆ!" ಎಂದು ಮುಂತಾಗಿ ಹೆದರಿಕೆ ಹಾಕುತ್ತಾರೆ. ಅಂಗಡಿಕಾರರಿಗೆ ಕಚೇರಿಗೂ ಕರೆಯುತ್ತಾರಂತೆ. ಹೀಗೆ ಮಾಡುವದರಲ್ಲಿ ಅವರ ಅಂತಃಸ್ಥ ಉದ್ದೇಶವೇನಿರುತ್ತದೆಂದು ಯಾರು ಬಲ್ಲರು! ಜಿಲ್ಲಾಧಿಕಾರಿ ಅವರಿಗೆ ಅವರ ಅಧಿಕಾರದ ಮರ್ಯಾದೆಗಳನ್ನು ತಿಳಿಸಿಕೊಟ್ಟು, ಆ ಮರ್ಯಾದೆಗಳೊಳಗೇ ಇರುವಂತೆ ಸೂಚನೆ ಕೊಡಬೇಕೆಂದು "ಕ್ಷೇತ್ರವಾಸಿ"ಗಳೆಲ್ಲರು ಬಿನ್ನವಿಸುತ್ತಾರೆ.

ಗೋಕರ್ಣದೊಳಗಿನ ಗಂಜೀಗದ್ದೆ ರಾಜಮಾರ್ಗದಿಂದ ಉತ್ತರಕ್ಕೆ ಒಂದು ಓಣಿ ಹೋಗುತ್ತದೆ. ಈ ಓಣಿ ಹೆಚ್ಚು-ಕಡಿಮೆ ೮ ೧೦ ಫೂಟುಗಳಷ್ಟೇ ಅಗಲವುಂಟು. ಆದ್ದರಿಂದ ಮ್ಯುನಿಸಿಪಾಲಿಟಿಯವರು ಏನು ಮಾಡಿದ್ದಾರೆ! ರಸ್ತೆಯಲ್ಲೇ ನೀರಿನ ಬುಟ್ಟಿಗಳನ್ನು ಇಟ್ಟು ವ್ಯಾಪಾರ ಮಾಡುತ್ತಾರೆ. ಆದರಿಂದ ತಿರುಗಾಡುವವರಿಗೆ ದಾರಿಯೇ ಸಿಗುವದಿಲ್ಲ! ಆದರೂ ಈ ಅತಿಕ್ರಮವನ್ನು ಮ್ಯುನಿಸಿಪಾಲಿಟಿಯವರೂ ಪ್ರತಿಬಂಧಿಸುವದಿಲ್ಲ! ಪೋಲೀಸರೂ ತಡೆಯುವದಿಲ್ಲ! ಜಿಲ್ಲಾಧಿಕಾರಿಗಳೇ ಇದಕ್ಕೆ ತಡೆಹಾಕಬೇಕಾಗಿ ಅರಿಕೆಯಿದೆ.

ಬರ್ಗಿ ಗ್ರಾಮದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ದೇವಸ್ಥಾನವಿದೆ. ದೇವರಿಗೆ ೨೦೦—೩೦೦ ರೂ. ಆದಾಯ

ಆಜ್ಞೆ.

ನಂಬರ ೨೧
ಕಾರವಾರ, ತಾ. ೨೩-೩-೧೯೪೬

ಹಿಂದುಸ್ಥಾನ-ಸಂರಕ್ಷಣ ಕಾನೂನಿನ ಬಾಬತು ನಿಯಮದ (೨೮ನೇಯ) ಉಪನಿಯಮಕ್ಕೆ ಜೋಡಿಸಲ್ಪಟ್ಟ (೩೩) ಕಲಮು ಡಿಫೆನ್ಸ್ (ರಾಜಕೀಯ-ಯುದ್ಧ) ಯವರು ತಾ ೧೪-೯-೧೯೪೪ಕ್ಕೆ ಹೊರಡಿಸಿದ ಎಸ್. ಡಿ. II ೧೩೭೦ನೇ ನಂಬರಿನ ಸರಕಾರಿ ಪ್ರಕಟನೆ ಇವುಗಳನ್ವಯ ದೊರೆತ ಅಧಿಕಾರಗಳನ್ನೂ, ಹೀಗೆ ಮಾಡಲು ಅಧಿಕಾರ ಕೊಡುತ್ತಿರುವ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಈ ಕೆಳಗಿನಂತೆ ಹುಕುಮು ಮಾಡುತ್ತಾರೆ.—

ಜಿಲ್ಲೆಯ ಹೊರಗಿಂದ (ಪ್ರತಿ ಡಬ್ಬಿಯಲ್ಲಿ ೩೬ ರತ್ತಲಿನಂತೆ ಎಣ್ಣೆಯಿರುವ) ೧೦ ಕ್ಕಿಂತ ಹೆಚ್ಚಿಗೆ ಹೊರಗಿನ ಎಣ್ಣೆಯ ಡಬ್ಬಿಗಳನ್ನು ಆಮದು ಮಾಡುವ ಪ್ರತಿಯೊಬ್ಬನು ತನ್ನ ಸ್ವಂತದ ಬಗ್ಗೆ ಯಾ ಬೇರೆಯವರ ಬಗ್ಗೆ ಯಾ ಬೇರೆಯವರೊಡನೆ ಇರುವ ತನ್ನ ಭಾಗೀದಾರಿಯ ಬಗ್ಗೆ ತಂದ ಎಣ್ಣೆಯ ಪೂರ್ಣ ಮತ್ತು ನಿಜವಾದ ಮಾಹಿತಿಯನ್ನು, ಇದಕ್ಕೆ ಜೋಡಿಸಿದ ಪರಿಶಿಷ್ಟದೊಳಗೆ ಕೊಟ್ಟ ನಮೂನೆಯಲ್ಲಿ, ಎಣ್ಣೆ ಬಂದು ತಲ್ಪಿದ ೭ ದಿವಸಗಳೊಳಗ ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ ಇವರಿಗೆ ಪೂರೈಸಬೇಕು.

ಇನ್ನು ಹುಕುಮು ಮಾಡುವದೇನೆಂದರೆ— ಸದರಿ ಮಾಹಿತಿ ಪತ್ರಕದ ಒಂದು ಪ್ರತಿಯನ್ನು ತಾನಿರುವ ತಾಲೂಕಿನ ಪೇಟೆಯ ಮಾಮಲೇದಾರರಿಗೂ/ಮಹಾಲಕರಿಗಳಿಗೂ ಕೊಡಬೇಕು.

ಪರಿಶಿಷ್ಟ.

೧ ಎಣ್ಣೆ ತರಿಸಿದವನ ಪೂರ್ಣ ಹೆಸರು ಮತ್ತು ವಿಳಾಸ
ಎಲ್ಲಿಂದ ಎಣ್ಣೆ ತರಿಸಿದೆಯೋ ಆ ಸ್ಥಳದ ಹೆಸರು
೩ ಆಮದು ಮಾಡಿದ ಎಣ್ಣೆಯ ಪರಿಮಾಣ
೪ ಎಣ್ಣೆಯನ್ನು ಸಂಗ್ರಹ ಮಾಡಿಟ್ಟ ಅಥವಾ ಇಟ್ಟಿರುವ ಸ್ಥಳ ಸರಿಯಾಗಿ ಎಲ್ಲಿ ಎಂಬುದರ ವರ್ಣನೆ
೫ ಎಣ್ಣೆ ಖರೀದಿಸಿದ್ದಕ್ಕೆ ಕೊಟ್ಟ ಕ್ರಯ
೬ ಎಣ್ಣೆ ತರಿಸಿದ್ದಕ್ಕೆ ತಗಲಿದ ವೆಚ್ಚ ಮತ್ತು ಬೇರೆ ಸಂಬಂಧಪಟ್ಟ ವೆಚ್ಚ — ವಿವರಗಳ ಸಹಿತ

ಯಾರಾದರೂ ಈ ಆಜ್ಞೆಯನ್ನು ಉಲ್ಲಂಘಿಸಿದಲ್ಲಿ, ಅವನು ಬೇರೆ ಯಾವದೇ ಶಿಕ್ಷೆಗೆ ಪಾತ್ರನಾದಾಗ್ಯೂ, ಅವನ ಅಪರಾಧದ ತನಿಖೆ ಮಾಡುವ ನ್ಯಾಯಾಧೀಶನು ಯಾವ ಎಣ್ಣೆಯ ಸಂಗ್ರಹದ ಸಂಬಂಧದಲ್ಲಿ ಆ ಅಪರಾಧವಾಗಿದೆಯೆಂದು ಮನವರಿಕೆಯಾಗುತ್ತದೋ ಆ ಎಣ್ಣೆಯ ಸಂಗ್ರಹವನ್ನು, ಅದರ ಆವರಣ-ಪಾತ್ರಗಳ ಸಹಿತ, ಸರಕಾರ ಜಮಾ ಮಾಡಲು ವಿಧಿಸಬಹುದು.

ಹಿಂದುಸ್ಥಾನ ರಕ್ಷಣ ಕಾನೂನಿನ ೧೧೯ನೇ ನಿಯಮದ (೧)ನೆಯ ಉಪನಿಯಮಕ್ಕನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಜಾಹೀರಪಡಿಸತಕ್ಕದ್ದು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝೆಟಿನ ೧ನೇ ಭಾಗದಲ್ಲಿ ಪ್ರಕಟಿಸಕೊಳ್ಳಬೇಕು
( ) ಆಜ್ಞೆಯ ಕನ್ನಡ ಅನುವಾದದ ಒಂದು ಪ್ರತಿಯನ್ನು ಈ ಕೆಳಗೆ ಕಾಣಿಸಿದ ಪತ್ರಿಕೆಗಳಲ್ಲಿ ಪ್ರಸಿದ್ಧಿಗೆ ಕೊಡಬೇಕು —
(೧) ಕಾನಡಾ ವೃತ್ತ, ಕುಮಟಾ (೨) "ಹಿತವಾದಿ", ಕಾರವಾರ
(ಕ) ಕನ್ನಡ ಅನುವಾದದ ಪ್ರತಿಗಳನ್ನು ಜಿಲ್ಲೆಯೊಳಗಿನ ಎಲ್ಲ ಮುಲ್ಕೀ ಕಚೇರಿಗಳಲ್ಲೂ ಜಿಲ್ಲಾ ಪೋಲೀಸ ಕಚೇರಿಯಲ್ಲೂ ಇರುವ ನೋಟೀಸ-ಬೋರ್ಡುಗಳಿಗೆ ಅಂಟಿಸಬೇಕು

F. N. RANA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ನೋಟೀಸು.

ನಂ ೬
ಕಾರವಾರ, ತಾ ೨೭-೩-೪೬

ಮುಂಬಯಿ ಟಾರಕೋಲ ಮತ್ತು ಘಾಸಲೇಟ ಸ್ಟೀಲ ಲೈಸೆನ್ಸಿಂಗ ಆರ್ಡರ ೧೯೪೪ರನ್ವಯ ಚಾಲು ಇದ್ದ ಎಲ್ಲ ಪರವಾನಿಗೆಗಳ ಅವಧಿಯನ್ನು ತಾ. ೧-೪-೧೯೪೬ರೊಳಗಾಗಿ ಬೆಳೆಸಿಕೊಳ್ಳಬೇಕಾಗಿ ಈ ಕಚೇರಿಯ ನಂಬರ ೬ ತಾ ೧೩—೨—೧೯೪೬ ನೇ ನೋಟೀಸಿನಲ್ಲಿ ಜಾಹೀರ ಮಾಡಲಾಗಿತ್ತು. ಆದರೆ ಸದರಿ ಪರವಾನಿಗೆಗಳ ಅವಧಿಯನ್ನು, ಮೇಲೆ ನಮೂದಿಸಿದ ಆರ್ಡರಿನಲ್ಲಿ ತಿದ್ದುಪಡಿ ಮಾಡಿ, ತಾ ೩೦—೪—೧೯೪೬ ರ ವರೆಗೆ ಬೆಳೆಸಿಕೊಟ್ಟಿದೆ. ಕಾರಣ ಎಲ್ಲ ಪರವಾನಿಗೆದಾರರು ಈ ಕಚೇರಿಯ ತಾ ೧೩—೨—೧೯೪೬ ರ ೬ನೇ ನಂಬರಿನ ನೋಟೀಸಿನಲ್ಲಿ ತಿಳಿಸಿದಂತೆ ಅರ್ಜಿ, ತಮ್ಮ ಪರವಾನಿಗೆಗಳ ಅವಧಿಯನ್ನು ತಾ ೨೦-೪-೧೯೪೬ರೊಳಗಾಗಿ ಬೆಳೆಸಿಕೊಳ್ಳತಕ್ಕದ್ದು.

F N RANA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಹೊನ್ನಾವರ ತಾಲೂಕ **ಗುಂಡಬಾಳೆ** ಶ್ರೀ ವೆಂಕಟರಮಣ-ಮುಖ್ಯಪ್ರಾಣ ದೇವರ ಸನ್ನಿಧಿಯಲ್ಲಿ ಅಖಂಡ ಹರಕೆಯ ದಶಾವತಾರ ಆಟಗಳು ತಾ ೨೮-೩-೪೬ರಿಂದ ಆರಂಭವಾಗಿದೆ. ಹರಕೆ ಹಾಕಿಕೊಂಡವರು ತಮ್ಮ ಆಟಗಳನ್ನು ಇದೇ ಬರುವ ವೈಶಾಖ ಶು॥ ೧೫ರೊಳಗೆ ಪೂರೈಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷೆಯಿದೆ.

ನೀಲಕಂಠ ವೆಂಕಟ್ರಮಣ ಪ್ರಭು, ವ್ಯವಸ್ಥಾಪಕ

ನಮ್ಮಲ್ಲಿ (ಹೋಲಸೇಲ) ರೀತಿ ವ (ರಿಟೇಲ) ಬಿಲ್ಲಿನ

ಡಿನೇಚರ್ಡ ಸ್ಪಿರಿಟ್

ಮಾರಲಿಕ್ಕೆ ಸಿಗುತ್ತದೆ.

ವಿ ಎಮ್. ನಿಂಜೂರಕರ,
ಲಾಯಸನ್ಸ, ಮೋಟರ ಸ್ಟ್ಯಾಂಡ, ಕುಮಟಾ

ನೋಟೀಸು.

ಸನ್ 1946ನೇ ಇಸವಿಯ ಮಾರ್ಚ ತಿಂಗಳ ಬಾಬ್ತು ತಾ. 31-3-1946ನೇ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು.

ಪ್ರೊವ್ಹಿನ್ಶಿಯಲ್ ಟೆಕ್ಸ್ಟೈಲ ಕಂಟ್ರೋಲರ, ಕಾಳಾಚೌಕಿ ಪೋಸ್ಟ ಆಫೀಸ ಎದುರು, ಪರೇಲ ರೋಡ, ಮುಂಬಯಿ (Provincial Textile Controller, opposite Kalachowki Post Office Parel Road, Bombay) ಇವರಿಗೆ ನೂಲಿನ ಮಾರಾಟದ ಲಾಯಸನ್ಸದಾರರಿಂದ ಮೇಲೆ ನಮೂದಿಸಿದ ಮಾಹಿತಿಯು, ನಿರ್ದಿಷ್ಟಪಡಿಸಿದ ಫಾರ್ಮದಲ್ಲಿ, ತಾ 5-4-1946 ನೇದರೊಳಗಾಗಿ ತಲುಪಬೇಕಾಗಿರುತ್ತದೆ. ಗೊತ್ತುಪಡಿಸಿದ ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ **ನದಾರದ** ಮಾಹಿತಿಯನ್ನು ಕಳಿಸತಕ್ಕದ್ದು. ಕೇವಲ ನೂಲಿನ ಮಾರಾಟದ ಲಾಯಸನ್ಸದಾರರು ಸದರಿ ಮಾಹಿತಿಯನ್ನು ಮುದ್ದತ್ತಿನೊಳಗೆ ಮುಟ್ಟುವಂತೆ ತಪ್ಪದೆ ರವಾನಿಸಬೇಕು.

Bombay,
30-3-1946

J. K. THAKORE,
Provincial Textile Controller, Bombay

THE BANK OF RURAL INDIA, LTD.,

[Incorporated in *British India* under the Indian Companies Act, 1913]

HEAD OFFICE "Satyabhama Bhavan", **KARWAR.**

Offices at:- KARWAR, KUMTA, SIRSI, HONAVAR & YELLAPUR.

Applications from young, energetic and educated young men with good moral character are invited for training as Clerks and Accountants for the new offices to be opened

Good prospects for really capable hands.

Men with previous banking experience preferred

Karwar,
1 3-1946

P. X. GRACIOUS,
MANAGING DIRECTOR

ಭೂಮಿಯಾಗಿದೆ. ದೇವಸ್ಥಾನದ ಎಲ್ಲ ಮೂರ್ತಿ ಕಳೆದು ಹೋದ ಪಶ್ಚಿಮ ಮೇಲೆ ೬೦೦–೭೦೦ ರೂ ಬೆಲೆಯ [illegible] ಉತ್ಪನ್ನವಿದೆ ಆದರೆ ಈಗ ದೇವಸ್ಥಾನ ನೋಡಿದರೆ ಕಣ್ಣು ಮುಚ್ಚಬೇಕು! ಗುಡಿ-ಗೋಪುರವೆಲ್ಲ ಜೀರ್ಣವಾಗಿ ಬೀಳ ಹತ್ತಿದೆ! ಅಂಗಡಿ ಬಾಕಿಯ [illegible] ಹಾಳಾಗಿ ಅಲ್ಲಿ ಹುಳಗಳಾಗುತ್ತವೆ! ಆದರೂ ಮೊಕ್ತೇಸರರು ಆಸ್ಥಾಬದ್ಧ ಮಾಡಿಸುವ ಹಲ್ಲಿನ ಗುಡಿಯ ಜೀರ್ಣೋದ್ಧಾರ ಮಾಡುವ ಮಾತನ್ನೂ ಆಡುವದಿಲ್ಲ! ವಿಚಾರವನ್ನೂ ಮಾಡುವದಿಲ್ಲ! ಹಿಂದಿನ ಮೊಕ್ತೇಸರರೊಬ್ಬರು ಗುಡಿ ಕಟ್ಟಿಸಲಿಕ್ಕೆಂದು ಕಲ್ಲು ತರಿಸಿಟ್ಟಿದ್ದರು ಈಗ ಅವು ಮಾಯವಾಗಿವೆ! ಮನೆ ಕಟ್ಟಲಿಕ್ಕೂ ಹೊಲಗಳಿಗೆ ನಾನಾ ಕಾರ್ಯಗಳಿಗೂ ಅವು ಉಪಯೋಗಿಸಲ್ಪಟ್ಟಿವೆಯೆಂದು ಹೇಳುತ್ತಾರೆ. ಕಳೆದ ೩೦–೩೫ ವರ್ಷಗಳಲ್ಲಿ [illegible] ರೂ. ದೇವರ ಭಂಡಾರದಲ್ಲಿ ತುಂಬಿಸಬೇಕಾಗಿತ್ತು ಆದರೆ ಅದು ಉಂಟೋ ಇಲ್ಲವೋ, ಇದ್ದರೆ ಎಲ್ಲಿದೆ, ಇಲ್ಲದಿದ್ದರೆ ಯಾಕಿಲ್ಲ ಎಂಬುದ್ಯಾವದೂ ತಿಳಿಯದು! ದೇವಸ್ಥಾನದ ಲೆಕ್ಕಪತ್ರಗಳಿಗೆ ಬರದಿದ್ದ ಮೇಲೆ ಇದೆಲ್ಲ ಎಲ್ಲಿಂದ ತಿಳಿಯಬೇಕು? ಸ್ಥಳೀಯ ಕಮಿಟಿಯವರು ಇತ್ತ ಗಮನಿಸಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಅನುಕೂಲ ಮಾಡಿಕೊಡಬಾರದೇ" ಎಂದು ಸರ್ವ ಊರವರ [illegible] ಪ್ರಾರ್ಥನೆ.

ಕಳೆದ ಸೋಮವಾರ ರಾತ್ರಿ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ, ಗಾಂಧಿ ಚೌಕದಲ್ಲಿ ಸಾರ್ವಜನಿಕರು ಸಭೆ ಸೇರಿ, ಕಾಂಗ್ರೆಸ ಪರವಾಗಿ ಎಸೆಂಬ್ಲಿಗೆ ಆರಿಸಲ್ಪಟ್ಟ ಶ್ರೀ॥ ಶಾಸ್ತ್ರಿ, ಗಾಂವಕಾರ, ಪ್ರಭು ಇವರನ್ನು ಅಭಿನಂದಿಸಿದರು ಮುಂದೆಯೂ ಹೀಗೆಯೇ ಶ್ರದ್ಧೆಯಿಂದಲೂ ವಿಶ್ವಾಸದಿಂದಲೂ ಇವರು ಕಾಂಗ್ರೆಸ ಸೇವೆಯನ್ನೂ, ದೇಶಸೇವೆಯನ್ನೂ ಪ್ರಾಮಾಣಿಕವಾಗಿ [illegible] ಕೈಕೊಳ್ಳಲಿ. ಚುನಾವಣೆಯಲ್ಲಿ ಇವರಿಗೆ ಸಹಾಯ ಮಾಡಿದ ಮತ್ತು ಮತ ಕೊಟ್ಟ ಸಕಲರ ಆಭಾರ ಮನ್ನಿಸಿದರು.

ಇಲ್ಲಿಯ ಕರ್ನಾಟಕ ಸಂಘದವರು ಇದೇ [illegible] ಇಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಲನವನ್ನು ಕೂಡಿಸಬೇಕೆಂದು ಸಂಕಲ್ಪಿಸಿದ್ದಾರೆ.

ಸಂಘದಲ್ಲಿ ಸೇರಿದ ಶಿಕ್ಷಕ-ಶಿಕ್ಷಕಿಯರು ಕಳೆದ ಬುಧವಾರ ಮಧ್ಯಾಹ್ನ, ತಮ್ಮ ಅಸಂತೋಷದ ಪ್ರದರ್ಶನಕ್ಕಾಗಿ, ಕರೀ ಬಾವುಟಗಳ ಸಹಿತ [illegible] ಮೆರವಣಿಗೆ ತೆಗೆದಿದ್ದರು.

ಗಂಡು ಮಕ್ಕಳ ಕನ್ನಡ ಮುಲ್ಕೀ ಪರೀಕ್ಷೆಗೆ ಮುಂದಿನ ಸೋಮವಾರ ತಾ ೮ಕ್ಕೆ ಪ್ರಾರಂಭವಾಗುವದಿತ್ತು. ಆದರೆ ಕೆಲವೊಂದು ಅಡಚಣಿಗಳುಂಟಾದ್ದರಿಂದ ಆ ಪರೀಕ್ಷೆ ಮುಂದೂಡಲ್ಪಟ್ಟಿದೆ ಏಪ್ರಿಲ ತಿಂಗಳ ಕೊನೆಯ ಯಾ ಮೇ ತಿಂಗಳ ಮೊದಲನೆಯ ವಾರದಲ್ಲಿ ಆ ಪರೀಕ್ಷೆಯಾಗುವದಂತೆ.

ಹೊನ್ನಾವರ— (ತಾ. ೨೭—೩—೪೬)

ಮ್ಯುನಿಸಿಪಾಲಿಟಿಯವರು ರಸ್ತೆಗಳ ಮೇಲೆ ನೀರು ಹಾಕಿಸ — ಅಲ್ಲ, ಸಿಂಪಡಿಸುತ್ತಿದ್ದಾರೆ ದೂಳಿನ ಉಪದ್ರವ ಮಾತ್ರ ಹಿಂದಿನಷ್ಟೇ ಉಂಟು.

ಇಂಜಿನಿಯರ ಇಲಾಖೆಯವರು ತಮ್ಮ ಕಕ್ಷೆಯ ಗಟಾರಗಳೊಳಗಿನ ಮಣ್ಣು ತೆಗೆಯಿಸಿ ದಾರಿಯ ಮೇಲೆ ಹಾಕಿಸಿದ್ದಾರೆ ಆದರಿಂದ ಮಳೆಗಾಲದ [illegible] ಮಾರ್ಗದಲ್ಲಿ ಹರಿದು ಬರ್ವುದೆ! ಬಂಗಾಲಿನಿಂದ [illegible] ವರೆಗೆ ಬಹಳ ಕಷ್ಟವಾಗಿದೆ. ಮಾರ್ಗದ ಮೇಲೆ ದೂಳಿನ [illegible] ಹೊಯ್ಯಾಗಿದೆ!

ನಿಯಂತ್ರಿತ ಕೌಂಟರ ಅಂಗಡಿಯವರು ತಮ್ಮ [illegible] ಪದಾರ್ಥವನ್ನು ಇನ್ನೂ [illegible] ಇಲ್ಲಿಗೆ ಬಂದದ್ದರಿಂದ ಒಂದು ಅಂಗಡಿಯಲ್ಲಿ ದೊರೆತಿದ್ದಿಲ್ಲ ಒಂದು ಬೆಲ್ಲದ ಮುದ್ದೆ ತಂದಿಟ್ಟಿದ್ದರು. ಅದೆಲ್ಲೋ ಅದನ್ನು ಮಾಮಲೇದಾರ ಕಚೇರಿಯ [illegible] ಅಂಗಡಿಕಾರನ ಪರೀಕ್ಷೆ ಮಾಡಲು ಅವರೊಂದು ಸುಳ್ಳು (bogus) ಗಿರಾಕಿಗೆ ಬೆಲ್ಲ ಕೊಂಡು ಕೊಳ್ಳಲು ಅಂಗಡಿಗೆ ಕಳಿಸಿಕೊಟ್ಟರು. ಅಂಗಡಿಯವನು ಅದು ತನ್ನ ಬೆಲ್ಲವಲ್ಲವೆಂದು ಹೇಳಿ ಗಿರಾಕಿಗೆ ತಿರುಗಿ ಕಳಿಸಿದನು ಆಗ ಅಂಗಡಿಯಲ್ಲಿ ಬೆಲ್ಲವಿದ್ದು ನಿಯಂತ್ರಣ ದರದಿಂದ ಮಾರಲು ಅಂಗಡಿಕಾರನು ಒಲ್ಲೆಂದನು ಎಂಬ ಆಪಾದನೆ ಹೊರಿಸಿ [illegible] ಶಿಕ್ಷೆ ಮಾಡಿಕೊಟ್ಟರು. ಕೆಳದ [illegible] ಈ ಬೆಲ್ಲ [illegible] ಅಂಗಡಿಯಲ್ಲಿದ್ದ ಬೆಲ್ಲ [illegible] ಅಂಗಡಿಕಾರನದಿಲ್ಲವೆಂದೂ [illegible] ನಿರ್ಣಯವಾಗಿದೆ. [illegible] ಧೈರ್ಯ ಮಾಡಿ ಸುಳ್ಳು [illegible] ಬಗ್ಗೆ [illegible] ಆಪಾದನೆ [illegible] ಬುದ್ಧಿ [illegible].

ನಿಯಂತ್ರಣ [illegible] ಕೊಡುವದಿಲ್ಲ [illegible] ಕೊಳ್ಳಬೇಕು! ಆದರಿಂದ [illegible] ಯಾಕ್ಕೇ ಅಂದರೆ ಪಾಯಲಿ ೧ಕ್ಕೆ [illegible] ರೂ. ಆಗಿದೆ

ಕಳೆದ ರವಿವಾರ [illegible] ಎಸೆಂಬ್ಲಿ ಚುನಾವಣೆಯಲ್ಲಿ ಯಶಸ್ವಿಯಾಗಿ ಜಯಿಸಿದ ಕಾಂಗ್ರೆಸ ಹುರಿಯಾಳುಗಳ ಅಭಿನಂದನೆಗಾಗಿ ಶ್ರೀ ಮಂಜುನಾಥ ಭಟ್ಟ ಕರ್ಕಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ಸಮಯೋಚಿತ ಭಾಷಣಗಳಾದವು. ನಗರ ಸಭೆ, ವರ್ತಕ ಸಂಘ, ಕ್ರಿಸ್ತೀ ಸಮಾಜ ಇವುಗಳ ಪ್ರತಿನಿಧಿಗಳು ಯಶಸ್ವಿ ಹುರಿಯಾಳುಗಳಿಗೆ ಹೂವಿನಹಾರಗಳನ್ನು ಹಾಕಿ ಸತ್ಕರಿಸಿದರು.

ಇಂದು ಮಧ್ಯಾಹ್ನ ಸಂಘದ ಸೇರಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಅಸಂತೋಷ ಪ್ರದರ್ಶನದ ಜೊತೆ ಕರಿಯ ಮೆರವಣಿಗೆಯೂ ಸಭೆಯೂ ನಡೆದವು

ಊರಲ್ಲಿ [illegible] 'ಹಸ' ಬರುವ [illegible] ಕಾಣದಿಲ್ಲ! [illegible] ಹಿಂದಿಯವಾದರೂ [illegible] ಒಂದಿಷ್ಟು [illegible] ಈಗ [illegible] ಯಾಗಿದೆ. ೧೦೦೦ [illegible] ಹಿಂದಿ [illegible] ಭಾರತ [illegible] ಪರವಾನೆ ಕೊಡಬೇಕಾಗಿ ಮಾಮಲೇದಾರರು [illegible] ಈಗ [illegible] ಆ ಪರವಾನೆ ಬಂದಿ [illegible]! [illegible] ನೋಡಿ ಅದು [illegible]! ನಿಯಂತ್ರಣ [illegible]!

[illegible] ಅಂಗಡಿಯಲ್ಲಿ [illegible] ಜನರಿಗೆ [illegible] ಸಿಗುವ [illegible] ಎನ್ನ [illegible] "[illegible] " ಎಂದು

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನ ತೆರವಾದ ಸದಸ್ಯ-ಸ್ಥಳದ

ಚುನಾವಣೆಯ ನೋಟೀಸು ಮತ್ತು ಕಾರ್ಯಕ್ರಮ.

ಕಾನಡಾ ಜಿಲ್ಲೆಯ ಸ್ಥಾನಿಕ ಅಧಿಕಾರಿಯಾದ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಮಾ॥ ಅಧ್ಯಕ್ಷರ ಕಡೆಯಿಂದ ಈ ಜಿಲ್ಲೆಯ ಲೋಕಲ ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳ ಸದಸ್ಯರೊಳಗಿನ [illegible] ಜನರಿಗೆ ತಿಳಿಸಲ್ಪಡುತ್ತದೇನಂದರೆ:—

೧ ತಾ. ೨೫–೨–೧೯೪೬ನೇ ದಿನದ ಮುಂಬಯಿ ಸರಕಾರೀ ಗೆಝೆಟಿನಲ್ಲಿ ಪ್ರಸಿದ್ಧವಾದ ೩೬೦೪ [illegible] ೨–೧೯೪೬ನೇ ಜಾಹೀರನಾಮೆಯಲ್ಲಿದ್ದ ಸೂಚನೆಗನುಸರಿಸಿ ಈ ಸ್ಥಾನಿಕ ಅಧಿಕಾರಿಯು ಸ್ಕೂಲ ಬೋರ್ಡಿನ ಮುಖಾಂತರ ತಾ ೧–೪–೧೯೪೬ನೇ ದಿವಸದಿಂದ ಪ್ರಾಥಮಿಕ ಶಿಕ್ಷಣದ ಹೊಣೆಯನ್ನೂ ಅಧಿಕಾರವನ್ನೂ ತೆಗೆದುಕೊಂಡಂತೆ, ಸ್ಥಾನಿಕ ಅಧಿಕಾರಿಯು ತಾ ೧–೪–೧೯೪೬ರಿಂದ ಮೊದಲಾದ ತ್ರೈವಾರ್ಷಿಕ ಅವಧಿಯ ಬಗ್ಗೆ ರಚಿಸಿದ ಸ್ಕೂಲ ಬೋರ್ಡಿಗೆ ಆರಿಸಲ್ಪಟ್ಟವರಲ್ಲಿ ಈ ಕೆಳಗೆ ವರ್ಣಿಸಲ್ಪಟ್ಟ ಸ್ಥಳಗಳು, ಅವುಗಳ ಮುಂದೆ ತೋರಿಸಿದ ಕಾರಣಗಳ ಸಲುವಾಗಿ, ತೆರವಾದ್ದರಿಂದ ಸಿ ಆ. ರೂಲ ೩೫ (೨)ರ ಪ್ರಕಾರ ಆ ಸ್ಥಳಗಳನ್ನು ತುಂಬುವ ಯೋಜನೆಯಾಗಿದೆ,

ಅ ನಂ	ತೆರವಾದ ಸ್ಥಳದ ವರ್ಣನೆ	ತೆರವಾದ ಕಾರಣ	ತೆರವಾದ ಸ್ಥಳಗಳ ಸಂಖ್ಯೆ
(೧)	ಶಿಕ್ಷಣದ ಅನುಭವವುಳ್ಳವರು	ರಾಜಿನಾಮೆಯಿಂದ	೧
(೨)	ಅಲ್ಪ ಸಂಖ್ಯಾಕ ವರ್ಗದ ಪ್ರತಿನಿಧಿ (ಮುಸಲ್ಮಾನರು)	ಮರಣದಿಂದ	೧

ಟಿಪ್ಪಣಿ:— ಈ ಸದಸ್ಯರು ಸ್ಥಾನಿಕ ಅಧಿಕಾರಿಯ ಸದಸ್ಯರೇ ಇರಬೇಕೆಂತಿಲ್ಲ (ಈ ಬಗ್ಗೆ ಪ್ರಾಥಮಿಕ ಶಿಕ್ಷಣದ ಕಾಯಿದೆಯಂತೆ ಆದ ೧೭ನೇ ನೇಮ ನೋಡಿರಿ)

೨. ೧೯೪೩ನೇ ಇಸ್ವಿಯ ಮುಂಬಯಿ ಪ್ರಾಯ್ಮರಿ ಎಜ್ಯುಕೇಶನ್ ಎಕ್ಟ IV ನೇದರಂತೆ ಮಾಡಿದ ನೇಮುಗಳೊಳಗಿನ ೧೭ (೪)ನೇ ನೇಮಕ್ಕನುಸರಿಸಿ ಮುಂಬಯಿ ಸರಕಾರದವರು ಪ್ರಸಿದ್ಧಪಡಿಸಿದ ಚುನಾವಣೆ ನೇಮ ೧–೨ರನ್ವಯ ಮೇಲಿನಂತೆ ತೆರವಾದ ಸ್ಥಳದ ಚುನಾವಣೆಯ ಬಗ್ಗೆ ಈ ಕೆಳಗಿನ ಕಾರ್ಯಕ್ರಮ ಸಲ್ಲಿಯಿಸಿದೆ

ಕಾರ್ಯಕ್ರಮದ ತಪಶೀಲು	ಸ್ಥಳ	ತಾರೀಖು ಮತ್ತು ವೇಳೆ.
(೧) ನೇಮಣೂಕಿ ಪತ್ರಗಳನ್ನು ಸ್ವೀಕರಿಸುವದು (ಚುನಾವಣೆ ನೇಮ ೪)	ಕಾನಡಾ ಜಿಲ್ಲಾ ಲೋಕಲ ಬೋರ್ಡ ಕಚೇರಿಯ ಅಟ್ಟದ ಮೇಲೆ (ಕಾರವಾರದಲ್ಲಿ)	೨೯–೪–೪೬ನೇ ಸೋಮವಾರ ಹಗಲು ೩ರಿಂದ ೫ರ ವರೆಗೆ (ಸ್ಟಾಂ ಟೈ.)
(೨) ನೇಮಣೂಕಿ ಪತ್ರಗಳನ್ನು ತಪಾಸಿಸುವದು (ನೇಮ ೫, ೬, ೭)	— ಡಿ —	ತಾ. ೩೦—೪—೪೬ ನೇ ಮಂಗಳವಾರ ಹಗಲು ೪ರಿಂದ ಮುಂದೆ (ಸ್ಟಾಂ ಟೈ.)
(೩) ಮತಗಳನ್ನು ಕೊಡುವದು	— ಡಿ —	ತಾ ೧೫ ೫–೪೬ನೇ ಬುಧವಾರ ಬೆಳಿಗ್ಗೆ ೮ರಿಂದ ೧೧ರ ವರೆಗೆ (ಸ್ಟಾಂ. ಟೈ)
(೪) ಮತಗಳನ್ನು ಎಣಿಸುವದು (ನೇಮ ೧೫) ಮತ್ತು ಪರಿಣಾಮ ಪ್ರಕಟಿಸುವದು (೧೬)	— ಡಿ —	ಅದೇ ದಿನ ಬೆಳಿಗ್ಗೆ ೧೧ ರಿಂದ ಮುಂದೆ (ಸ್ಟಾಂ ಟೈ)

೩. ಯಾವ ಉಮೇದವಾರರಿಗೆ ಸದರಿ ವಿಶಿಷ್ಟ ಹಿತಗಳ ಬಗ್ಗೆ ನಿಲ್ಲುವದಿದೆಯೋ ಅವರು ಪ್ರಾಯ್ಮರಿ ಎಜ್ಯುಕೇಶನ ಎಕ್ಟ ಕಲಂ ೩–೮ ಮತ್ತು ಪ್ರಾಯ್ಮರಿ ಎಜ್ಯುಕೇಶನ ರೂಲ ೧೭ (೧) ಇವುಗಳಲ್ಲಿ ಹೇಳಿದ ಸಂಗತಿಗಳ ಕಡೆಗೆ ಲಕ್ಷ ಕೊಟ್ಟು ನೇಮಣೂಕಿ ಪತ್ರಗಳನ್ನು ಕೊಡಬೇಕು.

೪ ನೇಮಣೂಕಿ ಪತ್ರದ ಫಾರ್ಮ ಯಾ ನಮೂನೆಗಳು ಮಾ॥ ಅಧ್ಯಕ್ಷ ಡಿ. ಲೋ. ಬೋ. ಕಾನಡಾ ಇವರ ಕಚೇರಿಯಲ್ಲಿ (ಕಾರವಾರದಲ್ಲಿ) ಸಿಗುವವು

೫ ಉಮೇದವಾರರ, ಕೊಡತಕ್ಕ ನೇಮಣೂಕಿ-ಪತ್ರದಲ್ಲಿ ಲೋಕಲ ಅಥೊರಿಟಿಯಾದ ಜಿಲ್ಲಾ ಬೋರ್ಡಿನ ಒಬ್ಬ ಸದಸ್ಯರಿಂದ ಅವರ ಹೆಸರು ಸೂಚಿಸಲ್ಪಡಬೇಕು; ಇನ್ನೊಬ್ಬ ಸದಸ್ಯರಿಂದ ಅನುಮೋದಿಸಲ್ಪಡಬೇಕು. ಹಾಗೆ ಸೂಚಿಸುವ ಮತ್ತು ಅನುಮೋದಿಸುವ ಸದಸ್ಯರು ಸದರ ನೇಮಣೂಕಿ-ಪತ್ರ ಕೊಡುವಾಗ ಹಾಜರ ಇರತಕ್ಕದ್ದು. ಉಮೇದವಾರರು ಸ್ವತಃ ಯಾ ತಮ್ಮ ಸೂಚಕ ಮತ್ತು ಅನುಮೋದಕರ ಕಡೆಯಿಂದ ನೇಮಣೂಕಿ-ಪತ್ರವನ್ನು ರಿಟರ್ನಿಂಗ ಆಫೀಸರರ ಕಡೆಗೆ ಕೊಡತಕ್ಕದ್ದು. ಉಮೇದವಾರರಿಗೆ ಸದಸ್ಯರಾಗಲಿಕ್ಕೆ ತಕ್ಕ ಯೋಗ್ಯತೆಯು ಪ್ರಾಥಮಿಕ ಶಿಕ್ಷಣ-ಕಾಯಿದೆ ವ ನೇಮಗಳ ಪ್ರಕಾರ ಇದ್ದ ಬಗ್ಗೆ ಪುರಾವೆ ಬೇಕೆಂದು ರಿಟರ್ನಿಂಗ ಆಫೀಸರರಿಗೆ ಅನಿಸಿದಲ್ಲಿ ನೇಮಣೂಕಿ ಪತ್ರಗಳ ತಪಾಸಣೆಯ ಕಾಲಕ್ಕೆ ಉಮೇದವಾರರು ಅಂಥ ಪುರಾವೆ ಕೊಡಬೇಕಾಗುವದು.

೬ ಚುನಾವಣೆ ನೇಮ ೩ರಂತೆ ಸ್ಥಾನಿಕ ಅಧಿಕಾರಿಯ ಅಧ್ಯಕ್ಷರು ಚುನಾವಣೆಯ ರಿಟರ್ನಿಂಗ ಆಫೀಸರರಿರುತ್ತಾರೆ.

ಕಾರವಾರ,
ತಾ ೨೦–೩–೧೯೪೬.

N. P. Pai,
C O, D. L B., Kanara.

D. S. NAIK,
President, D.L B, Kanara.

ಅಭಾರ-ಮನ್ನಣೆ.

ಇದೇ ಕಳೆದ ತಾ ೨೫ಕ್ಕೆ ಜರುಗಿದ ಮುಂಬಯಿ ಪ್ರಾಂತಿಕ ಎಸೆಂಬ್ಲಿ ಚುನಾವಣೆಯಲ್ಲಿ, ಮುಸ್ಲಿಮ ಲೀಗಿನ ಪರವಾಗಿ ನಿಂತ ನನ್ನನ್ನು ಕಾರವಾರ ಜಿಲ್ಲೆಯ ಮುಸ್ಲಿಮ ಮತದಾರ-ಬಾಂಧವರು ಬಹುಮತದಿಂದ ಆರಿಸಿಕೊಟ್ಟು ನನ್ನ ಮೇಲೆ ಪ್ರೇಮವನ್ನೂ ಮುಸ್ಲಿಮ ಲೀಗಿನ ಮೇಲೆ ಭಕ್ತಿ-ವಿಶ್ವಾಸಗಳನ್ನೂ ವ್ಯಕ್ತಗೊಳಿಸಿದುದಕ್ಕಾಗಿ ನಾನು ಸಕಲರಿಗೂ ಕೃತಜ್ಞನಿರುವೆನು ನನ್ನನ್ನು ಆರಿಸಿ ತರುವದಕ್ಕಾಗಿ ಬಗೆಬಗೆಯಿಂದ ದುಡಿದ ಮತ್ತು ಪ್ರಯತ್ನಪಟ್ಟ ಸಮಸ್ತ ಗೆಳೆಯರಿಗೂ ನನ್ನ ಹಾರ್ದಿಕ ವಂದನೆಗಳನ್ನರ್ಪಿಸುತ್ತೇನೆ ಇವರೆಲ್ಲರಿಗೂ ಪ್ರತ್ಯಕ್ಷ ಭೆಟ್ಟಿಯಾಗಿಯೇ ನನ್ನ ಕೃತಜ್ಞತೆ ಸಲ್ಲಿಸಬೇಕೆಂದು ನನ್ನ ಸಂಕಲ್ಪವಿತ್ತು. ಆದರೆ ನಾಳಿನ ಮಂಗಳವಾರ ತಾ ೨ಕ್ಕೆ ಮುಂಬಯಿಯಲ್ಲಿ ಕೂಡುವ ಎಸೆಂಬ್ಲಿ ಲೀಗ ಸದಸ್ಯರ ಸಭೆಗೆ ಬರಬೇಕೆಂದು ತಂತಿಯ ಕರೆ ಬಂದಿದ್ದರಿಂದ ಆ ಮಾರ್ಗ ನಾನು ಬಿಟ್ಟುಕೊಡಬೇಕಾಗಿದೆ ಕಾರಣ ಸಮಸ್ತ ಬಾಂಧವರು ನನ್ನನ್ನು ಕ್ಷಮಿಸುವರೆಂತಲೂ, ಇನ್ನು ಮುಂದಾದರೂ ಹೀಗೆ ನನ್ನಲ್ಲಿ ಪ್ರೇಮಾದರ-ವಿಶ್ವಾಸಗಳನ್ನಿಟ್ಟು ನನ್ನ ಕೈಯಿಂದಾಗುವಷ್ಟು ಸಮಾಜ ಸೇವೆಯನ್ನೂ ಜಿಲ್ಲೆಯ ಸೇವೆಯನ್ನೂ ಮಾಡಿಸಿಕೊಳ್ಳುವರೆಂತಲೂ ನಾನು ಆಶಿಸಿ, ತಿರುಗೊಮ್ಮೆ ಎಲ್ಲರ ಆಭಾರ ಮನ್ನಿಸುತ್ತೇನೆ

ತಾ ೩೧—೩—೧೯೪೬

ಜೇ. ಎಚ್. ಶಮಸುದ್ದಿನ, ಭಟಕಳ.

ಅಂಗಡಿಯವರು ಬೆದರಿಸುತ್ತಾರೆಂತಲೂ ಆದರೂ ಈ ಬಡವರ ಕೂಲಿಗಳಲ್ಲಿ ಎಷ್ಟೋ ಮಂದಿ ಹಸಿ ಕಳ್ಳ [illegible] ಮಾರುತ್ತಾರೆಂತಲೂ ಎಷ್ಟೋ ಪೆಟ್ಟಿಗೆಗಳನ್ನು ರಾತ್ರಿ ಹೊತ್ತು [illegible] ಬಸ [illegible] ತಪ್ಪಿಯಂತೆ ಮಾರುತ್ತಾರೆಂತಲೂ ಒಪ್ಪ [illegible] ತಿಳಿಸುತ್ತವೆ ಅಧಿಕಾರಿಗಳು ಚೌಕಶಿ ಮಾಡಬೇಕು

ಶಿರಸಿ— (ತಾ ೨೬-೩-೪೬) ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್ ದ್ವಾರಕಾನಾಥ ತೀರ್ಥ ಗುರುಗಳನ್ನು ತಾ [illegible] ಶ್ರೀ ವೆಂಕಟರಮಣ ದೇವರ ಗುಡಿಯಿಂದ ಶ್ರೀ ಗೋಪಾಲಕೃಷ್ಣ ಮಂದಿರಕ್ಕೆ ಕರೆದೊಯ್ಯಲಾಯಿತು [illegible] ದಿನಗಳ ವರೆಗೆ ಸಂಭ್ರಮದ ಭಿಕ್ಷೆ ಪಾದಪೂಜೆಗಳಾದವು [illegible] ಶ್ರೀ ಗುರುಗಳ [illegible] ಪ್ರವಚನಗಳಾಗುತ್ತಿದ್ದವು ಎಲ್ಲ ಸ್ಥಳಗಳ ಜನರು ಗುರುಗಳ ದರ್ಶನಕ್ಕಾಗಿ ಬರುತ್ತಿದ್ದರು [illegible] ಗುರುಗಳ ಸ್ವಾರಿಯು ಹುಬ್ಬಳ್ಳಿಗೆ ಪಯಣ ಬೆಳೆಸಿತು

ಹುಬ್ಬಳ್ಳಿಯಲ್ಲಿ [illegible] ಈ ತಾಲೂಕಿನಲ್ಲಿ ಮುಕ್ಕಾಮು ಮಾಡಿದ್ದ ಮಾಧ್ವವೈಷ್ಣವ ಮಠದ ಯತಿಗಳು ಒಟ್ಟಿಗೆ ಕೂಡಿ ಪರಸ್ಪರ ಪರಿಚಯ ಬೆಳೆಸಿಕೊಳ್ಳಬೇಕೆಂಬ ಯೋಜನೆಯಾಗಿತ್ತು ಅದರಂತೆ ಅಂದು [illegible] ಸೋದೆಯಲ್ಲಿದ್ದ ಭಂಡಾರಕೇರಿ ಮಠದ ಶ್ರೀಮದ್ ವಿದ್ಯಾಮಾನ್ಯ ತೀರ್ಥರೂ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥರೂ ಹುಬ್ಬಳ್ಳಿ ಶ್ರೀ ವ್ಯಾಸರಾಯ ಮಠಕ್ಕೆ ಚಿತ್ತೈಸಿದ್ದರು ವ್ಯಾಸರಾಯ ಮಠದ ಶ್ರೀ [illegible] ತೀರ್ಥರು ಅವರನ್ನು [illegible] ಗೌರವಗಳಿಂದ ಬರಮಾಡಿಕೊಂಡಿದ್ದರು [illegible] ಗುರುಗಳು [illegible] ಮಾಡಿದ [illegible] ಮುಂದೆ ಆ ಶ್ರೀಮದ್‌ಯತಿಗಳು ಗೌರವ [illegible] ಶ್ರೀ ದ್ವಾರಕಾನಾಥ ತೀರ್ಥರನ್ನು [illegible] ಮಠದ ಬಾಗಿಲಲ್ಲಿ ಶ್ರೀ [illegible] ತ್ರಯ [illegible] ಸ್ವಾಗತಿಸಿ [illegible] ದೇವದರ್ಶನ ಮಾಡಿಸಿದರು [illegible] ಅಲಂಕೃತ ಮಾಡಿಟ್ಟ ಆಸನಗಳನ್ನು ಅನುಗ್ರಹಿಸಿದರು ಗೋಕರ್ಣ ಮಠದ [illegible] ಅಭ್ಯಾಗತ ಮಹನೀಯ ಗುರುಗಳ [illegible] ಕೂಡಲೇ ಹುಬ್ಬಳ್ಳಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದವರು [illegible] ಮಾಡಿದರು ಇಷ್ಟಾದ ಮೇಲೆ ಶ್ರೀ ದ್ವಾರಕಾನಾಥರು ಚಿಕ್ಕದೊಂದು ಭಾಷಣ ಮಾಡಿ ಅಭ್ಯಾಗತ ಯತಿವರ್ಯರನ್ನು ಕಾಣುವ ಸುಸಂಧಿ [illegible] ದೊರೆತ ಬಗ್ಗೆ ಸಂತೋಷ ವ್ಯಕ್ತಗೊಳಿಸಿದರು [illegible] ಪರಸ್ಪರ [illegible] ಅವಶ್ಯ [illegible] ಇಷ್ಟವಿದೆ ಮಾನವ [illegible] ಉನ್ನತಿಯ ಮಾರ್ಗ ತೋರಿಸಿಕೊಡುತ್ತ [illegible] ನಮ್ಮ ಸನಾತನ ಧರ್ಮವು [illegible] ಕಾರಣವೇ [illegible] ಹೆಚ್ಚುತ್ತಿರುವದರಿಂದ [illegible] ಪ್ರಾಚೀನ [illegible] ಇದೇ ಕಾರಣ ಇಂಥ ಪರಿಸ್ಥಿತಿಯಲ್ಲಿ ನಾವು ಸನಾತನ ಧರ್ಮದ [illegible] ಸಂಪ್ರದಾಯದ ಪುನರುಜ್ಜೀವನ ಮಾಡಬೇಕಾಗಿದೆ [illegible] ಅದರಿಂದ ನಾವು ನಮ್ಮೊಳಗೆ ಸಂಘಟನೆ ಮಾಡಿಕೊಂಡು [illegible] ಸಂಘಶಕ್ತಿಯ [illegible] ಸಂಗ್ರಹಿಸಬೇಕು [illegible] ವರ್ಣವಿಭಾಗಗಳ [illegible] ಕೂಡಿಸಿ ಧರ್ಮ ಪ್ರಚಾರದ ಒಂದು [illegible] ಸುಸಂಘಟಿತ ಕಾರ್ಯಕ್ರಮವನ್ನು [illegible] ಬೇಕೆಂದು ನಮ್ಮ [illegible] ಬೇರೆ ಬೇರೆ ಸಮಾಜಗಳ ಮುಂದಾಳುಗಳೂ ಗುರುಗಳೂ ಈ ಕಾರ್ಯಕ್ಕೆ [illegible] ಇಂದಿನ [illegible] ಒಂದು [illegible] ಪ್ರತೀಕವೆಂದು [illegible] ಇಂದಿನಂಥ ಪರಸ್ಪರ ದರ್ಶನದ ಯೋಗಗಳು ಪುನಃ ಪುನಃ ಬರಲಿ ಸನಾತನ ಧರ್ಮದ ಪುನರುದ್ಧಾರ ನಮ್ಮ [illegible] ಕೆಂದೂ ಧರ್ಮಗ್ಲಾನಿಯನ್ನು [illegible] ಅಭ್ಯುತ್ಥಾನ ಮಾಡಿ ಲೋಕಸಂಗ್ರಹ [illegible] ಧರ್ಮ [illegible] ಜಗದ್ಗುರು [illegible] ಶ್ರೀ ಲಕ್ಷ್ಮೀಶ ತೀರ್ಥ [illegible] ಮೇಲಿನ ಭಾಷಣಕ್ಕೆ ಪ್ರತ್ಯುತ್ತರರೂಪ [illegible] ಮಾಡಿ [illegible] ಧರ್ಮದ ಮಹತಿಯನ್ನು ಬಣ್ಣಿಸಿದರು ಮತ್ತು ಆ ಧರ್ಮದ ಪ್ರಚಾರ ಮಾಡುವದಕ್ಕಾಗಿ [illegible] ದಿಂದ [illegible] ನಡಿಸಿರುವ ಶ್ರೀ ಗೋಕರ್ಣ ಮಠಾಧೀಶರನ್ನು [illegible] ಅಮೇಲೆ ಕೂಡಿದ ಜನ [illegible] ಫಲ ಮಂತ್ರಾಕ್ಷತೆಗಳನ್ನು [illegible] ಶ್ರೀ ಲಕ್ಷ್ಮೀಶ ತೀರ್ಥರು ತಮ್ಮ ಮಠಕ್ಕೆ ಹಿಂತಿರುಗಿದರು ಶ್ರೀ ವಿದ್ಯಾಮಾನ್ಯ ತೀರ್ಥರೂ ಶ್ರೀ ವಿಶ್ವೇಶ ತೀರ್ಥರೂ [illegible] ಕ್ಕೆ ಪಯಣ ಬೆಳೆಸಿದರು

ಮರುದಿನ [illegible] ಸೋದೆಯಲ್ಲಿರುವ ಶ್ರೀ ವಾದಿರಾಜ ಮಠಕ್ಕೆ [illegible] ಆಮಂತ್ರಣ [illegible] ದಂತೆ ಶ್ರೀ ಮದ್ ದ್ವಾರಕಾನಾಥ [illegible] ಸೋದೆ [illegible] ಕ್ಕೆ ತೆರಳಿ [illegible] ಮಠದ ಗುರುಗಳಾದ ಶ್ರೀ ವಿಶ್ವೋತ್ತಮ ತೀರ್ಥರು ಅವರನ್ನು [illegible] ಸ್ವಾಗತಿಸಿ [illegible] ದೇವದರ್ಶನ ಶ್ರೀ ವಾದಿರಾಜ [illegible] ಸಮಾಧಿಯ ದರ್ಶನ ಮುಂತಾದ್ದು ಮಾಡಿಸಿ [illegible] ಸ್ಥಾನಕ್ಕೆ ಕರೆತಂದು [illegible] ಅಲ್ಲಿ [illegible] ಮುಂತಾದ [illegible] ಶ್ರೀ [illegible] ವಾದಿರಾಜ [illegible] ಆದವು [illegible] ಕೂಡಿ [illegible] ಮಂತ್ರಾಕ್ಷತೆ ಕೊಟ್ಟು ಸೋಂದೆ [illegible] ಕಲ್ಲಿಗೆ [illegible] ಆ [illegible] ಗುರುಗಳು [illegible] ಹೋಗಿ ಶ್ರೀ ಲಕ್ಷ್ಮೀಶ [illegible] ಗುರುಗಳ ಸಂದರ್ಶನ [illegible] ಅಲ್ಲಿ [illegible] ಪ್ರವಚನಗಳಾದವು ಶ್ರೀ ಭಗವತ್ಪಾದಾಚಾರ್ಯರೂ ಒಂದು ಭಾಷಣ ಮಾಡಿ, ಗೌಡ ಸಾರಸ್ವತ ಬ್ರಾಹ್ಮಣರ ಮಹತ್ವವನ್ನು ಕೊಂಡಾಡಿದರು [illegible] ಸಾರಸ್ವತ ಮಹಾ ಮುನಿಗಳು ಇತರ ಬ್ರಾಹ್ಮಣರಿಗೆ ವೇದಾಧ್ಯಾಪನ ಮಾಡಿಸಿದ್ದರೆಂತಲೂ ಈಗಲಾದರೂ ಸಾರಸ್ವತ ಧರ್ಮಾಧಿಕಾರಿಗಳೇ ಮುಂದಾಗಿ ಇತರರಿಗೆ ಮಾರ್ಗದರ್ಶನ ಮಾಡಬೇಕೆಂತಲೂ ಅವರು ನುಡಿದರು ಉಭಯ ಗುರುವರ್ಯರ ಸಮಾಗಮವಾದ ಬಗ್ಗೆ ಹರುಷಗೊಂಡರು ಶ್ರೀ ಲಕ್ಷ್ಮೀಶ ತೀರ್ಥರು [illegible] ಭಾರತದಂಥ ಪುಣ್ಯಭೂಮಿಯಿಲ್ಲ ಗಂಗೆಗಿಂತ ಪವಿತ್ರ ಜಲವಿಲ್ಲ, ನಮ್ಮ [illegible] ಗಿಂತ [illegible] ಗ್ರಂಥವಿಲ್ಲ ಶ್ರೀ ವಿಷ್ಣುವಿಗೆ ಸಮಾನನಾದ ದೇವರಿಲ್ಲ [illegible] ಶ್ರೀಮನ್ ಮಧ್ವಾಚಾರ್ಯರ ವಾಕ್ಯವನ್ನು ಮುಂದಿಟ್ಟುಕೊಂಡು ಸ್ಫೂರ್ತಿದಾಯಕ ಪ್ರವಚನ ಮಾಡಿದರು ಶ್ರೀ ದ್ವಾರಕಾನಾಥರೂ ಯಥೋಚಿತ ಉತ್ತರ ಕೊಟ್ಟು, ಕೂಡಿದ ಜನರನ್ನು ಆಶೀರ್ವದಿಸಿ ಸ್ವಸ್ಥಾನಕ್ಕೆ ತಿರುಗಿದರು

[illegible] ಶ್ರೀ [illegible] ಮಠಾಧೀಶರು [illegible] ಮಾರ್ಗವಾಗಿ [illegible] ಹೋದರು

ಆಜ್ಞೆ.

ನಂ ೧೪೪
ಕಾರವಾರ ತಾ ೪-೩-೧೯೪೬

ಉದ್ಯಾನ ಸಂರಕ್ಷಣ [illegible] (ತ)ನೆಯ [illegible] ( ) [illegible] ರಾಜ [illegible]) ಯ ನಂ ೧ [illegible] ಹೊರಡಿಸಿದ [illegible] ಪ್ರಕಟಣೆ [illegible] ದೊರೆತ ಅಧಿಕಾರಗಳನ್ನೂ, [illegible] ಅಧಿಕಾರಗಳನ್ನೂ ಉಪಯೋಗಿಸಿ ಕಾನಡಾ ಜಿಲ್ಲೆಯ [illegible] ಜಿಲ್ಹಾ ಮೆಜಿಸ್ಟ್ರೇಟರು ಈ ಕೆಳಗಿನಂತೆ [illegible] ಮಾಡುತ್ತಾರೆ —

[illegible] ಬೆಳೆಯುವರ [illegible] ಪರಿಶಿಷ್ಟದಲ್ಲಿ [illegible] ಜಿನಸುಗಳನ್ನು [illegible] ಮಾಡುವ ಪ್ರತಿಯೊಬ್ಬ [illegible] ಇರುವದಲ್ಲಿ [illegible] ನಮೂನೆಯ [illegible] ಇವರಿಗೆ [illegible]

ಇದನ್ನು [illegible] ನಮೂನೆ [illegible] ಪತ್ರಕದ ಒಂದು ಪ್ರತಿಯನ್ನು [illegible] ರುವ ತಾಲೂಕಿನ [illegible] ಕೊಡತಕ್ಕದ್ದು

([illegible] ಮಾಡಿ [illegible] ಭಾರತದ [illegible] ಜಿಲ್ಲೆ [illegible] ಮಾಸಗಳಿಗೆ [illegible] ಯಾದರೂ ಸದ್ರಿ ಜಿನಸುಗಳನ್ನು ಮಾರಿದಲ್ಲಿ

ಪರಿಶಿಷ್ಟ I

([illegible]) ಮಾಸಿಕ ಪತ್ರ ಮತ್ತು ಪತ್ರ
ಜಿನಸಿನ ಹೆಸರು
( ) ಒಂದು ವರುಷದ ಸಂಗ್ರಹದ ತಪಶೀಲು
(ಅ) ತನ್ನ ಸ್ವಂತದ ಬಗ್ಗೆ—
( ) ಬೇರೆಯವರ ಬಗ್ಗೆ—
([illegible] ಮತ್ತು [illegible] ಬಗ್ಗೆ —
( ) [illegible] ಜಿನಸುಗಳನ್ನು [illegible] ಮತ್ತು [illegible] ಬಗ್ಗೆ ಎಷ್ಟೆಷ್ಟು ಜಿನಸು ತರಿಸಿದೆಯೆಂಬ ಮಾಹಿತಿ
([illegible] ಜಿನಸು [illegible] ಇದ್ದಲ್ಲಿ [illegible] ಪೂರ್ಣ [illegible] ಮತ್ತು [illegible] ಎಷ್ಟೆಷ್ಟು ಜಿನಸು [illegible]

ಪರಿಶಿಷ್ಟ II

ಜಿನಸುಗಳು

			ಕೊಬ್ಬರಿ [illegible]	೨	ಪಟ್ಟೆಸಗು
[illegible]	[illegible]	೫	ಮೆಣಸು	೬	ಹಸಿರ ಬೇಳೆ
[illegible]		೮	[illegible]	೯	ಸೊಂಥೆ
[illegible]		೧೧	[illegible]	೧	[illegible] (ಹೆಸರು)
[illegible]			[illegible]	೧೪	[illegible]
[illegible]		೧	[illegible]		

[illegible] ಪರಿಶಿಷ್ಟದಲ್ಲಿ [illegible] ಭಾರತ [illegible] ಅಧಿಕಾರಿ [illegible] ಸಂಬಂಧದಲ್ಲಿ [illegible] ಗಿದೆಯೆಂದು [illegible]

[illegible] ನಿಯಮದ (೧) ನೆಯ [illegible] ಈ ಕೆಳಗಿನ [illegible] —

(ಅ) ಒಂದು ಪ್ರತಿಯನ್ನು [illegible] ಗನೇ [illegible] ದಲ್ಲಿ ಪ್ರಕಟಿಸಿಕೊಳ್ಳಬೇಕು
(ಬ) ಇದರ ಕನ್ನಡ ಅನುವಾದದ [illegible] ಪ್ರತಿಯನ್ನು ಈ ಕೆಳಗಿನ [illegible] ಪತ್ರಿಕೆಗಳಲ್ಲಿ ಪ್ರಸಿದ್ಧಿ ಕೊಡಬೇಕು —

(೧) [illegible] ವೃತ್ತ, ಕುಮಟ ( ) [illegible]

(ಕ) [illegible] ಪ್ರತಿಗಳನ್ನು [illegible] ಎಲ್ಲ [illegible] ಕಚೇರಿಗಳಲ್ಲೂ [illegible] ನೋಟೀಸ ಬೋರ್ಡಿಗೆ ಅಂಟಿಸಬೇಕು

F N RANA.
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

ಇದನ್ನು ಪಾಂಡುರಂಗ ಕೃಷ್ಣ [illegible] (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಮುಂಗಡವಾಗಿ
ವರ್ಷಕ್ಕೆ ರೂ [illegible]
[illegible]
[illegible]
[illegible]
[illegible]
[illegible]
[illegible]
ಕಳುಹಿಸಬೇಕು
ವರ್ಗಣಿಯು ಮುಂಗಡ [illegible]

Reg No E 1270 Monday 8th April, 1946

ಕಾನಡಾವೃತ್ತ

ವರ್ಷ ೩೮] THE KANARA NEWS [ಸಂಚಿಕೆ ೪೦

ಕುಂದಾಪು. ಸೋಮವಾರ, ತಾ ೮ ನೇ ಏಪ್ರಿಲ ೧೯೪೬ನೇ ಇಸವಿ

ಜಾಹೀರಾತುಗಳ ದರ
[illegible]
[illegible]
[illegible]
[illegible]
[illegible]
ಜಾಹೀರಾತುಗಳ ಬಗ್ಗೆ [illegible]
[illegible]
[illegible]

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಜಿಲ್ಲಾಧಿಪರ [illegible]

* * *

[illegible]

[illegible]

* * *

ಕೆಲ ಧಾನ್ಯಗಳ [illegible]

[illegible]

* * *

[illegible]

[illegible]

* * *

ಜಿಲ್ಲಾಧಿಪರ ಕಚೇರಿಯ [illegible]

The Agricultural & Industrial Bank, Ltd.
(Incorporated in British India Liability of Members limited)
Head Office COONDAPOOR S I

The Head Office and Branches of the Bank now accept
Season Deposits from three to six months at the following rates.-
Three Months at 2 per annum
Six Months at 2½% per annum
No such deposit will be allowed to run beyond 30th September 1946

Coondapoor
8 –1946

K. VAMAN SHENAI
CHAIRMAN

ವ ದರ ಇಳಿಸಿದೆ ಆದರೆ ಆ ಪ್ರಯೋಜನ [illegible] ಜನಗಳಿಗೆ ದೊರೆಯುವದಿಲ್ಲ ಜಿಲ್ಲಾಧಿಕಾರಿ ದರ ಇಳಿಸಿದ [illegible] ಹೊರಡಿಸುವ ವರೆಗೆ ಗಿರಾಕಿಗಳು ಮೊದಲಿನ ದರವನ್ನೇ ಕೊಡಬೇಕಾಗುತ್ತದೆ! [illegible] ಏಜಂಟರಿಗೆ [illegible] ಜಿಲ್ಲಾಧಿಕಾರಿಯವರು ಏಜಂಟರಿಗೆ ಇಷ್ಟೆಲ್ಲ [illegible] ಮಾಡಿರಲಿಕ್ಕಿಲ್ಲೆಂದು [illegible] ಜಿಲ್ಲಾಧಿಕಾರಿ ತಮ್ಮ ಕಚೇರಿಯೊಳಗಿಂದಲೇ ಈ ಮಾಹಿತಿಯನ್ನು [illegible] ಜಿಲ್ಲಾಧಿಕಾರಿಗಳನ್ನು [illegible] ಕಾಂಗ್ರೆಸ ಸರಕಾರ ಅಧಿಕಾರ ವಹಿಸಿಕೊಂಡಿದೆ ಕಾಂಗ್ರೆಸ ಸರಕಾರವು ದೀನ ದುರ್ಬಲರ ರಕ್ಷಣೆ ಮಾಡಲು ವಚನಬದ್ಧವಿದೆ ಅಧಿಕಾರಿಗಳಲ್ಲಿ ನ್ಯಾಯ್ಯವಾದ ವ್ಯವಹಾರವನ್ನು [illegible] ನಮ್ಮ ಜಿಲ್ಲೆಯ ಕಚೇರಿಯೊಳಗಿನ ಅಧಃಸ್ಥಿತಿಯನ್ನು [illegible] ಎಂದಿಗೂ [illegible] ಭ್ರಷ್ಟ ಅಧಿಕಾರಿಗಳಿಗೆ ಕಠೋರತರವಾದ ಶಾಸನ ಮಾಡಬೇಕು [illegible] ಮಾಡಿ ಪ್ರಯೋಜನ [illegible] ಕೊಡಬೇಕೆಂದು [illegible] ಉದ್ವಿಗ್ನರಾಗಿ [illegible] ಅಧಿಕಾರಿಗಳ [illegible]

* *

[illegible] ಅಂಗಡಿಗಳಲ್ಲಿ [illegible] ಸಿಗುವದಿಲ್ಲ [illegible] ಜಿಲ್ಲಾಧಿಕಾರಿ [illegible] ಅದನ್ನು [illegible] ಅನುಕೂಲ [illegible] ಅವರ [illegible] ಸರಕಾರ [illegible] ಆಂದೋಲನ [illegible] ಜಿಲ್ಲಾಧಿಕಾರಿ [illegible] ಅಂದರೆ [illegible] ಮಾಡಿ [illegible] ಮಾಡಿದ [illegible] ನಿಯಂತ್ರಣಾಧಿಕಾರಿಗಳಿಗೆ ಒಪ್ಪುವದು

* *

ಜಿಲ್ಲೆ [illegible] ಒಂದು ಸೂಚನೆಯುಂಟು ನಮ್ಮ [illegible] ಬೆಳೆ [illegible] ಬೆಳೆಸುವ [illegible] ಸರಕಾರದ ಪ್ರೋತ್ಸಾಹವುಂಟು [illegible] ಬೆಳೆ ಬೆಳೆಸುವ [illegible] ಕೆಲವೊಂದು ಪಟ್ಟದ ಪ್ರದೇಶ [illegible] ತೆಂಬ್ರ ಬೆಳೆಸಲಿಕ್ಕೆ [illegible] ನಮ್ಮ ಜಿಲ್ಲೆಗೆ [illegible] ಅನುಕೂಲವುಂಟು [illegible] ಮಾಡಲಿಕ್ಕೂ ಅನುಕೂಲವುಂಟು [illegible] ಮಾಡಲು ಸಿದ್ಧವಿದ್ದ [illegible] ಬೆಳೆಸಲು ಯಾಕೆ ಅನುಕೂಲತೆ ಮಾಡಿಕೊಡಬಾರದು ?

ಸನ್ ೧೯೪೪ (ಮೊದಲನೆಯ [illegible]) ಬಿಲ್ಲ

ಡಿನೇಚರ್ಡ ಸ್ಪಿರಿಟ್

ಮಾರಲಿಕ್ಕೆ ಸಿಗುತ್ತದೆ

ವಿ ಎಸ್ [illegible]

[illegible], ಕೋರ್ಟಿನ ಸ್ಟೆಂಡ, ಕುಮಟಾ.

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible] ಪರೀಕ್ಷೆಯು ಎಲ್ಲ ಕೇಂದ್ರ [illegible] ನಡೆಯು [illegible] ವಿದ್ಯಾರ್ಥಿಗಳು ಹಾಜರ ಮಾಡಿದ್ದಾರೆ

[illegible] ನಸ್ಸಾಹಕ್ಕೆ ಆರಂಭವಾಗಿದೆ ಈ ವಾರದಲ್ಲಿ [illegible], ಪ್ರಭಾತ ಫೇರಿಗಳನ್ನಲ್ಲದೆ [illegible] ಸ್ವಚ್ಛತೆ ಮಾಡುವದು ವಗೈರೆ [illegible] ಕಾರ್ಯಕ್ರಮವು ನಡೆಸಬೇಕಾಗಿ [illegible] ಬಿನ್ನವಿಸುತ್ತಾರೆ

[illegible] ಹಿಂದುಸ್ಥಾನ [illegible] ಹಿಂದುಸ್ಥಾನದಲ್ಲಿ [illegible] ನಿಯಂತ್ರಿಸುವೆವೆಂದು ಕೆಲವು ದಿನಗಳ ಹಿಂದೆ ಗಂಭೀರ ಎಚ್ಚರಿಕೆ ಕೊಟ್ಟದ್ದರಿಂದ [illegible] ಎಷ್ಟು [illegible] ಮುಂದೆ [illegible] ನಿಯಂತ್ರಣವನ್ನು [illegible] ಅವಶ್ಯವುಳ್ಳವು [illegible]

[illegible] ಅಂಗಡಿ [illegible] ಮಾಡಿದವು [illegible] ದೂರದಿಂದ ನೋಡಿದರೆ [illegible] ಮಾಡಿದವು [illegible]

[illegible] ಸೋಮವಾರ [illegible] ಬಸ್ಸು ಸರ್ವಿಸ [illegible]

[illegible] ಏಜಂಟರ [illegible] ಇಲ್ಲವಂತೆ! [illegible]

ನಗರಗಳಲ್ಲಿ ಮಾರ್ಗದ ಅಂಚಿಗೆ ಮನೆ, ಅಂಗಡಿ ವಗೈರೆ [illegible] ಕಟ್ಟುವದು [illegible] ಹೊಸ [illegible] ಕಟ್ಟಬೇಕೆಂದು ಸರಕಾರ ನೇಮವುಂಟು [illegible] ಇಲ್ಲಿನ ಸ್ಥಾನಿಕ ಅಧಿಕಾರಿಗಳನ್ನು ಕಟ್ಟಿ [illegible] ನೇಮ [illegible] ಅನುಭವವಾಗಿದೆ ಅಲ್ಲಿ [illegible] ದೇವಸ್ಥಾನದ [illegible] ಮಾರ್ಗಕ್ಕೆ [illegible] ಮಾರ್ಗದ ಮೇಲೆ [illegible] ಒಂದೆರಡು ಕಡೆ [illegible] ಎದುರಿಗೆ ಮಾರ್ಗಕ್ಕೆ [illegible] ಒಂದು ಮನೆಯಾಗುತ್ತದೆ! [illegible] ಮಾರ್ಗ ಕೂಡುವಲ್ಲಿ [illegible] ಮಾಡಿದವರು [illegible] ನೇಮ [illegible] ಗ್ರಾಮಸ್ಥ ಕಾರಿಗಳು ಗ್ರಾಮ [illegible]

ಇಲ್ಲಿಯ [illegible] ದಿವಸಗಳವರೆಂದ ([illegible] ರೂ [illegible]) ರೂ [illegible] ಶ್ರೀ [illegible] ರೂ [illegible] ರೂ [illegible] ಬಂದಿವೆಯಂತೆ

ಈ [illegible] ಶ್ರೀ [illegible] ದೇವಸ್ಥಾನದಲ್ಲಿ [illegible] ಮಾಡಿದ್ದಾರೆ

ಹೊನ್ನಾವರ— ಮ್ಯುನಿಸಿಪಾಲಿಟಿಯವರು ಕೆಲವು [illegible] ಪ್ರಾರಂಭಿಸಿದ್ದಾರೆ ಅವುಗಳಲ್ಲಿ ಕೆಲವು [illegible] ಕೆಟ್ಟಿಕರಿಗೆ [illegible] ಮ್ಯುನಿಸಿಪಲ್ [illegible] ಬಗ್ಗೆ [illegible] ವಿಚಾರ ಮಾಡಿ, ಈ [illegible] ಮೇಲೆ [illegible] ಕಟ್ಟಿಸುತ್ತಿದ್ದಾರೆ [illegible]

[illegible] ಸಾವಿರ ರೂ ಬೇಕಾಗುವದಂತೆ ಆದರೆ ಕಟ್ಟಡಕ್ಕೆ ಕೇವಲ ನಿರುಪಯೋಗಿ ಕಲ್ಲು ಉಪಯೋಗಿಸುತ್ತಿದ್ದಾರೆ. ನಗರ [illegible] ಈ ಕಲ್ಲುಗಳನ್ನು ಒಮ್ಮೆ ಪರೀಕ್ಷಿಸಬೇಕು

[illegible] ರಥೋತ್ಸವ [illegible] ರಥದ ದುರುಸ್ತಿಯಾದ ದಿಂದ [illegible] ಈ ವರ್ಷ ಅನುಕೂಲವಾಯಿತು ಉತ್ಸವಕ್ಕೆ ಬಹಳ ಜನರು ನೆರೆದಿದ್ದರು

[illegible] ಅಂಗಡಿಗಳಲ್ಲಿ ಕಳ್ಳಾಟಿಕೆ ಬಹಳ ನಡೆದಿದೆಯೆಂದು ದೂರು [illegible] ಸಿಗುವದು ಅಪರೂಪ! [illegible] ಹೋಗುತ್ತವೆಯಂತೆ [illegible] ರೂ [illegible] ರೂ. [illegible] ಈ [illegible] ಮಾಡಿಕೊಟ್ಟರೆ ಮಾತ್ರ ಈ ಕಳ್ಳಾಟಿಕೆ [illegible]

[illegible] ಯಕ್ಷಗಾನ ಮಂಡಳಿಯು [illegible] ಆಟಗಳನ್ನಾಡುತ್ತಿವೆ, ಮಂಡಳಿಯು [illegible] ಆಟದಲ್ಲಿ [illegible] ರೂ [illegible] ಶ್ರೀ [illegible] ದೇವರ ಅಮೃತ [illegible] ಕೊಟ್ಟಿದೆ

ಮುಂಡಗೋಡ— ([illegible]) ಶಿಕ್ಷಕರ [illegible] ಶಿಕ್ಷಕ-ಶಿಕ್ಷಕಿಯರ [illegible] ಶಿಕ್ಷಕರ ಬೇಡಿಕೆ [illegible] ಸರಕಾರಕ್ಕೆ [illegible] ಮಾಡಿಕೊಳ್ಳುವ [illegible] ಆದವು

ಸಿದ್ದಾಪುರ— ಈ ವರ್ಷ [illegible] ಗ್ರಾಮಸುಧಾರಣಾ [illegible] ಈ ಕಾಲದಕಿನ [illegible] ಕೆಲವು ದಿವಸಗಳ ಹಿಂದೆ [illegible] ಜಿಲ್ಲಾಧಿಕಾರಿ [illegible] ಅದನ್ನು [illegible] ಈ ಗ್ರಾಮದಲ್ಲಿ ಆದ [illegible] ಗ್ರಾಮೋದ್ಧಾರ ಕಾರ್ಯವೆಂದರೆ ಆರೋಗ್ಯರಕ್ಷಣೆಯು [illegible] ಮನೆಗಳಿಗೆ [illegible] ವಿಪುಲವಾಗಿ ಸಿಗುವಂತೆ ಮಾಡಿದ್ದಾರೆ [illegible] ದೂರ [illegible] ಅಂತರಕ್ಕೆ [illegible] ನೀರು [illegible] ಕೋಡಿದ್ದಾರೆ [illegible] ಗಾಡಿ-ರಸ್ತೆಯೂ ಇದ್ದಿಲ್ಲ, ಗಾಡಿಗಳೂ ಇದ್ದಿಲ್ಲ [illegible] ಸುಧಾರಣೆ [illegible] ಜನರು [illegible] ಗ್ರಾಮೋದ್ಯೋಗ [illegible] ಪ್ರಾಥಮಿಕ ಶಿಕ್ಷಣ [illegible] ಎಲ್ಲ ಬಗೆಯ ಸುಧಾರಣೆಗಳಿಗೆ [illegible] ಅದರಲ್ಲಿ ರೂ. [illegible] ಗ್ರಾಮದವರೇ ಕೊಟ್ಟಿದ್ದಾರೆ

WANIED for our New English School Bad (Karwar), Graduates in Arts and Science (preferably B T) and a Matriculate with Drawing (Int) Apply to the undersigned stating the minimum salary expected.

Premier Education Society
Bad, 5-4-46

K. B Haldipurkar,
Chairman

ಶ್ರೀ ಕೃಷ್ಣ ಹೋಮಿಯೋ ಫಾರ್ಮಸಿ, ಪುಣೆ

[illegible] ಹೋಮಿಯೋಪಥಿ [illegible] ಡಾ [illegible] "ಹೋಮಿಯೋ ಚಿಕಿತ್ಸಾ [illegible]" ಎಂಬ ಪುಸ್ತಕ [illegible] —

ಎಸ್ ಜಿ [illegible] ಅಂಡ್ ಸನ್ಸ,
ಪ್ರೋ. ಅಂಕೋಲಾ

ಕುಮಟಾ ಮ್ಯುನಿಸಿಪಾಲಿಟಿಯ ೧೯೪೧-೪೨ರ ಲೆಕ್ಕತಪಾಸಣೆಯ ವರದಿ.

(ಮಹತ್ವದ ಕೆಲವು ಅಂಶಗಳು)

ಭಾಗ ೧- ಹಿಂದಿನ ಲೆಕ್ಕ ತಪಾಸಣೆ

೨ ರಸ್ತೆಗಳ ಮೇಲೆ ಬಂದ ಇಮಾರತುಗಳ ಭಾಗಗಳ ಫೀ ವಸೂಲಿ ಸಂಬಂಧದ (೧೯೩೮-೩೯ರ ಲೆಕ್ಕ ತಪಾಸಣೆಯ ವರದಿಯೊಳಗಿನ) ಟಿಪ್ಪಣಿ ಪೇರಾ— ಇಮಾರತುಗಳ ಭಾಗಗಳು ರಸ್ತೆಯ ಮೇಲೆ ಬಂದಲ್ಲಿ ಆಕರಿಸಬೇಕಾದ ಫೀ ಹಣವನ್ನು ಸರ್ವಸಾಮಾನ್ಯವಾಗಿ ಮಾಫಿ ಮಾಡತಕ್ಕದ್ದಲ್ಲವೆಂದು ಮಾ॥ ಕಮಿಶನರ ಸಾಹೇಬರು ತಾ ೬-೧೨-೧೯೪೦ನೇದಿನ ಬರೆದ ತಮ್ಮ Adt 21/8ನೇ ನಂಬರದ ಪತ್ರದಲ್ಲಿ ತಿಳಿಸಿರುತ್ತಿದ್ದಾಗ್ಯೂ, ಮಾರ್ಗಗಳ ಮೇಲೆ ಇಮಾರತುಗಳ ಭಾಗ ಬಂದ ಪ್ರಕರಣಗಳಲ್ಲಿ ಸುಮಾರು ಅರ್ಧದಷ್ಟು ಇಮಾರತುಗಳು ಪ್ರಾಂತಿಕ (ಪಿ ಡಬ್ಲ್ಯು ಡಿ) ರಸ್ತೆಗಳ ಗುಂಟ ಇರುತ್ತವೆಂತಲೂ ಮ್ಯುನಿಸಿಪಲ್ ರಸ್ತೆಗಳ ಗುಂಟ ಇದ್ದ ಇಮಾರತುಗಳು ಬಹಳ ಹಿಂದಿನ ಕಾಲದ ಇಮಾರತುಗಳಿರುತ್ತವೆಂತಲೂ ಕಾರಣ ತೋರಿಸಿ, ಇಮಾರತುಗಳ ಭಾಗ ಮಾರ್ಗದ ಮೇಲೆ ಬಂದ ಬಗ್ಗೆ ತಾ ೩೧-೩-೧೯೪೨ನೇದಿನ ವರೆಗೆ ಬರತಕ್ಕದ್ದಿದ್ದ ಅಂತು ಫೀ ಬಾಕಿ ರೂ ೯೮೨-೦-೬ನ್ನು ತಾ ೨೦-೩-೧೯೪೬ನೇದಿನ ಸಭೆ ಸೇರಿದ ಜನರಲ್ಲ ಬೋಡಿಯವರು ಬಾಕಿ ಖಾತೆಗೆ ಹಾಕಿಬಿಟ್ಟಿರುತ್ತಾರೆ ಬೋರ್ಡಿನ ಈ ಕೃತಿಯಿಂದ ಮ್ಯುನಿಸಿಪಾಲಿಟಿಗೆ ಪ್ರತಿವರ್ಷ ಬರುವಂತಹ ಉತ್ಪನ್ನ ಮುಳುಗಿ ಹೋಗುತ್ತಿರುವದರಿಂದ, ಮ್ಯುನಿಸಿಪಾಲಿಟಿಯ ರಸ್ತೆಗಳ ಮೇಲೆ ಇಮಾರತುಗಳ ಭಾಗಗಳು ಬಂದಲ್ಲಿ ಆಕರಣೆಯಾಗುವ ಫೀ ಹಣವನ್ನು ಸಿವ್ಹಿಲ ಕೋರ್ಟುಗಳಲ್ಲಿ ದಾವೆ ಮಾಡಿ ವಸೂಲ ಮಾಡುವಲ್ಲಿಕ್ಕೆ ಬರುವಂತಿದ್ದರೂ ಹೇಗೆಂದು ಬೋರ್ಡಿನವರು ಕಾಯದೆ-ಪಂಡಿತರ ಸಲಹೆ ಪಡೆಕೊಳ್ಳಬೇಕಾಗಿ ಸೂಚನೆಯದೆ

೪ ಉರ್ದು ಶಾಲೆಯ ಇಮಾರತವನ್ನು ಕುರಿತು ಸರಕಾರದಿಂದ ಸಿಗಬೇಕಾದ ಧನಸಹಾಯದ ಸಂಬಂಧದ (೧೯೩೮-೩೯ರ ಲೆಕ್ಕ-ತಪಾಸಣೆ ವರದಿಯ) ೧೧ನೆಯ ಪೇರಾ— ಈ ಪ್ರಕರಣದ ನಿಕಾಲೆ ಇನ್ನೂ ಆಗಿಲ್ಲ ಪ್ರಕರಣವು ಬಹಳ ಕಾಲದಿಂದ ಬಾಕಿಯುರುವದರಿಂದ ಅದರ ನಿರ್ಣಯ ಬೇಗನೇ ಮಾಡಿಕೊಳ್ಳಬೇಕು

೫ ಅಧ್ಯಕ್ಷರು ಕೆಲವು ಬಾಬುಗಳ ಹಣವನ್ನು ಬೇರೆ ಬಾಬುಗಳಿಗೆ ಖರ್ಚು ಮಾಡಿಸಿದ್ದಕ್ಕೆ ಬೋರ್ಡಿನ ಮಂಜೂರಿಯ ಸಂಬಂಧದ (೧೯೩೯-೪೦ನೇ ಸಾಲಿನ ಲೆಕ್ಕ ತಪಾಸಣೆ ವರದಿಯ) ಪೇರಾ ೯— ಆ ಕಾಲದ ಅಧ್ಯಕ್ಷರು ಹೆಚ್ಚಿಗೆ ಖರ್ಚು ಮಾಡಿದ್ದು ಅನಧಿಕೃತವಿರುತ್ತದೆಂಬ ಕಾರಣದಿಂದ, ಕೆಲವು ಬಾಬುಗಳ ಹಣವನ್ನು ಬೇರೆ ಬಾಬುಗಳಿಗಾಗಿ ವೆಚ್ಚ ಮಾಡಿದ್ದಕ್ಕೆ ಮಂಜೂರಿ ಕೊಡಬಾರದೆಂದು ತಾ ೨೯ ೧೦ ೧೯೪೧ರ ೧೪ನೇ ಠರಾವಿನಲ್ಲಿ ಜನರಲ್ ಬೋಡಿಯವರು ತೀರ್ಮಾನ ಮಾಡಿದ್ದುಂಟು ಈ ಕುರಿತು ಅವಶ್ಯವುಳ್ಳ ಕ್ರಮ ಕೈಕೊಳ್ಳಲು ಮಾ॥ ಕಮಿಶನರ ಸಾಹೇಬರಿಗೆ ಬರೆದು ಹಾಕಿದ್ದುಂಟು ಅದರ ನಿರ್ಣಯವಿನ್ನೂ ಬಂದಿಲ್ಲ

೬ ಪುಸ್ತಕಗಳನ್ನು ಕೊಂಡುಕೊಳ್ಳುವದಕ್ಕಾಗಿ ವಿಕ್ಟೋರಿಯಾ ಜ್ಯುಬಿಲಿ ಲ್ಯಾಬ್ರರಿಗೆ ರೂ ೧೫೦ರ ಧನಸಹಾಯ ಕೊಟ್ಟಿದ್ದರ ಸಂಬಂಧದ (೧೯೩೯-೪೦ನೇ ಸಾಲಿನ ಲೆಕ್ಕತಪಾಸಣೆಯ ವರದಿಯ) ಪೇರಾ ೧೬— ೧೯೩೯-೪೦ನೇ ವರ್ಷದಲ್ಲಿ ಕೊಟ್ಟ ಧನಸಹಾಯದ ರೂ ೧೫೦ರೊಳಗಿಂದ ರೂ ೧೪೫-೧೧-೦ರ ಪುಸ್ತಕಗಳನ್ನು ಕೊಂಡುಕೊಂಡದ್ದರ ಬಗ್ಗೆ ಬಿಲ್ಲುಗಳನ್ನು ಸದರ ಲ್ಯಾಬ್ರರಿಯ ಕಾರ್ಯದರ್ಶಿಗಳು ಮ್ಯುನಿಸಿಪಾಲಿಟಿಗೆ ಒಪ್ಪಿಸಿದ್ದಾರೆ ಆದರೆ ೧೯೪೧-೪೨ರಲ್ಲಿ ಕೊಟ್ಟ ಧನಸಹಾಯದ ರೂ ೧೦೦ರೊಳಗಿಂದ ಕೊಂಡುಕೊಂಡ ಪುಸ್ತಕಗಳ ಯಾದಿಯು ಈ ಲೆಕ್ಕ ತಪಾಸಣೆ ಮುಗಿಯುವ ವರೆಗೆ ಅಂದರೆ ತಾ ೨೪ ೯-೪೩ರ ವರೆಗೆ ಒಪ್ಪಿಸಲ್ಪಟ್ಟಿಲ್ಲ ಈ ಕೆಲಸ ಜಾಗ್ರತೆಯಿಂದ ಮಾಡಿಸಿಕೊಳ್ಳಬೇಕು

ಭಾಗ ೨— ಚಾಲತಿ ಲೆಕ್ಕದ ತಪಾಸಣೆ.

೯ ತಾ ೩೧—೩—೧೯೪೨ ನೇ ಮಿತಿಗೆ ಮ್ಯುನಿಸಿಪಾಲಿಟಿಯ ಸಾಲ-ಜಿಂದಿಗಿಗಳು ಕೆಳಗಿನಂತಿದ್ದವು —

ಸಾಲ—	ರೂ	ಆಸ್ತಿ—	ರೂ
ಟೋಲ ಫಂಡು	೧೪೪೪,	ನಗದಿ ಶಿಲ್ಕು	೧೬೨೯
ದವಾಖಾನೆ ಫಂಡು	೬೫,	ಭದ್ರತೆಗಳಲ್ಲಿ ತೊಡಗಿಸಿಟ್ಟ ಹಣ	೩೧೮೬
ಪ್ರಾವ್ಹಿಡೆಂಟಫಂಡು	೧೮೪೧,	ಪ್ರಾವ್ಹಿಡೆಂಟಫಂಡುಗಾಗಿ	೭
ಠೇವಣಿಗಳು	೧೦೪೧,	ಪರಿಗೆ ವಗೈರೆ ವಸೂಲ ಬರತಕ್ಕ ಹಣ	೯೬೬
ಹೊರಗೆ ಕೊಡತಕ್ಕದ್ದು	೪೫,	ಕಾಯಂ ಮುಂಗಡ ಕೊಟ್ಟಿದ್ದು	೭೦
		ಇತರ ಮುಂಗಡ	೧೧೨
		ಹೊರಗಿಂದ ಬರತಕ್ಕ ಧನಸಹಾಯ	೧೬
			೨೮೫೧
ಅಂತು	೧೫೨೬		

೧೦ ತಾ ೩೧-೩-೧೯೪೨ಕ್ಕೆ ಅಂತ್ಯವಾಗುವ ೩ ವರ್ಷಗಳಲ್ಲಿ ಮ್ಯುನಿಸಿಪಾಲಿಟಿಯ ಸರ್ವಸಾಮಾನ್ಯ ಆದಾಯ ಮತ್ತು ವೆಚ್ಚಗಳು ಕೆಳಗಿನಂತಿದ್ದವು —

ವರ್ಷ	ಆದಾಯ	ವೆಚ್ಚ	ಉಳಿತಾಯ
೧೯೩೯-೪೦	ರೂ ೨೭೯೬೧	೨೮೪೪೬	—೪೮೫
೧೯೪೦-೪೧	„ ೨೯೪೭೯	೩೧೫೬೬	—೨೧೮೭
೧೯೪೧-೪೨	„ ೨೬೯೪೭	೩೦೫೧೧	—೧೫೬೪
		ಸರಾಸರಿ ತುಟ್ಟಿ	—೧೪೧೬

ಮೇಲಿನ ಅಂಕಿಗಳ ಮೇಲಿಂದ ಸರಾಸರಿ ಕೊರತೆ ರೂ ೧೪೧೬ರಷ್ಟು ಬಂದದ್ದು ಕಾಣುತ್ತದೆ ತಾ ೩೧-೩-೪೨ನೇಗೆ ಕೊನೆಗೊಂಡ ೩ ವರ್ಷಗಳಲ್ಲ ಸರ್ವಸಾಮಾನ್ಯ ವೆಚ್ಚವು ಸರ್ವಸಾಮಾನ್ಯ ಆದಾಯಕ್ಕಿಂತ ಹೆಚ್ಚಿಗೆ ಇದ್ದು ಹಣದ ಕೊರತೆಯುಂಟಾದದರಿಂದ ಕಾನಡಾ ಜಿಲ್ಲಾ ಲೋಕಲ ಬೋರ್ಡಿಗೆ ಸಲ್ಲತಕ್ಕ ಪ್ರಾಥಮಿಕ ಶಿಕ್ಷಣದ ವೆಚ್ಚದ ಪಾಲನ್ನು ಕಾಲಕಾಲಕ್ಕೆ ಕೊಡಲಾಗಲಿಲ್ಲ, ಮತ್ತು ರಸ್ತೆ, ಸಂಕ, ಮೋರಿ ಮೊದಲಾದವುಗಳ ದುರಸ್ತಿಗಳನ್ನೂ ಗಟಾರಗಳ ದುರಸ್ತಿಗಳನ್ನೂ ಅವಶ್ಯವಾಗಿ ರೂ ೬೬ ಮತ್ತು ರೂ ೭೦ಕ್ಕಿಂತ ಹೆಚ್ಚಿಗೆ ಮಾಡಲಾಗಲಿಲ್ಲ ಸರ್ವಸಾಧಾರಣ ಆರೋಗ್ಯ ರಕ್ಷಣೆಯ ಹೊಣೆಯನ್ನು ಹೊರುವ ಕೃಷ್ಣಿ ಬೋರ್ಡಿನ ಮುಂದೆ ಬರಲಾಗಿ, ನಗದ ಸಾಂಪತ್ತಿಕ ಸ್ಥಿತಿ ಕೆಟ್ಟದಾದದರಿಂದ ಅದನ್ನು ಹೇರಕೊಡದೆಂದು ಬೋರ್ಡಿನವರು ತೀರ್ಮಾನಿಸಿರುವರು (ತಾ ೨೪-೮-೧೯೪೨ರ ೯ನೇ ಗೊತ್ತುವಳಿ ನೋಡಿರಿ) ಹೀಗೆ ಕ್ಷೀಣವಾಗುತ್ತ ನಡೆದಿರುವ ಆದಾಯವನ್ನು ಹೆಚ್ಚಿಸಲು ಬೋರ್ಡಿನವರು ಬೇರೆ ಯಾವ ಉತ್ಪನ್ನದ ಮಾರ್ಗವನ್ನು ಅನುಸರಿಸುವ ಆಲೋಚನ ಮಾಡಿರುವರೆಂಬುದನ್ನು ತಿಳಿಸಬೇಕಾಗಿ ಮಾ॥ ಕಲೆಕ್ಟರ ಸಾಹೇಬರು ತಾ ೬-೯-೧೯೪೨ನೇದಿನ P. 169 ೨ನೇ ಪತ್ರ ಬರೆದು ಅಧ್ಯಕ್ಷರಿಗೆ ಕೇಳಿದ್ದುಂಟು ಮ್ಯುನಿಸಿಪಾಲಿಟಿಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹೊಸ ಉಪಾಯ ಯೋಜನೆ ಮಾಡದಿದ್ದರೆ ಮ್ಯುನಿಸಿಪಾಲಿಟಿಯು ಸಾಂಪತ್ತಿಕ ಸಂಕಟದಲ್ಲಿ ಸಿಲುಕಿ ನರಳುವ ಪ್ರಸಂಗ ಬಂದೀತೆಂಬ ಅಂಜಿಕೆಯಿದೆ

೧೧ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಅಧಿವೇಶನಕ್ಕೆ ಹಾಜರಾಗಲು ಅಧ್ಯಕ್ಷರು ಕುಮಟೆಯಿಂದ ಮುಂಬಯಿಗೆ ಹೋದ ಬಗ್ಗೆ ಹಿಂತಿರುಗಿ ಬಂದ ಬಗ್ಗೆ ರಮಾರೆ ರೂ ೨೬ ೧೦ ಪ್ರವಾಸ ಭತ್ತೆ ಸಲ್ಲಬೇಕೆಂದು ಬೇಡಿದ್ದರು (ತಾ ೩-೧೨-೧೯೪೧ರ ಬಿಲ ನೋಡಿರಿ) ಅದು ರೇಲ್ವೆಯಲ್ಲಿ ೧ನೇ ವರ್ಗದ ಪ್ರಯಾಣದ ಖರ್ಚ (ಹುಬ್ಬಳ್ಳಿಯಿಂದ ಮುಂಬಯಿಗೆ ಮತ್ತು ಮುಂಬಯಿಯಿಂದ ಹುಬ್ಬಳ್ಳಿಗೆ ೧ನೇ ಒಂದೇ ವರ್ಗದ ಟಿಕೇಟಿನ ಹಣ) ಬೇಡಿದ್ದರಿಂದ, ಮುಂಬಯಿ ಸಿವ್ಹಿಲ ಸರ್ವಿಸ ರುಲ್ಸ ಪ್ರಕಾರ ೪ನೇ ಪರಿಶಿಷ್ಟದಲ್ಲಿ ಹೇಳಿರುವಂತೆ, ವಾಸ್ತವಿಕವಾಗಿ ಪ್ರವಾಸ ಮಾಡಿದ ವರ್ಗದ ರೇಲ್ವೆ ಟಿಕೇಟಿನ ಹಣವನ್ನೇ ಪಡೆಯಬಹುದು ಎಂಬರ್ಥದ ಸರ್ಟಿಫಿಕೇಟನ್ನು ಪ್ರವಾಸ ಭತ್ಯದ ಬಿಲಿನ ಮೇಲೆ ಬರೆಕೊಡಬೇಕಾಗಿ ನನ್ನ ಕಛೇರಿಯವರು ತಾ ೩-೧೧-೧೯೪೨ನೇದಿನ ಬರೆದ 429-1834ನೇ ಪತ್ರದಲ್ಲಿ ತಿಳಿಸಿದ್ದರು ತಾ ೩ ೨ ೧೯೪೩ಕ್ಕೆ ಅಧ್ಯಕ್ಷರು ರೂ ೬ ೧೦ನ್ನು ತಿರುಗಿ ಮ್ಯುನಿಸಿಪಾಲಿಟಿಗೆ ಕೊಟ್ಟರು, ಆದರೆ ಮೇಲೆ ಹೇಳಿದ ನಿಯಮದಂತೆ ಬೇಕಾದ ರೇಲ್ವೆ ಸರ್ಟಿಫಿಕೇಟನ್ನು ಬಿಲಿನ ಮೇಲೆ ಅವರು ಬರೆದಿಲ್ಲ (ರೂ ೬೦ ೧೦ ಬಿಲ ನೋಡಿ) ಅವರು ಈಗ ತೋರಿಸಿರುವ ಹಣದ ಮೇಲಿಂದ ಅವರು ಹುಬ್ಬಳ್ಳಿಯಿಂದ ಮುಂಬಯಿಗೆ ಮಾತ್ರ ತಿರುಗಿ ಮುಂಬಯಿಯಿಂದ ಹುಬ್ಬಳ್ಳಿಗೆ ರೇಲ್ವೆಯಲ್ಲಿ ೨ನೇ ವರ್ಗದಲ್ಲಿ ಪ್ರವಾಸ ಮಾಡಿದ್ದರೆಂದು ತಿಳಿಯಬೇಕಾಗುತ್ತದೆ ಆದರೆ ಅವರು ತಮ್ಮ ಪ್ರವಾಸ ಭತ್ತೆಯ ಬಿಲಿನಲ್ಲಿ ಅವಶ್ಯವುಳ್ಳ ಸರ್ಟಿಫಿಕೇಟು ಬರೆಕೊಟ್ಟು ಹಾಗೂ ೨ನೇ ವರ್ಗದ ರೇಲ್ವೆ ಟಿಕೇಟಿನ ಹಣ ಅವರು ಬೇಡಿದ್ದನ್ನು ಕೂಡ ಲೆಕ್ಕತಪಾಸಣೆಯಲ್ಲಿ ಮನ್ನಿಸಲು ಬರುವದಿಲ್ಲ

೧೬ ರಾ॥ ಎಸ್ ಆರ್ ಭಟ್ಟ ಎಂಬವರೊಬ್ಬರು ಡಿಸ್ಟ್ರಿಕ್ಟ ಮ್ಯುನಿಸಿಪಲ್ ಕಾಯಿದೆಯ ಕಲಂ ೨೩ರನ್ವಯ ಮ್ಯುನಿಸಿಪಾಲಿಟಿಯ ಸಭಾಸದಸ್ಯರೆಂದು ರಾ॥ ಎಮ್ ಬಿ ಪೈ ಇವರ ವಿರುದ್ಧ ಅರ್ಜಿ ಕೊಟ್ಟಿದರಿಂದ, ಮ್ಯುನಿಸಿಪಾಲಿಟಿಗೆ ಆದರಲ್ಲಿ ಸಂಸ್ಥೆದ ಪೂರ್ತಿ ಪಕ್ಷಗಾರ ಮಾಡಿದ್ದರು ಆದರೆ ಜನರಲ್ ಬೋಡಿಯವರು ತಾ ೧೪ ೨ ೧೯೪೨ನೇಗೆ ೩೧೧ನೇ ಠರಾವ ಮಾಡಿ, ಮ್ಯುನಿಸಿಪಾಲಿಟಿಯ ಪರವಾಗಿ ಸದರ ಪ್ರಕರಣದಲ್ಲಿ ಕಾರ್ಯ ನಡೆಸಲು ಆ ಬಗ್ಗೆ (ಸರಕಾರಿ ವಕೀಲರೇ) ರಾ॥ ಬಿ॥ ಚಂದಾವರಕರರಿಗೆ ವಕಾಲತು ಕೊಡಲಿಕ್ಕೆ ಅಧ್ಯಕ್ಷರಿಗೆ ಅಧಿಕಾರ ಕೊಟ್ಟರು

(೧) ಈ ಪ್ರಕರಣದಲ್ಲಿ ಮ್ಯುನಿಸಿಪಾಲಿಟಿಯವರು ತಮ್ಮ ಸ್ವಂತ ವೆಚ್ಚದಿಂದ ಕಾದಾಡುವದು ಅಷ್ಟು ಅವಶ್ಯವಿರಲಿಲ್ಲ ಮತ್ತು (೨) ಮ್ಯುನಿಸಿಪಾಲಿಟಿಯವರು ಪಕ್ಷಗಾರಿದ್ದರೆ ಮ್ಯುನಿಸಿಪಾಲಿಟಿ ತಿರುಗಿ ಹಚ್ಚುವಂತಿದ್ದದ್ದಾಗಿ ಎಂಬುದರ ಪಕ್ಷದ ಪ್ರಶ್ನೆಗಳು ಈ ಸಂಬಂಧದಲ್ಲಿ ಉದ್ಭವಿಸಿದ್ದರಿಂದ, ಮ್ಯುನಿಸಿಪಾಲಿಟಿಯವರು ಈ ಪ್ರಕರಣದಲ್ಲಿ ಕಾದಾಡುವದು ಅವಶ್ಯವಿಲ್ಲೆಂದು ಕಾಣುತ್ತಿದ್ದರಿಂದ ವಕೀಲರನ್ನು ಕಟ್ಟಬೇಕು ಎಂದು ಮಾಡಿದ ಗೊತ್ತುವಳಿ ಅನುಕೂಲ ಮತ ಕೊಟ್ಟ ಸದಸ್ಯರ ಮೇಲೆ ಆ ವೆಚ್ಚ ಹೊರಿಸಲಾದೀತು ಎಂಬುದಾಗಿ ಮ್ಯುನಿಸಿಪಾಲಿಟಿಗೆ ಎಚ್ಚರಿಕೆಯನ್ನು ಕೊಟ್ಟಿರಲು ಮಾ॥ ಕಮಿಶನರ ಸಾಹೇಬರು ತಾ ೬ ೮-೧೯೪೨ರ Mun-Ka-130ನೇ ನಂಬರಿನ ತಮ್ಮ ಪತ್ರದಲ್ಲಿ ಕಳಕಳಿಸಿರುವರು ಈ ಲೆಕ್ಕ-ತಪಾಸಣೆ ಮುಗಿಯುವ ವರೆಗೆ ಮ್ಯುನಿಸಿಪಾಲಿಟಿಯವರು ರೂ. ೨೮೭-೦ ಈ ಪ್ರಕರಣದಲ್ಲಿ ಖರ್ಚು ಮಾಡಿದ್ದು ವಕೀಲರ ಫೀಯು ಇನ್ನೂ ಕೊಟ್ಟಿಲ್ಲ

೧೬ ಮಾಹನ-ಜಂಗೆ ವಸೂಲಿಯ ಕೆಲಸದಲ್ಲಿ, ವಸೂಲಾದ ಹಣ ಮ್ಯುನಿಸಿಪಾಲಿಟಿಯಲ್ಲಿ ಜಮೆಯಾಗದಿದ್ದ ಮತ್ತು ಕೆಲವು ಪಾವತಿಗಳಲ್ಲಿ ಮೊದಲು ಬರೆದ ತಾರೀಖುಗಳನ್ನು ಹಿಂದಿನಿಂದ ತಿದ್ದಿದ ಈ ಕೆಳಗಿನ ಸಂಗತಿಗಳು ದೃಷ್ಟಿಗೆ ಬಿದ್ದಿವೆ —

(೧) ತಾ ೨-೯-೧೯೪೧ಕ್ಕೆ ಮಾಹನ ಜಂಗೆ ಪಾವತಿ ಪುಸ್ತಕ ನಂ ೨೧೯ರೊಳಗಿನ ೧೯೨೨ರಿಂದ ೧೯೨೮ರ ವರೆಗಿನ ೭ ಪಾವತಿಗಳನ್ನು ಕಾರಕೂನನು ಕೊಟ್ಟು ಮಾಹನ ಜಂಗೆ ವಸೂಲ ಮಾಡಿದ್ದನು (ಪ್ರತಿಯೊಂದು ಪಾವತಿಯು ರೂ ೩೭೮೯. ಆದರಿಂದ) ಈ ಎಲ್ಲ ಪಾವತಿಗಳಿಂದ ರೂ ೭೮೯ನ್ನು ಹಣ ವಸೂಲಾಗಿತ್ತು ಆದರೆ ಈ ಪಾವತಿಗಳಿಂದ ಅಂತು ರೂ ೬೩ ಮಾತ್ರ ವಸೂಲಾದಂತೆ ಒಮ್ಮೆಲೇ ವಸೂಲಿಯು ಕೀರ್ದಿಯಲ್ಲಿ ಕಾಣಿಸಿ ಅಷ್ಟೇ ಹಣ ಮ್ಯುನಿಸಿಪಲ್ ನಿಧಿಯ ಲೆಕ್ಕಕ್ಕೆ ಜಮಾ ಕೊಳ್ಳಲಾಗಿದೆ

(೨) ಮಾಹನ ಜಂಗೆ ಪಾವತಿ ಪುಸ್ತಕ ನಂ ೨೨೮ ೩೨೦ರಿಂದ ೪೦೨ರ ವರೆಗಿನ ಪಾವತಿಗಳನ್ನು ಬೇಲ ಕಲೆಕ್ಟರನು ಕೊಟ್ಟು ಅಂತು ರೂ ೨೧-೮ ೦ಗಳನ್ನು ಮಾಹನ ಜಂಗೆ ವಸೂಲ ಮಾಡಿದ್ದನು ಆದರೆ ಈ ಎಲ್ಲ ಪಾವತಿಗಳಿಂದ ರೂ ೧೯-೬ ೦ ವಸೂಲ ಬಂದಿದ್ದಾಗಿ ಒಮ್ಮೆಲೇ ವಸೂಲಿಯು ಕೀರ್ದಿಯಲ್ಲಿ ಕಾಣಿಸಿ ಅಷ್ಟೇ ಹಣ ತಾ ೭-೪-೧೯೪೧ಕ್ಕೆ ಮ್ಯುನಿಸಿಪಲ್ ನಿಧಿಯ ಲೆಕ್ಕಕ್ಕೆ ಜಮಾ ಕೊಳ್ಳಲಾಗಿದೆ

(೪) ಮಾಹನ ಜಂಗೆ ಪಾವತಿ ಪುಸ್ತಕ ನಂ ೩೩೭ರೊಳಗಿನ ೬೬ ರಿಂದ ೧೦೦ ರ ವರೆಗಿನ ಪಾವತಿ ಪುಸ್ತಕ ನಂಬರ ೨೩ ರೊಳಗಿನ ೯ರಿಂದ ೨೬ ರ ವರೆಗಿನ ಪಾವತಿಗಳನ್ನು ಕೊಟ್ಟು ಬೇಲ ಕಲೆಕ್ಟರನು ವಸೂಲ ಮಾಡಿದ ಅಂತು ಹಣ ರೂ ೧೧೭ ಆಗುತ್ತದೆ ಆದರೆ ತಾ ೧೦-೨-೧೯೪೨ಕ್ಕೆ ವಸೂಲಿಯು ಕೀರ್ದಿಯಲ್ಲಿ ರೂ ೧೦೭ ಮಾತ್ರ ಜಮೆ ಅಷ್ಟೇ ಹಣ ಮ್ಯುನಿಸಿಪಲ್ ನಿಧಿಗೆ ಜಮಾ ಮಾಡಿದ್ದಾರೆ

(೪) ಈ ವರದಿಯ ಜೋಡಿಸಿದ ಅ ಪರಿಶಿಷ್ಟದ ಮೇಲಿಂದ ಕೆಲವು ಪಾವತಿಗಳಲ್ಲಿ ತಾರೀಖು ತಿದ್ದಿದ್ದು ಕಂಡು ಬರುವದು ವಸೂಲಾದ ಹಣವನ್ನು ೧ ವಾರಕ್ಕಿಂತ ಹೆಚ್ಚಿಗೆ ಕಾಲ, ಕೆಲಕೆಲವು ಸಂದರ್ಭಗಳಲ್ಲಿ ೧ ತಿಂಗಳಿಗಿಂತ ಹೆಚ್ಚು ಕಾಲ ಹಣ ಬಳಸಿಕೊಳ್ಳುವದಕ್ಕಾಗಿಯೇ ಬಿಲ ಈ ತಿದ್ದುಪಡಿಗಳನ್ನು ಮಾಡುತ್ತಿದ್ದರೇನು ಆದರೆ ಮಾಹನ ಜಂಗೆಯ ದಿನದಿಂದ ರಜಿಸ್ಟರದಲ್ಲಿ ಈ ಪಾವತಿಗಳನ್ನು ಕಾಣಿಸುವಾಗ ಮೊದಲು ಬರೆದ ತಾರೀಖುಗಳನ್ನೇ ಬರೆದಿದ್ದಾರೆ

(೫) ಮಾಹನ ಜಂಗೆ ವಸೂಲ ಮಾಡಿದ ಅನೇಕ ಪಾವತಿಗಳನ್ನು ಮಾಹನ-ಜಂಗೆಯ ದಿನದಿಂದ ರಜಿಸ್ಟರದಲ್ಲಿ ಕಾಣಿಸಲೇ ಇಲ್ಲ (ಪಾವತಿ ಪುಸ್ತಕ ನಂ ೨೨೫ರೊಳಗಿನ ೪೪, ೬೮, ೬೯, ೫೧, ೨೨, ಮತ್ತು ೨೩ನೇ ಪಾವತಿಗಳನ್ನು ನೋಡಿರಿ ಪ್ರತಿಯೊಂದು ಪಾವತಿಯ ೨೨ರದು ಇರುತ್ತದೆ)

(೬) ಮಾಹನ ಜಂಗೆ ವಸೂಲ ಮಾಡಿದ ಕೆಲವು ಪಾವತಿಗಳನ್ನು ಮಾಹನ ಜಂಗೆಯ ದಿನದಿಂದ ರಜಿಸ್ಟರದಲ್ಲಿ ಬೇರೆ ಜನರ ಹೆಸರ ಮುಂದೆ ನಮೂದಿಸಿದ್ದಾರೆ ಒಂದು ಸಾವಿರ ದೇವದಲ್ಲಿಂದಲೂ ೨೩ನೆಯ ಪಾವತಿ ಪುಸ್ತಕವೊಳಗಿನ ೭ ೨ ೯ ೧೯೪೧ರ ೨೩ನೇ ನಂಬರದ ರೂ ೩ ಪಾವತಿಯನ್ನು ದಿನದಿಂದ ರಜಿಸ್ಟರದಲ್ಲಿ ಇಬ್ಬರ ಹೆಸರುಗಳ ಮುಂದೆ — ರಾ॥ ನಾಗಪ್ಪಾ ವೆಂಕಟರಮಣ ನಾಯಕ ಮಾರ್ಗದ ಪಾಂಡುರಂಗ ರಾಮಚಂದ್ರ ಕಂದನಾಯ ಇವರುಗಳ ಮುಂದೆ ನಮೂದಿಸಿ ವಸೂಲಾಗಿಲ್ಲವೆಂದು ಇದನ್ನು ರೂ ೨೦ರಂತೆ ತಗ್ಗಿಸಿಬಿಟ್ಟಿದ್ದಾರೆ

(೭) ಮಾಹನ ಜಂಗೆ ವಸೂಲಿಯ ಪಾವತಿ ಪುಸ್ತಕಗಳ ಪೈಕಿ ೧೯೨ ಪುಸ್ತಕದ ೧ನೇ ಪಾವತಿ ೧೩೨ನೇ ಪುಸ್ತಕದ ೩೩ನೇ ಪಾವತಿ ಮತ್ತು ೧೨೯ನೆ, ಪುಸ್ತಕದ ೨೨, ೭೩ನೆಯ ಪಾವತಿಗಳು ಇವೆಲ್ಲ ಪಾವತಿಗಳಲ್ಲಿ ೧೯೪೨ನೇ ಆಗಸ್ಟ ಮಾರ್ಚ ತಿಂಗಳಲ್ಲಿ ವಸೂಲ ಮಾಡಿದ ಅಂತು ನೋಟೀಸ ಫೀ ೭ ಆಣೆ ಬಾಕಿ ಇದೆ ಆದರೆ ಇದೇ ೩ ಆಣೆ ಮಾತ್ರ ಮ್ಯುನಿಸಿಪಲ್ ನಿಧಿಯ ಲೆಕ್ಕಕ್ಕೆ ಜಮಾ ಮಾಡಿದ್ದಾರೆ

೪) ಯಾವದೇ ಒಂದು ದಿನ ವಸೂಲಾದ ಎಲ್ಲ ತೆರಿಗೆ ಹಣವನ್ನು ಮ್ಯುನಿಸಿಪಲ್ ನಿಧಿಗೆ ಜಮಾ ಮಾಡುವ ಬಗ್ಗೆ ಅದೇ ದಿನ ಇಲ್ಲವೆ ಇತರೇ ಹಣದೊಂದಿಗೆ ಮಾರನೇಯ ದಿವಸ ಮ್ಯುನಿಸಿಪಾಲಿಟಿಯಲ್ಲಿ ಭರಣಾ ಮಾಡಿದ್ದು ಇರುವದಿಲ್ಲ. ವಸೂಲಾದ ಕೆಲವೊಂದು ಹಣವನ್ನು ೨-೩ ದಿನ ಕೈಯಲ್ಲಿಟ್ಟುಕೊಂಡದ್ದು ತೋರುತ್ತದೆ. (ಈ ವರದಿಗೆ ಜೋಡಿಸಿದ ಬ ಪರಿಶಿಷ್ಟದಲ್ಲಿ ಕೊಟ್ಟ ಉದಾಹರಣೆಗಳನ್ನು ನೋಡಿರಿ.) ಮನೆ ತೆರಿಗೆ, ಆರೋಗ್ಯ ಸುಧಾರಣೆಯ ವಿಶೇಷ ತೆರಿಗೆ, ವಾಹನ ತೆರಿಗೆ ಮತ್ತು [illegible]-ಬೀದಿ ತೆರಿಗೆಗಳ ವಸೂಲಿಯ ಕ್ರಮದಲ್ಲಿ ಸರ್ವಸಾಧಾರಣವಾಗಿ ಇದೇ ಸ್ಥಿತಿಯಿರುವದು ಕಂಡುಬರುತ್ತದೆ. ಈ ಅಕ್ರಮಗಳು ಲೆಕ್ಕ-ತಪಾಸಣೆಗೊಳಪಟ್ಟ ಇಡೀ ವರ್ಷದಲ್ಲಿ ನಡೆದದ್ದುಂಟು.

ಈ ವಿಷಯದಲ್ಲಿ ಮುಂದಿನ ಕ್ರಮ ಕೈಕೊಳ್ಳುವದಕ್ಕಾಗಿ ಈ ಎಲ್ಲ ಸಂಗತಿಗಳನ್ನು ನಮ್ಮ ಕಚೇರಿಯವರು ಪೂನಾ ಕಲೆಕ್ಟರ ಸಾಹೇಬರಿಗೆ ವರದಿ ಮಾಡಿದ್ದಾರೆ. ಆದರೂ ತೆರಿಗೆ-ವಸೂಲಿಯ ಮೇಲೂ ಅದರ ಲೆಕ್ಕದ ಮೇಲೂ ಮ್ಯುನಿಸಿಪಾಲಿಟಿಯ ಸೆಕ್ರೆಟರಿಯು ಸಾಕಷ್ಟು ಮೇಲ್ವಿಚಾರಣೆ ಇಡದ್ದರಿಂದಲೇ ಈ ಘೋರ ಅಕ್ರಮಗಳು ನಡೆದವೆಂದು ಈ ಸಂದರ್ಭದಲ್ಲಿ ಹೇಳಬಹುದಾಗಿದೆ. ವಾಹನ-ತೆರಿಗೆ ನಿಯಮಾವಲಿಯ ೫ನೇ ನಿಯಮದಂತೆ ವಾಹನ ತೆರಿಗೆ ತೆರತಕ್ಕವರು ತಮ್ಮ ತೆರಿಗೆ ಹಣವನ್ನು ಸೆಕ್ರೆಟರಿಯ ಕಡೆಗೇ ಕೊಡತಕ್ಕದ್ದಿರುತ್ತದೆ. ಹಾಗೂ ಬಹಳಷ್ಟು ವಾಹನ ತೆರಿಗೆಯ ಹಣಗಳನ್ನು ಸೆಕ್ರೆಟರಿಯೇ ಕೊಟ್ಟದ್ದುಂಟು. ಆದ್ದರಿಂದ ಕಚೇರಿಗೆ ಬಂದ ಎಲ್ಲ ಬಗೆಯ ತೆರಿಗೆ ಹಣಗಳನ್ನು ಪಾಲಿ ವಸೂಲ ಕೊಳ್ಳುವವನು ಅವನೇ ಆಗಿರುತ್ತಾನೆ. ಹೀಗಿರುವಾಗ ಮೇಲಿನ ಅಕ್ರಮಗಳು ಅವನ ದೃಷ್ಟಿಗೆ ಹೇಗೆ ಬೀಳಲಿಲ್ಲವೆಂಬುದೇ ತಿಳಿಯದು. ೧೯೪೧-೪೨ ಹಾಗೂ ೧೯೪೩-೪೪ನೇ ವರುಷಗಳಲ್ಲಿ ಸದರಿ ಬಿಲಕಲೆಕ್ಟರನು ಕೊಟ್ಟಿರಬಹುದಾದ ಮನೆತೆರಿಗೆ, ಆರೋಗ್ಯ ಸಂರಕ್ಷಣೆಯ ವಿಶೇಷ ತೆರಿಗೆ, [illegible]-ಬೀದಿ ತೆರಿಗೆ ಮುಂತಾದವರ ಎಲ್ಲ ಪಾವತಿಗಳನ್ನು ಮ್ಯುನಿಸಿಪಾಲಿಟಿಯ ಕಚೇರಿಯಲ್ಲಿ ಕೂಲಂಕಷವಾಗಿ ತಪಾಸಿಸಿ ಇಂಥ ಅಕ್ರಮಗಳು ಇನ್ನೂ ಉಂಟೋ ಹೇಗೆ ಎಂಬುದನ್ನು ನೋಡಿಕೊಳ್ಳಬೇಕು.

೧೭. ಸದ್ಯದ ನಿಯಮಗಳನ್ವಯ ಮ್ಯುನಿಸಿಪಾಲಿಟಿಗೆ ವಸೂಲ ಬರಬೇಕಾದ ಹಣ ರೂ ೫ಕ್ಕೆ ಮೇಲ್ಪಟ್ಟಿದ್ದಲ್ಲಿ ೧ ಆಣೆ, ಮುಂತಾಗಿ ರೂ ೫ಕ್ಕೆ ಮೀರಿದ್ದಲ್ಲಿ ೩ ಆಣೆಗಳಷ್ಟೆ ಮತ್ತು ರೂ ೧೦ಕ್ಕೆ ಮೀರಿದ್ದಲ್ಲಿ ೪ ಆಣೆಗಳಂತೆ ನೋಟೀಸ ಫೀ ಆಕರಿಸುತ್ತಾರೆ. ತೆರಿಗೆ ವಸೂಲ ಕೊಡಲು ವಿಳಂಬ ಇಲ್ಲವೆ ತೊಂದರೆ ಮಾಡುವವರಿಗೆ ಬುದ್ಧಿ ಕಲಿಸುವದಕ್ಕಾಗಿ ನೋಟೀಸ-ಫೀ ದರಗಳ ಪಟ್ಟಿಯಲ್ಲಿ ಕ್ರಮವಾಗಿ ಏರಿಕೆ ಮಾಡುವಂತೆ ಸದರಿ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕಾಗಿ ಸೂಚಿಸುತ್ತೇವೆ.

೧೮. ಪ್ರತ್ಯೇಕ ಮ್ಯುನಿಸಿಪಲ ನಂಬರಗಳುಳ್ಳ ಅನೇಕ ಮನೆಗಳು ಈಗ ದನದ ಕೊಟ್ಟಿಗೆಗಳಂತೆ ಉಪಯೋಗಿಸಲ್ಪಡುತ್ತಿವೆ ಎಂಬ ಕಾರಣದಿಂದ ಅವುಗಳ ಮನೆ-ತೆರಿಗೆ ಮಾಫ ಮಾಡಿದ್ದು ಇಮಾರತು-ಪರವಾನಗಿಯ ರಜಿಸ್ಟರದ ಮೇಲಿಂದ ಕಂಡುಬರುತ್ತದೆ. ೨ ೩ ಪ್ರಕರಣಗಳಲ್ಲಿ, ಹಿಂದೆ ಮನುಷ್ಯರ ವಸತಿಯ ಬಗ್ಗೆ ಉಪಯೋಗಿಸಲ್ಪಡುತ್ತಿದ್ದ ಮನೆಗಳು ದನದ ಕೊಟ್ಟಿಗೆಗಳಾಗಿ ಪರಿವರ್ತಿಸಲ್ಪಟ್ಟ ಕೂಡಲೇ ಅವುಗಳ ಮನೆ-ತೆರಿಗೆ ಮಾಫ ಮಾಡಲ್ಪಟ್ಟಿದೆ (೨೫೦ ಮತ್ತು ೩೩೩ನೇ ಮನೆಗಳನ್ನು ನೋಡಿರಿ). 'ಇಮಾರತು' ಶಬ್ದದ ವ್ಯಾಖ್ಯೆಯಲ್ಲಿ ಯಾವದೇ ಗುಡಿಸಲು, ಕೊಟ್ಟಿಗೆ ಇಲ್ಲವೆ ಆವಾರ (enclosure) ಬೀಳುತ್ತಿರುವದರಿಂದ (ಇಮಾರತು ಶಬ್ದದ ವ್ಯಾಖ್ಯೆ ನೋಡಿರಿ) ಇಂಥ ಮಾಫಗಳು ಕಾಯದೆಯ ಶಕ್ತಿಯಲ್ಲಿ ಬರುವದಿಲ್ಲ; ಮತ್ತು ಇಂಥ ಮನೆಗಳ ತೆರಿಗೆ ಮಾಫ ಮಾಡಲು ಬರುವ ಹಾಗೆ ನಿಯಮಗಳಲ್ಲಿ ತಿದ್ದುಪಡಿಯಾಗುವ ವರೆಗೆ ಆ ಮನೆಗಳ ತೆರಿಗೆ ಆಕರಣೆ ಮಾಡಬೇಕಾಗುತ್ತದೆ.

ಹೊನ್ನಾವರ ತಾಲೂಕ ಗುಂಡಬಾಳೆ ಶ್ರೀ ವೆಂಕಟರಮಣ-ಮುಖ್ಯಪ್ರಾಣ ದೇವರ ಸನ್ನಿಧಿಯಲ್ಲಿ [illegible] ಹರಕೆಯ ದಶಾವತಾರ ಆಟಗಳು ತಾ. ೨೮-೪-೪೬ರಿಂದ ಆರಂಭವಾಗಿದೆ. ಕಾರಣ ಹರಕೆ ಹೇಳಿಕೊಂಡವರು ತಮ್ಮ ಆಟಗಳನ್ನು ಇದೇ ಬರುವ ವ್ಯಯ ಸಂ|| ವೈಶಾಖ ಶು|| ೧೫ಯೊಳಗೆ ಪೂರೈಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷೆಯುಳ್ಳ

ನೀಲಕಂಠ ವೆಂಕಟ್ರಮಣ ಪ್ರಭು, ವ್ಯವಸ್ಥಾಪಕ

ದಿ ಕೊಮರ್ಶಿಯಲ್ ಕೊಪೊರೇಶನ್,
ಕುಮಟಾ.
ನಮ್ಮಲ್ಲಿ ಬ ಸೆಲ್ ಮಶೀನ್ ಕಂಪನಿಯ,
ಎಲ್ಲ ತರದ ಸಾಮಾನು ಯೋಗ್ಯ ದರದಿಂದ ಸಿಗುತ್ತದೆ
ಪಿ ಎಮ್ ಮಿಂಜಾನಕರ,
ಮೋಟಾರ ಸ್ಟ್ಯಾಂಡ, ಕುಮಟಾ.

ಜಿಲ್ಲಾ ಸಮಾಚಾರ

(ಕಳೆದ ವಾರದ್ದು)

ಶಿರಸಿ— (ತಾ ೩೦-೩-೧೯೪೬) ಇಲ್ಲಿಯ ಮೂಲ ನಾಗರಿಕರೂ ಸದ್ಯಕ್ಕೆ ಕಚೇರಿಯ ಸಹಾಯಕರೂ ಆಗಿದ್ದ ರಾ|| ಸೀತಾರಾಮ ನಾರಾಯಣ ಭಟ್ಟ ಅಕ್ಕಿವಾಸ ಇವರು ಕಳೆದ ಸೋಮವಾರ ತಾ ೨೫ನೇಯ ಬೆಂಗಳೂರಿನಲ್ಲಿ ಹೃದ್ಯಯ ನಿಂತು ಕೈಲಾಸವಾಸಿಗಳಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಮೃತರು ಉದಾರ ಮನಸ್ಸಿನವರೂ, ರಾಷ್ಟ್ರೀಯ ವೃತ್ತಿಯವರೂ, ಸಾರ್ವಜನಿಕ-ಸೇವಾ ಬುದ್ಧಿಯವರೂ, ನಿಗರ್ವಿಗಳೂ ಆಗಿದ್ದರು. ನಮ್ಮ ಜಿಲ್ಲೆಯ ಹವ್ಯಕ ಸಮಾಜದಿಂದ ಸುಶಿಕ್ಷಿತರಾಗಿ ಸೇವಿಸಲ್ಪಟ್ಟವರು ಇವರೇ ಮೊದಲಿಗರು. ಅವರ ಅಕಾಲಿಕ ಮೃತ್ಯು, ಅಕಲ್ಪಿತ ನಿಧನದಿಂದ ಅವರ ಕುಟುಂಬಕ್ಕೆ ವಜ್ರಾಘಾತವಾಗಿದೆ. ಜಗದೀಶನು ಮೃತಾತ್ಮರಿಗೆ ಚಿರಶಾಂತಿಯನ್ನೀಯಲಿ!

ಇಲ್ಲಿಯ ಪ್ರಸಿದ್ಧ ಸೋಂದೇಕರ ಮನೆತನದವರಾಗಿದ್ದು ಬೆಳಗಾಂವದೊಳಗಿನ ಲಕ್ಷ್ಮೀ ರುಗ್ಣಾಲಯದ ವೈದ್ಯರಾಗಿದ್ದ ಮೇಜರ ಜಗನ್ನಾಥ ಅನಂತರಾವ ಸೋಂದೇಕರ ಕೆಲ ದಿನಗಳ ಹಿಂದೆ ಗೋದಾವರಿ ನದಿಯಲ್ಲಿ ಜಳಕ ಮಾಡಲು ಹೋದಾಗ ನೀರೊಳಗೆ ಮುಳುಗಿ ನಿಧನ ಹೊಂದಿದರೆಂಬ ಅತಿ ದುಃಖದ ವರ್ತಮಾನ ಬಂದಿದೆ. ಈ ಅಪಘಾತದಿಂದ ಮೃತಾತ್ಮರ ವೃದ್ಧ ತಾಯಿಯ ಮೇಲೂ ಹೆಂಡತಿ ಮಕ್ಕಳ ಮೇಲೂ ಆಕಾಶ ಕಳಚಿ ಬಿದ್ದಂತಾಗಿದೆ. ಮೃತಾತ್ಮರಿಗೆ ಸದ್ಗತಿಯಾಗಲಿ!

ಸಿದ್ದಾಪುರ— (ತಾ ೨೪ ೩-೪೬) ಈ ತಾಲೂಕಿನ ಸಗೋಡ, ಬಿದ್ರಕಾನ, ಕೊಡಗಿಬೈಲ ಗ್ರಾಮಗಳಲ್ಲಿ —ಸುಮಾರು ೬ ಮೈಲು ವಿಸ್ತೀರ್ಣ ಪ್ರದೇಶದಲ್ಲಿ— ನರಭಕ್ಷಕ ಹುಲಿಯ ಹಾವಳಿ ಹೆಚ್ಚಾಗಿದೆಯಷ್ಟೇ. ಈ ಹುಲಿಯನ್ನು ಕೊಲ್ಲುವ ಬಂದೂಕ ಯಾ ರೈಫಲ ಪರವಾನೆದಾರರಿಗೆ ರೂ ೧೦೦ ಇನಾಮು ಕೊಡುವದಾಗಿ ಜಿಲ್ಲಾಧಿಕಾರಿಗಳು ಜಾಹೀರ ಮಾಡಿದ್ದಾರೆ. ಕೊಂದ ಹುಲಿ ನರಭಕ್ಷಕ ಹುಲಿಯೇ ಇರುತ್ತದೆಂದು ಜಿಲ್ಲಾಧಿಪರ ಮನವರಿಕೆಯಾದ ನಂತರ ಮತ್ತು ಕೆಲವು ಕಾಲ ಸಂರಕ್ಷಣೆ ಮಾಡಿ ಈ ಇನಾಮು ಕೊಡಲ್ಪಡುವದಂತೆ.

ಬಾಳೆಕೊಪ್ಪ ಕನ್ನಡ ಶಾಲೆಯಲ್ಲಿ ಶ್ರೀ ಲಕ್ಷ್ಮೀನಾರಾಯಣ ವಾಚನಾಲಯವೆಂಬ ವಾಚನಾಲಯವು ತಾ ೧-೧-೪೬ರಿಂದ ತೆರೆಯಲ್ಪಟ್ಟಿದೆ. ಊರ ಗೃಹಸ್ಥರು ವಾಚನಾಲಯಕ್ಕೆ ಸಹಾಯ ಮಾಡಲೊಪ್ಪಿದ್ದಾರೆ.

ಕಾರವಾರ— ಈ ತಾಲೂಕು ಮತ್ತು ಯಲ್ಲಾಪುರ ತಾಲೂಕು ಕೂಡುವಲ್ಲಿ ದೇವಕಾರ ಎಂಬ ಹಳ್ಳಿಯುಂಟು. ಅದೊಂದು ಒಕ್ಕಲಿಗರ ಹಳ್ಳಿ. ಹಳ್ಳಿಯವರೆಲ್ಲ ಹುಟ್ಟುಬಟ್ಟಿನ ಗುತ್ತಿನವರೇ. ಆ ಗ್ರಾಮದಲ್ಲಿ ಬತ್ತದ ಬೆಳೆಯೇ ಮುಖ್ಯ ಬೆಳೆ. ಅಲ್ಲಿ ನಡೆಯುವ ಲೆವ್ಹಿ ಭತ್ತದ ಖರೀದಿಯ ಕ್ರಮ [illegible]. ಆ ಹಳ್ಳಿಯಲ್ಲಿ ಇಲ್ಲವೆ ಹಳ್ಳಿಯ ಆಚೆ ಈಚೆ ಎಲ್ಲೂ ಸರಕಾರಿ ಭತ್ತದ ಉಗ್ರಾಣಗಳಿಲ್ಲ. ಆ ಹಳ್ಳಿಯಲ್ಲಿ ಇಲ್ಲವೆ ಅದರ ನೆರೆ-ಹೊರೆಯೊಳಗಿನ ಹಳ್ಳಿಗಳಲ್ಲಿ ಖರೀದಿಯ ಎಲ್ಲ ಭತ್ತವನ್ನು ೩೫ ಮೈಲು ದೂರದಲ್ಲಿರುವ ಕೋಡಿಬಾಗ ಉಗ್ರಾಣಕ್ಕೆ ಮುಟ್ಟಿಸಬೇಕು! ಹಳ್ಳಿಯಲ್ಲಿ ಭತ್ತ ವಸೂಲ ಮಾಡುವ ಸರ್ವಾಧಿಕಾರ ದೇವಕಾರ ಪಟೇಲ ಮತ್ತು ಅವರ ಪರಾಕ್ರಮಿ ಬಂಟನಾದ ಉಗ್ರಾಣಿ ಇವರದಾಗಿರುತ್ತದೆ. ಈ ಉಗ್ರಾಣಿ ಮಾಡಿದ್ದೇ ಕಾಯಿದೆ, ಆತ ಹೇಳಿದ್ದೇ ಶಾಸ್ತ್ರ; ಅವನು ಅನುಸರಿಸಿದ್ದೇ ನೀತಿ! ಅವನಿಗೆ ಎದುರುತ್ತರ ಕೊಟ್ಟರೆ, ಅವನ ಕೃತಿಗೆ ಆಕ್ಷೇಪ ತೆಗೆದುಕೊಂಡರೆ ಇಲ್ಲವೆ ಅವನಂತೆ ನಡೆಯದೆ ಒಪ್ಪದಿದ್ದರೆ " ಪಟ್ಟಿ ಮಾಡುತ್ತೇನೆ, ಝಡ್ತಿ ಮಾಡುತ್ತೇನೆ, ಮನೆಯಲ್ಲಿದ್ದ ಭತ್ತವನ್ನೆಲ್ಲ ಜಪ್ತಿ ಮಾಡುತ್ತೇನೆ!" ಎಂದು ಮುಂತಾಗಿ ಅವನು ಅಜ್ಞ ಹಳ್ಳಿಗರಿಗೆ ಬೆದರಿಸುತ್ತಾನೆ! ಅವನನ್ನು ಕಂಡರೆ ಹಳ್ಳಿಗರು ನಡುಗುತ್ತಾರೆ. ಭತ್ತ ಕೊಳ್ಳುವವನು ಇವನೇ. ರೈತರ ಭತ್ತ ಅಳೆದುಕೊಳ್ಳಲಿಕ್ಕೆ ಅವನಿಗೆ ಸೇರೂ ಬೇಡ, ಕಾಯಿಲಿಯೂ ಬೇಡ. ಈ ಬಗ್ಗೆ ಆತ ೨-೩ ಮುರದ ಪೆಟ್ಟಿಗೆಗಳನ್ನು ತಯಾರಿಸಿಟ್ಟಿದ್ದಾನೆ. ಒಂದೊಂದು ಪೆಟ್ಟಿಗೆ ೨೦ ಸೇರಿನದಂತೆ. ಅದಕ್ಕೆ ಮುದ್ರೆಯಿಲ್ಲ, ಮೋಹರಿಲ್ಲ! ಒಂದು ಪೆಟ್ಟಿಗೆಯೊಳಗೆ ೨೧-೨೧|| ಸೇರು ಭತ್ತ ಹಿಡಿದರೆ ಇನ್ನೊಂದರೊಳಗೆ ೨೨-೨೩|| ಸೇರು ಹಿಡಿಯಬಹುದು. ಭತ್ತ ತಂದ ರೈತನ ಮೋರೆ ನೋಡಿ ಯಾವ ಪೆಟ್ಟಿಗೆಯಿಂದ ಅವನ ಭತ್ತ ಅಳೆದುಕೊಳ್ಳಬೇಕೆಂದು ಈ ಉಗ್ರಾಣಿಯೇ ನಿರ್ಧರಿಸುತ್ತಾನೆ. ಈ ಪೆಟ್ಟಿಗೆಯಿಂದ ಅಳೆದ ೪ ಪೆಟ್ಟಿಗೆ ಭತ್ತ ೧ ಖಂಡಿಯಾಗುತ್ತದೆ, ೪೦ ಪೆಟ್ಟಿಗೆ ೧ ಕುಂಭವಾಗುತ್ತದೆ. ೧ ಕುಂಭ ಭತ್ತ ಕೊಟ್ಟವರು ಅಳತೆಯ ಕಟ್ಟಿ ಎಂದು ಮೇಲೆ ೧|| ಖಂಡಿ ಭತ್ತ ಕೊಡಬೇಕೆಂದು ಈ ಉಗ್ರಾಣಿಯ ರಾಜಶಾಸನವೇ ಉಂಟು! ಮೇಲಾಗಿ ಸರಕಾರದಲ್ಲಿ ಖರೀದಿಸಿದ ಭತ್ತವನ್ನು ಕೋಡಿಬಾಗ ಉಗ್ರಾಣಕ್ಕೆ ಕಳಿಸಿ ಕೊಡುವ ಎಲ್ಲ ಖರ್ಚನ್ನು ರೈತನೇ ತೆರಬೇಕು. ಕುನ್ನಿಪೇಟೆ (ಕದ್ರಾ ಗ್ರಾಮದ ಎಡದಂಡೆಯ ಮೇಲಿನ ಬಂದರ ಇದು) ವರೆಗೆ ೧೫ ಮೈಲು ಗಾಡಿ ರಸ್ತೆಯಿದೆ. ಕುನ್ನಿಪೇಟೆಗೆ ಭತ್ತ ಒಯ್ಯಲು ಉಗ್ರಾಣಿಯು ನೇಮಿಸಿಟ್ಟ ಗಾಡಿಗಳಿವೆ. ಪ್ರತಿ ೧೦ ಖಂಡಿ ಭತ್ತ ದೇವಕಾರದಿಂದ ಕುನ್ನಿಪೇಟೆಗೆ ಒಯ್ದುಕೊಡುವದಕ್ಕೆ ಈ ಗಾಡಿಕಾರರಿಗೆ ೧ ಖಂಡಿ ಭತ್ತ ಭಾಡಿಗೆ ಕೊಡಬೇಕು, ಮೇಲೆ ಗಾಡಿಕಾರನಿಗೆ ಬೇಕಷ್ಟು (ಅವನ ಎತ್ತುಗಳಿಗಾಗಿ) ಹುಲ್ಲು ಕೊಡಬೇಕು. ಕುನ್ನಿಪೇಟೆಯಿಂದ ೨೦ ಮೈಲು ಅಂತರದಲ್ಲಿರುವ ಕೋಡಿಬಾಗಕ್ಕೆ ದೋಣಿಯಿಂದ ಭತ್ತ ಒಯ್ಯುವ ವೆಚ್ಚವನ್ನೂ ರೈತನೇ ತೆರಬೇಕು. ಒಮ್ಮೊಮ್ಮೆ ಉಗ್ರಾಣಕ್ಕೆ ತಲ್ಪಿದ ಭತ್ತದಲ್ಲಿ ಕೊರತೆ ಬರುತ್ತದಂತೆ! ಅದನ್ನೂ ರೈತ ಕೊಡಬೇಕು. ಅಂತೂ ಈ ಉಗ್ರಾಣಿಯ ದರಬಾರದಲ್ಲಿ ೧ ಕುಂಭ (೨೦ ಖಂಡಿ) ಭತ್ತದ ಹಣ ಸರಕಾರದಿಂದ ಸಿಗಬೇಕಾದರೆ ಸಾಮಾನ್ಯವಾಗಿ ೨೫ ಖಂಡಿ ಭತ್ತವನ್ನಾದರೂ ಕೊಡಬೇಕು! ಇದು ಸುಲಿಗೆಯಲ್ಲವೆಂದು ಜಿಲ್ಲಾಧಿಪರು ಹೇಳುವರೇ ?

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡುವವಳು, ಬಾಳಿ ಕೋಂ ದೇವಯ್ಯಾ ನಾಯ್ಕ ಸಾ|| ಮಂಕಿ ಗ್ರಾಮದ [illegible] ಇವಳು, ಇವಳ ಮೂಲಕ ಜಾಹೀರಪಡಿಸುವದೇನಂದರೆ— ನನ್ನ ಪತಿಯವರಾದ ದೇವಯ್ಯಾ ಪುರ್ಸಯ್ಯಾ ನಾಯ್ಕ ಇವರು ಬಲಿಕಕ್ಕೆ ೬ ತಿಂಗಳ ಲಾಗಾಯ್ತು ಮಂದಪ್ರಜ್ಞರಾಗಿ ಸ್ವಕೀಯ ಚರ ಸೊತ್ತುಗಳ ಪರಾಧೀನ ಮಾಡುತ್ತಿದ್ದಾರೆ. ನನ್ನಿಯವರಿಗೆ ೫ ಗಂಡು ಮಕ್ಕಳು ಹಾಗೂ ೩ ಹೆಣ್ಣು ಮಕ್ಕಳು ಇರುತ್ತಿದ್ದು, ೨ ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಉಪ-ಶೋಧನಾದಿ ಕಾರ್ಯಗಳು ಆಗತಕ್ಕವಿರುತ್ತವೆ. ಮಕ್ಕಳು ಅಪ್ರಾಯಸ್ಥರಿರುತ್ತಾರೆ. ನನ್ನ ಪತಿಯವರಿಗೆ ಸಾಲ ಮಾಡುವ ಗರಜು ಏನೂ ಇರುವದಿಲ್ಲ. ಆದರೂ ಮತಿಭ್ರಷ್ಟರಾದದ್ದರಿಂದ ಸ್ಥಾವರ ಆಸ್ತಿಗಳನ್ನು ಸಹ ಹೀನ ಕಿಮ್ಮತ್ತಿಗೆ ಪರಾಧೀನ ಮಾಡುವ ತಯಾರಿಯಲ್ಲಿದ್ದಾರೆ. ಕಾರಣ ಸದ್ರಿ ದೇವಯ್ಯಾ ಪುರ್ಸಯ್ಯಾ ನಾಯ್ಕ ಇವರ ಕಡೆಯಿಂದ ಯಾರೂ ಚರ ಯಾ ಸ್ಥಿರ ಸೊತ್ತುಗಳನ್ನು ಖರೀದಿ ಯಾ ಲೀಜಿಯಿಂದ ಪರಾಧೀನ ಮಾಡಿಕೊಳ್ಳಬಾರದು. ಅಂಥ ಪರಾಧೀನತೆಗಳಿಂದ ನನ್ನ ಮತ್ತು ನನ್ನ ಮಕ್ಕಳ ಹಕ್ಕಿಗೆ ಯಾವದೇ ರೀತಿಯಿಂದ ಬಾಧಕ ಬರಲಾರದು. ನನ್ನ ಪತಿಯವರು ಸಾಲ ಮಾಡಿದ್ದಲ್ಲಿ ಅದಕ್ಕೆ ನಮ್ಮ ಯಾವದೇ ಪ್ರಕಾರದ ಜವಾಬದಾರಿ ಇರಲಾರದು. ತಿಳಿಯುವದು.

ತಾ. ೧-೪-೧೯೪೬

● ಇದು ಬಾಳಿ ಕೋಂ ದೇವಯ್ಯಾ ನಾಯ್ಕ
ಇವಳ ಎಡಗೈ ಹೆಬ್ಬೆಟ್ಟಿನ ಗುರ್ತ

ಜಾಹೀರ ನೋಟೀಸು

ಈ ಕೆಳಗೆ ಸಹಿ ಮಾಡಿದ ೧ನೇ ಶಿವು ಹಾಣೆ ಗೌಡಾ ಸಾ|| ಉಂಚಗಿ ಮತ್ತು ೨ನೇ ತಿಮ್ಮಪ್ಪ ಬಟ್ಟು ಗೌಡಾ ಸಾ|| ತಲಗೋಡ ಇವರು ಈ ಮೂಲಕ ಜಾಹೀರಪಡಿಸುವದೇನಂದರೆ –

೧ ಗಣಪತಿ ಗೋವಿಂದ ಭಟ್ಟ ತಲಗೋಡ ಇವನು ಕಳೆದ ಮಳೆಗಾಲದ ಪ್ರಾರಂಭಕ್ಕೆ ನಮ್ಮ ಪೈಕಿ ೧ನೇಯವನ ಸ್ಥಳದಲ್ಲಿ ೧ ಹಂಗಾಮಿ ಚಹಾ ಅಂಗಡಿ ಹಾಕಿದ್ದನು. ಆ ಅಂಗಡಿ ತಾನು ಮುರಿದು ತೆಗೆಯುತ್ತೇನೆಂತಲೂ ಅಂಗಡಿಯ ಬಗ್ಗೆ ಕೊಂಡ ಬಿನ್‌ಶೇತಕಿ ಪರವಾನಗಿ ರದ್ದುಗೊಳಿಸಿಕೊಳ್ಳಲಿಕ್ಕೆ ಅರ್ಜಿ ಮಾಡಬೇಕೆಂತಲೂ ಸದರಿ ಭಟ್ಟನು ೧ನೇಯವನಿಗೆ ಹೇಳಿ ಕಳೆದ ಭಾದ್ರಪದ [illegible] ಸುಮಾರಿಗೆ ಕೋರ್ಟು ಕಾಗದದ ಮೇಲೆ ೧ನೇಯವನ ಸಹಿ [illegible] ತಕ್ಕೊಂಡನು. ಈ ಕಾಗದದ ದುರುಪಯೋಗ ಮಾಡಿ ಆತ ಅದರ ಮೇಲೆ ಯಾರದೋ ಹೆಸರಲ್ಲಿ ಎಷ್ಟೋ ರಕಮಿಗೆ ಪ್ರೋನೋಟು ಬರೆಯುವದಿದ್ದಾನೆಂದು ಅನುಮಾನಿಸಲಿಕ್ಕಿದೆ.

೨ ಸದರಿ ಭಟ್ಟನ ಅಂಗಡಿಯಲ್ಲಿ ೨ನೇ ತಿಮ್ಮಪ್ಪನು ೪-೫ ಸಾರೆ ಚಹಾ ಕುಡಿದಿದ್ದನು. ಆ ಬಗ್ಗೆ ಭಟ್ಟನಿಗೆ ಆತನು ೮ ೧೦ ಆಣೆ ಕೊಡಬೇಕಿತ್ತು. ಆ ಬಗ್ಗ ದಾವೆಯೆಂದು ಭಟ್ಟನು ತಿಮ್ಮಪ್ಪನಿಂದ ಒಂದು ಕಾಗದದ ಮೇಲೆ ಹೆಬ್ಬೆಟ್ಟು ಹಚ್ಚಿಕೊಂಡಿದ್ದನು. ಅದರ ಮೇಲೂ ಯಾರದೋ ಹೆಸರಿನಲ್ಲಿ ಎಷ್ಟೋ ರಕಮಿನ ನೋಟು ಬರೆಯುವ ಸಂಭವವುಂಟು. ಇಂಥ ಬನಾವಟ ನೋಟುಗಳಿಂದ ಯಾರಿಗೂ ಪ್ರಯೋಜನ ಸಿಗುವಂತಿಲ್ಲ. ಅವು ನಮಗೆ ಬಾಧಿಸುವಂತೆಯೂ ಇಲ್ಲ ಎಂದು ಈ ಮೂಲಕ ಎಲ್ಲ ಜನರಿಗೆ ಜಾಹೀರಪಡಿಸುತ್ತೇವೆ. ತಾ ೬ ೪-೪೬

× ಇದು ಶಿವು ಹಾಣೆ ಗೌಡಾ, ಉಂಚಗಿ
ಇವನ ಎ ಹೆ ಗುರ್ತ

= ಇದು ತಿಮ್ಮಪ್ಪ ಬಟ್ಟು ಗೌಡಾ,
ತಲಗೋಡ ಇವನ ಎ ಹೆ ಗುರ್ತ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ), ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಂದಾಪುರದಲ್ಲಿ
ವರ್ಷಕ್ಕೆ ರೂ ೩-೪-೦
ಬೇರೆಊರಿನವರಿಗೆ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೧-೦
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ತೆರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು
ವರ್ಗಣಿ ಮುಂಗಡ ಕಳ್ಳಿಸತಕ್ಕದ್ದು

Reg. No B 1270 Monday, 15th April, 1946

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪೧.

ಕುಂದಾಪುರ:- ಸೋಮವಾರ, ತಾ ೧೫ ಮಾಹೆ ಏಪ್ರಿಲ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಥಳವನ್ನು ಅನುಸರಿಸಿ
೧ ಸಾಲಿಗೆ ೮ ಆಣೆಯಂತೆ
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು

ಹಿಂದೀ ರಾಜಕಾರಣ.

(ನಿರೀಕ್ಷಕನು ಬರೆಯುವದು)

ಸುಭಾಸಚಂದ್ರ ಬೋಸರ ಗತಿ ಏನಾಯಿತೆಂದು ಇನ್ನೂ ನಿರ್ಧಾರವಾಗಲಿಲ್ಲವು. ನೇತಾಜಿಯವರು ಮಂಚೂರಿಯಾದಲ್ಲಿ ಜೀವಂತರಿದ್ದಾರೆಂದು ಒಂದು ವಾರ್ತೆಯುಂಟು. ಹಿಂದೀ ರಾಷ್ಟ್ರೀಯ ಸೈನ್ಯದ ಶಹಾನವಾಜರೂ ಸೈಗಲರೂ ಹೋಗಿ ಮಹಾತ್ಮರನ್ನು ಕಂಡು ನೇತಾಜಿಯವರು ತೀರಿಕೊಂಡ ಸುದ್ದಿ ನಿಜವಿರಬೇಕೆಂದು ತಿಳಿಸಿದಾಗ್ಯೂ ಮಹಾತ್ಮರು ನಂಬಲಿಲ್ಲ. ನೇತಾಜಿಯವರು ಇನ್ನೂ ಜೀವಂತರಿದ್ದಾರೆಂದು ನಿರ್ಧಾರದಿಂದ ಮಹಾತ್ಮರು ಹೇಳಿದರು. ನೇತಾಜಿಯವರು ಹಿಂದುಸ್ಥಾನದಲ್ಲೇ ಇದ್ದಾರೆಂಬ ಹೊಸ ಸುದ್ದಿ ಈಗ ಉಂಟಾಗಿದೆ. ಸುಭಾಸಚಂದ್ರರ ವಿರುದ್ಧ ೧೯೪೦ರಲ್ಲಿ ಮಾಡಿದ ಒಂದು ಭಾಷಣದ ಬಗ್ಗೆ ಸರಕಾರವು ಹೂಡಿದ ಖಟ್ಲೆ ಇನ್ನೂ ಮುಂದುವರಿಯುತ್ತಾ ಇದೆ! ಸರಕಾರವು ಆ ಖಟ್ಲೆಯನ್ನು ನಿಕಾಲೆಯಲ್ಲಿ ಇಡುವದಿಲ್ಲ. ಕಳೆದ ಮಾರ್ಚ ತಿಂಗಳಲ್ಲಿ ಅದು ವಿಚಾರಕ್ಕೆ ಬಂತೆ. ಈಗ ಜೂನ ವರೆಗೆ ಮುಂದೂಡಲ್ಪಟ್ಟಿದೆ. ಸುಭಾಸರು ಸತ್ತದ್ದನ್ನು ಸರಕಾರವು ನಂಬುವದಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಹಿಂದೀ ರಾಷ್ಟ್ರೀಯ ಸೈನ್ಯದ ಶಹಾನವಾಜ ಮೊದಲಾದವರ ಖಟ್ಲೆಯಲ್ಲಿ ಆರೋಪಿಗಳ ವಕೀಲಿ ನಡಿಸಿದ ಶ್ರೀ ಭುಲಾಭಾಯಿ ದೇಸಾಯಿಯವರೂ ನೇತಾಜಿಯವರು ಮರಣಪಟ್ಟರೆಂದು ನಂಬುವದಿಲ್ಲ. ಖಟ್ಲೆಯ ವಿಚಾರ ನಡೆವಾಗ ಆರೋಪಿಗಳ ಕಡೆ ಸಾಕ್ಷಿದಾರರು ಏನೋ ಒಂದು ರಹಸ್ಯವನ್ನು ಗುಪ್ತವಾಗಿಡುವ ಪ್ರಯತ್ನ ನಡಿಸುತ್ತಾರೆಂಬ ಭಾವನೆ ನಮಗುಂಟಾಯಿತೆಂದೂ ಅದು ಬಹುಶಃ ಸುಭಾಸರ ಗತಿಯ ರಹಸ್ಯವಿರಬೇಕೆಂದೂ ಅವರು ಹೇಳುತ್ತಾರೆ. ಮಹಾತ್ಮರ ದೃಷ್ಟಿಗೆ ನೇತಾಜಿಯವರ ಮರಣ ಈವಾಗ ಸಿದ್ಧವಾಗಿದೆಯೆಂದು ಹೇಳಬಹುದು. ಜನರಲ್ ಹಬೀಬುರ ರಹಮಾನರೂ ಬೋಸ ಸರಕಾರದೊಳಗಿನ ಶ್ರೀ ಐಯ್ಯರರೂ ಮಹಾತ್ಮರನ್ನು ಕಂಡು ನೇತಾಜಿಯವರ ಮರಣದ ಕಥೆಯನ್ನು ದೃಢಪಡಿಸಿದರೆಂದೂ, ನೇತಾಜಿಯವರು ಬದುಕಿದ್ದಾರೆಂದು ತಾವು ಬರೇ ಅಂತಃಸ್ಫೂರ್ತಿಯಿಂದ ಬರೆದಿದ್ದೆನೆಂದೂ, ಅದಕ್ಕೆ ಬೇರೆ ಆಧಾರವಿಲ್ಲವೆಂದೂ ನೇತಾಜಿಯವರು ತೀರಿಕೊಂಡದ್ದು ಈವಾಗ ಸಿದ್ಧ ಸಂಗತಿಯೆಂದು ನಾನೂ ಎಣಿಸತಕ್ಕದ್ದೆಂದೂ ಮಹಾತ್ಮರು ಕಳೆದ ತಾ. ೨೦-೨-೪೬ರ "ಹರಿಜನ ಸೇವಕ"ದಲ್ಲಿ ಬರೆದಿದ್ದಾರೆ. ಮಹಾತ್ಮರ ಈ ಮಾತು ನಂಬಿ ಸುಭಾಸರು ಸತ್ತದ್ದು ದಿಟವೆಂದು ದೇಶ ಬಾಂಧವರು ನಂಬಬೇಕಾಗಿದ್ದರಲ್ಲಿ ಸಮಾಜ ಸತ್ತಾವಾದಿ ಪಕ್ಷದ ಮುಂದಾಳುಗಳಾದ ಜಯಪ್ರಕಾಶ ನಾರಾಯಣ ಇವರು ಕಳೆದ ಶುಕ್ರವಾರ ಹಜಾರೀಬಾಗ ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದವರೇ ನೇತಾಜಿಯವರ ಮರಣದ ವಾರ್ತೆ ತಾವು ನಂಬುವದಿಲ್ಲವಾಗಿ ಸಾರಿದ್ದಾರೆ. ಹಿಂದೀ ರಾಜಕಾರಣದ ರಂಗಸ್ಥಳದಲ್ಲಿ ಸುಭಾಸಚಂದ್ರರ ಗತಿಯೂ ಒಂದು ಮಹತ್ವದ ಸಮಸ್ಯೆಯಾಗಿ ಕೂತಿದೆ. ಮಹಾತ್ಮರಂಥ ಪುಣ್ಯ ಪುರುಷರ ಅಂತಃಸ್ಫೂರ್ತಿ ಸಟೆಯಾಗಲಿಕ್ಕಿಲ್ಲವೆಂದೂ ಸಟೆಯಾಗಬಾರದೆಂದೂ ಎಲ್ಲರ ಅಪೇಕ್ಷೆಯುಂಟು. ಆದರೆ ನಾನು ಯಾವದನ್ನೂ ಖಂಡಿತವಾಗಿ ಹೇಳಲಾರೆ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದೊಡನೆ ಥಟ್ಟನೆ ಪ್ರಕಟವಾಗಿ ಆ ಸ್ವತಂತ್ರ ರಾಜ್ಯಭಾರದಲ್ಲಿ ಸ್ವತಂತ್ರವಾಗಿ ವ್ಯವಹರಿಸಬೇಕೆಂದು ಒಬ್ಬ ಶ್ರೀ ಬೋಸರು ಅಜ್ಞಾತವಾಸಿಗಳಾಗಿರಬಾರದೇಕೆಂದು ನನಗೂ ಒಮ್ಮೊಮ್ಮೆ ಅನಿಸುತ್ತದೆ.

ದೇಶದಲ್ಲಿ ಈಗ ಮುಖ್ಯ ವಿಷಯ ಬ್ರಿಟಿಶ ಮಂತ್ರಿಗಳ ರಾಯಭಾರವಷ್ಟೆ. ಭಾರತ ಮಂತ್ರಿ ಪೆಥಿಕ್-ಲಾರೆನ್ಸ ದೊರೆಗಳೂ ತಮ್ಮ ಸಂಗಡಿಗರಾದ ಸರ್ ಸ್ಟ್ಯಾಫರ್ಡ ಕ್ರಿಪ್ಸ ಮತ್ತು ಮಿ! ಅಲೆಕ್ಝಾಂಡರ ಇವರೊಡನೆ ಮಾರ್ಚ ತಾ. ೨೪ಕ್ಕೆ ದಿಲ್ಲಿಗೆ ಬಂದಂದಿನಿಂದ ಭಾವೀ ರಾಜ್ಯಘಟನೆಯ ಬಗ್ಗೆ ಆಲೋಚನೆಗಳು ನಡೆದಿವೆ. ವೈಸರಾಯ ಮೊದಲು ಸರ್ವಾಧಿಪತಿಗಳೊಡನೆ ಆಲೋಚನೆಯಾಯಿತು. ಅನಂತರ ಬೇರೆ ಬೇರೆ ಪ್ರಾಂತಾಧಿಪರೂ ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದ ಸಭಾಸದರೂ, ಸರಕಾರ ವಿರೋಧಿ ಪಕ್ಷದ ಪ್ರಮುಖರೂ, ಸಪ್ರು-ಜಯಕರರೂ, ಭೋಪಾಲದ ನವಾಬರೂ, ಪ್ರಮುಖ ಸಂಸ್ಥಾನಗಳ ದಿವಾನರೂ, ಶೀಖ, ಕ್ರಿಶ್ಚಿ, ಎಂಗ್ಲೋ-ಇಂಡಿಯನ್ ಮತ್ತು ಯುರೋಪಿಯನ್ ಸಮಾಜಗಳ ಪ್ರಮುಖರೂ, ಬ್ರಿಟಿಶ ಮಂತ್ರಿಮಂಡಳದ ಪ್ರತಿನಿಧಿಗಳನ್ನು ಸಾಮೂಹಿಕವಾಗಿ ಇಲ್ಲವೆ ವೈಯಕ್ತಿಕವಾಗಿ ಕಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಮುಸ್ಲಿಮ ಲೀಗಿನ ಸರ್ವಾಧ್ಯಕ್ಷ ಬ್ಯಾ. ಜಿನ್ನಾ ಅವರೂ ತ್ರಿಮಂತ್ರಿಗಳನ್ನು ಕಂಡು ತಮ್ಮ ಪಾಕಿಸ್ತಾನದ ಬೇಡಿಕೆಯನ್ನು ಪ್ರತಿಪಾದಿಸಿದರು. ಸಿಂಧ, ಬಲುಚಿಸ್ಥಾನ, ಪಂಜಾಬ, ಗಡಿನಾಡು, ಬಂಗಾಲ ಮತ್ತು ಆಸಾಮ ಇವಿಷ್ಟು ಪ್ರಾಂತಗಳನ್ನು ಪಾಕಿಸ್ತಾನವೆಂದು ವಿಂಗಡಿಸಬೇಕಾಗಿಯೂ ಈ ಪ್ರದೇಶಗಳನ್ನು ಜೋಡಿಸಲು ನಡುವೆ ದಾರಿ ಬೇಕೆಂದು ಜಿನ್ನಾರು ಪ್ರತಿಪಾದಿಸಿದರಂತೆ. ಈ ಕಲ್ಪನೆ ತ್ರಿಮಂತ್ರಿಗಳಿಗೆ ಮಾನ್ಯವಾಗಲಿಕ್ಕಿಲ್ಲವೆಂದೂ ಸುದ್ದಿಗಾರರ ತರ್ಕವುಂಟು. ಮಹಾತ್ಮರಿಗೂ ರಾಷ್ಟ್ರಪತಿ ಮೌಲಾನ ಅಬುಲ ಕಲಾಮ ಆಝಾದರಿಗೂ ಕೊಂಗ್ರೆಸ ಕಾರ್ಯಕಾರಿ ಮಂಡಳದ ಪ್ರಮುಖ ಸಭಾಸದರಾದ ಪಂ. ಜವಾಹಿರಲಾಲ ನೆಹರು, ಸರದಾರ ವಲ್ಲಭಭಾಯಿ ಪಟೇಲರಿಗೂ ತ್ರಿಮಂತ್ರಿಗಳಿಗೂ ಪುನಃ ಪುನಃ ಔಪಚಾರಿಕ ಹಾಗೂ ಅನೌಪಚಾರಿಕ ಭೆಟ್ಟಿಗಳು ಜರಗಿವೆ. ಫೆಥಿಕ ಲಾರೆನ್ಸ, ಉಪಹಾರ ಮೊದಲಾದ ಔತಣಗಳ ನೆವ ಮಾಡಿ ಬ್ರಿಟಿಶ ಮಂತ್ರಿಗಳೂ ರಾಷ್ಟ್ರೀಯ ಸಭೆಯ ಪ್ರಮುಖರ ಮೇಲಿಂದ ಮೇಲೆ ಭೆಟ್ಟಿಗೆ ಕೂಡ [illegible] ಮಹಾತ್ಮರಂತೂ ಸಲಹೆಗಾರರ ಭೂಮಿಕೆಯನ್ನು ಧರಿಸಿದ್ದಾರೆ. ತಮಗೆ ಯಾವದೇ ಪಕ್ಷವಿಲ್ಲ, ಸಕಲರಿಗೂ ಸಲಹೆ ಕೊಡಲು ತಾವು ಸಿದ್ಧರು. ಎಂದಾಗಿ ಮಹಾತ್ಮರು ನುಡಿದು ಸಕಲರ ಅಂಬೋಣ ನಿರ್ಮಲಚಿತ್ತದಿಂದ ಕೇಳಿಕೊಂಡು ಎಲ್ಲರಿಗೂ ಯುಕ್ತವೆಂತ ಸಲಹೆ ಕೊಡುತ್ತಿದ್ದಾರೆ. ದಿಲ್ಲಿಯೊಳಗಿನ ಮಹಾತ್ಮರ ನಿವಾಸಸ್ಥಾನವಾದ ವಾಲ್ಮೀಕಿ ಮಂದಿರದಲ್ಲಿ ಕ್ರಿಪ್ಸರು ಬಂದು ಮಹಾತ್ಮರೊಡನೆ ರಹಸ್ಯದಿಂದ ಮಾತಾಡಿದ ವಾರ್ತೆಯುಂಟು. ಮುಸ್ಲಿಂ ಲೀಗಿನವರ ಬೇಡಿಕೆಯಂತೆ ಹಿಂದುಸ್ಥಾನವನ್ನು ತುಂಡರಿಸಲು ದೇಶದಲ್ಲಿ ಕಡು ವಿರೋಧವುಂಟು. ಒಬ್ಬೊಂಟಿಗ ಜಿನ್ನಾರನ್ನು ಬಿಟ್ಟರೆ ಇನ್ನಾರಿಗೂ ಹಿಂದುಸ್ಥಾನದ ವಿಭಜನೆ ಬೇಡ. ಹಿಂದುಸ್ಥಾನವನ್ನು ಸೀಳಿದರೆ ಇತಿಹಾಸ [illegible] ದುರ್ಬಲವಾಗುವದೆಂಬ ಭೀತಿಯುಂಟು. ಮಧ್ಯವರ್ತಿ ಸರಕಾರವು ಪ್ರಬಲವಿರಬೇಕೆಂದೂ ಅದನ್ನು ಪ್ರಬಲಗೊಳಿಸಲು ಸಕಲ ಪ್ರಯತ್ನಗಳು ನಡೆಯಬೇಕೆಂದೂ ರಾಷ್ಟ್ರೀಯ ಸಭೆಯ ನಿಶ್ಚಯವಿದೆ. ಬ್ರಿಟಿಶ ಮಂತ್ರಿಗಳೂ ಕೂಡ ಇದೇ ಅಭಿಪ್ರಾಯದವರಾಗಿದ್ದಾರಂತೆ. [illegible] ಸಂಪೂರ್ಣ ಗಟ್ಟಿಯಾಗಿದೆ. ಆದ್ದರಿಂದ [illegible] ಮುಸ್ಲಿಂ ಲೀಗಿನ ಪ್ರತಿನಿಧಿತ್ವ [illegible] ದೊರೆಯುವ [illegible] ಬ್ರಿಟಿಶ ಅಪೇಕ್ಷೆಯು [illegible] ಇಂಥ ಪರಿಸ್ಥಿತಿಯಲ್ಲಿ [illegible] ಸಮಾಧಾನಕ್ಕಾಗಿ ಒಂದು [illegible] ಹಂಚಲು ಬ್ರಿಟಿಶರು ಒಪ್ಪಲಿಕ್ಕಿಲ್ಲ. ಜಿನ್ನಾರವರ ಸಮಾಧಾನಕ್ಕಾಗಿ ಪಾಕಿಸ್ತಾನದ ಬೇಡಿಕೆಯನ್ನು ತಿಂಡಿಯಲ್ಲಿ [illegible] ಒಂದು ಯೋಜನೆಯನ್ನು ಸರ ಸ್ಟ್ಯಾಫರ್ಡ ಕ್ರಿಪ್ಸರು ರೂಪಿಸುತ್ತಿದ್ದಾರೆ. [illegible] ಕಾಯದೆ ಮಂಡಳ [illegible] ದಿಂದ ಪಾಕಿಸ್ತಾನ ಪ್ರಶ್ನೆ ಬಗೆಹರಿಸಿಕೊಳ್ಳಬೇಕಾಗಿಯೂ ಸೂಚನೆ ಒಂದಿದೆ. ಆ ಕಾಯದೆ ಮಂಡಳ [illegible] ಪಾಕಿಸ್ತಾನ ಯೋಜನೆ ವ್ಯವಹಾರಿಕ ಮತ್ತು ಹಿತಪ್ರದವೆಂದು ಅಭಿಪ್ರಾಯಪಟ್ಟರೆ ಮಾತ್ರ ಪಾಕಿಸ್ತಾನ ನಿರ್ಮಾಣವಾಗಿ ಮಾಡತಕ್ಕದಾಗಿದೆಯಂತೆ. ಈ ರೀತಿ ಪಾಕಿಸ್ತಾನ ಸಮಸ್ಯೆ ಬಗೆಹರಿ ಜಿನ್ನಾ-ಮುಸ್ಲಿಮರ ಸಮಾಧಾನ ಮಾಡಬೇಕೆಂಬ ವಿಚಾರವುಂಟು. ಜಿನ್ನಾರವರು ಸಮಾಧಾನ ಹೊಂದದಿದ್ದರೆ ಅವರನ್ನು ಲೆಕ್ಕಿಸದೆ ಮಂತ್ರಿಗಳು ತಮ್ಮ ಯೋಜನೆ ನಿರ್ಧರಿಸುವರು. ಹಿಂದುಸ್ಥಾನಕ್ಕೆ ಸ್ವತಂತ್ರ ರಾಜ್ಯಘಟನೆಯನ್ನು ಸೃಷ್ಟಿಸಿದ ಮೇಲೆ ಬ್ರಿಟಿಶ ಸರಕಾರ [illegible] ನಷ್ಟವಾಗಬಾರದೆಂದು ೩೦ ವರ್ಷಗಳ ವ್ಯಾಪಾರಿ ಆಹ್ವಾನವು ಅಗತ್ಯವಿದೆಯೆಂದೂ ಆಬಗ್ಗೆ ಕ್ರಿಪ್ಸರು ಒಂದು ಯೋಜನೆ ತಯಾರಿಸುತ್ತಿರುವರೆಂದೂ ಹೇಳುತ್ತಾರೆ. ಇಂದು-ನಾಳೆ ಬ್ರಿಟಿಶ ಮಂತ್ರಿಗಳ ಹೊಸ ಯೋಜನೆಯು ಸ್ಪಷ್ಟ ಪ್ರಕಟವಾಗಲಿದೆ. ಶುಕ್ರವಾರದಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ದಿಲ್ಲಿಯಲ್ಲಿ ಕೂಡಿ ಸಂಕಲ್ಪಿತ ರಾಜ್ಯಯೋಜನೆಯ ಚರ್ಚೆ ಮಾಡುತ್ತಿದೆ. ಇನ್ನು ೨-೩ ದಿನಗಳಲ್ಲಿ ಬ್ರಿಟಿಶರು ವಿಶ್ರಾಂತಿಗಾಗಿ ಕಾಶ್ಮೀರಕ್ಕೆ ಹೋಗುವವರಂತೆ. ಕಾಶ್ಮೀರಕ್ಕೆ ಹೋಗುವ ಪೂರ್ವದಲ್ಲೇ ಅವರ ಯೋಜನೆಯು ರೂಪ ಪ್ರಕಟವಾಗುವದೆಂದೂ ಕಾಶ್ಮೀರದಿಂದ ತಿರುಗಿ ಬಂದ ಬಳಿಕ ಬ್ರಿಟಿಶರು ಪುನಃ ಆಲೋಚನೆ ಮಾಡಿ ಯೋಜನೆಯನ್ನು ಸ್ಥಿರಪಡಿಸುವರೆಂದೂ ದಿಲ್ಲಿಯೊಳಗೆ ವಾರ್ತೆ ಹಬ್ಬಿದೆ.

— ಅಧಿಕಾರಿಗಳಲ್ಲಿ ಬೇರೂರಿರುವ ಲಂಚಗುಳಿತನ ಹಾಗೂ ಸ್ವಜನ ದುರ್ವರ್ತನೆಯನ್ನು ನಿರ್ಮೂಲಿಸಲು ಮುಂಬಯಿ ಸರಕಾರವು ನಿರ್ಧರಿಸಿದೆ. ಅಧಿಕಾರಿಗಳ ವಿರುದ್ಧ ದೂರುಗಳು ಬಂದರೆ ಅವುಗಳ ಚೌಕಸಿ ಕೂಡಲೆ ಮತ್ತು ಪೂರ್ಣವಾಗಿ ಮಾಡಲ್ಪಡುವದೆಂದೂ ಸರಕಾರವು ಸಾರಿದೆ. ಈಗಿನ ಕಾಯದೆಯಂತೆ ಅಧಿಕಾರಿಗಳಿಗೆ ಲಂಚ ಕೊಟ್ಟವರೂ ಗುನ್ಹೆಗಾರರಾಗಿ ಶಿಕ್ಷೆಗೆ ಪಾತ್ರರಾಗುತ್ತಾರೆ. ಆದರೆ ಹೀಗೆ ಲಂಚ ಕೊಟ್ಟವರು ಮುಂದೆ ಬಂದು ಎಲ್ಲ ವಿವರಗಳನ್ನು ಸಾದ್ಯಂತವಾಗಿಯೂ ನಿಸ್ಸಂದೇಹವಾಗಿಯೂ ಹೇಳಿದರೆ ಅವರ ವಿರುದ್ಧ ಖಟ್ಲೆ ಮಾಡಲಿಕ್ಕಿಲ್ಲವೆಂದು ಸರಕಾರದವರು ಆಶ್ವಾಸನೆ ಕೊಟ್ಟಿದ್ದಾರೆ. ಲಂಚಗಾರರೇ, ಈಗ ಸಿದ್ಧರಾಗಿರಿ!

— ಗೇಣಿದಾರ ಟೆನೆನ್ಸಿ ಯಾನೆ ಲಾವಣಿ ಕಾನೂನನ್ನು ಮುಂಬಯಿ ಸರಕಾರವು ತಾ ೧೧-೪-೪೬ರಿಂದ ಇಡೀ ಪ್ರಾಂತದಲ್ಲಿ ಜಾರಿಯಲ್ಲಿ ತಂದಿದೆ.

ಕಾರವಾರ—(ತಾ ೧೪-೪-೪೬) ಕಳೆದ ತಿಂಗಳಲ್ಲಿ ಇಲ್ಲಿಂದ ಸಮೀಪದಲ್ಲಿದ್ದ ಸಮುದ್ರ ತೀರದಲ್ಲಿ ಅನಧಿಕೃತವಾಗಿ ಹೊರಗೆ ಸಾಗಿಸುತ್ತಿದ್ದ ಜವಳಿ ಗಂಟುಗಳನ್ನು ಅಧಿಕಾರಿಗಳು ಹಿಡಿದ ಕಥೆ "ವೃತ್ತ"ದಲ್ಲಿ ಹಿಂದೆ ಪ್ರಕಟವಾಗಿದೆಯಷ್ಟೇ. ಆ ಜವಳಿಯ ಮುಂದಿನ ಕಥೆ ಸ್ವಾರಸ್ಯಮಯವಾಗಿದೆ. ಸಿಕ್ಕಿಬಿದ್ದ ರಫ್ತು ಮಾಡುವ ಗಂಟುಗಳನ್ನು ರೂ ೧೦೦೦ ಕೊಟ್ಟು ಬಿಟ್ಟುಕೊಂಡು (ಜಪ್ತು ಮಾಡಿದವರು [illegible]) ಬಿಟ್ಟುಕೊಟ್ಟರಂತೆ. ಬಿಟ್ಟುಕೊಡುವಾಗ ಪೋಲೀಸ ಅಧಿಕಾರಿಗಳು ಅಗ್ರಹ ತೊಟ್ಟರೂ ಜಪ್ತು ಮಾಡಿದವರು ಕೇಳಲಿಲ್ಲವಂತೆ! (ಅದ್ಯಾಕೆಂದು ಓದುಗರೇ ತರ್ಕಿಸಲಿ) ಮುಂದೆ ಆ ಜವಳಿ ಹೇರಿಕೊಂಡ ಮಚವೆ ಭಟಕಳಕ್ಕೆ ಹೋಗಲಿಲ್ಲ. ನಡುವೆಯೇ ದರ್ಯದಲ್ಲಿ ಮುಳುಗಿ ಹೋಯಿತಂತೆ! ಹೀಗಿದ್ದ ಜವಳಿಯನ್ನು ಗೋವೆಗೆ ಮುಟ್ಟಿಸಿ ಆ ಹಳೆಯ ಮಚವೆಯನ್ನು ಜವಳಿ ಕಳಿಸಿದವರು ಎಲ್ಲೋ ಮುಳುಗಿಸಿಬಿಟ್ಟರೆಂದು ಅಂತಜ್ಞಾನಿಗಳು ಹೇಳುತ್ತಾರೆ. ಕಳ್ಳದವರಿಗೆ ದಂಡ ತೆರಬೇಕಾಯ್ತು, ಮಚವೆಯವನಿಗೆ ನಷ್ಟ ತುಂಬಿ ಕೊಡಬೇಕಾಯ್ತು, ದಾರಿಯೊಳಗಿನ ವಿಘ್ನ ತೀರಿ ಪೋಲೀಸರಿಗೆ ಬರಿ ಕೊಡಬೇಕಾಯ್ತು, ೬-೭ ಸಾವಿರ ರೂ ಖರ್ಚು ಬಂತಂತೆ. ಆದರೆ ಗೋವೆಯಲ್ಲಿ ಆ ಜವಳಿಯನ್ನು (ಅಷ್ಟಕ್ಕಿಂತ ಹೆಚ್ಚಿಗೆ ಬೆಲೆಗೆ) ಮಾರಿ ೨೫-೩೦ ಸಾವಿರ ರೂ ಲಾಭ ಸಿಕ್ಕಿರುವದರಿಂದ ಜವಳಿ ರಫ್ತು ಮಾಡಿದವರಿಗೆ ನಷ್ಟ ಇಲ್ಲವಂತೆ! ೨೦ ಸಾವಿರ ರೂ ಗಳನ್ನು ನಿಷ್ಕಳ ಮುನಾಫೆ ಯಾದದ್ದೆಂದು ಈ ಅಂತಜ್ಞಾನಿಗಳು ಲೆಕ್ಕ ಹಾಕುತ್ತಾರೆ! ಮೇಲೆ ಜವಳಿ ಮತ್ತು ಇಳಿಸಿದ್ದರಿಂದ ಬಿಟ್ಟ ತಂದಿಯಿಂದಲೂ ನಷ್ಟ ಸಿಗುವದು! ಹೀಗೆ ಆದಾರ ಲಾಭದ ವರದಿಯಿಂದಲೇ ಈ ಕಳ್ಳ ವ್ಯಾಪಾರ ನಡೆದಿದೆ. ಇನ್ನೆ ರಾತ್ರಿ ಪುನಃ ೩೦ ೪೦ ಜವಳಿ ಗಂಟು ಹೊರಗೆಯಿಂದ ಭಟ್ಕಳದ ಸುದ್ದಿ ಬಂದಿದೆ!

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR. S. I.

The Head Office and Branches of the Bank now accept Season Deposits from three to six months at the following rates -

Three Months at 2 % per annum

Six Months at 2¼ % per annum.

No such deposit will be allowed to run beyond 30th September 1946

Coondapoor, 8 - 2 - 1946 K. VAMAN SHENAI, CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಶಕೆ ಹೆಚ್ಚು. ಒಮ್ಮೊಮ್ಮೆ ಮುಗಿಲಲ್ಲಿ ಮೋಡಗಳು ಕಾಣುತ್ತಿವೆ.

ಇದೇ ಬರುವ ಗುರುವಾರ ತಾ. ೧೮ರಿಂದ ಜಿಲ್ಹೆಯೊಳಗಿನ ಎಲ್ಲ ಸಿವ್ಹಿಲ ಕೋರ್ಟುಗಳು ಹೊಸ್ಪರ ಬಿಟ್ಟು ಮತ್ತು ಬೇಸಿಗೆ ರಜೆಯ ಮೂಲಕ ಮುಚ್ಚಲ್ಪಡುವವು, ಮತ್ತು ಜೂನ ತಾ. ೫ಕ್ಕೆ ತಿರುಗಿ ತೆರೆಯಲ್ಪಡುವವು

ಮುಂಬಯಿಯಿಂದ ಸರಕಾರಿ ಗೋದಿಯನ್ನು ಹೇರಿಕೊಂಡು ಕುಮಟೆಗೆ ಬರುತ್ತಿದ್ದ ಒಂದು ಮಚವೆಯು ತದಡಿ ಬಂದರದ ಹೊರಗೆ ಸಮುದ್ರದಲ್ಲಿ ತಂಗಿದ್ದಾಗ ಕೆಲವು ಸಮುದ್ರಗಳ್ಳರು ಆ ಮಚವೆಯೊಳಗಿಂದ ೫೦೦ಕ್ಕೆ ಮೇಲ್ಪಟ್ಟು ಗೋದಿಯ ಚೀಲಗಳನ್ನು ಅಪಹರಿಸಿಕೊಂಡು ಹೋದ ಸಂಗತಿ ತಿಳಿಯುತ್ತದೆ. ಈ ತನಕ ತದಡಿ ಬಂದರದಲ್ಲಿ ಖಾಸಗಿ ಸರಕು ಹೇರಿಕೊಂಡು ಬಂದ ಮಚವೆಗಳೊಳಗಿನ ಸರಕುಗಳಷ್ಟೇ ಕಳವಿಗೆ ಹೋಗುತ್ತಿದ್ದವು. ಆದರೆ ಸರಕಾರ ಸರಕುಗಳ ಲೂಟಿ ಮಾಡುವಷ್ಟು ಧೈರ್ಯ ಈ ಕಳ್ಳರಿಗೆ ಆದೀತೆಂದು ಅನಿಸಿದ್ದಿಲ್ಲ. ಕಳ್ಳರು ಈಗ ಆ ಸಾಹಸಕ್ಕೂ ಕೈಹಾಕಿದ್ದಾರೆ! ಸ್ಥಾನಿಕ ಅಧಿಕಾರಿಗಳ ನೆರವಿರುವದರಿಂದಲೇ ಕಳ್ಳರು ಇಷ್ಟು ದಿಟ್ಟರಾಗಿದ್ದಾರೆಂದು ಒಳಗುಟ್ಟು ಬಲ್ಲವರು ಹೇಳುತ್ತಾರೆ. ಮಚವೆಯೊಳಗಿನ ಸರಕು ಮಾಯವಾದ ಸುದ್ದಿ ಕಿವಿಯ ಮೇಲೆ ಬಂದ ಕೂಡಲೇ ಜಿಲ್ಲಾಧಿಕಾರಿಗಳೂ ಪೋಲೀಸ ಮೇಲಧಿಕಾರಿಗಳೂ ತಾತ್ಪರ್ಯದಿಂದಲೂ ಜಾಗ್ರತೆಯಿಂದಲೂ ಕಾರವಾರದಿಂದ ಪೋಲೀಸ ಪಡೆಯನ್ನು ತರಿಸಿ ಜಾರಿಯಿಂದ ತಪಾಸಣೆ ನಡಿಸಿದ್ದರೆ ಮಾಯವಾದ ಬಹಳಷ್ಟು ಸರಕೂ ಸಿಗುತ್ತಿತ್ತು; ಕಳ್ಳರೂ ಕಳ್ಳರ ಬೆಂಗಾವಲಿಗರಾದವರೂ ಸಿಗುತ್ತಿದ್ದರು! ಆದರೆ ಅಧಿಕಾರಿಗಳು ಕಾಗದದ ಕುದುರೆಗಳನ್ನು ಓಡಿಸುವದರಲ್ಲೇ ಕಾಲಹರಣ ಮಾಡಿ ಕಳವಿನ ಪತ್ತೆಯನ್ನೂ ಹಚ್ಚಲಿಲ್ಲ! ಕಳವಾದ ರೀತಿಯ ಶೋಧವನ್ನು ಮಾಡಲಿಲ್ಲ!! ನಮ್ಮ ಜಿಲ್ಲೆಯ ಆಡಳಿತೆಯು ಅಕಾರ್ಯಕ್ಷಮ (inefficient)ವಾದುದರ ಲಕ್ಷಣವಿದು.

ಗೋಕರ್ಣ ಸೀಮೆಯಲ್ಲಿ ಕಂಟ್ರೋಲ ಪೋಲೀಸರು ಈಗಲೂ ಹಿಂದಿನಷ್ಟೇ ಸುಲಿಗೆಯನ್ನೂ ಕಳ್ಳಾಟಿಕೆಯನ್ನೂ ನಡಿಸುತ್ತಿದ್ದಾರೆ ಅವರ ಈ ಸುಲಿಗೆ-ಕಳ್ಳಾಟಿಕೆಗಳ ಕಥೆ ಇದೀಗ ಹೊರಬಿದ್ದಿದೆ. ಗೋಕರ್ಣದ ಹಾರುವರೊಬ್ಬರಿಗೆ ಹಾರುಮಾಸ್ಕೇರಿಯಿಂದ ಕೆಲವು ಅಕ್ಕಿ ಬರುವದಿತ್ತು. ಅದನ್ನು ತರಿಸಲು ಅವರು ಓರ್ವ ಪೋಲೀಸ ಪೇದೆಯ ಸಹಾಯ ಕೋರಿದರಂತೆ. ಸಹಾಯ ಮಾಡಲು ಆ ಪೇದೆಯೂ ಒಪ್ಪಿದನಂತೆ! ಅಂತು ಒಂದು ರಾತ್ರಿ ಹಾರುಮಾಸ್ಕೇರಿಯಿಂದ ೨ ಮಾನಗಿ ೧೦ ಕೊಳಗ ಅಕ್ಕಿ ತಾರಮಕ್ಕಿಯ ಮಾರ್ಗವಾಗಿ ಗೋಕರ್ಣಕ್ಕೆ ಬಂತು ಹಾರುವರಿಗೆ ಸಹಾಯ ಮಾಡಲೊಪ್ಪಿದ ಪೇದೆಯು ಬಹಳ ಘಟಿಂಗನಿದ್ದಂತೆ ತೋರುತ್ತದೆ. ಅವನು ಗೋಕರ್ಣಕ್ಕೆ ಹೀಗೆ ಹೀಗೆ ಅಕ್ಕಿ ಬರುವದೆಂದು ಕಂಟ್ರೋಲ ಹವಾಲದಾರನಿಗೆ ಮೊದಲೇ ತಿಳಿಸಿಟ್ಟಂತೆ ತೋರುತ್ತದೆ. ಅಕ್ಕಿಯನ್ನು ಹೊತ್ತು ತಂದ ಆಳುಗಳೂ, ಅಕ್ಕಿ ತರಿಸಿದ ಹಾರುವರೂ, ಸಹಾಯಕ ಪೋಲೀಸ ಪೇದೆಯೂ ತಾರಮಕ್ಕಿಗೆ ಬರುವಷ್ಟರಲ್ಲಿ ಕಂಟ್ರೋಲ ಹವಾಲದಾರ ಹಾಗೂ ಮತ್ತಿಬ್ಬ ಪೋಲೀಸರು ಬೆಟರಿ ದೀಪದ ಸಹಾಯದಿಂದ ಆ ಅಕ್ಕಿ ಕಂಡುಹಿಡಿದರು! ಹಾರುವರಿಗೆ ಪೋಲೀಸ ಪೇದೆಯು ಸಹಾಯನಿದ್ದುದರಿಂದ— ಅವರ ಅಕ್ಕಿ ಹಿಡಿದಾಗ ಆ ಪೇದೆಯೂ ಅದೃಶ್ಯನಾಗಿ ಬಿಟ್ಟಿದ್ದನು!— ಹಾರುವರು ಅಕ್ಕಿ ಹಿಡಿದವರಿಗೆ ಕೈ ಬಿಸಿ ಮಾಡಲೊಪ್ಪಲಿಲ್ಲ! ಕೆಲ ಕಾಲ ಈ ಬಗ್ಗೆ ಒದ್ದಾಟವಾಯಿತಂತೆ! ಆದರೂ ಹಾರುವರು ಗಟ್ಟಿಯಾಗಿ ನಿಂತರು. ಕೊನೆಗೆ ಕಂಟ್ರೋಲ ಹವಾಲದಾರನು ಆ ಅಕ್ಕಿಯನ್ನು — ೨ ಮಾನಗಿ ೧೦ ಕೊಳಗ— ಜಪ್ತ ಮಾಡಿ ಪೋಲೀಸ ಕಚೇರಿಗೆ ಸಾಗಿಸಿದನು. ಜಪ್ತಾದ ಅಕ್ಕಿ ಮ್ಯುನಿಸಿಪಾಲಿಟಿಯ ಹದ್ದಿನೊಳಗೆ ಬರುವಾಗ ನಾಕೆಯಲ್ಲಿ ಸುಂಕ ಕೊಡಬೇಕಾಯಿತು ಅದನ್ನು ಹವಾಲದಾರನೇ ಸ್ವತಃ ತೆತ್ತು, ತನ್ನ ಹೆಸರಲ್ಲೇ ಪಾವತಿ ಮಾಡಿಸಿಕೊಂಡನಂತೆ ಮರುದಿನ ಬೆಳಿಗ್ಗೆ ಹಾರುವರು ಸುಮ್ಮನಾಗಿ ಹವಾಲದಾರನಿಗೆ ಸಮಾಧಾನ ಮಾಡಿದರಂತೆ ಮತ್ತು ೨ ಮಾನಗಿ ಅಕ್ಕಿ ಹೇಗೂ ಬಿಡಿಸಿಕೊಂಡು ಹೋದರಂತೆ ಈಗ ಪೋಲೀಸರ ಕಡೆ ೧೦ ಕೊಳಗ ಅಕ್ಕಿ ಮಾತ್ರ ಉಂಟು ಈ ಅಕ್ಕಿ ಕಳ್ಳತನದಿಂದ ಗೋಕರ್ಣಕ್ಕೆ ತಂದ ಬಗ್ಗೆ ಹವಾಲದಾರನು ಅಕ್ಕಿ ಹೊತ್ತು ತಂದ ಆಳುಗಳ ಮೇಲೆ ಫಿರ್ಯಾದಿ ಮಾಡುವ ಆಲೋಚನೆಯಲ್ಲಿದ್ದಾನೆ. ಆದರೆ ನಡುವೆ ಆಗಲೇ ಒಂದು ಪೇಚು ಬಂದು ಬಿದ್ದಿದೆ ಸುಂಕದ ಪಾವತಿಯಲ್ಲಿ ೨ ಮಾನಗಿ ೧೦ ಕೊಳಗ ಅಕ್ಕಿ ನಮೂದುಂಟು ಈಗ ೧೦ ಕೊಳಗ ಅಕ್ಕಿ ಮಾತ್ರ ಉಂಟು. ಇನ್ನುಳಿದ ೨ ಮಾನಗಿ ಅಕ್ಕಿ ಎಲ್ಲಿ ಹೋಯಿತೆಂದು ಕೇಳಿದರೆ ಏನುತ್ತರ ಕೊಡುವದು ಎಂದು ಆತಗೆ ಸೂಚುವದಿಲ್ಲ! ಮ್ಯು॥ಯ ನಾಕೇದಾರನಿಗೆ ಬಗಲಲ್ಲಿ ಹಾಕಿಕೊಂಡು ಸುಂಕದ ಪಾವತಿಯಲ್ಲಿ ತಿದ್ದುಪಡಿ ಮಾಡಿಸಿಕೊಳ್ಳುವ ಪ್ರಯತ್ನ ಆತ ಮಾಡಿ ನೋಡಿದನು ಆದರೆ ಒಂದೊಮ್ಮೆ ಕೈ ಸುಟ್ಟುಕೊಂಡ ಆ ನಾಕೆದಾರನು ಇಂತಹ ಆಸ್ಪದ ಮಾಡಲೊಪ್ಪಲಿಲ್ಲ ಅಂತು ಹವಾಲದಾರನು ಈಗ ಒಳ್ಳೇ ಸಂಕಟದಲ್ಲಿ ಸಿಕ್ಕಿದ್ದಾನೆ. ಅದರೊಳಗಿಂದ ಅವನು ಹೇಗೆ ಪಾರಾಗುತ್ತಾನೆಂದು ನೋಡಲು ಬಹಳ ಜನರು ಕುತೂಹಲಪಡುತ್ತಿದ್ದಾರೆ.

ತದಡಿ ಬಂದರದಲ್ಲಾದ ಗೋದಿ-ಕಳವಿನ ಕತೆಗಿಂತ ಹೆಚ್ಚಿಗೆ ರೋಮಾಂಚಕಾರಿ ಕಥೆಯೊಂದು ಬರೆದು ಬಂದಿದೆ. ಕುಂದಾಪುರದ ಸಾವಕಾರರೊಬ್ಬರ ಮಚವೆಯು ಮುಂಬಯಿಯಿಂದ ಗೋದಿ, ಚಿನ್ನ, ಕೊತಂಬ್ರಿ, ಕಡಧಾನ್ಯ ವಗೈರೆ ಸುಮಾರು ೫೦೦೦೦ ರೂ. ಬೆಲೆ ಬಾಳುವ ಸರಕನ್ನು ಹೇರಿಕೊಂಡು ಕೆಲವು ದಿನಗಳಾಚೆ ತದಡಿಗೆ ಬಂದಿತ್ತು. ತದಡಿಯ ಕೆಲವು ಕಳ್ಳ-ವರ್ತಕರಿಗೆ— ಗೋಕರ್ಣದ ಕೆಲ ವ್ಯಾಪಾರಿಗಳೂ ಈ ಒಳಸಂಚಿನಲ್ಲಿರುತ್ತಾರೆಂದು ಮಾಹಿತಿಯುಂಟು — ಆ ಸರಕನ್ನು ಒಳಗೆ ಹಾಕುವ ಬುದ್ಧಿಯುಂಟಾಯಿತು. ಅವರು ತಮ್ಮೊಳಗೆ ಕೂಟ ಮಾಡಿಕೊಂಡು ಮಚವೆಯ ಮೇಲಿನ ತಂಡೇಲನಿಗೆ ೧೦೦೦ ರೂ. ಕೊಟ್ಟು, ಆ ಎಲ್ಲ ಸರಕುಗಳನ್ನು ಕತ್ತಲೆಯಲ್ಲಿ ಕಳ್ಳತನದಿಂದ ಇಳಿಸಿಕೊಂಡು, ಸರಕು ತುಂಬಿದ ಚೀಲಗಳ ಮೇಲಿರುವ ಕುಂದಾಪುರ ಸಾವಕಾರರ ನಿಶಾನಿಗಳನ್ನೆಲ್ಲ ನಾಶ ಮಾಡಿ, ಆ ಸರಕನ್ನು ತಮ್ಮೊಳಗೆ ಹಂಚಿಕೊಂಡು ಬಿಟ್ಟರಂತೆ ಅವರೊಳಗಿನ ಬಹುತೇಕ ಸರಕು ಈಗಾಗಲೇ ಕಾರವಾರ, ಶಿರ್ಸಿಗೆ ಕಳಿಸಿಕೊಟ್ಟಿದ್ದಾರಂತೆ ಇಷ್ಟೆಲ್ಲ ಕೆಲಸ ತದಡಿ ಬಂದರದಲ್ಲಿರುವ ಕಸ್ಟಮ್ ಅಧಿಕಾರಿಗಳ ತಿಳುವಳಿಕೆಯಿಂದಲೇ ಆಗಿದೆಯಂತೆ ಅವರಿಗೂ ಈ ಸುಲಿಗೆಯಲ್ಲಿ ಪಾಲು ಸಿಕ್ಕಿರಬೇಕೆಂದು ಗುಪ್ತಗಾರರ ತರ್ಕವುಂಟು. "ನಮ್ಮ ಸಾವಕಾರರಿಗೇನು ಹಾನಿಯಿಲ್ಲ! ಎಲ್ಲ ಸರಕಿಗೆ ವಿಮೆ ತೆಗೆದದ್ದುಂಟು ವಿಮೆ ಕಂಪನಿಯಿಂದ ಅವರಿಗೆ ಹಣ ಸಿಗುವದು ಸಮುದ್ರದಲ್ಲಿ ತುಫಾನು ಆದ್ದರಿಂದ ಸರಕನ್ನು ಸಮುದ್ರದಲ್ಲಿ ಒಗೆಯಬೇಕಾಯಿತೆಂದು ನೀನು ಸಾವಕಾರರಿಗೆ ವರದಿ ಕೊಟ್ಟು ಬಿಡು ಸಾಕ್ಷಿ ಬೇಕಾದರೆ ಬೇಕಷ್ಟು ಪುರಾವೆ ಕೊಡುತ್ತೇವೆ" ಎಂದು ಸದರಿ ಸಂಘಾರಿಗಳು ಮಚವೆಯ ತಂಡೇಲನಿಗೆ ಗುರೂಪದೇಶವನ್ನೂ ಮಾಡಿರುತ್ತಾರೆಂದು ವಾರ್ತೆಯುಂಟು! ಈ ಸಂಘಾರಿಗಳನ್ನು ನಿರ್ಮೂಲನಗೊಳಿಸದಿದ್ದರೆ ಸಮುದ್ರ ಮಾರ್ಗವಾಗಿ ವ್ಯಾಪಾರ ಮಾಡುವ ಜನರಿಗೆ ಸುಖವಾಗಲಿಕ್ಕಿಲ್ಲ; ಸುರಕ್ಷಿತತೆ ಸಿಗಲಿಕ್ಕಿಲ್ಲ ಈ ನಿರ್ಮೂಲನವು ಸ್ಥಾನಿಕ ಅಧಿಕಾರಿಗಳಿಂದ ಆಗುವಂತಿಲ್ಲ ಮುಂಬಯಿ ಸರಕಾರದವರು ಪ್ರತ್ಯೇಕ ಪೋಲೀಸರನ್ನೂ ನುರಿತ ಅಧಿಕಾರಿಗಳನ್ನೂ ಈ ಕೆಲಸಕ್ಕೆ ನೇಮಿಸಬೇಕಾಗಿ ಅರಿಕೆಯಿದೆ ಆ ಬಗ್ಗೆ ಎಷ್ಟೇ ಖರ್ಚು ಬಂದರೂ ಪರವೆಯಿಲ್ಲ ಲೋಕಕ್ಷೇಮಕ್ಕಾಗಿ ಆ ಖರ್ಚು ಮಾಡಲೇ ಬೇಕು.

ಚಿತ್ರಿಗಿಯ ಬೆಟ್ಟದಲ್ಲಿ ಒಂದು ಹುಲಿಯು ಬಂದಿದ್ದ ಸುದ್ದಿಯುಂಟು ೬-೭ ದಿನಗಳ ಹಿಂದೆ ಒಂದು ರಾತ್ರಿ ಈ ಹುಲಿಯು [illegible] ಹೊಲದ ಬಳಿಯಲ್ಲಿ ಒಂದು ಆಕಳನ್ನು ಮುರಿಯಿತಂತೆ. ೪-೫ ದಿನಗಳ ಹಿಂದೆ ದೇರವಟ್ಟಿ ಬದಿಯಲ್ಲಿ ತನ್ನದೊಂದು ಆಕಳು ಈ ಹುಲಿಗೆ ಬಲಿ ಬಿದ್ದಿತಾಗಿ ತಿಳಿಯುತ್ತದೆ ಆದರೂ ಅಧಿಕಾರಿಗಳು ಅದರ ಬೇಟೆಯ ವ್ಯವಸ್ಥೆ ಮಾಡಿದ್ದು ತೋರುವದಿಲ್ಲ!

ಹಿಂದೆ ಮೋಟಾರ-ಸಾಮಾನು ತುಟ್ಟಿ ಮತ್ತು ದುರ್ಮಿಳವಿದ್ದಾಗ ಕುಮಟಾ-ಗೋಕರ್ಣ ಮೋಟಾರ ತಿಕೀಟಿನ ದರ ೧೨ ಆಣೆ ಇತ್ತು ಈಗ ೨ ತಿಂಗಳಿಂದ ರೂ. ೧ಕ್ಕೆ ಏರಿಸಲ್ಪಟ್ಟಿದೆ! ಅದನ್ನು ಇಳಿಸಿಕೊಳ್ಳುವವರಾರೂ ಇಲ್ಲವೇ?

'ಹೆಚ್ಚು ಹೆಚ್ಚು ಆಹಾರಧಾನ್ಯ ಬೆಳಸಿರಿ, ಬೇಕಾದರೆ ತಗಾವಿ ಕೊಡುತ್ತೇವೆ, ಯಾವ ಬೇಕಾದ ಸಹಾಯ ಮಾಡುತ್ತೇವೆ' ಎಂದು ಹಗಲು ರಾತ್ರಿ ಮತ್ತು ವೇಳೆ-ಅವೇಳೆಯಲ್ಲಿ ಬಾಯಿಯಿಂದ (ಇಲ್ಲವೆ ಲೇಖಗಳಿಂದ) ಪ್ರಚಾರ ಮಾಡುತ್ತಿರುವ ಅಧಿಕಾರಿಗಳು ಆಹಾರ ಧಾನ್ಯ ಬೆಳೆಸುವವರಿಗೆ ಪ್ರತ್ಯಕ್ಷ ಎಷ್ಟು ಸಹಾಯ ಮತ್ತು ಪ್ರೋತ್ಸಾಹ ಕೊಡುತ್ತಾರೆಂಬುದನ್ನು ತಿಳಿಯಲಿಚ್ಛಿಸುವವರು ಕುಮಟೆಯ ರಾ॥ ವೈಕುಂಠ ಸಾಂತಯ್ಯ ನಾಯಕರ ಕಥೆ ಕೇಳಿಕೊಳ್ಳಬಹುದು ಕುಮಟೆ ಹೊಳೆಯಂಚಿಗೆ ಇವರ ಗಜನಿ ಭೂಮಿಯುಂಟು. ಅದನ್ನು ರೂಪಿತ ಮಾಡಿ ಸಾಗುವಳಿ ಮಾಡಲಿಕ್ಕೆ ಹಿಂದೆ ಸರಕಾರದವರೇ ಅವರಿಗೆ ಸಹಾಯ ಮಾಡಿದ್ದರು ಕಳೆದ ಮಳೆಗಾಲದಲ್ಲಿ ಮಳೆ ಕಡಿಮೆಯಾದ್ದರಿಂದ ಅವರ ಬೆಳೆಯೆಲ್ಲ ಸುಟ್ಟು ಹೋಯಿತು ಈ ವರ್ಷ ಅದನ್ನು ಎತ್ತಬೇಕಾದರೆ ಹೊರಗಿಂದ ಬೀಜ ತರಬೇಕು. ೮೦ ಸಾಯಕೊಳ್ಳಿ ಆ ಬೀಜ ಬೇರೆ ಎಲ್ಲೂ ಸಿಗಲಿಕ್ಕಿಲ್ಲ ಅದರಿಂದ ಸರಕಾರಿ ಉಗ್ರಾಣದಿಂದ ಭತ್ತ ಕೊಡಿಸಬೇಕಾಗಿ ಅವರು ಈಗೆರಡು ತಿಂಗಳಿಂದ ಮಾಮಲೇದಾರರಿಗೂ, ಜಿಲ್ಹಾಧಿಪರಿಗೂ, ಪ್ರಾಂತ ಸಾಹೇಬರಿಗೂ, ಕಮಿಶನರರಿಗೂ ಅರ್ಜಿ ಮಾಡುತ್ತಿದ್ದಾರೆ ಆ ಬೀಜವನ್ನು ಧರ್ಮಕ್ಕೆ ಅವರು ಬೇಡುವದಿಲ್ಲ ಸರಕಾರ ದರದಂತೆ ಹಣ ತೆತ್ತು ಕೊಳ್ಳಲಿಕ್ಕೆ ಸಿದ್ಧರಿದ್ದಾರೆ ಆದರೂ ಒಬ್ಬ ಅಧಿಕಾರಿಯೂ ಕೂಡ ಅವರಿಗೆ ಈ ವರೆಗೆ ಆ ಭತ್ತ ಕೊಡಿಸಿಲ್ಲ! ಇಂತಹ ದಿನ ಇಲ್ಲವೆ ಇಂತಿಷ್ಟು ದಿನಗಳಲ್ಲಿ ಕೊಡಿಸುತ್ತೇವೆ ಎಂದು ನಿಶ್ಚಿತ ಆಶ್ವಾಸನವನ್ನೂ ಕೊಡುವದಿಲ್ಲ! ಕಚೇರಿಯ ಬಾಗಿಲು ತಟ್ಟಿ ತಟ್ಟಿ ರಾ॥ ನಾಯಕರು ಬೇಸತ್ತುಹೋಗಿದ್ದಾರೆ.

ರಾಷ್ಟ್ರೀಯ ವಾರದಲ್ಲಿ ಇಲ್ಲಿ ದಿನಾಲೂ ಪ್ರಭಾತ-ಫೇರಿ, ಧ್ವಜವಂದನೆಗಳಾಗುತ್ತಿದ್ದವು. ಕೊನೆಯ ದಿನ ಅಂದರೆ ಮೊನ್ನೆ ಸಂಜೆ ಮೆರವಣಿಗೆಯೂ, ಧ್ವಜಸ್ತಂಭದ ಬಳಿಯಲ್ಲಿ ಸಭೆಯೂ ಆಗಿ ವಾರದ ಮುಕ್ತಾಯವಾಯಿತು ಹೆಗಡೆಯಲ್ಲೂ ರಾಷ್ಟ್ರೀಯ ವಾರದ ಆಚರಣೆಯಾಯಿತಂತೆ ಆದರೆ ರಾಷ್ಟ್ರ ಸೇವಾದಳದ ಪ್ರಮುಖರೆಂದು ಮೆರೆಯುತ್ತಿದ್ದ ಕೆಲವರು ತರುಣ ವಿದ್ಯಾರ್ಥಿಗಳನ್ನು ಆಟಕ್ಕೋ ವಿಹಾರಕ್ಕೋ ಕರಕೊಂಡು ಹೋಗಿ ಅವರಿಗೆ ರಾಷ್ಟ್ರೀಯ ವಾರದ ಕಾರ್ಯಕ್ರಮದಲ್ಲಿ ಸೇರಲು ತೊಂದರೆಯುಂಟುಮಾಡುತ್ತಿದ್ದರೆಂದು ಒರ್ವರು ದೂರುತ್ತಾರೆ.

ಹೊನ್ನಾವರ— (ತಾ ೧೩—೪—೧೯೪೬). ಕಡತೋಕಾ ಸೀಧಾ ಅಂಗಡಿಯಲ್ಲಿ ಕಳ್ಳಾಟಿಕೆ ಇಲ್ಲೆಂದೂ ಸೀಧಾ ಜೀನಸುಗಳ ಬಟವಡೆ ಸುವ್ಯವಸ್ಥಿತವಾಗಿ ನಡೆದಿದೆಯೆಂದೂ ರಾ॥ ನಾರಾಯಣ ಹೊಸಬಯ್ಯ ನಾಯ್ಕ ವಗೈರೆ ೧೪ ಮಂದಿ ಪತ್ರ ಬರೆದು ತಿಳಿಸುತ್ತಾರೆ ಎಲ್ಲ ಸೀಧಾ-ಚೀಟಿದಾರರಿಗೆ ಎಣ್ಣೆ ಬಟವಡೆ ಮಾಡಬರುವಷ್ಟು ಎಣ್ಣೆ ಅಂಗಡಿಗೆ ಸಿಗುವದಿಲ್ಲೆಂದೂ, ಇತ್ತೀಚೆಗೆ ಪ್ರತಿ ತಿಂಗಳಿಗೆ ೪-೫ ಡಬ್ಬೆ ಎಣ್ಣೆ ಕಡಿಮೆ ಬರುತ್ತಿದೆಯೆಂದೂ ಅದರಿಂದ ಮೊದಲು ಬಂದವರಿಗೆ ಮಾತ್ರ ಎಣ್ಣೆ ಸಿಗುತ್ತಿದೆಯೆಂದೂ ಅವರು ಬರೆಯುತ್ತಾರೆ [ಅಂತು ಅನೇಕರಿಗೆ ಎಣ್ಣೆ ಸಿಗುವದಿಲ್ಲೆಂಬ ತಕ್ರಾರು ಮೇಲಿನವರ ಮಾತಿನ ಮೇಲಿಂದಲೂ ಸಿದ್ಧವಾಗುತ್ತದೆ ನಿರಕ್ಷರಕುಕ್ಷಿಗಳಾದ ಗೌಡ ಮೊದಲಾದವರಿಗೆ ಎಣ್ಣೆ ಸಿಗುವದಿಲ್ಲೆಂಬ ದೂರವನ್ನು ಈ ಪತ್ರ ನಿರಾಕರಿಸುವದಿಲ್ಲ. ಮೊದಲು ಬಂದವರಿಗೆ ಎಣ್ಣೆ ಸಿಗುತ್ತದೆಯಂತೆ! ಹಿಂದಿನಿಂದ ಬಂದವರಿಗೆ ಅದು ಸಿಗುವದಿಲ್ಲವಂತೆ! ಎಣ್ಣೆ ಬಂದ ಕೂಡಲೇ ಅಂಗಡಿಕಾರರು ಗೌಡರಿಗೆ ಸುದ್ದಿ ಕೊಟ್ಟು ಒಮ್ಮೆಯಾದರೂ ಅವರಿಗೇಕೆ ಬಟವಡೆ ಮಾಡುವದಿಲ್ಲ?-ಸಂಪಾದಕ]

ಕಡತೋಕಾ ಸೀಮೆಯಲ್ಲೂ ಹುಲಿ ಹಾವಳಿಗಾರಂಭವಾಗಿದೆ. ಕಳೆದ ತಾ ೮ಕ್ಕೆ ಸುಂಕೋಳೀ ಮಜರೆಯಲ್ಲಿ ಹುಲಿಯು ೧ ಎತ್ತನ್ನು ಮುರಿದಿದೆ. ೮-೧೦ ದಿನಗಳಿಗೊಂದು ದನವನ್ನಾದರೂ ಹುಲಿ ಮುರಿಯುತ್ತಿದೆ ಹುಲಿಯ ಹೆಜ್ಜೆ ನೋಡಿದವರು ಅದು ಬಹಳ ದೊಡ್ಡದಿರಬೇಕೆಂದು ಹೇಳುತ್ತಾರೆ.

ಇದೇ ಬರುವ ಶನಿಗೆ ಹೊಸಾಡದಲ್ಲಿ ರಥೋತ್ಸವವುಂಟು ಈ ಉತ್ಸವದ ಕಾಲಕ್ಕೆ ಗಡಗಡೆ ಆಟ ಹಚ್ಚಬೇಕೆಂದು ಕೆಲವರು ಆಲೋಚಿಸಿ ಅದಕ್ಕೆ ಸ್ಥಳ ಹುಡುಕುತ್ತಿದ್ದಾರೆ. ಅಧಿಕಾರಿಗಳು ಎಚ್ಚರಿಕೆಯಿಂದ ಇರಬೇಕಾಗಿ ಅರಿಕೆಯಿದೆ

ಭಟಕಳ— (ತಾ. ೧೨-೪-೪೬) ಶ್ರೀ ಮಾರುತಿ ದೇವರ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು

ಇಲ್ಲಿಯ ಉಡುಪಿ [illegible] ಕೆಲಸಕ್ಕಿದ್ದ ಹೆಣ್ಣುಮಗಳು ಯಾಕೋ ಏನೋ ತನ್ನ ಮಗನಿಗೆ ಉರಿ ಹಾಕಲು ಸಿದ್ಧಳಾಗಿದ್ದಳಂತೆ ನೋಡಿದ ಜನರು ಅವಳನ್ನು ತಡೆದರು ಆಗ ಆ ಹೆಣ್ಣುಮಗಳು ತನ್ನ ನಾಲಿಗೆಯನ್ನೇ ಕಚ್ಚಿಕೊಂಡಳಂತೆ! ಈಗ ಅವಳಿಗೆ ಕಾರವಾರ ಆಸ್ಪತ್ರೆಗೆ ಕಳಿಸಿದ್ದಾರೆ

೬-೭ ದಿನಗಳ ಹಿಂದೆ ನಡುರಾತ್ರಿಯ ಸಮಯ ಕೆಲವು ಪುಂಡರು ಬೆಳ್ಳಿಯ ಮಾಸ್ತಪ್ಪನ ಮನೆಯಲ್ಲಿ ಹೊಕ್ಕು, ಕೆಲವು ಅಕ್ಕಿಯನ್ನೂ ಹಣವನ್ನೂ ಕಳವು ಮಾಡಿಕೊಂಡು ಹೋಗಿದ್ದಾರಂತೆ ಮಾಸ್ತಪ್ಪನು ಅಂದು ಮನೆಯಲ್ಲಿದ್ದಿಲ್ಲ ಅವನ ಹೆಂಡತಿ ಮಾತ್ರ ಇದ್ದಳು

ಅಬಕಾರಿ ಅಧಿಕಾರಿಗಳು ೪-೫ ದಿನಗಳ ಹಿಂದೆ ಗಂಕೇರಿಯಲ್ಲಿ ಒಂದು ಸರಾಯಿಯ ಭಟ್ಟಿ ಹಿಡಿದ ಸುದ್ದಿಯುಂಟು. ಅಧಿಕಾರಿಗಳೇ ಈ ಭಟ್ಟಿ ಹಚ್ಚಿಟ್ಟು ಮನೆಯಲ್ಲಿ ಮಲಗಿದ್ದ ತಮ್ಮಯ್ಯನೆಂಬವನನ್ನೂ ಗಾಣಕ್ಕೆ ಕಬ್ಬು ಕೊಡುತ್ತಿದ್ದ ಇನ್ನಿಬ್ಬರನ್ನೂ ಕರೆದು ತಂದು ಆ ಭಟ್ಟಿ ಅವರೇ ಹಚ್ಚಿದ್ದೆಂದು ಸುಳ್ಳು ಪ್ರಕರಣ ಎಬ್ಬಿಸಿರುತ್ತಾರಾಗಿ ಆರೋಪಿತರ ಗೆಳೆಯರು ಹೇಳುತ್ತಾರೆ

ಸಿದ್ದಾಪುರ— (ತಾ ೧೧ ೪-೪೬) ಹೇರೂರ ಗ್ರಾಮದಲ್ಲೂ ಅದರ ನೆರೆಹೊರೆಯ ಹಳ್ಳಿಗಳಲ್ಲೂ ಮೈಲಿ ಬೇನೆಯುಂಟು. ಅದ್ದರಿಂದ ಹೇರೂರದಲ್ಲಿ ಯಕ್ಷಗಾನ ಆಟಗಳಿಗೆ ಅಪ್ಪಣೆ ಕೊಡಬಾರದಾಗಿ ಜನರ ಬೇಡಿಕೆಯಿದೆ. ಈ ಆಟಗಳನ್ನು ಆಡಗೊಟ್ಟರೆ ಬೇನೆ ಇನ್ನಷ್ಟು ಹಬ್ಬುವದೆಂದು ಅವರ ಅಂಬೋಣ ಆದರೂ ಮಾಮಲೇದಾರರು ಆಟಗಳಿಗೆ ಪರವಾನಗಿ ಕೊಟ್ಟಿದ್ದಾರಂತೆ! ಜನರು ಈಗ ಜಿಲ್ಹಾಧಿಪರ ಕಡೆ ಅಪೀಲು ಮಾಡಲು ತಯಾರಾಗಿದ್ದಾರೆ

ಶ್ರೀದುರ್ಗಾ ರಾಯ್ಸ ಮಿಲ್, ಹಳಿಯಾಳ

ನಮ್ಮಲ್ಲಿ ಭತ್ತದ ಪೋಹೆ ವ ಅವಲಕ್ಕಿ ತವುಡು ರೋಟ ವ ಚಕ್ಕರಿಯಾಗಿ ಯೋಗ್ಯ ದರದಿಂದ ಉತ್ತಮ ಮಾಲು ಸಿಗುತ್ತದೆ ಬೇಕಾದಲ್ಲಿ ಶೀಘ್ರ ಬರೆಯಿರಿ

ಮಂಗೇಶ ನಾರಾಯಣ ಶೈಣೆ, ಹಳಿಯಾಳ.
ಮಾಲಕ

ಜಿಲ್ಲಾಧಿಪರ ಪ್ರಕಟಣೆಗಳಲ್ಲಿ ತಿದ್ದುಪಡಿಗಳು

೧ ತಾ ೧೧-೩-೪೬ರ "ವೃತ್ತ"ದಲ್ಲಿ ಪ್ರಕಟವಾದ ನಂ ೬೫ನೇ ಆಜ್ಞೆಯ ೨ನೆಯ ಸಾಲಿನಲ್ಲಿ ತಾ. ೧೫-೯-೧೯೪೬ರ ಬದಲು ತಾ **೧೫-೯-೧೯೪೪** ಎಂತಲೂ, ನಂ. ೭೪ನೇ ಆಜ್ಞೆಯ ೪ನೆಯ ಸಾಲಿನಲ್ಲಿ ೧೯೦೫ ಎಂಬದರ ಬದಲು **೪೯೦೫** ಎಂತಲೂ ತಿದ್ದಿಕೊಂಡು ಓದಬೇಕಾಗಿ ಇರುತ್ತದೆ.

ಆಜ್ಞೆ.

ನಂ. ೭೪

ಕಾನಡಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ. ೫-೪-೧೯೪೬.

ಈ ಜಿಲ್ಲೆಯೊಳಗಿನ ಸೀಧಾ ಕ್ಷೇತ್ರಗಳಲ್ಲಿ ಸೀಧಾ-ಜಿನಸುಗಳನ್ನು ಸಂಗ್ರಹಿಸಿಕೊಳ್ಳುವದರ ಮೇಲೆ ಹಾಕಲ್ಪಟ್ಟ ಪ್ರತಿಬಂಧದ ಸಂಬಂಧದಲ್ಲಿ ಈ ಕಚೇರಿಯಿಂದ ಹೊರಟ ತಾ. ೨೭-೮-೧೯೪೫ರ ೭೪ನೇ ನಂಬರದ ಹುಕುಮಿಗೆ ಜೋಡಿಸಿದ ೨ನೇ ಅಪವಾದದಲ್ಲಿ ನಮೂದಿಸಿದ ಪರವಾನೆ-ಚೀಟಿಗಳ ಕಾಲಾವಧಿಯನ್ನು ಈ ವರ್ಷದ ಸರದ (ಖರೀಫ) ಬೆಳೆಯ ಸಂಬಂಧದಲ್ಲಿ ತಾ ೩೧-೧-೧೯೪೬ರ ವರೆಗೂ ಕಾರ-ಬೆಳೆಯ ಸಂಬಂಧದಲ್ಲಿ ತಾ. ೩೧-೫-೧೯೪೬ರ ವರೆಗೂ ಈ ಮೂಲಕ ಬೆಳೆಸಲಾಗಿದೆ.

ಭಾರತ ರಕ್ಷಣ ಕಾನೂನಿನ ೧೧೯ನೆಯ ನಿಯಮದ (೧) ನೆಯ ಉಪನಿಯಮಕ್ಕನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಗೊಳಿಸಬೇಕು.-

(ಅ) ಒಂದು ಪ್ರತಿ ಮುಂಬಯಿ ಸರಕಾರದ ಗಾಝೆಟನ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿಕೊಳ್ಳಬೇಕು.

(ಬ) ಒಂದು ಪ್ರತಿಯನ್ನು (ಕನ್ನಡ) ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟಿಸಬೇಕು.. (೧) "ವಿಚಾರಿ" ಕಾರವಾರ, (೨) "ಕಾನಡಾ ವೃತ್ತ" ಕುಮಟಾ.

(ಕ) ಆಜ್ಞೆಯ ಪ್ರತಿಗಳನ್ನು ಈ ಜಿಲ್ಹೆಯೊಳಗಿನ ಎಲ್ಲ ಸೀಧಾ-ಕ್ಷೇತ್ರಗಳಲ್ಲಿರುವ ಸೀಧಾ ಹಾಗೂ ಮುಲ್ಕಿ ಕಚೇರಿಗಳೊಳಗೆ ಈ ಬಗ್ಗೆ ನೇಮಕ ಮಾಡಿಟ್ಟ ನೋಟೀಸ ಬೋರ್ಡುಗಳಿಗೆ ಅಂಟಿಸಬೇಕು

(ಡ) ಆಜ್ಞೆಯ ಸಾರಾಂಶವನ್ನು ಸೀಧಾ-ಕ್ಷೇತ್ರಗಳಲ್ಲಿರುವ ಜನರಿಗೆ ಟಮಕಿ ಹೊಡೆದು ತಿಳಿಸತಕ್ಕದ್ದು; ಮತ್ತು ಆಜ್ಞೆಯ ಪ್ರತಿಗಳು ಸೀಧಾ-ಕ್ಷೇತ್ರಗಳಲ್ಲಿರುವ ಸೀಧಾ ಹಾಗೂ ಮುಲ್ಕಿ ಕಚೇರಿಗಳೊಳಗಿನ ನೋಟೀಸ-ಬೋರ್ಡುಗಳಿಗೆ ಅಂಟಿಸಿಟ್ಟ ಸಂಗತಿಯನ್ನು ಡಂಗುರ ಸಾರಿ ಜಾಹೀರ ಮಾಡತಕ್ಕದ್ದು.

F. N. RANA.
ಜಿಲ್ಲಾ ಮೆಜಿಸ್ಟ್ರೇಟ ಮತ್ತು ಧಾರಣ-ನಿಯಂತ್ರಕ, ಕಾನಡಾ

ಹುಕುಮು.

ನಂ ೭೪—V— ತಾ ೧೧-೧೦-೧೯೪೫ಕ್ಕೆ ಈ ಕಚೇರಿಯಿಂದ ಹೊರಟ ೭೪-V ನಂಬರದ ಹುಕುಮನ್ನು ಅಂಶತಃ ತಿದ್ದುಪಡಿ ಮಾಡಿ ಮತ್ತು ಭಾರತ-ರಕ್ಷಣ ಕಾನೂನಿನ ೮೧ನೆಯ ನಿಯಮದ ೨ನೆಯ ಉಪನಿಯಮ ಹಾಗೂ ಗೃಹ ಖಾತೆ (ರಾಜಕೀಯ-ಯುದ್ಧ)ಯವರು ತಾ ೧೫-೯-೧೯೪೪ಕ್ಕೆ ಹೊರಡಿಸಿದ ಸರಕಾರಿ ಪ್ರಕಟನೆ ಇವುಗಳನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ ಕಾನಡಾ ಜಿಲ್ಲಾ ಮೆಜಿಸ್ಟ್ರೇಟರು ಹುಕುಮು ಮಾಡುವದೇನಂದರೆ —

ತಾ. ೧೧-೧೦-೧೯೪೫ನೇಗೆ ಹೊರಡಿಸಿದ ೭೪-V ನಂಬರದ ಹುಕುಮಿನ ಮೂಲದ ಕೆಳಗೆ ಕಾಣುವ 'ವಿ ಸೂ .— ಒಂದು ಯುನಿಟ್ = (ಸಿಪ್ಪೆ ಹೊಡೆದು ಅಳೆದ) ೪½ ಸೇರು ಅಲ್ಲವೆ (ಸಿಪ್ಪೆ ಸಹಿತ ಅಳೆದ) ೪ ಸೇರು" ಎಂಬ ಶಬ್ದ-ಸಮೂಹದ ಬದಲಿಗೆ "ವಿ ಸೂ :— ಒಂದು ಯುನಿಟ್= (ಸಿಪ್ಪೆ ಹೊಡೆದು ಅಳೆದ) ೩½ ಸೇರು" ಎಂಬ ಶಬ್ದಸಮೂಹವನ್ನು ಸೇರಿಸತಕ್ಕದ್ದು.

ಭಾರತ-ರಕ್ಷಣ ಕಾನೂನಿನ ೧೧೯ನೆಯ ನಿಯಮದ ೧ನೆಯ ಉಪನಿಯಮಕ್ಕನುಸಾರವಾಗಿ ಈ ಹುಕುಮನ್ನು ಮುಂಬಯಿ ಸರಕಾರದ ಗಾಝೆಟನಲ್ಲಿ ಪ್ರಕಟಿಸಬೇಕಾಗಿದೆ, (೧) ಕಾರವಾರದ "ವಿಚಾರಿ" ಮತ್ತು (೨) ಕುಮಟೆಯ "ಕಾನಡಾವೃತ್ತ" ಪತ್ರಿಕೆಗಳಲ್ಲಿ ಇದರ ಕನ್ನಡ ಅನುವಾದವನ್ನು ಪ್ರಕಟಿಸಬೇಕು

ಕನ್ನಡ ಅನುವಾದದ ಪ್ರತಿಗಳನ್ನು ಕಾರವಾರ, ಕುಮಟಾ ಹೊನ್ನಾವರ, ಭಟಕಳ, ಗೋಕರ್ಣ ಮತ್ತು ಶಿರ್ಸಿ ಈ ಸೀಧಾ-ಕ್ಷೇತ್ರಗಳಲ್ಲಿರುವ ಸ್ಥಾನಿಕ ಸರಕಾರಿ ಕಚೇರಿಗಳೊಳಗಿನ ನೋಟೀಸ ಬೋರ್ಡುಗಳಿಗೂ ಅಂಟಿಸಬೇಕು, ಮತ್ತು ಹುಕುಮಿನ ಪ್ರತಿಗಳನ್ನು ಹಾಗೆ ಅಂಟಿಸಿಟ್ಟ ಸಂಗತಿಯನ್ನು ಡಂಗುರ ಸಾರಿ ಜಾಹೀರಗೊಳಿಸಬೇಕು.

ಈ ಹುಕುಮು ತಾ ೮-೪-೧೯೪೬ರಿಂದ ಜಾರಿಯಲ್ಲಿ ಬರುವದು

ಕಾರವಾರ,
ತಾ ೭-೪-೧೯೪೬.

F. N. RANA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಇದ್ದಲಿಯ ನಿರ್ಯಾತಕ್ಕೆ ಪ್ರತಿಬಂಧ.

ಮುಂಬಯಿ ನಗರ, ಮುಂಬಯಿ ಉಪನಗರ ಜಿಲ್ಲೆ, ಠಾಣಾ ಜಿಲ್ಲೆ, ಸುರತ ಜಿಲ್ಲೆ, ಪಂಚಮಹಾಲ ಜಿಲ್ಲೆ, ರತ್ನಾಗಿರಿ ಜಿಲ್ಲೆ ಮತ್ತು ಕಾನಡಾ ಜಿಲ್ಲೆ ಇವುಗಳೊಳಗಿನ ಯಾವದೇ ಸ್ಥಳದಿಂದ ಇವುಗಳ ಹೊರಗಿರುವ ಮುಂಬಯಿ ಪ್ರಾಂತದ ಯಾವದೇ ಸ್ಥಳಕ್ಕೆ, ಮುಂಬಯಿ ಮತ್ತು ಮುಂಬಯಿ ಉಪ. ನಗರ ಜಿಲ್ಲೆಯ ಮಟ್ಟಿಗೆ ಮುಂಬಯಿಯ ನಾಗರಿಕ ಪೂರೈಕೆ ಡಾಯರೆಕ್ಟರರು ಇಲ್ಲವೆ ಮುಂಬಯಿಯ ಜಾದಾ ನಾಗರಿಕ ಪೂರೈಕೆ ಡಾಯರೆಕ್ಟರ (ಇದ್ದಲಿ ಮತ್ತು ಉರುವಲ) ಇವರು ಹಾಗೂ ಇನ್ನಿತರ ಜಿಲ್ಲೆಗಳ ಮಟ್ಟಿಗೆ ಸಂಬಂಧಪಟ್ಟ ಜಿಲ್ಲಾ-ಮೆಜಿಸ್ಟ್ರೇಟರು ಕೊಟ್ಟ ಪರವಾನೆ-ಚೀಟಿಗಳಲ್ಲದೆ ಮತ್ತು ಆ ಪರವಾನೆ-ಚೀಟಿಗಳೊಳಗಿನ ಶರ್ತುಗಳಿಗೆ ವ್ಯತಿರಿಕ್ತವಾಗಿ, ಯಾರೂ ಇದ್ದಲಿಯನ್ನು ಸಮುದ್ರ ಮಾರ್ಗವಾಗಿ ಒಯ್ಯಕೂಡದೆಂದು ಮುಂಬಯಿ ಸರಕಾರದವರು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದ್ದಾರೆ ಈ ಆಜ್ಞೆಯು ಮುಂಬಯಿ ಸರಕಾರದ ತಾ. ೨೦-೩-೧೯೪೬ರ ೧ನೇ ಭಾಗದ ವಿಶೇಷ ಗಾಝೆಟನಲ್ಲಿ ಪ್ರಕಟವಾಗಿದೆ

ಹಳಿಯಾಳ— (ತಾ. ೪-೪-೪೬.) ಮನೆಯೊಂದಕ್ಕೆ ತಿಂಗಳಿಗೆ ೧ ೧|–೨ ಪ್ಯಾಂಟ ಚಿಮಣಿ ಎಣ್ಣೆಯು ಸೀಧಾ ನೇಮಿಸಿಕೊಟ್ಟಿದ್ದಾರೆ. ಅದು ಸಹ ಸರಿಯಾಗಿ ಸಿಗದೆ ಕಷ್ಟ ಈಗ ಅದರಲ್ಲೂ ಕಡಿತ ಮಾಡುವವರಿದ್ದಾರಂತೆ! ಸರಕಾರ ಅಧಿಕಾರಿಗಳಿಗೆ ಮಾತ್ರ ತಿಂಗಳಿಗೆ ೪ ರಿಂದ ೧೫ ಪ್ಯಾಂಟ ವರೆಗೆ ಎಣ್ಣೆ ಸಿಗುತ್ತದೆ! ಈ ತಾಲೂಕಿಗೆ ಕೊಂಡಿರುವ ಧಾರವಾಡ ಜಿಲ್ಹೆಯ ಭಾಗದಲ್ಲಿ ಜನರಿಗೆ ಸಾಕಷ್ಟು ಎಣ್ಣೆ ಸಿಗುತ್ತಿರುವಾಗ ಈ ತಾಲೂಕಿನವರು ಮಾತ್ರ ಎಣ್ಣೆ, ಎಣ್ಣೆ ಎಂದು ಬಾಯಿ ಬಿಡುವ ಪ್ರಸಂಗವೇಕೆ ಬಂದಿತೋ ತಿಳಿಯದು.

ನಿನ್ನೆ ಯುಗಾದಿ ಹಬ್ಬದ ದಿನ ಸ್ವಲ್ಪ ಮಳೆಯಾಗಿ ಭೂಮಿ ತಂಪಾಗಿದೆ.

ಕೆಲವು ದಿನಗಳಾಚೆ ಬಸವರಾಜ ಗಿರಣಿಯಲ್ಲಿ ಕೆಲವೊಂದು ಅಕ್ಕಿಯ ಕಳವಾಗಿತ್ತು. ಈ ಬಗ್ಗೆ ಪ್ರಕರಣವಾಗಿ ಗಿರಣಿಯನ್ನೇ ಮುಚ್ಚಿಸಿದ್ದಾರೆ. ಅದನ್ನು ತಿರುಗಿ ಚಾಲೂ ಮಾಡಲಿಕ್ಕೆ ಅಪ್ಪಣೆ ಸಿಗುವದಿಲ್ಲವಂತೆ ಗಿರಣಿಯ ಮಾಲಕರು ಈಗ ಅಧಿಕಾರಿಗಳಿಗೆ ನೋಟೀಸು ಕೊಟ್ಟಿದ್ದಾರೆಂದು ಸುದ್ದಿ.

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿದ ನಾನು ಬೈಂದೂರ ಶ್ರೀನಿವಾಸರಾವ, ನಿವೃತ್ತ ಫೊರೆಸ್ಟ ಕ್ಲಾರ್ಕ, ಹಾಲಿ ಮುಕ್ಕಾಮ ಸಾಗರ (ಜಿಲ್ಲಾ ಶಿವಮೊಗ್ಗಾ) ಇವನು ಸಾರ್ವಜನಿಕರಿಗೆ ಇದರ ಮೂಲಕ ತಿಳಿಸುವದೇನಂದರೆ.—

ಸ ನಂ.	ಕ್ಷೇತ್ರ	ಆಕಾರ
೧	೪-೬-೦	ರೂ. ೨೦-೫-೦
೨	೩-೭-೦	,, ೧೫-೦-೦
೪	೧-೧೪-೦	,, ೭-೧೨-೦

ಈ ಎಲ್ಲ ಆಸ್ತಿಯಲ್ಲಿ ೧/೩ ಅಂದರೆ ಕುಚಗಿ-ಬೆಟ್ಟಗೆ ಕೂಡಿ ಆಸ್ತಿ ಮೂಡೆ ೬ ಪಾಸೆ ೨೫, ತೆಂಗಿನ ಕಾಯಿ ೧೦೪ ಮತ್ತು ನಗದಿ ರೂ. ೧-೮-೧೧ ಉತ್ಪನ್ನ ಸಿಗುವ ಹಳ್ಳಿ

ಮಾರ್ಜಿನದಲ್ಲಿ ನಮೂದಿಸಿದ ಉತ್ತರ ಕಾನಡಾ ಜಿಲ್ಲಾ ಭಟ್ಕಳ ಪೇಟಾ ಬೈಲೂರ ಗ್ರಾಮದ ಆಸ್ತಿಯ ೧/೩ ಅಂಶದ ಭೂಮಿಯನ್ನು ನನ್ನ ಅಕ್ಕ ಅಮ್ಮಣಿ ಯಾನೆ ಲಕ್ಷ್ಮೀಬಾಯಿ ಕೋಂ ನಾರಾಯಣ ದೇವಪ್ಪಾ ಕುಳಕರ್ಣ ಇವಳಿಗೆ ಅವಳ ಜೀವಮಾನದವರೆಗೆ ಉತ್ಪನ್ನ ಮಾತ್ರ ಉಪಭೋಗಿಸಲಿಕ್ಕೆ, ನನ್ನ ತಾಯಿಯು ಕೊಟ್ಟಿದ್ದಳು ನಿಪುತ್ರಿಕಳಾದ ಅವಳ ಪರುಮಾಯ ನಂತರ ಆಸ್ತಿಯ ಹಕ್ಕು ನನ್ನ ೪ ಜನ ಅಣ್ಣಂದಿರ ಮಕ್ಕಳಿಗೆ ಸಿಗತಕ್ಕದ್ದಿರುತ್ತದೆ. ಹೀಗಿದ್ದರೂ ಸದರಿ ನನ್ನ ಅಕ್ಕನು ಬೇರೆ ಜನರ ದುರ್ಬೋಧನೆಗೆ ಬಲಿಯಾಗಿ ಸದರಿ ಆಸ್ತಿ ಎರಡನೇಯವರಿಗೆ ವಿಕ್ರಿ, ಯಾ ಭೋಗ್ಯಾದಿ ಆದಪ್ರ ಮಾಡಿಕೊಡಲು ತಯಾರಾಗಿದ್ದಾಳಾಗಿ ತಿಳಿಯುತ್ತದೆ ಹಾಗೆ ಮಾಡಲಿಕ್ಕೆ ಅವಳಿಗೆ ಹಕ್ಕಿಲ್ಲ; ಮಾಡಿದರೂ ಸಿಂಧು ಆಗಲಾರದು; ಮತ್ತು ಅದರಿಂದ ನನ್ನ ಮಕ್ಕಳ ಹಕ್ಕಿಗೆ ಬಾಧಿಸಲಾರದು. ಪರಾಧೀನ ಮಾಡಿಕೊಂಡವರು ಮಾತ್ರ ಹಾನಿಗೊಳಗಾಗುವರು ಈ ಮಾತನ್ನು ಎಲ್ಲರೂ ತಿಳಿದಿರಲಿ

ಹಾಲಿ ಮುಕ್ಕಾಮ ಬೈಲೂರ,
೧೧—೪—೧೯೪೬

B. Shrinivasrao,
Retired Forest Clerk,
Chamarajapet, SAGAR. (Dist Shimoga)

ಆಗೇರ ಉಪಾಧ್ಯಾಯರ ಶ್ರೀಕೃಷ್ಣ ಪಂಚಾಂಗ.

ಹಿಂದೆ ನಾವು ನಮ್ಮ ಪಂಚಾಂಗ ಅಂಕೋಲೆಯಲ್ಲಿ ಮುದ್ರಿಸಿಕೊಳ್ಳುತ್ತಿದ್ದೆವು. ಈ ವರ್ಷ ಆ ಮುದ್ರಣಾಲಯದವರ ಅನಾನುಕೂಲತೆಯ ಮೂಲಕ ಹುಬ್ಬಳ್ಳಿಯ ಬೇವಿನಕಟ್ಟಿ ಪ್ರೆಸ್ಸಿನಲ್ಲಿ ಮುದ್ರಿಸಿಕೊಳ್ಳಬೇಕಾಯಿತು. ಅಲ್ಲಿ ಅಚ್ಚಾದ ಮುದ್ರಿತಗಳನ್ನು ತಪಾಸಿಸಲು ಸಮಯ ಸಿಗದ್ದರಿಂದ ವ್ಯಯ ಸಂ||ದ ಪಂಚಾಂಗದಲ್ಲಿ ಕೆಳಗಿನ ತಪ್ಪುಗಳಾಗಿವೆ ಅವನ್ನು ಜನರು ತಿದ್ದಿಕೊಳ್ಳಬೇಕಾಗಿ ಅರಿಕೆ—

ಜ್ಯೇಷ್ಠ ಕೃ|| ೫ಮಿ ತಿಥಿಯ ಗಳಿಗೆಗಳು ೫೮ ಬದಲು ೫೬ ಆಗಬೇಕು.
ಜ್ಯೇಷ್ಠ [illegible] ಸ್ಫುಟದಲ್ಲಿ ಚಂದ್ರನ ಸ್ಫುಟಗತ ಅಂಶ ಬದಲು ೮೫೦ ಆಗಬೇಕು
ಆಷಾಢ ಶು|| ೧೨ ಗುರುವಾರದ ೯ ನಕ್ಷತ್ರ ಅನುರಾಧೆಯ ಬದಲು ಜ್ಯೇಷ್ಠಾ ಆಗಬೇಕು.
ಶ್ರಾವಣ ಶು|| ೪ ಗುರು ಉತ್ತರಾ ನಕ್ಷತ್ರ ೧|೦೩೮ ಬದಲು ೫೦|೩ ಆಗಬೇಕು
,, ಶು|| ೭ ರವಿ ತಿಥಿಯ ಗಳಿಗೆ ೪೮ ಬದಲು ೨೩ ಆಗಬೇಕು
,, ,, ,, ಸ್ವಾತಿ ನಕ್ಷತ್ರ ೦೮ ಬದಲು ೬೦ ಗಳಿಗೆ ಆಗಬೇಕು.
ಭಾದ್ರಪದ ಕೃ. ೫ ಶನಿ ಚಿತ್ರಾ ನಕ್ಷತ್ರ ೫೮ ಬದಲು ೧೫ ಗಳಿಗೆ ಆಗಬೇಕು.

ಇದಲ್ಲದೆ ಕೆಲವು ಪಂಚಾಂಗಗಳಲ್ಲಿ ಆಶ್ವಿನ ಕೃಷ್ಣ ಪಕ್ಷದ ಪಾಳಿಯ ಸ್ಥಳದಲ್ಲಿ ಆಶ್ವಿನ ಶುಕ್ಲ ಪಕ್ಷದ ತಿಥ್ಯಾದಿಗಳೇ ತಪ್ಪಿನಿಂದ ಮುದ್ರಿತವಾಗಿವೆ. ಆ ಸ್ಥಳದಲ್ಲಿ ಹಾಕುವದಕ್ಕಾಗಿ ಕೃಷ್ಣ ಪಕ್ಷದ ಪ್ರತ್ಯೇಕ ಪಾಳಿಯನ್ನು ತಯಾರಿಸಿ ನಾವು ನಮ್ಮ ಎಲ್ಲ ಏಜಂಟರಿಗೂ ಪೂರೈಸುತ್ತೇವೆ ಬೇಕಾದವರು ಅವರಿಂದ ಅವನ್ನು ಪಡೆಯಬಹುದು ಕೈಮೀರಿ ಹೋದ ಈ ದೋಷಗಳಿಗಾಗಿ ನಮ್ಮನ್ನು ಕ್ಷಮಿಸಿ ಜನರು ನಮ್ಮ ಪಂಚಾಂಗದ ಮೇಲೆ ಹಿಂದಿನಷ್ಟೇ ಪ್ರೇಮ ಮತ್ತು ಅಭಿಮಾನವಿಟ್ಟು ವರ್ತಿಸಬೇಕಾಗಿ ಬಿನ್ನಹವಿದೆ ತಾ. ೧೨-೪-೪೬. ಆಗೇರ ಪಂಚಾಂಗಕರ್ತರು.

THE BANK OF RURAL INDIA, LTD.,
[Incorporated in British India under the Indian Companies Act, 1913]
HEAD OFFICE.- "Satyabhama Bhavan", **KARWAR.**
Offices at :- KARWAR, KUMTA, SIRSI, HONAVAR & YELLAPUR
Authorised Capital - Rs. 10,00,000;
Subscribed Capital - Rs. 5,00,000.
Paid-up Capital - Rs. 2,60,000.
Rates of Interest on Deposits:
Current a/c. @ 1% p. a. *Savings Bank a/c @ 2½%*
Fixed Deposits for 3 months @ 3% per annum
,, ,, for 6 months @ 3½% ,,
,, ,, for 12 months or more @ 4% ,,
All Kinds of modern Banking business transacted.

Karwar,
15-3-1946

P. X. GRACIOUS,
MANAGING DIRECTOR.

ಕುಮಟಾ ಮ್ಯು||ಯ ೧೯೪೧-೪೨ರ ಲೆಕ್ಕ-ತಪಾಸಣೆ ವರದಿಯೊಳಗಿನ ಆಕ್ಷೇಪಗಳಿಗೆ ಮ್ಯುನಿಸಿಪಾಲಿಟಿಯು ಕೊಟ್ಟ ಉತ್ತರಗಳು.

(ಲೆಕ್ಕ-ತಪಾಸಣಾ ವರದಿಯೊಳಗಿನ ಮಹತ್ವದ ಅಂಶಗಳು ಕಳೆದ ವಾರದ "ವೃತ್ತ" ದಲ್ಲಿ ಪ್ರಕಟಿಸಲ್ಪಟ್ಟಿವೆ. ಅವುಗಳಿಗೆ ಮ್ಯು||ಯವರು ಕೊಟ್ಟ ಉತ್ತರಗಳನ್ನು ಈಹೊತ್ತು ಕೊಡಲಾಗಿದೆ.)

ವಿಭಾಗ ೧ – ಹಿಂದಿನ ಲೆಕ್ಕ ತಪಾಸಣೆ

೩. ತಾ ೧೬-೧-೧೯೪೪ನೇಗೆ ಕೂಡಿದ ಮ್ಯುನಿಸಿಪಲ್ ಮಹಾಸಭೆಯಲ್ಲಿ ತೀರ್ಮಾನವಾದಂತೆ ಈ ವಿಷಯವನ್ನು (ಸೂರ್ಗದ ಮೇಲೆ ಬಂದ ಇಮಾರತ-ಭಾಗಗಳ ತೆರಿಗೆಯನ್ನು ದಾವೆ ಮಾಡಿ ವಸೂಲ ಮಾಡಲಾಗುವದೋ ಇಲ್ಲೋ ಎಂಬುದನ್ನು) ಕುಮಟೆಯ ಸರಕಾರಿ ವಕೀಲರ ಸಂದಿಸಲಾಗಿದೆ. ಅವರ ಅಭಿಪ್ರಾಯ ಬಂದ ಮೇಲೆ ಆ ಬಗ್ಗೆ ಆಲೋಚನೆ ಮಾಡಿ, ಪರಿಣಾಮವೇನಾಯಿತೆಂಬುದನ್ನು ಹಿಂದಿನಿಂದ ತಿಳಿಸಲಾಗುವದು

೫. ಮೆ|| ಕಲೆಕ್ಟರ ಸಾಹೇಬ, ಕಾನಡಾ ಇವರ ಮುಖಾಂತರ ಮುಂದಿನ ಕ್ರಮ ಕೈಕೊಳ್ಳುವ ಬಗ್ಗೆ ದಕ್ಷಿಣ ಭಾಗದ ಮೆ|| ಕಮಿಶನರ ಸಾಹೇಬರವರಿಗೆ ಬರೆದು ಹಾಕಿತ್ತು. ಆಗ (ಒಂದು ಬಾಬಿನ ಹಣ ಇನ್ನೊಂದು ಬಾಬಿಗೆ ವಿನಿಯೋಗಿಸಿ ಮಾಡಿದ ಖರ್ಚಿನ) ಆ ಪ್ರಕರಣವನ್ನು ಇನ್ನೊಮ್ಮೆ ಆಲೋಚಿಸಿ, ಆ ಖರ್ಚಿಗೆ ಮಂಜೂರಿ ಕೊಡಬೇಕೆಂದು ಮೆ|| ಕಲೆಕ್ಟರ ಸಾಹೇಬರು ತಾ ೧೩ ೧ ೧೯೪೪ಕ್ಕೆ P 160 2 ನಂಬರಿನ ಪತ್ರ ಬರೆದು ತಿಳಿಸಿದ್ದರು. ಅದರಂತೆ ತಾ ೧೬-೩-೧೯೪೪ಕ್ಕೆ ಕೂಡಿದ ಮಹಾಸಭೆಯಲ್ಲಿ ಆ ಪ್ರಕರಣ ಚರ್ಚೆಗಾಗಿ ಇಡಲ್ಪಟ್ಟಿತ್ತು. ಆದರೆ ಸದಸ್ಯರು ಈ ಪ್ರಕರಣ ಮುಂದಿನ ಸಭೆಯಲ್ಲಿ ಚರ್ಚಿಸುವಾ ಎಂದು ಮುಂದಿಟ್ಟಿದ್ದಾರೆ. ಆ ಸಭೆಯಲ್ಲಿ ಏನು ನಿರ್ಣಯವಾಗುತ್ತದೆಂದು ಹಿಂದಿನಿಂದ ತಿಳಿಸಲಾದೀತು

೭. ೧೯೩೯-೪೦ರಲ್ಲಿ ಕೊಟ್ಟ ರೂ ೧೧೦ರೊಳಗಿಂದ (ವಿಕ್ಟೋರಿಯಾ ಜ್ಯುಬಿಲಿ ಲಾಯಬ್ರರಿಯ ಕಾರ್ಯದರ್ಶಿಗಳು) ಕೊಂಡುಕೊಂಡ ಪುಸ್ತಕಗಳ ಯಾದಿ ಇನ್ನೂ ಬಂದಿಲ್ಲವಾದ್ದರಿಂದ ೧೯೪೧-೪೨ ಹಾಗೂ ೧೯೪೨-೪೩ರಲ್ಲಿ ಈ ಲಾಯಬ್ರರಿಗಾಗಿ ಮಂಜೂರಾದ ವಾರ್ಷಿಕ ಧನಸಹಾಯದ ಹಣ ಅವಕ್ಕೆ ಕೊಡದೆ ಇಟ್ಟುಕೊಂಡಿದ್ದೇವೆ

ವಿಭಾಗ ೨– ಚಾಲತಿ ಲೆಕ್ಕದ ತಪಾಸಣೆ

೧೦ ವಿಶೇಷ ಆರೋಗ್ಯ ರಕ್ಷಣೆಯ ಖಾತೆಯ ಖರ್ಚು ಆ ಖಾತೆಯ ಉತ್ಪನ್ನದಿಂದಲೇ ಸಾಗುವ ಹಾಗೆ ಪಾಯಖಾನೆಗಳುಳ್ಳ ಎಲ್ಲ ಜನರು ಮ್ಯು||ಯ ಭಂಗಿಗಳಿಂದ ತಮ್ಮ ಪಾಯಖಾನೆಯ ಸ್ವಚ್ಛತೆಯ ಕೆಲಸ ಮಾಡಿಸಿಕೊಳ್ಳಲೇಬೇಕೆಂದು ಒತ್ತಾಯ ಮಾಡಲು ಬರುವಂತೆ ನೇಮಗಳಲ್ಲಿ ಅವಶ್ಯವುಳ್ಳ ದುರುಸ್ತಿ ಮಾಡಲು ತಾ ೨೪-೧೧-೧೯೪೨ಕ್ಕೆ ಕೂಡಿದ ಮ್ಯುನಿಸಿಪಲ್ ಮಹಾಸಭೆಯಲ್ಲಿ ಮೆನೆಜಿಂಗ ಕಮಿಟಿಯವರಿಗೆ ಅಪ್ಪಣೆಯಾಗಿದೆ. ಕಮಿಟಿಯ ವರದಿ ಬಂದ ಮೇಲೆ ಮುಂದಿನ ಕ್ರಮ ನಡಿಸಲಾದೀತು.

೧೧ ತಾವು ಇಸಕೊಂಡ ಪ್ರವಾಸ ಭತ್ತೆಯ ಪೂರ್ಣ ರಕಮನ್ನು ಅಧ್ಯಕ್ಷರು ಮ್ಯು||ಗೆ ತಿರುಗಿ ಕೊಟ್ಟಿದ್ದಾರೆ ಮತ್ತು ಆ ಮಾತನ್ನು ಲೆಕ್ಕ-ತಪಾಸಕರಿಗೆ ತಾ ೧೬-೧೧-೧೯೪೨ಕ್ಕೆ ಬರೆದ ೬೫೯ನೇ ನಂಬರದ ಪತ್ರದಲ್ಲಿ ತಿಳಿಸಿದ್ದುಂಟು. ಆದ್ದರಿಂದ ಈ ಆಕ್ಷೇಪವನ್ನು ಬಿಟ್ಟುಕೊಡಬೇಕಾಗಿ ಬಿನ್ನಹವಿದೆ

೧೫ ಆ ಸಂಬಂಧದಲ್ಲಿ (ರಾ|| ಎಮ್ ಬಿ ಪೈರ ವಿರುದ್ಧ ರಾ|| ಎಸ್ ಆರ್. ಭಟ್ಟರು ಮಾಡಿದ ಅರ್ಜಿಯ ಪ್ರಕರಣದಲ್ಲಿ) ಮ್ಯು||ಯವರು (ರೂ ೨೪೭ಂತ) ಪಟ್ಟಿಗೆ ಯೇನೂ ಖರ್ಚು ಮಾಡಿರುವದಿಲ್ಲ. ಆದ್ದರಿಂದ ಈ ಆಕ್ಷೇಪ ಬಿಟ್ಟುಬಿಡಬೇಕಾಗಿ ಆರಿಕೆಯಿದೆ

೧೬ ಈ ಸಂಬಂಧದಲ್ಲಿ (ವಾಹನ ತೆರಿಗೆಯ ಪಾವತಿಗಳಲ್ಲಿ ತಾರೀಕು ಬದಲಿಸಿದ್ದು ಮುಂತಾದ ಪ್ರಕರಣದಲ್ಲಿ) ಜನರಲ್ ಬೋಡಿಯವರು ಕೈಕೊಂಡ ಕ್ರಮವನ್ನು ಮುಂಬಯಿ ಲೋಕಲ್ ಫಂಡ ಲೆಕ್ಕದ ತಪಾಸಕರಿಗೆ ಈ ಕಚೇರಿಯಿಂದ ತಾ ೬ ೧೨ ೧೯೪೨ಕ್ಕೆ ಬರೆದ ೬೯೮ನೇ ನಂಬರಿನ ಪತ್ರದಲ್ಲಿ ತಿಳಿಸಿದ್ದುಂಟು ಮತ್ತು ಈ ಸಂಬಂಧದಲ್ಲಿ ಜನರಲ್ ಬೋಡಿಯ ಸಭೆಯಲ್ಲಿ ತಾ ೫-೧೨-೧೯೪೨ಕ್ಕಾದ ೧೯೭ನೇ ಠರಾವಿನ ಪ್ರತಿಯನ್ನೂ ಅವರಿಗೆ ಕಳಿಸಿದ್ದುಂಟು

೧೭ ತಾ ೧೬-೧-೧೯೪೪ಕ್ಕೆ ಕೂಡಿದ ಜನರಲ್ ಬೋಡಿಯ ಸಭೆಯಲ್ಲಿ ನೋಟೀಸ ಫೀ ದರಗಳ ಪಟ್ಟಿಯನ್ನು ಏರಿಸಕೂಡದೆಂದು ನಿರ್ಣಯವಾಗಿರುತ್ತದೆ. ಆದ್ದರಿಂದ ಈ ತಕರಾರು ಬಿಟ್ಟುಕೊಡಬೇಕಾಗಿ ಅರಿಕೆಯುಂಟು

೧೯ ದನಗಳ ಕೊಟ್ಟಿಗೆ ಮುಂತಾದವುಗಳನ್ನು ತೆರಿಗೆ ಆಕರಣೆಯಿಂದ ಹೊರತುಪಡಿಸಬರುವಂತೆ ಈಗಿರುವ ಮನೆ ತೆರಿಗೆ ಪಟ್ಟಿಯಲ್ಲಿ ಅವಶ್ಯವುಳ್ಳ ತಿದ್ದುಪಡಿ ಮಾಡಿ ವರದಿಯನ್ನೊಪ್ಪಿಸಲು ತಾ ೧೬-೧-೧೯೪೪ನೇಗೆ ಕೂಡಿದ ಜನರಲ್ ಬೋಡಿಯವರು ಮೆನೆಜಿಂಗ ಕಮಿಟಿಗೆ ಅಪ್ಪಣೆ ಕೊಟ್ಟಿದ್ದಾರೆ. ಆ ವರದಿ ಬಂದ ಮೇಲೆ ಅವಶ್ಯವುಳ್ಳ ಕ್ರಮ ಕೈಕೊಳ್ಳಲಾದೀತು

ಕುಮಟಾ,
೬ ೪ ೪೬

Govind V Pai,
President,
Municipality, Kumta.

ಕುಮಟಾ ಮ್ಯುನಿಸಿಪಾಲಿಟಿಯ ೧೯೪೧-೪೨ರ ಪೂರ್ಣ ಮತ್ತು ೧೯೪೨-೪೩ರ ೮ ತಿಂಗಳ ಲೆಕ್ಕದ ವಿಶೇಷ ತಪಾಸಣೆ ಮಾಡಿ ತಪಾಸಕರು ಒಪ್ಪಿಸಿದ ವರದಿಯ ಕೆಲವು ಮಹತ್ವದ ಅಂಶಗಳೂ ಅವುಗಳಿಗೆ ಮ್ಯುನಿಸಿಪಾಲಿಟಿಯವರು ಕೊಟ್ಟ ಉತ್ತರಗಳೂ.

(ಓದುಗರಿಗೆ ಸರಿಯಾಗಿ ತಿಳಿಯಲೆಂದು ತಪಾಸಕರ ಒಂದೊಂದೇ ಆಕ್ಷೇಪ ಕೊಟ್ಟು ಅದರೊಂದಿಗೇ ಮ್ಯು||ಯವರ ಉತ್ತರವನ್ನೂ ಕೊಡಲಾಗಿದೆ)

೨ ೧೯೪೧-೪೨ರ ಲೆಕ್ಕ ತಪಾಸಣೆ ವರದಿಯ ಪಾರಾ ೧೩ರ ಕಡೆಗೆ, ತಾ ೧೪-೧-೪೩ಕ್ಕೆ ಈ ಕಚೇರಿಯಿಂದ ಜಾವಕ ನಂ L ೧೪/೩೪ A-4165 ಮುಖಾಂತ ಕಳಿಸಿದ ನಮ್ಮ ತಪಾಸಣೆ ಯಾದಿಯ ಪಾರಾ ೪ರ ಕಡೆಗೂ ಲಕ್ಷ ಪೂರೈಸಬೇಕಾಗಿ ಸೂಚನೆಯಿದೆ. ಸದರಿ ಲೇಖಗಳ ದ್ವಾರಾ ಮ್ಯು||ಯ ಕ್ಷೀಣವಾಗುತ್ತಿರುವ ಸಾಂಪತ್ತಿಕ ಸ್ಥಿತಿಯ ಕಡೆ ಜನರಲ್ ಬೋಡಿಯ ಲಕ್ಷ ವೇಧಿಸಲು ಪ್ರಯತ್ನ ಮಾಡಲಾಗಿದ್ದು, ಆ ಸ್ಥಿತಿ ಸುಧಾರಿಸಲು ಕೆಲವು ಸೂಚನೆಗಳನ್ನೂ ಕೊಡಲಾಗಿದೆ. ಹಣದ ಕೊರತೆಯಾಗಿರುವದರಿಂದ (೧) ಸೂರ್ಗ ಮತ್ತು ಗಟಾರುಗಳ ರಚನೆ ಹಾಗೂ ದುರುಸ್ತಿಗಳಿಗಾಗಿ ಬಹಳ ಕಡಿಮೆ ಖರ್ಚು ಮಾಡಲಾಗುತ್ತಿದೆ, (೨) ಜಿಲ್ಲಾ ಲೋಕಲ್ ಬೋರ್ಡಿಗೆ ಸಲ್ಲತಕ್ಕ ಪ್ರಾಥಮಿಕ ಶಿಕ್ಷಣದ ಖರ್ಚಿನ ಪಾಲು ಕೊಡಲಾಗದೆ ಬಾಕಿಯುಳಿದಿದೆ, (೩) ರಸ್ತೆಗಳಿಗೆ ನೀರು ಹಾಕಿಸುವದನ್ನು ನಿಲ್ಲಿಸಲಾಗಿದೆ, ಮತ್ತು (೪) ಪೋಸ್ಟಲ್ ಕಶ್ ಸರ್ಟಿಫಿಕೇಟುಗಳ ಅವಧಿಯಾಗುವ ಮೊದಲೇ ಅವುಗಳ ಹಣ ತಿರುಗಿ ಕೊಳ್ಳಲ್ಪಟ್ಟಿದೆ. ತಪಾಸಣೆ ಇಲಾಖೆಯವರೂ ಕಲೆಕ್ಟರ-ಕಮಿಶನರರೂ ಮ್ಯು||ಯ ಆರ್ಥಿಕ ಸ್ಥಿತಿ ಸುಧಾರಿಸಬೇಕೆಂದು ಒತ್ತಾಯ ಮಾಡುತ್ತಿದ್ದಾಗ್ಯೂ ಮ್ಯು||ಯವರು ಯಾವದೇ ಕ್ರಮ ಕೈಕೊಂಡಿಲ್ಲ, ಸಾರ್ವತ್ರಿಕ ಆರೋಗ್ಯ ರಕ್ಷಣೆಯ ತೆರಿಗೆ ಹೇರುವ ಮಾತನ್ನೂ ಮ್ಯು||ಯವರು ನಿರಾಕರಿಸಿದ್ದಾರೆ. ಮೇಲೆ ಹೇಳಿರುವ ನಮ್ಮ ತಪಾಸಣೆ ಯಾದಿಯ ಪಾರಾ ೪ರಲ್ಲಿ ಕೊಟ್ಟ ಸೂಚನೆಗಳನ್ನು ಮ್ಯು||ಯವರು ಸ್ವೀಕರಿಸಿ ಕಾರ್ಯರೂಪಕ್ಕೆ ತರದಿದ್ದರೆ ಮ್ಯು||ಯು ಬೇಗನೇ ಸಾಂಪತ್ತಿಕ ಗೊಂದಲವನ್ನು ಎದುರಿಸಬೇಕಾಗುವದು

ಮ್ಯು|| ಯ ಉತ್ತರ— ಮನೆತೆರಿಗೆಯ ಮೇಲೆ ನೂರಕ್ಕೆ ೧೨|| ಯನ್ನು ಸಾರ್ವತ್ರಿಕ ಆರೋಗ್ಯರಕ್ಷಣ ತೆರಿಗೆ ಹೇರಬೇಕೆಂದೂ, ಯುದ್ಧದ ಮೂಲಕ ಆರ್ಥಿಕ ಪರಿಸ್ಥಿತಿ ಹಾಳಾಗಿ ಹೋಗಿರುವದರಿಂದ ಸದ್ಯಕ್ಕೆ ಮನೆ ತೆರಿಗೆ ಏರಿಸ ಕೂಡದೆಂದೂ ತಾ ೧೧ ೯-೧೯೪೩ಕ್ಕೆ ಕೂಡಿದ ಮ್ಯು|| ಯ ಮಹಾಸಭೆಯಲ್ಲಿ ನಿರ್ಣಯವಾಗಿದೆ

೮ ಮ್ಯು|| ಯ ಹದ್ದಿನಲ್ಲಿರುವ ಒಂದು ಜೀರ್ಣ ಅಶ್ವತ್ಥ ಮರವು ಬಿದ್ದು ಮಾನವರ ಜೀವಕ್ಕೆ ಅಪಾಯವಾಗುವ ಭೀತಿಯಿದ್ದುದರಿಂದ ಅದನ್ನು ಕಡಿಸಿ ತೆಗೆಯಬೇಕಾಗಿ ಮ್ಯು|| ಗೆ ಮೆಜಿಸ್ಟ್ರೇಟರ ಅಪ್ಪಣೆಯಾಯಿತು. ಆಗ ಮ್ಯು||ಯವರು ಆ ಮರ ಕೂಡಲೇ ಕಡಿದೊಗೆಯಬೇಕೆಂದು ಮರದ ಮಾಲಿಕ ರಾ|| ಜಯವಂತರಿಗೆ ನೋಟೀಸು ಕೊಟ್ಟು ತಿಳಿಸಿದರು. ಆದರೆ ರಾ|| ಜಯವಂತರು ಹಾಗೆ ಮಾಡದೆ ಮ್ಯು||ಯವರು ಆ ಮರ ಕಡಿದೊಗೆಯಲು ತಮ್ಮದೇನೂ ಆಕ್ಷೇಪವಿಲ್ಲೆಂದು ತಿಳಿಸಿದರು. ಅದರಂತೆ ಮ್ಯು||ಯವರು ರೂ ೩೫ ವೆಚ್ಚ ಮಾಡಿ ಮರ ಕಡಿಸಿದರು ಮತ್ತು ಮರದ ಕಟ್ಟಿಗೆಯನ್ನು ರೂ ೪||ಕ್ಕೆ ಮಾರಿದರು. ಆ ಮರ ರಾ|| ಜಯವಂತರದೆಂದು ಹೇಳಿದ ಮೇಲೆ, " ಮರವನ್ನು ನಿಮ್ಮ ವೆಚ್ಚದಿಂದ ಕಡಿದು ತೆಗೆಯಬೇಕು, ಹಾಗೆ ಕಡಿದು ತೆಗೆಯದಿದ್ದರೆ ಮ್ಯು||ಯವರೇ ಅದನ್ನು ಕಡಿಸಿ ಖರ್ಚನ್ನು ನಿಮ್ಮ ಕಡೆಯಿಂದ ವಸೂಲ ಮಾಡುವರು " ಎಂದು ಮ್ಯು||ಯವರು ರಾ|| ಜಯವಂತರಿಗೆ ನೋಟೀಸು ಕೊಡಬೇಕಾಗಿತ್ತು. ಈ ಕ್ರಮ ಅನುಸರಿಸಿದ್ದರೆ ರೂ ೩೦||ರಷ್ಟು ಹಾನಿ ಸಹಿಸುವ ಪ್ರಸಂಗ ಬರುತ್ತಿದ್ದಿಲ್ಲ

ಮ್ಯು||ಯ ಉತ್ತರ:- ಸದರಿ ಅಶ್ವತ್ಥ ಮರ ಮ್ಯು||ಯ ಸೂರ್ಗದ ಒಂದು ಬದಿಯಲ್ಲಿತ್ತು. ಚೌಕಶಿ ಮಾಡಲಾಗಿ ಅದರ ಒಡೆಯರಾರೆಂಬದು ನಿಚ್ಚಳವಾಗಿ ತಿಳಿಯಲಿಲ್ಲ. ಮರ ಕಡಿಯಲು ತಡ ಮಾಡಿದರೆ ಮನುಷ್ಯರ ಜೀವಿತಕ್ಕೂ, ಬರ-ಹೋಗುವ ರಹದಾರಿಗಳೂ, ನೆರೆಹೊರೆಯಲ್ಲಿರುವ ಮನೆಗಳಿಗೂ ಬಹಳ ಹಾನಿಯಾಗುವಂತಿದ್ದಿತು. ಹೀಗಾಗಿ ಮ್ಯು||ಯವರು ಸ್ಥಾನಿಕ ಮೆಜಿಸ್ಟ್ರೇಟರ ಅಪ್ಪಣೆಯನ್ನು ಪಾಲಿಸಿ ಆ ಮರವನ್ನು ಸಾರ್ವಜನಿಕ ಸುರಕ್ಷಿತತೆಗಾಗಿ ಕಡಿದು ತೆಗೆಯಬೇಕಾಯಿತು. ಕಾರಣ ಈ ಆಕ್ಷೇಪ ಬಿಟ್ಟುಕೊಡಬೇಕಾಗಿ ಬಿನ್ನಹವಿದೆ

೬ ರಾ|| ಪಿ ಆರ್. ಪೈರ ಅವಿಭಕ್ತ ಕುಟುಂಬದವರಿಗೂ ಮ್ಯು||ಗೂ ನೋಂದಣಿಸಿಂ ಆದ ಒಂದು ಕರಾರಿನಲ್ಲಿ ರಾ|| ಪೈರಿಗೂ ಒಂದು ಪಾಲು ಯಾ ಹಿತಸಂಬಂಧವುಂಟೆಂಬ ಕಾರಣದಿಂದ ರಾ|| ಪೈರು ಮ್ಯು||ಯ ಸದಸ್ಯರಾಗಿ ಆರಿಸಿ ಬರಲು ಅನರ್ಹರು ಎಂದು ರಡಾಯಿಸಿ ಅವರ ಸದಸ್ಯತ್ವ ರದ್ದುಗೊಳಿಸಬೇಕಾಗಿ ರಾ|| ಎಸ್. ಜೀ ನೊರೋನ್ಹಾ ಎಂಬವರೊಬ್ಬರು ರಾ|| ಪೈರ ವಿರುದ್ಧ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಜಿಲ್ಲಾ ಮ್ಯು||ಗಳ ಕಾನೂನಿನ ಕಲಂ ೨೬ (೨)ರನ್ವಯ ಒಂದು ಅರ್ಜಿ ಮಾಡಿದ್ದರು. (ಅರ್ಜಿ ನಂ. ೬-೧೯೪೨) ಮ್ಯು||ಗೆ ಈ ಪ್ರಕರಣದಲ್ಲಿ ಶಾಸ್ತ್ರದ ಪೂರ್ತ ಪಕ್ಷಗಾರ ಮಾಡಿತ್ತೆಂಬದು ಮ್ಯು||ಗೆ ಜಾರಿ ಆದ ನೋಟೀಸಿನ ಮೇಲಿಂದಲೇ ತಿಳಿಯುತ್ತದೆ. ಆದರೂ ಜನರಲ್ ಬೋಡಿಯವರು ತಾ. ೩೦-೩-೧೯೪೨ನೇಗೆ ೩೨೭ನೇ ಠರಾವ ಮಾಡಿ, ಕಾರವಾರದ ವಕೀಲ ರಾ|| ಹಳದೀಪುರಕರರಿಗೆ ವಕಾಲತು ಕೊಟ್ಟು ಈ ಪ್ರಕರಣದಲ್ಲಿ ಮ್ಯು||ಯ ಪರಿಯಿಂದ ಹೋರಾಡಬೇಕೆಂದೂ ಆ ಬಗ್ಗೆ ತಗಲುವ ವೆಚ್ಚವನ್ನು ಮ್ಯು||ಯ ಬೊಕ್ಕಸದೊಳಗಿಂದ ತೆರಬೇಕೆಂದೂ ತೀರ್ಮಾನಿಸಿದ್ದಾರೆ. ಈ ಪ್ರಕರಣವೂ ಕೂಡ ೧೯೪೧-೪೨ರ ಲೆಕ್ಕ ತಪಾಸಣೆಯ ವರದಿಯ ಪಾರಾ ೧೫ರಲ್ಲಿ ಉಲ್ಲೇಖಿಸಿದ ಪ್ರಕರಣದಂತೆಯೇ ಇರುವದರಿಂದ, ಮ್ಯು||ಯು ತನ್ನ ಹಣ ಖರ್ಚು ಮಾಡಿ ಈ ಪ್ರಕರಣದಲ್ಲಿ ಹೋರಾಡುವದು ಅವಶ್ಯವಿತ್ತೋ ಹೇಗೆ, ಮ್ಯು||ಯವರು ಹೋರಾಡದಿದ್ದರೆ ಮ್ಯು||ಗೆ ಏನಾದರೂ ಹಾನಿ ತಟ್ಟುತ್ತಿತ್ತೋ ಹೇಗೆ ಎಂಬೀ ಪ್ರಶ್ನೆಗಳ ವಿಚಾರ ಮೆ|| ಕಲೆಕ್ಟರ ಸಾಹೇಬರು ಮಾಡಬಹುದು

ಮ್ಯು||ಯವರ ಉತ್ತರ– ಸದರಿ ಅರ್ಜಿಯ ವಿಚಾರ ಮಾಡಿದ ಕಾನಡಾ ಜಿಲ್ಲಾ ಕೋರ್ಟಿನವರು ಅರ್ಜಿಯನ್ನು ತಿರಸ್ಕರಿಸಿ ಮ್ಯು||ಗೆ ದಾವಾಖಾಸಾಮು ಖರ್ಚು ಕೊಡಿಸಿರುವದರಿಂದ ಈ ಆಕ್ಷೇಪ ಬಿಟ್ಟುಕೊಡಬೇಕಾಗಿ ಬೇಡಿಕೆಯಿದೆ

(ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ)

ಕುಮಟಾ,
೬-೪-೪೬

Govind V. Pai,
President,
Municipality, Kumta

“ ವಂದೇ ಮಾತರಂ ”

ರಾಷ್ಟ್ರೀಯ ವಾರದಲ್ಲಿ ಎಲ್ಲರೂ ಖಾದಿಯನ್ನು ಕೊಂಡರು ಏಕೆ? ಖಾದಿಯಿಂದ ಹತ್ತಿ ಬೆಳೆಸುವವರು, ಹಿಂಜುವವರು, ನೂಲುವವರು, ನೇಯುವವರು ಎಲ್ಲರೂ ಬದುಕುತ್ತಾರೆಂದು! ಪರ್ಣಕುಟಿ ಗ್ರಂಥಮಾಲೆಗೆ ಚಂದಾದಾರರಾಗಬೇಕೆಂದು ಕರ್ನಾಟಕ ಸಂಘವು ಉತ್ತರ ಕನ್ನಡ ಜಿಲ್ಲೆಯವರಿಗೆ ಒತ್ತಾಯದ ವಿನಂತಿ ಮಾಡುತ್ತದೆ. ಏಕೆ? ಅದರಿಂದ ಉತ್ತರ ಕನ್ನಡದ ಲೇಖಕರು, ಮುದ್ರಕರು, ಪುಸ್ತಕ-ವ್ಯಾಪಾರಿಗಳು ಬದುಕುತ್ತಾರೆ!

(೧) ಪ್ರಪಂಚದ ಕಥೆ (೨) ಶ್ರೀನಾಥ.
(೩-೪) ಕಾಂಚನ ಮೃಗ
ವಾರ್ಷಿಕ ಚಂದಾ ರೂ ೩
ಬೇಕಾದ ಕನ್ನಡ ಪುಸ್ತಕಕ್ಕೆ ಬರೆಯಿರಿ
ಕರ್ನಾಟಕ ಸಂಘ, ಗೋಕರ್ಣ

ದಿ ಕೊಮರ್ಶಿಯಲ್ ಕೊರ್ಪೊರೇಶನ್
ಕುಮಟಾ.
' ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ
ಪಿ ಎಮ್. ಪಿಂಜಾರನೆಕರ,
ಮೋಟರ ಸ್ಟ್ಯಾಂಡ, ಕುಮಟಾ

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ಪಿ ಎಮ್ ಪಿಂಜಾರನೆಕರ,
ಲಾಯಸನ್ಸಿ ಮೋಟರ ಸ್ಟ್ಯಾಂಡ, ಕುಮಟಾ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B 1270 Monday, 22nd April, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪೨

ಕುಮಟಾ:- ಸೋಮವಾರ. ತಾ. ೨೨ ಮಾಹೆ ಏಪ್ರಿಲ ೧೯೪೬ನೇ ಇಸವಿ

ಜಾಹೀರಾತುಗಳ ದರ:
ಕಾಲಮ್ಮಿನ ೧ ಇಂಚು ಉದ್ದ
೧ ಸಾರಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವಾರ್ತೆಗಳು.

— ಪ್ರಾಗತಿಕ ಪಕ್ಷದ ಓರ್ವ ಮುಂದಾಳುಗಳಾಗಿದ್ದ ರೈ|| ಆ|| ಶ್ರೀನಿವಾಸ ಶಾಸ್ತ್ರಿಯವರು ಕಳೆದ ಬುಧವಾರ ರಾತ್ರಿ ದಿವಂಗತರಾದ ಸುದ್ದಿ ನಮೂದಿಸಲು ವ್ಯಸನವಾಗುತ್ತಿದೆ. ಶಾಸ್ತ್ರಿಯವರು ೧೭ ವರ್ಷಗಳ ಕಾಲ ಮದ್ರಾಸಿನ ಒಂದು ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿ ದುಡಿದು, ೧೯೦೭ರಲ್ಲಿ ನಾಮದಾರ ಗೋಖಲೆಯವರ ಭಾರತ ಸೇವಕ ಸಮಾಜದಲ್ಲಿ ಸೇರಿದರು. ಗೋಖಲೆಯವರ ತರುವಾಯ ೧೯೨೭ರ ವರೆಗೆ ಆ ಸಮಾಜದ ಅಧ್ಯಕ್ಷರಾಗಿದ್ದರು. ಮದ್ರಾಸ ಕಾಯದೆ-ಮಂಡಳದಲ್ಲೂ ಕೇಂದ್ರ ಕಾಯದೆ-ಮಂಡಳಗಳಲ್ಲೂ ಅವರು ಬಹಳ ಕಾಲ ದುಡಿದಿದ್ದಾರೆ. ಅವರ ಪಾಂಡಿತ್ಯ, ವಾಕ್ಪಟುತ್ವ, ಸಮತೂಕ ಬುದ್ಧಿ ಮುಂತಾದ ಗುಣ-ವಿಶೇಷಗಳಿಗೆ ಮೆಚ್ಚಿ ಸರಕಾರವೂ ಕೂಡ ಅವರಿಗೆ ಸಾಮ್ರಾಜ್ಯ ಪರಿಷತ್ತುಗಳಿಗೆ ಹಿಂದ ರಾಷ್ಟ್ರದ ಪ್ರತಿನಿಧಿಗಳಾಗಿ ಕಳಿಸಿತ್ತು. ದಕ್ಷಿಣ ಆಫ್ರಿಕೆಯಲ್ಲಿ ಭಾರತ ಸರಕಾರದ ಮೊದಲನೇ ಪ್ರತಿನಿಧಿಯಾಗಿ ಕೆಲಸ ಮಾಡುವ ಬಹುಮಾನವೂ ಶಾಸ್ತ್ರಿಯವರಿಗೆ ಸಿಕ್ಕಿತ್ತು. ರಾಜಕಾರಣದಲ್ಲಿ ಮಂದಗಾಮಿಗಳಾಗಿದ್ದರೂ ಯಾವಾಗಲೂ ಅವರು ಶುದ್ಧ ರಾಷ್ಟ್ರೀಯ ಮನೋವೃತ್ತಿಯಿಂದಲೇ ನಡೆಯುತ್ತಿದ್ದರು. ಆದರಿಂದ ಎಲ್ಲ ಪಕ್ಷಗಳಲ್ಲೂ ಅವರಿಗೆ ಗೌರವವಿತ್ತು. ಮಹಾತ್ಮಾಜಿಗಿಂತ ಮೃತಾತ್ಮರು ೧೦ ದಿನಗಳಿಂದ ಹಿರಿಯರಾಗಿದ್ದರು. ಅವರ ನಿಧನದಿಂದ ಹಿರಿಯ ಹಿಂದೀ ನುರಿತ ರಾಜಕಾರಣಿಗಳೊಬ್ಬರು ಕಣ್ಮರೆಯಾದಂತಾಗಿದೆ.

— ಬ್ರಿಟಿಶ ಮಂತ್ರಿಗಳಾದ ಶಿಷ್ಟ ತ್ರಿಮೂರ್ತಿಗಳು ಈಗ ವಿಶ್ರಾಂತಿಗಾಗಿ ಕಾಶ್ಮೀರಕ್ಕೆ ಹೋಗಿದ್ದಾರೆ. ಬುಧವಾರ ಅವರು ತಿರುಗಿ ದಿಲ್ಲಿಗೆ ಬರುವರು. ಅಂದೇ ಅವರು ತಮ್ಮ ಯೋಜನೆಯನ್ನು ಹೊರಗೆಡಹುವರೆಂದು ತರ್ಕಿಸಲಾಗಿದೆ. ಈ ವರೆಗಿನ ಸಂದರ್ಶನ-ಚರ್ಚೆಗಳಲ್ಲಿ ತ್ರಿಮೂರ್ತಿಗಳು ಬೇರೆ ಬೇರೆ ಪಕ್ಷಗಳ ಪ್ರಮುಖರ ವಿಚಾರಗಳನ್ನಷ್ಟೇ ತಿಳಕೊಂಡರು. ವಿನಹ ತಮ್ಮ ಇಂಗಿತವನ್ನು ಎಲ್ಲೂ ಹೊರಗೆಡಹಲಿಲ್ಲ. ಅದು ಈ ವಾರವೇ ಹೊರಬೀಳುವದು. ಹಿಂದೀ ಸಮಸ್ಯೆಯನ್ನು ಬಿಡಿಸಿಯೇ ತ್ರಿಮೂರ್ತಿಗಳು ಸ್ವದೇಶಕ್ಕೆ ಮರಳುವರೆಂದೂ, ಈ ಕಾರ್ಯಕ್ಕಾಗಿ ಭಾರತದಲ್ಲಿ ತಿಂಗಳುಗಟ್ಟಲೆ ನಿಲ್ಲಬೇಕಾದ ಪ್ರಸಂಗ ಬಂದರೆ ಅವರು ನಿಲ್ಲುವರೆಂದೂ ಈವಾಗ ಪ್ರಕಟವಾಗಿದೆ. ಘಟನಾ ಸಮಿತಿಯನ್ನು ಆರಿಸುವ ಮೊದಲು ಕೇಂದ್ರದಲ್ಲಿ ಲೋಕಪ್ರತಿನಿಧಿಗಳ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂದೂ ಘಟನಾ ಸಮಿತಿಯ ನೇಮಣೂಕಿಯ ಕೆಲಸ ಆ ಸರಕಾರಕ್ಕೆ ಒಪ್ಪಿಸಬೇಕೆಂದೂ ರಾಷ್ಟ್ರೀಯ ಸಭೆಯವರ ಅಂಬೋಣವುಂಟು. ಈ ಸೂಚನೆ ಶಿಷ್ಟ-ತ್ರಿಮೂರ್ತಿಗಳಿಗೆ ಮಾನ್ಯವಾಗುವದಂತೆ. ಜಿನ್ನಾರವರ ಪಾಕಿಸ್ತಾನಕ್ಕೆ ತ್ರಿಮೂರ್ತಿಗಳ ಸಮ್ಮತಿ ಸಿಗಲಿಕ್ಕಿಲ್ಲವಂತೆ. ಜಿನ್ನಾರವರು ರಾಷ್ಟ್ರೀಯ ಸಭೆಯವರೊಡನೆ ಒಪ್ಪಂದ ಮಾಡಿಕೊಳ್ಳದಿದ್ದರೆ, ಮತ್ತು ಸಿಮ್ಲಾ ಪರಿಷತ್ತಿನ ಕಾಲಕ್ಕೆ ಹಿಡಿದಂಥ ಹಟ ಹಿಡಿದು ಕೂತರೆ ಅವರನ್ನು ಬದಿಗೊತ್ತಿ ತ್ರಿಮೂರ್ತಿಗಳು ಮುಂದೆ ಸಾಗುವರೆಂದು "ಕೇಸರಿ" ಪತ್ರಿಕೆಯ ವಿಶೇಷ ಪ್ರತಿನಿಧಿಗಳಾದ ಶ್ರೀ|| ತಾಮ್ಹಣಕರರು ದಿಲ್ಲಿಯಿಂದ ಬರೆಯುತ್ತಾರೆ.

— ಮದ್ರಾಸ ಎಸೆಂಬ್ಲಿಯಲ್ಲಿ ಮೂರು ನಾಲ್ಕಾಂಶಕ್ಕಿಂತ ಹೆಚ್ಚಿಗೆ ಸ್ಥಳಗಳು ಕಾಂಗ್ರೆಸ್ಸಿಗೆ ಸಿಕ್ಕಿವೆ. ಆದರೆ ಕಾಂಗ್ರೆಸ ಪಕ್ಷದ ಮುಂದಾಳುಗಳನ್ನಾಗಿ ಯಾರಿಗೆ ಆರಿಸಬೇಕೆಂದು ನಿಶ್ಚಯವಾಗದ್ದರಿಂದ ಇನ್ನೂ ಮಂತ್ರಿ-ಮಂಡಳದ ರಚನೆಯಾಗಿರುವದಿಲ್ಲ. ಶ್ರೀ|| ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ಕಾಂಗ್ರೆಸ ಪಕ್ಷದ ಕಾರ್ಯ ನಡೆಯಬೇಕೆಂದು ಮದ್ರಾಸ ಕಾಂಗ್ರೆಸ ಕಾರ್ಯಕಾರಿಮಂಡಳದ ಹಾಗೂ ರಾಷ್ಟ್ರಪತಿಗಳ ಆದೇಶವಿದೆ. ಆದರೆ ಮದ್ರಾಸ ಕಾಯದೆ ಮಂಡಳದ ಬಹಳಷ್ಟು ಸದಸ್ಯರಿಗೆ ಈ ಆದೇಶ ಮಾನ್ಯವಿಲ್ಲ. ಶ್ರೀ|| ಮುಥುರಂಗ ಮುದಲಿಯಾರ ಇವರಿಗೆ ತಮ್ಮ ಮುಂದಾಳುಗಳನ್ನಾಗಿ ಆರಿಸಿ, ಸುಪ್ರಸಿದ್ಧ ಕಾಮಗಾರ-ಮುಂದಾಳುಗಳಾದ ಶ್ರೀ|| ವ್ಹಿ. ವ್ಹಿ. ಗಿರಿಯವರಿಗೆ ಮಂತ್ರಿ ಪ್ರಧಾನರ ಪಟ್ಟ ಕೊಡಬೇಕೆಂದು ಪಕ್ಷದವರ ಮನೀಷೆಯುಂಟಂತೆ.

— ಅಂತು ಕೊನೆಗೆ ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳೂ ಶಿಕ್ಷಣ ಮಂತ್ರಿಗಳೂ ಆದ ನಾಮದಾರ ಬಾಳಾಸಾಹೇಬ ಖೇರರವರು ಶಿಕ್ಷಕರ ಕಷ್ಟಗಳನ್ನು ನಿವಾರಿಸಲು ಯೋಗ್ಯ ಉಪಾಯಯೋಜನೆ ಮಾಡಲಾಗುವದೆಂದು ಇಲಾಖಾ ಶಿಕ್ಷಕ ಸಂಘದ ಶಿಷ್ಟರಿಗೆ ಆಶ್ವಾಸನೆ ಕೊಟ್ಟದ್ದರಿಂದ ಸಂಪನ್ನು ನಿಲ್ಲಿಸಬೇಕೆಂದು ಸಂಘದವರು ತೀರ್ಮಾನಿಸಿದ್ದಾರೆ ಮತ್ತು ನಾಡದು "ಬುಧವಾರ ತಾ. ೨೪ರಿಂದ ಎಲ್ಲ ಶಿಕ್ಷಕರು ತಮ್ಮ ಕೆಲಸಕ್ಕೆ ಹಾಜರಾಗಬೇಕೆಂದು ಆಜ್ಞಾಪಿಸಿದ್ದಾರೆ.

— ಬಂಗಾಲ ಕಾಯದೆ ಮಂಡಳದಲ್ಲಿ ಸ್ಥಿರವಾದ ಮಂತ್ರಿಮಂಡಳ ರಚಿಸಲು ಸಾಕಷ್ಟು ಬಹುಮತ ಇಲ್ಲವೆ ಬೆಂಬಲ ಮುಸ್ಲಿಮ ಲೀಗಿಗೂ ಸಿಕ್ಕಿಲ್ಲ, ಕಾಂಗ್ರೆಸ್ಸಿಗೂ ಸಿಕ್ಕಿಲ್ಲ. ಆದ್ದರಿಂದ ಅಲ್ಲಿ ಲೀಗ-ಕಾಂಗ್ರೆಸ ಸಂಯುಕ್ತ ಮಂತ್ರಿಮಂಡಳ ರಚಿಸುವ ಆಲೋಚನೆ ನಡೆದಿತ್ತು. ಲೀಗಪಕ್ಷದ ಮುಂದಾಳುಗಳಾದ ಮಾ|| ಸುಹ್ರವರ್ದಿ ಮತ್ತು ಕಾಂಗ್ರೆಸ ಪಕ್ಷದ ಪ್ರಮುಖ ಶ್ರೀ|| ಕಿರಣ ಶಂಕರರಾಯ ಇವರೊಳಗೆ ಈ ಬಗ್ಗೆ ೩-೪ ಸಾರೆ ಮಾತುಕತೆಗಳು ನಡೆದವು. ಆದರೆ ಸುಹ್ರವರ್ದಿಯವರು ಸಂಧಾನಕ್ಕಾಗಿ ಯಾವದೇ ಬಗೆಯ ತ್ಯಾಗ ಮಾಡಲು ಒಪ್ಪದ್ದರಿಂದ ಸಂಯುಕ್ತ ಮಂತ್ರಿಮಂಡಳದ ರಚನೆಯ ಆಶೆ ಈಗ ಉಳಿದಿಲ್ಲವಂತೆ.

— ಹಿಂದೊಮ್ಮೆ ಅಮೇರಿಕೆಯ ಅಧ್ಯಕ್ಷರಾಗಿದ್ದ ಮಾ|| ಹರ್ಬರ್ಟ ಹೂವರ ಇವರು ಈಗಿನ ಅಧ್ಯಕ್ಷ ಟ್ರೂಮನ್ನರ ಅಪೇಕ್ಷೆಯಂತೆ ಜಾಗತಿಕ ಆಹಾರ ಪರಿಸ್ಥಿತಿಯ ಅಭ್ಯಾಸ ಮಾಡುತ್ತಿದ್ದಾರೆ. ಅವರು ಯುರೋಪದೊಳಗಿನ ಪರಿಸ್ಥಿತಿಯನ್ನು ಕಂಡುಕೊಂಡು ನಿನ್ನೆ ಈ ದೇಶಕ್ಕೆ ಬಂದಿದ್ದಾರೆ. ಇಲ್ಲಿಂದ ಮುಂದೆ ಚೀನ, ಜಪಾನಗಳನ್ನು ಕಂಡು ಮೇ ತಾ ೧೦ಕ್ಕೆ ಅಮೇರಿಕೆಗೆ ತಲ್ಪುವರು. ಇದೀಗ ಯುರೋಪ ಮತ್ತು ಏಶಿಯಾ ಖಂಡದಲ್ಲಿ ೧೫ ಕೋಟಿ ಜನರು ಉಪವಾಸ ಬೀಳುವ ಪ್ರಸಂಗ ಬಂದಿದೆಯೆಂದೂ, ಇನ್ನು ನಾಲ್ಕು ತಿಂಗಳಲ್ಲಿ ೧ ಕೋಟಿ ೧೦ ಲಕ್ಷ ಟನ್ನಗಳಷ್ಟು ಆಹಾರಸಾಮಗ್ರಿಯನ್ನು ಅವರಿಗೆ ಪೂರೈಸದಿದ್ದರೆ ಈ ಜನರು ಉಪವಾಸ-ಮಾರಿಗೆ ಬಲಿ ಬೀಳುವರೆಂದೂ ಹೂವರರು ಕೈರೋದಿಂದ ನಭೋವಾಣಿಯ ದ್ವಾರಾ ವರದಿ ಮಾಡಿದ್ದಾರೆ.

— ಕೊಂಕಣಿ ಭಾಷೆಯಲ್ಲಿ ಸಾಹಿತ್ಯ ನಿರ್ಮಾಣ ಮಾಡಲಿಕ್ಕೆ ಗೋವೆಯ ಹಾಗೂ ಗೋವೆಯ ಹೊರಗಿನ ಸಮಾಜದ ಮೇಲ್ಪದರವನ್ನು ಸಾಹಿತಿಕ ಹಾಗೂ ಸಾಂಘಿಕ ದಾಯಿತ್ವವನ್ನು ಕೊಟ್ಟು ಸಿದ್ಧಪಡಿಸಲಿಕ್ಕೆ ಬಹಳಷ್ಟು ಪರಿಶ್ರಮಿಸಿದ ವಿದ್ವದ್ವರ್ಯ ಶ್ರೀ|| ವಾಮನ ರಘುನಾಥ ವರ್ದೇ ವಾಲವಲೀಕರ ಯಾನೆ ಶೆಣ್ವಿ ಗೋಂಯಬಾಬ ಇವರು ಮಂಗಳವಾರ ತಾ ೯ಕ್ಕೆ ಮುಂಬಯಿಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಅವರ ನಿಧನದಿಂದ ಕೊಂಕಣಿ ಭಾಷೆಗೆ ಆದ ಹಾನಿ ಅಪಾರವಾದದ್ದು. ಶ್ರೀಶನು ಮೃತಾತ್ಮರಿಗೆ ಶಾಂತಿಯನ್ನಿತ್ತು, ಅವರು ಕೈಕೊಂಡ ಕೊಂಕಣಿ-ಉದ್ಧಾರದ ಕಾರ್ಯವನ್ನು ಅವರಷ್ಟೇ ಹುರುಪಿನಿಂದ ಮತ್ತು ನಿಷ್ಠೆಯಿಂದ ಮುಂದುವರಿಸಲು ಕೊಂಕಣಿಗರಿಗೆ ಬುದ್ಧಿ ಕೊಡಲೆಂದು ಪ್ರಾರ್ಥಿಸುತ್ತೇನೆ.

ಕಾರವಾರ— (ತಾ ೧೯-೪-೪೬) ಇಂದು, ನಾಳೆ ಮತ್ತು ನಾಡದು ಇಲ್ಲಿಯ ಕರ್ನಾಟಕ ಸಂಘದವರು ವಸಂತ ಸಾಹಿತ್ಯೋತ್ಸವ ಜರುಗಿಸಲಿದ್ದಾರೆ. 'ಮುಂಬಯಿ ಗೆಜೆಟ್' ಪತ್ರಿಕೆಯ ಸಂಪಾದಕ ಶ್ರೀ|| ಎ. ವಿ. ಕರಗುದರಿ, ಪ್ರಾ|| ಶಾನಭಾಗ, ಶ್ರೀ ಪದ್ಮನಾಭ ಪುರಾಣಿಕ, ನಗರೂರ ರಂಗನಾಥ, ಮುಕ್ಕುಂದಿ ವೆಂಕಟರಾಯರ ಕೀರ್ತನ ಭಜನಗಳೂ, ಕಾವ್ಯಗಾಯನ ನಾಟ್ಯ ಪ್ರಯೋಗ ಮೊದಲಾದ ಕಾರ್ಯಕ್ರಮಗಳೂ ಆಗುವವಂತೆ. ಉತ್ಸವದ ಕಾರ್ಯಕ್ರಮ ಸಂಜೆ ೫ರಿಂದ ೮ರ ವರೆಗೆ 'ಲೋಕಲ್ ಬೋರ್ಡ ಶಾಲೆಯ ಅಟ್ಟದ ಮೇಲೆ ನಡೆಯುವದು.

ಕಳೆದ ವರ್ಷದ ಏಪ್ರಿಲ ತಿಂಗಳಲ್ಲಿ ಈ ತಾಲೂಕಿನ ರೈತರದೊಂದು ಪರಿಷತ್ತು ಕೂಡಿತ್ತು. ಆದಿನಿಂದ ಬಹಳಷ್ಟು ರೈತರು ಭೂಮಿಯ ಒಡೆಯರಿಗೆ ಸಲ್ಲತಕ್ಕ ಗೇಣಿಗೆ ಮೋಸ ಮಾಡುತ್ತಿದ್ದಾರೆ! ಗೇಣಿಯನ್ನು ಅವರಿಗೆ ಇಳಿಸಿ ಕೊಡಬೇಕಂತೆ! ಹಾಗೆ ಇಳಿಸಿ ಕೊಡುವವರೆಗೆ ಅವರು ಏನಷ್ಟು ಗೇಣಿಯನ್ನು ಕೊಡಲಿಕ್ಕಿಲ್ಲವಂತೆ! ಒಡೆಯರು ರೈತರಿಂದ ಭೂಮಿ ತಪ್ಪಿಸಿದರೆ ಬೇರೆ ರೈತರು ಅವರಿಗೆ ಸಿಗದಂತೆ ರೈತ-ಸಂಘದವರು ಕಟ್ಟೋಣ ಮಾಡುತ್ತಾರೆ! ಮತ್ತು ಬಲಾತ್ಕಾರದಿಂದ ಅವರ ಹೊಲಗಳನ್ನು ತಾವೇ ಸಾಗ ಮಾಡುತ್ತಾರೆ! ಕೋಡಿಬಾಗದ ರಾ|| ಪುರುಷೋತ್ತಮ ಭಾಜಲೇಯವರು ಕಳೆದ ವರ್ಷ ತಮ್ಮ ಒಕ್ಕಲಿಗನಿಗೆ ಹೊರಗೆ ಹಾಕಿದ್ದರು. ಅವರ ಭೂಮಿಯನ್ನು ಸಂಘದವರು ಅವರಿಗೆ ಹೇಳದೆ ಕೇಳದೆ ತಾವೇ ಸಾಗ ಮಾಡಹತ್ತಿದರು. ಈ ಬಗ್ಗೆ ಮುಂದೆ ಫಿರ್ಯಾದಿಯಾಯಿತು. ಆಗ ಸಂಘದವರಿಗೆ ಬುದ್ಧಿ ಬಂತು, ಮತ್ತು ಇನ್ನು ಮುಂದೆ ಇಂಥ ಅಕ್ರಮ ಪ್ರವೇಶ ಮಾಡುವದಿಲ್ಲೆಂದು ಬರೆದು ರಾ|| ಭಾಜಲೇಯವರಿಗೆ ಬರಕೊಟ್ಟು ರಾಜಿಯಿಂದ ಫಿರ್ಯಾದಿಯ ನಿಕಾಲಿ ಮಾಡಿಕೊಂಡರು. ಈ ಫಿರ್ಯಾದಿಯ ನಿಕಾಲಿ ನೋಡಿಯಾದರೂ ರೈತ ಸಂಘದವರ ಅಕ್ರಮ ಚಟುವಟಿಕೆಗಳಿಗೆ ತಡೆಬೀಳುವದೆಂದು ಆಶೆಯುಂಟು.

ಈಗ ಕಾಂಗ್ರೆಸ ಸರಕಾರ ಬಂದಿರುವದರಿಂದ ಅಕ್ಕಿಯ ದರ ಇಳಿಯುವದೆಂದೂ ದಕ್ಷಿಣ ಕನ್ನಡ ಜಿಲ್ಲೆಯ ದರಗಳೇ ಇಲ್ಲಿ ಸ್ವೀಕರಿಸಲ್ಪಡುವವೆಂದೂ ಬಡವರು ಅಪೇಕ್ಷಿಸುತ್ತಾರೆ.

ಹಲಗೆಯ ಸೀಧಾ-ಅಂಗಡಿಯಲ್ಲಿ ಸಕ್ಕರೆಯ ಸೀಧಾ ಸರಿಯಾಗಿ ಸಿಗುವದಿಲ್ಲೆಂಬದೊಂದು ದೂರುಂಟು. ಮಾರ್ಚ ತಿಂಗಳ ಪ್ರಾರಂಭಕ್ಕೆ ಬಂದವರಿಗೆ ಸೀಧಾಚೀಟಿನೊಳಗಿನ ಪ್ರಮಾಣದ ಅರ್ಧದಷ್ಟೇ ಕೊಟ್ಟು ಇನ್ನುಳಿದ ಸಕ್ಕರೆ ಹಿಂದಿನಿಂದ ಸಿಗುವದೆಂದು ಅಂಗಡಿಕಾರರು ಹೇಳಿದರಂತೆ. ಈ ಉಳಿದ ಸಕ್ಕರೆ ಹಂಚಲು ತಿಂಗಳ ಕೊನೆಯ ದಿನ ೧ ತಾಸು ಅಂಗಡಿ ತೆರೆದು ತಮ್ಮ ಇಷ್ಟರಿಗಷ್ಟೇ ಸಕ್ಕರೆ ಕೊಟ್ಟರಂತೆ! ಉಳಿದವರಿಗೆ ಕೊಡಲಿಲ್ಲ! ಮರುದಿನ ಬಂದು ಕೇಳಿದರೆ ಹೊಸ ಸೀಧಾ ಚೀಟಿಗಳಾಗಬೇಕೆಂದು ಹೇಳಿದರಂತೆ! ಅಧಿಕಾರಿಗಳು ಅತ್ತ ಲಕ್ಷ ಕೊಟ್ಟು ಅಂಗಡಿಕಾರರಿಗೆ ಬುದ್ಧಿ ಕಲಿಸಿಕೊಡಬೇಕಾಗಿ ಸೂಚನೆಯು.

ಅಮದಳ್ಳಿ— (ತಾ ೧೭ ೪ ೪೬) ಇಲ್ಲಿಯ ಮು|| ಶಿಕ್ಷಕರು ತಾ ೧೪-೩-೪೬ರಿಂದ ಸಂಪಿನಲ್ಲಿ ಸೇರಿದ್ದರು. ಅವರಿಗೆ ಪ್ರತಿ ತಿಂಗಳು (ಸಂಪು ಮುಗಿಯುವ ವರೆಗೆ) ರೂ ೪೦ರಂತೆ ಧನಸಹಾಯ ಕೊಡುವೆವಾಗಿ ರಾ|| ಅನಂತ ಪಾಂಡುರಂಗ ಶೇಟಿಯಾ ಇವರು ಆಶ್ವಾಸನೆ ಕೊಟ್ಟು ಮೊದಲನೇ ತಿಂಗಳ ರೂ ೪೦ನ್ನು ತಾ ೧೪-೩-೪೬ಕ್ಕೆ ಕೊಟ್ಟಿದ್ದರು. ಸುದೈವದಿಂದ ಈಗ ಸಂಪು ನಿಂತದ್ದರಿಂದ ಪುನಃ ಹಣ ಕೊಡುವ ಪ್ರಸಂಗ ಅವರಿಗೆ ಇಲ್ಲ.

WANTED for our New English School, Bad (Karwar), Graduates in Arts and Science (preferably B T) and a Matriculate with Drawing (Int) Apply to the undersigned stating the minimum salary expected.

Premier Education Society, Bad, ೨-೪-46	K. R. Haldipurkar Chairman

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ. ಎಮ್. ಮಿಜಾರನಕರ,
ಲಾಯಸೆನ್ಸಿ, ಪೆಟ್ರೋಲ ಸ್ಟೆಂಡ, ಕುಮಟಾ

The Agricultural & Industrial Bank, Ltd.
(Incorporated in British India, Liability of Members limited)
Head Office COONDAPOOR. S. I
The Head Office and Branches of the Bank now accept
Season Deposits from three to six months at the following rates -
Three Months at 2½% per annum
Six Months at 2¾% per annum.
No such deposit will be allowed to run beyond 30th September 1946
Coondapoor 8-2-1946 K. VAMAN SHENAI, CHAIRMAN.

ಸ್ಥಾನಿಕ ವೃತ್ತಾಂತ.

ಕುಮಟಾ— ಬುಧವಾರ ಹಾಗೂ ಶುಕ್ರವಾರ ಸಂಜೆ ಸುಮಾರು ೧-೧ ತಾಸು ಭೋರ್ಗರೆದು ಮಳೆ ಸುರಿಯಿತು ಜಿಲ್ಹೆಯ ಕರಾವಳಿಯಲ್ಲೆಲ್ಲ ಈ ಮಳೆಯಾಗಿದೆಯಂತೆ ಶುಕ್ರವಾರ ದೊಡ್ಡ ಮಳೆ ೨ ಇಂಚಿಗಿಂತ ಹೆಚ್ಚಿಗೆಯಾಗಿರಬಹುದು ನಿನ್ನೆ, ಮೊನ್ನೆ ಬರೆ ತಾಸು ತಾಸು ಮಳೆಯಾಗಿದೆ ಈ ಅಕಾಲಿಕ ವೃಷ್ಟಿಯಿಂದ ಭೂಮಿಯು ಹಸುವು ಕವಿಸುಯಾಗಿ ಮುಂದೆ ಬೆಳೆ ಹಾಳಾಗುವದೆಂದು ಅನುಭವಿಕರು ಹೇಳುತ್ತಾರೆ ಮನೆ ಕೊಡಿಕೆಗಳಾಗದವರಿಗಂತೂ ಮಳೆಯಿಂದ ಬಹಳ ಕಷ್ಟವಾಗಿದೆ

ಮುಂಬಯಿಯಿಂದ ಬೇಕಾದ ಆಹಾರಧಾನ್ಯಗಳನ್ನು ತರಿಸಿಕೊಳ್ಳಲು ಜಿಲ್ಹಾಧಿಪರ ಅಪ್ಪಣೆ ಚೀಟಿಗಳು ವರ್ತಕರಿಗೆ ಈಗ ಸಿಕ್ಕಿವೆ! ಆದರೆ ಅವುಗಳಿಂದ ವಿಶೇಷ ಪ್ರಯೋಜನವಾದೀತೆಂದು ಕಾಣುವದಿಲ್ಲ ಯಾಕೆಂದರೆ ಮುಂಬಯಿಯಲ್ಲಿ ಧಾರಣೆಗಳು ಈಗ ಬಹಳ ತೇಜಿಯಲ್ಲಿವೆಯಂತೆ, ವಾಹನಗಳು ಸಿಗುವದೂ ಈಗ ಕಷ್ಟ ಹಿಂದೆ ಧಾರಣೆಗಳು ಮಂದವಿದ್ದಾಗ ಮತ್ತು ವಾಹನಗಳು ಬೇಕಾದಂತೆ ಸಿಗುವ ಹಾಗೆ ಇದ್ದಾಗ ಈ ಅಪ್ಪಣೆ ಚೀಟಿಗಳು ದೊರೆತಿದ್ದರೆ ಬೇಕಷ್ಟು ಸರಕು ಬರುತ್ತಿತ್ತು, ಜನರಿಗೂ ಸುಖವಾಗುತ್ತಿತ್ತು ಆದರೆ ಆಗ ಅಧಿಕಾರಿಗಳು ಮಲಗಿಕೊಂಡರು!

ಜಿಲ್ಹೆಯಲ್ಲಿ ತೆಂಗಿನೆಣ್ಣೆಯ ಕೊರತೆಯುಂಟೆಂದೂ, ಭಾರತ ಸರಕಾರದವರು ತೆಂಗಿನೆಣ್ಣೆಯ ಧಾರಣೆಗಳನ್ನು ನಿಯಂತ್ರಿಸುವವರಾಗಿ ಎಚ್ಚರಿಕೆ ಕೊಟ್ಟಿದ್ದರಿಂದ ಎಣ್ಣೆ ತರಿಸಲು ವರ್ತಕರು ಪ್ರಯತ್ನಪಡುವದಿಲ್ಲೆಂದೂ "ವೃತ್ತ"ವು ಜಾಹೀರಪಡಿಸಿ ಈಗ ೨ ವಾರಗಳಾದವು ಆದರೂ ಅಧಿಕಾರಿಗಳು ಕಣ್ತೆರೆಯುವದಿಲ್ಲ! ಭಾರತ ಸರಕಾರದ ನಿಯಂತ್ರಣವುಂಟೋ ಹೇಗೆಂದು ಅವರು ತಿಳಿಕೊಳ್ಳುವದೂ ಇಲ್ಲ, ಸರಕಾರದ ಪರವಾಗಿ ಎಣ್ಣೆ ತರಿಸುವ ವಿಚಾರವನ್ನೂ ಮಾಡುವದಿಲ್ಲ ತುರಂಗದ ಸಿಪಾಯಿಗಳಂತೆ ಪ್ರತಿ ಮನುಷ್ಯನಿಗೆ ತಿಂಗಳೊಂದಕ್ಕೆ ೩೦ ತೊಲೆ ಎಣ್ಣೆ ಬೇಕು ಒಂದೊಮ್ಮೆ ಈ ಪ್ರಮಾಣ ಬಿಟ್ಟುಕೊಟ್ಟು ಹೋದ ವರ್ಷ ಅಧಿಕಾರಿಗಳು ಜಾರಿಯಲ್ಲಿ ತಂದ ೧೫ ತೊಲೆಗಳ ಪ್ರಮಾಣವನ್ನೇ ಸ್ವೀಕರಿಸಿದರೂ ನಮ್ಮ ಜಿಲ್ಹೆಯ ೪,೪೦,೦೦೦ ಜನರಿಗೆ ಮೇದಿಂದ ಅಕ್ಟೋಬರ ವರೆಗಿನ ೬ ತಿಂಗಳಿಗೆ ೨೨೬೪೦ ಡಬ್ಬಿ (೧೫ ಮಣವು) ಗಳಷ್ಟು ಎಣ್ಣೆ ಬೇಕು ಕಳೆದ ವರ್ಷ ತೆಂಗಿನ ಬೆಳೆ ಕೆಟ್ಟಿದ್ದರಿಂದ ಸ್ಥಳೀಯ ಎಣ್ಣೆಯ ನಿರ್ಮಿತಿ ೨ ಸಾವಿರ ಡಬ್ಬಿಗಳಷ್ಟೂ ಆಗಲಿಕ್ಕಿಲ್ಲವಂತೆ ಆದರಿಂದ ಎಲ್ಲ ಎಣ್ಣೆಯನ್ನು ಕೊಚ್ಚಿಯಿಂದಲೇ ತರಿಸಿಕೊಳ್ಳಬೇಕಾಗಿದೆ. ಅದು ಈಗಲೇ ಬರದಿದ್ದರೆ ಮುಂದೆ ಮಳೆಗಾಲದಲ್ಲಿ ಎಲ್ಲಿಂದ ಬಂದೀತು? ಜಿಲ್ಹಾಪರು ಕೂಡಲೇ ಈ ಎಣ್ಣೆಯ ಸಮಸ್ಯೆಯನ್ನು ಬಿಡಿಸಬೇಕಾಗಿ ಸೂಚನೆಯಿದೆ

ಊರಲ್ಲಿ ಎಲ್ಲಾದರೂ ಬೆಂಕಿಯ ಅನಾಹುತವಾದರೆ ಅದಕ್ಕೆ ಕೂಡಲೆ ತಡೆಹಾಕಲು ಅನುಕೂಲವಾಗುವಂತೆ ನಮ್ಮ ಪ್ರಾಂತದೊಳಗಿನ ಬಹುತೇಕ ಮ್ಯು||ಗಳು ಅಗ್ನಿಶಾಮಕ ಯಂತ್ರೋಪಕರಣಗಳನ್ನು ಇಟ್ಟುಕೊಂಡಿವೆ ಆದರೆ ಕುಮಟಾ ಮ್ಯು||ಯಲ್ಲಿ ಅಂತಹದೇನೂ ಯಂತ್ರೋಪಕರಣವಿಲ್ಲ! ಆಚೆಯ ವಾರ ಒಂದು ದಿನ ನಸುಕು ಹರಿಯುವಾಗ ಹಳೇ ಕಚೇರಿಯ ಹಿಂಬದಿಯ ಕೇರಿಯಲ್ಲಿ ಒಂದು ಗುಡಿಸಲು ಸುಟ್ಟು ಬೂದಿಯಾಯಿತು ಅದರ ಸಮೀಪದಲ್ಲಿದ್ದ ಗುಡಿಸಲುಗಳನ್ನು ಈ ಅನಾಹುತದಿಂದ ತಪ್ಪಿಸಲು ಜನರಿಗೆ ಸಾಕುಬೇಕಾಯಿತು ಮ್ಯು||ಯವರು ಒಂದು ಅಗ್ನಿಶಾಮಕವನ್ನು ತಂದಿಟ್ಟಿದ್ದರೆ ಅಷ್ಟು ಕಷ್ಟವಾಗುತ್ತಿದ್ದಿಲ್ಲ

ಓಡೆ ತೇರು ಕಳೆದ ಮಂಗಳವಾರ ವಾಯಿತು ತೇರಿನ ಮರುದಿನ ಅಲ್ಲಿಯ "ಮಹಾದೇವ"ನಿಗೆ ಕುರಿ ಕೋಳಿಗಳ ಬಲಿ ಕೊಡುವ ಪ್ರಘಾತವುಂಟಂತೆ ಆದರೆ ಈ ವರ್ಷ ರಾ|| ಶ್ರೀಧರ ಕೃಷ್ಣ ಸ್ವೈರ ನೇತೃತ್ವದಲ್ಲಿ ಇಲ್ಲಿಯ ಹಾಗೂ ಗುಡೇಅಂಗಡಿಯ ರಾಷ್ಟ್ರ-ಸೇವಾದಲದವರು ಮಹಾತ್ಮರ ಅಹಿಂಸೆಯ ಸಂದೇಶದ ಪ್ರಚಾರ ಮಾಡಿ ಆ ಹಿಂಸೆಯನ್ನು ನಿಲ್ಲಿಸಿದರೆಂದು ತಿಳಿಯುತ್ತದೆ

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ಈ ವರ್ಷದ ಮಹಾಸಭೆ ಗುಡೇಅಂಗಡಿಯ ಕನ್ನಡ ಶಾಲೆಯಲ್ಲಿ ತಾ ೧ ೫ ೪೬ನೇ ಮಧ್ಯಾಹ್ನ ೩ ಘಂಟೆಗೆ ಕೂಡುವದಾಗಿಯೂ ಎಲ್ಲ ಸದಸ್ಯರು ತಪ್ಪದೆ ಬರಬೇಕಾಗಿಯೂ ಅಧ್ಯಕ್ಷರು ತಿಳಿಸುತ್ತಾರೆ

ಕೋಡ್ಕಣಿಯಿಂದ ಹೆಗಡೆಗೆ ಬರುವ ಫ್ಲೋಟ ತಾರಿಯಲ್ಲಿ ಜನರಿಗೆ ಕೂಡ ತಾರಿ ದಾಟಿಸುವದಿಲ್ಲೆಂತಲೂ ತಾರಿ ದಾಟಬಂದ ಜನರು ೨-೩, ೩-೩ ತಾಸು ದೋಣಿಯ ಹಾದಿ ಕಾಯುತ್ತ ನಿಲ್ಲಬೇಕಾಗುತ್ತದೆಂತಲೂ ದೂರು ಬಂದಿದೆ ತಾರಿ ದಾಟಬಂದ ಜನರಿಗೆ ಕೂಡ್ರಲು ಚಪ್ಪರ ಕೂಡ ಇಲ್ಲ ಆದರಿಂದ ಅವರು ಬಿಸಿಲೊಳಗೆ ಬೆಂದು ಬೆಂಡಾಗಬೇಕಾಗುತ್ತದೆ! ಅಧಿಕಾರಿಗಳು ಇತ್ತ ಲಕ್ಷ ಕೊಡುವರೇ?

ಕೆಲ ದಿನಗಳಿಂದ ಸೀಧಾ ಅಂಗಡಿಗಳಲ್ಲಿ ಇತ್ತಲಾಗಿ ಚಿಮಣಿ ಎಣ್ಣೆ ಸರಿಯಾಗಿ ಸಿಗುವದಿಲ್ಲವೆಂದು ಇನ್ನೊಂದು ದೂರು ಬಂದಿದೆ ಅದೇಕೆಂಬುದು ಅಧಿಕಾರಿಗಳು ಚೌಕಶಿ ಮಾಡಬೇಕಾಗಿ ಸೂಚನೆಯಿದೆ

ಹೊನ್ನಾವರ— (ತಾ ೨೧-೪-೪೬) ಪತ್ರಿಕಾಳು ಇನ್ನೂ ಬಂದಿಲ್ಲ ಈ ತಾಲೂಕಿಗೆ ೭೦೦ ಚೀಲ ಪತ್ರಿಕಾಳು ಮಂಜೂರಾಗಿದೆಯಂತೆ ಅದು ಎಂದು ಬರುವದೋ ದೇವರೇ ಬಲ್ಲ! ಶೇಂಗಾ ಹಿಂಡಿಯ ಪರವಾನಿಗೆ ಅರ್ಬನ ಬ್ಯಾಂಕಿಗೆ ಸಿಕ್ಕಿದೆ ಹಾವೇರಿಯಿಂದ ಅದನ್ನು ತರಿಸಿಕೊಳ್ಳಬೇಕಂತೆ ಆದರೆ ಹಾವೇರಿಯಲ್ಲಿ ಈಗ ಆ ಹಿಂಡಿ ಸಿಲ್ಕು ಇಲ್ಲ! ಹುಬ್ಬಳ್ಳಿಯಲ್ಲಿ ಬೇಕಷ್ಟು ಸಿಗುತ್ತಿದೆ ಅಲ್ಲಿಂದ ತರಿಸುವ ವ್ಯವಸ್ಥೆಯನ್ನೇಕೆ ಮಾಡಬಾರದು? ಈ ಹಿಂಡಿಯ ನಿಯಂತ್ರಿತ ದರದ ೬ ಮಣಗಳ ಚೀಲ ೧ಕ್ಕೆ ೪ ೯ ೦ ಇದೆ ಪೇಟೆಯಲ್ಲಿ ರೂ ೧೨ ಕೊಟ್ಟರೂ ೧ ಚೀಲ ಸಿಗುವದು ಕಷ್ಟ! ಅಂತು ದನಗಳ ದುರ್ದೆಸೆ! ಆದರಿಂದ ಹಾಲಿನ ಧಾರಣೆ ಸೇರಿಗೆ ೪ ಆಣೆ ಇದ್ದದ್ದು ಈಗ ೬ ಆಣೆ ಆಗಿದೆ!

೫೦೦ ಚೀಲ ಸಯಾಮ ಅಕ್ಕಿ ಬಂದಿದೆ ಇನ್ನೂ ೪೦೦೦ ಚೀಲ ಬರುವದಂತೆ

ಹುಲೇಕಲ್ಲ— (ತಾ ೧೬ ೪ ೪೬) ಹುಲೇಕಲ್ಲ-ಶಿರ್ಸಿ ಮಾರ್ಗದ ಮೇಲೆ ಒಂದು ಕಡೆ ಈಗ ಖಡಿ ಹಾಕಿದ್ದಾರೆ,— ಅಲ್ಲ ಕಲ್ಲುಗುಂಡು ಹಾಕಿದ್ದಾರೆ! — ಖಡಿ ಹಾಕುವ ಈ ಹೊಸ ನಮೂನೆ ಎಲ್ಲಿಂದ ಬಂತೋ ಜಿಲ್ಹಾ ಬೋರ್ಡಿನವರಿಗೇ ಗೊತ್ತು! ಲೋಕೋಪಕಾರದ ಉದ್ದುದ್ದ ಮಾತುಗಳನ್ನಾಡಿ ಚುನಾವಣೆಯಲ್ಲಿ ಮತಸಂಗ್ರಹ ಮಾಡಿದ ಬೋರ್ಡ ಸದಸ್ಯರು ಒಮ್ಮೆ ಈ ರಸ್ತೆ ನೋಡಿ ಗಾಡಿಕಾರರಿಗೂ ಜನರಿಗೂ ಆಗುವ ಕಷ್ಟಗಳ ಅಂತ್ಯ ಮಾಡಿಕೊಡಬಾರದೇ?

ಹಿಂದೆ ಇಲ್ಲಿಯ ಕನ್ನಡ ಶಾಲೆಯಲ್ಲಿ ಅನ್‌ಟ್ರೇಂಡ ಶಿಕ್ಷಕರಿದ್ದರು ಆದರೂ ಮುಲ್ಕೀ ಪರೀಕ್ಷೆಗೆ ಕೂತ ವಿದ್ಯಾರ್ಥಿಗಳು ಯಶಸ್ವಿಯಾಗುತ್ತಿದ್ದರು ಈಗ ಬೋರ್ಡಿನವರು ಟ್ರೇಂಡ ಶಿಕ್ಷಕರನ್ನು ನೇಮಿಸಿದ್ದಾರೆ ಇವರ ಕಾಲದಲ್ಲಿ ಮುಲ್ಕಿಗೆ ಕೂತವರ ಹೆಸರುಗಳು ಯಶಸ್ವಿ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಬರುವದೇ ಇಲ್ಲ! ಇವರ ಶಿಕ್ಷಣ ಅಷ್ಟು ಉತ್ತಮವುಂಟು! ಈ ಶಿಕ್ಷಕರು ಅವಶ್ಯ ಅಭ್ಯಾಸ-ಕ್ರಮಕ್ಕಿಂತ ಗಣಪತಿ ಮಾಡುವದು, ಗಡಿಗೆ ಮಾಡುವದು ಮುಂತಾದ ಕುಂಬಾರಿಕೆಯ ಕೈಗಾರಿಕೆಗಳನ್ನೇ ಹೆಚ್ಚಿಗೆ ಕಲಿಸುತ್ತಾರೆ ಆದರಿಂದ ಸ್ಕೂಲ ಬೋರ್ಡಿನವರು ಎಲ್ಲಾದರೂ ಒಂದು 'ಕುಂಬಾರ-ಶಾಲೆ" ತೆರೆದು ಈ ಶಿಕ್ಷಕರಿಗೆ ಅಲ್ಲಿ ಕಳಿಸಿಕೊಡಬೇಕಾಗಿ ಅರಿಕೆಯಿದೆ

ಸಿದ್ದಾಪುರ— (ತಾ ೧೮-೪-೪೬) ೧೯೪೨ನೇ ಆಂದೋಲನದಲ್ಲಿ ಸೇರಿ ಸೆರೆಮನೆವಾಸದ ಶಿಕ್ಷೆಗೆ ಗುರಿಯಾದ ರಾ|| ರಾ|| ಮಲವಳ್ಳಿ ರಾಮಚಂದ್ರ ಹೆಗಡೆ, ಅವರ ಮಗ ರಾಘವೇಂದ್ರ ಹೆಗಡೆ, ಹವಗಿ ಶಿವರಾಮ ಹೆಗಡೆ, ಸುಬ್ರಾಯ ಭಟ್ಟ ಇವರು ಬಿಡುಗಡೆ ಹೊಂದಿ ಇಂದು ಇಲ್ಲಿ ಬಂದಿದ್ದಾರೆ ಜನರು ಅವರಿಗೆ ಪ್ರಚಂಡ ಸ್ವಾಗತವಿತ್ತು ಬರಮಾಡಿಕೊಂಡರು ರಾ|| ವೆಂಕಟೇಶ ಹಂ ಭಟ್ಟರೂ ಬಿಡುಗಡೆ ಹೊಂದಿದ ಸುದ್ದಿಯುಂಟು

ಹಳಿಯಾಳ— (ತಾ ೧೦-೪-೪೬) ಇಲ್ಲಿಯ ದೇಶಪಾಂಡೆ ಮನೆತನದ ರಾ|| ವಿಶ್ವನಾಥರಾಯರ ತಮ್ಮಂದಿರಾದ ರಾ|| ಪಾಂಡುರಂಗ ದತ್ತಾತ್ರಯ ದೇಶಪಾಂಡೆ ಇವರು ಇಂದೂರದಲ್ಲಿ ಎಮ್ ಏ ಪರೀಕ್ಷೆಯ ಅಭ್ಯಾಸ ಮಾಡುತ್ತಿದ್ದರು ಅವರು ಕಳೆದ ತಾ ೩ ನೇಗೆ ವಿಷಮಜ್ವರದಿಂದ ಸ್ವರ್ಗಸ್ಥರಾದ ದುಃಖದ ಸುದ್ದಿ ಬಂದಿದೆ ಮೃತಾತ್ಮರು ಗುಣಾಢ್ಯರೂ ಲೋಕೋಪಕಾರಿಗಳೂ ಆಗಿದ್ದರು ಅವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲು ತಾ ೫ನೇ ಸಂಜೆ ಸಂತೆ ಪೇಟೆಯಲ್ಲಿ ಸಾರ್ವಜನಿಕ ಸಭೆ ಸೇರಿತ್ತು ಮೃತಾತ್ಮರಿಗೆ ಸದ್ಗತಿಯಾಗಲಿ!

ಅಧಿಕಾರಿಗಳ ಪ್ರತಿಬಂಧದಿಂದ ೩ ವಾರಗಳ ವರೆಗೆ ಮುಚ್ಚಬೇಕಾದ ಬಣವರಾದ ಅಕ್ಕಿ ಗಿರಣಿಯು ಕಳೆದ ವಾರದಿಂದ ಚಾಲೂ ಆಗಿದೆ

ತಾಲೂಕಿನಲ್ಲೆಲ್ಲ ಕಾಂಗ್ರೆಸ ಸಂಘಟನೆ ಮಾಡುವ ಕೆಲಸ ಜಾರಿಯಿಂದ ನಡೆದಿದೆ ಸಮೀಪವಿದ್ದ ಹಳ್ಳಿಗಳನ್ನೆಲ್ಲ ಒಟ್ಟುಗೂಡಿಸಿ ಸೇವಾ ಕಾಂಗ್ರೆಸ-ಸಮಿತಿಗಳನ್ನು ಸಂಘಟಿಸುವ ಆಲೋಚನೆಯುಂಟು

ಕೇವಲ ಸರಕಾರಿ ಕೆಲಸವನ್ನಲ್ಲದೆ ಗ್ರಾಮಸ್ಥರ ಹಾಗೂ ತಾಲೂಕ ಅಧಿಕಾರಿಗಳ ಖಾಸಗಿ ಕೆಲಸವನ್ನೂ ತಾವು ಮಾಡಬೇಕಾಗುತ್ತದೆಂದೂ ಈ ಕೆಲಸದಿಂದ ತಾವು ನುಗ್ಗಾಗಿ ಹೋಗುತ್ತೇವೆಂದೂ ಬಡ ಉಗ್ರಾಣಿಗಳು ದೂರುತ್ತಾರೆ ಉಗ್ರಾಣಿಗಳಿಂದ ಖಾಸಗಿ ಕೆಲಸ ಮಾಡಿಸಿಕೊಳ್ಳದಂತೆ ಕಾಂಗ್ರೆಸ ಸರಕಾರವು ಒಂದು ಕಟ್ಟಾಜ್ಞೆ ಹೊರಡಿಸಿದರೆ ಒಳಿತಾದೀತು

(೧ನೇ ಪುಟ ನೋಡಿರಿ)

ಆಜ್ಞೆ.

ನಂ ೧೪೪
ಕಾರವಾರ, ತಾ ೯-೪-೧೯೪೬,

ನಮ್ಮ ಕಚೇರಿಯಿಂದ ಹೊರಟ ತಾ ೨೬ ೩ ೪೬ರ ೧೪೪ನೇ ನಂಬರದ ಆಜ್ಞೆಯಲ್ಲಿ ಅಂಶತಃ ತಿದ್ದುಪಡಿ ಮಾಡಿ ಹಾಗೂ ಭಾರತ ರಕ್ಷಣ ಕಾನೂನಿನ ೮೧ನೆಯ ನಿಯಮದ ೨ನೆಯ ಉಪನಿಯಮ ಮತ್ತು ಗೃಹ ಖಾತೆ (ರಾಜಕೀಯ-ಯುದ್ಧ) ಯವರು ತಾ ೧೫-೯-೧೯೪೪ ನೇಗೆ ಹೊರಡಿಸಿದ ಎಸ್ ಡಿ II-೧೩೭೦ನೆಯ ಸರಕಾರಿ ಪ್ರಕಟನೆಗಳನ್ವಯ ತಮಗೆ ದೊರೆತ ಎಲ್ಲ ಅಧಿಕಾರಗಳನ್ನೂ ಹೀಗೆ ಮಾಡಲು ಅಧಿಕಾರ ಕೊಡುವಂಥ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ, ಜಿಲ್ಹಾ ಮೆಜಿಸ್ಟ್ರೇಟ,ಕಾನಡಾ, ಇವರು ಸದರಿ ಆಜ್ಞೆಯ ೨ನೆಯ ಕಲಮಿನ (ಪರಾ) ಸ್ಥಳದಲ್ಲಿ ಈ ಕೆಳಗಿನ ಕಲಮು ಸೇರಿಸಬೇಕೆಂದು ವಿಧಿಸುತ್ತಾರೆ —

" ಸದರಿ ಜಿನಸುಗಳ ಬೆಲೆಗಳನ್ನು ಜಿಲ್ಹಾ ಮೆಜಿಸ್ಟ್ರೇಟರು ನಿಶ್ಚಯಿಸಿ ಕೊಡುವ ವರೆಗೆ ಹಾಗೂ ಜಿಲ್ಹಾ ಮೆಜಿಸ್ಟ್ರೇಟರು ಮಾಡಬಹುದಾದ ಅಪವಾದಗಳಿಗೆ ವ್ಯತಿರಿಕ್ತವಾಗಿ ಯಾರೂ ಸದರಿ ಜಿನಸುಗಳನ್ನು ಮಾರಾಟ ಮಾಡತಕ್ಕದ್ದಲ್ಲ "

ಭಾರತ ರಕ್ಷಣ ಕಾನೂನಿನ ೧೧೯ನೆಯ ನಿಯಮದ ೧ನೆಯ ಉಪನಿಯಮಕ್ಕನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸತಕ್ಕದ್ದು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝೆಟಿನ I ನೇ ಭಾಗದಲ್ಲಿ ಪ್ರಕಟಿಸಬೇಕು

(ಬ) ಆಜ್ಞೆಯ ಕನ್ನಡ ಅನುವಾದದ ಒಂದು ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಿಸಬೇಕು —

(೧) "ಕಾನಡಾವೃತ್ತ" ಕುಮಟಾ, (೨) 'ವಿಚಾರಿ" ಕಾರವಾರ

(ಕ) ಆಜ್ಞೆಯ ಕನ್ನಡ ಅನುವಾದದ ಪ್ರತಿಗಳನ್ನು ಜಿಲ್ಹೆಯೊಳಗಿನ ಯಾವತ್ತೂ ಮುಲ್ಕಿ ಕಚೇರಿಗಳಲ್ಲೂ ಜಿಲ್ಹಾ ಪೊಲೀಸ ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಅಂಟಿಸಬೇಕು

F. N. RANA.
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

ಆಜ್ಞೆ.

ನಂ. ೧೪೪
ಕಾರವಾರ, ತಾ ೧೦-೪-೧೯೪೬

ಭಾರತ-ರಕ್ಷಣ ಕಾನೂನಿನ ೮೧ನೆಯ ನಿಯಮದ ೨ನೆಯ ಉಪನಿಯಮ ಹಾಗೂ ಗೃಹ ಖಾತೆ (ರಾಜಕೀಯ ಯುದ್ಧ) ಯವರು ತಾ ೧೫-೯-೧೯೪೪ನೇಗೆ ಹೊರಡಿಸಿದ ಎಸ್ ಡಿ II-೧೩೭೦ ನೇ ಸರಕಾರಿ ಪ್ರಕಟನೆ ಇವುಗಳನ್ವಯ ದೊರೆತ ಅಧಿಕಾರಗಳನ್ನೂ, ಹೀಗೆ ಮಾಡಲು ತಮಗೆ ಅಧಿಕಾರ ಕೊಡುವ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ, ಇವರು ಈ ಮೂಲಕ ಆಜ್ಞೆ ಮಾಡುವದೇನಂದರೆ — ಇದಕ್ಕೆ ಜೋಡಿಸಿದ ಪರಿಶಿಷ್ಟದಲ್ಲಿ ನಿರ್ದೇಶಿಸಿದ ಯಾವದೇ ಜಿನಸಿನ ಎಷ್ಟೂ ಪರಿಮಾಣವನ್ನು ಯಾವದೇ ಮನುಷ್ಯನು, ಜಿಲ್ಹಾ ಮೆಜಿಸ್ಟ್ರೇಟರ ಅಥವಾ ಅವರಿಂದ ಈ ಬಗ್ಗೆ ಅಧಿಕಾರಪಟ್ಟ ಅಧಿಕಾರಿಯ ಪರವಾನೆ-ಚೀಟಿಯಿಲ್ಲದೆ, ಕಾನಡಾ ಜಿಲ್ಹೆಯ ಯಾವದೇ ತಾಲೂಕಿನ ಯಾ ಪೇಟೆಯ ಗಡಿಗಳೊಳಗಿಂದ ಆ ಗಡಿಗಳ ಹೊರಗಿರುವ ಯಾವದೇ ಸ್ಥಳಕ್ಕೆ ರೇಲ್ವೆಯಿಂದ, ಮಾರ್ಗದಿಂದ, ಹೊಳೆಯಿಂದ ಇಲ್ಲವೆ ಸಮುದ್ರ ಮಾರ್ಗವಾಗಿ ಒಯ್ಯಕೂಡದು

ಪರಿಶಿಷ್ಟ

ತೊಗರಿ, ತೊಗರಿ-ಬೇಳೆ, ಹೆಸರು, ಹಚ್ಚೆಸರ ಬೇಳೆ, ಮಸೂರ ಬೇಳೆ, ಉದ್ದು, ಉದ್ದಿನ ಬೇಳೆ, ಕಡ್ಲೆ, ಕಡ್ಲೆ-ಬೇಳೆ, ಕಡ್ಲೆ-ಹಿಟ್ಟು

ಯಾರಾದರೂ ಈ ಆಜ್ಞೆಯನ್ನು ಉಲ್ಲಂಘಿಸಿದಲ್ಲಿ, ಅವನು ಬೇರೆ ಯಾವದೇ ಶಿಕ್ಷೆಗೆ ಪಾತ್ರನಾದಾಗ್ಯೂ, ಅವನ ಅಪರಾಧದ ತನಿಖೆ ಮಾಡುವ ನ್ಯಾಯಾಧೀಶರು, ಯಾವ ಕಡ ಧಾನ್ಯದ ಸಂಬಂಧದಲ್ಲಿ ಸದರಿ ಅಪರಾಧವಾಗಿರುತ್ತದೆಂದು ಮನವರಿಕೆಯಾಗುತ್ತದೋ ಅಂಥ ಕಡ ಧಾನ್ಯದ ಸಂಗ್ರಹವನ್ನು, ಅದರ ಆವರಣ-ಪ್ರಾವರಣಗಳ ಸಹಿತ, ಸರಕಾರ-ಜಮಾ ಮಾಡಲು ವಿಧಿಸಬಹುದು

ಭಾರತ ರಕ್ಷಣ ಕಾನೂನಿನ ೧೧೯ನೆಯ ನಿಯಮದ ೧ನೆಯ ಉಪನಿಯಮಕ್ಕನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸತಕ್ಕದ್ದು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝೆಟಿನ I ನೇ ಭಾಗದಲ್ಲಿ ಪ್ರಕಟಿಸಬೇಕು

(ಬ) ಆಜ್ಞೆಯ ಕನ್ನಡ ಅನುವಾದದ ಒಂದು ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಿಸಬೇಕು —

(೧) ಕಾನಡಾವೃತ್ತ" ಕುಮಟಾ (೨) 'ವಿಚಾರಿ ಕಾರವಾರ

(ಕ) ಆಜ್ಞೆಯ ಕನ್ನಡ ಅನುವಾದದ ಪ್ರತಿಗಳನ್ನು ಜಿಲ್ಹೆಯೊಳಗಿನ ಯಾವತ್ತೂ ಮುಲ್ಕಿ ಕಚೇರಿಗಳಲ್ಲೂ ಜಿಲ್ಹಾ ಪೊಲೀಸ ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಅಂಟಿಸಬೇಕು

F. N. RANA,
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

ಗೋಕರ್ಣದ ಶುದ್ಧಿ-ಪತ್ರ

(ಸ್ವಂತ ಪ್ರತಿನಿಧಿಯಿಂದ)

ಗೋಕರ್ಣ, ತಾ ೨೨-೪-೧೯೪೬

ಕಳೆದ "ವೃತ್ತ"ದಲ್ಲಿ ಪ್ರಕಟವಾದ ಕಂಟ್ರೋಲ ಹವಾಲದಾರನ ಕಥೆಯಲ್ಲಿ ಕೆಲವು ತಿದ್ದುಪಡಿಗಳಾಗಬೇಕು. ಹವಾಲದಾರನು ಜಪ್ತ ಮಾಡಿದ ಅಕ್ಕಿ ೨ ಮಾನಗಿ ೫ ಕೊಳಗ ಇರುತ್ತದೆ. ಸಂಘದ ಪಾವತಿಯಲ್ಲಿ ಅಷ್ಟೇ ಅಕ್ಕಿ ನಮೂದ ಉಂಟಂತೆ. ವಾರು ದಿನ ೧ ಮಾನಗಿ ೧೦ ಕೊಳಗ ಅಕ್ಕಿ ಇದ್ದ ೨ ಮೊಟ್ಟೆ ಬಿಟ್ಟು ಕೊಟ್ಟು ೧೦ ಕೊಳಗ ಅಕ್ಕಿ ಇದ್ದ ಮೊಟ್ಟೆಯನ್ನಷ್ಟೇ ಹವಾಲದಾರನು ಇಟ್ಟುಕೊಂಡನು. ಇಷ್ಟೊಂದು ತಿಂಗಳಿಯಿಂದಲೇ ಅಕ್ಕಿ ಗೋಕರ್ಣಕ್ಕೆ ಬಂದದ್ದು ಭಾವಿಕೋಡ್ಲ-ಕಾರವಾರ ಮಾರ್ಗವಾದರೂ ಸಂಘದ ಪಾವತಿ ಮಾಡಿದ್ದು ಗ್ರಾಮಪಂಚಾಯತಿಯ ಬಳಿಯಲ್ಲಿರುವ ೧ನೇ ನಂಬರ ನಾಕೆಯಲ್ಲಿರುತ್ತದೆ. ಕಾರಕೂನನು ಕೇದಗಿ ನಾಕೆಯಲ್ಲಿ ಅಕ್ಕಿ ಬಂದ ರಾತ್ರಿ ನಾಕೆದಾರನಿದ್ದಿಲ್ಲ" ಈ ಕಥೆಯೂ ನಡೆದದ್ದು ತಾ ೭-೧-೧೯೪೬ಕ್ಕೆ.

ಹವಾಲದಾರನು ೧೦ ಕೊಳಗ ಅಕ್ಕಿಯ ಬಗ್ಗೆ ಈಗ ಖಟ್ಲೆ ಮಾಡಿ ಕೊಟ್ಟಿದ್ದಾನಂತೆ. ಆದರಲ್ಲಿ ೧ನೇ ನಂಬರ ನಾಕೆಯಲ್ಲಿ ಆದ ಸಂಘದ ಪಾವತಿ ಹಾಜರಪಡಿಸಿದರೆ, ಜಪ್ತಾದ ೨ ಮಾನಗಿ ೫ ಕೊಳಗ ಅಕ್ಕಿಯಲ್ಲಿ ೧೦ ಕೊಳಗ ಮಾತ್ರ ಇಲ್ಲವುಂಟು, ಉಳಿದ ಅಕ್ಕಿ ಎಲ್ಲಿ ಹೋಯಿತೆಂದು ಮೆಜಿಸ್ಟ್ರೇಟರಾಗಲಿ ಬೇರೆಯವರಾಗಲಿ ಕೇಳಬಹುದು ಎಂಬ ಅಂಜಿಕೆಯಿರುವದರಿಂದ, ಹವಾಲದಾರನು, ಕೇದಗಿ ನಾಕೆಯ ನಾಕೆದಾರನಿಗೆ ತನ್ನ ಒಳಸಂಚಿಗೆ ತಕ್ಕೊಂಡು, ತಾ ೭-೧-೪೬ಕ್ಕೆ ಆ ನಾಕೆಯ ಮೇಲಿಂದ ೧೦ ಕೊಳಗ ಅಕ್ಕಿ ತಾನು ತಂದ ಬಗ್ಗೆ ಬೇರೊಂದು ಪಾವತಿ ಮಾಡಿಸಿಕೊಂಡಿದ್ದಾನಂತೆ, ಮತ್ತು ಖಟ್ಲೆಯ ವಿಚಾರದ ಕಾಲಕ್ಕೆ ಆ ಪಾವತಿಯನ್ನು ಹಾಜರಪಡಿಸುವನಂತೆ! ೧ನೇ ನಂಬರ ನಾಕೆಯಲ್ಲಾದ ಪಾವತಿಯಲ್ಲಿ ಅಕ್ಕಿ ಇದ್ದಲ್ಲಿ ಅವಲಕ್ಕಿ ಮಾಡಿಸಿಕೊಂಡು ತನ್ನ ಕಳ್ಳತನ ಮುಚ್ಚಲಿಕ್ಕೆ ಹವಾಲದಾರನು ಪ್ರಯತ್ನ ಮಾಡದೆ ಬಿಡಲಿಲ್ಲ. ಫೌಜದಾರರ ಕಡೆಯಿಂದಲೂ ನಾಕೆದಾರನಿಗೆ ಹೆದರಿಕೆ ನೋಡಿದನು! ಆದರೆ ಹಿಂದಿನ ಅನುಭವದಿಂದ ಜಾಣನಾದ ನಾಕೆದಾರನು ಅದಕ್ಕೆ ಒಪ್ಪಲಿಲ್ಲ.

ಹವಾಲದಾರನು ಕೇದಗಿ ನಾಕೆದಾರನ ಕಡೆಯಿಂದ ೧೦ ಕೊಳಗ ಅಕ್ಕಿಯ ಪಾವತಿ ಮಾಡಿಕೊಂಡು ತರ್ಕಕ್ಕೆ ನಾರಾಗಲು ಮಾರ್ಗ ಮಾಡಿಕೊಂಡಿರುವನಾದರೂ ಬಂಟತನ ಇಲ್ಲವೆ ಕಳ್ಳತನದ ಭಯಂಕರ ಆರೋಪದಿಂದ ತಪ್ಪಿಸಿಕೊಳ್ಳುವ ಬಗೆ ನಾ ಕಾಣೆ. ತಾ. ೭-೧-೪೬ಕ್ಕೆ ೧ನೇ ನಂಬರ ನಾಕೆಯ ಮುಂದಿನಿಂದ ಅವನು ೨ ಮಾನಗಿ ೫ ಕೊಳಗ ಅಕ್ಕಿ ಜಪ್ತ ಮಾಡಿ ತಂದ ದಾಖಲೆ ಮ್ಯುನಿಯ ಪಾವತಿ ಪುಸ್ತಕದಲ್ಲಿ (ಪಾವತಿ ನಂಬರ ೩೦ ಮತ್ತು ೪೦ರ ನಡುವೆ ಇಂಟೇಕು) ಉಂಟು. ಆ ಅಕ್ಕಿ ಎಲ್ಲಿ ಹೋಯಿತು? ತನ್ನ ಖಾಸಗಿ ಉಪಯೋಗಕ್ಕೆ ಇಲ್ಲವೆ ಊಟಕ್ಕೆ ಅದನ್ನು ವೆಚ್ಚಿಸಿದ್ದೆ ಎಂದು ಹವಾಲದಾರನು ಹೇಳಲಾರನು. ಆ ಬಗ್ಗೆ ಅವನು ಗ್ರಾಮಪಂಚಾಯತದ ಪರವಾನಿಗೆ ಪಡೆದದ್ದೂ ಇಲ್ಲ, ಅಕ್ಕಿಯನ್ನು ಸೀಧಾ-ಕ್ಷೇತ್ರದಲ್ಲಿ ತರಲು ಸೀಧಾ-ಅಧಿಕಾರಿಗಳ ಅಪ್ಪಣೆ-ಚೀಟಿಯನ್ನು ಪಡೆದದ್ದೂ ಇಲ್ಲ! ಹೀಗಾಗಿ ಎರಡೂ ನಾಕೆಗಳಲ್ಲಿ ಪಾವತಿಗಳನ್ನು ಆವನು ತನ್ನ ಹೆಸರಲ್ಲಿ ಮಾಡಿಸಿಕೊಳ್ಳದೆ "ಕಂಟ್ರೋಲ ಹವಾಲದಾರ, ಗೋಕರ್ಣ" ಎಂಬ ಹೆಸರಲ್ಲಿ ಮಾಡಿಸಿದ್ದಾನೆ. ಆದರಿಂದ ೨ ಅಕ್ಕಿ ಅಧಿಕಾರಿ ನಾತೆಯಿಂದ ಅವನ ಕಡೆಗೆ ಬಂದಿತ್ತೆಂಬುದು ಸ್ಪಷ್ಟವಾಗುತ್ತಿದೆ. ಆ ಅಕ್ಕಿ ಎಲ್ಲಿ ಹೋಯಿತು ಎಂಬ ಪ್ರಶ್ನೆಗೆ ಹವಾಲದಾರನು ಉತ್ತರ ಕೊಡಬೇಕಾಗಿದೆ! ಜಿಲ್ಹಾ[illegible]ರು ಕೂಡಲೇ ಈ ಪ್ರಕರಣದಲ್ಲಿ ಲಕ್ಷ ಹಾಕಿ ಹವಾಲದಾರನ ಮೇಲೆ ಖಟ್ಲೆ ಮಾಡಿಕೊಡಬೇಕು. ಪೋಲೀಸ ಖಾತೆಯವರ ಕಡೆ ಪ್ರಾಸಿಕ್ಯೂಶನ ಕೆಲಸ ಒಪ್ಪಿಸಿ ಪ್ರಯೋಜನವಿಲ್ಲ. ಏಕೆಂದರೆ ಪೋಲೀಸ ಖಾತೆಯವರ ಕಡೆ ಒಪ್ಪಿಸಿದ ಇಂಥ ಸೊಪ್ಪೇ ಪ್ರಕರಣಗಳು ತಣ್ಣಗಾಗಿ ಹೋಗಿವೆ!

ತದಡಿ ಬಂದರದಲ್ಲಿ ಮಚವೆಯೊಳಗಿನ ಸರಕುಗಳ ಲೂಟಿಯಾದದ್ದು ಮಾರ್ಚ ತಿಂಗಳ ಪ್ರಾರಂಭಕ್ಕಂತೆ. ಆ ಮಚವೆ ಕುಂದಾಪುರದವರದೋ ಮಲ್ಪೆಯವರದೋ ಎಂಬುದು ಪತ್ತೆ ತಿಳಿದಿಲ್ಲ. ಮಚವೆಯೊಳಗಿನ ಬಹುಶಃ ಸರಕು ಈಗಾಗಲೇ ರಫ್ತಾಗಿದ್ದರೂ ಕೂಡಲೆ ತದಡಿಯ ದರ್ಜಕರಲ್ಲಿ ಈಗ ಶಿಲ್ಕು ಇರುವ ಕಡಧಾನ್ಯಗಳ ಪರಿಮಿತಿ ತಿಳಕೊಂಡು ಆ ಕಡಧಾನ್ಯಗಳು ಎಲ್ಲಿಂದ ಬಂದವು, ಹ್ಯಾಗೆ ಬಂದವು, ಎಂದು ಬಂದವು ಎಂಬು ಮುಂತಾಗಿ ಸೂಕ್ಷ್ಮವಾಗಿ ಶೋಧ ನಡೆಸಿದರೆ ಕಳ್ಳರ ಪತ್ತೆ ಸಿಗುವಂತಿದೆ. ಮಾರ್ಚ ತಿಂಗಳ ಮಧ್ಯದಲ್ಲಿ ಇಲ್ಲಿಂದ ಕಾರವಾರಕ್ಕೆ ೨೦೦ ಚೀಲ ಕೊತ್ತುಂಬರಿ ಸಮುದ್ರ ಮಾರ್ಗವಾಗಿ ರಫ್ತಾದದ್ದುಂಟು, ಈ ತಿಂಗಳ ನಡುವೆ ಪುನಃ ೧೦೦ ಚೀಲ ಕೊತ್ತುಂಬರಿ ಮಂಗಳೂರಿಗೆ ರಫ್ತಾದದ್ದುಂಟು. ರಫ್ತಾದ ಈ ಕೊತ್ತುಂಬರಿ ಎಲ್ಲಿಂದ ಬಂತು ಎಂದು ಕೇಳುವರೆ ಸಮರ್ಪಕ ಉತ್ತರ ಸಿಗಲಿಕ್ಕಿಲ್ಲವು! ಕಸ್ಟಮ್ಸ ಕಚೇರಿಯಲ್ಲಿ ಈ ಬಗ್ಗೆ ದಾಖಲೆಗಳು ಸಿಗುವ ಹಾಗೆ ಇವೆ. ಅವುಗಳ ಮೇಲಿಂದಲೂ ಮಚವೆಯನ್ನು ಕೆಡೆ ಹಾಡಿದ ಕಳ್ಳ-ವ್ಯಾಪಾರಿಯ ಪತ್ತೆ ಸುಲಭವಾಗಿ ಸಿಗುವಂತಿದೆ. ಆದರೆ ಯಾವ ದಕ್ಷ ಕಳ್ಳರನ್ನು ಹಿಡಿಯಲು ತಾತ್ಪರ್ಯಪೂರ್ವಕ ಅಧಿಕಾರಿ ಮುಂದಾಗಬೇಕು. ಅದೊಂದೇ ಈಗ ಕೊರತೆಯಾಗಿದೆ!

ಗೋಕರ್ಣ ಸೀಧಾ-ಕಚೇರಿಯಲ್ಲಿ ಹೊರಗಿಂದ ಅಕ್ಕಿ ತರುವವರಿಗೆ ಅಪ್ಪಣೆ-ಚೀಟಿಗಳು ಸಿಗುವದು ಕಷ್ಟವಾಗಿದೆ. ಅಧಿಕಾರಿಗಳಿದ್ದರೆ ಕಾರಕೂನರಿರುವದಿಲ್ಲ! ಕಾರಕೂನರಿದ್ದರೆ ಅಧಿಕಾರಿಗಳು ಇರುವದಿಲ್ಲ! ಅದರಿಂದ ಅಪ್ಪಣೆ ಚೀಟಿ ಪಡಕೊಳ್ಳಲು ಒಮ್ಮೊಮ್ಮೆ ೩-೪ ದಿನ ಕಚೇರಿಯ ಮೆಟ್ಟಿಲು ಸವೆದು ತಿಗೆಯಬೇಕಾಗುತ್ತದೆ! ತಾಲೂಕ ಕಚೇರಿಯವರು ಗ್ರಾಮಾಂತರದ ಬಗ್ಗೆ ಕೊಟ್ಟ ಅಪ್ಪಣೆ ಚೀಟಿಯ ಅವಧಿ ಮೀರಿ ಹೋದರೆ ಆಗುವದೂ ಉಂಟು. ಕಚೇರಿಯವರ ಮೇಲೆ ಅಧಿಕಾರಿಗಳ ಅಂಕೆ ಇಲ್ಲದ್ದರಿಂದಲೇ ಈ ಸ್ಥಿತಿಯಾಗಿದೆಯೆಂದು ಕೆಲವರ ಅಂಬೋಣ. ಸ್ವಂತ ಜೋಡಣೆ ಅರಿವೂ ಅಧಿಕಾರಿಗಳಿಗಿಲ್ಲ. ಕಾರಕೂನರ ಕಷ್ಟವೆಂದು ಜಾರಿ ಹೋಗಲು ಅವರು ಯತ್ನಿಸುತ್ತಾರೆ. ಕಳೆದ ವರ್ಷದ ಪ್ರಾರಂಭಕ್ಕೆ ಇವರು ಪೋಲೀಸರಿಗೆ ಸೀಧಾ ಅಕ್ಕಿಯ ಹೊರಗೆ ೩/-೩॥ ಮಾನಗಿ ಹೆಚ್ಚಿಗೆ ಕೊಡಿಸಿದ್ದುಂಟು! ಇದೇಕೆಂದು ಕೇಳಿದರೆ ಕಾರಕೂನರ ಕಡೆ ಬೊಟ್ಟು ತೋರಿಸುತ್ತಾರೆ! ಸೀಧಾ ಧಾನ್ಯಗಳ ಪ್ರಮಾಣವನ್ನು ಮುಲ್ಕಿಲಿಗೆ ಇಳಿಸಿದ ಹುಕುಮು ಬಂದ ದಿನ ಇಲ್ಲಿಯ ೨ ಸೀಧಾ ಅಂಗಡಿಗಳಲ್ಲಿ ರಾತ್ರಿ ೯-೧೦ ಘಂಟೆಯ ವರೆಗೂ ಅಕ್ಕಿ ಕೊಡಲಾಯಿತು (ಹಿಂದಿನ ಪ್ರಮಾಣದಿಂದಲೇ) ಇದ್ದರಂತೆ. ಆದರೆ ಈ ಬಗ್ಗೆ ಸೀಧಾ ಅಧಿಕಾರಿಗಳು ೩ನೇ ಅಂಗಡಿಯವರ ಜವಾಬು ಕೇಳಿದರಂತೆ! ಮನೆಯ ಯಜಮಾನರು ಬೇರವರ ಕೈಯಲ್ಲಿ ಸೀಧಾ-ಕಾರ್ಡ ಕಳಿಸಿ ಸೀಧಾ ಸಾಮುಗ್ರಿ ಒಯ್ದರೆ ಆ ಬಗ್ಗೆ ಅಂಗಡಿಕಾರರ ವಿರುದ್ಧ ಇವರು ಪ್ರಕರಣ ಮಾಡುತ್ತಾರೆ! ಅವರ ಕೆಲವು ಹೆಚ್ಚಾಗಿ ಒಂದೇ ಅಂಗಡಿಯವರ ವಿರುದ್ಧವುಂಟು. ಅದೇಕೆಂದು ಆ ಅಂಗಡಿಕಾರರಿಗೆ ಮತ್ತು ಸೀಧಾ ಅಧಿಕಾರಿಗಳಿಗೆ ಗೊತ್ತು!

ಅಹಿತಾಗ್ನಿ ಶ್ರೀ ವಿಶ್ವನಾಥ ಸುಬ್ರಾಯ ಭಟ್ಟ ಚಿತ್ರಿಗಿಮಠ ಇವರ "ಗರುಡ ಚಯನ" ಮಹಾ ಯಜ್ಞದ ಸಮಾಪ್ತಿ ಕಳೆದ ಬುಧವಾರ ಆಯಿತು. ಶಿರ್ಶಿ, ಸಿದ್ದಾಪುರ, ಹೊನ್ನಾವರ, ಯಲ್ಲಾಪುರ ತಾಲೂಕುಗಳಿಂದಲೂ ಭಟಕಳ ಪೇಟೆಯಿಂದಲೂ ಸಾವಿರಾರು ಜನರು ಬಂದು ಯಜ್ಞೇಶ್ವರನ ದರ್ಶನ ಪ್ರಸಾದ ಪಡೆದು ಹೋದರು. ಈಗಿನ ಕಠಿಣ ಪರಿಸ್ಥಿತಿಯಲ್ಲಿ ಇಂಥ ಪ್ರಚಂಡ ಯಾಗಗಳಾಗಬೇಕಾದರೆ ಅದಕ್ಕೆ ನಿಷ್ಠೆ ಬೇಕು, ನೂರಾರು ಜನರ ಒಕ್ಕಟ್ಟು-ಸಹಕಾರ ಬೇಕು. ಸುದೈವದಿಂದ ಗೋಕರ್ಣಕ್ಕೆ ಬ್ರಾಹ್ಮಣ ಸಮಾಜದಲ್ಲಿ ಈ ಗುಣಗಳುಂಟು. ಅದರಿಂದ ಎಂಥ ಮಹಾಕಾರ್ಯಗಳನ್ನಾದರೂ ಅವರು ಕೈಕೊಂಡು ಕೊನೆಗಾಣಿಸಬಲ್ಲರು.

ಇಲ್ಲೊಂದು ಹಾಯಸ್ಕೂಲ ಮಾಡುವ ವಿಚಾರ ಕೆಲವರ ತಲೆಯಲ್ಲಿ ಬಂದಿದೆ. ಆ ಬಗ್ಗೆ ಅಪ್ಪತ್ರಿಯು ಎಡ ಸಾರ್ವಜನಿಕದ ಸ್ಥಳವನ್ನು ಖರೀದಿಸಿಟ್ಟಿದ್ದಾರೆ. ೧೯೪೨ರಲ್ಲಿ ಈ ಊರವರಿಂದ ಸುಮಾರು ೨೩ ಸಾವಿರ ರೂ. ಗಳಷ್ಟು ಪುಂಡಗಂದಾಯ ವಸೂಲಾದದ್ದುಂಟು. ಅದು ಈಗ ತಿರುಗಿ ಸಿಗುವದೆಂದು ಹೇಳುತ್ತಾರೆ. ತಿರುಗಿ ಸಿಕ್ಕ ಆ ಹಣವನ್ನು ಜನರು ಪರಿಸ್ಥಿತ ಹಾಯಸ್ಕೂಲ ನಿಧಿಗೆ ಕೊಟ್ಟರೆ ಹಾಯಸ್ಕೂಲಿನ ಸ್ಥಾಪನೆಯು ಬಹಳ ಶೀಘ್ರದಲ್ಲೇ ಕೈಗೂಡುವಂತಿದೆ.

ದಿ ಕೊಮರ್ಶಿಯಲ್ ಕೊಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ
ವಿ. ಎನ್. ಪಂಜಾಳನಕರ,
ಮೋಟರ ಸ್ಟೆಂಡ, ಕುಮಟಾ.

ನಾಗರಿಕ ಪೂರೈಕೆ ಇಲಾಖೆ.

ಮುಂಬಯಿ ಕೋಟೆ, ತಾ ೩೦ ಮಾರ್ಚ ೧೯೪೬

ಹುಕುಮು.

ಹಿಂದ-ಸಂರಕ್ಷಣೆ ಕಾನೂನು

ನಂ ೩೨/IV-ಡಿ. ಹಿಂದುಸ್ಥಾನ-ಸಂರಕ್ಷಣೆಯ ಕಾನೂನಿನ ೮೧ನೆಯ ನಿಯಮದ ೨ನೆಯ ಉಪನಿಯಮದಂತೆ ದೊರೆತ ಅಧಿಕಾರವನ್ನೂ, ಹೀಗೆ ಮಾಡಲು ಅಧಿಕಾರ ಕೊಡುತ್ತಿರುವ ಇತರ ಎಲ್ಲ ಅಧಿಕಾರಗಳನ್ನೂ ಪ್ರಯೋಗಿಸಿ ಮತ್ತು ಆಹಾರ ಖಾತೆ (ಪೂರೈಕೆ) ಯಿಂದ ತಾ ೧೬-೪-೧೯೪೩ಕ್ಕೆ ಹೊರಟ ೩೨/IVನೇ ನಂಬರದ ಸರಕಾರಿ ಪ್ರಕಟನೆಯಲ್ಲಿರುವ ಹುಕುಮನ್ನು ರದ್ದುಗೊಳಿಸಿ ಮುಂಬಯಿ ಸರಕಾರದವರು ಹುಕುಮು ಹೊರಡಿಸುತ್ತಾರೇನಂದರೆ — ಲಗ್ತ ಜೋಡಿಸಿದ ಪರಿಶಿಷ್ಟದಲ್ಲಿ ಕಾಣಿಸಿದ ಕ್ಷೇತ್ರಗಳೊಳಗಿರುವ ಯಾವದೇ ಸ್ಥಳದಿಂದ ಆ ಕ್ಷೇತ್ರಗಳ ಹೊರಗಿರುವ ಮುಂಬಯಿ ಪ್ರಾಂತದ ಯಾವದೇ ಸ್ಥಳಕ್ಕೆ, ಮುಂಬಯಿ ಮತ್ತು ಮುಂಬಯಿ ಉಪನಗರ ಜಿಲ್ಹೆಯ ಮಟ್ಟಿಗೆ ನಾಗರಿಕ ಪೂರೈಕೆಗಳ ಡಾಯರೆಕ್ಟರರು ಯಾ ನಾಗರಿಕ ಪೂರೈಕೆಗಳ ಜಾಡಿ ಡಾಯರೆಕ್ಟರ (ಇದ್ದಲಿ ಮತ್ತು ಉರುವಲ) ರು ಹಾಗು ಇತರ ಕ್ಷೇತ್ರಗಳ ಮಟ್ಟಿಗೆ ಆಯಾ ಕ್ಷೇತ್ರದ ಜಿಲ್ಹಾ ಮೆಜಿಸ್ಟ್ರೇಟರು ಕೊಟ್ಟ ಪರವಾನಿಗೆಯಲ್ಲಿದ್ದ ಮತ್ತು ಆ ಪರವಾನಿಗೆಯೊಳಗಿನ ಶರ್ತುಗಳಿಗೆ ಸ್ವಾಧೀನವಾಗಿ, ಯಾರೂ ಸಮುದ್ರ ಮಾರ್ಗವಾಗಿ ಇದ್ದಲಿಯನ್ನು (ಚಾರಕೋಲ) ಒಯ್ಯಕೂಡದ್ದಲ್ಲ

ಆದರೆ ಸದರಿ ಪರಿಶಿಷ್ಟದಲ್ಲಿ ತೋರಿಸಿದ ಕ್ಷೇತ್ರಗಳೊಳಗಿನ ಯಾವದೇ ಸ್ಥಳದಿಂದ ಮುಂಬಯಿ ನಗರದೊಳಗಿನ ಯಾವದೇ ಸ್ಥಳಕ್ಕೆ ಇದ್ದಲಿ ಒಯ್ಯಲು ಇಂಥ ಪರವಾನೆ ಬೇಡ.

ವಿವರಣೆ.— ಈ ಹುಕುಮಿನ ಸಂಬಂಧದಲ್ಲಿ—

(ಅ) "ಮುಂಬಯಿ ಉಪನಗರ ಜಿಲ್ಹೆ" ಅಂದರೆ ತಾ. ೧-೧೦-೧೯೪೫ರ ಮುನ್ನಾದಿನ (immediately before) ಸಂಘಟಿಸಲ್ಪಟ್ಟ ಮುಂಬಯಿ ಉಪನಗರ ಜಿಲ್ಹೆ ಎಂದು ತಿಳಿಯತಕ್ಕದ್ದು; ಮತ್ತು —

(ಬ) "ಠಾಣಾ ಜಿಲ್ಹೆ" ಎಂದರೆ ರೆವೆನ್ಯೂ ಖಾತೆಯವರು ತಾ ೨೬ ೯ ೧೯೪೫ಕ್ಕೆ ಹೊರಡಿಸಿದ ೯೮೨೩/೪೬-IIIನೇ ನಂಬರದ ಸರಕಾರಿ ಪ್ರಕಟನೆಯೊಳಗಿನ ಪರಿಶಿಷ್ಟದಲ್ಲಿ ಹೇಳಿರುವ ೪೬ ಗ್ರಾಮಗಳನ್ನು ಬಿಟ್ಟು ಇನ್ನುಳಿದ ಠಾಣಾ ಜಿಲ್ಹೆ ಎಂದು ತಿಳಿಯತಕ್ಕದ್ದು

ಪರಿಶಿಷ್ಟ

೧ ಮುಂಬಯಿ ನಗರ, ೨ ಮುಂಬಯಿ ಉಪನಗರ ಜಿಲ್ಹೆ, ೩ ಠಾಣಾ ಜಿಲ್ಹೆ, ೪ ಸುರತ ಜಿಲ್ಹೆ, ೫ ಭಡೋಚ ಜಿಲ್ಹೆ, ೬ ರತ್ನಾಗಿರಿ ಜಿಲ್ಹೆ, ೭ ಕಾನಡಾ ಜಿಲ್ಹೆ

೨ ಈ ಹುಕುಮಿನ ಉಲ್ಲಂಘನೆಯ ಅಪರಾಧದ ತನಿಖೆ ಮಾಡುವ ಯಾವದೇ ನ್ಯಾಯಾಧೀಶನು, ಯಾವ ಇದ್ದಲಿ ಯಾ ಉರುವಲದ ಸಂಬಂಧದಲ್ಲಿ ಈ ಹುಕುಮು ಮುರಿಯಲ್ಪಟ್ಟಿದೆಯೆಂದು ತನಗೆ ಮನವರಿಕೆಯಾಗುತ್ತದೋ ಅಂಥ ಇದ್ದಲಿ ಯಾ ಉರುವಲದ ಸಂಗ್ರಹವನ್ನು, ಅದರ ಆವರಣ ಪ್ರಾವರಣಗಳ ಸಹಿತ, ಸರಕಾರ ಜಪ್ತ ಮಾಡಲು ವಿಧಿಸಬಹುದು

ಹಿಂದುಸ್ಥಾನ ರಕ್ಷಣ ಕಾನೂನಿನ ೧೧೯ನೆಯ ನಿಯಮದ ೧ನೆಯ ಉಪನಿಯಮಕ್ಕನುಸಾರವಾಗಿ ಈ ಹುಕುಮನ್ನು ಈ ಕೆಳಗೆ ವಿವರಿಸಿದಂತೆ ಪ್ರಕಟಿಸಗೊಳಿಸತಕ್ಕದ್ದೆಂದು ಮುಂಬಯಿ ಸರಕಾರದವರು ವಿಧಿಸಿದ್ದಾರೆ.—

(ಅ) ಹುಕುಮನ್ನು ಮುಂಬಯಿ ಸರಕಾರದ ಗಾಝೆಟಿನಲ್ಲಿ ಪ್ರಕಟಿಗೊಳಿಸಿ,

(ಬ) ಹುಕುಮಿನ ಅಂಗಗಳನ್ನು ತಿಳಿಸಿ ಹೇಳುವಂತಹ ಪತ್ರಿಕಾ ಪ್ರಕಟನೆಯನ್ನು ಹೊರಡಿಸಿ,

(ಕ) ಹುಕುಮನ್ನು (ಯಾ ಅದರ ಅನುವಾದವನ್ನು) ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಗೊಳಿಸಿ—

(೧) ಟೈಮ್ಸ ಒಫ್ ಇಂಡಿಯಾ, (೨) ಮುಂಬಯಿ ಕ್ರಾನಿಕಲ್, (೩) ಫ್ರೀ ಪ್ರೆಸ್ ಜರ್ನಲ್, (೪) ನವಾ ಕಾಳ, (೫) ಕೇಸರಿ, (೬) ಮುಂಬಯಿ ಸಮಾಚಾರ, (೭) ವಿಶ್ವಾಮಿತ್ರ, (೮) ಗುಜರಾಥ ಸಮಾಚಾರ, (೯) ಆಮೇ ಜನಶೇವ, (೧೦) ವತನ, (೧೧) ಭಡೋಚ ಸಮಾಚಾರ, (೧೨) ಸಂಯುಕ್ತ ಕರ್ನಾಟಕ, (೧೩) ಕಾನಡಾವೃತ್ತ, (೧೪) ಸತ್ಯಶೋಧಕ ಮತ್ತು (೧೫) ಬಲವಂತ

(ಡ) ಹುಕುಮಿನ ಪ್ರತಿಗಳನ್ನು ಸಂಬಂಧಪಟ್ಟ ಜಿಲ್ಹೆಯೊಳಗಿನ ಮುಲ್ಕಿ ಕಚೇರಿಗಳಲ್ಲಿರುವ ನೋಟೀಸ-ಬೋರ್ಡಗಳಿಗೆ ಅಂಟಿಸಿ ಹಾಗೂ ಹೀಗೆ ಅವನ್ನು ಹಚ್ಚಿಟ್ಟ ಸಂಗತಿಯನ್ನು ಡಂಗುರ ಹೊಡೆದು ಸಾರ್ವಜನಿಕರಿಗೆ ತಿಳಿಸಿ, ಮತ್ತು

(ಇ) ಈ ಕೆಳಗೆ ಹೇಳಿರುವ ಸಂಘಗಳಿಗೆ ಹುಕುಮಿನ ಪ್ರತಿಗಳನ್ನು ಮುಟ್ಟಿಸಿ —

(೧) ರಿಟೇಲ ಚಾರಕೋಲ ಡೀಲರ್ಸ ಸಂಘ, ಶಾಮಜಿ ಚಾಳ ನಂ ೨, ಕೋಣೆ ನಂ ೬, ಸ್ಯಾಂಡರ್ಸ ಮಿಲ್ಲ ಗಲ್ಲಿ, ನ್ಯೂ ಪ್ರಭಾದೇವಿ ರಸ್ತೆ, ಮುಂಬಯಿ ೧೩ (೨) ಮುಂಬಯಿ ಚಾರಕೋಲ ಮರ್ಚಂಟ್ಸ ಸಂಘ, ಕೋಲ ಡಿಪೋ, ಸಿವಡಿ, ಮುಂಬಯಿ ೧೫, (೩) ಮುಂಬಯಿ ಸಬರ್ಬನ ರಿಟೇಲ ಚಾರಕೋಲ ಎಂಡ್ ಫಾಯರವುಡ್ ಡೀಲರ್ಸ ಸಂಘ, ಜುಹು ರಸ್ತೆ, ವಿಲೇಪಾರ್ಲೆ, ಮುಂಬಯಿ ಉಪನಗರ ಜಿಲ್ಹೆ, (೪) ಠಾಣಾ ಚಾರಕೋಲ ಎಂಡ್ ಫಾಯರವುಡ್ ಡೀಲರ್ಸ ಸಂಘ, ಠಾಣೆ, (೫) ಚಾರಕೋಲ ಎಂಡ್ ಫಾಯರವುಡ್ ಡೀಲರ್ಸ [illegible] ಸಂಘ, ಠಾಣೆ, (೬) ಚಾರಕೋಲ ಎಂಡ್ ಫಾಯರವುಡ್ ಡೀಲರ್ಸ ಸಂಘ, ಕಲ್ಯಾಣ (ಜಿ ಠಾಣೆ), (೭) ನವಸಾರಿ ಮತ್ತು ಬಲಸಾರ ಟಿಂಬರ, ಫಾಯರವುಡ್ ಎಂಡ್ ಚಾರಕೋಲ ಮರ್ಚಂಟ್ಸ ಸಂಘ, ಸ್ಟೇಶನ್ ರಸ್ತೆ, ಸುರತ, (೮) ಭಡೋಚ ಚಾರಕೋಲ ಮರ್ಚಂಟ್ಸ ಸಂಘ, ಕಾಯೇಢಿ ಬಝಾರ, ಭಡೋಚ, (೯) ಚಾರಕೋಲ ಮರ್ಚಂಟ್ಸ ಯೂನಿಯನ್, ಜಂಬುಸರ (ಜಿ ಭಡೋಚ).

ಮುಂಬಯಿ ಗವರ್ನರರ ಅಪ್ಪಣೆಯಿಂದ,

D. S. Bakhle, ಸೆಕ್ರೆಟರಿ

ಕುಮಟಾ ಮ್ಯುನಿಸಿಪಾಲಿಟಿಯ ಲೆಕ್ಕದ ವಿಶೇಷ ತಪಾಸಣೆ ಮಾಡಿ ತಪಾಸಕರು ಒಪ್ಪಿಸಿದ ವರದಿಯ ಕೆಲವು ಮಹತ್ವದ ಅಂಶಗಳೂ ಅವುಗಳಿಗೆ ಮ್ಯುನಿಸಿಪಾಲಿಟಿಯವರು ಕೊಟ್ಟ ಉತ್ತರಗಳೂ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

೭ ಈ ಹಿಂದೆ ೧೯೪೧–೪೨ರ ಲೆಕ್ಕ-ತಪಾಸಣೆಯ ವರದಿಯ ಕಲಮು ೧೮ರಲ್ಲಿ ನಮೂದಿಸಿರುವ ಸಂಗತಿಗಳ ಸಿವಾಯ ವಿಶೇಷ ತಪಾಸಣೆಯಲ್ಲಿ ಈ ಕೆಳಗೆ ನಮೂದಿಸಿದ ಸಂಶಯಾತ್ಮಕ ವಂಚನೆಗಳೂ, ತಾತ್ಪೂರ್ತಿಕವಾಗಿ ಹಣ ಬಳಸಿಕೊಂಡ ಸಂಗತಿಗಳೂ, ಲೆಕ್ಕ-ಪತ್ರಗಳಲ್ಲಿ ಕೈಚಳಕ ಮಾಡಿದ ಪ್ರಕರಣಗಳೂ ಕಂಡುಬಂದಿವೆ.–

(೧) ಹಣ ವಸೂಲ ಬಂದ ದಿನ, ಇಲ್ಲವೆ ಅದರ ಮಾರನೆಯ ಕಚೇರಿಯ ದಿನ, ಆ ದಿನದ ವಸೂಲಿಯ ಸಂಗ್ರಹ, ವಸೂಲ ಬಂದ ಪೂರ್ಣ ಹಣ ಮ್ಯುನಿಸಿಪಾಲಿಟಿಯ ಕಚೇರಿಯಲ್ಲಿ ಭರಣಾ ಮಾಡಿದ್ದು ಇರುವದಿಲ್ಲ ಕೆಲವೊಂದು ಹಣ ಕೆಲವು ದಿನಗಳ ಮಟ್ಟಿಗಾದರೂ ಕೈಯಲ್ಲೇ ಇಟ್ಟುಕೊಂಡದ್ದು ತೋರುತ್ತದೆ (ಈ ವರದಿಗೆ ಜೋಡಿಸಿದ ಅ ಪರಿಶಿಷ್ಟದಲ್ಲಿ ಕೊಟ್ಟ ಉದಾಹರಣಗಳನ್ನು ನೋಡಿರಿ) ಎಲ್ಲ ಬಗೆಯ ತೆರಿಗೆಗಳ ವಸೂಲಿಯ ಕ್ರಮವಲ್ಲಿ ಸರ್ವಸಾಮಾನ್ಯವಾಗಿ ಇದೇ ಬಗೆಯಾದದ್ದು ಕಂಡು ಬರುತ್ತದೆ, ಮತ್ತು ಮೇಲ್ಕಾಣಿಸಿದ ಪರಿಶಿಷ್ಟದಲ್ಲಿ, ಎದ್ದು ಕಾಣುವ ವಿಳಂಬದ (ವಿಳಂಬ ಮಾಡಿ ಹಣ ತುಂಬಿದ) ಪ್ರಕರಣಗಳನ್ನಷ್ಟೇ ಕೊಡಲಾಗಿದೆ

(೨) ಬ ಪರಿಶಿಷ್ಟದಲ್ಲಿ ಮನೆ ತೆರಿಗೆ, ವಾಹನ-ತೆರಿಗೆ ಮತ್ತು ಭಂಗಿ-ತೆರಿಗೆಯ ಪಾವತಿಗಳಲ್ಲಿ ಪ್ರಥಮತಃ ಬರೆದ ತಾರೀಕುಗಳನ್ನು ಅಳಿಸಿ ತಿದ್ದಿದ ಉದಾಹರಣೆಗಳನ್ನು ಕೊಡಲಾಗಿದೆ ಬಹಳಷ್ಟು ಪಾವತಿಗಳಲ್ಲಿ ಪ್ರಥಮತಃ ಬರೆದ ತಾರೀಕುಗಳನ್ನು ನಿಶ್ಚಯಾತ್ಮಕವಾಗಿ ಕಂಡು ಹಿಡಿಯಲಾಗದಷ್ಟು ಅಳಿದದ್ದೂ ತಿದ್ದಿದ್ದೂ ಇರುತ್ತದೆ ಹಲವಾರು ಪಾವತಿಗಳಲ್ಲಿ ಋಣ ಕೊಟ್ಟವರ ಹೆಸರುಗಳನ್ನು ಮತ್ತು ವಸೂಲ ಕೊಟ್ಟ ರಕಮುಗಳನ್ನು ಬರೆಯಲು ಉಪಯೋಗಿಸಿದ ಕಾರ್ಬನ-ಕಾಗದವೇ ಬೇರೆ, ತಾರೀಕುಗಳನ್ನು ಬರೆಯಲು ಉಪಯೋಗಿಸಿದ ಕಾರ್ಬನ ಕಾಗದವೇ ಬೇರೆ ಹೀಗಾಗಿದೆ

(೩) ತಾ. ೯–೪ ೧೯೪–ನೇಗೆ ವಾಹನ-ತೆರಿಗೆ ವಸೂಲಿಯ ೨೫ನೇ ಪುಸ್ತಕದ ೨೩ನೆಯ ಪಾವತಿ ಕೊಟ್ಟು ವಸೂಲ ಮಾಡಿದ ರೂ ೨ನ್ನು ಅದೇ ದಿನ ತೆರಿಗೆಗಳ ವಸೂಲಿಯ ರಜಿಸ್ಟರದಲ್ಲಿ ಜಮಾ ಮಾಡಲಾಗಿದೆ ಆದರೆ ಮುಂದಿನ ವ್ಯವಹಾರಗಳನ್ನು ಬರೆಯಲು ಅದರಲ್ಲಿ ಸ್ಥಳವಿದ್ದಿಲ್ಲವಾದ್ದರಿಂದ ತಾ ೨೭–೪ ೧೯೪೨ರಿಂದ ತಾ ೧೧–೮–೧೯೪೨ರ ವರೆಗಿನ ವ್ಯವಹಾರಗಳನ್ನು ಸರಿಯಾಗಿ ಕಟ್ಟಿಟ್ಟ ಪುಸ್ತಕದಲ್ಲಿ ಬರೆಯದೆ ಬಿಡಿ ಹಾಳೆಗಳ ಮೇಲೆ ಬರೆದಿಟ್ಟಿದ್ದಾರೆ. ಹಳೆಯ ವಸೂಲಿಯ ರಜಿಸ್ಟರದಲ್ಲಿ ತಾ ೯–೪–೪೨ಕ್ಕೆ ದಾಖಲಿಸಿದ ಕೊನೆಯ ಪಾವತಿಯು ವಾಹನ-ತೆರಿಗೆ ವಸೂಲಿಯ ೨೫ನೆಯ ಪುಸ್ತಕದ ೨೩ನೆಯ ಪಾವತಿಯಾಗಿರುವದರಿಂದ, ಆ ಮುಂದಿನ ಪಾವತಿಗಳಂತೆ, ಅಂದರೆ ೨೪ನೆಯ, ೨೫ನೆಯ, ೨೬ನೆಯ ವಗೈರೆ ಪಾವತಿಗಳಂತೆ ವಸೂಲ ಬಂದ ಹಣವನ್ನು (ಸದರಿ) ಬಿಡಿ ಹಾಳೆಗಳಲ್ಲಿ ನಮೂದಿಸಬೇಕಾಗಿತ್ತು ಆದರೆ ತಾ ೨೮–೪–೪೨ ಮತ್ತು ೧೮–೫–೪೨ರ ನಡುವೆ ೨೫ನೆಯ ಪುಸ್ತಕದ ೫೮ರಿಂದ ೬೩ನೆಯ ವರೆಗಿನ ಪಾವತಿಗಳನ್ನು ಕೊಟ್ಟು ವಸೂಲ ಮಾಡಿದ ಹಣವಷ್ಟೇ ನಮೂದಾಗಿದೆ ಅದರಿಂದ ತಾ ೨೮–೪–೧೯೪೨ರ ಮೊದಲು ೨೪ರಿಂದ ೫೭ನೆಯ ವರೆಗಿನ ಪಾವತಿಗಳಂತೆ ವಸೂಲಾದ ಹಣ ಮ್ಯುನಿಸಿಪಲ್ ನಿಧಿಯಲ್ಲಿ ಜಮಾ ಆಗಲೇ ಇಲ್ಲೆಂಬಂತೆ ತೋರುತ್ತದೆ ತಾ ೨೮–೪–೧೯೪೨ ಮತ್ತು ೧೧–೮–೪೨ರ ನಡುವೆ ಬಿಡಿ ಹಾಳೆಗಳಲ್ಲಿ ನಮೂದಿಸಿದ ವ್ಯವಹಾರಗಳನ್ನು ಹಿಂದಿನಿಂದ ಕಟ್ಟಿ ತಯಾರಿಸಿದ ತೆರಿಗೆ ರಜಿಸ್ಟರದಲ್ಲಿ ಇಳಿಸಿಕೊಂಡಿದ್ದಾರೆ ಆದರೆ ಹೀಗೆ ಮಾಡುವಾಗ ೨೫ನೆಯ ಪಾವತಿ ಪುಸ್ತಕದ ೫೮ರಿಂದ ೬೩ನೆಯ ವರೆಗಿನ ಪಾವತಿಗಳ ಬದಲು ಅದೇ ಪುಸ್ತಕದ ೨೪ರಿಂದ ೨೯ನೆಯ ಪಾವತಿಗಳನ್ನು ನಮೂದಿಸಿದ್ದಾರೆ (ಈ ವರದಿಗೆ ಜೋಡಿಸಿದ ಕ ಪರಿಶಿಷ್ಟದ ೪ನೇ ಮತ್ತು ೯ನೇ ರಕಾನೆಗಳನ್ನು ನೋಡಿರಿ) ತಾ ೧೮–೫–೧೯೪೨ನೇಗೆ ಬಿಡಿ ಹಾಳೆಗಳಲ್ಲಿ ನಮೂದಿಸಿದ ಕೊನೆಯ ಪಾವತಿಯು ೨೫ನೆಯ ಪಾವತಿ ಪುಸ್ತಕದ ೬೩ನೆಯ ಪಾವತಿಯಾಗಿರುವದರಿಂದ ೩೦ರಿಂದ ೬೨ನೆಯ ವರೆಗಿನ ಪಾವತಿಗಳು ತಾ ೧೮–೫–೪೨ರ ಮುಂಚೆ ಕೊಟ್ಟಿರಬೇಕು ಆದರೆ ಆ ಪಾವತಿಗಳಂತೆ ವಸೂಲಾದ ಹಣವನ್ನು, ವಾಸ್ತವಿಕವಾಗಿ ಸದರಿ ಪಾವತಿಗಳೊಳಗಿದ್ದ ತಾರೀಕುಗಳನ್ನು ಅಳಿಸಿ ಮತ್ತು ತಿದ್ದಿ ಬದಲಾಯಿಸಿ, ತಾ ೧೬–೯–೧೯೪೨ನೇಗೆ ಮ್ಯುನಿಸಿಪಲ್ ನಿಧಿಗೆ ಜಮಾ ಮಾಡಿದ್ದಾರೆ

(೪) ತಾ. ೧೯–೩–೪೨ಕ್ಕೆ ವಸೂಲ ಬಂದ ಅಂತು ನೋಟೀಸ ಫೀ ೧ ಆಣೆಯಿರುತ್ತದೆ. ಆದರೆ ಆ ದಿನ ೭ ಆಣೆ ಮ್ಯುನಿಸಿಪಲ್ ನಿಧಿಗೆ ಜಮಾ ಮಾಡಿದ್ದಾರೆ

(೫) ತಾ ೨೧–೩–೪೨ಕ್ಕೆ ವಸೂಲ ಬಂದ ಅಂತು ನೋಟೀಸ ಫೀ ೧೦ ಆಣೆಯಿರುತ್ತದೆ ಆದರೆ ಮ್ಯುನಿಸಿಪಲ್ ನಿಧಿಗೆ ೩ ಆಣೆ ಮಾತ್ರ ಜಮಾ ಮಾಡಿದ್ದಾರೆ

(೬) ತಾ ೧೨–೮–೪೨ಕ್ಕೆ ಮನೆತೆರಿಗೆ ಖಾತೆಯಲ್ಲಿ ೭ ಆಣೆ ಹೆಚ್ಚಿಗೆ ಜಮಾ ಆಗಿದೆ

(೭) ತಾ ೯–೪–೪೨ಕ್ಕೆ ಮನೆತೆರಿಗೆ ಪಾವತಿ-ಪುಸ್ತಕದ ೮೫ನೆಯ ಪಾವತಿಯಂತೆ ವಸೂಲಾದ ರೂ ೧ ೧ ೦ರಲ್ಲಿ ತಾ ೧೦–೪–೪೨ಕ್ಕೆ ಬರೇ ೧ರೂ. ಮ್ಯುನಿಸಿಪಲ್ ನಿಧಿಗೆ ಜಮಾ ಆಗಿದೆ. ಇನ್ನುಳಿದ ೧ ಆಣೆಯನ್ನು ತಾ. ೧೬–೯–೪೨ಕ್ಕೆ ಜಮಾ ಮಾಡಿದ್ದಾರೆ

(೮) ತಾ ೨೮-೪-೪೨ಕ್ಕೆ ಮನೆತೆರಿಗೆ ಪಾವತಿ-ಪುಸ್ತಕದ ೮೦ನೇ ಪಾವತಿಯಂತೆ ವಸೂಲಾದ ರೂ. ೪-೬-೦ರಲ್ಲಿ ತಾ ೩೦ ೪-೧೯೪೨ಕ್ಕೆ ಬರೇ ರೂ ೪-೪-೦ ಮ್ಯುನಿಸಿಪಲ್ ನಿಧಿಗೆ ಜಮಾ ಆಗಿದೆ. ಇನ್ನುಳಿದ ೨ ಆಣೆ ತಾ ೧೬ ೯–೪೨ಕ್ಕೆ ಜಮಾ ಮಾಡಲ್ಪಟ್ಟಿದೆ

ಈ ಸಂಬಂಧದಲ್ಲಿ ೧೯೪೧—೪೨ನೇ ಸಾಲಿನ ಲೆಕ್ಕ-ತಪಾಸಣೆ ವರದಿಯೊಳಗಿನ ಕಲಂ ೧೮ (ಕ)ದೆಡೆಗೂ ತಾ ೧೮-೧ ೧೯೪೩ಕ್ಕೆ ಈ ಕಚೇರಿಯಿಂದ ಜಾವಕ ನಂ. L 18/34 A 1165 ಹಾಕಿ ಕಳಿಸಿದ ನಮ್ಮ ತಪಾಸಣೆ-ಟಿಪ್ಪಣಿಯ ಕಡೆಗೂ ಲಕ್ಷ್ಯ ಪೂರೈಸಬೇಕಾಗಿ ಸೂಚನೆಯುಂಟು. ತೆರಿಗೆ-ವಸೂಲಿಯ ಮೇಲೆ ಲೆಕ್ಕ ಕೊಡುವದರ ಮೇಲೂ ಸೆಕ್ರೆಟರಿಯ ಮೇಲ್ವಿಚಾರಣೆಯು ಇಲ್ಲದ್ದರಿಂದಲೇ ಇಂಥ ದೊಡ್ಡ ಅಕ್ರಮಗಳಾಗಿವೆಯೆಂದು ಸದರಿ ಎರಡೂ ಟೀಪಣೆಗಳಲ್ಲಿ ತೋರಿಸಿ ಕೊಡಲಾಗಿದೆ ಮ್ಯುನಿಸಿಪಾಲಿಟಿಯ ನಿಯಮಾವಳಿಯ ೧೧೧ನೆಯ ನಿಯಮದಲ್ಲಿ ವಸೂಲಿ ಕಾರಕೂನನು ತನ್ನ ಕಡೆ ವಸೂಲ ಬಂದ ಹಣವನ್ನೂ ಪಾವತಿ ಪುಸ್ತಕಗಳನ್ನೂ ಮ್ಯು||ಯ ಸೆಕ್ರೆಟರಿಯ ಕಡೆಗೆ ಕೊಡತಕ್ಕದ್ದೆಂದೂ ಸೆಕ್ರೆಟರಿಯು ಆ ಎಲ್ಲ ಹಣ ಸರಿಯಾಗಿ ಲೆಕ್ಕದಲ್ಲಿ ಜಮಾ ಮಾಡುವ ವ್ಯವಸ್ಥೆ ಮಾಡತಕ್ಕದ್ದೆಂದೂ ವಿಧಿಸಲಾಗಿದೆ, ಅದಲ್ಲದೆ, ಪಾವತಿ ಪುಸ್ತಕಗಳನ್ನು ತಿರುಗಿ ಕಾರಕೂನರ ಕಡೆ ಕೊಡುವಾಗ, ಹಣ ಜಮಾ ಬಂದ ಸಂಗತಿಯನ್ನು ಉಪಯೋಗಿಸಿದ ಕೊನೆಯ ಪಾವತಿಯ ಸ್ಥಳಪ್ರತಿಯ ಮೇಲೆ ಸೆಕ್ರೆಟರಿಯು ನಮೂದಿಸಿ, ಆ ಪಾವತಿಯ ಕ್ರಮಾಂಕವನ್ನು ಲೆಕ್ಕದಲ್ಲೂ ನಮೂದಿಸತಕ್ಕದ್ದಿರುತ್ತದೆ ಈ ನಿಯಮದಂತೆ ಸೆಕ್ರೆಟರಿಯು ನಡೆಯುತ್ತಿಲ್ಲ; ತಾ ೧೮ ೪-೪೨ರಿಂದ ತಾ ೧೦-೫-೪೨ರ ವರೆಗೆ ಸೆಕ್ರೆಟರಿಯು ಕೆಲಸ ಮಾಡಿದ ಕಚೇರಿಯ ಕಾರಕೂನ ರಾ|| ಜಿ ಎ ಶಾನಭಾಗರೂ ನಡೆದಿರುವದಿಲ್ಲ ೨೫ನೆಯ ವಾಹನತೆರಿಗೆ-ಪಾವತಿ-ಪುಸ್ತಕದ ೨೩ನೆಯ ಪಾವತಿಯ ನಂತರ ಅದೇ ಪುಸ್ತಕದ ೫೮ನೆಯ ಪಾವತಿಯನ್ನು ವಸೂಲಿ ರಜಿಸ್ಟರದಲ್ಲಿ ನಮೂದಿಸುವಾಗ, ನಡುವಿನ ಅಂದರೆ ೨೪ರಿಂದ ೫೭ನೆಯ ವರೆಗಿನ ಪಾವತಿಗಳಂತೆ ವಸೂಲಾದ ವಾಹನ-ತೆರಿಗೆ ಹಣ, ೫೮ನೆಯ ಪಾವತಿಯ ಹಣ ಜಮಾ ಆದ ತಾರೀಕಿನ ಮುಂಚೆ ಮ್ಯುನಿಸಿಪಲ್ ನಿಧಿಗೆ ಜಮಾ ಆಗಿದೆಯೋ ಹ್ಯಾಗೆಂಬದನ್ನು ಸೆಕ್ರೆಟರಿಯ ಕೆಲಸ ಮಾಡುತ್ತಿದ್ದ ರಾ|| ಜಿ ಎ ಶಾನಭಾಗರು ನೋಡಿಕೊಳ್ಳಬೇಕಾಗಿತ್ತು, ಮತ್ತು ಆ ಹಣ ಮ್ಯು||ಯಲ್ಲಿ ಯಾಕೆ ಜಮಾ ಆಗಲಿಲ್ಲೆಂಬುದರ ಚೌಕಶಿಯನ್ನೂ ಮಾಡಬೇಕಿತ್ತು, ಅದಲ್ಲದೆ ತಾ ೧೧-೫-೪೨ರಿಂದ ೩-೬ ೪೨ರ ವರೆಗೆ ಹಾಗೂ ತಾ ೫-೬-೪೨ರಿಂದ ತಾ ೧೧-೬-೪೨ರ ವರೆಗೆ ಸೆಕ್ರೆಟರಿಯು ವಸೂಲಿ ರಜಿಸ್ಟರದಲ್ಲಿ ಸಹಿಗಳನ್ನು ಮಾಡಿರುವದಿಲ್ಲ ಜನರಲ್ ಬೋಡಿಯವರು ಈ ಪ್ರಕರಣದಲ್ಲಿ ಅಪರಾಧಿಯಾಗಿ ಕಂಡುಬಂದವರ ವಿರುದ್ಧ ಸ್ವತಃ (departmentally) ಕೊಂಡ ಕ್ರಮದಿಂದ ಸಮಾಧಾನವಾಗದ್ದರಿಂದ, ಈ ಅಪರಾಧದ ಚೌಕಶಿ ಮಾಡುವ ಅಧಿಕಾರ ಪೋಲೀಸರಿಗೆ ಇರುವ ಕಾರಣ, ಇದೇ ಪ್ರಕರಣವನ್ನು ಪೋಲೀಸರ ಕಡೆ ಚೌಕಶಿಗಾಗಿ ಒಪ್ಪಿಸಬೇಕೆಂದು ಮೆ|| ಕಲೆಕ್ಟರ ಸಾಹೇಬ, ಕಾನಡಾ ಇವರು ಅಧ್ಯಕ್ಷರಿಗೆ ತಿಳಿಸಿದ್ದಾರೆ ಈ ಪ್ರಕರಣದಲ್ಲಿ ಮ್ಯು||ಯವರು ಸ್ವತಃ ಕೊಂಡ ಕ್ರಮದ ಸಂಬಂಧದಲ್ಲಿ ಹೇಳುವದಾದರೆ, ತಾ ೫–೧೨ ೪೩ಕ್ಕೆ ಜನರಲ್ ಬೋಡಿಯವರು ಮಾಡಿರುವ ಗೊತ್ತುವಳಿಯ ಒಂದು ಭಾಗಕ್ಕೆ ಏನೂ ಬೆಲೆಯಿಲ್ಲ ಗೊತ್ತುವಳಿಯ ಆ ಭಾಗದಲ್ಲಿ ತನ್ನ ಸಂಬಳದ ಪ್ರಮಾಣದ ಪರಮಾವಧಿಯನ್ನು ಈ ಹಿಂದೆಯೇ ಮುಟ್ಟಿರುವ ಸೆಕ್ರೆಟರಿಗೆ ೧ ವರ್ಷ ಬಡತಿ ಕೊಡತಕ್ಕದ್ದಲ್ಲವೆಂದು ಹೇಳಲಾಗಿದೆ! ಸೆಕ್ರೆಟರಿಯ ಸಂಬಂಧದಲ್ಲಿ ಒಂದು ವರ್ಷದ ಬಡತಿಯನ್ನು ಕಡಿತ ಮಾಡತಕ್ಕದ್ದೆಂದು ಜನರಲ್ ಬೋಡಿಯವರ ಉದ್ದೇಶವಿತ್ತೋ ಹೇಗೆಂಬುದನ್ನು ಈಗ ಸ್ಪಷ್ಟೀಕರಣ ಮಾಡಿಸಿಕೊಳ್ಳಬೇಕು

ಮ್ಯು|| ಯ ಉತ್ತರ.— ನಮ್ಮ ಕಚೇರಿಯಿಂದ ತಾ ೬-೩-೧೯೪೩ಕ್ಕೆ ಬರೆದ ೭೯೮ನೇ ಪತ್ರದಲ್ಲಿ ತಿಳಿಸಿದಂತೆ ಮ್ಯು||ಯವರು ಸ್ವತಃ ಈ ಹಿಂದೆ ಕೊಂಡ ಕ್ರಮದ ವಿವರ ಹಿಂದಿನ ಲೆಕ್ಕ ತಪಾಸಣೆಯ ವರದಿಯಲ್ಲೂ ಪ್ರಸ್ತುತ ಲೆಕ್ಕ-ತಪಾಸಣೆಯ ವರದಿಯಲ್ಲೂ ಕಾಣಿಸಿದ (ವಂಚನೆ ವಗೈರೆ) ಆರೋಪಗಳನ್ನು ಕುರಿತು ಬಿಲ-ವಸೂಲಿಯ ಕಾರಕೂನನ ವಿರುದ್ಧ ರೆಸಿಡೆಂಟ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಫೌಜದಾರಿ ಖಟ್ಲೆ ಮಾಡಿ ಕೊಟ್ಟಿತ್ತು ಆ ಖಟ್ಲೆಯ ನಿಕಾಲಿ ಇತ್ತೀಚೆಗೆ ಅಂದರೆ ತಾ. ೨೭-೮-೧೯೪೫ಕ್ಕೆ ಆಗಿದ್ದು ಮೆಜಿಸ್ಟ್ರೇಟರು ಎಲ್ಲ ಆರೋಪಗಳನ್ನು ತಿರಸ್ಕರಿಸಿ ಸದರಿ ಕಾರಕೂನನನು ನಿರ್ದೋಷಿಯಿರುತ್ತಾನೆಂದು ತೀರ್ಮಾನಿಸಿದ್ದಾರೆ ಕಾರಣ ಇನ್ನೇನೂ ಇಲಾಜು ಮಾಡುವದು ಅನವಶ್ಯಕವಿರುತ್ತದೆ

ನೋಟೀಸ-ಫೀ ವಸೂಲಿಯ ಬಾಬತು ಮ್ಯು||ಗೆ ಕಡಿಮೆ ಹಣ ಭರಣಾ ಮಾಡಿದ ೮.೧ನ್ನು ಕಾರಕೂನನು ತಾ ೭-೯-೪೫ಕ್ಕೆ ಜಮಾ ಮಾಡಿದ್ದಾನೆ; ಹಾಗೂ ಮನೆ-ತೆರಿಗೆಯ ಬಾಬತು ಅವನು ಹೆಚ್ಚಿಗೆ ಭರಣಾ ಮಾಡಿದ ೭ ಆಣೆ ಹಣವನ್ನು ಅವನಿಗೆ ತಿರುಗಿ ಕೊಡಬೇಕಾಗಿ ಮೆನೇಜಿಂಗ ಕಮಿಟಿಯವರು ತಾ ೧೦-೯-೪೫ಕ್ಕೆ ಕೂಡಿದ ಸಭೆಯಲ್ಲಿ ಠರಾಯಿಸಿದ್ದಾರೆ.

ಒಂದು ವರ್ಷದ ಮಟ್ಟಿಗೆ ಸೆಕ್ರೆಟರಿಗೆ ಸಿಗತಕ್ಕ ಬಡತಿಯನ್ನು ನಿಲ್ಲಿಸಬೇಕೆಂದು ತಾ. ೫-೧೨-೧೯೪೩ಕ್ಕೆ ಜನರಲ್ ಬೋಡಿಯವರು ಮಾಡಿದ ೧೯೨ನೇ ನಂಬರದ ಗೊತ್ತುವಳಿಯಲ್ಲಿ ಠರಾಯಿಸಿದ್ದರ ಖುಲಾಸೆ ಮಾಡುವದಕ್ಕಾಗಿ ತಾ ೧೧-೯-೧೯೪೫ನೇಗೆ ಸಭೆ ಸೇರಿದ ಜನರಲ್ ಬೋಡಿಯವರು, ಸೆಕ್ರೆಟರಿಗೆ ೧೯೪೫ನೇ ಇಸವಿಯ ಸಪ್ಟಂಬರದಿಂದ ಸಿಗತಕ್ಕ ಸಂಬಳದಲ್ಲಿ ಒಂದು ವರ್ಷದ ವರೆಗೆ ಪ್ರತಿ ತಿಂಗಳಿಗೆ ರೂ. ೨ರಂತೆ ಕೊಟ್ಟ ಬಡತಿಯ ರೂ ೨ ಕಡಿಮೆ ಮಾಡಬೇಕಾಗಿ ಒಮ್ಮತದಿಂದ ತೀರ್ಮಾನಿಸಿದ್ದಾರೆ

೯ ತಾ ೩೧-೩-೪೨ಕ್ಕೆ ಈ ಕೆಳಗೆ ಕಾಣಿಸಿದೆ. ಮ್ಯುನಿಸಿಪಲ್ ಸಭಾಸದರಿಂದ ಬರತಕ್ಕ ತೆರಿಗೆ ಬಾಕಿಯಿತ್ತು...

ಹೆಸರು	ತಾ. ೩೧-೩-೪೨ಕ್ಕೆ ಬರತಕ್ಕ ಬಾಕಿ ರೂ	ಶರಾ.
(೧) ರಾ|| ಎಫ್ ಎಕ್ಸ ಅಲ್ಮೇಡಾ	೨-೧೪-೦	ರೂ ೧ ತಾ. ೨೫-೨-೪೩ಕ್ಕೆ ವಸೂಲ ಬಂದಿದೆ.
(೨) „ ಶಿವಪ್ಪ ಶೆಟ್ಟಿ	೦-೯-೦	ತಾ ೨೫ ೨-೪೩ಕ್ಕೆ ವಸೂಲಾಗಿದೆ.
(೩) „ ರಘು ಯಾನೆ ಶ್ರೀನಿವಾಸ ಶಾನಭಾಗ	೮-೧೧-೦	ತಾ. ೨೧-೩-೪೩ಕ್ಕೆ ವಸೂಲಾಗಿದೆ.

ಮ್ಯು||ಯ ಉತ್ತರ— ರಾ|| ಅಲ್ಮೇಡಾ ಇವರು ತಮ್ಮ ಬಾಕಿ ತಾ ೨೦-೩-೪೩ಕ್ಕೆ ವಸೂಲ ಕೊಟ್ಟಿದ್ದಾರೆ

ಜಿಲ್ಲಾ ಮ್ಯು||ಗಳ ಕಾಯದೆಯಂತೆ ಈ ಸದಸ್ಯರಿಗೆ ಕೊಡತಕ್ಕ ವಿಶೇಷ ನೋಟೀಸನ್ನು ಕೊಟ್ಟಿಲ್ಲ ರಾ|| ಅಲ್ಮೇಡಾ ಇವರ ಸಂಬಂಧದಲ್ಲಾದರೂ ಬೇಗನೇ ಅವಶ್ಯವುಳ್ಳ ಕ್ರಮ ನಡಿಸಬೇಕು.

೧೦ (ಅ) ತೆರಿಗೆ ಆಕರಣಿ ಸಮಿತಿಯವರು ಠರಾಯಿಸಿದ ಬಾಡಿಗೆ ಮಾನವನ್ನು ಇಳಿಸುವಾಗ ಮೆನೇಜಿಂಗ ಕಮಿಟಿಯವರು ಹೀಗೆ ಮಾಡಲು ಕಾರಣಗಳೇನೆಂಬುದನ್ನು ತೋರಿಸಿಲ್ಲ ಅದರಿಂದ ಭಾಡಿಗೆ ಮಾನ ಹಾಗೆ ಇಳಿಸಿದ್ದು ನ್ಯಾಯ್ಯವಿತ್ತೋ ಹ್ಯಾಗೆ ಎಂಬುದನ್ನು ಲೆಕ್ಕ-ತಪಾಸಣೆಯ ಕಾಲಕ್ಕೆ ತಿಳಿದುಕೊಳ್ಳಲು ಮಾರ್ಗವಿದ್ದಿಲ್ಲ. ಇನ್ನು ಮುಂದೆ ಹೀಗೆ ಭಾಡಿಗ ಮಾನ ಇಳಿಸುವಾಗ ಕಾರಣಗಳನ್ನು ಕೊಡುವದೊಳಿತು ಕಮಿಟಿಯವರು ಇದರ ವಿಚಾರ ಮಾಡತಕ್ಕದ್ದು.

(ಬ) ೧೯೪೧–೪೨ರಲ್ಲಿ E/20 ನಂಬರವುಳ್ಳ ಮನೆಯ ವಾರ್ಷಿಕ ಭಾಡಿಗೆ ಮಾನವು ರೂ ೯೬ ಇತ್ತು, ೧೯೪೨-೪೩ರ ಬಗ್ಗೂ ಅದೇ ಭಾಡಿಗೆ ಮಾನ ಹಿಡಿಯಲ್ಪಟ್ಟಿತ್ತು ಆದರೆ ಸದರಿ ಮನೆ ತಿಂಗಳೊಂದರ ರೂ. ೪ರಂತೆ ಯಾವನೋ ಒಬ್ಬ ಶಿಕ್ಷಕನಿಗೆ ಭಾಡಿಗೆಗೆ ಕೊಟ್ಟದೆಯೆಂದು ಮನೆಯ ಮಾಲೀಕನು ಅರ್ಜ ಮಾಡುತ್ತಲೇ ಈ ಬಗ್ಗೆ ಚೌಕಶಿ ಮಾಡಿ ವರದಿಯನ್ನೊಪ್ಪಿಸಲು ಮೆನೇಜಿಂಗ ಕಮಿಟಿಯವರು ಸೆಕ್ರೆಟರಿಗೆ ತಿಳಿಸಿದರು ಮನೆಯ ಅರ್ಧಾಂಶ ಮಾತ್ರ ತಿಂಗಳೊಂದರ ರೂ ೪ರಂತೆ ಭಾಡಿಗೆ ಮಾಲು ಮಾಡಿ ಓರ್ವ ಶಿಕ್ಷಕನಿಗೆ ಭಾಡಿಗೆಗೆ ಕೊಟ್ಟಿರುತ್ತದಾಗಿಯೂ ಇನ್ನುಳಿದ ಅರ್ಧಾಂಶದಲ್ಲಿ ಮನೆ-ಮಾಲೀಕನೇ ಸ್ವತಃ ಇರುತ್ತಾನಾಗಿಯೂ ತಾ ೨-೨-೧೯೪೩ಕ್ಕೆ ಸೆಕ್ರೆಟರಿಯು ವರದಿ ಮಾಡಿದನು ಹೀಗೆ ಸೆಕ್ರೆಟರಿಯು ಸ್ಪಷ್ಟ ವರದಿ ಮಾಡಿದಾಗ್ಯೂ, ಮೆನೇಜಿಂಗ ಕಮಿಟಿಯವರು ೧೯೪೨-೪೩ನೇ ವರ್ಷದ ಬಗ್ಗೆ ತಿಂಗಳೊಂದರ ರೂ ೪ ಮಾಸಿಕ ಭಾಡಿಗೆ ಸಿಗುತ್ತದೆಂದು ಗ್ರಹಿಸಿ ಆ ಮನೆಯ ವಾರ್ಷಿಕ ಭಾಡಿಗೆ-ಮಾನವನ್ನು ರೂ. ೪೮ ಹಿಡಿಯಬೇಕೆಂದು ಠರಾಯಿಸಿದರು ೧೯೪೨-೪೩ನೇ ಸಾಲಿನ ಬಗ್ಗೆ ಆ ಮನೆಯ ಭಾಡಿಗೆ-ಮಾನವನ್ನು ರೂ ೯೬ ಎಂದೇ ಹಿಡಿದು ಮನೆತೆರಿಗೆ ಆಕರಣಿ ಮಾಡಿ, ಹೆಚ್ಚಿಗೆ ಒಕರಣಿಯಾಗಬೇಕಾದ ಮನೆ-ತೆರಿಗೆಯನ್ನು ವಸೂಲ ಈಗ ಮಾಡಬೇಕಾಗಿರುತ್ತದೆ

ಮ್ಯು||ಯ ಉತ್ತರ:- (ಅ) ಸೂಚನೆ ಸ್ವೀಕೃತ ಮಾಡಲಾಗಿದೆ

(ಬ) ೧೯೪೩ರ ಡಿಸೆಂಬರ ತಿಂಗಳಿಂದ ಇಡೀ ಮನೆಯನ್ನು ಮನೆಯ ಮಾಲೀಕರೇ ಉಪಯೋಗಿಸಿಕೊಳ್ಳುತ್ತಿರುವದರಿಂದ ೧೯೪೪-೪೫ನೇ ಸಾಲಿನ ಬಗ್ಗೆ ಮನೆಯ ವಾರ್ಷಿಕ ಭಾಡಿಗೆ-ಮಾನ ರೂ ೬೦ ಹಿಡಿದು ತೆರಿಗೆ ಆಕರಣಿ ಮಾಡಲ್ಪಟ್ಟಿದೆ ಆದ್ದರಿಂದ ಈ ತಕ್ರಾರು ಬಿಟ್ಟುಕೊಡಬೇಕಾಗಿ ಅಪೇಕ್ಷೆಯುಂಟು

ಕುಮಟಾ,
– ೪ ೪೬

Govind V. Pai,
President,
Municipality, Kumta

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ಕಳುಹುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕಳಬೇಕು.
ವರ್ಗಣಿಯು ಮುಂಗಡ ಕೊಟ್ಟುಕೊಳ್ಳಲ್ಪಡುವದು

Reg. No. B 1270. Monday, 29th April, 1946.

ಕಾನಡಾವೃತ್ತ

ವರ್ಷ ೨೬.] THE KANARA NEWS. [ಸಂಚಿಕೆ ೪೩.

ಕುಮಟಾ:- ಸೋಮವಾರ, ತಾ. ೨೯ ಮಾಹೆ ಏಪ್ರಿಲ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಕಿಸ್ತಲವಾಗ್ಯಾಗ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು

ತ್ರಿಮೂರ್ತಿಗಳ ತಾಕಲಾಟ !

(ನಿರೀಕ್ಷಕನು ಬರೆದುದು)

ಬ್ರಿಟಿಶ ಮಂತ್ರಿಮಂಡಳದ ತ್ರಿಮೂರ್ತಿಗಳು ದಿಲ್ಲಿಗೆ ಬಂದು ಈಗ ೧ ತಿಂಗಳಾಗಿ ಹೋಯಿತು. ಈಸ್ಟರ ಹಬ್ಬದಲ್ಲಿ ಕಾಶ್ಮೀರದೊಳಗೆ ವಿಶ್ರಾಂತಿ ಪಡೆಯಲು ಅವರು ಹೋಗುವ ಮುಂಚೆಯೇ ತಮ್ಮ ರಾಜ್ಯಯೋಜನೆಯನ್ನು ಪ್ರಕಟಿಸುವರೆಂದು ಹಿಂದೆ ಎಣಿಸಲ್ಪಟ್ಟಿತ್ತು. ಕಾಶ್ಮೀರದಿಂದ ಮರಳಿ ಬಂದ ಮೇಲೆ ಅವರ ಯೋಜನೆ ಪ್ರಕಟವಾಗುವದಾಗಿ ಹಿಂದಿನಿಂದ ಪುನಃ ಪ್ರಕಟವಾಯಿತು. ಆದರೆ ಇನ್ನೂ ಯಾವದೇ ಯೋಜನೆ ಪ್ರಕಟವಾಗಲಿಲ್ಲವು ! ಈ ವಿಳಂಬ ನೋಡಿದರೆ ಯಾವದೇ ಹೊಸ ರಾಜ್ಯಯೋಜನೆ ಮಾಡದ ತ್ರಿಮಂತ್ರಿಗಳು ಬಂದ ಹಾದಿಯಿಂದ ಹಿಂತಿರುಗಬಹುದೇನೆಂಬವೊಂದು ಭೀತಿಯುಂಟಾಗಿದೆ. ಆದರೆ ಅಂಥ ದುರ್ಧರ ಪ್ರಸಂಗ ಬರಲಿಕ್ಕಿಲ್ಲವಾಗಿ ರಾಷ್ಟ್ರಸಭೆಯ ಅಧ್ಯಕ್ಷ ಮೌ॥ ಅಬುಲ ಕಲಾಮ ಆಝಾದರವರು ನಂಬಿಗೆ ಕೊಡುತ್ತಾರೆ. ಕಾಶ್ಮೀರದಲ್ಲಿರುವಾಗ ತ್ರಿಮಂತ್ರಿಗಳು ಲಂಡನದೊಳಗಿರುವ ಬ್ರಿಟಿಶ ಸರಕಾರದೊಡನೆ ಆಲೋಚನೆ ಮಾಡುತ್ತಿದ್ದರೆಂದೂ, ಆ ಬಗ್ಗೆ ದಿನಾ ೨ ತಾಸು ಆ ಕಡೆಯ ಟೆಲಿಫೋನು ಕಾದಿರಲ್ಪಡುತ್ತಿತ್ತೆಂದೂ ಸುದ್ದಿಯಿದೆ. ತ್ರಿಮಂತ್ರಿಗಳು ರಾಷ್ಟ್ರೀಯ ಸಭೆಯೊಡನೆ ಬಹಳ ಸಲಿಗೆಯಿಂದ ನಡೆಕೊಳ್ಳುವದರ ಮೇಲಿಂದ ರಾಷ್ಟ್ರೀಯ ಸಭೆಯ ಧೋರಣಕ್ಕನುಗುಣವಾಗಿಯೇ ಹೊಸ ರಾಜ್ಯಯೋಜನೆ ತಯಾರಾಗುತ್ತಿರಬೇಕೆಂಬ ಭಾವನೆಯುಂಟಾಗಿದೆ. ಮಹಾತ್ಮರಿಗೂ ಭಾರತ ಮಂತ್ರಿ ಪೆಥಿಕ್-ಲೋರೆನ್ಸ ದೊರೆಗಳಿಗೂ ಗಾಢ ಆಪ್ತತ್ವವುಂಟಾಗಿದೆ. 'ಸರ್' ಸ್ಟೆಫರ್ಡ ಕ್ರಿಪ್ಸರು ಒಂದು ದಿನ ಮಹಾತ್ಮರ ಪ್ರಾರ್ಥನೆಯ ಸಮಯ ಅವರಿದ್ದಲ್ಲಿ ಬಂದು, ಪ್ರಾರ್ಥನೆ ಮುಗಿದ ನಂತರ ಮಹಾತ್ಮರನ್ನು ತಮ್ಮ ಬಂಡಿಯಲ್ಲಿ ಎತ್ತಿಕೊಂಡು ಹೋಗಿ, ಅವರನ್ನು ಭಾರತ ಮಂತ್ರಿ ಪೆಥಿಕ್-ಲೋರೆನ್ಸ ದೊರೆಗಳ ಕೋಣೆಯಲ್ಲಿ ಹಾಕಿ ಬಾಗಿಲಿಗೆ ಬೀಗ ಹಾಕಿದರೆಂತಲೂ, ಉಭಯತರಿಗೆ ನಿರ್ವಂಚನೆಯಿಂದ ಮಾತಾಡಗೊಟ್ಟು ತಾವು ಕಾವಲುಗಾರರಾಗಿ ಹೊರಗೆ ನಿಂತರೆಂತಲೂ ಒಂದು ಸುದ್ದಿ ಪ್ರಕಟವಾಗಿದೆ. ಇನ್ನೊಂದು ದಿನ ಮಹಾತ್ಮರು ಪೆಥಿಕ್-ಲೋರೆನ್ಸ ದೊರೆಗಳ ಬಳಿ ಮಾತಾಡುತ್ತಿದ್ದ ದಿನ ಮಾತು ಮುಗಿಸಿ ತಿರುಗಿ ಹೊರಟಾಗ ರಾತ್ರಿ ೯॥ ಘಂಟೆಯಾಯಿತು. ಮಹಾತ್ಮರು ಇಳಕೊಂಡಿರುವ ವಾಲ್ಮೀಕಿ ಮಂದಿರ ದೊರೆಗಳ ನಿವಾಸಸ್ಥಾನದಿಂದ ೨ ಮೈಲು ದೂರ ಉಂಟು. ಮಹಾತ್ಮರು ಮೋಟಾರ ಹತ್ತಿ ಹೋಗಬೇಕೆಂದು ದೊರೆಗಳೂ ಕ್ರಿಪ್ಸರೂ ಆಗ್ರಹ ಮಾಡಿದಾಗ್ಯೂ ಮಹಾತ್ಮರು ನಗೆಮೊಗದಿಂದ ನಡಕೊಂಡೇ ಹೋಗುತ್ತೇನೆಂದರು. ಆಗ ದೊರೆಗಳು ತಮ್ಮ ಕಾರ್ಯದರ್ಶಿಗಳಾದ ಕರ್ನಲ್ ಕ್ರೀಚರನ್ನು ಮಹಾತ್ಮರ ಜೊತೆಯಲ್ಲಿ ಕಳಿಸಿದರು. ತ್ರಿಮಂತ್ರಿಗಳ ಜೊತೆಗೆ ಯಾವಾಗಲೂ ಗುಪ್ತ ಪೋಲೀಸರು ಸುಳಿಯುತ್ತಿರುತ್ತಾರೆ. ಇಂಗ್ಲಂಡದಿಂದಲೇ ಮೂವರ ಜೊತೆಗೆ ಮೂವರು ಗುಪ್ತ ಪೋಲೀಸ ಅಧಿಕಾರಿಗಳು ಬಂದಿದ್ದಾರಂತೆ. ಇವರಿಗೆ ಜತೆಗಾರರಾಗಿ ಹಿಂದುಸ್ಥಾನ ಸರಕಾರವು ಮತ್ತೆ ಮೂವರು ಗುಪ್ತ ಪೋಲೀಸ ಅಧಿಕಾರಿಗಳನ್ನು ಕೊಟ್ಟಿದೆ ! ಸರ್ ಸ್ಟೆಫರ್ಡ ಕ್ರಿಪ್ಸರು ತಮ್ಮ ಗುಪ್ತ ಪೋಲೀಸ ಅಧಿಕಾರಿಗೆ ಮಹಾತ್ಮರ ಜೊತೆಗೆ ಕಳಿಸಿಕೊಟ್ಟರು. ಆಗ ಮಹಾತ್ಮರು ತಮ್ಮ ಬಲಗೈಯನ್ನು ಕರ್ನಲ ಕ್ರೀಚರರ ಹೆಗಲ ಮೇಲೂ ಎಡಗೈಯನ್ನು ಗುಪ್ತ ಪೋಲೀಸ ಅಧಿಕಾರಿಯ ಹೆಗಲ ಮೇಲೂ ಇಟ್ಟುಕೊಂಡು ಕಾಲ್ನಡಿಗೆಯಿಂದಲೇ ವಾಲ್ಮೀಕಿ ಮಂದಿರಕ್ಕೆ ಹೋದರು. ಹಾದಿಯಲ್ಲಿ ಉಭಯತರ ಕಡೆಗೆ ಮಹಾತ್ಮರು ನಸುನಗುತ್ತ ಹರಟೆ ಹೊಡೆಯುತ್ತಿದ್ದರೆಂದು ಸುದ್ದಿಗಾರರು ಬರೆಯುತ್ತಾರೆ. ಪಂ॥ ಜವಾಹಿರಲಾಲ ನೆಹರು, ಮೌ॥ ಆಝಾದ, ಸರದಾರ ಪಟೇಲ ಇವರೊಡನೆಯೂ ತ್ರಿಮಂತ್ರಿಗಳ ನಡಾವಳಿ ಆಪ್ತತ್ವದ್ದಿದೆ. ಬ್ಯಾ॥ ಜಿನ್ನಾರ ಪಾಕಿಸ್ತಾನದ ಕಲ್ಪನೆ ಮಂತ್ರಿಗಳಿಗೆ ಅಗ್ರಾಹ್ಯವಾಗಿದೆಯೆಂದು ಸುದ್ದಿಗಾರರ ಅಂಬೋಣ. ತ್ರಿಮಂತ್ರಿಗಳಿಗೂ ಬ್ಯಾ॥ ಜಿನ್ನಾರವರಿಗೂ ಈ ಕುರಿತು ತೀವ್ರ ಮತ್ತು ತೀಕ್ಷ್ಣ ವಾಗ್ವಾದ ನಡೆಯಿತೆಂದೂ, ಜಿನ್ನಾರವರು ಮೇಜಿನ ಮೇಲೆ ಕೈ ಅಪ್ಪಳಿಸುವ ಪ್ರಸಂಗ ಸಹ ಉಂಟಾಯಿತೆಂದೂ "ಕೇಸರಿ" ಪತ್ರಿಕೆಯ ವಿಶೇಷ ಪ್ರತಿನಿಧಿಗಳಾದ ಶ್ರೀ [illegible] ಬರೆಯುತ್ತಾರೆ. ಪಾಕಿಸ್ತಾನದ ರಚನೆಗೆ ಸಿಂಧ ಪ್ರಾಂತದ (ಲೀಗ ಪಕ್ಷದ) ಮುಖ್ಯ ಮಂತ್ರಿಗಳಾಗಿರುವ ಸರ್ ಗುಲಾಮ ಹುಸೇನ ಹಿದಾಯತುಲ್ಲಾರವರು ಕೂಡ ವಿರುದ್ಧರಿದ್ದಾರೆಂದು ಮುಂಬಯಿಯ "ಕ್ರೋನಿಕಲ್" ಪತ್ರಿಕೆಯು ಪ್ರಕಟಿಸುತ್ತಿದೆ. ಸರ್ ಗುಲಾಮರು ಪಾಕಿಸ್ತಾನ-ವಿರೋಧಿ ಕೃತಿಯನ್ನು ತಮ್ಮ ಭೆಟ್ಟಿಯ ಕಾಲಕ್ಕೆ ತ್ರಿಮಂತ್ರಿಗಳಿಗೆ ಒಪ್ಪಿಸಿದರೆಂದು ಆ ಪತ್ರಿಕೆ ಬರೆಯುತ್ತಿದೆ.

ಬ್ರಿಟಿಶ ಸರಕಾರವು ಹಿಂದುಸ್ಥಾನಕ್ಕೆ ಅತ್ಯಂತ ಸಂತೋಷದಿಂದ ರಾಜ್ಯಾಧಿಕಾರ ಒಪ್ಪಿಸುವದಾಗಿ ನಾನು ಹೇಳಲಾರೆ. ತ್ರಿಮಂತ್ರಿಗಳ ಸಂಧಾನ ನಿರರ್ಥಕವಾದರೆ ರಾಷ್ಟ್ರೀಯ ಸಭೆಯ ಕಾರ್ಯಕರ್ತರನ್ನು ಸೆರೆಮನೆಗೆ ಅಟ್ಟಲು ಹಿಂದುಸ್ಥಾನ ಸರಕಾರವು ಒಂದು ಯೋಜನೆ ತಯಾರಿಸಿರುವದೆಂದೂ, ತ್ರಿಮಂತ್ರಿಗಳ ಪ್ರಯತ್ನ ನಿರರ್ಥಕವಾದೊಡನೆ ದೇಶದಲ್ಲೆಲ್ಲ ಅಭೂತಪೂರ್ವ ದಬ್ಬಾಳಿಕೆ ನಡೆಯಲಿರುವದೆಂದೂ ಒಂದು ಸುದ್ದಿ ಪ್ರಕಟವಾಗಿ ದೀರ್ಘ ಕಾಲವಾಯಿತು. ರಾಷ್ಟ್ರೀಯ ಸಭೆಯವರಿಗೆ ಸೆರೆಮನೆ ಸವರಮನೆಯಾಗಿದೆ. ಅದಕ್ಕೆ ಅವರು ಹೆದರುವದಿಲ್ಲ. ಸರಕಾರದ ದಬ್ಬಾಳಿಕೆಯನ್ನು ಈ ತನಕ ಅವರು ಪ್ರತಿಭಟಿಸಿದ್ದಾರೆ, ಈ ಮುಂದೆಯೂ ಪ್ರತಿಭಟಿಸಲು ಸಿದ್ಧರಿದ್ದಾರೆ. ಆದ್ದರಿಂದ ದಬ್ಬಾಳಿಕೆಯ ಭೀತಿಯಿಂದ ತ್ರಿಮಂತ್ರಿಗಳು ಅನುಗ್ರಹಿಸಿದಷ್ಟು ರಾಜ್ಯಾಧಿಕಾರ ಸ್ವೀಕರಿಸಿ ಸಂತೋಷಪಡಲು ರಾಷ್ಟ್ರೀಯ ಸಭೆಯವರು ಎಂದೂ ಒಪ್ಪುವಂತಿಲ್ಲ. ಬ್ರಿಟಿಶ ಸರಕಾರವು ಹಿಂದುಸ್ಥಾನದ ಸಂಪೂರ್ಣ ಸ್ವಾತಂತ್ರ್ಯ ಮನ್ನಿಸಿ ಅಧಿಕಾರ ಬಿಟ್ಟುಕೊಡಲು ಒಪ್ಪುವವಾದರೆ ಮಾತ್ರ ರಾಷ್ಟ್ರೀಯ ಸಭೆ ತ್ರಿಮಂತ್ರಿಗಳ ಶಿಫಾರಸಿಯನ್ನು ಮನ್ನಿಸುವದು. ಜಿನ್ನಾರ ಪಾಕಿಸ್ತಾನವನ್ನು ತ್ರಿಮಂತ್ರಿಗಳು ನಿರಾಕರಿಸುತ್ತಿದ್ದರೂ ಪಾಕಿಸ್ತಾನ ಬೇಡುವ ವ್ಯಕ್ತಿಯನ್ನು ಅವರು ಸಣ್ಣಗಾಗಿರಿಸಲೊಲ್ಲರು. ರಾಷ್ಟ್ರೀಯ ಸಭೆಯ ಬೇಡಿಕೆಯನ್ನು ಅದಷ್ಟರ ಮಟ್ಟಿಗೆ ಕೆಳಗಿಳಿಸಿ ಸ್ವಾರ್ಥ ಸಾಧಿಸುವ ಬಗೆಯಿಂದ ಅವರು ಬ್ಯಾ॥ ಜಿನ್ನಾರವರ ಸಮಾಧಾನ ಮಾಡುವ ಸೋಗು ನಡಿಸಿದ್ದಾರೆ. ಸರ್ ಸ್ಟೆಫರ್ಡ ಕ್ರಿಪ್ಸರಂತೂ ಅತ್ಯಂತ ಚತುರ, ಅತ್ಯಂತ ದಕ್ಷ ಓಡಾಡುತ್ತಿದ್ದಾರೆ ! ಜಿನ್ನಾರವರು ಹಟವಾದಿಗಳು, ಅವರನ್ನು ಸಮಾಧಾನಪಡಿಸುವದಕ್ಕಾಗಿ ಕೆಲವು ವಿಷಯಗಳನ್ನಾದರೂ ರಾಷ್ಟ್ರೀಯ ಸಭೆಯವರು ಬಿಟ್ಟುಗೊಡಬಹುದೇ, ಹೀಗೆಂದು ಕ್ರಿಪ್ಸರು ಒಳಗಿಂದೊಳಗೆ ಕಾರಸ್ಥಾನ ನಡಿಸಿರಬಹುದೆಂದು ನನಗೆ ಸಂಶಯ ಬರುತ್ತಿದೆ. ಜಿನ್ನಾರವರಿಗೆ ಸಮಾಧಾನಗೊಳಿಸದಿದ್ದರೆ ದೇಶದೊಳಗೆ ಯಾದವಿ ಕಲಹವುಂಟಾಗಿ ಅನರ್ಥವಾಗುವದೆಂಬ ಭೀತಿ ಹಾಕಿ ನೋಡಿದ್ದಾಯಿತು. ಯಾದವಿಯ ಭೀತಿ ನಿರರ್ಥಕವಿದೆ; ಅದನ್ನು ಗಣಿಸಬೇಕಾದ್ದಿಲ್ಲ, ಎಂಬುದಾಗಿ ಮಹಾತ್ಮರು ಅದಕ್ಕೆ ಪ್ರತ್ಯುತ್ತರ ಕೊಟ್ಟರು. ಯಾದವಿಯನ್ನು ಪ್ರತಿಭಟಿಸಲು ರಾಷ್ಟ್ರೀಯ ಸಭೆಯು ಸಿದ್ಧವಿದೆಯೆಂದು ಸರದಾರ ವಲ್ಲಭಭಾಯಿ ಪಟೇಲರೂ ಘೋಷಿಸಿದರು. ಆದರಿಂದ ತ್ರಿಮಂತ್ರಿಗಳಿಗೆ ಯಾವ ಉಪಾಯದಿಂದ ರಾಷ್ಟ್ರೀಯ ಸಭೆಯ ಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ತಿರಸ್ಕರಿಸಬೇಕೆಂದು ತಿಳಿಯದಾಗಿದೆ. ಇಂದು ನಾಳೆ ಬ್ರಿಟಿಶ ಮಂತ್ರಿಗಳ ಯೋಜನೆ ಪ್ರಕಾಶಕ್ಕೆ ಬರಬಹುದೆಂಬ ನಿರೀಕ್ಷೆಯಿತ್ತು, ಆ ನಿರೀಕ್ಷೆಯೀಗ ಸಫಲವಾಗಿದೆ. ಕಾಂಗ್ರೆಸ ಲೀಗಗಳೊಳಗೆ ಮೊದಲು ಒಡಂಬಡಿಕೆ ಮಾಡಿಸುವ ಪ್ರಯತ್ನವನ್ನು ಶಿಷ್ಟರು ಮಾಡುವರೆಂದೂ, ಆ ಬಗ್ಗೆ ಇವೆರಡೂ ಪಕ್ಷಗಳ ಪ್ರತಿನಿಧಿಗಳನ್ನು ಒಂದೆಡೆ ಸೇರಿಸಿ ಮಾತುಕತೆ ನಡಿಸುವರೆಂದೂ ಮೊನ್ನೆ ಶನಿವಾರ ಅಧಿಕೃತ ಪ್ರಕಟನೆ ಹೊರಟಿದೆ. ಸಭೆಯ ದಿನ ಯಾ ಕಾಲ ಪ್ರಕಟವಾಗಿಲ್ಲ. ಕಾಂಗ್ರೆಸ ಲೀಗುಗಳ ಅಧ್ಯಕ್ಷರು ತಮ್ಮ ಪ್ರತಿನಿಧಿಗಳ ಹೆಸರುಗಳನ್ನು ತ್ರಿಮಂತ್ರಿಗಳಿಗೆ ತಿಳಿಸಿದ ಮೇಲೆ ಸಭೆಯ ದಿನ ಮತ್ತು ಕಾಲ ನಿಶ್ಚಿತವಾಗುವದು. ಇಂದು ಯಾ ನಾಳೆ ಆ ಸಭೆ ಸೇರಬಹುದು. ಲೀಗದ ಪ್ರತಿನಿಧಿಗಳೊಡನೆ ಮಾತುಕತೆಯಾದಲಿಕ್ಕೆ ಸಾಧ್ಯವಾದರೆ ಸಂಧಾನ ಮಾಡಿಕೊಳ್ಳಲಿಕ್ಕೆ ರಾಷ್ಟ್ರೀಯ ಸಭೆ ಹಿಂದೆಯೂ ಸಿದ್ಧವಿತ್ತು; ಇಂದೂ ಸಿದ್ಧವಿದೆಯೆಂದು ನಾರಿ ರಾಷ್ಟ್ರಪತಿ ಆಝಾದರು ಈ ಸಭೆಯನ್ನು ಸ್ವಾಗತಿಸಿದ್ದಾರೆ. ಲೀಗದವರು ಒಪ್ಪುತ್ತಾರೋ ಇಲ್ಲವೋ ಎಂಬುದು ಮಾತ್ರ ತಿಳಿದಿಲ್ಲ. ಅದು ಇಂದು-ನಾಳೆ ತಿಳಿದೀತು

ಸ್ಥಳಿಕ ವಿಷಯಗಳು.

ಲೇಖಕ:- ಸ್ಥಳವಂತಿಕ.

ಈ ವರುಷ ಸುಗ್ಗಿ ಬೆಳೆ ಬಹಳ ಕಡೆಗೆ ನೀರಿಲ್ಲದೆ ಸುಟ್ಟುಹೋದದ್ದಿದೆ. ಸುಗ್ಗಿ ಬೆಳೆಗೆ ನೀರಿನ ಪೂರೈಕೆ ಅವಶ್ಯವುಂಟು. ನಮ್ಮ ಜಿಲ್ಲೆಯ ಕರಾವಳಿಯಲ್ಲಿ ಸುಗ್ಗಿ ಬೆಳೆ ಮಾಡುವವರಿಗೆ ಎಕರೆ ೧೫ ರೂ ಪ್ರಕಾರ ಸರಕಾರವು ಧನಸಹಾಯ ಮಾಡುತ್ತಿದೆ. ಇದನ್ನು ಪಡೆಯಲು ಬೇರೆ ಯಾವದೇ ಕರಾರಿಲ್ಲ. ಸುಗ್ಗಿ ಬಿತ್ತಿದವರಿಗೆ ಸಹಾಯ ಪಡೆಯಲು ಹಕ್ಕು ಬರುತ್ತದೆ. ಈ ಯೋಜನೆಯನ್ನು ಸರಕಾರವು ಈಗ ರದ್ದುಪಡಿಸಲಿಕ್ಕಾಗಿ ಒಂದು ವಾರ್ತೆಯುಂಟು. ಅದೇಕೋ ತಿಳಿಯದು. ಈ ಯೋಜನೆಯಿಂದ ಲಾಭವಿಲ್ಲೆಂದು ಹೇಳಬಹುವದಿಲ್ಲ. ಸುಗ್ಗಿ ಯಾವ ಕಾರ ಬೆಳೆಗೆ ಒಕ್ಕಲಿಗರೂ ಒಡೆಯರೂ ಪ್ರಯತ್ನ ಮಾಡಿ ಕ್ಲಪ್ತ ಕಾಲದಲ್ಲಿ ಕಟ್ಟು ಹಾಕಿ ನೀರು ನಿರ್ಬಂಧಿಸಿಟ್ಟರೆ ಎಲ್ಲವೂ ಸರಿಹೋಗುತ್ತದೆ. ಸಕಾಲದಲ್ಲಿ ಕಟ್ಟು ಹಾಕಿಕೊಳ್ಳುವವರ ಕಡೆಗೆ ಈಗ ಸರಕಾರದ ಲಕ್ಷವಿಲ್ಲ. ಸಕಾಲದಲ್ಲಿ ಕಟ್ಟು ಹಾಕಿಕೊಂಡವರಿಗೂ ಅಕಾಲದಲ್ಲಿ ಕಟ್ಟು ಹಾಕಿಕೊಂಡವರಿಗೂ ಸರಕಾರವು ಒಂದೇ ವರ್ಗದಲ್ಲಿ ಹಾಕುತ್ತಿದೆ. ಸರಕಾರವು ಹಾಗೆ ಮಾಡದೆ ಸಕಾಲದಲ್ಲಿ ಕಟ್ಟು ಹಾಕಿಸಲು ಜನರಿಗೆ ಉತ್ತೇಜನ ಕೊಟ್ಟು ನೆರವಾಗಬೇಕು. ಪ್ರತಿಯೊಂದು ಬೈಲಕ್ಕೆ ಕಟ್ಟು ಹಾಕುವ ಕ್ರಿಯೆ ಯಾವುದೆಂಬುದನ್ನು ಸ್ಥಳೀಕ ಜನರಿಂದ ತಿಳಕೊಂಡು, ಕ್ರಿಯೆದಲ್ಲಿ ಕಟ್ಟು ಹಾಕಿ ಪೂರ್ಣಪಡಿಸುವವರಿಗೆ ಮಾತ್ರ ದ್ರವ್ಯಸಹಾಯ ನೀಡುವ ಪ್ರಘಾತ ರೂಢಿಗೊಂಡಬೇಕು. ಹೇಗಾದರೂ, ಎಂದಾದರೂ ಕಟ್ಟು ಹಾಕುವವರಿಗೆ ಸಹಾಯ ನೀಡಿ ಉಪಯೋಗವಿಲ್ಲ. ಕ್ರಿಯೆ ತಪ್ಪಿಸಿ ಕಟ್ಟು ಹಾಕುವದರಿಂದ ಬೆಳೆಗೆ ಬೇಕಷ್ಟು ನೀರು ದೊರಕುವದಿಲ್ಲವೆ, ಸಾಗುವಳಿಯ ಕೆಲಸವನ್ನು ಕ್ರಿಯೆದಲ್ಲೇ ಪ್ರಾರಂಭಿಸಲು ಒಕ್ಕಲಿಗರಿಗೂ ಒಡೆಯರಿಗೂ ಉತ್ತೇಜನ ದೊರೆಯುತ್ತಿದೆ. ಬೈಲಲ್ಲಿ ನೀರು ಬಂದ ಮೇಲೆ ಇಂದು, ನಾಳೆಯೆಂದು ವಿಸ್ತರಣ ಮಾಡಲು ಸ್ವಾರ್ಥಪರಾಯಣ ಮಾನವನು ಒಡಂಬಡುವದಿಲ್ಲ. ಈ ಕ್ರಮ ಸ್ಥಿರವಾಗುವದು ಹೋಗಲು ಕೆಲ ಕಾಲ ಬೇಕು. ಆದ್ದರಿಂದ ೧೦ ವರುಷಗಳ ವರೆಗಾದರೂ ಒಕ್ಕಲಿಗರಿಗೆ ಸಹಾಯ ಮಾಡುವ ಯೋಜನೆ ನಡೆಯಬೇಕಾಗಿ ಸೂಚನೆಯಿದೆ. ಕನಿಷ್ಠ ೫ ವರುಷಗಳ ಕಾಲವಾದರೂ ಅದು ನಡೆದರೆ ಮಾತ್ರ ದ್ರವ್ಯ-ಪ್ರಯೋಜನವೇನಾದರೂ ಕಂಡುಬಂದೀತು.

⁂

ಕೆಲವೆಡೆ ಕಾಡು ಬೆಳೆಗೆ ನೀರು ಪೂರೈಸುವ ಕೆರೆಗಳೂ ಉಂಟು. ಅವನ್ನು ಪ್ರತಿ ವರುಷ ದುರುಸ್ತ ಮಾಡುವ ವ್ಯವಸ್ಥೆಯಿಲ್ಲ. ಸಕ್ಕಷ್ಟು ನೀರನ್ನು ತೆಗೆದುಕೊಂಡು ಜನರು

The Agricultural & Industrial Bank, Ltd.

(Incorporated in British India, Liability of Members limited)

Head Office: COONDAPOOR. S. I

The Head Office and Branches of the Bank now accept Season Deposits from three to six months at the following rates:-

Three Months at 2½% per annum.

Six Months at 2¾% per annum.

No such deposit will be allowed to run beyond 30th September 1946.

Coondapoor,
8-2-1946

K. VAMAN SHENAI,
CHAIRMAN.

ಬೆಳೆ ಬೆಳೆಸುತ್ತ ಬರುತ್ತಾರೆ. ಸರಕಾರಕ್ಕೆ ಲೆವ್ಹಿ ಸುಕಷ್ಟ ಸಿಗುವದರಿಂದ ಅದಕ್ಕೆ ಬೆಳೆ ಬೆಳೆದರೂ ಅಷ್ಟೇ, ಬೆಳೆ ಹಾಳಾದರೂ ಅಷ್ಟೇ ಎಂಬ ಸ್ಥಿತಿಯಾಗಿದೆ. ಈವಾಗ ಸಾಗು ಭೂಮಿಯನ್ನು ಬೆಳೆಸುವ ಅಟ್ಟಹಾಸ ನಡೆದಿದೆ. ಇಂಥ ಸಮಯದಲ್ಲಿ ಕಾರ-ಬೆಳೆಗೆ ನೀರು ಪೂರೈಸುವ ಕೆರೆಗಳಲ್ಲಿ ರಾಶಿಯಾಗಿ ಬಿದ್ದ ಕೆಸರನ್ನು ತೆಗೆಯಿಸಿ, ಅದನ್ನು ಸರಕಾರವು ದುರುಸ್ತಗೊಳಿಸುವ ಪ್ರಯತ್ನ ನಡೆದರೆ ಏನಾದರೂ ಪ್ರಯೋಜನವಾದೀತು. ಇಂಜನಿಯರ ಇಲಾಖೆಯವರು ರಾಜಮಾರ್ಗಗಳ ಕಾಳಜಿ ತಕೊಳ್ಳುವಂತೆ ಸರಕಾರಿ ಜಲಾಶಯಗಳ ಕಾಳಜಿಯನ್ನೂ ತಕ್ಕೊಳ್ಳಬೇಕು. ಜಲಾಶಯಗಳಿದ್ದಲ್ಲಿ ಸರಕಾರವು ನಮ್ಮ ಜಿಲ್ಹೆಯೊಳಗೆ ನೀರಾವರಿಗೆ ಆಕರಿಸಿ, ಅದನ್ನು ಈ ತನಕ ವಸೂಲ ಪಡೆಯುತ್ತ ಬಂದಿದೆ. ಬೇರೆ ಜಿಲ್ಹೆಗಳಂತೆ ನಮ್ಮಲ್ಲಿ ಜಲ-ಕಂದಾಯ ಪ್ರತ್ಯೇಕವಿಲ್ಲ. ಸಾಮಾನ್ಯ ಲೆವ್ಹಿಯಲ್ಲೇ ಅದು ಬೆರೆತುಹೋಗಿದೆ. ಆದರಿಂದ ನಮ್ಮ ಜಿಲ್ಹೆಯವರಿಗೆ ನಷ್ಟವಾಗಿದೆ. ಪ್ರತ್ಯೇಕ ಜಲ-ಕಂದಾಯವಿರುವ ಸ್ಥಾನಗಳಲ್ಲಿ ಜಲದ ಅಭಾವವಾದಾಗ ಜಲ-ಕಂದಾಯದ ಹೊರೆ ಜನರ ಮೇಲೆ ಬೀಳುವದಿಲ್ಲ. ನಮ್ಮ ಜಿಲ್ಹೆಯೊಳಗೆ ಆ ಪದ್ಧತಿ ಇಲ್ಲದ್ದರಿಂದಲೂ ಜಲಾಶ್ರಯಗಳು ಹೂತುಹೋದರೂ ಜಲ ಕಂದಾಯ ಸಿಗುತ್ತಿದ್ದದರಿಂದಲೂ ಜಲಾಶ್ರಯಗಳನ್ನು ಸುಸ್ಥಿತಿಯಲ್ಲಿಡುವದರ ಕಡೆ ಸರಕಾರದವರ ಲಕ್ಷ ಹೋಗುವದಿಲ್ಲ. ಇದೀಗ ಬೇಸಿಗೆಯ ಕಾಲ. ಜಲಾಶ್ರಯಗಳನ್ನು ದುರುಸ್ತ ಮಾಡಲು ಇದು ತಕ್ಕ ಸಮಯವುಂಟು. ಅಧಿಕಾರಿಗಳು ತ್ವರಿತೆಯಿಂದ ಈ ವಿಷಯವನ್ನು ಪರಾಂಬರಿಸಿ ಕೆರೆಗಳ ದುರುಸ್ತಿ ಈಗಲೇ ಮಾಡಿಸಿದರೆ ಮುಂದಿನ ವರುಷ ಸುಗ್ಗಿ ಬೆಳೆ ಬೆಳೆಸಲು ಅನುಕೂಲವಾದೀತು. ನಮ್ಮ ಅನ್ನ-ಸಾಮಗ್ರಿಯನ್ನು ನಾವೇ ಪೂರೈಸಿಕೊಳ್ಳುವ ಪ್ರಸಂಗವುಂಟು. ಹಿಂದುಸ್ಥಾನವನ್ನು ಕಾಪಾಡುವವರು ಲೋಕದಲ್ಲಿ ಯಾರೂ ಇಲ್ಲ. ಅಮೇರಿಕೆಯವರು ನಮಗೆ ಅನ್ನಸಾಮಗ್ರಿಯನ್ನು ಪೂರೈಸಿ ನಮ್ಮನ್ನು ಕಾಪಾಡುವರೆಂದು ಕಲ್ಪನೆ ಮಾಡುವದು ತಪ್ಪು. ಭಾರತ ಸರಕಾರದವರು ಅನ್ನಸಾಮಗ್ರಿಗಳನ್ನು ಹುಡುಕುವದಕ್ಕಾಗಿ ವಿದೇಶಗಳಿಗೆ ಕಳುಹಿದ ಶಿಷ್ಟಮಂಡಳದ ಸರ್ ಮಣಿಲಾಲ ನಾನಾವತಿಯವರು ನ್ಯೂಯಾರ್ಕದಿಂದ ಕಳೆದ ಬುಧವಾರ ಹೊರಟಿದ್ದಾರೆ. ಭೂಲೋಕದೊಳಗಿನ ಬೇರೆ ಬೇರೆ ದೇಶಗಳಲ್ಲಿ ಹಾವಳಿ ಹಾಕುವ ಬರಗಾಲವನ್ನು ನಿವಾರಿಸಲು ಅಮೇರಿಕೆಯವರು ನಿರ್ಧಾರ ಮಾಡಿದ್ದಾರೆ, ಆದರೆ ಅವರ ಯಾದಿಯಲ್ಲಿ ಹಿಂದುಸ್ಥಾನದ ಸೇರ್ಪಡೆಯಾಗಿಲ್ಲ, ಎಂದು ನಾನಾವತಿಯವರು ತಿಳಿಸುತ್ತಾರೆ. ಹಿಂದುಸ್ಥಾನದೊಳಗೆ ಅಪರಿಮಿತ ಜನಸಂಖ್ಯೆಯುಂಟು, ಇಲ್ಲಿ ಬರಗಾಲ ಬೀಳುವದು ಅಪರಿಹಾರ್ಯವಾದುದು, ಆದರಿಂದ ಬೇರೆ ದೇಶಗಳ ಕೊರತೆ ಪರಿಹರಿಸಿ ಏನಾದರೂ ಅನ್ನಸಾಮಗ್ರಿ ಉಳಿದರೆ ಅದನ್ನು ಹಿಂದುಸ್ಥಾನಕ್ಕೆ ಕಳಿಸಿಕೊಡಬಹುದು ಎಂಬ ಆಲೋಚನೆ ಅಮೇರಿಕೆಯಲ್ಲಿ ನಡೆದದೆ. ಹಿಂದೆ ಅಮೇರಿಕೆಯ ಅಧ್ಯಕ್ಷರಾಗಿದ್ದ ಹರ್ಬರ್ಟ ಹೂವರರವರು ಅಲ್ಲಿಯ ಲೋಕಪ್ರವೃತ್ತಿಯನ್ನು ಅರಿತುಕೊಂಡು, ಉಪವಾಸ ಬೀಳುವವರಿಗೆ ಅನ್ನ ಸಾಮಗ್ರಿಗಳನ್ನು ಪೂರೈಸುವ ಯೋಜನೆಯನ್ನು ತಯಾರಿಸಕೊಂಟಿದ್ದಾರೆ. ಇರಾಕ, ಸಯಾಮ ಮೊದಲಾದ ಏಶಿಯಾ ಖಂಡದ ಪ್ರದೇಶಗಳಿಂದಲೇ ಹಿಂದುಸ್ಥಾನಕ್ಕೆ ಅನ್ನಸಾಮಗ್ರಿಗಳ ಪೂರೈಕೆಯಾಗಬೇಕೆಂದು ಮುಂಬಯಿಯಲ್ಲಿ ಅವರು ನುಡಿದ ಸುದ್ದಿಯುಂಟು. ಬೆಂಗಳೂರಿನಲ್ಲಿ ಹೂವರರನ್ನು ಭೆಟ್ಟಿಯಾದ ಸುದ್ದಿಗಾರರು ಹಿಂದುಸ್ಥಾನದೊಳಗಿನ ಬರಗಾಲದ ಬಗ್ಗೆ ಅವರ ಮತವೇನೆಂದು ವಿಚಾರಿಸಲಾಗಿ, ಹಿಂದುಸ್ಥಾನದೊಳಗೆ ಬರಗಾಲವೆಂದರೆ ಲಕ್ಷಾವಧಿ ಜನರು ಸಾಯುವ ಪ್ರಸಂಗವೆಂದೂ ಅಂಥ ಪ್ರಸಂಗ ಹಿಂದುಸ್ಥಾನಕ್ಕೆ ಇನ್ನೂ ಬಂದಿಲ್ಲವಾದ್ದರಿಂದ ಬರಗಾಲವುಂಟೆಂದು ತಾವು ಒಪ್ಪುವದಿಲ್ಲವಾಗಿಯೂ ಹೂವರರು ಉದ್ಗರಿಸಿದರಂತೆ. ಮುಂಬಯಿ ಸರಕಾರದ ಮಂತ್ರಿಗಳೊಡನೆ ಹೂವರರು ನಡಿಸಿದ ಸಂಭಾಷಣೆಯ ತಾತ್ಪರ್ಯವನ್ನು ಅರ್ಥ ಮಂತ್ರಿಗಳಾದ ಶ್ರೀ ವೈಕುಂಠಲಾಲ ಮೆಹತಾರವರು ಹೀಗೆ ಬರೆದಿದ್ದಾರೆ.- ಹೂವರರು ನಮ್ಮ ಬಗ್ಗೆ ಸಹಾನುಭೂತಿಯುಳ್ಳವರು. ಆದರೆ ನಾವು ಸ್ವಾವಲಂಬಿಗಳಾಗಬೇಕು, ಹೆಚ್ಚೆಚ್ಚು ಆಹಾರಧಾನ್ಯಗಳನ್ನು ಬೆಳೆಸಲು ನಾವು ಪರಮಾವಧಿಯ ಪ್ರಯತ್ನ ಮಾಡಬೇಕು, ನಾವು ಸ್ವಾವಲಂಬಿಗಳಾದರೆ ಮಾತ್ರ ಉಪವಾಸದ ಪ್ರಸಂಗ ತಪ್ಪುವದು, ಪರಾಧೀನ ಹಿಂದುಸ್ಥಾನಕ್ಕೆ ವಿದೇಶಗಳಲ್ಲಿ ಸ್ಥಾನ-ಮಾನಗಳಿಲ್ಲ, ನಮಗೆ ಬೇಕಾದ ಅನ್ನ-ಸಾಮಗ್ರಿ ನಾವೇ ಪೂರೈಸಿಕೊಳ್ಳಬೇಕು, ಮೇಲಾಗಿ ಹಿಂದುಸ್ಥಾನ ಕೃಷಿಪ್ರಧಾನ ದೇಶ. ಇಂಥ ದೇಶವು ಆಹಾರಸಾಮಗ್ರಿ ಬಗ್ಗೆ ಪರಾವಲಂಬಿಯಾಗುವದು ನಾಚಿಕೆಗೇಡಿತನ. ಅನ್ನಸಾಮಗ್ರಿಗಳ ಬೆಳೆಸಿಕೊಳ್ಳುವ ಸಾಧನ-ಸಂಪತ್ತಿಯ ಕಡೆ ದುರ್ಲಕ್ಷ ಮಾಡಿ ನಾವು ಈಗ ದುರ್ಬಲರಾಗಿದ್ದೇವೆ. ಈಗ ನಾವು ಜಾಗೃತರಾಗಿ ಸರಕಾರದ ಸಹಾಯದಿಂದ ಅಲ್ಲಲ್ಲಿಯ ಕೆರೆ-ಕಾಲುವೆಗಳನ್ನು ದುರುಸ್ತಗೊಳಿಸಿಕೊಳ್ಳದಿದ್ದರೆ ನಾವು ಲೋಕದಲ್ಲಿ ಮೂರ್ಖರೆನಿಸಿಕೊಳ್ಳಬೇಕಾದೀತು.

ಸ್ಥಾನಿಕ ವೃತ್ತಾಂತ.

ಕುಮಟಾ— ಸೆಕೆ ಬಹಳ ಆಗಾಗ ಮೋಡಗಳಾಗಿ ಮಳೆಯಾಗುವ ಲಕ್ಷಣಗಳೂ ತಲೆದೋರುತ್ತಿವೆ

ಇಂದು ಗಂಡುಮಕ್ಕಳ ಮುಲ್ಕೀ ಪರೀಕ್ಷೆಗೆ ಆರಂಭ. ಇಲ್ಲಿಯ ಕೇಂದ್ರದಲ್ಲಿ ಕನ್ನಡ ಮುಲ್ಕಿಗೆ ೧೯೪ ವಿದ್ಯಾರ್ಥಿಗಳೂ ಉರ್ದು ಮುಲ್ಕಿಗೆ ೭ ಮಂದಿ ವಿದ್ಯಾರ್ಥಿಗಳೂ ಕೂತಿದ್ದಾರೆ.

೨-೩ ದಿನಗಳ ಹಿಂದೆ ಅರ್ಬನ್ ಸಹಕಾರಿ ಬೇಂಕಿಗೆ ೩ ಮೋಟಾರ ಬಂಡಿ ತುಂಬಿ ಪತ್ರಾಸಗಳು ಬಂದಿವೆ. ಆದರೆ ದರ ಬಂದಿಲ್ಲವಾದ್ದರಿಂದ ಮಾರಾಟವಾಗಬಹುದಿಲ್ಲವಂತೆ. ಪತ್ರಾಸಗಳು ಸಿಗಬೇಕಾದರೆ ಸೀಧಾ ಅಧಿಕಾರಿಗಳ ಪರವಾನಿಗಿ ತಕ್ಕೊಳ್ಳಬೇಕಂತೆ.

ಹತ್ತಿ ಕಾಳು ಹಾಲು ಹಿಂಡುವ ದನಗಳಿಗಷ್ಟೇ ಸಿಗುವದು. ಇನ್ನಿತರ ದನಗಳ ಬಗ್ಗೆ ನೆಲಗಡ್ಲೆ (ಶೇಂಗಾ) ಹಿಂಡಿಯ ಪೂರೈಕೆಯಾಗುವದಾಗಿ ಸರಕಾರದವರು ಪ್ರಕಟಿಸಿದ್ದರು. ಈ ಪೂರೈಕೆಯ ಕೆಲಸ ಬೇಸಾಯ ಇಲಾಖೆಯವರ ಕಡೆ ಒಪ್ಪಿಸಲ್ಪಟ್ಟಿದೆಯಂತೆ. ಆದರೆ ಆ ಇಲಾಖೆಯವರು ಸದರಿ ಹಿಂಡಿಯ ಪೂರೈಕೆಯ ವ್ಯವಸ್ಥೆ ಈ ತಾಲೂಕಿನಲ್ಲಿ ಎಲ್ಲೂ ಮಾಡಿದ್ದು ತೋರುವದಿಲ್ಲ! ಈ ಹಿಂಡಿಯ ದರ (ಗಿರಣಿಯಲ್ಲಿ) ಟನ್ನಿಗೆ ರೂ ೬೦ ಅಂದರೆ ಮಣಕ್ಕೆ ರೂ ೧॥ ಉಂಟು. ಆದರೆ ಇಲ್ಲಿಯ ಪೇಟೆಯಲ್ಲಿ ಹಾಲಿ ಮಣಕ್ಕೆ ರೂ ೨ ಕೊಡಬೇಕಾಗುತ್ತಿದೆ. ಜಿಲ್ಹಾಧಿಕಾರರು ಈ ಹಿಂಡಿ ತರಿಸುವ ವ್ಯವಸ್ಥೆ ಕೂಡಲೇ ಮಾಡಬೇಕಾಗಿ ಅರಿಕೆಯಿದೆ. ಬೇಸಾಯ ಇಲಾಖೆಯವರು ಆ ವ್ಯವಸ್ಥೆ ಮಾಡ್ಯಾರೆಂದು ಭಾವಿಸಿ ಸ್ವಸ್ಥ ಕುಳಿತರೆ ಮೋಸವಾದೀತು.

ಕಳೆದ ಬುಧವಾರ ಗಂಟೆಗೆ ಸೇರಿದ ಎಲ್ಲ ಶಿಕ್ಷಕರು ತಮ್ಮ ತಮ್ಮ ಸ್ಥಳಗಳಲ್ಲಿ ಹಾಜರಾಗಿದ್ದಾರೆ. ಇಲ್ಲಿಯ ಗಂಡು ಮಕ್ಕಳ ೨ನೇ ನಂಬರ ಶಾಲೆಯ ಮುಖ್ಯಾಧ್ಯಾಪಿಕೆಯಾಗಿ ಅವರ ಸ್ಥಳ ಬಿಟ್ಟುಕೊಡಲು ಹಂಗಾಮಿ ಮುಖ್ಯಾಧ್ಯಾಪಿಕೆಯಾಗಿ ಬಂದ ಮಂದಿ [illegible] ಕೇಳಿಟ್ಟರೆಂದು [illegible] ಮ್ಯುನಿಸಿಪಾಲಿಟಿಯೊಳಗಿನ ೩ನೇ ಕಾರಕೂನನಿಂದ ಮರಾಠಿ ಶಾಲೆಯ ಮುಖ್ಯಾಧ್ಯಾಪಿಕೆಯ ಸಂಬಂಧದಲ್ಲಿ ಅಸಭ್ಯ ಮಾತು ನಡೆದವು. ಆದರೆ ಅಧಿಕಾರ ಬಿಟ್ಟುಕೊಡಬೇಕೆಂದು ಹಂಗಾಮಿ ಶಿಕ್ಷಕಿಗೆ ಜವಾಬ ಮಾಡಿದ್ದಾರಂತೆ! [illegible] ರೂ ತಮ್ಮ ಅಧಿಕಾರ ದರ್ಪ ತೋರಿಸಿದ್ದರಾಗಿ ಮಾರ್ಚ ಮಧ್ಯದ ಪತ್ರಿಕೆಗಳಲ್ಲಿ, ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತಾ ೧-೭ ೧೯೪೬ರಿಂದ ಸರಕಾರಿ ದರದಿಂದ ತುಟ್ಟಿ ಭತ್ತೆಯನ್ನು ಕೊಡಬೇಕೆ ಎಲ್ಲ ಶಾಲಾ ಬೋರ್ಡುಗಳು ತೆರವಿಸಿದವು, ಸಂಬಳದ ಆಧಾರವನ್ನು ಬೇಸಿಗೆಯ ರಜೆಯಿಂದ ಏನೆಂಬ ಕೃತ್ಯದಿಂದೂ ಸರಕಾರದವರು ಹೊರಡಿಸುವ ಆಜ್ಞಾಪತ್ರ ಪ್ರಕಟವಾದ ಮೇಲೆ ಮಾತ್ರ [illegible] ದಿವಸ ಹಾಗೂ ಅವರ ತಂತ್ರದಿಂದ ಕೊನೆಯುತ್ತಿದ್ದ ಶಾಲಾ-ಬೋರ್ಡ ಸದಸ್ಯರ ಹಾಗೂ ಇತರರ ಮೋರೆ ಒಮ್ಮೆಲೇ ಇಳಿದುಹೋಯಿತು! ಇನ್ನಾದರೂ ಎ. ಓ.ರವರು ಬುದ್ಧಿ ನಂತರಿಂಗಿ ಬಡ ಶಾಲಾ ಶಿಕ್ಷಕರನ್ನು ಪಡಿಸುವ ಇಲ್ಲದ ದಂಡಿಸುವ ಹವ್ಯಾಸ ಬಿಟ್ಟುಕೊಟ್ಟರೆ ಒಳಿತು. ಇಲ್ಲದಿದ್ದರೆ ಅವರು ನಗೆಗೆ ಗುರಿಯಾಗುವದು ನಿಶ್ಚಿತ

ಕುಮಟಾ ತಾಲೂಕ ಪ್ರಾಥಮಿಕ ವಿದ್ಯಾವರ್ಧಕ ಸಂಘದ ಸಭೆ ಮೇ ತಾ ೧೮ಕ್ಕೆ ಸೇರುವದು ತಾ ೧೯ಕ್ಕಲ್ಲ

ಹೊನ್ನಾವರ— (ತಾ ೨೬-೪-೪೬) ಹೊಸಾಡ ರಥೋತ್ಸವದ ಕಾಲಕ್ಕೆ ಕೆಲವು ಕಲ್ಲಿಣರು ಗಡಗಡೆ ಆಟದವರಿಗೆ ಎಲ್ಲೂ ತಮ್ಮ ಆಟ ಹಚ್ಚಲು ಕೊಡದೆ ಓಡಿಸಿ ಬಿಟ್ಟರಂತೆ. ಮುಂಚಿನವರ ಬೆಂಬಳಿಗರಾಗಿ ಹೋದ ಪೋಲೀಸರು ಸರಾಯಿಯನ್ನಷ್ಟೇ ಕುಡಿದು ಒಂಟಿಯಾಗಿ ಹೋಗಬೇಕಾಯಿತು!

ಇಲ್ಲಿಯ ಮ್ಯು॥ ಯವರ ಅನನ್ಯ ಕಾಮಗಾರಿಗಳು ಇತ್ತೀಚೆ ಬಹಳವಾಗಿವೆ. ರಾಮತೀರ್ಥದ ಮೊಲ್ಲದಿಗೆ "ಸೀಟು" ಎಂದು ಹೆಸರಿಟ್ಟು ಅವರು ಒಂದು ಅಶ್ವತ್ಥ ಕಟ್ಟೆಯ ದುರುಸ್ತಿ ಮಾಡುತ್ತಿದ್ದಾರೆ! ಅಶ್ವತ್ಥ ಕಟ್ಟೆಯ ದುರುಸ್ತಿ ಮ್ಯುನಿಸಿಪಾಲಿಟಿಯ ಕರ್ತವ್ಯಗಳ ಕಕ್ಷೆಯಲ್ಲಿ ಎಂದಿನಿಂದ ಬಂತೋ ಈಶ್ವರನೇ ಬಲ್ಲ! ಹೇಗಾಗಿ ಈ ಕಟ್ಟೆಯ ದುರುಸ್ತಿಗೆ ಸಾವಿರಾರು ರೂಪಾಯಿಯ ಖರ್ಚಂತೆ! ದಿನಾಲೂ ನೂರಾರು ಜನರು ತಿರುಗಾಡುವ ಕೇರಿಯ ದುರುಸ್ತಿಯ ಕಡೆ ಮಾತ್ರ ಇವರ ಲಕ್ಷವಿಲ್ಲ! ಕೆಲ ದಿನಗಳ ಹಿಂದೆ ಆ ಕೇರಿ ನೋಡಹೋದ ಜಿಲ್ಹಾಧಿಪರು "ಕೇರಿ ನೋಡಿ ನನಗೆ ಮುಂಬಯಿಯೊಳಗಿನ ಘೋರಪಾಟಿಯ ನೆನಪಾಗುತ್ತಿದೆ" ಎಂದು ಉದ್ಗರಿಸಿ ಮರುಗಿದರಂತೆ. ಇಷ್ಟು ಸುಂದರ ಮತ್ತು ಉಪಯುಕ್ತ ಕೆರೆಯನ್ನು ಸುಸ್ಥಿತಿಯಲ್ಲಿಡುವದು ಮ್ಯು॥ಯ ಕರ್ತವ್ಯವಿರುವದಾಗಿ ಅವರು ತಿಳಿದಿದ್ದಾರಂತೆ. ಊರಲ್ಲಿ ಮಾರ್ಕೆಟ ಇಲ್ಲ, ಒಂದು ಧರ್ಮಶಾಲೆಯಿಲ್ಲ! ಅವನ್ನು ಕಟ್ಟಿಸುವ ಆಲೋಚನೆ ಮ್ಯು॥ಗೆ ಬರುವದಿಲ್ಲ! [illegible] ವರ ಸಾಲೆ ಹೀರ ಜೀರ್ಣವಾಗಿ ಹೋಗಿದೆ, ಅದನ್ನು ದುರುಸ್ತ ಮಾಡುವ ಕಲ್ಪನೆಯೂ ಅವರಿಗಾಗುವದಿಲ್ಲ! ಜಿಲ್ಹಾಧಿಪರೂ ಲೋಕಲಬೋರ್ಡೂ ಮ್ಯು॥ಯ ಅಂಧಾಧುಂದಿ ಕಾರಬಾರಕ್ಕೆ ಕೂಡಲೆ ಲಗಾಮು ಹಾಕಬೇಕಾಗಿ ಅರಿಕೆ.

ಹಳ್ಳಿಗಳೊಳಗಿನ ಸೀಧಾ ಅಂಗಡಿಗಳಲ್ಲಿ ಸಕ್ಕರೆ ಮತ್ತು ಕೆರೋಸಿನ ಎಣ್ಣೆಗಳಷ್ಟೇ ಸರಿಯಾಗಿ ಸಿಗುವದಿಲ್ಲೆಂದು ಈ ತನಕ ದೂರು ಬರುತ್ತಿತ್ತು. ಈಗ ಅಕ್ಕಿಯೂ ಸರಿಯಾಗಿ ಸಿಗುವದಿಲ್ಲವಂತೆ! ಎಷ್ಟೋ ಜನರು ಈ ಬಗ್ಗೆ ದೂರುತ್ತ ಹೊನ್ನಾವರಕ್ಕೆ ಮಾಮಲೇದಾರರಲ್ಲಿ ಬರುತ್ತಾರೆ. ಸೀಧಾ ಅಂಗಡಿಗಳ ಮೇಲೆ ಯೋಗ್ಯ ದೇಖರೇಖ ಮತ್ತು ಅಂಕೆ ಇಲ್ಲದಿದ್ದುದರ ಪರಿಣಾಮವಿದು!

ಇಲ್ಲಿಯ ಸಿವ್ಹಿಲ ಜಜ್ಜ ಸಿಳೀಯ ಇವರಿಗೆ ಬೇರೊಂದು ಕಡೆ ವರ್ಗವಾಗಿದೆ. ೧೯೪೦-೪೧ರಲ್ಲಿ ಶಿರ್ಶಿಯಲ್ಲಿ ಕೆಲಸ ಮಾಡಿದ ರಾ॥ ಎಮ್. ಎಚ್. ಕಾಮ್ಹೆಯವರು ಇಲ್ಲಿ ಬರುತ್ತಾರೆ.

ಮಾವಿನಕುರ್ವೆ, ಹೊದಾರ, ಪಡುಕೋಣ ಮುಂತಾದ ಗ್ರಾಮಗಳಲ್ಲಿ ಇತ್ತೀಚೆಗೆ ಕಳ್ಳ ಸರಾಯಿಯ ನಿರ್ಮಿತಿಯೂ ವ್ಯಾಪಾರವೂ ಬಹಳ ಹೆಚ್ಚಿದೆ! ಅದೇ ಪ್ರಮಾಣದಿಂದ ಕಳವುಗಳೂ ಹೆಚ್ಚಾಗಿವೆ! ಪೋಲೀಸರಾಗಲಿ ಪಟೇಲರಾಗಲಿ ಅವುಗಳ ಪತ್ತೆ ಹಚ್ಚುವ ಪ್ರಯತ್ನ ಮಾಡುವದಿಲ್ಲ. ಕಳ್ಳರಿಗೆ ಇವರಿಗೂ ಒಳಸೂತ್ರಗಳುಂಟೆಂದೂ ಕಳ್ಳರು ಇವರಿಗೆ ನಾಲ್ಕು ಕೊಟ್ಟು ಶಾಂತ ಮಾಡುತ್ತಾರೆಂದೂ ಜನರು ಮಾತಾಡುತ್ತಾರೆ. ಹಾಗಿಲ್ಲದಿದ್ದರೆ ಬೇರೆಯವರಲ್ಲಾದ ಕಳವುಗಳ ಪತ್ತೆ ಹಚ್ಚಲಾರದ ಪೋಲೀಸ-ಪಟೇಲರು (ಮಾವಿನಕುರ್ವೆಯ) ಪಟೇಲರ ತಮ್ಮನ ಅಂಗಡಿಯಲ್ಲಾದ ಕಳವಿನ ಪತ್ತೆಯನ್ನು ಮರುಮುಂಜಾನೆಯೇ ಹಿಡಿದು ಕಳವಿಗೆ ಹೋದ ಎಲ್ಲ ಸಾಮಾನು ಹೇಗೆ ತಿರುಗಿ ತರಿಸಿ ಕೊಡಲು ಸಮರ್ಥರಾದರು? ಎಂದು ಜನರ ಪ್ರಶ್ನೆ. ಹೊಸಾಡದಲ್ಲಿ ಬಾಳ್ಯದಾರನೆಂಬ ಸರಾಯಿಗಳ್ಳನಿದ್ದಾನೆ. ಹಗಲು-ರಾತ್ರಿ ಆತ ಸರಾಯಿ ಕಾಡಿದು ಊರಲ್ಲೆಲ್ಲ ದಂಗಾಮಸ್ತಿ ಮಾಡುತ್ತಾನೆ, ಅವನ ವಿರುದ್ಧ "ಚಾಪ್ಟರ" ಹಚ್ಚಿ ನಾಡ ತನಗೆ ಕಾಯಬೇಕೆಂದು ಊರವರು ಮೆಜಿಸ್ಟ್ರೇಟರಿಗೂ ಪೋಲೀಸರಿಗೂ ಅರ್ಜ ಮಾಡಿದ್ದರಂತೆ. ಅದರಂತೆ ಹೊನ್ನಾವರದಿಂದ ಪೋಲೀಸರು ಬಾಳ್ಯದಾರನ ಸಂಬಂಧದಲ್ಲಿ ಚೌಕಶಿ ಮಾಡಹೋಗಿದ್ದರು. ಆಗ ಮಾವಿನಕುರ್ವೆ ಪಟೇಲರು ಬಾಳ್ಯದಾರನ ಕಡೆಯಿಂದ ರಿಯಾಯತಿ ಮಾಡ ಬಂದಿದ್ದರಂತೆ! ಹೊಸಾಡ ಜಾತ್ರೆಯಲ್ಲಿ ಗಡಗಡೆ ಆಟ ಹಚ್ಚಿಸಲು ಮಾವಿನಕುರ್ವೆ ಪಟೇಲರು ಬಹಳ ಅಟ್ಟಹಾಸ ಮಾಡಿದ್ದರು. ಅವರ ತಂತ್ರ ವಿಫಲವಾಯಿತೆಂಬ ಮಾತು ಬೇರೆ. ಜಿಲ್ಹಾಧಿಕಾರಿಗಳೂ ಪ್ರಾಂತ ಸಾಹೇಬರೂ ಈ ಪಟೇಲರ ನಡತೆಯ ಚೌಕಶಿ ಮಾಡಿ ಯುಕ್ತವೆಂದ ಕ್ರಮಕೈಕೊಳ್ಳಬೇಕಾಗಿ ಮಾವಿನಕುರ್ವೆಯವರನೇಕರು ಪ್ರಾರ್ಥಿಸುತ್ತಾರೆ

ಶಿರ್ಶಿ—(ತಾ ೨೭-೪-೧೯೪೬) ಕಳೆದ ತಾ. ೧೯ನೇಗಾದ ಕಸಬಾ [illegible] ಪ್ರಾಂ॥ ಕಾಂ॥ ಕಮಿಟಿಯ ಚುನಾವಣೆಗೆ ಶಿರ್ಶಿ-ಸಿದ್ದಾಪುರ-ಯಲ್ಲಾಪುರ ವಿಭಾಗದಿಂದ ರಾ॥ ಭೂಮಾ ಬಸೆಟ್ಟಿಯ್ಯ ಮತ್ತು ವೋಟಿನಸರ ತಮ್ಮಪ್ಪ ಹೆಗಡೆ ಇವರು ಹುರಿಯಾಳಾಗಿ ನಿಂತಿದ್ದರು. ಮುಂದೆ ರಾ॥ ಹೆಗಡೆರು ಚುನಾವಣೆಯ ದಿನದವರೆಗೆ ತಮ್ಮ ಹುರಿಯಾಳುತನ ತಿರುಗಿ ತಕ್ಕೊಳ್ಳುತ್ತ ತಾವು ಅವಿರೋಧ ಆರಿಸಿಬಂದಿದ್ದಾರೆ. ಆದರೆ ಈ ಚುನಾವಣೆಯಿಂದ ಇಲ್ಲಿಯ ಕಾಂಗ್ರೆಸ್ಸಿಗರನೇಕರಿಗೆ ಉದ್ವೇಗವುಂಟಾಗಿದೆ. ಈ ತನಕ ಹಲವಾರು ಬಗೆಯಿಂದ ಕಾಂಗ್ರೆಸ ದ್ರೋಹ ಮಾಡಿದ ಹಾಗೂ ತಾನು ಕಾಂಗ್ರೆಸ್ಸಿಗನಲ್ಲೆಂದು ಕೃತಿಯಿಂದಲೂ ಉಕ್ತಿಯಿಂದಲೂ ಆಗಾಗ ತೋರಿಸಿದ ರಾ॥ ವೋಟಿನಸರರು ಪ್ರಾಂತಿಕ ಕಾಂ॥ ಕಮಿಟಿಯ ಸದಸ್ಯರಾಗಲು ಆದರ ಅನರ್ಹರಿರುತ್ತಾರೆಂದು ಅವರ ಪ್ರತಿಪಾದನೆಯುಂಟು. ಬಹಳ ಹಿಂದಿನ ಮಾತು ಬೇಡ, ೧೯೪೪ರಲ್ಲಿ ಸರಕಾರವು ಶಿರ್ಶಿ ನಾಗರಿಕರಿಂದ ಪುಂಡಗಂದಾಯ ವಸೂಲ ಮಾಡಿದಾಗ ತಾವು ಶಿರ್ಶಿ ವಾಸಿಗಳಿರುತ್ತಲೂ ಆಗಿಯೂ ಕಾಂಗ್ರೆಸ್ಸಿನ ಬಗ್ಗೆ ಆಗಲಿ ಅದರ ಕಾರ್ಯದ ಬಗ್ಗೆಯಾಗಲಿ ತಮ್ಮಲ್ಲಿ ಎಳ್ಳಷ್ಟು ಸಹಾನುಭೂತಿಯಿಲ್ಲೆಂದು ನಾಟಕ ತಮ್ಮಿಂದ ವಸೂಲಾದ ಪುಂಡಗಂದಾಯ ತಿರುಗಿ ಕೊಡಿಸಬೇಕೆಂದು ಅಧಿಕಾರಿಗಳ ಕಾಲು ಹಿಡಿದ ರಾ॥ ವೋಟಿನಸರರಿಗೆ ಕಾಂಗ್ರೆಸ್ಸಿನ ಯಾವದೇ ಅಧಿಕಾರಸ್ಥಾನ ಸಹ ಕೊಡಬಾರದಷ್ಟೇ ಅಲ್ಲ, ಅವರಿಗೆ ನಾಲ್ಕಾಣೆಯ ಸಭಾಸ್ಥರಾಗಿ ಮಾಡಿಕೊಳ್ಳುವದೂ ಅನುಚಿತವೆಂದು ಅವರ ಅಂಬೋಣವುಂಟು. ರಾ॥ ವೋಟಿನಸರರ ಆಯ್ಕೆ ರದ್ದುಗೊಳಿಸಿ, ಪುನಃ ಚುನಾವಣೆ ನಡಿಸಬೇಕಾಗಿ ಈ ಜನರು ಪ್ರಾಂತಾಧ್ಯಕ್ಷರಿಗೂ, ಚುನಾವಣೆ ಮಂಡಳಕ್ಕೂ ಅರ್ಜಿ ಮಾಡಿದ್ದಾರೆ.

ಶ್ರೀ ಮಾರಿಕಾಂಬಾ ಪ್ರೌಢ ಗೃಹದಲ್ಲಿ ಇಟ್ಟಿದ್ದ ಒಂದು ಕರೋಸಿನ ಕಳೆಯ ಬೆಳವಣಿಗೆ ಪೂರ್ಣವಾಗಿಲ್ಲವಂತೆ, ಆದರಿಂದ ಅದರ ಮುಚ್ಚಳ ತೆಗೆಯುತ್ತದಂತೆ ಕೂಸು ಇನ್ನೂ ಬದುಕಿಕೊಂಡಿದೆ. ಸಾವಿರಗಟ್ಟಲೆ ಜನರು ಈ ಕೂಸಿನ ತಲೆ ನೋಡಲು ಪ್ರತಿನಿತ್ಯ ಹೋಗುತ್ತಾರೆ

ಜವಳಿ ವರ್ತಕರ ಕಳ್ಳಾಟಿಕೆ.

(ಜಿಲ್ಲಾ-ಸಂಚಾರಿಯು ಸಂಗ್ರಹಿಸಿದ ವರದಿ.)

ಕಳ್ಳ-ಸಂತೆಯ ವ್ಯಾಪಾರಕ್ಕಿಂತ ಈವಾಗ ಜವಳಿಯ ಕಳ್ಳ ವ್ಯಾಪಾರ ಹೆಚ್ಚಾಗಿದೆಯೆಂದು ಹೇಳಿದರೆ ಎಂದೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಕಳ್ಳ ವ್ಯಾಪಾರಕ್ಕೆ ಅಧಿಕಾರಿಗಳು ಕೂಡಲೇ ಮತ್ತು ಕಠಿಣ ಕಠೋರತನದಿಂದ ತಡೆಹಾಕದಿದ್ದರೆ ಜಿಲ್ಲೆಯ ಜನರಲ್ಲಿ ಮುಂದೆ ಹಾಹಾಕಾರ ಏಳುವದೆಂದು ಧಾರಾಳವಾಗಿ ಹೇಳಬಹುದು. ಜಿಲ್ಲೆಯ ಜನಸಂಖ್ಯೆಯ ಮಾನ ನೋಡಿ ಸರಕಾರದವರು ಕೆಲವೊಂದು ಜವಳಿಯನ್ನು ಕೆಲ ವ್ಯಾಪಾರಿಗಳ ಮುಖಾಂತರ ನಮಗೆ ಕಳಿಸಿಕೊಡುತ್ತಾರೆ. ಅಷ್ಟರಿಂದಲೇ ಜಿಲ್ಲೆಯವರ ನಿರ್ವಾಹವಾಗಬೇಕು. ಆದರೆ ಕೆಲ ವರ್ತಕರೂ ಅವರ ಹಲವಾರು ಹಸ್ತಕರೂ ಆ ಜವಳಿಯೊಳಗಿಂದ ಬಹಳಷ್ಟು ಜವಳಿಯನ್ನು ಕಳ್ಳತನದಿಂದ ಕಳ್ಳ ಪೇಟೆಗೆ ಕಳಿಸುತ್ತಿದ್ದಾರೆ! ಇವರ ಕಳ್ಳತನದ ನಮೂನೆಯು ಬಲು ಚಿತ್ತಾಕರ್ಷಕವಿದೆ. ಅದರ ಮಾಹಿತಿ ಸಂಗ್ರಹಿಸಲು ನನಗೆ ಬಹಳ ಕಷ್ಟವಾಯಿತು. ಅಧಿಕಾರಿ-ವರ್ಗದಲ್ಲೂ, ನಾಗರಿಕ-ಸಮಾಜದಲ್ಲೂ, ವ್ಯಾಪಾರಿ ಲೋಕದಲ್ಲೂ ಈ ಜವಳಿ-ವರ್ತಕರ ವರ್ಚಸ್ಸು ಬಹಳವುಂಟು. ಯಾರೂ ಈ ಕಳ್ಳಾಟಿಕೆಯ ಕಥೆಯನ್ನು ಹೇಳಬೊಪ್ಪುವದಿಲ್ಲ! "ವೃತ್ತ"ದ ಸುದ್ದಿಗಾರರ ಮುಂದಂತೂ ಅವರು ಬಾಯಿ ಸಹ ಬಿಡುವದಿಲ್ಲ! ಆದರಿಂದ ನಾನು ನನಗೂ "ವೃತ್ತ"ಕ್ಕೂ ಏನೂ ಸಂಬಂಧವಿಲ್ಲವೆಂಬ ನಟನೆ ಮಾಡಿ, ಅಲ್ಲೊಂದು ಮಾತು ಇಲ್ಲೊಂದು ಮಾತು ಹೀಗೆ ಮಾತು-ಮಾತುಗಳನ್ನೇ ಒಟ್ಟುಗೂಡಿಸಿ ಇದೇ ಕಥೆಯನ್ನು ತಿಳಿಕೊಳ್ಳಬೇಕಾಯಿತು.

"ವೃತ್ತ"ದಲ್ಲಿ ಈ ಹಿಂದೆ ಪ್ರಕಟವಾದಂತೆ ಬಹಳಷ್ಟು ಜವಳಿ — ವಿಶೇಷವಾಗಿ ಜಿನುಗು ಜವಳಿ — ಇರಾಕ, ಇರಾಣಗಳಿಗೆ ಹೋಗಿದೆ. ಈ ವ್ಯಾಪಾರದಲ್ಲಿ ಕಾಶಿಮನೆಂಬವನೊಬ್ಬನು ಮುಖ್ಯ ಸೂತ್ರಧಾರಿಯು. ಕೆಲ ಜವಳಿ ವರ್ತಕರು ಇವನಿಗೆಂದು ಜವಳಿ ಕೊಡುತ್ತಾರೆ. ಅದನ್ನು ಕಾಶೀಮನು "ಭಟಕಳ"ಕ್ಕೆಂದು ಕಳಿಸುತ್ತಾನೆ. ಆದರೆ ಆ ಜವಳಿ ಭಟಕಳಕ್ಕೆ ಹೋಗದೆ ನಡುವೆಯೇ ಮಾಯವಾಗಿ ಬಿಡುತ್ತದೆ! ಕಾರವಾರ ಬಂದರವು ಈ ಕಳ್ಳ ವ್ಯಾಪಾರಕ್ಕೆ ಬಹಳ ಅನುಕೂಲವಾಗಿದೆ. ಇರಾಕ, ಇರಾಣ ಕಡೆಯ ಗಿರಾಕಿಯು ತನ್ನ "ಬಗಲಿ"ಯನ್ನು ಗೋವಾ ಸಮುದ್ರದ ಹೊರಗಿಟ್ಟುಕೊಂಡು ಹಾದಿ ಕಾಯುತ್ತಾನೆ. ಮತ್ತು ಕಾರವಾರದಿಂದ ಜವಳಿ ಗಂಟುಗಳು ಕತ್ತಲೆಯಲ್ಲಿ ಮಚವೆ ಹತ್ತಿ ಈ ಬಗಲಿಯವರೆಗೆ ತಲ್ಪುತ್ತವೆ. ಹೊನ್ನಾವರದವರದೊಂದು ಮಚವೆ ಈ ಕೆಲಸದಲ್ಲಿ ನೆರವಾಗುತ್ತಿತ್ತು. ಹಿಂದೆ ಕಾರವಾರದಿಂದ ೪ ಬಾರಿ ಆ ಮಚವೆ ಇರಾಣಗಳ "ಬಗಲಿ"ಗೆ ಜವಳಿಯ ಗಂಟುಗಳನ್ನು ಸುರಕ್ಷಿತ ಮುಟ್ಟಿಸಿತ್ತು. ಒಂದೊಂದು ಸಾರಿಗೆಗೆ ೫೦೦-೭೦೦ ರೂ. ಸೋಮು ಮಚವೆಯವನಿಗೆ ಸಿಗುತ್ತಿತ್ತು. "ವೃತ್ತ"ದಲ್ಲಿ ಪ್ರಕಟವಾದ ಸುದ್ದಿ ಆ ಮಚವೆಯು ಐದನೆಯ ಸಾರಿಗೆಯದು. ಈ ಎಲ್ಲ ಕಳ್ಳ ವ್ಯಾಪಾರ ಕಾರವಾರ ಮತ್ತು ಭಟಕಳಗಳೊಳಗಿನ ಕಸ್ಟಮ್ಸ ಕಚೇರಿಯವರ ತಿಳುವಳಿಕೆಯಿಂದಲೇ ನಡೆಯುತ್ತಿತ್ತು. ಐದನೆಯ ಬಾರಿ ಮಾತ್ರ ಕಸ್ಟಮ್ಸದವರ ತಿಳುವಳಿಕೆಯಿಂದಲೇ ಜವಳಿ ಗಂಟುಗಳು ಹೊರಗೆ ಹೋಗಿದ್ದವು. ಆದರೆ ಯಾರಿಗೋ "ದಕ್ಷಿಣೆ"ಯ ಪಾಲು ಸರಿಯಾಗಿ ಸಿಗಲಿಲ್ಲ! ಆದ್ದರಿಂದ ಅವರು ಅಸಂತುಷ್ಟರಾಗಿ, ಹೀಗೆ ಹೀಗೆ ಜವಳಿ-ಗಂಟುಗಳು ಕಳ್ಳತನದಿಂದ ರಫ್ತಾಗುತ್ತಿವೆ ಎಂದು ಪೋಲೀಸ ಇಲಾಖೆಯವರಿಗೆ ವರದಿ ಕೊಟ್ಟರು. ಅದರಂತೆ ಪೋಲೀಸ ಅಧಿಕಾರಿಗಳು ಜವಳಿಯನ್ನು ಹಿಡಿದು ಜಪ್ತ ಮಾಡಲು ಸಿದ್ಧರಾದರು. ಈ ಸುದ್ದಿ ಹೇಗೋ ಕಸ್ಟಮ್ಸ ಕಚೇರಿಯವರಿಗೆ ತಿಳಿಯಿತು. ಪೋಲೀಸರು ಮುಂದಾಗಿ ಜವಳಿ ಹಿಡಿದರೆ ತಾವು ಪೇಚಿನಲ್ಲಿ ಬೀಳುವೆವೆಂದೂ, ತಾವು ದಕ್ಷತೆಯಿಂದ ಕೆಲಸ ಮಾಡುವದಿಲ್ಲೆಂದು ಸಿದ್ಧವಾಗುವದೆಂದೂ ಅವರು ಹೆದರಿಕೊಂಡು, ಪೋಲೀಸರು ಬಂದು ಕೈ ಹಾಕುವ ಮುಂಚೆಯೇ ತಾವೇ ಜವಳಿ ಗಂಟುಗಳನ್ನು ಹಿಡಿದು ಜಪ್ತಿ ಮಾಡಿದ ನಾಟಕವನ್ನಾಡಿದರು! ಮತ್ತು ಹಿಂದಿನಿಂದ ರೂ. ೧೦೦೦ಗಳ ರೇವಿಟ್ಟುಕೊಂಡು ಭಟಕಳಕ್ಕೆ ಒಯ್ಯಲು ಸಹಿ ಮಾಡಿಕೊಟ್ಟು ಜವಳಿ ಬಿಟ್ಟುಕೊಟ್ಟರು! ಆ ಜವಳಿ ಬಿಟ್ಟುಕೊಡುವದರಿಂದ ಪೋಲೀಸ ಅಧಿಕಾರಿಗಳು ಹೇಳಿದರೂ ಕಸ್ಟಮ್ಸದವರು ಅವರ ಮಾತಿಗೆ ಕಿವಿಗೊಡದಿದ್ದುದರ ಕಾರಣದ ಅರ್ಥ ಇದರ ಮೇಲಿಂದ ಓದುಗರಿಗೆ ತಿಳಿಯುವಂತಾಯಿತು. ಸದರಿಯಂತೆ ಸಹಿ ಮಾಡಿಕೊಂಡು ಹೊರಟ ಜವಳಿ ಗಂಟುಗಳು ಪೂರ್ವಸಂಕೇತದಂತೆ ಹೊರಗೆ ಕಾದುಕೊಂಡಿದ್ದ 'ಬಗಲಿ'ಗೇ ಮುಟ್ಟಿತು! ನಡುವೆ ಉದ್ಭವಿಸಿದ ಪ್ರಕರಣದಿಂದ ಆ ಸಂಕೇತಕ್ಕೆ ಎಳ್ಳಷ್ಟು ಭಂಗ ಬರಲಿಲ್ಲ! ಜವಳಿ ಗಂಟುಗಳನ್ನು "ಬಗಲಿ"ಯವರಿಗೆ ಒಪ್ಪಿಸಿ ಮಚವೆಯು ಮುಂದೆ ಭಟಕಳಕ್ಕೆ ಹೋಯಿತು; ಮತ್ತು ಸತ್ತಿಯಂತೆ ಸರಕು ಭಟಕಳಕ್ಕೆ ಮುಟ್ಟಿದೆಯೆಂದು ಅಲ್ಲಿ ಕಸ್ಟಮ್ಸದವರಿಂದ ಬರೆಯಿಸಿಕೊಳ್ಳುವ ಪ್ರಯತ್ನ ನಡೆಯಿತು. ಆದರೆ ಏನೇನೂ ಸರಕು ಬರದೆ ಸರಕು ಬಂದಿದೆಯೆಂದು ಬರೆದುಕೊಡಲು ಆ ಕಚೇರಿಯವರು ಒಪ್ಪಲಿಲ್ಲ. ೯ ಪಾಲು ನೀರು ಮತ್ತು ೧ ಪಾಲು ಹಾಲು ಇದ್ದ ಮಿಶ್ರಣಕ್ಕೆ ಒಂದು ವೇಳೆ ಹಾಲು ಎಂದು ಸಂಬೋಧಿಸಬಹುದು, ಆದರೆ ಹಾಲೇ ಇಲ್ಲದ ಮತ್ತು ಹಾಲಿನ ಬಳುಕೂ ಇಲ್ಲದ ಬರೇ ನೀರಿಗೆ ಹಾಲೆಂದು ಹೇಳುವ ಎದೆಗಾರಿಕೆ ತಾವು ಮಾಡಲಾರೆವೆಂದು ಭಟಕಳ ಕಸ್ಟಮ್ಸದವರು ಹೇಳಿದರಂತೆ! ಈಗ ಮುಂದೇನು ಮಾಡುವದು ಎಂಬ ಪ್ರಶ್ನೆ ಉಂಟಾಯಿತು. ಮತ್ತು ಕಳ್ಳರು ಆಲೋಚನೆಯಲ್ಲಿ ಬಿದ್ದರು. ಮಚವೆಯನ್ನೇ ಮುಳುಗಿಸಿ ಬಿಡುವದೊಳಿತೆಂದು ಕಳ್ಳರ ನಿರ್ಣಯವಾಯಿತು. ಮಚವೆಯ ಬೆಲೆ ರೂ. ೨೦೦೦ ಎಂದು ಮಚವೆಯವನು ಹೇಳಿದನು. ಅವನಿಗೆ ಹಿಂದಿನ ೪ ಸಾರಿಗೆಗಳ ಬಗ್ಗೆ ಹೇಗೂ ಈ ಹಣ ದೊರೆತಿತ್ತು. ಆದರಿಂದ ರೂ. ೧೫೦೦ ತೆಗೆದುಕೊಂಡು ಮಚವೆಯವನು ಕಲ್ಪಿತ "ಬಿರುಗಾಳಿ"ಯಲ್ಲಿ ತನ್ನ ಮಚವೆ ಮುಳುಗಿಸಿ, ಮಚವೆಯೂ ಅದರೊಳಗಿದ್ದ ಅಂದರೆ (ಕಾರವಾರದಿಂದ ಸತ್ತಿಯ ಪ್ರಕಾರ ಹೊರಟ) ಸರಕೂ ಕಡಲೊಳಗೆ ಮುಳುಗಿ ಹೋಯಿತೆಂದು ವರದಿ ಕೊಡಬೇಕಾಗಿ ಕಳ್ಳರ ಕೂಟದಲ್ಲಿ ತೀರ್ಮಾನವಾಯಿತು! ಅದರಂತೆ ಮುಂದೆ ಆ ಮಚವೆ ಹೊನ್ನಾವರ ಸಮೀಪ ಸಮುದ್ರದಲ್ಲಿ "ಒಡೆದು ಮುಳುಗಿ" ಹೋಯಿತು! ಮಚವೆ ಮುಳುಗುವ ಮುಂಚೆ ಅದರೊಳಗಿನ ಕಳ್ಳಸಿದ್ದ ಸಾಮಾನು (ಹಗ್ಗ, ಹಾಯಿ ಮೊದಲಾದವುಗಳನ್ನು) ಮಚವೆಯವನು ತೆಗೆದಿಟ್ಟನಂತೆ. ಮಚವೆಯನ್ನು ಕೂಡ ಸುರಕ್ಷಿತ ಸ್ಥಳದಲ್ಲೇ ಒಡೆದು ಅದರ ಹಲಗೆ ಮೊದಲಾದ ಎಲ್ಲ ಸಾಹಿತ್ಯವನ್ನು ಒಟ್ಟುಗೂಡಿಸಿ ಕಾಸರಕೋಡ ಬೇಲೆಯ ಮೇಲೆ ಒಂದು ಕಡೆ ದಾಸ್ತಾನ ಮಾಡಿಟ್ಟಿದ್ದಾನೆ! ಬರುವ ಮಳೆಗಾಲದಲ್ಲಿ ಆ ಸಾಹಿತ್ಯದಿಂದ ಅವನು ಬೇರೊಂದು ಮಚವೆ ಕಟ್ಟಿಸಲಿದ್ದಾನಂತೆ. ಅಧಿಕಾರಿಗಳು ಈ ಮಚವೆಯವನನ್ನು ಹಿಡಿದು, ಅವನಿಂದ ಮಚವೆ ಒಡೆದ ಸ್ಥಳ ತಿಳಕೊಂಡು, ಅಲ್ಲಿ ಸಮುದ್ರ-ಮುಳುಗರನ್ನು ಮುಳುಗಿಸಿ ತಲಾಶಿ ಮಾಡಿಸಿದಲ್ಲಿ, ಆ ಸ್ಥಳದಲ್ಲಿ ಒಂದೂ ಜವಳಿ ಗಂಟು ಸಿಗಲಿಕ್ಕಿಲ್ಲೆಂದು ನಾನು ಪಣ ಕೊಟ್ಟು ಹೇಳಬಲ್ಲೆ. ಆದರೆ ಈ ಕೇಸಿಗೆ ಹಟವಾದಿ ಮತ್ತು ತತ್ಪರ ಪೋಲೀಸ-ಅಧಿಕಾರಿಗಳು ಬೇಕು. ಎಷ್ಟೇ ಖರ್ಚು ಮತ್ತು ಶ್ರಮ ಬೀಳಲಿ,

THE PROGRESS OF THE "POPULAR"

YEAR	NEW BUSINESS	ANNUAL INCOME	LIFE ASSCE FUND
1930	Rs. 3,00,500	Rs. 14,120	Rs 3,709
1934	Rs. 5,48,896	Rs. 54,959	Rs 50,110
1938	Rs 7,47,931	Rs. 84,830	Rs. 1,38,915
1942	Rs. 8,24,450	Rs 1,26,250	Rs. 3 00,230
1945	**Rs. 20,30,350**	**Rs, 3,07,029**	**Rs. 6,34,607**

During the last five years, the BUSINESS IN FORCE has increased by 250% and the ANNUAL INCOME by 300%. During the same period, the RENEWAL EXPENSE RATIO has been lowered from 36 3% to 13.7%

Now is the time to join the Company's expanding Field Force

Represent the "POPULAR" and start on an independent career

Applications invited for salaried appointments as ORGANISERS and for CHIEF AND SPECIAL AGENCIES on commission basis, in North Kanara and other unrepresented areas. Liberal terms and permanent connections.

Write to:— ***The Managing Director,***

The Popular Insurance Co., Ltd.,

HEAD OFFICE: **MANGALORE** S. INDIA.

ಸಮುದ್ರಗಳ್ಳರ ನಿರ್ಮೂಲನೆ ಮಾಡಿಯೇ ಬಿಡಬೇಕು ಎಂಬ ಛಲ ಹಿಡಿದು ಪ್ರತಿಜ್ಞಾ-ಪೂರ್ವಕ ಕೆಲಸ ಮಾಡುವ ಶೋಧಕಬುದ್ಧಿಯು ಮುಂದಿ ಬೇಕು

ಮೇಲಿನ ಕಳ್ಳಾಟಿಕೆಯು ವ್ಯಾಪಾರ ಕಾರಿಮನೊಬ್ಬನದೇ ಎಂದು ತಿಳಿಯುವದು ತಪ್ಪು. ಇವಳಿಯ ರೋಕ ವರ್ತಕರದೂ ಇದರಲ್ಲಿ ಅಂಗವುಂಟು, ಪ್ರಮುಖರೇ ಅವರೆಂದು ಹೇಳಿದರೂ ಹೇಳಬಹುದು. ಜಿಲ್ಹಾಧಿಪರ ಕಚೇರಿಯವರು ಮಾತ್ರ ಈ ಮಹಾ ಕಳ್ಳಕಳ್ಳಕನೆ ದುರ್ಲಕ್ಷ ಮಾಡಿ ಎಲ್ಲ ದೋಷವನ್ನು ಕಾರಿಮನ ಮೇಲೆಯೇ ಹೊರಿಸುತ್ತಿದ್ದಾರಂತೆ! ರೋಕ ವರ್ತಕರ ಮೋಹಿನೀ-ಮಂತ್ರದ ಪ್ರಭಾವವದು!! ರೋಕ ವರ್ತಕರ ಅಂಗ ಈ ಕಳ್ಳ ವ್ಯಾಪಾರದಲ್ಲುಂಟೆಂಬುದರ ಬಗ್ಗೆ ಬೇರೆ ಪುರಾವೆ ಬೇಡ. ಭಟಕಳ-ವ್ಯಾಪಾರಿಗೆ ಕೊಡತಕ್ಕ ಜವಳಿಯನ್ನು ಅವರು ಭಟಕಳಿಯಲ್ಲಾಗಲಿ ಕುಮಟೆಯಲ್ಲಾಗಲಿ ಕೊಡದೆ, ಮೋಟಾರ-ಲಾರಿಗಳಲ್ಲಿ ಅದನ್ನು ದೂರದಲ್ಲಿರುವ ಕಾರವಾರಕ್ಕೆ ಒಯ್ದು, ಅಲ್ಲಿ ಅದರ ಬಟವಡೆ ಮಾಡುತ್ತಿದ್ದ ಒಂದೇ ಒಂದು ಸಂಗತಿ ಕಳ್ಳಾಟಿಕೆಯಲ್ಲಿ ಅವರ ಅಂಗವುಂಟೆಂಬುದನ್ನು ಸಿದ್ಧಗೊಳಿಸುತ್ತದೆ. ಈ ವಿಚಾರಸರಣಿಯು ಜಿಲ್ಹಾಧಿಕಾರಿಗಳಿಗೆ ಏಕೆ ಹೊಳೆಯುವದಿಲ್ಲ!

ಸಮುದ್ರ ಮಾರ್ಗದಂತೆ ನೆಲಮಾರ್ಗದಿಂದಲೂ ಬಹಳಷ್ಟು ಜವಳಿ ಪರಸ್ಥಳಗಳಿಗೆ ಜಾರಿ ಹೋಗುತ್ತದೆ. ಕೆಲವು ದಿನಗಳ ಹಿಂದೆ ಮಾಡಾಳಿಯ ಹತ್ತಿರ ಗೋವಾ-ಗಡಿಯ ಮೇಲೆ ಕೆಲವು ಜವಳಿಯ ಗಂಟುಗಳು ಸಿಕ್ಕಿದ್ದವೆಂದೂ, ಪಟ್ಟಿಯ ಕಾಲಕ್ಕೆ ಅವುಗಳ ಮಾಲೀಕರಾರೆಂದು ತಿಳಿಯಲಿಲ್ಲವಾಗಿಯೂ ಸುದ್ದಿಯುಂಟು. ಹಾಗೆ ಮೇಲಿಂದ ಮೇಲೆ ಚೌಕಶಿ ಮಾಡದೆ, ಒಡೆಯನಿಲ್ಲದ ಆ ಜವಳಿಯ ಮುದ್ರೆ, ನಂಬರ ವಗೈರೆ ನೋಡಿಕೊಂಡು ಮಾಲ-ಶೋಧನ ಪದ್ಧತಿಯಿಂದ ತಪಾಸಣೆ ಮಾಡಿದರೆ ಕಳ್ಳರ ಪತ್ತೆ ಸಹಜವಾಗಿ ಸಿಗುವಂತುಂಟು. ಅದಕ್ಕೆ ಚಾತುರ್ಯ ಮತ್ತು ಬುದ್ಧಿಶಾಲಿತ್ವ ಬೇಕು. ನಮ್ಮಲ್ಲಿಯ ಪೋಲೀಸರೊಳಗೂ ಶಿಪಾಯಿ-ಅಧಿಕಾರಿಗಳೊಳಗೂ ಈ ಗುಣಗಳುಂಟೆಂದು ನಾ ಹೇಳಲಾರೆ.

ಬನವಾಸಿಯ ಮಾರ್ಗವಾಗಿ ಮೈಸೂರ ಸೀಮೆಗೂ ಬಹಳಷ್ಟು ಜವಳಿ — ಹೆಚ್ಚಾಗಿ ಜನುಗು ಧೋತಿಗಳು ರಫ್ತಾಗುತ್ತಿವೆ. ಬನವಾಸಿಯ ಕೆಲವು ವರ್ತಕರು ಇದೇ ಕೆಲಸಕ್ಕಾಗಿ ಕುಮಟೆಯಲ್ಲಿ ವ್ಯವಹರಿಸುತ್ತಿದ್ದಾರೆ. ಕಳೆದ ಶುಕ್ರವಾರ ಕುಮಟೆಯಲ್ಲಾದ ಕಥೆ ಕೇಳಿರಿ. ಕುಮಟೆಯ ಅಂಗಡಿಗಳಲ್ಲಿ ಚಲೋ ಧೋತರಗಳು ಸಿಗದೆ ರೇಗಿಗೆದ್ದ ಕೆಲವು ನಾಗರಿಕರು ವರ್ತಕರ ಕಳ್ಳತನ ಹಿಡಿಯಬೇಕೆಂದು ಅಲ್ಲಲ್ಲಿ ಗುಪ್ತ ಕಾವಲಿಟ್ಟಿದ್ದರು. ಶುಕ್ರವಾರ ರಾತ್ರಿ ಕುಮಟೆಯ ಸುಮಾರಿನ ಕುಮಟೆಯ "ಸಿದ್ಧಿಕ್ ಸ್ಟೋರ್ಸ"ದ ಸಮೀಪದಲ್ಲಿರುವ ಒಂದು ಮಾಳಿಗೆಯಲ್ಲಿ ಧೋತರ-ಜೋಡಿಗಳ ಗಂಟು ಒಂದು ಇದ್ದದ್ದು ಈ ಕಾವಲುಗಾರರಿಗೆ ತಿಳಿಯಿತು. ಚೌಕಶಿ ಮಾಡಲಾಗಿ ಆ ಗಂಟು ಬನವಾಸಿಯವರದಿರುತ್ತದೆಂದೂ, ಬನವಾಸಿಯವರು ಮಾಳಿಗೆಯವರ ಅಟ್ಟದಲ್ಲಿ ಮಲಗಿದ್ದಾರೆಂತಲೂ ತಿಳಿದು ಬಂತು. ಕೂಡಲೆ ಜನರು ಫೌಜದಾರ-ಮಾಮಲೇದಾರರಿಗೆ ಕರೆತಂದು ಆ ಗಂಟಿನೊಳಗಿದ್ದ ಜವಳಿಯ ಪಂಚನಾಮೆ ಮಾಡಿಸಿದರು. ಗಂಟಿನಲ್ಲಿ ಉತ್ತಮ ತರಗತಿಯ ಹನ್ನೆರಡೂ [illegible] ಧೋತರ-ಜೋಡಿಗಳಿದ್ದವು. ಪಂಚನಾಮೆ ಮಾಡಿದಾಗಲೇ ಬನವಾಸಿಯವರ ಹೇಳಿಕೆಯನ್ನು ಪೋಲೀಸರು ಬರೆದುಕೊಂಡಿದ್ದರೆ ಕಳ್ಳತನದ ಗುಟ್ಟು ಅಲ್ಲೇ ರಟ್ಟಾಗುತ್ತಿತ್ತು. ಆದರೆ ಅಧಿಕಾರಿಗಳು ಆ ಹೇಳಿಕೆ ಬರೆಕೊಳ್ಳಲೂ ಇಲ್ಲ, ಕೇಳಿಕೊಳ್ಳಲೂ ಇಲ್ಲ! ಕೂಡಿದ ಜನರು ಮತ್ತು ಪಂಚರು ಒತ್ತಾಯ ಮಾಡಿದರೂ ಅದಾಗಲೇ ಹಾಗೆ ಹೇಳಿಕೆ ಬರೆಕೊಳ್ಳಬರುವದಿಲ್ಲೆಂದು ನುಡಿದು ಯಾವದೋ "ಹಾಯಕೋರ್ಟ ರೂಲ್ಸ"ಗಳ ಆಧಾರ ಹೇಳಿದರಂತೆ! ಮರುದಿನ ಮುಂಜಾನೆ ಚಕ್ರ ತಿರುಗಿತು; ಮತ್ತು ಫೌಜದಾರ ರಾ|| ಚಕ್ರದೇವರಿಗೂ ರೋಕ ವರ್ತಕರಿಗೂ ರಹಸ್ಯಮಯ ಭೆಟ್ಟಿಯಾಗಿ ಮುನ್ನಾಣ ದಿನದ ಪಂಚನಾಮೆಯೊಳಗಿನ ದಾಖಲೆ-ಪಟ್ಟಿಯಲ್ಲ ಕಣ್ಣುಗಾಗಿ ಬಿಟ್ಟರಂತೆ! ಆ ಪಂಚನಾಮೆಯು ಮುಂದಿನ ಗತಿಯೇನಾಗುತ್ತದೆಂದು ನೋಡಲು ಜನರು ಕುತೂಹಲಪಡುತ್ತಿದ್ದಾರೆ.

ಹುಡುಕ್ಕಾಡಿದರೂ ಎಲ್ಲಿಯೂ ಧೋತರಗಳು ಸಿಗುವದಿಲ್ಲ! ಎಲ್ಲ ಧೋತರಗಳೂ ಜನುಗು ಜವಳಿಯೂ ಕಳ್ಳ ಪೇಟೆಗೆ ಹೋಗುತ್ತದೆ! ಜವಳಿಯ "ಕೋಟಾ" ಸಿಕ್ಕ ಮರುದಿನವೇ ಅಂಗಡಿಗೆ ಹೋದರೂ "ಎಲ್ಲ ಧೋತರಗಳು ಖಲಾಸ"ಾದ ನೋಟ ಕಣ್ಣಿಗೆ ಬೀಳುತ್ತದೆ! ಅಂಗಡಿಯವರು ಒಮ್ಮೊಮ್ಮೆ ತಮ್ಮ ಒಳನೋಟ ಹೊರಗೆ ಬೀಳಬಾರದೆಂದು ಅಂಗಡಿಯ ಬಾಗಿಲು ಸಹ ಪೂರ್ಣ ತೆರೆಯುವದಿಲ್ಲ. ಇಲ್ಲೂ ಬನವಾಸಿಯವರ ವಿರೋಧಿಯ ಉಪಟಳವುಂಟು. ಕೆಲ ದಿನಗಳ ಹಿಂದೆ ಒಂದು ಜವಳಿಯ ಗಂಟು ಬನವಾಸಿಗೆ ಹೋಗಲು ಶಿರ್ಸಿಗೆ ಹೋಗುವ ಬಂಡಿಯಲ್ಲಿ ಹತ್ತಿಕೊಂಡಿತ್ತು. ಅದನ್ನು ಮೋಟಾರ ಏಜಂಟರೊಬ್ಬರು ಕಂಟ್ರೋಲ-ಫೌಜದಾರ ಅಹಮ್ಮದ ಖಾನರಿಗೆ ತೋರಿಸಿ ಪಂಚನಾಮೆ ಮಾಡಲು ಸೂಚಿಸಿದರು. ಆದರೆ ಅಹಮ್ಮದಖಾನರು ಒಪ್ಪಲಿಲ್ಲ! "ಜಿಲ್ಹೆಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಜವಳಿ ಹೋಗಲು ಕಾಯದೆಯ ಪ್ರತಿಬಂಧವಿಲ್ಲ" ಎಂದು ಅವರು ಕಾಯದೆ ಹೇಳಿದರಂತೆ! ಪಂಚನಾಮೆ ಮಾಡಿಸಲು "ವೃತ್ತ"ದ ಸ್ಥಾನಿಕ ಪ್ರತಿನಿಧಿಗಳಿಗೆ ತಿಳಿಸಿರಿ ಎಂಬ ವಕ್ರೋಕ್ತಿಯನ್ನೂ ಅವರು ಆಡಿದ ಸುದ್ದಿಯುಂಟು! ಇದರಿಂದಲೇ ಹೊನ್ನಾವರದೊಳಗಿನ ಜವಳಿ ಅಂಗಡಿಯವರಿಗೆ ನಿಯಂತ್ರಣಾಧಿಕಾರಿಗಳ ಅಂಜಿಕೆಯಿಲ್ಲದಂತಾಗಿದೆ. ಜವಳಿಯನ್ನು ರೇಶನ್-ಪದ್ಧತಿಯಿಂದ ಹಂಚುವ ಇಲ್ಲವೆ ಆಯಾ ಊರಿನ ಲೋಕ-ನಿಯುಕ್ತ ಪ್ರತಿನಿಧಿಗಳನ್ನು ನೇಮಿಸಿ ಅವರ ಚೀಟಿ ತಂದವರಿಗಷ್ಟೇ ಅಂಗಡಿಕಾರರು ಧೋತರ ಮೊದಲಾದ ಜನುಗು ಜವಳಿ ಮಾರತಕ್ಕದ್ದು ಎನ್ನುವ ವ್ಯವಸ್ಥೆಯಾದರೆ ಮಾತ್ರ ಈ ಕಳ್ಳತನ ಕಡಿಮೆಯಾದೀತು. ಬಹುತೇಕ ಜವಳಿ ಅಂಗಡಿಗಳಲ್ಲಿ ಕಳ್ಳಾಟಿಕೆ ನಡೆದದ್ದು ತೋರುವದರಿಂದ ಎಲ್ಲ ಕಡೆಗೂ ಇದೇ ಯೋಜನೆಯಾಗಬೇಕಾಗಿ ನನ್ನ ಅಭಿಪ್ರಾಯವುಂಟು. ನಾನು ನೂರಾರು ಅಂಗಡಿಗಳನ್ನು ನೋಡಿದ್ದೇನೆ. ಅವುಗಳಲ್ಲಿ ಹಳೆಯ ಶಿಲ್ಕು ಇಲ್ಲವೆ ಒರಟು ಜವಳಿಯಷ್ಟೇ ಕಣ್ಣಿಗೆ ಬಿತ್ತು. ಜನುಗು ಜವಳಿ ಎಲ್ಲೆಲ್ಲೂ ಕಾಣಲಿಲ್ಲ! ಜನುಗು ಜವಳಿ ಬೇಕಾದವರು ಅಂಗಡಿಯವರ ಹತ್ತಿರ ಮೆಲ್ಲಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಅಂತರಂಗದಿಂದಲೇ ವ್ಯವಹಾರ ಮಾಡಬೇಕಾಗುತ್ತದೆ! ಎಲ್ಲೆಲ್ಲೂ ಕಳ್ಳತನದ ಸಾಮ್ರಾಜ್ಯ ಹಬ್ಬಿದೆ! ಈ ಸಾಮ್ರಾಜ್ಯ ಮುರಿದೊಗೆಯಬೇಕಾದರೆ ಒಟ್ಲೀನ ದಂಡನೀತಿಯೇ ಬೇಕು! ಬ್ರಿಟಿಶರ ನ್ಯಾಯಪದ್ಧತಿಯಿಂದ ಈ ಕಾರ್ಯವೆಂದೂ ಆಗುವಂತಿಲ್ಲ.

ಜಾಹೀರ ನಿಮಂತ್ರಣೆ.

ಗೋವಾ ಪ್ರಾಂತ ಮ್ಹಾಡದೋಳದ ಶ್ರೀ ಮ್ಹಾಳಸಾ ದೇವಸ್ಥಾನದಲ್ಲಿ ಇದೇ ಬರುವ ವೈಶಾಖ ಶು|| ೪ ಯಾ (ಅಕ್ಷಯ್ಯ ೩ಗೆ) ಶನಿವಾರ (ತಾ. ೪ ಮೇ ೧೯೪೬) ದಿನ ಪೂರ್ವಾಹ್ಣದಲ್ಲಿ ಶ್ರೀ ಮ್ಹಾಳಸಾ ಹಾಗೂ ಶ್ರೀ ಶಾಂತಾದುರ್ಗಾ ದೇವತೆಗಳ ಪಾಂಚಪ್ಪ (ಪಂಚಾಂಗ) ದೇವತೆಗಳನ್ನು (ಕುಮಟೆಯ ಮಿಣಮಿಣೆ ಕುಟುಂಬದವರು ಕಟ್ಟಿಸಿಕೊಟ್ಟ) ಹೊಸ ಇಮಾರತಿನಲ್ಲಿ ಸ್ಥಳಾಂತರಿಸಿ ಪ್ರತಿಷ್ಠೆ ಮಾಡುವದು ನಿಶ್ಚಯಿಸಲ್ಪಟ್ಟಿದೆ. ಅದೇ ಕಾಲಕ್ಕೆ ಶ್ರೀ ಸನ್ನಿಧಿಯಲ್ಲಿ ಶ್ರೀ ಮಹಾವಿಷ್ಣು-ಯಾಗವೂ ನಡೆಯುವದು. ಈ ವಿಧಾನಗಳು ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶ ಶ್ರೀಮದ್ ದ್ವಾರಕಾನಾಥತೀರ್ಥರ ನೇತೃತ್ವದಲ್ಲಿ ಕೊನೆಗೊಳ್ಳುವವು. ಶ್ರೀ ಸಂಸ್ಥಾನದ ಎಲ್ಲ ಕುಳಾವಿಗಳೂ ಭಕ್ತರೂ ಈ ಉತ್ಸವಗಳಿಗೆ ಬಂದು, ಶ್ರೀ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿಯೂ ಶ್ರೀ ಸಂಸ್ಥಾನದಿಂದ ವ್ಯಕ್ತಿಶಃ ನಿಮಂತ್ರಣೆ ಎಂದು ತಪ್ಪಿದಲ್ಲಿ ಇದೇ ತಮಗೆ ನಿಮಂತ್ರಣೆಯೆಂದು ತಿಳಿದುಕೊಳ್ಳಬೇಕಾಗಿಯೂ ಬಿನ್ನಹವಿದೆ. ಮೇಲಿನ ಧರ್ಮಕಾರ್ಯಗಳಿಗಾಗಿ ಕಾಣಿಕೆ ಸಲ್ಲಿಸಬಿಚ್ಛಿಸುವವರು 'ಕಾರ್ಯಾಧಿಕಾರ, ಶ್ರೀ ಸಂಸ್ಥಾನ ಮ್ಹಾಳಸಾ, ಮ್ಹಾಡದೋಳ, ಗೋವಾ' ಈ ಪತ್ತೆಯ ಮೇಲೆ ಕಳಿಸಿಕೊಡಬೇಕು. ಅವರಿಗೆ ರೀತಿಯಂತೆ ಪಾವತಿ ಸಿಗುವದು.

ತಾ ೧೪-೪-೧೯೪೬

ಯಶವಂತ ವಿಷ್ಣು ಪೈ ರಾಯತೂರಕರ.
ವ್ಯವಸ್ಥಾ-ಕಮಿಟಿಯ ಸದಸ್ಯ

ಪೊಪ್ಯುಲರ ಇನ್ಶ್ಯೂರನ್ಸ ಕಂಪನಿ, ಲಿ.,

ಮುಖ್ಯ ಕಚೇರಿ: ಮಂಗಳೂರ.

ಮೇಲಿನ ವಿಮಾ ಕಂಪನಿಯ ೧೯೪೫ನೇ ಸಾಲಿನ ವರದಿ ಕಳೆದ ತಿಂಗಳಲ್ಲಿ ಪ್ರಕಟವಾಗಿದೆ. ವರದಿಯ ವರುಷದಲ್ಲಿ ಕಂಪನಿಯು ರೂ. ೨೦,೯೦,೫೫೦ ರ ಜೀವದ ವಿಮೆಗಳನ್ನು ಇಳಿಸಿದ್ದು, ರೂ ೫,೦೬,೦೨೯ ರಷ್ಟು ವಾರ್ಷಿಕ ಕಂತಿನ ಹಣ ವಸೂಲ ಮಾಡಿದೆ, ಮತ್ತು ವರದಿಯ ಅವಧಿಯ ಕೊನೆಗೆ ಕಂಪನಿಯ ಜೀವ-ವಿಮಾ ನಿಧಿಯು ರೂ. ೬,೩೪,೬೦೭ಕ್ಕೆ ಮುಟ್ಟಿದೆ. ಕಳೆದ ೫ ವರುಷಗಳಲ್ಲಿ ಕಂಪನಿಯು ಭರದಿಂದ ಪ್ರಗತಿ ಮಾಡಿದ್ದು, ಈ ಅವಧಿಯಲ್ಲಿ ಅದರ ವಿಮಾ-ವ್ಯವಹಾರ ೨೫ ಪಟ್ಟು ಆಗಿದೆ; ವಾರ್ಷಿಕ ಉತ್ಪನ್ನ ಮೂರು ಪಟ್ಟಿಗೆ ಬೆಳೆದಿದೆ. ಆ ಮಾನದಿಂದ ಕಂಪನಿಯು ಹೆಚ್ಚಿದ ಪ್ರಮಾಣದಲ್ಲಿ ಬೆಳೆದಿರಬಹುದೆಂದು ಯಾರಾದರೂ ಕಲ್ಪನೆ ಮಾಡಬಹುದು. ಆದರೆ ಆ ಕಲ್ಪನೆ ಸರಿಯಲ್ಲ. ವಿಮೆಗಳ ಪುನರುಜ್ಜೀವನದ ಹೆಚ್ಚಿದ ಪ್ರಮಾಣವು ಸದರಿ ಅವಧಿಯ ಪ್ರಾರಂಭಕ್ಕೆ ನೂರಕ್ಕೆ ೩೬.೬ ಇದ್ದದ್ದು ಅವಧಿಯ ಕೊನೆಯ ವರುಷದಲ್ಲಿ ನೂರಕ್ಕೆ ೧೩.೭೮ರಷ್ಟಾಗಿದೆ. ಕಂಪನಿಯ ಆಯ-ವ್ಯಯ ಪತ್ರಿಕೆಯನ್ನೂ, ಸಾಲ-ಹುಂಡಿಗಳ ಪತ್ರಿಕೆಯನ್ನೂ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ಕಂಪನಿಯು ಭದ್ರತೆ, ಮಿತವ್ಯಯ ಮತ್ತು ವಿಮೆ ತೆಗೆದವರ ಹಿತಸಂಬಂಧಗಳ ಸಂರಕ್ಷಣೆ ಇವುಗಳ ಕಡೆ ವಿಶೇಷ ಲಕ್ಷ ಪುರೈಸುತ್ತದೆಯೆಂದು ಯಾರಿಗೂ ಮನವರಿಕೆಯಾಗುವಂತುಂಟು.

The Presidency Provident & General Insurance Co., Ltd.,
Meherwan Building, Sir. P. M. Road,
Fort, BOMBAY.

NOTICE.

Notice is hereby given that the I class Policy No. 60106 granted by the above Company in the name of Mr. V P. Naik under the Agency of M/s. K Shetti & Sons of Ankola is lost or mislaid? Any person claiming the above Policy should notify his claim to the Company within one month from this date, as, otherwise, the Company will issue a duplicate copy of the above Policy to the Policy-holder.

N. J GoR,
24-4-1946. *Managing Director.*

ನಮ್ಮಲ್ಲಿ (ಹೋಲಸೇಲ) ತೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ. ಎಸ್. ಮಿಜಾರನಕರ,
ಲಾಯಸನ್ಸಿ, ಮೋಟರ ಸ್ಟೆಂಡ, ಕುಮಟಾ.

ದಿ ಕೊಮರ್ಶಿಯಲ್ ಕೊಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ.
ಪಿ. ಎಸ್. ಮಿಜಾರನಕರ,
ಮೋಟರ ಸ್ಟೆಂಡ, ಕುಮಟಾ

THE BANK OF RURAL INDIA, LTD.,
(Incorporated in British India under the Indian Companies Act, 1913)
HEAD OFFICE:- "Satyabhama Bhavan", KARWAR.
Offices at:- KARWAR, KUMTA, SIRSI, HONAVAR & YELLAPUR.
Authorised Capital -- Rs. 10,00,000;
Subscribed Capital -- Rs. 5,00,000;
Paid-up Capital -- Rs 2,60,000.
Rates of Interest on Deposits:
Current a/c. @ 1% p. a *Savings Bank a/c @ 2½%*
Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "
All Kinds of modern Banking business transacted.
Karwar, 15 3-1946
P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ.ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿಯು ಮುಂಗಡ ಕಳಿಸತಕ್ಕದ್ದು

Reg. No. M 1270. Monday, 6th May, 1946.

ಕಾನಡಾವೃತ್ತ

ವರ್ಷ ೩೮.] THE KANARA NEWS. [ಸಂಚಿಕೆ ೪೪.

ಕುಮಟೆ:- ಸೋಮವಾರ, ತಾ. ೬ ಮಾಹೆ ಮೇ ೧೯೪೬ನೇ ಇಸವಿ

ಜಾಹೀರಾತುಗಳ ದರ:
ಸ್ಥಲಪ್ರಕಾರ ೧ ಕಾಲಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಸ್ಥಾನಿಕ ವೃತ್ತಾಂತ. (೨ನೇ ಪುಟದಿಂದ ಮುಂದೆ.)

ಸೀಧಾ-ಅಂಗಡಿಗಳಲ್ಲಿ ಸಿಗುವ ಅಕ್ಕಿ ಬಹಳ ಹೀನ ಜಾತಿಯದಿರುತ್ತದೆ. ಗಿರಾಕಿಗಳಿಗೆ ಸರಕಾರದವರು ಒಳ್ಳೇ ಜಾತಿಯ ಭತ್ತ ಕೊಡುತ್ತಿರುವಾಗ ಅಲ್ಲಿಂದ ಬರುತ್ತಿರುವ ಅಕ್ಕಿ ಹೀಗೇಕೆ ಹೀನ ತರಗತಿಯದಿರುತ್ತದೆಂಬುವದರ ಚೌಕಶಿಯಾಗಬಾರದೇ?

ಕಳೆದ ವರ್ಷದ ಆಹಾರ-ಧಾನ್ಯಗಳ ಖರೇದಿ-ವಿಕ್ರಿಯ ಸರಕಾರಿ ಜಮಾ-ಖರ್ಚು ಪತ್ರಕ ಇದೀಗ ಹೊರಬಿದ್ದದೆಯೆಂದೂ ಸರಕಾರಕ್ಕೆ ಈ ವ್ಯವಹಾರದಲ್ಲಿ ೧೦ ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಹಾನಿಯಾಗಿದೆಯೆಂದೂ ಒಂದು ಸುದ್ದಿಯಿದೆ. ಈ ಸುದ್ದಿ ಕೇಳಿ ವರ್ತಕರು ನಗುತ್ತಾರೆ! ಚೀಲ ಒಂದಕ್ಕೆ ಸರಾಸರಿ ೧೦॥ ರೂ. ದರದಿಂದ ಭತ್ತ ಖರೀದಿಸಿ, (೧ ಚೀಲ ಭತ್ತಕ್ಕೆ ೧ ಮಣಗಿ ಯಾನೆ ಮುಡಿ ಅಕ್ಕಿಯಾಗುತ್ತಿರುವದರಿಂದ) ಅದರ ಅಕ್ಕಿಯನ್ನು ಸೀಧಾ-ಕ್ಷೇತ್ರಗಳಲ್ಲಿ ರೂ. ೧೫॥ಯಂತೆಯೂ, ಸೀಧೇತರ ಕ್ಷೇತ್ರಗಳಲ್ಲಿ ರೂ. ೧೬॥ಗಳಂತೆಯೂ ಮಾರಾಟ ಮಾಡುವಾಗ ಇಷ್ಟು ಹಾನಿ ಹ್ಯಾಗಾಯಿತೆಂದು ವರ್ತಕರ ಪ್ರಶ್ನೆ! ಈ ವ್ಯವಹಾರ ನಾವು ಮಾಡಿದ್ದರೆ ಪ್ರತಿ ಭತ್ತದ ಚೀಲದ ಹಿಂದೆ ಕನಿಷ್ಠ ರೂ. ೨-೩ಗಳಷ್ಟಾದರೂ ನಮಗೆ ನಿವ್ವಳ ಮುನಾಫೆ ಉಳಿಯುತ್ತಿತ್ತೆಂದು ಅವರ ಅಂಬೋಣವುಂಟು. ಈ ವರ್ತಕರು ಒಂದು ಮಾತು ಮರೆಯುತ್ತಾರೆ. ವರ್ತಕರ ಅಂಗಡಿ-ಉಗ್ರಾಣಗಳಲ್ಲಿ ಇಲಿಗಳ ಬಾಧೆ ಕಡಿಮೆ. ಒಂದು ವೇಳೆ ಇದ್ದರೂ ಅದು ಸಣ್ಣ ಪುಟ್ಟ ಚತುಷ್ಪಾದ ಇಲಿಗಳ ಬಾಧೆ. ಸರಕಾರಿ ಉಗ್ರಾಣಗಳಲ್ಲಿ ಹಾಗಲ್ಲ. ಅಲ್ಲಿ ಚತುಷ್ಪಾದ ಇಲಿ-ಹೆಗ್ಗಣಗಳಿಗಿಂತ ದ್ವಿಪಾದ ಇಲಿ-ಹೆಗ್ಗಣಗಳ ಕಾಟವುಂಟು. ಇವುಗಳಲ್ಲಿ ಪುನಃ ಕೆಲವು ಕೋಣಗಳಷ್ಟು ದೊಡ್ಡವಿರುತ್ತವೆ! ಇವುಗಳ ಬಾಧೆ ಬಹಳವಾದಾಗ ಇಡೀ ವರ್ಷದಲ್ಲಿ ಬರೇ ೧೦ ಲಕ್ಷ ರೂ.ಗಳಷ್ಟೇ ಹಾನಿಯಾಗಿದೆಯೆಂಬುದು ಸಮಾಧಾನದ ಮಾತಲ್ಲವೇ?

ಡಾ॥ ಕಲ್ಲಾಪುರದವರ ಪ್ರಯತ್ನಗಳ ಫಲವಾಗಿ ಸರಕಾರಿ ಭತ್ತವನ್ನು ಕೈಯ್ಯಿಂದ ಕುಟ್ಟಿ ಅಕ್ಕಿ ಮಾಡುವದಕ್ಕೆ ಮರಗುಲಿಗೆ ಕೊಡಲು ಜಿಲ್ಹಾಧಿಪರು ಒಪ್ಪಿಗೆ ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಹಳದೀಪುರ ಗ್ರಾಮದ ಸರ್ವೇ ನಂಬರ ೭೪೩ ಆ ಸ್ಥಳವನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿಡಬೇಕಾಗಿ ಈ ಹಿಂದೆಯೇ ಸರಕಾರಿ ಹುಕುಮವಾಗಿ ಅದು ಗ್ರಾಮ ದಾಖಲೆಗಳಲ್ಲಿ ನಮೂದಾದುಂಟು. ಆದರೂ ಅದನ್ನು ಈಗಿನ ಮಾಮಲೇದಾರರೂ ಸ್ಥಾನಿಕ ಪಾದ್ರಿಯವರೂ ರೆ॥ ಫಿಲಿಫೋಸರವರ ಮಿಶನ್ ಶಾಲೆಯ ಉಪಯೋಗಕ್ಕೆ ಕೊಡಲು ಸಿದ್ಧರಾಗಿದ್ದಾರೆಂದು ಸುದ್ದಿಯುಂಟು ಈ ಸುದ್ದಿ ಕೇಳಿ ಹಳದೀಪುರದ ಜನರು ಬಹಳ ಉದ್ವೇಗಗೊಂಡಿದ್ದಾರೆ.

(ತಾ ೩೦-೪-೪) ಕೊಡಾಣಿ-ಬೇರಂಕಿ ಗ್ರಾಮಗಳ ಯೋಗ್ಯ ದರದ ಅಂಗಡಿಯು ಕಾಲಕತ್ತ ಅಲ್ಲಿಯ ವಿವಿಧೋದ್ದೇಶಿಗಳ ಸಹಕಾರಿ ಸಂಘದ ಪರವಾಗಿ ಪಟೇಲ ರಾ॥ ಈಶ್ವರ ಹೆಗಡೆಯವರ ಕಡೆಗೆ ಉಂಟು. ಇವರು ಕಾರ್ಯದರ್ಶಿಗಳಂತೆ. ಆದರೆ ಅವರ ಕೆಲಸದ ಪಟಾಕಿಗೆ ಮಾಡುವ ಧೈರ್ಯ ಸಂಘದ ಚೇರಮನ್ನರಿಗೂ ಇಲ್ಲ; ಸದಸ್ಯರಿಗೂ ಇಲ್ಲ. ಈ ಪಟೇಲರು ತಮಗೆ ಬೇಕಾದವರಿಗೆ ಅಕ್ಕಿ ಕೊಡುತ್ತಾರೆ; ಸಕ್ಕರೆ ಕೊಡುತ್ತಾರೆ. ಬೇಡಾದವರಿಗೆ ಕೊಡುವದಿಲ್ಲ! ಎಷ್ಟೋ ಜನರ ಕೂಪನುಗಳನ್ನು ಅವರೇ ಇಟ್ಟುಕೊಂಡಿದ್ದಾರೆ, ಮತ್ತು ಅವುಗಳ ಎಣ್ಣೆ, ಅಕ್ಕಿ, ಸಕ್ಕರೆ ಕಾಲಕಾಲಕ್ಕೆ ಖರ್ಚು ಬರೆದು ಸ್ವೀಕೃತಿಯಿಂದ ಅವುಗಳ ಬಟವಡೆ ಇಲ್ಲವೆ ಮಾರಾಟ ಮಾಡುತ್ತಾರೆ. ಇವರ ಕಳ್ಳತನದ ಒಂದು ಉದಾಹರಣೆ ತಾ. ೧೬ನೇಗೆ ಪ್ರಾಂತ ಸಾಹೇಬರ ಕಣ್ಣಿಗೆ ಬಿತ್ತು. ಅಂದು ಸಾಹೇಬರು ಅಂಗಡಿಯ ತಪಾಸಣೆಗೆ ಹೋಗಿ, ಅಲ್ಲಿ ಬಂದ ಕೆಲವರ ಕೂಪನುಗಳನ್ನು ತೆಗೆದುಕೊಂಡು ತಪಾಸ ಮಾಡಿದರು. ಒಬ್ಬನ ಕೂಪನ ಮೇಲೆ ಚಿಕ್ಕಾಟು ಮಾಡಿದ್ದಿತ್ತು. ಅದರೊಳಗಿನ ಅಕ್ಕಿ ಸೇರುಗಳ ಸಂಖ್ಯೆ ೨ ಇದೆಯೋ ೧೨ ಇದೆ ಎಂದು ಸಾಹೇಬರು ಪಟೇಲರಿಗೆ ಕೇಳಿದರು. ಪಟೇಲರು ಗಾಬರಿಗೊಂಡು ಅದು ೨ ಇದೆ ಎಂದರು ಸಾಹೇಬರು ರೆಜಿಸ್ಟರ್ ತೆಗೆದು ನೋಡಿದರು. ಅದರಲ್ಲಿ ೨ ಸೇರು ಅಕ್ಕಿ ಖರ್ಚು ಬಿದ್ದಿತ್ತು. ಆದರೆ ಕೂಪನದಾರನಿಗೆ ಕೇಳಲಾಗಿ ಅವನು ಗೊತ್ತವೇನೂ ಇಟ್ಟುಕೊಳ್ಳದೆ ೩ ರೂ ಕೊಟ್ಟು ೧೨ ಸೇರು ಅಕ್ಕಿ ಒಯ್ಯುತ್ತೇನಾಗಿ ಹೇಳಿದನು! ಸಾಹೇಬರು ಈ ಬಗ್ಗೆ ಪ್ರಕರಣ ಮಾಡಿದ್ದಾರೆಂದು ತಿಳಿಯುತ್ತದೆ. ಈ ಪಟೇಲರು ಸಂಘದ ಹಣ ಬಳಸಿಕೊಂಡು ತೆಂಗಿನಕಾಯಿ, ಬೆಲ್ಲ, ಅಡಿಕೆ ಮೊದಲಾದವುಗಳ ವ್ಯಾಪಾರ ಮಾಡುತ್ತಾರೆಂದು ವಾರ್ತೆ ಕೇಳಿಬರುತ್ತದೆ. ಈ ವ್ಯಾಪಾರದ ಮೂಲಕ ಒಮ್ಮೊಮ್ಮೆ ಯೋಗ್ಯ ದರದ ಅಂಗಡಿಯಲ್ಲಿ ಅಕ್ಕಿ ಸಕ್ಕರೆ ತರಲು ಹಣವಿರುವದಿಲ್ಲ. ಅಧಿಕಾರಿಗಳು ಚೌಕಶಿ ಮಾಡಿ ಸದರಿ ಅಂಗಡಿಯನ್ನು ಪಟೇಲರಿಂದ ತಪ್ಪಿಸಬೇಕಾಗಿ ಅರಿಕೆಯಿದೆ.

ಭಟಕಳ- (ತಾ-೨-೫-೪೬) ಇಲ್ಲಿ ಜನರ ವರ್ತಕರ ಕಳ್ಳಾಟಕೆ ಹೆಚ್ಚಾಗಿದೆ ಕಳ್ಳಪೇಟೆಯಲ್ಲಿ ಬಹಳ ಜವಳಿ ಮದ್ರಾಸ ಪ್ರಾಂತಕ್ಕೂ ಮೈಸೂರ ಸೀಮೆಗೂ ಹೋಗುತ್ತದೆ. ಊರವರಿಗೆ ಧೋತರಜೋಡಿಗಳೂ ಸಿಗುವದಿಲ್ಲ; ಒಂಟಿ ಧೋತರಗಳೂ ಸಿಗುವದಿಲ್ಲ! ಇದೂ ತೀವ್ರವಾದ್ದರಿಂದ ಇಲ್ಲಿಯ ಸೀಧಾ-ಅಧಿಕಾರಿಗಳು ಮೊನ್ನೆ ಅಬ್ಬು ಸಾಹೇಬರ ಜವಳಿ ಅಂಗಡಿಯಲ್ಲಿ ಜಪ್ತಿ ಮಾಡಬೇಕಾಯಿತು. ಆಗ ಅಲ್ಲಿ ೧೫೦ಕ್ಕಿಂತ ಹೆಚ್ಚಿಗೆ ಧೋತರ-ಜೋಡಿಗಳು ಸಿಕ್ಕಿದವಂತೆ.

ಶಿರಸಿ—(ತಾ ೨-೫-೪೬) ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಶಿರಸಿ-ಸಿದ್ದಾಪುರ-ಯಲ್ಲಾಪುರ ವಿಭಾಗದಿಂದ ಆರಿಸಿಹೋದ ಡಾ॥ ಮೋಟಿನಸರ ವಿರುದ್ಧ "ವೃತ್ತ"ದಲ್ಲಿ ಪ್ರಕಟವಾದ ಟೀಕೆಗೆ ಡಾ॥ ಭೂಪಾಳ ಕಿಟ್ಟೂರರೆಂದು ಆಕ್ಷೇಪವುಂಟು ತಮ್ಮ ಮುಂದಾಳುತನ ಹಿಂದೆ ತೆಗೆದುಕೊಳ್ಳಲು ಡಾ॥ ಮೋಟಿನಸರು ತಮ್ಮ ಮನಪ್ಪೊಲಿಸಿದ್ದು ಇಲ್ಲೆಂದಲೂ, ಚುನಾವಣೆಯ ಕ್ರಮ ಬೇಡೆಂಬ ಒಂದೇ ಉದ್ದೇಶದಿಂದ ನಾವು ತಮ್ಮ ಮುಂದಾಳುತನ ತಿರುಗಿ ತಕ್ಕೊಂಡಿದ್ದೇವೆಂದೂ ಡಾ॥ ಭೂಪಾಳ ಕಿಟ್ಟೂರು ಬರೆಯುತ್ತಾರೆ ಕಾಂಗ್ರೆಸ್ಸು ಇದೀಗ ಬಲಾಢ್ಯ ವೈರಿಯನ್ನು ಎದುರಿಸಿ ಹೊಸ ಹಿಂದೀ ರಾಷ್ಟ್ರ ಕಟ್ಟಬೇಕಾಗಿದೆಯೆಂದೂ, ಅಂಥ ಸಮಯದಲ್ಲಿ ಕಾಂಗ್ರೆಸ್ಸಿಗರು ತಮ್ಮೊಳಗಿನ ಕೊಳಕನ್ನು ಹೊರಗೆ ಹಾಕಿ ಮೊದಲೇ ಹೊಲಸು ರಾಡಿಯಾಗಿ ಬಿದ್ದಲ್ಲಿ ಇನ್ನಷ್ಟು ರಾಡಿ ಮಾಡುವದು ಉಚಿತವಲ್ಲೆಂದೂ ಡಾ॥ ಭೂಪಾಳರವರ [illegible] ಸೂಚನೆಯುಂಟು.

[ಡಾ॥ ಭೂಪಾಳರವರ ಕೊನೆಯ ಮಾತು ಪ್ರಥಮ-ದರ್ಶನಕ್ಕೆ ಸರಿಯೆಂದು ತೋರುತ್ತದೆ. ಆದರೆ ಇನ್ನಷ್ಟು ವಿಚಾರ ಮಾಡಿದರೆ ಆ ಮಾತಿನಲ್ಲಿ ಅಷ್ಟೊಂದು ಸ್ವಾರಸ್ಯವಿಲ್ಲೆಂದು ಯಾರಿಗೂ ಹೊಳೆಯುವಂತುಂಟು ಕಾಂಗ್ರೆಸ್ಸಿನಲ್ಲಿ ಮೊದಲೇ ರಾಡಿಯುಂಟೆಂದು ಅವರು ಒಪ್ಪುತ್ತಾರೆ. ಆ ರಾಡಿ ಯಾರಿಂದ ಬಂತು? ಎಂಬುದರ ವಿಚಾರ ಅವರು ಮಾಡಿದ್ದಾರೆಯೋ? ಕಾಂಗ್ರೆಸ್ಸಿನಲ್ಲಿ ಅನೇಕರು ಸ್ವಾರ್ಥ ಸಾಧಿಸಲಿಕ್ಕೆ ಅಧಿಕಾರದ ಲಾಲಸೆಯಿಂದಲೂ ಸೇರಿರುವದರಿಂದಲೇ ಆ ಕೊಳೆಯುಂಟಾಗಿದೆಯೆಂಬುವದನ್ನು ಅವರು ಇನ್ನವರೂ ಅರಿಯರು. ಕಾಂಗ್ರೆಸ್ಸು ಪ್ರಬಲ ವೈರಿಯನ್ನು ಎದುರಿಸಬೇಕಾಗಿದೆಯೆಂಬುದು ನಿಜ ಆದರೆ ಅದಕ್ಕಾಗಿ ಭ್ರಷ್ಟರಿಗೂ ಕಪಟಿಗಳಿಗೂ ಕಾಂಗ್ರೆಸ್ಸಿನಲ್ಲಿ ಪ್ರತಿಷ್ಠೆಯ ಸ್ಥಾನ ಇಲ್ಲವೆ ಅಧಿಕಾರವನ್ನ ಬಿಟ್ಟುಕೊಡಬೇಕಾದ ಅಗತ್ಯವಿಲ್ಲ. ಇಂಥವರು ಆಯಾ ಹೊತ್ತಿಗೆ "ಯಃ ಪಲಾಯತಿ ಸ ಜೀವತಿ" ಮಾಡಿ ಕಾಂಗ್ರೆಸ್ಸಿಗೆ ಘಾತ ಮಾಡುವರೆಂದೇ ತಿಳಿಯತಕ್ಕದ್ದು — ಸಂಪಾದಕ]

ಡಾ॥ ವಾಲಗಳ್ಳಿ ನಾಗೇಶರ ಕೊಲೆಯ ಪತ್ತೆ ಇನ್ನೂ ಆಗದಿದ್ದದ್ದು ಆಶ್ಚರ್ಯ! ಶವದ ಕೊಲೆಯು ಕೊಲೆಯೇ ಅಲ್ಲವೆಂದು ಪೋಲೀಸರ ಅಂಬೋಣವಂತೆ! ಅವರ ವಿಚಾರಗಳಿಗೆ ಈ ಅಂಬೋಣ ಮಾನ್ಯವಾಗುವಂತಿಲ್ಲ ಆತ್ಮಹತ್ಯೆ ಮಾಡಿಕೊಳ್ಳುವದಾದರೆ ವಾಲಗಳ್ಳಿಯವರು ಆಳವಾದ ಬಾವಿಯಲ್ಲಿ ಹಾರಿಕೊಳ್ಳದೆ ಬರೇ ೫॥ ಅಡಿ ತಗ್ಗು ಇದ್ದ ಬಾವಿಯನ್ನು ಆರಿಸುತ್ತಿದ್ದಿಲ್ಲ ಆ ಬಾವಿಯಲ್ಲಿ ಕಾಲು ಜಾರಿ ಬೀಳಲಿಕ್ಕೆ ಕಾರಣವಿಲ್ಲ. ವಾಲಗಳ್ಳಿಯವರು ಬಾವಿಯಲ್ಲಿ ಹಾರಿಕೊಂಡಿದ್ದರೆ ಇಲ್ಲವೆ ಜಾರಿ ಬಿದ್ದಿದ್ದರೆ ಅವರ ತಲೆ ಮೇಲ್ಪದಿಗೆ ಕಾಣಬೇಕಿತ್ತು. ಆದರೆ ಪಂಚರು ನೋಡಿದಾಗ ಅವರ ಬೆನ್ನು ಮೇಲೆ ಕಾಣುತ್ತಿತ್ತಂತೆ ಅದರಿಂದ ವಾಲಗಳ್ಳಿಯವರು ಕೊಲೆಯಿಂದಲೇ ಮರಣಪಟ್ಟರೆಂಬುದು ನಿರ್ವಿವಾದ ಒಪ್ಪತಕ್ಕ ಮಾತು. ಇನ್ನು ಕೊಲೆಯ ಕಾರಣವೇನಿರಬಹುದು ಎಂಬ ಪ್ರಶ್ನೆಯುಂಟಾಗುತ್ತದೆ, ಶವದ ಪಂಚನಾಮೆ ಮಾಡಿದಾಗ ಅವರ ಕೈಗೆ ಬಂಗಾರದ ಗಡಿಯಾರವಿತ್ತಂತೆ; ಕಿಸೆಯಲ್ಲಿ ರೂ. ೧೫೦೦ ರ ನೋಟುಗಳಿದ್ದವಂತೆ, ಅದರಿಂದ ಹಣದ ಆಸೆಯು ಇಲ್ಲವೆ ಹಣದ ಆಸೆಯಾಗುವಂತಹ ಜನರು ಈ ಕೊಲೆ ಮಾಡಿರಲಿಕ್ಕಿಲ್ಲವೆಂಬ ಸಿದ್ಧಾಂತ ಹೊರಡುತ್ತದೆ. ಮೃತರ ದೋಷ ಹೇಳಬಾರದೆಂಬ ಹಿರಿಯರ ಮಾತುಂಟು, ಆದರೂ ಸತ್ಯಶೋಧನೆಗಾಗಿ ಅದನ್ನು ಒಮ್ಮೊಮ್ಮೆ ಹೇಳಬೇಕಾಗುತ್ತದೆ ವಾಲಗಳ್ಳಿಯವರು ಸ್ತ್ರೀವ್ಯಸನಿಗಳಾಗಿದ್ದರೆಂದು ಜನರು ಹೇಳುತ್ತಾರೆ ಆ ವ್ಯಸನವೇ ಅವರ ಮರಣವನ್ನು ತಪಾಸಿಸಿ ತಂದಿರಬೇಕು. ಬಹುತರವಾಗಿ ಯಾರೋ ಶ್ರೀಮಂತರ ಹುಡುಗಿಗಳೊಬ್ಬಳ ಬೆನ್ನು ಹಿಡಿದದ್ದರಿಂದಲೇ ವಾಲಗಳ್ಳಿಯವರ ಕೊಲೆಯಾಯಿತೆಂದು ಸರಳವಾದ ತರ್ಕ ಹೊರಡುತ್ತದೆ. ಈ ವಿಚಾರಸರಣಿಯಿಂದ ಪೋಲೀಸರು ಮುಂದರಿದು ಗುಪ್ತಿಯ ಪತ್ತೆ ಹಚ್ಚಲಿ, ವಾಲಗಳ್ಳಿಯವರ ಮರಣದ ಸಂಬಂಧದಲ್ಲಿ ಯಾರಿಗೆ ಏನಾದರೂ ತಿಳಿದದ್ದು ಇದ್ದಲ್ಲಿ ಅವರು ಪೋಲೀಸ ಕಚೇರಿಗೆ ಬಂದು ತಿಳಿಸಬೇಕಾಗಿ ಊರಲ್ಲಿ ಡಂಗುರ ಸಾರುತ್ತಾರೆ! ಬೇರೆಯವರು ಬೇಯಿಸಿ ಬಡಿಸಿದರೆ ಇವರು ಉಣ್ಣುತ್ತಾರೆ! ಇದೇ ಇವರ ಶೌರ್ಯ ಮತ್ತು ಚಾತುರ್ಯ !!

ಹಳಿಯಾಳ— (ತಾ.೨೩.೪-೪೬) ೧೯೪೨-೪೩ರ "ಚಲೇ ಜಾವ" ಆಂದೋಲನದ ಕಾಲದಲ್ಲಿ ಇಲ್ಲಿಯ ಪೋಲೀಸ ಅಧಿಕಾರಿಗಳು ಭಾರತ ರಕ್ಷಣ ನಿಯಮಾವಲಿಯ ೧೨೯ನೆಯ ನಿಯಮದಂತೆ ಅನೇಕರಿಗೆ ಹಿಡಿದಿಟ್ಟು, ಇಲ್ಲವೆ ಮೇಲಿಂದ ಶಾಂತಿಬದ್ಧತೆಯ ಮುಚ್ಚಳಿಕೆ ಬರೆಸುವದಾಗಿ ಬೆದರಿಸಿ, ಇಲ್ಲವೆ ಎಲ್ಲಾದರೂ ಆದ ಯಾವುದೊಂದು ಆಸ್ತಿ-ವಿನಾಶದ ಪ್ರಕರಣದಲ್ಲಿ ಸಿಲುಕಿಸಿ ಹಾಕುತ್ತೇವೆಂದು ದಮಕಿ ಕೊಟ್ಟು — ಆಗ ಪೋಲೀಸ ಅಧಿಕಾರಿಗಳಿಗೆ ಇದ್ದಲ್ಲಿ, ಮರಾಠಿ ಭಾಷೆಯಲ್ಲಿ ಹೇಳುವಂತೆ, "ಹಾತಚಾ ಮಳ" (ಕೈ ಕೊಳೆ) ಆಗಿತ್ತು! — ಬಹಳಷ್ಟು ಹಣ ಗಳಿಸಿದ ಕತೆಗಳು ಈಗೀಗ ಕೇಳಿ ಬರುತ್ತವೆ. ೨-೩ ವರ್ಷಗಳ ಹಿಂದೆ ಇಲ್ಲಿ ಫೌಜದಾರರಾಗಿದ್ದ ರಾ॥ ಜಮಾದಾರ ಇವರೂ ಹವಾಲದಾರರಾಗಿದ್ದ ರಾ॥ ಅಪ್ಪಾ ಎಂಬವರೂ ಇದೇ ರೀತಿ ಮುಂಗೋಡ ಗ್ರಾಮದ ಕೆಲವು ಜನರ ಮೇಲೆ ಕಾಂಗ್ರೆಸ ಚಟುವಟಿಕೆಗಳಿಗೆ ಮದ್ದತ್ತು ಮಾಡುವ ಆಪಾದನೆ ಹೊರಿಸಿ, ಅವರಿಗೆ ಇಲ್ಲಿ ಕರೆಸಿ, ೭-೮ದಿನ ನಿರ್ಬಂಧಿಸಿಟ್ಟಿದ್ದರೆಂದೂ, ಅವರಿಗೆ ಬಗೆಬಗೆಯ ಬೆದರಿಕೆ ಹಾಕಿ ಇಲ್ಲವೆ ಹೊಡೆದು-ಬಡೆದು ೧೦-೧೫ ಸಾವಿರ ರೂಪಾಯಿ ಎತ್ತುವಳಿ ಮಾಡಿ ಎಬ್ಬಿಕೊಟ್ಟರೆಂಬುದೂ ಇದೀಗ ಹೊರಬಿದ್ದಿದೆ ಇಲ್ಲಿಯ ಪ್ರಮುಖ ಕಾಂಗ್ರೆಸ ಕೆಲಸಗಾರರಾದ ರಾ॥ ಘಟಸೀಕರ ವಕೀಲರೂ ರಾಷ್ಟ್ರ-ಸೇವಾ ದಳದ ದಳಪತಿಗಳಾದ ರಾ॥ ದೇಶಪಾಂಡೆಯವರೂ ಮುಂಗೋಡಕ್ಕೆ ಹೋಗಿ ಮೇಲೆ ಹೇಳಿದ ಉಭಯ ಪೋಲೀಸ ಅಧಿಕಾರಿಗಳು ನಡಸಿದ ಅತ್ಯಾಚಾರಗಳ ಪುರಾವೆ ಸಂಗ್ರಹಿಸಿದ್ದಾರೆ; ಮತ್ತು ಅದನ್ನು ಮುಂಬಯಿ ಸರಕಾರದ ಮಾನ್ಯ ಮುರಾರಜಿ ದೇಸಾಯಿಯವರ ಕಡೆ ಕಳಿಸಿ ಕೊಡುವ ವ್ಯವಸ್ಥೆ ಮಾಡಿದ್ದಾರೆ ಬೇರೆ ಕೆಲವರ ಬಗ್ಗೆ ಚೌಕಶಿ ನಡೆದದೆ ಯಾರ್ಯಾರ ಬಂಡು ಹೊರ ಬೀಳುತ್ತದೆ ತಿಳಿಯುವದಿಲ್ಲ

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. I
The Head Office and Branches of the Bank now accept
Season Deposits from three to six months at the following rates:-
Three Months at 2½% per annum.
Six Months at 2¾% per annum.
No such deposit will be allowed to run beyond 30th September 1946
Coondapoor,
8-2-1946.
K. VAMAN SHENAI,
CHAIRMAN.

ಸ್ಥಾನಿಕ ವೃತ್ತಾಂತ.

ಕುಮಟಾ— ಶಕೆ ಬಹಳ. ಊರಲ್ಲಿ ಬಾವಿಗಳು ಬತ್ತಿಹೋಗಲಾರಂಭಿಸಿವೆ

ಹತ್ತಿ ಕಾಳು ಈ ವಾರ ಮಾರಾಟಕ್ಕೆ ಸಿಗುವದಂತೆ ಹಿಂದೆ ಅರ್ಜಿ ಮಾಡಿದವರು ಸೀಧಾ-ಕಚೇರಿಯಿಂದ ಪರಮಿಟುಗಳನ್ನು ತಕ್ಕೊಂಡು ಸೀಧಾ-ಅಂಗಡಿಗಳಿಂದ ನಿರ್ದಿಷ್ಟ ಮಾಡಿಕೊಟ್ಟ ಹತ್ತಿ ಕಾಳು ಪಡಕೊಳ್ಳಬೇಕು

ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ತಕ್ಕೊಳ್ಳಲ್ಪಡದೆ ಬಾಕಿಯುಳಿದ್ದ ಹಲವಾರು ಸಣ್ಣ-ದೊಡ್ಡ ಖಟ್ಲೆಗಳನ್ನು ಸಬ-ಡಿವ್ಹಿಜನಲ್ ಮೆಜಿಸ್ಟ್ರೇಟರು ಶಿರ್ಸಿಯಲ್ಲಿರುವ ರೆಸಿಡೆಂಟ ಮೆಜಿಸ್ಟ್ರೇಟರ ಕೋರ್ಟಿಗೆ ವರ್ಗಾಯಿಸಿದ್ದಾರೆ! ಹೀಗೆ ಮಾಡುವ ಕಾರಣವೇನೆಂದು ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರೇ ಬಲ್ಲರು! ಕುಮಟಾ, ಹೊನ್ನಾವರ ಇಲ್ಲವೆ ಭಟಕಳ ಕಡೆಯ ಖಟ್ಲೆಗಳ ವಿಚಾರಣೆಯನ್ನು ರೆಸಿಡೆಂಟ ಮೆಜಿಸ್ಟ್ರೇಟರು ಆಯಾ ತಾಲೂಕ-ಪೇಟೆಯ ಕೇಂದ್ರದಲ್ಲೇ ನಡಿಸುವಂತೆ ವ್ಯವಸ್ಥೆಯಾಗಬೇಕಾಗಿಯೂ ಹಾಗೆ ವ್ಯವಸ್ಥೆ ಮಾಡುವದು ನ್ಯಾಯದಾನದ ಮತ್ತು ಜನಹಿತದ ದೃಷ್ಟಿಯಿಂದ ಅವಶ್ಯವಿರುತ್ತದಾಗಿಯೂ ೪ ೫ ತಿಂಗಳ ಹಿಂದೆ "ವೃತ್ತ"ದಲ್ಲಿ ಒಂದು ಸೂಚನೆ ಬಂದಿತ್ತು. ಇನ್ನೂ ಆ ವ್ಯವಸ್ಥೆಯಾಗದಿದ್ದದ್ದು ಶೋಚನೀಯ. ಈಗಿನ ರೆಸಿಡೆಂಟ ಮೆಜಿಸ್ಟ್ರೇಟರು ಶಿರ್ಸಿಯಿಂದ ಘಟ್ಟ ಇಳಿದು ಕರಾವಳಿಗೆ ಬರಲೊಪ್ಪುವದಿಲ್ಲವೋ ಅಥವಾ ಅವರಿಗೆ ಅಲ್ಲಲ್ಲಿ ಕೋರ್ಟ ಮಾಡಲು ವಿಧಿಸುವ ಅಧಿಕಾರವುಳ್ಳ ಅಧಿಕಾರಿಗಳೆ ತಮ್ಮ ಸದಸದ್ವಿವೇಕಬುದ್ಧಿ ಕಳಕೊಂಡಿರುವರೋ ತಿಳಿಯದು. ಅದೇನಿದ್ದರೂ ರೆಸಿಡೆಂಟ ಮೆಜಿಸ್ಟ್ರೇಟರು ಕೆಲವೊಂದು ದಿನ ಕುಮಟೆಯಲ್ಲುಳಿದು ಕುಮಟೆಯ ಖಟ್ಲೆಗಳ ನಿಕಾಲಿ ಮಾಡುವಂತೆ ವ್ಯವಸ್ಥೆ ಮಾಡಿಸಿಕೊಳ್ಳುವ ಕರ್ತವ್ಯ ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರದಿತ್ತು. ಪಕ್ಷಗಾರ ಸಾಕ್ಷಿಗಾರರು ಕುಮಟೆಯಿಂದ ಶಿರ್ಸಿಗೆ ಹೋಗಿಬರಲು ಎಷ್ಟು ಕಷ್ಟವಾಗುತ್ತಿದೆ ಮತ್ತು ಎಷ್ಟು ಖರ್ಚು ಬರುತ್ತಿದೆ ಎಂಬುದರ ಮಾಹಿತಿ ಮೇಲಧಿಕಾರಿಗಳಿಗೊಮ್ಮೆ ಇರದಿದ್ದರೂ ಸಬ್-ಡಿವ್ಹಿಜನಲ್ ಮೆಜಿಸ್ಟ್ರೇಟರಿಗೆ ಉಂಟಲ್ಲವೇ? ಶಿರ್ಸಿಯ ಮೋಟಾರ ಟಿಕೇಟು ಕುಮಟೆಯಲ್ಲಿ ಅಥವಾ ಕುಮಟೆಯ ಟಿಕೇಟು ಶಿರ್ಸಿಯಲ್ಲಿ ಸಿಗಬೇಕಾದರೆ ಒಮ್ಮೊಮ್ಮೆ ೩-೪ ದಿನ ಮುಂಚಿತವಾಗಿ ಮೋಟಾರದವರಿಗೆ ಹೇಳಬೇಕಾಗುತ್ತಿದೆ. ಹಾಗೆ ಹೇಳಿಟ್ಟರೂ ಒಮ್ಮೊಮ್ಮೆ ಮೋಟಾರದವರು ಆಯತ ಹೊತ್ತಿಗೆ ಟಿಕೇಟು ಕೊಡದೆ ಮೋಸ ಮಾಡುತ್ತಾರೆ! ಇಷ್ಟು ದಿನ ಮೋಟಾರ ಬಂಡಿಗಳಲ್ಲಿ ಜಜ್ಜ-ಜಜ್ಜಿ ಪ್ರಯಾಣಿಕರನ್ನು ತುಂಬುತ್ತಿದ್ದರು. ಅದನ್ನು ತಡೆಯುವದಕ್ಕಾಗಿ ಇನ್ನು ಮುಂದೆ ಲಾಯಸನ್ಸದಲ್ಲಿ ಕಾಣಿಸಿದ ಸಂಖ್ಯೆಗಿಂತ ಹೆಚ್ಚಿಗೆ ಪ್ರಯಾಣಿಕರನ್ನು ಒಯ್ಯದಂತೆ ಜಾಗ್ರತೆ ಕೊಳ್ಳಲು ಈಗ ಕೊಂಗ್ರೆಸ ಸರಕಾರವು ಕಟ್ಟಪ್ಪಣೆ ಹೊರಡಿಸಿದೆ. ಆದರಿಂದ ಇನ್ನು ಮುಂದೆ ಮೋಟಾರಬಂಡಿಗಳಲ್ಲಿ ಸ್ಥಳ ಸಿಗಲು ಅತಿಶಯ ಕಷ್ಟವಾಗುವದು. ಆದರಿಂದ ಪಕ್ಷಗಾರ ಸಾಕ್ಷಿಗಾರರು ಖಟ್ಲೆಯ ವಿಚಾರವಿದ್ದ ದಿನಕ್ಕೆ ೨-೩ ದಿನಗಳಿರುವಾಗಲೇ ಶಿರ್ಸಿಗೆ ಹೋಗಬೇಕಾಗುವದು, ಮತ್ತು ಖಟ್ಲೆಯ ವಿಚಾರಣೆಯಾದ ೨-೩ ದಿನಗಳ ನಂತರ ಕುಮಟೆಗೆ ಮರಳಿ ಬರುವ ಪ್ರಸಂಗ ಬರಬಹುದು. ಆದರಿಂದ ಸಾಕ್ಷಿಗಾರರ ಭತ್ತೆಯ ಪ್ರಮಾಣ ಏರಲೇಬೇಕಾಗುತ್ತಿದೆ. ೮-೧೦ ದಿನಗಳ ಹಿಂದೆ ಕುಮಟೆಯ ಸಣ್ಣದೊಂದು ಖಟ್ಲೆಯಲ್ಲಿ ಸಾಕ್ಷಿಗಾರರ ಭತ್ತೆಯ ಬಗ್ಗೆ ರೂ ೨೫ ಕೋರ್ಟಿನಲ್ಲಿ ಭರಣಾ ಮಾಡಲು ರೆಸಿಡೆಂಟ ಮೆಜಿಸ್ಟ್ರೇಟರು ಪಿರ್ಯಾದಿಗೆ ಅಪ್ಪಣೆ ಮಾಡಿದ ವಾರ್ತೆಯುಂಟು. ಹೀಗೆ ಭತ್ತೆ ಹಣ ತೆರುತ್ತ ಹೋದಲ್ಲಿ ಪಕ್ಷಗಾರರು ದಿವಾಳಿತೆಗೆಯುವ ಪ್ರಸಂಗ ಬರದಿದ್ದರೂ ಮಾನಿಮಾಡು ಈಡು ಮಾಡಿಕೊಡುವ ಪ್ರಸಂಗ ಬರುವದು ಖಂಡಿತ. ಮೇಲಾಗಿ ಸಾಕ್ಷಿದಾರರು ಉದ್ಯೋಗ ಬಿಟ್ಟು ಶಿರ್ಸಿಯ ಯಾತ್ರೆ ಮಾಡಬೇಕು! ಈ ಪರಿಸ್ಥಿತಿ ಸಬಡಿವ್ಹಿಜನಲ್ ಮೆಜಿಸ್ಟ್ರೇಟರಿಗೆ ಗೊತ್ತಿಲ್ಲವೇ? ಪಕ್ಷಗಾರರಿಗೆ ಕಷ್ಟ ಕೊಟ್ಟು ಮತ್ತು ವಿನಾಕಾರಣ ಖರ್ಚಿಗೆ ಹಾಕಿ ಅವರು ಪುನಃ ನ್ಯಾಯದಾನ ಬೇಗದಿಂದ ಮಾಡುವದಕ್ಕಾಗಿ ಕೇವಲ ಅವರು ಕುಮಟೆಯ ಖಟ್ಲೆಗಳನ್ನು ಶಿರ್ಸಿಗೆ ವರ್ಗಾಯಿಸಿರುವರೇ? ಪಕ್ಷಗಾರ-ಸಾಕ್ಷಿಗಾರರು ರೆಸಿಡೆಂಟ ಮೆಜಿಸ್ಟ್ರೇಟರಿಂದ ಬರಬಹುದಾದ ಸಮನ್ಸುಗಳ ಕಡೆ ದುರ್ಲಕ್ಷ ಮಾಡಿ — ಇದೂ ಒಂದು ಬಗೆಯ ಸತ್ಯಾಗ್ರಹವೇ — ಮೆಜಿಸ್ಟ್ರೇಟರಿಗೆ ವಾರಂಟು ಜಾರಿ ಮಾಡಹುಟ್ಟಿದರೆ ಮಾತ್ರ ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರ ಹಾಗೂ ಮೇಲಧಿಕಾರಿಗಳ ಕಣ್ಣಲ್ಲಿ ಅಂಜನ ಬೀಳುವಂತೆ ತೋರುತ್ತಿದೆ. ಕೊಂಗ್ರೆಸ ಮಂತ್ರಿಮಂಡಳ ಅಧಿಕಾರಾರೂಢವಾದ ಮೇಲೂ ಅಧಿಕಾರಿಗಳು ತಮ್ಮ ನಡಾವಳಿಯನ್ನು ಸರಿಪಡಿಸಿಕೊಳ್ಳದಿದ್ದದು ಒಂದು ಆಶ್ಚರ್ಯವೇ ಸರಿ!

ಸಿದ್ದಿಕ್ ಸ್ಟೋರ್ಸದ ನೆರೆಯಲ್ಲಿರುವ ಖಾನಾವಳಿಯಲ್ಲಿ ಕಳೆದ ಶುಕ್ರವಾರ ರಾತ್ರಿ ಜಪ್ತ ಮಾಡಲ್ಪಟ್ಟ ಧೋತರ ಜೋಡಿಗಳ ಗಂಟಿನ ಸಂಬಂಧವಾಗಿ ಬರೆಯುವಾಗ ಜಿಲ್ಲಾ-ಸಂಚಾರಿಯು ಇಲ್ಲಿಯ ಫೌಜದಾರ ರಾ॥ ಚಕ್ರದೇವರ ವಿರುದ್ಧ ಮಾಡಿದ ವ್ಯಂಗ ಟೀಕೆ ಅನ್ಯಾಯದ್ದಿರುತ್ತದೆಂದು ಓರ್ವ 'ಪ್ರತ್ಯಕ್ಷದರ್ಶಿ'ಯು ಬರೆಯುತ್ತಾನೆ. ಜವಳಿಗಂಟು ಜಪ್ತ ಮಾಡಿದಾಗ ಖಾನಾವಳಿಯವರು ಅಲ್ಲಿದ್ದಿಲ್ಲ. ಶಿರ್ಸಿಯ ಜವಳಿ ವರ್ತಕ ರಾ॥ ತಿರುಮಲೆಯವರ ಮನೆತನದ ತರುಣರೊಬ್ಬರು (ಈ ಖಾನಾವಳಿಯಲ್ಲಿ ಇಳಕೊಂಡವರು) ಪಂಚನಾಮೆಯ ಕಾಲಕ್ಕೆ ಸಿದ್ದಿಕ್ ಸ್ಟೋರ್ಸದವರ ಅಂಗಡಿಯಲ್ಲಿ ಸಹಜ ಕೊಡುಕೊಂಡಿದ್ದರು. ಧೋತರಗಳ ಗಂಟಿನ ಸಮೀಪವಿದ್ದ ಸೂಟಕೇಸು ಅವರದಿತ್ತು. ಧೋತರಗಳ ಗಂಟು ತನ್ನದಲ್ಲವೆಂದು ಆ ತರುಣರು ಹೇಳಿದರು. ಧೋತರಗಳನ್ನಿಟ್ಟವರು ಹೊರಗೆ ಹೋಗಿದ್ದಾರೆಂದೂ, ಒಂದೊಮ್ಮೆ ಅವರು ಹೊನ್ನಾವರಕ್ಕೆ ಹೋಗಿರಬಹುದೆಂದೂ ಅವರು ತಿಳಿಸಿದರು. ಆಗ ಫೌಜದಾರರು ಅವರ ಶೋಧಕ್ಕೆ ಒಂದೆರಡು ಪೋಲೀಸರನ್ನು ಕಳಿಸಿಕೊಟ್ಟರು. ಧೋತರಗಳ ಗಂಟು ಹಿಡಿಸಿಕೊಟ್ಟ ಜನರೂ ಪಂಚರೂ ಆ ಧೋತರಗಳು ಶಿರ್ಸಿಯ ತರುಣರವೇ ಇರಬೇಕೆಂದು ಭಾವಿಸಿದ್ದರು, ಮತ್ತು ತರುಣರ ಜವಾಬ ಪಂಚರ ಸಮಕ್ಷ ತಕ್ಕೊಂಡು ಅದನ್ನು ಪಂಚನಾಮೆಯಲ್ಲಿ ಉಲ್ಲೇಖಿಸಿಕೊಳ್ಳಬೇಕೆಂದು ಅವರ ಆಗ್ರಹವಿತ್ತು. ಪಂಚರೂ ತಾವು ಕಂಡದ್ದನ್ನಷ್ಟೇ ಪಂಚನಾಮೆಯಲ್ಲಿ ಬರೆಯಬೇಕಲ್ಲವೆ, ಹೇಳಿಕೆ ಕೇಳಿಕೆಯ ಮಜಕೂರು ಪಂಚನಾಮೆಯಲ್ಲಿ ಬರೆಯಲು ಬರುವದಿಲ್ಲವಾಗಿಯೂ, ಹಾಗೆ ಬರೆಯತಕ್ಕದ್ದಲ್ಲವೆಂದು ಹೈಯಕೋರ್ಟ ನಿರ್ಣಯವುಂಟೆಂದೂ ಫೌಜದಾರರು ತಿಳಿಸಿ ಹೇಳಿದರು. ಅವರ ಆ ಮಾತಿಗೆ ಪಂಚರು ಆಕ್ಷೇಪ ತಕ್ಕೊಂಡದ್ದು ತೀರ ಅನುಚಿತ. ಶಿರ್ಸಿಯ ತರುಣರು ಆ ಧೋತರಗಳ ಗಂಟು ತನ್ನದಲ್ಲವೆಂದು ಹೇಳಿರುತ್ತಾರೆ ಮತ್ತು ಇನ್ನೊಬ್ಬ ಜವಳಿ ವರ್ತಕರು ಅದನ್ನಲ್ಲಿಟ್ಟು ಹೋಗಿದ್ದಾರೆಂದು ಹೇಳಿರುತ್ತಾರೆ. ಆ ತರುಣರ ಜವಾಬ ಇದಾಗಲೇ ಬರಕೊಳ್ಳುವದೂ ಅಗತ್ಯವಿದ್ದಿಲ್ಲ. ಶಿರ್ಸಿಯ ತರುಣರ ಹಾಗೆಯಲ್ಲಿ "ಸಿದ್ದಿಕ್ ಸ್ಟೋರ್ಸ"ದವರು ಕೊಟ್ಟ ಒಂದು ಕಲಿಂದರ ಸಿಕ್ಕಿದ್ದರಿಂದ ಆ ಧೋತರಗಳು ಸಿದ್ದಿಕ್ ಸ್ಟೋರ್ಸದವರು ಕೊಟ್ಟವು ಇರಬೇಕೆಂದು ತರ್ಕಿಸಿ ಫೌಜದಾರರು ಆ ರಾತ್ರಿಯೇ "ಸಿದ್ದಿಕ ಸ್ಟೋರ್ಸ" ಅಂಗಡಿಯಲ್ಲಿಯ ವಗೈರೆ ತಪಾಸಿಸಿದರು. ಆದರೆ ಆ ಧೋತರಗಳು ಸ್ಟೋರ್ಸದವರದಲ್ಲವೆಂದು ತಿಳಿದು ಬಂತು. ಈ ತಪಾಸಣೆ ಮುಗಿಯಲು ರಾತ್ರಿ ೧॥ ೨ ಘಂಟೆಯಾಯಿತು. ಮರುದಿನ ಮುಂಜಾನೆ "ಕೆನರಾ ಟೆಕ್ಸ್‌ಟೈಲ ಕೊಪೊರೇಶನ" (ಕೋಟಿ ವರ್ತಕರು) ದವರ ಬೆಕ್ಕದ ತಪಾಸಣೆ ಮಾಡಿದರು. ಅವರಲ್ಲಿ ಆ ಧೋತರಗಳು ಖರ್ಚು ಬಿದ್ದಿದ್ದವು. ಅಷ್ಟರೊಳಗೆ ಧೋತರಗಳ ಗಂಟಿನ ಮಾಲಿಕರೂ ಹೊನ್ನಾವರದಿಂದ ಬಂದು ತಲ್ಪಿದರು. ಅವರ ಕಡೆಗೂ ಕೊಪೊರೇಶನ್‌ದವರ ಪಾವತಿಯಿತ್ತು. ಈ ಮಾಲಿಕರಿಗೆ ಕೊಪೊರೇಶನದವರು ಜವಳಿಯ ಕೋಟಾ ಮನ್ನಿನ ದಿನ ಕೊಟ್ಟಿದ್ದರು. ಜಪ್ತಿಯಾದ ಧೋತರಗಳು ಆ ಕೋಟಾದೊಳಗಿನವಿದ್ದವು. ಹೀಗೆ ಜವಾಬಿನಲ್ಲಿ ಸದರಿ ಧೋತರಗಳು ಕಳ್ಳಪೇಟೆಯಲ್ಲಿ ಕೊಂಡುಕೊಂಡಂಥಹವೂ ಅಲ್ಲ, ಕಳ್ಳಪೇಟೆಗೆ ಹೋಗುವಂಥಹವೂ ಅಲ್ಲ ಎಂದು ತಿಳಿದು ಬಂದದ್ದರಿಂದ ಫೌಜದಾರ ರಾ॥ ಚಕ್ರದೇವರು ಆ ಪ್ರಕರಣ ಬಿಟ್ಟುಕೊಡಬೇಕಾಯಿತು. ರಾ॥ ಚಕ್ರದೇವರು ಯಾರೊಡನೆಯೂ ರಹಸ್ಯ ಮಾಡಿಲ್ಲ, ಅಥವಾ ಯಾರಿಗೂ ದಯೆ ತೋರಿಸಿಲ್ಲ. ಜಿಲ್ಲಾ ಸಂಚಾರಿಯು ಅವರ ಧವಲಕೀರ್ತಿಗೆ ಕಳಂಕ ಹತ್ತುವಂತಹ ಬರವಣಿಗೆಯನ್ನು ಬರೆದದ್ದು ತೀರ ತಪ್ಪು ಎಂದು ಮುಂತಾಗಿ "ಪ್ರತ್ಯಕ್ಷದರ್ಶಿ"ಯು ಬರೆಯುತ್ತಾನೆ

ಗೋಕರ್ಣ ಸೀಮೆಯ ಕಂಟ್ರೋಲ-ಹವಾಲದಾರರ ಕಳ್ಳಾಟಿಕೆಯ ಇನ್ನೊಂದು ಕತೆ ಕೇಳಿರಿ. ದಿವ್ರಗೇರಿಯ ಸೋಮುವಗೌಡರೆಂಬ ಹಾಲಕ್ಕಿ ಒಕ್ಕಲಿಗರು ಅಂಕೋಲೆಯ ಬೇಲೇಕೇರಿಯಲ್ಲಿ ಕೂಲಿ-ಕೆಲಸಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ಕೂಲಿಯ ಬಗ್ಗೆ ಕೆಲವೊಂದು ಅಕ್ಕಿ ಸಿಕ್ಕಿತು. ಯುಗಾದಿ ಹಬ್ಬದ ಸುಮಾರಿಗೆ ಈ ಗೌಡರು ಬೇಲೇಕೇರಿ ಮಾರ್ಗವಾಗಿ ದಿವ್ರಗೇರಿಗೆ ಬರುತ್ತಿದ್ದರು. ಆಗ ಅವರ ಕಡೆ ಅಂತು ೩॥ ಖಂಡಗ ಅಕ್ಕಿಯಿತ್ತು. ಆಚವೆಯ ಪಟೇಲರು ಆ ಅಕ್ಕಿ ಒಯ್ಯಲು ಲೇಖಿ ಪರವಾನೆ ಕೊಟ್ಟಿದ್ದರಂತೆ. ಹಾದಿಯಲ್ಲಿ ಕಂಟ್ರೋಲ ಹವಾಲದಾರರ ತುಂಟ ಪಾಳೆಗಾರರು (ಈ ಪಾಳಯದಲ್ಲಿ ಮಹಾದೇವನಾಯ್ಕ, ಶಿವನಾಯ್ಕ ವಗೈರೆ ಹಲವಾರು ಸೆಂಧಾರಿಗಳು ಇದ್ದಾರೆಂದು ತಿಳಿಯುತ್ತದೆ) ಈ ಗೌಡರ ಅಕ್ಕಿ ಹಿಡಿದರು! ಕಂಟ್ರೋಲ ಹವಾಲದಾರರು ಆಗ ಅಲ್ಲಿ ಬಂದು ಪಂಚನಾಮೆ, ಜಪ್ತಿ ಮುಂತಾದ್ದರ ನಾಟಕವನ್ನಾರಂಭಿಸಿದರು. ಆಚವೆಯ ಪಟೇಲರು ಕೊಟ್ಟ ಪರವಾನೆ ಚೀಟಿಯನ್ನು ಹವಾಲದಾರರು ತಮ್ಮ ಕಿಸೆಯಲ್ಲಿ ಹಾಕಿಕೊಂಡರಂತೆ. ಗೌಡರು ಇದನ್ನು ಕಂಡು ದಿಙ್ಮೂಢರಾದರು. ಆಗ ತುಂಟರ ಪಾಳಯದ ಓರ್ವ ಸೆಂಧಾರಿಯು ಏನಾದರೂ "ದಕ್ಷಿಣೆ" ಕೊಟ್ಟು ಬಂದ ಕಷ್ಟದಿಂದ ಪಾರಾಗಿರೆಂದು ಕಿವಿ-ಮಂತ್ರ ಹೇಳಿದರಂತೆ. ಗೌಡರು ಆಗ ಹಮ್ಮೊಳಗೆ ಎತ್ತುವಳಿ ಮಾಡಿ ರೂ ೩೬ ಆ ಸೆಂಧಾರಿಯ ಕೈಗೆ ಕೊಟ್ಟು, ಹವಾಲದಾರರ ಕಾಟ ತಪ್ಪಿಸಿಕೊಂಡು ಮನೆ ಮುಟ್ಟಿದರು. ಮುಂದೆ ಈ ಕಥೆ ಗೋಕರ್ಣದೊಳಗಿನ ಕೊಂಗ್ರೆಸ ಕಾರ್ಯಕರ್ತರ ಕಿವಿಗೆ ಮುಟ್ಟಿತು, ಮತ್ತು ಚೌಕಶಿ ನಡೆಯಿತು. ಅಷ್ಟರಲ್ಲಿ ಹಾಂನಾಕ್ಕೆಯಲ್ಲಾದ ಅಕ್ಕಿ-ಜಪ್ತಿಯ ಪ್ರಕರಣ ಬೆಳಕಿಗೆ ಬಂತು. ಆದರಿಂದ ಹವಾಲದಾರರು ಧೀಕಿಗೊಂಡು ಸೋಮುಗೌಡ ಮೊದಲಾದವರಿಂದ ತಮ್ಮ ಪಾಳಯದವರು ಹಣ ಸುಲಿದ ಕಥೆಯನ್ನು ಒಪ್ಪಿಕೊಂಡರು. ಆದರೆ ಮೊದ ಮೊದಲು ತಾವೇನೂ ಹಣ ತಕ್ಕೊಂಡಿದ್ದಿಲ್ಲೆಂದು ವಾದಿಸಿದರು, ಕೊನೆಗೆ ರೂ ೩೬ರಲ್ಲಿ ಬರೇ ರೂ ೨೦ ಮಾತ್ರ ತಮಗೆ ಸಿಕ್ಕಿವೆಯೆಂದು ಹೇಳಿ ಆ ಹಣ ಕೊಂಗ್ರೆಸ ಕಾರ್ಯಕರ್ತರ ಕಡೆ ಒಪ್ಪಿಸಿದರು! ಇತ್ತ ಸೆಂಧಾರಿಗಳೂ ಈಗ ಉಳಿದ ರೂ ೧೬ನ್ನು ಸಂದುಕೊಟ್ಟಿದ್ದಾರೆಂದೂ ಕೊಂಗ್ರೆಸ ಕಾರ್ಯಕರ್ತರು ಆ ಹಣ ಸೋಮು ಗೌಡರಿಗೆ ಸಂದಕೊಟ್ಟಿದ್ದಾರೆಂದೂ ವಾರ್ತೆಯುಂಟು. ಕಂಟ್ರೋಲ ಹವಾಲದಾರರೂ ಅವರ ಸೆಂಧಾರಿ-ಮಿತ್ರರೂ ಹೀಗೆ ಬಲೆಯಲ್ಲಿ ಸಿಕ್ಕಿಬಿದ್ದಾಗ ಅವರನ್ನು ಬಯಲಿಗೆ ಎಳೆದೆ, ಅವರಿಗೆ ಕೊಂಗ್ರೆಸ ಕಾರ್ಯಕರ್ತರೆನಿಸಿಕೊಳ್ಳುವವರು ದಯೆದೋರಿ ಪ್ರಕರಣವನ್ನು ಒಳಗಿಂದೊಳಗೆ ಮುಗಿಸಿ ಬಿಟ್ಟಿರುವದು ಉಚಿತವೇ ಎಂಬುದೊಂದು ವಿಚಾರ ಮಾಡತಕ್ಕ ಸಂಗತಿಯಾಗಿದೆ.

ಹೊನ್ನಾವರ— (ತಾ ೫-೫-೪೬) ಇಲ್ಲಿಯ ೩ ಜವಳಿ ಅಂಗಡಿಗಳಿಗೆ ಬೆನ್ನ ಗಿರಣಿಯ ಜವಳಿ ಸಿಗುತ್ತಿದೆ. ಆ ಜವಳಿಗೆ ಗಿರಾಕಿ ಹೆಚ್ಚು. ಆದರೆ ಅಂಗಡಿಕಾರರು ಆ ಜವಳಿಯನ್ನು ಇಲ್ಲಿ ತರುವದೇ ಇಲ್ಲವಂತೆ! ಕುಮಟೆಯಲ್ಲೇ ಅದನ್ನು ಕಳ್ಳ ದರದಿಂದ ಮಾರಿ ಬಿಡುತ್ತಾರಂತೆ! ಒಂದು ವೇಳೆ ಇಲ್ಲಿ ತಂದರೂ ಮಾರಾಟಕ್ಕೆ ಕೊಡುವದಿಲ್ಲ! ಅದು ಇಂಥಿಂಥವರಿಗೆ ಮೊದಲೇ ಕೊಟ್ಟುಹೋಗಿದೆ ಎಂದು ಕಾಗದದ ಮೇಲೆ ಬರೆದಿಟ್ಟ ಕೆಲವರ ಹೆಸರುಗಳನ್ನು ತೋರಿಸುತ್ತಾರೆ! ತಮ್ಮ ಹೆಸರೂ ಬರಕೊಂಡು ಮುಂದಿನ ಕೋಟಾದೊಳಗಿಂದಾದರೂ ತಮಗೆ ಕೆಲವೊಂದು ಜವಳಿ ಕೊಡಿರೆಂದು ಗಿರಾಕಿಗಳು ಹೇಳಿದರೆ ಇವರ ಮೋರೆ ಕಪ್ಪಾಗುತ್ತದೆ! ಇವರ ಕಳ್ಳಾಟಿಕೆಗೆ ತಡೆಹಾಕುವ ಉಪಾಯವೇನೋ ಜನ ಮಾಡದಿದ್ದರೆ ಉಪಾಯವಿಲ್ಲ. ಜಿಲ್ಹಾಧಿಕಾರಿಗಳೂ ಜಿಲ್ಲೆಯ ಕೊಂಗ್ರೆಸ-ಪ್ರಮುಖರೂ ಒಟ್ಟಿಗೆ ಸೇರಿ ಆಲೋಚನೆ ಮಾಡಿ ಪರಸ್ಪರ ಸಹಕಾರದಿಂದ ಈ ಕಳ್ಳ ವ್ಯಾಪಾರ ನಿಲ್ಲಿಸಬೇಕಾಗಿ ಸೂಚನೆಯಿದೆ

ಅರ್ಬನ ಬೇಂಕಿನಲ್ಲಿ ೨೦೦ ಚೀಲ ಹತ್ತಿಕಾಳು ಬಂದಿದೆ. ಹಾಲು ಹಿಂಡುವ ಎಮ್ಮೆ ೧ಕ್ಕೆ ದಿನಾ ೧ ರತ್ತಲಿನಂತೆ ಮತ್ತು ಹಾಲು ಹಿಂಡುವ ಆಕಳು ೧ಕ್ಕೆ ॥ ರತ್ತಲಿನಂತೆ ೧೫ ದಿವಸಗಳ ಸೀಧಾ ಒಮ್ಮೆಲೇ ಕೊಡುತ್ತಾರೆ

ಲಂಚಗೊಳಿತನವನ್ನು ಸರಕಾರವು ಕಠೋರತನದಿಂದ ನಿರ್ಮೂಲಿಸುವದಾಗಿ ಕೊಂಗ್ರೆಸ ಮಂತ್ರಿಮಂಡಳವು ಜಾಹೀರಪಡಿಸಿದ ಮೇಲಾದರೂ ಅಲ್ಲಲ್ಲಿ ನಡೆದ ಲಂಚಗೋಳಿತನ ನಿಲ್ಲುವದೆಂದು ಜನರು ಭಾವಿಸಿದ್ದರು. ಆದರೆ ಸರಾಯಿ-ಕುಡುಕರು ಹೇಗೆ ಒಮ್ಮೆಲೇ ಸರಾಯಿ ಬಿಡಲೊಲ್ಲರೋ ಹಾಗೆಯೇ ಲಂಚಗೋಳಿಗಳು ತಮ್ಮ ಈ ದುರ್ವ್ಯಸನ ಬಿಡಲೊಲ್ಲರೋ ಏನೋ! ಕಳ್ಳಪೇಟೆಯ ನಿರ್ಮೂಲನೆಯ ಸೋಗು ಹಾಕಿ ಹಳ್ಳಿಗಳಲ್ಲಿ ಸಣ್ಣ-ಪುಟ್ಟ ಅಧಿಕಾರಿಗಳು ಬಹಳಷ್ಟು ಹಣ ಎತ್ತುವಳಿ ಮಾಡುತ್ತಿದ್ದಾರೆಂದು ಈಗಲೂ ದೂರು ಕೇಳಿಬರುತ್ತಿದೆ. ಈ ಅಧಿಕಾರಿಗಳು ಹಳ್ಳಿಗಳಿಗೆ ಹೋಗಿ ಮನೆ-ಮನೆ ತಿರುಗಾಡಿ, "ನಿಮ್ಮಲ್ಲಿ ಅಕ್ಕಿ ಎಷ್ಟುಂಟು? ಅದು ಎಲ್ಲಿಂದ ಬಂತು?" ಎಂದು ಮುಂತಾಗಿ ಬೆದರಿಸಿ ಚೌಕಶಿ ಮಾಡುತ್ತಾರೆ" ಮತ್ತು ಅಜ್ಞ ಜನರಿಂದ ಏನಾದರೂ ಎತ್ತುವಳಿ ಮಾಡುತ್ತಾರೆ! ಮೊನ್ನೆ ಮೂಡಕಣಿಯ ಶ್ರೀನಿವಾಸ ರಾಮಚಂದ್ರ ಶಾನಭಾಗರಲ್ಲಿ ಹೀಗೆಯೇ ಅಕ್ಕಿಯ ತಪಾಸಣೆ (!) ಮಾಡಲಿಕ್ಕೆ ಓರ್ವ ಅಧಿಕಾರಿಯು ಹೋಗಿದ್ದನಂತೆ. ಮನೆಯ ಯಜಮಾನರು ಆಗ ಮನೆಯಲ್ಲಿದ್ದಿಲ್ಲ. ಅಧಿಕಾರಿಗೆ ಇದೊಂದು ಇಷ್ಟಾಪತ್ತಿಯಾಯಿತು! ಆತನು ಮನೆಯೊಳಗಿದ್ದ ಹೆಂಗಸರು-ಮಕ್ಕಳಿಗೆ ಝಡತಿ-ಜಪ್ತಿಯ ಬೆದರಿಕೆ ತೋರಿಸಿ, ಅವರಿಂದ ೧೦ ರೂ ನಗದಿ ಮತ್ತು ೮ ೧೦ ಕೊಳಗ ಉಪ್ಪು ಎತ್ತುವಳಿ ಮಾಡಿ ತಂದನಂತೆ! ಈ ಸುಲಿಗೆ ನಿಲ್ಲಿಸಲು ಕೊಂಗ್ರೆಸ-ಮಂತ್ರಿಮಂಡಳವು ಈಗಿದ್ದ ಶಿಬಂದಿಯ ಮೇಲೆ ಅವಲಂಬಿಸಿರದೆ ಬೇರೊಂದು ಹೊಸ ಶಿಬಂದಿಯನ್ನು ನೇಮಿಸುವದುತ್ತಮ

(೧ನೇ ಪುಟ ನೋಡಿರಿ)

ಶ್ರೀ ದಾಮೋದರ ಸಂಸ್ಥಾನ.

ಜಾಂಬಾವಳಿ, ಗೋವಾ.

ಈ ದೇವಸ್ಥಾನದ ಮಹಾಜನರ ಹೊಸ ಯಾದಿ (ಕ್ಯಾಟಲಾಗು) ತಯಾರಿಸುವ ಕ್ರಮ ನಡೆದಿದೆ. ಕಾರಣ ದಕ್ಷಿಣೋತ್ತರ ಕನ್ನಡ ಜಿಲ್ಹೆಗಳಲ್ಲೂ ಮುಂಬಯಿ, ಪುಣೆ ವಗೈರೆ ನಗರಗಳಲ್ಲೂ ಇರುವ ಎಲ್ಲ (೧೮ ವರ್ಷ ಪ್ರಾಯವಾದ) ವಯಸ್ಕ ಕುಳಾವಿಗಳು ತಾ ೩೧-೫-೪೬ರೊಳಗೆ ತಮ್ಮ ಹೆಸರು, ತಂದೆಯ ಹೆಸರು, ಊರು, ಪ್ರಾಯ, ಗೋತ್ರ ಇವನ್ನು ಶ್ರೀ ಭಗವಂತ ವಿನಾಯಕ ಶೆಣ್ಯೆ ಭೋಬೆ, ಟ್ರಝುರಿ ಒಫೀಸರ, ಮಡಗಾಂವ, ಗೋವಾ ಈ ಪತ್ತೆಯ ಮೇಲೆ (ಸಾಧ್ಯವಿದ್ದಲ್ಲಿ ಇಂಗ್ಲಿಷ ಪತ್ರ ಬರೆದು) ತಿಳಿಸಬೇಕಾಗಿ ಶ್ರೀ ಸಂಸ್ಥಾನ ಕಮಿಟಿಯ ಕಾರ್ಯದರ್ಶಿ ರಾ॥ ವಿಶ್ವನಾಥ ಭೋಬೆಯವರು ಬಿನ್ನೈಸುತ್ತಾರೆ

ಟೆನನ್ಸಿ ಯಾನೆ ಲಾವಣಿ ಕಾನೂನು.

(೧೯೩೯ರ ಟೆನನ್ಸಿ ಎಕ್ಟ ಯಾನೆ ಲಾವಣಿ ಕಾನೂನನ್ನು ಕೊಂಗ್ರೆಸ ಮಂತ್ರಿಮಂಡಳವು ತಾ ೧೧-೪-೧೯೪೬ರಿಂದ ಇಡೀ ಪ್ರಾಂತದಲ್ಲಿ ಜಾರಿಗೆ ತಂದಿದೆಯಷ್ಟೇ ಈ ಕಾನೂನಿನಿಂದ ಕೆಲವೊಂದು ಒಕ್ಕಲಿಗರಿಗೆ ಕೆಲವೊಂದು ಹೊಸ ಹಕ್ಕುಬಾಧ್ಯತೆಗಳು ಸಿಕ್ಕಿವೆ. ಹಾಗೂ ಒಡೆಯ-ಒಕ್ಕಲಿಗರೊಳಗಿನ ಸಂಬಂಧಗಳು ಕೆಲವೊಂದು ಬಗೆಯಿಂದ ಮಾರ್ಪಟ್ಟಿವೆ ಈ ಮಾಹಿತಿಯನ್ನು ಎಲ್ಲ ಒಡೆಯ-ಒಕ್ಕಲಿಗರಿಗೆ ಮಾಡಿಕೊಟ್ಟು, ಹೊಸ ಪರಿಸ್ಥಿತಿಗೆ ತಕ್ಕಂತೆ ಅವರು ತಮ್ಮ ನಡಾವಳಿಯನ್ನು ಸುಧಾರಿಸಿಕೊಂಡು ಹೋಗಲು ಅವರಿಗೆ ನೆರವಾಗುವದಕ್ಕೆ ಸದರಿ ಕಾನೂನಿನ ವಿಸ್ತೃತ ಸಾರಾಂಶವನ್ನು ಈ ಕೆಳಗೆ ಕೊಟ್ಟಿದ್ದೇವೆ)

ಈ ಕಾನೂನಿನಲ್ಲಿ "ಸಂರಕ್ಷಿತ ಒಕ್ಕಲಿಗರು" ಮತ್ತು ಇತರ ಒಕ್ಕಲಿಗರು ಎಂಬ ೨ ವರ್ಗಗಳುಂಟು ಕಲಮು ೩ರಲ್ಲಿ "ಸಂರಕ್ಷಿತ ಒಕ್ಕಲಿಗನು" (protected tenant) ಯಾರೆಂದು ನಿರ್ದೇಶಿಸಲ್ಪಟ್ಟಿದೆ. ಸ್ವತಃ ದುಡಿದು ಇಲ್ಲವೆ ತನ್ನ ಕುಟುಂಬದವರನ್ನು ದುಡಿಸಿ ಸಾಗುವಳಿ ಮಾಡುವ ಇಲ್ಲವೆ ತನ್ನ ಸ್ವಂತ ಇಲ್ಲವೆ ತನ್ನ ಕುಟುಂಬದವರ ಪ್ರತ್ಯಕ್ಷ ದೇಖರೇಖಿಯಲ್ಲಿ ಕೂಲಿಯಾಳುಗಳ ಕಡೆಯಿಂದ ಸಾಗುವಳಿ ಮಾಡಿಸುವ ರೈತನು "ಸ್ವಂತ ಸಾಗುವಳಿಯ ರೈತ"ನೆಂದು ಕಾನೂನಿನಲ್ಲಿ ವ್ಯಾಖ್ಯೆ ಕೊಟ್ಟದ್ದುಂಟು ಅಂಥ ಸ್ವಂತ ಸಾಗುವಳಿಯ ರೈತನು ತಾ ೧-೧-೧೯೩೨ರಿಂದ ಯಾವದೊಂದು ಭೂಮಿಯನ್ನು ಸತತವಾಗಿ ಸಾಗುವಳಿ ಮಾಡುತ್ತ ಬಂದಿರುತ್ತಿದ್ದರೆ ಅವನು "ಸಂರಕ್ಷಿತ ಒಕ್ಕಲಿಗ"ನಾಗುತ್ತಾನೆ ತಾ ೧-೧ ೧೯೩೨ರಿಂದ ಸಾಗುವಳಿ ಮಾಡುವ ರೈತನ ಉತ್ತರಾಧಿಕಾರಿಯಾಗಿ ಅವನ ಭೂಮಿ ಸಾಗುವಳಿ ಮಾಡುವವನೂ, ಯಾವದೊಂದು ಗ್ರಾಮದಲ್ಲಿ ತಾ ೧-೧-೧೯೩೨ರಿಂದ ಒಡೆಯನ ಒಂದಿಲ್ಲೊಂದು ಭೂಮಿ ಸತತ ಸಾಗುವಳಿ ಮಾಡುವವನೂ "ಸಂರಕ್ಷಿತ ಒಕ್ಕಲಿಗ"ನೇ ಎಂದು ಕಲಮು ೩ರಲ್ಲಿ ಸ್ಪಷ್ಟೀಕರಣ ಮಾಡಲ್ಪಟ್ಟಿದೆ ಸಮಾಯಿಕ ಸಾಗುವಳಿ ಮಾಡುವ ರೈತರ ಪೈಕಿ ಯಾರೊಬ್ಬರು "ಸಂರಕ್ಷಿತ ಒಕ್ಕಲಿಗ"ನ ವ್ಯಾಖ್ಯೆಯಲ್ಲಿ ಬರುತ್ತಿದ್ದರೆ ಆ ಎಲ್ಲ ರೈತರೂ ಸಂರಕ್ಷಿತರೆಂತ ಎಣಿಸಲ್ಪಡಬೇಕು.

ಸಂರಕ್ಷಿತ ಒಕ್ಕಲಿಗರ ಹಕ್ಕು-ಬಾಧ್ಯತೆಗಳು.

ಕಾನೂನಿನ ೪ರಿಂದ ೧೩ನೆಯ ವರೆಗಿನ ಕಲಮುಗಳಲ್ಲಿ ಸಂರಕ್ಷಿತ ಒಕ್ಕಲಿಗರ ಹಕ್ಕು-ಬಾಧ್ಯತೆಗಳನ್ನು ನಿರ್ದಿಷ್ಟ ಮಾಡಲಾಗಿದೆ ಅವು ಮುಂದಿನಂತಿವೆ:-

(೧) ತಾ ೧-೪-೧೯೩೭ರಿಂದ ತಾ ೧-೪-೧೯೩೮ರವರೆಗೆ ಯಾವದೊಂದು ಭೂಮಿಯನ್ನು ಸತತ ಸಾಗುವಳಿ ಮಾಡುತ್ತಿದ್ದ ರೈತನು ತಾ ೧-೪-೧೯೩೮ರ ನಂತರ ಆ ಭೂಮಿಯಿಂದ ತಪ್ಪಿಸಲ್ಪಟ್ಟಿದ್ದರೆ ತಾ ೧ ೬-೧೯೪೦ರ ನಂತರ ಆ ರೈತನು ಹಿಂದಿನ ಗೇಣಿಯ ಶರ್ತಗಳ ಮೇಲೆಯೇ ಆ ಭೂಮಿಯನ್ನು ಪುನಃ ಸಾಗುವಳಿಗೆ ಪಡೆದು ಸಾಗುವಳಿ ಮಾಡುತ್ತಾ ಬರಬಹುದು. ಆದರೆ ಒಡೆಯನು ಆ ಭೂಮಿಯನ್ನು ಸ್ವಂತ ಸಾಗುವಳಿಯಲ್ಲಿಟ್ಟುಕೊಂಡಿರುತ್ತಿದ್ದರೆ ಇಲ್ಲವೆ ಬೇಸಾಯೇತರ ಉಪಯೋಗಕ್ಕೆ ಹಚ್ಚಿದ್ದು ಇದ್ದರೆ ಅದನ್ನು ರೈತನು ತಿರುಗಿ ಪಡೆಯಲು ಹಕ್ಕುದಾರನಾಗಲಾರನು (ಕಲಮ್ ೪)

(೨) "ಸಂರಕ್ಷಿತ ಒಕ್ಕಲಿಗ"ನು ಗೇಣಿ ಕರಾರಿನಂತೆ ನಿರ್ದಿಷ್ಟ ಮಾಡಿದ ಇಲ್ಲವೆ ವಾಡಿಕೆಯಲ್ಲಿರುವ ಇಲ್ಲವೆ "ನ್ಯಾಯ್ಯ ಗೇಣಿ"ಯನ್ನು ಪ್ರತಿ ವರ್ಷ ಕಿರ್ದಿಯ ಕೊನೆಯ ಹಪ್ತೆ ವಸೂಲ ಕೊಡಲು ನಿರ್ದಿಷ್ಟ ಮಾಡಿದ ದಿನದಿಂದ ಮುಂದೆ ೧೫ ದಿನಗಳೊಳಗಾಗಿ ವಸೂಲ ಕೊಡುತ್ತಾ ಬಂದರೆ ಅವನನ್ನು ಆ ಭೂಮಿಯಿಂದ ತಪ್ಪಿಸಲು ಬರುವಂತಿಲ್ಲ (ಕಲಮ್ ೫) ಆದರೆ ಲಾವಣಿ ಭೂಮಿಯನ್ನು ಅಯೋಗ್ಯಗೊಳಿಸುವಂತಹ ಕೃತಿಗಳನ್ನು ಒಕ್ಕಲಿಗನು ಮಾಡಿದರೆ ಇಲ್ಲವೆ ಸ್ವಂತ ಸಾಗುವಳಿಯನ್ನು ಬಿಟ್ಟುಕೊಟ್ಟರೆ ಸಂರಕ್ಷಿತ ಒಕ್ಕಲಿಗನಿಗೆ ಈ ಸವಲತ್ತು ಸಿಗುವಂತಿಲ್ಲ.

(೩) ಲಾವಣೆ ಭೂಮಿಯ ಗಡಿಕಲ್ಲುಗಳು ಮೊದಲಾದವನ್ನು ಸುರಕ್ಷಿತವಾಗಿ ಕಾಪಾಡುವ ಜವಾಬ್ದಾರಿಯು ಒಕ್ಕಲಿಗನದಿರುತ್ತದೆ (ಕಲಮ್ ೬)

(೪) "ಸಂರಕ್ಷಿತ ಒಕ್ಕಲಿಗ"ನ ಸಾಗುವಳಿಯಲ್ಲಿರುವ ಭೂಮಿಯು ಒಡೆಯನಿಗೆ ಸ್ವಂತ ಸಾಗುವಳಿಗಾಗಿ ಬೇಕಾದರೆ ಇಲ್ಲವೆ ಬೇಸಾಯೇತರ ಉಪಯೋಗಕ್ಕಾಗಿ ಬೇಕಾದರೆ ಒಡೆಯನು ಕಾಯಿದೆಯಂತೆ ನೋಟೀಸ ಕೊಟ್ಟು ಒಕ್ಕಲಿಗನ ರೈತನಾತೆಯನ್ನು ಅಂತ್ಯಪಡಿಸಬಹುದು ಆದರೆ ಈ ರೀತಿ ನೋಟೀಸ ಕೊಟ್ಟು ತಪ್ಪಿಸಿದ ಭೂಮಿಯನ್ನು ಒಡೆಯನು ೧ ವರ್ಷದೊಳಗೆ ಸ್ವತಃ ಸಾಗುವಳಿ ಮಾಡದಿದ್ದರೆ ಇಲ್ಲವೆ ಬೇಸಾಯೇತರ ಕೆಲಸಕ್ಕೆ ಉಪಯೋಗಿಸಿಕೊಳ್ಳದಿದ್ದರೆ, ಅಥವಾ ತಪ್ಪಿಸಿದ ಮಿತಿಯಿಂದ ೧೨ ವರ್ಷಗಳೊಳಗೆ ಸ್ವಂತ ಸಾಗುವಳಿಯನ್ನು ಯಾ ಬೇಸಾಯೇತರ ಉಪಯೋಗವನ್ನು ಬಿಟ್ಟುಕೊಟ್ಟರೆ, ಒಕ್ಕಲಿಗನು ಆ ಒಡೆಯನಿಗೆ (ಹೀಗೆ ಹಕ್ಕುದಾರನಾದ ಮಿತಿಯಿಂದ ೨ ವರ್ಷಗಳೊಳಗೆ) ನೋಟೀಸ ಕೊಟ್ಟು ತಿರುಗಿ ಆ ಭೂಮಿಯನ್ನು ಹಿಂದಿನ ಗೇಣಿ ಶರ್ತಗಳ ಮೇಲೆಯೇ ಸಾಗುವಳಿಗೆ ಪಡೆಯಬಹುದು (ಕಲಮ್ ೭)

(೫) ಸಂರಕ್ಷಿತ ಒಕ್ಕಲಿಗನು ತನ್ನ ಗೇಣಿ-ಭೂಮಿಯನ್ನು ಬಿಡುವದಾದಲ್ಲಿ ಅವನು ಆ ಭೂಮಿಯಲ್ಲಿ ಮಾಡಿದ ಲಾಗ್ವಾಡಿನ ಖರ್ಚು ಒಡೆಯನು ಅವನಿಗೆ ತೆರಬೇಕು (ಕಲಮ್ ೮)

(೬) ಸಂರಕ್ಷಿತ ಒಕ್ಕಲಿಗನ ಹಕ್ಕು ಬಾಧ್ಯತೆಗಳು ಅವನ ವಾರಿಸದಾರರಿಗೂ ಬರುತ್ತವೆ (ಕಲಮು ೯)

(೭) ಒಡೆಯನ ಅನುಮತಿಯಿಲ್ಲದೆ ಗೇಣಿಗೆ ಕೊಟ್ಟಿದ್ದ ಭೂಮಿಯಲ್ಲಿ ಸಂರಕ್ಷಿತ ಒಕ್ಕಲಿಗರು ಮಾಡಿಕೊಳ್ಳಬಹುದಾದ ನಿರ್ಬಂಧಗಳು ಒಡೆಯನಿಗೆ ಬಾಧಿಸುವಂತಿಲ್ಲ (ಕಲಮ್ ೧೦)

(೮) ಸಂರಕ್ಷಿತ ಒಕ್ಕಲಿಗರಿಗೆ ಈ ಕಾನೂನಿನಂತೆ ಸಿಕ್ಕ ಹಕ್ಕು ಯಾ ಹಿತಸಂಬಂಧಗಳು ಜಪ್ತಿಗೆ ಪಾತ್ರವಿರುವದಿಲ್ಲ ಒಕ್ಕಲಿಗರು ಅವನ್ನು ಪರಾಧೀನಗೊಳಿಸಲಿಕ್ಕೂ ಬರುವಂತಿಲ್ಲ. (ಕಲಮ್ ೧೧)

ಕಲಮು ೫ರಲ್ಲಿ "ನ್ಯಾಯ್ಯ ಗೇಣಿ" (reasonable rent) ಯ ಉಲ್ಲೇಖ ಬಂದಿರುತ್ತದಷ್ಟೇ ಆ ನ್ಯಾಯ್ಯ ಗೇಣಿ ಎಂದರೇನು ಎಂಬುದರ ಸ್ಪಷ್ಟೀಕರಣ ಮತ್ತು ಅದನ್ನು ನಿರ್ದಿಷ್ಟಗೊಳಿಸಿಕೊಳ್ಳುವ ಕ್ರಮ ಕಲಮು ೧೨ರಲ್ಲಿ ಕೊಡಲ್ಪಟ್ಟಿವೆ ಯಾವದೊಂದು ಭೂಮಿಯ ಗೇಣಿ ಕಡಿಮೆ ಇರುತ್ತದೆಂದು ಒಡೆಯನಿಗಾಗಲಿ, ಹೆಚ್ಚಿರುತ್ತದೆಂದು ಒಕ್ಕಲಿಗನಿಗಾಗಲಿ ಅನಿಸಿದಲ್ಲಿ ಆ ಒಡೆಯನು ಯಾ ರೈತನು ಭೂಮಿಯಿದ್ದ ತಾಲೂಕಿನ ಮಾಮಲೇದಾರರ ಕಡೆಗೆ ಅರ್ಜಿ ಮಾಡಬಹುದು ಮಾಮಲೇದಾರರು ಆಗ ನಿರ್ದಿಷ್ಟ ಕ್ರಮದಿಂದ ಚೌಕಶಿ ಮಾಡಿ ಯೋಗ್ಯ ಇಲ್ಲವೆ ನ್ಯಾಯ್ಯ ಗೇಣಿಯನ್ನು ಠರಾಯಿಸಿಕೊಡುವರು ಮಾಮಲೇದಾರರ ನಿರ್ಣಯದಿಂದ ಅಸಮಾಧಾನಗೊಂಡ ಪಕ್ಷಗಾರನು ತನ್ನ ಜಿಲ್ಲೆಯೊಳಗಿನ ೧ನೇ ವರ್ಗದ ಸಬಜಜ್ಜ(ಈಗ ಇವರಿಗೆ ಸೀನಿಯರ್ ಸಿವ್ಹಿಲ್ ಜಜ್ಜರೆಂದು ಸಂಬೋಧಿಸುತ್ತಾರೆ.) ರ ಕಡೆಗೆ ಅಪೀಲು ಮಾಡಬಹುದು ಹೀಗೆ ಅಪೀಲ ಆಗದಿದ್ದಲ್ಲಿ ಮಾಮಲೇದಾರರು ಮತ್ತು ಅಪೀಲು ಆದಲ್ಲಿ ಸೀನಿಯರ್ ಸಿವ್ಹಿಲ ಜಜ್ಜರು ಕೊಡುವ ನಿರ್ಣಯವೇ ಕೊನೆಯ ನಿರ್ಣಯವು. ಈ ಪ್ರಕಾರ ನಿರ್ಣಾಯಕ ಅಧಿಕಾರಿಗಳು ನಿರ್ಣಯಿಸಿ ಕೊಟ್ಟ ಗೇಣಿಯು ೫ ವರುಷಗಳ ಪರ್ಯಂತ ಅಮಲಿನಲ್ಲಿರತಕ್ಕದ್ದು ಆದರೆ ನಡುವೆ ಒಕ್ಕಲಿಗನಾಗಲಿ ಒಡೆಯನಾಗಲಿ ಅರ್ಜಿ ಮಾಡಿ ಅದರಲ್ಲಿ ತಿದ್ದುಪಡಿ ಮಾಡಿಕೊಳ್ಳಬಹುದು. ನಿರ್ಣಾಯಕ ಅಧಿಕಾರಿಗಳು ನೆರೆ-ಹೊರೆಯೊಳಗಿನ ಹೊಲ ಭೂಮಿಗಳ ಗೇಣಿದರವನ್ನು, ಧಾನ್ಯ-ದವಸುಗಳ ಬಾಜಾರ ಧಾರಣೆ ಮುಂತಾದ್ದನ್ನು ಸಮಾಲೋಚಿಸಿ "ನ್ಯಾಯ್ಯ ಗೇಣಿ"ಯನ್ನು ನಿರ್ದಿಷ್ಟ ಮಾಡಿಕೊಡತಕ್ಕದ್ದಿರುತ್ತದೆ

ಅನ್ಯಾಯ್ಯವಾಗಿ ಒಡೆಯನು ಸಂರಕ್ಷಿತ ಒಕ್ಕಲಿಗನನ್ನು ಗೇಣಿ-ಭೂಮಿಯಿಂದ ಹೊರಪಡಿಸಿದ ಸಂದರ್ಭದಲ್ಲಿ ಒಕ್ಕಲಿಗನಿಗೆ ಒಡೆಯನು ಕೊಡಬೇಕಾದ ನಷ್ಟವನ್ನು ಹಾಗೂ ಕಲಮು ೮ರಲ್ಲಿ ಹೇಳಿದಂತೆ ಗೇಣಿ-ಭೂಮಿಯಲ್ಲಿ ಒಕ್ಕಲಿಗನು ಮಾಡಿದ ಲಾಗ್ವಾಡಿನ (ಸುಧಾರಣೆಯ) ಮೊತ್ತವನ್ನು ಠರಾಯಿಸಿ ಕೊಡಿಸುವ ಅಧಿಕಾರ ಕಲಮ್ ೧೩ರಂತೆ ತಾಲೂಕಿನ ಮಾಮಲೇದಾರರಿಗೆ ಉಂಟು ಮಾಮಲೇದಾರರ ನಿಕಾಲಿ ವಿರುದ್ಧ ಕಲೆಕ್ಟರರ ಕಡೆ ಅಪೀಲು ಮಾಡಬರುತ್ತದೆ

ಸರ್ವಸಾಮಾನ್ಯ ಒಕ್ಕಲಿಗರ ಹಕ್ಕು-ಬಾಧ್ಯತೆಗಳು.

ಯಾವದೇ ಒಕ್ಕಲಿಗನ ಕಡೆಯಿಂದ ಕಾನೂನ-ಮಾನ್ಯ ಗೇಣಿಯನ್ನಲ್ಲದೆ ಬೇರೆ ಯಾವದೇ ಬಗೆಯ ನಜರಾಣೆ, ಕಾಣಿಕೆ, ಬಿಟ್ಟಿ ವಗೈರೆ ಒಡೆಯನು ಪಡೆಯತಕ್ಕದ್ದಲ್ಲವೆಂದು ೧೪ನೇ ಕಲಮಿನಲ್ಲಿ ಪ್ರತಿಬಂಧಿಸಲಾಗಿದೆ ಈ ಪ್ರತಿಬಂಧ ಉಲ್ಲಂಘಿಸುವವರಿಗೆ ರೂ ೧೦೦೦ ದ ತನಕ ದಂಡ ವಿಧಿಸಬಹುದೆಂದೂ ಆ ಕಲಮಿನಲ್ಲಿ ಹೇಳಿದ್ದುಂಟು

ಯಾವದೊಂದು ಪ್ರದೇಶದಲ್ಲಿ ಗೇಣಿಯ ಮಾನ ಇಂತಿಷ್ಟರೊಳಗೇ ಇರತಕ್ಕದ್ದೆಂದು (ಅಂದರೆ ಗೇಣಿಯ ಗರಿಷ್ಠ ದರವನ್ನು) ನಿರ್ದಿಷ್ಟಗೊಳಿಸುವ ಅಧಿಕಾರ ೧೫ನೆಯ ಕಲಮಿನಂತೆ ಪ್ರಾಂತಿಕ ಸರಕಾರಕ್ಕೆ ಕೊಡಲ್ಪಟ್ಟಿದೆ ಸರಕಾರದವರು ಈ ಬಗ್ಗೆ ಪ್ರಕಟನೆ ಹೊರಡಿಸಿ ಅದನ್ನು ಕಾನೂನ ಮಂಡಳಗಳ ಮುಂದೆ ಇಡತಕ್ಕದ್ದು ಎರಡೂ ಕಾನೂನ ಮಂಡಳ (ಅಂದರೆ ಎಸೆಂಬ್ಲಿ ಹಾಗೂ ಕೌನ್ಸಿಲ)ದವರು ಒಂದು ಗೊತ್ತುವಳಿ ಮಾಡಿ ಆ ಪ್ರಕಟನೆಯನ್ನು ರದ್ದುಗೊಳಿಸಬಹುದು ಇಲ್ಲವೆ ಅದರಲ್ಲಿ ಅವಶ್ಯ ಕಂಡ ತಿದ್ದುಪಡಿಯನ್ನೂ ಮಾಡಬಹುದು

ಯಾವದೇ ಕಾರಣದಿಂದ ಯಾವದೊಂದು ಭೂಮಿಯ ಕಿರ್ದಿಯನ್ನು ಸರಕಾರದವರು ಅಂಶತಃ ಇಲ್ಲವೆ ಪೂರ್ಣವಾಗಿ ಸೂಟ ಬಿಟ್ಟಲ್ಲಿ, ಅಥವಾ ಕಿರ್ದಿ ತೆರಲು ತಹಕೂಬಿ ದಯಪಾಲಿಸಿದಲ್ಲಿ ಕಿರ್ದಿಯಲ್ಲಿ ಸೂಟ ಯಾ ತಹಕೂಬಿ ಕೊಟ್ಟ ಪ್ರಮಾಣದಿಂದಲೇ ಒಡೆಯನು ತನ್ನ ಒಕ್ಕಲಿಗನಿಗೆ ಗೇಣಿಯಲ್ಲಿ ಸೂಟ ಇಲ್ಲವೆ ತಹಕೂಬಿ ಕೊಡತಕ್ಕದ್ದೆಂದು ೧೬ನೆಯ ಕಲಮಿನಲ್ಲಿ ವಿಧಿಸಿದೆ (ಒಡೆಯನಿಗೆ ಉತ್ಪತ್ತಿಯ ಪಾಲು ಸಿಗುವಲ್ಲಿ ಈ ವ್ಯವಸ್ಥೆ ಅನ್ವಯಿಸುವದಿಲ್ಲ) ಹೀಗೆ ಗೇಣಿಯಲ್ಲಿ ತಹಕೂಬಿ ಕೊಡಬೇಕಾದಲ್ಲಿ ತಹಕೂಬಿಯ ಅವಧಿಯಲ್ಲಿ ಗೇಣಿಬಾಕಿಯ ದಾವೆ ನಡೆಯುವಂತಿಲ್ಲ, ಹಾಗೂ ತಹಕೂಬಿಯ ಅವಧಿಯನ್ನು ಅವಧಿ ಕಾನೂನಿನಂತೆ ಅವಧಿ ಎಣಿಸುವಾಗ ಬಿಟ್ಟು ಕೊಡಬೇಕಾಗುತ್ತದೆ ಎಲ್ಲಾದರೂ ಒಡೆಯನಿಗೆ ವಾಸ್ತವಿಕವಾಗಿ ಸಲ್ಲತಕ್ಕ ಗೇಣಿಗಿಂತ ಹೆಚ್ಚಿಗೆ ಸಂದಾಯವಾದದ್ದು ಇದ್ದರೆ, ಹಾಗೆ ಹೆಚ್ಚಿಗೆ ಸಂದಾಯವಾದ ರಕಮನ್ನು ಮುಂದೆ ಒಡೆಯನು ಗೇಣಿ-ಬಾಕಿ (ರೆವ್ಹಿನ್ಯೂ ಕೋರ್ಟಿನಲ್ಲಿ) ದಾವೆ ಮಾಡಿದಾಗ ರೈತನು ಮುಜ್ರಾ ಮಾಡಿಸಿಕೊಳ್ಳಬಹುದಾಗಿಯೂ ಈ ಕಲಮಿನಲ್ಲುಂಟು ಆದರೆ ಸದರಿ ಗೇಣಿಬಾಕಿ ದಾವೆ ಮಾಡಿದ ಮಿತಿಗೆ ಸದರಿ ಹೆಚ್ಚಿನ ಸಂದಾಯತಿಗೆ ೩ ವರ್ಷಗಳಿಗಿಂತ ಹೆಚ್ಚಿಗೆ ಕಾಲ ಕಳೆದು ಹೋಗಿದ್ದರೆ ಆ ಹಣ ಮುಜ್ರಾ ಮಾಡಿಸಿಕೊಳ್ಳಬರುವಂತಿಲ್ಲ

(೧೬, ೧೮ನೆಯ ಕಲಮುಗಳು ಖೋತಿ ತಾಲೂಕದಾರಿ ಲಾವಣಿ ಪದ್ಧತಿಯಲ್ಲಿ ಮಾತ್ರ ಅನ್ವಯಿಸುತ್ತವೆ)

ಗೇಣಿ-ಭೂಮಿಯಲ್ಲಿ ರೈತನು ತನ್ನ ವೆಚ್ಚದಿಂದ ಗಿಡಮರಗಳನ್ನು ನೆಟ್ಟು ಬೆಳೆಸಿದ್ದು ಇದ್ದಲ್ಲಿ ಅವುಗಳ ಉತ್ಪತ್ತಿಯನ್ನೂ ಕಟ್ಟಿಗೆಯನ್ನೂ ಅವನೇ ಪಡೆಕೊಳ್ಳತಕ್ಕದ್ದು ಭೂಮಿಯನ್ನು ರೈತನು ಬಿಡಬೇಕಾದ ಪ್ರಸಂಗದಲ್ಲಿ ಒಡೆಯನು ಆ ಗಿಡ-ಮರಗಳ ಬಾಬು (ಮಾಮಲೇದಾರರು ಠರಾಯಿಸುವಷ್ಟು) ನಷ್ಟ-ಪರಿಹಾರ ದ್ರವ್ಯವನ್ನು ರೈತನಿಗೆ ತೆರಬೇಕು (ಕಲಮ್ ೧೯)

ಗೇಣಿಯನ್ನು ರೈತನು ಸರಿಯಾಗಿ ವಸೂಲ ಕೊಟ್ಟಿಲ್ಲ ಮತ್ತು ಕೊಡುವದಿಲ್ಲ ಎಂಬ ಕಾರಣದಿಂದ ಯಾವನೊಬ್ಬ ರೈತನ ಗೇಣಿನಾತೆ ಅಂತ್ಯಪಡಿಸಿ ಒಡೆಯನು ಕಬಜಾ ದಾವೆ ತಂದಾಗ ಪ್ರತಿವಾದಿ ರೈತನು ಬಾಕಿಯಿರುವ ಎಲ್ಲ ಗೇಣಿಯನ್ನು ಮತ್ತು ದಾವೆಯ ಖರ್ಚನ್ನು ಕೋರ್ಟಿನಲ್ಲಿ ವಸೂಲ ಕೊಟ್ಟಲ್ಲಿ ಇಲ್ಲವೆ ೧೫ ದಿನಗಳೊಳಗೆ ವಸೂಲ ಕೊಡುತ್ತೇನೆಂದು ಕೋರ್ಟಿನ ಮುಂದೆ ಯೋಗ್ಯ ಭದ್ರತೆ ಕೊಟ್ಟಲ್ಲಿ ಕೋರ್ಟಿನವರು ಆ ಪ್ರತಿವಾದಿಯ ಗೇಣಿನಾತೆ ಅಂತ್ಯವಾಗಿಲ್ಲೆಂದು ನಿರ್ಣಯಿಸಿ ದಾವೆಯ ತೀರ್ಮಾನ ಮಾಡಬೇಕಾಗುತ್ತದೆ (ಕಲಮ್ ೨೦)

ಗೇಣಿ-ಭೂಮಿಗೆ ರೈತನು ಕೆಡಕು ಮಾಡಿದ ಕಾರಣದಿಂದ ಒಡೆಯನು ಅವನ ಗೇಣಿ-ನಾತೆ ಅಂತ್ಯಪಡಿಸುವ ಸಂದರ್ಭದಲ್ಲಿ, ಆ ಭೂಮಿಗೆ ಯಾವ ಬಗೆಯ ಕೆಡಕು ಮಾಡಲ್ಪಟ್ಟಿದೆ ಎಂಬುದನ್ನು ಒಡೆಯನು ನೋಟೀಸಿನಲ್ಲಿ ಸ್ಪಷ್ಟ ತಿಳಿಸಬೇಕು ಆ ನೋಟೀಸು ತಲ್ಪಿದ ೧ ವರ್ಷದೊಳಗೆ ರೈತನು ಸದರಿ ಕೆಡಕನ್ನು ಸರಿಗೊಳಿಸಿ ಭೂಮಿಯನ್ನು ಪೂರ್ವರೂಪಕ್ಕೆ ತರದಿದ್ದಲ್ಲಿ ಮಾತ್ರ ಒಡೆಯನು ಕಬಜೆ ಪಡೆಕೊಳ್ಳಲು ದಾವೆ ಮಾಡಲು ಅಧಿಕಾರಿಯಾಗುತ್ತಾನೆ (ಕಲಮು ೨೧)

ಇಂತಹದೇ ವರ್ಷದ ಗೇಣಿ ಎಂದು ನಿರ್ದೇಶಿಸದೆ ರೈತನು ಯಾವದೊಂದು ವರುಷ ಗೇಣಿ ಸಲ್ಲಿಸಿದಲ್ಲಿ ಆ ಸಂದಾಯಿಸಿದ ರಕಂ ಆ ವರ್ಷದ ಗೇಣಿಯದೇ ಎಂದು ತಿಳಿಯತಕ್ಕದ್ದು. ರೈತನು ಗೇಣಿ ವಸೂಲ ಕೊಟ್ಟಾಗ ಒಡೆಯನು (ಸರಕಾರದವರು) ನಿರ್ದಿಷ್ಟ ಮಾಡಿದ ನಮೂನೆಯ ಪಾವತಿಯನ್ನು ಕೊಡಲೇಬೇಕು ಕೊಡದಿದ್ದರೆ ಗುನ್ಹೆಯಾಗುತ್ತದೆ ಆ ಗುನ್ಹೆಗೆ ರೂ ೧೦೦ ರ ವರೆಗಿನ ದಂಡದ ಶಿಕ್ಷೆ ಹೇಳಲ್ಪಟ್ಟಿದೆ (ಕಲಮ್ ೨೨)

ಈ ಕಾನೂನು ಅಮಲಿನಲ್ಲಿ ಬಂದ ನಂತರ (ತಾ ೧೧-೪-೧೯೪೬ರ ನಂತರ) ಆಗುವ ಎಲ್ಲ ಲಾವಣಿ ಕರಾರುಗಳು ೧೦ ವರ್ಷಗಳಿಗಿಂತ ಕಡಿಮೆ ಅವಧಿಯವಿರಕೂಡದು ಈ ಮುಂದೆ ಅಮಲಿನಲ್ಲಿ ಬಂದ ತರುವಾಯ ಆದ ಗೇಣಿ ಕರಾರು ೧೦ ವರ್ಷಗಳಿಗಿಂತ ಕಡಿಮೆ ಅವಧಿಯದಿದ್ದಲ್ಲಿ ಕರಾರಿನ ಅವಧಿಯು ಮುಗಿಯಿತೆಂಬ ಕಾರಣ ತೋರಿಸಿ ರೈತನ ಕಬಜಾ ತಪ್ಪಿಸಲು ಬರುವಂತಿಲ್ಲ (ಕಲಮ್ ೨೩)

ಈ ಕಾನೂನಿನಂತೆ ಹೊಲ-ಭೂಮಿಗಳ ಇಲ್ಲವೆ (ನಾಸ್ತಲದ) ಕಬಜಾ ಪಡೆಯಲು ಹಕ್ಕುದಾರರಾದವರು ನಿರ್

ಜಾಹೀರ ನೋಟೀಸು

ಗಣಪತಿ ಕೇಶವ ಶ್ಯಾನಭಾಗ ಬಾಳೇರಿ ತಾ॥ ಕೋಡಕಣಿ ಇವನು ಈ ಮೂಲಕ ಜಾಹೀರಪಡಿಸುವದೇನಂದರೆ —

ನನ್ನ ಅಣ್ಣ ವಾಸುದೇವ ಇವನು ನನಗೆ ವಂಚಿಸುವ ಇರಾದೆಯಿಂದ ನಮ್ಮ ಅವಿಭಕ್ತ ಕುಟುಂಬದ ಆಸ್ತಿಯನ್ನು ಪರಾಧೀನ ಮಾಡುವ ದುರಾಲೋಚನೆ ಮಾಡಿರುತ್ತಾನೆಂದು ತಿಳಿಯುತ್ತದೆ ಆಸ್ತಿ ಪರಾಧೀನ ಮಾಡುವ ಪ್ರಸಂಗ ನಮಗೆ ಈಗ ಇರುವದಿಲ್ಲ ಕಾರಣ ಅವನಿಂದ ಆಸ್ತಿ ಪರಾಧೀನ ಮಾಡಿಕೊಂಡವರಿಗೆ ಆ ಆಸ್ತಿಯೊಳಗಿನ ನನ್ನ ಹಕ್ಕು ಹೋಗಲಾರದು ತಿಳಿಯುವದು ಕೋಡಕಣಿ, ತಾ ೪-೫-೧೯೪೬

G K Shanbhag, Baleri.

ಷ್ಟ ನಮೂನೆಯ ಅರ್ಜಿಯನ್ನು ತಾಲೂಕ-ಮಾಮಲೇದಾರರ ಕಡೆಗೆ ಮಾಡತಕ್ಕದ್ದು. ಅವರು ನಿರ್ದಿಷ್ಟ ಕ್ರಮದ ಚೌಕಶಿ ನಡಿಸಿ ನ್ಯಾಯ್ಯ ಕಂಡ ಹುಕುಮು ಮಾಡುವರು. ಈ ಹುಕುಮಿನ ವಿರುದ್ಧ ಅಪೀಲು ಮಾಡುವವರು ೩ ತಿಂಗಳೊಳಗೆ ಕಲೆಕ್ಟರರ ಕಡೆಗೆ ಅಪೀಲು ಮಾಡಬಹುದು (ಕಲಮ್ ೨೪)

ಸರಕಾರದಿಂದ ಇಲ್ಲವೆ ಸಹಕಾರಿ ಸಂಘಗಳ ಕಡೆಯಿಂದ ಪಡಕೊಂಡ ಚಾವಣಿಗಳಿಗೂ ಔದ್ಯೋಗಿಕ ಇಲ್ಲವೆ ವ್ಯಾಪಾರಿ ವ್ಯವಹಾರಗಳ ಅನುಕೂಲತೆಗಾಗಿ ಮಾಡಿದ ಚಾವಣಿಗಳಿಗೂ ಈ ಕಾನೂನು ಅನ್ವಯಿಸುವದಿಲ್ಲ (ಕಲಮ್ ೨೫)

ಇನ್ನಿತರ ಕಾಯಿದೆ ಕಾನೂನು, ಕರಾರು, ಸನದು ಇಲ್ಲವೆ ಹುಕುಮುನಾಮೆಗಳಿಂದ ಒಕ್ಕಲಿಗರಿಗೆ ಸಿಕ್ಕ ಹಕ್ಕು-ಸವಲತ್ತುಗಳನ್ನು ಈ ಕಾನೂನಿನ ಯಾವದೇ ಅಂಶಗಳು ಸಂಕೋಚಗೊಳಿಸುವದಿಲ್ಲ ಅಥವಾ ಸಂಕ್ಷೇಪಿಸುವದಿಲ್ಲ (ಕಲಮ್ ೨೬)

ಕಾನೂನಿನ ಕ್ರಮಗಳನ್ನು ಜಾರಿಯಲ್ಲಿ ತರಲು ಅವಶ್ಯವಿರುವ ನಿಯಮಗಳನ್ನು ರಚಿಸುವ ಅಧಿಕಾರ ಕಲಮ್ ೨೭ರಂತೆ ಸರಕಾರಕ್ಕೆ ಕೊಟ್ಟಿದೆ. ಕಲಮ್ ೨೮ರಂತೆ ಮಾಮಲೇದಾರರೂ ಕಲೆಕ್ಟರರೂ ಮಾಡುವ ಹುಕುಮು ಇಲ್ಲವೆ ನಡಿಸುವ ಕ್ರಮ-ಕೆಲಸಗಳ ಮೇಲ್ಮನಾಸಣೆಯ ಅಧಿಕಾರ ಪ್ರಾಂತಿಕ ಸರಕಾರಕ್ಕುಂಟು (ಕಲಮ್ ೨೮) ಈ ಕಾನೂನು ಅಮಲಿನಲ್ಲಿ ಬಂದ ಮೇಲೆ ಸ್ಮಾಲಹೋಲ್ಡರ್ಸ್ ರಿಲೀಫ್ ಕಾಯಿದೆಯ ೯ನೆಯ ಕಲಮು ರದ್ದಾಗಿದೆ (ಕಲಮ್ ೨೯) ೩೦ನೇ ಕಲಮು ಪುನಃ ಬಂದ [illegible] ಕೋಡಿನ ಕೆಲವು ಕಲಮುಗಳನ್ನು ರದ್ದುಗೊಳಿಸಿದೆ (ಕೊನೆಯ ಅಂದರೆ ೩೧ನೆಯ ಕಲಮಿನಿಂದ ಬೋಂಬೆ ಸೆಟ್ಲಮೆಂಟ ಕಾಯಿದೆಯಲ್ಲಿ ಕೆಲವೊಂದು ತಿದ್ದುಪಡಿಗಳು ಮಾಡಲ್ಪಟ್ಟಿವೆ)

। ಸಿರಿಗನ್ನಡಂ ಗೆಲ್ಗೆ ॥

ವಾಚಕರಿಗೆ ಸುಸಂಧಿ !!!

ತ್ವರೆ ಮಾಡಿರಿ ! . ತ್ವರೆ ಮಾಡಿರಿ !!

ಶಿರಸಿಯ ಕನ್ನಡ ಪುಸ್ತಕಾಲಯದವರು ಕುಮಟೆಯಲ್ಲಿ ಇದೇ ಬರುವ ಮೇ ೨೧, ೨೨ರಲ್ಲಿ ಜರುಗುವ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಲ್ಲಿಯ ಉತ್ತಮ ಗ್ರಂಥಗಳ ಸಂಗ್ರಹವನ್ನು ತರುವವರಿದ್ದಾರೆ.

ಸಾಹಿತ್ಯ-ಪ್ರೇಮಿಗಳು ಇಂಥ ಸುಸಂಧಿಯನ್ನು ಕಳಕೊಳ್ಳಬಾರದು

ವ್ಯಾಪಾರಸ್ಥರಿಗೆ ಮತ್ತು ಲಾಯಬ್ರರಿಗಳಿಗೆ ಭಾರಿ ಕಮಿಶನ್ ಕೊಡಲಾಗುವದು. ಜಿಲ್ಲೆಯಲ್ಲಿಯ ಈ ಹೊಸ ಉದ್ಯಮಕ್ಕೆ ಸಕಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ

ಪತ್ತೆ — **ಕನ್ನಡ ಪುಸ್ತಕಾಲಯ, ಶಿರಶಿ**

“ ಜಯ ಹಿಂದ ”

ನಿಮ್ಮ ರಕ್ತ ಕೊಡಿ, ಸ್ವರಾಜ್ಯ ಕೊಡುವೆನೆಂದು
ಬೋಸ ಹೇಳಿದ
ವರ್ಷಕ್ಕೆ ಮೂರು ರೂಪಾಯಿ ಕೊಡಿ;
ನಾಲ್ಕು ಪುಸ್ತಕ ಕೊಡುವೆನೆಂದು
ವರ್ಣಕುಟಿ ಗ್ರಂಥಮಾಲೆ ಎನ್ನುತ್ತಿದೆ

ಹಣ ಕಳಿಸುವ ವಿಳಾಸ —
ಕರ್ನಾಟಕ ಸಂಘ, ಗೋಕರ್ಣ (ಉ ಕನ್ನಡ)

ಜಾಹೀರ ನೋಟೀಸು.

ಮಹಾದೇವಿ ಕೋಂ ಗಣಪತಿ ನಾಯ್ಕ ಸಾ॥ ಕುಮಟಾ ಇವಳು ಈ ಮೂಲಕ ಜಾಹೀರಪಡಿಸುವದೇನಂದರೆ —

ನನ್ನ ತಾಯಿ ಸೀತಮ್ಮಾ ಕೋಂ ದೇವಪ್ಪ ನಾಯ್ಕ ಇವಳು ೧೧-೧೨ ವರುಷಗಳಿಂದ ಅಪಸ್ಮಾರ ಬೇನೆಯಿಂದ ಅಸ್ವಸ್ಥಳಿದ್ದು, ಈಗ ಅವಳಿಗೆ ೭೦ ವರ್ಷ ಪ್ರಾಯವಾಗಿದೆ ಇತ್ತಲಾಗಿ ಅವಳು ಬಹಳ ಕ್ಷೀಣಳಾಗಿದ್ದಾಳೆ ಅವಳ ಬುದ್ಧಿ ಸಹ ನೆಟ್ಟಗಿಲ್ಲ. ಹಾಲಿ ೧-೨ ವರುಷಗಳಿಂದ ಅವಳು ತನ್ನ ಮೈದುನ ರಾಮಯ್ಯ ನಾಗಪ್ಪ ನಾಯ್ಕ ಸಾ॥ ಹಳದೀಪೂರ ಇವರಲ್ಲಿ ಉಳಿಯುತ್ತಿದ್ದಾಳೆ. ಅವಳ ಕಡೆ ೫೦೦ ರೂ ನಗದಿ ಮತ್ತು ಕಾರ್ಜತ, ಪವನ ಬಳೆ, ಸರ ಕೊಡಿ ಸುಮಾರು ೨೦೦೦ ರೂ ಗಳ ದಾಗಿನೆಗಳುಂಟು. ಸ್ಥಾವರಾಸ್ತಿಯೂ ಉಂಟು. ಈ ಎಲ್ಲಾ ಚರ ಸ್ಥಿರ ಅಸ್ತಿ ಅವಳ ಸ್ತ್ರೀಧನವು ತಾಯಿಯ ನಂತರ ಅದೆಲ್ಲ ನನಗೇ ಸಿಗತಕ್ಕದ್ದು ಇರುತ್ತದೆ. ಅವನ್ನು ರಾಮಯ್ಯ ನಾಗಪ್ಪ ನಾಯ್ಕರು ಎಬ್ಬಿಸುವ ದುರ್ಯೋಚನೆಯಲ್ಲಿರುತ್ತಾರೆಂದು ತಿಳಿಯುತ್ತದೆ. ಆದರೆ ನಿರ್ಬುದ್ಧ ಮತ್ತು ಅಸಹಾಯ ಸ್ಥಿತಿಯಲ್ಲಿದ್ದ ನನ್ನ ತಾಯಿಯು ಮಾಡುವ ಪರಾಧೀನತೆಗಳು ಸಿಂಧು ಆಗಲಾರವು ಮತ್ತು ಪರಾಧೀನ ಪಡಕೊಂಡವರಿಗೆ ಏನೊಂದೂ ಹಕ್ಕು ಪ್ರಾಪ್ತವಾಗಲಾರದು ಎಂದು ಈ ಮೂಲಕ ಜಾಹೀರ ಮಾಡಿರುತ್ತೇನೆ.

ಕುಮಟಾ, ತಾ ೭—೫—೧೯೪೬

ಮಹಾದೇವಿಬಾಯಿ ನಾಯ್ಕ.

ಭಟಕಳ— (ತಾ ೨೫-೪-೪೬) ಸೀಧಾ ಅಂಗಡಿಗಳಲ್ಲಿ ಇತ್ತಲಾಗಿ ಚಿಮಣಿ ಎಣ್ಣಿ ಸಿಗುವದಿಲ್ಲ! ಜನರು ಗೋಳಿಡುತ್ತಿದ್ದಾರೆ!

ಇಲ್ಲಿಯ ಮ್ಯುನಿಸಿಪಲ್ ಆಸ್ಪತ್ರೆಯ ಡಾ॥ ಕಾಮಂಡಕಿಯವರಿಗೆ ಬೇರೂರಿಗೆ ವರ್ಗವಾಗಿ ಕಾರವಾರದಲ್ಲಿದ್ದ ಡಾ॥ ವಾಘರವರು ಇಲ್ಲಿಗೆ ಬರುತ್ತಾರೆ. ಕಾಮಂಡಕಿಯವರು ಬಡವರಿಗೆ ಬಹಳ ಪ್ರೀತಿಯಿಂದ ನಡಿಸಿ ಊರಲ್ಲಿ ಲೋಕಪ್ರಿಯರಾಗಿದ್ದರು

ಶಿರಶಿ— (ತಾ ೨೬-೪-೧೯೪೬) ಊರಲ್ಲಿ ಕಳವುಗಳು ಬಹಳವಾಗಿವೆ. ತಾಂಬ್ರ-ಹಿತ್ತಾಳಿ ಪಾತ್ರೆಗಳ ಕಳವುಗಳೇ ಹೆಚ್ಚಂತೆ. ಮೊನ್ನೆ ನಿಲೇಕಣಿಯಲ್ಲಿ ಒಂದು ವಾಸಿ-ಮನೆಯ ಹಂಚು ತೆಗೆದು ಒಳಹೊಕ್ಕ ಕಳ್ಳರು ಬಾನಿಕಟ್ಟೆಯಲ್ಲಿದ್ದ ಕೊಡಪಾನಗಳನ್ನು ಒಯ್ದಿರುತ್ತಾರಂತೆ. ಪೋಲೀಸರು ಈ ಕಳವುಗಳ ಪತ್ತೆ ಹಚ್ಚಲಾರರೇ ?

ದಿ ಕೊಮರ್ಶಿಯಲ್ ಕೊಪ್ಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ
ವಿ. ಎಮ್. ಮಿರ್ಜಾನಕರ,
ಮೋಟರ ಸ್ಟೆಂಡ, ಕುಮಟಾ.

ಕಾರವಾರ— ಜಿಲ್ಲಾ ಕಿಸಾನ (ರೈತ) ಸಂಘದ ಧರ್ಮವೀರ ಸಿಂಗ, ಎಸ್. ಜಿ. ಮಾಲ್ಸೇಕರ, ಟಿ ಜೀ. ನಾಯಕ, ಸಯ್ಯದ ಯುಸೂಫ ಹಾಗೂ ಹೊನ್ನಪ್ಪ ಧಾಕು ನಾಯ್ಕ ಇವರ ವಿರುದ್ಧ ಜಿಲ್ಲಾ ಮೆಜಿಸ್ಟ್ರೇಟರು ಚಾಪ್ಟರ ಬಿಟ್ಟು ಮಾಡಿ, ಪ್ರತಿಯೊಬ್ಬರಿಂದ ೫-೫ ಸಾವಿರ ರೂಪಾಯಿಗಳ ಜಾಮೀನು ಯಾಕೆ ಕೊಳ್ಳಬಾರದೆಂಬ ಕಾರಣ ತೋರಿಸಲು ಹುಕುಮು ಮಾಡಿದ್ದಾರೆ.

WANTED for our New English School, Bad (Karwar), Graduates in Arts and Science (B T s preferred) and a Matriculate with Drawing (Int) Apply to the undersigned stating the minimum salary expected

Premier Education Society, Bad, 8—3—46	**K.R.Haldipurkar,** Chairman

---

ನಮ್ಮಲ್ಲಿ (ಹೋಲಸೇಲ) ತೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ-ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ ಎಮ್. ಮಿರ್ಜಾನಕರ,
ಲಾಯಸನ್ಸಿ, ಮೋಟರ ಸ್ಟೆಂಡ, ಕುಮಟಾ

ನೋಟೀಸು.

ತಾ. ೩೦ ಎಪ್ರಿಲ್ ೧೯೪೬ಕ್ಕೆ ಅಂತ್ಯವಾಗುವ ತ್ರೈಮಾಸಿಕ ಬಟ್ಟೆಯ ಸಂಗ್ರಹದ ಮಾಹಿತಿ

೧೯೪೫ನೇ ಇಸ್ವಿಯ ಮುಂಬಯಿ ಅರಳೆ-ಬಟ್ಟೆ ವ್ಯಾಪಾರ ನಿಯಂತ್ರಣಾಜ್ಞೆಯನ್ವಯ ತಾ. ೩೦ ಎಪ್ರಿಲ್ ೧೯೪೬ಕ್ಕೆ ಅಂತ್ಯವಾಗುವ ತ್ರೈಮಾಸಿಕ ಅವಧಿಯ ರಿಟರ್ನನ್ನು ತಾ ೧೦ ಮೇ ೧೯೪೬ನೇ ದಿನ ಇಲ್ಲವೆ ಅದಕ್ಕೂ ಮುಂಚಿತವಾಗಿ ಒಪ್ಪಿಸತಕ್ಕದ್ದಿರುತ್ತದೆ. ಆದ್ದರಿಂದ ಕಾನಡಾ ಜಿಲ್ಲೆಯ ಯಾವತ್ತು ಜವಳಿ ಲಾಯಸನ್ಸದಾರರು ಮೇಲೆ ನಮೂದಿಸಿದ ರಿಟರ್ನನ್ನು ೧೯೪೫ನೇ ಇಸ್ವಿಯ ಮುಂಬಯಿ ಅರಳೆ ಬಟ್ಟೆ ವ್ಯಾಪಾರ ನಿಯಂತ್ರಣಾಜ್ಞೆಗೆ ಜೋಡಿಸಿದ ೯ನೆಯ ಫಾರ್ಮಿನಲ್ಲಿ ತಮ್ಮ ತಾಲೂಕಿನ ಮಾಮಲೇದಾರರ ಅಥವಾ ಪೇಟೆಯ ಮಹಾಲಕರಿಯವರ ವಿದ್ಯಮಾನ ಮುದ್ದತ್ತಿಗೆ ಸರಿಯಾಗಿ ಈ ಕಚೇರಿಗೆ ಮುಟ್ಟುವಂತೆ ಕಳಿಸತಕ್ಕದ್ದು. ಏನೂ ವ್ಯವಹಾರವಿರದಿದ್ದಲ್ಲಿ ಖುಲ್ಲಾ (ನವಾರ) ರಿಟರ್ನ ಕಳಿಸಬೇಕು

ಕಾರವಾರ,
ತಾ ೧-೫-೧೯೪೬

F. N. RANA.
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

ನೋಟೀಸು.

ನಂ ೧೨೦

ಕಾರವಾರ, ತಾ. ೩೦-೪-೧೯೪೬

ಕಾಟನ್‌ಕ್ಲಾಥ ಟ್ರೇಡ್ ರೆಗ್ಯುಲೇಶನ್ ಆರ್ಡರ ೧೯೪೫ನೇದರ ಕಕ್ಷೆಯಲ್ಲಿ ಬರುವ ಯಾವತ್ತು ಲಾಯಸನ್ಸದಾರರಿಗೆ ತಮ್ಮ ೧೯೪೨, ೧೯೪೩, ೧೯೪೪, ೧೯೪೫ ಮತ್ತು ೧೯೪೬ (ಮಾರ್ಚ ಕೊನೆಯ ವರೆಗೆ) ಈ ವರ್ಷಗಳ ವಿಕ್ರಿಯ ಲೆಕ್ಕವನ್ನು ತಾ. ೧೦-೪-೧೯೪೬ರೊಳಗೆ ನಮ್ಮ ಕಚೇರಿಗೆ ಪೂರೈಸಬೇಕಾಗಿ ಈ ಕಚೇರಿಯ ನಂ ೧೨೦ ತಾ ೨-೪-೧೯೪೬ನೇ ನೋಟೀಸಿನಲ್ಲಿ ತಿಳಿಸಿತ್ತು. ಆದರೆ ಕೆಲವು ಲಾಯಸನ್ಸದಾರರು ಸದರಿ ಲೆಕ್ಕ ಇನ್ನೂ ಪೂರೈಸಿಲ್ಲ. ಅಂಥ ಲಾಯಸನ್ಸದಾರರಿಗೆ ಇದರ ಮೂಲಕ ತಿಳಿಸುವದರಲ್ಲಿ ಬರುತ್ತದೇನೆಂದರೆ- ಅವರು ಮೇಲೆ ಹೇಳಿದಂತಹ ಲೆಕ್ಕವನ್ನು ತಾ ೮-೫-೧೯೪೬ರೊಳಗೆ ನಮ್ಮ ಕಚೇರಿಗೆ ತಪ್ಪಿಸದಿದ್ದಲ್ಲಿ ಅವರಿಗೆ ನಮ್ಮ ಜಿಲ್ಲೆಯ ಕೋಟಾದೊಳಗಿಂದ ಅರಿವೆ ಸಿಗಲಿಕ್ಕಿಲ್ಲ.

F. N. RANA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ನೋಟೀಸು.

ತಾ. ೩೦ ಏಪ್ರಿಲ್ ೧೯೪೬ಕ್ಕೆ ಅಂತ್ಯವಾಗುವ ತ್ರೈಮಾಸಿಕ ನೂಲಿನ ಸಂಗ್ರಹದ ರಿಟರ್ನಗಳು.

೧೯೪೬ನೇ ಇಸವಿಯ ಮುಂಬಯಿ ಅರಳೆ ನೂಲಿನ ವ್ಯಾಪಾರ ನಿಯಂತ್ರಣಾಜ್ಞೆಯನ್ವಯ ಕಳಿಸತಕ್ಕ ನೂಲಿನ ಸಂಗ್ರಹದ ರಿಟರ್ನಗಳು ಇನ್ನು ಮುಂದೆ ತ್ರೈಮಾಸಿಕವಾಗುವವು, ಮಾಸಿಕವಲ್ಲ. ತಾ. ೩೦ ಏಪ್ರಿಲ ೧೯೪೬ಕ್ಕೆ ಅಂತ್ಯವಾಗುವ ತ್ರೈಮಾಸಿಕ ಅವಧಿಗೆ ಸಂಬಂಧಿಸಿದ ಪ್ರಥಮ ತ್ರೈಮಾಸಿಕ ರಿಟರ್ನನ್ನು ತಾ ೧೦ ಮೇ ೧೯೪೬ನೇ ದಿನ ಇಲ್ಲವೆ ಅದಕ್ಕೂ ಮುಂಚಿತವಾಗಿ ಒಪ್ಪಿಸತಕ್ಕದ್ದಿರುತ್ತದೆ. ಈ ರಿಟರ್ನನ್ನು ೧೯೪೬ನೇ ಮುಂಬಯಿ ಅರಳೆ ನೂಲಿನ ವ್ಯಾಪಾರ ನಿಯಂತ್ರಣಾಜ್ಞೆಗೆ ಜೋಡಿಸಿದ ೪ನೆಯ ಫಾರ್ಮಿನಲ್ಲಿ “ಪ್ರಾಂತಿಕ ಟೆಕ್ಸಟಾಯಿಲ್ ಕಂಟ್ರೋಲರ, ಕಾಳಾಚೌಕಿ ಪೋಸ್ಟ ಅಫೀಸಿನ ಎದುರು, ಪರೇಲ ರೋಡ, ಮುಂಬಯಿ” ಇವರಿಗೆ ಒಪ್ಪಿಸತಕ್ಕದ್ದು. ಆ ಫಾರ್ಮಿನಲ್ಲಿ ಗೊತ್ತುಪಡಿಸಿದ ಪ್ರಕಾರ ಒಂಟಿಕೆ ನೂಲಿನ ಮತ್ತು ಹುರಿನೂಲಿನ ರಿಟರ್ನಗಳನ್ನು ಬೇರೆ ಬೇರೆಯಾಗಿ ಕಳಿಸತಕ್ಕದ್ದಿರುತ್ತದೆ. ಯಾವದೇ ವ್ಯವಹಾರವಿಲ್ಲದಿದ್ದಲ್ಲಿ ಖುಲ್ಲಾ (ನದಾರ) ರಿಟರ್ನಗಳನ್ನು ಕಳಿಸಬೇಕು. ಮುದ್ದತಿಗೆ ಸರಿಯಾಗಿ ಸದರಿ ರಿಟರ್ನಗಳು ಒಪ್ಪಿಸಲ್ಪಡುವಂತೆ ಲಾಯಸನ್ಸದಾರರು ಜಾಗ್ರತೆ ವಹಿಸಬೇಕಾಗಿ ವಿನಂತಿ.

ಮುಂಬಯಿ,
ತಾ. ೩೦-೪-೧೯೪೬

ಜೆ ಕೆ ಠಾಕೋರ,
ಪ್ರಾಂತಿಕ ಟೆಕ್ಸಟಾಯಿಲ ಕಂಟ್ರೋಲರ

NOTICE.

All Stage Carriages (Buses) Operators in the Karnatak Region are hearby informed that the Government of Bombay in their Circular No 4576/4-IV (c)-II dated 25-4-1946 have decided that the concession hither-to allowed to carry 25% excess passengers has to be withdrawn forthwith. The condition entered in permits allowing the concession of 25% excess passengers is cancelled with effect from 7—5—1946 Stage Carriage operators should arrange now to carry not more than the prescribed number of passengers in each of the Stage Carriages with effect from 7—5—1946

Belgaum,
30—4—1946

J B RABBITT.
Regional Transport Officer, BELGAUM

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ “ಸ್ಟಾರ ಆಫ್ ಕೆನರಾ ಪ್ರೆಸ್ಸಿ”ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿಯು ಮುಂಗಡ ಕಟ್ಟತಕ್ಕದ್ದು

Reg. No. B 1270
Monday, 13th May, 1946.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೪೫.

ಕುಮಟಾ:- ಸೋಮವಾರ, ತಾ ೧೩ ಮಾಹೆ ಮೇ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಥಳದ ೧೫ ಎಮ್ ಉದ್ದ
೧ ಸಾಲಿಗೆ ೪ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ಠರಿಸಲಾದೀತು.

"ಕಾರ್ಮೋಡ ಕರಗಿತು; ಬಿರುಗಾಳಿ ನಿಂತಿತು."

(ನಿರೀಕ್ಷಕನು ಬರೆದುದು)

"ಕಾರ್ಮೋಡ ಕರಗಿದೆ; ಬಿರುಗಾಳಿ ನಿಂತಿದೆ." ಹೀಗೆ ಮಹಾತ್ಮರು ಮೊನ್ನೆ ಶನಿವಾರ ಸರ್ವಾಧಿಪತಿ ವೆವೆಲ್ಲ ದೊರೆಗಳೊಡನೆ ಮಾತನಾಡಿ ಹೊರಗೆ ಬಂದ ಮೇಲೆ ಉದ್ಗರಿಸಿದಂತೆ ಸುದ್ದಿಗಾರರು ಬರೆದು ಧೈರ್ಯ ಕೊಡುತ್ತಾರೆ. ತ್ರಿಪಕ್ಷ ಪರಿಷತ್ತಿನ ಬಗ್ಗೆ ಅಧಿಕೃತವಾಗಿ ಹೊರಟ ಪ್ರಕಟನೆಗಳಲ್ಲಿ ಚರ್ಚೆ ನಡೆದ ಅವಧಿ ಮತ್ತು ವಿಷಯಗಳ ಉಲ್ಲೇಖ ಮಾತ್ರ ಇರುತ್ತಿದೆ; ಹೊರತು ಚರ್ಚೆ ಎಲ್ಲಿ ಮುಟ್ಟಿತೆಂಬುದರ ಇಲ್ಲವೆ ವಾದ-ಪ್ರತಿವಾದಗಳ ಉಲ್ಲೇಖವಿರುವದಿಲ್ಲ. ರಾಷ್ಟ್ರೀಯ ಸಭೆ, ಮುಸ್ಲಿಮ ಲೀಗುಗಳಲ್ಲಿ ಇರುವ ಮತಭೇದ ಪರಿಹಾರ ಹೊಂದುವ ಲಕ್ಷಣಗಳಿಲ್ಲೆಂದು ಒಂದಿನ ಸುದ್ದಿ ಹೊರಡುತ್ತಿದ್ದರೆ, ಇನ್ನೊಂದು ದಿನ ಉಭಯತರೊಳಗಿನ ಮತಭೇದ ಪರಿಹಾರ ಹೊಂದುವ ಆಶೆಯುಂಟಾಗಿದೆಯೆಂದೂ, ಶೀಘ್ರವೇ ಕೇಂದ್ರ ಸರಕಾರ ರಚನೆಯಾಗಲಿದೆಯೆಂದೂ, ಪ್ರಜಾಪ್ರತಿನಿಧಿ ಸಭೆ ಸೇರಿ ಚಿರಕಾಲಿಕ ಸರಕಾರ ಘಟಿಸಲ್ಪಡುವದೆಂದೂ ಸುದ್ದಿ ಬರುತ್ತಿದೆ. ಸಿಮ್ಲಾದೊಳಗಿನ ಸುದ್ದಿಗಳನ್ನು ಕೇಳಿದರೆ ಮನಸ್ಸಿನೊಳಗೆ ಆಶೆ-ನಿರಾಶೆಗಳ ತೆರೆಗಳು ಏಳುತ್ತಿವೆ. ಪ್ರತ್ಯಕ್ಷ ತ್ರಿಪಕ್ಷದ ಸಭೆಯಲ್ಲಿ ಚರ್ಚೆಯಾದದ್ದಕ್ಕಿಂತ ತ್ರಿಪಕ್ಷದವರು ತಮ್ಮತಮ್ಮೊಳಗೆ ಇಲ್ಲವೆ ಬೇರೆ ಬೇರೆ ಪಕ್ಷಗಳ ಪ್ರತಿನಿಧಿಗಳೊಡನೆ ಚರ್ಚೆ ಮಾಡಿದ್ದೇ ಹೆಚ್ಚು. ಗುರುವಾರ ತ್ರಿಪಕ್ಷದ ಸಭೆ ಸೇರಿದಾಗ ಸರ್ ಸ್ಟೆಫರ್ಡ ಕ್ರಿಪ್ಸರು ಪಂ|| ಜವಾಹಿರಲಾಲ ಹಾಗೂ ಬ್ಯಾ|| ಜಿನ್ನಾರೊಳಗೆ ಮಾತು-ಕತೆ ನಡೆಯುವಂತೆ ಏರ್ಪಾಟು ಮಾಡಿದರು. ಕಳೆದ ೭ ವರ್ಷಗಳ ಅವಧಿಯಲ್ಲಿ ನೆಹರೂ ಮತ್ತು ಜಿನ್ನಾ ಇವರು ಒತ್ತಟ್ಟಿಗೆ ಕೂಡಿ ಮಾತಾಡಿದ್ದು ಇದೇ ಮೊದಲು. ಉಭಯತರೊಳಗೆ ದೀರ್ಘಕಾಲ ವಿಚಾರ-ವಿನಿಮಯ ನಡೆಯಿತು. ಮೊನ್ನೆ ಶನಿವಾರ ಸಭೆ ಕೂಡಿದಾಗ ಕೊಂಗ್ರೆಸ-ಲೀಗಗಳೊಳಗಿನ ಮತಭೇದ ದೂರವಾಗಿ ಉಭಯ ಪಕ್ಷಗಳೊಳಗೆ ಮತ್ತೈಕ್ಯವಾಗಿರಬಹುದೆಂದು ಜನರು ಹಾರೈಸುತ್ತಿದ್ದರು. ಇದೇ ಸಮಯದಲ್ಲಿ ಕೇಂದ್ರ ಸರಕಾರದ ಕಾರ್ಯಕಾರಿ ಸದಸ್ಯರು ಆತ್ಮಸಂತೋಷದಿಂದ ರಾಜಿನಾಮೆ ಕೊಟ್ಟಿದ್ದಾರೆಂದೂ ಹೊಸ ಸರಕಾರ ನಿರ್ಮಿಸಲು ಇದು ಪೂರ್ವ ತಯಾರಿಯೆಂದೂ ಸುದ್ದಿಗಾರರು ವರ್ಣಿಸಿದರು. ತ್ರಿಮಂತ್ರಿಗಳು ಸರ್ವಾಧಿಪತಿಗಳ ಸಹಾಯದಿಂದ ಹೊಸ ಕೇಂದ್ರ ಸರಕಾರ ನಿರ್ಮಿಸಿ, ಮುಂದಿನ ವ್ಯವಸ್ಥೆಯನ್ನೂ ಮಾಡಿ ಮೇ ತಾ ೧೭ಕ್ಕೆ ವಿಮಾನ ಹತ್ತಿ ಸ್ವದೇಶಕ್ಕೆ ಮರಳುವರೆಂಬ ವಾರ್ತೆಯೂ ಹಬ್ಬಿದೆ. ಕೇಂದ್ರ ಸರಕಾರದಲ್ಲಿ ಯಾರ್ಯಾರು ಸೇರಬೇಕು ಎಂಬ ಯಾದಿಯನ್ನು ಸರದಾರ ವಲ್ಲಭಭಾಯಿ ಪಟೇಲರು ತಯಾರಿಸತೊಡಗಿದ್ದಾರೆಂದೂ ಪುಣೆಯ "ಕೇಸರಿ" ಪತ್ರಿಕೆಯ ವಿಶೇಷ ಪ್ರತಿನಿಧಿಗಳಾದ ಡಾ|| ತಾಮ್ಹಣಕರರು ಬರೆಯುತ್ತಾರೆ. ಡಾ|| ತಾಮ್ಹಣಕರರ ಮಾತು ನಂಬಿದರೆ, ತ್ರಿಮಂತ್ರಿಗಳು ಮುಸ್ಲಿಮ್ ಲೀಗದವರ ಬೇಡಿಕೆಗಳನ್ನು ತಿರಸ್ಕರಿಸಿದ್ದಾರೆಂದು ಎಣಿಸಬೇಕಾಗುತ್ತಿದೆ. ತ್ರಿಮಂತ್ರಿಗಳು ಸೋಮವಾರದಿಂದ ಲಂಡನ್ನಿನೊಡನೆ ಟೆಲಿಫೋನ ಮೂಲಕ ಮಾತಾಡುತ್ತಿದ್ದಾರೆಂದೂ ಬ್ರಿಟಿಶ ಪ್ರಧಾನ ಮಂಡಳದಿಂದ ಅಪೇಕ್ಷಿತ ಉತ್ತರ ಬಾರದ್ದರಿಂದ ಗುರುವಾರದ ಸಭೆಯನ್ನು ನಿಲ್ಲಿಸುವ ಪ್ರಸಂಗ ಬಂತೆಂದೂ ಅವರು ಬರೆಯುತ್ತಾರೆ. ಏನೇ ಆದರೂ ಹಿಂದೀ ತೊಡಕನ್ನು ಬಗೆಹರಿಸಿಕೊಂಡೇ ತಿರುಗಿ ಹೋಗಬೇಕೆಂದು ತ್ರಿಮಂತ್ರಿಗಳು ನಿರ್ಧರಿಸಿದ್ದಾರಂತೆ. ತ್ರಿಮಂತ್ರಿಗಳು ಲೀಗಿನ ಕೈಬಿಟ್ಟರೆಂದು ಲೀಗ ಪಕ್ಷದ ಪತ್ರಕರ್ತರೊಬ್ಬರು ಡಾ|| ತಾಮ್ಹಣಕರರ ಬಳಿ ಉದ್ಗರಿಸಿದರಂತೆ. ತ್ರಿಪಕ್ಷ ಪರಿಷತ್ತು ಜಯಶಸ್ವಿಯಾಯಿತೆಂದು ಒಪ್ಪಲು ನಾನು ಒಡಂಬಡುವದಿಲ್ಲ. ರಾಷ್ಟ್ರೀಯ ಸಭೆ ಮತ್ತು ಲೀಗ ಇವುಗಳೊಳಗೆ ಒಡಂಬಡಿಕೆಯಾಗಿಲ್ಲವೆಂಬ ಮಾತನ್ನು ನಾನು ಒಪ್ಪುತ್ತೇನೆ. ಹಿಂದುಸ್ಥಾನವನ್ನು ಅಖಂಡವಿಡಬೇಕೆಂಬ ಲೀಗೇತರರ ಆಂದೋಲನವನ್ನೂ, ಹಿಂದುಸ್ಥಾನವನ್ನು ದ್ವಿಖಂಡವಾಗಿ ತುಂಡರಿಸಬೇಕು, ಹಿಂದುಸ್ಥಾನ ಒಂದೇ ಜನಾಂಗವಲ್ಲ, ಹಿಂದುಗಳು, ಮುಸ್ಲಿಮರು, ಶೀಖರು ಪ್ರತ್ಯೇಕ ಪ್ರತ್ಯೇಕ ಜನಾಂಗ, ಲೀಗಿನ ಹೊರಗಿನವರು ಮುಸಲ್ಮಾನರಲ್ಲ ಎಂದು ಮುಂತಾಗಿ ವಾದಿಸುವ ಲೀಗದವರ ಆಂದೋಲನವನ್ನೂ ಪರಿಗಣಿಸಿ ತರುವದು ಎಂದೂ ಸಾಧ್ಯವಿಲ್ಲ. ಕೊಂಗ್ರೆಸ ಲೀಗಗಳೊಳಗೆ ಒಡಂಬಡಿಕೆ ಮಾಡಿ ತ್ರಿಪಕ್ಷ ಪರಿಷತ್ತನ್ನು ಸಾರ್ಥಕಗೊಳಿಸಬೇಕೆಂದು ಬ್ರಿಟಿಶ ಪ್ರತಿನಿಧಿಗಳ ಅಭಿಪ್ರಾಯವಿದ್ದರೆ ತ್ರಿಪಕ್ಷ ಪರಿಷತ್ತು ಎಂದೆಂದೂ ಯಶಸ್ವಿಯಾಗುವಂತಿಲ್ಲೆಂದು ನಾನು ಹೇಳಬಲ್ಲೆ. ಆದರೆ ಲೀಗ-ಕೊಂಗ್ರೆಸ ಒಡಂಬಡಿಕೆಯ ಅಭಾವದಲ್ಲಿ ತ್ರಿಮಂತ್ರಿಗಳು ತಮ್ಮದೇ ಯೋಜನೆ ಪುರಸ್ಕರಿಸಿ ಹಿಂದೀ ಸಮಸ್ಯೆ ಬಿಡಿಸಬೇಕೆಂಬ ನಿರ್ಧಾರದಿಂದ ಇಲ್ಲಿಗೆ ಬಂದಿದ್ದಾರೆ. ವೆವೆಲ್ಲ ದೊರೆಗಳೂ ಹಟವಾದಿಗಳ ವಿರೋಧ ಲೆಕ್ಕಿಸದೆ ಸಂಕಲ್ಪಿತ ಯೋಜನೆಯನ್ನು ಈಡೇರಿಸುವ ನಿರ್ಧಾರ ಮಾಡಿದ್ದಾರೆ. ಜಿನ್ನಾರವರ ಹೇಳಿಕೆಯಂತೆ ಸರಕಾರದ ಘಟನೆಯಾಗತಕ್ಕದಿದ್ದರೆ ಮತ್ತು ಹಿಂದುಸ್ಥಾನವನ್ನು ತುಂಡು ಮಾಡಿ ಆ ಘಟನೆ ಸಾಧಿಸುವದಿದ್ದರೆ ತ್ರಿಮಂತ್ರಿಗಳು ಹಿಂದುಸ್ಥಾನದ ಯಾತ್ರೆ ಮಾಡುವ ಕಾರಣವಿದ್ದಿಲ್ಲ. ಕಳೆದ ವರುಷ ವೆವೆಲ್ಲ ದೊರೆಗಳು ಸಿಮ್ಲಾದೊಳಗೆ ಸಭೆಗೂಡಿಸಿ ಉಭಯ ಪಕ್ಷಗಳ ಮನವೊಲಿಸಲು ಪ್ರಯತ್ನಿಸಿ ಅನುಭವ ಪಡೆದದ್ದುಂಟು. ಅಂದಬಳಿಕ ಯಾವದೊಂದು ಪಕ್ಷಕ್ಕೆ ಇಲ್ಲವೆ ವ್ಯಕ್ತಿಗೆ ಹಿಂದುಸ್ಥಾನದ ಭವಿತವ್ಯವನ್ನು ನಿರ್ಣಯಿಸುವ ಅಧಿಕಾರ ಕೊಟ್ಟಿದಿದ್ದರೆ ತ್ರಿಮಂತ್ರಿಗಳು ೫-೬ ಸಾವಿರ ಮೈಲು ಪ್ರವಾಸ ಮಾಡುವ ಪರಿಶ್ರಮ ಕೈಕೊಳ್ಳಬೇಕಾಗಿದ್ದಿಲ್ಲ. ಆದರಿಂದಲೇ ತ್ರಿಪಕ್ಷ ಪರಿಷತ್ತು ಅಯಶಸ್ವಿಯಾಯಿತೆಂದು ನಾನು ನಂಬುವದಿಲ್ಲ. ಮಹಾತ್ಮರು ನುಡಿದಂತೆ, ಹಿಂದೀ ಸಮಸ್ಯೆ ಬಗೆಹರಿಸುವ ಮಾರ್ಗದಲ್ಲಿ ಉದ್ಭವಿಸಿದ ಕಾರ್ಮೋಡಗಳೂ ಬಿರುಗಾಳಿಗಳೂ ಈಗ ನಿವಾರಣೆ ಹೊಂದಿವೆಯೆಂದೂ ತ್ರಿಮಂತ್ರಿಗಳಿಗೂ ಬ್ರಿಟಿಶ ಸರಕಾರಕ್ಕೂ ವಸ್ತುಸ್ಥಿತಿಯ ಗ್ರಹಿಕೆಯಾಗಿದೆಯೆಂದೂ ಇನ್ನುಮುಂದೆ ಹಿಂದೀ ರಾಜಕಾರಣದ ಮಟ್ಟು ಸುಧಾರಿಸುವದೆಂದೂ ನಾನೆಣಿಸುತ್ತೇನೆ. ನಿನ್ನೆ ರವಿವಾರ ಸಂಜೆ ೬ ಘಂಟೆಗೆ ತ್ರಿಪಕ್ಷ ಪರಿಷತ್ತು ಪುನಃ ಸೇರುವದಿತ್ತು. ಆ ಸಭೆಯಲ್ಲಿ ಏನಾದರೊಂದು ಕೊನೆಯ ನಿರ್ಣಯವಾಗುವದು. ಬಹುತರವಾಗಿ ಬ್ರಿಟಿಶ ಪ್ರಧಾನ ಮಂಡಳದ ಅನುಜ್ಞೆಯಂತೆ ತ್ರಿಮಂತ್ರಿಗಳು ತಮ್ಮ ನಿರ್ಣಯ ಕೊಟ್ಟು, ಆ ನಿರ್ಣಯವನ್ನು ಮನ್ನಿಸಿ ಸಹಕರಿಸಲೊಪ್ಪುವವರಿಗೆ ಸ್ಥಾನ ಮಾನಗಳನ್ನಿತ್ತು ಹೊಸ ಸರಕಾರವನ್ನು ನಿರ್ಮಿಸುವರೆಂದು ನನಗೆ ತೋರುತ್ತಿದೆ. ನಿನ್ನೆ ಸಂಜೆಗೇ ತ್ರಿಪಕ್ಷ ಪರಿಷತ್ತಿನ ಮಂಗಲವಾಗುವದಿತ್ತು. ಈ ನನ್ನ ಲೇಖ ಓದುಗರ ಕೈಯಲ್ಲಿ ಬೀಳುವ ಮುಂಚೆಯೇ ಆ ವಾರ್ತೆ ಪ್ರಕಟವಾಗುವದು. ಆದರಿಂದ ಆ ಸಂಬಂಧದಲ್ಲಿ ನಾನು ಊಹಾ-ಪೋಹ ಮಾಡುವದು ಸರಿಯಲ್ಲ. ಮಹಾತ್ಮರಂಥ ಸಾಧುಗಳ ನುಡಿ ಸಟೆಯಾಗಲಾರದೆಂದು ನನ್ನ ಭಾವನೆ. ಕೊನೆಯ ವರೆಗೂ ತ್ರಿಮಂತ್ರಿಗಳು ರಾಷ್ಟ್ರಪತಿ ಮೌ|| ಅಝಾದರೊಡನೆ ಪತ್ರವ್ಯವಹಾರ ನಡೆಸುತ್ತಿದ್ದುದರ ಮೇಲಿಂದ ರಾಷ್ಟ್ರೀಯ ಸಭೆಗೆ ಅನುಕೂಲ ನಿರ್ಣಯವಾಗುವದೆಂದು ಅನೇಕರ ಭಾವನೆ. "ಕೇಸರಿ" ಪತ್ರಿಕೆಯ ಪ್ರತಿನಿಧಿಗಳಾದ ಡಾ|| ತಾಮ್ಹಣಕರರೂ ಹಾಗೆಯೇ ಅಭಿಪ್ರಾಯಪಡುತ್ತಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆ ವಾರದಿಂದ ಮುಗಿಲೊಳಗೆ ಮೋಡಗಳೇನೋ ಆಗುತ್ತಿವೆ. ಆದರೆ ಬೇಗನೇ ಮಳೆಯಾಗುವ ಲಕ್ಷಣಗಳಿಲ್ಲ.

ಮುಂಬಯಿಯ ಅಗ್ರಗಣ್ಯ ವಕೀಲರೂ, ೧೯೩೪ರಿಂದ ೧೯೪೫ರ ವರೆಗೆ ಕೇಂದ್ರ ಶಾಸನ ಮಂಡಳದಲ್ಲಿ ಕೊಂಗ್ರೆಸ ಪಕ್ಷದ ಅಧ್ಯಕ್ಷರಾಗಿ ಅನೇಕಾವರ್ತಿ ಸರಕಾರದ ಮುಖಭಂಗ ಮಾಡಿದ ವೀರರೂ, ಲಷ್ಕರ ಕೋರ್ಟಿನೆದುರು ಕಟ್ಟೆಗೆ ಗುರಿಮಾಡಲ್ಪಟ್ಟ ಸುಭಾಷ ಸೈನಿಕರ ಮೊದಲನೇ ಗುಂಪಿನ ಪರವಾಗಿ ವಹಿಸಿ ದಾಸ ರಾಷ್ಟ್ರದವರಿಗೆ ಸ್ವಾತಂತ್ರ್ಯ ಸಂಪಾದನೆಗಾಗಿ ಅರಸರ ವಿರುದ್ಧ ಯುದ್ಧ ಹೂಡುವ ಹಕ್ಕು ಮತ್ತು ಅಧಿಕಾರವುಂಟೆಂದು ತರ್ಕಬದ್ಧವಾಗಿಯೂ ಚಿತ್ತವೇಧಕವಾಗಿಯೂ ವಾದಿಸಿದ ಶ್ರೀ ಭೂಲಾಭಾಯಿಯವರು ಆಚೆಯ ರವಿವಾರ

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. I

The Head Office and Branches of the Bank now accept
Season Deposits from three to six months at the following rates:-
Three Months at 2½% per annum.
Six Months at 2¾% per annum.
No such deposit will be allowed to run beyond 30th September 1946

Coondapoor, K. VAMAN SHENAI,
8-2-1946 CHAIRMAN

ಯಾತ್ರೆ ದಿವಂಗತರಾದರು. ಅವರ ನಿಧನದ ಬಗ್ಗೆ ಶುಕ್ರವಾರ ಇಲ್ಲಿ ಹರತಾಳವಾಯಿತು

ಇದೇ ತಿಂಗಳ ತಾ ೨೩ ೨೪ನೇಗೆ ಇಲ್ಲಿಯ ಕರ್ನಾಟಕ ಸಂಘದವರು ಈ ಊರಲ್ಲಿ ೨ನೆಯ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಳನ ನಡೆಸುವ ಏರ್ಪಾಟು ಮಾಡುತ್ತಿದ್ದಾರೆ 'ದಕ್ಷಿಣ ಕನ್ನಡ ಜಿಲ್ಲೆಯ ಹೆಸರಾಂತ ರಾ|| ಕೋ. ಶಿ. ಕಾರಂತರು ಸಮ್ಮೇಳನದ ಅಧ್ಯಕ್ಷರಾಗಲು ಒಪ್ಪಿಕೊಂಡಿರುವರೆಂದು ತಿಳಿಯುತ್ತದೆ.

ಸೀಧಾ ಅಂಗಡಿಗಳಲ್ಲೀಗ ಹತ್ತಿಕಾಳು ಸಿಗುತ್ತವೆ ಇವು ೧೦ದ ಹಾಲು ಹಿಂಡುವ ದನಗಳಿಗೆ ತಾವು ಆಹಾರವೆಂದು ಹೊತ್ತಿಕೊಂಡಾಯಿತು, ಮತ್ತು ಹಾಲು ಹಿಂಡದ ದನಗಳ ಬಗ್ಗೆಯೂ ಎಂಬ ಪ್ರಶ್ನೆ ಮಾತ್ರವುಳಿಯಿತು ಆ ದನಗಳ ಬಗ್ಗೆ ಕೆಲಸಗಾರರು ಹೊಂದಿಯ ಪ್ರಕಟ ಮಾಡಬೇಕೆಂದು ಸಾಕಿದವರು ಹೇಳುವದುಂಟು ಆದರೆ ಆ ಪ್ರಕಟನೆಯು ಪ್ರಶಸ್ತವಾಗಿಲ್ಲ ಅದನ್ನ ಜಿಲ್ಲಾಧಿಕಾರಿ ಮಾಡುವರೇ? ಕೆನರಾ ಕಾಲೇಜು ಸಮಿತಿಯ ಕಡೆ (ಈ ಬಾರಿ ತಿಳಿಸಿದ ಹಣಗಳ ಹೊರತು) ಇತ್ತೀಚೆಗೆ ಈ ಕೆಳಗಿನಂತೆ ನಾಕ ಹಣ ಹಸೂಲ ಬಂದಿರುತ್ತದೆ —

ಮಿಸ್ ಸರಸ್ವತೀ ತಾಯಿ ಶಾಂತೇರಿ ಹೊನ್ನಾವರ (ವಾಗ್ದತ್ತ ರೂ ೪೦೦೦ ದಲ್ಲಿ) ರೂ ೨೫೦೦ ರಾ|| ರಾ|| ವಿ ಆರ್ ದೇಶಪಾಂಡೆ ಬಂಧುಗಳು ೧೦೦೦ ರಾ|| ಬಸ್ತಿ ಅಣ್ಣ ನಾಯಕ (ಶಿರಸಿ ಹಸ್ತೆ) ೪೦೦ ರಾ|| ಎಚ್ ವಿ ಉಪಾಧ್ಯಾಯ ೪೦೦, ರಾ|| ಬಿ ಎಸ್ ಎಲ್ ಶಾನಭಾಗ ೩ ೦, ರಾ|| ಮಹಮ್ಮದ ಅಬೂಬಕರ ಕೊಂಟ್ರ್ಯಾಕ್ಟರ ೩೦೦, ರಾ|| ಶಂಕರ ಅಂ ಸಜ್ಜನ ೩೦೦, ರಾ|| ಭವಾನೀಶಂಕರ ಎಮ ನಗರಕರ (ವಾಗ್ದತ್ತ ರೂ ೧೦೦೦ದಲ್ಲಿ) ರೂ ೩೦೦, ರಾ|| ಶ್ರೀನಿವಾಸ ವೈಕುಂಠ ಶಾನಭಾಗ (ವಾಗ್ದತ್ತ ರೂ ೫೦೦ರಲ್ಲಿ) ೧೦೫ ರಾ|| ನರಸಿಂಹ ಗೋವಿಂದ ಶಾನಭಾಗ (ವಾಗ್ದತ್ತ ರೂ ೪೦೦ರಲ್ಲಿ) ರೂ ೧೦೧, ರಾ|| ಮಾಧವ ತಿಮ್ಮಪ್ಪ ಶಾನಭಾಗ ರೂ ೧೦೧, ರಾ|| ನಾರಾಯಣ ನೇಕಟ [illegible] (ವಾಗ್ದತ್ತ ರೂ ೩೦೧ರಲ್ಲಿ) ೧೦೦ ಮತ್ತು ಇತರರಿಂದ ರೂ ೮೦ (ಒಟ್ಟು ರೂ ೫೯೪೯)

ಹೊನ್ನಾವರ—

ಕೆಲ ಬಾರಿ, ಆಗಾಗ ಮೋಡಗಳಾಗಿ ಮಳೆ ಬರುವ ಚಿನ್ಹೆಗಳು ತೋರುತ್ತವೆ

ಶರಾವತಿ ತೀರದಲ್ಲಿ ಮೊಳೆಯುವ ಇನಾಮಿನ ಉಪಟಳ ಬಹಳವಾಗಿದೆ ಕೋಣ ಎತ್ತುಗಳನ್ನು ತಾರಿಯಾಚೆ ಒಯ್ಯುವ ಬಡವರಿಗಂತೂ ಇನಾಮಿಗಾಗಿ ಈ ಜನರು ಬಹಳ ಪರದಾಡುತ್ತಾರೆ! ಅಧಿಕಾರಿಗಳು ಇನಾಮಿನ ಈ ಕಾಟವನ್ನು ಬೇಗ ನಿಲ್ಲಿಸಬೇಕಾಗಿ ಅರಿಕೆ

ಬಲವಳ್ಳಿಯ ಯೋಗ್ಯ ದರದ ಅಂಗಡಿ ಸ್ಥಾಪನೆಯಾಗಿ ೨ ವರ್ಷವಾಯಿತು ಜನರಿಂದ ರೂ ೧೫೦೦ರಷ್ಟು ಧನದ ಪಾಲ ಕೂಡಿಸಿ ಈ ಅಂಗಡಿ ತೆರೆದದ್ದು ಆದರೆ ಈ ವರೆಗೆ ಭೂದಾನ ತರಲಿಕ್ಕೆ ಬತ್ತಿ ಸಿಕ್ಕಿದ್ದು ಇಲ್ಲ ಲಾಭ ಸಿಕ್ಕಿದ್ದು ಇಲ್ಲ! ಬತ್ತಿ ಇಲ್ಲದ ಲಾಭ ಕಂತೆಯೆಂದು ಹೇಳಿದರೆ ಅಂಗಡಿ ವ್ಯಾಪಾರದಲ್ಲಿ ರೂ ೧೪೦೦ರಷ್ಟು ನಷ್ಟವಾಗಿದೆಯೆಂದು ಕಾರ್ಯದರ್ಶಿ ಹೇಳುತ್ತಾರಂತೆ! ಬೇರೆ ಎಲ್ಲ ಅಂಗಡಿಗಳಲ್ಲಿ ಲಾಭವಾಗುತ್ತಿರುವಾಗ ಈ ಅಂಗಡಿ ಮಾತ್ರ ಹೀಗೆ ಹಾನಿಯಾಯಿತೆಂಬುದು ಒಂದು 'ಗೂಢ' ಕಾರ್ಯದರ್ಶಿಯೇ ಆ ಗೂಢ ಬಿಡಿಸಬಲ್ಲ!

ಕುಮಟಾ—

(ತಾ ೧೦-೫-೪೬) ಜಿಲ್ಲಾಧಿಕಾರಿ ಜಿಲ್ಲಾ ಕೃಷ್ಯೌದ್ಯೋಗಿಕ ಕಚೇರಿಯವರಾಗಲಿ ಚಿಲ್ಲರೆಯೋಗಿನ ಕೆಳ-ಅಧಿಕಾರಿಗಳು ನಡೆಸಿರುವ ಭ್ರಷ್ಟಾಚಾರಗಳಲ್ಲಿ ಸಂದರ್ಭವೇ ಕೆಲ ಲೋಕಾಭಿಪ್ರಾಯ ಸಾಧ್ಯವಾದಷ್ಟು ಜಿಲ್ಲಾಧಿಕಾರಿ ಕೃಷಿಕ ಕಚೇರಿಯವರು ಸ್ವಾಭಾವಿಕತೆಯಿಂದ ಸರಕಾರಿ ಧೋರಣ ಜಾರಿಯಲ್ಲಿರಲು ಕಾಲಕಾಲಕ್ಕೆ ಆಜ್ಞೆಗಳನ್ನು ಹೊರಡಿಸುತ್ತಾರೆ ಆ ಆಜ್ಞೆಗಳಲ್ಲಿ ಲೋಪದೋಷಗಳಿರಬಹುದು, ತಪ್ಪು ತಿಳುವಳಿಕೆಗಳಿರಬಹುದು, ಪ್ರಮಾದಗಳಾಗಬಹುದು ಆದರೆ ಅವು ಪ್ರಾಮಾಣಿಕತನದಿಂದ ಆಗಿವೆ ಹೊರತು ದುಷ್ಟ ಮನಸ್ಸಿನಿಂದಲ್ಲ ಕೆಳ ಅಧಿಕಾರಿಗಳು ನಡೆಸುವ ಮೋಸಗಾರಿಕೆ ಸಿದ್ಧವಾದಲ್ಲಿ ಅವರನ್ನು ನಿಷ್ಠುರತನದಿಂದ ದಂಡಿಸಲು ಜಿಲ್ಲಾಧಿಕಾರಿ ಕಚೇರಿಯವರು ಬದ್ಧಕಂಕಣರಾಗಿದ್ದಾರೆ ಜನರು ಮಾತ್ರ ನಿರ್ಭೀತಿಯಿಂದ ಕೆಳ ಅಧಿಕಾರಿಗಳು ನಡೆಸುವ ಅನಾಚಾರಗಳನ್ನು ದುರಾಚಾರಗಳನ್ನು ಜಿಲ್ಲಾಧಿಕಾರಿ ಕಚೇರಿಯವರಿಗೆ ತಿಳಿಸಬೇಕು, ಪ್ರಾಂತಿಕ ಸರಕಾರದ ಧೋರಣವಾದರೂ ಈ ಭ್ರಷ್ಟಾಚಾರಗಳನ್ನು ನಿರ್ಮೂಲಿಸಬೇಕೆಂದು ಇರುವದರಿಂದ ಜನರು ತಮ್ಮ ದೂರುಗಳನ್ನು ಜಿಲ್ಲಾಧಿಕಾರಿ ಕಚೇರಿಗೆ ಬರೆದು ಮನಸ್ಸಿನಿಂದ ವರದಿ ಮಾಡಲಡ್ಡಿಯಿಲ್ಲ

ಹಿರಿಯ (ಕೇನಿಯಾರ) ದಿವಾಣಿ ನ್ಯಾಯಾಧೀಶರಾದ ರಾ|| ಸೂರ್ಯನಾರಾಯಣ ಇವರ ವಿರುದ್ಧ ಹಚ್ಚಿಕೊಂಡಿರುವ ಅಸಂತೋಷಕ್ಕೆ ಬೇಸಿಗೆಯ ರಜೆ ಪ್ರಾರಂಭವಾದೊಡನೆ ಬಾಯಿಬಿಡೆಯು ಏಪ್ರಿಲ ತಾ ೧೮ನೇಗೆ ಇಲ್ಲಿಯ ವಕೀಲರು ಸಭೆ ಸೇರಿ ರಾ|| ಸೂರ್ಯನಾರಾಯಣರವರ ನಡಾವಳಿ ಸಹನಾಶಕ್ತಿಯು ಎಲ್ಲೆ ಮೀರಿರುವದರಿಂದ ಬೇಸಿಗೆಯ ರಜೆ ತೀರುವದರೊಳಗಾಗಿ ಅವರಿಗೆ ಬೇರೆ ಕಡೆಗೆ ವರ್ಗಮಾಡಿಕೊಳ್ಳಬೇಕೆಂಬ ಠರಾವನ್ನೊಂದನ್ನು ಮಾಡಿದರು ಜಿಲ್ಲಾ ನ್ಯಾಯಾಧೀಶರು ತಕ್ಕ ಕ್ರಮ ಕೈಕೊಳ್ಳಬೇಕೆಂದು ಈ ಠರಾವಿನಲ್ಲಿ ಒಂದು ವಿನಂತಿಯಿತ್ತು. ಆದರೆ ಠರಾವಿನಲ್ಲಿ ಅಸಂತೋಷದ ಕಾರಣಗಳ ನಿರ್ದೇಶವಿದ್ದಿಲ್ಲ ಜಿಲ್ಲೆಗೆ ಇದ್ದಾಗಿ ಪೂರ್ಣ ಪರಿಸ್ಥಿತಿ ಗೊತ್ತಿರುವದರಿಂದ ಕಾರಣಗಳನ್ನು ವಿವರಿಸುವದು ಅವಶ್ಯಕವೆಂದು ವಕೀಲರು ಎಣಿಸಿದ್ದರು ಆದರೆ ಜಿಲ್ಲಾ ಜಡ್ಜರು ವಿವರ ಅರಿಯುವದರಿಂದ ಅಸಂತೋಷದ ಕಾರಣಗಳನ್ನು ಕೊಡಬೇಕಾಗಿ ಅಪ್ಪಣೆ ಮಾಡಿದರು! ಆಗ ವಕೀಲರು ಸಭೆ ಸೇರಿ (೧) ಪಕ್ಷಕಾರರು ಹಾಗು ಕುಡಿದು ಕೋರ್ಟಿಗೆ ಬರುತ್ತಾರೆ, (೨) ಮುಕದ್ದಮೆಗಳಲ್ಲಿ ಹಿಂದಿನಿಂದ ಹೇಳದೆ ಕೇಳದೆ ವ್ಯತ್ಯಾಸ ಮಾಡುತ್ತಾರೆ, (೩) ಜವಾಬುಗಳನ್ನು ಸರಿಯಾಗಿ ಬರೆಯುವದಿಲ್ಲ ಎಂಬೀ ೩ ಕಾರಣಗಳನ್ನು ಕೊಟ್ಟರು ಆಗ ಈ ಪ್ರಕರಣ ಮುಗಿದ ಮೇಲೆ ರಾ|| ಸೂರ್ಯನಾರಾಯಣರವರಿಗೆ ಏನು ಮಾಡುವದೆಂದು ಜಿಲ್ಲಾ ನ್ಯಾಯಾಧೀಶರು ಎಣಿಸಿ ಅವರಿಗೂ ವಕೀಲರಿಗೂ ರಾಜಿ ಮಾಡಿ ತರಬೇಕೆಂದು ರಾ|| ಸೂರ್ಯನಾರಾಯಣರವರನ್ನೂ ವಕೀಲರನ್ನೂ ಕರೆದರು ಮತ್ತು ರಾ|| ಸೂರ್ಯನಾರಾಯಣರು ಎಂದೂ ಕೂಡ ಯಾವದೇ ಬಗೆಯ ನಿಗ್ರಹವನ್ನು ವಕೀಲರೂ, ಯಾವಾಗಲೂ ಕುಡಿಯುತ್ತ ಬೇಕೆ ಬಗೆಯನ್ನು ರಾ|| ಸೂರ್ಯನಾರಾಯಣರು ತರದ ಹಿಡಿತಕ್ಕೆ ಸ್ವಲ್ಪವಾಗಿ ಉಳಿಯದು ದಕ್ಷಗಳ [illegible] ಕೋರ್ಟಿನ ಸಮಯದಲ್ಲಿ ರಾ|| ಸೂರ್ಯನಾರಾಯಣರು ಕುಡಿಯದಿದ್ದರೆ ಅವರ ವಿರುದ್ಧ ತಪ್ಪು ಆಕ್ಷೇಪಿಸಲಾರೆವೆಂದು ವಕೀಲರು ಒಪ್ಪಿಕೊಂಡರು ಆದರೆ ರಾತ್ರಿಯಲ್ಲಿ ಮಾತ್ರ ಕುಡಿದು ಹಗಲಿಗೆ ಕುಡಿಯದೆ ಇರಲಿಕ್ಕೆ ತನಗೆ ಸಾಧ್ಯವಿಲ್ಲೆಂತಲೂ, ತನ್ನ ಪ್ರಕೃತಿಗೆ ಯಾವಾಗಲೂ ಕುಡಿಯುತ್ತಿರಬೇಕಾಗುತ್ತದೆಂತಲೂ, ಕುಡಿಯದಿದ್ದರೆ ಕುಸಿದು ಬೀಳುವ ಹಾಗೆ ತನಗೆ ಆಗುತ್ತದೆಂತಲೂ ರಾ|| ಸೂರ್ಯನಾರಾಯಣರು ಸ್ಪಷ್ಟ ಹೇಳಿದ್ದರಿಂದ ಜಿಲ್ಲಾ ಜಡ್ಜರ ರಾಜಿಯ ಪ್ರಯತ್ನ ವಿಫಲವಾಯಿತು ರಾ|| ಸೂರ್ಯನಾರಾಯಣರ ಸಂಬಂಧದಲ್ಲಿ ಸರಿ ತಕ್ಕ ವ್ಯವಸ್ಥೆ ಮಾಡದಿದ್ದರೆ ಇಲ್ಲಿಯ ನ್ಯಾಯಸ್ಥಾನದ ಗೌರವಕ್ಕೆ ಕುಂದು ಬರುವದು ಖಂಡಿತ

ಒಂದೆ ನಮ್ಮ ಜಿಲ್ಲೆಯ ಕಲೆಕ್ಟರರಾಗಿದ್ದ ರಾ|| ನಂಜಪ್ಪನವರು ನಾಡದು ರವಿವಾರ ಇಲ್ಲಿಗೆ ಬರುವವರಿದ್ದಾರೆ ರಾ|| ನಂಜಪ್ಪನವರು ಇಲ್ಲಿಂದ ಹೋಗುವಾಗ ತಮ್ಮ ಕುಟುಂಬವನ್ನು ಇಲ್ಲೇ ಬಿಟ್ಟುಹೋಗಿದ್ದರು ಅದರಿಂದ ಅವರು ಇಲ್ಲೇ ಬರುವ ಅಪೇಕ್ಷೆ ಇರಬಹುದೆಂದು ತೋರುತ್ತದೆ ಅದರಂತೆ ಈಗ ಕಲೆಕ್ಟರ ರಾ|| ದಾಮೋದರರಿಗೆ ಬೇರೆ ಕಡೆಗೆ ವರ್ಗವಾಗಿ ನಂಜಪ್ಪನವರ ಪುನಃ ಇಲ್ಲಿಯೇ ನೇಮಣೂಕ ಆಗಬಹುದೆಂಬುದೆಂದು ಗಾಳಿ ಸುದ್ದಿ ಹಬ್ಬಿದೆ ಆದರೆ ಖಾತರಿ ಮಾಡಿದಲ್ಲಿ ಈ ವ್ಯವಸ್ಥೆ ಇನ್ನೂ ಆಗಿಲ್ಲವಾದ ಒಂದೆರಡು ಮಾಸಗಳಲ್ಲಿ ಆಗುವ ಸಂಭವವುಂಟೆಂದೂ ತಿಳಿಯುಬರು

ಭಟಕಳ—

(ತಾ ೯-೫-೪೬) ಇಲ್ಲಿನ ಅಂಗಡಿಗಳಲ್ಲಿ ಧೋತಿ ಬೇಡಿದರೆ ಸ್ವಯಂ ಧೋತಿಯು ಸಿಗಲಾರದು ರೂ ೧೦ ಮಾರ ಕೋಟು ಕೊಂಡುಕೊಳ್ಳಬೇಕೆಂತಲೂ, ಕೋಟು ಕೊಂಡವರಿಗೆ ಮಾತ್ರ ಧೋತಿ ಸಿಗುವದೆಂತಲೂ ಅಂಗಡಿಕಾರರು ಹೇಳುತ್ತಾರೆ! ಮೊನ್ನೆ ಓರ್ವ ಕನ್ನಡ ಶಾಲಾ ಶಿಕ್ಷಕನಿಗೆ ಇದೇ ಉತ್ತರ ಸಿಕ್ಕಿತು ಆಗ ಅವನು ನಿಯಂತ್ರಣಾಧಿಕಾರಿಗಳಾದ ರಾ|| ಹಲದೀಪುರ ಇವರ ಕಡೆ ದೂರುಕೊಂಡನು ಅವರು ಬಂದು ಶಿಕ್ಷಕನಿಗೆ ಬೇಕಾದ ಧೋತಿಯನ್ನು ತೆಗೆಸಿಕೊಟ್ಟರಂತೆ ಹೀಗೆ ಇವರ ದರ್ಶನ ಕಳ್ಳಸಂತೆಯೂ ಕಾಟವೂ ಬಹಳವಾಗಿದೆ ಅವಕ್ಕೆ ತಡೆ ಹಾಕುವ ವ್ಯವಸ್ಥೆಯಾಗಲೀ

ಇಲ್ಲಿಯ ಸೀಧಾ ಕಚೇರಿಯವರ ಅವಳತಿಯ ನಮೂನೆಯೊಂದನ್ನು ಇಲ್ಲಿ ನಮೂದಿಸಬಹುದು ಇಲ್ಲಿಯ ರಾಜಾಂಗಣದಲ್ಲಿದ್ದ ೧ ಚಹಾ ಅಂಗಡಿ ೧|| ತಿಂಗಳ ಹಿಂದೆಯೇ ಮುಚ್ಚಲ್ಪಟ್ಟಿದೆ. ಆದರೂ ಆ ಅಂಗಡಿಗೆ ನೇಮಿಸಿಕೊಟ್ಟ ೨೦ ರತ್ತಲ ಸಕ್ಕರೆ ಇನ್ನೂ ಬಿಡಿಸಲಾಗುತ್ತದಂತೆ! ಬಡ ಜನರ ತೀರ ಅರಕೊರಳ ಪ್ರಮಾಣಗಳನ್ನು ಕಡಿತಗೊಳಿಸಿದರು! ಕುಬ್ಳೆ-ವಾಡಿಕೆಯ ಸೀಧಾ ಅಧಿಕಾರಿಗಳಿಗೆ ಈ ಅಪರಾಧ ಕಾಣುವದಿಲ್ಲವೋ ಏನೋ!

ಮುರುಡೇಶ್ವರ—

(ತಾ ೭ ೫-೪೬) ಇಲ್ಲಿಯ ಜವಳಿ ಅಂಗಡಿ [illegible] ಕಳ್ಳಾಟ [illegible] ನಡೆದದೆ ಜವಳಿಯ ಕೋಟಾ ಸಿಕ್ಕಿ ಗಂಟುಗಳು ಬಂದ ಕೂಡಲೇ ಅದನ್ನು ಒಡೆಯುವದಿಲ್ಲ! ದರದ ಪಟ್ಟಿ ಬಂದಿಲ್ಲ ಎಂದು ನೆವ ಹೇಳುತ್ತಾರೆ! ಮತ್ತು ಯಾರೂ ಇರಲಿಲ್ಲದ ಸಮಯ, ರಾತ್ರೆ ೧೧-೧೨ ಘಂಟೆಗೆ ಜವಳಿ ಗಂಟುಗಳನ್ನು ಒಡೆದು, ಅವುಗಳೊಳಗಿನ ಒಳ್ಳೊಳ್ಳೆ ಜವಳಿಯನ್ನು ಬೇರೆ ತೆಗೆದಿಟ್ಟು ಅಡಗಿಸಿಬಿಡುತ್ತಾರೆ! ಮತ್ತು ಅದನ್ನು ಕಳ್ಳದರ ಕೊಡುವವರಿಗೆ ಮಾತ್ರ ಅಂತರಂಗದಿಂದ ಮಾರುತ್ತಾರೆ! ಬಹಳಷ್ಟು ಜವಳಿಯು ಬೈಂದೂರಕ್ಕೆ ಕಳಿಸಲ್ಪಡುತ್ತದೆಂತಲೂ ವಾರ್ತೆಯುಂಟು!

ಶಿರಸಿ—

(ತಾ. ೧೦—೫—೪೬) ಸೀಧಾ ಅಂಗಡಿಗಳಲ್ಲಿ ಈಗ ಕೊಡುವ ಎಣ್ಣೆ ಕೊಡುವ ವ್ಯವಸ್ಥೆಯಾಗಿದೆ ಒಂದು ಕುಟುಂಬಕ್ಕೆ ೧೫ ದಿನಗಳಿಗೊಮ್ಮೆ ೧೦ ತೊಲೆ ಎಣ್ಣೆ ಕೊಡುತ್ತಾರೆ! ಇಷ್ಟು ಎಣ್ಣೆ ತಕ್ಕೊಂಡು ಏನು ಮಾಡಬೇಕೆಂಬುದೇ ತಿಳಿಯಲೊಲ್ಲದು!

ಹತ್ತಿಕಾಳು ಈಗ ಸಿಗುತ್ತವೆ ಅದು ಹಿಂಡುವ ದನಗಳಿಗೆ ಮಾತ್ರ ಗುಡಿಯ ಇಲ್ಲದ ಬೇಸಾಯದ ದನಗಳಿಗೆ ದನಗಳಲ್ಲಿ ಅವುಗಳ ಬಗ್ಗೆ ಏನು ವ್ಯವಸ್ಥೆಯಾಗಿದೆ ತಿಳಿಯುವದಿಲ್ಲ.

ಅವಲಕ್ಕಿ-ಮಂಡಕ್ಕಿಯವರಿಗೆ ತಿಂಗಳಿಗೆ ೨೦ ಖೋಲ ಭತ್ತ ಕೊಡಲು ಜಿಲ್ಲಾಧಿಕಾರಿ ಅಪ್ಪಣೆಯಾಗಿದೆಯಂತೆ ಅವಲಕ್ಕಿ-ಮಂಡಕ್ಕಿ ಮಾಡಿ ಜೀವಿಸುವ ಕುಟುಂಬಗಳ ಸಂಖ್ಯೆ ಸಮ್ಮಕ್ಕೆ ೮೦ ರಷ್ಟು ಉಂಟು. ೨೦ ಖೋಲ ಭತ್ತದಿಂದ ಅವರಿಗೆ ಎಷ್ಟು ಉದ್ಯೋಗ ಸಿಕ್ಕೀತು ಮತ್ತು ಎಷ್ಟು ದಿನಗಳ ಜೀವನ ಸಾಗೀತು ಎಂಬುದರ ಲೆಕ್ಕ ಓದುಗರೇ ಹಾಕಿ ನೋಡಲಿ

ರಾ|| ಮೋಟಿನಸರ ತಿಮ್ಮಪ್ಪ ಹೆಗಡೆಯವರು ಪ್ರಾಂತಿಕ ಕಾಂಗ್ರೆಸ ಸಮಿತಿಗೆ ಆರಿಸಿಬಂದಿದ್ದರ ಸಂಬಂಧದಲ್ಲಿ ಕಾಂಗ್ರೆಸಿನವರು ಮಾಡಿದ ತಕ್ರಾರ-ಅರ್ಜಿಯ ವಿಚಾರ ತಾ ೧೮ಕ್ಕೆ ಅಂಕೋಲೆಯಲ್ಲಿ ನಡೆಯುವದೆಂದು ಸುದ್ದಿ

ಗಿರಣಿಗಳಲ್ಲಿ ಅಕ್ಕಿಗೆ ವಿಶೇಷ ಪಾಲೀಶ ಕೊಡದಿರುವಂದೂ ಭತ್ತ ಕುಟಿದು ನೋಡಿದರೆ ಸಾಕೆಂದೂ ಪ್ರಾಂತಿಕ ಸರಕಾರದ ಅಪ್ಪಣೆಯಾಗಿದೆಯೆಂದು ಹೇಳುತ್ತಾರೆ ಹೀಗೆ ಮಾಡಿದಲ್ಲಿ ಪ್ರತಿ ೧೦೦ ಖೋಲ ಭತ್ತಕ್ಕೆ ಸಿಗತಕ್ಕ ೮ ಖೋಲ ಅಕ್ಕಿ ಹೆಚ್ಚು ಸಿಗುವದೆಂದೂ ಅಕ್ಕಿಯ ಕೊರತೆಯೂ ಸ್ವಲ್ಪ ಮಟ್ಟಿಗಾದರೂ ನೀಗುವದೆಂದೂ ಸರಕಾರದವರು ಗಣಿತ ಹಾಕಿದ್ದಾರಂತೆ! ಅಕ್ಕಿಯಲ್ಲಿ ಭತ್ತ ಬೆರಸಿ ಕೊಟ್ಟರೆ ಅಕ್ಕಿಯ ಪ್ರಮಾಣ ಇನ್ನೂ ಬೆಳೆಸಲು ಸಾಧ್ಯವುಂಟೆಂಬ ಹೊಳಹನ್ನು ಸರಕಾರಕ್ಕೆ ಯಾರೂ ತಿಳಿಸಲಿಲ್ಲವೇನು?

ಇತ್ತಲಾಗಿ ಈ ತಾಲೂಕಿನಲ್ಲಿ ಜಂಗಲ ಗುನ್ಹೆಗಳು ಹೆಚ್ಚಾಗಿವೆ ಆದರೂ ಆ ಬಗ್ಗೆ ಚೌಕಶಿಯಾಗುವದಿಲ್ಲ! ಆ ಗುನ್ಹೆಗಳನ್ನು ತೋರಿಸಿ ಕೊಟ್ಟರೂ ಜಂಗಲ ಅಧಿಕಾರಿಗಳು ಅತ್ತ ನೋಡುವದಿಲ್ಲ, ಕಿವಿಗೊಟ್ಟು ಕೇಳುವದಿಲ್ಲ! ಯಾಕೆ ಏನೋ!

ಸಿದ್ದಾಪುರ—

(ತಾ. ೮-೫-೪೬) ಅಣಲೆಬೈಲ ಗ್ರಾಮದ ಹೇರೂರ ಮನೆಯಲ್ಲಿ ಕಳೆದ ರವಿವಾರ ಜಾತ್ರೆಯಾಯಿತು ಅಂದ ರಾತ್ರಿ ಜಾತ್ರೆಯಲ್ಲಿ ೫-೬ ಗರಡಿ ಮಂಡಗಳು ಇದ್ದವು ಪಟೇಲರೂ ಬೇರೆ ಕೆಲವರೂ ಈ ಮಂಡಗಳನ್ನು ಮುಚ್ಚಿಸಲಿಕ್ಕೆ ಹೋದಾಗ ತಾವು ಕಾಂಗ್ರೆಸದವರ ಪರವಾನಗಿ ತಕ್ಕೊಂಡು ಮಂಡ ತೆರೆದಿದ್ದೇವೆಂತಲೂ, ಕಾಂಗ್ರೆಸ್ಸಿಗೆ ರೂ ೯೦ ಕಾಣಿಕೆ ಕೊಟ್ಟು ಪರವಾನಗಿ ಪಡೆದಿದ್ದೇವೆಂತಲೂ ಮಂಡದವರು ಹೇಳಿದರು! ಇದನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. ಕಾಣಿಕೆ ಹಸೂಲ ಮಾಡಿ ಪರವಾನಗಿ ಕೊಟ್ಟ ಕಾಂಗ್ರೆಸ ಪ್ರಮುಖರು ಯಾರೆಂದು ಕೇಳಲಾಗಿ ಜಿಲ್ಲಾ ಬೋರ್ಡ ಮೆಂಬರರಾದ ಹೊಸಬಳಿ ಗಣಪ ಭಟರು ಎಂದು ಅವರು ಹೇಳಿದರು ಗಣಪ ಭಟ್ಟರು ಈ ರೀತಿ ಕಾಂಗ್ರೆಸ್ಸಿನ ಹೆಸರು ಕೆಡಿಸಿದ ಬಗ್ಗೆ ಜಿಲ್ಲಾಧ್ಯಕ್ಷರು ತಕ್ಕ ಕ್ರಮ ನಡೆಸಬೇಕಾಗಿ ವಿನಂತಿ

ಜಾಹೀರ ನೋಟೀಸು.

ಪುಟ್ಟಪ್ಪ ಗೌಡಾ ತಂದೆ ಸೋಮಯ್ಯ ಗೌಡಾ ಸಾ|| ಮುತ್ತಳ್ಳಿಕೊಪ್ಪ ತಾ. ಶಿರಸಿ ಎಂಬ ನಾನು ಈ ಮೂಲಕ ತಿಳಿಸುವದೇನಂದರೆ —

ನನ್ನ ತಾಯಿ ಶಿವಮ್ಮ ಕೋಂ ಸೋಮಯ್ಯ ಗೌಡಾ ಸಾ|| ಮುತ್ತಳ್ಳಿಕೊಪ್ಪ ಇವಳು ಅಂದಾಜು ೬೦ ವರ್ಷದವಳಿದ್ದು, ಹಿರಿಕಡೆ ೨ ೩ ತಿಂಗಳಿಂದ ಅವಳಿಗೆ ಬುದ್ಧಿಭ್ರಂಶವಾಗಿ ಅತ್ತಿತ್ತ ಬೇರೆಯವರ ಮನೆಯಲ್ಲಿ ಊಟ ವಗೈರೆ ಮಾಡಿ ತಿರುಗಾಡುತ್ತಿದ್ದಾಳೆ ನಾನು ಸಿಕ್ಕಿದಾಗ ಅನೇಕ ಸಮಯ ಹೇಳಿ ಮನೆಯಲ್ಲಿ ತಂದು ಇಟ್ಟುಕೊಂಡಾಗ್ಯೂ, ನನಗೆ ಸಹ ತಿಳಿಯದ ಮನೆಯಿಂದ ಹೊರಟು ಹೋಗುತ್ತಾಳೆ ನಮ್ಮ ಮನೆತನಕ್ಕೆ ಯಾವದೇ ತರದ ಸಾಲ ವಗೈರೆ ಕೇಳುವಲ್ಲಿ ಅಥವಾ ಮುಂದೆ ಯಾರಾದರೂ ಅವಳಿಗೆ ಸಾಲ ಕೊಟ್ಟಲ್ಲಿ ಅಥವಾ ಅವಳಿಂದ ನಮ್ಮ ಮನೆತನದ ಆಸ್ತಿ ಖರೀದಿ ವಗೈರೆ ಮಾಡಿಸಿಕೊಂಡಲ್ಲಿ ಸದರ ವ್ಯವಹಾರ ಸದರ ಆಸ್ತಿಗಳ ಮೇಲೆ ಯಾವದೇ ರೀತಿಯಿಂದ ಸಲ್ಲತಕ್ಕದ್ದಲ್ಲ ಕಾರಣ ಯಾರೂ ಅವಳಿಗೆ ಸಾಲ ವಗೈರೆ ಕೊಡಕೂಡದಾಗಿ ಬೇಡಿಕೊಂಡು ಈ ನೋಟೀಸಿನ ಮೂಲಕ ಜಾಹೀರಪಡಿಸುತ್ತೇನೆ

ಮುತ್ತಳ್ಳಿಕೊಪ್ಪ, ತಾ. ೬—೫—೪೬

ಪುಟ್ಟಪ್ಪಗೌಡಾ ಸೋಮಯ್ಯಗೌಡಾ

ಕೇಳಿದ್ದು, ಕಂಡದ್ದು.

(ಜಿಲ್ಲಾ ಸಂಚಾರಿಯು ಬರೆದುದು)

ಕೈಯ್ಯಿಂದ ಭತ್ತ ಮರೆದು ಜೀವನ ಸಾಗಿಸುತ್ತಿದ್ದ ಖಾರವಗಪ್ಪಿನ ಜನರು ಈಗ ಉದ್ಯೋಗ-ಉದ್ಧಿಮೆಯಿಲ್ಲದೆ ನಿರ್ಗತಿಕರಾದದ್ದು ಎಲ್ಲರೂ ಬಲ್ಲದ ಸಂಗತಿ. ಪಡಿತರದಲ್ಲಿ ಅಕ್ಕಿಯ ಬದಲು ಸರಕಾರದವರು ಭತ್ತವನ್ನೇ ಪೂರೈಸುವ ಬಲಾತ್ಕಾರದ ಕ್ರಮವಿಟ್ಟಿರುವದರಿಂದಲೂ, ಆ ಭತ್ತವನ್ನೆಲ್ಲ ಗಿರಣಿಯವರಿಗೇ ಕೊಟ್ಟು ಅಕ್ಕಿ ಮಾಡಿಸುವ ಪರಿಪಾಠವನ್ನಿಟ್ಟುಕೊಂಡಿರುವದರಿಂದಲೂ ಬೇಸಿಗೆಯಲ್ಲಿ ಭತ್ತ ಮರೆದು ವರ್ಷದಲ್ಲಿ ೬-೮ ತಿಂಗಳ ಜೀವನದ ವೆಚ್ಚಕ್ಕೆ ಸಾಲುವಷ್ಟು ಅಕ್ಕಿ, ಕುಚ್ಚು ಮುಂತಾದ್ದು ಸಂಪಾದಿಸುತ್ತಿದ್ದ ಹೆಂಗಸರೂ ಒಕ್ಕಲಿಗರೂ ಈಗ ಅನಾಥರಾಗಿದ್ದಾರೆ. ಹಾಗೆ ಅವರಿಗೆ ಅನಾಥರನ್ನಾಗಿ ಮಾಡುವದು ಉಚಿತವಲ್ಲೆಂದು ವಿಚಾರವಂತರು ಜೋರಾಗಿ ಹೇಳಿದ ಮೇಲೆ ಕುಸು ತಿವಿಗೊಟ್ಟು ಅಂಕೋಲೆಯಲ್ಲಿ ಕೆಲವೊಂದು ಸರಕಾರಿ ಭತ್ತವನ್ನು ಅಧಿಕಾರಿಗಳು ಮೆರಗೂಲಿಗೆ ಕೊಡಲಿಕ್ಕೆ ಒಪ್ಪಿಕೊಂಡರು. ಅದರಂತೆ ಮಾರ್ಚ ತಿಂಗಳ ಕೊನೆಗೆ ಒಟ್ಟೂ ತಾಲೂಕ ಮಾಮಲೇದಾರರ ಕಡೆ ರೂ ೭೦೦೦ಗಳ ಜಾಮೀನು ಕೊಟ್ಟು ಅವರಿಂದ ಅನ್ನ ಅಂಕೆಯೊಳಗಿನ ಒಕ್ಕಲಿಗರಿಗಾಗಿ ಒಮ್ಮೆ ೩೦೦ ಚೀಲ ಮತ್ತು ಇನ್ನೊಮ್ಮೆ ೧೦೦೦ ಚೀಲ ಭತ್ತ ಪಡೆಕೊಂಡರು. ಸರಕಾರಕ್ಕೆ ಅಕ್ಕಿ ಮಾಡಿಸಿಕೊಟ್ಟರು. ಅಕ್ಕಿ ಕೊಡಲು ಅವರು ವಿಳಂಬ ಸಹ ಮಾಡಲಿಲ್ಲ. ೩೦೦ ಚೀಲ ಭತ್ತದ ಅಕ್ಕಿಯನ್ನು ಹತ್ತೇ ದಿನಗಳಲ್ಲಿ ಮತ್ತು ೧೦೦೦ ಚೀಲ ಭತ್ತದ ಅಕ್ಕಿಯನ್ನು ಇಪ್ಪತ್ತೇ ದಿನಗಳಲ್ಲಿ ಒಪ್ಪಿಸಿದ್ದರು. ಈ ಅಕ್ಕಿ ಗಿರಣಿಯವರು ಕೊಡುತ್ತಿರುವ ಅಕ್ಕಿಗಿಂತ ಹಸನ ಮತ್ತು ಒಳ್ಳೆಯ ಇತ್ತೆಂದು ಆ ಅಕ್ಕಿ ಕೊಂಡ ಜನರು ಹೇಳುತ್ತಾರೆ. ಅದರಿಂದ ಹೆಚ್ಚೆಚ್ಚು ಭತ್ತ ಮೆರಗೂಲಿಗೆ ಕೊಡುವ ವಿಚಾರದಲ್ಲಿ ಅಂಕೋಲೆಯ ಮಾಮಲೇದಾರರು ಇದ್ದರಂತೆ. ಅದರಂತೆ ಅವರು ಮೆರಗೂಲಿಯವರಿಗೆ ಭತ್ತ ಬೇಯಿಸಿ ಕೊಡಲು ದೊಡ್ಡದೊಂದು ಟಾಕಿಯನ್ನು ತಯಾರಿಸಲು ಅಂಕೋಲೆಯ ರಾ॥ ಶ್ರೀಧರ ನಾಯಕರಿಗೆ ಉತ್ತೇಜನ ಕೊಟ್ಟಿದ್ದರು. ರಾ॥ ನಾಯಕರವರೂ ರೂ ೮೦೦ರಷ್ಟು ಖರ್ಚು ಮಾಡಿ ಒಂದು ಟಾಕಿಯನ್ನು ತಯಾರಿಸಿದ್ದುಂಟು. ಆದರೆ ಈ ಟಾಕಿ ತಯಾರಾಗುವಷ್ಟರಲ್ಲಿ ಮೆರಗೂಲಿಗೆ ಸರಕಾರಿ ಭತ್ತ ಕೊಡುವ ಕ್ರಮದಲ್ಲಿ ಪ್ರಾಂತಿಕ ಸರಕಾರವು ಇಲ್ಲ-ಸಲ್ಲದ ತೊಂದರೆಗಳನ್ನುಂಟು ಮಾಡಿ, ಆ ಕ್ರಮವನ್ನೇ ಅರೆ-ಕರೆ ಹಾಕಿಬಿಟ್ಟಿದೆ! (೧) ಸರಕಾರ ಮತ್ತು ಪ್ರತ್ಯಕ್ಷ ಮೆರಗೂಲಿಯವರು ಇವರ ನಡುವೆ ಮಧ್ಯಸ್ಥರು ಯಾರೆ ಇರಲಾರದು ಬೇಡೆಂತಲೂ, (೨) ಮೆರಗೂಲಿಯವರ ಸಂಘ ಇಲ್ಲದ ಕಡೆಗಳಿಗೆ ಭತ್ತ ಕೊಡುವದು ಶ್ರೇಯಸ್ಕರ ತೋರುತ್ತದೆಂತಲೂ (೩) ಕೈಕುಟ್ಟಿದ ಅಕ್ಕಿಯ ಪರಿಮಾಣ ಕಡಿಮೆಯಿರುತ್ತದೆಂತಲೂ ಸರಕಾರದ ಅಂಬೋಣವಂತೆ! ಸದ್ಯಕ್ಕೆ ಮೆರಗೂಲಿಯವರ ಸಂಘಗಳಿಲ್ಲವೆಂಬುದನ್ನು ಅಧಿಕಾರಿಗಳು ಬಲ್ಲರು. ಆ ಸಂಘಗಳು ದಿನ-ಒಪ್ಪತ್ತಿನಲ್ಲಿ ಅಸ್ತಿತ್ವದಲ್ಲಿ ಬರಲಾರವೆಂಬುದನ್ನೂ ಅವರು ಬಲ್ಲರು. ಅದರಿಂದ ಮೆರಗೂಲಿಗೆ ಭತ್ತ ಅವರು ಕೊಡಲೊಲ್ಲದಿಲ್ಲೆಂಬ ಸರಳ ಅರ್ಥ ತೋರುತ್ತದೆ. ಮಧ್ಯಸ್ಥರ ಮುಖಾಂತರ ಬರದೆ ಮೆರಗೂಲಿಯವರೇ ಸ್ವತಃ ಬಂದು ಭತ್ತ ಒಯ್ಯಬೇಕಿದ್ದಲ್ಲಿಂದೂ ಆ ರೀತಿ ತಾವು ಸವಲತ್ತು ಇಟ್ಟಿರುವೆವೆಂದೂ ಅಧಿಕಾರಿಗಳು ಹೇಳಬಹುದು. ಭತ್ತ ಒಯ್ಯಬೇಕಾದರೆ ರೂ ೧೦೦೦ ಇಲ್ಲವೆ ರೂ ೫೦೦ ಗಳ ಜಾಮೀನು ಕೊಡಬೇಕಾಗುತ್ತದೆ. ಮೆರಗೂಲಿ ಮಾಡುವ ಬಡ ಹೆಂಗಸರೂ ಒಕ್ಕಲಿಗರೂ ಈ ಜಾಮೀನು ಕೊಡಲಾರರು. ಇನ್ನೂ ಒಂದು ಬಾಕುಂಟು: ೧೦ ೨೦ ಇಲ್ಲವೆ ೪೦-೫೦ ಮೆರಗೂಲಿಯವರ ತರ್ಫೆನಿಂದ ಯಾವನೊಬ್ಬ ಸಾಹುಕಾರನು ಮುಂದಾಗಿ ತೋಕ ಪ್ರಮಾಣದಿಂದ ಭತ್ತ ಮೆರಗೂಲಿಗೆ ಪಡೆಕೊಂಡಲ್ಲಿ ಸರಕಾರಕ್ಕೆ ಲೆಕ್ಕ ಇಡಲು ಎಷ್ಟೋ ಅನುಕೂಲವಾಗುತ್ತಿದೆ. ಅದೇ ವೈಯಕ್ತಿಕವಾಗಿ ಮೆರಗೂಲಿಯವರಿಗೆ ಚಿಲ್ಲರೆ ಭತ್ತ ಕೊಟ್ಟರೆ ಆ ಲೆಕ್ಕವನ್ನಿಡಲಿಕ್ಕೆ ಎರಡೆರಡು ಕಡೆ ಇಡಬೇಕಾಗುತ್ತದೆ. ಅಂತು ಇಂತು ಬಡ ಮೆರಗೂಲಿಯವರಿಗೆ ಭತ್ತ ಕೊಡದೆ ಗಿರಣಿ-ಸಾಹುಕಾರರಿಗೇ ಎಲ್ಲ ಭತ್ತ ಕೊಡಬೇಕಾದ್ದೆಂದು ಸರಕಾರವೇ ಆಗ್ರಹವಿಟ್ಟಂತೆ ತೋರುತ್ತದೆ. ಮುಂಬಯಿ ಸರಕಾರದ ಅರ್ಥ ಮಂತ್ರಿಗಳಾದ ಶ್ರೀ ವೈಕುಂಠಲಾಲ ಮೆಹತಾರವರು ನಾಗರಿಕ ಪೂರೈಕೆ ಮಂತ್ರಿಗಳಾದ ಶ್ರೀ ಪಾಟೀಲ ದೇಸಾಯಿಯವರೂ ಈ ವಿಷಯದಲ್ಲಿ ಸ್ವತಃ ಲಕ್ಷ ಹಾಕಿ ಬಡ ಮೆರಗೂಲಿಯವರನ್ನು ಕಾಯಬೇಕಾಗಿ ಅರಿಕೆಯುಂಟು. ಕೈಕುಟ್ಟಿದ ಅಕ್ಕಿ ಗಿರಣಿ ಅಕ್ಕಿಗಿಂತ ಆರೋಗ್ಯಕರವಿದ್ದುದರಿಂದ ಅದರ ಪರಿಮಾಣದಲ್ಲಿ ವ್ಯತ್ಯಾಸವಾದರೂ ಅದಕ್ಕೆ ಆಶ್ರಯ ಕೊಡುವದು ಯಾವಾಗಲೂ ಶ್ರೇಯಸ್ಕರವಾದದ್ದು. ಕೈಕುಟ್ಟಿದ ಅಕ್ಕಿಗೆ ಆಶ್ರಯ ಕೊಡಲು ಪಣತೊಟ್ಟಿದ್ದ ಕೊಂಗ್ರೆಸ ಸರಕಾರದ ಆಡಳಿತದಲ್ಲಿ ಈ ಮೆರಗೂಲಿಗರಿಗೆ ಪ್ರೋತ್ಸಾಹ ಸಿಗುವದು ಹೇಗೆಂದೇ ತಿಳಿಯದು!

⁂

"ಒಳ್ಳೊಳ್ಳೇ ಜವಳಿಯ ಟಾಕಗಳನ್ನು ನಾವು ಅಡಗಿಸುತ್ತೇವೆ ಮತ್ತು ಕಳ್ಳ ಪೇಟೆಗೆ ಕಳಿಸುತ್ತೇವೆಂದು ನೀವು ದೂರುವದು ವ್ಯರ್ಥ. ಜವಳಿಯು ನಮ್ಮ ಕೈಗೆ ಬರುತ್ತಲೇ ದೊಡ್ಡ ದೊಡ್ಡ ಅಧಿಕಾರಿಗಳು — ಜಿಲ್ಲಾಧಿಕಾರಿಗಳೂ ಅವರು ತಾಲೂಕಾಧಿಕಾರಿಗಳೂ ಇವರು — ಬರುತ್ತಾರೆ ಮತ್ತು ತಮಗೆ ಬೇಕಾದ ಒಳ್ಳೊಳ್ಳೇ ಕೋಟಿಂಗ, ಶರ್ಟಿಂಗ, ಧೋತ್ರ ಮುಂತಾದವರ ಟಾಕ-ಟಾಕಗಳನ್ನೇ ಎತ್ತಿಕೊಂಡು ಹೋಗುತ್ತಾರೆ! ನಾವೇನು ಮಾಡಬೇಕು? ಅಷ್ಟು ಅರಿವೆಯನ್ನು ಅವರು ತಮ್ಮ ಸ್ವಂತದ ಬಗ್ಗೆ ಒಯ್ಯುತ್ತಾರೋ ಅಥವಾ ಬೇರೆ ಯಾರದ ಬಗ್ಗೆ ಒಯ್ಯುತ್ತಾರೆ ಎಂಬುದನ್ನು ಪರಮಾತ್ಮನೇ ಬಲ್ಲ! ಈ ಅಧಿಕಾರಿಗಳ ಹೆಸರುಗಳನ್ನು ಹೊರಗೆಡಹಲು ನಮಗೆ ಧೈರ್ಯವಾಗುವದಿಲ್ಲ! ಅದರಿಂದ ನೀವು ಹೊರಿಸುವ ಕಳ್ಳಾಟಿಕೆಯ ಎಲ್ಲ ದೋಷವನ್ನೂ ನಾವೇ ನಮ್ಮ ತಲೆಯ ಮೇಲೆ ಹೊರಬೇಕಾಗಿದೆ! ಮಾಡುವದೇನು? ನಮ್ಮ ದುರ್ದೈವ!" ಹೀಗೆ ಹಿರ್ಯ ಜವಳಿ ಅಂಗಡಿಯವರು ನನ್ನ ಮುಂದೆ ಉದರಿಸಿದರು. ಬೇರೆ ಕೆಲವು ಜವಳಿ ಅಂಗಡಿಗಳಲ್ಲೂ ಇದೇ ಅರ್ಥದ ಉದ್ಗಾರಗಳು ಕೇಳಬಂದವು. ಈ ಕುರಿತು ಪೂರ್ಣ ಚೌಕಶಿಯಾಗುವದು ಅತಿ ಅಗತ್ಯ.

⁂

ಗೋವಾ ಗಡಿಯ ಮೇಲೆ ಕಳೆದ ತಿಂಗಳಲ್ಲಿ ಜವಳಿ ಹಿಡಿದ ಅಧಿಕಾರಿಗಳು ಕೂಡ ಹೊಸ ಕ್ರಮವನ್ನನುಸರಿಸಿದ್ದಾರಂತೆ. ಕಳ್ಳ ಜವಳಿಯು ದೋಣಿಯಲ್ಲಿ ಸಾಗುತ್ತಿದ್ದಾಗ ಅಧಿಕಾರಿಗಳ ಕೈಗೆ ಅಂತು ೬ ಜವಳಿ ಗಂಟುಗಳು ಸಿಕ್ಕಿದ್ದವಂತೆ. ಹಿಂದಿನಿಂದ ಆ ಅಧಿಕಾರಿಗಳಿಗೆ ಅರಿಯಾಯಿತಂತಲೂ, ಜವಳಿ ಸಿಗುವದು ಕಷ್ಟವಾದ ಈ ಕಾಲದಲ್ಲಿ ಕೈಯಲ್ಲಿ ಸಿಕ್ಕ ಕೆಲವು ಜವಳಿಯನ್ನು ತಾವೇಕೆ ಬಳಸಿಕೊಳ್ಳಬಾರದು ಎಂಬ ವಿಚಾರ ಅವರ ತಲೆಯಲ್ಲಿ ಬಂತೆಂತಲೂ, ಅದಾಗಿಲ ಪಂಚನಾಮೆಯನ್ನು ಹಾಕು ದೋಣಿಯಲ್ಲಿ ನಾಲ್ಕೇ ಗಂಟುಗಳು ಸಿಕ್ಕ ಬಗ್ಗೆ ಹೊಸ ಪಂಚನಾಮೆ ಮಾಡಿಸಿ ಮೇಲಧಿಕಾರಿಗಳಿಗೆ ಕಳಿಸಿಕೊಟ್ಟಿರುತ್ತಾರೆಂತಲೂ, ಉಳಿದ ೨ ಗಂಟುಗಳೊಳಗಿನ ಜವಳಿಯನ್ನು ತಮ್ಮೊಳಗೆ ಹಂಚಿಕೊಂಡು ತಮ್ಮ ಅವಶ್ಯ ಪೂರೈಸಿಕೊಂಡಿರುತ್ತಾರೆಂತಲೂ ಒಂದು ವಿಶ್ವಸನೀಯ ವಾರ್ತೆಯಿದೆ

⁂

"ನಮ್ಮ ಕಡೆಯಿಂದ ಭತ್ತ ಖರೀದಿಸುವಾಗ ಮಾತ್ರ ಸರಕಾರದವರು ಕಗ್ಗನ ಭತ್ತಕ್ಕೊಂದು ದರ ಮತ್ತು ಹಳಗನ ಭತ್ತಕ್ಕೊಂದು ದರ ಹೀಗೆ ತಾರತಮ್ಯ ಮಾಡುತ್ತಾರೆ. ಅದೇ ನಮಗೆ ಅಕ್ಕಿ ಮರಳಿ ಕೊಡುವಾಗ (ಸೀಧಾ ಅಂಗಡಿಗಳಲ್ಲಿ) ಎರಡೂ ತರದ ಅಕ್ಕಿಗೆ ಒಂದೇ ಧಾರಣೆಯಂತೆ! ಹಳಗನ ಅಕ್ಕಿ ಸೇರಿಗೂ ಒಂದು ರೂಪಾಯಿ! ಕಗ್ಗನ ಅಕ್ಕಿ ಪಾಯಲಿಗೂ ಒಂದು ರೂಪಾಯಿ!! ಇದೆಂಥ ನ್ಯಾಯ?" ಹೀಗೆ ಒಕ್ಕಲಿಗರನೇಕರು ಅಲ್ಲಲ್ಲಿ ಹೇಳುತ್ತಾರೆ. ಸ್ವತಂತ್ರ ಈ ರಾಜ್ಯದಲ್ಲಿ ಹಾಗಲವಾಡಿ ಸಂಸ್ಥಾನದ ಕೆಲವೊಂದು ಕಟ್ಟಳೆಗಳನ್ನು ಎತ್ತಿಕೊಂಡಿದ್ದಾರೆಂದು ಈ ಒಕ್ಕಲಿಗರಿಗೇನು ಗೊತ್ತು!

⁂

ಬಾಂಬೆ ಮೋಟಾರ-ಸಿಪಾಯಿಗಳು ಬಿಟ್ಟು ಮತ್ತು ಯುದ್ಧ ಮುಗಿದಾಗ ಅಧಿಕಾರಿಗಳು ಮೋಟಾರ ಬಂಡಿಯವರಿಗೆ ಒಂದು ಸವಲತ್ತು ಕೊಟ್ಟು, ಪರವಾನಿಗಳಲ್ಲಿ ಕಾಣಿಸಿದ ಪ್ರಯಾಣಿಕರ ಸಂಖ್ಯೆಯ ೧। ಪಟ್ಟು ಪ್ರಯಾಣಿಕರನ್ನು ಮೋಟಾರದವರು ಒಯ್ಯಬಹುದಾಗಿ ಅಪ್ಪಣೆ ಕೊಟ್ಟಿದ್ದರು. ಹೀಗೆ ೧। ಪಟ್ಟು ಪ್ರಯಾಣಿಕರನ್ನು ಒಯ್ಯಲು ಅಪ್ಪಣೆ ಕೊಟ್ಟರೂ ಬಂಡಿಗಳ ಸಂಖ್ಯೆ ಬಹಳ ಕಡಿಮೆ ಇದ್ದುದರಿಂದ ಪ್ರಯಾಣಿಕರ ಒಟ್ಟುವಾಗುತ್ತಿತ್ತು. ಅದರಿಂದ ಮೋಟಾರದವರು ತಮ್ಮ ಬಂಡಿಗಳಲ್ಲಿ ಮೂಲ ಸಂಖ್ಯೆಯ ೧½—೨॥ ಪಟ್ಟು ಪ್ರಯಾಣಿಕರನ್ನು ಸಹ ತುಂಬಿಕೊಂಡು ಹೋಗುತ್ತಿದ್ದರು. ಅದಕ್ಕೀಗ ಕೊಂಗ್ರೆಸ ಸರಕಾರವು ಪ್ರತಿಬಂಧ ಹಾಕಿದೆ. ೧। ಪಟ್ಟು ಪ್ರಯಾಣಿಕರನ್ನು ಒಯ್ಯಬಹುದೆಂಬ ಸವಲತ್ತನ್ನು ಅದು ರದ್ದುಗೊಳಿಸಿದೆಯಲ್ಲದೆ, ಪರವಾನಿಗಳಲ್ಲಿ ಕಾಣಿಸಿದ್ದಕ್ಕಿಂತ ಹೆಚ್ಚಿಗೆ ಪ್ರಯಾಣಿಕರನ್ನು ಮೋಟಾರದವರು ಒಯ್ಯದಂತೆ ಜಾಗ್ರತೆ ಕೊಳ್ಳಲು ಮೋಟಾರ ನಿಯಂತ್ರಣ ಇಲಾಖೆಯವರಿಗೂ ಪೋಲೀಸ ಇಲಾಖೆಯವರಿಗೂ ವಿಧಿಸಿದೆ. ಅದರಿಂದ ಈಗ ಮೋಟಾರ ಬಂಡಿಗಳಲ್ಲಿ ಸ್ಥಳ ಸಿಗುವದು ಕಠಿಣವಾಗಿದೆ. ಸ್ಥಳ ಸಿಗಬೇಕಾದರೆ ಮೋಟಾರ ಏಜಂಟರ ಕಾಲು ಹಿಡಿಯುವ ಪ್ರಸಂಗ ಬಂದಿದೆ! ಕೆಲವೊಂದು ಮೋಟಾರ ನಿಲ್ದಾಣಗಳಲ್ಲಿ ಹಿಂದೆ ಮೋಟಾರ ತಿಕೀಟು ಸಿಗಬೇಕಾದರೆ ಏಜಂಟರಿಗೆ ಕೈ ಬಿಸಿ ಮಾಡಬೇಕಾಗುತ್ತಿತ್ತು! ಈ ರೋಗ ಈಗ ಎಲ್ಲೆಲ್ಲೂ ಹಬ್ಬುವಂತೆ ತೋರುತ್ತದೆ. ಕೊಂಗ್ರೆಸ ಸರಕಾರದ ಹೊಸ ಹುಕೂಮಿನಿಂದ ಆ ರೋಗ ಹಬ್ಬಿ ಬೆಳೆಯಲು ಅನುಕೂಲ ವಾತಾವರಣವುಂಟಾಗಿದೆ. ೧। ಪಟ್ಟಿನ ಸವಲತ್ತು ರದ್ದಾದ್ದರಿಂದ ಮೋಟಾರ ಕಂಪನಿಯವರಿಗೂ ಮೋಟಾರ ಒಡೆಯರಿಗೂ ಆದ ನಷ್ಟವನ್ನು ತುಂಬಿಕೊಳ್ಳುವದಕ್ಕಾಗಿ ಅವರು ತಿಕೀಟಿನ ಹಾಸಲು ಏರಿಸುವ ಮಾತು ಆಡುತ್ತಿದ್ದಾರೆ! ಈ ಸಂಕಟಗಳೊಳಗಿಂದ ಜನರನ್ನು ಕಾಪಾಡುವ ಭಾರ ಕೊಂಗ್ರೆಸ ಸರಕಾರದ ಮೇಲಿದೆ. ಹೆಚ್ಚೆಚ್ಚು ಮೋಟಾರ ಬಂಡಿಗಳನ್ನು ಬೆಳಸುವದಕ್ಕಾಗಿ ಒದಗಿಸಿಕೊಟ್ಟು, ಬಂಡಿಗಳ ಟಾಂಗೆಗಳನ್ನು ಕೂಡ ಕಟ್ಟಿಸಲು ಸರಕಾರದವರು ಅನುಕೂಲತೆ ಮಾಡಿಕೊಟ್ಟರೆ ಮಾತ್ರ ಈ ಸಂಕಟಗಳು ಪರಿಹಾರವಾದೀತು.

⁂

ಅಧಿಕಾರಿಗಳ ಲಂಚಗುಳಿತನ ಮತ್ತು ಕಳ್ಳ ವಕಾಲತರ ಕಳ್ಳ ಪೇಟೆಯ ಪತ್ತೆ ಹಚ್ಚಿ ಯೋಗ್ಯ ಕಂಡ ಕ್ರಮ ನಡಿಸುವದಕ್ಕಾಗಿ ತಾವು ಸ್ವತಂತ್ರ ಜನರ ಸ್ವತಂತ್ರ ಮತ್ತು ಗುಪ್ತ ಸಂಸ್ಥೆಯೊಂದನ್ನು ನಿರ್ಮಿಸಿದ್ದೇವೆಂದು ಮುಂಬಯಿ ಸರಕಾರದ ಗೃಹ ಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯಿಯವರು ಕಳೆದ ಗುರುವಾರದ ಪತ್ರಿಕಾ-ಪ್ರತಿನಿಧಿಗಳ ಸಭೆಯಲ್ಲಿ ಹೇಳಿದ ಮಾತು ಪತ್ರಿಕೆಗಳಲ್ಲಿ ಪ್ರಕಟವಾದಂದಿನಿಂದ ಅನೇಕಾನೇಕ ಅಧಿಕಾರಿಗಳು ದಿಗಿಲ್ಗ್ರಸ್ತರಾಗಿದ್ದಾರೆ. ಬಿಳೇ ಟೊಪ್ಪಿಗೆಯವರನ್ನು ಕಂಡಕೂಡಲೆ ಅವರಿಗೆ ಬೆವರು ಬರುತ್ತಿದೆ

೧೯೪೬—೪೭ನೇ ಸಾಲಿನ ಹಾಯಸ್ಕೂಲ ಹಾಗೂ ಮಾಧ್ಯಮಿಕ ಶಾಲೆ ಶಿಷ್ಯವೃತ್ತಿಗಳನ್ನು ಪಡೆದವರು.

ಹಾಯಸ್ಕೂಲ ಶಿಷ್ಯವೃತ್ತಿಗಳು.

೧ ಶೇಣಗಿ ವಾಮನ ಕಾಮತ (ಹಿಂದು ಹಾಯಸ್ಕೂಲ)
೨ ಆರ್ಥರ ಫ್ಲೋರಿಯನ ಡಿಕೋಸ್ತಾ (ಸರಕಾರಿ ಹ್ಯಾಸ್ಕೂಲ)
೩ ರಾಮಚಂದ್ರ ದತ್ತಾ ನಾಯ್ಕ (,,)
೪ ವಾಸುದೇವ ಜಾನು ನಾಯ್ಕ (,,)
೫ ಗಣಪತಿ ಮಹಾದೇವ ಕದಂ (,,)
೬ ವಿಠೋಬಾ ಜೋಗಿ ನಾಯ್ಕ (ಎಜ್ಯುಕೇಶನ ಹ್ಯಾಸ್ಕೂಲ)
೭ ರಾಮಚಂದ್ರ ಕೊಶಲಪ್ಪನಾಯ್ಕ (ಪೀಪಲ್ಸ ಇಂ. ಸ್ಕೂಲ)
೮ ಲತಿಫುದ್ದೀನ ಯುಸುಫ ಶೇಕ (ಎಜ್ಯುಕೇಶನ ಹಾಯಸ್ಕೂಲ)
೯ ಮುಲ್ಲಾ ಹುಸೇನ ಮುಲ್ಲಾ ಜೈನುದ್ದಿನ (ಪ್ರೈವ್ಹೇಟ ಹಾಯಸ್ಕೂಲ)

ಮಾಧ್ಯಮಿಕ ಶಾಲಾ ಶಿಷ್ಯವೃತ್ತಿಗಳು.

೧ ರಮಾಕಾಂತ ಶ್ರೀನಿವಾಸ ವೆಂಕೋಲಕರ (ಹೆಗಡೆ ಕನ್ನಡ ಶಾಲೆ)
೨ ಕೃಷ್ಣಾ ಶಿ ಭಟ್ಟ (ಗೋಕರ್ಣ ಕನ್ನಡ ಶಾಲೆ ನಂ ೧)
೩ ಸದಾನಂದ ಯಾದವ ಮಾರುತಿ ರಾ. ಶೆಟ್ಟಿ (ಅಂಕೋಲಾ ಕನ್ನಡ ಶಾಲೆ ನಂ ೧)
೪ ಮೋಹನ ಅಚ್ಯುತ ಬಾಡಕರ (ಕಾರವಾರ ಬಡ್ಡಾರ ಶಾಲೆ)
೫ ಮಾರ್ಸೆಲಿನ ಥೋಮಸ (ಅಂಕೋಲಾ ಕ ಶಾಲೆ ನಂ ೧)
೬ ರಾಮಚಂದ್ರ ಮಾ ನಾಯ್ಕ (ಹಾಸಗೋಡ ಕನ್ನಡ ಶಾಲೆ)
೭ ಅನಂತರಾ ನಾಗರಕಟ್ಟಿ (ಅಂಕೋಲಾ ಕ ಶಾಲೆ ನಂ ೧)
೮ ಕುಮಾರಿ ಗಂಗಾ ಗಣಪತಿ ನಾಯ್ಕ (ಅಂಕೋಲಾ ಹುಡುಗಿಯರ ಕ ಶಾಲೆ)
೯ ಮುಲ್ಲಾ ಇಬ್ರಾಹಿಮ ಅಬ್ದುಲ್ಲ ಕರೀಮ (ಅಂಕೋಲಾ ಕ ಶಾಲೆ ನಂ ೧)
೧೦ ಅಬೂತಾಹಿರ ಮಹಮ್ಮದ ಅಮಾನ (ಸಂಕೇರಿ ಉರ್ದು ಶಾಲೆ)
೧೧ ಕುಮಾರಿ ನೂರಜಹಾನ ಗೈಸುದ್ದಿನ ಖಾಜಿ (ಶಿರಸಿ ಹುಡುಗಿಯರ ಉರ್ದು ಶಾಲೆ)

ಜಾಹೀರ ನೋಟೀಸು.

ವಾಸುದೇವ ತಮ್ಮಯ್ಯಾ ಕಾರವಾಗ ...ಲೇರಿ, ಹಾ: ಕೋಡಿಬಾಗ ಇವರು ಇದರ ಮೂಲಕ ಜಾಹೀರಪಡಿಸುವದೇನಂದರೆ —

ನನ್ನ ಹಿರಿಯ ತಮ್ಮ ಗಣಪತಿ ಕೇಶವ ಪ್ಯಾನಭಾಗನು ನನಗೆ ವಂಚಿಸುವ ದುರಾಲೋಚನೆಯಿಂ ಮಿದ್ದಾರ ಸ್ವಕೀಯ ಭೂಮಿಗಳನ್ನು ಸದ್ಯಕ್ಕೆ ಬಹಳೇ ಹೀನ ಕಿಮ್ಮತ್ತಿಗೆ ಮಾರಿ ನಾಶಕ್ಕೆ ಪ್ರಯತ್ನ ಮಾಡಿದ್ದಾಗಿ ತಿಳಿಯುತ್ತದೆ. ಈ ಶಿವಾಯ ನನ್ನ ಮನೆಯ ಬಾಬು ನನ್ನ ಸ್ವತಂತ್ರ ಮಾಲ್ಕಿ ಕೂಡಿಗೆ ಪಟ್ಟಿನ ಆಸ್ತಿಗಳಲ್ಲಿ ನನ್ನ ತನ ಪಕ್ಕೆಂಟಿಂದ ನಾಮಕ್ಕೆ ಹಾಕಬ್ಬ ಸುಳ್ಳೇ ಸಾಧಿಸಿ ಪರಧೀನ ಮಾಡಲು ಹೊರಟಿರುತ್ತಾನೆಂತಲೂ ತಿಳಿಯುತ್ತದೆ. ನನ್ನ ಮನೆಯ ಬಾಬತ್ತು ಭೂಮಿಗಳು ನನ್ನ ಸ್ವತಂತ್ರ ಹಕ್ಕಿನವಿದ್ದು ಅವುಗಳ ಬಾಬು ತನಗೆ ಬೇಕಾದ ವ್ಯವಹ ಮಾಡಲಿಕ್ಕೆ ನಾನೇ ಸಂಪೂರ್ಣ ಹಕ್ಕುದಾರನಿದ್ದೇನೆ. ಶಿವಾ ಸದರಿ ಗಣಪತಿಗೆ ಏನೊಂದು ಹಕ್ಕು ಇರುವದಿಲ್ಲ. ಹೀಗಿತ್ತು ಆತನಿಂದ ಖರೀದಿ ಮಾಡಿಕೊಂಡವರಿಗೆ ಏನೊಂದೂ ಪ್ರಯೋಜನ ಸಿಗುವದಿಲ್ಲ. ತಿಳಿಯುವದು.

ತಾ ೧೧—೫—೧೯೪೬

V. T. S Baleri

ಜಿಲ್ಲಾ ಸಮಾಚಾರ.

(ಕಳೆದ ವರದಿ)

ಕಾರವಾರ— (ತಾ ೪-೫-೪೬) ನೇತಾಜಿ ಸುಭಾಸಚಂದ್ರ ಬೋಸರ ಸ್ವತಂತ್ರ ಹಿಂದ ಸೇನೆಗೆ ಸೇರಿದ ಈ ಜಿಲ್ಲೆಯ ಆರು ಮಂದಿ ಸೈನಿಕರು ಬಿಡುಗಡೆ ಹೊಂದಿ ಇಲ್ಲಿಗೆ ಬಂದಿದ್ದಾರೆ. ಸರಕಾರದವರು ಅವರ ಸಂಬಳ, ಭತ್ಯ ಮೊದಲಾದವನ್ನೆಲ್ಲ ಜಪ್ತ ಮಾಡಿದ್ದರಿಂದ ಅವರು ಈಗ ನಿರ್ಗತಿಕರಾಗಿದ್ದಾರೆ. ಅದರಿಂದ ಅವರಿಗೆ ಸಹಾಯ ಸಲ್ಲಿಸಲು [illegible] ಸಮಾಜಸೇವಾಸಂಘದವರ ನೇತೃತ್ವದಲ್ಲಿ ವಿದ್ಯಾರ್ಥಿ ಸಂಘದವರು ರಾಷ್ಟ್ರಸೇವಾದಲದವರೂ ನಿಧಿ ಕೂಡಿಸಲು ರಂಭಿಸಿದ್ದಾರೆ.

ಹಳಿಯಾಳ— (ತಾ ೨೪-೪-೪೬) ಇಲ್ಲಿಗೆ [illegible] ಪ್ರಮಾಧಿಕಾರಿಗಳು ಬಗೆಬಗೆಯ ಎತ್ತುವಳಿ ಮಾಡುತ್ತಿದ್ದ [illegible] ಮಾನಗಳು ಬರುತ್ತಿವೆ. ಅವುಗಳ ಬಗ್ಗೆ ಚೌಕಶಿ ನಡೆದಿದೆ.

ಇಲ್ಲಿಯ ರಾಷ್ಟ್ರ ಸೇವಾದಲದ ಓರ್ವ ಸ್ವಯಂಸೇವಕನಿದ್ದ ಶ್ರೀ [illegible] ಪಾಟೀಲನು [illegible] ಒಂದು ಕಾರ್ಖಾನೆಯಲ್ಲಿ [illegible] ಮೃತಪಟ್ಟನೆಂದು ತಿಳಿಸಲು ವ್ಯಸನವಾಗುತ್ತದೆ. ಶ್ರೀಶನು ಮೃತಾತ್ಮನಿಗೆ ಶಾಂತಿಯನ್ನೀಯಲಿ!

(ತಾ ೪-೫-೪೬) ರಂದು ಮಳೆ ಬಿದ್ದಿತು. ಜನರು ಸೆಕೆಯಿಂದಿದ್ದರು ಈಗ ಮಳೆಯಿಂದ [illegible] ನಗಲು ಕಷ್ಟವಾಗಿದೆ.

ಶಿರಸಿ— (ತಾ ೨-೫-೪೬) ಸಂಘಟನ ಮಾಸ್ತ್ರಿಯವರಿಂದ [illegible] ಸಂಕೋಚಪ್ರದರ್ಶನ ಮಾಡಲು ಇಂದು [illegible] ಅಧ್ಯಕ್ಷತೆಯಲ್ಲಿ [illegible] ಸಭೆಯು [illegible] ಬಹುಮಾನ ವಿತರಣೆ [illegible] (೧) ಜಿಲ್ಲಾ ಸಂಘ [illegible] ವರ್ಗ [illegible] ಕೊಡಿಸಿಕೊಟ್ಟ ನಾಗರಿಕರ, (೨) ಶಿಕ್ಷಕ ಬಂಧುರ ಸಮಿತಿ [illegible], (೩) ಬಿ ಸಿ ವರ್ಗದ ವಿದ್ಯಾರ್ಥಿಗಳ [illegible], (೪) [illegible] ವರ್ಗ [illegible] ಶಿಕ್ಷಣಕ್ಕೆ [illegible], (೫) [illegible] ಚಿತ್ರಕಾರ [illegible] ಶಿಕ್ಷಣ [illegible] ಶ್ರೀ ಕುಮಾರೇಶ್ವರ ಪಂಚಾಕ್ಷರ ನಾಟಕ ಮಂಡಳಿಯವರು [illegible] ಚಿತ್ರಿಸಿದ [illegible] ದೇವಿಯ ಒಂದು ಚಿತ್ರವನ್ನು ಬಹುಮಾನ [illegible] ಕೊಟ್ಟಿದ್ದಾರೆ.

ಮುರ್ಡೇಶ್ವರ— 'ವೃತ್ತ'ದ ಒಳ್ಳೇ ಅಭಿಮಾನಿಗಳೂ ಸುಧಾರಕರೂ ಆಗಿದ್ದ ರಾ| ಅನಂತ ಶಿವರಾಮ [illegible] ಇವರು ಕಳೆದ ವಾರ [illegible] ನಿಧನರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಮೃತಾತ್ಮನಿಗೆ ಜಗದೀಶನು ಶಾಂತಿಯನ್ನೀಯಲಿ!

ಜಾಹೀರ ನೋಟೀಸು

ಗಣಪತಿ ಕೇಶವ ಶ್ಯಾನಭಾಗ [illegible] ಬಾಳೇರಿ [illegible] ಎಲ್ಲರಿಗೂ ಈ ಮೂಲಕ ಜಾಹೀರಪಡಿಸುವದೇನಂದರೆ —

ನನ್ನ ಅಣ್ಣ ವಾಸುದೇವ ಈತನು ನನಗೆ ವಂಚಿಸುವ ಉದ್ದೇಶದಿಂದ ನಮ್ಮ ಅವಿಭಕ್ತ ಕುಟುಂಬದ ಆಸ್ತಿಯನ್ನು ಸ್ವಾಧೀನ ಮಾಡುವ ದುರಾಲೋಚನೆ ಮಾಡಿರುತ್ತಾನೆಂದು ತಿಳಿಯುತ್ತದೆ. ಆಸ್ತಿ ಪರಾಧೀನ ಮಾಡುವ ಪ್ರಸಂಗ ನಮಗೆ ಈಗ ಇರುವದಿಲ್ಲ. ಕಾರಣ ಆತನಿಂದ ಆಸ್ತಿ ಸ್ವಾಧೀನ ಮಾಡಿಕೊಂಡವರಿಗೆ ಆ ಆಸ್ತಿಯೊಳಗಿನ ನನ್ನ ಹಕ್ಕು ಸಿಗಲಾರದು ತಿಳಿಯುವದು. [illegible], ತಾ. ೪-೫-೧೯೪೬

G K Shanbhag, Baleri

ಜೀವವಿಲ್ಲದ "ಕಾಂಚನಮೃಗ"ವನ್ನು
ಓದಿದ ಶ್ರೀ ರಾಮಚಂದ್ರ ಬವಣೆಬಟ್ಟ ನಿಶ್ಚೇಷ್ಟಿತರಾದರೂ
ಜೀವದಾನ ಮಾಡುವ ಕಾಂಚನಮೃಗವನ್ನು ಕರ್ನಾಟಕ
ಗ್ರಂಥಮಾಲೆಯವರು ಹಿಡಿದಿದ್ದಾರೆ
ವಾರ್ಷಿಕ ಚಂದಾ - ೪ ರೂಪಾಯಿ ೮ ಪುಸ್ತಕಗಳು
ಹಣ ಕಳಿಸುವ ವಿಳಾಸ -
ಕರ್ನಾಟಕ ಸಂಘ, ಗೋಕರ್ಣ (ಉ ಕನ್ನಡ)

ದಿ ಕೊಮರ್ಶಿಯಲ್ ಕೊರ್ಪೊರೇಶನ್,
ಕುಮಟಾ.
ನಮ್ಮಲ್ಲಿ ಟಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಪಂಪು ಯೋಗ್ಯ ದರದಿಂದ ಸಿಗುತ್ತದೆ
ವಿ. ಎಮ್. ಮಿಜಾರನಕರ,
ಮೋಟರ ಸ್ಟೆಂಡ, ಕುಮಟಾ.

ಎಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ
ಮಿನೇರಲ್ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ ಎಮ್. ಮಿಜಾರನಕರ,
[illegible], ಮೋಟರ ಸ್ಟೆಂಡ, ಕುಮಟಾ

ಆಜ್ಞೆ.

ನಂಬರ ೫೦,
ಕಾನಡಾ ಜಿಲ್ಲಾ ಮೆಜಿಸ್ಟ್ರೇಟರ ಕಛೇರಿ,
ಕಾರವಾರ, ತಾ ೩೦-೪-೧೯೪೬.

ಮುಂಬಯಿ ಪ್ರಾಂತ ಸಂರಕ್ಷಣ ಕಾನೂನಿನ [illegible] ಉಪಕಲಮು ಮತ್ತು ಮುಂಬಯಿ ಸರಕಾರದ (ಹೋಮ ಡಿಪಾರ್ಟಮೆಂಟ (ಯುದ್ಧ)) ಯವರು ತಾ ೧೫-೮-೧೯೪೪ಕ್ಕೆ ಹೊರಡಿಸಿದ ನಂ ಎಸ್ ಡಿ II-೧೩೬೦ನೇ ಸರಕಾರಿ ಪ್ರಕಟನೆ ಇವುಗಳನ್ನು ಮತ್ತು ಹೀಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ, ಇವರು ತಮ್ಮ ಕಛೇರಿಯವರು ತಾ ೫-೩-೧೯೪೬ಕ್ಕೆ ಹೊರಡಿಸಿದ ೪೮೦೬ನೆಯ ಆಜ್ಞೆಯನ್ನು ರದ್ದುಗೊಳಿಸಿ ಅದರ ಬದಲು ಈ ಕೆಳಗಿನಂತೆ ಆಜ್ಞೆ ವಿಧಿಸುತ್ತಾರೆ.-

(೧) ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದಲ್ಲಿ ಕಾಣಿಸಿರುವ ಸ್ಥಳಗಳೊಳಗೆ, ಆಯಾ ಸ್ಥಳಗಳ ಮುಂದುಗಡೆ ಕಾಣಿಸಿದ ಧಾರಣೆಗಿಂತ ಹೆಚ್ಚಿಗೆ ಧಾರಣೆ ತೆಗೆದುಕೊಂಡು ಸಾರ್ವಜನಿಕರಿಗೆ ಬಿಳೇ ಚಿಮಣಿ ಎಣ್ಣೆಯನ್ನು ಮಾರಕೂಡದು;

(೨) ಚಿಮಣಿ ಎಣ್ಣೆ ಕೊಂಡುಕೊಳ್ಳಲು ಯೋಗ್ಯ ಅಧಿಕಾರಿಯ ಕಡೆಯಿಂದ ಅಪ್ಪಣೆ-ಚೀಟಿ ಇಲ್ಲವೆ ಬೇರೆ ಅಧಿಕಾರಪತ್ರ ಪಡೆಕೊಂಡು ಬಂದು ಮೇಲೆ ಹೇಳಿದ ದರ ಕೊಡಲೊಪ್ಪುವ ಯಾವ ಮನುಷ್ಯನಿಗೂ ಚಿಮಣಿ ಎಣ್ಣೆಯ ವ್ಯಾಪಾರಿಗಳು ತನ್ನಲ್ಲಿದ್ದ ಎಣ್ಣೆ ಮಾರಾಟಕ್ಕೆ ಕೊಡುವದಿಲ್ಲೆಂದು ಹೇಳಕೂಡದು;

(೩) ಇಂಥ ವ್ಯಾಪಾರಿಗಳು (ಈ ಆಜ್ಞೆಗೆ ಜೋಡಿಸಿದ) ಪರಿಶಿಷ್ಟದ ಒಂದು ಪ್ರತಿಯನ್ನು ತಮ್ಮ ಅಂಗಡಿಗಳ [illegible] ಇಲ್ಲವೆ ಇನ್ನಿತರ ವ್ಯವಹಾರಸ್ಥಳಗಳ ಪ್ರಮುಖ (ಎಲ್ಲರಿಗೂ ಕಾಣಿಸುವಂತಹ) ಭಾಗದಲ್ಲಿ ಅಂಟಿಸಬೇಕು ಅಥವಾ ತೂಗಹಾಕಬೇಕು; ಮತ್ತು

(೪) ಎಣ್ಣೆ ಕೊಂಡುಕೊಂಡವರು ಬೇಡಿದಲ್ಲಿ ಅವರಿಗೆ ಪ್ರತಿಯೊಬ್ಬರಿಗೆ (೧) ಅವರಿಗೆ ಮಾರಿದ ಎಣ್ಣೆಯ ಜಾತಿ, (೨) ಮಾರಿದ ಎಣ್ಣೆಯ ಪರಿಮಾಣ ಮತ್ತು (೩) ಮಾರಾಟದ ಬೆಲೆ ಇವುಗಳ ಪೂರ್ಣ ವಿವರಗಳನ್ನೊಳಗೊಂಡ ನಗದಿ ಪಾವತಿಗಳನ್ನು ಇಲ್ಲವೆ ಮಾರಾಟಕ್ಕೆ ಸಂಬಂಧಿಸಿದ ಬೇರೆ ಬಿಲ್ಲುಗಳನ್ನು ಇಂಥ ವ್ಯಾಪಾರಿಗಳು ಕೊಡತಕ್ಕದ್ದು.

ಯಾರಾದರೂ ಈ ಆಜ್ಞೆಯ ಯಾವದೇ ಅಂಶವನ್ನು ಉಲ್ಲಂಘಿಸಿದಲ್ಲಿ, ಅವನಿಗೆ ಬೇರೆ ಯಾವದೇ ಶಿಕ್ಷೆಯೂ ಆಗಬಹುದು, ಅವನ ವಿಚಾರಣೆ ನಡೆಸುವ ನ್ಯಾಯಾಧೀಶರು, ಯಾವ ಚಿಮಣಿ ಎಣ್ಣೆಯ ಸಂಗ್ರಹದ ಸಂಬಂಧದಲ್ಲಿ ಅಪರಾಧ ಆಗಿರುತ್ತದೆಂದು ಮನವರಿಕೆಯಾಗಿರುತ್ತದೋ ಆ ಎಲ್ಲ ಎಣ್ಣೆಯ ಸಂಗ್ರಹವನ್ನು, ಅದರ ಆವರಣ ಪಾತ್ರೆಗಳ ಸಹಿತ ಸರಕಾರಜಪ್ತಿ ಮಾಡಲು ವಿಧಿಸಬಹುದು.

ಇನ್ನೂ ಆಜ್ಞೆ ಮಾಡುವದೇನಂದರೆ —

(೧) ಎಲ್ಲ ಮಾರ್ಗಗಳ ಕೆಂಪು ಚಿಮಣಿ ಎಣ್ಣೆಯ ಮಾರಾಟದ ಧಾರಣೆಯು (ಬಿಳೇ ಎಣ್ಣೆಯ ಧಾರಣೆಗಿಂತ) ೪ ಇಂಪೀರಿಯಲ್ ಗೆಲನ್ನುಗಳ ಡಬ್ಬಿ ೧ಕ್ಕೆ ರೂ ೦-೮-೦ ರಷ್ಟು ಕಡಿಮೆ ಮತ್ತು ಕ್ವಾರ್ಟರ (೨ ಗೆಲನ್ನ ಅಥವಾ ೨ ಪೈಂಟ) ೧ಕ್ಕೆ ರೂ ೦-೦-೪ ಕಡಿಮೆ ಇರುತ್ತದೆಂದು ತಿಳಿಯತಕ್ಕದ್ದು

(೨) ಚಿಮಣಿ ಎಣ್ಣೆಯ ಪ್ರತಿಯೊಂದು ಮಾರಾಟದ ಬಗ್ಗೆ ಆಕಾರಿಸತಕ್ಕ ಬೆಲೆಯನ್ನು [illegible] ಪೂರ್ಣ ಆಣೆ ಮಾಡತಕ್ಕದ್ದು. ಅಂದರೆ ಲೆಕ್ಕಾಚಾರದಲ್ಲಿ ಅರ್ಧ ಆಣೆ ಹಾಗೂ ಅದಕ್ಕಿಂತ ಹೆಚ್ಚು ಬರುತ್ತಿದ್ದಲ್ಲಿ ಅದನ್ನು ಪೂರ್ಣ ಆಣೆ ಮಾಡತಕ್ಕದ್ದು ಮತ್ತು ಅರ್ಧ ಆಣೆಗಿಂತ ಕಡಿಮೆ ಇರುವದನ್ನು ಬಿಟ್ಟುಬಿಡತಕ್ಕದ್ದು

ಮುಂಬಯಿ ಪ್ರಾಂತ ಸಂರಕ್ಷಣ ಕಾನೂನಿನ ೧ನೇ ಕಲಮಿನ ೧ನೆಯ ಉಪ-ಕಲಮಿನನುಸರಿಸಿ ಈ ಆಜ್ಞೆಯನ್ನು ಈ ಕೆಳಗೆ ವಿವರಿಸಿದಂತೆ ಪ್ರಕಟಗೊಳಿಸಬೇಕು.

(೧) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝೆಟಿನ ಬರುವ ಸಂಚಿಕೆಯಲ್ಲಿ ಪ್ರಸಿದ್ಧ ಮಾಡಬೇಕು.

(೨) ಒಂದು ಪ್ರತಿಯನ್ನ (ಕನ್ನಡದಲ್ಲಿ ರೂಪಾಂತರಿಸಿ) ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟಿಸಬೇಕು.—

(೧) ಕಾನಡಾವೃತ್ತ, ಕುಮಟಾ (೨) ಪಿನಾಕಿ, ಕಾರವಾರ

(೩) ಆಜ್ಞೆಯ ಇಂಗ್ಲಿಷ ಪ್ರತಿಗಳನ್ನು (ಜಿಲ್ಲೆಯೊಳಗಿನ ಎಲ್ಲ) ಮುನ್ಸಿ, ಪೋಲೀಸ ಮತ್ತು ಸಿವಿಲ್ ಕಛೇರಿಗಳಲ್ಲಿ ಈ ಬಗ್ಗೆ ನೇಮಕ ಮಾಡಿಟ್ಟ ನೋಟೀಸ-ಬೋರ್ಡುಗಳಿಗೆ ಅಂಟಿಸಬೇಕು

(೪) ಆಜ್ಞೆಯ ಕನ್ನಡ ಪ್ರತಿಗಳನ್ನು ಎಲ್ಲ ತಾಲೂಕ-ಪೇಟೆಗಳೊಳಗಿನ ಮುಖ್ಯ ಚಿಮಣಿ ಎಣ್ಣೆ ಕಂಪನಿಗಳ ಏಜಂಟರಿಗೆ, ಹೋಲಸೇಲ ಮತ್ತು ಚಿಲ್ಲರೆ ಚಿಮಣಿ ಎಣ್ಣೆ ಮಾರುವ ವ್ಯಾಪಾರಿಗಳಿಗೂ ಪೂರೈಸಬೇಕು

ಪರಿಶಿಷ್ಟ

ಬಿಳೇ ಚಿಮಣಿ ಎಣ್ಣೆಯ ಎಲ್ಲ ಜಾತಿಗಳು.

ತಾಲೂಕ ಪೇಟೆ ವಾ ಸ್ಥಳ		(ಖಾಲಿ ಡಬ್ಬಿ ಸಹಿತ) ೪ ಇಂಪೀರಿಯಲ್ ಗೆಲನ್ನುಗಳ ಡಬ್ಬಿ ೧ರ ಠೋಕ ಬೆಲೆ		೧ನೇ ಸ್ತಂಭದಲ್ಲಿ ಕಾಣಿಸಿದ ಸ್ಥಳಗಳಲ್ಲಿ ಹಾಗೂ ಆ ಸ್ಥಳಗಳ ಸುತ್ತಲು ೫ ಮೈಲು ಅಂತರದಲ್ಲಿರುವ ಸ್ಥಳಗಳಲ್ಲಿ ಪೈಂಟ ೧ರ ಕಿರಕೋಳ ಬೆಲೆ		೧ನೇ ಸ್ತಂಭದಲ್ಲಿ ಕಾಣಿಸಿದ ಸ್ಥಳಗಳ ವಿನಹ ಉಳಿದ ಸ್ಥಳಗಳಲ್ಲಿ ಪೈಂಟ ೧ರ ಬೆಲೆ
೧		೨		೩		೪
ಕಾರವಾರ ಮತ್ತು ಅಂಕೋಲಾ	ರೂ	೪—೩—೦	ರೂ	೦—೨—೦	ರೂ.	೦—೨—೧
ಶಿವಗಡ, ಕೋಡಿಬಾಗ	„	೪—೨—೩	„	೦—೨—೦	„	೦—೨—೧
ಕದ್ರ	„	೪—೧—೯	„	೦—೨—೦	„	೦—೨—೩
ಕುಮಟಾ, ಉಪ್ಪಿನಪಟ್ಟಣ	„	೪—೨—೬	„	೦—೨—೧	„	೦—೨—೩
ಹೊನ್ನಾವರ	„	೪—೨—೩	„	೦—೨—೦	„	೦—೨—೩
ಭಟಕಳ		೪—೩—೦	„	೦—೨—೦	„	೦—೨—೩
ವೆಂಕಟಾಪುರ	„	೪—೨—೨		೦—೨—೦	„	೦—೨—೩
ಶಿರಾಲಿ	„	೪—೨—೧	„	೦—೨—೦	„	೦—೨—೩
ಮುರ್ಡೇಶ್ವರ	„	೪—೨—೯	„	೦—೨—೦	„	೦—೨—೩
ಸಿದ್ದಾಪುರ	„	೫—೨—೮	„	೦—೨—೬	„	೦—೨—೯
ಶಿರಸಿ	„	೪—೧೧—೦	„	೦—೨—೧	„	೦—೨—೬
ಯಲ್ಲಾಪುರ	„	೪—೧೨—೦	„	೦—೨—೩	„	೦—೨—೬
ಮುಂಡಗೋಡ	„	೪—೧೪—೦	„	೦—೨—೬	„	೦—೨—೯
ಹಳಿಯಾಳ	„	೪—೮—೦	„	೦—೨—೩	„	೦—೨—೬
ಸೂಪಾ	„	೫—೧೧—೦	„	೦—೨—೯	„	೦—೩—೦

F. N. RANA. ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

THE BANK OF RURAL INDIA, LTD.,
[Incorporated in British India under the Indian Companies Act, 1913]
HEAD OFFICE— "Satyabhama Bhavan", KARWAR.
Offices at :- KARWAR, KUMTA, SIRSI, HONAVAR & YELLAPUR
Authorised Capital .. Rs 10,00,000;
Subscribed Capital .. Rs. 5,00,000;
Paid-up Capital .. Rs. 2,60,000.
Rates of Interest on Deposits:
Current a/c. @ 1% p. a. *Savings Bank a/c @ 2½%*
Fixed Deposits for 3 months @ 3% per annum
" " for 6 months @ 3½% "
" " for 12 months or more @ 4%
All Kinds of modern Banking business transacted
Karwar, 15-3-1946
P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೆ. ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸಾಗರ ಆರ್ಟ ಪ್ರೆಸ್"ದಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧ ೧೦ ೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ,, ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು.
ವರ್ಗಣಿಯನ್ನು ಮುಂಗಡ ಕಟ್ಟತಕ್ಕದ್ದು

Reg. No. B 1270 Monday, 20th May, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪೬

ಕುಮಟಾ. ಸೋಮವಾರ. ತಾ ೨೦ ಮಾಹೆ ಮೇ ೧೯೪೬ನೇ ಇಸವಿ

ಜಾಹೀರಾತುಗಳ ದರ.
ಕ್ಯಾಲಮ್ಮಿನ ೧ ಇಂಚಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪರಸ್ಪರ
ಇಚ್ಛೆನ ಪತ್ರದ್ವಾರಾ
ತಿಳಿಸಲಾದೀತು.

ಬ್ರಿಟಿಶ ಯೋಜನೆ ಹೊರಬಿತ್ತು

ಸಿಮ್ಲೆಯ ತ್ರಿಪಕ್ಷ ಪರಿಷತ್ತು ಅಂತೂ ಕೊನೆಗೆ ಅಯಶಸ್ವಿಯಾಗಿ, ಬ್ರಿಟಿಶ ಮಂತ್ರಿಗಳು ತಮ್ಮ ಸ್ವಂತ ಯೋಜನೆಯನ್ನು ಸಾರಬೇಕಾಯಿತು. ಆ ಯೋಜನೆಗೆ ವಿಲಾಯತಿಯೊಳಗಿನ ಬ್ರಿಟಿಶ ಸರಕಾರದ ಪೂರ್ವ-ಸಮ್ಮತಿ ಪಡೆಕೊಂಡು, ಭಾರತ ಮಂತ್ರಿಗಳು ಅದನ್ನು ಕಳೆದ ಗುರುವಾರ ರಾತ್ರೆ ಪ್ರಸಿದ್ಧಿಗೆ ಕೊಟ್ಟರು. ಆ ಯೋಜನೆಯು ಹಾಗೂ ಆ ಯೋಜನೆಯ ಪೂರ್ವ ಪೀಠಿಕೆಯಾಗಿ ತ್ರಿಸ್ಟ ಮಂತ್ರಿಗಳು ಕೊಟ್ಟ ಹೇಳಿಕೆಯ ಸಾರಾಂಶ ಈ ಕೆಳಗೆ ಕೊಟ್ಟಿದೆ

ಹಿಂದುಸ್ಥಾನಕ್ಕೆ ಆದಷ್ಟು ಬೇಗ ಸ್ವಾತಂತ್ರ್ಯ ಕೊಡಬೇಕೆಂದು ಬ್ರಿಟಿಶ ಸರಕಾರವು ನಿಶ್ಚಯಿಸಿದೆ. ಆದರೆಯೂ, ತಮಗೆ ಯಾವ ತರದ ಸರಕಾರ ಬೇಕೆಂಬುದನ್ನು ಹಿಂದೀಯರೇ ನಿರ್ಣಯಿಸಬೇಕೆಂತಲೂ, ಆ ನಿರ್ಣಯ ಮಾಡುವಲ್ಲಿ ಹಿಂದೀಯರಿಗೆ ನೆರವಾಗುವದಕ್ಕೆ ತಾವು ತಮ್ಮ ಮೂವರ ಸರದಾರರನ್ನು ಭಾರತಕ್ಕೆ ಕಳಿಸಿ ಕೊಡುತ್ತೇವೆ ಆಗಿಯೂ ಬ್ರಿಟಿಶ ಮುಖ್ಯ ಪ್ರಧಾನರು ಮಾ. ತಾ ೧೫ಕ್ಕೆ ಪಾರ್ಲಿಮೆಂಟಿನಲ್ಲಿ ಸಾರಿದ್ದರು. ಅದರಂತೆ ನಾವು (ತ್ರಿಸ್ಟ ಮಂತ್ರಿಗಳು) ಮತ್ತು ಸರ್ವಾಧಿಕಾರಿಗಳು ದಿಲ್ಲಿಯಲ್ಲಿ ಭಾರತದ ಪ್ರಮುಖರ ಹೇಳಿಕೆ ಕೇಳಿಕೊಂಡದ್ದು, ಅವರೊಡನೆ ವಿಚಾರ ವಿನಿಮಯವನ್ನೂ ಮಾಡಿದೆವು. ಭಾರತವನ್ನು ಇಬ್ಭಾಗವಾಗಿ ವಿಚ್ಛೇದಿಸಬೇಕೋ ಅದನ್ನು ಅವಿಭಕ್ತವಿಡಬೇಕೋ ಎಂಬ ಮಹತ್ವದ ಮೂಲಭೂತ ಪ್ರಶ್ನೆಯ ಮೇಲೆ ಕೊಂಗ್ರೆಸ ಲೀಗಗಳೊಳಗೆ ಮತಭೇದವುಂಟು. ಅವರೊಳಗಿನ ಮತಭೇದ ಪರಿಹರಿಸಿ ಇಕ್ಕಟ್ಟಿನವರೊಳಗೆ ಒಂದಿಲ್ಲೊಂದು ಒಡಂಬಡಿಕೆ ಮಾಡಿಸಲು ನಾವು ಸಿಮಲೆಯಲ್ಲಿ ಪರಿಷತ್ತು ಕೂಡಿಸಿದೆವು. ಆದರೆ ಆ ಒಡಂಬಡಿಕೆ ಮಾಡಿಸುವದು ನಮಗೆ ಸಾಧ್ಯವಾಗಲಿಲ್ಲ. ಅದರಿಂದ ನಾವು ನಮಗೆ ಯುಕ್ತ ಕಂಡ ವ್ಯವಸ್ಥೆಯನ್ನು ಸೂಚಿಸಬೇಕಾಗಿದೆ. ನಮ್ಮ ವ್ಯವಸ್ಥೆಗೆ ಬ್ರಿಟಿಶ ಸರಕಾರದ ಪೂರ್ಣ ಸಮ್ಮತಿಯುಂಟು

ಮುಸ್ಲಿಮ ಲೀಗ ಒಂದು ಬಿಟ್ಟರೆ ಉಳಿದವರೆಲ್ಲರೂ ಭಾರತವನ್ನು ಅವಿಭಕ್ತ ಇಡಬೇಕೆಂದು ಹೇಳುತ್ತಾರೆ. ಮುಸಲ್ಮಾನರಿಗೆ ಮಾತ್ರ ವಿಭಜನ ಬೇಕಾಗಿದೆ. ಅವಿಭಕ್ತ ಹಿಂದುಸ್ಥಾನದಲ್ಲಿ ಹಿಂದುಗಳದೇ ಪ್ರಾಬಲ್ಯವಾಗಿ ತಮ್ಮ ಹಿತಸಂಬಂಧಗಳಿಗೆ ಹಾನಿಯಾಗುವದೆಂದಾಗಿ ಮುಸಲ್ಮಾನರು ಅಂಜುತ್ತಾರೆ. ಅವರ ಸಮಾಧಾನ ಹೇಗೆ ಮಾಡಬೇಕೆಂಬುದೊಂದು ದೊಡ್ಡ ಸಮಸ್ಯೆಯಾಗಿ ಕೂತಿದೆ

ಮುಸ್ಲಿಮ ಲೀಗದವರ ಬೇಡಿಕೆಯಂತೆ "ಪಾಕಿಸ್ಥಾನ" ರಚಿಸುವದು ನಮಗೆ ಶಕ್ಯ ತೋರುವದಿಲ್ಲ. ಲೀಗದವರು ಹಿಂದುಸ್ಥಾನದ ವಾಯವ್ಯ ಭಾಗದೊಳಗಿನ ಸಿಂಧ, ಬ್ರಿಟಿಶ ಬಲೂಚಿಸ್ತಾನ, ಪಂಜಾಬ ಮತ್ತು ಗಡಿನಾಡು ಈ ಪ್ರಾಂತಗಳನ್ನು, ಈಶಾನ್ಯ ಭಾಗದೊಳಗಿನ ಆಸಾಮ ಮತ್ತು ಬಂಗಾಲ ಈ ಪ್ರಾಂತಗಳನ್ನೂ ಪ್ರತ್ಯೇಕಿಸಿ ಪಾಕಿಸ್ತಾನ ರಚಿಸಿಕೊಡಬೇಕಾಗಿ ಬೇಡುತ್ತಾರೆ. ಅಲ್ಲಿ ಮುಸಲ್ಮಾನರು ಬಹುಸಂಖ್ಯಾತರೆಂದು ಅವರ ತಿಳಿವಳಿಕೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಪಂಜಾಬದಲ್ಲಿ ೧೨೨ ಲಕ್ಷ, ಗಡಿನಾಡಿನಲ್ಲಿ ೨॥ ಲಕ್ಷ, ಸಿಂಧದಲ್ಲಿ ೧೩॥ ಲಕ್ಷ ಮತ್ತು ಬಲೂಚಿಸ್ತಾನದಲ್ಲಿ ೬೨ ಸಾವಿರ ಹೀಗೆ ಈ ಪ್ರಾಂತಗಳಲ್ಲಿ ಕೂಡಿ ೧೩೮ ಲಕ್ಷ ಮುಸಲ್ಮಾನೇತರರಿದ್ದಾರೆ. ಮುಸಲ್ಮಾನರು ೨೨೬ ಲಕ್ಷ ಇದ್ದಾರೆ. ಬಂಗಾಲ ಆಸಾಮಗಳಲ್ಲಿ ಮುಸಲ್ಮಾನರು ೩೬೪ ಲಕ್ಷ ಇದ್ದರೆ ಮುಸಲ್ಮಾನೇತರರು ೩೪೦ ಲಕ್ಷ ಇದ್ದಾರೆ. ಪಂಜಾಬ, ಬಂಗಾಲ, ಆಸಾಮ ಪ್ರಾಂತಗಳ ಹಲವು ಜಿಲ್ಲೆಗಳಲ್ಲಿ ಮುಸಲ್ಮಾನೇತರರೇ ಹೆಚ್ಚಿಗೆ ಇದ್ದಾರೆ. ಬಂಗಾಲದ ರಾಜಧಾನಿಯಾದ ಕಲಕತ್ತೆಯಲ್ಲಿಯಂತೂ ಮುಸಲ್ಮಾನರು ೧೦೦ಕ್ಕೆ ೨೩ರಷ್ಟೇ ಇದ್ದಾರೆ. ಈ ಜಿಲ್ಲೆಗಳನ್ನು ಪಾಕಿಸ್ತಾನದಲ್ಲಿ ಸೇರಿಸುವದು ಸರಿಯಾಗದು. ಈ ಭಾಗಗಳನ್ನು ಬಿಟ್ಟು ರಚಿಸಿದ ಪಾಕಿಸ್ತಾನವು ಲೀಗಿಗೆ ಗ್ರಾಹ್ಯವಿಲ್ಲವಂತೆ. ಪಾಕಿಸ್ತಾನದ ಇಬ್ಭಾಗಗಳಲ್ಲಿ ಪ್ರಾಯಃ ೭೦೦ ಮೈಲು ಅಂತರವುಂಟು. ಅವನ್ನು ಜೋಡಿಸಲು ಒಂದು ಪಟ್ಟಿ ಬೇಕು. ಆ ಪಟ್ಟಿಯ ಸುರಕ್ಷಿತತೆ 'ಹಿಂದುಸ್ಥಾನ'ದ ಸೌಜನ್ಯದ ಮೇಲೆ ಅವಲಂಬಿಸಿರುವದು. ಇದಲ್ಲದೆ ಭಾರತದ ವಿಭಜನೆ ಮಾಡಿದರೆ ಸೈನ್ಯಬಲ, ವಿಮಾನಬಲ, ನೌಕಾಬಲ ಇವೆಲ್ಲ [illegible] ಇರಲಾರವು. ಹಿಂದೀ ಸಂಸ್ಥಾನಿಕರಿಗೂ ತಾವು ಪಾಕಿಸ್ತಾನದಲ್ಲಿ ಸೇರಬೇಕೋ ಹಿಂದುಸ್ಥಾನದಲ್ಲಿ ಸೇರಬೇಕೋ ಎಂಬ ಪ್ರಶ್ನೆಯುಂಟಾಗಿ ತಾಪತ್ರಯವಾಗುವದು. ಆದ್ದರಿಂದ ಪಾಕಿಸ್ತಾನಕ್ಕೆ ನಾವು ಒಪ್ಪಲಾರೆವು

ಇದರ ಬದಲು ಹಿಂದುಸ್ಥಾನಕ್ಕೆ ಒಂದು ಸಂಘ ಸರಕಾರ ನಿರ್ಮಿಸಿ ಆ ಸರಕಾರಕ್ಕೆ ವಿದೇಶ ವ್ಯವಹಾರ, ಸಂರಕ್ಷಣೆ ಮತ್ತು (ರೇಲ್ವೆ, ಟಪಾಲ, ತಂತಿ ಮೊದಲಾದ) ಸಂದರ್ಶನ-ಸಾಧನೆ ಈ ಮೂರು ಖಾತೆಗಳನ್ನು ಮಾತ್ರ ಒಪ್ಪಿಸಿ, ಉಳಿದ ಎಲ್ಲಾ ಖಾತೆಗಳ ಅಧಿಕಾರವನ್ನೂ ಪ್ರಾಂತಿಕ ಸರಕಾರಗಳಿಗೆ ಬಿಟ್ಟುಕೊಟ್ಟಲ್ಲಿ ಮುಸಲ್ಮಾನರಿಗೆ ಬೇಕಷ್ಟು ಸಂರಕ್ಷಣ ಸಿಗುವಂತಿದೆ ಎಂದು ನಮ್ಮ ಮತವುಂಟು. ಆ ಪ್ರಾಂತಗಳು ಬೇಕಾದರೆ ತಮ್ಮೊಳಗೆ ಗುಂಪು ಕಟ್ಟಿಕೊಂಡು ಕೆಲವೊಂದು ಸಾಮಾನ್ಯ ಖಾತೆಗಳ ಕಾರಭಾರ ಆ ಗುಂಪಿನ ಸರಕಾರಕ್ಕೆ ಒಪ್ಪಿಸಬಹುದು

ಸಂಸ್ಥಾನಗಳಿಗೆ ಸ್ವಾತಂತ್ರ್ಯ

ಇನ್ನು ಮುಂದೆ ಬ್ರಿಟಿಶ ಸರಕಾರವು ಹಿಂದೀ ಸಂಸ್ಥಾನಗಳಲ್ಲಿ ತಮ್ಮ ಪ್ರಭುತ್ವ ನಡೆಸಲಿಕ್ಕಿಲ್ಲ. ಆ ಪ್ರಭುತ್ವವನ್ನು ಹೊಸ ಹಿಂದೀ ಸರಕಾರಕ್ಕೆ ಒಪ್ಪಿಸುವಂತಿಲ್ಲ. ಹಲವಾರು ಸಂಸ್ಥಾನಿಕರು ಸ್ವತಂತ್ರ ಭಾರತ ಸರಕಾರದೊಡನೆ ಸಹಕರಿಸಲು ತಮ್ಮ ಸಿದ್ಧತೆ ವ್ಯಕ್ತಗೊಳಿಸಿದ್ದುಂಟು. ಆ ಸಹಕಾರ ಯಾವ ಬಗೆಯಾಗಿರಬೇಕೆಂಬುದನ್ನು ಹೊಸ ಘಟನೆಯ ರಚನೆಯ ಕಾಲಕ್ಕೆ ನಿರ್ಣಯಿಸಬೇಕಾಗುವದು

ಶಿಷ್ಟರ ಯೋಜನೆ

ಹೊಸ ರಾಜ್ಯಘಟನೆಯ ತಳಹದಿ ಈ ಕೆಳಗಿನಂತಿರಬೇಕೆಂದು ನಮ್ಮ ಸೂಚನೆಯಿದೆ

(೧) ದೇಶಸ್ಥ ಸಂಸ್ಥಾನಗಳಿಗೂ ಬ್ರಿಟಿಶ ಹಿಂದುಸ್ಥಾನಕ್ಕೂ ಕೂಡಿ ಒಂದು ಕೇಂದ್ರ ಸರಕಾರವಿರಬೇಕು. ಪರರಾಷ್ಟ್ರೀಯ ರಾಜಕಾರಣ, ಸಂರಕ್ಷಣ ಮತ್ತು ಸಂದರ್ಶನ-ಸಾಧನಗಳು ಇವೇ ಇದರ ಖಾತೆಗಳು. ಆ ಖಾತೆಗಳನ್ನು ನಡೆಸಲು ಅವಶ್ಯಕವಿರುವ ಹಣ ಎತ್ತುವ [illegible] ಅಧಿಕಾರವೂ ಅದಕ್ಕಿರಬೇಕು

(೨) ಸಂಸ್ಥಾನಗಳಿಂದಲೂ ಬ್ರಿಟಿಶ ಪ್ರಾಂತಗಳಿಂದಲೂ ಆರಿಸಿದ ಒಂದು ಶಾಸನ ಸಭೆ ಮತ್ತು ಒಂದು ಕಾರ್ಯಕಾರಿ ಮಂಡಳಿ ಈ ಸರಕಾರದಲ್ಲಿರಬೇಕು. ಮಹತ್ವದ ಜಾತೀಯ ಪ್ರಶ್ನೆ ಶಾಸನ ಸಭೆಯ ಮುಂದೆ ಬಂದಾಗ ಮುಸಲ್ಮಾನ ಮತ್ತು ಮುಸಲ್ಮಾನೇತರ ಪ್ರತಿನಿಧಿಗಳ ಮತಗಳನ್ನು ಪ್ರತ್ಯೇಕ ತೆಗೆದುಕೊಂಡು ಅವರ ಬಹುಮತದಿಂದ ಆ ಪ್ರಶ್ನೆಯ ನಿರ್ಣಯವಾಗತಕ್ಕದ್ದು

(೩) ಕೇಂದ್ರ ಸರಕಾರಕ್ಕೆ ಒಪ್ಪಿಸಿದ ಖಾತೆಗಳನ್ನು ಬಿಟ್ಟು ಉಳಿದ ಎಲ್ಲ ಖಾತೆಗಳ ಅಧಿಕಾರಗಳೂ ಪ್ರಾಂತಿಕ ಸರಕಾರಗಳಿಗಿರಬೇಕು

(೪) ಸಂಸ್ಥಾನಗಳಿಗೂ ಇದೇ ಮಾತು ಅನ್ವಯಿಸುತ್ತದೆ

(೫) ಪ್ರಾಂತಗಳು ತಮ್ಮತಮ್ಮೊಳಗೆ ಗುಂಪು ಮಾಡಿಕೊಂಡು (ಸಾಮಾನ್ಯ ವಿಷಯಗಳ ಕಾರಭಾರ ನಡೆಸುವದಕ್ಕೆ) ಶಾಸನಸಭೆ ಮತ್ತು ಕಾರ್ಯಕಾರಿ ಮಂಡಳಿ ಇವುಳ್ಳ ಸಂಯುಕ್ತ ಸರಕಾರ ನಿರ್ಮಿಸಿಕೊಳ್ಳಬಹುದು

(೬) ಕೇಂದ್ರ ಸರಕಾರದ ಇಲ್ಲವೆ ಗುಂಪುಗಳ ಸರಕಾರದ ಘಟನೆಗಳಲ್ಲಿ ಏನಾದರೂ ಬದಲಾವಣೆಯಾಗಬೇಕೆಂದು ಯಾವದೊಂದು ಪ್ರಾಂತದ ಶಾಸನ-ಮಂಡಳವು ಬಹುಮತದಿಂದ ಸೂಚಿಸಿದಲ್ಲಿ ಹೊಸ ಘಟನೆ ಜಾರಿಯಾಗಿ ಬಂದ ದಿವಸದಿಂದ ೧೦ನೆಯ ವರ್ಷದಲ್ಲಿ ಹಾಗೂ ಮುಂದೆ ಪ್ರತಿ ೧೦ ವರುಷಗಳಿಗೊಮ್ಮೆ ಘಟನೆಗಳ ಪುನರಾಲೋಚನೆಗೆ ಅವಕಾಶವಿರುವಂತೆ ರಾಜ್ಯಘಟನೆಯಲ್ಲಿ ವ್ಯವಸ್ಥೆ ಮಾಡಿಡಬೇಕು

ಕೇಂದ್ರದ ಹಾಗೂ ಪ್ರಾಂತಿಕ ಘಟನೆಗಳನ್ನು ತಯಾರಿಸುವದಕ್ಕಾಗಿ ಬೇಗನೆ ಘಟನಾ ಸಮಿತಿಯೊಂದನ್ನು ನೇಮಿಸಬೇಕಾಗಿದೆ. ದೇಶದೊಳಗಿನ ಎಲ್ಲ ಪ್ರೌಢ ಸ್ತ್ರೀ-ಪುರುಷರ ಮತದಿಂದ ಈ ಸಮಿತಿ ಆರಿಸುವದು ಒಳಿತಿತ್ತು. ಆದರೆ ಅದಕ್ಕೆ ಕಾಲಾವಧಿ ತಗಲುವದು. ಅದರಿಂದ ಈಗ ಇದ್ದ ಪ್ರಾಂತಿಕ ಎಸೆಂಬ್ಲಿಗಳ ಸದಸ್ಯರಿಂದಲೇ ಈ ಸಮಿತಿಯನ್ನು ಆರಿಸಬೇಕೆಂದು ನಮ್ಮ ಸೂಚನೆಯುಂಟು. ಜನಸಂಖ್ಯೆಯ ಪ್ರತಿ ೧೦ ಲಕ್ಷಕ್ಕೆ ಒಬ್ಬರಂತೆ ಆಯಾ ಪ್ರಾಂತಗಳಿಂದ ಪ್ರತಿನಿಧಿಗಳು ಆರಿಸಲ್ಪಡಬೇಕು. ಮುಸ್ಲಿಮರು, ಇತರರು ತಮ್ಮತಮ್ಮ ಪ್ರತ್ಯೇಕ ಪ್ರತಿನಿಧಿಗಳನ್ನು ಆರಿಸಬೇಕು. ಬ್ರಿಟಿಶ ಹಿಂದುಸ್ಥಾನವು ಈ ರೀತಿ ೪ ಶೀಖ, ೭೮ ಮುಸಲ್ಮಾನ ಮತ್ತು ೨೧೦ ಮುಸಲ್ಮಾನೇತರ (ಸಾಮಾನ್ಯ) ಹೀಗೆ ಒಟ್ಟು ೨೯೨ ಪ್ರತಿನಿಧಿಗಳನ್ನೂ ಸಂಸ್ಥಾನಗಳು (೧೦ ಲಕ್ಷ ಜನಸಂಖ್ಯೆಗೆ ೧ರಂತೆ) ೯೩ ಪ್ರತಿನಿಧಿಗಳನ್ನೂ ಆರಿಸತಕ್ಕದ್ದು. ಸದ್ಯದ ಪ್ರಾಂತಗಳಲ್ಲಿ ನಾವು ಈ ಕೆಳಗಿನಂತೆ ಮೂರು ಗುಂಪುಗಳನ್ನು ಸೂಚಿಸುತ್ತೇವೆ (೧) ಮುಂಬಯಿ, ಮದ್ರಾಸ, ಮಧ್ಯಪ್ರಾಂತ, ಬಿಹಾರ, ಒರಿಸಾ, ಸಂಯುಕ್ತ ಪ್ರಾಂತ (೨) ಪಂಜಾಬ, ಸಿಂಧ ಗಡಿನಾಡು (೩) ಬಂಗಾಲ, ಆಸಾಮ. ಆಯಾ ಗುಂಪುಗಳ ಪ್ರಾಂತಗಳು ಬೇಗನೇ ತಮ್ಮ ಪ್ರತಿನಿಧಿಗಳನ್ನು ಆರಿಸಬೇಕು

ಘಟನಾ ಸಮಿತಿಯ ಕೆಲಸ ಮುಗಿಯಲಿಕ್ಕೆ ಕಾಲ ಹಿಡಿಯುವದು. ಅಲ್ಲಿಯವರೆಗೆ ಕೇಂದ್ರದಲ್ಲಿ ಪೂರ್ಣ ಲೋಕಪ್ರತಿನಿಧಿಗಳ ಸರಕಾರವಿರಬೇಕಾದುದು ಉಚಿತ. ಅದರಿಂದ ಸರ್ವಾಧಿಕಾರಿಗಳು ಬೇಗನೇ ಜನರ ವಿಶ್ವಾಸಕ್ಕೆ ಪಾತ್ರರಿರುವ ಜನರಿಂದ ತಮ್ಮ ಸರಕಾರ ಪುನರ್ಘಟಿಸುವರು. ಯುದ್ಧಖಾತೆ ಸಹಿತ ಎಲ್ಲ ಖಾತೆಗಳು ಹೊಸ ಹಿಂದೀಮಂತ್ರಿಗಳಿಗೆ ಒಪ್ಪಿಸಲ್ಪಡುವವು

ಈ ನಮ್ಮ ಸೂಚನೆಗಳಂತೆ ಭಾರತೀಯರು ಸಹಕಾರದಿಂದ ವರ್ತಿಸಿದರೆ ಕಲ್ಯಾಣವಾದೀತು. ಇದಲ್ಲದೆ ಸ್ವಲ್ಪ ಸಮಯದಲ್ಲಿ ಬಿಡಿದಾಡಿದರೆ ಅನರ್ಥವಾದೀತು. ಸ್ವತಂತ್ರ ಹಿಂದುಸ್ಥಾನವು ಬ್ರಿಟಿಶ ಸಂಘರಾಜ್ಯದಲ್ಲಿ (ಕಾಮನ ವೆಲ್ತ)ಯಲ್ಲಿ ಉಳಿಯಬೇಕೆಂದು ನಮ್ಮ ಅಪೇಕ್ಷೆಯುಂಟು. ಆದರೆ ಭಾರತವು ಬ್ರಿಟನದ ಹೊರಗೆ ಹೋಗಬೇಕೆಂದು ನಿರ್ಣಯಿಸಿದರೆ ಅದಕ್ಕೆ ಹಿಡಿಯುವ ಇಚ್ಛೆ ನಮಗಿಲ್ಲ

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR. S. I

The Head Office and Branches of the Bank now accept
Season Deposits from three to six months at the following rates -

Three Months at 2¼% per annum

Six Months at 2½% per annum

No such deposit will be allowed to run beyond 30th September 1946

Coondapoor. K. VAMAN SHENAI.
4-3-1946 CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

ಜಿಲ್ಲಾ [illegible] ಸಿದ್ಧತೆಗಳು ಭರದಿಂದ [illegible] ಶ್ರೀ [illegible] ಶ್ರೀ [illegible]

ಹೆಣ್ಣು ಮಕ್ಕಳ [illegible] ಪರೀಕ್ಷೆಯ [illegible] ಪ್ರಕಟವಾಯಿತು ಇಲ್ಲಿಯ [illegible] ಶಾಲೆಯಿಂದ ೧೪ ಮಂದಿ ಪರೀಕ್ಷೆಗೆ [illegible] ೧೨ ಮಂದಿಯಲ್ಲಿ ೧೧ ಹುಡುಗಿಯರು [illegible] ೧೦ ಮಂದಿ [illegible]

[illegible]

[illegible]

[illegible]

[illegible]

[illegible]

[illegible]

ಸುಪೆ— [illegible]

[illegible]

ಹೊನ್ನಾವರ— (ತಾ ೧೬-೫-೪೬) [illegible]

ಜಾಹೀರ ನೋಟೀಸು.

ವಾಸುದೇವ ತಮ್ಮಯ್ಯ [illegible] ಬಾಳೇರಿ, ಸಾ॥ [illegible]

[illegible]

V T S Baleri

ಪ್ರಕಟಣೆ.

ನಂಬರ ೧೨೦ — [illegible] ಜಿಲ್ಲಾ ಮ್ಯಾಜಿಸ್ಟ್ರೇಟ, ಕಾನಡಾ [illegible] —

(೧) [illegible]
(೨) [illegible]
(೩) [illegible]

[illegible]

(೧) ಕಾನಡಾವೃತ್ತ, ಕುಮಟಾ (೨) ವಿಜಯ, ಕಾರವಾರ

[illegible]

ಕಾರವಾರ
ತಾ ೧೩-೫-೧೯೪೬

F. N RANA,
ಜಿಲ್ಲಾ ಮ್ಯಾಜಿಸ್ಟ್ರೇಟ, ಕಾನಡಾ

NOTIFICATION.

Applications are invited by 1—6—1946 for the temporary post of a Godown Inspector in the Kanara District on a monthly salary of Rs 125—5—150 plus Rs 75 P T A

I Applications should contain the following particulars

1 Name in full
2 Educational Qualifications
3 Caste
4 Special qualifications if any
5 Present occupation with pay (if in service)

II Persons already in Government service or in the service of Local Bodies are eligible for the post, but they should apply through the Heads of their Departments

III Minimum qualification is Matriculation Agricultural or Science Graduates or experienced men from the trade will be given preference

IV The Godown Inspector will have to tour almost continuously and inspect the various stocks of grains stored by Government throughout the District and report on their condition to the Mamlatdar and the Collector

V Applicants called for interview will have to come at their own expense

No 1905 (Estt)
Karwar 11-5-1946

F N. RANA,
Collector of Kanara

ಕೊಂಡು ಹೋಗಲು ಬಂದಿದ್ದನು. ಪರಸ್ಥಳದ ಇವನು ಕೊಡದಿದ್ದರೆ ಹೊತನ್ನು ಮುಟ್ಟುವ ಪರಿಗಳ ತಾನು ಬರಿ ಬಾಯಿಯಿಂದ ಬರಬೇಕಾದೀತೆಂದು ಅಕ್ಕಿ ತಳಿದು ರೂ ೮ ಇನಾಮು ಕೊಡಹೇಳಿದ್ದು ಸಾಗೂ ಹೀಗೂ ತ ೨ ದಾಟಿದನು! ಇದು ಹೀಗಾ ಇ ಆಗ ಅವನು ಪ್ರತ್ಯೇಕ ಕೊಡಬೇಕಾಯಿತು, ಇನಾಮಿನ ಈ ಉಪದ್ರವ ಎಂದು ನಿಲ್ಲುತ್ತದೋ ಏನೋ?

ಇಲ್ಲಿಯ ಸೀಧಾ ಅಂಗಡಿಯಲ್ಲಿ ಸಿಗುವ ಕುಚಗಿ ಅಕ್ಕಿಯಲ್ಲಿ ಮಣ್ಣು ಬಹಳ. ಮೇಲಾಗಿ ಅಕ್ಕಿಗೆ ಮುಗ್ಗಿದ ವಾಸನೆ ಬರುತ್ತದೆ! ಒಬ್ಬರು ಒಂದಿಷ್ಟು ಅಕ್ಕಿಯನ್ನು ಆಹಾರ ಮಂತ್ರಿಗಳಿಗೆ ಕಳಿಸಿಕೊಟ್ಟು ಇಂತಹ ಹೀನ ಅಕ್ಕಿಯನ್ನು ಜನರು ಹೇಗೆ ಉಣ್ಣಬೇಕೆಂದು ಕೇಳಿದ್ದಾರಂತೆ.

ಹಳ್ಳಿಗಳೊಳಗಿನ ಸೀಧಾ ಅಂಗಡಿಗಳ ಚಾಲಕರು ತಮ್ಮ ಕಾರ್ಡುಗಳನ್ನು ತಿಂಗಳ ಪ್ರಾರಂಭಕ್ಕೆ ಒಯ್ಯದೆ ಕೊನೆಯ ವಾರದಲ್ಲಿ ಒಯ್ಯುತ್ತಾರಂತೆ. ಆದರಿಂದ ತಿಂಗಳ ಕೊನೆಯ ವಾರದಲ್ಲಿ ಅಂಗಡಿಗಳಲ್ಲಿ ಗಲಾಟೆ ಬಹಳ ಆಗುತ್ತವೆ, ಮತ್ತು ಪೂರ್ಣ ಜನರಿಗೆ ಅವರ ಪಾಲಿನ ವಸ್ತುಗಳು ಸಿಗುವದಿಲ್ಲ! ಅವನ್ನು ಚಾಲಕರು ಕಪ್ಪು ಪೇಟೆಗೆ ಕಳಿಸಿಕೊಡುತ್ತಾರೆ! ತಿಂಗಳ ಪ್ರಾರಂಭಕ್ಕೇ ಸರಕು ಒಯ್ದರೆ ಮೇಲಿನ ಗಲಾಟೆಯೂ ತಪ್ಪುವದಾಗುತ್ತಿತ್ತು, ಕಪ್ಪು ಪೇಟೆಯ ವ್ಯಾಪಾರವೂ ಕಡಿಮೆಯಾಗುವದಾಗುತ್ತಿತ್ತು.

ಇಲ್ಲಿಯ ಕೋರ್ಟಿಗೆ ರಾ॥ ದೇಶಪಾಂಡೇ ಎಂಬುವರು ಸಿವ್ಹಿಲ ಜಡ್ಜರಾಗಿ ಬರುತ್ತಾರೆ. ರಾ॥ ಕಾಯ್ಕಿಣಿಯವರಲ್ಲ.

ಕರಿಗೆಯ ಮಾರವಾಡಿಯಲ್ಲಿ ಕಳ್ಳ ಕದಿಯುವ ವ್ಯಾಪಾರ ಬಹಳ ನಡೆಯುತ್ತಿದೆಯಂತೆ. ಕೆಲವು ದಿನಗಳ ಹಿಂದೆ ಇಲ್ಲಿಯ ೧ ಚಹಾ ಅಂಗಡಿಯಲ್ಲಿ ಧಾಡಿ ಮಾಡಿದಾಗ ೫೦ ಸೇರು ಸಕ್ಕರೆ ಸಿಕ್ಕಿತಂತೆ! ಅಂಗಡಿಯವನ ಮೇಲೆ ಈಗ ಖಟ್ಲೆ ಹಾಕಿದ್ದಾರೆ.

ಕಳೆದ ೩ ದಿನ ಶಾನಭೋಗರಿಗೆ ಪ್ಯಾಂಕ ಸಾಹೇಬರು ಬಹಿಷ್ಕಾರ ಮಾಡಿದ್ದರು. ಸದರಿ ಶಾನಭೋಗರ ೨ ತಿಂಗಳ ಸಂಬಳವನ್ನು ಸರಿಯಾಗಿ ಮಾಡದ್ದರಿಂದ ಸರ್ಕಾರ ಇನ್ನೆಷ್ಟು ದಿನ ಏನೋ ಮೇಲಧಿಕಾರಿಗಳಿಗೆ ಬರೆದು ಹಾಕಿದರೆಂತಲೂ, ಪ್ಯಾಂಕ ಸಾಹೇಬರು ಸರ್ಕಾರಿ ಇನ್ನು ಮುಂದಿನ ಪಿರ್ಯಾದಿಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸದೆ ಒಮ್ಮೆಲೆ ಶಾನಭೋಗರಿಗೆ ಕಳಿಸಿರುವ ಕ್ರಿಯೆ ಕಿರಿಕಿರಿಯಾಗಿ ಕಡ್ಲೆ ಊರವರು ಕೆಲವರು ಹೇಳುತ್ತಾರೆ. ಜಿಲ್ಲಾಧಿಪರುಗಳು ಇದೇನು ಪ್ರಕಾರವೆಂದು ನೋಡಬೇಕಾಗಿ ವಿನಂತಿಯಿದೆ.

ಕಡ್ಲೆ ಸೀಧಾ ಅಂಗಡಿಯಲ್ಲಿ ಬಹಳ ಕಿರ್ಕಿರಿ ನಡೆಯುತ್ತದೆಂದು ಜನರ ದೂರುಂಟು. ಕೊಂಕಣಸ್ಥರು ಸ್ತ್ರೀ ಅಂಗಡಿಗೆ ಬಂದು ಸಕ್ಕರೆ ಒಯ್ಯುವಾಗ ಅಂಗಡಿಯವರ ನಿಗ್ರಹ. ಯಾರಾದರೂ ಅಸ್ವಸ್ಥತೆಯ ಮೂಲಕ ಇಲ್ಲವೆ ಬೇರೆ ಅಡಚಣೆಯ ಮೂಲಕ ತಮ್ಮ ಕೂಪನು ಬೇರೆಯವರ ಹತ್ತಿರ ಕಳಿಸಿಕೊಟ್ಟಾಗ, ಅವರು ಸಕ್ಕರೆ ದರ ಚಿಮಣಿ ಎಣ್ಣೆ ಬಿಟ್ಟುಕೊಟ್ಟರೆ ಮಾತ್ರ ಅಕ್ಕಿ ಕೊಡುತ್ತಾರೆ! ನಿರಕ್ಷರಸ್ಥರು ಅಂಗಡಿಗೆ ಎಂದಾಗ ಅಂಗಡಿಯವರು ಅವರ ಕೂಪನುಗಳಲ್ಲಿ ಸಕ್ಕರೆ ಎಣ್ಣೆಗಳನ್ನೂ ಖರ್ಚು ಹಾಕಿಬಿಡುತ್ತಾರೆ! ಮತ್ತು ಅವನ್ನು ಹೋಟೆಲುಗಳಿಗೆ ಕಳಿಸಿ ಕಪ್ಪು ಪೇಟೆ ಮಾಡುತ್ತಾರೆ! ಈ ಬಗ್ಗೆ ಜನರು ಮಾಮಲೇದಾರರ ಕಡೆ ಒಂದೆರಡು ಸಾರೆ ದೂರುಕೊಂಡರಂತೆ. ಆದರೆ ಅದರ ಪ್ರಯೋಜನವೇನೂ ಆಗಲಿಲ್ಲವಂತೆ! ಜಿಲ್ಲಾಧಿಪರು ಚೌಕಶಿ ಮಾಡಬೇಕು.

ಸಿದ್ದಾಪುರ—

(ತಾ ೧೬-೫-೪೬) ಬೇರೂರ ಜಾತ್ರೆಯಲ್ಲಿ ಗಣಗಣೆ ಆಟ ಹಚ್ಚಲು ರಾ॥ ಮೊಬಳಿ ಗಣಪ ಭಟ್ಟರು "ಪರವಾನಗಿ" ಕೊಟ್ಟದ್ದು ಸುಳ್ಳಿರುತ್ತದೆಂದೂ, ಕೆಲವು ಸ್ವಾರ್ಥ ಸಾಧಕ ಅಧಿಕಾರಿಗಳ ಪ್ರೋತ್ಸಾಹದಿಂದ ದೇವಸ್ಥಾನದ ಮೊಕ್ತೇಸರರಲ್ಲಿ ಕೆಲವರು, ದೇವರಿಗೆ ಕಾಣಿಕೆ ಕೊಟ್ಟು ಗಣಗಣೆ ಆಟ ಹಚ್ಚಬಹುದಾಗಿ ಹೇಳಿ, ೫-೬ ಮಂಡಗಳನ್ನು ನಡಿಸಗೊಟ್ಟಿದ್ದರೆಂದೂ, ರಾ॥ ಗಣಪ ಭಟ್ಟರಿಗೆ ಇದು ತಿಳಿದ ಕೂಡಲೆ ಅವರು ಎಂದು ಆ ಮಂಡಗಳನ್ನು ತೆಗೆಸಿದರೆಂದೂ, ರಾ॥ ಭಟ್ಟರು ತಿರುಗಿ ಮನೆಗೆ ಹೋಗುತ್ತಲೇ ಮಂಡದವರು ಪುನಃ ಆಟ ಹಚ್ಚಿದ್ದರೆಂದೂ, ಇವೆಲ್ಲ ನಡೆಯುವಾಗ ತಾವು ಸ್ವತಃ ಹಾಜರಿದ್ದೆವೆಂಬುದಾಗಿ ಬೇರೂರಿನ ೮ ಮಂದಿ ಗೃಹಸ್ಥರು ತಿಳಿಸುತ್ತಾರೆ.

(ತಾ ೧೭-೫-೪೬) ಈ ತಾಲೂಕಿನ ಕೋಡಿಕಲ, ಹಿಪ್ಪಿ, ಕಾಳೇಬೀರ, ಕಿಲಾರ, ಕೊರ್ಲಕೈ, ದಾಸನಕೊಪ್ಪ, ಹೆಗ್ಗೋಡ ಮತ್ತು ಮುಲವಳ್ಳಿ ಈ ೮ ಹಳ್ಳಿಗಳ ಜನರ ಬಗ್ಗೆ ಮಾವಿನಗುಂಡಿಯಲ್ಲಿ ಒಂದು ರೇಶನ ದರದ ಅಂಗಡಿಯುಂಟು. ಈ ಅಂಗಡಿಯ ಚಾಲಕರು ಮೊಗ್ಗಾ ಗ್ರಾಮದವರು. ಅವರ ವಾಸ್ತವ್ಯ ಮೊಗ್ಗಾದಲ್ಲೇ ಇದೆ. ಮೊಗ್ಗಿಯಲ್ಲಿ ಅವರದೊಂದು ಅಂಗಡಿಯೂ ಉಂಟು. ಮಾವಿನಗುಂಡಿಯಿಂದ ಮೊಗ್ಗಾ ೬ ಮೈಲು ಅಂತರದಲ್ಲಿದೆ. ಅದರಿಂದ ಮಾವಿನಗುಂಡಿಯ ಯೋಗ್ಯ ಪಡಪ ಅಂಗಡಿ ತೆರೆಯಲು ಅಥವಾ ಮುಚ್ಚಲು ನಿಶ್ಚಿತ ಕಾಲವಿಲ್ಲ. ಅಂಗಡಿಯವರಿಗೆ ಪುರಸೊತ್ತು ದೊರೆತಾಗ ಮತ್ತು ಇಷ್ಟವಿದ್ದಾಗ ಅವರು ಬರುತ್ತಾರೆ ಮತ್ತು ಅಂಗಡಿ ತೆರೆಯುತ್ತಾರೆ. ಆದರಿಂದ ಸೀಧಾ ಜಿನಸು ತೆಗೆದುಕೊಂಡು ಹೋಗಲು ೬-೮ ಮೈಲು ದೂರದಿಂದ ಬಂದ ಜನರು ಅಂಗಡಿಯ ಬಾಗಿಲಲ್ಲಿ ತಾಸುಗಟ್ಟಲೆ ತಪಸ್ಸು ಮಾಡಬೇಕಾಗುತ್ತದೆ! ಇಂದಿನ ಉದಾಹರಣೆಯೇ ತೆಗೆದರೆ ಇಂದು ಮಧ್ಯಾಹ್ನ ೧ ಘಂಟೆಯ ವರೆಗೂ ಅಂಗಡಿ ತೆರೆಯಲಿಲ್ಲ! ಕಳ್ಳಪೇಟೆ ಮಾರಾಟ ನಡೆದಿದ್ದೇ ಬಿಟ್ಟಿ! ಓದು ಬರಹ ಬಾರದ ಜನರು ಸೀಧಾ ಒಯ್ಯಲು ಬಂದಾಗ ಅವರಿಗೆ ಕೆಲವೊಂದು ಸಕ್ಕರೆ ಎಣ್ಣೆ ಕೊಟ್ಟು ಕೂಪನುಗಳಲ್ಲಿ ಪೂರ್ತಿ ಜಿನಸು ಖರ್ಚು ಬರೆಯುತ್ತಾರೆ! ಯಾರಾದರೂ ರೇಶನ ದರ ಪ್ರಕಾರ ಅಡಚಣೆಯ ಮೂಲಕ ಸೀಧಾ ತರಲು ಬೇರೆಯವರಿಗೆ ಕಳಿಸಿಕೊಟ್ಟರೆ ಅವರು ಆ ಜನರಿಗೆ ಸೀಧಾ ಕೊಡುವದಿಲ್ಲ! ಜಿಲ್ಲಾಧಿಪರು ಈ ಅಂಗಡಿಯನ್ನು ಎರಡಪ್ಪಣೆ ಕೊಡಬಹುದೇ?

ಮುಂಡಗೋಡ—

(ತಾ ೧೭-೫-೪೬) ಇಲ್ಲಿಯ ದವಾಖಾನೆಯಲ್ಲಿ ರಾ॥ ಮಾಗಳ್ಕರ ಎಂಬ ಡಾಕ್ಟರರು ಬಂದಿದ್ದಾರೆ. ವಾರದಲ್ಲಿ ೪ ಯಾ ೫ ದಿನ ಮಾತ್ರ ಅವರು ಊರಲ್ಲಿರುತ್ತಾರೆ! ಇನ್ನುಳಿದ ದಿನಗಳಲ್ಲಿ ಹೊರಗೆಲ್ಲೋ ಹೋಗುತ್ತಾರೆ! ಆಗ ಮದ್ದಿಗಾಗಿ ಬಂದ ಜನರ ನಿಷ್ಫಲದೆ ತಿರುಗಿ ಹೋಗಬೇಕಾಗುತ್ತದೆ! ದವಾಖಾನೆಗೆ ಬಂದವರು ಕೇಳಿದರೆ ಡಾಕ್ಟರರು ರೋಗಿಗಳನ್ನು ನೋಡಲು ಹಳ್ಳಿಗಳಿಗೆ ಹೋಗಿದ್ದಾರೆಂದು ಕಂಪೌಂಡರರು ಹೇಳುತ್ತಾರೆ! ಆದರೆ ಆ ಡಾಕ್ಟರರು ಮೋಟರಿನಿಂದ ಮೋರೆ ಮುಚ್ಚಿ ಇಲ್ಲವೆ ಕಾರಿನ ದಿನ ನೋಡಿ ಬಂದಾಗಲೆಂದ ಬರೆಯುವವರು ಕಾಣುತ್ತಿಲ್ಲ! ಮೇಲಧಿಕಾರಿಗಳು ಇತ್ತ ಲಕ್ಷ್ಯಕೊಡಬೇಕು.

ಕ್ಯಾಸನೂರಿನ ದ್ವಿತೀಯ ಪ್ರಸನ್ನನು ಮುಕ್ತ ತರುಣರುಗಳೊಂದು ಬಂದು ಮೂಲ ಒಂದಿಗೆ ಪತಿಕೊಂಡಿದ್ದನು. ಕಳೆದ ೨ ವರ್ಷ ಆ ಹಣ ಪತ ಎರಡು, ಈ ವರ್ಷ ಆ ರೈತನು ಅದನ್ನು ಸಗ ಮಾಡಲು ಸಿದ್ಧನಾದನು. ದಾನಪ್ಪನವರು ಈ ಸುದ್ದಿ ತಿಳಿದೊಂದು, ಮುಂದು ಎರಡ ಹೊಲವನ್ನು ಬಂಜರ ಕೆಡಿಸಿದ್ದರಿಂದ ತೀರ್ವ ತತ್ವನಕ ಅವರಲ್ಲಿ ಸಾಗುವಳಿ ಮಾಡದಂತೆ ಸದಿಲ್ಲೆಂದು ಆ ರೈತನಿಗೆ ಗದರಿಸಿ ರೂ ೬ ತೀರ್ವ ಬಾಕಿ ಕೊಡಲು ಹೇಳಿದ್ದಾರಂತೆ. ಆದರೆ ಸಾವಿರ ಮಾತ್ರ ಕೊಡಲಿಲ್ಲ! ಸಾವಿರ ಮೇಲಿಂದ (ಮೇಲಾಮಂಡಲದಿಂದಲೇನ?) ಬರುವದಾಗಿಯೂ ಬಂದ ಮೇಲೆ ಕೊಡುತ್ತೇನೆಂದು ಆ ರೈತನಿಗೆ ಹೇಳುತ್ತಿದ್ದಾರಂತೆ!

ಯಲ್ಲಾಪುರ—

(ತಾ ೧೮-೫-೪೬) ಇಲ್ಲಿಯ ಮಾಮಲೇದಾರರು ರಾ॥ ಕಿಲ್ಲೇದಾರ ಅವರಿಗೆ ವಿಠ್ಠಲಂದಿಗೆ ವರ್ಗವಾಗಿದ್ದು ರಾ॥ ಕೆ. ಆರ್. ನಾಯ್ಕರು ಇಲ್ಲಿ ಮಾಮಲೇದಾರರಾಗಿ ಬರುತ್ತಾರೆ. ಕಿಲ್ಲೇದಾರರಿಗೆ ಹೀಗೆ ಒಮ್ಮೆಲೇ ವರ್ಗವಾದದ್ದು ಕೇಳಿ ಎಲ್ಲ ಬೇರೆ ಜನರು ಬೇರೆ ಬೇರೆ ಬಗೆಯ ತರ್ಕ ವಿತರ್ಕಗಳನ್ನು ಮಾಡಹತ್ತಿದ್ದಾರೆ.

ತಮ್ಮ ಅವಧಿಯಲ್ಲಿ ಸರಕಾರಿ ನೌಕರರ ವ್ಯವಸ್ಥೆಯಲ್ಲಿ ಮುಂತಾದ ಕೈಲಾಸವಧಿ ಘಟನೆಗಳ ದೊಡ್ಡ ದುರುಪಯೋಗವು ಆಯಿತೆ ಜನರ ದಿಲ್ಲಾಧಿಕಾರಿಗಳಿಗೆ ಈ ಹಣ ಹಂಚಿಕೆಯು ಮತ್ತು ಯೋಜನೆಗಳು ಎಂಬವು ಇಲ್ಲಿ ಹಾಡಿನ ಒಂದೇ ಬಂದು ಸಂಗತಿಯೆಂದು ಓದುಗರಿಗೆ ಸಹಜವಾಗಿ ತಿಳಿಯುವಂತಿದೆ. ರಾ॥ ಕಿಲ್ಲೇದಾರ ಮಾಮಲೇದಾರರು ತಮ್ಮ ಅನುಭವಕ್ಕೆ ಬಂದ ಸಂದರ್ಭ ಮತ್ತು ಸರಕಾರಿ ಎತ್ತರದ ಕಾರ್ಯಾಲಯದ ಮತ್ತು ಉದ್ಯಾನದ ಕಚ್ಚಲು ಪ್ರೋತ್ಸಾಹ ಕೊಟ್ಟು ೨೦೦-೪೦೦ ರೂ ಅವರಿಗೆ ಮುಂದಾಗಿ ಕೊಟ್ಟರು. ಆ ಗೃಹಸ್ಥನು ಬಹಳ ಕಷ್ಟದಿಂದ (ನಮ್ಮ ಬಡಿದ) ಮತ್ತು ಹುಲ್ಲು ಹೊಡೆಯುವ ಉದ್ಯೋಗ ಕಯಿಕೊಂಡಿದನು. ಈ ಉದ್ಯೋಗದಲ್ಲಿ ದಕ್ಷ ಸಂಸ್ಥೆಯನ್ನು ಸರಕಾರದಲ್ಲಿಂದು ಸರಕಾರಿ ಅಧಿಕಾರಿಗಳ — ಕೆಲ ಏಕ ಶಿಕ್ಷಣ ಕಳೆದ ವರ್ಷ ೧೦೦೦ರೊಳಗಿನ ಧಕ್ಕೆ ಸಾಕಷ್ಟು ಹೊಡೆದದ್ದು ನಡೆದ — ಅಧಿಕಾರಿಯು ಸ್ವಸ್ಥ ಕಾರಣದಿಂದ ಆದರಿಂದ ಮೇಲಿನ ಉದ್ಯೋಗ ಎಷ್ಟು ಕೊಡಬೇಕಾಯಿತು. ಆದರೆ ರಾ॥ ಕಿಲ್ಲೇದಾರರು ಆ ಉದ್ಯೋಗ ಕಟ್ಟಿಸಲಿಕ್ಕೆ ಸರಕಾರ ಮೊಕ್ತದಿಂದ ಮುಂಗಡ ಕೊಟ್ಟು ಹಣ ವಸೂಲ ಮಾಡುವ ಹೇಗೆಂದು ಪ್ರಶ್ನೆ ಹುಟ್ಟಿತು (ಎಲ್ಲಾ ಕಟ್ಟಿಸಲು ೩೦೦೦ ೪೦೦೦ ರೂ ಮುಂಗಡ ಪಡೆದ ಜನರ ಬಡತನ ಎಷ್ಟಿರಬೇಕೆಂದು ಊಹಿಸಲಿಕ್ಕೆ ಬರುವಂತಿದೆ?) ರಾ॥ ಕಿಲ್ಲೇದಾರರು ಈ ಹಣ ವಸೂಲ ಮಾಡುವ ಬಗ್ಗೆ ಕೇಳಿದ ಅನುಭವದ ಸಂಗತಿಯಿಂದ ಸದರಿ ಉದ್ಯೋಗ ಫಲಿಸಿತು. ಕಟ್ಟಿಕೊಂಡರು ಉದ್ಯೋಗವು ಅಲ್ಲದೆ ರಕ್ಷಣೆ ರೂ ವಿಮಲವಿತ್ತು. ಸಾವಿರ ಚೀಲಗಳನ್ನು ಸಹಜವಾಗಿ ಹಿಡಿಯುವಷ್ಟು ದೊಡ್ಡದಿದ್ದ ಹೊಲ ಕಾಯ್ದೆ ಆದರೆ ಅವರಿಗೆ ಹುಲ್ಲು ಹಂಚಿದ ಕೆಲ ಧಕ್ಕೆ ನಿಲ್ಲಿಸುವ ಯುಗಾದಿಯ ಸಮ ಬಗೆ ಇಲ್ಲ ಮಳೆಯಾಗಿ ಈ ಉದ್ಯೋಗದಲ್ಲಿ ಹಾನಿ ಕೊಡಲಾಯಿತು. ಬಗೆ ಇಲ್ಲಿ ಧರ್ಮವಿಶಾಲವರು ಯಾರು? ರಾ॥ ಕಿಲ್ಲೇದಾರರು ಅವರನ್ನು ವಿಚಾರಿಸದೆ ಉದ್ಯೋಗಕ್ಕೆ ಸ್ವತಂತ್ರರಿಸಿಕೊಂಡರು. ಈ ಉದ್ಯೋಗ ವಿಷಯದಲ್ಲಿ ಉದ್ಯೋಗದಿಂದ ಅದರ ಇಲ್ಲಿನ ಮಕ್ಕಳು ಧರ್ಮಾರ್ಥ ಆಗದವರಲ್ಲದೆ ಅವರನ್ನು ರಾ॥ ಕಿಲ್ಲೇದಾರರು ಬರಿದು ಕಟ್ಟಿಸಿ ಉತ್ಸಾಹದಿಂದ ಹೊಸ ಉದ್ಯೋಗಕ್ಕೆ ಧನ ಸ್ವಾತಂತ್ರ್ಯದ ಬಗ್ಗೆ ಬೇಲಿ ಗಳ್ಳು ಆಡಿಯೊಂದಿಗೆ ತೀರಿಸಲಿ ಕೊಟ್ಟರಂತೆ!! ಈ ಬಗ್ಗೆ ಅವರು ೩ ಗಾಡಿಗಳನ್ನು ಕೊಡಗಿಸಿದ್ದರು. ಆ ಗಾಡಿಗಳ ನಾಲಿಕೆ ೨ ರಾ॥ ಕಿಲ್ಲೇದಾರರ ಪ್ರಭಾವಳಿಯೊಳಗಿನವರೇ ಬೇರೆ ಗಾಡಿಕಾರರಿಗೆ ಅವರು ಕರೆಯಲಿಲ್ಲ. ಎಷ್ಟು ಹಣ ಕಳಿಸ್ಯಂತು ಧನ ಸ್ವತಂತ್ರಿಸಿಕೊಟ್ಟರೆಂದು ಹೊರಗಿನ ಜನರಿಗೆ ಅವರು ಕೇಳಲೂ ಇಲ್ಲ. ಹೊರಗಿನ ಗಾಡಿಕಾರರಿಗೆ ಸ್ವತಂತ್ರದ ಗುತ್ತಿಗೆ ಕೊಟ್ಟಿದ್ದರೆ ರೂ ೧೨೦ ರೊಳಗೆ ಮುಗಿದು ಬರುತ್ತಿತ್ತು. ಅದಕ್ಕೆ ರಾ॥ ಕಿಲ್ಲೇದಾರರು ಸುಮಾರು ೮೦ ರೂ ನಷ್ಟ ಮಾಡಿದರು! ಹೀಗೆಲ್ಲ ಅಂಧಾಧುಂದಿ ನಡೆಯುವಲ್ಲಿ ಲಕ್ಷ್ಯವಹಿಸಿ ರೂಪಾಯಿಗಳ ಮಾಡಿ ಬರಲೆ ತ್ಯಾಗವಿಲ್ಲವೇ?

ಕಾರವಾರ—

(ತಾ ೧೮-೫-೪೬) ಪರೀಕ್ಷೆಗಿಂತ ಪೂರ್ವದಲ್ಲೇ, ಅಂದರೆ ಕಳೆದ ಮಂಗಳವಾರವೇ ೧೫ ಸಂಜೆಯವರು ೧೯ ರಿಂದ ಕಡವಾಡ ಜಿಲ್ಲಾಧಿಪತಿಗಳ ಅಧಿಕಾರ ವಹಿಸಿಕೊಂಡರು.

ಮೊನ್ನೆ ಮೊನ್ನೆ ವಿನಾಯಕ ಉದ್ಯೋಗಕ್ಕೆ ಯಲ್ಲಾಪುರದಿಂದ ಅಕ್ಕಿಯೂ ೩ ಹಡಗಿನಿಂದ ಧಕ್ಕೆಗೂ ಬಂದಿತ್ತು. ಆಗ ಅಕಸ್ಮಾತ್ ಇಲ್ಲಿಯ ವಿಭಾಗದ ಮಾಮಲೇದಾರರು ಅಲ್ಲಿ ಹೋಗಿದ್ದರು. ಅವರು ಕೆಲವು ಅಕ್ಕಿಯ ಚೀಲಗಳನ್ನೂ ಕೆಲವು ಧಕ್ಕದ ಚೀಲಗಳನ್ನೂ ಒಳೆದು ನೋಡಿದರಂತೆ. ಯಲ್ಲಾಪುರದಿಂದ ಬಂದ ಅಕ್ಕಿಯು (ರತ್ನಾಗಿರಿಯದು ಚೀಲ ೩೦ ಸಾಯ ರಿಗೆ ಏರಬೇಕು) ಪ್ರತಿಯೊಂದು ಚೀಲದಲ್ಲಿ ೪ ರಿಂದ ೬ ಸೇರು ಅಕ್ಕಿ ಕಡಿಮೆ ಇತ್ತಂತಲೂ, ಹುಬ್ಬಳ್ಳಿಯಿಂದ ಬಂದ ಧಕ್ಕದ ಪ್ರತಿ ಚೀಲದಲ್ಲಿ ೪ರಿಂದ ೬ ಸೇರು ಧಕ್ಕ ಹೆಚ್ಚು ಇತ್ತೆಂತಲೂ ನೋಡಿದವರೊಬ್ಬರು ಹೇಳುತ್ತಾರೆ. ಯಲ್ಲಾಪುರದ ಮಾಲ ಪೇಟಿದಾರರು ಗಿರಣಿಗಳಿಂದ ಅಕ್ಕಿ ಒಟ್ಟಿಸಿಕೊಳ್ಳುವಾಗಲೇ ಅಳತೆ ಕಡಿಮೆ ತಕ್ಕೊಂಡರೋ ಅಥವಾ ಗಿರಣಿಯಿಂದ ಅಕ್ಕಿ ಒಪ್ಪಿಸಿಕೊಂಡ ಮೇಲೆ ಇಲಿಗಳ ಬಾಧೆಯಾದ ತೀರಿತೋ ತಿಳಿಯದು! ಹುಬ್ಬಳ್ಳಿಯಿಂದ ಬಂದ ಚೀಲಗಳಲ್ಲಿ ಹೆಚ್ಚಿಗೆ ಬಂದ ಧಕ್ಕ ಶ್ರಮದಿಂದ ಹೆಚ್ಚಿಗೆ ತಕ್ಕೊಂಡ ಧಕ್ಕ ನಿಲ್ಲುತ್ತದೆ. ಸುಡೆಯುವವರು ಧೈರ್ಯದಿಂದ ಎಷ್ಟು ಸುರಿಯುತ್ತಾರೆ ನೋಡಿರಿ.

ಕಳೆದ ಸಾ ಸಕ್ಕೆ "ಹಿಂದೀ ಪ್ರಚಾರ" ಪತ್ರದ ಮಂಡಳಿಯಲ್ಲಿ ಇಲ್ಲಿಯ ಹಿಂದೀ ಪ್ರಚಾರ ಸಂಘದ ವಾರ್ಷಿಕೋತ್ಸವ ರಾ॥ ವಾಮನ ಶೇಣವಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಳೆದ ೮ ವರ್ಷಗಳಲ್ಲಿ ಸಂಘದವರು ೧೦೦೦ರಷ್ಟು ಹೆಚ್ಚಿಗೆ ಜನರಿಗೆ ಹಿಂದಿ ಕಲಿಸಿದ್ದಾರೆಂದು ಹಿಂದೀ ಪ್ರಚಾರಕ ರಾ॥ ಜೋಶಿಯವರು ತಮ್ಮ ವರದಿಯಲ್ಲಿ ನಮೂದಿಸಿದ್ದಾರೆ. ೧೯೪೫ ನೇ ವರ್ಷದ ಹಿಂದೀ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯೊಳಗೆ ಉತ್ತೀರ್ಣರಾದ ೧೧ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಗೆ ಬಹುಮಾನಗಳನ್ನು ಕೊಟ್ಟರು. ಅಮೇಲೆ ಮನರಂಜನೆಯ ಕಾರ್ಯಕ್ರಮ ನಡೆಯಿತು. ಕು॥ ಲಲಿತಾ ಭಟ್ಟ ಎಂಬಾಕೆಯು ಬಂದಿಯಲ್ಲಿ "ಕಲ್ಪನಾ ಲಕ್ಷ್ಮೀ" ಎಂಬ ವ್ಯಾಖ್ಯಾನದ ತೋರಣ ಮಾಡಿದಳು. ಅವಳಿಗೆ ಸಂಘದವರು ಪ್ರವೇಶ ಪರೀಕ್ಷೆಯ ಅಭ್ಯಾಸದ ಎಲ್ಲ ಪುಸ್ತಕಗಳನ್ನು ಬಕ್ಷೀಸ ಕೊಡಲು ನಿಶ್ಚಯಿಸಿದ್ದಾರೆ.

ಹಳಗಿಯ ಯೋಗ್ಯ ದರದ ಅಂಗಡಿಯಲ್ಲಿ ಚಿಮಣಿ ಎಣ್ಣೆ ಮತ್ತು ಸಕ್ಕರೆ ಕೊಡಲು ನೇಮಿಸಲ್ಪಟ್ಟ ಜನಾರ್ದನ ನೆಂಬವನು ಅಂಗಡಿಯ ಬಾಗಿಲದಿಂದ ೧೦ ಮಾರು ಅಂತರದಲ್ಲಿ ಮೇಜು ಇಟ್ಟುಕೊಂಡು ಕೊಡುತ್ತಾನೆ! ಆದರೆ ಜನರು ಅಂಗಡಿಯೊಳಗೆ ಪ್ರವೇಶ ಮಾಡುವಂತಿಲ್ಲವಂತೆ! "No admission" ಎಂಬ ಪಾಟಿ ಅಂಗಡಿ ಬಾಗಿಲಿಗೆ ಹಚ್ಚಿದ್ದಾರೆ. ಜನರು ಈ ಜನಾರ್ದನನಿಗೆ ಹಣ ಹೇಗೆ ಕೊಡಬೇಕು? ಎಣ್ಣೆ-ಸಕ್ಕರೆಗಳನ್ನು ಹ್ಯಾಗೆ ತಕ್ಕೊಳ್ಳಬೇಕು? ಇನ್ನೊಂದು ಸಂಗತಿ ಈ ಅಂಗಡಿಯಲ್ಲಿ ಸಕ್ಕರೆ ಹಂಚುವಿಕೆಯಲ್ಲಿ ಬಹಳ ಪಕ್ಷಪಾತವಾಗುತ್ತಿದೆ. ಅಂಗಡಿಯ ಪದಾಧಿಕಾರಿಯವನಿಗೆ ತಲಾ ೧ ರತ್ತಲ ಸಕ್ಕರೆ ಸಿಗುತ್ತದೆ! ಅನ್ಯ ಜಾತಿಯವರ ದರೆ ೪ ಮಂದಿಗೆ ಅರ್ಧ ರತ್ತಲ ಸಕ್ಕರೆ ಕೊಡುತ್ತಾರೆ! ಅಧಿಕಾರಿಗಳು ಇದರ ಚೌಕಶಿ ಮಾಡಬೇಕಾಗಿ ವಿನಂತಿ.

ಗೋಕರ್ಣ—

(ತಾ ೧೬-೫-೪೬) ಚಿಮಣಿ ಎಣ್ಣೆಯ ದರ ಇಳಿದ ಜಿಲ್ಲಾಧಿಪರ ಹುಕುಮು ಪ್ರಸಿದ್ಧವಾಗಿದ್ದರೂ ಇಲ್ಲಿಯ ಸೀಧಾ ಅಂಗಡಿಯವರು ಹಿಂದಿನ ದರದಲ್ಲಿಯೇ ಮಾರುತ್ತಾರೆ. ಇಲ್ಲಿಯ ಸೀಧಾ ಅಂಗಡಿಯವರಿಗೆ ಸಿಕ್ಕರಬೇಕು. ಆದರೂ ಅವರು ಹಿಂದಿನ ಮಾಡುವರು ಪರಿಗಣಿಸದೆ ಎಣ್ಣೆ ವಾರಕ್ಕೆ ಒಮ್ಮೆ ಕೊಟ್ಟು ಇಂದಿನಿಂದ ಮಾತ್ರ ಹೊಸ ದರ ಅನುಸರಿಸಲಿಕ್ಕೆ ತಿಂದಿದ್ದಾರೆ.

ಶಿರಶಿ — (ತಾ. ೧೧-೩-೧೯೪೬) ಕಳೆದ ಫೆಬ್ರುವರಿಯಲ್ಲಿ ನಡೆದ ದ॥ ಭಾ॥ ಹಿಂ. ಪ್ರಚಾರ ಸಭೆಯ ಪ್ರಥಮ ಪರೀಕ್ಷೆಯಲ್ಲಿ ಇಲ್ಲಿಯ ಜಯವಂತ ಗಾಯತೊಂಡೆ ಎಂಬ ವಿದ್ಯಾರ್ಥಿಯು ಇಡೀ ದಕ್ಷಿಣ ಭಾರತದಲ್ಲಿ ೧ನೇ ನಂಬರಕ್ಕೆ ಬಂದಿದ್ದಾನೆ. ರಾಷ್ಟ್ರ-ಭಾಷಾ [illegible] ಪರೀಕ್ಷೆಯಲ್ಲಿ ಮುಂದಿನವನು ಬ ವಿದ್ಯಾರ್ಥಿ ೩ನೇ ಸ್ಥಳಕ್ಕೆ ಬಂದಿದ್ದಾನೆ.

ಹುಡುಗರಲ್ಲಿ ಸ್ಪರ್ಧೆ ನಾಸಿಕದಲ್ಲಿ ಒಂದು ಗಾಂವಠಿ ಶಾಲೆಯುಂಟು ಶಾಲೆಯು ಅದಕ್ಕೆ ನೋಡಿದರೆ ನಗೆ ಬರುತ್ತದೆ! ಎಲ್ಲ ಕೆಲಸ ಶಿಕ್ಷಕನೇ ಮಾಡಬೇಕು. ಶಾಲೆಯ ಪ್ರಯೋಜನ ಶಿಕ್ಷಕನಿಗೂ ತನ್ನ ಮಕ್ಕಳಿಗೂ ಇಲ್ಲೆಂಬಂತೆ ಊರ ಜನರು ವರ್ತಿಸುತ್ತಾರೆ!

ಜಾಹೀರ ನೋಟೀಸಿಗೆ ಉತ್ತರ.

ಮಹಾದೇವಿಬಾಯಿ ಕೋಂ ಗಣಪ ನಾಯ್ಕ ಇವರು ತಾ. ೫ ೩-೪೬ರಲ್ಲಿ ಬರೆದು ತಾ. ೬-೩-೪೬ನೇ "ಕಾನಡಾವೃತ್ತ"ದಲ್ಲಿ ಪ್ರಕಟಿಸಿದ ಜಾಹೀರ ನೋಟೀಸಿಗೆ ಅವರ ತಾಯಿಯಾದ ಗಂಗಮ್ಮಾ ಕೋಂ ದೇವಪ್ಪ ನಾಯ್ಕಳು ಇವರ ಮೂಲಕ ತಿಳಿಸುವದೇನಂದರೆ:—

ನನ್ನಲ್ಲಿ ಜನಿಸಿದ ಮಕ್ಕಳಲ್ಲಿ ಇಬ್ಬರು ಜೀವಂತವಿದ್ದು ಅವರಲ್ಲಿ ೧ನೇಯವನು ಗಂಡು ಮಗನಾದ ನಾಗಪ್ಪನು, ೨ನೇಯವಳು ಹೆಣ್ಣು ಮಗಳಾದ ಮಹಾದೇವಿಯು ನನ್ನ ಪತಿಯ ಮರಣದ ಪೂರ್ವದಿಂದ ಅಜಮಾಸ ೨೦-೨೨ ವರ್ಷಗಳಿಂದ ನನಗೆ [illegible] ಎಚ್ಚರ ತಪ್ಪುವ ರೋಗದಿಂದ ಪೀಡೆಯುಂಟಾಗುತ್ತಿತ್ತು. ಆದರೆ ಅದು ೧೨-೧೩ ವರ್ಷದಿಂದ ಆಗುವದಿಲ್ಲ. ಅದು ಆರೋಗ್ಯವಿದೆ. ನಾನು ೭೦ ವರ್ಷದವಳಿದ್ದು ನನ್ನ ಪ್ರಾಯ ಈಗ ೬೦ರಲ್ಲಿ ಇದೆ. ನನಗೆ ಆ ಪೀಡೆ ಆಗುವದಾದರೂ ನಾನು ಹೇಳುವದನ್ನು ಅರ್ಥಮಾಡಿಕೊಳ್ಳುವಷ್ಟು [illegible] ನಿರೋಗಿಯಾಗಿ ಇರುತ್ತೇನೆ. ನನ್ನ ಹಿತವನ್ನು ತಿಳಿದುಕೊಂಡು ನಡೆಯಲು ಬುದ್ಧಿ ಮತ್ತೆ ನನಗಿದೆ. ನನ್ನ ಪತಿಯ ಮರಣದ ನಂತರ ನಾನು ನನ್ನ ಮಗನ ಅಂಗಡ ಜೀವಿತ ಕಾಲಕ್ಷೇಪ ಮಾಡಬೇಕೆಂತಾ ಮಾಡಿದರೆ ನನ್ನ ಮಗನು ಅದನ್ನು ದುಸ್ಸ್ವಾರ್ಥ ಮಾಡಿದನು. ಕಾರಣ ಅವನನ್ನು ಬಿಟ್ಟು ನನ್ನ ಬಾಬತು ಪೂರಾ ಜರ-ಜಿನಸು ಸಹಿತ ನನ್ನ ಮಗಳಾದ ಸದರಿ ಮಹಾದೇವಿಯೊಡನೆ ಉಳಿಯಹತ್ತಿದೆನು, ಆದರೆ ಮಗಳು [illegible] ನನ್ನನ್ನು ನಂಬಿಸಿ ನನ್ನ ಬಿಡಿ ಹಣದ ದಾಗಿನ [illegible] ವಶಪಡಿಸಿಕೊಂಡು ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಲಿಕ್ಕೆ ನಾನು ಅನುಕೂಲಳಾಗಲಿಲ್ಲೆಂತ ನನ್ನ ಮಗಳು ನನ್ನನ್ನು ಅನಾದರದಿಂದ [illegible], ಬೈದು, ಬಗೆಬಗೆಯಿಂದ ಪೀಡಿಸಿ ತೊಂದರೆ ಕೊಡುತ್ತಿದ್ದಳು. ಆದ್ದರಿಂದ ಒಂದು ವರ್ಷ ಅವಳ ಸಂಗಡ ನಡೆಸಿದ ಬಾಳ್ವೆಯು ಘೋರ ತರದ್ದಾಗಿ ತೋರಿತು. ಆದಕಾರಣ ಈಗ ೨ ವರ್ಷಗಳಿಂದ ನನ್ನ ಪ್ರೀತಿಯ ಮಗನಾದ ನಾಗಪ್ಪನಲ್ಲಿ ಸೇರಿಕೊಂಡು ಬಾಳ್ವೆ ಮಾಡುತ್ತೇನೆ. ನಿರ್ಧನಳಾದ ನನ್ನನ್ನು ಅವನು ತಿರಸ್ಕರಿಸದೆ ತಾಯಿ ಎಂಬ ಭಾವನೆಯಿಂದ ನನ್ನ ಶುಶ್ರೂಷೆ ಸೇವೆ ಮಾಡಿ ನನ್ನನ್ನು ಸಂತೋಷಪಡಿಸುತ್ತಾನೆ. ನನಗೆ [illegible] ಸ್ಥಾವರಾಸ್ತಿಯ ಉತ್ಪನ್ನ ಸರಿಯಾಗಿ ನನಗೆ ಸಿಗದಿದ್ದರೂ ತನ್ನ ಉದರದಿಂದ ಖರ್ಚು ಮಾಡಿ ನನ್ನ ಪ್ರತಿದಿನ [illegible] ಗೃಹಕ್ಕೆ ಬೇಕಾಗುವದನ್ನೆಲ್ಲ ಪೂರೈಸಿ ನನ್ನನ್ನು ಸುಖಿಯನ್ನಾಗಿ ಮಾಡಿರುವನಲ್ಲದೆ ನನ್ನ ಅಪ್ಪಣೆಯನ್ನು [illegible] ನಡೆಸಿಕೊಂಡು ಬಂದಿರುತ್ತಾನೆ. ಮಗನಿಂದಲೂ, ಮಗಳಿಂದಲೂ [illegible] ನನ್ನನ್ನು ಪ್ರೇಮದಿಂದಲೂ ಭಕ್ತಿಯಿಂದಲೂ ಅವನೂ ಅವನ ಹೆಂಡತಿಯೂ ನಡೆಸಿಕೊಳ್ಳುತ್ತಾ ಬರುವದು ನನ್ನ ಸುಕೃತವೆಂತಾ ತಿಳಿಯುತ್ತೇನೆ. ಅವರು ನನ್ನ ಹೊಟ್ಟೆಯ ಮಕ್ಕಳೆಂತಾ ಭಾವನೆಯಾಗುತ್ತದೆ. ನನ್ನ ಮಗಳು ನನ್ನ ಜರ ಜಿನಸನ್ನು ಪೂರಾ ಅಪಹರಿಸಿಕೊಂಡು, ನನಗೆ ದುಃಖ ಕೊಟ್ಟ ಸಂಗತಿ ಬಿಟ್ಟಿಟು, ನನ್ನ ಬಾಳುವೆಯು ಸುಗಮವಾಗಿ ನಡೆಯುವದು ಸಹ ಆಗಬಾರದೆಂತ ನನ್ನ ಹಿತದ ಕಲ್ಪಿತ [illegible] ಪ್ರಕಟಿಸಿದ್ದು ಅವಳ ಯೋಗ್ಯತೆಗೆ ಭೂಷಣವಾದದ್ದಲ್ಲ ನನ್ನ ಸ್ತ್ರೀ-ಧನದ ವಿನಿಯೋಗವನ್ನು ಮಾಡಲು ನನಗೆ ದೇವರು ಕೊಟ್ಟ ಬುದ್ಧಿಶಕ್ತಿಯುಳ್ಳವಳಾಗಿ ಅದನ್ನು ತಡೆಯಲು ನನ್ನ ಮಗಳ ಅಂಡ್ರಿ ನೋಟೀಸಿನಿಂದ ಏನೂ ಪ್ರಯೋಜನವಾಗಲಾರದು. ತಾ ೧೨ ೩ ೧೯೪೬.

● ಈ ಎ ಹೆ. ಮುದ್ರೆ ಗಂಗಮ್ಮಾ ಕೋಂ ದೇವಪ್ಪ ನಾಯ್ಕ ಇವರದಾಗಿರುತ್ತದೆ,

ದಿ ಕೊ[illegible] ಕಾರ್ಪೋರೇಶನ್,
ಕುಮಟಾ.
ನಮ್ಮಲ್ಲಿ [illegible]
ಎಲ್ಲ ತರದ ಪಂಚೆ ಯೋಗ್ಯ ದರದಿಂದ ಸಿಗುತ್ತದೆ
ವಿ. ಎಸ. ಮಿಜಾರ್ನಕರ,
ಮೋಟರ ಸ್ಟ್ಯಾಂಡ, ಕುಮಟಾ.

॥ [illegible] ॥
ವಾಚಕರಿಗೆ ಸುಸಂಧಿ !!!
ತ್ವರೆ ಮಾಡಿರಿ ! ತ್ವರೆ ಮಾಡಿರಿ !!
ಹೊಸ ಕನ್ನಡ [illegible] ಇದೇ [illegible] ಕನ್ನಡ [illegible] ಗ್ರಂಥಗಳ ಸಂಗ್ರಹವನ್ನು ತರಿಸಿದ್ದೇವೆ
ಸಾಹಿತ್ಯ-ಪ್ರೇಮಿಗಳು ಇಂಥ ಸುಯೋಗವನ್ನು ಕಳೆದುಕೊಳ್ಳಬಾರದು
ವ್ಯಾಪಾರಸ್ಥರಿಗೆ ಮತ್ತು ಲಾಯಬ್ರರಿಗಳಿಗೆ ಯೋಗ್ಯ ಕಮಿಶನ ಕೊಡಲಾಗುವದು ಶಿರಶಿಯಲ್ಲಿಯ ಈ ಹೊಸ ಉದ್ಯಮಕ್ಕೆ ಸರ್ವರ ಪ್ರೋತ್ಸಾಹವಿರಬೇಕಾಗಿ ವಿನಂತಿ
ಪತ್ರ — ಕನ್ನಡ ಪುಸ್ತಕಾಲಯ, ಶಿರಶಿ

WANTED for our New English School, Bad (Karwar), Graduates in Arts and Science (B. T.s preferred) and a Matriculate with Drawing (Int). Apply to the undersigned stating the minimum salary expected.

Premier Education Society,
Bad, 8-3-46.

K. R. Haldipurkar,
Chairman.

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ ಎಸ್. ಮಿಜಾರ್ನಕರ,
ಲಾಯಸನ್ಸಿ, ಮೋಟರ ಸ್ಟ್ಯಾಂಡ, ಕುಮಟಾ.

ಆಜ್ಞೆ.

ನಂಬರ ೫.
ಕಾನಡಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ. ೧೦-೩-೧೯೪೬.

ಹಿಂದುಸ್ಥಾನ ಸಂರಕ್ಷಣ ಕಾನೂನಿನ ಅಡಿಯಲ್ಲಿ ನಿಯಮದ ೫ನೆಯ ಉಪನಿಯಮ ಹಾಗೂ ಮುಂಬಯಿ ಸರಕಾರದ ಗೃಹ ಖಾತೆಯ (ರಾಜಕೀಯ ಮತ್ತು) ಮಾಡಿದ ತಾ ೧೫ ೯-೧೯೪೪ನೇಗೆ ಹೊರಡಿಸಿದ ಎಸ್. ಡಿ. II-೧೪೭೦ನೇ ಪ್ರಕಟಣೆ ಇತ್ತಗಳಲ್ಲಿಯ ದೊರೆತ ಎಲ್ಲ ಅಧಿಕಾರಗಳನ್ನು, ಹೀಗೆ ಮಾಡಲು ಅಧಿಕಾರ ಕೊಡುವಂಥ ಬೇರೆ ಎಲ್ಲ ಅಧಿಕಾರಗಳನ್ನು ಉಪಯೋಗಿಸಿ, ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಮತ್ತು ಧಾರಣೆ-ನಿಯಂತ್ರಕರು, ತಾ. ೩-೪-೧೯೪೫ನೇದಿನ ಜಿಲ್ಲಾ ಮೆಜಿಸ್ಟ್ರೇಟರು ಹೊರಡಿಸಿದ ೭ನೇ ನಂಬರದ ಪ್ರಕಟಣೆಯನ್ನು ರದ್ದುಗೊಳಿಸಿದ್ದಾರೆ; ಮತ್ತು ಪ್ರಾಂತಿಕ ಸರಕಾರದ ಪೂರ್ವಾನುಮತಿ ಪಡೆದುಕೊಂಡು, (ಮೇಲಿನಂತೆ ರದ್ದುಗೊಳಿಸಿದ ಆಜ್ಞೆಯ ಬದಲು) ಈ ಕೆಳಗಿನಂತೆ ಹೊಸ ಆಜ್ಞೆ ಮಾಡುತ್ತಾರೆ. ಈ ಆಜ್ಞೆ, ಆಜ್ಞೆ ಹೊರಟ ದಿನದಿಂದ ಜಾರಿಯಲ್ಲಿ ಬರತಕ್ಕದ್ದಿರುತ್ತದೆ —

(೧) ಕಾನಡಾ ಜಿಲ್ಲೆಯಲ್ಲಿ ಬೆಳೆದ ಉರುವಲವನ್ನಾಗಲಿ ಇದ್ದಲಿ (ಚಾರಕೋಲ)ಯನ್ನಾಗಲಿ ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದಲ್ಲಿ ಕಾಣಿಸಿದ ಧಾರಣೆಗಿಂತ ಹೆಚ್ಚಿಗೆ ಬೆಲೆ ತಕ್ಕೊಂಡು ಮಾರಾಟ ಮಾಡತಕ್ಕದ್ದಲ್ಲ ಇಲ್ಲವೆ ಮಾರಾಟ ಮಾಡಲು ಒಪ್ಪತಕ್ಕದ್ದಲ್ಲ.

(೨) ಸದರಿ ಸಾಮಾನುಗಳ ವ್ಯಾಪಾರಿಗಳು ತಮ್ಮಲ್ಲಿ ಮಾರಾಟಕ್ಕೆ ಇಟ್ಟ ಸದರಿ ಸರಕುಗಳನ್ನು, ಸದರಿ ಧಾರಣೆ ಕೊಟ್ಟು ಆ ಗಿರಾಕಿ ಸ್ವಂತಕ್ಕೆ ಬೇಕಿದ್ದಲ್ಲಿ, ಕೊಡಲಾರೆನೆಂದು ಹೇಳತಕ್ಕದ್ದಲ್ಲ;

(೩) ಇಂಥ ವ್ಯಾಪಾರಿಗಳು ತಮ್ಮ ದುಕಾನು (ಶಿಪ್ಪೋ)ಗಳ ಯಾ ಬೇರೆ ವ್ಯವಹಾರ-ಸ್ಥಳಗಳ ಪ್ರಮುಖ ಭಾಗದಲ್ಲಿ ಈ ಆಜ್ಞೆಯ ಒಂದು ಪ್ರತಿಯನ್ನು (ಎಲ್ಲರಿಗೂ ಕಾಣುವಂತೆ) ಹಚ್ಚಬೇಕು ಇಲ್ಲವೆ ತೂಗಬೇಕು.

(೪) ಇಂಥ ವ್ಯಾಪಾರಿಗಳು ಸದರಿ ಸರಕುಗಳನ್ನು ಕೊಂಡುಕೊಂಡ ಪ್ರತಿಯೊಬ್ಬ ಗಿರಾಕಿಗೆ ಬೇಡಿದ ಕೂಡಲೆ ಅವನಿಗೆ ಮಾರಾಟ ಮಾಡಿದ ಸರಕಿನ ಬಗ್ಗೆ ನಗದು ಪಾವತಿಯನ್ನು ಇಲ್ಲವೆ ಬೇರೆ ದಾಖಲೆಯನ್ನು ಕೊಡಬೇಕು; ಮತ್ತು ಆ ಪಾವತಿ (ಯಾ ದಾಖಲೆ) ಯಲ್ಲಿ (೧) ಮಾರಾಟ ಮಾಡಿದ ಸರಕಿನ ಪರಿಮಾಣ ಹಾಗೂ (೨) ಮಾರಾಟದ ದರ ಇವುಗಳ ಪೂರ್ಣ ಮತ್ತು ನಿಜವಾದ ವಿವರಗಳನ್ನು ಕಾಣಿಸಬೇಕು

ಪರಿಶಿಷ್ಟ.

ಕ್ಷೇತ್ರ	ಜಾತಿ	ಠೋಕ ಪರಿಮಾಣ	ಠೋಕ ದರ	ಚಿಲ್ಲರೆ ಪರಿಮಾಣ	ಚಿಲ್ಲರೆ ದರ
೧	೨	೩	೪	೫	೬
		ಉರುವಲ			
ಕಾನಡಾ ಜಿಲ್ಲೆಯ ಯಾವತ್ತು ಸ್ಥಳಗಳು	ಎಲ್ಲ ಜಾತಿಯ ಉರುವಲ	೧ ಟನ್ನಿಗೆ	ರೂ. ೧೭-೮-೦	೧ ಬಂಗಾಲಿ ಮಣಕ್ಕೆ	ರೂ. ೦-೧೦-೬
		ಇದ್ದಲಿ. (ಚಾರಕೋಲ)			
ಪಶ್ಚಿಮ ಜಂಗಲ ವಿಭಾಗದಲ್ಲಿ ಸೇರುವ ಕಾನಡಾ ಜಿಲ್ಲೆಯ ಎಲ್ಲ ಸ್ಥಳಗಳು.	ಸರಿ ಮಾಡಿದ ಗಟ್ಟಿ ಮರದ ಇದ್ದಲಿ.	೧ ಟನ್ನಿಗೆ	ರೂ. ೧೨೦	"	ರೂ. ೪-೦-೦
ದಕ್ಷಿಣ, ಪೂರ್ವ ಯಾ ಉತ್ತರ ಜಂಗಲ ವಿಭಾಗಗಳಲ್ಲಿ ಸೇರುವ ಕಾನಡಾ ಜಿಲ್ಲೆಯ ಎಲ್ಲ ಸ್ಥಳಗಳು	ಇನ್ನಿತರ ಜಾತಿಗಳ ಇದ್ದಲಿ	೧ ಟನ್ನಿಗೆ	ರೂ. ೮೪	"	ರೂ. ೩-೮-೦
ಬೆಳಗಾಂವ ಜಂಗಲ ವಿಭಾಗದಲ್ಲಿ ಸೇರುವ ಕಾನಡಾ ಜಿಲ್ಲೆಯ ಎಲ್ಲ ಸ್ಥಳಗಳು	"	೧ ಟನ್ನಿಗೆ	ರೂ. ೬೩	"	ರೂ. ೨-೧೨-೦

ಟಿಪ್ಪಣಿ:— ಉರುವಲ ಇಲ್ಲವೆ ಇದ್ದಲಿಯ ೧ ಟನ್ನ ಯಾ ಹೆಚ್ಚಿಗೆ ಕೊಡ-ಕೊಳ್ಳುವ ವ್ಯವಹಾರಗಳು ಠೋಕ-ವ್ಯವಹಾರಗಳೆಂದು ಎಣಿಸಲ್ಪಡಬೇಕು

ಯಾರಾದರೂ ಈ ಆಜ್ಞೆಯ ಯಾವದೇ ಅಂಶವನ್ನು ಉಲ್ಲಂಘಿಸಿದಲ್ಲಿ, ಅವನಿಗಾಗಬಹುದಾದ ಬೇರೆ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ, ಅವನ ಅಪರಾಧದ ತನಿಖೆ ನಡೆಸುವ ನ್ಯಾಯಾಧೀಶನು, ಯಾವ ಉರುವಲ ಅಥವಾ ಇದ್ದಲಿಯ ಸಂಗ್ರಹದ ಸಂಬಂಧದಲ್ಲಿ ಆ ಅಪರಾಧವಾಗಿರುತ್ತದೆಂದು ಆತನಿಗೆ ಮನವರಿಕೆಯಾಗುತ್ತದೋ ಆ ಸಂಗ್ರಹವನ್ನು, ಅದರ ಆವರಣ ಪ್ರಾವರಣಗಳ ಸಹಿತ, ಸರಕಾರಜಪ್ತಿ ಮಾಡಲು ವಿಧಿಸಬಹುದು

ಭಾರತ ರಕ್ಷಣ ಕಾನೂನಿನ ೧೧೯ನೇ ಕಟ್ಟಳೆಯ ೧ನೇ ಒಳಕಟ್ಟಳೆಗನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಸಿದ್ಧಿಗೊಳಿಸಬೇಕು:—

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝಿಟದಲ್ಲಿ ಪ್ರಸಿದ್ಧ ಮಾಡಬೇಕು.

(ಬ) ಆಜ್ಞೆಯ ಕನ್ನಡ ಅನುವಾದವನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟಿಸಬೇಕು:—
(೧) "ವಿಕಾಸ", ಕಾರವಾರ. (೨) "ಕಾನಡಾವೃತ್ತ", ಕುಮಟಾ.

(ಕ) ಆಜ್ಞೆಯ ಇಂಗ್ಲಿಷ ಹಾಗೂ ಕನ್ನಡ ಪ್ರತಿಗಳನ್ನು ಜಿಲ್ಲಾ ಪೋಲೀಸ ಕಚೇರಿ ಹಾಗೂ ತಾಲೂಕ ಪೇಟಾ ಕಚೇರಿಗಳಲ್ಲಿರುವ ನೋಟೀಸ-ಬೋರ್ಡುಗಳಿಗೂ, ಕನ್ನಡ ಪ್ರತಿಗಳನ್ನು ಎಲ್ಲ ಗ್ರಾಮ ಚಾವಡಿಗಳಲ್ಲಿಯೂ ಅಂಟಿಸಬೇಕು.

(ಡ) ಮೇಲಿನಂತೆ ಆಜ್ಞೆಯಾದ ಸಂಗತಿಯನ್ನೂ ಆ ಆಜ್ಞೆ ಮೇಲಿನಂತೆ ಪ್ರಕಟಿಸಲ್ಪಟ್ಟ ಸಂಗತಿಯನ್ನೂ ಡಂಗುರ ಸಾರಿ ಜನರಿಗೆ ಜಾಹೀರ ಮಾಡಬೇಕು

F. N. RANA.
ಜಿಲ್ಲಾ ಮೆಜಿಸ್ಟ್ರೇಟ ಮತ್ತು ಧಾರಣೆ-ನಿಯಂತ್ರಕ, ಕಾನಡಾ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "[illegible] ಕನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" " ತಿಂಗಳಿಗೆ ೦-೧೦-೦
ಬಿಡಿ ಸಂಚಿಕೆಗೆ ೦-೧-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಪಡಕೊಳ್ಳುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿಮುಂಗಡ ಕಟ್ಟಿಕೊಳ್ಳುವದು

Reg. No. B 1270. Monday, 27th May, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪೭.

ಕುಮಟಾ:- ಸೋಮವಾರ, ತಾ. ೨೭ ಮಾಹೆ ಮೇ ೧೯೪೬ನೇ ಇಸವಿ

ಜಾಹೀರಾತುಗಳ ದರ:
ಸ್ವಲ್ಪಾವಧಿಗಾಗಿ ೧ ಕಾಲಮ್ ಇಂಚ್
೧ ಸಾರೆಗೆ ೮ ಆಣೆಯಂತೆ.
ಇದಕ್ಕೆ ಹೆಚ್ಚಿನ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವಾರ್ತೆಗಳು.

— ಬ್ರಿಟಿಶ ಶಿಷ್ಟಮಂಡಳದ ಯೋಜನೆಯ ಕೆಲವೊಂದು ಮಹತ್ವದ ಅಂಗಗಳು ಅಸ್ಪಷ್ಟವಿರುವದರಿಂದಲೂ, ಸರ್ವಾಧಿಕಾರಿಗಳು ಕೇಂದ್ರ ಸರಕಾರದ ಪುನರ್ಘಟನೆಯನ್ನ ಯಾವ ಬಗೆಯಿಂದ ಮಾಡುತ್ತಾರೆಂಬದು ತಿಳಿಯದ್ದರಿಂದಲೂ ಈ ಯೋಜನೆಯ ಬಗ್ಗೆ ಕೊನೆಯ ಅಭಿಪ್ರಾಯ ಈಗಲೇ ವ್ಯಕ್ತ ಮಾಡಬರುವದಿಲ್ಲೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಒಂದು ಗೊತ್ತುವಳಿ ಮಾಡಿ ಪ್ರಕಟಿಸಿ, ಮಂಡಳದ ಸಭೆಯನ್ನು ಜೂನ ತಾ. ೧೧ರ ವರೆಗೆ ಮುಂದರಿಸಿದ್ದಾರೆ. ಆಸಾಮ ಪ್ರಾಂತವು ಬಂಗಾಲದೊಡನೆ "ಕ" ಗುಂಪಿನಲ್ಲಿ ಸೇರಲು ಸಿದ್ಧವಿಲ್ಲ. ಈ ಬಗ್ಗೆ ಒತ್ತಾಯವಾದರೆ ಅದನ್ನು ಪ್ರತಿಭಟಿಸುವದಕ್ಕಾಗಿ ೫೦ ಸಾವಿರ ಸ್ವಯಂಸೇವಕರನ್ನು ಸಿದ್ಧಗೊಳಿಸಬೇಕಾಗಿ ಗೋಹತಿಯಲ್ಲಿ ಕಳೆದ ಗುರುವಾರ ಸೇರಿದ ಸಾರ್ವಜನಿಕ ಸಭೆಯಲ್ಲಿ ನಿರ್ಣಯವಾಗಿದೆ. ಗಡಿನಾಡ ಪ್ರಾಂತವೂ ಬ್ರಿಟಿಶ ಶಿಷ್ಟರ ಗುಂಪುಗಳ ಯೋಜನೆಗೆ ವಿರುದ್ಧವಿದೆ.

— ಬ್ಯಾ| ಜಿನ್ನಾರವರಾದರೂ ಬ್ರಿಟಿಶ ಯೋಜನೆ ಲೀಗಿಗೆ ಸಮ್ಮತವುಂಟೋ ಹೇಗೆಂಬುದನ್ನು ಸ್ಪಷ್ಟಪಡಿಸಿಲ್ಲ. ತಮ್ಮ ದೀರ್ಘವಾದ ಹೇಳಿಕೆಯಲ್ಲಿ, ಪಾಕಿಸ್ತಾನ ನಿರ್ಮಾಣಕ್ಕೆ ಶಿಷ್ಟರು ಅಸಮ್ಮತಿ ವ್ಯಕ್ತಗೊಳಿಸಿದ ಬಗ್ಗೆ ವಿಷಾದ ಪ್ರದರ್ಶಿಸಿ, ಪಾಕಿಸ್ತಾನಿಗಳ ದೃಷ್ಟಿಯಿಂದ ಶಿಷ್ಟರ ಯೋಜನೆಯನ್ನು ಪೃಥಕ್ಕರಿಸಿದ್ದಾರಷ್ಟೇ. ಯೋಜನೆಯ ಗ್ರಾಹ್ಯಾಗ್ರಾಹ್ಯತೆಯ ನಿರ್ಣಯವನ್ನು ಲೀಗಿನ ಕಾರ್ಯಕಾರಿ ಮಂಡಳವದರೇ ಮಾಡುವರೆಂದು ಅವರು ಕೊನೆಗೆ ಹವಾಲೆ ಕೊಟ್ಟಿದ್ದಾರೆ. ಮತ್ತು ತಮ್ಮ ಕಾರ್ಯಕಾರಿ ಮಂಡಳದ ಸಭೆಯನ್ನು ಜೂನ ತಾ. ೩ಕ್ಕೆ ಮತ್ತು ಕೌನ್ಸಿಲದ ಸಭೆಯನ್ನು ತಾ. ೫ಕ್ಕೆ ಕರೆದಿದ್ದಾರೆ.

— ಮುಸ್ಲಿಮ್ ಲೀಗಿನ ಸ್ಪಷ್ಟ ಅಭಿಪ್ರಾಯ ಇನ್ನೂ ತಿಳಿಯದ್ದರಿಂದ ಹೊಸ ಕೇಂದ್ರ ಸರಕಾರದ ರಚನೆಗೆ ವಿಳಂಬವಾಗಿದೆ. ಆದರೂ ಸರ್ವಾಧಿಕಾರಿ ವೆವ್ಹಲದೊರೆಗಳು ಇದೇ ವಿಚಾರದಲ್ಲಿ ಮಗ್ನರಾಗಿದ್ದಾರಂತೆ. ಡಾ|| ಖಾನಸಾಹೇಬರ ಸಲಹೆಯಂತೆ ಕೊಂಗ್ರೆಸ ಶ್ರೇಷ್ಠಿಗಳು ಈ ಸರಕಾರದಲ್ಲಿ ಸೇರಲೊಪ್ಪಿರುವರೆಂದೂ ಮೌಲಾನಾ ಆಝಾದ, ಪಂ|| ನೆಹರು, ಸರದಾರ ಪಟೇಲ ಮತ್ತು ಬಾಬು ಶರತ್ಚಂದ್ರ ಬೋಸ ಇವರು ಅನುಕ್ರಮವಾಗಿ ವಿದೇಶ ಖಾತೆ, ಸಂರಕ್ಷಣ ಖಾತೆ, ಗೃಹ ಖಾತೆ ಮತ್ತು ಸಾರಿಗೆ ಖಾತೆಗಳ ಮಂತ್ರಿಗಳಾಗುವರೆಂದೂ ಪುಣೆಯ "ಲೋಕಂ" ಪತ್ರಿಕೆಯ ವಿಶೇಷ ಸುದ್ದಿಗಾರರಾದ ರಾ|| ತಾಮ್ಹಣಕರರು ದಿಲ್ಲಿಯಿಂದ ತಿಳಿಸುತ್ತಾರೆ. ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರೂ ಈ ಸರಕಾರದಲ್ಲಿ ಸೇರುವರೆಂಬದೊಂದು ವಾರ್ತೆಯುಂಟು. ಅವರು ಅರ್ಥಸಚಿವರಾಗಬಹುದಂತೆ. ಮಹಾರಾಷ್ಟ್ರೀಯ ಕೊಂಗ್ರೆಸ ಪ್ರಮುಖರಾದ ಶ್ರೀ|| ಶಂಕರರಾವ ದೇವರಿಗೂ ಒಂದು ಸ್ಥಳ ಸಿಗಬಹುದೆಂದು ರಾ|| ತಾಮ್ಹಣಕರರ ಊಹೆಯುಂಟು. ಜೂನ ತಾ. ೧೫ರ ಸುಮಾರಿಗೆ ಹೊಸ ಸರಕಾರದ ರಚನೆಯಾಗಬಹುದಾಗಿ ಸುದ್ದಿಗಾರರ ತರ್ಕ.

— ಕಳೆದ ಸೋಮ-ಮಂಗಳ-ಬುಧ-ಶುಕ್ರವಾರ ಮುಂಬಯಿ ಪ್ರಾಂತದ ಹೊಸ ಎಸೆಂಬ್ಲಿಯ ಮೊದಲನೇ ಅಧಿವೇಶನವಾಗಿ ಅಧ್ಯಕ್ಷೋಪಾಧ್ಯಕ್ಷರ ಆಯ್ಕೆ ಮತ್ತು ಮಂತ್ರಿ ಮೊದಲಾದವರ ಸಂಬಳದ ನಿರ್ಣಯವಾಯಿತು. ಎಸೆಂಬ್ಲಿಯ ಅಧ್ಯಕ್ಷಪದಕ್ಕೆ ಅಹಮ್ಮದನಗರದ ವಕೀಲ ಶ್ರೀ|| ಕೇ. ಎಸ್. ಫಿರೋದಿಯಾ ಇವರು ಸರ್ವಾನುಮತದಿಂದಲೂ, ಉಪಾಧ್ಯಕ್ಷಸ್ಥಾನಕ್ಕೆ ಬೆಳಗಾಂವಿಯ ಶ್ರೀ|| ಸಣ್ಣಬಪ್ಪಾ ಅಂಗಡಿಯವರು ಪ್ರಚಂಡ ಬಹುಮತದಿಂದಲೂ (ಲೀಗದವರು ಉಪಾಧ್ಯಕ್ಷಪದ ಮುಸಲ್ಮಾನರಿಗೆ ಸಿಗಬೇಕೆಂಬ ವಾದವನ್ನು ಪುಷ್ಟಿಕ ಮಾಡಿ ಓರ್ವ ಪ್ರತಿಸ್ಪರ್ಧಿಯನ್ನು ನಿಲ್ಲಿಸಿದ್ದರು) ಆರಿಸಲ್ಪಟ್ಟಿದ್ದಾರೆ. ೧೯೩೭ರ ಮಂತ್ರ್ಯಾದಿಗಳ ಸಂಬಳದ ಕಟ್ಟಳೆಗಳಲ್ಲಿ ತಿದ್ದುಪಡಿ ಮಾಡಿ ಪ್ರತಿಯೊರ್ವ ಮಂತ್ರಿಗೆ ತಿಂಗಳೊಂದಕ್ಕೆ ೫೦೦ ರೂ. ವೇತನ ಮತ್ತು ರೂ. ೨೦೦ ಮೋಟಾರು ಭತ್ತೆ ಕೊಡತಕ್ಕದ್ದೆಂದೂ ಅವರ ವಾಸ್ತವ್ಯಕ್ಕೆ ಸುಸಜ್ಜಿತ ಮನೆ ಒದಗಿಕೊಡಬೇಕೆಂದೂ ನಿರ್ಣಯವಾಗಿದೆ. ಕಾನೂನ ಮಂಡಳಗಳ ಅಧ್ಯಕ್ಷರಿಗೂ ಅಷ್ಟೇ ವೇತನ, ಭತ್ತೆ ಮತ್ತು ಮನೆ ಕೊಡಬೇಕಾಗಿ ಕಾಯಿದೆಯಲ್ಲಿ ತಿದ್ದುಪಾಟವಾಗಿದೆ. ಉಪಾಧ್ಯಕ್ಷರಿಗೆ ತಿಂಗಳೊಂದಕ್ಕೆ ರೂ. ೨೦೦ ಸಿಗುವದು. ಸದಸ್ಯರಿಗೆ ಹಿಂದೆ ರೂ. ೭೫ರಂತೆ ಮಾಸಿಕ ವೇತನ ಸಿಗುತ್ತಿತ್ತು. ಈಗ ೧೫೦ರಂತೆ ವೇತನ ಮತ್ತು ಎಸೆಂಬ್ಲಿಯ ಅಧಿವೇಶನಕ್ಕೆ ಹಾಜರಿದ್ದಷ್ಟು ದಿನ ದಿನ ೧ಕ್ಕೆ ರೂ. ೫ ಭತ್ತೆ ಮತ್ತು ವಾಹನದ ಖರ್ಚು ರೂ. ೩ ಕೂಡಿ ರೂ. ೮ರಂತೆ ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿದೆ. ಪಬ್ಲಿಕ್ ಎಕೌಂಟ್ಸ ಕಮಿಟಿ (ಸರಕಾರ ಜಮಾ-ಖರ್ಚು ನೋಡಿ ಆಯ-ವ್ಯಯಗಳಿಗೆ ಶಿಫಾರಸು ಕೊಡುವ ಸದಸ್ಯರ ಮಂಡಳವಿದು) ಗೆ ಆರಿಸಲ್ಪಟ್ಟಿರುವ ೧೧ ಮಂದಿ ಸದಸ್ಯರಲ್ಲಿ ನಮ್ಮ ಜಿಲ್ಲೆಯ ಶ್ರೀ|| ರಾಮಚಂದ್ರ ಪ್ರಭು ಇವರೊರ್ವರಿದ್ದಾರೆ. ಮುಂಬಯಿ ವಿಶ್ವವಿದ್ಯಾಲಯದ ಸಿನೇಟ ಸಭೆಗೆ ಎಸೆಂಬ್ಲಿಯಿಂದ ೫ ಮಂದಿ ಸದಸ್ಯರನ್ನು ಆರಿಸಿ ಕಳಿಸುವದುಂಟು. ಆ ೫ ಸ್ಥಳಗಳಲ್ಲಿ ಶ್ರೀ|| ಶಿವರಾವ ಶಾಸ್ತ್ರಿಯವರಿಗೆ ಒಂದು ಸ್ಥಳ ಸಿಕ್ಕಿದೆ.

— ಪೋಸ್ಟ ಕಾರ್ಡಿನ ಬೆಲೆಯನ್ನು ಇದೇ ಜುಲೈ ತಾ. ೧ರಿಂದ ೩ ಬಿಲ್ಲಿಗೆ ಇಳಿಸಲಾಗುವದೆಂದು ಸರಕಾರಿ ಪ್ರಕಟನೆ ಹೊರಟಿದೆ.

— ಹಿಂದುಸ್ಥಾನದ ಆಹಾರಪರಿಸ್ಥಿತಿ ಕೆಟ್ಟಿರುವದರಿಂದ ಜಾವಾದಿಂದ ೫ ಲಕ್ಷ ಟನ್ನು ಅಕ್ಕಿ ತಾವು ಪೂರೈಸಲು ಸಿದ್ಧರಿದ್ದೇವಾಗಿ ಇಂಡೋನೇಶಿಯಾದ ಹೊಸ ಪ್ರಜಾಸತ್ತಾತ್ಮಕ ಸರಕಾರದ ಮುಖ್ಯಪ್ರಧಾನರಾಗಿರುವ ಡಾ| ಶಹರೀರರು ಪಂ| ಜವಾಹಿರಲಾಲರಿಗೆ ತಿಳಿಸಿ ಬಹಳ ದಿನಗಳಾದವು ಆದರೂ ಹಿಂದುಸ್ಥಾನ ಸರಕಾರವು ಆಕಡೆ ಕಿವಿಗೊಟ್ಟಿದ್ದಿಲ್ಲ! ಪಂಡಿತಜಿಯವರು ಒತ್ತಾಯ ಮಾಡಿದ್ದರಿಂದ ಈಗ ಆ ಅಕ್ಕಿ ಪಡಕೊಂಡು ತರಿಸುವ ವ್ಯವಸ್ಥೆ ಮಾಡತೊಡಗಿದೆ. ಅಕ್ಕಿ ತರಿಸುವ ವ್ಯವಸ್ಥೆ ಮಾಡಲಿಕ್ಕೂ ಆ ಬಗ್ಗೆ ಅವಶ್ಯವುಳ್ಳ, ಮಾತುಕತೆ ಮತ್ತು ಕರಾರು ಮಾಡಲಿಕ್ಕೂ ಮುಂಬಯಿ ಕೊಂಗ್ರೆಸ ಮಂತ್ರಿ ಮಂಡಳದ ಶ್ರೀ|| ದಿನಕರರಾವ ದೇಸಾಯಿಯವರು ಬೇಗನೇ ಜಾವಾಕ್ಕೆ ಹೋಗಲಿದ್ದಾರೆ.

— ಅಮೇರಿಕೆಯವರು ಎಟಂ ಬಾಂಬಿಗಿಂತಲೂ ಭಯಂಕರವಾಗಿರುವ ಇನ್ನೊಂದು ಅಸ್ತ್ರವನ್ನು ಶೋಧಿಸಿಟ್ಟಿದ್ದಾರೆಂಬ ಸುದ್ದಿ ಅಲ್ಲಿಯ ಸರಕಾರದ ಅಧಿಕಾರಿಗಳೇ ಹೊರಗೆಡವಿದ್ದಾರೆ. ವಿಮಾನದಿಂದ ಇದನ್ನು ಯಾವದೊಂದು ಮಹಾನಗರಿಯ ಮೇಲೆ ಒಗೆದರೆ ಆ ನಗರದೊಳಗಿನ ಜೀವಂತ ಪ್ರಾಣಿಗಳೆಲ್ಲ ಸತ್ತು ಬೀಳುವವಂತೆ; ಸಸ್ಯಾದಿಗಳು ಸುಟ್ಟುಹೋಗಿ ಬೀಜಗಳೂ ಕಮರಿಹೋಗುವವಂತೆ.

ಸ್ಥಾನಿಕ ವೃತ್ತಾಂತ. (೪ನೇ ಪುಟದಿಂದ ಮುಂದೆ.) ಪುನಃ ಅಸಮಾಧಾನ, ಅಸಂತೋಷ, ಉದ್ವೇಗಗಳುಂಟಾಗಿ ಉಪದ್ರವವುಂಟಾಗುವ ಭೀತಿಯುಂಟು. ಈ ಎ. ಓ. ರವರಿಗೆ ಸಭ್ಯಾಸಭ್ಯತೆಯ ಪಾಠವನ್ನು ಅವರ ಶಿಕ್ಷಕರಾಗಲಿ ಪಾಲಕರಾಗಲಿ ಕಲಿಸಿಲ್ಲ ಮತ್ತು ಅನುಭವರೂ — ಈಗ ಮುದುಕರಾಗುತ್ತ ಬಂದರೂ — ಕಲಿತಿಲ್ಲವೆಂಬಂತೆ ತೋರುತ್ತದೆ. ಕಲಿತಿದ್ದರೆ ಅವರು ಸಂಘಕ್ಕೆ ಸೇರಿದ ಕುಮಟೆಯ ಶಿಕ್ಷಕರಿಗೆ, "ಈಗ ನೀವು ಬೇಕಾದ್ದ ಕೆಲಸ ಮಾಡಬಹುದು", "ಪಂಢರಪುರಕ್ಕೆ ಹೋಗಿರಿ!", " "ಕಾಶಿಗೆ ಹೋಗಿರಿ" ಇತ್ಯಾದಿ ತೀರ ಅಸಭ್ಯ ಮಾತುಗಳನ್ನು ಎಂದೂ ಆಡುತ್ತಿದ್ದಿಲ್ಲ! ಶಿಕ್ಷಕರ ಸಂಘಕ್ಕೆ ಪ್ರಾಂತಿಕ ಸರಕಾರವು ಕೂಡ ಮನ್ನಣೆ ಕೊಟ್ಟು, ಅವರಿಗೆ ಸಹಾನುಭೂತಿಯಿಂದ ನಡೆಸಲು ಸ್ಪಷ್ಟ ಆಶ್ವಾಸನೆ ಕೊಟ್ಟಿದ್ದರೂ ಈ ಎ. ಓ. ರವರು ಸರಕಾರಿ ಹುಕುಮದಂತೆ ಸಂಘಕ್ಕೆ ಸೇರಿದ ಶಿಕ್ಷಕರು ತಿರುಗಿ ತಮ್ಮ ತಮ್ಮ ಸ್ಥಳಗಳಲ್ಲಿ ಹಾಜರಾಗುವಲ್ಲಿ ಅವರಿಗೆ ಬಹಳ ತೊಂದರೆ ಕೊಟ್ಟ ಸುದ್ದಿಯುಂಟು. ಈ ಶಿಕ್ಷಕರಿಗೆ ಅಧಿಕಾರ ಒಪ್ಪಿಸಿ ಕೊಡಲು ಅನೇಕ ಹೆಂಗಾಮಿ ಶಿಕ್ಷಕರಿಗೆ ಇವರು ತಿಳಿಸಲಿಲ್ಲವಂತೆ! ಈ ಬಗ್ಗೆ ಶಾಲಾಬೋರ್ಡಿನ ಚೇರಮನ್ನರ ಕಡೆಗೂ ಎಸೆಂಬ್ಲಿಯ ಸದಸ್ಯರಾಗಿರುವ ರಾ|| ಪ್ರಭು ಇವರ ಕಡೆಗೂ ಶಿಕ್ಷಕರು ದೂರುಕೊಳ್ಳಬೇಕಾಯಿತು ಮತ್ತು ಅವರು ಬಂದು ಎ. ಓ. ರವರಿಗೆ ಬುದ್ಧಿ ಹೇಳಬೇಕಾಯಿತು! ಹೀಗೆ ತಮ್ಮ ವಿರುದ್ಧ ದೂರುಕೊಂಡ ಶಿಕ್ಷಕರ ವಿರುದ್ಧ ಎ. ಓ. ರವರೀಗ ಸುಳ್ಳು ಸುಳ್ಳು [illegible] ಬರೆದಿಡುವ ಉಪಕ್ರಮವನ್ನಾರಂಭಿಸಿದ್ದಾರೆಂದು ದೂರು ಕೇಳಬರುತ್ತದೆ. ಸಂಘಕ್ಕೆ ಸೇರಿದ ಶಿಕ್ಷಕರಿಗೂ ಶಿಕ್ಷಕಿಯರಿಗೂ ಇವರು ಈಗ ಕಂಡ ಕಂಡ ಹಳ್ಳಿಗಳಿಗೂ ಅನಾನುಕೂಲ ಸ್ಥಳಗಳಿಗೂ ವರ್ಗಮಾಡುವ ಉದ್ಯೋಗ ಕೈಕೊಂಡಿದ್ದಾರೆ. ಬಹಳಷ್ಟು ಕಾಲ ಒಂದೇ ಸ್ಥಳದಲ್ಲಿದ್ದು ಬೇರು ಬಿಟ್ಟ (ಅವರ ಸಂಘಕ್ಕೆ ಸೇರದ) ಶಿಕ್ಷಕರಿಗೆ ವರ್ಗ ಮಾಡುವ ಆಲೋಚನೆ ಇವರಿಗಾಗುವದಿಲ್ಲ! ಎ. ಓ. ರವರ ಇಂಥಹ ಪಕ್ಷಪಾತ, ನೀತಿಬಾಹ್ಯ ಮತ್ತು ಹೊಣೆಗೆಟ್ಟ ನಡತೆಯಿಂದ ಶಿಕ್ಷಕರು ಕೆರಳಿಕೊಂಡು ಪುನಃ ತಂಟೆ ಮಾಡಿದರೂ ಮಾಡಬಹುದು. ಎ. ಓ. ರವರ ಘನತೆಯೂ ಗೌರವವೂ ಈಗಾಗಲೇ ಶೂನ್ಯಾಂಶಕ್ಕೆ ಇಳಿದಿವೆ! ಸರಕಾರದವರು ಇವರಿಗೆ ಕೂಡಲೇ ಸೇವಾನಿವೃತ್ತಿಗೊಳಿಸುವದು ಒಳಿತು. ಅವಶ್ಯ ಅವರು ಒಪ್ಪದಿದ್ದರೆ ಬೇರೆ ಜಿಲ್ಲೆಗಾದರೂ ಅವರಿಗೆ ಕಳಿಸಿಕೊಡುವದುಚಿತ.

ನಮ್ಮಲ್ಲಿ (ಹೋಲಸೇಲ) ತೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಟಾಯಸನ್ನ, ಮೋಟರ ಸ್ಟಂಡ, ಕುಮಟಾ

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOCR. S. I
The Head Office and Branches of the Bank now accept
Season Deposits from three to six months at the following rates:-
Three Months at 2¼% per annum.
Six Months at 2¾% per annum.
No such deposit will be allowed to run beyond 30th September 1946
K. VAMAN SHENAI,
CHAIRMAN.
Coondapoor,
8-3-1946.

ಉತ್ತರ ಕನ್ನಡ ಜಿಲ್ಲೆಯ ೨ನೆಯ ಸಾಹಿತ್ಯ ಸಮ್ಮೇಲನ.

ಈ ಹಿಂದೆ ತಿಳಿಸಿದಂತೆ ಮೇಲ್ಕಾಣಿಸಿದ ಸಮ್ಮೇಲನವು ಕಳೆದ ಬುಧವಾರ ಗುರುವಾರ (ತಾ ೨೨ ೨೩) ಜರುಗಿತು ಸಮ್ಮೇಲನದ ಉದ್ಘಾಟನೆ ಮಾಡಲು ನಿಮಂತ್ರಿಸಲ್ಪಟ್ಟ ಶ್ರೀಮತ್ ಸೋದಾ ಸ್ವರ್ಣವಲ್ಲೀ ಮಠಾಧೀಶರಾದ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳು ತಮ್ಮ ಪರಿವಾರ ಸಹಿತ ಮಂಗಳವಾರ ಸಂಜೆ ೬ ಘಂಟೆಯ ಸುಮಾರಿಗೆ ಇಲ್ಲಿಗೆ ಬಂದು ತಲ್ಪಿದರು ಅವರನ್ನು ಮುನಿಸಿಪ್ಯಾಲಿಟಿ ಟೋಲ ನಾಕೆಯಿಂದ ಮೆರವಣಿಗೆಯಿಂದ ಶ್ರೀ ವೆಂಕಟರಮಣ ದೇವರ ಮಠಕ್ಕೆ ಕರೆತರಲಾಯಿತು ಅಲ್ಲಿ ದೇವದರ್ಶನಾದಿಗಳಾದ ಮೇಲೆ ಶ್ರೀ ಸ್ವಾಮಿಗಳ ಪಾದುಕಾ ಪೂಜೆಯಾಯಿತು, ಅಷ್ಟಾವಧಾನ ಸೇವೆಯಾಯಿತು ಊರವರು ತಮಗೆ ಅತ್ಯಂತ ಭಕ್ತಿಯಿಂದ ನಗರದ ಸ್ವಾಗತವಿತ್ತ ಬಗ್ಗೆ ಸಂತೋಷ ಪ್ರದರ್ಶಿಸಿ, ಈ ಗೌರವವನ್ನು ಎಲ್ಲವು ತಮ್ಮ ಆರಾಧ್ಯ ದೇವತೆಯಾದ ಶ್ರೀ ಲಲಿತಾ ದೇವಿಗೆ ಅರ್ಪಿಸುತ್ತೇವೆಂತಲೂ ಊರವರಿಗೆ ಆಯುರಾರೋಗ್ಯ ಸಂಪತ್ತು ದಯಪಾಲಿಸಲು ಅವಳ [illegible] ಮಾರ್ಗ ದೋರಿಸುವಂತೆ ದೇವಿಯ ಕಡೆ ಪ್ರಾರ್ಥಿಸುತ್ತೇವೆಂತಲೂ ಶ್ರೀ ಸ್ವಾಮಿಗಳು ಚಿಕ್ಕದೊಂದು ಭಾಷಣ ಮಾಡಿ ಅಪ್ಪಣೆ ಕೊಟ್ಟರು ಆದಾದ ಬಳಿಕ ಶ್ರೀ ಗುರುಗಳನ್ನು ವಾದ್ಯ ವೈಭವದಿಂದ ಅವರ ನಿವಾಸ ಸ್ಥಾನವಾದ ರಾ|| ಗಣೇಶ ಭಟ್ಟರ ಮನೆಗೆ ಮುಟ್ಟಿಸಲಾಯಿತು ಸಮ್ಮೇಲನದ ಅಧ್ಯಕ್ಷ ಶ್ರೀ|| ಕೋಟ ಶಿವರಾಮ ಕಾರಂತರೂ ಅಂದು ಸಂಜೆ ಬಂದು ಜ್ಯುಬಿಲಿ ಫರ್ಮಸಿ ಮೊಳಗಿನ ಬಿಡಾರದಲ್ಲಿ ಇಳಿದುಕೊಂಡಿದ್ದರು

ಬುಧವಾರ ಮುಂಜಾನೆ ಸಾಧಾರಣ ಮಳೆ ಸುರಿಯಿತು ಅದರಿಂದ ಸಮ್ಮೇಲನಕ್ಕೆ ಬರುವ ಜನರಿಗೆ ಅಲ್ಪ ಸ್ವಲ್ಪ ತೊಂದರೆಯಾದರೂ ೮ ಘಂಟೆಯ ಸುಮಾರಿಗೆ ಸಮ್ಮೇಲನ ಪ್ರಾರಂಭವಾಯಿತು ಮೊಟ್ಟಮೊದಲು ಚಿಕ್ಕ ಹುಡುಗಿಯರು ಸ್ವಾಗತ ಪದಗಳನ್ನು ಹಾಡಿ ಎಲ್ಲರಿಗೆ ಸ್ವಾಗತ ಬಯಸಿದರು ಆ ಮೇಲೆ ಸಮ್ಮೇಲನದ ಉದ್ಘಾಟಕ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳ ಪಾದ್ಯಪೂಜೆಯಾಯಿತು ಪಾದ್ಯಪೂಜೆ ಮುಗಿದ ಮೇಲೆ ಸಮ್ಮೇಲನವನ್ನು ಪ್ರಾರಂಭಿಸುತ್ತ ಶ್ರೀ ಸ್ವಾಮಿಗಳು ಹೇಳಿದ್ದೇನಂದರೆ

ಉದ್ಘಾಟಕ ಸ್ವಾಮಿಗಳ ಭಾಷಣ

ಈ ಸಾಹಿತ್ಯ ಸಮ್ಮೇಲನ ಸಂದರ್ಶಿಸುವ ಸುಸಂಧಿಯನ್ನು ಸಮ್ಮೇಲನದ ಕಾರ್ಯಕರ್ತರು ಒದಗಿಸಿಕೊಟ್ಟದ್ದಕ್ಕೆ ಅವರ ಶ್ರೇಯಸ್ಸನ್ನು ಶ್ರೀ ಲಲಿತಾ ಸನ್ನಿಧಿಯಲ್ಲಿ ಪ್ರಾರ್ಥಿಸಲಾಗುವದು ಈ ಸಮ್ಮೇಲನದ ಉದ್ಘಾಟನ ಮಾಡುವ ಸಾಮರ್ಥ್ಯ ಶ್ರೀ [illegible] ಕನ್ನಡ ನಾಡಿನ ಸಾಹಿತ್ಯ ಅಭಿವೃದ್ಧಿ ಹೊಂದಬೇಕೆನ್ನುವ ಸದುದ್ದೇಶದಿಂದ ಸಮ್ಮೇಲನದ ಕಾರ್ಯಕರ್ತರ ಆಮಂತ್ರಣವನ್ನು ಅಲ್ಲಗಳೆಯಲಾಗಲಿಲ್ಲ ಅನೇಕ ವಿದ್ವಾಂಸರ ಸಮಾಗಮವಾಗುವಂತೆ ಕುಮಟಾ ಕಾಲೊಂದ ಸಾಹಿತ್ಯಾಭಿಮಾನಿಗಳು ಮಾಡಿದ ಪ್ರಯತ್ನ ಸ್ತುತ್ಯವಾಗಿದೆ ಈ ಪ್ರಯತ್ನ ಈ ಹಿಂದೆಯೇ ಆಗುತ್ತಿದ್ದರೆ ಜನಾಂಗದ ಅಭ್ಯುದಯ ಎಂದೋ ಆಗುತ್ತಿತ್ತು ಅವನತಿ ಸ್ಥಿತಿಯಲ್ಲಿರುವ ನಮ್ಮ ಜಿಲ್ಲೆಯಲ್ಲಿ ಈ ಸಮ್ಮೇಲನವಾದರೂ ಅಭಿವೃದ್ಧಿ ಹೊಂದಿದಲ್ಲಿ ಜನಾಂಗದ ಹಿತವಾಗುವದೆಂದು ನಂಬಿಕೆಯಿದೆ ಜೀವನದ ಸುಖ ಸಾಮರಸ್ಯ ಉತ್ತಮ ಸಾಹಿತ್ಯದ ಮೇಲೆ ಅವಲಂಬಿಸಿರುತ್ತದೆ ಸುಖ ಸಾಮರಸ್ಯ ಉದ್ಭವಿಸಲು ಮನಃಸ್ಥೈರ್ಯ ಬೇಕು, ಪರಿಶುದ್ಧ ಅಂತಃಕರಣ ಬೇಕು ಸಾಪೇಕ್ಷ ಬುದ್ಧಿಶಕ್ತಿಯು ನೆಲೆಗೊಳ್ಳಬೇಕು ಸುಖಜೀವನಸತ್ವ ಸಂಪಾದಿಸಬೇಕೆಂದು ಭಗವಾನ್ ಶ್ರೀ ಕೃಷ್ಣನೇ ಬೋಧಿಸಿದ್ದಾನೆ ದೈವೀ ಸಂಪತ್ತು ಪಡೆಯಲು ಪಾರ್ಥ [illegible] ಪಾರ್ಥನಿಗೆ ಅಂದು ಮಾರ್ಗದರ್ಶಿಯಾದಂತೆ ಇಂದು ನೀತಿಯುಳ್ಳ ಶ್ರೇಯೋಬಲ ಪಡೆಯಲು ಸರ್ವ ಜನತೆಯರಿಗೂ ಮಾರ್ಗದರ್ಶಿಯಾಗಿದ್ದಾನೆ ಅವನ ಆ ಉಪದೇಶವು ಅಮರ ಸಾಹಿತ್ಯ ಅಂಥ ಸತ್ವಯುತ ಸಾಹಿತ್ಯ ಈ ಸಮ್ಮೇಲನದಲ್ಲಿ ಉದ್ಭವಿಸಿ ಜ್ವಲಿಸಲಿ ನಮ್ಮ ಈ ಸಾಹಿತ್ಯದ ಮೂಲಕ ಸರ್ವರೂ ಸತ್ಕಾರ್ಯತತ್ಪರರಾಗಲಿ ಸಾಹಿತ್ಯದ ಈ ಮಹಿಮೆ ಪ್ರದರ್ಶನದ ಕೀರ್ತಿ ಈ ಕನ್ನಡ ಜಿಲ್ಲೆಗೆ, ಈ ಕುಮಟೆಯವರಿಗೆ ದೊರೆಯಲಿ, ಮತ್ತು ಎಲ್ಲರ ಕಲ್ಯಾಣವಾಗಲಿ ಎಂದು ಶ್ರೀ ಲಲಿತಾ ದೇವಿಯಲ್ಲಿ ಪ್ರಾರ್ಥನೆಯಿದೆ

ಸ್ವಾಗತಾಧ್ಯಕ್ಷರ ಸ್ವಾಗತ ಭಾಷಣ

ಇಂತು ಶ್ರೀ ಸ್ವಾಮಿಗಳ ವರದ ವಾಣಿಯಿಂದ ಸಮ್ಮೇಲನದ ಪ್ರಾರಂಭವಾದ ಮೇಲೆ ಸ್ವಾಗತಾಧ್ಯಕ್ಷ ಶ್ರೀ ವಿಶ್ವೇಶ್ವರ ತಿ ಹೆಗಡೆಯವರ ಸ್ವಾಗತ ಭಾಷಣವಾಯಿತು ಅವರು ನುಡಿದದ್ದೇನಂದರೆ ತಮ್ಮೆಲ್ಲರಿಗೆ ಹೃತ್ಪೂರ್ವಕ ಸ್ವಾಗತ ನೀಡುತ್ತೇನೆ ಇಂಥ ಸಮಾರಂಭಗಳನ್ನು ನಡಿಸುವದು ನಮಗೆ ಹೊಸದು ಅದಲ್ಲದೆ ಎಕ್ಕಟ್ಟಿನ ದಿನಗಳಲ್ಲಿ ಅದರಿಂದ ನಮ್ಮಿಂದ ತಪ್ಪುಗಳಾಗಬಹುದು ಆದರೆ ಪ್ರೇಮದಿಂದ ಕರೆದಿದ್ದೇವೆ ನಮ್ಮ ಬಾಂಧವ್ಯ ಬೆಳೆಸಿ ತಾಯ್ನುಡಿಯ ಸೇವೆಗೆ ಕಾರಣವಾಗಲೆಂದು ಹಾರೈಸುತ್ತೇನೆ ತಮ್ಮ ಅಮೃತಹಸ್ತದಿಂದ ಈ ಸಮ್ಮೇಲನದ ಉದ್ಘಾಟನೆ ನೆರವೇರಿಸಿಕೊಟ್ಟದ್ದಕ್ಕಾಗಿ ಶ್ರೀ ಸ್ವಾಮಿಯವರ ಚರಣಗಳಲ್ಲಿ ಕೃತಜ್ಞತೆಯಿಂದ ಪ್ರಣಾಮಗಳನ್ನರ್ಪಿಸುತ್ತೇನೆ ಅವರ ಆಶೀರ್ವಾದದಿಂದ ನಮ್ಮಿಂದ ನಾಡಸೇವೆ ಅಖಂಡ ನಡೆಯುವದೆಂಬ ನಮಗೀಗ ಧೈರ್ಯ ಬಂದಿದೆ ನಮ್ಮ ಸೌಭಾಗ್ಯದಿಂದಾಗಿ ಈ ಸಮ್ಮೇಲನದ ಅಧ್ಯಕ್ಷ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯು, ಸದಾ ಇತ್ತ ಕೊಡುತ್ತಿರುವದರಿಂದ ಕರ್ನಾಟಕದ ಶ್ರೇಷ್ಠ ಲೇಖಕರು ನಮ್ಮ ಬಡ ಆತಿಥ್ಯ ಸ್ವೀಕರಿಸುತ್ತಾರೆ ನಮ್ಮಲ್ಲಿ ಇಂಥ ಚಟುವಟಿಕೆಗಳು ಕಡಿಮೆ ೧೯೩೧ರಲ್ಲಿ ಕಾರವಾರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನವಾದ ಮೇಲೆ ೨ ಜಿಲ್ಲೆಯ ಸಂಮೇಲನ ಮುಂತಾದ ಅವಕಾಶಗಳಿಲ್ಲ ಆ ಕಡೆಗೆ ಲಕ್ಷ ಕೊಡಲು ಅವರು ನೆನೆಸಿಯಿಲ್ಲ ಇದರಿಂದ ಈ ನಗರಗಳ ಹಿಂದೆ [illegible] ಅಲ್ಲಿ ನಮ್ಮ ಜಿಲ್ಲೆಯು ನಡೆಸಬೇಕಾದ ಸಾಹಿತ್ಯ ಸಮ್ಮೇಲನ ಜರುಗಿತು ಈ ೫ ವರುಷಗಳಲ್ಲಿ ಗೋಕರ್ಣದಲ್ಲಿ ಆದ ವಸಂತ ಸಾಹಿತ್ಯೋತ್ಸವ [illegible] ಕುಮಟಾದಲ್ಲಿ ನಡೆದ ವಸಂತೋತ್ಸವ ಇವೆಲ್ಲ ಬರುತ್ತಿರುವ ರಾತ್ರಿಯ ಲಕ್ಷಣಗಳು ನಮ್ಮ ನುಡಿಯ ಸೇವೆ ಮಾಡಬೇಕೆಂಬ ನಮ್ಮ ಉತ್ಸಾಹದ ಕುರುಹುಗಳಿವು ಜಿಲ್ಲೆಯ ಕಾರ್ಯಕರ್ತರ ಆಸೆ ಉತ್ಸಾಹ ಸೇರುವಂತಾಗುವದಕ್ಕಾಗಿ ಸಮ್ಮೇಲನಗಳು ತಪ್ಪದೆ ಆಗಬೇಕಾಗಿದೆ ಈ ಸಮ್ಮೇಲನ ಕರೆದಿದ್ದೇವೆ ನಮ್ಮ ಜಿಲ್ಲೆ ಆದಿಕವಿ ಪಂಪನಿಗೆ ಕವಿತಾಸ್ಫೂರ್ತಿ ಕೊಟ್ಟ ಭೂಮಿ ಐತಿಹಾಸಿಕ ದೃಷ್ಟಿಯಿಂದಲೂ ಮಹತ್ವದ ನಾಡು ಈ ಸಮ್ಮೇಲನ ಕೂಡಿರುವ ಕುಮಟಾ ನಗರವು ಕೂಡ ಪುರಾತನ ಕಾಲದಿಂದ ಇತಿಹಾಸ ಉಳ್ಳ ೫೦ ವರ್ಷಗಳ ಹಿಂದೆ ಈ ಜಿಲ್ಲೆ ಸಂಪತ್ ಸಮೃದ್ಧವಿತ್ತು ಜಿಲ್ಲೆಯೊಳಗಿನ ಆದಾಯದಿಂದ ಜನರ ಉಪಜೀವನವಾಗುತ್ತಿತ್ತು ಜನರೂ ಪುಷ್ಟ ತುಷ್ಟರಿದ್ದರು ಜಿಲ್ಲೆಯ ಬಹುಭಾಗದಲ್ಲಿ ಹಣದ ಸಮೃದ್ಧಿಯಿತ್ತು, ಜನರಿಗೆ ಬೇಕಾದ ಆಹಾರ (ಧಾನ್ಯ) ವನ್ನೂ ಅದು ಒದಗಿಸುತ್ತಿತ್ತು ಘಟ್ಟದ ಮೇಲಿನ ಶಿರ್ಸಿ ಸಿದ್ದಾಪುರ ತಾಲೂಕುಗಳು ಕರಾವಳಿಗಳಿಗೆ [illegible] ಇಂತಹ ಸ್ಥಿತಿಯಿದ್ದುದರಿಂದ ಸಾಹಿತ್ಯ ಸೇವೆ ಮಾಡಲು ಜನರಿಗೆ ಅನುವು ಇತ್ತು ಆದರೆ ಈಗ ಕನ್ನಡ ನಾಡು ಹರಿದು ಹಂಚಿ ಹೋಗಿದ್ದಾಗಲೂ, ನಮ್ಮ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆಯಿಂದ ವಿಚ್ಛಿನ್ನವಾಗಿ ಪ್ರಾಂತದ ಮೂಲೆಗುಂಪಾಗಿರುವದರಿಂದ ಆರ್ಥಿಕ ಸ್ಥಿತಿಯು ಬಿಗುವಾದ್ದರಿಂದಲೂ, ಜನರಿಗೆ ಬೇರೆ ಸ್ಥರದ ಮಾರ್ಗ, ಕಾಡು ಪಶುಗಳ ಬಾಧೆ ಹೆಚ್ಚಾಗಿದ್ದರಿಂದಲೂ ಮಾನವ ಜೀವನ ನಿಸ್ಸತ್ವವಾದದರಿಂದಲೂ ಜನರು ಕಂಗೆಟ್ಟಿದ್ದಾರೆ ಇವರಿಂದ ಸಾಹಿತ್ಯ ಸೇವೆ ಅಪೇಕ್ಷಿಸುವದು ಹೇಗೆ? ಅವರಲ್ಲಿ ಸಾಹಿತ್ಯದ ಅಭಿರುಚಿ ಎಲ್ಲಿಂದ ಬರಬೇಕು? ಆದರೆ ಈಗ ಜನತೆಯು ಸರಕಾರ ಬಂದದ್ದರಿಂದ ಆಶೆಯುಂಟಾಗಿದೆ ಭಾಷಾವಾರು ಪ್ರಾಂತಗಳ ರಚನೆಯಾಗಿ ಹರಿದು ಹೋಗಿರುವ ಕನ್ನಡ ನಾಡು ಒಂದಾದರೆ ಅಂತಲೇ ನಮ್ಮ ಜಿಲ್ಲೆಯು ನಾಡನುಡಿಯ ಸೇವೆಯಲ್ಲಿ ಹಿಂದಿರುಯದೆಂತಲೂ ನನ್ನಲ್ಲಿ ವಿಶ್ವಾಸವುಂಟಾಗಿದೆ ಕುಮಟೆಯಲ್ಲಿ ಒಂದು ಕಾಲೇಜು ತೆರೆಯುವ ಪ್ರಯತ್ನ ನಡೆದದ್ದೂ ಒಂದು ಆಶೆಯ ಕಿರಣ ನಮ್ಮ ಜನತೆಯು ಮತ್ತು ಸಾಹಿತ್ಯದ ಅಭಿವೃದ್ಧಿಯಾಗಬೇಕಾದರೆ— (೧) ಕನ್ನಡವನ್ನಾಡುವ ಭಾಗಗಳೆಲ್ಲ ಒಂದು ಪ್ರಾಂತವಾಗಬೇಕು, (೨) ಈ ಪ್ರಾಂತಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವಿರಬೇಕು, ಎಲ್ಲ ಶಿಕ್ಷಣ ಕನ್ನಡದಿಂದ ಆಗಬೇಕು, ಕೋರ್ಟು ಕಚೇರಿಗಳ ಹಾಗೂ ರಾಜಕೀಯ ಭಾಷೆ ಕನ್ನಡವಾಗಬೇಕು (೩) ಪ್ರಾಂತದ ಎಲ್ಲ ಜನರೂ ಒಂದಾಗಿ ಸಾಹಿತ್ಯಾಭಿವೃದ್ಧಿಯಲ್ಲಿ ಮನಸ್ಸನ್ನಿಡಬೇಕು ವೃತ್ತಪತ್ರಗಳೂ ಮಾಸಿಕ ವಿಚಾರಕ್ಕೆ ಕಾರಣವಾಗುತ್ತಿವೆ ನಮ್ಮ ಜಿಲ್ಲೆಯಲ್ಲಿ ರಾಷ್ಟ್ರಾಭಿಮಾನವುಳ್ಳ ಏಕಮಾತ್ರ ವರ್ತಮಾನಪತ್ರಿಕೆ ಕಾನಡಾವೃತ್ತ ಬೇರೆ ವಾರಪತ್ರಿಕೆಗಳೂ ಮಾಸಪತ್ರಿಕೆಗಳೂ ಉದಯ ಹೊಂದಿದ ಅಲ್ಪ ಕಾಲದಲ್ಲೇ ಅಳಿದು ಹೋದವು ನಮ್ಮ ನೆರೆಯ ಜಿಲ್ಲೆಗಳಲ್ಲಿ ಅನೇಕ ಮಾಸಪತ್ರಿಕೆ, ವಾರಪತ್ರಿಕೆಗಳಲ್ಲದೆ ದಿನಪತ್ರಿಕೆಗಳು ಸಹ ಹೊರಡುತ್ತವೆ ನಮ್ಮ ಜಿಲ್ಲೆಯಲ್ಲೂ ಒಂದು ದಿನಪತ್ರಿಕೆ ಹೊರಡುವಂತಾಗಬೇಕು ಬರೆಹಗಾರರಿಗೆ ಹುರಿದುಂಬಿಸಿ, ಬರೆವವರ ಕೃತಿಗಳನ್ನು ಬೆಳಕಿಗೆ ತರುವ ಗ್ರಂಥಮಾಲೆಗಳೂ ಬೇಕು ನಮ್ಮಲ್ಲಿ ದ್ರಾವಿಡ ಸಂಸ್ಕೃತಿಯ ಹಲವು ರೂಢಿಗಳೂ ಹಬ್ಬಗಳೂ ಇನ್ನೂ ಉಳಿದಿರುವೆ ಕರ್ನಾಟಕದ ಇತಿಹಾಸಕ್ಕೆ ಅನುಕೂಲವಾದ ಅನೇಕ ಶಿಲಾಶಾಸನಗಳೂ ತಾಮ್ರಪಟಗಳೂ ಕಾಣುವು ಅವುಗಳ ಅಭ್ಯಾಸ ಮಾಡುವ [illegible]ಸಿಕ ಮಂಡಳಿ ಒಂದು ಬೇಕು ಇಂದಿನ ಸಾಹಿತ್ಯೋತ್ಸವ ಇತಿಹಾಸದಲ್ಲಿ ಅಮರವಾಗುವದೆಂದು ನನ್ನ ನಂಬಿಕೆ ಈ ಸಮಾರಂಭಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟವರು ಕನ್ನಡ ನಾಡಿನ ಹಿರಿಯ ಸಾಹಿತಿಗಳಲ್ಲಿ ಓರ್ವರು ಅವರು ಮುಟ್ಟಿದ್ದೆಲ್ಲ ಚಿನ್ನವಾಗಿದೆ ಅವರು ನಮಗೆ ಪರರಲ್ಲ, ಅವರು ದಕ್ಷಿಣ ಕನ್ನಡ ಜಿಲ್ಲೆಯವರು ನಮ್ಮ ಮತ್ತು ಅವರ ಸಹಕಾರದಿಂದ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳು ಒಂದಾಗಿ ಏಕೀಕೃತ ಕರ್ನಾಟಕದ ಪ್ರಮುಖ ಘಟಕವಾಗಲು ಈ ಉತ್ಸವ ಕಾರಣವಾಗಲೆಂದು ನನ್ನ ಹಾರೈಕೆ ವಿದ್ವನ್ಮಣಿಗಳಾದ ಶ್ರೀ|| ಕಾರಂತರಿಗೆ ಅಧ್ಯಕ್ಷರಾಗಲು ವಿನ್ನವಿಸಿ, ತಮ್ಮೆಲ್ಲರನ್ನು ಮತ್ತೊಮ್ಮೆ ಸ್ವಾಗತಿಸುತ್ತೇನೆ

ಸ್ವಾಗತಾಧ್ಯಕ್ಷರ ಭಾಷಣವಾದ ಮೇಲೆ ಕೆಲವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು ಅಧ್ಯಕ್ಷರು ಚಪ್ಪಾಳೆಗಳ ಘೋಷದಲ್ಲಿ ಅಧ್ಯಕ್ಷಸ್ಥಾನವನ್ನೇರಿ ತಮ್ಮ ಭಾಷಣ ಕೊಟ್ಟರು ಅದರ ಸಾರ ಮುಂದಿನಂತಿದೆ

ಅಧ್ಯಕ್ಷ ಶ್ರೀ|| ಕಾರಂತರ ಭಾಷಣ

ಅಧ್ಯಕ್ಷಸ್ಥಾನದ ಈ ಗದ್ದುಗೆಯನ್ನೇರಲು ನಾನೆಷ್ಟು ಪಾತ್ರನೋ ತಿಳಿಯದು ದಕ್ಷಿಣ ಕನ್ನಡದವರ ಮೇಲಿನ ಮಮತೆಯಿಂದ ನೀವು ನನ್ನನ್ನು ಈ ಗದ್ದುಗೆಗೆ ಏರಿಸಿರಬೇಕು. ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳೊಳಗೆ ಬಹಳ ಸಾಮ್ಯವಿದೆ ಆದರೆ ಯಾವುದೋ ವಿಧಿ ಅವನ್ನು ಬೇರೆ ಮಾಡಿದೆ. ಬಂಗಭಂಗವಾದಾಗ ಅಖಿಲ ಭಾರತವೇ ಕೂಗಿತು ಆದರೆ ನಮ್ಮ ನಾಡು ಒಡೆದಾಗ ಯಾರೂ ಕೊಕ್ಕರಿಸಲಿಲ್ಲ! ನಮ್ಮ ಬಾಳ್ವೆ ಅತ್ತೆಯ ಮನೆಯಲ್ಲಿ ಆದರವಿಲ್ಲದ ಸೊಸೆಯಂತಿರಬೇಕಾಗಿದೆ ಈ ದಿನಗಳು ಬಹಳ ಇರಲಾರವು ಕನ್ನಡ ನಾಡು ಒಂದಾಗಿ ಬೇಗನೇ ನಮ್ಮ ವಿಧಿ ತಿರುಗಿ ಬರೆಯುವದು

ಇಂತಹ ಸಮ್ಮೇಲನಗಳೆಂದರೆ ಭೀಷಣ ಭಾಷಣಗಳು ಹಾಗೂ ಠರಾವುಗಳನ್ನು ಮಾಡುವ ಸಭೆ ನನಗೆ ಅವುಗಳಲ್ಲಿ ವಿಶ್ವಾಸ ಕಡಿಮೆ ಮಾತೇ ಸ್ವರ್ಗವಾದಲ್ಲಿ ಜೀವನ ವ್ಯರ್ಥ ಸಾಹಿತ್ಯವೆಂದರೆ ಮಾತಲ್ಲ ಅದು ಬಾಳ್ವೆಯ ಪ್ರತೀಕ ಬಾಳ್ವೆ ಮುಗಿದರೂ, ಅದರ ಪ್ರತೀಕ ಚಿರಸ್ಥಾಯಿಯಾಗಿದ್ದಲ್ಲಿ ಮುಂದಿನ ಬಾಳ್ವೆಯನ್ನು ಬೆಳಗಿಸಬಲ್ಲದು

ಇಂದು ಎಲ್ಲೆಲ್ಲೂ ಕನ್ನಡದ ಕೂಗು ಕೇಳುತ್ತಿದೆ ನಮ್ಮ ಜಿಲ್ಲೆ ಮುಂದೆ ಏನಾಗುವದೋ ಎಂದು ಉತ್ತರ ಕನ್ನಡದವರ ಪ್ರಶ್ನೆ ಇತರ ಊರುಗಳಲ್ಲೂ ಅದೇ ಪ್ರಶ್ನೆ ಕೇಳಿಬರುತ್ತದೆ ಆದರೆ “ಸಿರಿಗನ್ನಡಂ ಗೆಲ್ಗೆ”, “ಉದಯವಾಗಲಿ ಚಲುವ ಕನ್ನಡ ನಾಡು” ಎಂದು ಮುಂತಾಗಿ ಹಾಡಿದರೆ ಇಲ್ಲವೆ ಸಭೆ ಮಾಡಿ ಆವೇಶದ ಮಾತುಗಳನ್ನಾಡಿದ್ದರೆ ಕಾರ್ಯವಾಗುವದಿಲ್ಲ ನನಗೆ ಈ ಮಂತ್ರೋಚ್ಚಾರಣೆಯ ಮೇಲೆ ವಿಶ್ವಾಸವಿಲ್ಲ ಸಾಹಿತ್ಯ ನಿರ್ಮಾಣ, ವಿಮರ್ಶೆ, ಪರಿಷತ್ತುಗಳು ನಮ್ಮ ಇಂದಿನ ವಿಷಯಗಳು ಈ ಕೆಲಸ ಸುಲಭವಲ್ಲ ಕಾವ್ಯ, ಕಲೆಗಳು ಸಂಸ್ಕೃತ ಜೀವನದ ಉಸಿರುಗಳು ಉಸಿರು ಪರರ [illegible]ಕಾರಕ್ಕೆ ನಡೆಯುತ್ತಿಲ್ಲ, ಹಾಗೆಯೇ ಸಾಹಿತ್ಯ, ವ್ಯಕ್ತಿಯ ಉತ್ಕಟ ಭಾವನೆ, ಯೋಚನೆ, ದರ್ಶನ, ಅನುಭವಗಳನ್ನು ಬಿಂಬಿಸುವದೇ ಸಾಹಿತ್ಯದ ಕಾರ್ಯ ಆದ್ದರಿಂದ ಈ ಭಾವನಾದಿ ಸಂಪತ್ತನ್ನು ಸಾಹಿತ್ಯ ನಿರ್ಮಾಣಕ್ಕೆ ಮೊದಲು ಹೆಚ್ಚಿಸಿಕೊಳ್ಳಬೇಕು ಸ್ಫೂರ್ತಿ ಉಳ್ಳವರ ಇಲ್ಲವೆ ಒಯ್ಯಾರದಿಂದ ಬರೆಯುವಲ್ಲಿನ ಸಾಹಿತ್ಯ ಹುಟ್ಟಿಸಲಾರ ೧೯೦೦ರಲ್ಲಿ ನಮ್ಮ ಜಿಲ್ಲೆಯ ಶ್ರೀ|| ವೆಂಕಟರಮಣ ಶಾಸ್ತ್ರಿಗಳು ಹವ್ಯಕ ಸಮಾಜದೊಳಗಿನ ವಿಧವೆಯರ ಸಮಸ್ಯೆಯನ್ನು ಕುರಿತು ನೋವುಗೊಂಡು ಒಂದು ನಾಟಕ ಬರೆದರು ಸಾಹಿತ್ಯಕ್ಕೆ ಹೀಗೆ ಭಾವನೆ ಕೆರಳಿಸಬಲ್ಲ ವಿಷಯವಿರಬೇಕು ಬರವಣಿಗೆಗೆ ಯೋಗ್ಯ ವಿಷಯ ಎಂದೇನಾದರೆ, ಎಂಥ ವಿಷಯ” ಎಂದು ಕೇಳೀರಿ ಜಗತ್ತಿನಲ್ಲಿ ಬೇಕಷ್ಟು ವಿಷಯಗಳಿವೆ ಅವುಗಳಲ್ಲಿ ತನಗೆ ಬೇಕಾದ್ದನ್ನು ಆರಿಸಿಕೊಳ್ಳುವದು ಲೇಖಕನನ್ನೇ ಹೊಂದಿದೆ ಆದರೆ ವಿಷಯ ಚಿತ್ರಣಕ್ಕೆ ಮಿತಿ ವಿಸ್ತಾರಗಳಿರಬೇಕು.

ಯೌವನ ಕ್ಷಣಗಳ ಕಲ್ಪನೆ ಮಾಡಿ, ಅವುಗಳಿಗೆ ನಮ್ಮ ಅಲಂಕಾರಗಳನ್ನು ತೊಡಿಸಿ ಕೆಲವರು ಸಾಹಿತ್ಯ ನಿರ್ಮಿಸುತ್ತಾರೆ ಅದು ಸ್ವಪ್ನಸೃಷ್ಟಿ ಸಾಹಿತ್ಯವಾಗಲಾರದು ಕಲ್ಪನೆ ಬಣ್ಣ ಬಳಿಯುವದಾದರೆ ಅವರು ತಲೆ ತಗ್ಗಿಸಬೇಕಾಗುತ್ತದೆ! ಅದರಂತೆ ಮತ, ತತ್ವಗಳ ಪ್ರಚಾರ ಮಾಡುವವರೂ ಇದ್ದಾರೆ ಆದರೆ ಆ ಮತ, ತತ್ವಗಳು ಅನುಭವಜನ್ಯವಿರದಿದ್ದರೆ ಚಿತ್ರಣ ಅಸ್ವಾಭಾವಿಕವಾಗುತ್ತದೆ

ಸಂಸಾರ ಚಿತ್ರಣದಲ್ಲೂ ವೈವಿಧ್ಯವುಂಟು ಇಬ್ಬರು ಕವಿಗಳು ಒಂದೇ ವಸ್ತುವನ್ನು ಬೇರೆ ಬೇರೆ ಬಗೆಯಾಗಿ ಚಿತ್ರಿಸುತ್ತಾರೆ ಚಿತ್ರಣ ರೀತಿಯಲ್ಲಿ ಬೇರೆಬೇರೆ ಬಗೆಯೂ ಉಂಟು ಲೇಖಕನು ತನ್ನ [illegible] ಚಿತ್ರಿಸುವ ವ್ಯಕ್ತಿಗಳನ್ನು ಅವರವರ ಮನದಿಂದ, ಅವರವರ ಹಿನ್ನೆಲೆಯಿಂದ ಅಳೆಯಬೇಕಾಗುತ್ತದೆ ಆದರೆ ಎಷ್ಟೆಂದರೂ ಲೇಖಕನು ಪ್ರಸಂಗೋಚಿತವಾಗಿ ಅಭಿಮಾನದಿಂದಾಗಲಿ ಪ್ರತ್ಯೇಕ

ವಾಗಿ ನಿಲ್ಲಲಾರನು. ಆದುದರಿಂದ ಸಾಹಿತ್ಯದಲ್ಲಿ ತನ್ಮಯನ, ಪರಕಸರ್ಗಳ ಹೆಚ್ಚುಕಡಿಮೆ ಸಾಕ್ಷವಾಗುತ್ತದೆ

[illegible] ವಿಶ್ವವಿರಾಗಿ [illegible] ಹುಷ್ಯನ ಸಾಕ್ಷಿಯಾಟದಿಂದ ವೇದಾಂತದ ತನಕ ಯಾವದನ್ನೂ ಆತ ಚಿತ್ರಿಸಬಹುದು. ಆದರೆ ಅನುಭವಕ್ಕೆ ಬಾರದ ವಸ್ತುವಿನ ಚಿತ್ರಣಕ್ಕೆ ಕೈ ಹಾಕಬಾರದು. ಬರೆದರೆ ಕಾಳಿದಾಸನಂತೆ ಮಹಾಕಾವ್ಯ ಬರೆಯಬೇಕು ಎನ್ನುವದೂ ಸರಿಯಲ್ಲ. ನಮ್ಮ ಅನುಭವ ನಮ್ಮದೇ. ಅದ ನುಡಿಯಲ್ಲಿ ಮಾತ್ರ ಬರೆಯತಕ್ಕದ್ದು. ಅದು ಅಳಿಯಲಿ ಉಳಿಯಲಿ ಅದರ ಗೊಡವೆ ನಮಗ ಬೇಡ. ಈ ಭೂಮಿಯೇ ಒಂದು ದಿನ ಬೂದಿಯಾಗುವಾಗ ನಮ್ಮ ಮಾತು ಉಳಿಯಬೇಕೆಂದು ಆಗ್ರಹ ಹಿಡಿಯುವದೇಕೆ? ಸಾಹಿತ್ಯದಲ್ಲಿ ಒಂದೇ ಬಗೆ ಎಂದೂ ಇರಲಾರದು. ಜನಭೇದದಂತೆ ಅನುಭವ ಶೈಲಿಗಳಲ್ಲೂ ಬೇಧವಾಗುವದು ಸಹಜ. ಸಾಹಿತಿಯು ಸ್ವತಂತ್ರನಿರಬೇಕು. ಸಾಹಿತ್ಯದಲ್ಲಿ ಹಿಟ್ಲರಶಾಹಿ ನಡೆಯಲಾರದು.

ಇಂದು ನೂರಾರು ಬಗೆಯ ಸಾಹಿತ್ಯ ನಮಗೆ ಬೇಕು. ಎಲ್ಲರೂ ಶ್ರೇಷ್ಠವಾದ ಸಾಹಿತ್ಯ ಬರೆಯಬೇಕಾಗಿಲ್ಲ. ಎಲ್ಲರೂ ರೋಮಾಂಚಕ ಪ್ರೇಮದ ಕತೆಗಳನ್ನೂ ಬರೆಯಬೇಕಾಗಿಲ್ಲ. ಮಕ್ಕಳಿಂದ ಹಿಡಿದು ಮುದುಕರ ತನಕ, ಶಿಕ್ಷಿತರಿಂದ ಅಶಿಕ್ಷಿತರ ತನಕ ವಾಸ್ತವತೆ, ಕಲ್ಪನೆ, ಸಾಹಸ, ಬೋಧೆ, ಹಾಸ್ಯ, ಆನಂದ ಇವು ಎಷ್ಟು ರೂಪದಿಂದ ಒದಗುವವೋ ಅಷ್ಟು ಬೇಕು. ನಮ್ಮಲ್ಲಿಂದು ದೊಡ್ಡ ಸಾಹಿತ್ಯವೂ ಇಲ್ಲ, ಸಣ್ಣ ಸಾಹಿತ್ಯವೂ ಇಲ್ಲ. ಒಂದು ಕವನ ಇಲ್ಲವೆ ಕತೆಯಿಂದ ತಾವು ದೊಡ್ಡ ಸಾಹಿತಿಗಳೆಂದು ತಿಳಿಯುವ ಜನ ನಮ್ಮಲ್ಲಿ ಬಹಳ. ಶಿಷ್ಟಸಾಹಿತ್ಯ ಕಂಡವರು ನಮ್ಮಲ್ಲಿ ವಿರಳರು. ಒಂದೆರಡು ಬರಹಗಳಿಂದ ತಾವು ಉದ್ದಾಮ ಸಾಹಿತಿಗಳಾದೆವೆಂದು ಅನೇಕರು ಭಾವಿಸುತ್ತಾರೆ. ಈ ಅಲ್ಪತೃಪ್ತಿ ನಮಗೆ ಸಲ್ಲದು.

ಸಾಹಿತ್ಯ ನಿರ್ಮಾಣಕ್ಕೆ ಅನುಭವ ಬೇಕು. ಆ ಅನುಭವವಿಲ್ಲದಿದ್ದರೆ ನಿರಾಶರಾಗಬಾರದು. ಭಾಷೆ ಬಲ್ಲವರು ಇತರ ಭಾಷೆಗಳ ಸಾಹಿತ್ಯದ ಸವಿಯನ್ನು ಕನ್ನಡ ಜನರಿಗೆ ಉಣಿಸಲು ನೆರವಾಗಲಿ. ಪರದೇಶಗಳ ಅನುಭವವೂ ನಮಗೆ ಬೇಕು. "ವರ್ಲ್ಡ ಕ್ಲಾಸಿಕ್ಸ"ದ ಅನುವಾದ ಕನ್ನಡದಲ್ಲಿ ಮಾಡುವವರು ನಮಗ ಬೇಕು. ವಿಜ್ಞಾನ, ತತ್ವಶಾಸ್ತ್ರ, ಸಾಹಿತ್ಯ, ಕಲೆ ಇವೆಲ್ಲವುಗಳ ಮೇಲೆ ತುಂಬ ಗ್ರಂಥಗಳಿವೆ. ಇಂಗ್ಲಿಷ ಭಾಷೆಯ ಮೂಲಕ ಅಪಾರ ಜ್ಞಾನ ಸಂಗ್ರಹಿಸಲು ನಮಗೆ ಅನುಕೂಲವಾಗಿದೆ. ಅನುವಾದಗಳ ಮೂಲಕ ಆ ಜ್ಞಾನ ಕನ್ನಡದಲ್ಲಿ ಬರುವದವಶ್ಯವುಂಟು. ಈ ಅನುವಾದದ ಕೆಲಸ ಸುಲಭವಲ್ಲ. ಅದಕ್ಕೆ ಶ್ರಮ, ಸಹಿಷ್ಣುತೆ ಬೇಕು, ಅಭ್ಯಾಸ ಬೇಕು.

ಇನ್ನು ವಿಮರ್ಶೆಯನ್ನು ಕುರಿತು ಎರಡು ಮಾತು ಹೇಳಬಯಸುತ್ತೇನೆ. ಒಳ್ಳೆಯ ಪುಸ್ತಕವಾವುದು ಒಳ್ಳೆಯದಲ್ಲದುದಾವುದು ಎಂದು ಜನಕ್ಕೆ ತಿಳಿಸಿ ಕೊಡಬೇಕಾದುದೂ ಒಂದು ಕೆಲಸ. ಅದಕ್ಕೆ ವಿಮರ್ಶಕರು ಬೇಕು. ಇಂದು ನಮ್ಮಲ್ಲಿ ವಿಮರ್ಶೆ ಎಂಬುದು ತೀರ ಸುಲಭವಾಗಿದೆ! ಅಲ್ಪ ವಿದ್ಯೆಯುಂಥ ಪ್ರಶಸ್ತನಾದವನು ಕೂಡ ಯಾವ ವಿಷಯವನ್ನೂ, ಎಂಥ ಗ್ರಂಥವನ್ನೂ, ಎಂಥ ಕಲೆಯನ್ನೂ ವಿಮರ್ಶಿಸಲು ಹಿಂಜರಿಯುವದಿಲ್ಲ! ಆದರೆ ವಿಮರ್ಶಕನ ಭೂಮಿಕೆ ನ್ಯಾಯಾಧೀಶನ ಭೂಮಿಕೆ. ಅವನ ಹೊಣೆ ಹೆಚ್ಚಿನದಿರುತ್ತದೆ. ಅವನು ನೂರಾರು ಉತ್ತಮ ಗ್ರಂಥ, ಕಲಾಕೃತಿಗಳನ್ನು ನೋಡಿದವನಿರಬೇಕು. ವಿಮರ್ಶಕನು "ತನ್ನ"ತನ ಮರೆಯಾಗಿರಿಸಿಕೊಳ್ಳಬಲ್ಲವನಿರಬೇಕು. ಕಲಾವಿದನ ಇಲ್ಲವೆ ಲೇಖಕನ ನಿರೂಪಣೆ ತನಗೆ ಒಪ್ಪಲಿ, ಒಪ್ಪದಿರಲಿ, ಅದನ್ನು ಅವ ಸರಿಯಾಗಿ ಮಾಡಿದ್ದಾನೆಯೋ ಎಂಬುದನ್ನು ಕೂಡಿ ನೋಡುವದೇ ವಿಮರ್ಶಕನ ಮುಖ್ಯ ಕೆಲಸ. ಇಂಥವನ ವಿಮರ್ಶೆಯೇ ಸಾಹಿತಿಯನ್ನಾಗಲಿ ಕಲಾವಿದನನ್ನಾಗಲಿ ಎಚ್ಚರಿಸಬಲ್ಲದು, ಪ್ರೋತ್ಸಾಹಿಸಬಲ್ಲದು.

ಕೊನೆಗೆ ನಮ್ಮಲ್ಲಿ ಒಂದು ಹೇಳಿಕೆ. ನುಡಿಯು ಅನುಭವ, ಜ್ಞಾನಗಳನ್ನು ಹೊರಗೆ ಹಾಕುವ ಸಾಧನವಾಗಿದ್ದಂತೆ, ಮನುಷ್ಯನ ವಿಚಾರಗಳನ್ನು ಪ್ರಕಟಪಡಿಸುವ ಸಾಧನವೂ ಆದುದು. ಇತರ ಭಾಷೆಗಳಲ್ಲಿ ಎಷ್ಟೊಂದು ಪಕ್ವ ಹೊಸ ರೀತಿಯ, ಉನ್ಮೇಷಕವಾದ, ತೇಜಸ್ವಿಯಾದ ವಿಚಾರಲಹರಿಗಳು ಹೊರಡುತ್ತಿವೆ ನೋಡಿರಿ. ಅಂಥ ನಿಬಂಧಗಳನ್ನು ನಮ್ಮವರು ಬರೆಯಲಾರರೇ? ಅಂಥ ಆಚಾರ್ಯರು [illegible] ಎಂದು ಹೇಳುವದರಿಂದ ಕೆಲಸವಾಗುವದಿಲ್ಲ. ನಾವು ನಮ್ಮ ವಿಚಾರಗಳನ್ನು ಜನರ ಮುಂದಿಡಬೇಕು.

ನಾನು ತಮ್ಮ ಮುಂದಿರಿಸಿದ ಹಲವಾರು ವಿಷಯಗಳಲ್ಲಿ ಕೆಲವಾದರೂ ತಮಗೆ ಒಪ್ಪೀತೆಂದು ತಿಳಿಯುತ್ತೇನೆ.

ಅಧ್ಯಕ್ಷರ ಭಾಷಣದ ಮೇಲೆ ಬುಧವಾರದ ಮುಂಜಾವಿನ ಕೆಲಸ ಮುಗಿಯಿತು.

ಈ ವರ್ಷ ಮಳೆ ಹ್ಯಾಗೆ?

ಪುಣೆಯ "ಕೇಸರಿ" ಪತ್ರದ ಸಂಪಾದಕ ಶ್ರೀ ಜನಾರ್ದನ ಅರಂದೀಕರ ಇವರು ಪ್ರತಿ ವರ್ಷದಂತೆ, ಮೇ ತಾ. ೧೫ರಿಂದ ಡಿಸೆಂಬರ ತಾ ೧೫ರ ವರೆಗೆ ಗ್ರಹಮಾಲೆಯಲ್ಲಾಗುವ ಗ್ರಹಗಳ ಯುತಿ ಹಾಗೂ ಪ್ರತಿಯೋಗಗಳನ್ನು ಅನುಲಕ್ಷಿಸಿ, ಈ ವರ್ಷದ ಮಳೆಯ ಭವಿಷ್ಯವನ್ನು ಪ್ರಕಟಿಸಿದ್ದಾರೆ. ಅದರ ಸಾರ ಈ ಕೆಳಗಿನಂತಿದೆ — ಮೇ ತಾ ೧೯ರಿಂದ ಹವೆಯಲ್ಲಿ ಬದಲಾವಣೆಯಾಗಿ ಮೇ ತಾ ೨೬ರಿಂದ ಪ್ರಾರಂಭಿಕ ಮಳೆ ಹನಿಸಲು ಆರಂಭವಾಗುವದು, ಮತ್ತು ಜೂನ ತಾ ೧೦ರಿಂದ ಜಡಿ ಮಳೆ ಸುರಿಯಲಾರಂಭವಾಗುವದು. ಜೂನ ತಿಂಗಳ ಕೊನೆಯ ಸುಮಾರಿಗೆ ಮಳೆಗಳೆ ಇರುವದು. ಜುಲಾಯಿ ತಿಂಗಳ ೧–೨ನೆಯ ವಾರಗಳಲ್ಲಿ ಮಳೆ ಮಧ್ಯಮ, ೩ನೆಯ ವಾರದಲ್ಲಿ ಕಡಿಮೆ, ಕೊನೆಯ ವಾರದಲ್ಲಿ ಮಾತ್ರ ಬಹಳ ಮಳೆಯಾಗುವದು. ಆಗೋಸ್ಟ ತಿಂಗಳಲ್ಲಿ ಮಳೆಯ ಮಾನ ಕಡಿಮೆಯಾಗುವದು, ಆದರೆ ಕೊನೆಯ ವಾರದಲ್ಲಿ ಚಲೋ ಮಳೆಯಾಗುವ ಲಕ್ಷಣಗಳುಂಟು. ಸಪ್ಟಂಬರ ತಿಂಗಳ ೩ನೆಯ ವಾರದಲ್ಲಿ ಮಳೆಗೆ ಅನುಕೂಲ ಯೋಗಗಳಿವೆ. ಅಶ್ವಿನ ಮಾಸದ ಕೃಷ್ಣ ಪಕ್ಷದಲ್ಲೂ ಚಲೋ ಮಳೆಯಾಗುವ ಸಂಭವವಿದೆ. ಕಾರ್ತಿಕ ಮಾಸದ ೧ನೆಯ ಹಾಗೂ ೪ನೆಯ ವಾರದಲ್ಲೂ ಮಳೆಯಾಗಬಹುದು. ಒಟ್ಟಾರೆ ಈ ವರ್ಷ ಮಳೆಯ ಯೋಗಗಳು ಸಾಧಾರಣವಿರುತ್ತವೆಂದೂ, ಮಳೆ ಇಲ್ಲೆಂದು ಒಕ್ಕಲಿಗರು ಮರುಗುವಂತಹ ಪರಿಸ್ಥಿತಿಯಿಲ್ಲ. ಮಳೆಯಾಗುವ ಸಂಭವವಿದ್ದ ತಾರೀಖುಗಳು ಈ ಕೆಳಗಿನಂತಿವೆ — ಮೇ — ೧೯, ೨೨, ೨೫, ೨೯, ೩೧ ಜೂನ — ೧, ೪, ೫, ೮, ೧೨, ೧೬, ೧೮, ೨೪, ೨೬ರಿಂದ ೩೦ ಜುಲಾಯಿ— ೫, ೬, ೭, ೯, ೧೧, ೧೬, ೨೦ರಿಂದ ೨೪, ೨೬, ೨೯, ೩೧ ಆಗೋಸ್ಟ — ೧ರಿಂದ ೩, ೮, ೧೧, ೧೩, ೧೮, ೨೦ರಿಂದ ೨೨, ೨೫, ೨೭, ೩೦ ಸಪ್ಟಂಬರ — ೬, ೮, ೧೩, ೧೪, ೧೭, ೨೨, ೨೯, ೩೦ ಅಕ್ಟೋಬರ — ೫, ೪, ೬, ೧೧, ೧೬, ೧೯, ೨೧ ನವಂಬರ — ೧, ೫, ೪, ೭, ೧೧, ೧೨, ೧೬, ೨೪

ದಿ ಕೊಮರ್ಶಿಯಲ್ ಕೊಪೊರೇಶನ್,
ಕುಮಟಾ.
ನಮ್ಮಲ್ಲಿ ಡಿಸೆಲ್ ಮಿಶನ ಕಂಪನಿಯ
ಎಲ್ಲ ತರದ ಪಂಪು ಯೋಗ್ಯ ದರದಿಂದ ಸಿಗುತ್ತದೆ
ವಿ ಎಮ್ [illegible],
ಮೋಟರ ಸ್ಟ್ಯಾಂಡ, ಕುಮಟಾ

WANTED

Four Graduates. Scale for untrained Rs 45-3-125, for trained Rs 50-5-125 with D A at Govt rate and P F Apply sharp

Gibb High School, Kumta, 24-5-46

M. B. PAI,
Chairman,
Governing Body

ಸ್ಥಾನಿಕ ವೃತ್ತಾಂತ.

ಕುಮಟಾ— ಬುಧವಾರದಿಂದ ಮಳೆಗಾಲಕ್ಕೆ ಪ್ರಾರಂಭವಾದಂತಾಗಿದೆ. ದಿನಾಲೂ ಎಂಬಂತೆ ತುಸು ತುಸು ಮಳೆಯಾಗುತ್ತಿದೆ. ಸೆಕೆ ಮಾತ್ರ ಕಡಿಮೆಯಾಗಿಲ್ಲ. ರಾತ್ರಿಯಲ್ಲಿ ಸ್ವಲ್ಪ [illegible]ಯುಂಟು.

ಬುಧವಾರ, ಗುರುವಾರ ಜಿಲ್ಲಾ ಸಾಹಿತ್ಯ ಸಮ್ಮೇಲನ ಜರುಗಿತು. ಬುಧವಾರದ ಮುಂಜಾನೆಯ ವರದಿ ಬೇರೊಂದೆಡೆ ಕೊಟ್ಟಿದೆ. ಬುಧವಾರ ಸಂಜೆ ಮತ್ತು ಗುರುವಾರ ಎರಡೂ ಹೊತ್ತು ಕಾವ್ಯಗಾಯನ, ಉಪನ್ಯಾಸಗಳು, ವಿನೋದಾವಳಿಗಳು, ಕೆಲವೊಂದು ವಿಷಯಗಳ ಚರ್ಚೆ, ಮೈಸೂರ ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕಿ ಶ್ರೀ ಶಾರದಮ್ಮನವರ ಅಧ್ಯಕ್ಷತೆಯಲ್ಲಿ, ಮಹಿಳಾ ಗೋಷ್ಠಿ ಮೊದಲಾದವಾಗಿ, ಗುರುವಾರ ಸಂಜೆ ಅಧ್ಯಕ್ಷರ ಸಮಾರೋಪ ಮತ್ತು ಆಭಾರ ಮನ್ನಣೆಗಳೊಂದಿಗೆ ಸಮ್ಮೇಲನದ ಮುಕ್ತಾಯವಾಯಿತು. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ, ಡಾ| ಶಿವಮೂರ್ತಿ ಶಾಸ್ತ್ರಿ, ಕೆ ಶಿವರಾಮ ವಗೈರೆ ಕರ್ನಾಟಕದ ಪ್ರಮುಖ ಸಾಹಿತಿಗಳು ಸಮ್ಮೇಲನಕ್ಕೆ ಬಂದು ಮುಟ್ಟಿದ್ದರಿಂದ ಅವರ ವಾಗಮೃತದ ಸವಿಯನ್ನುಣ್ಣುವ ಸೌಭಾಗ್ಯ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ದೊರೆಯಿತು. ಸಮ್ಮೇಲನಕ್ಕೆ ಸುಮಾರು ೩೦ ಪ್ರತಿನಿಧಿಗಳು ಬಂದಿದ್ದರೆಂದು ತಿಳಿಯುತ್ತದೆ. ಸಮ್ಮೇಲನ ನಡೆದ ಎರಡೂ ದಿನ ರಾತ್ರಿ ಆಟ ನಾಟಕಗಳಾದವು.

ಕಳೆದ ಗುರುವಾರ ಸಂಜೆ ಹೊಲನಗದ್ದೆಯ ಜ್ಞಾನಶಾರದಾನ ವಾಚನಾಲಯದವರೂ ಒಂದು ಸಣ್ಣ ವಸಂತ ಸಾಹಿತ್ಯೋತ್ಸವ ಜರುಗಿಸಿದರು. ಶ್ರೀಮಾನ್ ಶಿವರಾಮ ಕಾರಂತರು "ಯಕ್ಷಗಾನ" ವಿಷಯದ ಮೇಲೆ ಬೋಧಪ್ರದ ಉಪನ್ಯಾಸವಿತ್ತರು.

ಈ ಹಿಂದೆ ತಿಳಿಸಿದಂತೆ ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ೭ನೆಯ ವಾರ್ಷಿಕ ಮಹಾಸಭೆ ಕಳೆದ ತಾ ೧೮ಕ್ಕೆ ಗುಡೇಅಂಗಡಿ ಕನ್ನಡ ಶಾಲೆಯಲ್ಲಿ ರಾ|| ವ್ಹಿ ಆರ್ ಭಟ್ಟ ಕೆಕ್ಕಾರ ಇವರ ಅಧ್ಯಕ್ಷತೆಯೊಳಗೆ ಸೇರಿ, ವಾರ್ಷಿಕ ವರದಿ, ಲೆಕ್ಕ ಪತ್ರಗಳ ಸ್ವೀಕಾರ, ಹೊಸ ಕಾರ್ಯಕಾರಿ ಮಂಡಳದ ಆಯ್ಕೆ ಮತ್ತು ಶಿಷ್ಯವೃತ್ತಿ ಮೊದಲಾದವುಗಳ ಬಗ್ಗೆ ಹಣದ ಮಂಜೂರಿ ವಗೈರೆ ಕಾರ್ಯಗಳಾದವು. ಕನ್ನಡ, ಇಂಗ್ಲಿಷ ಕಲಿಯುವ ವಿದ್ಯಾರ್ಥಿಗಳಿಗೆ ಪುಸ್ತಕಗಳ ಬಗ್ಗೆ ರೂ ೧೫೦, ಕನ್ನಡ ಟ್ರೇನಿಂಗ್ಗೆ ಹೋಗುವವನಿಗೆ ಪುಸ್ತಕಗಳ ಬಗ್ಗೆ ರೂ ೧೦, ಇಂಗ್ಲಿಷ ವಿದ್ಯಾರ್ಥಿಗಳಿಗೆ ಅರ್ಧ ಫೀ ಪೂರೈಸುವ ಬಗ್ಗೆ ರೂ ೧೩೩, ಇಂಟರ ಸಾಯನ್ಸ ಪರೀಕ್ಷೆಯಲ್ಲಿ ಮೊದಲ ನಂಬರಕ್ಕೆ ಬಂದು ಮುಂದೆ ಕಲಿಯುವವಗೆ ಶಿಷ್ಯವೃತ್ತಿ ಕೊಡಲು ರೂ ೧೪೪, ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಉಚ್ಚ ಶಿಕ್ಷಣಕ್ಕಾಗಿ ಹೋಗುವ ವಿದ್ಯಾರ್ಥಿಗೆ (ಮತ್ತು ಇಂಥ ವಿದ್ಯಾರ್ಥಿಯ ಅಭಾವದಲ್ಲಿ ಎಸ್ ಸಾಯರ್ ಎಸ್ ೬ ಪರೀಕ್ಷೆಯಲ್ಲಿ ಮೊದಲ ನಂಬರಕ್ಕೆ ಬಂದು ಮುಂದೆ ಕಲಿಯುವಾತನಿಗೆ) ಶಿಷ್ಯವೃತ್ತಿ ಕೊಡುವ ಬಗ್ಗೆ ರೂ ೧೨೬, ಕನ್ನಡ ಟ್ರೇನಿಂಗ್ಗೆ ಹೋಗುವ ಓರ್ವನಿಗೆ ಒಂದು ವರ್ಷದ ಪೂರ್ತ ಸಹಾಯ ನೀಡಲು ರೂ ೭೨, ದೇವಿಹೊಸೂರ ಬೇಸಿಕ ಶಾಲೆಗೆ ಹೋಗುವ ಓರ್ವ ವಿದ್ಯಾರ್ಥಿಗೆ ಒಂದು ವರ್ಷದ ಪೂರ್ತ ಸಹಾಯ ನೀಡಲು ರೂ ೩೬ ಮತ್ತು ವೈದಿಕ ವಿದ್ಯೆ ಕಲಿಯುವವರಿಗೆ ಸಹಾಯ ನೀಡಲು ರೂ ೫೦ (ಹೀಗೆ ಅಂತೂ ರೂ [illegible]ಗಳಿಗೆ ಸಹಾಯ ಮಂಜೂರಿ ಕೊಟ್ಟಿದೆ (ಟ್ರೇನಿಂಗಕ್ಕೆ, ದೇವಿಹೊಸೂರ ಶಾಲೆಗೂ ಹೋಗುವವರು ಬರದಿದ್ದಲ್ಲಿ ಅದರಾಗಿ ಕಾದಿಟ್ಟ ಹಣ ಇಂಗ್ಲಿಷ ಶಾಲೆಯ ಹೆಚ್ಚಿನ ವಿದ್ಯಾರ್ಥಿಗಳಿಗೆ ಅರ್ಧ ಫೀ ಹಣ ಕೊಡಲು ವಿನಿಯೋಗಿಸಲಾಗುವದು) ಇದಲ್ಲದೆ ಎಸ್. ಸಾಯರ್ ಎಸ್ ೬, ಮೆಟ್ರಿಕ, ಇಂಗ್ಲಿಷ ಶಾಲೆಯ ವಾರ್ಷಿಕ ಪರೀಕ್ಷೆಗಳಲ್ಲಿ ಸಂಸ್ಕೃತ, ಗಣಿತ ವಗೈರೆ ವಿಷಯಗಳಲ್ಲೂ, ಹೆಣ್ಣು ಹಾಗೂ ಗಂಡು ಮಕ್ಕಳ ಕನ್ನಡ ಮುಲ್ಕೀ ಪರೀಕ್ಷೆಯಲ್ಲೂ ವಿಶೇಷ ಗುಣಗಳನ್ನು ದೊರಕಿಸಿದ ವಿದ್ಯಾರ್ಥಿಗಳಿಗೆ ಇನಾಮು (೨೯) ಕೊಡುವ ಬಗ್ಗೆ ಸಂಘದ ಕಡೆ ರೂ ೯೬ ಜನರಿಂದ ಬಂದದ್ದುಂಟು. ಇವುಗಳ ಬಗ್ಗೆ ಅರ್ಜಿ ಮಾಡಬಯಸುವವರು, ಸಂಘದವರಿಂದ ಮುದ್ರಿಸಿ ಅರ್ಜಿಯ ನಮೂನೆಗಳನ್ನು ಪಡೆದು ಮತ್ತು ಅವುಗಳನ್ನು ತುಂಬಿ, ತಾ ೧೫-೬-೪೬ನೇ ತಾರೀಖಿನೊಳಗಾಗಿ ಅಧ್ಯಕ್ಷರಿಗೆ ಮುಟ್ಟುವಂತೆ ಅರ್ಜಿ ಮಾಡಬೇಕಂತೆ. ಇನಾಮುಗಳಿಗಾಗಿ ಅರ್ಜಿ ಮಾಡುವವರು ಸಾದಾ ಕಾಗದದ ಮೇಲೆ ತಾವು ಪರೀಕ್ಷೆಯಲ್ಲಿ ಪಡೆದ ಗುಣಗಳನ್ನು ಬರೆದು ಮತ್ತು ಶಾಲೆಯ ಮುಖ್ಯಾಧ್ಯಾಪಕರ ಪ್ರಶಸ್ತಿಪತ್ರ ಕಳಿಸಿಕೊಂಡು ಅರ್ಜಿ ಮಾಡತಕ್ಕದ್ದು. ಮೆಟ್ರಿಕ ಹಾಗೂ ಗಂಡು ಮಕ್ಕಳ ಮುಲ್ಕೀ ಪರೀಕ್ಷೆಯ ಬೇರೆ ಬೇರೆ ವಿಷಯಗಳಲ್ಲಿ ಪ್ರಾಶಸ್ತ್ಯ ಪಡೆದವರಿಗೆ ಕೊಡಲೆಂದು ನೇಮಿಸಿಟ್ಟ ಇನಾಮುಗಳಿಗಾಗಿ ಅರ್ಜಿ ಮಾಡುವವರು ಅರ್ಜಿ ಮಾಡಲಿಕ್ಕೆ ಕೊನೆಯ ದಿನ ತಾ ೩೧-೯-೪೬ ಇರುತ್ತದೆ

THE BANK OF RURAL INDIA, LTD.,
(Incorporated in British India under the Indian Companies Act, 1913)
HEAD OFFICE— "Satyabhama Bhavan", KARWAR.
Offices at - KARWAR, KUMTA, SIRSI, HONAVAR & YELLAPUR
Authorised Capital Rs 10,00,000,
Subscribed Capital - Rs 5,00 000
Paid-up Capital - Rs 2 60 000
Rates of Interest on Deposits.
Current a/c. @ 1% p a   Savings Bank a/c @ 2½%
Fixed Deposits for 3 months @ 3% per annum
" , for 6 months @ 3½% ,
" , for 12 months or more @ 4% ,
All Kinds of modern Banking business transacted
Karwar, 15-3-1946
P. X. GRACIOUS.
MANAGING DIRECTOR

ಕೋಡಕಣಿ ಪೋಸ್ಟ ಆಫೀಸಿನಲ್ಲಿ ಇನ್ನೂ ಅವ್ಯವಸ್ಥೆಯುಂಟೆಂದೂ ದಿನ ಹೋದ ಹಾಗೆ ಅದು ಮಿಗಿಲಾಗುತ್ತ ನಡೆದಿದೆಯೆಂದೂ ಓರ್ವರು ದೂರುತ್ತಾರೆ. ಅಧಿಕಾರಿಗಳಿಂದ ಅಲ್ಲಿ ಯೋಗ್ಯ ವ್ಯವಸ್ಥೆ ಮಾಡಿ ತರಿಸಲು ಆಗಲೊಲ್ಲದೇ?

ಬೇರೆ ಎಲ್ಲ ಕಡೆ ಚಿಮಣಿ ಎಣ್ಣೆಯ ದರ ಇಳಿದರೂ ಕೋಡಕಣಿಯ ಯೋಗ್ಯ ದರದ ಅಂಗಡಿಯಲ್ಲಿ ಇನ್ನೂ ಆ ದರ ಇಳಿಸಿರುವದಿಲ್ಲವಂತೆ! ಅಂಗಡಿಯವನ ವಿರುದ್ಧ ಜಿಲ್ಲಾಧಿಪರು ಯೋಗ್ಯಕ್ರಮ ಕೈಕೊಳ್ಳಬೇಕಾಗಿ ಸೂಚನೆ.

ತಿದ್ದುಪಡಿ— ತಾ. ೧೩—೫—೪೬ರ "ವೃತ್ತ"ದಲ್ಲಿ ಚಿಮಣಿ ಎಣ್ಣೆಯ ಹೊಸ ಧಾರಣೆಗಳನ್ನು ಕುರಿತು ಪ್ರಕಟವಾದ ಜಿಲ್ಲಾಧಿಪರ ಆಜ್ಞೆಯ ನಂಬರ ೫೯ ಇರುತ್ತದೆ, ೫೨ ಅಲ್ಲ.

ಹೊನ್ನಾವರ— (ತಾ. ೨೩-೫-೪೬) ಮೊನ್ನೆಯಿಂದ ಮಳೆಯಾಗುತ್ತಿದೆ.

ಕಳೆದ ಸೋಮವಾರ ಈ ಊರ ಇಬ್ಬ ಗೃಹಸ್ಥರಲ್ಲಿ ಗಡಿರೇಷೆಯ ಬಗ್ಗೆ ತಕರಾರು ಬಂದಾಗ ಇಲ್ಲಿಯ ಫೌಜದಾರರು— ಸದರಿ ತಂಟೆ ಪೂರ್ಣವಾಗಿ ದಿವಾಣಿ ಸ್ವರೂಪದ್ದಿದ್ದಾಗ್ಯೂ— ಓರ್ವನ ಪಕ್ಷ ಹಿಡಿದು ಪ್ರತಿಪಕ್ಷಿಗೆ ಕೈದ ಮಾಡಿ ಕಚೇರಿಗೆ ಒಯ್ದರೆಂತಲೂ, ಬಾಯಿಗೆ ಬಂದಂತೆ ಅವನಿಗೆ ಬೈದರೆಂತಲೂ, ರಾತ್ರಿಯ ವರೆಗೆ ಕಚೇರಿಯಲ್ಲಿಟ್ಟುಕೊಂಡರೆಂತಲೂ, ಅವನ ಹಿಂದೆ ಅವನು ಹಾಕಿಸಿದ ಗಿಡ ಕೀಳಿಸಿದರೆಂತಲೂ ವಾರ್ತೆಯುಂಟು. ಫೌಜದಾರರ ಈ ದಾಂದಗಾರಿಯ ಬಗ್ಗೆ ಮೇಲಧಿಕಾರಿಗಳ ಕಡೆ ಅರ್ಜಿಯಾಗಿದೆ.

ಈಗ ಬೇಸಾಯದ ಹಂಗಾಮು ಬಂತು. ಹೂಡುವ ಎತ್ತುಗಳಿಗೆ ಹತ್ತೀಕಾಳು ವಗೈರೆ ಹಾಕುವದಕ್ಕುಂಟು. ಆದರೆ ಹಿಂಡುವ ದನಗಳ ವಿನಹ ಬೇರೆ ದನಗಳಿಗೆ ಹತ್ತಿಕಾಳು ಸಿಗುವದಿಲ್ಲ. ಶೇಂಗಾ ಹಿಂಡಿ ಹಾಕಲಿಕ್ಕೂ ಉಪಾಯವಿಲ್ಲ! ಅದು ಸಿಗುವದು ಮೊದಲೇ ಕಷ್ಟ, ಒಂದಾನು ವೇಳೆ ಸಿಕ್ಕಿದರೆ ಮಣ ೧ಕ್ಕೆ ೨೧-೨೨ ರೂ ಕೊಡಬೇಕು! ಸರಕಾರದವರ ಹಿಂಡಿ ಎಲ್ಲುಂಟೋ ಸರಕಾರವೇ ಬಲ್ಲದು! ಇಲ್ಲಿಯ ಆರ್ಬನ್ ಬೇಂಕಿನವರಿಗೆ ಆ ಹಿಂಡಿ ತರಿಸಲು ಪರವಾನೆ ಕೊಟ್ಟಿದ್ದಾರಂತೆ. ಅವರು ಆ ಹಿಂಡಿ ಮಾಪೇ ಯಲ್ಲಿ ಮಾಗಾವಿಯವರಿಂದ ಕೊಂಡುಕೊಳ್ಳಬೇಕಂತೆ. ಆದರೆ ಮಾಗಾವಿಯವರಲ್ಲಿ ಕೇಳಕೇಳದಾಗ ಹಿಂಡಿ ಶಿಲ್ಕು ಇಲ್ಲೆಂದು ಉತ್ತರ ಸಿಗುತ್ತದೆ! ಶಿರಸಿಯವರೂ ಬೇರೆ ಕಡೆಯವರೂ ಅವರ ಹಿಂಡಿಯನ್ನು ರೂ ೧೨ಕ್ಕೆ ೧ ಮಣದಂತೆ ಒಯ್ಯುತ್ತಿರುವಾಗ ನಿಯಂತ್ರಿತ ಧಾರಣೆಯಿಂದ ಬೇಂಕಿಗೆ ಹಿಂಡಿ ಕೊಡಲು ಮಾಗಾವಿಯವರಲ್ಲಿ ಶಿಲ್ಕು ಹೇಗೆ ಉಳಿದೀತು! ಅಂತು ಇಂತು ಬೇಂಕಿಗೆ ಹಿಂಡಿ ಸಿಗುವದಿಲ್ಲ! ನಿಯಂತ್ರಣ ರಾಜ್ಯದ ಸುಖವಿದು!

ಇದೇ ಬರುವ ತಾ. ೩೦, ೩೧ಕ್ಕೆ ಈ ಊರಲ್ಲಿ ಕನ್ನಡ ನಾಡಿನ ವಿಧಾಯಕ ಕೆಲಸಗಾರರ ಸಮ್ಮೇಲನ ಕೂಡಲಿದೆ.

ದೇಶಸಂಚಾರ ಮಾಡುತ್ತ ಇಲ್ಲಿಗೆ ಬಂದು ತಲ್ಪಿದ ಶಿವಚರಣ ಎಂಬ ಬೈರಾಗಿಯು ತನಗೆ ಗಾಂಜಾ ಬೇಕೆಂದು ಇಲ್ಲಿಯ ಸರಕಾರಿ ಡಾಕ್ಟರರ ಕಡೆಗೆ ಸರ್ಟಿಫಿಕೇಟ ಬೇಡಲು ಹೋಗಿದ್ದನಂತೆ. ಆಗ ಅವರೊಳಗೆ ಏನಾಯಿತೋ ಏನೋ! ಆ ಬೈರಾಗಿಯು ತಮಗೆ ಹೊಡೆಯಲು ಯತ್ನಿಸಿದನು ಎಂದು ಸದರಿ ಡಾಕ್ಟರರು ಫಿರ್ಯಾದಿ ಮಾಡಿದ್ದಾರೆ. ಬೈರಾಗಿಗೆ ಅದರಂತೆ ಮೆಜಿಸ್ಟ್ರೇಟರು ನಿರ್ಬಂಧಿಸಿಟ್ಟಿದ್ದರು. ಆದರೆ ಆತ ೩ ದಿನ ಅನಶನವ್ರತ ಮಾಡಿದ್ದರಿಂದ ಅವನಿಗೆ ಬಿಟ್ಟುಕೊಡಬೇಕಾಯಿತು.

ಮುಂದಿನ ವಾರದಿಂದ ಇಲ್ಲಿಯ ಸೀಧಾ ಅಂಗಡಿಗಳಲ್ಲಿ ಆಸಾಮು ಅಕ್ಕಿಯನ್ನು ಮಾರಾಟಕ್ಕಿಡುವರಂತೆ. ಅದರ ಧಾರಣೆ ಪಾಯಲಿ ೧ಕ್ಕೆ ೧।। ರೂಪಾಯಿ! ಈಗ ೧. ರೂ ದರವಿದ್ದಾಗ ಎಷ್ಟೋ ಮಂದಿ ಪೂರ್ಣ ಸೀಧಾ ಅಕ್ಕಿ ಒಯ್ಯಲಾಗದೆ ಗೋಳಾಡುತ್ತಿದ್ದಾರೆ! ಉಪವಾಸ ತೆಗೆಯುತ್ತಿದ್ದಾರೆ! ಇಂತಹ ಪರಿಸ್ಥಿತಿಯಲ್ಲಿ ಪಾಯಲಿಗೆ ರೂ ೧।। ದರವಿಟ್ಟರೆ ಏನು ಪಾಡಾದೀತೆಂದು ಜಿಲ್ಲಾಧಿಪರಿಗೆ ತಿಳಿಯದೇ?

ಮೋಟಾರ ಬಂಡಿಗಳಲ್ಲೀಗ ಸ್ಥಳ ಸಿಗುವದು ಕಷ್ಟ. ಇಲ್ಲಿಂದ ಹಳದೀಪುರಕ್ಕೆ ಹೋಗುವದಾದರೂ ಕುಮಟೆಯ ಟಿಕೇಟು ಕೊಂಡರೆ ಮಾತ್ರ ಟಿಕೇಟು ಸಿಗುವದೆಂದು ಏಜಂಟರು ಹೇಳುತ್ತಾರೆ!

ಇಲ್ಲಿಯ ೨ನೇ ವರ್ಗದ ಮೆಜಿಸ್ಟ್ರೇಟರಿಗೆ ಸೌಜನ್ಯವೆಂಬ ಗುಣವುಂಟೆಂದು ಗೊತ್ತಿಲ್ಲವಾಗಿ ಓರ್ವರು ಬರೆಯುತ್ತಾರೆ. ದನಗಳ ಬಗ್ಗೆ ಹತ್ತಿಕಾಳು ಕೊಡಿಸಬೇಕಾಗಿ ಒಂದು ಅರ್ಜಿ ಬರೆಯಿಸಿ ಮಾಮಲೇದಾರರಿಗೆ ಕೊಡಲು ಅವರು ಕಚೇರಿಗೆ ಹೋಗಿದ್ದರಂತೆ. ಆಗ ಮಾಮಲೇದಾರರು ಊರಲ್ಲಿದ್ದಿಲ್ಲ. ಅದರಿಂದ ಆ ಅರ್ಜಿಯನ್ನು ಅವರು ೨ನೇ ವರ್ಗದ ಮೆಜಿಸ್ಟ್ರೇಟರಿಗೆ ಕೊಟ್ಟರು. ಮಾಮಲೇದಾರರೇ ಹತ್ತಿಕಾಳು ಕೊಡಿಸಬಲ್ಲರು, ತಮಗೆ ಅಧಿಕಾರವಿಲ್ಲ ಎಂದು ಅವರು ಆಗ ಹೇಳಬಹುದಿತ್ತು. ಆದರೆ ಹಾಗೆ ಹೇಳದೆ "ಹತ್ತಿಕಾಳು ಸಿಗಲಾರದು" ಎಂದು ಸದರಿ ಮೆಜಿಸ್ಟ್ರೇಟರು ಹಾರಿದರಂತೆ! ತಾನು ಅರ್ಜಿ ತಕ್ಕೊಂಡು ಮಾಮಲೇದಾರರಿದ್ದಲ್ಲಿದ್ದರೂ ಹೋಗುತ್ತೇನೆ, ತಮ್ಮ ಅರ್ಜಿ ತಿರುಗಿ ಕೊಡಿರಿ ಎಂದು ಆಗ ಅರ್ಜಿದಾರರು ಹೇಳಿದರೆಂದಾಯಿತು. ಆ ಮಾತಿಗೆ "ನೀನು ಬಹಳ ಅಧಿಕಪ್ರಸಂಗಿ ಇರುತ್ತೀ! ಹೊರಗೆ ಹೋಗು!" ಎಂದು ಮೆಜಿಸ್ಟ್ರೇಟರು ಗದರಿಸಿದರಲ್ಲದೆ ಅರ್ಜಿದಾರರಿಗೆ ಹೊರಗೆ ಹಾಕಲು ಪಟ್ಟೇವಾಲನಿಗೂ ಹುಕುಮು ಮಾಡಿದರಂತೆ! ಮೇಲಧಿಕಾರಿಗಳು ಈ ಮೆಜಿಸ್ಟ್ರೇಟರಿಗೆ ಸೌಜನ್ಯದ ಪಾಠ ಕಲಿಸಿಕೊಡುವದೊಳಿತು.

ಈಗ ಸೀಧಾ ಅಂಗಡಿಗಳಲ್ಲಿ ಮಾರಾಟಕ್ಕಿಟ್ಟ ಮುಗ್ಗಿದ ಕುಚಗಿ ಅಕ್ಕಿ ತಮ್ಮ ಗಿರಣಿಯವರಲ್ಲಿಂದಲ್ಲ ಶಿರ್ಸಿಯಿಂದ ಬಂದದ್ದಿರುತ್ತದೆಂದೂ ಗೇರಸಪ್ಪೆ ಗಿರಣಿಯವರು ತಿಳಿಸುತ್ತಾರೆ.

ಮಂಕಿ— (ತಾ. ೪-೫-೪೬) ಇಲ್ಲಿಯ ಭಂಡಸಾಲೆಯಲ್ಲಿ ನಿಯಂತ್ರಿತ ಜವಳಿ ಮಾರುವ ಒಂದು ಅಂಗಡಿಯುಂಟು. ಈ ಅಂಗಡಿಯವರು ಬಂದ ಬಂದ ಜವಳಿ ಟಾಕಗಳ ಮೇಲಿರುವ ನಿಯಂತ್ರಿತ ದರದ ಮುದ್ರೆಗಳನ್ನು ಅಳಿಸಿ ಒಗೆದು ಬಿಡುತ್ತಾರೆ ಮತ್ತು ಗಿರಾಕಿಗಳಿಗೆ ತೋರಿಸಲು ಪೇನ್ಸಿಲಿನಿಂದ ತಮ್ಮದೇ ಆದ ಹೊಸ ಧಾರಣೆಗಳನ್ನು ಬರೆದಿಡುತ್ತಾರೆ! ಮೊನ್ನೆ ಓರ್ವನು ಈ ಅಂಗಡಿಯಲ್ಲಿ ೯ ಆಣೆ ದರದಿಂದ ೪ ವಾರ ವಸ್ತ್ರ ಕೊಂಡಿದ್ದನು. ಆ ವಸ್ತ್ರ ಮನೆಗೆ ಒಯ್ದು ಬಿಡಿಸಿ ನೋಡಲಾಗಿ ವಾರ ೧ಕ್ಕೆ ೭ ಆಣೆ ಎಂದು ಅದರ ಮೇಲೆ ನಿಯಂತ್ರಣಾಧಿಕಾರಿಗಳು ಹಾಕಿದ ದರದ ಮುದ್ರೆ ಕಂಡುಬಂತು. ಅಂಗಡಿಯವರು ತಪ್ಪಾಗಿ ತನ್ನ ಕಡೆ ಹೆಚ್ಚಿಗೆ ಧಾರಣೆ ತಕ್ಕೊಂಡಿರುವರೆಂದು ಆ ಗಿರಾಕಿ ಅಂಗಡಿಯವನಿಗೆ ತಿಳಿಸಿದನು. ಆಗ ಅಂಗಡಿಯವನು "ನಮಗೆ ಈ ಬಟ್ಟೆ ನಿಯಂತ್ರಿತ ದರದಿಂದ ಸಿಕ್ಕಿಲ್ಲ; ನಾವು ಹೆಚ್ಚಿಗೆ ಹಣ ಕೊಟ್ಟಿದ್ದೇವೆ. ಬೇಕಾದರೆ ಬಟ್ಟೆ ಇಟ್ಟುಕೋ, ಇಲ್ಲದಿದ್ದರೆ ತಿರುಗಿ ತಂದುಕೊಟ್ಟು ಹಣ ಒಯ್ಯು!" ಎಂದು ನುಡಿದನು! ಗಿರಾಕಿಗಳಿಗೆ ಪಾವತಿ ಕೊಡುವ ಪದ್ಧತಿಯೇ ಈ ಅಂಗಡಿಯಲ್ಲಿಲ್ಲ!

ಭಟಕಳ— (ತಾ. ೨೩-೫-೪೬) ನಿನ್ನೆಯಿಂದ ಮಳೆಯಾಗುತ್ತಿದೆ.

ನಿನ್ನೆ ಇಲ್ಲಿಯ ಸೀಧಾ ಕಚೇರಿಯವರು ಓರ್ವ ಹುಡುಗನ ಕೈಯಲ್ಲಿ ೫ ರೂ ಗಳ ಗುರುತು ಮಾಡಿದ ೧ ನೋಟು ಕೊಟ್ಟು ರಾ॥ ಅಬ್ಬು ಸಾಹೇಬರ ಅಂಗಡಿಯಿಂದ ೧ ಧೋತ್ರ ಕೊಂಡುಕೊಂಡು ಬಾ ಎಂದು ಕಳಿಸಿಕೊಟ್ಟಿದ್ದರಂತೆ. "ಒಂದೇ ಧೋತ್ರವುಂಟು, ೫ ರೂ. ಕೊಟ್ಟರೆ ಸಿಕ್ಕೀತು" ಎಂದು ಮೆಲ್ಲಗೆ ಹೇಳಿ ಅಂಗಡಿಯವರು ಆ ಹುಡುಗನಿಗೆ ರೂ ೫ಕ್ಕೆ ಆ ಧೋತ್ರ ಕೊಟ್ಟರು! ಹುಡುಗನು ನೆಟ್ಟಗೆ ಸೀಧಾ ಕಚೇರಿಗೆ ಹೋಗಿ ನಡೆದ ವೃತ್ತಾಂತ ಅರುಹಿದನು. ಆಗ ಇಬ್ಬ ಸೀಧಾ ಇನ್ಸಪೆಕ್ಟರು ರಾ॥ ಅಬ್ಬು ಸಾಹೇಬರ ಅಂಗಡಿಗೆ ಓಡಿಬಂದದ್ದು ಕಂಡುಬಂತು. ಆದರೆ ಅಲ್ಲಿ ಪಂಚನಾಮೆ ವಗೈರೆ ಮಾಡದೆ ಕೆಲ ಹೊತ್ತಿನ ಮೇಲೆ ಹಾಗೆಯೇ ಅವರು ಹೊರಟು ಹೋದರು! ಅಂಗಡಿಯವರು ಕೂಡಲೇ "ಅನಿಷ್ಟ ಗ್ರಹಗಳ ಶಾಂತಿ" ಮಾಡಿದಂತೆ ತೋರುತ್ತಿದೆ!

ಶಿರ್ಸಿ— (ತಾ. ೨೦-೫-೪೬) ಹುಲೇಕಲ್ಲಿನ ಸರಕಾರಿ ಉಗ್ರಾಣದಲ್ಲಿ ಮೊನ್ನೆ ಝಡತಿ ಮಾಡಲಾಗಿ ಒಂದು ಅಕ್ಕಿಯ ಚೀಲವೇ ಕಾಣೆಯಾದದ್ದು ಕಂಡು ಬಂತಂತೆ. ಉಗ್ರಾಣದಾರರು ಸರಕಾರಿ ಅಕ್ಕಿಯನ್ನು ಭತ್ತದ ಉಗ್ರಾಣದಲ್ಲೇ ಇಡುತ್ತಿದ್ದರು. ಅದನ್ನು ಬೇರೊಂದು ಉಗ್ರಾಣದಲ್ಲಿಡಲು ಎಷ್ಟೋ ಸಾರೆ ಹುಕುಮು ಕೊಟ್ಟರೂ ಅವರು ಕಿವಿಗೊಡುತ್ತಿದ್ದಿಲ್ಲ! ಕೊನೆಗೆ ಮಾಮಲೇದಾರರು ಸ್ವತಃ ಹೋಗಿ ಅಕ್ಕಿಯನ್ನು ಬೇರೊಂದು ಉಗ್ರಾಣಕ್ಕೆ ಹೊಯಿಸಬೇಕಾಯಿತು. ಆಗ ಲೆಕ್ಕ ಮಾಡಲಾಗಿ ಒಂದು ಚೀಲ ಕಡಿಮೆಯಿದ್ದದ್ದು ಕಂಡು ಬಂತು. ಈ ಉಗ್ರಾಣದಲ್ಲಿ ಈ ಹಿಂದೆ ಎಷ್ಟೋ ಧಾನ್ಯ ಮಾಯವಾಗಿದೆಯಂತೆ!

ಅಂಕೋಲಾ— (ತಾ. ೨೧-೫-೪೬) ಇಲ್ಲಿಯ ಜಂಗಲ ಕಂಟ್ರಾಕ್ಟರ ರಾ॥ ವಿಶ್ವನಾಥ ಪ್ರಭು ಇವರ ಮಾತೋಶ್ರೀಯವರಾದ ಗಂ॥ ಭಾ॥ ಯಶೋದಮ್ಮನವರು ಮೊನ್ನೆ ಮಧ್ಯಾಹ್ನ ತಮ್ಮ ಪ್ರಾಯದ ೬೭ನೇ ವರುಷದಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಯಶೋದಮ್ಮನವರು ಬಹಳ ಧರ್ಮಿಷ್ಠರಿದ್ದರು. ಕೊನೆಯವರೆಗೂ ಅವರು ತಮ್ಮ ನೇಮ-ನಿಷ್ಠೆ ಪಾಲಿಸಿದರು. ಸಾಯುವ ದಿನ ಸಹ ಅವರು ತಮ್ಮ ಮಧ್ಯಾಹ್ನದ ಸ್ನಾನ ಮುಗಿಸಿ, ಮತ್ತು ತಾವು ಪಾನಕ ಕುಡಿದು ಶಾಂತ ರೀತಿಯಿಂದ ಇಹಲೋಕ ಬಿಟ್ಟು ತೆರಳಿದರು. ಅವರ ದಯಾಧರ್ಮ, ದೇವಭಕ್ತಿ ಮತ್ತು ಪುಣ್ಯಬಲ ಬಲವತ್ತರವಿದ್ದುದರಿಂದಲೇ ಅವರಿಗೆ "ಅನಾಯಾಸೇನ ಮರಣಂ" ಪ್ರಾಪ್ತವಾಯಿತೆಂದು ಹೇಳಬಹುದು. ದೇವನು ಅವರಿಗೆ ಚಿರಶಾಂತಿಯನ್ನೀಯಲಿ!

ಯಲ್ಲಾಪುರ— (ತಾ. ೨೧-೫-೪೬) ಮಳೆ ಬೀಳುತ್ತಿದೆ.

ನಮ್ಮ ಜಿಲ್ಲೆಯ ಬೆಟ್ಟಗಳಲ್ಲಿ ಬೆಂಕಿಪೆಟ್ಟಿಗೆ, ಕಡ್ಡಿಗಳಿಗಾಗಿ ಬೇಕಾಗುವ ಮೆತ್ತನೆ ಕಟ್ಟಿಗೆ ವಿಪುಲವಾಗಿ ಸಿಗುತ್ತಿರುವದರಿಂದ ಜಿಲ್ಲೆಯಲ್ಲೇ ಒಂದು ಕಡೆ ಬೆಂಕಿಪೆಟ್ಟಿಗೆ ತಯಾರಿಸುವ ಕಾರಖಾನೆಯನ್ನು ತೆರೆಯುವದೊಳಿತೆಂಬ ಕಲ್ಪನೆ ಹುಟ್ಟಿ ಈಗ ಬಹಳ ವರ್ಷಗಳಾದವು. ನಡುವೆ ವಿಶ್ವಯುದ್ಧ ಉದ್ಭವಿಸಿದ್ದರಿಂದ ಆ ಕಲ್ಪನೆಗೆ ಮೂರ್ತಸ್ವರೂಪ ಕೊಡಲಾಗಲಿಲ್ಲ. ಈಗ ಯುದ್ಧ ಸಂಪಿದ್ದರಿಂದ ಆ ಕಲ್ಪನೆ ಕೃತಿಗಿಳಿಸಲು ಕರ್ನಾಟಕದ ಕೆಲ ವ್ಯಾಪಾರಿಗಳು ಮೊನ್ನೆಯೇ ಒಂದು ಭಾಗೀದಾರಿ ಕಂಪನಿ ಸ್ಥಾಪಿಸಿ, ಕಂಪನಿಯನ್ನು ನೋಂದಿಸಲು ಮುಂಬಯಿಗೆ ಜನ ಕಳಿಸಿಕೊಟ್ಟಿದ್ದಾರಂತೆ. ಈ ಕಂಪನಿ ಸ್ಥಾಪನೆಯಾದ ಸುದ್ದಿ ಹೇಗೋ ಅಂಬರನಾಥದಲ್ಲಿರುವ "ವಿಮ್ಕೋ" (ಇದೊಂದು ಪರಕೀಯ ವ್ಯಾಪಾರಿ ಕಂಪನಿ) ಕಂಪನಿಯವರ ಕಿವಿಗೆ ಬಿತ್ತು. ಕೂಡಲೇ ಅವರು ಈ ಹೊಸ ಕಂಪನಿಯ ಕೆಲಸಕ್ಕೂ ಪ್ರಗತಿಗೂ ಅಡ್ಡಗಲ್ಲು ಹಾಕುವ ಉದ್ದೇಶದಿಂದ, ಈ ಭಾಗದ ಜಂಗಲ ಅಧಿಕಾರಿಗಳಿಗೆ ಮರುಳುಗೊಳಿಸಿ, ನಮ್ಮ ಜಿಲ್ಲೆಯೊಳಗಿನ (ಬೆಂಕಿಪೆಟ್ಟಿಗೆಯ ಉದ್ಯೋಗಕ್ಕೆ ಉಪಯುಕ್ತವಿರುವ) ಎಲ್ಲ ಮೃದು ಕಟ್ಟಿಗೆ ತಾವೇ ಪಡೆಯಲು ವ್ಯೂಹ ರಚಿಸಿದ್ದಾರೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ವಿಮ್ಕೋ ಕಂಪನಿಯ ಚಾಲಕರಿಗೂ ನಮ್ಮ ಜಂಗಲ-ಅಧಿಕಾರಿಗಳಿಗೂ ಗೆಳೆತನ ಬಹಳ. ಈ ಚಾಲಕರು ಇಲ್ಲಿ ಬಂದಾಗ ಜಂಗಲ ಅಧಿಕಾರಿಗಳ ಬಂಗಲೆಯಲ್ಲೇ ಅವರ ಅತಿಥಿಗಳಾಗಿ ಇಳಿಕೊಂಡಿದ್ದರಂತೆ! ಸುದೈವದಿಂದ ಈಗ ಕೊಂಗ್ರೆಸ ಸರಕಾರ ಅಸ್ತಿತ್ವದಲ್ಲಿ ಬಂದಿದೆ. ಆ ಸರಕಾರವು ಪರಕೀಯರ ಕುತಂತ್ರಗಳಿಗೆ ಆಸ್ಪದ ಕೊಡಲಿಕ್ಕಿಲ್ಲೆಂದೂ ಸ್ವಕೀಯರು ಉದ್ಯೋಗ-ಉದ್ಯಮ ಹೊರಡಿಸಬಹುದಾದ ಮತ್ತು ಹೊರಡಿಸತಕ್ಕಂಥ ಕ್ಷೇತ್ರಗಳಲ್ಲಿ ಪರಕೀಯರಿಗೆ ಹಸ್ತಕ್ಷೇಪ ಮಾಡಲು ಅನುವು ಕೊಡಲಿಕ್ಕಿಲ್ಲೆಂದೂ ಆಶಿಸಲಾಗಿದೆ.

ನಾಡಿನ ವರ್ತಕರಿರ್ವರಾದರೂ ವಿಮ್ಕೋ ಕಂಪನಿಯವರಂತೆ ಕಟ್ಟಿಗೆಯು ಮತ್ತೆ ಬೇಡಿದ್ದರೆ, ಅವಗ್ಗೆ ಚೌಕಿ, ತಪಾಸಣೆ, ವರದಿ, ವರದಿಯ ವಿಚಾರ ಹೀಗೆಲ್ಲ ದೀರ್ಘಸೂತ್ರಕ್ರಮ ನಡೆಸಿ ಕೊನೆಯ ನಿರ್ಣಯ ಯಾ ಹುಕುಮು ಕೊಡಲು ನಮ್ಮ ಜಂಗಲ ಇಲಾಖೆಯವರು ಹಾಗೇನಿಲ್ಲೆಂದರೂ ೨-೩ ವರ್ಷ ತಕ್ಕೊಳ್ಳುತ್ತಿದ್ದರೆಂದು ಅನುಭವಿಕರು ಹೇಳುತ್ತಾರೆ. ಆದೇ ಅವರು ಬರೇ ೧-೨ ವಾರಗಳಲ್ಲಿ ಎಲ್ಲ "ಚೌಕಿ" (?) ಮುಗಿಸಿ ವಿಮ್ಕೋ ಕಂಪನಿಯವರಿಗೆ ಒಕ್ಕೆ ಮಾಳ ಕೊಡಲಡ್ಡಿಯಿಲ್ಲೆಂದು ಆಗಲೇ ಶಿಫಾರಸುಪತ್ರ ಕೊಟ್ಟು ಪ್ರಾಂತಿಕ ಸರಕಾರಕ್ಕೆ ಕಳಿಸಿದ ವಾರ್ತೆಯುಂಟು! ಜನತೆಯ ಸರಕಾರದ ಕಾಲದಲ್ಲಿ ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡರೆ ಮೋಸವಾಗುವದು ನಿಶ್ಚಿತ. ಅವರಿಗೆ ಮನೆಗೆ ಹೋಗಲು ಅಪ್ಪಣೆ ಕೊಡುವದೇ ಲೇಸು.

ಮೋಟಾರ ಸಾರಿಗೆಯ ಪರವಾನೆಯಲ್ಲಿ ಕಾಣಿಸಿದ ಪ್ರಯಾಣಿಕರ ಸಂಖ್ಯೆಯ ೧ದಷ್ಟು ಪ್ರಯಾಣಿಕರನ್ನು ಮೋಟಾರದವರು ಒಯ್ಯಲಡ್ಡಿಯಿಲ್ಲೆಂದು ಯುದ್ಧಕಾಲದಲ್ಲಿ ಕೊಟ್ಟ ಸವಲತ್ತು ಪ್ರಾಂತಿಕ ಸರಕಾರದವರು ಒಮ್ಮೆಲೇ ರದ್ದುಪಡಿಸಿದ್ದರಿಂದ ಜನರಿಗೆ ಅತಿಶಯ ಕಷ್ಟವಾಗಿದೆ! ಬಂದ ಬಂದ ಮೋಟಾರ ಬಂಡಿಗಳು ತುಂಬಿ ಬರುತ್ತವೆ. ಆದರಿಂದ ಬಂಡಿಗಳಲ್ಲಿ ಸ್ಥಳ ಸಿಗುವದಿಲ್ಲ. ಸ್ಥಳ ಸಿಗಲು ೪-೬, ೮-೧೦ ದಿನ ಹಾದಿ ಕಾದುಕೊಂಡಿರಬೇಕು. ಮೊನ್ನೆ ಓರ್ವ ಹೆಣ್ಣು ಮಗಳು ಮತ್ತು ಅವಳ ೧೦-೧೨ ವರ್ಷದ ಹುಡುಗ ಇವರು ಮೋಟರ್ಸ ಕಂಪನಿಯ ಮೋಟಾರಬಂಡಿಯಲ್ಲಿ ಹುಬ್ಬಳ್ಳಿಗೆ ಹೋಗಲು ಸಿದ್ಧರಾಗಿ ಕೂತಿದ್ದರು. ಬಂಡಿಯಲ್ಲಿ ೧ ಸ್ಥಳ ಮಾತ್ರ ಉಂಟು, ೧॥ (ಹೆಂಗಸು ಮತ್ತು ಹುಡುಗ) ಟಿಕೇಟು ಕೊಡಬರುವದಿಲ್ಲ, ಹುಡುಗನಿಗೆ ಒಯ್ಯರಿ! "ಸೀಟು" ಹೆಚ್ಚಿಗೆ ಆಗುತ್ತದೆ, ಎಂದು ಹೇಳಿ ಗಾಡಿಯವರು ಆ ಹುಡುಗನಿಗೆ ಗಾಡಿ ಹತ್ತಗೊಡಲಿಲ್ಲ! ತಾಯಿ-ಮಗ ಎಷ್ಟು ಅತ್ತರೂ ಅವರು ಕೇಳಲಿಲ್ಲ! (ಇತರ ಸರ್ವಿಸುಗಳಲ್ಲಿ ಇಷ್ಟು ನಿಷ್ಠುರತೆಯಿಲ್ಲ. ಕಾಲ-ಪರಿಸ್ಥಿತಿ ಮತ್ತು ಜನ ನೋಡಿ ಅವು ತಮ್ಮ ಗಾಡಿಗಳಲ್ಲಿ ಒಮ್ಮೊಮ್ಮೆ ೩-೪ ಜನರನ್ನು ಹೆಚ್ಚಿಗೆ ತಕ್ಕೊಂಡು ಹೋಗುತ್ತವೆ) ಕೊಂಗ್ರೆಸ ಸರಕಾರದವರು ಈ ಕಷ್ಟಗಳನ್ನು ಅನುಲಕ್ಷಿಸಿ ಹೆಚ್ಚಿಗೆ ಬಂಡಿಗಳು ಚಲಾವಣೆಯಲ್ಲಿ ಬರುವ ವರೆಗೆ ೧ ಪಟ್ಟಿನ ಹಳೆಯ ಹುಕುಮನ್ನು ಊರ್ಜಿತವಿಡಬೇಕಾಗಿ ವಿನಂತಿಯುಂಟು.

ಕಾರವಾರ— (೧೯-೫-೪೬) ಜಿಲ್ಲಾ ಶಾಲಾ ಬೋರ್ಡಿನ ಎ. ಓ. ರವರಿಗೆ ಬೇಗನೇ ಇಲ್ಲಿಂದ ಬೇರೆ ಕಡೆ ಕಳಿಸಿಕೊಡದಿದ್ದರೆ ಪ್ರಾಥಮಿಕ ಶಾಲಾ-ಶಿಕ್ಷಕರ ಲೋಕದಲ್ಲಿ

(ನೇ ಪುಟ ನೋಡಿರಿ)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವಾಮಿ ಆರ್ಟ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೧
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು.
ವರ್ಗಣಿಯುಂಗಡ ಕಟ್ಟತಕ್ಕದ್ದು.

Reg. No. B 1270. Monday, 3rd June, 1946.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೪೮.

ಕುಮಟಾ:- ಸೋಮವಾರ, ತಾ. ೩ ಮಾಹೆ ಜೂನ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಮಾಲಪೈಕಾ ೧೫ಎಮ್ ಅಗಲದ
೧ ಸಾಲಿಗೆ ೬ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ಠರಾಯಿಸಬೇಕು.

ಹಿಂದೀ ರಾಜಕಾರಣ.

(ನಿರೀಕ್ಷಕನು ಬರೆದುದು.)

ಹಿಂದೀ ರಾಜಕಾರಣದಲ್ಲಿ ಈವಾಗ ಬಹಳ ಗೊಂದಲವುಂಟಾಗಿದೆ. ಅಖಂಡ ಹಿಂದುಸ್ಥಾನವನ್ನು ತ್ರಿಖಂಡವಾಗಿ ತುಂಡರಿಸಿದ ತ್ರಿಮಂತ್ರಿಗಳ ಯೋಜನೆಗೆ ಎಲ್ಲೆಲ್ಲೂ ಕಡು ವಿರೋಧವುಂಟು. ಆಸಾಮು ಪ್ರಾಂತ ನಿತಾಂತ ಕೊಂಗ್ರೆಸ ಪ್ರವೃತ್ತಿಯದು. ಅಲ್ಲಿಯ ಬಹುಜನ ಸಮಾಜ ಹಿಂದು ಧರ್ಮದ್ದು. ಅದನ್ನು ಪಾಕಿಸ್ತಾನವಾದಿ ಮುಸಲ್ಮಾನ ಪ್ರಮುಖ ಬಂಗಾಲ ಪ್ರಾಂತದೊಡನೆ ಗುಂಪುಗೂಡಿಸಿದ ಬಗ್ಗೆ ಆಸಾಮು ಪ್ರಾಂತದೊಳಗೆ ತೀವ್ರ ಅಸಮಾಧಾನವುಂಟಾಗಿರುವದರಿಂದ ಮುಖ್ಯ ಪ್ರಧಾನರಾದ ಶ್ರೀ|| ಬಾರ್ದೊಲೊಯಿಯವರು ತ್ರಿಮಂತ್ರಿ-ಕಲ್ಪಿತ ಖಂಡದಲ್ಲಿ ಸೇರಲು ನಿರಾಕರಿಸಿದ್ದಾರೆ. ಗಡಿನಾಡಿನಲ್ಲಿ ಮುಸಲ್ಮಾನರ ಸಂಖ್ಯಾಬಲ ಹೆಚ್ಚಿಗೆಯಿದ್ದರೂ ಆ ಪ್ರಾಂತ ಸಿಂಧ, ಪಂಜಾಬಗಳೊಡನೆ ಸೇರಿ ಪಾಕಿಸ್ತಾನ ಸ್ಥಾಪನೆಗೆ ನೆರವಾಗಲು ಬಯಸುವದಿಲ್ಲ. ಗಡಿನಾಡಿನ ಗಾಂಧಿಯವರು ಜನರ ಈ ನಿಷೇಧವನ್ನು ಕ್ರಮಗೊಳಿಸತೊಡಗಿದ್ದಾರೆ. ಪ್ರಾಂತಗಳನ್ನು ಗುಂಪುಗಳಲ್ಲಿ ವಿಭಾಗಿಸುವಾಗ ತ್ರಿಮಂತ್ರಿಗಳು ಪ್ರಾಂತಗಳ ಸ್ವಾತಂತ್ರ್ಯವನ್ನು ಬುದ್ಧಿಪೂರ್ವಕವಾಗಿ ಕಡೆಗಣಿಸಿದ್ದಾರೆ. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲದವರು ತ್ರಿಮಂತ್ರಿಗಳ ಯೋಜನೆಯನ್ನು ಪರಾಂಬರಿಸುವಾಗ ಈ ದೋಷವನ್ನು ಎತ್ತಿ ತೋರಿಸಿದ್ದಾರೆ. ತ್ರಿಮಂತ್ರಿಗಳು ಒಂದೆಡೆ ಸ್ವಾತಂತ್ರ್ಯದ ಪಠ ಮಾಡುತ್ತ ಇನ್ನೊಂದೆಡೆ ಪ್ರಾಂತಗಳ ಸ್ವಾತಂತ್ರ್ಯವನ್ನು ಸೆಳಕೊಂಡಿದ್ದಾರೆಂದು ಕಾರ್ಯಕಾರಿಮಂಡಳದವರು ಸ್ಫುಟಗೊಳಿಸಿದ್ದಾರೆ ಮೇಲಾಗಿ ತ್ರಿಮಂತ್ರಿ-ಕಲ್ಪಿತ ಹಿಂದುಸ್ಥಾನಕ್ಕೆ ಕೂಡಲೆ ಸಂಪೂರ್ಣ ರಾಜ್ಯಾಧಿಕಾರ ದೊರೆಯಲಾರದು. ಬ್ರಿಟಿಶ ಸೈನಿಕರು ಹಿಂದುಸ್ಥಾನದೊಳಗ ಈಗಿನಂತೆ ಮುಂದೆಯೂ ಕೆಲ ಕಾಲ ಉಳಿಯುವರೆಂದೂ ಹಿಂದುಸ್ಥಾನದ ಅಲ್ಪಸಂಖ್ಯಾಕರ ರಕ್ಷಣೆ ಮಾಡುವ ಹೊಣೆ ಬ್ರಿಟಿಶರದು ಇರುತ್ತದೆಂದೂ ತ್ರಿಮಂತ್ರಿಗಳು ವಾದಿಸುತ್ತಾರೆ. ರಾಜ್ಯಾಧಿಕಾರಕ್ಕೆ ನ್ಯೂನತೆಯನ್ನುಂಟು ಮಾಡುವ ಅಧಿಕಾರ ಬ್ರಿಟಿಶ ಜನಾಂಗಕ್ಕುಳಿಯಲಾರದು. ಸಂಪೂರ್ಣ ಸ್ವತಂತ್ರ ರಾಷ್ಟ್ರದೊಳಗಿನ ಅಲ್ಪಸಂಖ್ಯಾಕರ ರಕ್ಷಣೆಯ ಹೊಣೆ ಬೇರೆ ಜನಾಂಗಕ್ಕೆ ಇರಗೊಟ್ಟರೆ ಬಹುಸಂಖ್ಯಾಕರು ಪರತಂತ್ರರಾಗುವದಿಲ್ಲವೇ ? ಬಹುಸಂಖ್ಯಾಕರನ್ನು ಈ ಪರಿ ಪರತಂತ್ರಗೊಳಿಸುವ ದೆಸೆಯಿಂದ ಅಲ್ಪಸಂಖ್ಯಾಕರ ರಕ್ಷಣೆಯ ಹೊಣೆ-ಸಮಸ್ಯೆಯನ್ನು ಸಾಮ್ರಾಜ್ಯವಾದಿಗಳು ಎಬ್ಬಿಸುವದು ಹಿಂದಿನಿಂದ ನಡೆದುಬಂದ ಪ್ರಘಾತ! ಕೊಂಗ್ರೆಸ ಕಾರ್ಯಕಾರಿ ಮಂಡಳವು ತ್ರಿಮಂತ್ರಿಗಳಿಗೆ ಈ ದೋಷ ಚನ್ನಾಗಿ ಕಾಣಿಸಿಕೊಟ್ಟಿದೆ. ಸಂಕ್ರಮಣಕಾಲೀನ ಸರಕಾರದಲ್ಲಿ ರಾಷ್ಟ್ರೀಯ ಸಭೆಯವರು ಸೇರಲಾರರು. ಸರ್ವಾಧಿಪತಿಗಳಿಗೆ ಅಧೀನವಾಗಿ, ಅವರ ಸರ್ವಾಧಿಕಾರಕ್ಕೆ ತಲೆಬಾಗಿ ರಾಷ್ಟ್ರೀಯ ಸಭೆಯವರು ಆ ಸರಕಾರದಲ್ಲಿ ಸೇರಿದರೆ ಬರೇ ವ್ಯಕ್ತಿಗಳಲ್ಲಿ ಬದಲು ಮಾಡಿದಂತಾಗುವದು; ರಾಜ್ಯ ಧೋರಣದಲ್ಲಿ ಅಭ್ಯಂತರವಾಗಲಾರದು. ರಾಷ್ಟ್ರೀಯ ಮುಂದಾಳುಗಳಿಗೆ ಅಧಿಕಾರ-ಸ್ಥಾನಗಳನ್ನು ಸಂಪಾದಿಸಿ ಕೊಡುವದಕ್ಕಾಗಿ ರಾಷ್ಟ್ರೀಯ ಸಭೆಯ ಪ್ರಯತ್ನ ನಡೆದದ್ದಲ್ಲ. ಸಂಕ್ರಮಣಕಾಲೀನ ಸರಕಾರದಲ್ಲಿ ಸರ್ವಾಧಿಪತಿಗಳಿಗೆ, ಜಾರ್ಜ ಭೂಪಾಲರಿಗೆ ಬ್ರಿಟಿಶ ಸರಕಾರದಲ್ಲಿದ್ದಷ್ಟೇ ಅಧಿಕಾರವಿರತಕ್ಕದ್ದೆಂದು ಕೊಂಗ್ರೆಸ-ಪ್ರಮುಖರು ನಿಗ್ರಹ ಹಿಡಿದಿದ್ದಾರೆ. ಬ್ರಿಟನ್ನಿನ ರಾಜ್ಯ ಕಾರಭಾರದಲ್ಲಿ ಮುಖ್ಯ ಪ್ರಧಾನರ ಮಾತಿಗೇ ಪ್ರಾಧಾನ್ಯ. ಅದನ್ನು ಮನ್ನಿಸಲು ಭೂಪಾಲರು ಬದ್ಧರಿದ್ದಾರೆ. ಅದೇ ಪ್ರಕಾರ ಸರ್ವಾಧಿಪತಿಗಳು ನಡೆಯತಕ್ಕದ್ದೆಂದು ಕೊಂಗ್ರೆಸ್ಸಿನ ಅಂಬೋಣ. ಕೇಂದ್ರ ಎಸೆಂಬ್ಲಿಯು ಲೋಕಸಭೆಯೆಂದೆನಿಸಿ, ಆ ಸಭೆಯೊಳಗಿಂದ ತಮ್ಮ ಮಂತ್ರಿಗಳನ್ನು ಆರಿಸಿಕೊಳ್ಳಬೇಕೆಂದೂ, ಆ ಮಂತ್ರಿಗಳ ತಂತ್ರದಿಂದಲೇ ಸರ್ವಾಧಿಪತಿಗಳು ಆಡಳಿತ ನಡಿಸಬೇಕೆಂದೂ ರಾಷ್ಟ್ರೀಯರ ಆಗ್ರಹವಿದೆ. ತ್ರಿಮಂತ್ರಿಗಳು ರಾಷ್ಟ್ರೀಯ ಸಭೆಯ ಈ ಅಂಬೋಣವನ್ನು ನಿರಾಕರಿಸಿದ್ದರಿಂದ ಅವರ ತ್ರಿಖಂಡಯೋಜನೆ ಅಂತರಾಳದೊಳಗೆ ಜೋತಾಡುತ್ತಿದೆ. ತ್ರಿಮಂತ್ರಿಗಳು ಪ್ರಾಮಾಣಿಕರಿದ್ದಾರೆಂದು ಮಹಾತ್ಮರ ವಾದ. ಬಾಬು ರಾಜೇಂದ್ರ ಪ್ರಸಾದರೂ ಹಾಗೆಯೇ ವಾದಿಸುತ್ತಿದ್ದಾರೆ. ಬ್ರಿಟಿಶ ಪ್ರಮುಖರು ಅಪ್ರಾಮಾಣಿಕರೆಂದು ಗ್ರಹಿಸಲು ಈವಾಗ ಸಾಧ್ಯವಿಲ್ಲ; ಅವರ ನಡಾವಳಿಯ ಪರಿಣಾಮಗಳನ್ನು ಕಂಡು ಇತಿಹಾಸಕರ್ತರು ಮುಂದೆ ಯುಕ್ತ ಕಂಡ ನಿರ್ಣಯ ಕೊಡಬಹುದು; ಎಂದು ಮಹಾತ್ಮರೂ ರಾಜೇಂದ್ರರೂ ಹೇಳುತ್ತಾರೆ. ಆ ಮಾತಿಗೆ ನನ್ನ ಒಪ್ಪಿಗೆಯಿದೆ. ಮಹಾತ್ಮರು ನುಡಿದಂತೆ ಬ್ರಿಟಿಶರ ದೃಷ್ಟಿಯಿಂದ ತ್ರಿಮಂತ್ರಿಗಳ ಯೋಜನೆ ಯೋಗ್ಯವಿದೆ. ಆದರೆ ಹಿಂದೀ ಜನಾಂಗವು ತನ್ನ ಹಿತದ ದೃಷ್ಟಿಯಿಂದ ಆ ಯೋಜನೆ ಪರಾಂಬರಿಸಬೇಕಲ್ಲವೇ ? ಸ್ವತಂತ್ರನಾಗಿ ಹಾರಾಡುವ ನೊಣಕ್ಕೆ ತನ್ನ ಬಲೆಯಲ್ಲಿ ಹಿಡಿಯುವದಕ್ಕಾಗಿ ಜೇಡಹುಳ ನುಡಿಯುವ ಸವಿ ಸವಿ ಮಾತುಗಳು ಜೇಡಹುಳದ ಸ್ವಭಾವಕ್ಕೆ ಉಚಿತವಿರಬಹುದು. ಆದರೆ ಆ ಮಾತುಗಳನ್ನು ನೊಣವು ನಂಬಿ ನಡೆಯುವದು ಉಚಿತವಾಗಲಾರದು. ಹಿಂದೀ ಜನಾಂಗವು ಕೊಂಗ್ರೆಸ ಕಾರ್ಯಕಾರಿ ಮಂಡಳದ ಮುಖದಿಂದ ತ್ರಿಮಂತ್ರಿಗಳಿಗೆ ಸಮರ್ಪಕ ಉತ್ತರ ಕೊಟ್ಟಿದೆ. ತ್ರಿಮಂತ್ರಿಗಳು ಸಂಕ್ರಮಣ-ಕಾಲೀನ ಸರಕಾರ ರಚಿಸಿ ಸ್ವದೇಶಕ್ಕೆ ತೆರಳುವರು; ಪ್ರಜಾಪ್ರತಿನಿಧಿ ಸಭೆ ಸೇರಿಸಿ ಹಿಂತೆರಳುವರು; ಹಿಂದ-ಜನಾಂಗ ಆಳುವ ಹೊಣೆ ಇಟ್ಟುಕೊಳ್ಳಲು ಬ್ರಿಟಿಶರು ಇನ್ನು ಸಿದ್ಧರಿಲ್ಲ; ಬ್ರಿಟಿಶರು ಹಿಂದುಸ್ಥಾನ ಬಿಟ್ಟುಹೋಗುವದು ಖಂಡಿತ; ಹೀಗೆ ಬಗೆಬಗೆಯ ವಾರ್ತೆಗಳು ದೇಶತುಂಬ ಹರಡಿಕೊಂಡಿವೆ. ಆದರೆ ಆ ಮಾತುಗಳಲ್ಲಿ ಸ್ವಾರಸ್ಯ ಉಳಿದಿಲ್ಲ. ಬ್ರಿಟಿಶರಿಗೆ ಹಿಂದುಸ್ಥಾನ ಬಿಟ್ಟುಹೋಗುವ ಆಲೋಚನೆ ಇಲ್ಲ. ಸಾತಾರೆಯಲ್ಲಿ ಪ್ರತಿ ಸರಕಾರ ಸ್ಥಾಪಿಸಿ ಬ್ರಿಟಿಶ ಸರಕಾರಕ್ಕೆ ಆಹ್ವಾನ ಕೊಟ್ಟ ಆಂದೋಲನದ ಪ್ರಮುಖ ಶ್ರೀ|| ನಾನಾ ಪಾಟೀಲರು ನುಡಿದಂತೆ ಬ್ರಿಟಿಶರನ್ನು ಹಿಂದ-ಜನಾಂಗವು ಒದ್ದಿ ಹೊರಹಾಕುವ ಪ್ರಸಂಗ ಬರುವದೋ ಏನೆಂಬುದನ್ನು ನಾ ಹೇಳಲಾರೆ. ಆದರೂ ಪರಿಸ್ಥಿತಿಯು ಒತ್ತಾಯವಾದನಕ ಬ್ರಿಟಿಶರು ಹಿಂದುಸ್ಥಾನ ಬಿಟ್ಟುಹೋಗಲಾರರೆಂಬುದು ನಿಶ್ಚಿತ.

ಹಿಂದೀ ರಾಜಕಾರಣದ ಮಟ್ಟು ಸರಿಯಾಗಿ ತಿಳಿಯಬೇಕಾದರೆ ರುಶ್ಯರ ಧೋರಣ ತಿಳಕೊಳ್ಳಬೇಕು. ಸಂಯುಕ್ತ ಜನಾಂಗಗಳ ಸಭೆಯಲ್ಲಿ ರುಶ್ಯರಿಗೂ ಬ್ರಿಟನ್-ಅಮೇರಿಕೆಯರಿಗೂ ವಿತುಷ್ಟವುಂಟಾಗಿದೆ. ಮುಸಲ್ಮಾನ ಲೋಕದಲ್ಲಿ ತಮ್ಮ ತಮ್ಮ ಪಾರುಪತ್ಯ ಸ್ಥಾಪಿಸುವದಕ್ಕಾಗಿ ರುಶ್ಯರೂ ಬ್ರಿಟನ್-ಅಮೇರಿಕೆಯರೂ ಯುಕ್ತಿ-ಪ್ರಯುಕ್ತಿಗಳನ್ನು ಹೂಡುತ್ತಿದ್ದಾರೆ. ಇರಾಣದ ಸ್ವಾತಂತ್ರ್ಯದ ಬಗ್ಗೆ ಇರಾಣಿಯರಿಗಿಂತ ರುಶ್ಯರಿಗೇ ಹೆಚ್ಚು ಹಂಬಲ ! ಗ್ರೀಸ, ತುರ್ಕಸ್ತಾನ, ಅರಬಸ್ತಾನ ಜನಾಂಗಗಳಲ್ಲಿ ಈವಾಗ ಭಯಂಕರ ಆಂದೋಲನಗಳುಂಟಾಗಿವೆ. ಬ್ರಿಟಿಶ್ ಗುಪ್ತ ಚಾರರು ಮುಸಲ್ಮಾನ ಧರ್ಮ ಸ್ವೀಕರಿಸಿ ಇಬ್ನಸೌದರ ಆಶ್ರಯದಿಂದ ಅಲ್ಲಿಯ ರಾಜಕಾರಣವನ್ನು ಬ್ರಿಟಿಶ ಪಕ್ಷಪಾತಿಯಾಗಿ ನಡಿಸತೊಡಗಿದ್ದಾರೆ. ಬ್ರಿಟಿಶ ಮುಂತಾದ ಪಾಶ್ಚಾತ್ಯರಿಗೆ ಧರ್ಮದ ಆಸಕ್ತಿ ಕಡಿಮೆ. ಅವರು ನಿತಾಂತ ಭೌತಿಕವಾದಿಗಳು. ಸಾಮ್ರಾಜ್ಯವಾದವೇ ಅವರ ಧರ್ಮ! ಆ ಧರ್ಮಸಾಧನೆಗಾಗಿ ಅವರು ಬೇಕಾದಂತೆ ವರ್ತಿಸಲು ಸಿದ್ಧರಿದ್ದಾರೆ. ಸುಯೇಜ ಕಾಲುವೆಯ ಮೇಲಿನ ಬ್ರಿಟಿಶರ ಪಾರುಪತ್ಯಕ್ಕೆ ರುಶ್ಯರು ಆತಂಕಗಳನ್ನು ನಿರ್ಮಿಸತೊಡಗಿದ್ದಾರೆ. ಅದರಿಂದ ಭೂಮಧ್ಯ ಮತ್ತು ಕೆಂಪು ಸಮುದ್ರಗಳನ್ನು ಜೋಡಿಸಲು ಹೊಸ ಕಾಲುವೆ ಕಟ್ಟಿಸುವ ಒಂದು ಯೋಜನೆಯನ್ನು ಬ್ರಿಟಿಶ ಶಿಲ್ಪಿಗಳು ತಯಾರಿಸಿದ್ದಾರೆ. ಗ್ರೀಸ, ತುರ್ಕಸ್ತಾನ, ಅರಬಸ್ತಾನ, ಇರಾಣ, ಅಫಗಾಣಿಸ್ತಾನ ಮೊದಲಾದ ಮುಸಲ್ಮಾನ ಲೋಕದಲ್ಲಿ ಪ್ರಭುತ್ವ ಸಂಪಾದಿಸುವದಕ್ಕಾಗಿ ರುಶ್ಯರೂ, ಬ್ರಿಟಿಶ-ಅಮೇರಿಕೆಯವರೂ ಆರ್ಭಟ ನಡಿಸಿದ್ದಾರೆ. ಇರಾಣದ ಪ್ರಶ್ನೆಯನ್ನು

The Agricultural & Industrial Bank, Ltd.

[Incorporated in British India, Liability of Members limited]

Head Office: 'LAXMI NIVAS' Buildings, COONDAPOOR. S. I

Begs to announce that the New Issue of 8,000 Fully Paid-up Shares of which the Share List was opened on 27th May 1946, was closed the same day and the Shares are oversubscribed.

We thank, therefore, the General Public and Share-holders for the confidence reposed in the Institution and liberally subscribing for the Shares.

COONDAPOOR,
28th May, 1946

K. Vittaldas Shenai,
Managing Director

ಸಂಯುಕ್ತ ಜನಾಂಗಗಳ ಮಂಡಲದಲ್ಲಿಟ್ಟು ನಿರ್ಣಯಿಸಿಕೊಳ್ಳಬೇಕಾಗಿ ಬ್ರಿಟನ್-ಅಮೇರಿಕೆಯವರು ರುಶ್ಯರಿಗೆ ತಿಳಿಸಿದರು. ಅದಕ್ಕೆ ರುಶ್ಯರು ಒಪ್ಪಲಿಲ್ಲ ಆ ವಿಷಯ ಮಂಡಳದ ಸಭೆಯಲ್ಲಿ ಬಂದ ಕೂಡಲೆ ರುಶ್ಯ ಪ್ರತಿನಿಧಿಗಳು ಎದ್ದುಹೋದರು. ಮಂಡಲದಲ್ಲಿ ತಮಗೆ ಬಹುಮತ ಸಿಗುವಂತಿಲ್ಲೆಂದು ಗೊತ್ತಿದ್ದರಿಂದಲೇ ರುಶ್ಯರು ತಮಗೆ ಸಂಬಂಧಪಟ್ಟ ವಿಷಯಗಳನ್ನು ಆ ಮಂಡಲದಲ್ಲಿ ನಿರ್ಣಯಿಸಿಕೊಳ್ಳಲೊಡಂಬಡುವದಿಲ್ಲ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ರುಶ್ಯ ಪ್ರಭು ಸ್ಟಾಲಿನ್ನರಿಗೆ ಅಮೇರಿಕೆಗೆ ಸ್ನೇಹದ ಭೆಟ್ಟಿ ಕೊಡಲು ಎರಡಾವರ್ತಿ ನಿಮಂತ್ರಿಸಿದ್ದರಂತೆ ಆದರೆ ಸ್ಟಾಲಿನ್ನರು ಆ ನಿಮಂತ್ರಣೆ ನಿರಾಕರಿಸಿದರು! ದೂರದ ಪ್ರವಾಸ ಕೈಕೊಳ್ಳಬಾರದೆಂದು ತಮ್ಮ ವೈದ್ಯರು ಹೇಳಿರುವರೆಂತಲೂ ಆದ್ದರಿಂದ ನಿಮಂತ್ರಣ ಸ್ವೀಕರಿಸಬರುವದಿಲ್ಲೆಂದೂ ಸ್ಟಾಲಿನ್ನರು ಟ್ರೂಮನ್ನರಿಗೆ ಬರೆದು ತಿಳಿಸಿದ್ದಾರಂತೆ ರುಶ್ಯರೂ ಬ್ರಿಟಿಶ-ಅಮೇರಿಕೆಯವರೂ ಪರಸ್ಪರರನ್ನು ದ್ವೇಷಿಸುತ್ತಾರೆ ರುಶ್ಯರ ಶಾಸಕವರ್ಗಗಳನ್ನು ಬ್ರಿಟಿಶ ಅಮೇರಿಕೆಯವರೂ ಬ್ರಿಟಿಶರ ಸಂಘಗಳನ್ನು ರುಶ್ಯರೂ ಯಾವಾಗಲೂ ತತ್ಪರತೆಯಿಂದ ಹೊರಗಡಹುತ್ತಿದ್ದಾರೆ ಈ ವಿರೋಧದೊಳಗಿಂದ ಎಲ್ಲಾದರೂ ಯುದ್ಧದ ಕಿಡಿ ಹಾರುತ್ತದೋ ಎಂಬ ಭಯವುಂಟು ಅಣುಬಾಂಬಿಗೂ ಮಿಗಿಲಾದ ಘಾತಕ ಅಸ್ತ್ರ ಅಮೇರಿಕೆಯಲ್ಲಿ ನಿರ್ಮಾಣವಾದ ವಾರ್ತೆಯುಂಟು ತುರ್ಕರಿಗೂ ರುಶ್ಯರಿಗೂ ಸದ್ಯಕ್ಕೇ ಕೈ ಕೈ ಆಗಬಹುದೆಂದೂ ಹೇಳುತ್ತಾರೆ ರುಶ್ಯ-ತುರ್ಕರೊಳಗೆ ಹಾಗೆ ಯುದ್ಧವೆಸಗಿದಲ್ಲಿ ಬ್ರಿಟಿಶ ಅಮೇರಿಕೆಯವರು ತುರ್ಕ ಪಕ್ಷಪಾತಿಗಳಾಗಿ ಹೋರಾಡುವರೆಂದು ನಾವು ಹೇಳುವದು ಬೇಡ

ತ್ರಿಮಂತ್ರಿಗಳ ತ್ರಿಖಂಡ ಯೋಜನೆಯನ್ನು ರುಶ್ಯರು ಕಟುವಾಗಿ ಟೀಕಿಸುತ್ತಿದ್ದಾರೆ ಬ್ರಿಟಿಶರು ಸ್ವಾತಂತ್ರ್ಯದ ಬರೀ ಹರಟೆ ಹೇಳುತ್ತಾರೆಂದೂ, ಹಿಂದಿ ಜನಾಂಗಕ್ಕೆ ಸ್ವಾತಂತ್ರ್ಯವನ್ನೀಯಲು ಸಂತೋಷಪಡುವದಿಲ್ಲೆಂದೂ, ತ್ರಿಖಂಡ ಯೋಜನೆಯಲ್ಲಿ ಸ್ವಾತಂತ್ರ್ಯದ ಲೇಶವಿಲ್ಲೆಂದೂ ಮೊಸ್ಕೋ ಆಕಾಶವಾಣಿಯಲ್ಲಿ ಮೇಲಿಂದ ಮೇಲೆ ಟೀಕೆ ಮಾಡಲ್ಪಡುತ್ತಿದೆ ಪಾಕಿಸ್ತಾನದ ಸ್ಥಾಪನೆಗಾಗಿ ಅವಶ್ಯ ಬಿದ್ದರೆ ರುಶ್ಯರ ಬೆಂಬಲ ಮುಸಲ್ಮಾನರು ಪಡೆಯುವರೆಂದು ಹಿಂದೊಮ್ಮೆ ಸರ್ ಫಿರೋಜಖಾನ ನೂನರು ಭೀತಿ ಹಾಕಿದ್ದರ. ಮುಂಬರುವ ಹೋರಾಟದಲ್ಲಿ ಹಿಂದುಸ್ಥಾನವನ್ನು ಸಂತೈಸಿಡಬೇಕೆಂದೂ ಪ್ರಸಂಗದಲ್ಲಿ ಅದರ ಬೆಂಬಲ ಸಿಗಬೇಕೆಂದೂ, ತಮ್ಮ ಸ್ವಾರ್ಥಕ್ಕೆ ಹಾನಿಯಾಗದೆ ಹಿಂದೀ ರಾಜ್ಯಪದ್ಧತಿ ಬದಲಿಸಬೇಕೆಂದೂ ಬ್ರಿಟಿಶ ರಾಜಕಾರಣಿಗಳ ಧೋರಣವುಂಟು ರುಶ್ಯರ ಒತ್ತಡ ಹೆಚ್ಚಾದರೆ ತ್ರಿಮಂತ್ರಿಗಳು ಕಾಂಗ್ರೆಸಿನ ಆಕ್ಷೇಪಗಳನ್ನು ನಿವಾರಿಸಬಹುದು ಇಲ್ಲದಿದ್ದರೆ ತಮ್ಮ ಮೊಲಕ್ಕೆ ಮೂರೇ ಕಾಲೆಂದು ಹಟ ಹಿಡಿಯಬಹುದು

ಮಿ|| ಜಿನ್ನಾರವರ ಪಾಕಿಸ್ತಾನದ ಕಲ್ಪನೆಯನ್ನು ತ್ರಿಮಂತ್ರಿಗಳು ಖಂಡಿಸಿದ್ದರಿಂದ ಜಿನ್ನಾರ ಪಾರುಪತ್ಯ ಈವಾಗ ಮುಗಿದಂತೆಯೇ. ಮೇಲಾಗಿ ಲೀಗಿನ ಪ್ರಮುಖರು ಅಧಿಕಾರಕ್ಕಾಗಿ ಹಾತೊರೆಯುತ್ತಾರೆ ಪಾಕಿಸ್ತಾನರಹಿತ ತ್ರಿಖಂಡ ಯೋಜನೆಯನ್ನು ಸ್ವೀಕರಿಸಲಿಕ್ಕೆ ಅವರು ಸಿದ್ಧರಿದ್ದಾರೆ ಸ್ವಾತಂತ್ರ್ಯವಿಲ್ಲದಿದ್ದರೂ ಸರ್ವಾಧಿಪತಿ-ಅಂಕಿತ ಸರಕಾರದಲ್ಲಿ ಸೇರಲಿಕ್ಕೂ ಅವರು ಸಿದ್ಧರು! ಸಿಮ್ಲಾ ಪರಿಷತ್ತಿನಲ್ಲಿ ತ್ರಿಮಂತ್ರಿಗಳು ಜಿನ್ನಾರವರನ್ನು ಚೆನ್ನಾಗಿ ನಿಗ್ರಹಿಸಿದ ವಾರ್ತೆಗಳುಂಟು ಆದರಿಂದ ಜಿನ್ನಾರವರು ವಿಶ್ರಾಂತಿಯ ನೆವ ಮಾಡಿ, ಹಿಂದುಸ್ಥಾನ ಬಿಟ್ಟು ಸ್ವಿಟ್ಝರ್ಲಂಡಕ್ಕೆ ಹೋಗಿ, ಅಲ್ಲಿ ತಮ್ಮ ಶೇಷಾಯುಷ್ಯ ಕಳೆಯುವರೆಂದು 'ಕೇಸರಿ' ಪತ್ರಿಕೆಯ ವಿಶೇಷ ಪ್ರತಿನಿಧಿಗಳಾದ ಶ್ರೀ ತಾಮ್ಹಣಕರರು ಬರೆಯುತ್ತಾರೆ ತಾವು ಹಿಂದೀಯರಲ್ಲವಾಗಿ ಸಾರಿದ ಜಿನ್ನಾರವರು ಪಾಕಿಸ್ತಾನವಾದಕ್ಕೆ ಎಡೆಯಿಲ್ಲದ ರಾಜಕಾರಣದಿಂದ ಅಲಿಪ್ತರಾಗುವ ವಾರ್ತೆ ಅಸಂಭಾವ್ಯವಲ್ಲ ತ್ರಿಮಂತ್ರಿಗಳ ಯೋಜನೆಯ ಅದೃಷ್ಟವೇನೆಂಬದು ಇನ್ನೂ ನಿಶ್ಚಿತವಾಗಿಲ್ಲ ಅದರ ಸ್ವೀಕಾರ-ಧಿಕ್ಕಾರಗಳ ಮೋಡಗಳು ಅಲ್ಲಲ್ಲಿ ಎದ್ದೇಳುತ್ತಿವೆಯಷ್ಟೇ. ಮುಸ್ಲಿಂ ಲೀಗಿನ ಕಾರ್ಯಕಾರಿ ಮಂಡಲ ಇದೇ ವಾರದಲ್ಲಿ ಕೂಡಿ ತನ್ನ ನಿರ್ಣಯ ಕೈಕೊಳ್ಳುವದು ಲೀಗಿನವರು ಯೋಜನೆಯನ್ನು ಸ್ವೀಕರಿಸುವರೆಂದು ನನಗನಿಸುತ್ತಿದೆ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಬರುವ ರವಿವಾರ ಸೇರಲಿದೆ ಸಾರ್ವಭೌಮ ಅಧಿಕಾರದ ಅಭಾವದಲ್ಲಿ ರಾಷ್ಟ್ರೀಯ ಸಭೆಯವರು ಯೋಜನೆಯನ್ನು ಸ್ವೀಕರಿಸಲಾರರು ರಾಷ್ಟ್ರೀಯ ಸಭೆ ಸಹಕರಿಸದಿದ್ದರೆ ತ್ರಿಮಂತ್ರಿಗಳ ಯೋಜನೆ ನಿರರ್ಥಕವಾಗುತ್ತಿದೆ. ಆದರ ಆಕ್ಷೇಪಗಳನ್ನು ಪರಿಹರಿಸಿ ಪೂರ್ಣ ಸ್ವಾತಂತ್ರ್ಯ ಕೊಡಹೋದರೆ ಬ್ರಿಟಿಶ ಸಾಮ್ರಾಜ್ಯಕ್ಕೆ ಹಾನಿಯಾಗುತ್ತದೆ ಹೀಗೆ ತ್ರಿಮಂತ್ರಿಗಳಿಗ ಪೇಚು ಉಂಟಾಗಿದೆ ಸ್ವಾರ್ಥ ಪರಮಾರ್ಥಗಳೆರಡನ್ನೂ ಸರಿಪಡಿಸಿಕೊಂಡು ಸಾಧಿಸುವ ಯೋಜನೆ ತ್ರಿಮಂತ್ರಿಗಳಿಗೆ ಸೂಚಿಸುವದಿಲ್ಲ! ತ್ರಿಮಂತ್ರಿಗಳು ಜೂನ ತಾ ೧೦ನೇಗೆ ಹೊರಡುವರೆಂದು ಹಿಂದೆ ವಾರ್ತೆ ಇತ್ತು ಈಗ ಜೂನ ತಾ ೧೭ರ ವರೆಗೆ ಅವರ ಪ್ರಯಾಣ ಮುಂದರಿದಿದೆ ತ್ರಿಮಂತ್ರಿಗಳು ಹೊರಟು ಹೋಗುವ ಮುಂಚೆ ಹಿಂದೀ ರಾಜಕಾರಣಕ್ಕೆ ಒಂದು ರೂಪ ಬರಬಹುದೆಂದು ನಾನು ಎಣಿಸುತ್ತೇನೆ ತ್ರಿಮಂತ್ರಿಗಳು ಬೇಸರಗೊಂಡಿದ್ದಾರೆಂದೂ ಮುಂದಿನ ವ್ಯವಸ್ಥೆ ಸರ್ವಾಧಿಪತಿ ವೆವ್ವೆಲರಿಗೆ ಒಪ್ಪಿಸಿ ಸ್ವದೇಶಕ್ಕೆ ಮರಳುತ್ತಾರೆಂದೂ ಕೆಲವರು ಹೇಳುತ್ತಾರೆ ಅದು ಹಾಗಾಗಿದ್ದರೆ, ತ್ರಿಮಂತ್ರಿಗಳು ಜೂನ ತಾ ೨೦ ತನಕ ಪ್ರಯಾಣವನ್ನು ಮುಂದರಿಸುತ್ತಿರಲಿಲ್ಲ ಕಾಂಗ್ರೆಸ ಕಾರ್ಯಕಾರಿ ಮಂಡಳದ ಕೊನೆಯ ನಿರ್ಧಾರ ನೋಡಿಕೊಂಡು, ಅದಕ್ಕೆ ಸಮ್ಮತವಾಗುವ ಯೋಜನೆ ಕಲ್ಪಿಸುವ ಆಶಯನ್ನು ಅವರು ಇಟ್ಟುಕೊಂಡಿದ್ದಾರೆಂದು ನನ್ನ ನಂಬಿಗೆಯಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಬೀಳಹತ್ತಿದೆ ಆದರೆ ಇನ್ನೂ ಅದಕ್ಕೆ ಇಳೆ ತುಂಬಿಲ್ಲ ಸೆಕೆಯೂ ಕಡಿಮೆಯಾಗಿಲ್ಲ

ಹೊನ್ನಾವರದೊಳಗಿನ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನ ಮುಗಿಸಿ ಗಾಂಧಿ ಸೇವಾ ಸಂಘದ ಪ್ರಮುಖ ಕಲಸಗಾರರಾದ ಶ್ರೀ ಧೋತ್ರೇ, ಶ್ರೀ ರಂಗರಾವ ದಿವಾಕರ, ಕರ್ನಾಟಕ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಕೆ ವಿ ವೆಂಕಟರಾಮಯ್ಯಾ ಮತ್ತು ಹುದಲಿ ಆಶ್ರಮದ ಶ್ರೀ ವಡವಿ ಇವರು ಶನಿವಾರ ಮಧ್ಯಾಹ್ನ ಇಲ್ಲಿ ಬಂದಿದ್ದರು. ಸಂಜೆ ೪ ಗಂಟೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಕೂಡಿದ ಜಾಹೀರ ಸಭೆಯಲ್ಲಿ ಶ್ರೀ|| ಧೋತ್ರೇ ಹಾಗೂ ದಿವಾಕರ ಇವರ ಭಾಷಣಗಳಾದವು ವ್ಯಕ್ತಿಗತ ಜೀವನ ಸುಂದರ ಮಾಡುವ ಕಡೆಗೇ ಹಿಂದೀಯರ ಪ್ರವೃತ್ತಿ ಹೆಚ್ಚಾಗಿದೆ, ಸಾಮೂಹಿಕ ಜೀವನ ಸುಧಾರಿಸಬೇಕು, ಸಹಕಾರದಿಂದ ವರ್ತಿಸಿ ಇಡೀ ಸಮಾಜದ ಇಲ್ಲವೆ ಜನಾಂಗದ ಜೀವನದ ಮಟ್ಟ ಸುಧಾರಿಸಬೇಕು ಎಂಬ ಹಂಬಲ ಹಿಂದೀಯರಲ್ಲಿ ಬಹಳ ಕಡಿಮೆ, ಅದೇ ಹಿಂದುಸ್ಥಾನದ ಅವನತಿಗೆ ಕಾರಣವಾಗಿದೆ, ಹಿಂದೀಯರು ತಮ್ಮ ನೆರೆಯೊರೆಯ ಪ್ರಾಂತದ ಇಲ್ಲವೆ ಜಿಲ್ಲೆಯ ಜನರ ಗುಣಗಳನ್ನು ಕಂಡುಹಿಡಿದು ಅವರೊಡನೆ ಬಂಧು-ಭಾವನೆ ಬೆಳೆಸುವದರ ಬದಲು, ಅವರ ದೋಷಗಳನ್ನೇ ಹಿಡಿದು ಅವರ ತಿರಸ್ಕಾರ ಮಾಡಲು ಪ್ರವೃತ್ತರಾಗುತ್ತಾರೆ, ಈ ಪ್ರವೃತ್ತಿಯನ್ನು ಹೊಡೆದೋಡಿಸಿ ಎಲ್ಲರೂ ಬಂಧು-ಬಾಂಧವರಂತೆ ವರ್ತಿಸುವಂತೆ ಮಾಡಬೇಕೆಂಬುದೇ ಮಹಾತ್ಮರ ಹಂಬಲ, ಸುತ್ತುಮುತ್ತಲು ಅಜ್ಞಾನ, ಅನಾರೋಗ್ಯ ಮತ್ತು ಬಡತನ ನೆಲಸಿದಲ್ಲಿ ನಡುವೆ ಇರುವ ಜ್ಞಾನಿಗೆ, ಆರೋಗ್ಯವಂತನಿಗೆ ಇಲ್ಲವೆ ಸಿರಿವಂತನಿಗೆ ಎಂದೆಂದೂ ಚಿಂತನ ಸುಖ ಸಿಗಲೊಲ್ಲದು, ಸಮಾಜದಲ್ಲಿ ಹೆಚ್ಚೆಚ್ಚು ಸಾಮ್ಯ-ಸಮಾನತೆಗಳು ನೆಲಸಿದರೆನೇ ಸರ್ವತ್ರ ಸುಖ-ಸಂತೋಷ ಸಮಾಧಾನಗಳು ನೆಲೆಗೊಳ್ಳುವವು, ಈ ಗುರಿ ಸಾಧಿಸುವದಕ್ಕಾಗಿಯೇ ಮಹಾತ್ಮರು ಅಷ್ಟದಶ(೧೮)ಸೂತ್ರಿಕ ವಿಧಾಯಕ ಕಾರ್ಯಕ್ರಮವನ್ನು ರಚಿಸಿ ಮುಂದಿಟ್ಟಿದ್ದಾರೆ, ಈಗನೋ ಸ್ವರಾಜ್ಯ-ಸ್ವಾತಂತ್ರ್ಯ ಸಿಗುವ ಆಶೆ ತೋರುತ್ತಿದೆ, ಆ ಸ್ವಾತಂತ್ರ್ಯ ಸಿಕ್ಕಿದರೂ ರಚನಾತ್ಮಕ ಕಾರ್ಯಕ್ರಮದ ಮಹತ್ವವಾಗಲಿ ಅವಶ್ಯಕತೆಯಾಗಲಿ ಕಡಿಮೆಯಾಗುವಂತಿಲ್ಲ, ಆದ್ದರಿಂದ ಸಕಲರೂ ಸಹಕಾರದಿಂದ ವರ್ತಿಸಿ, ಸಾಂಘಿಕ ಜೀವನವನ್ನು ಸುಧಾರಿಸುವದರ ಕಡೆಗೆ ವಿಶೇಷ ಆಸಕ್ತಿ ತಳೆಯಬೇಕು ಎಂಬುದೇ ಅವರು ಮಾಡಿದ ಭಾಷಣಗಳ ತಿರುಳಾಗಿರುತ್ತದೆ ಸಭಾಧ್ಯಕ್ಷರಾಗಿದ್ದ ರಾ|| ಮುಕುಂದ ಕಾನಭಾಗರು ಅಭ್ಯಾಗತ ಮಹನೀಯರಿಗೆ ಧನ್ಯವಾದಗಳನ್ನರ್ಪಿಸಿದಮೇಲೆ ರಾಷ್ಟ್ರಗೀತವಾಗಿ ಸಭೆಯ ವಿಸರ್ಜನೆಯಾಯಿತು ರಾಷ್ಟ್ರ ಸೇವಾದಲದ ಕಚೇರಿಯವರೂ ಮ್ಯುನಿಸಿಪಾಲಿಟಿಯ ಅಧ್ಯಕ್ಷರೂ ಅಭ್ಯಾಗತರಿಗೆ ಅಲ್ಪೋಪಹಾರವನ್ನಿತ್ತು ಸತ್ಕರಿಸಿದರು

ಮೆಟ್ರಿಕ್ ಪರೀಕ್ಷೆಯ ಫಲಿತಾಂಶ.

ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯ ಪರಿಣಾಮ ನಾಡದು ಬುಧವಾರ ಮುಂಜಾನೆ ೯ಕ್ಕೆ ಪ್ರಕಟವಾಗುವದು ಈ ಜಿಲ್ಲೆಯ ಶಾಲೆಗಳ ಪರಿಣಾಮವನ್ನು ನಾವು ತಂತಿಯಿಂದ ತರಿಸಿ ಬುಧವಾರ ಮುಂಜಾನೆಯೇ "ವೃತ್ತ"ದ ವಿಶೇಷ ಸಂಚಿಕೆ ಹೊರಡಿಸುವವರಿದ್ದೇವೆ ಆ ಸಂಚಿಕೆ ಬೇಕಾದವರು ಮುಂದಾಗಿ ತಿಳಿಸಬೇಕು

ಊರಲ್ಲೀಗ ಕಳವುಗಳಾಗಹತ್ತಿವೆ ಕಳೆದ ಗುರುವಾರ ರಾತ್ರಿ ಕಳ್ಳರು ಇಕ್ಬಾಲ ಸ್ಟೋರ್ಸ ಅಂಗಡಿಯ ಮುಂದಿನ ಒಂದು ಹಲಿಗೆ ಕಿತ್ತಿ ತೆಗೆದು, ಒಳಹೊಕ್ಕು, ಅಲ್ಲಿದ್ದ ಹಣ ಹಾಕುವ ಉಕ್ಕಿನ ಪೆಟ್ಟಿಗೆ (ಕ್ಯಾಶ ಬಾಕ್ಸ)ಯನ್ನೂ ಆ ಪೆಟ್ಟಿಗೆ ಒಡೆದು ತೆಗೆಯಲು ಬೇಕಾದ ಸಾಹಿತ್ಯವನ್ನೂ ತೆಗೆದುಕೊಂಡು ಹೋದರು. ಆ ಪೆಟ್ಟಿಗೆ ಮರುದಿನ ಮುಂಜಾನೆ ಅದೇ ಪೇಟೆಯೊಳಗಿನ ಒಂದು ಖಾಲಿಬಿದ್ದ ಅಂಗಡಿಯಲ್ಲಿ ಒಡೆದು ಎದ್ದದ್ದು ಕಂಡುಬಂತು ಆ ಪೆಟ್ಟಿಗೆಯಲ್ಲಿ ಸುಮಾರು ೪೦ ರೂ ಇತ್ತಂತೆ ಅದೇ ರಾತ್ರಿ ಕಳ್ಳರು ರಾ|| ವೆಂಕಟೇಶ ಪ್ರಭುರವರ ಅಂಗಡಿಯ ಒಂದು ಹಲಿಗೆಯನ್ನು ಕಿತ್ತಿದ್ದರು ಆದರೆ ಒಳನುಗ್ಗಿ ಕಳವು ಮಾಡಿದ್ದು ಕಾಣಲಿಲ್ಲ ಇನ್ನೊಂದು ಬೇರೆ ಅಂಗಡಿಯಲ್ಲೂ ಅದೇ ರಾತ್ರಿ ಕಳವಾದ ಸುದ್ದಿಯಿದೆ ಊರ ನಡುವಿನ ನಡು-ಪೇಟೆಯಲ್ಲಿ ಕಳ್ಳರು ಒಂದೇ ರಾತ್ರಿ ಹೀಗೆ ೪ ಅಂಗಡಿಗಳ ಬಾಗಿಲು ಒಡೆಯುವ ವರೆಗೂ ಯಾರೂ ಅವರನ್ನು ತಡೆಯಲಿಲ್ಲಾದ್ದರ ಮೇಲಿಂದ ಪೇಟೆಯಲ್ಲಿ ಕಾವಲು ಸರಿಯಾಗಿಲ್ಲೆಂದು ಸಿದ್ಧಾಂತ ಮಾಡಬೇಕಾಗುತ್ತದೆ

ಕಳೆದ ಏಪ್ರಿಲ ತಿಂಗಳಲ್ಲಾದ ಎಸ್ ಎಲ್ ಸಿ ಪರೀಕ್ಷೆಗೆ ಗಿಬ್ಸ ಹಾಯಸ್ಕೂಲಿನಿಂದ ಕೂತ (ಶಾಲೆಯ ೨೩ ಮತ್ತು ಹೊರಗಿನ ೫ ಹೀಗೆ ಅಂತು) ೨೮ ಮಂದಿ ವಿದ್ಯಾರ್ಥಿಗಳಲ್ಲಿ ಈ ಕೆಳಗಿನ ೧೪ ಮಂದಿ ಉತ್ತೀರ್ಣರಾಗಿದ್ದಾರೆ ೧ನೇ ತರಗತಿ - ಎಸ್ ಎನ್ ಕೋಡಕಣಿ, ಮುರಲೀಧರ ಎಸ್ ಕಾನಭಾಗ ೨ನೇ ತರಗತಿ - ಎಮ್ ವಿ ಭಟ್ಟ, ಡಿ ಎನ್ ಹೆಗಡೆ, ಟಿ. ಎನ್ ಕಾಮತ, ಆರ್ ಎಮ್ ನಾಯ್ಕ, ಎಸ್ ಎನ್. ಶೈ, ಟಿ ಕೇ ಶೈ. ಆರ್ ಎನ್ ಭಟ್ಟ, ಎಮ್ ಎಚ್ ಸಯ್ಯದ ೩ನೇ ತರಗತಿ — ಎಮ್ ಪಿ ಮಹಾಲೆ, ಎ ವಿ ಶೈ, ಟಿ ಎಸ್ ಕಾನಭಾಗ, ವಿ ಎಮ್ ಶೆಟ್ಟಿ.

ಕಳೆದ ಶುಕ್ರವಾರ ಓರ್ವ ಗೃಹಸ್ಥರು ಹುಬ್ಬಳ್ಳಿಯಿಂದ ಯು ಕೇ ಟಿ ಕಂಪನಿಯ ಮೋಟಾರ ಬಂಡಿಯಲ್ಲಿ ಇಲ್ಲಿಗೆ ಬಂದಿದ್ದರು ಅವರು ಮುಂಬಯಿಯಿಂದ ಒಂದು ನಾಜೂಕಾದ ಧೋತಿ ತಂದಿದ್ದರು ಅದನ್ನು ಕೈಯಲ್ಲೇ ಇಟ್ಟುಕೊಂಡಿದ್ದರಂತೆ ಇಳಿಯುವಾಗ ಘಕ್ಕನೆ ಅದನ್ನು ಮರೆತರು ಮನೆಗೆ ಮುಟ್ಟುತ್ತಲೇ ಅದರ ನೆನಪಾಯಿತು. ಆಗ ಅವರು ಓಡಿಬಂದು ಗಾಡಿಯವರಿಗೆ ಕೇಳಲಾಗಿ, "ನಿಮ್ಮ ಸಾಮಾನು ನೀವು ಇಳಿಯುವಾಗ ಯಾಕೆ ಒಯ್ಯಲಿಲ್ಲ! ಅದು ಈಗ ಇಲ್ಲದಿದ್ದರೆ ನಾವು ಜವಾಬದಾರರಲ್ಲ!" ಎಂದು ಹಾರಿಕೆಯ ಉತ್ತರ ಕೊಟ್ಟರಂತೆ ಮೋಟಾರ ಪ್ರವಾಸಿಗರು ಇದರಿಂದ ತಕ್ಕ ಬೋಧ ಪಡೆಯಬೇಕು

ತಿದ್ದುಪಡಿ. — ಇದ್ದಲಿ ಉರುವಲಿಗಳ ದರ ನಿಯಂತ್ರಿಸಿ ಜಿಲ್ಲಾಧಿಪರು ತಾ ೨೦—೫—೪೬ಕ್ಕೆ ಹೊರಡಿಸಿದ ಆಜ್ಞೆಯ ನಂ ೮ ಕರಿತ್ತದ, ೨ ಇಲ್ಲಿ

ಹೊನ್ನಾವರ— (ತಾ ೧—೬—೪೬) ಮೊನ್ನೆ ಮತ್ತು ನಿನ್ನೆ ಇಲ್ಲಿಯ ಓಸ್ವರ ಸಭಾಮಂದಿರದಲ್ಲಿ ಕರ್ನಾಟಕದೊಳಗಿನ ವಿಧಾಯಕ ಕಾರ್ಯಕರ್ತರ ಸಮ್ಮೇಳನ ಜರುಗಿತು ೧೦—೧೨ ಕಾರ್ಯಕರ್ತೆಯರನ್ನೊಳಗೊಂಡು ಸುಮಾರು ೮೦ರಷ್ಟು ಕೆಲಸಗಾರರು ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಈ ಸಮ್ಮೇಳನಕ್ಕೆ ಬಂದಿದ್ದರು ಗುರುವಾರ ಮುಂಜಾನೆ ಮೊಟ್ಟಮೊದಲು ಧ್ವಜವಂದನೆಯಾಯಿತು. ಕೈ ದಿವಂಗತ ಹಣಮಂತರಾವ ಕೌಜಲಗಿಯವರು ಸ್ವತಃ ನೂತಿಟ್ಟ ನೂಲಿನಿಂದ ನೇಯ್ದು ತಯಾರಿಸಿದ ಬಟ್ಟೆಯಿಂದ ತಯಾರಿಸಿದ ಧ್ವಜವನ್ನು ಈ ಕಾರ್ಯಕ್ಕೆ ಉಪಯೋಗಿಸಿದ್ದರು ಶ್ರೀ ದಿವಾಕರ ರಂಗರಾಯರ ಹಸ್ತದಿಂದ ಧ್ವಜಾರೋಹಣವಾಯಿತು ಆ ಮೇಲೆ ಪ್ರಾರಂಭಿಕ ಪ್ರಾರ್ಥನೆ ಆಗಿ ಶ್ರೀ ವಲ್ಲಾಪುರದವರು ಎಲ್ಲರನ್ನೂ ಸ್ವಾಗತಿಸಿದರು

(೬ನೇ ಪುಟದ ಮೇಲೆ ಮುಂದರಿಸಿದೆ)

ಕೇಳಿದ್ದು, ಕಂಡದ್ದು.

(ಜಿಲ್ಹಾ ಸಂಚಾರಿಯು ಬರೆದುದು)

ಗೋಕರ್ಣ ಸೀಮೆಯಲ್ಲಿ ಕೋಳಿಜೂಜಾಟಗಳು ಅಡೆತಡೆ ಇಲ್ಲದೆ ಸಾಗುತ್ತಿವೆ. ಕೆಲವು ದಿನಗಳ ಹಿಂದೆ ಏಪ್ರಿಲದಲ್ಲಿ ಕೋಳಿಯಂಕಗಳಾದವು, ಆಚೆಯ ವಾರ ಸಾಯಂಕಾಲದಲ್ಲಿ ನಡೆದವು. ಈ ಜೂಜು ನಡಿಸುವವರು ಪೋಲೀಸರಿಗೆ ದೀಕ್ಷೆ ಮಾಡಿದ ಲಕ್ಷ ಕೊಟ್ಟು ಪರವಾನಗೆ ಪಡೆಯುತ್ತಾರಂತೆ (ಅಂದರೆ ನಿಮ್ಮ ಕೋಳಿ ಜೂಜು ನಡೆಯುವಲ್ಲಿ ನಾವು ಬರುವದಿಲ್ಲ, ನಮ್ಮಿಂದ ನಿಮಗೆ ಉಪಸರ್ಗವಾಗುವದಿಲ್ಲ, ಎಂಬ ಅಭಯವಚನ ಪಡೆಕೊಳ್ಳುತ್ತಾರಂತೆ) ಮತ್ತು ಮುಂದೆ ಜೂಜಾಡಲು ಬರುವ ಪ್ರತಿ ಕೋಳಿಗೆ ೪ ಆಣೆಯಂತೆ ಎತ್ತುವಳಿ ಮಾಡುತ್ತಾರಂತೆ. ಪೋಲೀಸ ಪಡೆಯಲ್ಲೂ ಕೆಲವು ದ್ಯೂತ-ಪ್ರಿಯರಿರುತ್ತಾರೆ. ಜೂಜು ನೋಡಬೇಕು, ಜೂಜಿನಲ್ಲಿ ಪಣ ಕಟ್ಟಿ ತಮ್ಮ ದೈವದ ಪರೀಕ್ಷೆ ಮಾಡಬೇಕು ಎಂದು ಅವರಿಗೂ ಅನ್ನಿಸಿದರೆ ಆಶ್ಚರ್ಯಪಡಲು ಕಾರಣವಿಲ್ಲ. ಹೀಗೆ ದೈವದ ಪರೀಕ್ಷೆ ಮಾಡಿನೋಡಲಿಕ್ಕೆ ಹಾಗೂ ತಾವು ಅಭಯ ಕೊಟ್ಟ ಜೂಜುಗಾರರಿಗೆ ಬೇರೆವರ ಉಪಸರ್ಗವಾಗದಂತೆ ನೋಡಿಕೊಳ್ಳಲಿಕ್ಕೆ ಕೋಳಿ-ಜೂಜು ನಡೆಯುವಲ್ಲಿ ಒಬ್ಬಿಬ್ಬ ಪೋಲೀಸ ಪೇದೆಗಳಾದರೂ — ಸಾದಾ ಉಡುಪಿನಲ್ಲಿ — ಹಾಜರಿರುತ್ತಾರೆಂದು ನೋಡಿದವರು ಹೇಳುತ್ತಾರೆ. ಪೋಲೀಸರ ಕೃಪಾಛತ್ರದಲ್ಲಿ ನಡೆಯುವ ಈ ಕೋಳಿಯಂಕಗಳನ್ನು ತಾವು ಕಾಣಿಸಿಕೊಡುತ್ತೇವೆಂದೂ, ಸಾಹೇಬರು ಮೋಟಾರ ಹತ್ತಿ, ಹಾದಿಯ ಮೇಲೆ ಸಿಕ್ಕವರಿಗಾಗಲಿ ತಪ್ಪಿನ ಸ್ಥಳದವರಿಗಾಗಲಿ ಯಾರಿಗೂ ಸುದ್ದಿ-ಸುಳಿವು ಕೊಡದೆ, ಇಂತಹ ಮಾರ್ಗದಿಂದ ಇಂತಹ ಸ್ಥಳದಲ್ಲೇ ಹಂಚಿ ಕಪ್ಪಿನ ಮೇಲೆ ಬಂದು ಮುಟ್ಟಿದಲ್ಲಿ ತಾವು ಅಲ್ಲಿ ಸಾಹೇಬರಿಗೆ ಭೆಟ್ಟಿಯಾಗಿ ಅಲ್ಲಿಂದ ನೆಟ್ಟಗೆ ಕೋಳಿ ಪಡೆ ನಡೆಯುವ ಸ್ಥಳಕ್ಕೆ ಕರೆದೊಯ್ದು ಎಲ್ಲವನ್ನೂ ತೋರಿಸಿಕೊಡುತ್ತೇವಾಗಿಯೂ ಗೋಕರ್ಣದೊಳಗಿನ ಕೆಲವು ನಾಗರಿಕರು ೮-೧೦ ದಿನಗಳ ಹಿಂದೆ ಜಿಲ್ಹಾ ಪೋಲೀಸ ಸಾಹೇಬರಿಗೆ ಅರ್ಜಿ ಮಾಡಿಕೊಂಡಿದ್ದರಂತೆ. ಅರ್ಜಿಯಂತೆ ಸಾಹೇಬರು ಬಂದು ಮುಟ್ಟಲಿಲ್ಲ! ಆದರೂ ಆ ನಾಗರಿಕರು ನಿರಾಶರಾಗದೆ, ಮರುದಿನ ಸಾಯಂಕಾಲವಾದರೂ — ಮರು ದಿನ ರಾತ್ರಿಯೂ ಆ ಕೋಳಿಯಂಕ ನಡೆಯುವದೆಂದು ತಿಳಿದುಬಂದದ್ದರಿಂದ— ಬರ್ರಿ ಎಂದು ತಂತಿ ಕೊಟ್ಟು ಬಿನ್ನವಿಸಿದ್ದರಂತೆ. ಆದರೂ ಸಾಹೇಬರು ಬಂದು ಮುಟ್ಟಲಿಲ್ಲ! ಅರ್ಜಿದಾರರು ತಿಳಿಸಿದ ಸಂಗತಿಗಳ ಚೌಕಶಿ ನಡಿಸಲಾಗುವದೆಂದಷ್ಟೇ ಸಾಹೇಬರು ಹಿಂದಿನಿಂದ ಅರ್ಜಿದಾರರಿಗೆ ತಿಳಿಸಿದ್ದಾರೆ. ಅರ್ಜಿದಾರರು ಸಾಹೇಬರಿಗೆ ಕೋಳಿಪಡೆ ನಡೆಯುವಲ್ಲಿ ಒಯ್ದು ಯಾರ್ಯಾರು ಆ ಜೂಜು ನಡಿಸುತ್ತಾರೆ, ಎಷ್ಟು ಜನರು ಆಡುತ್ತಾರೆ, ಯಾವ ಯಾವ ಪೋಲೀಸ-ಪೇದೆಗಳು ಅಲ್ಲಿ ಬರುತ್ತಾರೆ ಎಂಬ ಎಲ್ಲ ಸಂಗತಿಗಳನ್ನು ಪ್ರತ್ಯಕ್ಷ ತೋರಿಸಿಕೊಡುತ್ತೇವೆಂದು ಎದೆ ತಟ್ಟಿ ಹೇಳುತ್ತಿರುವಾಗ ಆ ಪ್ರತ್ಯಕ್ಷ ಪುರಾವೆಯನ್ನು ಸಂಗ್ರಹಿಸದೆ ಹಿಂದಿನಿಂದ ಗುಪ್ತಯ ಚೌಕಶಿ ಮಾಡಿಸುವದು ಎಷ್ಟರಮಟ್ಟಿಗೆ ಜಾಣತನವೆಂದು ಸಾಹೇಬರಿಗೇ ಗೊತ್ತು! ಆ ಚೌಕಶಿಯನ್ನು ಯಾರ ಮುಖಾಂತರ ಅವರು ಮಾಡಿಸುವರು? ತಮ್ಮ ಕೈಕೆಳಗಿನ ಪೋಲೀಸರ ಕಡೆಯಿಂದಲೇ ಅಲ್ಲವೇ? ಅಂದಬಳಿಕ ಮತ್ತು ಅವರ ಕೃಪಾಛತ್ರದ ನಡತೆಯ ಚೌಕಶಿಯ ಕೆಲಸ ಆರೋಪಿಗಳಿಗೇ ಒಪ್ಪಿಸುವದು ಅದೂ ಒಂದು ವಿಚಿತ್ರ ಕ್ರಮವೇ ಸರಿ! ಮೇಲಾಗಿ ಹಿಂದಿನಿಂದ ಚೌಕಶಿ ಮಾಡಿದಲ್ಲಿ ಪೋಲೀಸ ಸಾಹೇಬರಿಗೆ ಇಲ್ಲವೆ ಅವರ ನಿಯುಕ್ತರಿಗೆ ಕೋಳಿಪಡೆ ನಡೆದದ್ದು ಹೌದೆಂದು ಪುರಾವೆ ಹೇಳುವವರಾರು? ಜೂಜಿಗೆ ಅಭಯವಚನ ಕೊಟ್ಟ ಪೋಲೀಸರೇ? ಜೂಜು ಆಡಿಸಿದ ದಲಾಲರೇ? ಜೂಜಾಡಿದ ಜನರೇ? ಜೂಜಾಟ ನೋಡಿ ಆನಂದಪಟ್ಟ ದ್ಯೂತಪ್ರಿಯರೇ? ಅಥವಾ ಅಲ್ಲಿ ಏನಾದರೂ ತಿಂಡಿ-ತಿನಸುಗಳ ವ್ಯಾಪಾರ ಮಾಡಿ ನಾಲ್ಕು ದುಡ್ಡು ಗಳಿಸಿದ ಚಿಲ್ಲರೆ ವ್ಯಾಪಾರಿಗಳೇ? ಈ ಜನರು ಸತ್ಯ ಸಂಗತಿ ತಿಳಿಸ್ಯಾರೆಂದು ತಿಳಿಯುವದು ದಡ್ಡತನವೇ ಸರಿ. ಅದರಿಂದ ಹಿಂದಿನಿಂದ ಚೌಕಶಿ ಮಾಡಿ ಪ್ರಯೋಜನವೇನೂ ಆಗುವಂತಿಲ್ಲ. ಸಾಹೇಬರು ಈ ಚೌಕಶಿಗಾಗಿ ಸುಮ್ಮನೆ ಕಾಗದ ಶಾಯಿ ಮುಂತಾದ್ದರ ಖರ್ಚ ಮಾಡಬಾರದಾಗಿ ಅರಿಕೆಯಿದೆ!

⁂

ಕದಡಿ ಎಂದರದ ಮಾರ್ಗವಾಗಿ ಗೋವೆಗೆ ಅಕ್ಕಿ ಸಾಗುವದು ಇನ್ನೂ ಕಡಿಮೆಯಾಗಿಲ್ಲ. ಗೋಕರ್ಣದಿಂದಲೂ ಮಾದನಗೇರಿಯಿಂದಲೂ ಹೊಸಕಟ್ಟೆ ಗ್ರಾಮದ ಆಚೆ ಈಚೆ ಯಿರುವ ಹಳ್ಳಿಗಳಿಂದಲೂ ಹೇರಳ ಅಕ್ಕಿ ಕಳ್ಳರಿಯಲ್ಲಿ ಕಳ್ಳತನದಿಂದ ಗೋವೆಗೆ ರಫ್ತಾಗುತ್ತಿದ್ದು ಗೋವೆಯಲ್ಲಿ ಅಕ್ಕಿ ಮಾರಾಟದಿಂದೆಲ್ಲ ಈಗ ರೂ ೦-೩೦ರ ವರೆಗೆ ದರವುಂಟು. ಇದರಿಂದ ಈ ಕಳ್ಳ ವ್ಯಾಪಾರಕ್ಕೆ ಒಳ್ಳೇ ಪ್ರೋತ್ಸಾಹ ಸಿಕ್ಕಿದೆ. ಅದಲ್ಲದೆ ಭಾರಿ ದರದಿಂದ ಗೋವೆಯವರಿಗೆ ಅಕ್ಕಿ ಕೊಟ್ಟು, ಅವರಿಂದ ಕಳ್ಳ ಸರಾಯಿ ತಕ್ಕೊಂಡು, ಅದನ್ನು ಇಲ್ಲಿ ದುಬಾರಿ ದರದಿಂದ ಮಾರಿ ಪ್ರಯೋಜನ ಪಡೆಯುವ ಸರಾಯಿಗಳ್ಳರೂ ಇದ್ದಾರೆ. ಆದರೆ ಈ ಮಾತು ಇಂದು ನನ್ನ ಪ್ರಸ್ತುತ ವಿಷಯವಲ್ಲ. ಈ ವ್ಯಾಪಾರದಲ್ಲಿ ನಡೆದ ಒಂದು ವಿಶೇಷ ಕಥೆ ಹೇಳಲಿಕ್ಕೇ ನಾನೀ ಉಪೋದ್ಘಾತ ಮಾಡುತ್ತೇನೆ. ಮೇಲಿನಂತ

(೬ನೇ ಪುಟದ ಮೇಲೆ ಮುಂದುವರಿಸಿದೆ)

ಗೌ| ಸಾ| ಬ್ರಾಹ್ಮಣ ಸ್ಕಾಲರಶಿಪ ಲೀಗ, ಮುಂಬಯಿ

ಈ ಸಂಸ್ಥೆಯಿಂದ ಸಹಾಯ ಪಡೆಯಬಯಸುವ ದಕ್ಷಿಣೋತ್ತರ ಕನ್ನಡ ಜಿಲ್ಹೆಗಳ ಹಾಯಸ್ಕೂಲ ವಿದ್ಯಾರ್ಥಿ-ವಿದ್ಯಾರ್ಥಿನಿಗಳು (ಸಂಸ್ಥೆಯವರು ಅಚ್ಚುಹಾಕಿಸಿಟ್ಟ ಅರ್ಜಿಯ ಫಾರ್ಮುಗಳಲ್ಲಿ) ಇದೇ ಬರುವ ತಾ. ೩೦ ೬-೪೬ರೊಳಗಾಗಿ, ಗೌರವ ಕಾರ್ಯದರ್ಶಿಗಳು, ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ ಲೀಗ, C/o ಸಾರಸ್ವತ ಬ್ರಾಹ್ಮಣ ಸಮಾಜ, ೧ಕೆಟವಾಡಿ ಗಲ್ಲಿ, ಗಿರಗಾಂವ, ಮುಂಬಯಿ ೪ ಪತ್ತೆಯ ಮೇಲೆ ತಮ್ಮ ಅರ್ಜಿಗಳನ್ನು ಕಳಿಸಿ ಕೊಡಬೇಕಾಗಿ ಲೀಗದವರು ತಿಳಿಸುತ್ತಾರೆ. ಹಾಗೆ ನ್ಯಾರಿ ಪಂಡಿತೋಪಕಾರ (೨ನ ಒಂದನು) ಪಡೆಯಬಯಸುವ ಡಿಪ್ಲೋಮಾ (ಗಿರಗಾಂವ) ಕಾಲೇಜುಗಳ ವಿದ್ಯಾರ್ಥಿಗಳೂ ಮೊನ್ನೆ ಜರುಗಿದ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಎಲ್ಲರಿಗಿಂತಲೂ ಹೆಚ್ಚಿಗೆ ಗುಣಗಳನ್ನು ಪಡಕೊಂಡ ವಿದ್ಯಾರ್ಥಿಗಳೂ ತಿಂಗಳೊಂದಕ್ಕೆ ರೂ ೫ ರಂತೆ ಸಿಗುವ ಶಿಕ್ಷ ವೃತ್ತಿಯನ್ನು ಪಡೆಯಲಿಚ್ಛಿಸುವ ಮುಂಬಯಿ ಪ್ರಾಂತದೊಳಗಿನ ಯಾವದೊಂದು ಉದ್ಯೋಗ ಇಲ್ಲವೆ ಕಲಾಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳೂ ಮೇಲ್ಕಾಣಿಸಿದ ಮಿತಿಯೊಳಗಾಗಿ ತಮ್ಮ ಅರ್ಜಿ ಸಾದರಪಡಿಸಬೇಕಾಗಿರುತ್ತದೆ

ಕುಮಟೆಯ ಸಾಹಿತ್ಯ ಸಮ್ಮೇಲನದಲ್ಲಿ ಹಾಡಿದ

ಬರಮಾಡುವ ಹಾಡು

(ರಾ| ವಿ ಪೆ ಶೆಣೈಯವರು ಬರೆದುದು)

ದಯಮಾಡಿರಿ! ಜಯ ಬರಲಿದು, ಮಾನ್ಯ ಜನಗಳೇ!
ಕನ್ನಡ ಬನದಲ್ಲಿ ನಲಿವ ಶುಕಗಳೇ, ಪಿಕಗಳೇ!

ನಮ್ಮ ನುಡಿಯು ಕನ್ನಡವು,
ನಮ್ಮ ನಾಡು ಕನ್ನಡವು,
ನಮ್ಮದೆಲ್ಲ ಕನ್ನಡವು ಮಾನ್ಯ ಜನಗಳೇ!

ನಾಡ ನಡೆಯು ನುಡಿಯಿಂದ,
ನುಡಿ ನಡೆಯಲಿ ಗೆಲುವಿಂದ,
ಕನ್ನಡ ನುಡಿ ಬಲು ಚಂದ, ಮಾನ್ಯ ಜನಗಳೇ!

ಇದಕೊ ಮೆರೆವ ಸಹ್ಯಗಿರಿ,
ಪರಶುಧರನ ನೆಲದ ಸಿರಿ,
ಎಂ ಮೊರೆವ ಕಡಲ [illegible]! ಮಾನ್ಯ ಜನಗಳೇ!

ಕಲಿ ಹನುಮನ ತಾಯ್ನಾಡು,
ಪಂಪ ನೆನೆದ ಸಿರಿ ನಾಡು,
ಸಾಹಿತ್ಯದ ನೆಲವೀಡು! ಮಾನ್ಯ ಜನಗಳೇ!

ಹಿರಿಯ ಕನ್ನಡದ ನಾಡು,
ತುಂಡು ತುಂಡು ನಾಡಿಂದು,
ಒಂದೆ ನಾಡು ನಮಗೆಂದು, ಮಾನ್ಯ ಜನಗಳೇ!

ಇಲ್ಲಿ ಮಲ್ಲಲರ ತಂಪು,
ಬಿರಿದ ಮಲ್ಲಿಗೆಯ ಕಂಪ,
ಹಕ್ಕಿಯ ಚಿಲಿಪಿಲಿಯಿಂಪು ಮಾನ್ಯ ಜನಗಳೇ!

ನಿಮ್ಮ ಬರವು ನಮಗಿಂದು
ಭಾಗ್ಯ ಬಂದ ಸಿರಿಯಿಂದು,
ಅಳಲ ನೀವ ನಮ್ಮ ಬಿಡು, ಮಾನ್ಯ ಜನಗಳೇ!

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ ಎಮ್ ನಿಂಬಾಳಕರ,
ಬಾಯಸಿಕಲ್ಸ, ಮೋಟರ ಸ್ಟೆಂಡ, ಕುಮಟಾ

NEW STOCKS of the following
have now arrived —
SCHOOL BOOKS
LIBRARY BOOKS
DICTIONARIES
ATLASES, MAPS etc
Address your orders and inquiries to —
The New Supply Agency, Kumta

ನಾಳೆಯ ಖಗ್ರಾಸ ಚಂದ್ರಗ್ರಹಣದ ಭೋಜನ-ಕಾಲ ನಿರ್ಣಯ.

ನಾಳೆ ಬರುವ ಜ್ಯೇಷ್ಠ ಶು| ೧೫ಯ ಶುಕ್ರವಾರ ರಾತ್ರಿ ಘಂ ೧೦-೧೪ರಿಂದ ೨-೬ರ ವರೆಗೆ ಖಗ್ರಾಸ ಚಂದ್ರಗ್ರಹಣವುಂಟು. ಈ ಗ್ರಹಣದ ದಿನ ಮಧ್ಯಾಹ್ನದ ವರೆಗೆ ಊಟ, ನೈವೇದ್ಯ ವಗೈರೆ ಮಾಡಲಡ್ಡಿಯಿಲ್ಲೆಂದು ಕೆಲವು ಪಂಚಾಂಗಗಳಲ್ಲಿ ನಿರ್ಣಯ ಬರೆದದ್ದುಂಟು. ಆದರೆ ಈ ಗ್ರಹಣವು ರಾತ್ರಿಯ ಪೂರ್ವದಲ್ಲಿ ಪೂರ್ಣಗ್ರಾಸವಾಗುತ್ತಿರುವದರಿಂದಲೂ, "ಸರ್ವ (ಪೂರ್ಣ) ಗ್ರಾಸೋ ಭವೇದಿಂದೋಃ ರರ್ಧರಾತ್ರಾದರ್ಧಗೋ ವಾ! ತದಹನ್ಯೇವ ಭೋಕ್ತವ್ಯಂ ಮುಕ್ತಿಂ ದೃಷ್ಟ್ವಾ ತತಃ ಪರೇತ್ ॥" ಎಂಬ ವಚನವು ವಚನ (ಕೃಷ್ಣಾಚಾರ್ಯ-ಸ್ಮೃತಿಮುಕ್ತಾವಲಿ ನೋಡಿರಿ) ಇರುವದರಿಂದಲೂ (ಗೋಕರ್ಣ ಮಠದ ಶ್ರೀ ಪುರುಷೋತ್ತಮತೀರ್ಥ ಗುರುಗಳು ರಚಿಸಿರುವ "ಧರ್ಮಸಿದ್ಧಾಂತ" ಗ್ರಂಥದಲ್ಲೂ ಹೀಗೆಯೇ ತಾತ್ಪರ್ಯ ಕೊಟ್ಟದ್ದುಂಟು.) ಈ ದಿನ ಶಾಸ್ತ್ರದಂತೆ ಹಗಲು ಊಟ, ನೈವೇದ್ಯ ವಗೈರೆ ಮಾಡಲಿಕ್ಕೆ ನಿಷೇಧವುಂಟು. "ಮುಕ್ತೇ ಶಶಿನಿ ಭುಂಜೀತ ಯದಿ ನ ಸ್ಯಾತ್ ಮಹಾನಿಶಾ" ಎಂದು ಪುನಃ ಶಾಸ್ತ್ರವಚನ (ಕೃಷ್ಣಾಚಾರ್ಯ ಸ್ಮೃತಿ ನೋಡಿರಿ) ವಿರುವದರಿಂದಲೂ ಗ್ರಹಣಮೋಕ್ಷವಾಗಲು ೨ ಘಂಟೆ ರಾತ್ರಿ ಮುಕ್ಕಿ ಹೋಗಿ ಆಗ ಮಹಾರಾತ್ರಿಯಾಗುತ್ತಿರುವದರಿಂದಲೂ ಆ ರಾತ್ರಿ ಮೋಕ್ಷವಾದ ನಂತರ ನೈವೇದ್ಯ ಯಾ ಭೋಜನ ಮಾಡಲಿಕ್ಕೆ ಬರುವದಿಲ್ಲ ಎಂದು ಕುಮಟೆಯ ವೈದಿಕರು ಶಾಸ್ತ್ರನಿರ್ಣಯ ಮಾಡಿ ತಿಳಿಸಿದ್ದಾರೆ. ಭಾವಿಕರು ಈ ಕಡೆ ಲಕ್ಷ್ಯ ಕೊಡತಕ್ಕದ್ದು. (ಮುಂದೆ ಮಾರ್ಗಶೀರ್ಷ ಶು| ೧೫ ಯ ಖಗ್ರಾಸ ಗ್ರಹಣಕ್ಕೂ ಇದೇ ಶಾಸ್ತ್ರ ನಿರ್ಣಯ ಅನ್ವಯಿಸುತ್ತದೆಂದು ತೋರುತ್ತದೆ)

ಪ್ರಕಟಣೆ.

ನಾಗರಿಕ ಪೂರೈಕೆ ಖಾತೆ

ಮುಂಬಯಿ ಕೋಟೆ, ತಾ. ೭-೫-೧೯೪೬.

ನಂ ೫೬೪ / VII. — ೧೯೪೬ನೇ ಇಸವಿಯ ಮುಂಬಯಿ ಆಳೆ ಅರಿವೆ ವ್ಯಾಪಾರದ ನಿಯಂತ್ರಣ ಹುಕುಮದ ೨೪ನೇ ಕಲಮಿನೊಳಗಿನ ವಿಧಾನಗಳಿಗನುಸಾರವಾಗಿ, ಕಾನಡಾ ಜಿಲ್ಹೆಯಲ್ಲಿ ಕಲಮು ೨೪ರಲ್ಲಿ ಹೇಳಿದಂತೆ ಕೆಲಸ ನಡಿಸುವ ಬಗ್ಗೆ, ತಾ ೧೦-೧-೧೯೪೬ರ ಮಹಾಕಾಸಿನ ಅರಾಜ (ಪೂರ್ತಿಕೆ) ಯಲ್ಲಿ ಹೊರಡಿಸಿದ ೫೬೪ / VII ನೇ ನಂಬರದ ಸರಕಾರಿ ಪ್ರಕಟನೆಯಿಂದ ಅಧಿಕಾರ ಕೊಡಲ್ಪಟ್ಟ ಅಧಿಕಾರಿಗಳ ವಿನಹ ಈ ಕೆಳಗೆ ಕಾಣಿಸಿದ ಅಧಿಕಾರಿಗಳಿಗೂ (ಸದರ ಕಲಮಿನಂತೆ ಕೆಲಸ ಮಾಡಲು) ಮುಂಬಯಿ ಸರಕಾರದವರು ಅಧಿಕಾರ ಕೊಟ್ಟಿದ್ದಾರೆ.—

(೧) ಜಿಲ್ಹಾ ಅಧಿಕಾರಿಗಳು
(೨) ಜಿಲ್ಹಾ ಕಚೇರಿಯ ಮುಖ್ಯ ತಪಾಸಕರು
(೩) ಜಿಲ್ಹಾ ಕಚೇರಿಯ ತಪಾಸಕರು

೨. ಹಿಂದುಸ್ಥಾನ ಸಂರಕ್ಷಣ ಕಾನೂನಿನ ೧೧೯ನೆಯ ಕಟ್ಟಳೆಯ ೧ನೇ ಒಳಕಟ್ಟಳೆಗನುಸಾರವಾಗಿ ಈ ಹುಕುಮನ್ನು ಮುಂಬಯಿ ಸರಕಾರದ ಗಾಝೆಟಿನಲ್ಲೂ ಕಾನಡಾ ಜಿಲ್ಹೆಯಲ್ಲಿ ಪ್ರಸಾರವುಳ್ಳ ಈ ಕೆಳಗಿನ ಪತ್ರಿಕೆಗಳಲ್ಲೂ ಪ್ರಕಟಿಸಲಾಗತಕ್ಕದ್ದು —

೧ [illegible]
೨ ಸಂಯುಕ್ತ ಕರ್ನಾಟಕ
೩ ಕಾನಡಾವೃತ್ತ

ಹುಕುಮಿನ ಪ್ರತಿಗಳನ್ನು (ಜಿಲ್ಹೆಯ) ಎಲ್ಲ ಮುಖ್ಯ ಕಚೇರಿಗಳಲ್ಲಿರುವ ನೋಟೀಸ ಬೋರ್ಡುಗಳಿಗೆ ಅಂಟಿಸಿ ಅಲ್ಲದೆ ಕಾನಡಾ ಜಿಲ್ಹೆಯೊಳಗಿನ ಜವಳಿ ವರ್ತಕರ ಸಂಘಗಳಿಗೂ ಪೂರೈಸಬೇಕು. ಹಾಗೂ ಸದರಿಯಂತ ನೋಟೀಸ ಬೋರ್ಡುಗಳಿಗೆ ಹುಕುಮಿನ ಪ್ರತಿಗಳನ್ನು ಹಚ್ಚಿದ ಸಂಗತಿಯನ್ನು ಡಂಗುರ ಹೊಡೆದು ಜನರಿಗೆ ಜಾಹೀರ ಮಾಡಬೇಕು

ಮುಂಬಯಿ ಗವ್ಹರ್ನರರ ಆಜ್ಞೆಯಂತೆ,
ಡಬ್ಲ್ಯು, ಜಿ ಹುಲ್ಲಂಡ, ಡೆ| ಸೆಕ್ರೆಟರಿ

ದಿ ಕೊಮರ್ಶಿಯಲ್ ಕೊಪ್ರೊರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ
ವಿ ಎಮ್. ನಿಂಬಾಳಕರ,
ಮೋಟರ ಸ್ಟೆಂಡ, **ಕುಮಟಾ**

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು)

ಆ ನಂತರ ಸಮ್ಮೇಲನದ ಸಂಯೋಜಕರಾದ ಶ್ರೀಮಾನ್ ದಿವಾಕರರು ಸಮ್ಮೇಲನದ ಪೂರ್ವ-ಪೀಠಿಕೆಯನ್ನು ತಿಳಿಸಿ ಹೇಳಿದರು. ಹಿಂದೆ ಗಾಂಧಿ-ಸೇವಾ ಸಂಘದವರು ಪ್ರತಿ ವರ್ಷ ಒಟ್ಟಿಗೆ ಸೇರಿ ವಿಧಾಯಕ ಕಾರ್ಯದ ಆಗು-ಹೋಗುಗಳ ಸಮಾಲೋಚನೆ ಮಾಡಿ ವಿಚಾರ-ವಿನಿಮಯ ಮಾಡುತ್ತಿದ್ದರು. ಈಗ ಆ ಸಮ್ಮೇಲನಗಳು ಕೂಡುವದಿಲ್ಲ. ಇದರಿಂದ ಇಂಥ ಸಮ್ಮೇಲನಗಳ ಆವಶ್ಯಕತೆಯುಂಟಾಗಿದೆ. ಕಳೆದ ಜನವರಿಯಲ್ಲಿ ಮದ್ರಾಸದಲ್ಲಿ ದಕ್ಷಿಣ ಭಾರತದ ಕಾರ್ಯಕರ್ತರ ಸಮ್ಮೇಲನವಾಯಿತು. ಆಗಲೇ ಈ ಸಮ್ಮೇಲನ ಕೂಡಿಸುವ ವಿಚಾರ ಉದ್ಭವಿಸಿತು. ಹೀಗೆ ಶ್ರೀ ದಿವಾಕರರು ಸಮ್ಮೇಲನದ ಪೂರ್ವಪೀಠಿಕೆಯನ್ನು ಮಂಡಿಸಿ, ಸ್ವಾತಂತ್ರ್ಯ ಸಂಪಾದನೆಗೆ ವಿಧಾಯಕ ಕಾರ್ಯಕ್ರಮದ ಆಚರಣೆ ಅವಶ್ಯವಿದ್ದಷ್ಟೇ, ಸ್ವಾತಂತ್ರ್ಯ ಸಿಕ್ಕಮೇಲೂ ಸ್ವತಂತ್ರ ಹಿಂದುಸ್ಥಾನದಲ್ಲಿ ರಾಮರಾಜ್ಯ ಸ್ಥಾಪಿಸುವದಾದಲ್ಲಿ ಅದಕ್ಕೆ ವಿಧಾಯಕ ಕಾರ್ಯಕ್ರಮವು ಅವಶ್ಯವುಂಟೆಂದು ಪ್ರತಿಪಾದಿಸಿದರು. ಮತ್ತು ಕರ್ನಾಟಕದಲ್ಲಿ ಕಳೆದ ೨೫ ವರ್ಷಗಳಿಂದ ನಡೆದು ಬಂದ ಕಾರ್ಯದ ಇತಿಹಾಸ ಪ್ರಕಟಿಸುವದು ಹಿತವೆಂದು ಸೂಚಿಸಿದರು. ಆ ಮೇಲೆ ಗಾಂಧಿ ಸೇವಾಸಂಘದ ಕಾರ್ಯದರ್ಶಿಗಳಾದ ಶ್ರೀ ದೋತ್ರೇಯವರು ಸಮ್ಮೇಲನದ ಉದ್ಘಾಟನೆ ಮಾಡಿದರು. ಜನತೆಯ ಪ್ರೇಮ ಮತ್ತು ಅವರ ಸೇವೆ ಮಾಡುವ ಉತ್ಕಟ ಇಚ್ಛೆ ಇವೇ ವಿಧಾಯಕ ಕಾರ್ಯದ ಅಡಿಗಲ್ಲೆಂದೂ, ವಿಧಾಯಕ ಕಾರ್ಯದ ಪೂರ್ಣ ಜ್ಞಾನ ಮಾಡಿಕೊಂಡು ಅದನ್ನು ಮಾಡಿಸಿದರೆ ಮಾತ್ರ ಅದು ಯಶಸ್ವಿಯಾಗುತ್ತದೆಂದೂ, ತಿಳುವಳಿಕೆಯಿಲ್ಲದೆ ಮಾಡಿದ ಕಾರ್ಯ ಸಹಜವೇ ಮುಗ್ಗರಿಸಿ ಬೀಳುವ ಸಂಭವವುಂಟೆಂದೂ, ಈ ದೃಷ್ಟಿಯನ್ನಿಟ್ಟುಕೊಂಡು ಕಾರ್ಯಕರ್ತರು ಮುಂದರಿಯಬೇಕೆಂದೂ ಧೋತ್ರೇಯವರು ತಮ್ಮ ಭಾಷಣದಲ್ಲಿ ಬೋಧಿಸಿದರು. ಉದ್ಘಾಟನವಾದ ಬಳಿಕ ಶ್ರೀ ವೆಂಕಟರಾಮಯ್ಯನವರು ಸಮ್ಮೇಲನಕ್ಕೆ ಬಂದ ಸಂದೇಶಗಳನ್ನು ಓದಿ ಹೇಳಿ, ಬಂದ ಕಾರ್ಯಕರ್ತರ ಪರಿಚಯವನ್ನೂ ಸಭೆಗೆ ಮಾಡಿಕೊಟ್ಟರು. ಆ ಮೇಲೆ ಶ್ರೀ ತಿಮ್ಮಪ್ಪನಾಯಕ ಮಾಸ್ತರರು ಸಮ್ಮೇಲನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮತ್ತು ಬೇರೆ ಬೇರೆ ಕಾರ್ಯಕರ್ತರು ತಮ್ಮ ಅನುಭವಗಳನ್ನು ಸಭೆಯಲ್ಲಿ ನಿವೇದಿಸಿದರು. ಮಧ್ಯಾಹ್ನದ ಅಧಿವೇಶನದಲ್ಲೂ ಬೇರೆಬೇರೆ ಕೆಲಸಗಾರರ ಅನುಭವಗಳ ನಿವೇದನೆಯಾಗಿ ದಿವಂಗತ ಹನುಮಂತರಾವ ಕೌಜಲಗಿ, ಎಮ್. ಪಿ ನಾಡಕರ್ಣಿ, ಸುಬ್ರಾವ ಹಳದೀಪುರ, ಡಾ॥ ಸ್ವಾ ಮಹಾದೇವ ಮೈಲಾರ, ಪಾಪುರಾವ ಬಿದ್ರಿ ಇವರ ನಿಧನಗಳಬಗ್ಗೆ ವಿಷಾದಪ್ರದರ್ಶಿಸುವ ಠರಾವನ್ನೊಂದು ಸ್ವೀಕರಿಸಲ್ಪಟ್ಟಿತು. ರಾತ್ರಿ ಪ್ರತಿನಿಧಿಗಳ ಶಿಬಿರದಲ್ಲಿ ಕಾರವಾರದ ಕುಮಾರಿ ಲಲಿತಾ ಭಟ್ಟ ಇವಳು ಹಿಂದೀ ಕೀರ್ತನೆ ಮಾಡಿ "ಕೆಪ್ಟನ್ ಲಕ್ಷ್ಮೀ" ಇವಳ ಆಖ್ಯಾನ ಹೇಳಿದಳು.

ನಿನ್ನೆ ಶುಕ್ರವಾರ ಮುಂಜಾನೆ ಪುನಃ ಸಭೆಯಾಗಿ ಮತ್ತೆ ಕೆಲವರ ಭಾಷಣಗಳಾದವು. ಎಲ್ಲರೂ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಕಂಡು ಬಂದ ಅಡಚಣಿಗಳನ್ನೂ ತಾವು ಅವನ್ನು ಬಗೆಹರಿಸಲು ಕೈಕೊಂಡ ಉಪಾಯಗಳನ್ನೂ ತಮ್ಮ ಅನುಭವಗಳನ್ನೂ ಹೇಳಿದರು. ಕೆಲವು ಗೊತ್ತುವಳಿಗಳಾಗಿ ಸಮ್ಮೇಲನದ ಮುಕ್ತಾಯವಾಯಿತು

ನಿನ್ನೆ ಸಂಜೆ ಸಾರ್ವಜನಿಕ ಸಭೆಯಲ್ಲಿ ಶ್ರೀಮಾನ್ ಧೋತ್ರೆ ಮತ್ತು ದಿವಾಕರರ ಭಾಷಣಗಳಾದವು.

ಕಡ್ಲೆ ಸೀಧಾ ಅಂಗಡಿಯಲ್ಲಿ ಹತ್ತಿಕಾಳು ಸಿಗುವದಿಲ್ಲ. ಹತ್ತೀಕಾಳಿನ ವ್ಯಾಪಾರದಲ್ಲಿ ತಮಗೇನೂ ಲಾಭವುಳಿಯುವದಿಲ್ಲವಾಗಿಯೂ ಈ ಕಾರಣದಿಂದ ತಾವು ಹತ್ತಿಕಾಳು ಒಯ್ಯುವದಿಲ್ಲವಾಗಿಯೂ ಅಂಗಡಿಯ ಚಾಲಕರು ಹೇಳುತ್ತಾರೆ! ಜನರ ಉಪಕಾರಕ್ಕೆ ಸ್ಥಾಪನೆಯಾದ ಅಂಗಡಿಯಿದು!!

ಹಳದೀಪುರದಲ್ಲಿ ಎರಡು ಯೋಗ್ಯ ದರದ ಅಂಗಡಿಗಳಿವೆ. ದಕ್ಷಿಣ ಭಾಗದ ಅಂಗಡಿ ಪಟೀಲ ರಾ॥ ಚನ್ನಪ್ಪ ನಾಯ್ಕರ ಕೈಯಲ್ಲುಂಟು. ಈ ಅಂಗಡಿ ಹೊನ್ನಾವರದಿಂದ ೫ ಮೈಲಿಗಿಂತ ಕಡಿಮೆ ಅಂತರದಲ್ಲಿದ್ದರೂ ಅದರಲ್ಲಿ ಚಿಮಣಿ ಎಣ್ಣೆಯನ್ನು ಹೊನ್ನಾವರ ದರದಿಂದಲೇ ಮಾರದೆ ಪಾಂಟಿಗೆ ೧ ಬಿಲ್ಲಿ ಹೆಚ್ಚಿಗೆ ತಕ್ಕೊಳ್ಳುತ್ತಾರೆ! ಅದರಲ್ಲೂ ಬಿಳೀ ಎಣ್ಣೆಯಲ್ಲಿ ಕೆಂಪು ಎಣ್ಣೆ ಬೆರಸಿ ಆ ಮಿಶ್ರಣವನ್ನು ಬಿಳೀ ಎಣ್ಣೆಯ ದರದಿಂದ ಮಾರುತ್ತಾರೆ! ಎಣ್ಣೆ ಅಳತೆ ಮಾಡಿ ಗಿರಾಕಿಗಳ ಪಾತ್ರೆಯಲ್ಲಿ ಹಾಕುವಾಗ ಪುನಃ ಕೆಲವು ಎಣ್ಣೆ ಅಂಗಡಿಯವರ ಪಾತ್ರೆಯಲ್ಲೇ ಬೀಳುತ್ತದೆ! ಹೀಗೆ ಬಡವರಿಗೆ ಸುಲಿಯಬೇಡಿರಿ ಎಂದು ಓರ್ವರು ಪಟೀಲರಿಗೆ ಹೇಳಲಾಗಿ ಪಟೀಲರು ಬಾಯಿಗೆ ಬಂದಂತೆ ಬೈದರಂತೆ! ಈ ಪಟೀಲರಿಗೆ ಬುದ್ಧಿ ಕಲಿಸುವವರಾರೂ ಇಲ್ಲವೇ?

ಕಡ್ಲೆಯೊಳಗಿನ ಸೀಧಾ ಅಂಗಡಿಯಲ್ಲಿ ಕಳ್ಳಪೇಟೆ ಏನೂ ನಡೆಯುವದಿಲ್ಲೆಂದೂ ಕೂಪನದಾರರಿಗೆ ನೇಮಿಸಿಕೊಟ್ಟ ಸೀಧಾ ಸರಕು ಸರಿಯಾಗಿ ಸಿಗುತ್ತದೆಂದೂ ೧೮ ಜನರ ಸಹಿ ಹೆಸರುಗಳುಳ್ಳ ಒಂದು ಪ್ರಶಸ್ತಿ-ಪತ್ರ "ವೃತ್ತ"ಕ್ಕೆ ಬಂದಿದೆ. "ವೃತ್ತ"ದಲ್ಲಿ ಈ ಅಂಗಡಿಯ ವಿರುದ್ಧ ಪ್ರಕಟವಾದ ದೂರು ನಿರಾಧಾರವೆಂದು ಈ ಪ್ರಶಂಸಕರ ಅಂಬೋಣ.

ಭಟಕಳ— (ತಾ ೧-೬-೪೬) ನಿನ್ನೆಯಿಂದ ಮಳೆ ಬೀಳಹತ್ತಿದೆ.

ಇಲ್ಲಿಯ ದವಾಖಾನೆಗೆ ಡಾ॥ ಗಾಂಭುರವರು ಕಳೆದ ಮಂಗಳವಾರ ಬಂದು ಹಾಜರಾದರು; ಮತ್ತು ಡಾ॥ ಕಾಮಂತಿಕೆಯವರು ಮೊನ್ನೆ ಇಲ್ಲಿಂದ ಹೊರಟುಹೋದರು. ಹೋಗುವಾಗ ಊರ ಜನರು ಅವರಿಗೆ ಒಳ್ಳೇ ವಾದ್ಯ-ವೈಭವದಿಂದ ಬೀಳ್ಕೊಟ್ಟರು. ಕಾಮಂತಿಕೆಯವರು ಇಲ್ಲಿ ಅಷ್ಟು ಲೋಕಪ್ರಿಯರಾಗಿದ್ದರು.

ಕೇಳಿದ್ದು, ಕಂಡದ್ದು.

(೨ನೇ ಪುಟದಿಂದ ಮುಂದರಿಸಿದ್ದು)

೩ ವಾರಗಳ ಹಿಂದೆ ಒಂದು ರಾತ್ರಿ ಗೋಕರ್ಣದೊಳಗಿನ ಗಿರಣಿ ಬದಿಯಿಂದ ಒಂದು ಗಾಡಿ ಅಕ್ಕಿ ತದಡಿಗೆ ಸಾಗುತ್ತಿತ್ತಂತೆ. ಇಂತಹ ಕಳ್ಳಪೇಟೆಗಳನ್ನು ಹಿಡಿಯಲು ತಾವು ಸ್ವತಂತ್ರ ಗುಪ್ತ ಚಾರರನ್ನು ನೇಮಿಸಿದ್ದೇವಾಗಿ ಮುಂಬಯಿ ಸರಕಾರದ ಗೃಹಮಂತ್ರಿಗಳಾಗಿರುವ ಮಾನ್ಯ ಮುರಾರಜಿ ದೇಸಾಯಿಯವರು ಜಾಹೀರಪಡಿಸಿದ್ದಾರಷ್ಟೇ. ಈ ಗುಪ್ತಚಾರರ ಸೋಗು ಹಾಕಿಕೊಂಡು ಕುಮಟೆಯವರೋರ್ವ(?) ಒಬ್ಬನು ಗೋಕರ್ಣಕ್ಕೆ ಬಡಿಗನೊಬ್ಬನನ್ನು ಮದತ್ತಿಗೆ ತಕ್ಕೊಂಡು ತಲಗೇರಿಯ ಸಮೀಪದ ಆ ಗಾಡಿಯನ್ನು ತಡೆದನಂತೆ; ಮತ್ತು "ಇವರು ಕೊಂಗ್ರೆಸ ಮಂತ್ರಿಗಳಿಂದ ನೇಮಿಸಲ್ಪಟ್ಟ ಗುಪ್ತ ಚಾರರು, ನಿಮ್ಮ ಅಕ್ಕಿ ಹಿಡಿದಿದ್ದಾರೆ. ಇವರ ಕೈಯಿಂದ ಪಾರಾಗುವ ಬಗೆಯೇನೆಂದು ನೀವೇ ನೋಡಿಕೊಳ್ಳಿರಿ" ಎಂದು ಆ ಬಡಿಗನು ಗಾಡಿಯವನಿಗೂ ಗಾಡಿಯ ಸಂಗಡವಿದ್ದ ಸಾವಕಾರನಿಗೂ ಹೇಳಿದನಂತೆ! ಸಾವಕಾರನಿಗೆ ಆಗ ಏನು ಮಾಡಬೇಕೆಂದು ಸೂಚಿಸಲಿಲ್ಲ! ಮುಂದೆ ೨೦೦ ರೂ ಆ "ಗುಪ್ತಚಾರ"ನಿಗೆ ಕೊಟ್ಟು ಗಾಡಿಯನ್ನು ಅತ್ತ ತದಡಿಗೆ ಓಡಿಸಿದನಂತೆ! ಈ ಕಥೆ ನಿಜವಾದರೆ ಕಳ್ಳಪೇಟೆಯಲ್ಲಿ ಕಳ್ಳ "ಗುಪ್ತ ಚಾರ"ರೂ ಬಂದು ಸೇರಿದಂತಾಯಿತು!

* *

ಕುಮಟೆಯಲ್ಲಿ ಹತ್ತಿಕಾಳು ಸಿಗದೆ ಒಂದು ತಿಂಗಳೂ ಆಗಲಿಲ್ಲ, ಪುನಃ ಅದು ಸಿಗಲು ತೊಂದರೆಯಾಗಿದೆ. ಸೀಧಾ-ಕ್ಷೇತ್ರದಲ್ಲಿರುವ ದನಗಳಿಗೆ ಹತ್ತಿಕಾಳು ಕೊಡಿಸುವ ಅಧಿಕಾರ ಸೀಧಾ-ಅಧಿಕಾರಿಗಳದು. ಜಿಲ್ಲಾಧಿಕಾರಿ ಕೊಟ್ಟಿಟ್ಟ ಅಧಿಕಾರವದು. ಅದರಂತೆ ಸೀಧಾ-ಅಧಿಕಾರಿಗಳು ಕೋಳಿ ವ್ಯಾಪಾರದ ಮತ್ತು ಸಿಕ್ಕ ಅರ್ಬನ್‌ಬೇಂಕಿನಿಂದ ಸೀಧಾ-ಅಂಗಡಿಗಳಿಗೂ, ಸೀಧಾ-ಅಂಗಡಿಗಳಿಂದ (ದನಗಳುಳ್ಳ) ಗಿರಾಕಿಗಳಿಗೂ ಹತ್ತಿಕಾಳು ಕೊಡಿಸುತ್ತಿದ್ದರು. ಸೀಧೇತರ ಕ್ಷೇತ್ರದಲ್ಲಿ ಹತ್ತಿಕಾಳು ಕೊಡಿಸುವ ಅಧಿಕಾರ ಮಾಮಲೇದಾರರದಂತೆ. ಕುಮಟೆಯ ಮಾಮಲೇದಾರರು ತಮ್ಮ ಈ ಅಧಿಕಾರದ ವ್ಯಾಪ್ತಿಯನ್ನು ಬೆಳಸಿ ಸೀಧಾಕ್ಷೇತ್ರದವರಿಗೂ ಹತ್ತಿಕಾಳು ಕೊಡಿಸುವ ಅಧಿಕಾರ ತಮ್ಮದೆಂತ ಮಾಡಿಸಿ, ತಮ್ಮ ಅಪ್ಪಣೆ-ಚೀಟಿಯಿಲ್ಲದೆ ಯಾವಾತನಿಗೂ ಹತ್ತಿಕಾಳು ಕೊಡಬಾರದೆಂದು ಬೇಂಕಿಗೆ ಫರ್ಮಾಯಿಸಿದ್ದಾರಂತೆ! ಅದರಂತೆ ಸೀಧಾಅಧಿಕಾರಿಗಳ ಅಪ್ಪಣೆಚೀಟಿ ಪಡಕೊಂಡು ಬಂದ ಸೀಧಾ-ಅಂಗಡಿಯವರಿಗೆ ಬೇಂಕು ಹತ್ತಿಕಾಳು ಕೊಡಲಿಲ್ಲ. ಸೀಧಾ-ಅಧಿಕಾರಿಗಳು ಈ ಬಗ್ಗೆ ಜಿಲ್ಲಾಧಿಕಾರಿ ಕಡೆ ದೂರಿದ್ದಾರೆಂದು ಸುದ್ದಿ. ಹೀಗೆ ಉಭಯ ಅಧಿಕಾರಿಗಳ ಅಧಿಕಾರವ್ಯಾಪ್ತಿಯ ಬಗ್ಗೆ ವಾದವುಂಟಾದ್ದರಿಂದ ಕುಮಟೆಯ ದನಗಳಿಗೆ ಹತ್ತಿಕಾಳು ಸಿಗದಂತಾಗಿದೆ! ತಂದೆ-ತಾಯಿಗಳ ಜಗಳದಲ್ಲಿ ಮಕ್ಕಳಿಗೆ ಗಂಜಿ ಯಾರು ಹಾಕಬೇಕು?

* *

ಯಲ್ಲಾಪುರದಲ್ಲೀಗ ಮೋಟಾರ ಬಂಡಿಗಳು ಊರ-ಹೊರಗಿನ ನಿಲ್ದಾಣದಲ್ಲೇ ನಿಲ್ಲುತ್ತವೆ. ಈ ನಿಲ್ದಾಣ ಪೇಟೆಯಿಂದ ೨-೩। ಫರ್ಲಾಂಗ ದೂರ ಉಂಟು. ಅಲ್ಲೊಂದು ಅಂಗಡಿಯಿಲ್ಲ, ಖಾನಾವಳಿಯಿಲ್ಲ. ತಿಂಡಿ-ತಿನಸು, ಚಹಾ-ಕಾಫಿ ಬೇಕಾದ ಪ್ರಯಾಣಿಕರು ಬಿಸಿಲಲ್ಲಿ (ಇಲ್ಲವೆ ಮಳೆಯಲ್ಲಿ) ೨-೩ ಫರ್ಲಾಂಗ ನಡಕೊಂಡು ಪೇಟೆಗೆ ಹೋಗಬೇಕು! ಈ ನಿಲ್ದಾಣದಲ್ಲಿ ಮೋಟಾರದಿಂದಿಳಿದ ಪ್ರಯಾಣಿಕರಿಗೆ ಸ್ವಲ್ಪ ವಿಶ್ರಾಂತಿ ತಕ್ಕೊಳ್ಳಲು ಒಂದು ಸಣ್ಣ ಆಶ್ರಯ ಸ್ಥಾನ ಸಹ ಇಲ್ಲ. ಈ ವರೆಗೆ ಬಂಡಿಗಳು ನೆಟ್ಟಗೆ ಪೇಟೆಗೇ ಹೋಗಿ ಅಲ್ಲಿಂದು ಕಡೆ ಮಾರ್ಗದ ಬದಿಗೆ ನಿಲ್ಲುತ್ತಿದ್ದದರಿಂದ ಯಾವ ತೊಂದರೆಗಳೂ ಆಗುತ್ತಿದ್ದಿಲ್ಲ. ಆದರೆ ಬಂಡಿಗಳನ್ನು ಪೇಟೆಗೆ ಬರಗೊಡಬಾರದೆಂದೂ ಹೊರಗೇ ನಿಲ್ಲಿಸಬೇಕೆಂದೂ ಹಂಗಾಮಿ ಮಾಮಲೇದಾರರಾಗಿರುವ ರಾ॥ ಹೊಳೆಗದ್ದೆಯವರು ಮೊನ್ನೆ ಒಂದು ಹೊಸ ಫರ್ಮಾನು ತೆಗೆದಿದ್ದಾರಂತೆ! ಈ ಫರ್ಮಾನಿಗೆ ಕಾರಣವೇನಾಯಿತೆಂದು ಬಲ್ಲಿರಾ? ಈ ಹಂಗಾಮಿ ಮಾಮಲೇದಾರರು ಮೋಟಾರ ನಿಲ್ಲುವ ರಸ್ತೆಯಿಂದ ಹಾದು ಹೋಗುತ್ತಿರುವಾಗ ಹಾದಿಯ ಮೇಲೆ ಬಿದ್ದ ಒಂದು ಬಾಳೆ-ಹಣ್ಣಿನ ಸಿಪ್ಪೆಯ ಮೇಲೆ ಕಾಲು ಇಟ್ಟು ಅವರು ಬೀಳಬೇಕಾದರು. ಕೂಡಲೇ ಅವರಿಗೆ ಸಿಟ್ಟು ಬಂತು! ಇಲ್ಲಿ ಬಂಡಿ ನಿಂತರೆ ಪ್ರಯಾಣಿಕರು ಬಾಳೆಹಣ್ಣು ತಿಂದು ಸಿಪ್ಪೆ ಮಾರ್ಗದ ಮೇಲೆ ಚೆಲ್ಲುತ್ತಾರೆ; ಅದರಿಂದ (ತಮಗಾದಂತೆ) ಅಪಘಾತವಾಗುವ ಸಂಭವವುಂಟು; ಅದ್ದರಿಂದ ಬಂಡಿಗಳೇ ಇಲ್ಲಿ ಬರದಂತೆ ಮಾಡುವದು ಲೇಸು. ಹೀಗೆ ಆ ಸಿಟ್ಟಿನ ಭರದಲ್ಲಿ ಸಿದ್ಧಾಂತ ಮಾಡಿ ಮೇಲಿನಂತೆ ಫರ್ಮಾನು ಹೊರಡಿಸಿದ್ದಾರೆ! ಈ ವಿಚಾರಸರಣಿ, ಈ ತರ್ಕಪದ್ಧತಿ ಅಧಿಕಾರಸ್ಥರಿಗೇ ಶೋಭಿಸುತ್ತದೆ! ಬಾಳೇ ಹಣ್ಣಿನ ಅಂಗಡಿಯಿದ್ದಲ್ಲಿ ಮಾರ್ಗದ ಮೇಲೆ ಸಿಪ್ಪೆ ಬಿದ್ದೇ ಬಿದ್ದಾವು; ಮೋಟಾರ ಬಂಡಿಗಳು ಊರ ಹೊರಗೆ ನಿಂತರೂ ಮಾರ್ಗದ ಮೇಲೆ ಬಾಳೆ ಸಿಪ್ಪೆ ಬೀಳುವದು ತಪ್ಪಲಾರದು ಎಂಬೀ ಸಾಮಾನ್ಯ ತರ್ಕಸರಣಿಯನ್ನು ಅನುಸರಿಸುವದು ರಾ॥ ಹೊಳೆಗದ್ದೆಯವರಿಗೆ — ಅವರು ಈಗ ಮಾಮಲೇದಾರರಾದಾಗ — ಎಂದಾದರೂ ಶೋಭಿಸೀತೇ?

* *

ಯಲ್ಲಾಪುರ ತಾಲೂಕಿನಲ್ಲಿ ಹತ್ತಿಕಾಳು ಸಿಗಲಿಕ್ಕೆ ಈಗಲೂ ತೊಂದರೆಯಾಗಿದೆ. ಚೀಲ ೧ಕ್ಕೆ ಈಗ ಇಷ್ಟ ರೂ. ೧೦॥ ತಕ್ಕೊಳ್ಳುತ್ತಾರೆ. ಚಿಲ್ಲರೆ ಮಾರಾಟದ ದರ ರೂ. ೧ಕ್ಕೆ ೧೨॥ ರತ್ತಲು ಎಂದು ನಿಶ್ಚಯಿಸಲ್ಪಟ್ಟಿದೆ. ಈ ದರದಿಂದ ಹತ್ತಿಕಾಳು ಮಾರಲು ಹಳ್ಳಿಯ ಸೀಧಾ ಅಂಗಡಿಯವರಿಗೆ ಪೂರೈಸುವದಿಲ್ಲ. ಅದರಿಂದ ಹೊಸ ದರ ಹಾಕಿಕೊಡಲು ತಾಲೂಕ ಅಧಿಕಾರಿಗಳು ಬರೆದುಹಾಕಿದ್ದಾರಂತೆ. ಆ ದರ ಬರುವ ವರೆಗೆ ಹತ್ತಿಕಾಳಿನ ಮಾರಾಟವಾಗುವಂತಿಲ್ಲ! ಇನ್ನೊಂದು ಸಂಗತಿಯೆಂದರೆ ಹಳ್ಳಿಗಳ ಹತ್ತಿಕಾಳು ಹಳ್ಳಿಗಳಿಗೇ ಕಳಿಸಲ್ಪಟ್ಟಿವೆ. ಆದರೂ ಆ ಹತ್ತಿಕಾಳು ಬೇಕಾದರೆ ಯಲ್ಲಾಪುರಕ್ಕೇ ಬಂದು ಮಾಮಲೇದಾರರ ಚೀಟಿ ತಕ್ಕೊಳ್ಳಬೇಕಂತೆ. ಯಾರೊಬ್ಬ ಹಳ್ಳಿಯವನಿಗೆ ಹೆಚ್ಚೆಂದರೆ ೧-೧। ಮಣ (೧೫ ದಿನಗಳ ಬಗ್ಗೆ) ಸಿಕ್ಕೀತು. ಆ ಹತ್ತಿಕಾಳು ಚೀಟಿ ಒಯ್ಯಲು ಅಲ್ಲಿ ಬಂದಾಗಲೇ ಕೊಟ್ಟು ಬಿಡುವ ವ್ಯವಸ್ಥೆ ಮಾಡಿದರೆ ಅವರು ಹೊತ್ತುಕೊಂಡು ಹೋಗುತ್ತಿದ್ದಿಲ್ಲವೇ? ಅದಕ್ಕೇಕೆ ಹಳ್ಳಿಗಳಿಗೆ ಕಳಿಸಿ ದರದ ತಕ್ರಾರು ಎಬ್ಬಿಸಬೇಕಿತ್ತು?

— R —

ಕುಮಟಾ ಸೀಧಾ ಕ್ಷೇತ್ರದೊಳಗಿರುವ ಯಾವತ್ತೂ ಜನರಿಗೆ ಈ ಮೂಲಕ ತಿಳಿಸುವದೇನಂದರೆ:—

ದನ-ಕರುಗಳಿಗೆ ಅವಶ್ಯವಿರುವ ನೆಲಗಡಲೆಯ ಹಿಂಡಿಯನ್ನು ಸಾಧ್ಯವಿದ್ದ ಮಟ್ಟಿಗೆ ಯೋಗ್ಯ ರೀತಿಯಿಂದ ಹಂಚಬೇಕಾಗಿಯೂ ಅದನ್ನು ಸೀಧಾ-ಪದ್ಧತಿಯಂತೆಯೇ ಪೂರೈಸಬೇಕಾಗಿಯೂ ಮಾ॥ ಜಿಲ್ಹಾ ಮೆಜಿಸ್ಟ್ರೇಟ, ಕಾನಡಾರವರ ಅಪ್ಪಣೆಯಾಗಿರುವದರಿಂದ ದನ-ಕರುಗಳ ಮಾಲಿಕರೆಲ್ಲರೂ ತಮ್ಮಲ್ಲಿರುವ ಹಿಂಡುವ ಹಾಗೂ ಇತರ ದನಗಳ ಸಂಖ್ಯೆಗಳನ್ನು ಬೇರೆ ಬೇರೆಯಾಗಿ ತೋರಿಸಿ ಇದೇ ಜೂನ್ ತಿಂಗಳ ೨೦ನೇ ತಾರೀಖಿನೊಳಗೆ ರೇಶನಿಂಗ ಆಫೀಸರರ ಕಡೆಗೆ ಅರ್ಜಿಗಳನ್ನು ಮಾಡಿಕೊಳ್ಳಬೇಕು. ಸದರಿ ಮುದ್ದತ್ತು ಮೀರಿ ಅರ್ಜಿ ಮಾಡಿಕೊಳ್ಳುವವರ ಅರ್ಜಿಗಳು ವಿಚಾರಿಸಲ್ಪಡಲಿಕ್ಕಿಲ್ಲ.

ಹಿಂಡಿಯು ಹಿಂಡುವ ದನಗಳಿಗೆ ೨ ರತ್ತಲಿನಂತೆ ಹಾಗೂ ಇತರ ದನಗಳಿಗೆ ೧ ರತ್ತಲನಂತೆ ಸಿಗುವದು.

ತಾ ೧ ೬ ೪೬ } **R. B Naik,**
Rationing Officer, Kumta

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Special Number :

Reg. No. B. 1270.
Price As. 2.

THE KANARA NEWS,

KUMTA. 5th JUNE, 1946.

Matriculation Examination, 1946.

The result of the Matriculation examination held by the Bombay University in March last is declared this morning. Herebelow is given the list of the students who appeared at the Karwar centre and have passed the examination as well as those who have appeared at other centres from the Schools of this District and are declared successful. The figures in brackets against the names of some students are the marks obtained by them. We offier our hearty congratulations to all the successful students.

Karwar High School.

(77 appeared; 41 pass)

l. S. Kamat Ratna B. Kaikini
. R. Baadkar G. K. Bhujle
S Habbu R. P Kumta (464)
. S. Karki K. H Kubal.
J Manjrekar. D. A.
ine (433) R. M Saokar.
M Savant D. M Vakil. N G
otishi. S B Rane N V Baadkar
. R Badakar. V S Bandekar.
B Desai F. M. Fernandes
J Gonsalvis V N Malavankar
. R Naik. C N Pandit (420)
C Phadke (495). S R Pikle
24). G P Raiker. V N Shenvi.
. S Stalekar. S M Abdul
hadar. M Y A Shaikh
kbarkhan A. R. Abdul-
akil. M. U. Sayad M. S. U.
R Shirodkar. Sayad L. S. D.
dulla Wahab M U K. Kadri
ved A G (506) J. E. Fernandes.
A Blwalli. S S Kadam.

Hindu High School.

(96 appeared; 43 pass)

R B Kudtarkar. K S Ambe
A Phenany *Miss* Kusum A Kul-
rni. *Miss* Kamudini M Ramani
S Borkar. M C Gandhi. *Miss*
ru D Kulkarni. *Miss* Tara M
zumdar (475) *Miss* Kusum S
lkarni. *Miss* Sulabha D Nad-
ni. A N Phene (460) *Miss* Indira
Saokar Kalyani N. Stalekar.
K. Upponi (553). D N Habbu
s Vasanti Basrur. G S
kar (528). S M Brahme
22). J M Desai. G R
ridas (437) R D Harite (492).
K Karoor. (499) S M Kulkarni
P Mahale, S D Nadkarni.
R Nadkargi. S Y Nadkarni.
Pai. M M Pinge (427) M V Ray-
kar. Murlidhar S Shanbhag (496). M V Shejekan. D. M. Upadhya G G Wagle. S A Nadkarni. (549) S S Wagle. J. F. R. P. Noronha O. S. R. Dias. G. S. Habbu. V R Texeira B G Rajadhyaksha P G Swadi

St. Michael's Convent High School, Karwar.

(5 appeared; 3 pass)

Olinda D'Souza. Zahida Ahmedkhan Pathan. (459) Myra Sal lanha. (429)

Private High School, Sadashivagad.

(36 appeared; 9 pass)

V M Wagle. H S Ambe. V P Tengse. R V Wagh. M G. Nadkarni (497). K. A Prabhu. S. B. Salunke. R S Shet. K M Sakhardande.

Edwared High School, Ankola.

(70 appeared; 26 pass)

V B Trikannad. *Miss* Vatsala Y Desai. S N Haldipur (452) *Miss* Prema L Mahale V D Mhapsekar Y S Aigal. M. S. Banawali. S Y Desai (494). R V Gaonkar. S R Idurkar. B N Joglekar. R K Kamat. D G Mahale. M M Mitbavkar. S D Muzumdar. S V Nadkarni. M. R. Naik. N S Nayak. N M Pai. D V Pikle. S P Shanbhag. N M Shet. V V Shetiya G N Shetti *Miss* Vatsala M Prabhu. Sushila B. Kamat. *Miss* Sharada B Pai.

Gibb High School, Kumta

(74 appeared; 41 pass)

M Y Sayed *Miss* Mukta M Divgi. S G Nayak (463) *Miss* Yamuna M Nayak S R Bhat A G Bhat B G Bhat M A Bhat (507) S V Bhat. S B Bhat S M Bhat. V B Goankar (500). G R Gokarn (428). D N Hegde (424). M K Hegde. S K Hegdekar. S R Hegdekatti. S G Kadekodi. P N Kamat (430). R T Kamat. S N Kodkani (436). G D Kudle. G. M. Mahale. M P Mahale. G P Naik, V M Nayak (531) A. V. Pai, M R Pai, N. N. Pai, P. G. Pai, V. G. Pai, M. G, Pandit (478), S. R. Pandit (502), M. S. Shanbhag, P. S Shanbhag. Srinivasrao A Shanbhag. R N Ugru (509). *Miss* Annamma Verghese. C F Almeda (443). G. P. Gourayya. *Miss* Cicilia J. Almida.

St. Thomas High School.

(32 appearedi 19 pass)

Miss Sushila L Bhatkal. S G Bhat. R M Bhatkal. V G Hegde. V R Kalbhag. (534) R A Kamat S J Markande K S Moole K M Nadkarni R S Moole *Miss* Shalini M Nadkarni (433) L V Naik. M. G Naik. R S Shanbhag. *Miss* Saramma Jacob. *Miss* Durgabai M Kumtakar. K V Nadkarni. P A Souza. H M. Sukri.

New English School, Honavar.

(19 appeared; 12 pass)

S K Avadhani, D M Balvall, M S Bhat (443), F M S Fernandez, D S Hasyagar (449), B V Hichkad, N V Kamat, Miss Manjula U Nayak, R M Pai, Miss Kumudini L Prabhu, G P Shanbhag, R M Shanbhag

Islamia A. U. High School, Bhatkal.

(12 appeared; 6 pass)

N G Hegde B A Holla R M M Kalgal (435) S P Mudur V V Naik V N Pai (439)

Marikamba High School, Sirsi.

(44 appeared: 14 pass)

Miss Shanta D Sonde L A Dixit. M S Lokare. R M Murdeshwar. G R Raikar M. C. Salimath. Ahmed M Ishak. P N Acharya. P R Pandit S M Bhagwat (446) M P Kamat (440) R K Katti (461) A J Torke S N Khadilkar

Outsiders.

(who appeared at Karwar Centre)
(14 appeared; 6 pass)

Miss Girija R Nagareenkar. J P D'Silva R A D'Silva. R S Gaitonde J P Mascarenhas (467) V B Sardesai.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವತಮ್ಮ "ಸ್ಟ್ಯಾಂಡರ್ಡ್ ಕೆನರಾ ಪ್ರೆಸ್"ದಲ್ಲಿ ಮುದ್ರಿಸಿ ಪ್ರಕಟಿಸಿದರು.

ಕನ್ನಡ ಮುಲ್ಕಿ ಪರೀಕ್ಷೆಯ ಪರಿಣಾಮ, ೧೯೪೬.

ಕುಮಟಾ ಕೇಂದ್ರ.

ಪಾಸಾದ ವಿದ್ಯಾರ್ಥಿಯ ಹೆಸರು	ಪಡೆದ ಗುಣಗಳು
...ಚ್ಯುತ ಕೃಷ್ಣ ಪೈ	೨೮೩
...ಚ್ಯುತ ಗಣಪಯ್ಯಾ ಕಾಮತ	೨೮೩
...ನಂತ ರಾಮ ಶಾನಭಾಗ	೨೪೭
...ಪ್ಪಯ್ಯಾ ರಘುನಾಥ ನಾಯಕ	೩೧೬
...ನಂದು ದಾಮೋದರ ಮಹಾಲೆ	೨೭೭
...ಮೇಶ್ವರ ಮುರ್ಕುಂಡಿ ನಾಯಕ	೨೫೫
...ರಾ ನಾರಾಯಣ ಆಚಾರಿ	೩೩೩
...ಪಯ್ಯಾ ಅನಂತ ಭಟ್ಟ	೩೩೩
...ಷ್ಣ ಮಂಗಳ ನಾಯ್ಕ	೨೫೫
...ಷ್ಣ ವೆಂಕಟೇಶ ಪ್ರಭು	೩೧೨
...ಶವ ವಿಠ್ಠಲ ಭಟ್ಟ	೨೫೫
...ಜಾನನ ನಾರಾಯಣ ಹೊನ್ನಾವರ	೨೯೬
...ಣಪತಿ ತಿಮ್ಮಣ್ಣಾ ಭಟ್ಟ	೨೭೬
...ಣಪತಿ ದೇವರು ಹೆಗಡೆ	೨೭೪
...ಪತಿ ರಾಮ ಭಟ್ಟ	೩೩೫
...ಣಪತಿ ರಾಮ ಭಟ್ಟ ಗುರ್ಲಿಂಗ	೩೩೧
...ಣಪತಿ ವಿಷ್ಣು ಹೆಗಡೆ	೩೩೪
...ಪತಿ ಸಾಂಬಭಟ್ಟ ಗಾಯತ್ರಿ	೨೮೭
...ೋವಿಂದ ವೆಂಕಟೇಶ ಶೇಟ	೪೨೩
...ೋವಿಂದ ಸುಬ್ರಾಯ ಭಟ್ಟ	೨೭೭
...ನ್ನಾ ನಾರಾಯಣ್ಣಾ ನಾಯ್ಕ	೨೫೫
...ನ್ನಾಥ ಅಪ್ಪು ಆಚಾರಿ	೨೫೩
...ನಾರ್ದನ ಗಣಪತಿ ನಾಯ್ಕ	೨೫೩
...ವಾಂವ ಪಾವ್ಲು ಫರ್ನಾಂಡಿಸ್	೨೪೯
...ವಾಂವ ರುಜಾರಿ ಮೋರೀಸ	೨೫೧
...ತಿಮ್ಮಣ್ಣಾ ಶಂಕರ ಅವಧಾನಿ	೨೫೫
...ಯಾನಂದ ನರಸಿಂಹ ಶಾನಭಾಗ	೩೪೬
...ವಿದಾಸ ನಾಗಪ್ಪಾ ಶಾನಭಾಗ	೨೪೬
...ಗೇಶ ಅನಂತ ಶೇಟ	೩೩೭
...ರಾಯಣ ಅಣ್ಣಪ್ಪ ನಾಯಕ	೨೬೫
...ರಾಯಣ ರಾಮ ಶೇಟ	೩೩೭
...ರಾಯಣ ಹೊನ್ನಪ್ಪ ನಾಯ್ಕ	೨೪೬
...ಕೇಶ್ವರ ವೆಂಕಟರಮಣ ಭಟ್ಟ	೨೬೪
...ಬು ಗೋವಿಂದ ನಾಯಕ	೨೬೪
...ಬು ರಾಮಾ	೨೬೪
...ಲಿಯಾ ಮಂಜಪ್ಪ ನಾಯ್ಕ	೨೪೬
...ಸ್ಕರ ಲಕ್ಷ್ಮಣ ಹೆಗಡೆ	೩೫೧
...ನವೇಲ್ ಫ್ರಾನ್ಸಿಸ್ ಡಾಯಸ್	೨೬೩
...ಹಮ್ಮದ ರಫೀಕ ಮ॥ ಸುಲೇಮಾನ	೩೬೩
...ಬಾಲೇಶ್ವರ ನಾರಾಯಣ ಶಾನಭಾಗ	೨೫೩
...ರ್ಕುಂಡಿ ಮಾಣಿ ನಾಯ್ಕ	೨೯೪
...ಘರಾಜ ಶಾಂತಪ್ಪ ನಾಯಕ	೩೩೨
...ಜನಾಥ ದತ್ತಾತ್ರೇಯ ಭಟ್ಟ	೩೬೨
...ಜನಾಥ ರಾಜಾರಾಮ ಶಾಸ್ತ್ರಿ	೨೬೪
...ಜನಾಥ ವೆಂಕಪ್ಪಾ ನಾಯಕ	೨೬೮
...ತ್ನಾಕರ ಮಂಕಾಳಿ ಬಸ್ಲೀಕರ	೩೧೦
...ಮಕೃಷ್ಣ ಗಣಪತಿ ಶಾನಭಾಗ	೨೬೧
...ಮಚಂದ್ರ ಗಣಪತಿ ಜೋಶಿ	೨೬೪
...ಮಕೃಷ್ಣ ಚಿಕ್ಕಯ್ಯಾ ನಾಯ್ಕ	೩೩೬
...ಮಾ ಜಟ್ಟಾ ನಾಯ್ಕ	೨೬೬
...ಾಧರ ರಾಧಾ ದೇವಳಿ	೨೪೯
ವಾಸುದೇವ ರಾಮೇಶ್ವರ ಪೈ	೨೫೮
ವಿಠ್ಠಲ ವೈಕುಂಠ ಆಚಾರ್ಯ	೩೪೭
ವಿನಾಯಕ ಸೀತಾರಾಮ ಜೋಗಳೇಕರ	೨೭೪
ವೆಂಕಟರಮಣ ಕೃಷ್ಣ ಶೇಟ	೨೬೫
ವೆಂಕಟರಮಣ ನರಸಿಂಹ ಹೆಗಡೆ	೩೩೭
ವೆಂಕಟರಮಣ ಬೊಮ್ಮಯ್ಯ ರೇವಣಕರ	೨೫೩
ವೆಂಕಟೇಶ ರವಳಪ್ಪಾ ಯಾನೆ ಬಾಬಣ ಪ್ರಭು	೩೩೧
ಶಂಕರ ನಾರಾಯಣ ಶ್ಯಾನಭಾಗ	೩೦೯
ಶಂಕರ ಮಂಜಪ್ಪಾ ಹೆಗಡೆ	೩೩೭
ಶಿವ ತಿಮ್ಮಣ್ಣ ಭಟ್ಟ	೩೪೩
ಶಿವಾನಂದ ಯಶವಂತ ಕುಡತರಕರ	೩೧೩
ಶ್ರೀನಿವಾಸ ಗೋವಿಂದ ಶಾನಭಾಗ	೩೪೭
ಶ್ರೀನಿವಾಸ ಪುಂಡಲೀಕ ಶಾನಭಾಗ	೩೩೮
ಶ್ರೀನಿವಾಸ ವಾಮನ ಪೈ	೪೦೨
ಶ್ರೀಪಾದ ವಿಠೋಬ ಶೆಟ್ಟಿ	೨೪೧
ಶೇಷಗಿರಿ ಮಂಜನಾಥ ಶಾಳೆಹಿತ್ತಲ	೩೧೬
ಶೇಷಗಿರಿ ವಾಸುದೇವ ಶೆಟ್ಟಿ	೨೯೮
ಶೇಷ ದೇವಪ್ಪಾ ಶಟಗಾರ	೨೬೩
ಸದಾನಂದ ಗಣೇಶ ಭಟ್ಟ	೨೪೫
ಸದಾನಂದ ಗೋವಿಂದ ಶೆಟ್ಟಿ	೨೬೬
ಸದಾನಂದ ಪಾಂಡುರಂಗ ಮಹಾಲೆ	೩೪೧
ಸೀತಾರಾಮ ಗಣೇಶ ರಾಯಕರ	೨೫೨
ಸುಬ್ಬಾ ತಿಮ್ಮಪ್ಪ ಮಹಾಲೆ	೨೬೯
ಸುಬ್ರಾಯ ಗಣಪತಿ ಭಟ್ಟ	೩೬೬
ಸುಬ್ರಾಯ ವಿಶ್ವೇಶ್ವರ ಶಾಸ್ತ್ರಿ	೨೬೪
ಹೊನ್ನಪ್ಪ ಮಾಣಿ ನಾಯ್ಕ	೨೪೦
ಗಂಗಾಬಾಯಿ ಅಚ್ಯುತ ಪೈ	೨೪೯
ತಿಮ್ಮಕ್ಕಾ ತಿಮ್ಮಪ್ಪಾ ಕವರಿ	೨೨೦
ದೇವಮ್ಮಾ ದೇವಣ್ಣಾ ಗಾಂವಕರ	೨೬೬
ಮಾಂಕಾಳಿಬಾಯಿ ಹೊನ್ನಪ್ಪ ನಾಯಕ	೨೪೦
ರುಕ್ಮಾಬಾಯಿ ಕೃಷ್ಣ ನಾಯಕ	೩೬೨
ರೋಜಿನಾ ಇಂತ್ರು ಫರ್ನಾಂಡಿಸ್	೨೫೧
ಶಾರದಾಬಾಯಿ ರಾಮರಾವ ಪಂಡಿತ	೨೬೪
ಸುಧಾಬಾಯಿ ಮಂಜನಾಥ ಪಂಡಿತ	೨೫೬
ಸುಂದರಿ ಯಶವಂತ ಶಾನಭಾಗ	೨೬೩

ಉರ್ದು ಪರೀಕ್ಷೆಯಲ್ಲಿ ಯಾರೂ ಪಾಸಾಗಲಿಲ್ಲ.

ಸಿರ್ಸಿ ಉಪ-ಕೇಂದ್ರ

ಆನಂದ ಶಿವರಾಯ ರಾಯಕರ	೨೩೬
ಗಣಪತಿ ಶಂಭು ಭಟ್ಟ	೩೩೧
ತುಕಾರಾಮ ತಾಯಿ ತಿರಾ	೩೧೪
ದಾಮೋದರ ಬಾಬಣ್ಣಾ ಭಟ್ಟ	೩೩೬
ಧನ್ಯಕುಮಾರ ಶ್ರೀಪಾಲಪ್ಪ ಅಮ್ಮಿನಭಾಂವಿ	೨೫೩
ನಾಗೇಶ ದಾಮೋದರ ಮುರಾರಿ	೨೬೩
ನಾಗೇಶ ಸದಾಶಿವ ಮೋಗೇರ	೨೩೬
ನಾರಾಯಣ ಧಾಯಪ್ಪಾ ಕಲಾಲ	೨೬೪
ಬೊಮ್ಮಾ ಮಂಜಾ ಮೊಸೂರ	೨೮೫
ಮಲ್ಲಿಕಾರ್ಜುನಯ್ಯಾ ಗಂಗಾಧರಯ್ಯಾ ಸಂಗೂರಮಠ	೨೩೩
ಯೋಸೇಫ ಹೆರಮಾ ಕ್ರಿಶ್ಚನ್	೨೪೬
ರಾಮಚಂದ್ರ ತಿಮ್ಮಾ ಕೊಂಡ್ಲಿ	೩೦೯
ರಾಮಚಂದ್ರ ತಿಮ್ಮಯ್ಯಾ ಹೆಗಡೆ	೩೬೩
ಹನುಮಂತ ರಾಮಚಂದ್ರ ಜೋಶಿ	೨೫೬
ಪದ್ಮಾವತಿ ಹುಚ್ಚಪ್ಪಾ ಇಸಳೂರ	೩೩೩
ವಿಶಾಲಾಬಾಯಿ ವೆಂಕಟೇಶ	೨೫೫
ಶಾರದಾಬಾಯಿ ಸುಬ್ರಾವ ಶಾನಭಾಗ	೨೬೬

ಉರ್ದು ಪರೀಕ್ಷೆಯಲ್ಲಿ ಪಾಸಾದವರು.

ಹಸನಖಾನ ಮ॥ ಅಬ್ದುಲ ಗಫಾರ	೨೭೯ + ೨೯

ಟೀಪು:- ಕಾರವಾರ ಕೇಂದ್ರದ ಪರಿಣಾಮ ಈ ತನಕ ನಮ್ಮ ಕೈ ಸೇರಲಿಲ್ಲ.

...ನ್ನು ಪಾಂಡುರಂಗ ಕೃಷ್ಣ ಶಾನಭಾಗ, ಕುಮಟಾ ಇವರು ತಮ್ಮ '...ಪ್ರಕಾಶ ಪ್ರೆಸ್'ನಲ್ಲಿ ಮುದ್ರಿಸಿ ಪ್ರಕಟಿಸಿದರು.

ಜಾಹೀರಾತುಗಳ ದರ:

ಸಿಂಗಲ್ ಕಾಲಮ್ಮಿನ ೧೫ ಎಮ್ ಉದ್ದ

೧ ಸಾಲಿಗೆ ೮ ಆಣೆಯಂತೆ.

ವಿಶೇಷ ಇಲ್ಲವೆ ದೀರ್ಘಕಾಲೀನ

ಜಾಹೀರಾತುಗಳ ಬಗ್ಗೆ ಸಮಕ್ಷ

ಇಲ್ಲವೆ ಪತ್ರದ್ವಾರಾ

ತಿಳಿಸಲಾದೀತು.

...ಶ್ ಹಿಂದುಗಳಿಗೆ ಕೊಟ್ಟಷ್ಟೇ ಸ್ಥಾನಗಳನ್ನು
...ಅರ್ಥಾತ್ ಮುಸಲ್ಮಾನರಿಗೆ ಕೊಡಬೇಕೆಂ
...ಮಿ॥ ಜಿನ್ನಾರವರ ಹಟವುಂಟು. ಸಿಮ್ಲಾ
...ನ ಕಾಲಕ್ಕೆ, ಅಂದಿನ ವಿಶೇಷ ಪರಿಸ್ಥಿತಿಯಲ್ಲಿ
...ಮು ಒಂದು ಬಗೆಯ ಸಮಪ್ರಾತಿನಿಧ್ಯಕ್ಕೆ
...ಸಲು ಸಿದ್ಧವಾದಾಗ್ಯೂ, ಈಗ ಆ ಸಮ್ಮತಿ
...ಸರ್ವಥಾ ಕೊಡುವಂತಿಲ್ಲ. ಈವರೆಗೆ ಹೊರ
...ಬದ್ದಿಗಳನ್ನು ಪರಾಂಬರಿಸಿದರೆ ಹೊಸ ಸರಕಾ
...೫ ಮಂದಿ ಕಾಂಗ್ರೆಸ್, ೫ ಮುಸಲ್ಮಾನ,
...ಮತ್ತು ೧ ಕ್ರಿಸ್ತಿ, ಹೀಗೆ ೧೩ ಮಂದಿ ಸೇ
...ರ್ಪಡುವರೆಂದು ತಿಳಿಯಬೇಕಾಗುತ್ತದೆ. ೫
...ಮುಸಲ್ಮಾನರೆಲ್ಲರೂ ಲೀಗ-ಪುರಸ್ಕೃತರೇ
...ಗೋ ಅಥವಾ ಅವರೊಳಗೆ ಒಬ್ಬಿಬ್ಬರು
...ರರು ಇರುವರೋ ತಿಳಿಯದು. ಲೀಗದ
...ಐದೂ ಸ್ಥಳಗಳು ತಮಗೇ ಸಿಗುವ
...ತೆಯಿಂದ ನವಾಬಜಾದಾ ಲಿಯಾಕತ್ ಅಲ್ಲಿ
...ರ್ ನಾಝಿಮುದ್ದೀನ, ಸರ್ ಫಿರೋಜಖಾನ
...ಜನಾಬ ಅಬದುಲ ರಬ ನಸ್ತರ ಮತ್ತು
...ಮಹಮ್ಮದ ಇಸ್ಮಾಯಿಲ ಇವರ ಹೆಸರು
...ಸರ್ವಾಧಿಪತಿಗಳಿಗೆ ಒಪ್ಪಿಸುವ ಸಂಕಲ್ಪ
...ದ್ದರೆಂದು ದಿಲ್ಲಿಯಲ್ಲಿ ಹೇಳಲಾಗುತ್ತಿದೆ. ಆದರೆ
...ರತಿ ವೇವೆಲ್ಲ ದೊರೆಗಳು ಲೀಗದವರ ಹಟ
...ಪೂರೈಸುವರೆಂದು ನಾನು ಭಾವಿಸುವದಿಲ್ಲ.
...ದ ಪ್ರತ್ಯೇಕವಿರುವ ಮುಸಲ್ಮಾನರು ಕೋಟಿ
...ಇದ್ದಾರೆಂಬುದು ಮುಸಲ್ಮಾನ-ಪ್ರಮುಖ
...ಗಳಲ್ಲಿ ಕೂಡ ಲೀಗದವರ ಪ್ರಾಬಲ್ಯ ಅಷ್ಟೇ
...ನೂ ಅವರಿಗೀಗ ಒಳಿತಾಗಿ ಮನವಟ್ಟಾಗಿದೆ.

..., ಕಂಡದ್ದು. (೩ನೇ ಪುಟದಿಂದ ಮುಂದರಿಸಿದ್ದು)

...ಮಾತನ್ನು ನಾನು ತಾ ೧೪-೫-೪೬ರ "ವೃತ್ತ"
...ಲ್ಲಿ ಓದಿದ್ದೇನೆ. ಆದರೆ ಹೊನ್ನಾವರ ತಾಲೂಕಿನಲ್ಲಿ
...ಲಕ್ಕಿ ಭತ್ತ ಮೊದಗೂಲಿಗೆ ಕೊಡುವ ಉಪಕ್ರಮ
...ವಾಯಿತು. ಮಾವಿನಾರು ಚೀಲ ಭತ್ತವನ್ನು ಅಲ್ಲಿಯ
...ದಾರರು ಮೊದಗೂಲಿಗೆ ಕೊಟ್ಟಿದ್ದಾರೆ. ಇದರ ಮೋ
...ತ್ತವನ್ನು ಗಿರಾಕಿಗಳಿಗೆ ಕೊಡಬೇಕೋ ಕೈಮ್ಮಾಂ
...ಪ್ರವರಿಗೆ ಕೊಡಬೇಕೋ ಯಾ ಇಚ್ಛಿಸ್ಪನವರ
...ಡಬೇಕೋ ಎಂಬುದರ ಬಗ್ಗೆ ಜಿಲ್ಲಾಧಿಕಾ
...ಲ್ಲಿ ಯಾವದೊಂದು ಸುಸಂಗತ, ಸ್ಪಷ್ಟ ಮತ್ತು
...ಧೋರಣವಿಲ್ಲದಂತೆ ಕಾಣುತ್ತದೆ. ಭತ್ತ ಬೇಡು
...ಗಳನ್ನು ಇಲ್ಲವೆ ಆ ವ್ಯಕ್ತಿಗಳಿರುವ ಸ್ಥಳಗಳನ್ನು
...ಧೋರಣ ಬದಲಾಗುತ್ತಿರಬಹುದು !

...ಮರ್ಶಿಯಲ್ ಕಾರ್ಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
...ರದ ಹಂಚು ಯೋಗ್ಯ ದರದಿಂದ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಮೋಟರ ಸ್ಟ್ಯಾಂಡ, ಕುಮಟಾ.

(ಹೋಲಸೇಲ) ಹಾಗೂ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಲಾಯಸನ್ಸಿ, ಮೋಟರ ಸ್ಟ್ಯಾಂಡ, ಕುಮಟಾ.

...strial Bank, Ltd.
...Members limited)
..., COONDAPOOR. S. I
...e Bank now accept
...s at the following rates:-
...*annum.*
...*nnum.*
...yond 30th September 1946.
K. VAMAN SHENAI,
CHAIRMAN.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿಮುಂಗಡ ಕೊಟ್ಟತಕ್ಕದ್ದು

Reg. No. B. 1270. Monday, 10th June, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪೯.

ಕುಮಟಾ:- ಸೋಮವಾರ, ತಾ. ೧೦ ಮಾಹೆ ಜೂನ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಟ್ಯಾಂಡರ್ಡ ೧೩ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಕೇಂದ್ರಸರಕಾರದಹಿಂದೀಕರಣ

(ನಿರೀಕ್ಷಕನು ಬರೆದುದು.)

ಬ್ರಿಟಿಶ ತ್ರಿಮಂತ್ರಿಗಳ ಯೋಜನೆಯಲ್ಲಿ ಮುಸ್ಲಿಮ ಲೀಗಿನ ದೃಷ್ಟಿಯಿಂದ ಹಲವಾರು ದೋಷಗಳೂ ಕೊರತೆಗಳೂ ಇದ್ದಾಗ್ಯೂ, ಅದರಲ್ಲಿ ಲೀಗಿನ ಧ್ಯೇಯವಾದ ಪಾಕಿಸ್ತಾನದ ಬೀಜವು ಅಡಕವಾಗಿರುವದರಿಂದ, ಆ ಯೋಜನೆ ಸ್ವೀಕರಿಸಲಡ್ಡಿಯಿಲ್ಲವಾಗಿ ಕೊನೆಗೆ ಮುಸ್ಲಿಮ ಲೀಗಿನ ಕೌನ್ಸಿಲದವರು ತಿರ್ಮಾನಿಸಿದ್ದಾರೆ. ಈ ಯೋಜನೆಯ ಸಹಾಯದಿಂದ ಕೂಡ ಹತ್ತೇ ವರುಷಗಳಲ್ಲಿ ಪಾಕಿಸ್ತಾನ ಗಳಿಸಬಹುದಾಗಿ ಬೆ|| ಜಿನ್ನಾರವರು ತಮ್ಮ ಅನುಯಾಯಿಗಳಿಗೆ ಆಶೆ ತೋರಿಸಿದ್ದಾರಂತೆ. ಯೋಜನೆಯನ್ನು ಈಗ ಸ್ವೀಕರಿಸಿ, ಮುಂದೆ ಘಟನಾ ಸಮಿತಿಯಲ್ಲಿ ಹೆಜ್ಜೆಹೆಜ್ಜೆಗೆ ಈ ಪ್ರಶ್ನೆಯಲ್ಲಿ ಜಾತೀಯ ಹಿತಸಂಬಂಧಗಳು ಅಡಕವಾಗಿವೆ ಎಂದು ವಾದವನ್ನೆಬ್ಬಿಸಿ ತೊಡಕುಗಳನ್ನುಂಟುಮಾಡುವ ಧೋರಣೆಯನ್ನು ಬೆ|| ಜಿನ್ನಾರವರು ಯೋಚಿಸಿದ್ದಾರೆಂದು ಕೆಲವು ದೂರದರ್ಶಿಗಳ ಊಹೆಯುಂಟು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ನಿನ್ನೆಯಿಂದ ದಿಲ್ಲಿಯಲ್ಲಿ ಸೇರಿದೆ. ಇಂದು-ನಾಳೆ ಅದರ ಕೊನೆಯ ನಿರ್ಣಯ ಹೊರಬೀಳುವದು. ಪಂಜಾಬ ಕೊಂಗ್ರೆಸ ಕಮಿಟಿಯವರೂ ಗಡಿನಾಡು, ಆಸಾಮ ಪ್ರಾಂತಗಳ ಜನರೂ ತ್ರಿಮಂತ್ರಿಗಳ ತ್ರಿಖಂಡ ಯೋಜನೆಯನ್ನು ಬಲವಾಗಿ ವಿರೋಧಿಸುತ್ತಿರುವಾಗ ಮತ್ತು ಆಯಾ ಗುಂಪುಗಳಲ್ಲಿ ಸೇರಲು ನಿರಾಕರಿಸುತ್ತಿರುವಾಗ ಹಾಗೂ ತ್ರಿಮಂತ್ರಿಗಳ ಯೋಜನೆಯಲ್ಲಿ ಪ್ರಾಂತಗಳಿಗೆ ಪೂರ್ಣ ಸ್ವಾತಂತ್ರ್ಯವಿಲ್ಲ, ಘಟನಾ-ಸಮಿತಿಗೆ ಸಾರ್ವಭೌಮತ್ವ ಕೊಟ್ಟಿಲ್ಲ, ಪ್ರಾಂತಗಳನ್ನು ಗುಂಪುಗಳನ್ನಾಗಿ ವಿಂಗಡಿಸಿದ್ದು ಸಯುಕ್ತಿಕವಲ್ಲ ಎಂಬೀ ದೋಷಗಳನ್ನೆತ್ತಿ ತೋರಿಸಿ ಪುರೋಗಾಮಿ ಪಕ್ಷದವರೂ ಶ್ರೀ|| ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ, ಅಚ್ಯುತ ಪಟವರ್ಧನ ವಗೈರೆ ಸಮಾಜಸತ್ತಾವಾದಿ ಪ್ರಮುಖರೂ ಈ ಯೋಜನೆಯನ್ನು ಆಮೂಲಾಗ್ರ ತಿರಸ್ಕರಿಸಬೇಕೆಂದು ಕೊಂಗ್ರೆಸ್ಸಿಗೆ ಬಿನ್ನವಿಸುತ್ತಿರುವಾಗ ಕೊಂಗ್ರೆಸ ಕಾರ್ಯಕಾರಿ ಮಂಡಳವು ತ್ರಿಕೂಟದ ಯೋಜನೆಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸೀತೆಂದು ನಾ ಹೇಳಲಾರೆ. **ಯಾವದೇ ಗುಂಪಿನಲ್ಲಿ** ಸೇರುವ, ಸೇರದಿರುವ ಇಲ್ಲವೆ ಹೊರಬೀಳುವ ಸ್ವಾತಂತ್ರ್ಯವನ್ನು ಪ್ರಾರಂಭದಿಂದಲೇ ಎಲ್ಲ ಪ್ರಾಂತಗಳಿಗೆ ಕೊಟ್ಟನಕ ಬ್ರಿಟಿಶ ಯೋಜನೆಯ ಮಾರ್ಗದೊಳಗಿನ ಅಡಚಣಿಗಳು ದೂರಾಗಲಾರವೆಂದು ಧಾರಾಳವಾಗಿ ಹೇಳಬಹುದು ಈಮೇಲೆ ಶೀಖರ ವಿರೋಧವಿದೆ; ಅಂಬೇಡಕರ-ಶಿವರಾಜ ಪಕ್ಷಕ್ಕೊಪ್ಪಿದ ದಲಿತ ವರ್ಗದವರ ವಿರೋಧವುಂಟು. ಶೀಖರಿಗೆ ಇತ್ತ ಅಖಂಡ ಹಿಂದುಸ್ಥಾನ ರಕ್ಷಣೆಯೂ ಇಲ್ಲ; ಶೀಖಿಸ್ತಾನದ ಆಶ್ವಾಸನೆಯೂ ಇಲ್ಲ! ಹೀಗೆ ಅವರಿಗೆ ತ್ರಿಶಂಕು ಸ್ವರ್ಗವಾಗಿದೆ. ಡಾ|| ಅಂಬೇಡಕರರಿಗಂತೂ ತ್ರಿಮಂತ್ರಿಗಳ ಯೋಜನೆಯಲ್ಲಿ ಯಾವ ಸ್ಥಾನವೂ ಸಿಕ್ಕಿಲ್ಲ! ಆದರಿಂದ ಅವರು ಕಡು ಹಿಂದ-ಶತ್ರುಗಳಾದ ಮಿ|| ಚರ್ಚಿಲ್ಲರ ನೆರೆ ಹೊಕ್ಕು, "ಏಳು ಕೋಟಿ ದಲಿತರ ಹಿತಸಂರಕ್ಷಣೆಯ ಭಾರ ತಮ್ಮ ಮೇಲೆಯೇ ಇದೆ!" ಎಂದು ದೈನ್ಯಗೊಂಡು ಅರುಹಿಕೊಂಡಿದ್ದಾರೆ! ತ್ರಿಮಂತ್ರಿಗಳು ದಲಿತ ವರ್ಗಗಳಿಗೆ ಯೋಗ್ಯ ಸಂರಕ್ಷಣೆಯನ್ನೂ ಅಧಿಕಾರವನ್ನೂ ಕೊಡುವ ವ್ಯವಸ್ಥೆ ಮಾಡದೆ ಮುಂದೆ ಸಾಗಿದರೆ ಅದನ್ನು ಬಲವಾಗಿ ನಿರೋಧಿಸುವವಾಗಿ ಅಂಬೇಡಕರ ಪಕ್ಷದ ಮಹಾಮಂಡಳದಲ್ಲಿ ಮೊನ್ನೆಯೇ ಒಂದು ನಿರ್ಣಯವಾಗಿದೆ. ತ್ರಿಮಂತ್ರಿಗಳು ಈ ಎಲ್ಲ ಆಕ್ಷೇಪಗಳನ್ನೂ ವಿರೋಧವನ್ನೂ ಹೇಗೆ ಪರಿಹರಿಸುತ್ತಾರೆಂಬುದನ್ನು ನೋಡಬೇಕು.

ಭಾವೀ ಘಟನೆಯ ಸಂಬಂಧದ ಯೋಜನೆಯ ಗತಿ ಏನೇ ಆದರೂ ಕೇಂದ್ರದಲ್ಲಿ ಬೇಗನೇ ಹೊಸ ಹಿಂದೀ ಸರಕಾರ ಸ್ಥಾಪನೆಯಾಗುವದು ಮಾತ್ರ ಖಂಡಿತ. ಈ ವಾರ ಮುಗಿಯುವ ಮುಂಚೆಯೇ ಆ ಸರಕಾರ ಅಸ್ತಿತ್ವದಲ್ಲಿ ಬರುವ ಲಕ್ಷಣಗಳಿವೆ. ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದ ಅರ್ಥಮಂತ್ರಿ ಸರ್ ಆರ್ಚಿಬೊಲ್ಡ ರೌಲೆಂಡ್ಸ ಹಾಗೂ ಗೃಹಮಂತ್ರಿ ಸರ್ ಜೊನ್ ಥೊರ್ನ ಇವರು ಈಗಾಗಲೇ ಅಧಿಕಾರಸನ್ಯಾಸ ಮಾಡಿ ಸ್ವದೇಶಕ್ಕೆ ಹೊರಟುಹೋಗಿದ್ದಾರೆ. ಸೇ|| ಸರ್ ಕ್ಲೋಡ ಅಚಿನಲೆಕ್ಕರು ಹಿಂದೆಯೇ ಕಾರ್ಯಕಾರಿ ಮಂಡಳದ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟದ್ದುಂಟು. ಇವರೆಲ್ಲರ ಕಾರ್ಯವನ್ನು ಈಗ ಸ್ವತಃ ಸರ್ವಾಧಿಪತಿಗಳೇ ನಿರ್ವಹಿಸುತ್ತಿದ್ದಾರೆ. ಇದೇ ಬರುವ ತಾ. ೨೭ರಿಂದ ಆಸೇತು ಹಿಮಾಚಲ ಭಾರತದಲ್ಲಿ ರೇಲ್ವೆಗಳೊಳಗಿನ ನೌಕರರು ಸಂಪು ಹೂಡಲಿದ್ದಾರೆ. ಆ ಸಂಪು ತಪ್ಪಿಸುವದಕ್ಕಾಗಿ ಈ ವರೆಗೆ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿ ಹೋಗಿವೆ. ರೇಲ್ವೆಯವರ ಸಂಪು ಶುರುವಾದರೆ ದೇಶದಲ್ಲಿ ಅಭೂತಪೂರ್ವ ಕೋಲಾಹಲವುಂಟಾಗದಿರದು. ದೇಶದಲ್ಲಿ ಮೊದಲೇ ಆಹಾರದ ಕೊರತೆಯುಂಟು. ವಿದೇಶಗಳಿಂದ ಬರುತ್ತಿರುವ ಆಹಾರವನ್ನೂ ಸಂಪನ್ನ ಪ್ರಾಂತಗಳೊಳಗಿನ ಕಾಳುಕಡಿಗಳನ್ನೂ ಕೊರತೆಯುಳ್ಳ ಆ ಪ್ರಾಂತಗಳಿಗೆ ಮುಟ್ಟಿಸುವದವಶ್ಯವುಂಟು. ಇಂಥ ಕಷ್ಟಕರ ಪರಿಸ್ಥಿತಿಯಲ್ಲಿ ಸಂಪಿನ ಮಹಾಸಂಕಟ ಪುನಃ ಉದ್ಭವಿಸಿದರೆ ಪರಿಸ್ಥಿತಿ ಅತ್ಯಂತ ಭಯಾನಕವಾಗುವದರಲ್ಲಿ ಸಂದೇಹವಿಲ್ಲ. ಆ ಪರಿಸ್ಥಿತಿಯನ್ನು ಎದುರಿಸುವದು ಲೋಕಪ್ರತಿನಿಧಿಗಳಿಂದೊಡಗೂಡಿದ ರಾಷ್ಟ್ರೀಯ ಸರಕಾರಕ್ಕೆ ಸಾಧ್ಯವಾದೀತು ವಿನಹ ಬೇರೆ ಯಾರಿಗೂ ಸಾಧ್ಯವಾಗುವಂತಿಲ್ಲ. ಆದರಿಂದ ಆದಷ್ಟು ಬೇಗ ತಮ್ಮ ಮಂತ್ರಿಮಂಡಳದ ಹಿಂದೀಕರಣ ಮಾಡಲು ಸರ್ವಾಧಿಪತಿಗಳು ಉತ್ಕಂಠಿತರಾಗಿದ್ದಾರೆ. ಮಂತ್ರಿಮಂಡಳದ ದೈನಂದಿನ ಕಾರಭಾರದಲ್ಲಿ ತಾವು ಕೈಹಾಕಲಿಕ್ಕಿಲ್ಲೆಂತಲೂ, ವಿಶೇಷಾಧಿಕಾರದ ಪ್ರಯೋಗವನ್ನು ಅಷ್ಟು ಸಬಲ ಕಾರಣಗಳಿಲ್ಲದೆ ಮಾಡಲಿಕ್ಕಿಲ್ಲೆಂತಲೂ ಸರ್ವಾಧಿಪತಿಗಳು ರಾಷ್ಟ್ರಪತಿ ಆಝಾದರಿಗೆ ಆಶ್ವಾಸನೆ ಕೊಟ್ಟಿದ್ದಾರಂತೆ. ಆದರಿಂದ ಕೊಂಗ್ರೆಸ-ಪ್ರಮುಖರು ಈ ಸರಕಾರದಲ್ಲಿ ಸೇರಲು ಒಪ್ಪುವಂತಾಗಿದೆ. ಆದರೂ "ಸಮ-ಪ್ರಾತಿನಿಧ್ಯ"ದ ಬೇಡಿಕೆಯ ಒಂದು ವಿಘ್ನವುಂಟು. ಕೊಂಗ್ರೆಸ್ಸಿಗೆ ಅರ್ಥಾತ್ ಹಿಂದುಗಳಿಗೆ ಕೊಟ್ಟಷ್ಟೇ ಸ್ಥಾನಗಳನ್ನು ಲೀಗಿಗೆ ಅರ್ಥಾತ್ ಮುಸಲ್ಮಾನರಿಗೆ ಕೊಡಬೇಕೆಂದು ಬೆ|| ಜಿನ್ನಾರವರ ಹಟವುಂಟು. ಸಿಮ್ಲಾ ಪರಿಷತ್ತಿನ ಕಾಲಕ್ಕೆ, ಅಂದಿನ ವಿಶೇಷ ಪರಿಸ್ಥಿತಿಯಲ್ಲಿ ಕೊಂಗ್ರೆಸು ಒಂದು ಬಗೆಯ ಸಮಪ್ರಾತಿನಿಧ್ಯಕ್ಕೆ ಸಮ್ಮತಿಸಲು ಸಿದ್ಧವಾದಾಗ್ಯೂ, ಈಗ ಆ ಸಮ್ಮತಿಯನ್ನು ಸರ್ವಥಾ ಕೊಡುವಂತಿಲ್ಲ. ಈವರೆಗೆ ಹೊರಬಿದ್ದ ಸುದ್ದಿಗಳನ್ನು ಪರಾಂಬರಿಸಿದರೆ ಹೊಸ ಸರಕಾರದಲ್ಲಿ ೫ ಮಂದಿ ಕೊಂಗ್ರೆಸ, ೫ ಮುಸಲ್ಮಾನ, ೧ ಶೀಕ ಮತ್ತು ೧ ಕ್ರಿಸ್ತಿ, ಹೀಗೆ ೧೨ ಮಂದಿ ಸೇರಿಸಿಕೊಳ್ಳಲ್ಪಡುವರೆಂದು ತಿಳಿಯಬೇಕಾಗುತ್ತದೆ. ೫ ಮಂದಿ ಮುಸಲ್ಮಾನರೆಲ್ಲರೂ ಲೀಗ-ಪುರಸ್ಕೃತರೇ ಇರುವರೋ ಅಥವಾ ಅವರೊಳಗೆ ಒಬ್ಬಿಬ್ಬರು ಲೀಗೇತರರು ಇರುವರೋ ತಿಳಿಯದು. ಲೀಗದವರಂತೂ ಐದೂ ಸ್ಥಳಗಳು ತಮಗೇ ಸಿಗುವವೆಂಬ ಆಶೆಯಿಂದ ನವಾಬಜಾದಾ ಲಿಯಾಕತ್ ಅಲ್ಲಿ ಖಾನ, ಸರ್ ನಾಝಿಮುದ್ದೀನ, ಸರ್ ಫಿರೋಜಖಾನ ನೂನ, ಜನಾಬ ಅಬದುಲ ರಬ ನಸ್ತರ ಮತ್ತು ನವಾಬ ಮಹಮ್ಮದ ಇಸ್ಮಾಯಿಲ ಇವರ ಹೆಸರುಗಳನ್ನು ಸರ್ವಾಧಿಪತಿಗಳಿಗೆ ಒಪ್ಪಿಸುವ ಸಂಕಲ್ಪ ಮಾಡಿದ್ದಾರೆಂದು ದಿಲ್ಲಿಯಲ್ಲಿ ಹೇಳಾಡುತ್ತಾರೆ. ಆದರೆ ಸರ್ವಾಧಿಪತಿ ವೆವೆಲ್ಲ ದೊರೆಗಳು ಲೀಗದವರ ಹಟವನ್ನು ಪೂರೈಸುವರೆಂದು ನಾನು ಭಾವಿಸುವದಿಲ್ಲ. ಲೀಗಿನಿಂದ ಪ್ರತ್ಯೇಕವಿರುವ ಮುಸಲ್ಮಾನರು ಕೋಟಿಗಟ್ಟಲೆ ಇದ್ದಾರೆಂಬುದು ಮುಸಲ್ಮಾನ - ಪ್ರಮುಖ ಪ್ರಾಂತಗಳಲ್ಲಿ ಕೂಡ ಲೀಗದವರ ಪ್ರಾಬಲ್ಯ ಅಷ್ಟೇನಿಲ್ಲೆಂಬದೂ ಅವರಿಗೀಗ ಒಳಿತಾಗಿ ಮನದಟ್ಟಾಗಿದೆ.

ಕೇಳಿದ್ದು, ಕಂಡದ್ದು.(೩ನೇಪುಟದಿಂದಮುಂದರಿಸಿದ್ದು)

ಹಾಕಿದ ಮಾತನ್ನು ನಾನು ತಾ|| ೧೩-೫-೪೬ರ "ವೃತ್ತ"ದಲ್ಲಿ ಉಲ್ಲೇಖಿಸಿದ್ದೇನೆ. ಆದರೆ ಹೊನ್ನಾವರ ತಾಲೂಕಿನಲ್ಲಿ ಅದೇ ಕಾಲಕ್ಕೆ ಭತ್ತ ಮಾರಗೊಡಲಿಗೆ ಕೊಡುವ ಉಪಕ್ರಮ ಪ್ರಾರಂಭವಾಯಿತು. ಸಾವಿರಾರು ಖೇಲ ಭತ್ತವನ್ನು ಅಲ್ಲಿಯ ಮಾಮಲೇದಾರರು ಮಾರಗೊಡಲಿಗೆ ಕೊಟ್ಟಿದ್ದಾರೆ. ಇದರ ಮೇಲಿಂದ ಭತ್ತವನ್ನು ಗಿರಣಿಗಳಿಗೆ ಕೊಡಬೇಕೋ ಕೈಯಿಂದ ಕುಟ್ಟುವವರಿಗೆ ಕೊಡಬೇಕೋ ಯಾ ಇತ್ತಿಟ್ಟವರಿಗೂ ಕೊಡಬೇಕೋ ಎಂಬುದರ ಬಗ್ಗೆ ಜಿಲ್ಹಾಧಿಕಾರ ಕಚೇರಿಯಲ್ಲಿ ಯಾವದೊಂದು ಸುಸಂಗತ, ಸ್ಪಷ್ಟ ಮತ್ತು ಸುನಿಶ್ಚಿತ ಧೋರಣವಿಲ್ಲೆಂಬಂತೆ ಕಾಣುತ್ತದೆ. ಭತ್ತ ಬೇಡುವ ವ್ಯಕ್ತಿಗಳನ್ನು ಇಲ್ಲವೆ ಆ ವ್ಯಕ್ತಿಗಳಿರುವ ಸ್ಥಳಗಳನ್ನು ನೋಡಿ ಆ ಧೋರಣ ಬದಲಾಗುತ್ತಿರಬಹುದು!

ದಿ ಕೊಮರ್ಶಿಯಲ್ ಕೊರ್ಪೊರೇಶನ್,
ಕುಮಟಾ.
ನಮ್ಮಲ್ಲಿ ಡೀಸೆಲ್ ಮಶಿನ್ ಕಂಪನಿಯ
ಎಲ್ಲ ತರದ ಪಂಪು ಯೋಗ್ಯ ದರದಿಂದ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಮೋಟರ ಸ್ಟೆಂಡ, ಕುಮಟಾ.

ನಮ್ಮಲ್ಲಿ (ಹೋಲಸೇಲ) ರೀತಿ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ.
ವಿ. ಎಮ್. ಮಿಜಾರನಕರ,
ಲಾಯಸನ್ಸಿ, ಮೋಟರ ಸ್ಟೆಂಡ,ಕುಮಟಾ.

The Agricultural & Industrial Bank, Ltd.
(Incorporated in British India, Liability of Members limited)
Head Office: "LAXMI NIVAS" Buildings, COONDAPOOR, S. I.
The Head Office and Branches of the Bank now accept
Season Deposits from three to six months at the following rates:-
Three Months at 2½% per annum.
Six Months at 2¾% per annum.
No such deposit will be allowed to run beyond 30th September 1946.
Coondapoor,
8-2-1946.
K. VAMAN SHENAI,
CHAIRMAN.

ಸ್ಥಾನಿಕ ವೃತ್ತಾಂತ

ಕುಮಟಾ— ಮಳೆಗೆ ಇನ್ನೂ ಕಳೆ ತುಂಬಿಲ್ಲೆಂದು 'ವೃತ್ತ'ವು ಕಳೆದ ಸೋಮವಾರ ಟೀಕಿಸಿದ್ದು ಕಂಡು ಮೇಘಾಧಿಪತಿಗೆ ಸಿಟ್ಟು ಬಂತೋ ಏನೋ! ಮಂಗಳವಾರ ಅತಿ ವಿಪರೀತ ಮಳೆ ಸುರಿಸಿ ಬಿಟ್ಟನು! ಆ ಒಂದೇ ದಿನ ಸುಮಾರು ೮ ಇಂಚಿನಷ್ಟು ಮಳೆಯಾಗಿರಬೇಕು. ಆ ದಿನವೂ ಮರು ದಿನವೂ ಲೋಕಕ್ಕೆ ಸೂರ್ಯದರ್ಶನ ಸಹ ಆಗಗೊಡಲಿಲ್ಲ! ಇತ್ತ ೩-೪ ದಿನಗಳಿಂದ ಮಳೆ ಕಡಿಮೆಯಾಗಿದೆ. ಈತನಕ ಅಂದಾಜು ೨೦-೨೧ ಇಂಚು ಮಳೆಯಾಗಿರಬಹುದು

ರಾ॥ ಚಕ್ರದೇವರು ಇಲ್ಲಿ ಫೌಜದಾರರಾಗಿದ್ದಾಗ ಅವರು ಸಾಹಸ ಮತ್ತು ಪ್ರಯತ್ನ ಮಾಡಿ ಊರೊಳಗಿನ ಹಾಗೂ ಊರ ಸುತ್ತುಮುತ್ತಲಿನ ಹಳ್ಳಿಗಳಲ್ಲಿರುವ ಜುಗಾರ ಮಂಡಗಳನ್ನೆಲ್ಲ ಸಂಪೂರ್ಣ ಅಡಗಿಸಿಬಿಟ್ಟಿದ್ದರು. ಚಕ್ರದೇವರು ವರ್ಗವಾಗಿ ಇಲ್ಲಿಂದ ಹೋದದ್ದೇ ತಡ, ಹಿಂದಿನ ಎಲ್ಲ ಮಂಡಗಳು ಪುನಃ ಚಾಲೂ ಆಗಿವೆ; ಮತ್ತು ಹೊಸ ಹುರುಪಿನಿಂದ ನಡೆಯುತ್ತಿವೆ! ಚಕ್ರದೇವರ ಸ್ಥಳದಲ್ಲಿ ಬಂದವರಿಗೆ ಈ ಮಂಡಗಳನ್ನು ಅಡಗಿಸುವ ಚಾತುರ್ಯ ಮತ್ತು ಸಾಮರ್ಥ್ಯವಿಲ್ಲವೇನು? ಅಥವಾ ಜುಗಾರ ಆಟ ನಡೆಯಗೊಟ್ಟರೆ ಅಷ್ಟೇನು ಹಾನಿಯಿಲ್ಲೆಂದು ಅವರು ತಿಳಿಯುತ್ತಿರುವರೇ?

ಕಳೆದವಾರ ಪುನಃ ಪೇಟೆಯಲ್ಲಿ ಕಳವಿನ ಪ್ರಯತ್ನ ನಡೆದಿತ್ತು. ಸುಮಾರು ೧೫ ವರ್ಷಗಳ ಹುಡುಗನೊಬ್ಬನು ಶ್ರೀ ಹನುಮ ದೇವರ ಗುಡಿಯ ಬಲಗಡೆಯಲ್ಲಿರುವ ಅಂಗಡಿಯ ಮಾಡಿನ ಮೇಲೆ ಹತ್ತಿ, ಅಲ್ಲಿಂದ ಹೆಗಡೇಕರರ ಅಂಗಡಿಯ ಮಾಳಿಗೆಯಲ್ಲಿ ಹೊಕ್ಕು, ಅಲ್ಲೇ ಇದ್ದ ಒಂದು ಕರಗಸದಿಂದ ಏನೋ ಕೊಯ್ಯುತ್ತಿದ್ದನಂತೆ. ಈ ಸಪ್ಪಳ ಕೇಳಿ ನೆರೆಹೊರೆಯ ಅಂಗಡಿಯಲ್ಲಿ ಮಲಗಿದವರೊಬ್ಬರು ಎಚ್ಚತ್ತು ಅಂಗಡಿಯವರನ್ನೂ ಜನರನ್ನೂ ಕರೆತಂದರು. ಅವರು ಬಂದು ಕಳ್ಳನಿಗೆ ಕಳವಿನ ಕೆಲಸ ಮಾಡುತ್ತಿರುವಾಗಲೇ ಹಿಡಿದುಹಾಕಿ ಪೋಲೀಸರ ಕಡೆ ಒಪ್ಪಿಸಿದರು. ಈ ಹುಡುಗನ ಜೊತೆಯಲ್ಲಿದ್ದವರು ಮಾತ್ರ ಸಿಕ್ಕಿಕೊಳ್ಳಲಿಲ್ಲ.

ಊರೊಳಗಿನ ಕಾಲುವೆಗಳ ಸ್ವಚ್ಛತೆಯ ಕೆಲಸ ಸಮಾಧಾನಕರವಾಗಿಲ್ಲ. ಎಷ್ಟೋ ಕಡೆ ಕಾಲುವೆಗಳೊಳಗಿನ ನೀರು ಮಾರ್ಗದ ಮೇಲೆ ಹರಿಯುತ್ತ ಮಾರ್ಗಕ್ಕೆ ಹಳ್ಳದ ರೂಪ ಕೊಡುತ್ತಿವೆ!

ಸೀಧಾ-ಅಂಗಡಿಗಳಲ್ಲಿ ಹತ್ತಿಕಾಳು ಇನ್ನೂ ಸಿಗಹತ್ತಿರುವದಿಲ್ಲ. ಊರಲ್ಲೀಗ ಹಿಂಡಿಯೂ ಅಪರೂಪವಾಗಿದೆ ದನ ಸಾಕುವವರು ಗೋಳಿಡುತ್ತಿದ್ದಾರೆ

ವಾಲಗಳ್ಳಿಯಲ್ಲಿ ಕಳೆದ ಮಂಗಳವಾರ ಒಂದು ವಿಚಿತ್ರ ಕೊಲೆಯಾಗಿದೆ. ಅಲ್ಲಿಯ ನಾರಾಯಣ ವೆಂಕಟರಮಣ ಶಾನಭಾಗ ಎಂಬವನ ಮನೆಯಲ್ಲಿ ಅವನು ಮತ್ತು ಅವನ ತಾಯಿ ಹೀಗೆ ಇಬ್ಬರೇ ಇರುತ್ತಿದ್ದರು ತಾಯಿ-ಮಕ್ಕಳೊಳಗೆ ಏನಾಯಿತೋ ಏನೋ, ನಾರಾಯಣನು ತಾಯಿಯನ್ನು ಕೊಂದು ಮನೆಯ ಆವಾರದಲ್ಲೇ ಒಂದು ಕಡೆ ಅವಳ ಹೆಣ ಹುಗಿದು ಹಾಕಿದ್ದನಂತೆ. ಹೇಗೋ ಹೇಗೋ ಈ ಸಂಗತಿ ಕುಮಟೆಯ ಪೋಲೀಸರಿಗೆ ತಿಳಿದು ಅವರು ಗುಪ್ತವಾಗಿ ಹುಗಿದುಹಾಕಿದ ಶವವನ್ನು ಹುಡುಕಿ ತೆಗೆದರು; ಮತ್ತು ನಾರಾಯಣನನ್ನು ಸೆರೆಹಿಡಿದಿಟ್ಟಿದ್ದಾರೆ. ಸದರಿ ನಾರಾಯಣನು ಕೆಲ ಕಾಲದಿಂದ ಭ್ರಾಂತನಾಗಿದ್ದನೆಂದೂ ಭ್ರಮಿಷ್ಟನಂತೆಯೇ ಊರಲ್ಲಿ ಅಲೆದಾಡುತ್ತಿದ್ದನೆಂದೂ ಜನರು ಹೇಳುತ್ತಾರೆ.

ರಾತ್ರಿ ಕಾಲದಲ್ಲಿ ಸ್ಯಾಕಲ-ಗಾಡಿಗಳಿಗೆ ದೀಪ ಹಚ್ಚಿ ನಡೆಸಬೇಕೆಂದು ಜಿಲ್ಲಾಧಿಪರು ಮಾಡಿದ ಕಟ್ಟಳೆಯುಂಟು. ಸ್ಯಾಕಲ ದೀಪಗಳಿಗೆ ಸಾಮಾನ್ಯವಾಗಿ ಉಪಯೋಗಿಸುವದು ಚಿಮಣಿ ಎಣ್ಣೆ. ಬೇರೆ ಎಣ್ಣೆ ಹಾಕಿದರೆ ದೀಪಗಳು ಸರಿಯಾಗಿ ಉರಿಯುವದಿಲ್ಲ. ಚಿಮಣಿ ಎಣ್ಣೆ ಹಾಕೋಣ ಎಂದರೆ ಆ ಎಣ್ಣೆ ಈಗ ಸಿಗುವದಿಲ್ಲ. ಸ್ಯಾಕಲ ದೀಪಗಳಿಗಾಗಿ ಎಣ್ಣೆ ಕೊಡಿಸಬೇಕೆಂದು ಅರ್ಜಿ ಮಾಡಿದವರಿಗೆ ಈಗಿದ್ದ ಸೀಧಾ-ನಿಯಮಗಳನ್ವಯ ಎಣ್ಣೆ ಕೊಡಿಸಲಾಗುವದಿಲ್ಲೆಂದು ಮೊನ್ನೆಯೇ ಗೋಕರ್ಣದೊಳಗಿನ ಸೀಧಾ-ಅಧಿಕಾರಿಗಳು ತಿಳಿಸಿದ್ದುಂಟು. ಜಿಲ್ಲಾಧಿಪರು ಈ ಕಡೆ ಲಕ್ಷ್ಯ ಕೊಟ್ಟು, ಸ್ಯಾಕಲುಗಳಿಗಾಗಿ ತಿಂಗಳೊಂದರ ೨ ಪಾಯಿಂಟ ನಷ್ಟಾದರೂ ಎಣ್ಣೆ (ಅವಶ್ಯ ಇದ್ದರೆ ಸೀಧಾ-ನಿಯಮಗಳಲ್ಲಿ ಅವಶ್ಯವುಳ್ಳ ತಿದ್ದುಪಡಿ ಮಾಡಿಸಿ) ಕೊಡಿಸುವ ವ್ಯವಸ್ಥೆ ಮಾಡಿಸಬೇಕಾಗಿಯೂ, ಇಲ್ಲದಿದ್ದರೆ ಚಿಮಣಿ ಎಣ್ಣೆಯ ಕೊರತೆ ನೀಗಿ ಎಣ್ಣೆ ಬೇಕಾದ ಹಾಗೆ ಸಿಗುವ ವರೆಗೆ ಸ್ಯಾಕಲ ದೀಪದ ಕಟ್ಟಳೆಯನ್ನು ರದ್ದುಗೊಳಿಸಬೇಕಾಗಿಯೂ ಗೋಕರ್ಣದೊಳಗಿನ ಸ್ಯಾಕಲ-ಸ್ವಾರರು ಬೇಡಿಕೊಳ್ಳುತ್ತಾರೆ. ದೀಪವಿಲ್ಲದೆ ಸ್ಯಾಕಲ ನಡೆಸಿದರು ಎಂದು ಇಲ್ಲಿಯ ಪೋಲೀಸರು ಮತಿಯಿಲ್ಲದೆ ಖಟ್ಲೆಗಳನ್ನು ಹಾಕಿ ಜನರಿಗೆ ಬಹಳ ದಣಿಸುತ್ತಿದ್ದಾರಂತೆ.

ಗಂಗಾವಳಿಯೊಳಗಿನ ಗಾಂವಠೀ ಶಾಲೆಗೆ ಒಂದು ಸ್ವತಂತ್ರ ಮನೆ ಕಟ್ಟಿಸುವದಕ್ಕಾಗಿ ಊರವರು ಒಂದು ನಿಧಿ ಕೂಡಿಸಿಟ್ಟಿದ್ದುಂಟು. ಅದರಂತೆ ಶಾಲೆಯವರು ಒಂದು ಆವಾರವು ಕಟ್ಟಿಸಿದ್ದಾರೆ. ಆದರೆ ಅದು ಇನ್ನೂ ಪೂರ್ಣವಾಗಿಲ್ಲ. ಹಂಚು ಹಾಕುವದು ಬಾಕಿಯಲ್ಲುಂಟು ಅದರಿಂದ ಮಳೆಯ ಹೊಡೆತಕ್ಕೆ ಗೋಡೆಗಳು ಎಲ್ಲಿ ಕುಸಿದು ಬೀಳುತ್ತವೋ ಎಂಬ ಅಂಜಿಕೆಯುಂಟಾಗಿದೆ. ಶಾಲಾ-ನಿಧಿಯ ಹಣ ಮುಂದಿಗೆ ಸಾಲವಾಗಿ ಕೊಟ್ಟಿರುವದರಿಂದಲೇ ಶಾಲೆಯ ಕಟ್ಟಡ ಪೂರ್ಣ ಮಾಡಲಾಗಲಿಲ್ಲವಾಗಿರಬಹುದು. ಅಥವಾ ವ್ಯವಸ್ಥಾಪಕರು ತಮ್ಮ ಕಾರ್ಯಭಾರ ನಿರ್ವಹಿಸಲು ಅಸಮರ್ಥರಾಗಿರಬಹುದು. ಊರವರು ಅದೇನೆಂದು ಕಂಡುಹಿಡಿದು ಶಾಲೆಯಲ್ಲಿ ಸುವ್ಯವಸ್ಥೆಯಾಗುವಂತೆ ಯತ್ನಿಸಬೇಕೆಂದು ಗಂಗಾವಳಿಯವರೊರ್ವರು ಬಿನ್ನವಿಸುತ್ತಾರೆ

ಹೊನ್ನಾವರ— (ತಾ. ೭-೬-೪೬) ಕಳೆದ ಮಂಗಳವಾರ ಬಹಳ ಮಳೆ ಸುರಿಯಿತು.

ನಗರ ಸಭೆಯವರು ತೋಡಿಸಿದ ಬಾವಿ ಕುಸಿದು ಬೀಳಹತ್ತಿತಂತೆ ಅದನ್ನು ಈಗ ಮುಚ್ಚಿಬಿಟ್ಟಿದ್ದಾರೆ! ಚಿಟ್ಟೆ-ಕೇರಿಗೆ ಹಾಕಿಸಲಾರಂಭಿಸಿದ ಹಾಗಾರು ಕೂಡ ಕುಸಿಯಲು ಸಿದ್ಧವಾಗಿ ನಿಂತಿದೆ! ಆದರೂ ನಗರ ಸಭೆಯವರು ಪೂರ್ವ ದಿಕ್ಕಿಗೆ ಇನ್ನೂ ಹಾಗಾರ ಹಾಕಿಸುತ್ತಿದ್ದಾರೆ! ಇನ್ನೊಂದು ಕಡೆ ನಗರ ಸಭೆಯು ಕಟ್ಟೆ ಬೆಳೆಸುವ ಕೆಲಸ ಸಾಗಿದೆ! ಅಲ್ಲೂ ಮಳೆಯ ಝಡಿಗೆ ಗೋಡೆಗಳು ನೆಲಸಮವಾಗುವ ಭೀತಿಯುಂಟು. ಇಲ್ಲಿಯ ನಗರ ಸಭೆಯವರು ಮಾಡಿಸುವ ಕೆಲಸ-ಕಾಮಗಾರಿಗಳ ನಮೂನೆಯಿದು!! ಕೇರಬೀದಿಯ ಸಂಕದ ಕಿಲಿ-ಹಲಗೆ ಮುರಿದುಬಿದ್ದು ಬಹಳ ದಿನಗಳಾದವು. ನೂರಾರು ಜನರೂ ದನಗಳೂ ತಿರುಗಾಡುವ ಮಾರ್ಗವಿದು ಆದರೂ ಆ ಸಂಕ ದುರುಸ್ತ ಮಾಡಿಸುವ ವಿಚಾರ ನಗರ ಸಭೆಯವರ ತಲೆಯಲ್ಲಿ ಹೊಳೆಯಲಿಲ್ಲವು!

ಕಳೆದ ತಾ ೧೦ರಿಂದ ಸೀಧಾ-ಅಂಗಡಿಗಳಲ್ಲಿ ಅನಾಮು ಅಕ್ಕಿ ಮಾರಾಟಕ್ಕಿಟ್ಟಿದ್ದಾರೆ. ಅಕ್ಕಿ ಸೀಧಾ ಒಯ್ಯುವವರು ಕುಚಗಿ ಅಕ್ಕಿ ಅರ್ಧ ಮತ್ತು ಸನ್ನಕ್ಕಿ ಇಲ್ಲವೆ ಅನಾಮು ಅಕ್ಕಿ ಅರ್ಧ ಒಯ್ಯಬೇಕೆಂದು ಹೇಳುತ್ತಾರೆ. ಕುಚಗಿ ಅಕ್ಕಿಯ ದರ ಪಾಯಲಿ ೧ಕ್ಕೆ ರೂ. ೧-೪-೦ ಉಂಟು; ಸನ್ನಕ್ಕಿಯ ದರ ರೂ. ೧॥ ಉಂಟು; ಮತ್ತು ಅನಾಮು ಅಕ್ಕಿಯ ದರ ರೂ. ೧॥। ಇದೆ. ಇವುಗಳಲ್ಲಿ ಸನ್ನಕ್ಕಿ ಸಿಗುವದು ದುರ್ಲಭ ಆ ಅಕ್ಕಿ ಬಂದ ೧-೨ ದಿನಗಳಲ್ಲೇ ಖರ್ಚಿಗೆ ಹೋಗುತ್ತಿದೆ. ಆದ್ದರಿಂದ ಹಿಂದಿನಿಂದ ಬಂದ ಜನರು ಅನಾಮು ಅಕ್ಕಿಯನ್ನೇ ಒಯ್ಯಬೇಕಾಗುತ್ತಿದೆ. ಭಾರಿ ಬೆಲೆಯ ಈ ಅಕ್ಕಿ ಉಣ್ಣುವ ಐಪತ್ತು ನಮಗೆಲ್ಲಿಯದೆಂದು ಜನರು ಅಸಮಾಧಾನದಿಂದ ಹೇಳುತ್ತಾರೆ! ಅವರಿಗಾಗುವ ದುಃಖ ಕಷ್ಟ ನೋಡಿ, ಮಹಾಕವಿ ಭವಭೂತಿಯು ಹೇಳುವಂತೆ, "ಅಪಿ ಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಂ" ಕಲ್ಲೂ ಅಳುತ್ತಿದೆ; ವಜ್ರವೂ ಒಡೆಯುತ್ತಿದೆ! ನಮ್ಮ ಸರಕಾರಕ್ಕೆ ಮಾತ್ರ ಆ ಕಷ್ಟ ನೋಡಿ ಅಳುವೂ ಬರುವದಿಲ್ಲ! ಹೃದಯಕ್ಕೆ ವ್ಯಥೆಯೂ ಆಗುವದಿಲ್ಲ!!

ಇಲ್ಲಿಯ ಚಿತ್ರಮಂದಿರದಲ್ಲಿ ಮಳೆಯಿಂದ ಕೆಸರು ಕೆಸರಾಗಿದೆ ಆದರೂ ಮಾಲಕರು ತಮ್ಮ ಪ್ರದರ್ಶನಗಳನ್ನು ನಿಲ್ಲಿಸುವದಿಲ್ಲ! ಜನರಿಗಾದರೂ ಬುದ್ಧಿಯುಂಟೇ! ಮಳೆಯ ಕಷ್ಟ ಗೊತ್ತಿದ್ದು ಅವರು ಚಿತ್ರ ನೋಡಲು ಹೋಗುತ್ತಾರೆ ಮತ್ತು ತಾವು ಕೆಸರಲ್ಲಿ ಕೂಡ್ರಬೇಕಾಯಿತೆಂದು ದೂರುತ್ತಾರೆ! ಚಿತ್ರದರ್ಶಕರಿಗೆ ದುಡ್ಡಿನ ದುರಾಶೆಯಾಗಿದ್ದರೆ ಜನರಿಗೆ ದುಡ್ಡು ಕೊಟ್ಟು ಕೆಸರು ಕೊಂಡುಕೊಳ್ಳುವ ಹುಚ್ಚು ಹಿಡಿದಿದೆ.

ಶಿರಾಲಿ— (ತಾ. ೩೧-೫-೪೬) ಇಲ್ಲಿಯ ಸೀಧಾ ಅಂಗಡಿಯಲ್ಲಿ ಬಹಳೇ ಅವ್ಯವಸ್ಥೆಯಾಗಿದೆ [illegible] ಯಾ ತಿಂಗಳಲ್ಲಿ ಅಂಗಡಿಯವರು ಸಕ್ಕರೆ ಮತ್ತು ಚಿಮಣಿ ಎಣ್ಣೆಯ ಬಟವಡೆ ಮಾಡುವದಿಲ್ಲ. ೧॥-೧॥। ತಿಂಗಳಿಗೊಮ್ಮೆ ಸಕ್ಕರೆ ಹಂಚುತ್ತಾರೆ! ಹೀಗೇಕೆ ಮಾಡುತ್ತೀರಿ ಎಂದು ಕೇಳಿದರೆ, "ಸಕ್ಕರೆಯೇ ಸಿಗಲಿಲ್ಲ- ನಾವೇನು ಮಾಡಬೇಕು?" ಎಂದು ಅರ್ಭಟಿಸುತ್ತಾರೆ! ಚಿಮಣಿ ಎಣ್ಣೆಯ ಗತಿಯೂ ಅದೇ. ೨ ತಿಂಗಳಿಗೊಮ್ಮೆ, ೨॥ ತಿಂಗಳಿಗೊಮ್ಮೆ ಸಿಗುತ್ತದೆ! ಸರಕಾರದವರು ಈ ಅಂಗಡಿಯನ್ನು ಬೇರೆಯವರಿಗಾದರೂ ಒಪ್ಪಿಸುವದೊಳಿತು.

ರೈತ ಸಂಘದ ರೈತರ ಕಾಟ ಈಗ ತುಸು ಕಡಿಮೆಯಾಗಿದೆ. ಆದರೂ ಪ್ರಮುಖರು ತಮ್ಮ ಧುಂದಿಯಲ್ಲೇ ಇದ್ದಾರೆ! ಗೇಣಿ ಕೊಡಬೇಡಿರಿ, ಒಡೆಯರನ್ನು ಬಿಟ್ಟಿಕ್ಕೆ ಹಿಡಿಸಿರಿ ಎಂದು ಮುಂತಾಗಿ ಅವರು ಹಳ್ಳಿ ಹಳ್ಳಿಯಲ್ಲಿ ಹಬ್ಬಿಸುತ್ತಾರೆ!

ಬೇಂಗ್ರೆಯವರೊರ್ವರು ಬರೆಯುತ್ತಾರೆ:—

"ಶಿರಾಲಿಯ ಪಟೇಲರೂ ಬೇಂಗ್ರೆ ಗ್ರಾಮಪಂಚಾಯತಿ ಸರಪಂಚರೂ ಒಬ್ಬರಾಗಿ, ಈ ಭಾಗದ ಬಡ ಜನರ ಸೀಧಾ-ಚೀಟಿಗಳನ್ನು, ಏನೇನೋ ಅವರಿಗೆ ಮರುಳು ಮಾತು ಹೇಳಿ, ತಮ್ಮ ಕಡೆಗೇ ಇಟ್ಟುಕೊಂಡಿದ್ದಾರೆ! ಮತ್ತು ಅವರ ಸಕ್ಕರೆ ಮತ್ತು ಎಣ್ಣೆ ತಾವೇ ಪಡೆಕೊಂಡು ಕಳ್ಳಪೇಟೆ ಮಾಡುತ್ತಿದ್ದಾರೆ! ಕಳ್ಳಪೇಟೆಯಲ್ಲಿ ಸಕ್ಕರೆ ಮಣ ೧ಕ್ಕೆ ರೂ. ೨೫ರಿಂದ ೩೫ರ ವರೆಗೂ ಎಣ್ಣೆ ಡಬ್ಬಿ ೧ಕ್ಕೆ ರೂ. ೧೦ರಿಂದ ೧೫ರ ವರೆಗೂ ದರವುಂಟಂತೆ. ತಮ್ಮ ಸೀಧಾ ಚೀಟಿ ತಮಗೇ ಕೊಡಿರೆಂದು ಜನರು ಆಗ್ರಹ ಮಾಡಿದರೂ ಪಟೇಲ-ಪಂಚರು ತಿರುಗಿ ಕೊಡುತ್ತಿಲ್ಲ! ಈ ಕುರಿತು ಮೇಲಾಧಿಕಾರಿಗಳ ಕಡೆ ಎಷ್ಟೋ ಜನರು ದೂರಿಕೊಂಡರೂ ಪ್ರಯೋಜನವಾಗಲಿಲ್ಲ. ಆದರಿಂದ ಪಟೇಲ-ಪಂಚರ ವ್ಯವಹಾರದಲ್ಲಿ ಅವರಿಗೂ ಕಮಿಷನ್ ಪಾಲು ಇರಬೇಕೆಂದು ಜನರು ಊಹಿಸತೊಡಗಿದ್ದಾರೆ. ಸತ್ಯ ಸಂಗತಿ ಸರ್ವಸಾಕ್ಷಿಯೇ ಬಲ್ಲನು!" ಇತ್ಯಾದಿ.

ಅಂಕೋಲಾ— (ತಾ. ೫-೬-೧೯೪೬) ಹೊಸ ತಾಲೂಕ ಮತ್ತು ಜಿಲ್ಲಾ ಕೊಂಗ್ರೆಸ ಸಮಿತಿಗಳ ಆಯ್ಕೆಗಳನ್ನು ಈ ತಿಂಗಳ ತಾ. ೨೫ರೊಳಗೆ, ಮುಗಿಸಬೇಕೆಂದೂ, ಆಮೇಲೆ ೨ ವಾರಗಳೊಳಗೆ ಹೊಸ ಜಿಲ್ಲಾ ಕೊಂಗ್ರೆಸ ಸಮಿತಿಯ ಸಭೆ ಕೂಡಿಸಬೇಕೆಂದೂ ಕಳೆದ ತಾ. ೧ನೇಗೆ ಹೊನ್ನಾವರದಲ್ಲಿ ಕೂಡಿದ ಜಿಲ್ಲಾ ಕೊಂಗ್ರೆಸ ಸಮಿತಿಯ ಕಾರ್ಯಕಾರಿ ಮಂಡಳದ ಸಭೆಯಲ್ಲಿ ನಿರ್ಣಯವಾಗಿದೆ. ಆಯಾ ತಾಲೂಕ-ಪೇಟೆಗಳೊಳಗಿನ ಚುನಾವಣೆಗಳನ್ನು ನಡೆಸಲು ಮಂಡಳವು ಈ ಕೆಳಗಿನ ಜನರಿಗೆ ನೇಮಿಸಿದೆ:- ಕಾರವಾರ ತಾಲೂಕ- ರಾ॥ ರಘುನಾಥ ಶೇಣ್ವಿ. ಅಂಕೋಲಾ ತಾ.- ರಾ॥ ಗಣಪತಿ ಮಾಧವ ಕಾಮತ. ಕುಮಟಾ ತಾ.- ರಾ॥ ಸದಾಶಿವ ಮಾಸೂರ, ಹೊನ್ನಾವರ ತಾ. ಮತ್ತು ಭಟಕಳ ಪೇಟಾ ರಾ॥ ಎಮ್. ಎನ್. [illegible] ಸಿದ್ದಾಪುರ ತಾ.- ರಾ॥ ಮಾಲವಳ್ಳಿ ರಾಮಚಂದ್ರ ಹೆಗಡೆ. ಶಿರ್ಸಿ ತಾ.- ರಾ॥ ಮೋಟಿನಸರ ತಿಮ್ಮಪ್ಪ ಹೆಗಡೆ. ಮುಂಡಗೋಡ ತಾ.- ರಾ॥ ಗಜಾನನ ನಾಡಿಗ. ಯಲ್ಲಾಪುರ ತಾ.- ರಾ॥ ಸೋಳಗಾರ ವೆಂಕಟರಮಣ ಹೆಗಡೆ. ಹಳಿಯಾಳ ತಾ.- ರಾ॥ ಶಂಕರ ಗಿರಿ, ಸೂಪಾ ಪೇ.- ರಾ॥ ಗುಂಡು ನಾಗೇಶ ಬಾಳ್ಕೆ. ಅಲ್ಲಲ್ಲಿಯ ಕೊಂಗ್ರೆಸ್ಸಿಗರು ಈ ಚುನಾವಣೆ ಅಧಿಕಾರಿಗಳೊಡನೆ ಸಹಕರಿಸಿ ಆಯ್ಕೆಗಳು ಯೋಗ್ಯ ರೀತಿಯಲ್ಲಿ ಆಗುವಂತೆ ನೆರವನ್ನೀಯಬೇಕಾಗಿ ಜಿ॥ ಕೊಂ॥ ಸಮಿತಿಯ ಉಪಾಧ್ಯಕ್ಷ ರಾ॥ ತಿ. ಶ್ರೀ. ನಾಯಕರು ಬಿನ್ನವಿಸುತ್ತಾರೆ

ಸಿದ್ದಾಪುರ— (೩೦-೫-೪೬) ಇಲ್ಲಿಯ ಅಬಕಾರಿ ಇನ್ಸಪೆಕ್ಟರ ರಾ॥ ನಾಡಕರ್ಣಿಯವರಿಗೆ ವರ್ಗವಾಗಿರುತ್ತದಾಗಿ ಸುದ್ದಿ. ಇವರ ಕಾರಕೀರ್ದಿಯಲ್ಲಿ ಸರಾಯಿಯ ಪ್ರಚಾರ ಈ ತಾಲೂಕಿನಲ್ಲಿ ಬಹಳವಾಗಿತ್ತು.

ಕಳೆದ ವಾರ ಮುಸೋರಿನಿಂದ ಒಂದು ಗಾಡಿ ಭ (೮ ಚೀಲ) ಗುಂಜಗೋಡಿಗೆ ಸಾಗುತ್ತಿದ್ದಾಗ ಅದನ

ಪ್ರಕಟನೆ.

ಸರಕಾರದವರು ೧೯೪೬-೪೭ನೇ ಸಾಲಿನ ಬಗ್ಗೆ ಧಾರವಾಡ ಜಿಲ್ಲೆಯಿಂದ ನಮ್ಮ ಜಿಲ್ಲೆಗೆ ೧೪೮೧ ಟನ್ ಹತ್ತಿಕಾಳನ್ನು ಕೊಡಿಸುವ ವ್ಯವಸ್ಥೆ ಮಾಡಿರುತ್ತಾರೆ; ಮತ್ತು ಇದರ ಅರ್ಧದಷ್ಟು ಕಾಳನ್ನು ಈಗ ತರಿಸಿಕೊಳ್ಳಬೇಕೆಂದು ತಿಳಿಸಿರುತ್ತಾರೆ ನಾವು ೪೫೦ ಟನ ಹತ್ತಿಕಾಳು ಈಗಾಗಲೇ ತರಿಸಿದ್ದು ಅದರ ಮಾರಾಟ ಈಗ ನಡೆದಿದೆ ಉಳಿದ ಕಾಳನ್ನು ಕೂಡ ಅದಷ್ಟು ಬೇಗ ತರಿಸುವ ವ್ಯವಸ್ಥೆ ಮಾಡಲಾಗುವದು. ಸದರಿ ಕಾಳಿನ ಕಿರಕೂಳ ಮಾರಾಟದ ಕೆಲಸವನ್ನು ಈಗಿನಂತೆ ಸೀಧಾ ಕ್ಷೇತ್ರಗಳಲ್ಲಿ ಅಧಿಕೃತ ಕಿರಕೂಳ ವ್ಯಾಪಾರಿಗಳಿಗೂ (A. R. D.s) ಸೀಧಾ-ಕ್ಷೇತ್ರವಲ್ಲದ ಸ್ಥಳಗಳಲ್ಲಿ ಯೋಗ್ಯ ದರದ ಅಂಗಡಿಯವರಿಗೂ (R. D. C.s) ಒಪ್ಪಿಸಲಾಗುವದು. ಇನ್ನು ಮುಂದೆ ಪ್ರತಿಯೊಂದು ಆಕಳಿಗೆ ಒಂದು ದಿವಸಕ್ಕೆ ೧ ರತ್ತಲಿನಂತೆ ಮತ್ತು ಪ್ರತಿಯೊಂದು ಎಮ್ಮೆಗೆ ೧॥ ರತ್ತಲಿನಂತೆ (ಹಿಂಡುವ ದನಗಳಿಗಷ್ಟೇ) ಹತ್ತಿಕಾಳು ಹಂಚಲ್ಪಡುವದು

ಹತ್ತಿಕಾಳಿನ ಪುರವಠಿ ಕಡಿಮೆಯಿರುವದರಿಂದಲೂ ಈಗ ಮಂಜೂರಾದ ರೇಶನಿಗಿಂತ ಹೆಚ್ಚಿಗೆ ಕಾಳು ಬೇರೆ ಕಡೆಯಿಂದ ತರಿಸಲು ಸಾಧ್ಯವಿಲ್ಲದ್ದರಿಂದಲೂ ಯಾವತ್ತೂ ಜನರು ಈಗ ಸಿಗುವ ಕಾಳನ್ನು ಅದಷ್ಟು ಮಿತವ್ಯಯದಿಂದ ಉಪಯೋಗಿಸಬೇಕಾಗಿ ವಿನಂತಿಯಿದೆ.

ಕಾರವಾರ,
ತಾ. ೫-೬-೧೯೪೬ }

V. NANJAPPA,
COLLECTOR of KANARA.

ಹಿಡಿದು ಇಲ್ಲಿ ತಂದಿದ್ದಾರೆ. ಛತ್ರದ ಮಾಲಕರು ಅದನ್ನು ಬಿಡಿಸಿಕೊಂಡು ಹೋಗುವದಕ್ಕಾಗಿ ಅಧಿಕಾರಿಗಳ ಸುತ್ತ ತಿರುಗಾಡುತ್ತ ಪೇಚಾಡುತ್ತಿದ್ದಾರೆ !

ಊರಲ್ಲಿ ಚಿಕ್ಕ-ಪುಟ್ಟ ಕಳವುಗಳು ಹೆಚ್ಚಾಗಿವೆ. ಆದರೂ ಪೋಲೀಸರು ಎಚ್ಚರಿಕೆಪಡಲಿಲ್ಲ; ಆದರಿಂದ ಕಳ್ಳರು ಧೈರ್ಯಗೊಂಡು ಈಗ ದೊಡ್ಡ ಕಳವುಗಳನ್ನಾರಂಭಿಸಿದ್ದಾರೆ. ಮೊನ್ನೆ ಒಂದು ಕಡೆ ಕಳವಾಯಿತು. ಪೋಲೀಸರು ಸಂಶಯಿತನನ್ನು ದಸ್ತಗಿರಿ ಮಾಡಿ ತಂದಿದ್ದಾರೆ. ಆದರೂ ಅವರ ಕೈಯ್ಯಿಂದ ಆ ಕಳವಿನ ಪತ್ತೆ ಆದೀತೆಂದು ಅಪೇಕ್ಷೆ ಮಾಡುವದು ವ್ಯರ್ಥ !

ಇಲ್ಲಿಯ ಹತ್ತಿ-ಶಾಳಿನ ಪೋಲಿಸ ಪಹರೆಯ ಮೇಲೆ ೩-೪ ತಿಂಗಳ ಹಿಂದೆ, ಹತ್ತಿ ಶಾಳಿನ ಕಳ್ಳ ಸಂತೆ ಮಾಡಿದ ಬಗ್ಗೆ ಪ್ರಕರಣವಾಗಿತ್ತು. ಆದರೂ ಈಗ ಪುನಃ ಅವರಿಗೇ ಆ ಮಕ್ತೆ ಕೊಟ್ಟಿದ್ದಾರೆ. ಅಧಿಕಾರಿಗಳಿಗೆ ಅವರನ್ನು ಬಿಟ್ಟು ಬೇರೆ ಯಾರೂ ಈ ವ್ಯಾಪಾರ ಮಾಡಲು ಪಾತ್ರತೆಯುಳ್ಳವರು ಕಾಣಬರಲೊಲ್ಲರೇ ?

ಹಾವಿನಗುಂಡಿಯ ಸೀಧಾ-ಅಂಗಡಿಯಲ್ಲಿ ಇನ್ನೂ ಯಾವದೊಂದು ವ್ಯವಸ್ಥೆಯಾಗಿಲ್ಲೆಂದು ಪುನಃ ಆ ಸೀಮೆಯವರ ದೂರು ಬಂದಿದೆ. ಬಾಲಕರು ಇಷ್ಟ ಬಿದ್ದಾಗ ಅಂಗಡಿ ತೆರೆಯುತ್ತಾರೆ; ಬೇಕಾದಾಗ ಮುಚ್ಚುತ್ತಾರೆ. ಆದರಿಂದ ಬಹಳ ಸಾರೆ ಸೀಧಾ-ಜೀನಸು ತರೆಯಲು ಬಂದ ಜನರು, ಬಾಗಿಲು ಹಾಕಿದ ಗುಡಿಯೊಳಗಿನ ದೇವರಿಗೆ ಹೊರಗಿನಿಂದಲೇ ನಮಸ್ಕಾರ ಮಾಡಿ ಹೋಗುವಂತೆ, ಸೀಧಾ ಅಂಗಡಿಗೆ ವಂದನೆಗಳನ್ನರ್ಪಿಸಿ ಮನೆಗೆ ಹೋಗುವ ಪ್ರಸಂಗಗಳು ಬರುತ್ತವೆ !

(ತಾ. ೫-೬-೪೬) ಹಲಗೇರಿ ಗ್ರಾಮದ ಆನಂದ ವಾಚನಾಲಯಕ್ಕೆ ಪುಸ್ತಕಗಳ ಸಲುವಾಗಿ ಜಿಲ್ಲಾಧಿಪರು ರೂ. ೫೦ ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಬನವಾಸಿಯ ಮೂಲ ಶಿಕ್ಷಣ ಶಾಲೆಯಲ್ಲಿ ಶಿಕ್ಷಕರಾಗಿದ್ದ ರಾ॥ ಫರ್ನಾಂಡಿಸರಿಗೆ ವರ್ಗವಾದದ್ದು ಕೇಳಿ ಇಲ್ಲಿಯ ನಾಮಧಾರಿ ಸಮಾಜಕ್ಕೂ ಹಿಂದುಳಿದ ಇತರ ಜಾತಿಯವರಿಗೂ ಅಸಮಾಧಾನವಾಗಿದೆ. ಫರ್ನಾಂಡಿಸರು ಇಲ್ಲಿಯ ಎಷ್ಟೋ ಮುದುಕರಿಗೆ ಪ್ರೋತ್ಸಾಹ ಕೊಟ್ಟು ಆ ಶಾಲೆಗೆ ಒಯ್ದು ಕಲಿಸುತ್ತಿದ್ದರಂತೆ.

ಹೇರೂರ ಸರಕಾರಿ ಉಗ್ರಾಣದಲ್ಲಿ ಕೆಲ ಕಾಲದ ಹಿಂದೆ ೨೫ ದಿನ ಕೆಲಸ ಮಾಡಿದ ಸಣ್ಣ ಎಂಬ ಶಿಪಾಯಿಗೆ ಇನ್ನೂ ಸಂಬಳ ಕೊಟ್ಟಿಲ್ಲವಂತೆ ! ಅದೇಕೆ ?

ಬಾಳೂರ ರಸ್ತೆ ಬಹಳ ಕೆಟ್ಟಿದೆ. ಲೋಕಲ್ ಬೋರ್ಡಿನವರು ಅದನ್ನು ದುರುಸ್ತಗೊಳಿಸುವ ವ್ಯವಸ್ಥೆ ಮಾಡಬೇಕು.

ಶಿರಸಿ— (ತಾ. ೬-೬-೪೬) ಮುಸ್ಲಿಮ ಸೀಧಾ-ಅಂಗಡಿಯ ಕಾರಕೂನ ಶಂಕರರಾವ ಈತನು ಸೀಧಾ ಒಯ್ಯಲು ಬಂದ ಜನರಿಗೆ — ವಿಶೇಷವಾಗಿ ಹೆಂಗಸರಿಗೆ — ಬಹಳ ದಣಿಸುತ್ತಾನಂತೆ. ಜೀನಸು ಒಯ್ಯಲು ಬಂದವರಿಗೆ ಸಂಜೆ ಬಾ, ನಾಳೆ ಬಾ, ಈಗ ಕೊಡಲಾರೆ ಎಂದು ಗದರಿಸುತ್ತಾನಂತೆ. ಜನರನ್ನು ಸೀಧಾ ಅಂಗಡಿಯಲ್ಲಿ ಕುಳ್ಳಿರಿಸಿ ತಾನು ಚಹಾ ಅಂಗಡಿಗೆ ಹೋಗಿ ತಾಸುಗಟ್ಟಲೆ ಕಾಲ ಅಲ್ಲೇ ಕಳೆಯುತ್ತಾನಂತೆ. ಅಂಗಡಿಯಲ್ಲಿ ಗೋದಿ ಇದ್ದರೂ ಕೊಡುವದಿಲ್ಲವಂತೆ. ಅಂಗಡಿಯ ಚಾಲಕರು ಆತನಿಗೆ ಬುದ್ಧಿ ಕಲಿಸಬೇಕು; ಅವನು ಕಲಿಯದಿದ್ದರೆ ಹೊಸ ಕಾರಕೂನನನ್ನಾದರೂ ನೇಮಿಸಿಕೊಳ್ಳಬೇಕು.

(ತಾ. ೪-೬-೪೬) ಶಿರಸಿ ತಾಲೂಕ ಹೊಸಳ್ಳಿಯಲ್ಲಿ ರಾ॥ ನಾರಾಯಣ ಮಾಣಿಂದ ಪೈ ಎಂಬವರದೊಂದು ಚಹಾ ಅಂಗಡಿಯುಂಟು. ಬಂಡಲ ಗ್ರಾಮದ ಜೋಡಿ ಶಾನಭೋಗರು ಜಮಾಬಂದಿಗಾಗಿ ಆ ಗ್ರಾಮಕ್ಕೆ ಹೋಗಿದ್ದರು; ಮತ್ತು ೨-೩ ದಿನ ಅಲ್ಲಿದ್ದರು. ಆಗ ಅವರ ಚಹಾ-ತಿಂಡಿಯ ನಿರ್ವಾಹವೆಲ್ಲ ಮೇಲಿನ ಅಂಗಡಿಯಲ್ಲಾಯಿತು. ಶಾನಭೋಗರು ತಮ್ಮ ಕೆಲಸ ಮುಗಿಸಿ ಮರಳುತ್ತಿರುವಾಗ ಅಂಗಡಿಯವನು ಅವರ ಬಿಲ್ಲು ಅವರ ಕೈಯ್ಯಲ್ಲಿಟ್ಟು ಹಣ ಕೇಳಿದನಂತೆ. ಶಾನಭೋಗರು ಅದನ್ನು ನೋಡಿ ಬೆಚ್ಚಿಬಿದ್ದರಂತೆ ! ಮತ್ತು "೧೦ ತಿಂಗಳ ವರೆಗೆ ನೀವು ನಮಗೆ ಚಹಾ-ತಿಂಡಿ ಪುಕ್ಕಟೆ ಪೂರೈಸಬೇಕು ! ಹೀಗಿರುವಾಗ ಈ ೩ ದಿನಗಳ ಬಿಲು ನೀವು ಕೊಡುವದು ಹೇಗೆ ?" ಎಂದು ಉದ್ಗರಿಸಿದರಂತೆ. ಹೀಗೆ ತಾನು ಪುಕ್ಕಟೆ ಚಹಾ-ತಿಂಡಿ ಪೂರೈಸಲಾರೆನೆಂದು ಅಂಗಡಿಕಾರರು ಮಾರುತ್ತರ ಕೊಡುತ್ತಲೆ "ಹಾಗಾದರೆ ನಿಮಗೆ ಸಕ್ಕರೆ ಸಿಗಲಾರದು; ನಿಮ್ಮ ಸಕ್ಕರೆ ಪರವಾನಾ ರದ್ದುಗೊಳಿಸುತ್ತೇನೆ !" ಎಂದು ಆ ಶಾನಭೋಗರು ಬೆದರಿಸಿಬಿಟ್ಟರಂತೆ ! ಈ ಶಾನಭೋಗರು ಒಬ್ಬರೇ ಅಪವಾದವೆಂದು ಓದುಗರು ತಿಳಿಯಕೂಡದು. ನಿಯಂತ್ರಣ-ಪದ್ಧತಿಯಲ್ಲಿ ಬಹುತೇಕ ಶಾನಭೋಗ-ಪಟೇಲರು ಈ ಶಾನಭೋಗರಂತೆಯೇ ವರ್ತಿಸುತ್ತಾರೆ.

ಮುಂಡಗೋಡ— (ತಾ. ೬-೬-೪೬) ಕ್ಯಾಸನಕೇರಿಯ ಶಾನಭೋಗರು ಓರ್ವ ರೈತನಿಂದ ರೂ. ೪ (ಮುದ್ರಣದೋಷದಿಂದ ರೂ. ೮ ಆಗಿದೆ) ಕೇಳಿದ ಬಗ್ಗೆ ದು ವಸೂಲ ಮಾಡಿ ಪಾವತಿ ಕೊಟ್ಟಿಲ್ಲ ಪಾವತಿ ಮೇಲಿಂದ ಬರುವದಾಗಿ ಹೇಳುತ್ತಾರೆ ಎಂದು ಮುಂತಾಗಿ ತಾ. ೨೦-೫-೪೬ರ "ವೃತ್ತ"ದಲ್ಲಿ ಪ್ರಕಟವಾಗಿ ತಮ್ಮ ಹೆಸರು ಬಯಲಿಗೆ ಬಂದಂದಿನಿಂದ ಕ್ಯಾಸನಕೇರಿ ಶಾನಭೋಗರಿಗೆ ನಿದ್ದೆಯಿಲ್ಲ, ವಿಶ್ರಾಂತಿಯಿಲ್ಲ. "ವೃತ್ತ"ದಲ್ಲಿ ಬಂದದ್ದೆಲ್ಲ ಸುಳ್ಳೆಂದು ರೂ. ೪ ವಸೂಲ ಕೊಟ್ಟ ಸಜ್ಜನರನ್ನು ಸುಂಕದವ್ವ ಹತ್ತರ ಊರ ಕಡೆಯಿಂದ ಒಂದು ಲೇಖ ಬರಸಿಕೊಳ್ಳಲು ಅವರು ಹೆಣಗಾಡುತ್ತಿದ್ದಾರೆ; ಕಾಗದ ಕೊಡಿಸುತ್ತೇನೆ, ಹೊಲ ತೆಗಿಸಿ ಕೊಡುತ್ತೇನೆ ಎಂದು ವಗೈರೆ ಆಮಿಷ ತೋರಿಸಿ ಆ ರೈತನಿಗೆ ಮರುಳು ಮಾಡಿ ಅವನ ಸಹಿ ಪಡೆಯುವ ಪ್ರಯತ್ನದಲ್ಲಿದ್ದಾರೆ ! ಇದೆಲ್ಲ ಕಾಂಗ್ರೆಸ್ಸಿಗರು ರಚಿಸಿದ ಕಲ್ಪಿತ ಕಥೆ ಎಂದು ಹೇಳಿ [illegible] ವಿಚಾರದಲ್ಲಿ ಶಾನಭೋಗರು ಅದ್ವಿತೀಯರೇ ಅಹುದು. ಆದರೆ ಕಾಂಗ್ರೆಸ್ಸಿಗರನ್ನು ಬೈದು ಇಲ್ಲದ ಅವರ ಮೇಲೆ ದೋಷಾರೋಪಣೆ ಮಾಡಿ ಪಾಪ ಮುಚ್ಚಿಕೊಳ್ಳುವ ಕಾಲ ಈಗ ಉಳಿದಿಲ್ಲೆಂದು ಅವರು ಚೆನ್ನಾಗಿ ಅರಿತಿರಲಿ !

ಕಾರವಾರ— (ತಾ. ೨೭-೫-೧೯೪೬) ತಾ. ೨೦-೫-೪೬ರ "ವೃತ್ತ"ದಲ್ಲಿ ಹಳಗೆಯೊಳಗಿನ ಯೋಗ್ಯ ಧಾನ್ಯ ಅಂಗಡಿಯ ಸಂಬಂಧದಲ್ಲಿ ಬಂದ ಟೀಕೆ ನಿರಾಧಾರವಿರುತ್ತದಾಗಿಯೂ, ಈ ಅಂಗಡಿ ಇದೇ ಕಳೆದ ತಾ. ೧-೫-೪೬ರಿಂದ ತಮ್ಮ ವಶಕ್ಕೆ ಬಂದಿರುತ್ತದೆಂತಲೂ, ತಮ್ಮ ಕೈಯೊಳಗಿಂದ ಅನ್ಯಾಯ ನಡೆದು ಹೋಗದಂತೆ ನೋಡುವದರಿಂದಲೂ ಹೊಟ್ಟೆಕಿಚ್ಚಿನಿಂದಲೂ ಹಿಂದಣ ಚಾಲಕರೋ ಕಲ್ಪಿತ ದೂರುಗಳನ್ನು ರಚಿಸಿ "ವೃತ್ತ"ಕ್ಕೆ ಕಳಿಸಿಕೊಟ್ಟಿರಬೇಕೆಂದೂ ಜಿ॥ ಬೋ॥ ಮೆಂಬರ ಸದಸ್ಯ ರಾ॥ ಶಿವರಾಮ ಗಾಯತೊಂಡೆಯವರು ಬರೆಯುತ್ತಾರೆ.

ಹಳಗೆಯ ಜವಳಿ ಅಂಗಡಿಯವರು ತಮಗೆ ಸಿಕ್ಕ ನಿಯಂತ್ರಿತ ಜಿನಸಿಯನ್ನು ಊರವರಿಗೆ ಹಾರಟಳ್ಳ ಕೊಡದೆ ಕಳ್ಳತನದಿಂದ ಗೋವೆಗೆ ರಫ್ತು ಮಾಡುತ್ತಾರಂತೆ. ಊರ ಜನರು ಧೋತರ ಯಾ ಶರ್ಟಿನ ಕೊಡಿರೆಂದು ಬೇಡಿದರೆ "ನನಗೆ ಸಿಕ್ಕಿಲ್ಲ", ಇಲ್ಲವೆ "ತೀರ್ಪು ಇಲ್ಲ" ಎಂದು ತಟ್ಟನೆ ಉತ್ತರ ಕೊಡುತ್ತಾರೆ ! ಅಂಗಡಿಯ ಬಾಗಿಲವನ್ನು ಸಹ ಅವರು ಪೂರ್ಣ ತೆರೆಯುವದಿಲ್ಲ ! ಇವರ ಜವಳಿ ಪಡೆಯಬೇಕಾದರೆ ಗಕ್ಕೆ ೪ ಪಟ್ಟು ಬೆಲೆ ಕೊಡಬೇಕಾಗುತ್ತದೆ ! ಎಂದು ಮುಂತಾಗಿ ಹಳಗೆಯವರೊಬ್ಬರು ದೂರುತ್ತಾರೆ. ಅಧಿಕಾರಿಗಳು ಸಖ್ತ ರೀತಿಯಿಂದ ಚೌಕಸಿ ಮಾಡಿ ಅಂಗಡಿಯವರ ಕಳ್ಳಾಟಿಕೆ ನಿಲ್ಲಿಸಬೇಕಾಗಿ ಅರಿಕೆಯಿದೆ.

ಕೇಳಿದ್ದು, ಕಂಡದ್ದು.

(ಜಿಲ್ಲಾ ಸಂಚಾರಿಯು ಬರೆದುದು)

ಲಂಚಗೋಳತನ ಅಧಿಕಾರಿ ವರ್ಗದಲ್ಲಷ್ಟೇ ಉಂಟೆಂದು ತಿಳಿಯುವದು ತಪ್ಪು. ಕೆಲವು ಕಾಂಗ್ರೆಸ್ಸಿಗರಲ್ಲಿಯೂ ಲಂಚಗೋಳತನ ಹಬ್ಬಿದ್ದು ಕಂಡು ಬರುತ್ತಿದೆ. ಸಿದ್ದಾಪುರ ತಾಲೂಕಿನಲ್ಲಿ ಹಿಂದೆ ಒಂದಾವರ್ತಿ ಸೆರೆಮನೆಗೆ ಹೋಗಿ ಬಂದ— ಕಾಂಗ್ರೆಸ್ಸಿಗರ ಕೈಯ್ಯಲ್ಲಿ ಇದೊಂದು ಹೊಸ ಪ್ರಶಸ್ತಿ ಪತ್ರ— ದೊಡ್ಡ "ಕಾಂಗ್ರೆಸ-ಭಕ್ತ"ರೋರ್ವರಿದ್ದಾರೆ. ತಮ್ಮ "ಕಾಂಗ್ರೆಸ-ಭಕ್ತಿ"ಯ ಬಲದಿಂದ ಅವರು ಲೋಕಲ್ ಬೋರ್ಡ ವಗೈರೆ ಪ್ರಾತಿನಿಧಿಕ ಸಂಸ್ಥೆಗಳ ಆಯ್ಕೆಗೆ ನಿಲ್ಲುತ್ತಾರೆ ! ಕಾಂಗ್ರೆಸ-ಭಕ್ತಿಯ ಪ್ರಶಸ್ತಿಪತ್ರ ತೋರಿಸಿ ಎಲ್ಲೆಲ್ಲೂ ದಿಗ್ವಿಜಯ ಸಾಧಿಸುತ್ತಾರೆ ! ೨ ತಿಂಗಳ ಹಿಂದೆ ಹೇರೂರದಲ್ಲಿ ಒಂದು ಯಕ್ಷಗಾನ ಮಂಡಳಿ ನೆರೆದಿತ್ತು. ಅಲ್ಲೊಂದು ನಾಟ್ಯ-ಗೃಹ (ಥಿಯೇಟರ) ಕಟ್ಟಿಸಿಕೊಂಡು ಮಂಡಳಿಯವರು ತಮ್ಮ ಆಟಗಳನ್ನು ಆಡುತ್ತಿದ್ದರು. ಆಟವಾಡಲು ಮಂಡಳಿಗೆ ಪರವಾನಿಗೆ ಸಿಗಬೇಕಾದರೆ ತಮಗೆ ೩೦ ರೂ. ಕೊಡಬೇಕೆಂದು ಈ "ಕಾಂಗ್ರೆಸ-ಭಕ್ತ"ರು ಹೇಳಿದ್ದರಂತೆ. ಮಂಡಳಿಯವರು ಇವರಿಗೆ ಹಣ ಕೊಡಲು ಒಪ್ಪಲಿಲ್ಲ. ತಾವೇ ಅಧಿಕಾರಿಗಳನ್ನು ಕಂಡು ಅವಶ್ಯವಾದ ಪರವಾನಗಿ ದೊರೆಸಿದರು. ಅದನ್ನು ಕಂಡು ಈ "ಕಾಂಗ್ರೆಸ-ಭಕ್ತ"ರ ತಲೆಯಲ್ಲಿ ಮೈಲಿ ಬೇನೆಯ ಪ್ರಾದುರ್ಭಾವವಾಯಿತು ! ಊರಲ್ಲಿ ನಡೆ-ನುಡಿಯಲ್ಲಿಯೂ ಮೈಲಿಯುಂಟು; ಆಟವಾಡಲು ಅಪ್ಪಣೆ ಕೊಡುವದು ಉಚಿತವಲ್ಲ, ಎಂದು ಮುಂತಾಗಿ ಕೋಲಾಹಲವನ್ನೆಬ್ಬಿಸಿಬಿಟ್ಟರು ! ಆದರೆ ಹೇರೂರ ಗ್ರಾಮದಲ್ಲಾಗಲಿ ಅದರ ಸುತ್ತುಮುತ್ತಲಿನ ಗ್ರಾಮಗಳಲ್ಲಾಗಲಿ ಕಳೆದ ಮಾರ್ಚ-ಏಪ್ರಿಲ್ ತಿಂಗಳಲ್ಲಿ ಮೈಲಿ ಬಂದ ದಾಖಲೆಗಳು ಎಲ್ಲಿಯೂ ಕಂಡುಬರುವದಿಲ್ಲ. ಮೇ ತಿಂಗಳಲ್ಲಿ ಹೇರೂರ ಜಾತ್ರೆಯಾಯಿತು. ಜಾತ್ರೆಯಿಂದ ಕೊಡಚೇ ಗಡಗಡೆ ವಗೈರೆ ಜೂಗಾರಾಟಗಳನ್ನು ಹಚ್ಚಿ ಮಂದಿಯ ಹಣ ಸುಲಿಯುವ ಸುಲಿಗೆಗಾರರು ಅಲ್ಲಿ ಎಲ್ಲರಿಗಿಂತ ಮೊದಲು ಬರುತ್ತಾರೆ. ಈ ಸುಲಿಗೆಗಾರರಿಗೆ ಊರ-ಪ್ರವೇಶವು ಬಂದಿ ಬೇಕಾಗುತ್ತದೆ. ಹೇರೂರ ಜಾತ್ರೆಗೆ ಬಂದ ಗಡಗಡೆ ಆಟದವರಿಂದ ರೂ. ೨೫ ಎತ್ತುವಳಿ ಮಾಡಿ — ಕಾಂಗ್ರೆಸ್ಸಿಗೆ ಕಾಣಿಕೆಯೆಂದು ಆ ಹಣ ತಕ್ಕೊಂಡರೋ ದೇವರಿಗೆ ಸಲ್ಲತಕ್ಕ ಕಾಣಿಕೆಯೆಂದು ತಕ್ಕೊಂಡರೋ ತಿಳಿಯದು —! ಅವರಿಗೆ ಆಶ್ರಯ ಕೊಟ್ಟ ಮಹಾನುಭಾವರು ಇದೇ "ಕಾಂಗ್ರೆಸ-ಭಕ್ತ"ರು ! ಅವರ ಆಶ್ರಯವಿದ್ದುದರಿಂದಲೇ ಬಲ್ಲರೆ ಕಾಂಗ್ರೆಸ್ಸಿಗರಿಂದ ಆ ಗಡಗಡೆ ಮಂಡಳಿಗಳನ್ನು ಮುಚ್ಚಿಸಲಾಗಲಿಲ್ಲ. ಕಾಂಗ್ರೆಸ ಮಂತ್ರಿಮಂಡಳವು ತಮ್ಮ ಸ್ವಂತ ಗುಪ್ತ-ಚಾರರನ್ನು ನೇಮಿಸಿ ನಾಡಿನೊಳಗಿನ ಲಂಚಗೋಳತನವನ್ನೂ ಕಳ್ಳ-ಪೇಟೆಯನ್ನೂ ನಿರ್ಮೂಲಿಸಸಂಕಲ್ಪಿಸಿದ್ದೇನೆಂದು ಜಾಹೀರಪಡಿಸಿದಂದಿನಿಂದ ಈ ಮಹಾನುಭಾವರಿಗೆ ಹಣ ಎತ್ತುವಳಿ ಮಾಡಲು ಒಳ್ಳೇ ಅವಕಾಶ ಸಿಕ್ಕಿದೆ. 'ಲಂಚಗೋಳತನದ ಪತ್ತೆ ಹಚ್ಚಲು ನನ್ನ ನೇಮಣೂಕಿಯಾಗಿದೆ.' ಎಂದು ಹಳ್ಳಿಯ ಲಂಚಗೋಳ ಅಧಿಕಾರಿಗಳಿಗೂ ಕಳ್ಳ ವ್ಯಾಪಾರಿಗಳಿಗೂ ಅಂಜಿಸುವದರಿಂದ ಬೆದರಿ ಅವರಿಂದ ಈ ಕಾಂಗ್ರೆಸ-ಪ್ರಮುಖರು ಹಣ ಎತ್ತುವಳಿ ಮಾಡುತ್ತಿದ್ದಾರಂತೆ. ಈಗಾಗಲೇ ಅವರು ಈ ರೀತಿ ೨-೩ ಸಾವಿರ ರೂಪಾಯಿ ಸಂಪಾದಿಸಿದ ಸುದ್ದಿಯುಂಟು. ಇಂಥ ಕಾಂಗ್ರೆಸ-ಭಕ್ತರನ್ನು ಕಾಂಗ್ರೆಸ ಸಂಸ್ಥೆಯಲ್ಲಿಟ್ಟುಕೊಳ್ಳುವದು ಇಲ್ಲವೆ ಅವರಿಗೆ ಕಾಂಗ್ರೆಸ-ಪ್ರಮುಖರೆಂದು ಮೆರೆಯಗೊಡುವದು ಉಚಿತವೇನೆಂದು ಜಿಲ್ಲಾ ಪ್ರಮುಖರು ಆಲೋಚಿಸಬೇಕು.

∴

ಈಗ ಮಳೆ ಬೀಳಹತ್ತಿರುವದರಿಂದ ಛತ್ರಿ-ಕೊಡೆಗಳಿಗೆ ಬೇಡಿಕೆ ಹೆಚ್ಚು ಬಂದಿದೆ. ಕೊಡೆಗಳ ಬೇಡಿಕೆ ಹೆಚ್ಚು, ಪುರವಟಿ ಕಡಿಮೆ. ಆದರಿಂದ ವರ್ತಕರು ಕಳ್ಳ ಪೇಟೆಯನ್ನು ಆರಂಭಿಸಿದ್ದಾರೆ. ಮೊನ್ನೆ ಓರ್ವ ಹಳ್ಳಿ-ಗಿರಾಕಿಯು ರೂ. ೬॥ ಬೆಲೆಯದೊಂದು ಮತ್ತು ರೂ. ೭ ಬೆಲೆಯದೊಂದು ಹೀಗೆ ೨ ಕೊಡೆಗಳನ್ನು ಕೊಂಡನು. ಆ ಎರಡೂ ಕೊಡೆಗಳಿಗೆ ಅವನು ರೂ. ೧೬ ಕೊಟ್ಟನಂತೆ ! ಹೊನ್ನಾವರದಲ್ಲೂ ಓರ್ವ ಜವಳಿ ಅಂಗಡಿಕಾರನು ಕೊಡೆ ಬೇಡಿ ಬಂದ ಒಂದು ಗಿರಾಕಿಗೆ, ಯಾರೂ ಇಲ್ಲದ ಸಮಯದಲ್ಲಿ ಬಾ, ನಿನಗೆ ಕೊಡೆ ಸಿಗುವದೆಂದು ಹೇಳಿ, ಅಂತರಂಗದಿಂದ ೧೬ ರೂ.ಗೆ ಒಂದು ಕೊಡೆ ಕೊಟ್ಟನೆಂದು ಕೇಳಿದ್ದೇನೆ. ಅಂಗಡಿಕಾರರು ಹೀಗೆ ಜನರನ್ನು ಸುಲಿಯಲಾರಂಭಿಸಿದ್ದರಿಂದ ಹೊನ್ನಾವರ ಮಾಮಲೇದಾರರೂ ಸೀಧಾ-ಸಹಾಯಕರೂ ಕೊಡೆಗಳಿದ್ದ ಅಂಗಡಿಗಳಲ್ಲಿ ಸ್ವತಃ ನಿಂತು ನಿಯಂತ್ರಿತ ಬೆಲೆಗೆ ಮಂದಿಗೆ ಕೊಡೆಗಳನ್ನು ಕೊಡಿಸಿದರು. ಕುಮಟೆಯ ಸೀಧಾ-ಅಧಿಕಾರಿಗಳೂ ಕೂಡ ಹಾಗೆಯೇ ಮಾಡಬೇಕಾದ ಪ್ರಸಂಗ ಬಂದಿದೆ.

∴

ಮಳೆಗಾಲದಲ್ಲಿ ಸಾಮಾನ್ಯವಾಗಿ ಅಕ್ಕಿಯು ಉಬ್ಬುತ್ತಿರುವದರಿಂದ ಬೇಸಿಗೆಯಲ್ಲಿ ಅಳೆದಿಟ್ಟ ಚೀಲಗಳನ್ನಾಗಲಿ, ಮುಡಿಗಳನ್ನಾಗಲಿ ಮಳೆಗಾಲದಲ್ಲಿ ಅಳೆದರೆ ಚೀಲ ೧ಕ್ಕೆ ಸರಾಸರಿ ೧-೧॥ ಪಾಯಲಿಯಷ್ಟು ಹೆಚ್ಚಿಗೆ ಅಕ್ಕಿ ಹೊರಡುತ್ತದೆ. ಈ ಗುಟ್ಟು ಗೊತ್ತಿದ್ದ ಉಗ್ರಾಣದಾರರು ಬೇಸಿಗೆಯಲ್ಲಿ ಅಳೆದಿಟ್ಟ ಚೀಲಗಳನ್ನು ಮಳೆಗಾಲದಲ್ಲಿ ಅಂಗಡಿಕಾರರಿಗೆ ಕೊಡುವಾಗ ಇದ್ದಕ್ಕಿದ್ದಂತೆ ಕೊಡುವದಿಲ್ಲ. ಪುನಃ ಅಳೆದೇ ಕೊಡುತ್ತಾರೆ. ಹುಬೇಕಲ್ಲ ಉಗ್ರಾಣದವನು ಈಗ ಹೀಗೆಯೇ ಅಕ್ಕಿ ಅಳೆದು ಕೊಡುತ್ತಾನಂತೆ. ಅವನ ಅಳತೆಯಲ್ಲಿ ಹೆಚ್ಚಿಗೆ ಬಂದ ಅಕ್ಕಿಯನ್ನು ಅವನೇನು ಮಾಡುತ್ತಾನೆಂಬುದು ಗೊತ್ತಿಲ್ಲ. ಅದನ್ನು ಸರಕಾರಕ್ಕೆ ಜಮಾ ಮಾಡುತ್ತಾನೋ, ಮನೆಗೆ ಒಯ್ಯುತ್ತಾನೋ ಅಥವಾ ಉಗ್ರಾಣದ ಬಾಗಿಲಲ್ಲಿ ಹಾರಾಡುವ ಹಕ್ಕಿ-ಪಕ್ಕಿಗಳಿಗೆ ಹಾಕಿ ಧರ್ಮ ಮಾಡುತ್ತಾನೋ ದೇವರೇ ಬಲ್ಲ ! ಹೀಗೆ ಅಳತೆಯಲ್ಲಿ ಹೆಚ್ಚಿಗೆ ಬರುವ ಅಕ್ಕಿಯ ವ್ಯವಸ್ಥೆ ಏನಾಗುತ್ತದೆಂದು ಜಿಲ್ಲಾಧಿಪರ ಕಚೇರಿಯವರಿಂದಾದರೂ ಚೌಕಸಿ ಮಾಡಿದ್ದುಂಟೇ ?

∴

ಬೆಳಗಾಂವ ಜಿಲ್ಲೆಯಲ್ಲಿ ೧೯೪೨-೪೩ರ ಆಂದೋಲನದ ಕಾಲಕ್ಕೆ ಶೀಲವಂತರೆಂಬ ಹೆಸರಿನ ಡೆಪ್ಯುಟಿ ಪೋಲೀಸ ಇನ್ಸ್‌ಪೆಕ್ಟರರಿದ್ದರು. ಅವರು ಎಷ್ಟೋ ಜನರಿಗೆ ಕಾಂಗ್ರೆಸ್ಸಿನ ವಿನಾಶಕ ಚಟುವಟಿಕೆಗಳಲ್ಲಿ ಭಾಗ ತಕ್ಕೊಂಡ ಆರೋಪ ಹೊರಿಸಿ ಹೆದರಿಸುವ ಭೀತಿ ಹಾಕಿ, ಸಾವಿರಾರು ರೂಪಾಯಿ ಸಂಪಾದಿಸಿದ್ದರಂತೆ. ಆ ಬಗ್ಗೆ ಅವರ ವಿರುದ್ಧ ಪ್ರಕರಣ ನಡೆದು ಅವರಿಗೆ ಈಗ ಕೆಲಸದಿಂದ [illegible] ವರ್ತಮಾನವುಂಟು. ನಮ್ಮ ಜಿಲ್ಲೆಯ ಶೀಲವಂತರ ಪಾಳಿ ಎಂದು ಬರುತ್ತದೆಯೋ ನೋಡಬೇಕು.

∴

ಕೈಯ್ಯಿಂದ ಭತ್ತ ಕುಟ್ಟಿ ಅಕ್ಕಿ ತಯಾರಿಸುವವರಿಗೆ ಭತ್ತ ಕೊಡುವ ಸಂಬಂಧದಲ್ಲಿ ಅಧಿಕಾರಿಗಳು ಎಲ್ಲ ಕಡೆಯಲ್ಲಿಯೂ ಒಂದೇ ಕ್ರಮ ಇಲ್ಲವೆ ಧೋರಣ ಇಟ್ಟಿದ್ದು ಕಾಣುವದಿಲ್ಲ. ಅಂಕೋಲೆಯ ಮಾಮಲೇದಾರರು ಮೊದಲಿನಂತೆ ಭತ್ತ ಕೊಡಲು ಆರಂಭಿಸಿದ್ದಕ್ಕೆ ಜಿಲ್ಲಾಧಿಪರ ಕಚೇರಿಯವರು ತಡೆ

(೧ನೇ ಪುಟದ ಮೇಲೆ ಮುಂದುವರಿದಿದೆ.)

ಮೆಟ್ರಿಕ್ ಪರೀಕ್ಷೆಯ ಫಲಿತಾಂಶ.

ಕಳೆದ ಮಾರ್ಚ ತಿಂಗಳಲ್ಲಾದ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯ ಪರಿಣಾಮ ಕಳೆದ ಬುಧವಾರ ಮುಂಜಾನೆ ಪ್ರಕಟವಾಯಿತು. ಇದೇ ಇಲಾಖೆಯಿಂದ (ಸಿಂಧ ಪ್ರಾಂತ ಸಹಿತ) ೩೮೨೧೭ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು ಅವರಲ್ಲಿ ೧೮೭೩೬ ಮಂದಿ (ಅಂದರೆ ನೂರಕ್ಕೆ ೪೯ರಷ್ಟು) ತೇರ್ಗಡೆ ಹೊಂದಿದ್ದಾರೆ ಈ ಪರೀಕ್ಷೆಯಲ್ಲಿ ೧, ೩, ೪, ೫, ೮, ೯ನೇ ಸ್ಥಾನಗಳಿಗೆ ಏರಿದವರು ಪುಣೆ ನಗರ ಕೇಂದ್ರದಿಂದಲೂ, ೬ನೇಯವನು ಪುಣೆ-ಲಷ್ಕರ ಕೇಂದ್ರದಿಂದಲೂ, ೭ನೇಯವನು (ಇವನು ಕುಮಟೆಯವನು; ಅನಂತ ಅಣ್ಣಪ್ಪ ಶೆಟ್ಟಿ ಎಂದು ಅವನ ಹೆಸರು) ಧಾರವಾಡ ಕೇಂದ್ರದಿಂದಲೂ, ೧೦ನೇಯವನು ಸಾಂಗಲಿ ಕೇಂದ್ರದಿಂದಲೂ ಪರೀಕ್ಷೆಗೆ ಕೂತವರು ಹೀಗೆ ಮೊದಲಿನ ೧೦ ಸ್ಥಳಗಳಲ್ಲಿ ೯ ಸ್ಥಳಗಳನ್ನು ಮಹಾರಾಷ್ಟ್ರೀಯ ವಿದ್ಯಾರ್ಥಿಗಳು ಆಕ್ರಮಿಸಿದ್ದಾರೆ

ಕಾರವಾರ ಕೇಂದ್ರದಲ್ಲಿ ನಮ್ಮ ಜಿಲ್ಲೆಯ ೪೨೬ ಮತ್ತು ಗೋವಾ ವಗೈರೆ ಹೊರಗಣ ಭಾಗಗಳಿಂದ ೧೪ ಮಂದಿ ಕೂಡಿ ೪೪೦ ಮಂದಿ ಪರೀಕ್ಷೆಗೆ ಕುಳಿತಿದ್ದರು. ಅವರಲ್ಲಿ ೨೦೮ ಮಂದಿ (ಅಂದರೆ ನೂರಕ್ಕೆ ೪೭.೨ ರಷ್ಟು) ಯಶಸ್ವಿಯಾಗಿರುತ್ತಾರೆ

ನಮ್ಮ ಜಿಲ್ಲೆಯ ೧೦ ಹಾಯಸ್ಕೂಲುಗಳಿಂದ ಕಾರವಾರ ಕೇಂದ್ರದಲ್ಲಿ ೪೦೬ ಮತ್ತು ಇನ್ನಿತರ ಕೇಂದ್ರಗಳಲ್ಲಿ ೫೯ ಹೀಗೆ ಒಟ್ಟು ೪೬೫ ಮಂದಿ ಈ ಪರೀಕ್ಷೆಗೆ ಕುಳಿತಿದ್ದರು ಅವರಲ್ಲಿ ೨೨೨ ಮಂದಿ (ಅಂದರೆ ನೂರಕ್ಕೆ ೪೭.೬ ರಷ್ಟು) ಉತ್ತೀರ್ಣರಾಗಿದ್ದಾರೆ ಬೇರೆ ಬೇರೆ ಶಾಲೆಗಳ ಪರಿಣಾಮ ಈ ಕೆಳಗೆ ಕೊಟ್ಟಿದೆ:—

	ಹೈಸ್ಕೂಲ	ಪರೀಕ್ಷೆಗೆ ಕೂತವರು.	ಉತ್ತೀರ್ಣರು
೧	ಕಾರವಾರ ಸರಕಾರಿ	೭೭	೪೧
೨	ಹಿಂದು ಹಾಯಸ್ಕೂಲ	೯೬	೪೪
೩	ಮ್ಯಾಕೇಲ್ಸಕೊನ್ವೆಂಟ	೫	೩
೪	ಪ್ರೈವೇಟ (ಸದಾಶಿವಗಡ)	೩೬	೯
೫	ಎಡ್ವರ್ಡ ಹಾಯಸ್ಕೂಲ	೭೦	೨೮
೬	ಗಿಬ್ಬ ಹಾಯಸ್ಕೂಲ	೭೪	೪೩
೭	ಸೇಂಟ ಥೊಮಸ್	೩೨	೨೧
೮	ನ್ಯೂ ಇಂಗ್ಲಿಶ ಸ್ಕೂಲ	೧೯	೧೧
೯	ಇಸ್ಲಾಮಿಯಾ ಹಾಯಸ್ಕೂಲ (ಭಟಕಳ)	೧೨	೬
೧೦	ಶ್ರೀ ಮಾರಿಕಾಂಬಾ ಹೈಸ್ಕೂಲ	೪೪	೧೬

ಯಶಸ್ವಿಯಾದವರಲ್ಲಿ ಹಿಂದು ಹಾಯಸ್ಕೂಲಿನ ೧೨, ಗಿಬ್ಬ ಹಾಯಸ್ಕೂಲಿನ ೧೨, ಕಾರವಾರ ಹಾಯಸ್ಕೂಲಿನ ೬, ಮಾರಿಕಾಂಬಾ ಹಾಯಸ್ಕೂಲಿನ ೩, ಕೊನ್ವೆಂಟ, ಎಡವರ್ಡ, ಸೆಂಟ ಥೊಮಸ್, ನ್ಯೂ ಇಂಗ್ಲಿಶ ಮತ್ತು ಇಸ್ಲಾಮಿಯಾ ಹಾಯಸ್ಕೂಲುಗಳ ೨ ೨ ಹಾಗೂ ಸದಾಶಿವಗಡ ಹಾಯಸ್ಕೂಲಿನ ೧ ಹೀಗೆ ಒಟ್ಟು ೪೪ ವಿದ್ಯಾರ್ಥಿ-ವಿದ್ಯಾರ್ಥಿನಿಯರು ೧ನೆಯ ತರಗತಿಯ ಗುಣಗಳನ್ನು ಅಂದರೆ ೪೨೦ಕ್ಕಿಂತ ಹೆಚ್ಚಿಗೆ ಗುಣಗಳನ್ನು ಪಡೆದಿದ್ದಾರೆ. ಅವರಲ್ಲಿ ಈ ಕೆಳಗಿನವರು ಪ್ರಥಮ ೫ ಸ್ಥಾನಗಳನ್ನು ಪಡೆದಿರುವರು

೧.	ಕುಮಾರ	ಡಿ. ಕೆ. ಉಪ್ಪೋಣಿ (ಹಿಂದು)	೫೫೩
೨	,,	ಎಸ್ ಪಿ. ನಾಡಕರ್ಣಿ (,,)	೫೪೯
೩	,,	ವ್ಹಿ. ಜಿ. ಕಲಬಾಗ (ಸೇಂಟಥೊಮಾಸ)	೫೩೪
೪	,,	ವ್ಹಿ ಎಸ್. ನಾಯಕ (ಗಿಬ್ಬ)	೫೩೧
೫.	,,	ಜಿ ಎಸ್. ಬೋರ್ಕರ (ಹಿಂದು)	೫೨೬

“ವೃತ್ತ”ಕ್ಕೆ ಕೂಡ ತಂತಿಯಿಂದ ಈ ಜಿಲ್ಲೆಯವರ ಪರಿಣಾಮ ತರಿಸಿ ಬುಧವಾರ ಮುಂಜಾನೆಯೊಳಗೆ ವಿಶೇಷ ಸಂಚಿಕೆಯ ಮೂಲಕ ಅದನ್ನು ಪ್ರಕಟಿಸುವ ವ್ಯವಸ್ಥೆ ಮಾಡಿತ್ತು. ಆದರೆ ಮಂಗಳವಾರ ರಾತ್ರಿ ಕಾರವಾರ-ಬೆಳಗಾಂವ ನಡುವಿನ ತಂತಿ-ಸಂಬಂಧ ವ್ಯವಸ್ಥಿತವಿದ್ದಿಲ್ಲದ್ದರಿಂದ ಮಂಗಳವಾರ ಸಂಜೆಯ ಕಡೆಗೆ ಮುಂಬಯಿಯಿಂದ ಬಿಟ್ಟ ತಂತಿ ಬುಧವಾರ ಮಧ್ಯಾಹ್ನ ೧೨ರ ವರೆಗೂ ಇದು ಇಲ್ಲಿ ಬಂದು ಮುಟ್ಟಲಿಲ್ಲ. ಬಂದ ತಂತಿಯಲ್ಲಿ ಪುನಃ ಕಾರವಾರ ಕೇಂದ್ರದ ೩೪೬೧೦ ಮತ್ತು ೩೪೬೭೫ ರ ನಡುವಿನ ಆ ನಂಬರಗಳು ಹಾದಿಯಲ್ಲಿ ಎಲ್ಲೋ ತಪ್ಪಿಹೋದವು. ಬಂದ ನಂಬರಗಳಲ್ಲೂ ಕೆಲವೊಂದು ಅಂಕಿಗಳು ಸಂಶಯಾಸ್ಪದ ಸ್ವರೂಪದವಿದ್ದವು. ಆದರಿಂದ “ವೃತ್ತ”ದ ವಿಶೇಷ ಸಂಚಿಕೆಯಲ್ಲಿ ಹಿಂದು ಹಾಯಸ್ಕೂಲಿನ ಕು॥ ಜೀ. ಎಫ್ ಆರ್ ೩. ಸೊರಟೋನ್ಲಾ ಮತ್ತು ಹೊನ್ನಾವರದ ನ್ಯೂ ಇಂಗ್ಲಿಶ ಸ್ಕೂಲಿನ ಕು॥ ಆರ್. ಎಮ್. ಶಾನಭಾಗ ಇವರು ಯಶಸ್ವಿಯಾಗಿರುವರೆಂದು ತಪ್ಪಿ ಪ್ರಕಟವಾಗಿದೆ ಅವರು ಯಶಸ್ವಿಯಾಗಿಲ್ಲ ಅವರು ಉತ್ತೀರ್ಣರಾಗಿದ್ದಾರೆಂದು ಮೊದಲು ಪ್ರಕಟಿಸಿ, ಈಗ ಉತ್ತೀರ್ಣರಾಗಿಲ್ಲವೆಂದು ಹೇಳುವ ಕಠಿಣ ಪ್ರಸಂಗ “ವೃತ್ತ”ಕ್ಕೆ ಬಂದದ್ದು ದುರ್ದೈವ. ‘ವೃತ್ತ”ದ ವಿಶೇಷ ಸಂಚಿಕೆಯಲ್ಲಿ ಕೊಟ್ಟ ವಿದ್ಯಾರ್ಥಿಗಳ ವಿವರ (ಇದೇ ಮೇಲೆ ಹೇಳಿದ ಇಬ್ಬರನ್ನು ಬಿಟ್ಟು) ಈ ಕೆಳಗಿನ ವಿದ್ಯಾರ್ಥಿಗಳೂ ಕೂಡ ಯಶಸ್ವಿಯಾಗಿರುತ್ತಾರೆ:-

೧.	ಕು॥	ಎಸ್ ಏ ನಾಯ್ಕ,	(ಹಿಂದು ಸ್ಕೂಲ)
೨	,,	ವ್ಹಿ ಜಿ ನಾಯ್ಕ,	(,,)
೩	,,	ಎಸ್. ವ್ಹಿ. ನಾಯ್ಕ	(ಎಡ್ವರ್ಡ)
೪	,,	ಆರ್ ಎಸ್ ನಾಯ್ಕ	(ಗಿಬ್ಬ ಹ್ಯಾ.)
೫	,,	ಆರ್. ಎಸ್ ನಾಯ್ಕ	(,,)
೬.	,,	ಎನ್ ಎನ ನಾಯ್ಕ	(ಸೇಂಟ್‌ಥೊಮಸ್)
೭	,,	ಎಸ್ ಎನ್ ನಾಯ್ಕ	(,,)
೮.	,,	ಆರ್ ಡಿ ನಾಯ್ಕ	(ಮಾರಿಕಾಂಬಾ)
೯.	,,	ಎಮ್. ಆರ್. ಅಕ್ಕಿನಾಲ	(,,)

ಈ ಹುಡುಗರು ೨ ದಿನಗಳ ಮಟ್ಟಿಗಾದರೂ ಸಂಶಯ ಮತ್ತು ಚಿಂತೆಗೆ ಒಳಗಾದ ಪ್ರಸಂಗ ಬಂದ ಬಗ್ಗೆ “ವೃತ್ತ”ಕ್ಕೆ ಖೇದವೆನಿಸುತ್ತದೆ.

NEW STOCKS *of the following* have now arrived :—

SCHOOL BOOKS
LIBRARY BOOKS
DICTIONARIES
ATLASES, MAPS etc.

Address your orders and inquiries to:—
The New Supply Agency, Kumta.

No O A 3133

NOTIFICATION.

The Collector of Kanara will select about 15 candidates from the Advanced, Intermediate and Backward classes for clerical appointments for temporary posts in the Revenue Department, Kanara.

Applications should be submitted to the undersigned so as to reach him not later than the 1st July 1946.

2 The applicants should give the following particulars in the applications

1. Full name of the applicant 2 Place of residence. 3. Caste.
4 Age (with proofs such as copies of School or College certificates or certified copies from the Birth and Death register)
5 Educational qualifications 6 Relations, if any, in Government service. Applicants should also furnish certificates of good character (at least 2) *Originals will be called for at the time of interview.*

3 Applications should be sent by registered post if not presented in person

4. Applicants must have passed M A., B A., LL.B., B.Sc, B.E., or Matriculation or School Leaving Certificate Examination. Candidates with shorthand and typing qualifications, and those who have war service at their credit will be given preference

5 Applicants selected must be prepared to work as unpaid candidates in any of the Talukas or Mahals of the Kanara District till their turn for acting appointment in a temporary post arrives.

6 No candidate of an advanced class who is over 23 years of age and no candidate of an Intermediate or Backward class who is over 26 years of age shall be enlisted

7. Applicants will have to come for interview at their own expense if called

8 The applicants are hereby clearly given to understand that the successful candidates enlisted according to this notification are meant **for being appointed only in temporary posts** and they will have no claim in this department They will, however, be eligible for being enlisted as candidates for permanent clerical posts at the annual selection, provided they are otherwise eligible and found to be within the prescribed age limits at the time of such selection

9 Applications received after 1—7—1946 will not be considered.

10. Candidates who have appeared for the Matriculation Examination this year, should submit their applications after the results are declared.

11 Any attempt on the part of the candidate to bring influence will disqualify him

Karwar, }
4—6—1946 }

V. NANJAPPA.
Collector of Kanara.

WANTED IMMEDIATELY TEACHERS

For the Chendia Group Education Society's Popular New English School, Chendia (Karwar Taluka), **two smart and energetic teachers** (at least Matriculates) Those knowing Hindi, having S T C. Certificates and previous experience will be preferred. **Apply immediately** to the undersigned, stating the minimum salary and terms expected Those called for interview will bear their own expenses. Chendia is a healthy place situated on the Karwar-Ankola Motor road, six miles from Karwar

Chendia, } *Raghupati Shenvi*, *Secretary.* *Mahabaleshwar J Habbu, Chendia*, *Chairman*,
25-5-46 } The Chendia Group Education Society.

THE BANK OF RURAL INDIA, LTD.

[Incorporated in British India under the Indian Companies Act, 1913]

HEAD OFFICE.— **“Satyabhama Bhavan”, KARWAR.**

Offices at:— **KARWAR, KUMTA, SIRSI, HONAVAR & YELLAPUR**

Authorised Capital .. **Rs. 10,00,000;**
Subscribed Capital .. **Rs. 5,00,000;**
Paid-up Capital .. **Rs. 2,60,000.**

Rates of Interest on Deposits:

Current a/c. @ 1% p. a ***Savings Bank a/c @ 2½%.***

Fixed Deposits for 3 months @ 3% per annum.
,, ,, for 6 months @ 3½% ,,
,, ,, for 12 months or more @ 4% ,,

All Kinds of modern Banking business transacted.

Karwar, }
15-3-1946. }

P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿಯ ತಮ್ಮ “ಸ್ಟಾರ ಆಫ್ ಕೆನರಾ ಪ್ರೆಸ್ಸ”ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು.
ವರ್ಗಣಿಯು ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 17th June, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೫೦.

ಕುಮಟಾ:- ಸೋಮವಾರ, ತಾ. ೧೭ ಮಾಹೆ ಜೂನ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಮಾಲ್ ಪೈಕಾ ೧೦ ಏಮ್ ಅಗಲದ
೧ ಸಾಲಿಗೆ ೩ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ನಿಶ್ಚಯಿಸಲಾದೀತು.

ಹಿಂದೀ ರಾಜಕಾರಣ.

(ನಿರೀಕ್ಷಕನು ಬರೆದುದು.)

ಬ್ರಿಟಿಶ ತ್ರಿಮಂತ್ರಿಗಳು ಈಹೊತ್ತು ಸ್ವದೇಶಕ್ಕೆ ಹೋಗುವವರಿದ್ದರು. ಆದರೆ ಹಿಂದೀ ರಾಜಕಾರಣದ ಮಟ್ಟು ಯಾವದೊಂದು ನಿಶ್ಚಿತ ರೂಪಕ್ಕೆ ತರಲಾಗದ್ದರಿಂದ ಅವರು ತಮ್ಮ ಪ್ರಯಾಣ ಮುಂದೂಡಬೇಕಾಗಿದೆ. ಸಂಕ್ರಮಣ ಕಾಲದ ಸರಕಾರವನ್ನು ಬೇರೆ ಬೇರೆ ಪಕ್ಷಗಳ ಸರ್ವಾನುಮತಿಯಿಂದ ಸಂಘಟಿಸಬೇಕೆಂದು ಅವರ ಸಂಕಲ್ಪವಾಗಿತ್ತು. ಆದರೆ ಆ ಸಂಕಲ್ಪ ಈಡೇರಲಿಲ್ಲ. ಕೊಂಗ್ರೆಸ ಕಾರ್ಯಕಾರಿ ಮಂಡಲದವರು ತ್ರಿಮಂತ್ರಿಗಳ ಸಕಲ ಸೂಚನೆ, ಉಪಸೂಚನೆ, ಪ್ರತಿಸೂಚನೆಗಳನ್ನು ಕಳೆದ ವಾರ ಕೂಲಂಕಷವಾಗಿ ಸಮಾಲೋಚಿಸಿದರು. ರಾಷ್ಟ್ರಪತಿ ಆಝಾದರೂ ಪಂ|| ಜವಾಹರಲಾಲ ನೆಹರು, ಸರದಾರ ವಲ್ಲಭಭಾಯಿ ಪಟೇಲ, ಮಹಾತ್ಮಾ ಗಾಂಧಿ ಮೊದಲಾದವರೂ ಸರ್ವಾಧಿಪತಿಗಳೊಡನೆ ಪುನಃ ಪುನಃ ಆಲೋಚಿಸಿದರು. ರಾಷ್ಟ್ರೀಯ ಸಭೆಯ ರಾಷ್ಟ್ರೀಯ ಭೂಮಿಕೆಗೆ ನ್ಯೂನತೆಯಾಗದಂತೆ ಸಂಕ್ರಮಣ ಕಾಲೀನ ಸರಕಾರವನ್ನು ರಚಿಸಲು ವಿಶ್ವ ಪ್ರಯತ್ನ ನಡೆಯಿತು. ಸರ್ವಾಧಿಪತಿಗಳು ಜಾರ್ಜ ಭೂಪಾಲರಂತೆ ಮಂತ್ರಿಮಂಡಲಕ್ಕೆ ಅಧೀನವಾಗಿ ನಡೆಕೊಳ್ಳಲು ಒಡಂಬಟ್ಟರಂತೆ. ಘಟನಾ-ಸಮಿತಿಯಲ್ಲಿ ಯುರೋಪಿಯನ್ನರಿಗೆ ಸ್ಥಳವಿಲ್ಲೆಂದು ಕೊಂಗ್ರೆಸ ಕಾರ್ಯಕಾರಿ ಮಂಡಲವು ಆಗ್ರಹದಿಂದ ಪ್ರತಿಪಾದಿಸಿತು; ಬಂಗಾಲ, ಆಸಾಮ, ಸಿಂಧ ಪ್ರಾಂತಗಳಲ್ಲಿ ಯುರೋಪಿಯನ್ನರು ಘಟನಾ ಸಮಿತಿಯನ್ನು ಸೇರಿದರೆ ಹಿಂದು-ಮುಸಲ್ಮಾನರೊಳಗಿನ ವೈಷಮ್ಯ ಮಿಗಿಲಾಗುವದೆಂದೂ, ಯುರೋಪಿಯನ್ನರು ಮುಸಲ್ಮಾನ ಪಕ್ಷಪಾತಿಯಾಗಿ ರಾಷ್ಟ್ರಹಿತಘಾತ ಮಾಡುವರೆಂದೂ ಮಂಡಳವು ಸರ್ವಾಧಿಪತಿಗಳಿಗೂ ತ್ರಿಮಂತ್ರಿಗಳಿಗೂ ಮನಗಾಣಿಸಿಕೊಟ್ಟಿತು. ಆದರಿಂದ ಯುರೋಪಿಯನ್ನರು ಆ ಸಮಿತಿಯಲ್ಲಿ ಸೇರಕೂಡದೆಂದು ಈಗ ನಿರ್ಣಯವಾಗಿದೆ. ತಾವು ಸೇರುವದಿಲ್ಲೆಂದು ಯುರೋಪಿಯನ್ನರೂ ಸಾರಿದ್ದಾರೆ. ಆದರೂ ಪೂರ್ಣ ಬಿಕ್ಕಟ್ಟು ಬಗೆಹರಿಯಲಿಲ್ಲ. ಸಂಕ್ರಮಣಕಾಲೀನ ಸರಕಾರದಲ್ಲಿ ರಾಷ್ಟ್ರೀಯ ಸಭೆಯವರಿಗೆ ಕೊಟ್ಟಷ್ಟು ಸ್ಥಳಗಳನ್ನು ಮುಸ್ಲಿಮ್ ಲೀಗಿಗೂ ಕೊಡಬೇಕಾಗಿ ಬ್ಯಾ|| ಜಿನ್ನಾರ ಹಟವುಂಟು. ತೋರಗಾಣಿಕೆಗೆ ಬ್ಯಾ|| ಜಿನ್ನಾರವರು ಮುಂದಾಗಿದ್ದರೂ ನಿಜವಾಗಿ ಬ್ರಿಟಿಶರ ಸಾಮ್ರಾಜ್ಯನೀತಿಯೇ ಮುಸ್ಲಿಮ್ ಲೀಗನ್ನು ಮುಂದೆ ಮಾಡಿ ಹಿಂದುಸ್ಥಾನ ಜನಾಂಗವನ್ನು ದುರ್ಬಲಗೊಳಿಸಲೆತ್ನಿಸುತ್ತಿದೆ! ರಾಷ್ಟ್ರೀಯ ಸಭೆಗೆ ನಾಡಿನೊಳಗೆ ಪುರಸ್ಕಾರವಿಲ್ಲೆಂದು ದೇಶ ವಿದೇಶಗಳಲ್ಲಿ ತೋರಿಸಲೋಸುಗ ಬ್ರಿಟಿಶರು ಲೀಗಿನೊಡನೆ ಮುದ್ದಾಡುತ್ತಿದ್ದಾರೆ! ಕೊಂಗ್ರೆಸ ಕಾರ್ಯಕಾರಿ ಮಂಡಲದವರು ಲೀಗಿನೊಡನೆ ಸಮಾನಸ್ಕಂಧರಾಗಲು ಒಡಂಬಡಲಿಲ್ಲ. ಲೋಕಸಂಖ್ಯೆಯ ಮಾನದಿಂದ ಮುಸಲ್ಮಾನರಿಗೆ ೪ ಸ್ಥಳಗಳಷ್ಟೇ ಸಲ್ಲುತ್ತವೆ. ಅದಕ್ಕೂ ಹೆಚ್ಚಿಗೆ ಸ್ಥಳಗಳನ್ನು ಪಡೆಯಲು ಮುಸಲ್ಮಾನ ಸಮಾಜಕ್ಕೆ ಹಕ್ಕಿಲ್ಲ. ಅದರಂತೆ ಕೊಂಗ್ರೆಸ ಕಾರ್ಯಕಾರಿ ಮಂಡಲದವರು ಮುಸ್ಲಿಮ ಲೀಗಿನ ಸಮ-ಪ್ರಾತಿನಿಧ್ಯದ ಬೇಡಿಕೆಯನ್ನು ನಿರಾಕರಿಸಿದರು. ಆಗ ಸರ್ವಾಧಿಪತಿಗಳು ಮಹಾತ್ಮರನ್ನು ಕರೆದೊಯ್ದು ಬ್ಯಾ|| ಜಿನ್ನಾರ ಹಟ ಪೂರೈಸಲು ಆಗ್ರಹದ ವಿನಂತಿ ಮಾಡಿಕೊಂಡರೆಂದೂ, ಮಹಾತ್ಮರು ಅದನ್ನು ನಿಗ್ರಹದಿಂದ ನಿರಾಕರಿಸಿದರೆಂದೂ ಪ್ರಕಟವಾಗಿದೆ. ಲೀಗಿನ ಬೇಡಿಕೆ ನ್ಯಾಯ್ಯವಾಗಿದ್ದರೆ ಅದನ್ನು ಮನ್ನಿಸಲು ತಾವು ಕೊಂಗ್ರೆಸ ಕಾರ್ಯಕಾರಿ ಮಂಡಲಕ್ಕೆ ಸಲಹೆ ಕೊಡುತ್ತಿದ್ದೆವೆಂದೂ ದೊರೆಗಳ ಆಗ್ರಹ ಅನುಚಿತವೆಂದೂ ಮಹಾತ್ಮರು ಸ್ಪಷ್ಟ ನುಡಿದರಾಗಿಯೂ ವರದಿಯಾಗಿದೆ. ಪಂಜಾಬದೊಳಗೆ ಶೀಖ ಸಮಾಜದಲ್ಲಿ ದೊಡ್ಡ ಆಂದೋಲನವೆದ್ದಿದೆ. ಹಿಂದುಸ್ಥಾನದೊಳಗೆ ಹಿಂದುಗಳು ಬಹುಸಂಖ್ಯಾಕರಿದ್ದುದರಿಂದ ಮುಸಲ್ಮಾನರಿಗೆ ಹಿಂದುಗಳ ಮೇಲೆ ಅಪನಂಬಿಗೆಯಾಗುತ್ತಿದ್ದರೆ ಪಂಜಾಬದೊಳಗೆ ಮುಸಲ್ಮಾನರ ಪ್ರಾಬಲ್ಯವಿರುವದರಿಂದ ಅವರ ಮೇಲೆ ತಮಗೆ ನಂಬಿಗೆಯಿಲ್ಲೆಂದು ಶೀಖರ ಅಂಬೋಣವುಂಟು. ತ್ರಿಮಂತ್ರಿಗಳ ತ್ರಿಖಂಡ ಯೋಜನೆಯಲ್ಲಿ ಮುಸಲ್ಮಾನರು ಬಹುಸಂಖ್ಯಾಕರಿದ್ದ ಪ್ರದೇಶಗಳೊಳಗಿನ ಮುಸಲ್ಮಾನೇತರರಿಗೆ ಸಂರಕ್ಷಣೆಯಿಲ್ಲ! ಆದರಿಂದ ಶೀಖ ಸಮಾಜಕ್ಕೆ ಸಂರಕ್ಷಣ ಕೊಡದಿದ್ದರೆ ತ್ರಿಖಂಡ ಯೋಜನೆಯನ್ನು ರದ್ದುಪಡಿಸಿಕೊಳ್ಳುವದಕ್ಕಾಗಿ ಪ್ರಾಣದ ಪರಿವೆಯಿಡದೆ ಹೋರಾಡಲು ಶೀಖ ಸಮಾಜವು ನಿರ್ಧರಿಸಿದೆ. ಈಬಗ್ಗೆ ೭ ಲಕ್ಷ ಸ್ವಯಂಸೇವಕರನ್ನು ಅವರು ತಯಾರಿಸುವ ನಿರ್ಧಾರ ಮಾಡಿದ್ದಾರೆ. ಸರದಾರ ಪಟೇಲರು ಶೀಖ ಸಮಾಜದ ಪ್ರಮುಖರನ್ನು ಕರೆಯಿಸಿಕೊಂಡು ಅವರೊಡನೆ ಮೊನ್ನೆ ಆಲೋಚನೆ ಮಾಡಿದರು. ಮಹಾತ್ಮರೂ ಕೊಂಗ್ರೆಸ ಕಾರ್ಯಕಾರಿ ಮಂಡಲದವರೂ ಶೀಖ ಸಮಾಜದ ಅಂಬೋಣವನ್ನು ಕೇಳಿಕೊಂಡರು. ಸರ್ವಾಧಿಪತಿಗಳು ಹೊಸ ಮಂತ್ರಿಮಂಡಲಕ್ಕೆ ಅಧೀನವಾಗಿ ನಡೆಯಲು ಒಡಂಬಟ್ಟಿರುವದರಿಂದ ಅವರು ತಮಗೆ ಯುಕ್ತ ಕಂಡಷ್ಟು ಜನರನ್ನು ಯುಕ್ತ ಕಂಡ ಪಕ್ಷಗಳಿಂದ ನೇಮಿಸಿಕೊಳ್ಳಬಹುದೆಂಬ ಹೊಸ ಸೂಚನೆಗೆ ಕೊಂಗ್ರೆಸ ಕಾರ್ಯಕಾರಿ ಮಂಡಲದ ಒಪ್ಪಿಗೆಯುಂಟು. ಈ ವಿಚಾರಸರಣಿ ಸರ್ ಸ್ಟೆಫರ್ಡ ಕ್ರಿಪ್ಸರವರಿಗೂ ಮಾನ್ಯವುಂಟು. ಆದರೂ ಬ್ಯಾ|| ಜಿನ್ನಾರವರು ಅದಕ್ಕೆ ಒಡಂಬಡುವದಿಲ್ಲ! ಇದರಿಂದ ತ್ರಿಮಂತ್ರಿಗಳ ಸಂಕಲ್ಪ ಸಫಲವಾಗಲಿಲ್ಲ. ಆದ್ದರಿಂದ ತ್ರಿಮಂತ್ರಿಗಳು ಕೊಂಗ್ರೆಸ-ಲೀಗಗಳ ಸಮ್ಮತಿಯ ಯತ್ನವನ್ನು ಅಷ್ಟಕ್ಕೇ ಬಿಟ್ಟುಕೊಟ್ಟು ನಿನ್ನೆ ರವಿವಾರ ಸಂಜೆ ತಮ್ಮ ಸ್ವಂತ ನಿರ್ಣಯವನ್ನು ಘೋಷಿಸುವರಿದ್ದರು. ಅದರೊಳಗೇನಿರುವದೆಂದು ನಾನಿಂದು ಹೇಳಲಾರೆ. ಎಲ್ಲ ಮಾತುಕಥೆಗಳು ಬಲು ಗೌಪ್ಯದಿಂದ ನಡೆಯುತ್ತಿವೆ. ರಾಷ್ಟ್ರೀಯ ಸಭೆಯವರನ್ನು ಸಮಾಧಾನಗೊಳಿಸುವದಕ್ಕಾಗಿ ತ್ರಿಮಂತ್ರಿಗಳೂ ಸರ್ವಾಧಿಪತಿಗಳೂ ತತ್ಪರರಿದ್ದಾರೆ; ಉತ್ಕಂಠರಿದ್ದಾರೆ. ಇರಾಣದೊಳಗಿನ ಗೊಂದಲದ ಮೂಲಕ ಹಿಂದುಸ್ಥಾನವನ್ನು ಸಂತೋಷಗೊಳಿಸುವ ಒತ್ತಾಯ ಅಧಿಕವಾಗಿದೆ. ತ್ರಿಮಂತ್ರಿಗಳ ನಿರ್ಣಯ ಈಹೊತ್ತಿನ ದಿನ-ಪತ್ರಿಕೆಗಳಲ್ಲಿ ಪ್ರಕಟವಾಗುವದು. ಓದುಗರು ಅದನ್ನು ನೋಡಿಕೊಳ್ಳಬಹುದು. ಆ ನಿರ್ಣಯದಿಂದ ಆಗುವ ಪರಿಣಾಮವನ್ನೂ ಪ್ರತಿಕ್ರಿಯೆಗಳನ್ನೂ ನಾನು ಮುಂದಿನ ವಾರ ವಿವರಿಸುವೆನು.

ಸ್ಥಾನಿಕ ವೃತ್ತಾಂತ.

ಕುಮಟೆ— ಮಳೆ ಬಹಳ. ದಿನಾಲು ಸರಾಸರಿ ೩||-೪ ಇಂಚು ಮಳೆಯಾಗುತ್ತಿದೆ. ಮ್ಯು||ಯವರು ಕಳೆದ ವರ್ಷ ಮಣ್ಣು ಹಾಕಿಸಿದ ಮಾರ್ಗಗಳ ಮೇಲೆ ರಾಡಿಯಾಗಿ ತಿರುಗಾಡಲು ಜನರಿಗೆ ಕಷ್ಟವಾಗುತ್ತಿದೆ. ಈ ವರೆಗೆ ೪೦ ಇಂಚಿಗೆ ಮಿಕ್ಕಿ ಮಳೆಯಾಗಿರಬೇಕೆಂದು ಅಂದಾಜು.

೧೯೪೦-೪೧ರಲ್ಲಿ ಗೋಕರ್ಣ, ಬಂಕಿಕೋಡ್ಲ, ಹೆಗಡೆ, ಕೋಡಕಣಿ, ಬಡ್ಗುಣಿ, ಕುಮಟಾ, ಕಲಭಾಗ ಮಗೈರೆ ಗ್ರಾಮಗಳ ಜನರಿಂದ ಸಾವಿರಗಟ್ಟಲೆ ರೂಪಾಯಿ ಪುಂಡಗಂಡಾಯ ವಸೂಲ ಆದದ್ದುಂಟು. ಅದನ್ನೆಲ್ಲ ಕೂಡಲೆ ತಿರುಗಿ ಕೊಡಬೇಕಾಗಿ ಮುಂಬಯಿ ಸರಕಾರದ ಅಪ್ಪಣೆಯಾಗಿದೆ. ಯಾವದೊಂದು ಗ್ರಾಮದವರು ತಾವು ಕೊಟ್ಟ ಪುಂಡಗಂಡಾಯದ ಹಣವನ್ನು ಯಾವದೊಂದು ಸಾರ್ವಜನಿಕ ಕಾರ್ಯಕ್ಕೆ ವಿನಿಯೋಗಿಸಬಹುದಾಗಿ ತಿಳಿಸಿದಲ್ಲಿ ಸರಕಾರದವರು ಅವರ ಹಣವನ್ನು ಆ ಕಾರ್ಯಕ್ಕೆ ಕೊಡಲಿಕ್ಕೂ ಸಿದ್ಧರಿದ್ದಾರೆ. ಹೆಗಡೆಯಲ್ಲಿ ಮೊನ್ನೆಯೇ ಒಂದು ಇಂಗ್ಲಿಷ ಶಾಲೆ ತೆರೆಯಲ್ಪಟ್ಟಿದೆ. ತಮ್ಮ ಊರ ಪುಂಡಗಂಡಾಯವನ್ನು

(೩ನೇ ಪುಟದ ಮೇಲೆ ಮುಂದರಿಸಿದೆ.)

The Agricultural & Industrial Bank, Ltd.
(Incorporated in British India, Liability of Members limited)
Head Office: "LAXMI NIVAS" Buildings, COONDAPOOR. S. I.
BRANCHES:- ANKOLA, BELGAUM, COONDAPOOR, DHARWAR, GOKARN, GADAG, HUBLI, HAVERI, KARWAR, KUMTA, MANGALORE, NAGAR, SHIMOGA, SOMWARPET, SIRSI, VIRAJPET &
BOMBAY OFFICE.
at 384, M. Jaipuria House, KALBADEVI.
A BANK FAMILIAR TO ALL, SERVING THE PEOPLE WITH 17 BRANCHES.
RECORD OF PROGRESS.

	1939 Rs.	1943 Rs.	1945 Rs.
PAID UP CAPITAL	46,060/-.	1,62,610/-.	4,07,662/-.
DEPOSITS	3,56,041/-	15,39,232/-	43,31,959/-
WORKING FUNDS	4,89,104/-	22,34,241/-.	62,52,284/-.

ALL KINDS OF MODERN BANKING BUSINESS TRANSACTED.
COONDAPOOR, 7th June, 1946.
K. Vittaldas Shenai,
Managing Director

ಕೇಳಿದ್ದು, ಕಂಡದ್ದು.

(ಜಿಲ್ಲಾ-ಸಂಚಾರಿಯು ಬರೆದುದು)

ಶುಕ್ರವಾರ ರಾತ್ರಿಯ ಖಗ್ರಾಸ ಚಂದ್ರಗ್ರಹಣವು ಈ ವರ್ಷ (ಗಂಡು ಮಕ್ಕಳ) ಮುಲ್ಕೀ ಪರೀಕ್ಷೆಗೆ ಕೂತ ವಿದ್ಯಾರ್ಥಿಗಳಿಗೆ ಬಹಳ ಬಾಧಿಸಿದಂತೆ ಕಾಣುತ್ತಿದೆ. ಶನಿವಾರ ಮುಂಜಾನೆ ಸದರ ಪರೀಕ್ಷೆಯ ಫಲಿತಾಂಶ ಪ್ರಕಟವಾಯಿತು. ಕುಮಟಾ ಕೇಂದ್ರದಲ್ಲಿ ಕನ್ನಡ ಮುಲ್ಕಿಗೆ ಕೂತ ೫೨೧ ವಿದ್ಯಾರ್ಥಿಗಳಲ್ಲಿ ೮೬ ವಿದ್ಯಾರ್ಥಿಗಳು ಅಂದರೆ (ನೂರಕ್ಕೆ [illegible] ೧೭ರಷ್ಟು !) ಉತ್ತೀರ್ಣರಾಗಿದ್ದರೆ ಉರ್ದು ಮುಲ್ಕಿಗೆ ಕೂತವರಲ್ಲಿ ಯಾರೊಬ್ಬರೂ ತೇರ್ಗಡೆ ಹೊಂದಿಲ್ಲ ! ಶಿರ್ಶಿಯ ಉಪ ಕೇಂದ್ರದ ಪರಿಣಾಮ ಇದಕ್ಕೂ ಹಾಳಾಗಿದೆ. ಕನ್ನಡ ಮುಲ್ಕಿಗೆ ಕೂತ ಸುಮಾರು ೧೪೦ರಲ್ಲಿ ೧೭ ವಿದ್ಯಾರ್ಥಿಗಳು ಅಂದರೆ (ನೂರಕ್ಕೆ ೧೨ರಷ್ಟು !) ಯಶಸ್ವಿಯಾಗಿದ್ದಾರೆ, ಉರ್ದು ಮುಲ್ಕಿಯಲ್ಲಿ ಒಬ್ಬನೇ ಉತ್ತೀರ್ಣನಾಗಿದ್ದಾನೆ ! ಈ ಸಲ ಪರೀಕ್ಷೆಗೆ ಕೂತ ವಿದ್ಯಾರ್ಥಿಗಳ ಕೊಲೆಯಾದದ್ದು ಕಂಡು ಎಲ್ಲರೂ ಚಕಿತರಾಗಿದ್ದಾರೆ. "ಇದ್ಯಾವ ಬಗೆಯ ಪರೀಕ್ಷೆ ಮಾಡಿದ್ದಾರಪ್ಪಾ ?" ಎಂದು ಪ್ರತಿಯೊಬ್ಬರೂ ಕೇಳುತ್ತಾರೆ. ಪರೀಕ್ಷೆಯ ಪರಿಣಾಮ ನೋಡಿದಂದ ನೂರಾರು ವಿದ್ಯಾರ್ಥಿಗಳು ಅಳುಮೋರೆಯಿಂದ ತಮ್ಮ ಮನೆಗೆ ಹೋಗುತ್ತಿರುವದನ್ನು ನೋಡಿ ನನ್ನ ಕರಳು ಕೂಡ ಕರಗಿತು.

⁂

ಮಾರ್ಚ ತಿಂಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಸಂಪು ಹೂಡಿದ್ದರಿಂದ ಮುಲ್ಕಿ ಪರೀಕ್ಷೆಯ ಪರಿಣಾಮ ಹೀಗೆ ಕೆಟ್ಟಿತೆಂದು ಕೆಲವರು ಹೇಳುತ್ತಾರೆ. ಆದರೆ ಈ ಮಾತಿನಲ್ಲಿ ಏನೂ ಹುರುಳಿಲ್ಲ. ಶಿಕ್ಷಕರ ಸಂಪಾದದ್ದು ಮಾರ್ಚ ತಿಂಗಳಲ್ಲಿ. ಮುಲ್ಕಿ ವಿದ್ಯಾರ್ಥಿಗಳ ಅಭ್ಯಾಸ ಆ ಮೊದಲೇ ಮುಗಿದು ಫೆಬ್ರುವರಿಯಲ್ಲಿ ಅವರ ಪ್ರಿಲಿಮಿನರಿ ಯಾನೆ ಪ್ರಯೋಗಿಕ ಪರೀಕ್ಷೆ ಕೂಡ ಮುಗಿದುಹೋಗಿತ್ತು. ಆದಕಾರಣ ಸಂಪಿನಿಂದ ಸದರ ವಿದ್ಯಾರ್ಥಿಗಳ ಅಭ್ಯಾಸಕ್ಕೆ ವ್ಯತ್ಯಯ ಒದಗಲು ಏನೂ ಕಾರಣವಿಲ್ಲ. ಒಂದು ವೇಳೆ ಸಂಪಿಗೆ ಸೇರಿದ ಶಿಕ್ಷಕರ ವಿದ್ಯಾರ್ಥಿಗಳ ಪರಿಣಾಮ ಮಾತ್ರ ಹಾಳಾಗಿ ಸಂಪಿಗೆ ಸೇರದಿದ್ದ ಶಿಕ್ಷಕರ ವಿದ್ಯಾರ್ಥಿಗಳ ಪರಿಣಾಮ ಒಳಿತಾಗುತ್ತಿದ್ದರೆ ಮೇಲಿನ ಮಾತಿನಲ್ಲಿ ತಥ್ಯಾಂಶವುಂಟೆಂದು ಹೇಳಬಹುದಾಗಿತ್ತು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಕುಮಟಾ ತಾಲೂಕ [illegible] ಶಾಲೆಯಲ್ಲಿ ಮುಲ್ಕಿ ವರ್ಗ ಕಲಿಸಿದ ಶಿಕ್ಷಕರು ಸಂಪಿನಲ್ಲಿ ಸೇರಿದ್ದರು, ಗುಡಗಾರ ಪೇಟೆ ಶಾಲೆಯಲ್ಲಿ ಮುಲ್ಕಿ ಕಲಿಸಿದ [illegible] ತೇಲಂಗರು ಸಂಪಿಗೆ ಸೇರಿದ್ದಿಲ್ಲ. ಆದರೆ ವಿದ್ಯಾರ್ಥಿಗಳ ಪರಿಣಾಮ ನೋಡಿರಿ: [illegible] ಶಾಲೆಯಿಂದ ಪರೀಕ್ಷೆಗೆ ಕೂತ ೪೮ ಮಂದಿಯಲ್ಲಿ ೬ ಮಂದಿ (೧೨ ೨%) ಉತ್ತೀರ್ಣರಾಗಿದ್ದರೆ ಗುಡಗಾರಗಲ್ಲಿ ಶಾಲೆಯ ೨೬ ಮಂದಿ ಹುಡುಗರಲ್ಲಿ ಬರೇ ಒಬ್ಬನು (೪%ಗೂ ಕಡಿಮೆ !) ತೇರ್ಗಡೆಯಾಗಿದ್ದಾನೆ !

⁂

ಪರೀಕ್ಷೆಯ ಪರಿಣಾಮ ಇಷ್ಟು ಕೆಡಲು ಕಾರಣಗಳೇನೆಂಬುದರ ಚೌಕಶಿಯಾಗುವದವಶ್ಯವುಂಟು. ನನ್ನ ಅಭಿಪ್ರಾಯ ಹೇಳುವದಾದರೆ ಇದಕ್ಕೆ ೨ ಕಾರಣಗಳಿವೆ (೧) ಮುಲ್ಕಿ ವರ್ಗಗಳನ್ನು ಕಲಿಸುವ ಶಿಕ್ಷಕರ ಅಪಾತ್ರತೆ ಮತ್ತು (೨) ಪರೀಕ್ಷೆಯ ಪ್ರಶ್ನಪತ್ರಿಕೆ ತಯಾರಿಸುವವರಲ್ಲೂ ಪರೀಕ್ಷಕರಲ್ಲೂ ತಮ್ಮ ಮುಂದಿನ ಪರೀಕ್ಷ್ಯಮಾಣ ವಿದ್ಯಾರ್ಥಿಗಳಿಂದ ಏನು ಅಪೇಕ್ಷಿಸಬಹುದೆಂಬುದರ ಅಜ್ಞಾನ. ಇನ್ನು ಮುಂದೆ ಎಲ್ಲ ಶಾಲೆಗಳಲ್ಲಿ ಮುಲ್ಕಿ ವರ್ಗಗಳ ಶಿಕ್ಷಣವನ್ನು, ಇವರು ಟ್ರೇಂಡ ಶಿಕ್ಷಕರು, ಇವರು ಹಿರಿಯ ಶಿಕ್ಷಕರು ಎಂಬ ಪೊಳ್ಳು ಸಾತ್ರಿಕೆಗಳನ್ನಷ್ಟೇ ನೋಡಿ ಅಂಥಾ ಶಿಕ್ಷಕರಿಗೆ ಒಪ್ಪಿಸದೆ ಶಿಕ್ಷಣದ ವಿಶಾಲ ಅನುಭವವುಳ್ಳ ಮತ್ತು ಕಲಿಸಬೇಕಾದ ವಿಷಯಗಳ ಪೂರ್ಣ ಜ್ಞಾನವುಳ್ಳ ಶಿಕ್ಷಕರಿಗೇ ಒಪ್ಪಿಸತಕ್ಕದ್ದೆಂದು ಅಧಿಕಾರಿಗಳು ನೇಮ ಮಾಡಬೇಕು. ಅದರಂತೆಯೇ ಮುಲ್ಕಿ ವರ್ಗದ ಚಿಕ್ಕ ಮಕ್ಕಳ ಪರೀಕ್ಷೆಯನ್ನು ಮಾಡುವ ಪ್ರಶ್ನಪತ್ರಿಕೆಗಳನ್ನು ತೆಗೆಯುವ, ಅವರ ಜ್ಞಾನಕ್ಕೂ ವಯಸ್ಸಿಗೂ ಒಪ್ಪುವಂತಹ ಪ್ರಶ್ನೆಗಳನ್ನೇ ಕೇಳಬೇಕು ಎಂಬ ಕಟ್ಟಳೆಯನ್ನೂ ಮಾಡಬೇಕು. ಈ ವರ್ಷದ ಕೆಲವು ಪ್ರಶ್ನ-ಪತ್ರಿಕೆಗಳೊಳಗಿನ ಹಲವಾರು ಪ್ರಶ್ನೆಗಳು ಮೆಟ್ರಿಕ್ ಪರೀಕ್ಷೆಯ ಪ್ರಶ್ನ-ಪತ್ರಿಕೆಗಳಲ್ಲಿ ಬರುವ ಪ್ರಶ್ನೆಗಳಿಗಿಂತಲೂ ವ್ಯಾಪಕ ಮತ್ತು ಗಹನವಿದ್ದವೆಂದು ಬಲ್ಲವರು ಹೇಳುತ್ತಾರೆ. ಮುಲ್ಕಿ ವರ್ಗದವರಿಂದ ಏನು ಅಪೇಕ್ಷಿಸಬೇಕೆಂಬುದರ ತಿಳುವಳಿಕೆ ಪರೀಕ್ಷಕರಿಗೆ ಇದ್ದಿದ್ದರೆ ಅವರೆಂದೂ ಇಂತಹ ಪ್ರಶ್ನೆಗಳನ್ನು ಕೇಳುತ್ತಿದ್ದಿಲ್ಲ! ವಿದ್ಯಾಧಿಕಾರಿಗಳು ಬೇಗನೇ ಈ ಪರೀಕ್ಷಾ ತಂತ್ರದ ಸಮಾಲೋಚನೆ ಮಾಡಿ ಹುಡುಗರ ಯೋಗ್ಯತೆಗೆ ತಕ್ಕ ಪರೀಕ್ಷೆಯನ್ನೇ ಮಾಡಿಸುವ ವ್ಯವಸ್ಥೆ ಮಾಡಬೇಕು.

⁂

ಬೇಸಿಗೆಯಲ್ಲಿ ನಮ್ಮ ಜಿಲ್ಲೆಯವರಿಗೆ ಹತ್ತಿಕಾಳು ಯಾಕೆ ಸಿಗಲಿಕ್ಕಿಲ್ಲೆಂಬುದನ್ನು ರಾ॥ ಹಳದೀಪುರ ವಾಸುದೇವರಾಯರು ಈಗ ತಿಳಿಸಿದ್ದಾರೆ. ನಮ್ಮ ಜಿಲ್ಲೆಯ ಜನರ ಹತ್ತಿಕಾಳನ್ನು ಪ್ರಾಂತಿಕ ಸರಕಾರದವರು ಸಮೀಪವಿರುವ ಧಾರವಾಡ ಜಿಲ್ಲೆಯಿಂದ ಕೊಡಿಸದೆ ಬೆಳಗಾಂವ ಜಿಲ್ಲೆಯಿಂದ ಕೊಡಿಸಿದರು. ಹೋದ ವರ್ಷ ಮಳೆಗಾಲದಲ್ಲಿ ಬೆಳಗಾಂವಿಯಿಂದ ಕೊಡಿಸಿದ ಹತ್ತಿಕಾಳು ನಮಗೆ ಎಷ್ಟು ತುಟ್ಟಿ ಬಿದ್ದಿತೆಂಬುದನ್ನು ನಾವು ಬಲ್ಲೆವು. ಈ ಸಾರೆ ಬೆಳಗಾಂವಿಯಿಂದ ಸಹ ಕೊಡಿಸದೆ ಅದಕ್ಕೂ ದೂರವಿರುವ ಅಥಣಿಯಿಂದ ಕೊಡಿಸಿದ್ದರು. ಆ ಹತ್ತಿಕಾಳು ತರಿಸಿದ್ದರೆ ವಾಹನ ವೆಚ್ಚವೇ ಅತಿಭಾರವಾಗಿ ಅದು ನಮ್ಮಲ್ಲಿ ಬೆಲೆ [illegible] ರೂಯಂತೆ ಬೀಳುತ್ತಿತ್ತಂತೆ, ಆದ್ದರಿಂದ ರಾ॥ ವಾಸುದೇವರಾಯರು ಮುಂಬಯಿಗೆ ಹೋಗಿ ಪ್ರಾಂತಿಕ ನಿಯಂತ್ರಣಾಧಿಕಾರಿಗಳಿಗೆ ಎಲ್ಲ ಅಡಚಣೆಗಳನ್ನು ತಿಳಿಸಿ ಧಾರವಾಡ ಜಿಲ್ಲೆಯಿಂದಲೇ ನಮ್ಮ ಜಿಲ್ಲೆಗೆ ಹತ್ತಿಕಾಳು ಕೊಡಿಸಬೇಕಾಗಿ ಬೇಡಿಕೊಂಡರು. ಅಧಿಕಾರಿಗಳೂ ಮೊದಲಿನ ಹುಕುಮಿನಿಂದಾಗುವ ಅನ್ಯಾಯವನ್ನು ಮನಗಂಡು ಈಗ ನಮ್ಮ ಪಾಲಿನ ಹತ್ತಿಕಾಳನ್ನು ಧಾರವಾಡ ಜಿಲ್ಲೆಯಿಂದ ಕೊಡಿಸಿದ್ದಾರೆ. ಇದರಿಂದ [illegible] ಬೆಲೆ [illegible] ಬಂದು ಬಟವಡೆಯಾಗಿದೆ. ಇದೀಗ [illegible] ಬೆಲೆ ಖಂಡಿಯಾಗಿದೆ. [illegible] ರಾರಗಳಲ್ಲಿ ಅದು ಒಂದು ಮುಟ್ಟುವದು. ಈ ಹೊಸ ಹತ್ತಿಕಾಳು ಮೊನ್ನೆ ಮಾರ್ಕೆಟ್ಟಿನ ಹತ್ತಿಕಾಳಿಗಿಂತ ಅಗ್ಗ [illegible] ವೆಂದು ರಾ॥ ಹಳದೀಪುರಕರರು ತಿಳಿಸುತ್ತಾರೆ. ಹಿಂಡಿಯ ದರಗಳ ಬಗ್ಗೆ: ಈ ಜೂನ-ಜುಲೈಯ ತಿಂಗಳಲ್ಲಿ ನಮ್ಮ ಜಿಲ್ಲೆಗೆ ೪೦ ಟನ್ನ ([illegible] ಬೆಲೆ) ಸೇಂಗದ ಹಿಂಡಿ ಪೂರೈಸಲ್ಪಡುವದಾಗಿ ಸರಕಾರದವರು ಪ್ರಕಟಿಸಿದ್ದಾರೆ. ಅದೂ ಒಂದು ತಲ್ಪಿದರೆ ದನಗಳ ಆಹಾರದ ಚಿಂತೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗುವದು.

⁂

ಶಿರ್ಶಿ ತಾಲೂಕಿನ ಪೂರ್ವ ಭಾಗದಲ್ಲಿ ಬೇಕಷ್ಟು ರಾಗಿಯುಂಟು. ದಾಸನಕೊಪ್ಪ ಮೊದಲಾದ ಹಳ್ಳಿಗಳಲ್ಲಿ ಈಗ ದನಗಳಿಗೆ ರಾಗಿಯನ್ನೇ ಹಾಕಿ ಆ ಹತ್ತಿಕಾಳಿನ ಕೊರತೆಯನ್ನು ನೀಗಿಸಿಕೊಳ್ಳುತ್ತಾರೆ. ಅಧಿಕಾರಿಗಳು ಆ ಜನರಿಗೆ ಹತ್ತಿಕಾಳನ್ನೂ ಹಿಂಡಿಯನ್ನೂ ಪೂರೈಸಿ ಅವರು ದನಗಳಿಗಾಗಿ ಉಪಯೋಗಿಸುವ ರಾಗಿಯನ್ನು [illegible] ತರಿಸುವ ವ್ಯವಸ್ಥೆ ಯಾಕೆ ಮಾಡಬಾರದು? ಕುಮಟೆಯಲ್ಲಿ ಸಾವಿರಾರು ಬಡಬಗ್ಗರು ರಾಗಿಗಾಗಿ ಬಾಯಿ ಬಿಡುತ್ತಿದ್ದಾರೆ !

⁂

ಕಳೆದ ಮಂಗಳವಾರ [illegible] ಬೆಳಗಾಂವ ಬದಿಯಿಂದ ಎ. ಪಿ. ಸಿ. ಕಂಪನಿಯ ೩ ಸರಕು ಹೊರುವ ಮೋಟಾರ ಬಂಡಿಗಳು ಸರಕಾರಿ ಗೋದಿಯನ್ನು ಹೇರಿಕೊಂಡು ಹಳಿಯಾಳದ ಮೂಲಕ ಕಾರವಾರಕ್ಕೆ ಬರುತ್ತಿದ್ದವು. ಎರಡೂ ಬಂಡಿಗಳಲ್ಲಿ ಬರೇ ಗೋದಿಯಲ್ಲದೆ ಬೇರೆ ಕೆಲವು ಸಾಮಾನೂ ಇತ್ತು! ಅದರಿಂದ ಎರಡೂ ಗಾಡಿಗಳೊಳಗಿನ ಒಂದರ ಕಾನೂನಿನಿಂದ ದರ್ಜ ಮಾಡಿಕೊಟ್ಟ ಪ್ರಮಾಣಕ್ಕಿಂತ ಹೆಚ್ಚಿಗೆಯಾಗಿತ್ತು. ಆದರೂ ಹಳಿಯಾಳ ನಾಕೆಯಲ್ಲಿ ಮೋಟಾರ ತಪಾಸಣಿಗಿದ್ದ ಪೋಲೀಸ ಪೇದೆಯು ತಪಾಸು ಮಾಡದೆ ಲಂಚ ತಕ್ಕೊಂಡು ಕಳಿಸಿಕೊಟ್ಟನು! ಅದನ್ನು ಕಂಡು ಜನರಿಗೆ ಆಶ್ಚರ್ಯವಾಯಿತು. "ಎಲೋ! ಹೀಗೆ ಮೋಟಾರ ಒಪ್ಪದ ಬೋಜ ಹಾಕಿ ಬಂದದ್ದು ಕಂಡೂ ಕಾಣದಂತೆ ಯಾಕೆ ಮಾಡುತ್ತೀ?" ಎಂದು ಅವರು ಅವನಿಗೆ ಪ್ರಶ್ನೆ ಮಾಡಿಬಿಟ್ಟರು. "ತಮ್ಮಗಳಾ, ನಾನು ನೋಡಿದ್ದೇನೆ. ಆದರೆ ಏನು ಮಾಡಲಿ? ಅವುಗಳಲ್ಲಿ ಸಾಹೇಬರ ಸಾಮಾನು ಇದೆ. ಗಾಡಿಗಳು ಒಪ್ಪದ ಬೋಜ ಹೇರಿವೆಯೆಂದು ನಾನು ಪ್ರಕರಣ ಮಾಡಿದರೆ ಆ ಸಾಹೇಬರು ಸಿಟ್ಟಿಗೆದ್ದು ನಮ್ಮ ಸಾಹೇಬರ ಕಡೆ ನನ್ನ ವಿರುದ್ಧ ಒಂದಿಲ್ಲೊಂದು ದೂರು ಹೇಳಬಿಟ್ಟಾರು, ಮತ್ತು ನನಗೆ ಕೆಲಸ ಬಿಟ್ಟು ಮನೆದಾರಿ ಹಿಡಿಯುವ ಪ್ರಸಂಗ ಬಂದೀತು! ಈ ನೌಕರಿ ಕಾಯ್ದುಕೊಳ್ಳಲು ನಾವು ಒಮ್ಮೊಮ್ಮೆ ಕುರುಡರೂ ಆಗಬೇಕಾಗುತ್ತದೆ! ಕಿವುಡರೂ ಆಗಬೇಕಾಗುತ್ತದೆ! ನಿಮಗಿಷ್ಟು ಹೇಗೆ ತಿಳಿಯಬೇಕು?" ಎಂದು ಆ ಪೇದೆಯು ಮಾರುತ್ತರ ಕೊಟ್ಟು ಜನರಿಗೆ ಸುಮ್ಮಗಿರಿಸಿದನು.

⁂

ಹಳಿಯಾಳ ತಾಲೂಕಿನ ಕಾಂಗ್ರೆಸ್ಸಿಗರೀಗ ನಾಲ್ಕೂ ಕಡೆಗೆ ಸರ್ಪಗಾವಲು ಇಟ್ಟು ಕಳ್ಳ ಸಾರಾಯಿಯ ಪರಿಪಾಟಕ್ಕೆ ವಿಘ್ನಗಳನ್ನುಂಟು ಮಾಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ [illegible] ಬದಿಯಿಂದ ನಾಲ್ವರು ಸಾರಾಯಿಯ ಗಡಿಗೆಗಳನ್ನು ಹೊತ್ತುಕೊಂಡು ಹಳಿಯಾಳಕ್ಕೆ ಬರುತ್ತಿದ್ದಾಗ ಕಾವಲಿಗಿದ್ದ ಜನರು ಹಾದಿಯಲ್ಲಿ ಗುಂಡು — ಕೋವಿ ಗುಂಡಲ್ಲ! ಕಲ್ಲುಗುಂಡು! — ಹಾರಿಸಿ ಆ ಗಡಿಗೆಗಳನ್ನು ಒಡೆದು ಬಿಟ್ಟರಂತೆ! ಕಳ್ಳ ಸಾರಾಯಿ ಹೊತ್ತ ಕಳ್ಳರನ್ನು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಲು ಸಾಧ್ಯವಿದ್ದಲ್ಲಿ ಸ್ವಯಂಸೇವಕರು ತಾವೇ ಹಿಡಿದು ಕಸ್ಟಮ್ಸನವರಿಗೆ ಒಪ್ಪಿಸುತ್ತಾರೆ. ಕಳೆದ ಗುರುವಾರ ಹಳಿಯಾಳ ಮ್ಯುನಿಸಿಪಾಲಿಟಿಯ ಸದಸ್ಯನೊಬ್ಬನು ಸೈಕಲ್ಲ ಗಾಡಿಗೆ ಕಟ್ಟಿಕೊಂಡು ೩ ಸರಾಯಿಯ ಬಾಟ್ಲಿಗಳನ್ನು ತರುತ್ತಿದ್ದಾಗ ಹವಗಿ (ಹಳಿಯಾಳದಿಂದ ೧॥ ಮೈಲು ಅಂತರದಲ್ಲಿದೆ) ಸಮೀಪ ಅವನನ್ನು ಇವರು ಹಿಡಿದು ಅಬಕಾರಿ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಕಾಂಗ್ರೆಸ್ಸಿಗರ ಈ [illegible]ಗಳ ಮೂಲಕ ಹಳಿಯಾಳ ಪಟ್ಟಣದೊಳಗಿನ ಮದ್ಯಪಾನಿಗಳಿಗೆ ಈಗ ಕಷ್ಟವಾಗಿದೆ. ಮದ್ಯದ ನೀರಡಿಕೆಯನ್ನು ಸಹಿಸಲಾಗದೆ ಅವರು ಇತ್ತೀಚೆ ಸ್ಪಿರಿಟ ಕುಡಿಯಲಾರಂಭಿಸಿದ್ದಾರೆಂದು ಕೇಳುತ್ತೇನೆ! ಹಳಿಯಾಳದೊಳಗಿನ ಸ್ಪಿರಿಟ ಅಂಗಡಿಗಳಲ್ಲಿ ಸ್ಪಿರಿಟಿನ ಮಾರಾಟ ಇತ್ತಲಾಗಿ ಹೆಚ್ಚಿದೆಯಂತೆ. ಅಧಿಕಾರಿಗಳು ಆ ಕಡೆ ಲಕ್ಷ ಕೊಡಬೇಕಾಗಿ ಅರಿಕೆಯುಂಟು.

⁂

ಹೊನ್ನಾವರ ತಾಲೂಕ ಆ[illegible]ಲಗೋಡದಲ್ಲಿ ಮೇ ತಾ ೨೧ಕ್ಕೆ ಜಾತ್ರೆಯಾಯಿತು. ಕೋಳಿ ಅಂಕಗಳ ಬಗ್ಗೆ ಈ ಜಾತ್ರೆ ಬಹಳ ಪ್ರಸಿದ್ಧಿಪಟ್ಟಿದೆ. ಹೋದ ವರ್ಷ ಹೊನ್ನಾವರದ ಪೋಲೀಸರು ಈ ಜಾತ್ರೆಯೊಳಗಿನ ಜೂಜಿಗೆ ಕಟ್ಟಿದ ಕೆಲವು ಕೋಳಿಗಳನ್ನು ಜಪ್ತ ಮಾಡಿ ತಂದಿದ್ದರಂತೆ. ಈ ವರ್ಷದ ಜೂಜುಗಾರರಿಗೆ ಪೋಲೀಸರ ಉಪಸರ್ಗವಾಗಲಿಲ್ಲ! ಜಾತ್ರೆಯ ದಿನ ಹೋದ ಪೋಲೀಸರು ಮುಂಜಪ್ಪನೆಂಬವನ ಮನೆಯಲ್ಲಿ ಹೊಟ್ಟೆ ತುಂಬ ನಾನಾ ತಿಂದು ತೇಗುತ್ತಲೂ ಗೊರಕೆ ಹೊಡೆಯುತ್ತಲೂ ಬಿದ್ದುಕೊಂಡರಂತೆ! ಪೋಲೀಸರು ಜೂಜಾಟ ನಿಲ್ಲಿಸಲು ಪ್ರಯತ್ನಿಸಲಿಲ್ಲ! ನೂರಾರು ರೂಪಾಯಿ ಪ್ರಾಪ್ತಿ ಮಾಡಿಕೊಡುವ ಜೂಜಾಟವನ್ನು ಅವರು ನಿಲ್ಲಿಸುವದು ಎಂದಾದರೂ ಶಕ್ಯವೇ? ಅಂತೂ ಈ ವರ್ಷ ಆ[illegible]ಲಗೋಡ ಜಾತ್ರೆಯಲ್ಲಿ ಕೋಳಿ ಅಂಕಗಳು ಒಂದು ವಾರದ ವರೆಗೆ ಯಥಾಸಾಂಗ ನಡೆದವು. ಕೊನೆಯ ದಿನ ಅಂದರೆ ತಾ ೨೮ನೇ ರಾತ್ರಿ ಮಾತ್ರ ಸ್ವಲ್ಪ ವಿನೋದವಾಯಿತು! ಅಂದು ದೊಡ್ಡ ಕೋಳಿ ಪಡೆಯಿತ್ತು — ೨ ನೂರು ಜನರು ಕೂಡಿದ್ದರು. ಜೂಜಾಟ ನಡೆದಾಗ ಜೂಜುಗಾರರೊಳಗೆ ಏನೋ ತಂಟೆಯುಂಟಾಗಿ ಅವರೊಳಗೆ ಕೈಯಾಯಿತೆಂದು ಸುದ್ದಿ. ಈ ಬಡಿದಾಟದಲ್ಲಿ ಮಾಳಕೋಡ ಗ್ರಾಮದ ಮೋಳೆ ನಾಯ್ಕ ಎಂಬಾತನಿಗೆ ಕಾಲಲ್ಲಿ ಕೋಳೀ-ಕತ್ತಿ ಮುರಿದು ಗಾಯವಾದ ವಾರ್ತೆಯೂ ಉಂಟು. ಈ ಬಡಿದಾಟ ನಡೆದಾಗ [illegible] ಬೆಟ್ಟದ ದೀಪ ಹೊತ್ತಿಸಿ ಸಿಳ್ಳು ಊದಿದನಂತೆ. ಅದನ್ನು ನೋಡಿ ಜನರಿಗೆ ಪೋಲೀಸರು ದಾಳಿ ಮಾಡ ಬಂದ ಭಾಸವಾಯಿತು! ಮತ್ತು ಅವರು ದಿಕ್ಕಾಪಾಲಾಗಿ ಓಡಲಾರಂಭಿಸಿದರು! ಈ ಗದ್ದಲದಲ್ಲಿ ಕೊಪ್ಪದ ದಶಿಂತ ಮುತ್ತೇಶ ಎಂಬ ಒಬ್ಬ ಕ್ರಿಶ್ಚನ್ನ ಮನುಷ್ಯನು ಗದ್ದೆ ಹಾಳಿಗೆ ಎಡವಿ ಬಿದ್ದನು! ಓಡುತ್ತಿದ್ದ ಜನರು ಅವನನ್ನು ತುಳಿಯುತ್ತಲೇ ಓಡಿದರು! ಆದ್ದರಿಂದ ದಶಿಂತನು ಅಲ್ಲೇ ಪ್ರಾಣಬಿಟ್ಟನು! ಈ ಬಗ್ಗೆ ಪಂಚನಾಮೆ ಮಾಡಿದರೆ ಎಲ್ಲವೂ ಹೊರಬೀಳುವದೆಂಬ ಅಂಜಿಕೆಯಿಂದಲೋ ಏನೋ ಪಟೇಲರು ಈ ಆಕಸ್ಮಿಕ ಮರಣದ ಬಗ್ಗೆ ಪಂಚನಾಮೆಯನ್ನು ಮಾಡಲಿಲ್ಲ! ವಂಶಸ್ತರಿಗೆ ವರದಿಯನ್ನೂ ಕೊಡಲಿಲ್ಲ! ಜೂಜುಗಾರರು ಸುದ್ದಿ-ಸಪ್ಪಳವಿಲ್ಲದೆ ದಶಿಂತನ ಶವವನ್ನು ದೋಣಿಯಲ್ಲಿ ಹಾಕಿ ಕೊಡ್ಲಿಗೆ ಒಯ್ದು ಕತ್ತಲೆಯಲ್ಲೇ ಅದರ ವಿಲೆ ಮಾಡಿಬಿಟ್ಟರಂತೆ. ಜನನ ಮರಣ ರಜಿಸ್ತರಗಳಲ್ಲಿ ದಶಿಂತನ ನಿಧನ ನಮೂದವಾಗಿಲ್ಲೆಂದು ಕೇಳುತ್ತೇನೆ. ದಶಿಂತನು ಸತ್ತಿದ್ದಾನೋ ಇಲ್ಲವೋ, ಸತ್ತಿದ್ದರೆ ಹ್ಯಾಗೆ ಸತ್ತನು, ಮತ್ತು ಎಲ್ಲಿ ಸತ್ತನು, ಎಂದು ಸತ್ತನು, ಅವನ ಉತ್ತರಕ್ರಿಯೆ ಎಲ್ಲಿ ನಡೆಯಿತು ಎಂಬುದರ ಚೌಕಶಿ ಮಾಡಿದರೆ ಅನೇಕರ ಪಾಪಕರ್ಮಗಳು ಬಯಲಿಗೆ ಬರುವಂತುಂಟು.

⁂

ಭಟಕಳದಿಂದ ಹೊನ್ನಾವರಕ್ಕೆ ಸಾಕ್ಷಿಗೆ ಬಂದರೆ ತಮಗೆ ನಾಲ್ಕಷ್ಟು ಭತ್ತೆ ಸಿಗುವದಿಲ್ಲೆಂದು ಕಚೇರಿಯಲ್ಲಿ ಸಾಕ್ಷಿಗೆ ಬಂದ ಜನರು ದೂರುತ್ತಾರೆ. ಸಾಕ್ಷಿಗೆ ಬಂದವರಿಗೆ ಕಚೇರಿಯವರು ಮೋಟಾರ ವೆಚ್ಚ ಮತ್ತು ಏನಿಲ್ಲ ೧೦ ಆಣೆಯಂತೆ ಕೊಟ್ಟು ಬಿಡುತ್ತಾರಂತೆ. ಹೊನ್ನಾವರದ ಖಾನಾವಳಿಗಳಲ್ಲಿ ಈಗ ಒಂದು ಊಟಕ್ಕೇ ೧೦ ಆಣೆ ತೆರಬೇಕಾಗುತ್ತದೆ. ಆದ್ದರಿಂದ ಹೊನ್ನಾವರದಲ್ಲಿ ರಾತ್ರಿಯ ಊಟಕ್ಕೆ ಉಳಿಯುವ ಪ್ರಸಂಗ ಬಂದರೆ ಆ ಊಟದ ವೆಚ್ಚವನ್ನು ಸಾಕ್ಷಿಗಾರರು ತಮ್ಮ ಕೈಯಿಂದ ತೆರಬೇಕು! ಈ ವಿನಾ [illegible] ಉಂಟು, ಚಹಾ-ಕಾಫಿ ಖರ್ಚುಂಟು! ಜಿಲ್ಲಾಧಿಪರು ಈ ಎಲ್ಲ ಪರಿಸ್ಥಿತಿಯನ್ನು ಆಲೋಚಿಸಿ ಸಾಕ್ಷಿ ಭತ್ತೆಯ ಪ್ರಮಾಣವನ್ನು ಹೊಸ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸಬೇಕಾಗಿ ಸೂಚನೆಯಿದೆ.

ದಿ ಕೊಮರ್ಶಿಯಲ್ ಕೊಪೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ ಮಿಶನ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತವೆ
ವಿ. ಎಮ್. ಮುರ್ಡೇಶ್ವರಕರ,
ಮೋಟರ ಸ್ಟೆಂಡ, ಕುಮಟಾ.

(ಸ್ಥಾನಿಕ ವೃತ್ತಾಂತ ೧ನೇ ಪುಟದಿಂದ ಮುಂದೆ)

ಸದರಿ ಶಾಲೆಗಾಗಿ ಉಪಯೋಗಿಸಿಕೊಳ್ಳಲು ಆ ಊರ ಪ್ರಮುಖರು ನಿರ್ಧರಿಸಿದ್ದಾರೆ ಕುಮಟೆಯಲ್ಲಿ ಸ್ಥಾಪಿಸಲಾಗುವ ಕಾಲೇಜ ನಿಧಿಗೆ ಈ ವರೆಗೆ ಬರೇ ೧। ಲಕ್ಷ ರೂಗಳಷ್ಟು (ವಾಗ್ದತ್ತ ರಕಮು ಸಹಿತ) ಕೂಡಿದೆ ಕಾಲೇಜು ಮೂರ್ತರೂಪ ತಾಳಬೇಕಾದರೆ ಇನ್ನೂ ೧ ಲಕ್ಷ ರೂ. ಬೇಕಂತೆ ಈ ತಾಲೂಕಿನಲ್ಲಿ ವಸೂಲಾದ ಅಂತು ಪುಂಡಗಂದಾಯ ೯೦ ಸಾವಿರ ರೂ ಗೆ ಮಿಕ್ಕುತ್ತಿದೆ. ಈ ಹಣವನ್ನು ಜನರು ಪರಸ್ಪರ ಕಾಲೇಜ ನಿಧಿಗೆ ಕೊಡಿಸಿದರೆ ಕಾಲೇಜು ಮುಂದಿನ ಮಳೆಗಾಲದಲ್ಲೇ ತೆರೆಯಲನುಕೂಲವಾದೀತು ಕಾಲೇಜಿನ ಆವಶ್ಯಕತೆ ಎಷ್ಟುಂಟು ಮತ್ತು ಅದು ತೆರೆಯಲ್ಪಟ್ಟರೆ ನಮ್ಮ ಜಿಲ್ಲೆಯವರಿಗೆ, ವಿಶೇಷವಾಗಿ ಕುಮಟಾ ತಾಲೂಕಿನವರಿಗೆ ಎಷ್ಟು ಲಾಭವುಂಟೆಂಬುದನ್ನು ತಿಳಿಸಿ ಹೇಳುವ ಆವಶ್ಯಕತೆಯಿಲ್ಲ ಆದ್ದರಿಂದ ಪುಂಡಗಂದಾಯದ ಹಣ ತಿರುಗಿ ಸಿಗಬೇಕಾದ ಜನರು ಉದಾರ ಮನಸ್ಸಿನಿಂದಲೂ ವಿಶಾಲ ವಿಚಾರದಿಂದಲೂ ಆ ಹಣವನ್ನು ಪರಸ್ಪರ ಕಾಲೇಜ ಸಮಿತಿಗೆ ಕೊಡುವಂತೆ ಸರಕಾರಕ್ಕೆ ಅರಿಕೆ ಮಾಡಬಹುದೆಂಬ ಆಗ್ರಹದ ಸೂಚನೆಯುಂಟು

ಕೆನರಾ ಕಾಲೇಜ-ಸಮಿತಿಗೆ (ಈ ಹಿಂದೆ ತಿಳಿಸಿದ ಹಣ ೯೦ ವಿನಹ) ರಾ ಮಹಾಬಲೇಶ್ವರ ಭಟ್ಟ ಗೋಳಿಯವರಿಂದ (ವಾಗ್ದತ್ತ ರೂ ೫೦೦೦ರಲ್ಲಿ) ರೂ ೩೦೦೦, ರಾ॥ ದಾಸಾ ವಿಠೋಬ ದಾನಭಾಗರಿಂದ (ವಾಗ್ದತ್ತ ರೂ ೧೦೦೦೦ರಲ್ಲಿ) ರೂ ೨೫೦೦, ರಾ ಎಸ್ ಆರ್ ನಾಡಕರ್ಣಿಯವರಿಂದ (ವಾಗ್ದತ್ತ ರೂ ೧೮೦೩ರಲ್ಲಿ) ರೂ ೮೦೩, ಶಿರವತ್ತಿಯ ರಾ। ತಿಮ್ಮಪ್ಪ ರಾಮಾ ನಾಯಕರಿಂದ ರೂ। ೧೦೦೧, (ಹುಬ್ಬಳ್ಳಿಯ) ರಾ। ಶಿವಲಾಲ ಅಮರಸಿಯವರಿಂದ ರೂ ೨೫೧, ರಾ। ಬಿ. ಕೆ. ಜಟ್ಟಕ್ಕಿಯವರಿಂದ ರೂ ೨೦೧, ರಾ। ಎಸ್ ಟಿ ಕಾಮತರಿಂದ ರೂ ೨೦೧, ರಾ॥ ಟಿ ಎಮ್ ಶಾಸ್ತ್ರಿಯವರಿಂದ ರೂ ೧೫೧, ರಾ॥ ಡಿ ಸಿ ಮುಸದ ಇವರಿಂದ ರೂ ೧೦೧, ರಾ॥ ಜಿ ಆರ್ ಬೆಣ್ಣೆಮಡ್ಡಿಯವರಿಂದ ರೂ ೧೦೧, ಡಾ॥ ಪಿ ಪಿ ಡಿಸೋಜಾರವರಿಂದ ರೂ ೧೦೦, (ಧಾರವಾಡದ) ಡಾ॥ ವಸಂತ ಜಿ ರಾವರಿಂದ ೧೦೧ ರಾ। ವಿಷ್ಣು ಆರ್ ದಾಲೇಶ್ವರರಿಂದ ರೂ ೧೦೧, ರಾ। ಬಿ ಡಿ ವಿ ಕೊಟ್ಟೀಕರರಿಂದ ರೂ ೧೦೨ ಮತ್ತು ಇತರರಿಂದ ರೂ ೭೭ ಹೀಗೆ ಅಂತು ರೂ ೭೭೮೭ ವಸೂಲ ಬಂದಿದೆಯಂತೆ

ಶ್ರೀ ಕ್ಷೇತ್ರ ಗೋಕರ್ಣದೊಳಗಿನ ದವಾಖಾನೆಗೆ ಡಾ॥ ಶಿರಹಟ್ಟಿಯವರು ಬಂದು ಇನ್ನೂ ೬ ತಿಂಗಳು ಪೂರ್ಣವಾಗಿಲ್ಲ. ಅವರಿಗೆ ಈಗ ವರ್ಗವಾಗಿದೆಯಂತೆ! ಶಿರಹಟ್ಟಿಯವರು ಗೋಕರ್ಣದಲ್ಲಿ ಬಹಳ ಲೋಕಪ್ರಿಯರಾಗಿರುತ್ತಾರೆ ಅವರ ಈ ಆಕಸ್ಮಿಕ ಮತ್ತು ಅಕಾಲಿಕ ವರ್ಗದ ಸುದ್ದಿ ಕೇಳಿ ಜನರಿಗೆ ವಜ್ರಾಘಾತವಾಗಿದೆ ಮೇಲಧಿಕಾರಿಗಳು ಈ ವರ್ಗಾವಣೆಯನ್ನು ರದ್ದುಗೊಳಿಸಬೇಕಾಗಿ ಅವರ ಆಗ್ರಹವುಂಟು

ಹೊನ್ನಾವರ— (ತಾ ೧೫ ೬-೪೬) ಮಳೆ ಚನ್ನಾಗಿ ಸುರಿಯುತ್ತಿದೆ ಕೆಲವೆಡೆ ನೆಟ್ಟಿಗಾರಂಭವಾಗಿದೆ

೧೯೪೨-೪೩ರ ಚಳವಳಿಯ ಕಾಲಕ್ಕೆ ಹೊನ್ನಾವರ ಶಹರ, ಬಳಕೂರ ವಗೈರೆ ಗ್ರಾಮಗಳಲ್ಲಿ ರೂ ೬೦೦೦ ಪುಂಡಗಂದಾಯ ವಸೂಲಾಗಿತ್ತು. ಅದು ಈಗ ತಿರುಗಿ ಸಿಗಹತ್ತಿದೆ

ಈ ವರ್ಷದ ಮುಲ್ಕಿ ಪರೀಕ್ಷೆಗೆ ಇಲ್ಲಿಯ ಕಸಬಾ ಶಾಲೆಯಿಂದ ೪೪ ಮಂದಿ ವಿದ್ಯಾರ್ಥಿಗಳು ಕೂತಿದ್ದರು ಅವರಲ್ಲಿ ೪ ಮಂದಿ ಉತ್ತೀರ್ಣರಾಗಿದ್ದಾರೆ!

ಸೀಧಾ ಅಂಗಡಿಗಳಲ್ಲಿ ಕೊಡುವ ಅಕ್ಕಿಯಿಂದ ತಮ್ಮ ನಿರ್ವಾಹಸಾಗುವದಿಲ್ಲವಾಗಿ ಜನರು ದೂರುತ್ತಿದ್ದಾರೆ ಬಡವರಿಗೆ ರಾಗಿ ಬೇಕು ಆದರೆ ಅದು ಈಗ ಸಿಗುವದಿಲ್ಲ ರಾಗಿಯ ಬದಲು ಅಕ್ಕಿಯ ನುಚ್ಚಾದರೂ ಸಿಗುತ್ತಿದ್ದರೆ ಅವರಿಗೆ ಸ್ವಲ್ಪ ಅನುಕೂಲವಾಗುತ್ತಿತ್ತು. ಆ ನುಚ್ಚು ಸಹ ಸೀಧಾ ಕ್ಷೇತ್ರದಲ್ಲಿ ಸಿಗುವದಿಲ್ಲ, (ಹಳ್ಳಿಯ ಅಂಗಡಿಗಳಲ್ಲಿ ಮಾತ್ರ ಸಿಗುತ್ತದೆ) ಜಿಲ್ಹಾಧಿಪರು ನುಚ್ಚು ಮಾರುವ ವ್ಯವಸ್ಥೆ ಮಾಡಬೇಕಾಗಿ ಅರಿಕೆಯುಂಟು

ಹಾವೇರಿಯ ಬದಲು ಮುಂಡರಗಿಯಿಂದ ಶೇಂಗಾ ಹಿಂಡಿ ತರಿಸಿಕೊಳ್ಳಬೇಕಾಗಿ ಈಗ ಆರ್ಡರ ಕೇಳಿಕೆಗೆ ಬರೆದು ಬಂದಿದೆಯಂತೆ ಅದು ಎಂದು ಬಂದು ತಲ್ಪುವದೋ ಏನೋ! ಊರಲ್ಲೀಗ ಆ ಹಿಂಡಿಯನ್ನು ೩ ರೂ ಗೊಂದು ಮಣದಂತೆ ಮಾರುತ್ತಾರೆ!

ದುರ್ಗಾಕೇರಿಯಿಂದ ಬಂದರಕ್ಕೆ ಹೋಗುವ (ಇಂಜಿನಿಯರ ಇಲಾಖೆಯವರ) ರಸ್ತೆ ತೀರ ಕೆಟ್ಟಿದೆ! ಅಲ್ಲಲ್ಲಿ ಕೊರಕಲುಗಳಾಗಿವೆ! ಇನ್ನೂ ಅದರ ಮರುಸ್ತಿಯ ವ್ಯವಸ್ಥೆಯಾದದ್ದು ಕಾಣುವದಿಲ್ಲ!

ಭಟಕಳ— (ತಾ ೧೫-೬-೪೬) ಊರಲ್ಲೀಗ ಉರುವಲದ ಕಷ್ಟವೇ ಹೆಚ್ಚಿನ ಕಷ್ಟವಾಗಿದೆ! ಉರುವಲಿಗಾಗಿ ಅರಣ್ಯಕ್ಕೆ ಹೋದ ಜನರು ಸಾಲುಗಟ್ಟಿ ಕಾದುಕೊಂಡಿದ್ದರೂ ಅವರಿಗೆ ಉರುವಲ ಸಿಗುವದಿಲ್ಲ! ಸಿಗುವ ಉರುವಲವಾದರೂ ಒಳ್ಳೇದುಂಟೇ? ಅದನ್ನು ಸುಡಬೇಕಾದರೆ ಅದರ ಮೇಲೆ ಎಣ್ಣೆ ಹಾಕಬೇಕು! ಈ ಉರುವಲ ಸಾಕಿದ ಕೂಡಲೇ ಬಗೆಹರಿಸಲಾಗದ ಬೆಂಕಿ ನಂದಿಹೋಗುತ್ತದೆಂದು ಹೆಣ್ಣುಮಕ್ಕಳು ದೂರಿಕೊಳ್ಳುತ್ತಿದ್ದಾರೆ!

" ಭಾರತದ ಹಳ್ಳಿಯಲ್ಲಿ ದೊರಕುವ ಪ್ರಮಾಣದ ಉದ್ದಿಮೆಗಳನ್ನು ವಿಶೇಷತಃ ಕಾಗದ, ಗಾಜು, ಹಂಚು ಮತ್ತು ಬೆಂಕಿಪೆಟ್ಟಿಗೆಯ ಉದ್ದಿಮೆಗಳನ್ನು ಹೊರಡಿಸುವ ಸಾಧ್ಯಾಸಾಧ್ಯತೆಯ ಬಗ್ಗೆ ವಿಚಾರ ಮಾಡಿ ವರದಿಯನ್ನೊಪ್ಪಿಸುವದಕ್ಕಾಗಿ ಎಸೆಂಬ್ಲಿಯ ಸದಸ್ಯರನ್ನೊಳಗೊಂಡ ಕೆಲವು ತಜ್ಞ ಜನರ ಒಂದು ಸಮಿತಿಯನ್ನು ನೇಮಿಸಬೇಕಾಗಿ ಸರಕಾರಕ್ಕೆ ಈ ಎಸೆಂಬ್ಲಿಯು ಶಿಫಾರಸು ಮಾಡುತ್ತದೆ " ಎಂಬರ್ಥದ ಒಂದು ಗೊತ್ತುವಳಿಯನ್ನು ಮುಂಬಯಿ ಎಸೆಂಬ್ಲಿಯ ಮುಂಬರುವ ಅಧಿವೇಶನದಲ್ಲಿ ತಾವು ಮಂಡಿಸಲಿರುವೆನೆಂದು ಎಸೆಂಬ್ಲಿಯ ಸಭಾಸದರಾಗಿರುವ ರಾ ಬ ಜೀ ಎನ್ ಕನಕಾಪ್ಪೇಕರ ಸರಕಾರಕ್ಕೆ ತಿಳಿಸಿದ್ದಾರೆ

ಶಿರ್ಸಿ— (ತಾ ೧೪-೬-೪೬) ೧೯೪೨ರಲ್ಲಿ ಇಲ್ಲಿ ವಸೂಲಾದ ಪುಂಡಗಂದಾಯ ಈಗ ತಿರುಗಿ ಸಿಗಹತ್ತಿದೆ

ರಾ॥ ವೆಂಕಟೇಶ ತಿಮ್ಮಪ್ಪ ಹೆಗಡೆಯವರು ಪ್ರಾಂತಿಕ ಕಮಿಟಿಗೆ ಆರಿಸಲ್ಪಟ್ಟದರ ವಿರುದ್ಧ ಮಾಡಲಾದ ಕೋರ್ವಾ ಮಾಡಿದ ತಕ್ರಾರ-ಅರ್ಜಿಯ ವಿಚಾರ ಕಳೆದ ತಾ ೧೭-೫-೪೬ಕ್ಕೆ ಅಂಕೋಲೆಯಲ್ಲಾಗುವದಿತ್ತು ಅದರಂತೆ ಅರ್ಜದಾರರು ಅಂದು ಅಂಕೋಲೆಗೆ ಹೋಗಿ ತಮ್ಮ ವಾದ ಮಂಡಿಸಲು ಸಿದ್ಧರಾಗಿದ್ದರು ಚುನಾವಣೆ ಪಂಚ ಮಂಡಳದ ಸರ್ವ ಸದಸ್ಯರೂ ಅಂದು ಹಾಜರಿದ್ದರಂತೆ ಆದರೆ ಮರುದಿನ ಸಂಜೆಯ ವರೆಗೂ ಮಂಡಳದ ಅಧ್ಯಕ್ಷರು ಅಂಕೋಲೆಗೆ ಬಂದು ತಲ್ಪಲಿಲ್ಲ! 'ಮೋಟಾರ ಸಿಗಲಿಲ್ಲ ಈಗ ಹುಬ್ಬಳ್ಳಿಗೆ ಹೊರಟುಹೋಗಬೇಕಾಗಿದೆ " ಎಂದು ಹೊನ್ನಾವರದಿಂದ ಅವರು ಕಳಿಸಿದ ತಂತಿ ಮಾತ್ರ ಬಂದು ತಲ್ಪಿತಂತೆ! ಆದರಿಂದ ಅರ್ಜಿಯ ವಿಚಾರ ಮುಂದೆ ಬಿತ್ತು ಈ ಮಾತಿಗೆ ಈಗ ೪ ವಾರಗಳಾದವು ಅವರೂ ಅರ್ಜಿಯ ವಿಚಾರ ಇನ್ನೂ ಆಗಿಲ್ಲ! ಎಂದು ಆಗುವದೆಂಬದೂ ತಿಳಿಯುವದಿಲ್ಲ!! ಬ್ರಿಟಿಶ ಕೋರ್ಟುಗಳಲ್ಲಿ ತ್ವರಿತವೇ ನ್ಯಾಯ ಸಿಗುವದಿಲ್ಲೆಂದು ದೂರುವ ಕಾಂಗ್ರೆಸ್ಸಿಗರು ಈ ರೀತಿ ವರ್ತಿಸುವದುಚಿತವೇನು? ಎಂದು ಓರ್ವ ಕಾಂಗ್ರೆಸ್ಸಿಗರು ಪ್ರಶ್ನಿಸುತ್ತಾರೆ

ಕಾರವಾರ— (ತಾ ೧೫ ೬-೪೬) ಇಲ್ಲಿಯ ಸೀನಿಯರ ದಿವಾಣಿ ಜಡ್ಜ ರಾ॥ ಸೂರ್ಯವಂಶಿ ಇವರು ಕೋರ್ಟಿನ ಪ್ರಾರಂಭದಿಂದ ರಜೆ ತಕ್ಕೊಂಡಿರುತ್ತಾರೆ ಅವರ ಸ್ಥಳದಲ್ಲಿ ರಾ॥ ಕಲ್ಲೂರರು ಬರುತ್ತಾರಂತೆ ರಾ॥ ಕಲ್ಲೂರರು ಈ ಹಿಂದೆ ಹೊನ್ನಾವರ ಕೋರ್ಟಿನಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡಿ ಈ ಕಡೆಯ ವ್ಯಾಜ್ಯಗಳ ಸ್ವರೂಪ ಬಲ್ಲವರಿರುತ್ತಾರೆ

ಹೈಸ್ಕೂಲ ವಿದ್ಯಾರ್ಥಿಗಳ ಗೋಳು.

ಇತ್ತ ೨ ವರ್ಷಗಳಿಂದ ಕುಮಟೆಯ ಗಿಬ್ಬ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವದು ಕಷ್ಟವಾಗಿದೆ ಶಾಲೆಯಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲೆಂದು ಹೋದ ವರ್ಷ ೨ ಕೋಣೆಗಳನ್ನೂ, ಈ ವರ್ಷ ಪುನಃ ೨ ಕೋಣೆಗಳನ್ನೂ ಶಾಲಾ ಚಾಲಕರು ಕಟ್ಟಿಸಿರುತ್ತಾರೆ ಧೇಂಡೆ ಸಭಾಗೃಹದಲ್ಲಿ ನಡುವೆ ಒಂದು ನೆರಳು ನಿಲ್ಲಿಸಿ ಅಲ್ಲಿ ೨ ವರ್ಗಗಳನ್ನು ಕೂಡಿಸುವ ವ್ಯವಸ್ಥೆ ಮಾಡಿದ್ದಾರೆ ಆದರೂ ಶಾಲೆ ಸೇರಬೇಕೆಂದು ಬರುವ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಗಳಿಗೆ ಶಾಲೆಯಲ್ಲಿ ಸೇರಿಸಿಕೊಳ್ಳಲು ಶಕ್ಯವಾಗುವದಿಲ್ಲೆಂದು ಶಾಲೆಯ ಚಾಲಕರು ಹೇಳುತ್ತಾರೆ. ವಿದ್ಯಾಧಿಕಾರಿಗಳು ತಮ್ಮ ಮೇಲೆ ಕೆಲವು ಕಠೋರ ನಿರ್ಬಂಧಗಳನ್ನು ಹಾಕುತ್ತಾರೆಂದೂ ಆ ನಿರ್ಬಂಧನೆಗಳ ಮೂಲಕ ಎಲ್ಲ ಹುಡುಗ-ಹುಡುಗಿಯರಿಗೆ ಶಾಲೆಯಲ್ಲಿ ಸೇರಿಸಿಕೊಳ್ಳಲು ಬರುವದಿಲ್ಲೆಂದೂ ಅವರ ತಕ್ರಾರುಂಟು.

ಸದ್ಯಕ್ಕೆ ಶಾಲೆಯವರಿಗೆ ೧—೨—೩—೪—೭ನೇ ಇಯತ್ತೆಗಳಲ್ಲಿ ೨— ವಿಭಾಗಗಳನ್ನೂ, ೫—೬ನೇ ಇಯತ್ತೆಗಳಲ್ಲಿ ೩—೩ ವಿಭಾಗಗಳನ್ನೂ ತೆರೆಯಲಷ್ಟೇ ವಿದ್ಯಾಧಿಕಾರಿಗಳು ಅಪ್ಪಣೆ ಕೊಟ್ಟಿದ್ದಾರಂತೆ ವಿನೋ। ಸ್ಕೂಲ್ಲಿನ ನವ ಮುಂದಾಳು ೪ನೇ ಇಯತ್ತೆಯಲ್ಲಿ ೩ನೇ ವಿಭಾಗ ತೆರೆಯಲು ಅಪ್ಪಣೆ ಕೊಡಬರುವದಿಲ್ಲವಾಗಿ ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ಮಾ॥ ಪಿ.ನವರು ವಿಧಿಸಿರುವರೆಂದು ವಾರ್ತೆ! ಇದೀಗ ೧ನೆಯ ಇಯತ್ತೆಯಲ್ಲಿ ಸುಮಾರು ೧೨೦ ಮಂದಿ ವಿದ್ಯಾರ್ಥಿಗಳೂ, ೩ನೆಯ ಇಯತ್ತೆಯಲ್ಲಿ ೧೦೦ ರಷ್ಟು ವಿದ್ಯಾರ್ಥಿಗಳೂ, ೪ನೆಯ ಇಯತ್ತೆಯಲ್ಲಿ ಪುನಃ ೧೫೦ರಷ್ಟು ವಿದ್ಯಾರ್ಥಿಗಳು (ಹಿಂದೆ ಇದೇ ಶಾಲೆಯಲ್ಲಿ ಕಲಿತವರನ್ನೊಳಗೊಂಡು) ಪ್ರವೇಶಕ್ಕೆ ಅರ್ಜಿ ಮಾಡಿದ್ದಾರೆಂದು ತಿಳಿಯುತ್ತದೆ ಅವರೆಲ್ಲರಿಗೂ ಸೇರಿಸಿಕೊಂಡರೆ ೧ನೆಯ ಇಯತ್ತೆಯಲ್ಲಿ ೪ ವಿಭಾಗಗಳನ್ನೂ, ೩ನೆಯ ಇಯತ್ತೆಯಲ್ಲಿ ೩ ವಿಭಾಗಗಳನ್ನೂ, ೪ನೆಯ ಇಯತ್ತೆಯಲ್ಲಿ ಪುನಃ ೪ ವಿಭಾಗಗಳನ್ನೂ ಮಾಡಬೇಕಾಗುವದು ಇದಕ್ಕೆ ವಿದ್ಯಾಧಿಕಾರಿಗಳ ಅಪ್ಪಣೆ ಬೇಕಂತೆ. ಸ್ಥಳಾವಕಾಶದ ಅಡಚಣೆಯೂ ಉಂಟು ಶಿಕ್ಷಕರದೂ ಅಡಚಣೆಯುಂಟು, ಆದರೆ ಅವಶ್ಯವುಳ್ಳ ಹೆಚ್ಚಿಗೆ ಶಿಕ್ಷಕರನ್ನು ನೇಮಿಸಿಕೊಳ್ಳಲು ಶಾಲಾ-ಚಾಲಕರು ಸಿದ್ಧರಿರುವದರಿಂದ ಈ ಅಡಚಣೆಯು ಅಷ್ಟು ಮಹತ್ವದ್ದಲ್ಲ ಶಾಲೆಯವರು ಈಗಾಗಲೇ ಮೂರು ಮಂದಿ ಹೊಸ ಶಿಕ್ಷಕರನ್ನು ನೇಮಿಸಿಕೊಂಡಿದ್ದಾರೆ, ಇನ್ನೂ ನೇಮಿಸಿಕೊಳ್ಳುವ ಆಲೋಚನೆ ನಡೆದಿದೆ ಅದರಿಂದ (೧) ವಿದ್ಯಾಧಿಕಾರಿಗಳ ಅಪ್ಪಣೆ ಮತ್ತು (೨) ಸ್ಥಳದ ಅಭಾವ ಇವೆರಡೇ ಅಡಚಣೆಗಳು ಮಹತ್ವದವಾಗಿವೆ

ಈಗ ಶಾಲೆಯಲ್ಲಿ ಪ್ರವೇಶ ದೊರಕಿಸಲಿಕ್ಕಿರುವ ಬಹುತೇಕ ಮಂದಿ ಕುಮಟಾ ತಾಲೂಕಿನವರೇ ಇರುತ್ತಾರೆ ಅವರಿಗೆ ಬೇರೆ ತಾಲೂಕುಗಳಲ್ಲಿರುವ ಶಾಲೆಗಳಿಗೆ ಹೋಗಿರೆಂದು ಹೇಳುವದು ನ್ಯಾಯ್ಯವಲ್ಲ, ಸಮಂಜಸವಲ್ಲ ಆ ಬೇರೆ ಶಾಲೆಗಳಲ್ಲಾದರೂ ಅವರಿಗೆ ಪ್ರವೇಶ ಸಿಕ್ಕೀತೆಂಬ ಭರವಸೆಯುಂಟೆ? ಪ್ರತಿಯೊಂದು ಶಾಲೆಯಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದೆ, ಶಾಲೆಯಲ್ಲಿ ಅವಕಾಶವಿದ್ದಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಬರುತ್ತಿದ್ದಾರೆ ಎಂದೂ ಅಲ್ಲಿಂದಲೂ ವರದಿಗಳು ಬರುತ್ತಿವೆ ಇಂತಹ ಪರಿಸ್ಥಿತಿಯಲ್ಲಿ ಇಲ್ಲಿಯ ವಿದ್ಯಾರ್ಥಿಗಳಿಗೆ ಬೇರೆ ಶಾಲೆಗಳಿಗೆ ಹೋಗಿರೆಂದು ಹೇಳುವದು ಬೇರೆ ತಾಲೂಕುಗಳಿಗೆ ಹೋಗಿ ಅಲ್ಲಿ ತಮ್ಮ ಶಿಕ್ಷಣ ಸಾಗಿಸುವ ಸಾಮರ್ಥ್ಯವಾದರೂ ಈ ವಿದ್ಯಾರ್ಥಿಗಳಿಗುಂಟೆಂದು ಹೇಳಬರುವಂತಿಲ್ಲ ಅವರಿಗೆ ಗಿಬ್ಬ ಹಾಯಸ್ಕೂಲಿನಲ್ಲಿ ಪ್ರವೇಶ ಸಿಗದಿದ್ದರೆ ಅವರ ಶಿಕ್ಷಣವ ಮುಕ್ತಾಯವಾಗುವದೆಂದೇ ತಿಳಿಯಬಹುದು ಶಿಕ್ಷಣವು ಬೆಳೆಯಬೇಕು, ಹೆಚ್ಚೆಚ್ಚು ಮಂದಿ ವಿದ್ಯಾವಂತರಾಗಬೇಕು ಎಂದು ಜನತೆಯೂ ಸರಕಾರವೂ ಬಯಸುತ್ತಿರುವ ಈ ಕಾಲದಲ್ಲಿ ಕಲಿಯಲು ಆತುರ ಪಡುತ್ತಿರುವ ನೂರಾರು ತರುಣ ಹುಡುಗ-ಹುಡುಗಿಯರ ಉತ್ಸಾಹದ ಮೇಲೆ ನೀರೆರೆಯುವ ಪಾಪ ಪ್ರಯತ್ನವನ್ನು ವಿದ್ಯಾಧಿಕಾರಿಗಳಾಗಲಿ ಪ್ರತ್ಯಕ್ಷ ಶಾಲೆಯ ಅಧಿಕಾರಿಗಳಾಗಲಿ ಮಾಡಕೂಡದೆಂದು ಆಗ್ರಹದ ಸೂಚನೆಯಿದೆ ವಿದ್ಯಾಧಿಕಾರಿಗಳು ತಮ್ಮ ಹಳೆಯ ಕಾಲದ ಕಟ್ಟಳೆಗಳನ್ನು ಮುಂದೊಡ್ಡದೆ ಇಲ್ಲವೆ ಇಲ್ಲದ ಸಲ್ಲದ ಆಕ್ಷೇಪಗಳನ್ನು ಮುಂದೊತ್ತದೆ, ಅಕಸ್ಮಾತ್ ಉದ್ಭವಿಸಿರುವ ಹೊಸ ಪರಿಸ್ಥಿತಿಯ ಕಡೆಗೆ ನೋಡಿ ಶಾಲೆಯಲ್ಲಿ ಅವಶ್ಯವುಳ್ಳ ವರ್ಗಗಳನ್ನೂ ವಿಭಾಗಗಳನ್ನೂ ತೆರೆಯಲು ಕೂಡಲೆ ಅಪ್ಪಣೆ ದಯಪಾಲಿಸಬೇಕಾಗಿದೆ ಮತ್ತು ಅವರು ಹಾಗೆ ಅಪ್ಪಣೆ ಕೊಡುವರೆಂದೂ ನಂಬಿಗೆಯಿದೆ

ಸ್ಥಳಾವಕಾಶದ ಅಡಚಣೆಯನ್ನು ಸುಧಾರಿಸಲು ನಾವೊಂದು ಸೂಚನೆ ಮಾಡುತ್ತೇವೆ ಕೆಲವು ಕನ್ನಡ ಶಾಲೆಗಳಲ್ಲಿ

(೨ನೇ ಕಾಲಂ ನೋಡಿರಿ)

ಸ್ಥಳಾವಕಾಶದ ಅಡಚಣೆಯನ್ನು ನೀಗಿಸಲು ಅಧಿಕಾರಿಗಳು ಈ ಹಿಂದೆಯೇ "ಶಿಫ್ಟ-ಸಿಸ್ಟಮ್" ಎಂಬ ಹೊಸ ಕ್ರಮವನ್ನು ಅನುಸರಿಸಿದ್ದುಂಟು ಆ ಕ್ರಮವನ್ನು ಗಿಬ್ಬ ಹಾಯಸ್ಕೂಲಿನವರು ಏಕೆ ಅನುಸರಿಸಬಾರದು? ಕೆಳಗಿನ ೪ ಇಯತ್ತೆಗಳನ್ನು ಮುಂಜಾನೆ ೭॥ಯಿಂದ ೧೦। ಇಲ್ಲವೆ ೧೧ರ ವರೆಗೆ ಕಲಿಸುವ ಹಾಗೂ ಮೇಲಿನ ೪ ಇಯತ್ತೆಗಳನ್ನು ೧೧ ರಿಂದ ಮುಂದೆ ಕಲಿಸುವ ವ್ಯವಸ್ಥೆ ಮಾಡಿದಲ್ಲಿ ಸ್ಥಳದ ಪ್ರಶ್ನೆ ಸುಲಭವಾಗಿ ಬಿಡಿಸಬಹುದಂತುಂಟು ಕೆಳಗಿನ ಇಯತ್ತೆಯವರಿಗೆ ಹಿರೀಯಶಿಕ್ಷಕರೊಡನೆ ಸಂಜೆಗಾ ಕಡೆ ಪುನಃ ೧ ತಾಸು ಕಲಿಯಬಹುದು ಆ ಶಿಕ್ಷಣಕ್ಕೇನೂ ಕೊರತೆ ಬೇಕಾಗಿಲ್ಲ ಈ ವ್ಯವಸ್ಥೆಯನ್ನು ಶಾಲೆಯ ಅಧಿಕಾರಿಗಳು ಕೈಕೊಂಡಲ್ಲಿ ಅದಕ್ಕೆ ವಿದ್ಯಾರ್ಥಿಗಳು ಆಕ್ಷೇಪವೆತ್ತುವಷ್ಟು ಅಸಮಂಜಸವಾದ್ದರಿಂದು ನಾವು ತಿಳಿಯುವದಿಲ್ಲ ಆದ್ದರಿಂದ (೧) "ಶಿಫ್ಟ-ಸಿಸ್ಟಮ್" ಅನುಸರಿಸಿ (೨) ಅವಶ್ಯವುಳ್ಳಷ್ಟು ಹೆಚ್ಚಿನ ವಿಭಾಗಗಳನ್ನು ತೆರೆದು ಮತ್ತು (೩) ಬೇಕಷ್ಟು ಹೆಚ್ಚಿಗೆ ಶಿಕ್ಷಕರನ್ನು ನೇಮಿಸಿಕೊಂಡು ಶಾಲೆಯ ಅಧಿಕಾರಿಗಳು ಎಲ್ಲ ವಿದ್ಯಾರ್ಥಿಗಳ ಶಿಕ್ಷಣದ ವ್ಯವಸ್ಥೆ ಮಾಡಬೇಕಾಗಿಯೂ, ವಿದ್ಯಾಧಿಕಾರಿಗಳು ಕೂಡ ಶಾಲೆಯವರಿಗೆ ಆ ರೀತಿ ಸಲಹೆ ಕೊಟ್ಟು ಉತ್ಸಾಹಿ ವಿದ್ಯಾರ್ಥಿಗಳಿಗೆ ಅವಶ್ಯವುಳ್ಳ ಶಿಕ್ಷಣಾನುಕೂಲತೆಯನ್ನು ಮಾಡಿಕೊಡಬೇಕಾಗಿಯೂ ನಾವು ವಿದ್ಯಾರ್ಥಿಗಳ ಪಕ್ಷದಿಂದಲೂ ಅವರ ಪಾಲಕರ ಪಕ್ಷದಿಂದಲೂ ಆಗ್ರಹದ ವಿನಂತಿ ಮಾಡುತ್ತೇವೆ

NEW STOCKS of the following have now arrived —

SCHOOL BOOKS
LIBRARY BOOKS
DICTIONARIES
ATLASES, MAPS etc

The New Supply Agency Kumta

ಪೂರೈಕೆ ಖಾತೆ.

ಮುಂಬಯಿ ಕಸಲ್, ತಾ. ೬ ಏಪ್ರಿಲ, ೧೯೪೬.

ಆಜ್ಞೆ.

ಹಿಂದುಸ್ಥಾನ-ಸಂರಕ್ಷಣೆಯ ಕಟ್ಟಳೆ.

ನಂ. ೫೭ (೫)-III(- ಹಿಂದುಸ್ಥಾನ-ಸಂರಕ್ಷಣ ಕಾನೂನಿನ ೧೧ನೆಯ ನಿಯಮದ ೨ನೆಯ ಒಳ ನಿಯಮದನ್ವಯ ದೊರೆತ ಅಧಿಕಾರವನ್ನೂ ಹೀಗೆ ಮಾಡಲು ಅಧಿಕಾರ ಕೊಡುವಂಥ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ, ಹಾಗೂ ಹಣಕಾಸಿನ ಖಾತೆ (ಪೂರೈಕೆ ವಿಭಾಗ)ಯವರು ತಾ ೧೦-೪-೧೯೪೩ಕ್ಕೆ ಹೊರಡಿಸಿದ ೫೨ನೆಯ ನಂಬರಿನ ಸರಕಾರಿ ಪ್ರಕಟನೆಯಲ್ಲಿದ್ದ ಆಜ್ಞೆಯನ್ನು ರದ್ದುಗೊಳಿಸಿ, ಮುಂಬಯಿ ಸರಕಾರದವರು ಈ ಮೂಲಕ ಹೊಸ ಆಜ್ಞೆ ವಿಧಿಸುತ್ತಾರೇನೆಂದರೆ:—

(೧) ತಾ. ೯-೪-೧೯೪೬ರಿಂದ ಮುಂದೆ ಮುಂಬಯಿ ನಗರ ಮತ್ತು ಮುಂಬಯಿ ಉಪನಗರ ಜಿಲ್ಲೆ ಇವುಗಳ ಮಟ್ಟಿಗೆ ಮುಂಬಯಿ ನಾಗರೀಕ ಪೂರೈಕೆಯ ಡಾಯರೆಕ್ಟರರು ಇಲ್ಲವೆ ಮುಂಬಯಿಯ ನಾಗರೀಕ ಪೂರೈಕೆಯ ಅಸಿಸ್ಟಂಟ ಡಾಯರೆಕ್ಟರರು ಕೊಟ್ಟ ಮತ್ತು ಇನ್ನಿತರ ಕಡೆ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರು ಕೊಟ್ಟ ಲಾಯಸೆನ್ಸ ಯಾನೆ ಅಪ್ಪಣೆ-ಚೀಟಿಯಿಲ್ಲದೆ ಹಾಗೂ ಅದರೊಳಗಿನ ಕರಾರುಗಳಿಗೆ ವಿರುದ್ಧವಾಗಿ ಯಾರೂ ಮುಂಬಯಿ ಪ್ರಾಂತದ (ಈ ಕೆಳಗೆ ಸದರಿ ಕ್ಷೇತ್ರವೆಂದು ಸಂಬೋಧಿಸಲ್ಪಟ್ಟ) ಚತುರ್ಗಡಿಯೊಳಗಿನ ಯಾವದೇ ಸ್ಥಳದಿಂದ ಸದರಿ ಕ್ಷೇತ್ರದ ಹೊರಗಿರುವ ಹಿಂದುಸ್ಥಾನದ ಯಾವದೇ ಸ್ಥಳಕ್ಕೆ ಚಹಾ (ಸೊಪ್ಪು) ರೇಲ್ವೆಯಿಂದ, ನೆಲ-ಮಾರ್ಗದಿಂದ, ಸಮುದ್ರ ಮಾರ್ಗವಾಗಿ ಇಲ್ಲವೆ ಆಕಾಶ ಮಾರ್ಗವಾಗಿ ಒಯ್ಯಕೂಡದು'

ಆದರೆ ಯಾವನೊಬ್ಬ ನಿಜವಾದ ಪ್ರವಾಸಿಕನು ತನ್ನ ಸ್ವಂತ ಪ್ರಯಾಣದ ಸಾಮಾನಿನೊಂದಿಗೆ ೫ ರತ್ತಲಗೆ ಮೀರದಷ್ಟು ಚಹಾ ಒಯ್ಯಲು ಇಂಥ ಅಪ್ಪಣೆ-ಚೀಟಿ ಬೇಕಾಗಿಲ್ಲ;

ಹಾಗೂ ಸರಕಾರದವರ ತರ್ಫೆನಿಂದ ಇಲ್ಲವೆ ಮಿಲಿಟರಿಯವರ ಹುಂಡಿ-ಚೀಟಿ (ಕ್ರೆಡಿಟ್ ನೋಟ್ಸ್) ಗಳನ್ವಯ ಚಹಾ ಒಯ್ಯುವಲ್ಲಿ ಈ ಆಜ್ಞೆಯು ಯಾವದೇ ಅಂಶಗಳು ಅನ್ವಯಿಸಲಾರವು.

(೨) ಸದರಿ ಕ್ಷೇತ್ರದ ಹೊರಗಿರುವ ಯಾವದೇ ಸ್ಥಳದಿಂದ ಸದರಿ ಕ್ಷೇತ್ರದ ಹೊರಗಿರುವ ಯಾವದೇ ಇನ್ನೊಂದು ಸ್ಥಳಕ್ಕೆ ಚಹಾ ಒಯ್ಯುತ್ತಿರುವಾಗ ಅದು ಸದರಿ ಕ್ಷೇತ್ರದೊಳಗಿಂದ ಹಾಯ್ದು ಹೋಗುತ್ತಿದ್ದರೆ ಅದಕ್ಕೂ ಈ ಆಜ್ಞೆಯೊಳಗಿನ ಪ್ರತಿಬಂಧ ಅನ್ವಯಿಸುವದು

(೩) ಈ ಆಜ್ಞೆಯ ಯಾವದೇ ಅಂಶವನ್ನು ಉಲ್ಲಂಘಿಸಿದ ಅಪರಾಧದ ತನಿಖೆ ಮಾಡುವ ಯಾವದೇ ನ್ಯಾಯಾಧೀಶರು, ಕಾನೂನು ವಿಧಿಸಬಹುದಾದ ಬೇರೆ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ, ಯಾವ ಚಹಾ-ಸಂಗ್ರಹದ ಸಂಬಂಧದಲ್ಲಿ ಈ ಆಜ್ಞೆಯ ಉಲ್ಲಂಘನೆಯಾಗಿದೆಯೆಂದು ಮನವರಿಕೆಯಾಗುತ್ತದೋ ಆ ಚಹಾ-ಸಂಗ್ರಹವನ್ನು, ಅದು ತುಂಬಿದ್ದ ಪಾತ್ರೆಗಳ ಮತ್ತು ಅವನ್ನು ಮುಚ್ಚುವ ಸಾಧನಗಳ ಸಹಿತ, ಸರಕಾರ-ಜಮಾ ಮಾಡತಕ್ಕದ್ದೆಂದು ಅಪ್ಪಣೆ ವಿಧಿಸಬಹುದು

೨. ಹಿಂದುಸ್ಥಾನ-ಸಂರಕ್ಷಣ ಕಾನೂನಿನ ೧೧೯ನೆಯ ಕಟ್ಟಳೆಯ ೧ನೆಯ ಒಳಕಟ್ಟಳೆಗನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗೆ ವಿಧಿಸಿದಂತೆ ಜಾಹೀರ ಮಾಡತಕ್ಕದ್ದೆಂದು ಮುಂಬಯಿ ಸರಕಾರದವರು ವಿಧಿಸುತ್ತಾರೆ –

(ಅ) ಆಜ್ಞೆಯನ್ನು ಮುಂಬಯಿ ಸರಕಾರದ ಗೆಝೆಟಿನಲ್ಲಿ ಪ್ರಕಟಿಸಬೇಕು;

(ಆ) ಆಜ್ಞೆಯ ಸಂಬಂಧವಾಗಿ ಒಂದು ಪತ್ರಿಕಾ-ಪ್ರಕಟನೆಯನ್ನು ಹೊರಡಿಸಬೇಕು;

(ಇ) ಆಜ್ಞೆಯನ್ನು ಈ ಮುಂದಿನ ಪತ್ರಿಕೆಗಳಲ್ಲಿ ಪ್ರಸಿದ್ಧ ಮಾಡಿಸಿಕೊಳ್ಳಬೇಕು —

(೧) ಟೈಮ್ಸ ಆಫ್ ಇಂಡಿಯಾ, ಮುಂಬಯಿ.
(೨) ಮುಂಬಯಿ ಕ್ರೋನಿಕಲ್, ಮುಂಬಯಿ
(೩) ಫ್ರೀ ಪ್ರೆಸ್ ಜರ್ನಲ್, ಮುಂಬಯಿ
(೪) ಮೊರ್ನಿಂಗ ಸ್ಟ್ಯಾಂಡರ್ಡ, ಮುಂಬಯಿ
(೫) ನವಾ ಕಾಳ, ಮುಂಬಯಿ
(೬) ವಿವಿಧ-ವೃತ್ತ, ಮುಂಬಯಿ.
(೭) ಜಾಮೇ-ಜಮಶೇದ್, ಮುಂಬಯಿ
(೮) ಮುಂಬಯಿ ಸಮಾಚಾರ, ಮುಂಬಯಿ.
(೯) ಮುಂಬಯಿ ವರ್ತಮಾನ, ಮುಂಬಯಿ
(೧೦) ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ
(೧೧) ಜ್ಞಾನಪ್ರಕಾಶ, ಪುಣೆ
(೧೨) ಕೇಸರಿ, ಪುಣೆ
(೧೩) ನವಶಕ್ತಿ, ಮುಂಬಯಿ
(೧೪) ರೋಜನಾಮಾ-ಇ-ಹಿಂದ, ಮುಂಬಯಿ
(೧೫) ಇನ್ ಕಿಲಾಬ, ಮುಂಬಯಿ
(೧೬) ವಿಶ್ವಮಿತ್ರ, ಮುಂಬಯಿ

(ಈ) ಈ ಆಜ್ಞೆಯ ಪ್ರತಿಗಳನ್ನೂ, ಆಯಾ ಪ್ರಾದೇಶಿಕ ಭಾಷೆಯಲ್ಲಿ ಮಾಡಿದ ಅದರ ಅನುವಾದದ ಪ್ರತಿಗಳನ್ನೂ ಸಂಬಂಧಪಟ್ಟ ಜಿಲ್ಹೆಯೊಳಗಿನ ಎಲ್ಲ ಮುಲ್ಕೀ ಕಚೇರಿಗಳಲ್ಲಿರುವ ನೋಟೀಸ-ಬೋರ್ಡುಗಳಿಗೆ ಹಚ್ಚಬೇಕು;

(ಉ) ಜಿಲ್ಹೆಯ ಪ್ರತಿಯೊಂದು ಹಳ್ಳಿಯಲ್ಲಿ ಈ ಆಜ್ಞೆಯ ಸಾರಾಂಶವನ್ನು ಪ್ರಾದೇಶಿಕ ಭಾಷೆಯಲ್ಲಿ ಡಂಗುರ ಹೊಡೆದು ಸಾರಬೇಕು ಮತ್ತು ಅದೇ ರೀತಿ ಆಜ್ಞೆಯ ಪ್ರತಿಗಳೂ ಅದರ ಅನುವಾದದ ಪ್ರತಿಗಳೂ ಮುಲ್ಕೀ ಕಚೇರಿಗಳೊಳಗಿನ ನೋಟೀಸ-ಬೋರ್ಡುಗಳಿಗೆ ಅಂಟಿಸಿಟ್ಟವೆಯೆಂಬುದನ್ನು ಪ್ರಚುರಗೊಳಿಸಬೇಕು.

ಮುಂಬಯಿ ಗವ್ಹರ್ನರರ ಆಜ್ಞೆಯಂತೆ,
ವಿ. ಡಿ. ಗೋರವಾಲಾ, ಕಾರ್ಯದರ್ಶಿ

ಪ್ರಕಟನೆ.

ಕೈಯಿಂದ ಭತ್ತ ಕುಟ್ಟಿ ಅಕ್ಕಿ ತಯಾರಿಸುವವರಿಗೆ ಉತ್ತೇಜನ ಕೊಡುವದರ ಸಲುವಾಗಿ ಸರಕಾರದವರು ಭತ್ತದ ಹೊರತಾಗಿ ಅಷ್ಟು ಅಕ್ಕಿಯನ್ನು ಸಹ ಕೊಂಡುಕೊಳ್ಳಬೇಕಾಗಿ ನಿಶ್ಚಯಿಸಿರುತ್ತಾರೆ ಮತ್ತು ಇದಕ್ಕೆ ಅನುಕೂಲವಾಗಿ ವರ್ತಿಸುವಂತೆ ಆಯಾ ತಾಲೂಕಿನ ಮಾಮಲೇದಾರರಿಗೂ ಇನ್ನಿತರ ಪಿರೇದಿ ಅಮಲದಾರರಿಗೂ ತಿಳಿಸಲಾಗಿದೆ

ಕಾರವಾರ, ೩೧-೫-೪೬ } **V. NANJAPPA,**
Collector of Kanara

ಜಾಹೀರ ನೋಟೀಸು.

ಇದರ ಮೂಲಕ ಎಲ್ಲ ಜನರಿಗೆ ತಿಳಿಸುವದೇನಂದರೆ:— ನನ್ನ ಹೆಂಡತಿಯಾಗಿದ್ದ ಮಾಲು ಎಂಬವಳು ಇತ್ತ ೧೪ ವರ್ಷಗಳಿಂದ ನನ್ನಿಂದ ಪ್ರತ್ಯೇಕವಾಗಿ ಉಳಿಯುತ್ತ ಇದ್ದು ಬೇರೆಯವರ ಸಹವಾಸದಲ್ಲಿ ಅವಳಿಗೆ ಸಂತತಿ ಸಹ ಹುಟ್ಟಿರುವದಾಗಿ ಇತ್ತಲಾಗಿ ತಿಳಿದುಬರುತ್ತದೆ ಕಾರಣ ಅವಳಿಗೆ ಇನ್ನು ಮೇಲೆ ಯಾವದೇ ತರದ ಭೂಸ್ವಾಮ್ಯಾಂಶ ವಗೈರೆ ಬೇಡುವ ಹಕ್ಕು ಅವಳಿಗಾಗಲಿ, ಅವಳಿಗೆ ಹುಟ್ಟಿದ ಸಂತತಿಯವರಿಗಾಗಲಿ ಪ್ರಾಪ್ತವಾಗತಕ್ಕದ್ದಿಲ್ಲ. ಗುಡಬಳ್ಳಿ, ತಾ. ೧೫-೬-೪೬.

● ಈ ಎಡಗೈ ಹೆಬ್ಬೆಟ್ಟಿನ ಗುರ್ತ

ಕುಷ್ಟಯ್ಯಾ ವೀರ ಗೌಡಾ ಈತನದಾಗಿರುತ್ತದೆ.

The Presidency Provident & General Insurance Co. Ltd.,
Meherwan Bldg., Sir P. Mehta Road.
FORT, BOMBAY.

NOTICE.

Notice to hereby given that the Policy No C 60339 granted by the above Company in the name of Mr. Damodar K Shanbhag is lost or mislaid. Any person claiming the above policy should notify **his or her claim** to the Company within one month from this date as otherwise the Company will issue a duplicate copy of the above said policy to the policyholder

12-6-1946

N. J. GOR,
Managing Director.

No O A 3133

NOTIFICATION.

The Collector of Kanara will select about 15 candidates from the Advanced, Intermediate and Backward classes for clerical appointments for temporary posts in the Revenue Department, Kanara.

Applications should be submitted to the undersigned so as to reach *him not later than the 1st July 1946*

2 The applicants should give the following particulars in the applications

1. Full name of the applicant. 2. Place of residence. 3 Caste
4 Age (with proofs such as copies of School, or College certificates or certified copies from the Birth and Death register)
5 Educational qualifications 6 Relations, if any, in Government service Applicants should also furnish certificates of good character (at least 2) Originals will be called for at the time of interview.

3 Applications should be sent by registered post if not presented in person

4 Applicants must have passed M A, B A, LL.B, B Sc., B.E., or Matriculation or School Leaving Certificate Examination. Candidates with shorthand and typing qualifications, *and those who have war service* at their credit will be given preference

5. Applicants selected must be prepared to work as unpaid candidates in any of the Talukas or Mahals of the Kanara District till their turn for acting appointment in a temporary post arrives.

6. No candidate of an advanced class who is over 23 years of age and no candidate of an Intermediate or Backward class who is over 26 years of age shall be enlisted

7. Applicants will have to come for interview at their own expense if called

8. The applicants are hereby clearly given to understand that the successful candidates enlisted according to this notification are meant **for being appointed only in temporary posts** and they will have no claim in this department. They will, however, be eligible for being enlisted as candidates for permanent clerical posts at the annual selection, provided they are otherwise eligible and found to be within the prescribed age limits at the time of such selection.

9. Applications received after *1—7—1946* will not be considered.

10 Candidates who have appeared for the Matriculation Examination this year, should submit their applications after the results are declared

11 Any attempt on the part of the candidate to bring influence will *disqualify him*

Karwar, 4—6—1946 } **V. NANJAPPA.**
Collector of Kanara.

WANTED IMMEDIATELY TEACHERS.

For the Chendia Group Education Society's Popular New English School, Chendia (Karwar Taluka), **two smart and energetic teachers** (at least Matriculates) Those knowing Hindi, having S T C Certificates *and previous experience will be preferred* **Apply Immediately** to the undersigned, stating the minimum salary and terms expected Those called for interview will bear their own expenses Chendia is a healthy place situated on the Karwar-Ankola Motor road, six miles from Karwar,

Chendia, 25—5—46 } ***Raghupati Shenvi,*** *Secretary.* ***Mahabaleshwar J Habbu, Chendia,*** *Chairman,*
The Chendia Group Education Society.

ಇದನ್ನು ಪಾಂಡುರಂಗ ಕೃಷ್ಣ ಕಾಸಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡ ಕಳಿಸಬೇಕು.

Reg. No. B. 1270. Monday, 24th June, 1946.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೫೨.

ಕುಮಟಾ:- ಸೋಮವಾರ, ತಾ. ೨೪ ಮಾಹೆ ಜೂನ ೧೯೪೬ನೇ ಇಸವಿ.

ಜಾಹೀರಾತುಗಳ ದರ:
ಸ್ಕೊಲಮ್ನಿನ ೧ ಇಂಚುದ್ದ ೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ಠರಾಯಿಸಬೇಕು.

ಸ್ವೀಕಾರ-ತಿರಸ್ಕಾರಗಳ ಜೋಕಾಲಿ!

(ಸಮೀಕ್ಷಕನು ಬರೆದುದು.)

ಬ್ರಿಟಿಶ ತ್ರಿಮಂತ್ರಿಗಳ ಯೋಜನೆ ಹಾಗೂ ಸರ್ವಾಧಿಪತಿ ವೆವ್ಹೆಲ ದೊರೆಗಳ ಸಂಕ್ರಮಣ-ಕಾಲೀನ ಸರಕಾರದ ಯೋಜನೆ ಇವುಗಳ ಸಂಬಂಧದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಕೊನೆಯ ನಿರ್ಣಯ ಇನ್ನೂ ಪ್ರಕಟವಾಗಿರುವದಿಲ್ಲ. ರಾಷ್ಟ್ರೀಯ ಸಭೆಯ ಅಧ್ಯಕ್ಷ ಮೌ|| ಅಝಾದರಿಗೂ ಸರ್ವಾಧಿಪತಿಗಳಿಗೂ ಆಗಿಂದಾಗ ಮಾತುಕತೆಗಳು ನಡೆಯುತ್ತಿವೆ. ಮಹಾತ್ಮರು ತಿರುತಿರುಗಿ ಹೇಳುವಂತೆ ಬ್ರಿಟಿಶರು ಪ್ರಾಮಾಣಿಕತನದಿಂದ ಹಿಂದುಸ್ಥಾನದ ರಾಜ್ಯಭಾರವನ್ನು ಹಿಂದವಾಸಿಗಳಿಗೆ ಒಪ್ಪಿಸಬಂದಿದ್ದಾರೆಂಬ ಮಾತು ಜನರಿಗೆ ಒಪ್ಪಿಗೆಯಾಗುವದಿಲ್ಲ. ಸಂಕ್ರಮಣ-ಕಾಲೀನ ಸರಕಾರದಲ್ಲಿ ಸರ್ವಾಧಿಪತಿಗಳು ಈ ಕೆಳಗಿನವರನ್ನು ಸೇರಿಸಿಕೊಳ್ಳಲು ಸಂಕಲ್ಪಿಸಿದ್ದಾರೆ:- (೧) ಸರದಾರ ಬಲದೇವ ಸಿಂಗ, (೨) ಸರ್ ನೌಶೆರ ಎಂಜಿನಿಯರ, (೩) ಜಗಜೀವನ ರಾಮ, (೪) ಪಂ|| ಜವಾಹಿರಲಾಲ ನೆಹರು, (೫) ಮಹಮ್ಮದ ಅಲ್ಲಿ ಜಿನ್ನಾ, (೬) ನವಾಬಜಾದಾ ಲಿಯಾಖತ್ ಅಲೀಖಾನ, (೭) ಹರಿಕೃಷ್ಣ ಮೆಹತಾಬ, (೮) ಡಾ|| ಜೊನ ಮಥಾಯಿ, (೯) ನವಾಬ ಮಹಮ್ಮದ ಇಸ್ಮಾಯಿಲಖಾನ, (೧೦) ಸರ್ ಖ್ವಾಜಾ ನಾಝಿಮುದ್ದೀನ, (೧೧) ಸರದಾರ ಅಬ್ದುಲ್ ರಬ ನಿಶ್ತಾರ, (೧೨) ಚಕ್ರವರ್ತಿ ರಾಜಗೋಪಾಲಾಚಾರ್ಯ, (೧೩) ಡಾ|| ರಾಜೇಂದ್ರ ಪ್ರಸಾದ, (೧೪) ಸರದಾರ ವಲ್ಲಭಭಾಯಿ ಪಟೇಲ. ಈ ೧೪ ಜನರಲ್ಲಿ ೫ ಮಂದಿ ಮುಸಲ್ಮಾನರೆಲ್ಲರೂ ಮುಸ್ಲಿಮ್ ಲೀಗಿನವರಿದ್ದಾರೆ. ಅಬ್ದುಲ್ ನಿಶ್ತಾರರವರು ಗಡಿನಾಡಿನವರು; ಪ್ರಾಂತಿಕ ಚುನಾವಣೆಯಲ್ಲಿ ಸೋತವರು. ಸರ್ವಾಧಿಪತಿಗಳು ಅವರನ್ನು ಆರಿಸಿ ಬುದ್ಧಿಪೂರ್ವಕವಾಗಿ ರಾಷ್ಟ್ರೀಯ ಸಭೆಗೆ ಅಪಮಾನ ಮಾಡಿದ್ದಾರೆ. ಬ್ರಿಟಿಶರು ಪ್ರಾಮಾಣಿಕರಲ್ಲೆಂದೂ ಹಿಂದು-ಮುಸಲ್ಮಾನರೊಳಗೆ ವೈಷಮ್ಯವನ್ನುಂಟು ಮಾಡಿ ತಮ್ಮ ಅಧಿರಾಜ್ಯವನ್ನು ಕಾಪಾಡಲು ಹೊಂಚುಹಾಕುತ್ತಿರುವರೆಂದೂ ಇದರಿಂದ ಸ್ಫುಟವಾಗುತ್ತಿದೆ. ಕೊಂಗ್ರೆಸ ಕಾರ್ಯಕಾರಿ ಮಂಡಲವು ರಾಷ್ಟ್ರೀಯ ಮುಸಲ್ಮಾನರ ಪರವಾಗಿ ಡಾ|| ಝಾಕೀರ ಹುಸೇನರ ಹೆಸರನ್ನು ಸೂಚಿಸಿತ್ತು. ಅವರನ್ನು ಆರಿಸದೆ ಸರದಾರ ನಿಶ್ತಾರರನ್ನು ಆರಿಸಿ ಸರ್ವಾಧಿಪತಿಗಳು ಬ್ರಿಟಿಶರ ಕುಟಿಲ ಮನೋವೃತ್ತಿ ಪ್ರಕಟಿಸಿದ್ದಾರೆ. ಶ್ರೀ|| ಹರಿಕೃಷ್ಣ ಮೆಹತಾಬರವರು ಕೊಂಗ್ರೆಸ್ಸಿಗರಹುದು. ಇದೀಗ ಅವರು ಒರಿಸಾ ಪ್ರಾಂತದ ಕೊಂಗ್ರೆಸ ಪ್ರಧಾನ ಮಂಡಲದ ಮುಖ್ಯ ಮಂತ್ರಿಗಳಾಗಿದ್ದಾರೆ. ಕೇಂದ್ರ ಎಸೆಂಬ್ಲಿಯಲ್ಲಿ ಕೊಂಗ್ರೆಸ ಪಕ್ಷದ ನಾಯಕರಾದ ಶ್ರೀ|| ಶರಚ್ಚಂದ್ರ ಬೋಸರನ್ನು ಆರಿಸಬೇಕಾಗಿ ರಾಷ್ಟ್ರೀಯ ಸಭೆಯವರ ಅಂಬೋಣವಿತ್ತು. ಸರ್ವಾಧಿಪತಿಗಳು ಅವರನ್ನು ಬಿಟ್ಟು ಶ್ರೀ|| ಹರಿಕೃಷ್ಣ ಮೆಹತಾಬರನ್ನು ನೇಮಿಸಿದ್ದರಲ್ಲೂ ಕುಟಿಲತನವಿದೆ. ಶರಚ್ಚಂದ್ರರು ನೇತಾಜಿ ಸುಭಾಸರ ಅಣ್ಣಂದಿರಾದ್ದರಿಂದ ದೊರೆಗಳು ಅವರನ್ನು ಬಿಟ್ಟುಬಿಟ್ಟಿರಬೇಕು. ಬ್ರಿಟಿಶ ಸರಕಾರಕ್ಕೂ ಹಿಂದುಸ್ಥಾನ ಸರಕಾರಕ್ಕೂ ನೇತಾಜಿ ಸುಭಾಸಚಂದ್ರರ ಭೀತಿ ಇನ್ನೂ ಬಾಧಿಸುತ್ತಿದೆ! ಸುಭಾಸರು ಇನ್ನೂ ಜೀವಂತರಿದ್ದಾರೆಂದೂ ಬ್ರಹ್ಮದೇಶದ ಗಡಿಯಲ್ಲಿ ಫಕೀರನ ಸೋಗು ಹಾಕಿ ಓಡಾಡುತ್ತಾರೆಂದೂ ಉಭಯ ಸರಕಾರಗಳ ಭಾವನೆಯುಂಟು. ಬ್ರಹ್ಮದೇಶದ ಗಡಿಯಲ್ಲಿ ಹಿಂದುಸ್ಥಾನ ಸರಕಾರದ ಗುಪ್ತ ಚಾರಕರು ಬರ-ಹೋಗುವ ಎಲ್ಲ ಪ್ರಯಾಣಿಕರ ಕಡೆ, ಗಡ್ಡವಿದ್ದ, ಮೋಹಕ ರೂಪವುಳ್ಳ, ಓರ್ವ "ರಾಜಾ" ವ್ಯಕ್ತಿಯನ್ನು ನೀವು ಕಂಡಿದ್ದೀರಾ, ಎಂದು ಚೌಕಶಿ ಮಾಡುತ್ತಾರಾಗಿ ಕಲಕತ್ತೆಯ "ಹಿಂದುಸ್ಥಾನ ಸ್ಟಾಂಡರ್ಡ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಂಗ್ಲಂಡದೊಳಗಿನ ಸುಪ್ರಸಿದ್ಧ "ಸ್ಕೊಟಲಂಡ ಯಾರ್ಡ" ಎಂಬ ಗುಪ್ತ ಪೋಲೀಸ ಸಂಸ್ಥೆಯ ಕುಶಲ ಗುಪ್ತ ಚಾರರಿಗೂ ಹಿಂದುಸ್ಥಾನ ಸರಕಾರವು ಸುಭಾಸರ ಶೋಧಕ್ಕಾಗಿ ಕರಸಿಕೊಂಡಿದೆಯಂತೆ. ಸುಭಾಸರ ಮೇಲೆ ಬ್ರಿಟಿಶ ಸರಕಾರಕ್ಕೆ ವಿಶೇಷ ಹಗೆಯುಂಟು. ಭಾರತದಲ್ಲಿ ಸ್ವತಂತ್ರ ಸರಕಾರ ಸ್ಥಾಪಿಸಿ, ಬ್ರಿಟಿಶ ಅಧಿರಾಜ್ಯವನ್ನು ನಿರ್ನಾಮ ಮಾಡಹೊರಟ ವೀರ ಪುರುಷನ ಹಗೆತನ ಸಾಮ್ರಾಜ್ಯವಾದಿ ಬ್ರಿಟಿಶರು ಹಿಡಿಯುವದು ಸಹಜವಾದದ್ದು. ಆದರೆ ಹಿಂದುಸ್ಥಾನದ ರಾಜ್ಯಭಾರವನ್ನು ಹಿಂದೀಯರಿಗೆ ಒಪ್ಪಿಸಬೇಕೆಂಬ ವಿಚಾರ (?) ದಿಂದ ಹಿಂದುಸ್ಥಾನಕ್ಕೆ ಬಂದ ತ್ರಿಮಂತ್ರಿಗಳಿಗೂ ಅವರಿಗೆ ಅನುಕೂಲವಾಗಿ ವರ್ತಿಸುತ್ತಿರುವ ಸರ್ವಾಧಿಪತಿಗಳಿಗೂ ಈ ಹಗೆ ಉಚಿತವೇನೆಂಬುದೊಂದು ಪ್ರಶ್ನೆಯುಂಟು. ಲೀಗಿನ ಹೊರಗಿದ್ದ ಮುಸಲ್ಮಾನರು ಮುಸಲ್ಮಾನರೇ ಅಲ್ಲೆಂದು ಸರ್ವಾಧಿಪತಿಗಳು ಎಣಿಸಿ ನಡೆಕೊಂಡದ್ದೂ ತೀರ ಅನುಚಿತ! ಮಹಾತ್ಮರು ಕೂಡ ಸರ್ವಾಧಿಪತಿಗಳ ಈ ವರ್ತನಕ್ಕೆ ಹೇಸಿದ್ದಾರೆ. ಮಹಾತ್ಮರೂ ಸರದಾರ ವಲ್ಲಭಭಾಯಿಯವರೂ ಸರ್ವಾಧಿಪತಿಗಳ ಯೋಜನೆಯಲ್ಲಿ ರಾಷ್ಟ್ರಹಿತದ ದೃಷ್ಟಿಯಿಂದ ತಿದ್ದುಪಡಿಯಾಗಬೇಕಾಗಿ ಕೇಳುತ್ತಾರೆಂದೂ, ಆ ತಿದ್ದುಪಡಿಯನ್ನು ನಿರಾಕರಿಸಲಿಕ್ಕೆ ಸಮರ್ಪಕ ಕಾರಣಗಳಿಲ್ಲದ್ದರಿಂದ ಸರ್ ಸ್ಟೆಫರ್ಡ ಕ್ರಿಪ್ಸರು ಲೀಗಿನ ವಿರೋಧದ ಕುಂಟ ನೆವ ಹೇಳಿ ಸದರಿ ತಿದ್ದುಪಡಿಗಳ ಬಗ್ಗೆ ಆಗ್ರಹ ಹಿಡಿಯಬಾರದೆಂದು ರಾಷ್ಟ್ರಪತಿ ಆಝಾದರಿಗೂ ಮಹಾತ್ಮರಿಗೂ ಸಮಾಧಾನ ಹೇಳುತ್ತಾರೆಂದೂ ವಾರ್ತೆ ಬಂದಿದೆ. ಮುಸ್ಲಿಮ ಲೀಗಿನೊಡನೆ ಮುದ್ದಾಡುವದರಲ್ಲಿ ಸಾಮ್ರಾಜ್ಯವಾದಿಗಳ ಮರ್ಮವಿದೆ. ಹಿಂದಜನಾಂಗದ ಬಲವನ್ನು ಹೇಗಾದರೂ ಮಾಡಿ ಕುಗ್ಗಿಸಬೇಕೆಂಬ ಅಂತಃಸ್ಥ ದುಷ್ಟ ವಿಚಾರದಿಂದ ತ್ರಿಮಂತ್ರಿಗಳೂ ಸರ್ವಾಧಿಪತಿಗಳೂ ರಾಜ್ಯಭಾರ ದಾನದ ನಾಟಕ ನಡಿಸಿದ್ದಾರೆ. ಕೊಂಗ್ರೆಸ ಕಾರ್ಯಕಾರಿ ಮಂಡಲದಲ್ಲಿ ಈ ಯೋಜನೆಯನ್ನು ಸ್ವೀಕರಿಸಬಹುದೆಂಬ ಅಭಿಪ್ರಾಯವೂ ಉಂಟು; ತಿರಸ್ಕರಿಸಬೇಕೆಂಬ ಅಭಿಪ್ರಾಯವೂ ಉಂಟು. ಈ ಯೋಜನೆಯಲ್ಲಿ ಗುಣಗಳೂ ಇವೆ, ದೋಷಗಳೂ ಇವೆ. ಆದ್ದರಿಂದ ಅದನ್ನು ಸ್ವೀಕರಿಸಿ ಕಾರ್ಯ ನಡಿಸಿದಾಗ ದೋಷಗಳು ಬಯಲಾಗಿ ಅಖಂಡ ಹಿಂದುಸ್ಥಾನದ ಹಿತವಾಗುತ್ತಿದ್ದರೆ ಅದನ್ನು ಸ್ವೀಕರಿಸಬೇಕಾಗಿ ಸಾಮಾನ್ಯ ಅಭಿಪ್ರಾಯವುಂಟು. ಹೊಸ ಯೋಜನೆಯಲ್ಲಿ ಸರ್ವಾಧಿಪತಿಗಳು ಪ್ರಬಲರಾಗಿ ಉಳಿಯುವದರಿಂದಲೂ ಅವರು ಸಾಮ್ರಾಜ್ಯವಾದಿಗಳಿರುವದರಿಂದಲೂ ಮುಂದೆ ವ್ಯವಹಾರದಲ್ಲಿ ಗುಣಗಳೆಲ್ಲ ಮಾಯವಾಗಿ ದೋಷಗಳೇ ಉಲ್ಬಣ ಹೊಂದಿ, ಅಂತಃಕಲಹಗಳುಂಟಾಗಿ ಅಹಿತವಾಗುವದಾಗಿ ಮಹಾತ್ಮಾದಿ ಕೆಲವರ ಅಭಿಪ್ರಾಯವುಂಟಂತೆ. ದಿಲ್ಲಿಯೊಳಗೆ ಈಗ ಪತ್ರಿಕಾ ಪ್ರತಿನಿಧಿಗಳ ಸುಳಸುಳಾಟ ಹೆಚ್ಚಾಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಊಹೆಗಳನ್ನು ಕಂತಾಬಟ್ಟೆ ಪ್ರಕಟಿಸುತ್ತಿದ್ದಾರೆ. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಸ್ವೀಕಾರ-ಪಕ್ಷದ ಮೇಲ್ಮೆಯಾಯಿತೆಂದು ಒಂದು ದಿನ ಸುದ್ದಿ ಕೊಟ್ಟು, ಧಿಃಕ್ಕಾರ ಪಕ್ಷದ ಮೇಲ್ಮೆಯಾಯಿತೆಂದು ಮರುದಿನ ತಂತಿ ಕೊಡುತ್ತಾರೆ! ಒಂದೇ ಸಭೆಯ ಅಭಿಪ್ರಾಯದ ಬಗ್ಗೆ ಭಿನ್ನ ಭಿನ್ನ ಪತ್ರಿಕಾ ಪ್ರತಿನಿಧಿಗಳು ಭಿನ್ನ ಭಿನ್ನ ವರದಿ ಕಳಿಸುತ್ತಾರೆ! ಮಹಾತ್ಮರಿಗೆ ಈ ಸುದ್ದಿಯೋಲೆಗಳನ್ನು ಓದಿ ಬಲು ಸಿಟ್ಟು

The Agricultural & Industrial Bank, Ltd.
[Incorporated in British India, Liability of Members limited]
Head Office: "LAXMI NIVAS" Buildings, **COONDAPOOR.** S. I.
BRANCHES:- ANKOLA, BELGAUM, COONDAPOOR, DHARWAR, GOKARN, GADAG, HUBLI, HAVERI, KARWAR, KUMTA, MANGALORE, NAGAR, SHIMOGA, SOMWARPET, SIRSI, VIRAJPET &
BOMBAY OFFICE.
at 384, M. Jaipuria House, KALBADEVI.
A BANK FAMILIAR TO ALL, SERVING THE PEOPLE WITH 17 BRANCHES.

RECORD OF PROGRESS.

	1939 Rs.	1943 Rs.	1946 Rs.
PAID-UP CAPITAL.	46,060/-.	1,62,610/-.	4,07,662/-.
DEPOSITS:	3,56,041/-.	15,39,232/-	43,31,959/-
WORKING FUNDS.	4,89,404/-	22,34,241/-.	62,52,284/-.

ALL KINDS OF MODERN BANKING BUSINESS TRANSACTED.

COONDAPOOR,
7th June, 1946.

K. Vittaldas Shenai,
Managing Director.

ಬಂದಿವೆ. ತಮಗೆ ಅಧಿಕಾರವಿದ್ದರೆ (ತಮ್ಮ 'ಹರಿಜನ' ಪತ್ರಿಕೆಗಳನ್ನೊಂದನ್ನು ಬಿಟ್ಟು ಉಳಿದ) ಎಲ್ಲ ಪತ್ರಿಕೆಗಳನ್ನು ತಾವು ನಿಲ್ಲಿಸಿ ಬಿಡುತ್ತಿದ್ದೆನೆಂದು ಬುಧವಾರ ಪ್ರಾರ್ಥನೆಯ ಸಮಯ ಅವರು ಉದ್ಗರಿಸಿದರು. ಸುದ್ದಿಗಾರರು ಸುದ್ದಿಗಳನ್ನು ಕಲ್ಪಿಸಿ ಕಳುಹುತ್ತಾರೆಂದು ಅವರ ಆರೋಪ. ಒಂದು ದೊಡ್ಡ ಜನಾಂಗದ ಭವಿತವ್ಯವನ್ನು ನಿರ್ಣಯಿಸುವ ವಿಚಾರ ಗೌಪ್ಯದಿಂದ ನಡೆದಿರುವಾಗ, ಅದನ್ನು ತಿಳಕೊಳ್ಳಲು ಜನಾಂಗವು ಆತುರವಿರುವಾಗ ಮತ್ತು ವಸ್ತುಸ್ಥಿತಿಯನ್ನು ಪ್ರಮುಖರು ಅಧಿಕೃತವಾಗಿ ತಿಳಿಸದಿರುವಾಗ ಸುದ್ದಿಗಾರರು ತಮ್ಮ ಬುದ್ಧಿಶಕ್ತಿ ಖರ್ಚು ಮಾಡಿ ಉಪಾಯದಿಂದ ಸುದ್ದಿಗಳನ್ನು ಕಲೆಹಾಕಿ ಲೋಕಕ್ಕೆ ತಿಳಿಸಬೇಕಾಗುತ್ತದೆ. ಮಹಾತ್ಮರು ಎಷ್ಟೇ ಸಿಟ್ಟು ಮಾಡಿದರೂ ಆ ಕಡೆ ಅವರು ಲಕ್ಷ ಕೊಡಲಾರರು. ಸರ್ವಾಧಿಪತಿಗಳು ೧೪ ಜನ ಹೊಸಬ ಸದಸ್ಯರಿಗೆ ಖಾತೆಗಳನ್ನು ಹೇಗೆ ಹಂಚಬೇಕೆಂದು ಅತ್ತ ಆಲೋಚಿಸುತ್ತಿರುವಾಗ, ಪತ್ರಿಕಾಪ್ರತಿನಿಧಿಗಳು ಉಗಿಬಂಡಿ ಖಾತೆಯನ್ನು ಸರದಾರ ಪಟೇಲರಿಗೂ, ವಿದೇಶ ಇಲಾಖೆಯನ್ನು ಪಂ|| ಜವಾಹಿರಲಾಲರಿಗೂ, ಸೈನ್ಯ ಇಲಾಖೆಯನ್ನು ಬಾ|| ಜಿನ್ನಾರವರಿಗೂ, ಗೃಹ ಇಲಾಖೆಯನ್ನು ಡಾ|| ರಾಜೇಂದ್ರಪ್ರಸಾದರಿಗೂ ಹಂಚಿಬಿಟ್ಟಿದ್ದಾರೆ! ಈ ಹೊತ್ತು ಕೊಂಗ್ರೆಸ ಕಾರ್ಯಕಾರಿ ಮಂಡಳದ ಕೊನೆಯ ನಿರ್ಣಯ ಪ್ರಕಟವಾಗಬಹುದು. ಶೀಖ ಸಮಾಜವು ತ್ರಿಖಂಡ ಯೋಜನೆಯನ್ನು ತಿರಸ್ಕರಿಸಿದೆ; ಸಂಕ್ರಮಣ-ಕಾಲೀನ ಸರಕಾರದ ಯೋಜನೆಯನ್ನೂ ತಿರಸ್ಕರಿಸಿದೆ, ಬಲದೇವ ಸಿಂಗರು ಸಂಕ್ರಮಣ-ಸರಕಾರದಲ್ಲಿ ಸೇರಬಾರದಾಗಿಯೂ ಅದು ತಿಳಿಸಿದೆ. ಗಡಿನಾಡಿನ ಪ್ರಾಂತಾಧಿಪರು ಸರ್ವಾಧಿಪತಿಗಳ ಆಜ್ಞೆ ಮೇರೆಗೆ ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಆರಿಸುವದಕ್ಕಾಗಿ ತಮ್ಮ ಎಸೆಂಬ್ಲಿಯ ಸಭೆಯನ್ನು ಕರೆದಿದ್ದಾರೆ. ಸರ್ವಾಧಿಪತಿಗಳ ಘೋಷಣೆಯಂತೆ ನಾಡದು ಬುಧವಾರ ಹೊಸ ಸರಕಾರ ಅಧಿಕಾರ ಸ್ವೀಕರಿಸಬೇಕು. ಅದರಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೂಡಲೆ ತಮ್ಮ ಕೊನೆಯ ನಿರ್ಣಯಕ್ಕೆ ಬರಲು ಅನುಕೂಲವಾಗಬೇಕೆಂದು, ಕಾಶ್ಮೀರ ಸಂಸ್ಥಾನದ ಪರಿಸ್ಥಿತಿ ಪ್ರತ್ಯಕ್ಷ ನೋಡಿಕೊಳ್ಳಲು ಶ್ರೀನಗರಕ್ಕೆ ಹೊರಟಾಗ ನಡುಹಾದಿಯಲ್ಲಿ ಸಂಸ್ಥಾನದ ಅಧಿಕಾರಿಗಳಿಂದ ಬಂಧಿಸಲ್ಪಟ್ಟ ಪಂ|| ಜವಾಹರಲಾಲರು ಕೂಡಲೇ ದಿಲ್ಲಿಗೆ ಮರಳಿಬರಬೇಕೆಂದೂ, ಸಂಸ್ಥಾನಾಧೀಶರು ಅವರನ್ನು ತಿರುಗಿ ಕಳಿಸಿಕೊಡಬೇಕೆಂದೂ ರಾಷ್ಟ್ರಪತಿಗಳೂ ಸರ್ವಾಧಿಪತಿಗಳೂ ತಿಳಿಸಿದ ಮೇರೆಗೆ ಪಂಡಿತಜಿಯವರು ವಿಮಾನದಿಂದ ತಿರುಗಿ ದಿಲ್ಲಿಗೆ ಬಂದಿದ್ದಾರೆ. ಪುಣೆಯಿಂದ ಶ್ರೀ|| ದೇವರವರೂ ಪ್ರಯಾಗದಿಂದ ಶ್ರೀ|| ಗೋವಿಂದ ವಲ್ಲಭ ಪಂತರೂ ದಿಲ್ಲಿಗೆ ಹೋಗಿದ್ದಾರೆ. ಗಡಿನಾಡಿನ ಗಾಂಧಿಯವರನ್ನೂ ರಾಷ್ಟ್ರಪತಿಗಳು ದಿಲ್ಲಿಗೆ ಕರೆಸಿಕೊಂಡಿದ್ದುಂಟು. ಅವರೆಲ್ಲರ ಸಮ್ಮತಿಯಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳದ ಕೊನೆಯ ನಿರ್ಣಯವಾಗಿ ಅದು ನಿನ್ನೆ ಹೊರಬೀಳುವದಿತ್ತು. ಈ ಸಂಕಲ್ಪವೇನುಂಟೆಂದು ತಾವು ಅರಿಯೆವಾಗಿ ಮಹಾತ್ಮರು ಹೇಳುತ್ತಾರೆ! ಅದರಿಂದ ಸ್ವೀಕಾರವೋ ತಿರಸ್ಕಾರವೋ ಎಂಬುದು ನಿನ್ನೆ ಸಂಜೆಯ ವರೆಗೂ ನಿಶ್ಚಿತವಾಗಿದ್ದಿಲ್ಲವೆಂದು ಹೇಳಬಹುದು.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ನಡುವೆ ಎರಡು ದಿನ ಮಳೆ ಕಡಿಮೆಯಾಗಿತ್ತು; ಬಿಸಿಲೂ ಬೀಳುತ್ತಿತ್ತು. ಆದರೆ ಶುಕ್ರವಾರ ರಾತ್ರಿ ಆರ್ದ್ರಾ ಪ್ರವೇಶವಾದಂದಿನಿಂದ ಪುನಃ ಮಳೆಗೆ ಕಳೆ ಬಂದಿದೆ; ಭರತಿಗೆ ಗಾಳಿಯೂ ಉಂಟು ಅದರಿಂದ ಅಘನಾಶಿನಿ ಹೊಳೆಗೆ ಸಾಧಾರಣ ನೆರೆ ಬಂದಿದೆ ಇಂದು ನೀರು ಇನ್ನೂ ಏರುವ ಸಂಭವವುಂಟು. ಈ ತನಕ ಸುಮಾರು ೬೦ ಇಂಚು ಮಳೆಯಾಗಿದೆ

ಮುಂಬಯಿ ಸರಕಾರದ ಆಹಾರ ಮಂತ್ರಿ ಶ್ರೀ [illegible] ದಿನಕರರಾವ ದೇಸಾಯಿಯವರ ಈ ಜಿಲ್ಹೆಯೊಳಗಿನ ಸಂಚಾರ-ಕ್ರಮ ರದ್ದಾಗಿದೆ.

ಇಲ್ಲಿಯ ಗಿಬ್ಸ ಹಾಯಸ್ಕೂಲಿನಲ್ಲಿ ೩೪ ವರ್ಷ ಶಿಕ್ಷಕರಾಗಿಯೂ ೨೨-೨೩ ವರ್ಷ ಪ್ರಧಾನಾಧ್ಯಾಪಕರಾಗಿಯೂ ದುಡಿದು ಅಜನ್ಮ ಶಿಕ್ಷಣ ಸೇವೆ ಮಾಡಿದ ರಾ|| [illegible] ಮಾಧವ ಪೈ ಇವರು ನಿನ್ನೆ ಶನಿವಾರ ಉಷಃಕಾಲದಲ್ಲಿ ಹರವಟ್ಟಿಯೊಳಗಿನ ತಮ್ಮ ನಿವಾಸದಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಗಣಿತ ಶಾಸ್ತ್ರದಲ್ಲಿ ವ್ಯುತ್ಪನ್ನರು ಬಹಳ ಪ್ರವೀಣರಿದ್ದರು; ಮತ್ತು ಮೇಧಾವಿ ವಿದ್ಯಾರ್ಥಿಗಳಲ್ಲಿ ಗಣಿತ ಶಾಸ್ತ್ರದ ಗಾಢ ಅಭ್ಯಾಸ ಮಾಡುವ ಅಭಿರುಚಿಯನ್ನು ಹುಟ್ಟಿಸುತ್ತಿದ್ದರು. ಅವರ ಜೀವನಕ್ರಮ ತೀರ ಸರಳವಿತ್ತು. ಆಧುನಿಕ ಸಂಸ್ಕೃತಿಯ ವಿಚಾರಗಳನ್ನು ಅಳವಡಿಸಿಕೊಂಡಿದ್ದರೂ ಹಿರಿಯರ ಆಚಾರಗಳನ್ನು ಅವರು ಬಿಟ್ಟಿದ್ದಿಲ್ಲ. ಶಾಲೆಯ ಶಿಕ್ಷಕ ವರ್ಗದಲ್ಲಿ ಅವರು ಎಲ್ಲರಿಗೂ ಸಮಾಧಾನ ಪಡಿಸಿ ಕಾರ್ಯ ಸಾಗಿಸುತ್ತಿದ್ದರು. ವಿದ್ಯಾರ್ಥಿಗಳ ಮೇಲೆ ಸಹ ಅವರ ವರ್ಚಸ್ಸು ಬಹಳವಿತ್ತು. ೩-೪ ವರ್ಷಗಳ ಹಿಂದೆ ಅವರು ಸೇವಾನಿವೃತ್ತರಾಗಿದ್ದರೂ ಶಾಲೆಯ ಚಾಲಕರಿಗೆ ಕಾಲಕಾಲಕ್ಕೆ ಸಲಹೆಯನ್ನಿತ್ತು ಮಾರ್ಗದರ್ಶನ ಮಾಡುತ್ತಿದ್ದರು. ನಿನ್ನೆ ಅವರ ಸ್ಮಶಾನಯಾತ್ರೆಯ ಮೆರವಣಿಗೆಯಲ್ಲಿ ನೂರಾರು ವಿದ್ಯಾರ್ಥಿಗಳೂ ಶಿಕ್ಷಕರೂ ಸೇರಿದ್ದರು. ಮೃತಾತ್ಮನಿಗೆ ಶ್ರೀಶನು ಚಿರಶಾಂತಿಯನ್ನೀಯಲಿ

ಕಳೆದ ಶುಕ್ರವಾರ-ಶನಿವಾರ ಈ ಊರಲ್ಲಿ ಹಳಕಾರದಲ್ಲಿ ಹುಚ್ಚು ಹಿಡಿದ ನರಿಯೂ ನಾಯಿಗಳೂ ಸುಮಾರು ೨೫-೩೦ ಜನರಿಗೆ ಕಚ್ಚಿ ಊರಲ್ಲೆಲ್ಲ ಗಲಭೆಯನ್ನೆಬ್ಬಿಸಿಬಿಟ್ಟಿದ್ದವು. ನಿನ್ನೆ ಸಂಜೆ ಆ ಹುಚ್ಚು ನರಿ ನೆಲ್ಲಿಕೇರಿ ಬದಿಗೆ ಬಂದಾಗ ಒಬ್ಬರು ಸಾಹಸ ಮಾಡಿ ಗುಂಡು ಹಾರಿಸಿ ಅದನ್ನು ಕೊಂದದ್ದರಿಂದಲೂ ಮ್ಯುನಿಸಿಪಾಲಿಟಿಯವರು ಕೂಡ ಹುಚ್ಚು ನಾಯಿಗಳ ನಾಶ ಮಾಡಹತ್ತಿರುವದರಿಂದಲೂ ಈಗ ಗಲಭೆ ಕಡಿಮೆಯಾಗಿದೆ

ಶುಕ್ರವಾರ ಮುಂಜಾನೆ ಅಳವೆಕೋಡಿಯ ನಾವಡಿ ಜಾತಿಯ ಮುದುಕಿಯೊಬ್ಬಳ ಹೆಣ ಕಡಜನೇ ಸಂಕದ ಬಳಿ ಹೊಳೆಯ ನೀರಿನಲ್ಲಿ ತೇಲುತ್ತಿದ್ದುದು ಕಂಡುಬಂತು. ಮುದುಕಿಯು ಬಡತನಕ್ಕೆ ಬೇಸತ್ತು ಹೊಳೆಯಲ್ಲಿ ಹಾರಿಕೊಂಡಳೋ ಯಾ ಎಲ್ಲಿಯಾದರೂ ಕಾಲು ಜಾರಿ ನೀರಲ್ಲಿ ಬಿದ್ದು ಸತ್ತಳೋ ತಿಳಿಯದು

ಸಾಣೆಕಟ್ಟೆಯಿಂದ ತದಡಿಗೆ ಹೋಗುವ ಮಾರ್ಗ ವಿಪರೀತ ಕೆಟ್ಟಿದೆ, ಇನ್ನೂ ಕೆಡಲು ಸಾಧ್ಯವಿಲ್ಲದಷ್ಟು ಹಾಳಾಗಿದೆ! ಜಿಲ್ಹಾ ಬೋರ್ಡಿನ ಸದಸ್ಯರು — ಲೋಕೋಪಕಾರಕ್ಕಾಗಿ ಜನರ ಕೈಕಾಲು ಹಿಡಿದು ಮತ ಬೇಡಿ ಆರಿಸಿ ಹೋದವರು — ಎಲ್ಲಿದ್ದಾರೋ ಏನೋ!

ಹೊನ್ನಾವರ—(ತಾ. ೨೨-೬-೪೬) ಮಳೆ ಬಹಳ. ಕಳೆದ ಮ್ಯಾಟ್ರಿಕ ಪರೀಕ್ಷೆಗೆ ಕಸಬಾ ಶಾಲೆಯಿಂದ ೨೫ ಮಂದಿ ಹುಡುಗರಷ್ಟೇ ಕುಳಿತಿದ್ದರೆಂದೂ ಅವರಲ್ಲಿ ೪ ಮಂದಿ ತೇರ್ಗಡೆ ಹೊಂದಿದ್ದಾರೆಂದೂ ನಮಗೆ ಶಾಲೆಯ ಹೆಡ್-ಮಾಸ್ತರರು ತಿಳಿಸುತ್ತಾರೆ. ಉಳಿದ ೧೯ ಮಂದಿ ಹೊರಗಿನವರಂತೆ. ಅವರಲ್ಲಿ ಯಾರೂ ಉತ್ತೀರ್ಣರಾಗಲಿಲ್ಲ

ಇಂದಿನಿಂದ ಆಸಾಮು ಅಕ್ಕಿ ದರ ೫ ಆಣೆಯಿಂದ ಇಳಿಸಿ ಪಾಯಲಿ ೧ಕ್ಕೆ ರೂ. ೧-೭-೦ ಇಟ್ಟಿದ್ದಾರೆ

ಹೊಸಾಕುಳಿ ಗ್ರಾಮದ ಅರೆಕೋಡ್ಲ ಮಜರೆಯಲ್ಲಿ ಯಾರದೋ ಕೊಲೆಯಾದ ಸುದ್ದಿಯಿದೆ. ಕೊಲೆಗಡಕರು ಶವವನ್ನು ಹಾಗೆಯೇ ಚೆಲ್ಲಿಹೋಗಿದ್ದರಂತೆ; ನರಿ-ನಾಯಿಗಳು ಅದನ್ನು ತಿಂದು ಹಾಕಿವೆಯಂತೆ. ಪೋಲೀಸರು ಮೃತನ ಹಾಗೂ ಕೊಲೆಪಾತಕಿಗಳ ತಪಾಸಣೆ ನಡಿಸಿದ್ದಾರೆ.

ಹೋದ ಸೋಮವಾರ ಕಾಸರಕೋಡ ಸಮುದ್ರ ದಂಡೆಗೆ ಕೆಲವು ಆಫ್ರಿಕನ್ ಸರಾಯಿಯ ಪೀಪಾಯಿಗಳೂ, ಚಹ, ಡಾಲ್ಡಾ ತುಪ್ಪ (ತುಪ್ಪದಂತೆ ಕಾಣುವ ಎಣ್ಣೆ), ಘನೀಕೃತ ಹಾಲು ಮುಂತಾದವುಗಳ ಡಬ್ಬಿಗಳು ತೇಲಿ ಬಂದಿದ್ದವು. ದಂಡೆಗುಂಟ ವಾಸ್ತವ್ಯವಿದ್ದ ಕ್ರಿಸ್ತನ್ನರೂ ಹುಲಸ್ವಾರರೂ ಅವನ್ನು ಹಿಡಿದು ಹಾಕಿ ಆ ಪೀಪಾಯಿ ಸರಾಯಿಯನ್ನು ಅಲ್ಲಿಂದಲ್ಲೇ ಖಾಲಿ ಮಾಡಿಬಿಟ್ಟರಂತೆ! ಈ ಸರಾಯಿ ಬಹಳ ಉಗ್ರವಿತ್ತಾಗಿ ಹೇಳುತ್ತಾರೆ. ಅದರ ದಾಹಶಕ್ತಿ ಅಳವಡಿಸಿಕೊಳ್ಳಲಾಗದೆ ಗೋವಿಂದ ನೆಂಬವನು ಬೀಳಿಯ ಮೇಲೆಯೇ ಸತ್ತುಬಿದ್ದನು! ಮೇಲಿನಂತೆ ಬಳವು ಬಂದ ಸಾಮಾನುಗಳಲ್ಲಿ ಕೆಲವನ್ನು ಕಸ್ಟಮ್ಸದವರು ಮರುದಿನ ಇಲ್ಲಿ ತಂದಿಟ್ಟಿದ್ದಾರೆ! ಸರಾಯಿಯ ಪೀಪಾಯಿಗಳು ಮಾತ್ರ ಅವರ ಕೈಗೆ ಹತ್ತಲಿಲ್ಲ. ಸರಾಯಿಗಳ್ಳರು ಅವನ್ನು ಎಲ್ಲೋ ಹುಗಿದುಬಿಟ್ಟಿದ್ದಾರೆ. ಈ ಸರಾಯಿಯ ಬಲದಿಂದ ಸರಾಯಿಗಳ್ಳರು ಇಲ್ಲೂ ಕಾಸರಕೋಡದಲ್ಲೂ ಈಗ ಮದಿರೆಯ ರಾಜ್ಯ ಸ್ಥಾಪಿಸಿಬಿಟ್ಟಿದ್ದಾರೆ!

ಕಸಬಾ ಕನ್ನಡ ಶಾಲೆಗೆ ಹೋದರೆ ದನುವಿನ ದೊಡ್ಡಿಗೆ ಹೋದಂತೆ ಎನಿಸುತ್ತದೆ ಎಲ್ಲಿ ನೋಡಿದಲ್ಲಿ ಹೊಂಡಗಳು! ಈ ಹೊಂಡಗಳ ಮೂಲಕ ಕಸ ಗುಡಿಸಲಿಕ್ಕೆ ಆಗುವದಿಲ್ಲವಂತೆ! ಶಾಲೆಗೆ ಹತ್ತಿ ಹೋಗುವ ಮೆಟ್ಟಿಲುಗಳೂ ತೀರ ಹಾಳಾಗಿವೆ. ಇದನ್ನೆಲ್ಲ ಸರಿಪಡಿಸುವದು ಶಾಲೆಯನ್ನು ಒಪ್ಪಿಸಿಕೊಂಡಿದ್ದ ಶಾಲಾ ಬೋರ್ಡಿನವರದೆಂದು ನಗರ ಸಭೆಯವರ ವಾದ! ಶಾಲೆಯ ಇಮಾರತಿನ ಮಾಲಕೀ ನಗರ ಸಭೆಗೆ ಒಪ್ಪಿದ್ದಾದ್ದರಿಂದ ನಗರ ಸಭೆಯೇ ಜೀರ್ಣೋದ್ಧಾರ ಮಾಡಿಸತಕ್ಕದ್ದೆಂದು ಬೋರ್ಡಿನವರ ಪ್ರತಿವಾದ!! ಈ ವಾದ-ಪ್ರತಿವಾದಗಳ ಮಧ್ಯದಲ್ಲಿ ವಿದ್ಯಾರ್ಥಿಗಳಿಗೆ ಮಾತ್ರ ಹೇಳಲಾಗದಷ್ಟು ಕಷ್ಟವಾಗುತ್ತಿದೆ. ಮೇಲಧಿಕಾರಿಗಳಾದರೂ ಮುಂದಾಗಿ ಈ ಕಷ್ಟ ಪರಿಹರಿಸಬೇಕಾಗಿ ಸೂಚನೆಯಿದೆ.

ಹಳದೀಪುರ-ಹೆಬ್ಬಾನಕೇರಿ ಮಾರ್ಗದೊಳಗಿನ ಸಂಕದ ಮೇಲಿಂದ ತಿರುಗಾಡುವವರು ಜೀವದ ಆಸೆ ಇಳಿಸಿಕೊಂಡೇ ತಿರುಗಾಡುವದೊಳಿತು. ಬೋರ್ಡಿನ ಓವರ್‌ಸೀಯರರು ಅದಕ್ಕೆ ೪-೮ ಫೊರಾಟಿಗಳನ್ನು ಹಾಕಿಸಿ ದುರುಸ್ತಿ (?) ಮಾಡಿಸಿದ್ದರಂತೆ. ಆ ಫೊರಾಟಿಗಳು ಎಲ್ಲಿ ಹೋದವೋ ಏನೋ! ಜನರು ಸಂಕಕ್ಕೆ ಹಾಕಿದ ಹಲಗೆ ಮುಂತಾದವುಗಳನ್ನು ಒಯ್ದುಕೊಂಡು ಹೋಗುತ್ತಾರೆಂದು ಈ ಓವರ್‌ಸೀಯರರು ಬೋರ್ಡಿಗೆ ಸುಳ್ಳು-ಸುಳ್ಳೇ ವರದಿ ಕಳಿಸಿರುತ್ತಾರೆಂದು ವಾರ್ತೆಯಿದೆ. ಇಷ್ಟು ಸಣ್ಣ ಸಂಕವನ್ನು ಭದ್ರವಾಗಿ ಮಾಡಿಸಲಾಗದಿದ್ದರೆ ಬೋರ್ಡಿನ ಸದಸ್ಯರು ಬೋರ್ಡಿಗೆ ಹೋಗುವದಾದರೂ ಯಾಕೆ? ಭತ್ತೆಯ ಹಣ ತಿನ್ನಲಿಕ್ಕೋ?

ಭಟಕಳ— (ತಾ. ೨೧-೬-೪೬) ಊರಲ್ಲಿ "ಬಿಚ್ಚು" ಜುಗಾರಿನ ಹಾವಳಿ ಹೆಚ್ಚಾಗಿದೆ. ಅಧಿಕಾರಿಗಳು ಈ ಮರುಳನ್ನು ಈಗ ಬಾಲ್ಯಾವಸ್ಥೆಯಲ್ಲೇ ನಿರ್ಮೂಲಿಸದಿದ್ದರೆ ಮುಂದೆ ಅದರ ಉಚ್ಚಾಟನೆ ಮಾಡುವದು ಅಸಾಧ್ಯವಾಗಿ ಕೂಡ್ರುವದು ಖಂಡಿತ.

ರಾಜಂಗಣದಿಂದ ಚಮಗಾರಕೇರಿ ವರೆಗಿನ ಮಾರ್ಗ ಬಹಳ ಹಾಳಾಗಿದೆ. ಅಲ್ಲಲ್ಲಿ ಕೊರಕಲುಗಳಾಗಿವೆ; ಕೆಲವೆಡೆ ಮಣ್ಣು ರಾಡಿಯಾಗಿ ಕಾಲು ಹುಗಿದು ಹೋಗುತ್ತದೆ! ತ್ವರ್ಯವೇ ಅದರ ದುರುಸ್ತಿಯಾಗಬೇಕು.

ಕಾರವಾರ— (ತಾ. ೨೧-೬-೪೬) ಇಲ್ಲಿಯ ಒಂದು ಅಂಗಡಿಯಲ್ಲಿ ರೂ. ೭|| ನಿಯಂತ್ರಿತ ಬೆಲೆಯುಳ್ಳ "ಡಾಲ್ಡಾ" ಎಣ್ಣೆಯ ಡಬ್ಬಿಯೊಂದನ್ನು ರೂ. ೧೦||ಗೆ ಮಾರಿದ ಸುದ್ದಿಯೂ, ಮುಂದೆ ಜಿಲ್ಹಾಧಿಪರ ಶಿಪಾಯಿಯೊಬ್ಬನು ಡಬ್ಬಿ ಬೇಡಿದಾಗ ಅಂಗಡಿಕಾರನು ಇಲ್ಲೆಂದು ಹೇಳಿದ ಸುದ್ದಿಯೂ ಜಿಲ್ಹಾಧಿಪರ ಕಿವಿಗೆ ಮುಟ್ಟಿ, ಜಿಲ್ಹಾಧಿಪರೇ ಸ್ವತಃ ಆ ಅಂಗಡಿಗೆ ಬಂದು "ಡಾಲ್ಡಾ" ಡಬ್ಬಿಯುಂಟೇನೆಂದು ಚೌಕಶಿ ಮಾಡಿದರು, ಅವರಿಗೂ ಆ ಅಂಗಡಿಕಾರನು ಡಬ್ಬಿ ಶಿಲ್ಕು ಇಲ್ಲೆಂದು ಹೇಳಿದನಂತೆ! ಜಿಲ್ಹಾಧಿಪರು ಕೂಡಲೇ ಅಂಗಡಿಯ ಝಡ್ತಿ ಮಾಡಿಸಿ ಅಂಗಡಿಯಲ್ಲಿದ್ದ ಡಾಲ್ಡಾ ಡಬ್ಬಿಗಳನ್ನೆಲ್ಲ ಜಪ್ತ ಮಾಡಿಸಿಟ್ಟರು. ರೀತಿಯಂತೆ ಅಂಗಡಿಯವನ ಮೇಲೆ ಈಗ ಖಟ್ಲೆಯಾಗುವದು.

ಕಳೆದ ತಾ. ೨೧ನೇ ರಾತ್ರಿ ಮಾಜಾಳಿಯ ಅಬಕಾರಿ ಸಬ್-ಇನ್ಸಪೆಕ್ಟರರು ತಮ್ಮ ಹಸ್ತಕರೊಂದಿಗೆ ಗೋವಾ ಗಡಿಯ ಹತ್ತರ ಸಂಚರಿಸುತ್ತಿದ್ದಾಗ ೧೦-೧೨ ಜನರು ಮಾಜಾಳಿಯ ರಾ|| ಮಾಧವ ಶೆಟ್ಟಿಯವರ ಅಂಗಡಿಯ ಹಿಂಬಾಗಿಲಿಂದ ಬಟ್ಟೆಯ ಗಂಟುಗಳನ್ನು ಹೊರಗೊಯ್ಯುತ್ತಿದ್ದುದು ಅವರ ಕಣ್ಣಿಗೆ ಬಿತ್ತು. ಕೂಡಲೆ ಸಬ್-ಇನ್ಸಪೆಕ್ಟರರು ಆ ಕಳ್ಳರನ್ನು (ಕಳ್ಳತನದಿಂದ ಜವಳಿಯನ್ನು ಕಳ್ಳದಾರಿಯಲ್ಲಿ ಗೋವೆಗೆ ಒಯ್ಯುವವರನ್ನು) ಹಿಡಿಯಲು ಸಿದ್ಧರಾದರು. ಆದರೆ ಆ ಕಳ್ಳರೇನು ಸಾಮಾನ್ಯರೇ! ಹಾದಿಯಲ್ಲಿ ಹಾಗೂ ಹಾದಿಯ ಸುತ್ತುಮುತ್ತು ಯಾರೂ ಸುಳಿದಾಡುವದಿಲ್ಲೆಂಬ ಖಾತ್ರಿ ಮಾಡಿಕೊಂಡು ಅವರು ಮುಂದೆ ಸಾಗುತ್ತಾರೆ. ಅದರಂತೆ ಅವರ ಮನುಷ್ಯನು ಹಾದಿಯಲ್ಲಿ ಯಾರಾದರೂ ಇದ್ದಾರೇನೆಂದು ನೋಡಿಕೊಳ್ಳಲು ಬೆಟರಿಯನ್ನು ಹೊತ್ತಿಸಿ ತಿರುಗಿಸಿದನಂತೆ. ಆಗ ಸಬ್-ಇನ್ಸಪೆಕ್ಟರರೂ ಅವರ ಜನರೂ ಆ ಕಳ್ಳರ ಕಣ್ಣಿಗೆ ಬಿದ್ದರು ಕೂಡಲೇ ಕಳ್ಳರು ಹೊರಹಾಕಿದ ಜವಳಿ ಗಂಟುಗಳನ್ನು ಪುನಃ ಅಂಗಡಿಯೊಳಗೆ ಒಯ್ದು ಇಟ್ಟರು; ಮತ್ತು ಅಂಗಡಿಗೆ ಬೀಗ ಹಾಕಿಬಿಟ್ಟರು ಆದರೆ ಸಬ್‌ಇನ್ಸಪೆಕ್ಟರರು ಅವರಿಗೆ ಬಿಡಲಿಲ್ಲ. ಕೂಡಲೇ ಅಂಗಡಿಗೆ ಪಹರ ಮಾಡಿಟ್ಟರು ಮತ್ತು ಕಾರವಾರದಿಂದ ಮೇಲಧಿಕಾರಿಗಳನ್ನೂ ಪೋಲೀಸ ಅಧಿಕಾರಿಗಳನ್ನೂ ಕರೆಸಿ ಆ ಅಂಗಡಿಯ ಝಡ್ತಿ ಮಾಡಿಸಿದರು. ರಾ|| ಮಾಧವ ಶೆಟ್ಟರ ಸ್ಟೇಶನರಿ ಅಂಗಡಿಯಲ್ಲಿ (ಅವರದೊಂದು ಜವಳಿ ಅಂಗಡಿಯೂ ಉಂಟು.) ಸುಮಾರು ರೂ. ೩೦೦೦ ಬೆಲೆ ಬಾಳುವ ಧೋತರ ವಗೈರೆ ಜಿನಸು ಬಟ್ಟೆಯೂ ೬-೮ ಕೊಡೆಗಳೂ ಅಮಾನತ ಬಂದು ಬಿದ್ದಂತಹವು ಸಿಕ್ಕವಂತೆ. ಅಧಿಕಾರಿಗಳು ಅವನ್ನೆಲ್ಲ ಜಪ್ತ ಮಾಡಿಟ್ಟು ಪ್ರಕರಣ ನಡಿಸಿದ್ದಾರೆ

NEW STOCKS of the following have now arrived :—

SCHOOL BOOKS
LIBRARY BOOKS
DICTIONARIES
ATLASES, MAPS etc.

Address your orders and inquiries to:—
The New Supply Agency, Kumta.

ದಿ ಕೊಮರ್ಶಿಯಲ್ ಕೊರ್ಪೊರೇಶನ್,
ಕುಮಟಾ.
ನಮ್ಮಲ್ಲಿ [illegible] ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತವೆ.
ವಿ. ಎಸ್. [illegible],
ಮೋಟರ ಸ್ಟೆಂಡ, ಕುಮಟಾ.

ಕೇಳಿದ್ದು, ಕಂಡದ್ದು.

(ಜಿಲ್ಲಾ-ಸಂಚಾರಿಯು ಬರೆದುದು.)

ಮುಂಬಯಿ ಸರಕಾರದ ಆಹಾರ ಮಂತ್ರಿಗಳಾದ ಮಾನ್ಯ ಟನಕರರಾವ ದೇಸಾಯಿಯವರು ಇದೇ ಬರುವ ಬುಧವಾರ ತಾ. ೨೬ನೇಗೆ ನಮ್ಮಾ ಜಿಲ್ಲೆಯನ್ನು ಸಂದರ್ಶಿಸಲಿದ್ದಾರೆ. ಅವರ ಸಂಚಾರದ ಕ್ರಮ ಮುಂದಿನಂತಿದೆ: ಮಂಗಳವಾರ ಸಂಜೆ ೬ಕ್ಕೆ ಹುಬ್ಬಳ್ಳಿಯಿಂದ ಅವರು ಶಿರ್ಸಿಗೆ ತಲ್ಪುತ್ತಾರೆ. ಆ ರಾತ್ರಿ ಯಾವದೇ ಕಾರ್ಯಕ್ರಮವಿಲ್ಲ. ಬುಧವಾರ ಮುಂಜಾನೆ ೮ರಿಂದ, ೮॥ಯ ವರೆಗೆ ಸರಕಾರಿ ಧಾನ್ಯದ ಉಗ್ರಾಣಗಳನ್ನೂ, ಸಿಧಾ ಕಚೇರಿಯನ್ನೂ ಸಂದರ್ಶಿಸುವರು; ೮॥ಯಿಂದ ೧೧ರ ವರೆಗೆ ಶಿರ್ಸಿ ತಾಲೂಕ ಕಚೇರಿಯಲ್ಲಿ ತಾಲೂಕಿನ ಸಿಧಾ ಅಂಗಡಿಕಾರರ ಸಮಿತಿಯೊಡನೆ ವಿಚಾರ ವಿನಿಮಯ ಮಾಡುವರು; ಮತ್ತು ಹಾಗೆಯೇ ಹೊರಟು ಮಧ್ಯಾಹ್ನ ೧೨॥ಗೆ ನೆಟ್ಟಗೆ ಹೊನ್ನಾವರಕ್ಕೆ ತಲ್ಪುವರು; ೧ ಘಂಟೆಗೆ ಊಟ ಮಾಡುವರು ಮತ್ತು ೨ರಿಂದ ೪ರ ವರೆಗೆ ಉಗ್ರಾಣಗಳನ್ನೂ, ಸಿಧಾ ಕಚೇರಿಯನ್ನೂ, ಉದ್ಯೋಗ ಶಾಲೆಯನ್ನೂ ಸಂದರ್ಶಿಸುವರು; ಮತ್ತು ೪ಕ್ಕೆ ಹೊನ್ನಾವರ ಬಿಟ್ಟು ೫ಕ್ಕೆ ಗೋಕರ್ಣಕ್ಕೆ ತಲ್ಪುವರು; (ಗೋಕರ್ಣದಲ್ಲಿ ಏನು ಮಾಡುವರು ಎಂಬುದು ತಿಳಿದಿಲ್ಲ; ಬಹುಶಃ ರಾತ್ರಿ ಗೋಪಿಯವರ ಆಗ್ರಹವಾದ್ದರಿಂದ ಅವರು ಗೋಕರ್ಣಕ್ಕೆ ಹೋಗುತ್ತಿರಬಹುದೆಂದು ತರ್ಕವುಂಟು); ೭॥ಗೆ ಗೋಕರ್ಣದಿಂದ ಹೊರಟು ರಾತ್ರಿ ೮ಕ್ಕೆ ಕಾರವಾರಕ್ಕೆ ತಲ್ಪುತ್ತಾರೆ. ಮತ್ತು ಮರುದಿನ ಮುಂಜಾನೆ ೮ಕ್ಕೆ ಕಾರವಾರದಿಂದ ಹೊರಟು ಧಾರವಾಡ ಮಾರ್ಗವಾಗಿ ಬೆಳಗಾಂವಿಗೆ ಹೋಗುತ್ತಾರೆ. ಕಾರವಾರದಲ್ಲೂ ಅವರ ವಿಶೇಷ ಕಾರ್ಯಕ್ರಮವಿದ್ದದ್ದು ಕಾಣುವದಿಲ್ಲ.

⁂

ಗಿರಣಿಗಳಿಂದ ಅಕ್ಕಿ ಮಾಡಿಸಿಕೊಳ್ಳುವಾಗ ಭತ್ತದ ನೂರು ಶೇರಕ್ಕೆ ಇಂತಿಷ್ಟು ಅಕ್ಕಿ ಕೊಡಬೇಕೆಂದು ಕರಾರು ಹಾಕುತ್ತಾರೆ. ಬೆಳ್ತಿಗೆ ಅಕ್ಕಿಗೆ ಪ್ರಮಾಣ ಬೇರೆ; ಕುಚಗಿ ಅಕ್ಕಿಗೆ ಪ್ರಮಾಣ ಬೇರೆ. ಕುಚಗಿ ಅಕ್ಕಿಯಲ್ಲೂ ಪುನಃ ಕಗ್ಗನ ಅಕ್ಕಿಗೆ ಒಂದು ಪ್ರಮಾಣವಾದರೆ ಹಳಗನ ಅಕ್ಕಿಗೆ ಇನ್ನೊಂದು ಪ್ರಮಾಣವುಂಟು. ಈ ಪ್ರಮಾಣದಿಂದ ಅಕ್ಕಿ ತಯಾರಾಗುತ್ತದೆಂಬ ತಿಳುವಳಿಕೆಯಿಂದಲೇ ಈ ಕರಾರು ಮಾಡಲಾಗುತ್ತಿದೆ. ಹೊರತು ಇಂತಿಷ್ಟು ಅಕ್ಕಿ ನಮಗೆ ಕೊಟ್ಟರಾಯಿತು; ಉಳಿದ ಅಕ್ಕಿಯನ್ನು ಗಿರಣಿಯವರಿಟ್ಟುಕೊಂಡು ಸ್ವೇಚ್ಛೆಯಂತೆ ಅದರ ವಿಲೆ ಮಾಡಬಹುದು; ಎಂಬ ಅಭಿಪ್ರಾಯದಿಂದಲ್ಲ. ಈ ಪ್ರಮಾಣವನ್ನು ಠರಾಯಿಸುವಾಗ ಹೊಣೆಗಾರ ಅಧಿಕಾರಿಗಳು ಗಿರಣಿಯಲ್ಲಿ ಸ್ವತಃ ತಮ್ಮ ಮುಂದೆ ಕೆಲವೊಂದು ಭತ್ತದ ಅಕ್ಕಿಯನ್ನು ಮಾಡಿಸಿ ನೋಡಿ ಈ ಪ್ರಮಾಣವನ್ನು ಠರಾಯಿಸಿದ್ದುಂಟು. ಹೀಗೆ ಪ್ರಯೋಗಾರ್ಥ ಅಕ್ಕಿ ಮಾಡಿಸಿ ಪ್ರಮಾಣ ಠರಾಯಿಸುವಲ್ಲಿ ಕಳ್ಳತನ ಇಲ್ಲವೆ ಭ್ರಷ್ಟಾಚಾರ ಮಾಡಲಿಕ್ಕೆ ಅವಕಾಶ ಸಿಗುತ್ತಿದೆ. ಗಿರಣಿಯವರು ಅಕ್ಕಿಗೆ ಸ್ವಲ್ಪ ಹೆಚ್ಚಿಗೆ ಪಾಲೀಶ ಕೊಟ್ಟರೆ ಅಕ್ಕಿಯ ಪ್ರಮಾಣ ಕಡಿಮೆಯಾಗುತ್ತದೆ. ನುಚ್ಚು ಹೆಚ್ಚಿಗೆಯಾಗುವಂತೆ ತಿರುಗಣಿ-ಮೊಳೆ (ಸ್ಕ್ರೂ) ತಿರುಗಿಸಿಟ್ಟು, ಆ ನುಚ್ಚನ್ನು ಉಮ್ಮಿಯ ಸಂಗಡ ಹೊರಗೆ ಚೆಲ್ಲಿಸಿಬಿಟ್ಟರೆ (ಹಿಂದಿನಿಂದ ಕೂಲಿಯಾಳುಗಳು ಆ ಉಮ್ಮಿಯನ್ನು ಗೇರಿ ಎಲ್ಲ ನುಚ್ಚನ್ನು ಬೇರ್ಪಡಿಸಿ ಒಯ್ಯುತ್ತಿದ್ದರೂ ಅದನ್ನು ಅಲ್ಲಿ ನೋಡುವದಿಲ್ಲ!) ಅಕ್ಕಿಯ ಪ್ರಮಾಣ ಕಡಿಮೆ ಬರುತ್ತದೆ. ಅಧಿಕಾರಿಗಳ ಕಣ್ಣಲ್ಲಿ ಹೀಗೆ ಧೂಳು ಹಾಕಿ, ಅಕ್ಕಿಯ ಪ್ರಮಾಣ ತಗ್ಗಿಸಿಕೊಳ್ಳುವದು ಗಿರಣಿಯವರ ಕಳ್ಳತನ. ಗಿರಣಿಯವರಿಂದ ಏನಾದರೂ ಪ್ರಯೋಜನ — ಅದು ಹಣವೇ ಇರಬೇಕೆಂದಿಲ್ಲ; ಮೇಲಿಂದ ಮೇಲೆ ಬಗೆಬಗೆಯ ಪೇಯ-ಪಕ್ವಾನ್ನಗಳ ಮೇಜವಾನಿಗಳನ್ನು ಮಾಡಿದರೂ ಆಗುತ್ತದೆ ಅಥವಾ ಬೇಕಾದ ದುರ್ಲಭ ವಸ್ತುಗಳನ್ನು ಪೂರೈಸಿದರೂ ನಡೆಯುತ್ತದೆ. — ಪಡಕೊಳ್ಳುವ ಇಚ್ಛೆಯುಳ್ಳ ಇಲ್ಲವೆ ಅಭ್ಯಾಸವುಳ್ಳ ಅಧಿಕಾರಿಗಳು ಈ ಪ್ರಮಾಣ ಠರಾಯಿಸಿ ಕೊಡುವವರಾದರೆ ಅವರು ಒಂದಿಲ್ಲೊಂದು ನೆವ ಮಾಡಿ ಪ್ರಮಾಣವನ್ನು ಕಡಿಮೆ ಠರಾಯಿಸಿ ಕೊಡಬಹುದು. ಇದಕ್ಕೆ ನಾನು ಭ್ರಷ್ಟಾಚಾರವೆನ್ನುತ್ತೇನೆ. ಕುಮಟಾ ತಾಲೂಕಿನ ಒಂದು ಗಿರಣಿಯಲ್ಲಿ ಕಗ್ಗನ ಅಕ್ಕಿಯ ಪ್ರಮಾಣ ನಿರ್ದಿಷ್ಟ ಮಾಡಿಕೊಡುವಾಗ ಈ ಸಲ ನೂರಕ್ಕೆ ೫೮ರಷ್ಟು ಅಕ್ಕಿ ಹೊರಟಿತ್ತಂತೆ. ಹೋದ ವರುಷ ಯಾಕೋ ಏನೋ ನೂರಕ್ಕೆ ೫೬ರಂತೆ ಅಕ್ಕಿಯ ಪ್ರಮಾಣ ಹಾಕಿಕೊಟ್ಟಿತ್ತು. ಅದನ್ನು ಒಮ್ಮೆಲೇ ೫೮ಕ್ಕೇರಿಸುವದು ಹೇಗೆಂದು ಪ್ರಶ್ನೆಯುಂಟಾಯಿತು! "ಭತ್ತ ಅಳೆಯುವಾಗ ನಾವೆಲ್ಲಾದರೂ ತಪ್ಪಿರಬಹುದೇ!" ಎಂದು ಅಧಿಕಾರಿಗಳೂ ಗಿರಣಿಯವರೂ ಸಾಶಂಕರಾಗಿದ್ದರಂತೆ! ಮತ್ತು ಕೊನೆಗೆ ೫೮ರಂತೆ ಅಕ್ಕಿ ಹೊರಟಿತೆಂದು ಪಂಚನಾಮೆ ಮಾಡಿಸಿ—ಇಂತಹ ಪಂಚನಾಮೆ ಮಾಡಿಕೊಡಲಿಕ್ಕೆ ಕೂಡಿಸಿದ ಪಂಚರು ಬಹುಶಃ ಹೌದು-ಬಸವಣ್ಣನವರೇ ಇರುತ್ತಾರೆಂಬುದು ಓದುಗರಿಗೆ ಗೊತ್ತಿರಬೇಕು! — ಹಾಗೆಯೇ ಅಕ್ಕಿಯ ಪ್ರಮಾಣ ನಿರ್ದಿಷ್ಟ ಮಾಡಿಕೊಟ್ಟರು! ಅದರಿಂದ ಈ ಗಿರಣಿಯವರಿಗೆ ಪ್ರತಿ ೧೦೦ ಚೀಲ ಕಗ್ಗನ ಭತ್ತದ ಹಿಂದೆ ೧೨ ಚೀಲ ಅಕ್ಕಿ ಲಾಭವಾಗತೊಡಗಿತು; ಮತ್ತು ಬೇಕಾದಂತೆ ಕಳ್ಳ ಪೇಟೆ ಮಾಡಲು ಅನುಕೂಲವಾಯಿತು! ಇವರೊಳಗಿಂದ ಎಷ್ಟು ಅಕ್ಕಿ ಕಳ್ಳತನದಿಂದ ಗೋವೆಗೆ ರಫ್ತಾಯಿತೋ ಶಿವನೇ ಬಲ್ಲ!!

⁂

ಎಷ್ಟೋ ಗಿರಣಿಗಳಿಗೆ ಹಿಂದೆ ಬೇಸಿಗೆಯಲ್ಲೇ ಭತ್ತ ಅಳೆದುಕೊಟ್ಟಿದ್ದುಂಟು. ಅವರು ಮಾಡಿಟ್ಟ ಅಕ್ಕಿಯು ಇಲ್ಲವೆ ಮಾಡಿಸಬಹುದಾದ ಅಕ್ಕಿಯು ಈ ಮಳೆಗಾಲದಲ್ಲಿ ಉಬ್ಬಿ ನೂರಕ್ಕೆ ೨-೩ರಷ್ಟಾದರೂ ಹೆಚ್ಚಿಗೆಯಾಗುತ್ತದೆ ಆದರೆ ಗಿರಣಿಯವರು ಒಪ್ಪಿಸಬೇಕಾದ ಅಕ್ಕಿಯ ಪ್ರಮಾಣ ಹಿಂದಿನದೇ! ಅಕ್ಕಿ ಉಬ್ಬುವದರಿಂದ ಉಳಿತಾಯವಾಗುವ ಅಕ್ಕಿ ಗಿರಣಿಯವರಿಗೆ ಸಿಗುತ್ತದೆ! ಹೀಗೆಲ್ಲ ಅಕ್ಕಿ ಉಳಿದು ಲಾಭವಾಗುತ್ತಿರುವದರಿಂದಲೇ ಗಿರಣಿಯವರು ಬಹಳ ಕೊಬ್ಬಿದ್ದಾರೆ! ಅವರ ಆ "ಮಿಜಾಸಿ" ನೋಡಿದರೆ ಜನಸಾಮಾನ್ಯರು ಬೆಪ್ಪಾಗಿ ಹೋಗುತ್ತಾರೆ!

⁂

ಕೈಯ್ಯಿಂದ ಭತ್ತ ಕುಟ್ಟಿ ಅಕ್ಕಿ ಮಾಡಿಕೊಡುವದಾದಲ್ಲಿ ಗಿರಣಿಯವರಿಗಿಂತ ನೂರಕ್ಕೆ ೨ ಇಲ್ಲವೆ ೩ರಷ್ಟು ಹೆಚ್ಚಿಗೆ ಪ್ರಮಾಣದಿಂದ ಖಾತ್ರಿ ಅಕ್ಕಿ ಮಾಡಿಸಿ ಕೊಡಲು ಸಿದ್ಧರಿದ್ದೇವೆಂದು ಹಲವರನ್ನವರನ್ನು ನಾನು ಕೇಳಿದ್ದೇನೆ. ಸರಕಾರದವರು ಅವರಿಗೇಕೆ ಮೊದಲಿಗೆ ಭತ್ತ ಕೊಡಬಾರದು? ಭ್ರಷ್ಟಾಚಾರಕ್ಕೆ ಎಡೆ ಸಿಗಬಾರದೆಂದೂ, ಯಾರೊಬ್ಬರಿಗೆ ಅವಾಸ್ತವ ಉಪಕಾರ (patronage) ಮಾಡಲು ಅಧಿಕಾರಸ್ಥರಿಗೆ ಇಂಬು ಸಿಗಬಾರದೆಂದೂ ಮ್ಯುನಿಸಿಪಾಲಿಟಿ-ಲೋಕಲ್ ಬೋರ್ಡುಗಳಲ್ಲೂ, ಸರಕಾರಿ ಇಲಾಖೆಗಳಲ್ಲೂ "ಟೆಂಡರ" ಬೇಡುವ ಪದ್ಧತಿಯನ್ನು ಸರಕಾರದವರು ಅಂಗೀಕರಿಸಿದ್ದುಂಟು. ಭತ್ತದ ಅಕ್ಕಿ ತಯಾರಿಸುವಾಗಲೂ ಆ ಪದ್ಧತಿಯನ್ನು ಯಾಕೆ ಅನುಸರಿಸಬಾರದು? ಹೆಚ್ಚಿಗೆ ಪ್ರಮಾಣದಿಂದ ಅಕ್ಕಿ ತಯಾರಿಸಿಕೊಡಲೊಪ್ಪುವವರಿಗೆ — ಅವರು ಬೇಕಾದರೆ ಗಿರಣಿಯಲ್ಲಿ ಅಕ್ಕಿ ಮಾಡಲಿ, ಕೈಯ್ಯಿಂದ ಕುಟ್ಟಿ ತಯಾರಿಸಲಿ ಅಥವಾ ಬೇರೆ ಯಾವದೇ ಕ್ರಮದಿಂದ ತಯಾರಿಸಿ ಕೊಡಲಿ; ನಮಗೆ ಅವರ ವಿಚಾರ ಬೇಡ. — ಟೆಂಡರ-ಪದ್ಧತಿಯಿಂದ ಭತ್ತ ಮೊದಲಿಗೆ ಕೊಟ್ಟರೆ ಸರಕಾರಕ್ಕೆ ಎಷ್ಟೋ ಅಕ್ಕಿ ಹೆಚ್ಚಿಗೆ ಸಿಗುವಂತಾದೀತು. ಆ ಮಾನದಿಂದ ಅಕ್ಕಿಯ "ಪಡತರ" ಬೆಲೆ ಕಡಿಮೆ ಬೀಳುವಂತಾದೀತು; ಹಾಗೂ ಅದನ್ನು ಅಗ್ಗದರದಿಂದ ಮಾರಲಿಕ್ಕೂ ಬರುವಂತಾದೀತು. ಈ ಸಲದ ಭತ್ತದ ಮಾತಂತೂ ಈಗ ಮಿಂಚಿಹೋಯಿತು. ಮುಂದಿನ ಹಂಗಾಮಿನಲ್ಲಾದರೂ ಟೆಂಡರ-ಪದ್ಧತಿ ಅಮಲಿನಲ್ಲಿ ತರಬಹುದಲ್ಲವೇ? ನೂರಾರು, ಸಾವಿರಾರು ಟೆಂಡರುಗಳು ಬಂದಲ್ಲಿ ಅವುಗಳಲ್ಲಿ ಯಾವವನ್ನು ಸ್ವೀಕರಿಸಬೇಕು, ಯಾವವನ್ನು ಬಿಡಬೇಕೆಂದು ತಿಳಿಯದೆ ಗೊಂದಲವಾದೀತೆಂದು ಬೆದರುವದು ಬೇಡ. ಸರಕಾರದವರು "ಟ್ರೆಜರಿ ಬಿಲ್ಲ" ಹೊರಡಿಸಿದಾಗ ಯಾವ ಪದ್ಧತಿಯಿಂದ ಟೆಂಡರಗಳನ್ನು ಸ್ವೀಕರಿಸುತ್ತಾರೋ ಅದೇ ಪದ್ಧತಿಯನ್ನು [illegible] ಇಲ್ಲಿ ಅನುಸರಿಸಿದರೆ ಏನೂ ಗೊಂದಲವಾಗುವಂತಿಲ್ಲ.

⁂

ಕೈಯ್ಯಿಂದ ಭತ್ತ ಕುಟ್ಟಿ ಅಕ್ಕಿ ತಯಾರಿಸುವವರಿಗೆ ಉತ್ತೇಜನ ಕೊಡಲು ಭತ್ತದ ಹೊರತಾಗಿ ಅಕ್ಕಿಯನ್ನು ಖರೀದಿಸುವ ನಿರ್ಣಯ ಸರಕಾರದವರು ಮಾಡಿದ್ದು (ಹೋದ ವಾರದ "ವೃತ್ತ"ದಲ್ಲಿ ಪ್ರಕಟವಾದ ಜಿಲ್ಲಾಧಿಕಾರಿಯ ಪ್ರಕಟನೆ ನೋಡಿರಿ) ಕೇಳಿ-ಕಂಡು ಎಷ್ಟೋ ಜನರು ನಗುತ್ತಾರೆ. ಕೈ-ಮೊರಗೂಲಿಯ ಉದ್ದಿಮೆಗೆ ಉತ್ತೇಜನ ಕೊಡಲು ಸರಕಾರದವರು ಖರೀದಿಸಿಟ್ಟ ಭತ್ತ ಕೊಡುವ ಮಾತಿಲ್ಲ! ಭತ್ತದ ಬದಲು ಅಕ್ಕಿ ಖರೀದಿಸುವದಾಗಿಯೂ ಸರಕಾರದವರು ಹೇಳುವದಿಲ್ಲ! ಭತ್ತವನ್ನೇ ಕೊಡಬೇಕೆಂದು ಒತ್ತಾಯದಿಂದ ಹಿಂದೆ ಭತ್ತ ವಸೂಲ ಮಾಡಿ, ರೈತರು ಯಾವದೊಂದು ಉಪಾಯದಿಂದ ಇಲ್ಲವೆ ನೆವ ಹೇಳಿ ಕಾಯ್ದಿಟ್ಟ ಭತ್ತದಿಂದ ತಯಾರಿಸಿದ ಅಕ್ಕಿಯನ್ನು ಈಗ ಖರೀದಿಸಿ ಬಿಡುವ ಕ್ರಮ ಕೈಕೊಂಡರೆ ಕೈ-ಮೊರಗೂಲಿಯ ವ್ಯವಸಾಯಕ್ಕೆ ಹೇಗೆ ಉತ್ತೇಜನ ಸಿಗುತ್ತದೋ ತಿಳಿಯದೆಂದು ಜನರು ಉಪಹಾಸ ಮಾಡುತ್ತಾರೆ. ಜಿಲ್ಲಾಧಿಕಾರಿಗಳು ಇನ್ನೊಂದು ಪ್ರಕಟನೆ ಹೊರಡಿಸಿ ಅವರ ಶಂಕೆಯ ಸಮಾಧಾನ ಮಾಡುವದುಚಿತ.

⁂

ನಮ್ಮಲ್ಲಿ (ಹೋಲಸೇಲ) ಹಾಗೂ (ರಿಟೇಲ) ಭಾವದ

ಡಿನೇಚರ್ಡ ಸ್ಪಿರಿಟ್

ಮಾರಲಿಕ್ಕೆ ಸಿಗುತ್ತದೆ.

ವಿ. ಎಮ್. ಮಿರ್ಜಾನಕರ,
ಡಾಯಸನ್ಸ್, ಮೋಟರ ಸ್ಟ್ಯಾಂಡ, ಕುಮಟಾ.

ನೋಟೀಸು.

ಉತ್ತರ ಕಾನಡಾ ಜಿಲ್ಲಾ ಎಗ್ಜಿಕ್ಯುಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ:—

ಕೆಳಗೆ ತೋರಿಸಿದ ಈ ಜಿಲ್ಲೆಯೊಳಗಿನ ಕಾರಿಗಳನ್ನು ಮಾವರ ಬೋಟ ಸರ್ವಿಸ್ಸಿನಿಂದ ನಡಿಸುವ ಮತ್ತು ಕಾರಿ-ಹಾಸಲು ವಸೂಲ ಮಾಡುವ ಹಕ್ಕಿನ ಬಗ್ಗೆ, ಮೂರರಿಂದ ಐದು ವರುಷಗಳ ಬಾಬತು ಮಕ್ತಾಗಳು ಕೆಳಗೆ ತೋರಿಸಿದ ತಾರೀಖಿಗೆ, ಕೆಳಗೆ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾಹ್ನ ಮೂರು ಘಂಟೆಗೆ ಬಹಿರಂಗವಾಗಿ ಲಿಲಾವು ಮಾಡಲ್ಪಡುವವು. ಸವಾಲು ಮಾಡುವ ಇಚ್ಛೆಯುಳ್ಳವರು ಎರಡು ಜಬೂತಿ ಸಾವಕಾರ ಜಾಮೀನುಗಳನ್ನು ಪೂರೈಸುವ ಯೋಗ್ಯ ವ್ಯವಸ್ಥೆ ಮಾಡುವ ಬಾಬತು ಬಗ್ಗೆ ಮೆ॥ ಎ. ಇಂ. ಸಾಹೇಬರವರಿಗೆ ಲಿಲಾವಿನ ದಿವಸ ಖಾತ್ರಿ ಮಾಡಿಕೊಟ್ಟಲ್ಲಿ ಮಾತ್ರ ಅವರಿಗೆ ಸವಾಲು ಮಾಡಲಿಕ್ಕೆ ಕೊಡಲ್ಪಡುವದು. ಯಾರ ಸವಾಲು ಮಂಜೂರ ಆಗುತ್ತದೋ ಅವರು ಆ ಕಾರಿಯ ಬಗ್ಗೆ ಮುಂದಿನ ಖಾತೆಯಿಂದ ಪಾಸ ಆದ ಎರಡು ಜಬೂತಿ ಜಾಮೀನುಗಳನ್ನು ಲಿಲಾವ ತಾರೀಖಿನಿಂದ ಎರಡು ತಿಂಗಳೊಳಗೆ ತಂದು ಮೆ॥ ಎ. ಇಂ. ಸಾಹೇಬರಿಗೆ ತೋರಿಸಬೇಕು. ಬಾಕಿ ಶರ್ತುಗಳನ್ನು ಆಫೀಸಿನಲ್ಲಿ ನೋಡಬಹುದು.

೨. ಲಿಲಾವಿನ ಎಲ್ಲ ಶರ್ತುಗಳನ್ನು ಲಿಲಾವಿನ ಕಾಲದಲ್ಲಿ ಓದಿ ತಿಳಿಸುವದರಲ್ಲಿ ಬರುವದು.

ಅ. ನಂ.	ಕಾರಿಯ ಹೆಸರು	ಕಾರಿಯ ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
೧	ಶರಾವತಿ (ಹುಲ್ಲುಕುರ್ವೆ ಪೋರ್ಟ ಕಾರಿಯ ಸಹಿತ)	೨ನೇ	ಹೊನ್ನಾವರ	೬—೬—೪೬	ಪಿ. ಡಬ್ಲ್ಯು. ಡಿ. ಆಫೀಸ, ಕುಮಟಾ.	ಮೆ॥ ಎಗ್ಜಿಕ್ಯುಟಿವ್ಹ ಇಂಜಿನಿಯರ ಸಾಹೇಬ, ಕಾನಡಾ.
೨	ಹೆಗಡೆ (ಮಿರ್ಜಾನ) (ಕೋಡ್ಕಣಿ ಪೋರ್ಟ ಕಾರಿಯ ಸಹಿತ)	೩ನೇ	ಕುಮಟಾ			
೩	ದೀವಗಿ (ಮಾಣಕಿ)	"	"			
೪	ವೆಂಕಟಾಪುರ (ಹೆಬಳೆ ಮತ್ತು ಜಂಗಿನಗುಂಡಿ ಪೋರ್ಟ ಕಾರಿಗಳ ಸಹಿತ)	"	ಭಟಕಳ ಪೇಟಾ			
೫	ಉಳವರೆ	"	ಅಂಕೋಲಾ			

ಕಾರವಾರ,
ತಾ. ೨೦-೬-೪೬.

R. L. DESHPANDE.
ಎಗ್ಜಿಕ್ಯುಟಿವ್ಹ ಇಂಜಿನಿಯರ, ಕಾನಡಾ ಡಿವ್ಹಿಜನ್.

WANTED IMMEDIATELY TEACHERS.

For the Chendia Group Education Society's Popular New English School, Chendia (Karwar Taluka). two **smart and energetic teachers** (at least Matriculates) Those knowing Hindi, having S. T. C. Certificates and previous experience will be preferred. **Apply immediately** to the undersigned, stating the minimum salary and **terms expected.** Those called for interview will bear their own expenses. Chendia is a healthy place situated on the Karwar-Ankola Motor road, six miles from Karwar.

Chendia,
25-5-46.

Raghupati Shenvi,
Secretary.

Mahabaleshwar J Habbu, Chendia,
Chairman,
The Chendia Group Education Society.

ಕುಮಟಾ ಮೆಜಿಸ್ಟ್ರೇಟರ ಮುಂದಿನ ಹಲವಾರು ಖಟ್ಲೆಗಳನ್ನು ಸಬ-ಡಿವ್ಹಿಜನಲ್ ಮೆಜಿಸ್ಟ್ರೇಟ ರಾ|| ಕುಲಕರ್ಣಿಯವರು ಶಿರ್ಸಿಯಲ್ಲಿರುವ ರಿಸಿಡೆಂಟ ಮೆಜಿಸ್ಟ್ರೇಟರ ಕಡೆ ವರ್ಗಾಯಿಸಿದ್ದರಿಂದ ಉಂಟಾದ ಕಷ್ಟ-ತೊಂದರೆಗಳು ಈ ಹಿಂದೆ (ತಾ|| ೬-೫-೧೯೪೬ರ) "ವೃತ್ತ"ದಲ್ಲಿ ವಿವರಿಸಲ್ಪಟ್ಟಿವೆ. ಆದರೂ ಜನರಿಗಾಗುವ ಕಷ್ಟ-ನಷ್ಟ ಪರಿಹರಿಸಲು ಮೇಲಧಿಕಾರಿಗಳು ಈ ತನಕ ಏನೊಂದೂ ಕ್ರಮ ಕೈಕೊಂಡದ್ದು ತೋರುವದಿಲ್ಲ. ಸದರಿ ಖಟ್ಲೆಗಳಲ್ಲಿ ಕುಮಟೆಯ ಕೆಲವು ವಕೀಲರು ವಕಾಲತು ಕೊಂಡದ್ದುಂಟು. ಅದರಿಂದ ಮೇಲಿಂದ ಮೇಲೆ ಶಿರ್ಸಿಗೆ ಹೋಗುವ ಪ್ರಸಂಗ ತಮ್ಮ ಮೇಲೆ ಬಂದಿರುವದಾಗಿಯೂ, ಮೋಟಾರದಲ್ಲಿ ಸ್ಥಳ ಸಿಗದೆ ತಾವು ಒಮ್ಮೊಮ್ಮೆ ಸಂಕಟಕ್ಕೊಳಗಾಗುತ್ತೇವೆಂತಲೂ ಆ ವಕೀಲರು ದೂರುತ್ತಾರೆ. ಪಕ್ಷಗಾರರಂತೂ ಖಟ್ಲೆಯ ವಿಚಾರವಿದ್ದ ದಿನಕ್ಕೆ ೨-೩ ದಿನಗಳಿರುವಾಗಲೇ ಶಿರ್ಸಿಗೆ ಹೋಗಿ ಉಳಿಯಲು ಅವರಿಗೆ ಸಾಧ್ಯವಿಲ್ಲ. ಖಟ್ಲೆಯ ವಿಚಾರ ಮುಗಿದ ಮೇಲೂ ಮೋಟಾರ ಸಿಗುವ ಹಾದಿ ನೋಡುತ್ತ ೧-೨ ದಿನ ಅವರು ಶಿರ್ಸಿಯಲ್ಲಿ ಉಳಿಯಲಾರರು. ಸಾಕ್ಷಿಗಾರರಿಗಾದರೂ ಅದೇ ಮಾತು ಅನ್ವಯಿಸುತ್ತದೆ. ಯಾರೊಬ್ಬರ ಪರವಾಗಿ ಸಾಕ್ಷಿ ಹೇಳುವದಕ್ಕಾಗಿ ೪-೪, ೫-೫ ದಿನ ಅವರು ವ್ಯಾಪಾರ-ಉದ್ಯೋಗ ಬಿಟ್ಟು ಈ ಮಳೆಗಾಲದಲ್ಲಿ ಶಿರ್ಸಿಯೊಳಗೆ ವನವಾಸ ತೆಗೆಯಲು ಒಪ್ಪುವರೆಂದು ಭಾವಿಸುವದು ದಡ್ಡತನ. ವಕೀಲರಾಗಲಿ ಸಾಕ್ಷಿಗಾರರಾಗಲಿ ಖಟ್ಲೆಯ ವಿಚಾರವಿದ್ದ ದಿವಸ ಶಿರ್ಸಿಗೆ ತಲ್ಪದ ಕಾರಣ ಅನೇಕಾವರ್ತಿ ಖಟ್ಲೆಗಳನ್ನು ಮುಂದೂಡುವ ಪ್ರಸಂಗ ಬರುತ್ತದೆ. ಈ ಎಲ್ಲ ಕಷ್ಟ-ನಷ್ಟ-ತೊಂದರೆಗಳನ್ನು ತಪ್ಪಿಸಲು ಒಂದೇ ಒಂದು ಉಪಾಯವಿದೆ ಅದು ಕೂಡ ತೀರ ಸುಲಭ. ಅದ್ಯಾವದೆಂದರೆ, ರಿಸಿಡೆಂಟ ಮೆಜಿಸ್ಟ್ರೇಟರು ಕುಮಟೆಯ ಖಟ್ಲೆಗಳನ್ನು ಕುಮಟೆಯಲ್ಲೇ ಮತ್ತು ಹೊನ್ನಾವರ-ಭಟಕಳ ಕಡೆಯ ಖಟ್ಲೆಗಳನ್ನು ಹೊನ್ನಾವರ-ಭಟಕಳ ಊರುಗಳಲ್ಲೇ ಕೇಳಿ ನಿರ್ಣಯಿಸಬೇಕೆಂದು ಒಂದು ಸಣ್ಣ ಆಜ್ಞೆ ಹೊರಡಿಸುವದು. ಇಷ್ಟು ಸುಲಭ ಉಪಾಯದಿಂದ ನೂರಾರು ಜನರಿಗೆ — ಪಕ್ಷಗಾರ, ವಕೀಲ, ಸಾಕ್ಷಿಗಾರರಿಗೆ — ಆಗುವ ಕಷ್ಟ-ನಷ್ಟಗಳನ್ನು ಪರಿಹರಿಸಲು ಸಾಧ್ಯವಿರುತ್ತಿರುವಾಗ ಆ ಉಪಾಯ ಯೋಜನೆ ಮಾಡದೆ ಜನರನ್ನು ಗೋಳಾಡಿಸುತ್ತಿರುವ ಅಧಿಕಾರಿಗಳಿಗೆ ಏನನ್ನಬೇಕೋ ತಿಳಿಯದು!

* * *

ಮೋಟಾರ ಬಂಡಿಗಳಲ್ಲಿ ನೇಮಿಸಿಕೊಟ್ಟ ಪ್ರಮಾಣಕ್ಕಿಂತ ಹೆಚ್ಚಿಗೆ ಜನರನ್ನು ತುಂಬಕೂಡದಾಗಿಯೂ, ನೇಮಿಸಿಕೊಟ್ಟ ದರಕ್ಕಿಂತ ಹೆಚ್ಚಿಗೆ ದರಕ್ಕೆ ಹೇರಕೂಡದಾಗಿಯೂ ಕೊಂಗ್ರೆಸ ಮಂತ್ರಿಮಂಡಳವು ಲೋಕಸಾನುಕೂಲತೆಗಾಗಿ ಹೊರಡಿಸಿದ ಹುಕುಮಿನಿಂದ ಲೋಕಕ್ಕೆ ಬಹಳ ಕಷ್ಟವಾಗಿದೆ. ಹಿಂದೆ ಬಂಡಿಗಳಲ್ಲಿ ಮಿತಿಮೀರಿ ಜನರನ್ನು ತುಂಬುತ್ತಿದ್ದಾಗ್ಯೂ ಬಂದ ಬಂದ ಪ್ರಯಾಣಿಕರಿಗೆ ಸ್ಥಳ ಸಿಗುತ್ತಿದ್ದಿಲ್ಲ; ಎಷ್ಟೋ ಮಂದಿ ತಿಕೀಟು ಸಿಗದೆ ಬಳಲಬೇಕಾಗುತ್ತಿತ್ತು! ಈಗ ತಿಕೀಟುಗಳ ಸಂಖ್ಯೆ ಇನ್ನೂ ಪರಿಮಿತವಾದ್ದರಿಂದ ತಿಕೀಟುಗಳಿಗಾಗಿ ಜನರ ಒದ್ದಾಟ ಹೆಚ್ಚಾಗಿದೆ. ಪ್ರತಿಯೊಂದು ಊರಲ್ಲಿ ತಿಕೀಟುಗಳಿಗಾಗಿ ೨-೨, ೩-೩ ದಿನ ಮುಂಚಿತವಾಗಿಯೇ ಹೇಳಿಡಬೇಕಾಗುತ್ತದೆ; ಹಣ ಕೊಟ್ಟಿಡಬೇಕಾಗುತ್ತದೆ. ಬಂಡಿಗಳಲ್ಲಿ ಒಯ್ಯಲಿಕ್ಕೆ ಪ್ರಯಾಣಿಕರ ಸಂಖ್ಯೆ ಕಡಿಮೆಯಾದ್ದರಿಂದ ಉಂಟಾಗುವ ಕೊರತೆಯನ್ನು ಮೋಟಾರ ಕಂಪನಿಯವರು ತಿಕೀಟಿನ ದರ ಹೆಚ್ಚಿಸಿ ತುಂಬಿಕೊಳ್ಳಲಾರಂಭಿಸಿದ್ದಾರೆ. ಕುಮಟಾ-ಗೋಕರ್ಣ ತಿಕೀಟಿನ ಹಾಸಲು ಕಳೆದ ಶಿವರಾತ್ರಿಯ ವರೆಗೆ ೧೩ ಆಣೆಯಿತ್ತು. ಶಿವರಾತ್ರಿ ಜಾತ್ರೆಯ ಸಂದರ್ಭದಲ್ಲಿ ಅದು ರೂ. ೧ ಆಯಿತು. ಆ ಸಂಧಿಯು ಎಂದೋ ಮುಗಿದು ಹೋದರೂ ತಿಕೀಟಿನ ದರ ಇನ್ನೂ ಮೂಲ ಮಟ್ಟಿಗೆ ಇಳಿಯಲೊಲ್ಲದು! ಕುಮಟಾ — ಹೊನ್ನಾವರ ತಿಕೀಟಿನ ದರ ಈಗ ೬ ಆಣೆಯುಂಟು. ಅದನ್ನು ೪ ಆಣೆಗೆ ಇಳಿಸುವ ಆಲೋಚನೆ ನಡೆದಿದೆ. ಈ ಪರಿ ದರವೇರಿಯೂ ಜನರಿಗೆ ಹಾನಿಯಾಗುತ್ತಿದೆ. ಇಷ್ಟಕ್ಕೇ ಮುಗಿಯಲಿಲ್ಲ. ತಿಕೀಟುಗಳ ಸಂಖ್ಯೆ ಪರಿಮಿತ ಮತ್ತು ಬೇಡಿಕೆ ವಿಪರೀತವಾಗಿರುವದರಿಂದ ಕೆಲವೆಡೆ ಮೋಟಾರ-ಏಜಂಟರಿಗೆ ಕಳ್ಳ-ಪೇಟೆ ಮಾಡಲಿಕ್ಕೆ ಅವಕಾಶ ಸಿಕ್ಕಿದೆ. ತಿಕೀಟಿನ ದರ ಕೊಟ್ಟು ಮೇಲೆ ೪-೮ ಆಣೆ ಏಜಂಟರಿಗೆ ಕೊಟ್ಟರೆ ಮಾತ್ರ ಕೆಲವೆಡೆ ತಿಕೀಟುಗಳು ಸಿಗುತ್ತವಂತೆ! ಕೊಂಗ್ರೆಸ ಸರಕಾರದ ಹುಕುಮಿನ ಫಲಶ್ರುತಿಯಿದು. ಸರಕಾರವು ಸದರಿ ಹುಕುಮನ್ನು ಸದ್ಯಕ್ಕೆ ತಿರುಗಿ ತಕ್ಕೊಳ್ಳುವದೊಳಿತು.

* * *

ಕಳೆದ ವಾರ ಗೋಕರ್ಣದೊಳಗಿನ ಸಮುದ್ರ ದಂಡೆಗೆ ಒಂದು ಪೀಪಾಯಿ ತೇಲಿ ಬಂದಿತ್ತು. ಓರ್ವ ಅಂಬಿಗನು ಅದನ್ನು ಹಿಡಿದನು. ಅದು ಎಣ್ಣೆಯ ಪೀಪಾಯಿಯಾಗಿರಬಹುದೆಂಬ ಕಲ್ಪನೆಯಿಂದ ಕ್ಷೇತ್ರವಾಸಿ ಹಾರುವನೋರ್ವನು ಆ ಅಂಬಿಗನಿಗೆ ಒಂದಿಷ್ಟು ಇನಾಮು ಕೊಟ್ಟು ಪೀಪಾಯಿಯನ್ನು ತನ್ನ ಮನೆಗೆ ಒಯ್ಯಿಸಿದನು, ಮತ್ತು ಅದರ ಬಾಯಿ ತೆರೆಯಿಸಿ, ಒಳಗಿದ್ದ ದ್ರವವನ್ನು ಮೂಸಿನೋಡಿದನು. ಆಗ ಅವನ ಮೂಗಿಗೆ ಎಣ್ಣೆಯ ವಾಸನೆ ಬರುವ ಬದಲು ಸಾರಾಯಿಯ ದುರ್ವಾಸನೆ ಬಂತು! ಹಾರುವನು ಕೂಡಲೆ ಆ ಬಾಯಿ ಮುಚ್ಚಿಸಿ ಪೀಪಾಯಿಯನ್ನು ಸ್ಥಳೀಕ ಅಬಕಾರಿ ಅಧಿಕಾರಿಗೆ ಒಪ್ಪಿಸಿಬಿಟ್ಟನು. ಸಾರಾಯಿ ಪೀಪಾಯಿ ಅಕಲ್ಪಿತವಾಗಿ ದೊರೆತದ್ದರಿಂದ ಕ್ಷೇತ್ರವಾಸಿ ಮದ್ಯ-ಭಕ್ತರಿಗೆ ಸಂತೋಷವಾಗಿದೆಯೆಂದು ಸುದ್ದಿ. ಇತ್ತ ಸಾರಾಯಿ ಸಿಗದೆ ಅವರು ಕಷ್ಟಪಡುತ್ತಿದ್ದರಂತೆ. ತದಡಿಯಲ್ಲೂ ಕಳೆದ ಬುಧವಾರ ಸಂಜೆ ಕಸ್ಟಮ್ಸ ಕಚೇರಿಯ ಮುಂದುಗಡೆ ಹೊಳೆಯಂಚಿಗೆ ಸಾರಾಯಿಯ ಒಂದು ಪೀಪಾಯಿ ಬಂದು ಬಿದ್ದಿತ್ತು. ಅಧಿಕಾರಿಗಳು ಅದನ್ನು ತಮ್ಮ ವಶಕ್ಕೆ ತಕ್ಕೊಂಡಿದ್ದಾರೆ. ಈ ಪೀಪಾಯಿಯಲ್ಲಿ ಸುಮಾರು ೪೫ ಗೆಲನ್ನ (೩೬೦ ಬಾಟ್ಲಿ)ಗಳಷ್ಟು ಉತ್ತಮ ಜಾತಿಯ ಸಾರಾಯಿಯುಂಟಂತೆ. ಈ ಎರಡೂ ಪೀಪಾಯಿಗಳೊಳಗಿನ ಸಾರಾಯಿ ಇದ್ದಲ್ಲೇ ಗೋಕರ್ಣ-ಮಜ್ಜಿಗೆಯಾಗುವದಾಗಿ ಜನರು ತಮ್ಮೊಳಗೇ ಮಾತಾಡುತ್ತಾರೆ! ಗೋಕರ್ಣ ಕ್ಷೇತ್ರದ ಹವೆಯಲ್ಲಿ ಅಷ್ಟು ಪ್ರಭಾವವುಂಟಂತೆ!!

* * *

ಕಳೆದ ವಾರದಲ್ಲಿ ಕಾರವಾರದೊಳಗೆ ಜಿಲ್ಲಾ ಆಹಾರ ಸಲಹೆಗಾರ ಸಮಿತಿಯ ಸಭೆಯಾಯಿತು. ಜವಳಿ-ವರ್ತಕರ ಕಳ್ಳಾಟಿಕೆ ಮಿಗಿಲಾಗಿರುವದರಿಂದ ಅಧಿಕೃತ ಜವಳಿ ಅಂಗಡಿಗಳ ಸಂಖ್ಯೆಯನ್ನು ಇಳಿಸಬೇಕೆಂದು ಸಭೆಯಲ್ಲಿ ಒಂದು ನಿರ್ಣಯವಾಗಿರುವದಂತೆ. ಸಮಿತಿಯವರು ಒಳ್ಳೇ ಉಪಾಯ ಹುಡುಕಿದ್ದಾರೆಂದು ಜನರು ಮಾತಾಡುತ್ತಾರೆ! ಅವಲಕ್ಕಿ ಕುಟ್ಟುವವರಿಗೆ ಭತ್ತ ಕೊಡಕೂಡದೆಂದು ಇನ್ನೊಂದು ಗೊತ್ತುವಳಿಯಾಗಿದೆಯಂತೆ. ಬ್ರೆಡ್-ಬಿಸ್ಕೀಟುಗಳನ್ನಾಗಲಿ ಜಿಲಬಿ-ಲಾಡು-ಇಡ್ಲಿಗಳನ್ನಾಗಲಿ ತಿಂದು ತಮ್ಮ ಸಂಜೆ-ಮುಂಜಾನೆಯ ಉಪಹಾರ ತೀರಿಸುತ್ತಿರುವ ಜನರೇ ಈ ಸಭೆಯಲ್ಲಿದ್ದರೋ ಏನೋ! ಈ ಜೂನ-ಜುಲಾಯಿ ತಿಂಗಳಲ್ಲಿ ಹೂಡುವ ಎತ್ತು-ಕೋಣಗಳಿಗೂ ಹುರಳಿಕಾಳು ಕೊಡಬೇಕೆಂದು ಮಾಗದೆಯೊಂದು ಠರಾವು ಸದರ ಸಭೆಯಲ್ಲಾದ ಸುದ್ದಿಯಿದೆ. ಸಮಿತಿಯವರು ಈ ಠರಾವನ್ನು ಇಷ್ಟು ಗಾಬರಿಯಿಂದ ಏಕೆ ಮಾಡಿದರೋ ತಿಳಿಯದು! ಹಾಲು ಹಿಂಡುವ ದನಗಳಿಗೆ ನೇಮಿಸಿಕೊಟ್ಟ ಹತ್ತಿಕಾಳೇ ಈಗ ಸಿಗುವದು ಕಷ್ಟವಾಗಿದೆ. ಹೂಡುವ ದನಗಳಿಗೆ ಪ್ರತ್ಯೇಕ ಅದು ಎಲ್ಲಿಂದ ಸಿಗುವದು? ಮೊನ್ನೆ ಮೊನ್ನೆ ಖರೀದಿಯಾದ ೭೦೦೦ ಚೀಲ ಹತ್ತಿಕಾಳು ಇಲ್ಲಿ ಬಂದು ತಲ್ಪುವವರೆಗೆ ಸಮಿತಿಯವರು ಸದರ ಸೂಚನೆಯ ವಿಚಾರ ಮುಂದೂಡಿದರೆ ಒಳಿತಾಗುತ್ತಿತ್ತು! ಅಕ್ಕಿ ಸರಿಯಾಗಬಾರದು, ಅಕ್ಕನ ಮಕ್ಕಳು ಬಡವಾಗಬಾರದು ಎಂಬ ಗಾದೆಯೂ ಸಾರ್ಥಕವಾಗುತ್ತಿತ್ತು!

* * *

ನಮ್ಮ ಜಿಲ್ಲೆಯಲ್ಲಿ ರೇಶಿಮೆಯ ಒಂದು ಕಾರಖಾನೆ ತೆಗೆಯುವ ಯೋಜನೆಯನ್ನು ರೇಶಿಮೆಯ ಉತ್ಪಾದನೆಯ ಅಭ್ಯಾಸ ಮಾಡಿರುವ ಡಾ|| ಪಿ. ಜಿ. ಕೆಂಡೂಲಕರರು ತಯಾರಿಸಿ ಮುಂಬಯಿ ಸರಕಾರಕ್ಕೆ ಒಪ್ಪಿಸಿದ್ದಾರೆಂದು ತಿಳಿಯುತ್ತದೆ. ಈ ಯೋಜನೆ ಫಲದ್ರೂಪವಾಗಲು ೨ ಕೋಟಿ ರೂಪಾಯಿ ಬೇಕಾಗುವದೆಂದೂ, ಸರಕಾರದವರು ಹಣದ ಹಾಗೂ ಇನ್ನಿತರ ಬಗೆಯ ಸಹಾಯ ಮಾಡಬೇಕೆಂದೂ ಡಾ|| ಕೆಂಡೂಲಕರರು ಸೂಚಿಸಿದ್ದಾರಂತೆ. ಸರಕಾರದವರು ಅವರ ವರದಿಯ ಪರಿಶೀಲನೆ ನಡೆಸುತ್ತಿದ್ದಾರೆಂದೂ ವಾರ್ತೆಯಿದೆ.

* * *

ನಮ್ಮ ಜಿಲ್ಲೆಯಲ್ಲಿ ಮೀನಿನ ಉದ್ಯೋಗಕ್ಕೆ ಒಳ್ಳೇ ಅನುಕೂಲತೆಯುಂಟು. ಆದರೆ ಮೀನುಗಾರರು ನಿರಕ್ಷರ-ಕುಕ್ಷಿಗಳಾಗಿರುವದರಿಂದಲೂ, ತೀರ ಹಿಂದುಳಿದವರಾಗಿರುವದರಿಂದಲೂ, ಅವರಲ್ಲಿ ಏನೇನೂ ಸಂಘಟನೆಯಿಲ್ಲದ್ದರಿಂದಲೂ ಅವರ ವ್ಯವಸಾಯವು ಅಭಿವೃದ್ಧಿ ಹೊಂದುತ್ತಿರುವದಿಲ್ಲ. ಮೀನುಗಾರರಿಗೂ ಅದರಲ್ಲಿ ವಿಶೇಷ ಪ್ರಾಪ್ತಿಯಾಗುವದಿಲ್ಲ. ಕೆಲವೆಡೆ ಅವರ ಮೀನು ತಕ್ಕೊಂಡು ಹೆರವರು ಮಾತ್ರ ನಾಲ್ಕು ದುಡ್ಡು ಗಳಿಸುತ್ತಾರೆ. ಮೀನುಗಾರರ ಈ ದುರವಸ್ಥೆಯನ್ನು ಹೋಗಲಾಡಿಸಿ ಜಿಲ್ಲೆಯ ಸಕಲ ಮೀನುಗಾರರಲ್ಲಿ ಸಹಕಾರಿ-ಸಂಘಟನೆಯನ್ನುಂಟು ಮಾಡಿ ಅವರ ಉದ್ಯೋಗಕ್ಕೆ ಸುವ್ಯವಸ್ಥಿತರೂಪ ಕೊಡಲಿಕ್ಕೂ ಮೀನಿನ ಹಾಗೂ ಮೀನಿನಿಂದ ತಯಾರಿಸಬಹುದಾದ ಎಣ್ಣೆ ಮೊದಲಾದವುಗಳ ವ್ಯಾಪಾರ-ಉದ್ದಿಮೆಗೆ ಶಾಸ್ತ್ರೀಯ ಸಹಾಯ ಒದಗಿಸಿಕೊಳ್ಳಲಿಕ್ಕೂ ನಮ್ಮ ಜಿಲ್ಲೆಯ ಮೀನುಗಾರ ಸಮಾಜದ ಕೆಲವು ಪ್ರಮುಖರು ಮುಂಬಯಿಯಲ್ಲಿ "ದಿ ನೋರ್ಥ ಕೆನರಾ ಫಿಶರೀಸ ಡೆವ್ಹಲಪಮೆಂಟ ಕಮೀಟಿ" ಎಂಬ ಸಂಸ್ಥೆಯನ್ನು ಏರ್ಪಡಿಸಿದ್ದಾರೆ. ರಾ|| ಎಮ್. ಬಿ. ಸಾಳಗಾಂವಕರ ಇವರು ಈ ಕಮಿಟಿಯ ಅಧ್ಯಕ್ಷರೂ ರಾ|| ಎಚ್. ಆರ್. ಜೋಶಿ ಇವರು ಕಾರ್ಯದರ್ಶಿಗಳೂ ಇರುತ್ತಾರೆ. ಅವರ ಕಚೇರಿಯ ವಿಳಾಸ ಮುಂದಿನಂತಿದೆ:— ರೂಮು ನಂ. ೧೯, ೧ನೇ ಮಾಳಿಗೆ, ಸಾವೇರ್ಕರ ಸದಾನಂದ ನಿವಾಸ, ಲಾಲಬಾಗ, ಮುಂಬಯಿ ನಂ. ೧೨. ಮೀನಿನ ಉದ್ಯೋಗದ ಅಭಿವೃದ್ಧಿಯಾಗಬೇಕೆಂಬ ಆಸ್ಥೆಯುಳ್ಳವರು ಸದರ ಕಮಿಟಿಯೊಡನೆ ಸಂಬಂಧ ಬೆಳೆಸಬಹುದು. ಕಮಿಟಿಯವರು ನಮ್ಮ ಜಿಲ್ಲೆಯಲ್ಲಿ ಬೇಗನೆ ತಮ್ಮ ಶಾಖೆಗಳನ್ನು ತೆರೆಯಲಿದ್ದಾರೆ.

* * *

ಕಾರವಾರ ತಾಲೂಕಿನ ಬಿಣಗೆಯಲ್ಲಿ "ಬಿಣಗಾ ಫಿಶರೀಸ ಕೋ-ಒಪರೇಟಿವ್ಹ ಎಸೋಸಿಯೇಶನ್ ಲಿಮಿಟೆಡ್" ಎಂಬದೊಂದು ಸಂಸ್ಥೆ ಸ್ಥಾಪನೆಯಾಗಿದ್ದು ಅದರ ಉದ್ಘಾಟನ ಕಳೆದ ತಾ. ೧೫ನೇಗೆ ಜಿಲ್ಲಾಧಿಪರಾದ ಕೆ|| ನಂಜಪ್ಪನವರ ಹಸ್ತದಿಂದ ಜರುಗಿತು. ಮೀನುಗಾರರಲ್ಲಿ ಕುಡುಕತನ ಬಹಳ ನೆಲಸಿದ್ದು ಕಂಡುಬರುತ್ತದೆಂತಲೂ ಅದನ್ನು ನಿರ್ಮೂಲಿಸುವ ಪ್ರಯತ್ನ ಮಾಡಬೇಕೆಂತಲೂ ಜಿಲ್ಲಾಧಿಪರು ತಮ್ಮ ಭಾಷಣದಲ್ಲಿ ಹೇಳಿದ ಮಾತು ಪೂರ್ಣ ನಿಜವಿರುತ್ತದೆ. ಸದರಿ ಸಂಘವು ಚೆನ್ನಾಗಿ ನಡೆದರೆ ಅವಶ್ಯ ಸರಕಾರದಿಂದಲೂ ಸಹಾಯ ಸಿಗುವದಾಗಿ ಜಿಲ್ಲಾಧಿಪರು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಈ ಸಂಘದ ಬಗ್ಗೆ ಕೆಲವರು ಶಂಕೆಯಪಡುತ್ತಾರೆ. ಮೀನುಗಾರಿಕೆಯ ಡೈರೆಕ್ಟರರಾಗಿರುವ ಡಾ|| ಸೇಠನಾ ಇವರ ಪ್ರಯತ್ನದಿಂದ ಮುಂಬಯಿಯಲ್ಲಿ "ಇಂಡಿಯಾ ಫಿಶರೀಸ, ಲಿ.," ಎಂಬದೊಂದು ಧಂದೆವಲಗಾರರ ಕಂಪನಿ ಸ್ಥಾಪನೆಯಾಗಿದೆಯಂತೆ. ಈ ಸಂಘವು ಆ ಕಂಪನಿಯವರ ಹಸ್ತಕನಾಗಿ ಪರಿಣಮಿಸಿ ಮೀನುಗಾರರ ಹಿತಕ್ಕಿಂತ ಆ ಕಂಪನಿಯ ಕಲ್ಯಾಣವನ್ನೇ ಸಾಧಿಸಬಹುದಾಗಿ ಮೀನುಗಾರ ಸಮಾಜದ ಪ್ರಮುಖರು ಭೀತಿಗೊಂಡಿದ್ದಾರೆ. ಬಿಣಗೆಯ ಮೀನುಗಾರರು ಹೀಗಾಗದಂತೆ ಜಾಗ್ರತೆ ತಕ್ಕೊಳ್ಳಲಿ.

ಬಡಿಗರು ಬೇಕು!

ನಮ್ಮಲ್ಲಿ ಬಡಿಗೆ ಕೆಲಸದ ಮಾಹಿತಿ ಇದ್ದ ಇಬ್ಬ ನಾಕರು ಬೇಕು! ಕೆಲಸ ಬಲ್ಲವರಿಗೆ ತಿಂಗಳಿಗೆ ರೂ. ೩೦ ಸಂಬಳ ಸಿಗುವದಲ್ಲದೆ, ಹೆಚ್ಚಿನ ಕೆಲಸ ಮಾಡುವವರಿಗೆ, ಕೆಲಸ ನೋಡಿ ವಿಶೇಷ ಸಂಬಳ ಕೊಡಲಾಗುವದು. ಕೆಲಸ ಕಲಿಯಬಿಚ್ಛಿಸುವವರಿಗೆ ಊಟದ ಖರ್ಚು ಕೊಟ್ಟು ಕಲಿಸಲಾಗುವದು. ಬರಬಿಚ್ಛಿಸುವವರು ತಾ. ೩೦—೬—೪೬ರೊಳಗೆ ಪತ್ರ ಬರೆದು ತಿಳಿಸಿಕೊಳ್ಳಬೇಕು. ಸಮಕ್ಷ ಭೆಟ್ಟಿಯಾದರೆ ಉತ್ತಮ. ಮುಂಡಗೋಡ, ತಾ. ೧೫—೬—೪೬.

ಬಿ. ಆರ್. ಉಪ್ಪಿನಪಟ್ಟಣ,
ಶ್ರೀ ಗಜಾನನ ಕಾರ್ಪೆಂಟರ ಡೆಪೋ, ಮುಂಡಗೋಡ.

THE BANK OF RURAL INDIA, LTD.
[Incorporated in British India under the Indian Companies Act, 1913]
HEAD OFFICE:- "Satyabhama Bhavan", KARWAR.
Offices at:- KARWAR, KUMTA, SIRSI, HONAVAR & YELLAPUR
Authorised Capital -- Rs. 10,00,000;
Subscribed Capital -- Rs. 5,00,000;
Paid-up Capital -- Rs. 2,50,000.
Rates of Interest on Deposits:
Current a/c. @ 1% p. a. *Savings Bank a/c @ 2½%.*
Fixed Deposits for 3 months @ 3% per annum.
" " for 6 months @ 3½% "
" " for 12 months or more @ 4% "
All Kinds of modern Banking business transacted

Karwar, 15-3-1946.
P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಊರಿನವರಿಗೆ
ವರ್ಷಕ್ಕೆ [illegible]
ಹೊರಊರಿನವರಿಗೆ ವರ್ಷಕ್ಕೆ [illegible]
ಆರು ತಿಂಗಳಿಗೆ [illegible]
ಬಿಡಿ ಸಂಚಿಕೆಗೆ [illegible]
ಹಳೇ ಸಂಚಿಕೆಗೆ [illegible]
ವ್ಹಿ. ಪಿ. ಯಿಂದ ಹಣ ಕಳಿಸುವವರು ವ್ಹಿ. ಪಿ. ವೆಚ್ಚ ಆಣೆ ಹೆಚ್ಚಿಗೆ ಕಳಿಸಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270 Monday, 1st July, 1946.

ಕಾನಡಾವೃತ್ತ

ವರ್ಷ ೨೯.] THE KANARA NEWS. [ಸಂಚಿಕೆ ೧.

ಕುಮಟಾ:- ಸೋಮವಾರ, ತಾ. ೧ ಮಾಹೆ ಜುಲೈ ೧೯೪೬ನೇ ಇಸವಿ.

ಜಾಹೀರಾತುಗಳ ದರ:-
[illegible]
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷಮ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ವೆವ್ಹೆಲ-ಯೋಜನೆ ಬಿದ್ದು ಹೋಯಿತು!

(ಸಮೀಕ್ಷಕನು ಬರೆದುದು)

ತ್ರಿಮಂತ್ರಿಗಳ ಸಲಹೆಯಿಂದ ಸರ್ವಾಧಿಪತಿ ವೆವ್ಹೆಲ ದೊರೆಗಳು ತಯಾರಿಸಿದ ಸಂಕ್ರಮಣ ಕಾಲೀನ ಸರಕಾರದ ಯೋಜನೆ ಕಳೆದ ಬುಧವಾರದಿಂದ ಅಮಲಿನಲ್ಲಿ ಬರಬೇಕಾಗಿತ್ತಷ್ಟೇ. ಆ ಯೋಜನೆಯನ್ನು ಸ್ವೀಕರಿಸಬೇಕೋ ಧಿಕ್ಕರಿಸಬೇಕೋ ಎಂಬುದರ ಯೋಚನೆಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ಬಿದ್ದಿರುವದಾಗಿಯೂ ಆ ಯೋಜನೆಯೊಳಗಿನ ಕೆಲವೊಂದು ವಿವರಗಳ ವಿವೇಚನೆ ಮಾಡಿಸಿಕೊಳ್ಳಲು ರಾಷ್ಟ್ರಪತಿಗಳು ಸರ್ವಾಧಿಪತಿಗಳೊಡನೆ ಆಗಾಗ ಮಾತುಕತೆಗಳನ್ನು ನಡಿಸುತ್ತಿದ್ದಾರೆಂತಲೂ ನಾವು ಕಳೆದ ವಾರ ತಿಳಿಸಿದ್ದುಂಟು. ಸರ್ವಾಧಿಪತಿಗಳ ವಿವೇಚನೆಯಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಸಮಾಧಾನವಾಗಲಿಲ್ಲ. ಸರ್ವಾಧಿಪತಿಗಳು ಬೆ| ಜಿನ್ನಾರವರ ತಂತ್ರದಿಂದ ನಡೆಯುತ್ತಿದ್ದು ಜಿನ್ನಾರವರಿಗೆ ಅವರು ಕೇಳಿದ್ದೊಂದು ಆಶ್ವಾಸನೆಗಳನ್ನು ಮೊದಲೇ ಕೊಟ್ಟು ತಮ್ಮ ಕೈ ಕಟ್ಟಿಕೊಂಡು ಕೂತಿರುವದನ್ನೂ ಪರಾಂಬರಿಸಿ, ಅವರ ಯೋಜನೆಯನ್ನು ತಿರಸ್ಕರಿಸತಕ್ಕದ್ದೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೊನೆಯ ನಿರ್ಣಯ ಮಾಡಿ, ಕಳೆದ ಸೋಮವಾರ ಸಂಜೆ ಆ ನಿರ್ಣಯವನ್ನು ತ್ರಿಮಂತ್ರಿಗಳಿಗೂ ಸರ್ವಾಧಿಪತಿಗಳಿಗೂ ತಿಳಿಸಿತು. ಕೊಂಗ್ರೆಸ್ಸು ಆ ಯೋಜನೆಯನ್ನು ಈ ಪರಿ ತಿರಸ್ಕರಿಸಿದಾಗ್ಯೂ ಮುಸ್ಲಿಮ್ ಲೀಗು ಅದನ್ನು ಸ್ವೀಕರಿಸಿತು. ಇದರಿಂದ ಕೇಂದ್ರದಲ್ಲಿ ಬೆ| ಜಿನ್ನಾರವರ ತಂತ್ರದಿಂದ ಕಾರಭಾರ ನಡಿಸುವ ಜನರ ಸರಕಾರ ಸ್ಥಾಪಿತವಾಗುವದೋ ಏನೋ ಎಂಬ ಅಂಜಿಕೆಯುಂಟಾಗಿತ್ತು. ತಮ್ಮ ಕೈಯಲ್ಲೀಗ ಸತ್ತೆ ಸಿಗುವದೆಂಬ ಸುಖ-ಸ್ವಪ್ನಗಳು ಮುಸ್ಲಿಮ್ ಲೀಗಿನವರಿಗೂ ಬಿದ್ದವು. ಆದರೆ ಸರ್ವಾಧಿಪತಿಗಳು ಅವರಿಗೆ ಮೋಸ ಮಾಡಿ, ತಮ್ಮ ಯೋಜನೆಯನ್ನೇ ತಾವು ಬಿಟ್ಟುಕೊಟ್ಟಿದ್ದೇವೆಂದು ಬುಧವಾರ ಸಾರಿಬಿಟ್ಟರು! ಆದ್ದರಿಂದ ಮುಸ್ಲಿಮ್ ಲೀಗಿನ ನಾಯಕರಿಗೆ ಈಗ ಬಹಳ ಸಿಟ್ಟು ಬಂದಿದೆ. ಜೂನ ತಾ. ೧೬ರ ಯೋಜನೆಯಂತೆ ತ್ರಿಮಂತ್ರಿಗಳ ಯೋಜನೆಯನ್ನು ಮಾನ್ಯ ಮಾಡಿ ಸಂಕ್ರಮಣ-ಕಾಲೀನ ಸರಕಾರದಲ್ಲಿ ಕೂಡಿಕೊಳ್ಳುವ ಜನರಿಂದೊಡಗೂಡಿದ ಮಂತ್ರಿ-ಮಂಡಳ ರಚಿಸಲು ದೊರೆಗಳು ಬದ್ಧರಿದ್ದರೆಂತಲೂ ಅವರು ಹಾಗೆ ಮಾಡದೆ ಇದ್ದುದು "ವಚನ-ಭಂಗ"ವಾಯಿತೆಂತಲೂ ಲೀಗಿನವರು ಗುಲ್ಲನ್ನೆಬ್ಬಿಸಿದ್ದಾರೆ. ತಮ್ಮ ಯೋಜನೆಯಂತೆಯೇ ತಾವು ನಡೆಯುತ್ತೇವಾಗಿಯೂ ಕೊಂಗ್ರೆಸ-ಲೀಗುಗಳೆರಡೂ ಆ ಯೋಜನೆ ಸ್ವೀಕರಿಸಿದಲ್ಲಿ ಮಾತ್ರ ತಾವು ತಮ್ಮ ಸಂಕಲ್ಪಿತ ಸರಕಾರ ರಚಿಸಲು ಬದ್ಧರಾಗಿದ್ದೆವಾಗಿಯೂ ಸರ್ವಾಧಿಪತಿಗಳ ಪ್ರತಿಪಾದನೆಯುಂಟು. ಏನೇನಿದ್ದರೂ ಕೊಂಗ್ರೆಸ್ಸು ತಿರಸ್ಕಾರ ಮಾಡಿದ್ದರಿಂದ ವೆವ್ಹೆಲ ಯೋಜನೆ ಬಿದ್ದು ಹೋಯಿತೆಂಬುದು ಮಾತ್ರ ನಿಜ.

ಈಗ ಮುಂದೇನು ಎಂಬ ಪ್ರಶ್ನೆ. ಈ ಪ್ರಶ್ನೆಯ ನಿರ್ಣಯ ಈಗ ದಿಲ್ಲಿ-ಸಿಮ್ಲೆಗಳಲ್ಲಾಗದೇ ಲಂಡನದಲ್ಲಿ ಆಗಲಿಕ್ಕಿದೆ. ತ್ರಿಮಂತ್ರಿಗಳು ಮೊನ್ನೆ ಶನಿವಾರವೇ ವಿಮಾನಾರೂಢರಾಗಿ ಸ್ವದೇಶಕ್ಕೆ ಮರಳಿ ಹೋಗಿದ್ದಾರೆ. ಅಲ್ಲಿ ಅವರು ತಮ್ಮ ಕೆಲಸದ ಮತ್ತು ಅನುಭವದ ವರದಿಯನ್ನು ಬ್ರಿಟಿಶ ಪ್ರಧಾನ-ಮಂತ್ರಿಗಳಿಗೂ ಮಂತ್ರಿಮಂಡಳಕ್ಕೂ ಅರುಹುವರು; ಮತ್ತು ಮಂತ್ರಿಮಂಡಳವು ಮುಂದಿನ ವ್ಯವಸ್ಥೆಯನ್ನು ಮಾಡುವದು. ಈ ಬಗ್ಗೆ ಮಂತ್ರಿಮಂಡಳವು ಪುನಃ ಚರ್ಚೆ-ವಿಚಾರವಿನಿಮಯ ಮಾಡಲು ಕೊಂಗ್ರೆಸ್ಸ ಮುಂದಾಳುಗಳನ್ನು ಲಂಡನ್ನಿಗೆ ಕರೆದೊಯ್ಯುವ ಸಂಭವವುಂಟೆಂದೂ ಹೇಳುತ್ತಾರೆ. ವೆವ್ಹೆಲ-ಯೋಜನೆಯ ಸಂಬಂಧದಲ್ಲಿ ತ್ರಿಮಂತ್ರಿಗಳಿಗೂ ಸರ್ವಾಧಿಪತಿಗಳಿಗೂ ಮತಭೇದವುಂಟಾಯಿತೆಂದೂ ಕೊಂಗ್ರೆಸ್ಸನ್ನು ಕಡೆಗಣಿಸುವ ಮತ್ತು ಅದರ ರಾಷ್ಟ್ರಪ್ರತಿನಿಧಿತ್ವವನ್ನು ಅಲ್ಲಗಳೆಯುವ ಪೂರ್ಣ ಹೊಣೆ ಸರ್ವಾಧಿಪತಿಗಳ ಮೇಲಿರುತ್ತದಾಗಿಯೂ ಬಲ್ಲವರು ಹೇಳುತ್ತಾರೆ. ಸರ್ವಾಧಿಪತಿ ವೆವ್ಹೆಲ ದೊರೆಗಳಾದರೂ ಬೇಗನೇ ರಜೆ ತಕ್ಕೊಂಡು ಲಂಡನ್ನಿಗೆ ಹೋಗುವ ಸಂಭವವುಂಟಂತೆ. ಲಂಡನ್ನಿಗೆ ಹೋದ ಮೇಲೆ ತಮ್ಮ ಪದಕ್ಕೆ ಅವರು ರಾಜಿನಾಮೆ ಕೊಟ್ಟರೂ ಕೊಡಬಹುದು.

ವೆವ್ಹೆಲ ಯೋಜನೆಯನ್ನು ತಿರಸ್ಕರಿಸಿದರೂ ಕೊಂಗ್ರೆಸ ಕಾರ್ಯಕಾರಿ ಮಂಡಳವು ತ್ರಿಮಂತ್ರಿಗಳ (ಭಾವೀ ರಾಜ್ಯಘಟನೆಯ ಸಂಬಂಧದಲ್ಲಿ) ಯೋಜನೆಯನ್ನು — ಅದರಲ್ಲಿರುವ ಲೋಪ-ದೋಷಗಳನ್ನು ಅಳಿಸೊಗೆಯಬಹುದೆಂಬ ವಿಶ್ವಾಸದಿಂದ — ಸ್ವೀಕರಿಸಲೊಪ್ಪಿದೆ. ಮತ್ತು ಘಟನಾ-ಸಮಿತಿಗೆ ಯೋಗ್ಯ ಕೊಂಗ್ರೆಸಿಗರನ್ನೂ ಕೊಂಗ್ರೆಸೇತರ ರಾಜಕಾರಣಿಗಳನ್ನೂ ಘಟನಾತಜ್ಞರನ್ನೂ ಆರಿಸಿ ತರಲು ಆಯಾ ಪ್ರಾಂತದ ಕೊಂಗ್ರೆಸ ಮಂತ್ರಿಗಳಿಗೂ ಕೊಂಗ್ರೆಸ ಪಕ್ಷದ ಸದಸ್ಯರಿಗೂ ಆದೇಶ ಕೊಟ್ಟಿದೆ. ಕಾರ್ಯಕಾರಿ ಮಂಡಳದ ಈ ನಿರ್ಣಯಗಳನ್ನು ಮಂಜೂರ ಮಾಡುವದಕ್ಕಾಗಿ ಇದೇ ಬರುವ ಶನಿವಾರ, ರವಿವಾರ ಮುಂಬಯಿಯಲ್ಲಿ ಅಖಿಲ ಭಾರತೀಯ ಕೊಂಗ್ರೆಸ ಸಮಿತಿಯು ಸೇರಲಿದೆ.

ಸ್ಥಾನಿಕ ವೃತ್ತಾಂತ. (೨ನೇ ಪುಟದಿಂದ ಮುಂದೆ)

ಇಲ್ಲವೆ ಧಾರವಾಡ-ಕೆನರಾ ಕಂಪನಿಯ ಗಾಡಿಗಳು ತಮಗೆ ಜೋಡದ (ಕನೆಕ್ಶನ್) ಯುಳ್ಳ ಹೊರಗಿನ ಗಾಡಿಗಳೊಳಗಿನ ಪ್ರಯಾಣಿಕರನ್ನು ಮೊದಲು ತಕ್ಕೊಳ್ಳುತ್ತವೆ. ಅವರಿಂದಲೇ ಅವರ ಗಾಡಿಗಳು ತುಂಬುತ್ತವೆ. ಆದರಿಂದ ಇಲ್ಲಿಯವರಿಗೆ ಸ್ಥಳ ಸಿಗುವದಿಲ್ಲ! ವಾಹನ ನಿಯಂತ್ರಣಾಧಿಕಾರಿಗಳೂ ಮೋಟಾರ-ಒಡೆಯರೂ ಈ ಅಡಚಣೆಯನ್ನು ಪರಿಹರಿಸುವ ಉಪಾಯ-ಯೋಜನೆ ಮಾಡಬೇಕಾಗಿ ಅರಿಕೆ.

ಆವರ್ಸಾ ಕನ್ನಡ ಶಾಲೆಯಿಂದ ಈ ವರ್ಷದ ಮುಲ್ಕೀ ಪರೀಕ್ಷೆಗೆ ಕುಳಿತ ೩೦ ಮಂದಿಯಲ್ಲಿ ೧೨ ಮಂದಿ ಉತ್ತೀರ್ಣರಾಗಿದ್ದಾರೆ.

ಕಾರವಾರ— (ತಾ. ೩೦-೬-೪೬) "ನೊರ್ಥ ಕೆನರಾ ಫಿಶರೀಸ ಡೆವ್ಹಲಪಮೆಂಟ ಕಮಿಟಿ, ಮುಂಬಯಿ" ಸಂಸ್ಥೆಯ ಅಧ್ಯಕ್ಷರೂ ಕಾರ್ಯದರ್ಶಿಗಳೂ ತಮ್ಮ ಉದ್ದಿಷ್ಟ ಕಾರ್ಯದ ಪ್ರಚಾರ ಮಾಡಲು ಈಗ ಇತ್ತ ಬಂದಿದ್ದು "ದಿ ನೊರ್ಥ ಕೆನರಾ ಕೋ| ಫಿಶಿಂಗ ಎಂಡ ಟ್ರೇಡಿಂಗ ಸೊಸಾಯಿಟಿ, ಲಿಮಿಟೆಡ್" ಎಂಬ ಸಹಕಾರಿ ಸಂಘ ಸ್ಥಾಪಿಸುವದಕ್ಕಾಗಿ ಇದೇ ಬರುವ ತಾ. ೮ನೇ ಸೋಮವಾರ ಸಂಜೆ ೫ಕ್ಕೆ ನಂದನಗದ್ದೆಯಲ್ಲಿರುವ ಶ್ರೀ ನಾಗನಾಥ ದೇವರ ಗುಡಿಯಲ್ಲಿ ಜಿಲ್ಲೆಯ ಮೀನುಗಾರರ ಸಭೆ ಕರೆದಿದ್ದಾರೆ. ಸಂಘದ ಪ್ರತಿ ಶೇರಿನ (ಪಾಲಿನ) ಬೆಲೆ ರೂ. ೧೦ ಇಡಲ್ಪಟ್ಟಿದೆ. ಕಾರ್ಯಕರ್ತರು ಮೊನ್ನೆ [illegible]

ಓದುಗರಲ್ಲಿ ವಿನಂತಿ.

ಇಂದಿನಿಂದ "ವೃತ್ತ"ವು ೨೯ ನೆಯ ವರ್ಷದಲ್ಲಿ ಪದಾರ್ಪಣೆ ಮಾಡುತ್ತಿದೆ. ಈಗ ೩-೪ ವರ್ಷಗಳಿಂದ ಕಾಗದದ ಕೊರತೆಯು ಕಷ್ಟವಾದಾಗ್ಯೂ "ವೃತ್ತ"ವು ಯಾವ ಬಗೆಯಿಂದ ಜಿಲ್ಲೆಯ ಜನರ ಹಾಗೂ ರಾಷ್ಟ್ರದ ಸೇವೆ ಮಾಡುತ್ತ ಬಂದಿದೆ ಎಂಬುದನ್ನು ಓದುಗರು ಸ್ವತಃ ಅರಿತಿರುತ್ತಾರೆ. ಕಾಗದದ ಕಷ್ಟಗಳು ಇನ್ನೂ ಪರಿಹಾರ ಹೊಂದಿಲ್ಲ. ಇದ್ದವರಲ್ಲೇ "ವೃತ್ತ"ವು ತನ್ನ ಅಂಗೀಕೃತ ಕಾರ್ಯವನ್ನು ಸಾಗಿಸಿಕೊಂಡು ಹೋಗಬೇಕಾಗಿದೆ. ಕಾರಣ ಓದುಗ-ಮಹಾಶಯರೆಲ್ಲರೂ "ವೃತ್ತ"ದ ಲೋಪ-ದೋಷಗಳನ್ನೆಲ್ಲ ಕ್ಷಮಿಸಿ, "ವೃತ್ತ"ವನ್ನು ಆತ್ಮೀಯ ಭಾವನೆಯಿಂದ ನಡಿಸಿಕೊಂಡು ಹೋಗಬೇಕಾಗಿಯೂ "ವೃತ್ತ"ಕ್ಕೆ ಅಭಿಮಾನದಿಂದ ನೆರವನ್ನಿತ್ತು ಹೆಚ್ಚೆಚ್ಚು ಜಿಲ್ಲಾ-ಸೇವೆಯನ್ನೂ ರಾಷ್ಟ್ರಸೇವೆಯನ್ನೂ ಮಾಡಿಸಿಕೊಳ್ಳಬೇಕಾಗಿಯೂ ನಮ್ರ ವಿನಂತಿ ಮಾಡುತ್ತೇವೆ

— **ಸಂಪಾದಕ.**

ಕೋಣೆ, ನಂದನಗದ್ದೆ ವಗೈರೆ ಹಳ್ಳಿಗಳಲ್ಲಿ ಪ್ರಚಾರ ಮಾಡಿ, ರೂ. ೧೦೦ಕ್ಕೆ ಮೇಲ್ಪಟ್ಟ ಬೆಲೆಯ ಶೇರುಗಳನ್ನು ಕೊಂಡುಕೊಳ್ಳಲು ಸಿದ್ಧರಿರುವ ೨೬ ಜನರನ್ನು ಭಾವೀ ಸಂಘದ ಸದಸ್ಯರನ್ನಾಗಿ ಮಾಡಿದ್ದಾರೆ. ಮೀನುಗಾರರ ಸಂಘಟನೆ ಮಾಡಿ, ಅವರ ಮೀನನ್ನು ಮುಂಬಯಿಗೂ ಬೈಲು-ಸೀಮೆಗೂ ರಫ್ತ ಮಾಡಿ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡುವದು, ಮೀನುಗಾರರ ವ್ಯಾಪಾರದ ಅಭಿವೃದ್ಧಿಗೆ ಅವಶ್ಯವುಳ್ಳ ಸಾಹಿತ್ಯ-ಸೌಕರ್ಯಗಳನ್ನು ಒದಗಿಸಿಕೊಡುವದು ಮತ್ತು ಮೀನುಗಾರ-ಸಮಾಜದ ಶಿಕ್ಷಣ ಹಾಗೂ ಸಾಮಾಜಿಕ ಸುಧಾರಣೆ ಮಾಡುವದು ಸಂಘದ ಉದ್ದೇಶಗಳಾಗಿರುತ್ತವೆ. ಸಂಘದ ಬಗ್ಗೆ ಆಸ್ಥೆಯುಳ್ಳ ಜಿಲ್ಲೆಯವರೂ ಪರಜಿಲ್ಲೆಗಳವರೂ ರಾ| ಎಚ್. ಆರ್. ಜೋಶಿ, ನೊರ್ಥ ಕೆನರಾ ಫಿಶರೀಸ ಡೆವ್ಹಲಪಮೆಂಟ ಕಮಿಟಿಯ ಕಾರ್ಯದರ್ಶಿಗಳು, ಟೈಲವಾಡಾ, ಬೈತಖೋಲ, ಕಾರವಾರ ಈ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಬಹುದು.

ಮೀನುಗಾರರ ಸಂಘದವರೇ ಸ್ವತಃ ಲಾಂಚ, ಮೋಟಾರ ವಗೈರೆ ಇಟ್ಟು ಅವರ ಮೀನಿಗೆ ಯೋಗ್ಯ ಪೇಟೆಯೂ ಬೆಲೆಯೂ ಸಿಗುವಂತೆ ಮಾಡುವದಕ್ಕಾಗಿ ಮತ್ತು ಮೀನುಗಾರ ಬಂಧುಗಳ ಕಲ್ಯಾಣವನ್ನೇ ಸಾಧಿಸುವದಕ್ಕಾಗಿ ಬಿಣಗಾ ಮೀನುಗಾರರ ಸಂಘದ ಸ್ಥಾಪನೆಯಾಗಿದೆಯೆಂದು ಆ ಸಂಘದ ವ್ಯವಸ್ಥಾಪಕರು ತಿಳಿಸುತ್ತಾರೆ. [ಸಂಘದ ಉದ್ದೇಶದ ಬಗ್ಗೆ ಜಿಲ್ಲಾ-ಸಂಚಾರಿಯು ಶಂಕೆಯು ಪ್ರದರ್ಶಿಸಿಲ್ಲ. ಸಂಘದ ಪ್ರೋತ್ಸಾಹಕರೆಂದು ಮೆರೆಯುವವರ ಕೈಗೊಂಬೆಯಾಗಿ ಬಂದರವಲಗಾರ ಕಂಪನಿಯ ಬಲೆಯಲ್ಲಿ ಸಂಘವು ಬೀಳಬಾರದೆಂದಿಷ್ಟೇ ಜಿಲ್ಲಾ ಸಂಚಾರಿಯು ಎಚ್ಚರಿಕೆ ಕೊಟ್ಟಿದ್ದಾನೆ.

— ಸಂಪಾದಕ]

ಜಿಲ್ಲೆಯ ಯಾವದೇ ಭಾಗದಲ್ಲಿ ನರಳುತ್ತಿರುವ ಹಾಗೂ ಕೂಡಲೆ ಯೋಗ್ಯ ಶಸ್ತ್ರಚಿಕಿತ್ಸೆ ಇಲ್ಲವೆ ಔಷಧೋಪಚಾರ ಮಾಡಬೇಕಾದ ರೋಗಿಯನ್ನು ವಿಳಂಬವಿಲ್ಲದೆ ಇಲ್ಲಿಯ ಸಿವ್ಹಿಲ್ ಆಸ್ಪತ್ರೆಗೆ ತರಲು ಅನುಕೂಲವಾಗಬೇಕೆಂದು ಸರಕಾರದವರು ಈ ಆಸ್ಪತ್ರೆಯಲ್ಲಿ ಕಳೆದ ತಾ. ೧೫ ರಿಂದ ಎಂಬ್ಯುಲನ್ಸ (ರೋಗಿ-ವಾಹಕ) ಗಾಡಿಗಳ ವ್ಯವಸ್ಥೆ ಇಟ್ಟಿದ್ದಾರೆ. ಬಡವರಿಗೂ ಅನಾಥರಿಗೂ ಈ ವ್ಯವಸ್ಥೆಯ ಲಾಭ ಪುಕ್ಕಟೆಯಾಗಿ ಸಿಗುವದು. ಅಲ್ಲಲ್ಲಿಯ ಚಿಕಿತ್ಸಾಲಯಗಳ ಡಾಕ್ಟರರು ಅವಶ್ಯವಿದ್ದಾಗ ತಂತಿ ಮಾಡಿ ಈ ಗಾಡಿಗಳನ್ನು ತರಿಸಿಕೊಳ್ಳಬಹುದಾಗಿಯೂ ಸಾರ್ವಜನಿಕರು ಈ ವ್ಯವಸ್ಥೆಯ ಲಾಭ ಪಡೆಕೊಳ್ಳಬೇಕಾಗಿಯೂ ಸಿವ್ಹಿಲ್ ಸರ್ಜನರು ತಿಳಿಸುತ್ತಾರೆ.

ಎಲ್ಲ ಮೋಟಾರ ಬಂಡಿಗಳು ತಮ್ಮಿಂದ ಹೊರಗಿನ ಜನರಿಗೆ ಅಪಘಾತವಾದಾಗ (third party risks) ಅವರಿಗೆ ನಷ್ಟಪರಿಹಾರ ಸಿಗುವಂತೆ ವಿಮೆ ಇಳಿಸಲೇಬೇಕೆಂದು ಮುಂಬಯಿ ಸರಕಾರದವರು ಇದೇ ಜುಲೈ ತಾ. ೧ ರಿಂದ ಕಟ್ಟಳೆ ಮಾಡಿದ್ದಾರೆ. ಈ ಸಂಬಂಧದ ನಿಯಮಗಳು ತಾ. ೧೬-೩-೧೯೪೬ರ ಸರಕಾರಿ ಗಾಝೆಟಿನಲ್ಲಿ ಪ್ರಕಟವಾಗಿವೆಯೆಂದು ಕರ್ನಾಟಕ ಪ್ರದೇಶದ ವಾಹನ-ನಿಯಂತ್ರಣಾಧಿಕಾರಿಗಳು ತಿಳಿಸುತ್ತಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಪ್ರಾರಂಭಕ್ಕೆ ಜೋರಾ ಮಳೆ ಹಿಡಿಯಿತು. ಈಗ [illegible] ದಿನಗಳಿಂದ ಸ್ವಲ್ಪ ಕಡಿಮೆಯಾಗಿದೆ. ಈ ವರೆಗೆ ಸುಮಾರು [illegible] ಇಂಚು ಮಳೆಯಾಗಿದೆ. ಜೂನ ಕೊನೆಯ ವರೆಗೆ ಸರಾಸರಿ [illegible] ಇಂಚು ಮಳೆಯಾಗುತ್ತಿತ್ತು. ಈ ವರ್ಷ ಅದರ ಅರ್ಧ ಮಾತ್ರ ಆಗಿದೆ. ಒಕ್ಕಲಿಗರು ನಟ್ಟಿ ಮಾಡತೊಡಗಿದ್ದಾರೆ.

ಇಲ್ಲಿಯ ಕೊಲೇಜ ಸಮಿತಿಯವರು [illegible] ಮಂತ್ರಿಗಳಿಗೆ ಪತ್ರ ಕೊಟ್ಟು, ಫಂಡಗಂಡಾಯದ ಹಣ ತಿರುಗಿ [illegible] ಜನರ ಕಡೆಗೆ ಆ ಹಣವನ್ನು ಕೊಲೇಜ ನಿಧಿಗೆ ಕೊಡುವಂತೆ ತಾವು ವಿನಂತಿಸಿ ಮನವೊಲಿಸಲ್ಪಟ್ಟ ಹಾಗೆಯೇ [illegible], ಹಾಗೆ ತಾವು ಜನರನ್ನು ವ್ಯಕ್ತಿಶಃ ಹಾಗೂ ಸಾಮುದಾಯಿಕವಾಗಿ ಬೆಟ್ಟಿಯಾಗಿ ಅವರ ಮುಂದೆ ತಮ್ಮ ವಿನಂತಿಯನ್ನು ಇಡಲು ಅವಸರ ಸಿಗುವಂತೆ ಫಂಡಗಂಡಾಯದ [illegible] ಯನ್ನು ಸದ್ಯಕ್ಕೆ ತಡೆಹಿಡಿಯಬೇಕೆಂದು ವಿನಂತಿಸಿಕೊಂಡಿದ್ದರು. ಆ ವಿನಂತಿಯನ್ನು ಮನ್ನಿಸಿ ಇಲ್ಲಿಯ [illegible] ಹೊನ್ನಾವರ ವಗೈರೆ ಬೇರೆ ಊರುಗಳಲ್ಲಿಯ ಫಂಡಗಂಡಾಯದ ಬಟವಡೆ ಮುಂದಿನ [illegible] ಸೂಚನೆಯವರೆಗೆ ತಡೆಹಾಕಿಟ್ಟಿದ್ದಾರೆ.

ಫಂಡಗಂಡಾಯದ ಹಣವನ್ನು [illegible] ತಿರುಗಿ ಕೊಡುವದೆಂಬ ಘಂಟನೆ ಇಲ್ಲದೆ [illegible] ಜನರು ತೆತ್ತಿದ್ದಿಲ್ಲ. ಧಾನ ಕೊಡುವಾಗ [illegible] ಎಂದು ಹೇಳುತ್ತಿರುವವರ ಮಾತು [illegible] ಜನರು [illegible] ಉಂಟು, [illegible] ಆದು ತಮ್ಮದಾದು [illegible] ಅದನ್ನು ಕೊಟ್ಟಿದ್ದುಂಟು. ಕೊಂಗ್ರೆಸ [illegible] ಆದು ಈಗ ತಿರುಗಿ ಸಿಗುತ್ತಿರುವದೇನೋ ನಿಜ. ಅದನ್ನು ಜನರು ತಾವೇ ಇಟ್ಟುಕೊಂಡು ಸ್ವಾರ್ಥಕ್ಕಾಗಿ ಬಳಸಿಕೊಂಡರೆ [illegible] ಮಾಡಿದ [illegible] ಪೂರ್ಣ ಪ್ರಮಾಣ ಕಳೆಕೊಂಡಂತಾಗುವದು. ಜನರು ಅದನ್ನು ಕಳಕೊಳ್ಳಬಾರದಾಗಿದ್ದರೆ, ಒಮ್ಮೆ ತ್ಯಾಗ ಮಾಡಿ ಬಿಟ್ಟ ಹಣವನ್ನು ಯಾವದೊಂದು ಸಾರ್ವಜನಿಕ ಲೋಕೋಪಯೋಗಿ ಕಾರ್ಯಕ್ಕೆ ಅರ್ಪಿಸುವದು ಒಳ್ಳೆಯದೂ ವಿಚಾರವಂತರಿಗೆ ಅಂಬೋಣವುಂಟು. ಹಾಗೆಯೇ ನಮ್ಮ ಜಿಲ್ಹೆಯಲ್ಲಿ ಒಂದು ಕೊಲೇಜ ಸ್ಥಾಪಿಸುವದೂ ಅವಶ್ಯವಿದೆ. ಈಗ ಪರಸ್ಥಳಗಳಲ್ಲಿದ್ದ ಕೊಲೇಜುಗಳಲ್ಲಿ ನಮ್ಮ ಜಿಲ್ಹೆಯವರಿಗೆ ಪ್ರವೇಶ ಸಿಗುವದು ಎಷ್ಟು ಕಷ್ಟಕರವಾಗಿದೆಯೆಂಬುದು ಜನರಿಗೆ ಗೊತ್ತೇ ಉಂಟು. ಮೇಲಾಗಿ ಜಿಲ್ಹೆಯಲ್ಲೇ ಕೊಲೇಜಾದರೆ ಕೊಲೇಜ ಶಿಕ್ಷಣವು ಎಷ್ಟೋ ಕಡಿಮೆ ಖರ್ಚಿನಿಂದ ಆಗುವಂತಾಗಿ ಈಗ ಕೊಲೇಜ-ಶಿಕ್ಷಣ ಪಡೆಯುವ ಆರ್ಥಿಕ ಪಾತ್ರತೆಯಿದ್ದಾಗ್ಯೂ ಸಾಂಪತ್ತಿಕ ದೃಷ್ಟಿಯಿಂದ ಕೈಸಾಗದ ಮೂಲಕ ಆ ಶಿಕ್ಷಣದ ಮಾರ್ಗವನ್ನೇ ಬಿಟ್ಟುಕೊಡಬೇಕಾಗಿರುವ ನೂರಾರು ತರುಣರಿಗೆ ಆ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಜಿಲ್ಹೆಯವರ ಸುದೈವದಿಂದ ಕೊಲೇಜ ಸಮಿತಿಯವರು ಕೊಲೇಜ ತೆರೆಯಲು ಮುಂದಾಗಿದ್ದಾರೆ, ಆ ಬಗ್ಗೆ ಕೆಲವೊಂದು ನಿಧಿಯನ್ನು ಕೂಡಿಸಿದ್ದಾರೆ, ಇನ್ನಿತರ ಅನುಕೂಲತೆಗಳನ್ನು ಒದಗಿಸಿಕೊಳ್ಳುವ ಪ್ರಯತ್ನ ನಡಿಸಿದ್ದಾರೆ. ಅವರ ಪ್ರಯತ್ನಗಳಿಗೆ ಕೈಲಾದ ಮಟ್ಟಿಗೆ ನೆರವನ್ನಿತ್ತು ಜಿಲ್ಹೆಯ ಒಂದು ಮಹತ್ವದ ಕೊರತೆಯನ್ನು ನೀಗಿಸುವದು ಜಿಲ್ಹೆಯವರ ಕರ್ತವ್ಯವುಂಟು. ಅದ್ದರಿಂದ ಸರಕಾರದಿಂದ ತಿರುಗಿ ಸಿಕ್ಕ [illegible] ಇನ್ನು ಮುಂದೆ ಸಿಗಬಹುದಾದ ಫಂಡಗಂಡಾಯದ ಹಣವನ್ನು ಜನರು ಕೊಲೇಜ ನಿಧಿಗೆ ಅರ್ಪಿಸಿ ತಮ್ಮ ತ್ಯಾಗದ ಪುಣ್ಯವನ್ನು ಹಾಗೆಯೇ ಅಬಾಧಿತವಿಟ್ಟುಕೊಳ್ಳಬೇಕಾಗಿ ಅಪೇಕ್ಷೆಯಿದೆ. ಕೊಲೇಜ ಸಮಿತಿಯವರು ಒತ್ತಾಯದಿಂದ ಆ ಹಣ ತಮ್ಮ ಕಡೆ ಸೆಳೆದುಕೊಳ್ಳಬಯಸುತ್ತಾರೆಂದಾಗಲಿ ಸರಕಾರದವರಾದರೂ ಹಾಗೆ ಒತ್ತಾಯ ಮಾಡುತ್ತಾರೆ ವಾಗಲಿ ಯಾರೂ ತಿಳಿಯುವದು ಬೇಡ. ಕೊಲೇಜ ನಿಧಿಗೆ ತಾನು ಹಣ ಕೊಡಲೊಪ್ಪುವದಿಲ್ಲ (ಇಲ್ಲವೆ ಪೂರ್ಣ ಹಣ ತಾನು ಕೊಡಬಾರೆ) ಎಂದು ಯಾರೇ ನಿರ್ಧಾರದಿಂದ ಹೇಳುವರೋ ಅವರ ಹಣ ಅವರಿಗೇ ಸಿಗುವದು. ಅದ್ದರಿಂದ ಕೊಲೇಜ ಸಮಿತಿಯವರನ್ನಾಗಲಿ ಸರಕಾರದವರನ್ನಾಗಲಿ ಯಾರೂ ದೂರುವದು ಬೇಡ. ಇದೇ ಸಮಯದಲ್ಲಿ ಏಪ್ರಿಲ್ ತಿಂಗಳ ಮಾರ್ಗದರ್ಶಕದಲ್ಲಿ [illegible] ಪರದಿಂದ ಆಡಿಕೆ ಸುಂಕ [illegible] ವರಿಗೆ ಅವರು ಹೆಚ್ಚಿಗೆ ತೆತ್ತ ಸುಂಕದ ಹಣ [illegible] ಕೊಡುವ ವಿಚಾರವಿದೆ [illegible] ತಿರುಗಿ ಸಿಗುವ ಹಣವನ್ನು ಕೋಟುಗಾರರಂಗಲಿ, ವರ್ತಕರಾಗಲಿ, ಬೆಳಗಾರರಾಗಲಿ ನಮ್ಮ ಕೊಲೇಜ [illegible] ಅರ್ಪಿಸಬೇಕೆಂದು ಕೇಂದ್ರ ಎಸೆಂಬ್ಲಿಯಲ್ಲಿ ನಮ್ಮ ಪ್ರತಿನಿಧಿಗಳಾದ ಶ್ರೀ ದಾತಾತ್ರೇಯ ಕರಮರಕರರು [illegible] (ತಾ ೨೪) ದಿನ್ನ ವಿನಂತಿಸಿದ್ದಾರೆ. ಆಡಿಕೆ ಸುಂಕ ಕಡಿಮೆ ಮಾಡಿಸಿಕೊಳ್ಳಲಿಕ್ಕೆ ಶ್ರೀ ಕರಮರಕರರು ಎಷ್ಟು ಪರಿಶ್ರಮಪಟ್ಟರೆಂಬುದನ್ನು ಕೋಟುಗಾರ-ಬಂಧುಗಳೂ ಆಡಿಕೆ ವ್ಯಾಪಾರಸ್ಥರೂ ನೆನೆದು ಮತ್ತು ಅವರ ವಿನಂತಿಗೆ ಸಂಪೂರ್ಣ ಮನ್ನಣೆ ಕೊಟ್ಟು ವರ್ತಿಸಬೇಕೆಂದು ನಮ್ಮ ಆಗ್ರಹದ ಸೂಚನೆಯಿದೆ.

ನಮ್ಮ ಜಿಲ್ಹೆಗೆ ಬರುತ್ತಿರುವ [illegible] ಬೀಲ ಪಡಿತರಕೆ ಚೆಲೊರಂದು [illegible] ಬೀಲಗಳು ಅಂದರೆ [illegible] ದರ ಕಡೆ ಎಂದು ತಿಳಿದೆ. ಅವರೆ ಇನ್ನೂ ಅಷ್ಟು ಪದಾರ್ಥಕ್ಕೆ ಕೊರತೆಯಿಲ್ಲ. [illegible] ಪ್ರಕಾಶಗಳು, ಪತ್ರಿಕೆಗಳು ಎಂದು ಜನ ಹೇಳುತ್ತಿದ್ದಾರೆ. ಜೂನ ಜುಲೈ ತಿಂಗಳ ಬೀಲ [illegible] ಮೂರು ಬೀಲ ಕೆಟ್ಟು (ಸುಮಾರು ಬಿಡದ ಬಾಗಿಲಗಳ [illegible] ಕೊಟ್ಟು [illegible] ಎನಿಸು) ಕೇರಳ ಯಾವ ನೆಲಗಳ ಹಿಂದ ನಮ್ಮ ಜಿಲ್ಹೆಗೆ ಸರಬರಾಜು ಮಾಡಿ ಕೊಟ್ಟು ಮಾರಿ ಈಗ ಎಷ್ಟೋ ದಿವಸಗಳಾದವು. ಆದರೆ ಅದು [illegible] ಆದದ್ದು [illegible] ಹಳದೀಪುರದವರಿಗೆ ಕೊಟ್ಟು [illegible] ರಿಂದ [illegible] ಅನುಕೂಲತೆಗಳನ್ನು ಕೊಡ [illegible] ತರದವರು [illegible] ರಿಂದಲೂ [illegible] ಕೊರತೆಯೊಳಗಿಂದಲೂ ಇದು ಬಂದು ಜನರಿಗೆ ಸಿಕ್ಕದೆ ಬರುವ [illegible] ದಯಮಾಡಿದಂತಾಗುವದು!

ಕಳೆದ [illegible] ದ ಪ್ರಾರಂಭಕ್ಕೆ ಹೊಸ ಹಿರೆಮಠದಯ ಚಿತ್ರ [illegible] ಒಂದು ನಿರ್ಜನ ಹಿತ್ತಲೊಳಗಿನ [illegible] ದು ಸತ್ತು [illegible] ಉದ್ದದ [illegible] ನೀಲಿಯ ಪಕ್ಕಕ್ಕೆ ಹೋದಾಗ ಅವಳು [illegible] ಯಲ್ಲಿ [illegible] ಕೊಂಡು [illegible] ದಿವಸದ ವರೆಗೆ ಅವಳ ಪತ್ತೆ ಗೊತ್ತಿಲ್ಲ. [illegible] ದಿನ [illegible] ಯಲ್ಲಿ ಅವಳ ಹೆಣ ತೇಲುತ್ತಿದ್ದದ್ದು ಕಂಡುಬಂತು.

[illegible], [illegible] ಗಳಲ್ಲಿಯೂ ಸರಾಯಿಯ ಪೀಪಾಯಿಗಳು [illegible] ಬಂದಿದ್ದವು. [illegible] ದೊಳಗಿನ ಮದ್ಯಪ್ರಿಯರು ತಮ್ಮಲ್ಲಿ ಬಂದ ಸರಾಯಿಯನ್ನು ಹಂಚಿಕೊಂಡು ಅಲ್ಲಿ ಹಾಗಿದೆ [illegible] ಸ್ಥಳಕ್ಕೆ [illegible] ದಾರರು ಅದನ್ನು [illegible] ಕಡೆಯಿಂದ ಜಪ್ತ ಮಾಡಿಸಿದ್ದಾರೆ. ಧಾರೇಶ್ವರದಲ್ಲಿಯೂ ಒಂದು [illegible] ಸರಾಯಿಯ ಪೀಪಾಯನ್ನು ಅಧಿಕಾರಿಗಳು ಹುಡುಕಿ ತೆಗೆದು ಜಪ್ತ ಮಾಡಿದ್ದಾರಂತೆ. ಗೋಕರ್ಣದಲ್ಲಿ ಸಿಕ್ಕ ಪೀಪಾಯಿಯೊಳಗಿನ ಕೆಲವೊಂದು ಸರಾಯಿ ಕುಡಿದ ಒರ್ವನು ಅದರ ದಾಹ ಸಹಿಸಲಾಗದೆ ಸತ್ತು ಹೋದ ಸುದ್ದಿಯಿದೆ. ತೇಲಿ ಬಂದ ಸರಾಯಿಯು ಅಷ್ಟು ಉಗ್ರವಿದೆಯಂತೆ.

ಕಳೆದ ಮೆಟ್ರಿಕ ಪರೀಕ್ಷೆಯಲ್ಲಿ [illegible] ಗುಣಗಳನ್ನು ಪಡೆದು ಇದೇ ಜಿಲ್ಹೆಯಲ್ಲಿ ಮೊದಲನೆಯ ಸ್ಥಾನಕ್ಕೆ ಬಂದ ವಿದ್ಯಾರ್ಥಿ [illegible] ಗೋವಿಂದ ನಾಡಕರ್ಣಿ [illegible] ನು [illegible] ಇರುತ್ತಾನೆ. ಈ ಶಾಲೆಯಿಂದ ಪರೀಕ್ಷೆಗೆ ಕೂತವರಲ್ಲರಲ್ಲಿ ಮೂವರು ಉತ್ತೀರ್ಣರಾಗಿದ್ದಾರೆ.

ಸಾರ್ವಜನಿಕ [illegible] ಉಪ್ಪಿನ ಆಗರಗಳ ಬಗ್ಗೆ [illegible] ಮಾಡುವ ಇಂತ್ರದಿಗಳು ಸರಿಯಾಗಿ ಕೆಲಸ ಮಾಡುವದಿಲ್ಲೆಂದೂ ಅದರಿಂದ ಈ ಮಳೆಗಾಲದಲ್ಲಿ ಒಳಗಿನ ನೀರು ಹೆಚ್ಚಾಗಿ ಆಗರದ ಸುತ್ತಲೂ ಇರುವ ಹೊಲಗಳಿಗೆ ಬಹಳ ಪೆಟ್ಟುಗುತ್ತದೆಂತಲೂ ದೂರುಂಟು. ಇಂತ್ರದಿಯ [illegible] ತ್ರಕರು ಇತ್ತ ಲಕ್ಷ ಕೊಡಬೇಕಾಗಿ ಸೂಚನೆಯಿದೆ.

ಹೊನ್ನಾವರ— (ತಾ ೨೭-೬-೪೬) ಮಳೆ ಬಹಳ ಸುರಿಯುತ್ತಿದೆ. ಕಳೆದ ವಾರ ಮೀನ ಹಿಡಿಯಲು ಹೋದ ೧ ದೋಣಿ ಮುಳುಗಿ ಒಬ್ಬ ದಾಲಜಿಯು ಸತ್ತನು. ಇನ್ನೊಬ್ಬನು ಹೇಗಾದರೂ ದಡಕ್ಕೆ ಬಂದನು.

ಮುಗ್ವೆ ಪ್ರಾಥಮಿಕ ಶಾಲೆಯೊಳಗಿನ ಬ್ರಧರ ಶಾಲೆಯ [illegible] ಶಿಕ್ಷಕ ಮಾಧವನೆಂಬವನು ಶಾಲೆಯಲ್ಲಿ [illegible] ವರ್ಷ ಪ್ರಾಯದ ಹುಡುಗಿಯೊಬ್ಬಳ ಕೈಯಲ್ಲಿನ ಬಂಗಾರದ ಬಳೆಯನ್ನು ಬಾತಾಯಿರದಿಂದ [illegible] ಮಂಜನಾಥ ಶೆಟ್ಟಿ ಎಂಬಾತನ ಮಾರಿದ್ದನಂತೆ. ಈ ಕಳವಿನ ಪತ್ತೆ ಹಚ್ಚಿ ಪೋಲೀಸರು ಈಗ ಆ ಇಬ್ಬರಿಗೂ ಹಿಡಿದಿದ್ದಾರೆ.

ಇಲ್ಲಿಯ ನಗರ ಸಭೆಯವರು ಬೇಸಿಗೆಯಲ್ಲಿ ರೂ [illegible] ಕೈಯಿಂದ ಚೀಲದಂತೆ ೨೦೦ ಚೀಲ ಸಿಮೆಂಟ ಕೊಂಡಿದ್ದರು. ಈಗ ಊರಲ್ಲಿ ಸಿಮೆಂಟ ಸಿಗುವದಿಲ್ಲ. ಇದ್ದವರು ಚೀಲ ೧ಕ್ಕೆ ೬ ೭ ರೂ ಹೇಳುತ್ತಾರೆ. ಆದರೂ ನಗರ ಸಭೆಯವರು (ತಮ್ಮ ಎಸೆಂಬ್ಲಿ [illegible] ಅನುಭವ ಇರುತ್ತಾ) ತಮ್ಮ ಸಂಗ್ರಹದಲ್ಲಿದ್ದ [illegible] ಚೀಲ ಸಿಮೆಂಟನ್ನು ಚೀಲ ೧ಕ್ಕೆ ರೂ ೪-೨ ದಂತೆ ಮಾರಿದ್ದಾರಂತೆ. ಈ ವ್ಯವಹಾರದಲ್ಲಿ ಕಳ್ಳಾಟವಿಲ್ಲೆಂದು ಹೇಳುವ ಧೈರ್ಯ ಯಾರಿಗುಂಟು?

ಈಗ ಮಳೆಗಾಲದಲ್ಲಿ ಅಕ್ಕಿ ಅಭಾವ ತೀವ್ರವಾದದಂದ [illegible] ಅಟ್ಟಿದ್ದ ಸರಕಾರಿ ಉಗ್ರಾಣದೊಳಗಿನ ಅಕ್ಕಿ ಚೀಲಗಳು (ಅವನ್ನು ಹಾಗೆಯೇ ಕೊಟ್ಟರೆ) ಒಂದಿಷ್ಟು ಅಕ್ಕಿ ಹೆಚ್ಚಿಗೆಯೇ ಸಿಗಬೇಕು. ಆದರೆ ಇತ್ತಲಾಗಿ [illegible] ದಲ್ಲಿ [illegible] ಅಕ್ಕಿ ಕಡಿಮೆ ಬರುತ್ತದೆಂದು ಸೀಧಾ ಅಂಗಡಿಯವರು ಗೊಣಗುತ್ತಿದ್ದಾರೆ. ಹಳದೀಪುರ ಅಂಗಡಿಯವರು ಈ ಬಗ್ಗೆ ತಂಟೆ ಮಾಡಿ [illegible] ದ್ದಾರಂತೆ. ಹೀಗೆ ಉಗ್ರಾಣದಲ್ಲಿಟ್ಟ ಚೀಲಗಳೊಳಗಿನ ಅಕ್ಕಿ ಇಲ್ಲಿಯೇ ಕಡಿಮೆಯಾಗುತ್ತಿರುವ ಕಾರಣವೇನೆಂದು ಅಧಿಕಾರಿಗಳು ಚೌಕಶಿ ಮಾಡುವರೇ?

ಸೀಧಾ ಅಂಗಡಿಯಲ್ಲಿ ನಡುವೆ ಕೆಲವು ದಿನ ಬೆಲೋರ ಕುಚಿಗೆ ಅಕ್ಕಿ ಸಿಗುತ್ತಿತ್ತು. ಈಗ ಪುನಃ ಮುಗ್ಗು ಅಕ್ಕಿ ಕೊಡುತ್ತಾರೆ! ಗಿರಾಯಿಕರಿಗೂ ಸೊರಗಾಲದವರಿಗೂ ಬೆಲೋರ ಭತ್ತ ಕೊಡತೊಡಗಿದಾಗ ಈ ಮುಗ್ಗು ಮತ್ತು ಕಪ್ಪು ಅಕ್ಕಿ ಎಲ್ಲಿಂದ ಬರುತ್ತದೆಂಬುದೊಂದು ದೊಡ್ಡ ಗೂಢ! ಅದರ ಪತ್ತೆ ಹಚ್ಚುವದೊಳಿತು.

[illegible] ಈಗ ರಾಗಿ ಸಿಗುವದಿಲ್ಲ. ಗೋಧಿ ಅವರಿಗೆ ಪ್ರಯೋಜನವಿಲ್ಲ. ಗೋಧಿಗೆ ಬೇಕಾಗುವ ಹಾಲು, ತುಪ್ಪ ಅವರಲ್ಲಿಲ್ಲ! ಅದರಿಂದ ಅಕ್ಕಿಯಿಂದಲೇ ಅವರು ನಿರ್ವಾಹ ಸಾಗಿಸಬೇಕಾಗಿದೆ. ಆ ಅಕ್ಕಿ ಸಿಗುವದು ತಿಂಗಳೊಂದಕ್ಕೆ ತಲಾ [illegible] ಪಾಯಲಿ! ಇಷ್ಟು ಅಕ್ಕಿಯಿಂದ ಅವರ ಹೊಟ್ಟೆ ತುಂಬುವದು ಹೇಗೆ? ಅವರು ಕಾಯಿಕಷ್ಟ ಮಾಡುವದಾದರೂ ಹೇಗೆ?

ಭಟಕಳ— ಇಮ್ಮತ್ತಿಯ ಉರುವಲ ಪತ್ತಿ ಇರುವದರಿಂದಲೂ, ಉರುವಲ ಇರುವ ಸ್ಥಳ ದೂರದ್ದಾದ್ದರಿಂದ ಅದು ನೀರು ಕುಡಿಯುತ್ತದೆಂತಲೂ, ತಾವು ಜನರಿಗೆ ಕಷ್ಟ ವಾಗಬಾರದೆಂದು ಅದಷ್ಟು ಪ್ರಯತ್ನ ಮಾಡುತ್ತಿದ್ದೇವೆಂತಲೂ ಉರುವಲ ಉಗ್ರಾಣದಾರರು ತಿಳಿಸುತ್ತಾರೆ.

ಇ ಹೊಸದಾಗಿ ಬಂದಿರುವ ಡಾ|| ನಾಗಲಾಪರ ಸಹ ದವಾಖಾನೆಯೂ ಕೂಡ ಡಾಕ್ಟರ ಪರೀಕ್ಷೆ ಕೊಟ್ಟವರಿರುತ್ತಾರೆ. ಅವರ ವಿದ್ಯೆಯ ಪ್ರಯೋಜನ ನಗರ ಸಭೆಯವರು ಮಾಡಿಕೊಂಡಲ್ಲಿ ಜನಗಳಿಗೆ ಬಹಳ ಉಪಕಾರವಾದೀತು.

ಅಂಕೋಲಾ— (ತಾ ೧೮-೬-೪೬) ಇನ್ನು ಮುಂದೆ ಹಿಂದುಸ್ಥಾನಿಯು ರಾಷ್ಟ್ರಭಾಷೆಯಾಗುವದು ನಿಶ್ಚಿತ. ಪ್ರತಿಗಳಂತೆ ಅಧಿಕಾರಿಗಳೂ ಅದನ್ನು ಕಲಿತಿರಬೇಕು. ಹಾಗೆ ಹಿಂದುಸ್ಥಾನಿ ಕಲಿಯಲಿಚ್ಛಿಸುವ ಅಧಿಕಾರಿಗಳಿಗೆ ಹಿಂದುಸ್ಥಾನಿ ಕಲಿಸುವ ಏರ್ಪಾಟನ್ನು ಇಲ್ಲಿಯ ಹಿಂದೀ ಪ್ರಚಾರ ಸಂಘದವರು ಮಾಡಿದ್ದಾರೆ. ಹಿಂದೀ ಕಲಿಯಬೇಕೆನ್ನುವವರು ಎಜ್ಯುಕೇಶನಲ್ ಮುಖ್ಯಾಧ್ಯಾಪಕರ ಕಡೆ ಅವಶ್ಯವಿದ್ದ ಹಾಗೆ ಭೆಟ್ಟಿಯಾಗಬೇಕೆಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಈಗಿಲ್ಲಿ ಕಾರವಾರದ್ದಾಗಲಿ ಕುಮಟೆಯದ್ದಾಗಲಿ ಹೋಗಲು ಪೆಟ್ರೋಲ ಬಂಡಿಗಳಲ್ಲಿ ತಿಕೀಟು ಸಿಗುವದು ತೀರ ಕಷ್ಟವಾದೆ. ಕುಮಟೆಯಿಂದ ಕಾರವಾರಕ್ಕೆ ಇಲ್ಲವೆ ಕಾರವಾರದಿಂದ ಕುಮಟೆಗೆ ಹೋಗುವ ಬಂಡಿಗಳು ಮೊದಲೆ ತುಂಬಿ ಬರುತ್ತಿವೆ. ಇಲ್ಲಿಂದಲೇ ಹೊರಡುವ ಬಸ್ಸುಗಳೂ, ...

(೧ನೇ ಪುಟದ ಮೇಲೆ ಮುಂದುವರಿಕೆ)

WANTED

For a well-established Banking concern

•• AGENTS, ACCOUNTANTS, CLERKS

& CASHIERS who can furnish security

Applicants should state their qualifications,

previous experience and enclose testimonials, if any

Applications to be addressed to:--

The Manager, KANARA NEWS, KUMTA

ಜಿಲ್ಲಾ ಸಮಾಚಾರ.

(ಕಳಿಸ ಬಂದಿದ್ದು)

ಸಿದ್ದಾಪುರ— ತಾ. ೧೮-೬-೪೬ರ ವೃತ್ತದಲ್ಲಿ ಸಿದ್ದಾಪುರದ ರೇಶನ ವ್ಯಾಪಾರಿಗಳ ಸಂಬಂಧದಲ್ಲಿ ಪ್ರಕಟವಾದ ಸಂಗತಿಗಳು ನಿಜವಿರುವದಿಲ್ಲವಾಗಿ ತಿಳಿಯುತ್ತದೆ ತ್ರಯಸ್ಥರು ಬರೆಯುತ್ತಾರೆ ಹಿಂದೆ ಇಲ್ಲಿ ಫೌಜದಾರರಾಗಿದ್ದ ವರೊಬ್ಬರಿಗೂ ಸದರಿ ರೇಶನ ವರ್ತಕರಿಗೂ ಕೊಡ-ಕೊಳ್ಳುವ ವ್ಯವಹಾರದ ಸಂಬಂಧವಾಗಿ ವೈಮನಸ್ಸಿತ್ತು. ಆ ಫೌಜದಾರರು ಈ ವರ್ತಕರ ವಿರುದ್ಧ ವಿನಾಕಾರಣ ಭಾನಗಡಿ ಎಬ್ಬಿಸಬೇಕೆಂದು ಪ್ರಯತ್ನಿಸಿದ್ದರು ಆದರೆ ಮುಂದೆ ಯಶಸ್ವಿಯಾಗಲಿಲ್ಲ. ಆ ಪ್ರಕರಣದ ಉಲ್ಲೇಖ ಮಾಡಿ, ಅದರ ಕೊನೆಯ ಪರಿಣಾಮ ಏನಾಯಿತೆಂದು ಓದುಗರಿಗೆ ತಿಳಿಸದೆ, ರೇಶನ ವರ್ತಕರ ಮೇಲೆ ದೋಷಾರೋಪಣೆ ಮಾಡಿದ್ದು ತೀರ ಅನುಚಿತವೆಂದು ಸದರಿ ತ್ರಯಸ್ಥರ ಅಂಬೋಣವಿದೆ

ಹೇರೂರ ಸೀಮೆ ಈ ಪ್ರದೇಶ ಅಲ್ಲಿಯ ಜನರಿಗೆ ರಾಗಿ ಒಗ್ಗುವದಿಲ್ಲ ಆದರಿಂದ ಅವರು ಸೀಧಾ-ಧಾನ್ಯ ಕೊಡುವಾಗ ತಮಗೆ ಪೂರ್ಣ ಅಕ್ಕಿಯನ್ನು ಇಲ್ಲವೆ ಅಕ್ಕಿ ಮತ್ತು ಗೋದಿ ಯಾ ಜೋಳ ಕೊಡಬೇಕೆಂದು ಬೇಡುತ್ತಾರೆ ಆದರೆ ಈಗ ಹೇರೂರ ಸೀಧಾ-ಅಂಗಡಿಯಲ್ಲಿ ಜೋಳವೂ ಇಲ್ಲ, ಗೋದಿಯೂ ಇಲ್ಲ! ಆದರಿಂದ ರಾಗಿ ಬೇಡಾದವರು ಅಕ್ಕಿ ಮಾತ್ರ ಒಯ್ಯಬೇಕು ಆ ಅಕ್ಕಿ ಸಿಗುವದು ತಿಂಗಳೊಂದಕ್ಕೆ ತಲಾ ೨॥ (ತಲೆ ಹೊಡೆದು ಅಳೆದ) ಪಾಯಲಿ! ಇಷ್ಟು ಅಕ್ಕಿಯಿಂದ ತಮ್ಮ ನಿರ್ವಾಹ ಹೇಗಾಗಬೇಕೆಂದು ಅಲ್ಲಿಯ ಜನರು ಪ್ರಶ್ನಿಸುತ್ತಾರೆ ಜಿಲ್ಲಾಧಿಕಾರಿಗಳು ಅವರ ಪ್ರಶ್ನೆಗೆ ಉತ್ತರ ಕೊಡುವರೇ ?

ಹೇರೂರ ಸೀಮೆಯವರ ಇನ್ನೊಂದು ದೂರುಂಟು ಮಳೆಗಾಲದಲ್ಲಿ ಅಲ್ಲಿಯ ತೋಟಿಗರು ಅಡಿಕೆ ಮರಗಳಿಗೆ ಕೊಟ್ಟೆ ಕಟ್ಟಿಸಿಕೊಳ್ಳುತ್ತಾರೆ ಆ ಬಗ್ಗೆ ಘಟ್ಟದ ಕೆಳಗಿಂದ ಬರುವ ಕೂಲಿಯಾಳುಗಳನ್ನು ಅವರು ನಾಲ್ಕೆಂಟು ಯಾ ಹತ್ತಿಗ — ಕೆಲಸವಿದ್ದ ಪ್ರಕಾರ — ಕೆಲಸಕ್ಕಿಟ್ಟುಕೊಳ್ಳಬೇಕಾಗುತ್ತದೆ ಈ ಕೂಲಿಯವರಿಗೆ ತೋಟಿಗರು ಊಟ ಹಾಕಿ ಸಂಬಳ ಕೊಡಬೇಕು ಆದರೆ ಈ ಬಗ್ಗೆ ತೋಟಿಗರಿಗೆ ಹೆಚ್ಚಿಗೆ ಅಕ್ಕಿ ಸಿಗುವದಿಲ್ಲವಂತೆ ಆದರಿಂದ ಈ ಸಲ ಕೊಟ್ಟೆ ಕಟ್ಟಿಸಬೇಕೋ ಬೇಡವೋ ಎಂಬ ಪ್ರಶ್ನೆ ತೋಟಿಗರ ಮುಂದೆ ಬಂದು ಅವರಿಗೆ ಉಭಯ ಸಂಕಟವಾಗಿದೆ ಕೊಟ್ಟೆ ಕಟ್ಟಿಸುವಾ ಎಂದರೆ ಕೂಲಿಯಾಳುಗಳಿಗೆ ಊಟ ಹಾಕಲು ಅಕ್ಕಿ ಇಲ್ಲ! ಕೊಟ್ಟೆ ಕಟ್ಟಿಸುವದು ಬೇಡೆಂದು ಬಿಟ್ಟರೆ ಅವರ ಜೀವನಾಧಾರವಾದ ಅಡಿಕೆ ಬೆಳೆ ಹಾಳಾಗಿ ಹೋಗುತ್ತದೆ! ಸರಕಾರದವರು ತೋಟಿಗರನ್ನು ಈ ಸಂಕಟದೊಳಗಿಂದ ಕಾಯಲಾರರೆ ?

ಹೇರೂರ ಸೀಧಾ ಅಂಗಡಿಯಲ್ಲಿ ಅಂಗಡಿಯವರ ಸ್ವೈರ ಕಾರಭಾರ ನಡೆದಿದೆಯೆಂದು ದೂರು ಕೇಳಿಬರುತ್ತದೆ ಅಂಗಡಿಯವರಿಗೆ ಇಷ್ಟರಲ್ಲದಿದ್ದವರು (ವಿನಾಕಾರಣ ಅವಕೃಪೆಯಾಗಿ) ತಮ್ಮ ಸೀಧಾ ಚೀಟಿಯನ್ನು ಬೇರೆ ಜನರ ಕಡೆಗೆ ಕಳಿಸಿಕೊಟ್ಟು ಅಕ್ಕಿ ವಗೈರೆ ಕೊಡಬೇಕೆಂದರೆ "ಚೀಟಿಯ ಮಾಲಿಕರೇ ಬರಲಿ!" ಎಂದು ಹೇಳಿ ಸೀಧಾ ಕೊಡುವದಿಲ್ಲವಂತೆ ಇಷ್ಟರು ಬಂದರೆ ಅವರಿಗೆ ೨-೨, ೪-೪ ತಿಂಗಳ ಸೀಧಾ ಅಕ್ಕಿ ಸಹ ಒಮ್ಮೆಗಲೇ ಕೊಟ್ಟುಬಿಡುತ್ತಾರೆ! ಅಷ್ಟೇ ಅಲ್ಲ, ಅಂಗಡಿಯವರ ಗೆಳೆಯರು ೮,೧೦ ಜನರ ಸೀಧಾ ಚೀಟಿಗಳನ್ನು ಒಟ್ಟುಗೂಡಿಸಿ ತಂದರೆ ಕೂಡ ಅವರಿಗೆ ಆ ಎಲ್ಲ ಚೀಟಿಗಳ ಸೀಧಾ-ಸಾಮಗ್ರಿಯನ್ನು ಕಟ್ಟಿಕೊಡುತ್ತಾರೆ! ಆ ಸಾಮಗ್ರಿ ಚೀಟಿ ತಂದವರೇ ಒಯ್ಯುತ್ತಾರೋ ಅಥವಾ ಚೀಟಿಯ ಮಾಲಿಕರಿಗೆ ಒಪ್ಪಿಸುತ್ತಾರೋ ಎಂಬ ವಿಷಯಾಂತರ ಪ್ರಶ್ನೆಯನ್ನು ಸಹ ಕೇಳುವದಿಲ್ಲವಂತೆ! ಮೇಲಧಿಕಾರಿಗಳು ಅಂಗಡಿಯವರ ಈ ಸ್ವೇಚ್ಛಾವೃತ್ತಿಗೆ ತಡೆ ಹಾಕುವದುಚಿತ ಈ ಅಂಗಡಿಯವರು ಜನರಿಗೆ ಎಲ್ಲ ಸೀಧಾ ಸಾಮಗ್ರಿಯನ್ನು ಒಂದೇ ದಿನ ಕೊಡದೆ, ಅಕ್ಕಿಗಾಗಿ ಒಂದು ದಿನ, ಸಕ್ಕರೆಗಾಗಿ ಇನ್ನೊಂದು ದಿನ, ಎಣ್ಣೆಗಾಗಿ ಮತ್ತೊಂದು ದಿನ ನೇಮಿಸಿ ಜನರನ್ನು ಗೋಳಿಡಿಸುತ್ತಾರೆಂಬಲೂ ದೂರುಂಟು ಈ ದೂರನ್ನು ಅಧಿಕಾರಿಗಳು ಪರಿಹರಿಸಬೇಕು

ಸಿದ್ದಾಪುರ ಕಸಬಾ ಶಾಲೆಯಿಂದ ಮುಲ್ಕೀ ಪರೀಕ್ಷೆಗೆ ಕೂತ (೨೩+೪) ೨೭ ವಿದ್ಯಾರ್ಥಿಗಳಲ್ಲಿ ೯ ಮಂದಿ ಉತ್ತೀರ್ಣರಾಗಿದ್ದಾರೆ ಶಾಲಾ ಶಿಕ್ಷಕರಲ್ಲಿ ಹಲವರು ಶಿಕ್ಷಣವನ್ನು ಪಡಕೊಂಡಿದ್ದರಿಂದ ಇಷ್ಟು ಜನರಾದರೂ ಯಶಸ್ವಿಯಾದರು ಇಲ್ಲದಿದ್ದರೆ ಏನಾಗುತ್ತಿತ್ತೋ ದೇವರೇ ಬಲ್ಲ!

ಹೋದ ವರ್ಷ ದನಗಳಿಗೆ ಹತ್ತಿಕಾಳು ಕೊಡಬೇಕೆಂದು ಸರಕಾರದವರು ಆಜ್ಞೆ ಹೊರಡಿಸಿದ್ದರೇನೋ ಆಯಿತು ಆದರೆ ಕೊಡುವವರಾರು ಎಂಬುದೇ ತಿಳಿಯದು! ಸ್ಥಾನಿಕ ಅಧಿಕಾರಿಗಳಿಗೆ ಕೇಳಿದರೆ ಮೇಲಿನಂತೆ ಆ ಕಾಮದಲ್ಲಿ ತಮಗೆ ಗೊತ್ತಿಲ್ಲೆಂದು ಉತ್ತರಿಸುತ್ತಾರೆ!

ಇಲ್ಲಿಯ ಮಾಮಲೇದಾರರು ಕಳ್ಳ ಪೇಟೆಯನ್ನು ಅಡಗಿಸುವ ಪ್ರಯತ್ನದಲ್ಲಿರೋ ಇದ್ದಾರೆ ಆದರೆ ಅವರ ಪ್ರಯತ್ನಗಳೆಲ್ಲ ನಿಷ್ಫಲವಾಗುತ್ತವೆ ಯಾಕೆಂದರೆ ಕಳ್ಳ ಪೇಟೆಯು ಸರಕುಂಟಿದೆ. ತಿಳಿದು ಮಾಮಲೇದಾರರು ಅಲ್ಲಿ ಹೋಗಿ ದಾಳಿ ಮಾಡಿದರೆ ಆ ಸರಕೇ ಸಿಗುವದಿಲ್ಲ! ಕಾರಣವೇನು ಬಲ್ಲಿರಾ? ಮಾಮಲೇದಾರರು ದಾಳಿಯ ಸಂಕಲ್ಪ ಮಾಡುವಷ್ಟರಲ್ಲಿ ಮಾಮಲೇದಾರರ ಪರಿವಾರದೊಳಗಿನ ಜನರು ಕೂಡಲೇ ಅಂತರಂಗದಿಂದ ಆ ಕಳ್ಳ ವರ್ತಕರಿಗೆ ಇಲ್ಲವೆ ಆ ಕಳ್ಳ ಸಂಗ್ರಹಕಾರರಿಗೆ ಬರಲಿರುವ ಸಂಕಟದ ಸೂಚನೆ ಕಳಿಸಿ ಜಾಗ್ರತೆಯಿಂದ ಇರಲು ತಿಳಿಸುತ್ತಾರೆ! ಕಚೇರಿಯ ಶಿಬಂದಿಗೂ ಕಳ್ಳ ಪೇಟೆಗೂ ಅಷ್ಟು ಆಪ್ತತ್ವವೂ ಮಧುರಾನುಬಂಧವೂ ಉಂಟು! ಮಾಮಲೇದಾರರಿಗೆ ಇದು ಇನ್ನೂ ಗೊತ್ತಾಗದಿದ್ದದ್ದು ಪರಮಾಶ್ಚರ್ಯ!

ಕಾಂಗ್ರೆಸ ಸರಕಾರದ ಅಪ್ಪಣೆಯಂತೆ ಈಗ ಜನರಿಗೆ ಪುಂಡಗಂದಾಯ ತಿರುಗಿ ಸಿಗುತ್ತಿದೆ ಆದರೆ ಪುಂಡಗಂದಾಯದ ವಸೂಲಿಯ ಸಂಧರ್ಭದಲ್ಲಿ ಎಷ್ಟೋ ಜನರ ಚರ-ಜಂಗಮಿಯನ್ನು ವಸೂಲಿಯ ಜವಾನರು ಜಪ್ತ ಮಾಡಿ ದುಡ್ಡಿಗಾಗಿದು ಪಂಚೈತಿನಂತೆ ಅದನ್ನು ಮಾರಿ (ಅದು ತಪ್ಪೆ ಕಾಗೇ!) ಹಾಸಿಗೊಳಿಸಿದ್ದುಂಟು ಎಷ್ಟೋ ಜನರಿಂದ ಪಾವತಿ ಕೊಡದೆ ಮೊದಲು ಪುಂಡಗಂದಾಯ ವಸೂಲ ಮಾಡಿ ಹಿಂದಿನಿಂದ ಪಾವತಿ ಕೊಟ್ಟು ಪುನಃ ವಸೂಲ ಮಾಡಿದ್ದೂ ಉಂಟು! ಈ ಹಾನಿಯನ್ನು ತುಂಬಿಕೊಟ್ಟರೆ ಇಲ್ಲವೆ ಕೊಡಿಸಿದರೆ ಮಾತ್ರ ಸರಕಾರಕ್ಕೆ ಪುಂಡಗಂದಾಯ ತಿರುಗಿ ಕೊಟ್ಟ ಪೂರ್ಣ ಪುಣ್ಯ ಸಿಗುವದು

ಕಾಂಗ್ರೆಸ ಚುನಾವಣೆಗಳು ಈಗ ಮುಗಿದಿದ್ದು ರಾ॥ ಗೋಪಾಲ ಮಡಗಾಂವಕರರು ತಾಲೂಕ ಕೋಂ॥ ಕಮಿಟಿಯ ಅಧ್ಯಕ್ಷರಾಗಿಯೂ, ರಾ॥ ಗಣಪಯ್ಯ ವಸ್ಥಾಳೇ ಪ್ರಭು ಇವರು ನಗರ ಕೋಂ॥ ಸಮಿತಿಯ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ

ಬೇಡಕಣಿ ಸೀಧಾ ಅಂಗಡಿಯಲ್ಲಿ ಸೀಧಾ ಸಾಮಾನು ಹೊತ್ತಿಗೆ ಸಿಗುವದಿಲ್ಲವಂತೆ ಮುಂಜಾನೆ ಬಂದವರಿಗೆ ಮಧ್ಯಾನ್ಹಕ್ಕೆ ಬಾ ಎಂದೂ, ಮಧ್ಯಾನ್ಹದಲ್ಲಿ ಬಂದವರಿಗೆ ಮರುದಿನ ಬಾ ಎಂದೂ ಅಂಗಡಿಯವರು ಹೇಳುವದುಂಟು! ಒಮ್ಮೊಮ್ಮೆ ಗೌಡರು ಬರಲಿ ಎಂದು ಹೇಳಿ ಜನರಿಗೆ ಕೂಡ್ರಿಸಿಕೊಳ್ಳುತ್ತಾರೆ! ಕೊನೆಗೆ ಗೌಡರು ಬಂದು ಹಣವಿಲ್ಲದ್ದರಿಂದ ಅಕ್ಕಿ ತರಿಸಲಾಗಲಿಲ್ಲೆಂದು ಹೇಳಿ ಜನರಿಗೆ ಬರಿಗೈಯಿಂದ ಮನೆಗೆ ಕಳಿಸಿಕೊಡುತ್ತಾರೆ ಆದರಿಂದ ಆ ಸೀಮೆಯವರು ತಿಂಗಳಿಗೆ ೨ ಏಕಾದಶಿಗಳ ಬದಲು ೮-೧೦ ಏಕಾದಶಿಗಳನ್ನು ಮಾಡುವ ಪ್ರಸಂಗ ಬರುತ್ತದಂತೆ!! ಹಿಂದೆ ಈ ಅಂಗಡಿಯಲ್ಲಿ ಸಕ್ಕರೆಯ ಧಾರಣಿ ರತ್ತಲೊಂದಕ್ಕೆ ೪। ಆಣೆಯಿತ್ತು, ಅದೀಗ ೪॥ ಆಣೆಯಾಗಿದೆ. ಅದೇಕೆ?

ಕಾನಸೂರ ಫಿರ್ಕೆಗೆ ಹೊಸದಾಗಿ ಬಂದ ಕಾನಬೋಗರು ಹಳೆಯ ಸೀಧಾ-ಚೀಟಿಗಳನ್ನು ದುರುಸ್ತಿ ಮಾಡಿಕೊಡಬೇಕಾದರೆ ಹಳ್ಳಿಗರಿಗೆ ಬಹಳ ತೊಂದರೆ ಕೊಡುತ್ತಾರಂತೆ. ವಿನಾದರೂ ದಕ್ಷಿಣ ಎತ್ತುವ ಉದ್ದೇಶದಿಂದ ಅವರು ಹಾಗೆ ಮಾಡುತ್ತಿದ್ದರೆ, ಹಾಗೆ ದಕ್ಷಿಣ ಕೊಡಬೇಕೆಂದು ಜನರಿಗೆ ಸ್ಪಷ್ಟ ಹೇಳಿ ಕೊಂಡರೆ ಕೊಡಬಾರದಾಗಿ ಓರ್ವ ಹಳ್ಳಿಗರ ಸೂಚನೆಯಿದೆ ಈ ಮಳೆಗಾಲದಲ್ಲಿ ಬೇರೆ ಎಲ್ಲಾ ಸಾಮಗ್ರಿಗಳಿಗೆ ಕಾಟ್ಟೆ ದರ ಕೊಟ್ಟಂತೆ ಕಾನಭೋಗರಿಗೆ ಕೆಲವೊಂದು ದಕ್ಷಿಣೆ ಕೊಡಲು ಜನರು ಒಪ್ಪಿದ್ದಾರಂತೆ ಅವರ ಅಂಬೋಣ

ಶಿರಸಿ-ಸಿದ್ದಾಪುರ ತಾಲೂಕುಗಳಿಗೆ ಕೂಡಿ ಒಂದೇ ರೇಂಜರರಿದ್ದಾರೆ. ಅವರ ಕಚೇರಿ ಶಿರಸಿಯಲ್ಲಿಯಂತೆ. ಸಿದ್ದಾಪುರ ಕಸಬಿಯಲ್ಲಿ ಓರ್ವ ರೌಂಡ ಫಾರೆಸ್ಟರು ಮಾತ್ರ ಇದ್ದಾರೆ ಆದರೆ ಇಲ್ಲಿಯ ಜನರು ಪ್ರತಿಯೊಂದು ಮಾತಿಗೂ ಶಿರಸಿಗೆ ಹೋಗಬೇಕು! ಜಂಗಲ-ಸವಲತ್ತುಗಳನ್ನೂ ಮನೆ ಕಟ್ಟುವ ಕಟ್ಟಿಗೆ ಪಡಕೊಳ್ಳುವ ಬಗ್ಗೆ ರೈತರು ಸರಕಾರದಲ್ಲಿ ಮುಂಗಡ ಕಟ್ಟಬೇಕಾದ ಹಣದ ಬಗ್ಗೆ ಚಲನದ ಫಾರ್ಮು ಬೇಕಾದರೆ ಸಹ ಈ ರೌಂಡ ಫಾರೆಸ್ಟರರಲ್ಲಿ ಸಿಗುವದಿಲ್ಲ! ಆ ಬಗ್ಗೆ ರೈತರು ಶಿರಸಿಯ ಯಾತ್ರೆಯನ್ನೇ ಮಾಡಬೇಕು! ಒಮ್ಮೊಮ್ಮೆ ಕಟ್ಟಿಗೆ ಕಡಿಯಲು ಕೂಲಿಯಾಳುಗಳು ಸಿಗದ್ದರಿಂದ (ಘಟ್ಟದ ಕೆಳಗಿನವರು ಬಂದರೆ ಮಾತ್ರ ಸಿಗುತ್ತಾರೆ, ಇಲ್ಲವಿದ್ದರೆ ಇಲ್ಲ) ರೇಂಜರರು ಕೊಡುವ ಪರವಾನಿಗೆ ಚೀಟಿಗಳು ನಿರರ್ಥಕವಾಗುತ್ತವೆ ಅಂತಹ ಸಂದರ್ಭಗಳಲ್ಲಿ ರೈತರು ಕಟ್ಟಿದ ಹಣ ತಿರುಗಿ ಕೊಡಬೇಕೆಂದು ನಿಯಮವುಂಟು ಆದರೆ ವರ್ಷಗಟ್ಟಲೆಯಾದರೂ ಆ ಹಣ ತಿರುಗಿ ಸಿಗುವದಿಲ್ಲ! ಇಲ್ಲಿಯ ರಾ॥ ಗಣಪಯ್ಯ ಪ್ರಭು ಎಂಬವರು ರೂ ೧೨ ಮತ್ತು ಅವರ ಮಗ ರೂ ೧೨ ಸರಕಾರದಲ್ಲಿ ಭರಣಾ ಮಾಡಿ ಗತವರ್ಷದಲ್ಲಿ ಎರಡು ಪರವಾನಿಗೆಗಳನ್ನು ಪಡೆಕೊಂಡಿದ್ದರು ಅವು ನಿರರ್ಥಕವಾದವು ಅವರು ತಮ್ಮ ಹಣ ತಿರುಗಿ ಬೇಡಿ, ಅರ್ಜಿಗಳ ಮೇಲೆ ಅರ್ಜಿ ಮಾಡುತ್ತಿದ್ದಾರೆ ಕಳೆದ ಜನವರಿಯಲ್ಲಿ ಕೊನೆಗೆ ಡಿ ಎಫ್ ಓ ಸಾಹೇಬರಿಗೂ ಅವರು ಅರ್ಜಿ ಮಾಡಿದರು ಆದರೂ ಈ ವರೆಗೆ ಅವರ ಹಣ ತಿರುಗಿ ಸಿಗಲಿಲ್ಲವಂತೆ! ಜಂಗಲ ಖಾತೆಯ ಸವಲತ್ತುಗಳು ಎಷ್ಟು ಲೋಕೋಪಕಾರಿಯಾಗಿವೆ ನೋಡಿರಿ

ಶಿರಸಿ— (ತಾ ೩-೬-೪೬) ಹನುಮಂತ ದೇವಸ್ಥಾನದ ಸೀಧಾ ಅಂಗಡಿಯಲ್ಲಿ ಅಂಗಡಿಯ ಕಾರಕೂನನದೇ ಸರ್ವಾಧಿಕಾರವಾಗಿದೆ ಮಾಲಕರು ಅವನ ಕಾರಭಾರದಲ್ಲಿ ಕೈಹಾಕುವಂತಿಲ್ಲ! ಅಷ್ಟು ಅವರು ಆ ಕಾರಕೂನನ ಮೇಲೆ ಮರುಳಾಗಿ ಹೋಗಿದ್ದಾರೆ! ೩-೪ ದಿನಗಳ ಹಿಂದೆ ರಾ॥ ಸಹಕಾರ ವೆಂಕಟರಮಣ ಹೆಗಡೆಯವರಿಗೂ ಈ ಕಾರಕೂನನಿಗೂ ಹತ್ತಿಕಾಳಿನ ಸೀಧಾ ಬಗ್ಗೆ ಏನೋ ಚಕಮಕಿಯುಂಟಾಗಿತ್ತು ಆಗ ಆ ಕಾರಕೂನನು "ನಿಮ್ಮ ಕಾರ್ಡನ್ನು ೪ ತಿಂಗಳು ರದ್ದು ಮಾಡಿಸುವ ಸಾಮರ್ಥ್ಯ ನನಗುಂಟು! ಸುಮ್ಮನೆ ಹಾದಿ ಹಿಡಿದು ಹೋಗಿರಿ!" ಎಂದು ರಾ॥ ಹೆಗಡೆಯವರ ಮೈಮೇಲೆ ಬಹಳ ಹಾರಿದನಂತೆ! ಅಧಿಕಾರಿಗಳಾದರೂ ಈ ಕಾರಕೂನನಿಗೆ ಬುದ್ಧಿ ಕಲಿಸಬೇಕೆಂದು ಪ್ರಾರ್ಥನೆ

(ತಾ ೧೧-೬-೪೬) ಹುಲೇಕಲ್ಲ ಯೋಗ್ಯ ದರದ ಅಂಗಡಿ ಹುಲೇಕಲ್ಲ ಸಹಕಾರಿ ಸಂಘದವರ ಕಡೆಗಿದೆ ಕಳೆದ ವರ್ಷ ಈ ಅಂಗಡಿಯಲ್ಲಿ ರೂ ೧೦೦೦-೧೨೦೦ ರ ಮಟ್ಟಿಗೆ ಲಾಭವಾಗಿತ್ತಂತೆ ಆದರಿಂದಲೋ ಏನೋ ಈ ವರ್ಷ ಅಂಗಡಿಯ ಶಿಬಂದಿಯನ್ನು ಬೆಳೆಸಿಕೊಂಡಿದ್ದಾರೆ ಅಂಗಡಿಯವರು ತಂದು ಮಾರುವದು ಅಕ್ಕಿ, ಸಕ್ಕರೆ, ಚಿಮಣಿ ಎಣ್ಣೆ ಈ ಮೂರೇ ಜಿನಸುಗಳನ್ನು ಆ ಮೂರು ಜಿನಸುಗಳನ್ನು ಕೊಡಲು ಮೂರು ಇಸಮುಗಳನ್ನು ನೇಮಿಸಿಕೊಂಡಿದ್ದಾರೆ! ಆದರಿಂದ ಈ ವರ್ಷದ ಲಾಭಾಂಶವು ಕಡಿಮೆ ಆಗಬಹುದೆಂಬ ಮಾತೇಯುಂಟು! ಈ ಹಾನಿ ತುಂಬಿ ತೆಗೆಯಲಿಕ್ಕೋ ಏನೋ ಈ ತಿಂಗಳಿಂದ ಅಂಗಡಿಯವರು ಪತ್ತೇಕಾಳು ತರಿಸಿದ್ದಾರೆ ಅದರ ಕಿರಕೋಳ ಧಾರಣಿ ರೂಪಾಯಿಗೆ ೧೩-೧೩॥ ರತ್ತಲಿನಂತೆ ಅದನ್ನು ರತ್ತಲಿಗೆ ೩ ಆಣೆಯಂತೆ ಮಾರುತ್ತಿದ್ದಾರೆ! ಇದಕ್ಕಾಗಿ ಅಂಗಡಿಯ ಹೆಸರು "ಯೋಗ್ಯ ದರದ ಅಂಗಡಿ"ಯೆಂದೇ ಉಂಟು!!

(ತಾ ೨೪-೬-೪೬) ಬನವಾಸಿ ಸಮೀಪದ ವರದಾ ನದಿಯಲ್ಲಿ ಮಳೆಗಾಲದೊಳಗೆ ದೋಣಿಯಿಂದ ಜನರನ್ನು ದಾಟಿಸಬೇಕಾಗುತ್ತದೆ ಆ ಹಾರಿ-ಮಕ್ತೆಯನ್ನು ಬನವಾಸಿಯ ಮಹಮ್ಮದ ಎಂಬವನು ಹಿಡಿದಿದ್ದಾನೆ ಅವನು ತಾನು ದಾಟಿಸುವ ಪ್ರತಿಯೊಬ್ಬನಿಂದ ಪ್ರತಿ ಸಾರೆ ಒಂದಾಣೆಯಂತೆ ವಸೂಲ ಮಾಡುತ್ತಿದ್ದಾನೆ. ಆದರಿಂದ ಹೊಳೆಯಾಚೆಯಿಂದ ಬನವಾಸಿ ಪೇಟೆಗೆ ಪುನಃ ಪುನಃ ಬರಬೇಕಾದ ಜನರಿಗೆ ಬಹಳ ತೊಂದರೆಯಾಗಿದೆ! ಹಾರಿಯ ಮೈಲಿ (ವಾರ್ಷಿಕ ಗುತ್ತಿಗೆ) ಮಾಡಲಿಚ್ಛಿಸುವವರು ಮನೆಯೊಂದಕ್ಕೆ ತಲೆ ತುಂಬಿ ಅಳೆದ ೧೬ ಸೇರು ಭತ್ತ ಕೊಡಬೇಕೆಂದು ಮಹಮ್ಮದನ ಆಗ್ರಹವುಂಟು! ಸಂಬಂಧಪಟ್ಟ ಅಧಿಕಾರಿಗಳು ಈ ಸುಲಿಗೆಯನ್ನು ನಿಲ್ಲಿಸಬೇಕಾಗಿ ಅರಿಕೆಯಿದೆ

THE BANK OF RURAL INDIA, LTD.,

(INCORPORATED IN BRITISH INDIA)

Head Office: "SATYABHAMA BHUVANAM" KARWAR. N K

THE BOARD OF DIRECTORS OF THE BANK HAVE PLEASURE TO ANNOUNCE THE OPENING OF SUB BRANCHES AT THE FOLLOWING PLACES AT AN EARLY DATE.

BHATKAL (N. Kanara)
ANKOLA (N. Kanara)
SIDDAPUR (N. Kanara)

Karwar,
27-6-1946

P. X. GRACIOUS,
MANAGING DIRECTOR

ವಾಚನೀಯ ವಾರ್ತೆಗಳು.

— ಮಿತ್ರ ಸರಕಾರವು [illegible] ಸಂಶೋಧನದಲ್ಲಿ ಪತ್ರಿಯ [illegible] ಈಗ ಪತ್ರಿ ಬೆಳೆಯುತ್ತಿದೆ [illegible] ಹತ್ತಿ ಬಟ್ಟೆ [illegible] ಸಾಮಗ್ರಿ ದುರ್ಲಭವಾಗಿದೆ [illegible] ಸಂಶೋಧನದ ಪ್ರಯೋಗದಿಂದ ಪತ್ರಿಯ [illegible] ಈ ಸಂಶೋಧನಕ್ಕೆ ೧೯೪೦ರಲ್ಲಿ [illegible] ಪತ್ರಿಯು ಕಾಳಿನ ಮೇಲೆಯೇ ಕೆಲವೊಂದು [illegible] ಪ್ರಯೋಗ ಮಾಡಿ ಅದರ ಗುಣಧರ್ಮಗಳಲ್ಲಿ ವ್ಯತ್ಯಾಸ ಮಾಡಲ್ಪಟ್ಟಿತು [illegible] ನೀಲಿ, ಗುಲಾಬಿ, ಹಳದಿ ಮೊದಲಾದ [illegible] ಪತ್ರಿಯು ಈ ಬಣ್ಣಗಳ ಬಟ್ಟೆ ಹೋಗುವದಿಲ್ಲವಂತೆ, ಕುಂದುವದಿಲ್ಲವಂತೆ

— ಸುಯೇಜ ಕಾಲುವೆಯ ಸಂಬಂಧದಲ್ಲಿ ಬ್ರಿಟಿಶ ಸರಕಾರಕ್ಕೂ ಇಜಿಪ್ತ ಸರಕಾರಕ್ಕೂ ವಿವಾದ ಉಂಟಾಗಿ [illegible] ಸುಯೇಜ ಕಾಲುವೆಯು ಒಡೆತನ ನ್ಯಾಯ [illegible] ಇಜಿಪ್ತ ಸರಕಾರದ್ದಿದೆ ಆದರೆ ಬ್ರಿಟಿಶ ಸಾಮ್ರಾಜ್ಯ ಸತ್ತೆಯ ಬಲದಿಂದ ಸುಯೇಜ ಕಾಲುವೆಯು ಆಡಳಿತೆಯನ್ನು ಈ ತನಕ ನಡಿಸುತ್ತ ಬಂದಿದ್ದರು. ಇಜಿಪ್ತ ಸರಕಾರವು ಈಗ ಸುಯೇಜ ಕಾಲುವೆಯು ಒಡೆತನವನ್ನು [illegible] ಹಟ ಹಿಡಿದಿದೆ ಅಮೇರಿಕೆಯ ಸರಕಾರವು ಈ [illegible] ಇಜಿಪ್ತ ಸರಕಾರದ ಬೆಂಬಲಕ್ಕಿದೆ ಸುಯೇಜ ಕಾಲುವೆಯು ಆಡಳಿತೆಯು ಬ್ರಿಟಿಶರ ಕೈತಪ್ಪಿದರೆ ಅರಬಸ್ತಾನ, ತುರ್ಕಸ್ತಾನ, ಇರಾಣ, ಅಫಗಾನಿಸ್ಥಾನ, ಹಿಂದುಸ್ತಾನ ಮೊದಲಾದ ಪೂರ್ವ ಪಾರ್ಶ್ವದ ದೇಶಗಳ [illegible] ಬ್ರಿಟಿಶರಿಗೆ ತಪ್ಪುತ್ತದೆ ಅದರಿಂದ [illegible] ಪಾಲಿಸ್ತಾನದೊಳಗಿನ [illegible] ಕಾಲುವೆಯನ್ನ, [illegible] ಕಾಲುವೆಯನ್ನು ಕಡಿಸಬೇಕೆಂಬ [illegible] ಬ್ರಿಟಿಶರು ಒಂದು ಯೋಜನೆ ತಯಾರಿಸಿದ್ದಾರೆ ಈ ಕಾಲುವೆ [illegible] ಸುಯೇಜ ಕಾಲುವೆಯ [illegible] ಈ ಕಾಲುವೆಯು ಆಡಳಿತೆಯೂ ಒಡೆತನವೂ ಬ್ರಿಟಿಶ ಜನಾಂಗದ ಕಡೆಗೆ ಉಳಿಯುವದು, [illegible] ಬರಬಾರದು ಪ್ರಸಂಗ ಬರಲಿಕ್ಕಿಲ್ಲ

— ಹಿಂದುಸ್ತಾನದೊಳಗೆ ಈ ವರುಷ ಅಕ್ಕಿಯ ಬರಗಾಲ ಉಂಟು, ಜನರು ಉಪವಾಸ ಸಾಯುವ ಭೀತಿಯುಂಟು ಕೊಂಗ್ರೆಸ ಸರಕಾರಗಳು ತಮ್ಮ ತಮ್ಮ ಪ್ರಾಂತಗಳಿಗೆ ಅಕ್ಕಿ ಪೂರೈಸಲ್ಪಡುವದಕ್ಕಾಗಿ ಬಗೆಬಗೆಯ ಪ್ರಯತ್ನಗಳನ್ನು ನಡಿಸಿವೆ ಮದ್ರಾಸ ಪ್ರಾಂತದೊಳಗೆ ಪಡಭೂಮಿಗಳನ್ನು ಈ ಮಳೆಗಾಲದಲ್ಲಿ [illegible] ಮಾಡುವದಕ್ಕೆ ಜನರಿಗೆ [illegible] ಬಂಜರು ಬಿದ್ದ ಭೂಮಿಗಳನ್ನು ಉಳ್ಳ [illegible] ಸರಕಾರವೇ [illegible] ಉತ್ಪತ್ತಿ ಬೆಳಸಬೇಕೆಂದು [illegible] ಮದ್ರಾಸ ಸರಕಾರಕ್ಕೆ [illegible] ಸಂಗ್ರಹವನ್ನು ಹಚ್ಚಿ [illegible] ಮದ್ರಾಸ ಸರಕಾರವು ಸದ್ಯಕ್ಕೆ ಒಂದು ಪ್ರಕಟನೆ ಹೊರಡಿಸಿದೆ ಇದರ [illegible] ಸರಕಾರಕ್ಕೆ ಅಕ್ಕಿಯನ್ನು [illegible] ಒಂದಕ್ಕೆ [illegible] ಇನಾಮು ಕೊಡಲಾಗಿದೆ [illegible] ಮೇಲೆ ಈ ಇನಾಮು [illegible] ಸಂಗ್ರಹ [illegible] ಧಾನ್ಯಗಳನ್ನು [illegible] ಸರಕಾರಕ್ಕೆ [illegible] ಇನಾಮು [illegible] ಸರಕಾರವು ಜಾಹೀರ ಮಾಡಿದೆ

— ಬಂಗಿಭಂಗದ ಆಂದೋಲನದ ಕಾಲಕ್ಕೆ ನಡೆದ ಒಂದು ಕಥೆ ಒಬ್ಬ [illegible] ಕೆಲವು [illegible] ಟರ್ನ ಪೋಲೀಸ ಇನ್ಸಪೆಕ್ಟರನ ಕೊಲೆ ಮಾಡಲು [illegible] ಕೊಲೆ ಮಾಡಿ [illegible] ದಾರಿಯನ್ನು [illegible] ಬಗ್ಗೆ [illegible] ಕೆಲಸವುಂಟೆಂದು [illegible] ಬರಮಾಡಿಕೊಂಡು [illegible] ಇನ್ಸಪೆಕ್ಟ [illegible] ಪೋಲೀಸ [illegible]

[illegible] ಪ್ರಾಂತಗಳ ಚಟುವಟಿಕೆಗಳಲ್ಲಿ ಅವನ [illegible] ಅವನ [illegible] ಪೋಲೀಸ [illegible] ತಂದು [illegible] ಅವನ [illegible] ಇದ್ದಿಲ್ಲ. [illegible] ಅವನ ಹತ್ತಿರ ಅವು ಇರುವ [illegible] ಪೋಲೀಸ ಅಧಿಕಾರಿಗಳು ಅವನನ್ನು ಬಿಡಲಿಲ್ಲ [illegible] ಅವನೇ ಈ ಕೊಲೆ ಮಾಡಿದವನೆಂದು [illegible] ಮಾಡಲು ಪೋಲೀಸರು [illegible] ಕುರಿತು [illegible] ಮಾಡಿಸಿದರು । [illegible] ಬ್ಯಾರಿಸ್ಟರ [illegible] ಭಾರವನ್ನು [illegible] ದೇಶಬಂಧು ಚಿತ್ತರಂಜನ ದಾಸರ ಮೇಲೆ [illegible] ಕೊಲೆ [illegible] ಓಡಿಹೋಗುತ್ತಿದ್ದ ಆರೋಪಿಗೆ ಹಿಡಿದಿದ್ದ [illegible] ಆರೋಪಿಯು [illegible] ಎಲ್ಲರೂ ಭಾವಿಸಿದ್ದರು ಅದರ [illegible] ಕ್ರಿಯಾರ್ಗಿಯು [illegible] ಬಂದರು [illegible] ಕೆಲವು ದಾಸರೇ [illegible] ಹೀಗೆ [illegible] ತ್ರಿವರ್ಗ ನಡುವೆ ಒಂದು ಕತೆ " [illegible] ಇನ್ಸಪೆಕ್ಟರನ [illegible] ಗುಂಡಗಳು [illegible] ಈ [illegible] ನೋಡಿ ಹೇಳಿರಿ " ಎಂದು ದಾಸರು [illegible] ಮಾಡಿದರು ನ್ಯಾಯಾಧೀಶರು ತಂದರು [illegible] ಇನ್ಸಪೆಕ್ಟರನ [illegible] ಗುಂಡುಗಳನ್ನು [illegible] ಅವು ಸರಿಯಾಗಿ [illegible] ಆ ಗುಂಡುಗಳು ಆರೋಪಿಯ [illegible] ಪಿಸ್ತೂಲಿನಿಂದ ಹಾರಿದವಲ್ಲವೆಂದು [illegible] ಸಿದ್ಧವಾದ್ದರಿಂದ ಕೊನೆಗೆ ಆರೋಪಿಯು ನಿರ್ದೋಷಿಯೆಂದು ತೀರ್ಮಾನವಾಯಿತು ದೇಶಬಂಧು ದಾಸರ ವಕೀಲಿಯ ಚಾತುರ್ಯ ನೋಡಿರಿ ಪೋಲೀಸ [illegible] ಹೇಗೆ ಒಬ್ಬನನ್ನು ಗಲ್ಲಿಗೆ ಹಾಕಿ [illegible] ಎಂಬದನ್ನು [illegible] ಮಾಡಿದರು

ದಿ ಕೊಮರ್ಶಿಯಲ್ ಕೊಪ್ರೋರೇಶನ್,
ಕುಮಟಾ.
ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತವೆ
ವಿ. ಎಮ್. ಮಿಜಾರ್ನಕರ,
ಮೋಟರ ಸ್ಟೆಂಡ, ಕುಮಟಾ

ನಮ್ಮಲ್ಲಿ (ಹೋಲಸೇಲ) ತೋಕ ವ (ರಿಟೇಲ) ಚಿಲ್ಲರೆ
ಡಿನೇಚರ್ಡ ಸ್ಪಿರಿಟ್
ಮಾರಲಿಕ್ಕೆ ಸಿಗುತ್ತದೆ
ವಿ ಎಮ್. ಮಿಜಾರ್ನಕರ,
ಲಾಯಸನ್ಸಿ, ಮೋಟರ ಸ್ಟೆಂಡ, ಕುಮಟಾ.

ಹೊನ್ನಾವರ ಹವ್ಯಕ ಕೋ ಒಪರೇಟಿವ್ಹ ಬೇಂಕ, ಲಿಮಿಟೆಡ್

ನೋಟೀಸು.

ಈ ಬ್ಯಾಂಕಿನ ಯಾವತ್ತೂ ಮೆಂಬರರಿಗೆ ತಿಳಿಸುವದೇನಂದರೆ — ಹೊನ್ನಾವರ ತಾಲೂಕ (ಭಟಕಳ ಪೇಟಾ ಸಹಿತ) ಹವ್ಯಕ ಸಹಕಾರಿ ಬ್ಯಾಂಕಿನ ೪೬—೧೯೪೭ನೇ ಸಾಲಿನ ಬಗ್ಗೆ ಮೆನೇಜಿಂಗ ಕಮಿಟಿ ಮೆಂಬರರ ಚುನಾವಣೆ ಬೈಲಾ ಪದ್ಧತಿಯಂತೆ ಇದೇ ಬರುವ ಸಪ್ಟಂಬರ ತಾರೀಖ ೨೨—೯—೧೯೪೬ ನೇ ದಿವಸ ಬ್ಯಾಂಕ ಆಫೀಸನಲ್ಲಿ, ಬೆಳಗಿನ ೯ ಘಂಟೆಯಿಂದ ಮಧ್ಯಾಹ್ನ ೧೨ ಘಂಟೆಯ ವರೆಗೆ, ಮಧ್ಯಾಹ್ನ ೨ ಘಂಟೆಯಿಂದ ಸಾಯಂಕಾಲ ೬ ಘಂಟೆಯ ವರೆಗೆ ನಡೆಯುವದು ಆಗಿ ವಾರ್ಷಿಕ ಮಹಾಸಭೆಯು ಅದೇ ಸಪ್ಟಂಬರ ತಾರೀಖ ೨೯—೯—೧೯೪೬ ನೇ ರವಿವಾರ ದಿವಸ ಹೊನ್ನಾವರ ಹವ್ಯಕ ಕೋ-ಒಪರೇಟಿವ ಬ್ಯಾಂಕಿನ ಆಫೀಸಿನ ಮಾಳಿಗೆಯ ಮೇಲೆ ಮಧ್ಯಾಹ್ನ ೩ ಘಂಟೆಗೆ ಸೇರುವದು ನಿಶ್ಚಯಿಸಿರುತ್ತದೆ ಬ್ಯಾಂಕಿನ ಮೆಂಬರರ ಚುನಾವಣೆ ಬಗ್ಗೆ ಉಮೇದವಾರಿ ಅರ್ಜಿ ಕೊಡುವ ವಗೈರೆ ಕಾರ್ಯಕ್ರಮಗಳನ್ನು ಬ್ಯಾಂಕ ಆಫೀಸಿನಲ್ಲಿ ಜಾಹೀರಪಡಿಸಿದ ನೋಟೀಸಿನಿಂದ ತಿಳಕೊಳ್ಳಬಹುದು ಕಾರಣ ಬ್ಯಾಂಕಿನ ಸಕಲ ಮೆಂಬರರು ಆಯಾಯ ವೇಳೆಗೆ ಸದರಿ ಬ್ಯಾಂಕಿನ ಆಫೀಸಿಗೆ ಅತ್ಯಗತ್ಯ ಬರಬೇಕಾಗಿ ವಿನಂತಿ

ವಾರ್ಷಿಕ ಮಹಾಸಭೆಯ ಕಾರ್ಯಕ್ರಮಗಳು.

೧ ೧೯೪೫—೧೯೪೬ ನೇ ಸಾಲಿನ ಬಾಬತು ಆದಾಯ ಮಂಜೂರ ಮಾಡುವದು
೨ ಓಡಿಟ ಮೆಮೋ ವ ಮೇಲಾಧಿಕಾರಿಗಳಿಂದ ಬಂದ ಪ್ರಶ್ನೆಗಳನ್ನು ಪರಿಶೀಲಿಸುವದು
೩ ಚಾಲು ವರ್ಷದ ಬಗ್ಗೆ ಅಂದಾಜುಗಳನ್ನು ಸ್ವೀಕರಿಸುವದು ಮತ್ತು ಅವರ ಪಗಾರ ವಗೈರೆ ನಿರ್ಣಯಿಸುವದು
೪ ಈ ಸಾಲಿನ ಲಾಭ ಹಂಚುವದು
೫ ವಸೂಲಿಗೆ ಅಶಕ್ಯವಾದ ಸಾಲಗಳ ರಕಮುಗಳನ್ನು ತೆಗೆದು (ರೈಟ ಆಫ್) ಹಾಕುವ ಕುರಿತು ವಿಚಾರಿಸುವದು
೬ ಅಧ್ಯಕ್ಷರ ಪರವಾನಗಿಯಿಂದ ಸೂಚಿಸಿದ ಇತರೇ ವಿಷಯಗಳ ಕುರಿತು ವಿಚಾರ

ತಾರೀಖ ೨೪—೬—೧೯೪೬

I. K. BHATTA,
Chairman,
The Honavar Havyak Co-operative Bank Ltd

Notice to Motor Owners in the Karnatak Region.

Owners of Motor Vehicles residing in the Karnatak Region are informed that tax for one or more quarters during the current financial year from 1-7-1946 to 31-3-1947 has to be paid so as to reach this office on or before 15-7-1946 in respect of Motor Vehicles bearing regional registration marks and on or before 23-6-1946 (30th being Sunday) in respect of vehicles registered elsewhere respectively Tax should be paid in cash, **crosed cheques drawn on the Imperial Bank of India, Belgaum only,** chalans or by money orders **at the** Regional Transport Office Belgaum, between 11-00 A M and 3 P M **on week days and** between 9-30 A M and 11-00 A M on Saturdays

2 Each payment of tax should be accompanied by (i) Registration Certificate of the vehicle (ii) **Certificate of Insurance as required by Chapter 8 of the Indian Motor Vehicles Act, 1939,** (iii) **A valid Insurance Policy in respect of all types of Vehicles either registered in this province or elsewhere covering full risk. No tax-token will be issued not the registration book endorsed unless the above requirements are duly complied with**

3 Non use intimation of vehicles which are kept idle should be submitted before the date on which tax-token already issued for such vehicles expire as required by Rule 26 of the B M V Tax Rules 1940

Regional Transport Office
Belgaum, 21-6-46

Regional Transport Officer
Konkan Region BELGAUM

ಇದನ್ನು [illegible] (ಕಾನಡಾವೃತ್ತ ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ವಾತಂತ್ರ್ಯ ಕನಡಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೮-೦
ಟಪಾಲದ್ವಾರ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು
ವರ್ಗಣಿ ಮುಂಗಡ ಕೊಡತಕ್ಕದ್ದು

Reg. No. B. 1270 Monday, 8th July, 1946

ಕಾನಡಾವೃತ್ತ

ವರ್ಷ ೨೯.] **THE KANARA NEWS.** [ಸಂಚಿಕೆ ೨

ಕುಮಟಾ:- ಸೋಮವಾರ, ತಾ. ೮ ಮಾಹೆ ಜುಲೈ ೧೯೪೬ನೇ ಇಸವಿ

ಜಾಹೀರಾತುಗಳ ದರ:-
ಸ್ಥಳ ವಿಸ್ತಾರ ೧ ಕಾಲಮ್ ಉದ್ದ
೧ ಇಂಚಿಗೆ ೬ ಆಣೆಯಂತೆ,
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಸ್ಥಾನಿಕ ವೃತ್ತಾಂತ (೨ನೇ ಪುಟದಿಂದ ಮುಂದೆ)

ಉರ್ದು ಭಾಷೆಯನ್ನು ಅವರು ಬಹಳ ರಸಾಳವಾಗಿ ಮಾತಾಡುತ್ತಿದ್ದರು ಸಂಸ್ಕೃತ, ಕನ್ನಡ ಭಾಷೆಗಳ ಪರಿಚಯವೂ ಅವರಿಗೆ ಚನ್ನಾಗಿತ್ತು. ನಿಧನ ಸಮಯದಲ್ಲಿ ಅವರಿಗೆ ಬರೀ ೪೪ ವರ್ಷ ಪ್ರಾಯ. ಅವರ ನಿಧನವಾದದ್ದೂ ಸ್ವಪ್ನವೇಯು ವಾಯಿತು. ಉಷಃಕಾಲದ ಪ್ರಾರ್ಥನೆಯನ್ನು ಮುಗಿಸಿ ಅವರು ಶಾಂತರೀತಿಯಿಂದ ತಮ್ಮ ದೇಹವಿಟ್ಟರು ಅವರ ಅಕಸ್ಮಾತ ನಿಧನದಿಂದ ಜಿಲ್ಲೆಯು ನಿಷ್ಠಾವಂತ ಸೇವಕನೊಬ್ಬನು ಕಣ್ಮರೆಯಾದಂತಾಗಿದೆ. ಮೃತಾತ್ಮರಿಗೆ ಇಬ್ಬ ಗಂಡು ಮಕ್ಕಳೂ, ೫ ಮಂದಿ ಹೆಣ್ಣು ಮಕ್ಕಳೂ ಇದ್ದಾರೆ. ಅವರೊಡನೆಯೂ ಅವರ ಕುಟುಂಬದವರೊಡನೆಯೂ ನಾವು ಸಹಾನುಕಂಪ ವ್ಯಕ್ತಗೊಳಿಸಿ, ಮೃತಾತ್ಮರಿಗೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ

ಪೈಗಂಬರವಾಸಿ ಸಿದ್ದೀಕರವರ ನಿಧನದ ನಿಮಿತ್ತವಾಗಿ ಮೊನ್ನೆ ನಗರ ಸಭೆಯ ಕಚೇರಿಯೂ, ಊರೊಳಗಿನ ಎಲ್ಲ ಶಾಲೆಗಳೂ ಮುಚ್ಚಲ್ಪಟ್ಟಿದ್ದವು. ಅವರ ಅಂತ್ಯಸಂಸ್ಕಾರ ಸಂಜೆ ೫ಕ್ಕೆ ನಡೆಯಿತು. ಸಾವಿರಾರು ಹಿಂದು-ಮುಸಲ್ಮಾನರು ಸ್ಮಶಾನಯಾತ್ರೆಯಲ್ಲಿ ಸೇರಿದ್ದರು

ಬೇಗನೇ ಈ ಜಿಲ್ಲೆಯ ಆಸ್ಪತ್ರೆಗಳ ಪುನರ್ಘಟನೆಯಾಗಲಿದೆ. ಭಟಕಳ ಪೇಟೆಯಲ್ಲೂ, ಕುಮಟಾ ಯಲ್ಲಾಪುರ ತಾಲೂಕುಗಳಲ್ಲೂ ಕೆಲವು ಹಳ್ಳಿಯ (ಲೋಕಲ) ಚಿಕಿತ್ಸಾಲಯಗಳನ್ನು ತೆರೆಯುವ ಆಲೋಚನೆ ನಡೆದಿದೆಯಂತೆ. ಈ ಮೂರೂ ಭಾಗಗಳಿಗೆ ಗೇರಸಪ್ಪೆಯಿಂದ ವಿದ್ಯುಚ್ಛಕ್ತಿ ಪೂರೈಸುವ ಯೋಜನೆಯೂ ಆಗಿದೆಯೆಂದು ವಾರ್ತೆ.

ಶಿರಸಿ— (ತಾ ೬-೭-೪೬) ಊರೊಳಗಿನ ಕಳವುಗಳ ಸಂಖ್ಯೆ ಕಡಿಮೆಯಾಗುವದರ ಬದಲು ಹೆಚ್ಚಾಗುತ್ತಿದೆ. ಕಳ್ಳರಿಗೆ ಪೋಲೀಸರ ಅಂಜಿಕೆಯೇ ಇಲ್ಲದಂತಾಗಿದೆ! ಈ ವರೆಗೆ ಪೋಲೀಸರು ಆ ಕಳ್ಳರ ಪತ್ತೆ ಹಚ್ಚಲು ಸಮರ್ಥರಾಗಿಲ್ಲ. ನಡುಪೇಟೆಯಲ್ಲಿ ಅಂಗಡಿಗಳ ಹಲಿಗೆ ಕಿತ್ತಿ ತೆಗೆದು ಕಳ್ಳರು ಒಳಗಿನ ಹಣದ ಪೆಟ್ಟಿಗೆಗಳನ್ನೇ ಒಯ್ಯುತ್ತಾರೆ. ಕಳೆದ ಬುಧವಾರ ಟಪಾಲ ಕಟ್ಟೆಯ ಹತ್ತಿರ ಇರುವ ಒಂದು ಕಿರಾಣಿ ಅಂಗಡಿಯಲ್ಲಿ ಹೀಗೆಯೇ ಕಳವು ಮಾಡಿದ್ದಾರಂತೆ. ಪೇಟೆಯಲ್ಲಿ ರಾತ್ರಿ ಸಂಚಾರ ಮಾಡುತ್ತಿರುವ ಪೋಲೀಸರು ಎಲ್ಲಿ ಮಲಗಿಕೊಳ್ಳುತ್ತಾರೋ ಏನೋ!

ಹುಲೇಕಲ್ಲ ಟಪಾಲಿನ ಕೆಲಸ ಇಲ್ಲಿಯ ಶಾಲಾ-ಶಿಕ್ಷಕರ ಕಡೆಗಿರುತ್ತದೆ. ಈಗ ರಾ॥ ಗಣೇಶ ಬೋಳೆ ಎಂಬ ಶಿಕ್ಷಕರು ಈ ಕೆಲಸ ಮಾಡುತ್ತಾರೆ. ಅವರು ಶಾಲೆಯ ಕೆಲಸದಲ್ಲಿ ತೊಡಗಿದಾಗ ಕಾರ್ಡು, ಕವರು, ತಿಕೀಟು ಬೇಕಾದ ಜನರು ಶಾಲೆಯ ಕೆಲಸ ಮುಗಿಯುವ ವರೆಗೆ ಹಾದಿ ಕಾಯುತ್ತ ನಿಲ್ಲಬೇಕಾಗುತ್ತದೆ. ಜರೂರಿಯ ಪತ್ರವಗೈರೆ ಕಳಿಸುವದಾದರೂ ಕಾರ್ಡ ಮುಂತಾದವು ಕೂಡಲೆ ಸಿಗುವದಿಲ್ಲ. ಮೇಲಧಿಕಾರಿಗಳು ಈ ತೊಂದರೆಗಳನ್ನು ಪರಿಹರಿಸುವ ವ್ಯವಸ್ಥೆ ಮಾಡಬೇಕಾಗಿ ಓರ್ವ ಪತ್ರ-ಬಾಂಧವನು ಅರಿಕೆ ಮಾಡುತ್ತಾನೆ

ಸಿದ್ದಾಪುರ— ಈ ತಾಲೂಕಿನ ಹಳ್ಳಿಗಳಲ್ಲಿ ೧೮ ಸಹಕಾರಿ ಉಗ್ರಾಣಗಳಿವೆ. ಹಳ್ಳಿಗಳ ಜನರಿಗೆ ಸೀಧಾ-ಚೀಟಿಗಳನ್ನು ಕೊಡುವ ಕೆಲಸ ಗ್ರಾಮಸ್ಥರದು. ಆದರೆ ಆ ಗ್ರಾಮಸ್ಥರಲ್ಲಿ ಬಹುತೇಕ ಮಂದಿ ಇಲ್ಲಿ ಸಿದ್ದಾಪುರದಲ್ಲೇ ಉಳಿಯುತ್ತಾರೆ. ಅದರಿಂದ ಸೀಧಾ-ಚೀಟಿ ಬೇಕಾದ ಹಳ್ಳಿಗರೂ ಸೀಧಾ ಚೀಟಿಗಳಲ್ಲಿ ವ್ಯತ್ಯಾಸ ಮಾಡಿಕೊಳ್ಳಬಯಸುವವರೂ ೧೦-೧೫ ಮೈಲು ಮಾರ್ಗ ನಡೆದು ಇಲ್ಲಿಗೆ ಓಡಬರಬೇಕಾಗುತ್ತದೆ, ಮತ್ತು ಗ್ರಾಮಸ್ಥರು ಸಿಗದಿದ್ದಲ್ಲಿ ಸೀಧಾ ಚೀಟಿಗಳು ಸಿಗದೆ ಉಪವಾಸ ಬೀಳಬೇಕಾಗುತ್ತದೆ!

ಹಳ್ಳಿಗಳಲ್ಲಿ ಸೀಧಾ-ಸರಕುಗಳ ಹಂಚಿಕೆ ಸರಿಯಾಗಿ ನಡೆಯುತ್ತದೆಯೋ ಇಲ್ಲವೋ ಎಂಬುದರ ತಪಾಸಣೆ ಮಾಡುತ್ತಿರಲಿಕ್ಕೆ ಸರಕಾರದವರು ಓರ್ವ ಪೂರೈಕೆ ಅಧಿಕಾರಿಯನ್ನು ನೇಮಿಸಿದ್ದಾರೆ. ಆದರೆ ಈ ಅಧಿಕಾರಿಗಳು ದೂರದ ಹಳ್ಳಿಗಳಿಗೆ ಹೋಗುವದು ತೀರ ವಿರಳ! ಹಳ್ಳಿಯ ಜನರಿಗೆ ಪಟ್ಟಿಯಾಗಿ ಅವರ ದೂರುಗಳೇನಾದರೂ ಉಂಟೋ ಹೇಗೆಂಬುವನ್ನು ಅವರೆಂದೂ ತಿಳಕೊಳ್ಳುವದಿಲ್ಲವಂತೆ. ಯೋಗ್ಯ ದರದ ಅಂಗಡಿಗಳ ಲೆಕ್ಕ ತರಿಸಿಕೊಂಡು ಅವರ ತಪಾಸಣೆ ಮಾಡಿ ಶಹಾ ಮಾಡಿದರೆ ತಮ್ಮ ಕರ್ತವ್ಯ ತೀರಿತು ಎಂದು ಅವರು ತಿಳಕೊಳ್ಳುತ್ತಾರೆ! ಮೇಲಧಿಕಾರಿಗಳು ಇವರಿಗೆ ತಮ್ಮ ಕರ್ತವ್ಯದ ಅರಿವು ಮಾಡಿಕೊಡಬೇಕಾಗಿ ಅರಿಕೆ

ಇಲ್ಲಿಯ ಯೋಗ್ಯ ದರದ ಅಂಗಡಿಯಲ್ಲಿ ಸೀಧಾ-ಜಿನಸುಗಳನ್ನು ಕೊಡುವಾಗ ಅಳತೆ ತೂಕಗಳಲ್ಲಿ ಕಪಟತನ ಮಾಡುತ್ತಾರೆಂಬ ದೂರು ಕೇಳಬರುತ್ತಿದೆ. ಕಳೆದ ತಾ. ೨೭ಕ್ಕೆ ಅಂತೋನ ಗೊನಸಾಲ್ವಿಸ ಎಂಬವನು ಈ ಅಂಗಡಿಯಲ್ಲಿ ೧೭॥ ರತ್ತಲು ಹತ್ತಿಕಾಳು ಕೊಂಡನು. ಹತ್ತಿಕಾಳು ಕೈಗೆ ಬಂದಮೇಲೆ ಅದು ಕಡಿಮೆಯಿರಬೇಕೆಂದು ಅಂತೋನನಿಗೆ ಸಂಶಯ ಬಂತು. ಕೂಡಲೆ ಅವನು ಸಮೀಪದ ಒಂದು ಅಂಗಡಿಯಲ್ಲಿ ಅದನ್ನು ತೂಗಿಸಿಕೊಂಡನು. ಆಗ ಆ ಹತ್ತಿಕಾಳು ಬರೇ ೧೫॥ ರತ್ತಲು ಇದ್ದದ್ದು ಕಂಡುಬಂತು! ಅಂತೋನನು ಈ ಸಂಗತಿಯನ್ನು ಯೋಗ್ಯ ದರದ ಅಂಗಡಿಯಲ್ಲಿದ್ದ ರಾ॥ ಅಂಕೋಲೇಕರ ಇವರಿಗೆ ತಿಳಿಸಲಾಗಿ ಅವರು ಮರುದಿನ ತೂಕದಲ್ಲಿ ಕಡಿಮೆಯಾದ ೨ ರತ್ತಲ ಹತ್ತಿಕಾಳು ಕೊಟ್ಟು ಅಂತೋನನಿಗೆ ಸಮಾಧಾನ ಮಾಡಿದರಂತೆ!

ಇಲ್ಲಿಂದ ಎಷ್ಟೋ ಸಕ್ಕರೆ — ಹಳ್ಳಿಗರಿಗೆ ಸರಿಯಾಗಿ ಹಂಚಿಕೊಡದೆ ಸಂಗ್ರಹಿಸಿದ್ದು — ಕಳ್ಳತನದಿಂದ ಶಿರಸಿಗೂ, ಜೋಗಕ್ಕೂ, ಗೇರಸಪ್ಪೆಗೂ ಹೋಗುತ್ತಿದೆ. ಕಳೆದ ವಾರ (ತಾ ೨೮) ಹೀಗೆಯೇ ಒಂದು ಮೋಟಾರ ಬಂಡಿಯಲ್ಲಿ ೨೧ ಮಣ ಸಕ್ಕರೆಯ ಒಂದು ಚೀಲ ಶಿರಸಿಗೆ ಹೋಗುತ್ತಿದ್ದಾಗ ಮುಸ್ಲಿಮ ನವಜವಾನ ಸಂಘದವರೂ ಕಾಂಗ್ರೆಸ್ಸಿಗ ತರುಣರೂ ಹಿಡಿದು ಪೋಲೀಸರ ಕಡೆಯಿಂದ ಪಂಚನಾಮೆ ಮಾಡಿಸಿದ್ದಾರೆ. ಆದರೆ ಈ ಪ್ರಕರಣ ಮುಸಮುಸಿಯಾಗಿ ಹೋಗುವದೋ ಏನೆಂಬ ಸಂಶಯವುಂಟಾಗಿದೆ. ಪೋಲೀಸರು ಬಂಡಿಯ ಡ್ರೈವ್ಹರನಿಗೂ ಏಜಂಟನಿಗೂ ತಪ್ಪಿಸಲು ಪುರಾವೆ ನಿರ್ಮಾಣ ಮಾಡುತ್ತಿದ್ದಾರೆಂದು ಊರಲ್ಲೆಲ್ಲ ವಾಹಿನಿ ಕೇಳಬರುತ್ತಿದೆ!

ಹಾಳಶೆಟ್ಟಿಯ ರಾಮಾ ಮಾದಿಯಾ ಎಂಬವನು ದೊಡ್ಡ ಪ್ರಮಾಣದ ಮೇಲೆ ಕಳ್ಳ ಸಾರಾಯಿಯ ವ್ಯಾಪಾರ ನಡಿಸುತ್ತಿದ್ದಾನೆಂದು ಎಷ್ಟೋ ಕಾಲದಿಂದ ಊರಲ್ಲೆಲ್ಲ ಸುದ್ದಿಯಿತ್ತು. ಆದರೂ ಹಿಂದಿನ ಅಬಕಾರಿ ಅಧಿಕಾರಿಗಳು ಅವನನ್ನು ಹಿಡಿಯಲು ಮನಸ್ಸು ಮಾಡಿದ್ದಿಲ್ಲ! ಅದೇಕೋ ಅವರಿಗೇ ಗೊತ್ತು! ಹೊಸದಾಗಿ ಬಂದ ಅಬಕಾರಿ ಸಬ್‌ಇನ್ಸ್‌ಪೆಕ್ಟರ ರಾ॥ ಕಾಳಸಕರ ಇವರು ಆಚಿಯ ಬುಧವಾರ ರಾಮನ ಮನೆ ಮುತ್ತಿ ಸರಾಯಿಯಿಂದ ತುಂಬಿದ ೧ ದೊಡ್ಡ ಕೊಡವನ್ನೂ ಕೆಲವು ಬಾಟ್ಲಿಗಳನ್ನೂ ಹಿಡಿದಿದ್ದಾರೆ

ಮಾವಿನಗುಂಡಿಯೊಳಗಿನ ಯೋಗ್ಯ ದರದ ಅಂಗಡಿಯಲ್ಲಿ ಇನ್ನೂ ಸುಧಾರಣೆಯಾಗಿಲ್ಲ. ಅಧಿಕಾರಿಗಳ ಮುಕ್ಕಾಮು ಇದ್ದಾಗ ಮಾತ್ರ ಅಂಗಡಿಯವರು ಸರಿಯಾಗಿ ಅಂಗಡಿ ತೆರೆದಿಡುತ್ತಾರೆ. ಅಧಿಕಾರಿಗಳು ಹೊರಟು ಹೋಗುತ್ತಲೇ ಪುನಃ ಹಿಂದಿನ ಸ್ಥಿತಿಯೇ ಕಂಡುಬರುತ್ತಿದೆ

೩-೪ ತಿಂಗಳ ಹಿಂದೆ ಮಾವಿನಗುಂಡಿಯಿಂದ ೨ ಚೀಲ ಭತ್ತ ಗೇರಸಪ್ಪೆಗೆ ಹೋಗುತ್ತಿದ್ದಾಗ ಅಧಿಕಾರಿಗಳು ಹಿಡಿದು ಪ್ರಕರಣ ಮಾಡಿದ್ದರು. ಆ ಪ್ರಕರಣ ವಿಚಾರವಾಗಿ ಭತ್ತ ಒಯ್ಯುತ್ತಿದ್ದವನಿಗೆ ತಾ ೨೭ಕ್ಕೆ ೫ ರೂ ದಂಡವಾಗಿದೆ. ಆದರೆ ಆ ಇಸಮಿಗೆ ಭತ್ತ ಕೊಟ್ಟವನು ಯಾರೆಂಬುವದರ ಚೌಕಶಿಯೂ ಆಗಲಿಲ್ಲ! ಚೌಕಶಿ ಮಾಡುವ ಪ್ರಯತ್ನವೂ ನಡೆಯಲಿಲ್ಲ! ಸಿದ್ದಾಪುರದೊಳಗಿನ ಕಾಂಗ್ರೆಸ ಕಾರ್ಯಕರ್ತರಿಗೆ ಕೇಳಿದರೆ ಅವನ ಪತ್ತೆ ಸಿಗುತ್ತಿತ್ತೆಂದು ಮಾವಿನಗುಂಡಿಯವರೊಬ್ಬರು ಬರೆಯುತ್ತಾರೆ

ಅಂಕೋಲಾ— (ತಾ ೭-೭-೪೬) ಅಂಕೋಲಾ ಮತ್ತು ಕುಮಟಾ ತಾಲೂಕುಗಳಲ್ಲಿ ಬೇಗನೇ ಒಕ್ಕಲಿಗರ ಸಾಲ ನಿವಾರಣೆಯ ಕಾನೂನು ಅಮಲಿನಲ್ಲಿ ಬರುವ ಸಂಭವವುಂಟೆಂದು ತಿಳಿಯುತ್ತದೆ

ಶಿರೂರ ಗ್ರಾಮದ ಜನಸಂಖ್ಯೆ ೧೦೦೦ದಷ್ಟಿದೆ. ಬಹುತೇಕ ಜನರು ತೀರ ಹಿಂದುಳಿದವರು. ಹಿಂದೆ ಅಲ್ಲಿ ಶಾಲೆಯಿದ್ದಿಲ್ಲ. ಇತ್ತಲಾಗಿ ಮಾತ್ರ ಜನರು ಒಂದು ಗಾಂವಠಿ ಶಾಲೆಯನ್ನು ತೆರೆದಿದ್ದಾರೆ. ಈಗ ತಿರುಗಿ ಸಿಗುವ ಪುಂಡಗಂದಾಯವನ್ನು ಈ ಶಾಲೆಗಾಗಿ ಕೊಡಬೇಕೆಂದು ಊರವರು ನಿರ್ಧರಿಸಿದ್ದಾರೆ. ಶಿರೂರ ಗ್ರಾಮದಲ್ಲಿ ಭೂಮಿಯುಳ್ಳ ಪರಸ್ಥಳದವರೂ ತಮ್ಮ (ಶಿರೂರ ಗ್ರಾಮದ ವಾಬತು) ಪುಂಡಗಂದಾಯವನ್ನು ಈ ಶಾಲೆಗೆ ಒಪ್ಪಿಸಬೇಕಾಗಿ ಆ ಊರವರ ಪ್ರಾರ್ಥನೆಯಿದೆ. ಶಾಲೆಯ ಆಡಳಿತ ನಡಿಸಲು ಊರ ಪ್ರಮುಖರದೊಂದು ಸಮಿತಿ ಸ್ಥಾಪನೆಯಾದದ್ದುಂಟು

ಹೊನ್ನಾವರ— ಹಿಂದೆ ಯುದ್ಧಕಾಲದಲ್ಲಿ ಹಳದೀಪುರ ಸಮೀಪ ಕುದಮೈಲ ಗುಡ್ಡದಲ್ಲಿ ಒಂದು ವಿಮಾನ ಠಾಣ್ಯ ಮಾಡುವ ಯೋಜನೆಯಾಗಿತ್ತಷ್ಟೇ. ಮುಂದೆ ಏನೋ ಕಾರಣದಿಂದ ಆ ಯೋಜನೆ ರದ್ದಾಗಿತ್ತು. ಈಗ ಪುನಃ ಅಲ್ಲಿ ವಿಮಾನ ಠಾಣ್ಯ ಮಾಡುವ ಆಲೋಚನೆ ನಡೆದಿದೆಯಂತೆ

ಇಲ್ಲಿ ಸೀಧಾ-ಅಂಗಡಿಯವರು ಹತ್ತಿಕಾಳು ತರಿಸುವ ಆಲೋಚನೆ ಮಾಡುವದಿಲ್ಲವಾಗಿ ತಾ ೪-೬-೪೬ರ "ವೃತ್ತ"ದಲ್ಲಿ ಪ್ರಕಟವಾದ ಟೀಕೆ ನಿರಾಧಾರವಾದುದೆಂದು ಅಂಗಡಿಯವರು ತಿಳಿಸುತ್ತಾರೆ. ಹತ್ತಿಕಾಳ ಬಗ್ಗೆ ತಾವು ಪರವಾನೆ ಬೇಡಿರುತ್ತೇವೆಂತಲೂ, ತಾಲೂಕಿನವರು ತಮ್ಮ ಅರ್ಜಿ ಗ್ರಾಮಸ್ಥರ ಕಡೆ ಚೌಕಶಿಗಾಗಿ ಕಳಿಸಿದ್ದರಿಂದ ಪರವಾನೆ ಸಿಗಲು ತಡವಾಗಿದೆಯೆಂದೂ ಅಂಗಡಿಯವರ ಅಂಬೋಣ.

— ಬ್ರಿಟಿಶ ತ್ರಿಮಂತ್ರಿಗಳ ಘಟನಾ ಸಮಿತಿಯ ಯೋಜನೆಯ ಸ್ವೀಕಾರ ಮತ್ತು ಸರ್ವಾಧಿಪತಿಗಳ ಹೊಸ ಕೇಂದ್ರ ಸರಕಾರದ ಯೋಜನೆಯ ಧಿಕ್ಕಾರ ಮಾಡಿರುವ ಕಾಂ॥ ಕಾರ್ಯಕಾರಿ ಮಂಡಳದ ನಿರ್ಣಯ ಪರಿಶೀಲಿಸಲು ಮುಂಬಯಿಯಲ್ಲಿ ನಿನ್ನೆಯಿಂದ ಅ॥ ಭಾ॥ ಕಾಂ॥ ಕಮೀಟಿ ಕೂಡಿದೆ. ಪಂ॥ ಜವಾಹರರು ಸಭೆಯ ಅಧ್ಯಕ್ಷರು

The Agricultural & Industrial Bank, Ltd.

(Incorporated in British India Liability of Members limited)

Head Office 'LAXMI NIVAS' Buildings, **COONDAPOOR. S. I.**

BRANCHES:- ANKOLA, BELGAUM, COONDAPOOR, DHARWAR, GOKARN, GADAG, HUBLI, HAVERI, KARWAR, KUMTA, MANGALORE, NAGAR, SHIMOGA, SOMWARPET, SIRSI, VIRAJPET &

BOMBAY OFFICE.
at 384, M. Jaipuria House, KALBADEVI

A BANK FAMILIAR TO ALL, SERVING THE PEOPLE WITH 17 BRANCHES

RECORD OF PROGRESS.

	1939 Rs	1943 Rs	1945 Rs
PAID UP CAPITAL	46,060/-	1,62,610/-.	4,07,662/-
DEPOSITS	3,56,041 -	15,39 232/-	43 31 959/-
WORKING FUNDS	4 89 404 -	22 34,241/-	62,52 264/-

ALL KINDS OF MODERN BANKING BUSINESS TRANSACTED.

COONDAPOOR
7th June, 1946

K Vittaldas Shenai,
Managing Director

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ೩ ದಿವಸಗಳಿಂದ ಮಳೆ ಕಡಿಮೆಯಾಗಿದೆ. ಶುಕ್ರವಾರ ಅಘನಾಶಿನಿ ನದಿಗೆ [illegible] ನೆರೆ ಕಟ್ಟಿತ್ತು. ಗದ್ದೆಗಳಲ್ಲಿ ಮುಳ್ಳಾಲು ನಾಲು ನಿಲ್ಲಿಯಾಗಿದೆ. ಕಳೆದ ವಾರ ೧೨-೧೫ ಇಂಚು ಮಳೆ ಬಿದ್ದಿದೆ.

ರಾ। ಹಳದೀಪುರಕರರು ಹೇಳುವ — ಟೀಲ ಪತ್ರಿಕಾಲಯದಲ್ಲಿ ೧೬೩೦ ಟೀಲ ಪತ್ರಿಕಾಳು ಕುಮಟಾ ತಾಲೂಕಿನ ದಾಳಿಗೆ ಹಾಕಿದೆಯಂತೆ. ಆ ಪೂರ್ತಿ ಪತ್ರಿಕಾಳು ಇನ್ನೂ ಒಂದು ಮುಟ್ಟಿಲ್ಲವಂತೆ. ಬರೇ ೧೫೦ ಟೀಲ ಅರ್ಬನ ಬೇಂಕಿಗೆ ಬಂದು ಕಳ್ಳದೆ ಹಿಂದೆ ಬಂದ ಪತ್ರಿಕಾಳ ಪೈಕಿ ನಗರದ ಭಾಗಗಳ ಒಗ್ಗ [illegible] ೭೦ ಟೀಲ ಮತ್ತು ಹೊಸದಾಗಿ ಬಂದ ೧೫೦ ಟೀಲ [illegible] ೫೦ ಟೀಲ ಪತ್ರಿಕಾಳು ಈಗ ಅರ್ಬನ ಬೇಂಕಿನ ಕಡೆ ಶಿಲ್ಲುಂಟು. ಈ ಟೀಲಗಳ ಒಟವಣೆಯು ಸಿವಿಲ ಸಪ್ಲಾಯ ಅಧಿಕಾರಿಗಳಿಂದಾಗಲಿ, ಮಾಮಲೇದಾರರಿಂದಾಗಲಿ ಬೇಂಕಿಗೆ ಬರೆದು ಬಂದಿಲ್ಲವಾದ್ದರಿಂದ ಹೂಡುವ ಎತ್ತುಗಳಿಗೆ ಈ ಪತ್ರಿಕಾಳು ಕೊಡಬೇಕೆಂದು ಆವ ನಿರ್ಣಯ ಇನ್ನೂ ಆಗದಿದ್ದಲ್ಲೇ ಉಂಟು ' ಅದರ [illegible] ವಿನ ಕಡೆ ಕೇಳಿದರೆ ' [illegible] ಸಂತೋಷದ ಸವಿ ಹೇಳೋಣ ' ಎನ್ನುವಲ್ಲಿಯ [illegible] ಕಥೆಯೂ ಅದೇ!! ಅದು ಇನ್ನೂ ನಿರ್ಧರಿಯಾಗುವದರಲ್ಲಿದೆ ' ಮುಂದಿನ ಸೇವೆಯಲ್ಲಿ ಅದನ್ನು ಖರೀದಿಸಿ ತರಿಸುತ್ತ ನೊಡ್ಯೋ ಅರ್ಬನ ಬೇಂಕಿನ [illegible] ಮನುಷ್ಯನಿಗೆ ಮುಂದೆ [illegible] ಅವನ ಖರೀದಿ ಮುಗಿದು, ಹೋಟಿದ ಚಿತ್ತ್ಯ, ಹಿಂದಿ ಇಲ್ಲಿ ಬರುವ ವರೆಗೆ [illegible] ಎಂದೋ ಕಳೆದು ಹೋಗುವದು !

ಎಲ್ಲ ವರ್ಗಗಳನ್ನು ಒಂದೇ ಶಾಲೆಗೆ ಸೇರಿಸಲು ಸ್ಥಳ ಸೌಕರ್ಯ ಇಲ್ಲದ್ದರಿಂದ [illegible] ಕೆಳಗಿನ ೪ ಇಯತ್ತೆಗಳ ವಿದ್ಯಾರ್ಥಿಗಳನ್ನು ಶಿಫ್ಟ-ಪದ್ಧತಿಯಿಂದ ಕಲಿಸುವ ವ್ಯವಸ್ಥೆ ಮಾಡಲಿದ್ದಾಗಿ ವಿದ್ಯಾಧಿಕಾರಿಗಳು ನಿನ್ನೆಯೇ ಹೊಸ ಹುಕುಮು ಹೊರಡಿಸಿದ ವರ್ತಮಾನವುಂಟು

೧೯೪೬ ನೇ ಇಸವಿಯ ಮಾರಾಟದ ಮೇಲಿನ ತೆರಿಗೆಯ ಕಾಯದೆಯು ತಾ ೧ ೧ ೧೯೪೬ರಿಂದ ಅಮಲಿನಲ್ಲಿ ಬರುವದೆಂದು ಮುಂಬಯಿ ಸರಕಾರವು ಜಾಹೀರ ಮಾಡಿದೆ. ಅಂದರೆ ಅಂದಿನಿಂದ ಮಾಡಲಾಗುವ ಮಾರಾಟದ ವ್ಯವಹಾರಗಳ ಮೇಲೆ ವ್ಯಾಪಾರಿಗಳು ನಿರ್ದಿಷ್ಟ ತೆರಿಗೆ ಕೊಡಬೇಕಾಗುವದು. ೧೯೪೪-೪೫ನೇ ವರುಷದಲ್ಲಿ ರೂ ೧೦೦೦೦ಕ್ಕಿಂತ ಹೆಚ್ಚಿಗೆ ಬೆಲೆಯ ಸರಕು ಮಾರಿದ ಎಲ್ಲ ವ್ಯಾಪಾರಿಗಳು ಈ ತೆರಿಗೆ ಕೊಡಲು ಪಾತ್ರರಾಗಿರುತ್ತಾರೆ. ಇಂಥವರು ತಾ ೩೧-೭-೪೬ರ ಒಳಗಾಗಿ ನಿರ್ದಿಷ್ಟ ನಮೂನೆಯ ಅರ್ಜಿಯನ್ನು ಜಿಲ್ಲೆಯೊಳಗಿನ ಸೇಲ್ಸ ಟೇಕ್ಸ ಒಫೀಸರರ ಕಡೆಗೆ ಕಳಿಸಿ 'ರಜಿಸ್ಟ್ರೇಶನ್ ಸರ್ಟಿಫಿಕೇಟು'ಗಳನ್ನು ಪಡೆಯಬೇಕಾಗಿಯೂ ಇಂಥ ಸರ್ಟಿಫಿಕೇಟು ಪಡೆಯದ ತಾ ೩೧-೭-೪೬ರ ನಂತರ ಮಾರಾಟದ ವ್ಯವಹಾರ ಮಾಡಿದರೆ ಅವರು ಶಿಕ್ಷೆಗೆ ಗುರಿಯಾಗಬೇಕಾದೀತೆಂದೂ ಸರಕಾರದವರು ಜಾಹೀರ ಪಡಿಸಿದ್ದಾರೆ. ಈ ಕುರಿತು ವಿಶೇಷ ಮಾಹಿತಿ ಬೇಕಾದವರು ತಾಲೂಕ ಯಾ ಮಹಾಲ ಕಚೇರಿಗಳಲ್ಲಿ ಅದನ್ನು ಪಡೆಯಬಹುದಂತೆ

ಗೋಕರ್ಣ ನಗರ ಕೊಂಗ್ರೆಸ ಸಮಿತಿಯು ಕಳೆದ ಸೋಮವಾರ ಸಭೆ ಸೇರಿತ್ತು. ರಾ। ಗಣಪತಿ ರಾಮಚಂದ್ರ ಭಟ್ಟ ಒರ್ಲೇ ಇವರು ಸಮಿತಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಬಾಡ, ಮುಟ್ಟಳ್ಳಿ ಗ್ರಾಮಗಳಲ್ಲಿ ಸಮುದ್ರದಿಂದ ತೇಲಿ ಬಂದ ಎಷ್ಟೋ [illegible]ಯನ್ನು ಕುಡುಕರೂ ಸಂಗಡಿಗರೂ ಅಲ್ಲಲ್ಲಿ ಸುಗಿದಿಟ್ಟಿದ್ದಾರಂತೆ. ಅಬಕಾರಿ ಅಧಿಕಾರಿಗಳು ಅದರ ಪತ್ತೆ ಹಚ್ಚಬೇಕಾಗಿ ಆ ಊರವರ ಬೇಡಿಕೆಯುಂಟು

ಭಟಕಳ— (ತಾ ೩-೭-೧೯೪೬) ಇಲ್ಲಿಯ ಪ್ರಮುಖ ನಾಗರಿಕರಾದ ಜನಾಬ ಇಸ್ಮಾಯಿಲ ಹಸನ ಸಿದ್ದಿಕ್ ಇವರು ನಿನ್ನೆ ಸೋಮವಾರ ಸಾಯಂಕಾಲದ ೬ ಘಂಟೆಗೆ ಆಕಸ್ಮಿಕವಾಗಿ ಪೈಗಂಬರವಾಸಿಗಳಾದರೆಂದು ತಿಳಿಸಲು ತೀವ್ರ ದುಃಖವೆನಿಸುತ್ತದೆ. ಕರ್ನಾಟಕದ ಮೊದಲನೇ ಮುಸಲ್ಮಾನ ಪದವೀಧರರು ಇವರೇ. ಅಂತೆ ಪದವೀಧರರಾದ ಮೇಲೆ ಕೆಲವು ದಿನ ಅವರು ಬೆಂಗಳೂರಲ್ಲಿ ನೌಕರರಾಗಿ ಕೆಲಸ ಮಾಡಿದರು. ಅಷ್ಟರಲ್ಲಿ ಡಾ। ಎಮ್. ಎಮ್. ಸಿದ್ದೀಕರವರ ಆಮಂತ್ರಣೆಯನ್ನು ಮನ್ನಿಸಿ ಅವರು ೧೯೧೮ರಲ್ಲಿ ಇಲ್ಲಿ ಬಂದು ಅಂಜುಮಾನ ಹಾಮಿ ಇ-ಮುಸಲ್ಮೀನ ಸಂಸ್ಥೆಯಾಗಿ ಆ ಸಂಸ್ಥೆಯ ಪದನಾಗಿ (ಈಗಿನ ಇಸ್ಲಾಮಿಯಾ ಹಾಯಸ್ಕೂಲಿನ ಪೂರ್ವ ರೂಪವಾದ) ಎಂಗ್ಲೋ ಉರ್ದು ಶಾಲೆಯನ್ನು ಸ್ಥಾಪಿಸಿದರು. [illegible]ರಲ್ಲಿ ಅವರು ಖಿಲಾಫತ-ಕೊಂಗ್ರೆಸ ಆಂದೋಲನದಲ್ಲಿ ಸೇರಿ ಇಲ್ಲಿಯ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾಗಿದ್ದರು. ಆಗ ಅವರು [illegible] ಯಿಂದ ಬಂದ ಖಾದಿ-ಉತ್ಪಾದಕ ಸಂಸ್ಥೆಯನ್ನು ಒಂದು ರಾಷ್ಟ್ರೀಯ ಶಾಲೆಯನ್ನೂ ತೆರೆದಿದ್ದರು. ಮುಂದೆ ಆ ರಾಷ್ಟ್ರೀಯ ಶಾಲೆಯು ಮೇಲೆ ಹೇಳಿರುವ ಎಂಗ್ಲೋ ಉರ್ದು ಶಾಲೆಯಲ್ಲಿ ವಿಲೀನಗೊಳಿಸಲ್ಪಟ್ಟಿತು. ನಿನ್ನೆ ನಿನ್ನೆ ಅನಾರೋಗ್ಯದ ಮೂಲಕ ಶಾಲೆಯಿಂದ ಸೇವಾನಿವೃತ್ತರಾಗುವ ವರೆಗೆ ಅವರು ಅದೇ ಶಾಲೆಯ ಮುಖ್ಯಾಧ್ಯಾಪಕರಾಗಿದ್ದರು. ೧೯ ವರ್ಷ ಅವರು ಪಬ್ಲಿಕ ಮ್ಯು॥ಯ ಅಧ್ಯಕ್ಷರಾಗಿ, ನಗರ ಸುಧಾರಣೆಯ ಕಾರ್ಯದಲ್ಲಿ ಎಷ್ಟೋ ಸುಧಾರಣೆ ಮಾಡಿದ್ದಾರೆ. ೧೯೩೩ರಲ್ಲಿ ಅವರು ಮುಸ್ಲಿಮ್ ಲೀಗಿನ ಹುರಿಯಾಳಾಗಿ ಮುಂಬಯಿ ಪ್ರಾಂತಿಕ ಎಸೆಂಬ್ಲಿಗೆ ಆರಿಸಲ್ಪಟ್ಟಿದ್ದರು. ಆಗ ಅವರು ಲೀಗ ಪಕ್ಷದ ಕಾರ್ಯದರ್ಶಿಗಳಾಗಿ ದುಡಿದದ್ದುಂಟು. ಇಲ್ಲಿಯ ಮಜಲಿಸ್-ಇ-ಇಸ್ಲಾಹ ವ ತಂಜೀಮ ಸಂಘದ ಸಂಸ್ಥಾಪಕರಾದರೂ ಮ್ಯಾನೇಜರೂ ಆಗಿದ್ದರು. ಪರ್ಶಿಯನ್ ಮತ್ತು ಉರ್ದು ಭಾಷೆಗಳ ಮೇಲೆ ಅವರು ಒಳ್ಳೇ ಪ್ರಭುತ್ವ ಸಂಪಾದಿಸಿದ್ದರು.

(೧ನೇ ಪುಟದ ಮೇಲಿ ಮುಂದರಿಸಿದೆ.)

ವೈದಿಕ ವಿದ್ಯಾರ್ಥಿಗಳಿಗೆ ಸುಸಂಧಿ.

ಶ್ರೀ ಗೋಕರ್ಣ ಸಂಸ್ಥಾನದ ಪರ್ತಗಾಳಿ ಮಠದಲ್ಲಿ ಹಿಂದಿನಿಂದ ನಡೆದು ಬಂದ ವೈದಿಕ ವಿದ್ಯಾಶಾಲೆಯೊಳಗೆ, ವಿದ್ಯಮಾನ ಮಠಾಧಿಪತಿಗಳಾದ ಶ್ರೀ ಮದ್-ದ್ವಾರಕಾನಾಥ ತೀರ್ಥ ಶ್ರೀಪಾದ-ಒಡೆಯರ ಸ್ವಾಮಿಗಳ ಅನುಗ್ರಹದಿಂದ, ವೇದ-ವೇದಾಂಗ, (ಸಂಸ್ಕೃತ) ವ್ಯಾಕರಣ, ಸಾಹಿತ್ಯ, ಜ್ಯೋತಿಷ, ನ್ಯಾಯ, ಮೀಮಾಂಸಾ) ಮೊದಲಾದ ಇತ್ಯಾದಿ ಶಾಸ್ತ್ರ-ವಿದ್ಯೆಗಳನ್ನು ಸುವ್ಯವಸ್ಥಿತ ಕ್ರಮದಿಂದ ಕಲಿಸುವ ಏರ್ಪಾಡಾಗಿದೆ. ಈ ಶಿಕ್ಷಣವು ಪುಕ್ಕಟೆ ಕೊಡಲ್ಪಡುತ್ತಿದ್ದು, ವಿದ್ಯಾರ್ಥಿಗಳ ಊಟವಸತಿಯ ವ್ಯವಸ್ಥೆ ಕೂಡ ಶ್ರೀ ಮಠದಿಂದಲೇ ಆಗುತ್ತದೆ. ಕನ್ನಡ ಇಲ್ಲವೆ ಮರಾಠಿ ೪ ಇಯತ್ತೆಗಳ ಶಿಕ್ಷಣ ಪಡೆಕೊಂಡವರಿಗೆ ಈ ಶಾಲೆಯಲ್ಲಿ ಪ್ರವೇಶ ಸಿಗುವದು. ವಿದ್ಯಾರ್ಥಿಗಳೂ ಅವರ ಪಾಲಕರೂ ಈ ವ್ಯವಸ್ಥೆಯ ಲಾಭ ಪಡೆಕೊಳ್ಳಬೇಕಾಗಿ ಸೂಚನೆಯುಂಟು. ಶಾಲೆಯ ಹೊಸ ವರ್ಷದ ಆರಂಭ ಇದೇ ಕಳೆದ ಜ್ಯೇಷ್ಠ ಶು ೧ಯಿಂದ ಆಗಿದೆ. ಕಾರಣ ಶಾಲೆಯಲ್ಲಿ ಸೇರಬಯಸುವ ವಿದ್ಯಾರ್ಥಿಗಳು ಕೂಡಲೇ ಶಾಲೆ ಸೇರುವದು ಶ್ರೇಯಸ್ಕರ

ಜಿಲ್ಲಾ ಆಹಾರ ಮಂಡಳದ ಸಭೆ

(೪ನೇ ಪುಟದಿಂದ ಮುಂದರಿಸಿದ್ದು.)

ಮಾಡುತ್ತದೆ. ಅಗ್ಗದ ದರ ಕಡಿಮೆ ಮತ್ತು ಹಳಗನ ದರ ಹೆಚ್ಚು ಉಂಟು. ಆದರೆ ಮಾರಾಟ ಮಾಡುವ ದರಗಳಲ್ಲಿ ವ್ಯತ್ಯಾಸವಿಲ್ಲ! ಹಳಗನ ದರವನ್ನೇ ಅಗ್ಗದ ಅಕ್ಕಿಗೂ ಕೊಡಬೇಕಾಗುತ್ತದೆ! ಈ ಅನ್ಯಾಯ ದೂರಪಡಿಸಿ ಅಗ್ಗದ ಅಕ್ಕಿಯ ದರ ಇಳಿಸಬೇಕಾಗಿ ಸೂಚಿಸೋಣವಾಯಿತು. ಜಿಲ್ಲಾಧಿಪರು ವಿಚಾರ ಮಾಡುತ್ತೇವೆಂದರು. ಅಸ್ಪೃಶ್ಯರು ತೀರ ಬಡವರು, ಅವರಿಗೆ ಕಡಿಮೆ ದರದಿಂದ ಅಕ್ಕಿ ಪೂರೈಸಬೇಕೆಂಬದೊಂದು ಸೂಚನೆ ಬಂತು. ಆದಾಯ-ವೆಚ್ಚಗಳ ಬಾಯಿ ಗೂಡಬೇಕು, ವಿದೇಶಗಳಲ್ಲಿ ಸರಕಾರವು ಸ್ವತಃ ಬಡಬಗ್ಗರಿಗೆ ಕಡಿಮೆ ದರದಿಂದ ಅನ್ನ ಸಾಮಗ್ರಿಗಳನ್ನು ಪೂರೈಸುತ್ತಿದೆ; ಅಲ್ಲಿ ಪ್ರಾಪ್ತಿಯ ಕರದ ಮಾನ ಹೆಚ್ಚುಂಟು, ವಾರಸಾ ತೆರಿಗೆಯುಂಟು, ಸರಕಾರವು ಕೆಲವೊಂದು ಕೃತಿಗಳಿಗೆ ದ್ರವ್ಯಸಹಾಯ ಮಾಡುವದಿದ್ದರೆ ಬೇರೆ ಕೆಲವು ಮೈವಳ ಪ್ರಜೆಗಳಿಂದ ಹಣ ಎತ್ತುವದೂ ಮಾಡುತ್ತಿದೆ, ಹಾಗೆಯೇ ಇಲ್ಲಿಯೂ ಸರಕಾರದಿಂದ ದ್ರವ್ಯಸಹಾಯ ಸಿಗುತ್ತಿದ್ದರೆ ಪ್ರತ್ಯೇಕವಾಗಿ ಸಹ ಅಕ್ಕಿ ಮಾರಬಹುದಿತ್ತು ಎಂದು ಜಿಲ್ಲಾಧಿಪರು ಉತ್ತರ ಕೊಟ್ಟರು

ಇದೇ ಜಿಲ್ಲೆಯಲ್ಲಿ ಸರಕಾರದಿಂದ ಜೂನ ತಾ ೨೨ ರ ವರೆಗೆ ೬,೩೭,೮೫೫ ಮಣ ಭತ್ತ ಖರೀದಿಯಾಗಿದೆ. ಈ ಅಂಕಿಯಲ್ಲಿ ಅಕ್ಕಿಯ ಖರೀದಿಯೂ ಸೇರ್ಪಡೆಯಾಗಿದೆ. ಅಕ್ಕಿಯನ್ನು ಭತ್ತದಲ್ಲಿ ರೂಪಾಂತರಿಸಿ ಅಂತೂ ಖರೀದಿಯ ಸಂಖ್ಯೆ ಕೊಟ್ಟಿದೆ. ಕೈಯಿಂದ ಕುಟ್ಟಿ ಅಕ್ಕಿ ತಯಾರಿಸುವವರಿಗೆ ರಾಜಾಶ್ರಯ ಸಿಗಬೇಕೆಂದು ಕೆಲವರು ಸೂಚಿಸಿದರು. ಭತ್ತಕ್ಕಿಂತ ಅಕ್ಕಿಯ ಖರೀದಿಗೇ ಪ್ರಾಧಾನ್ಯ ಕೊಡಬೇಕಾಗಿ ಅವರೆಂದರು. ಭತ್ತವನ್ನೇ ಕೊಡಬೇಕೆಂಬ ಒತ್ತಾಯವಿಲ್ಲೆಂದೂ ಅಕ್ಕಿಯನ್ನು ಕೊಟ್ಟರೂ ನಡೆಯುತ್ತದೆಂದೂ ಆದರೆ ಒಕ್ಕಲಿಗರು ಭತ್ತವನ್ನು ಒಮ್ಮೆ ಮನೆಗೆ ಒಯ್ದು ಬಳಿಕ ಸಂಸಾರಕ್ಕೆ ಅವರು ಅಕ್ಕಿ ಕೊಡುವದು ಕಠಿಣವೆಂದೂ ಜಿಲ್ಲಾಧಿಪರು ನುಡಿದರು. ಕೈಕುಟ್ಟಿದ ಅಕ್ಕಿಗೆ ಪ್ರೋತ್ಸಾಹ ಕೊಡಬೇಕೆನ್ನುವವರಿಗೆ, Rice mills have come to stay (ಅಕ್ಕಿ ಗಿರಣಿಗಳನ್ನು ಓಡಿಸುವದು ಈಗ ಸಾಧ್ಯವಿಲ್ಲ) ಎಂಬುದಾಗಿಯೂ ಎಚ್ಚರಿಕೆಯನ್ನು ಕೊಟ್ಟರು.

ದವಸಗಳಿಗೆ ಪತ್ರಿಕಾಳು ಸಿಗದೆ ಬಹಳ ತೊಂದರೆಯಾ[illegible] ಆಗಾದದ ಅಂದಾಜ ಪತ್ರಿಕೆಯಲ್ಲಿ ದವಸಗಳ ಸಂಖ್ಯೆಯ ಉಲ್ಲೇಖ ಮಾಡಿ ಅವಕ್ಕೆ ತಗಲುವ ಪತ್ರಿಕಾಳು ಮೊದಲಾದವುಗಳ ಸಂಗ್ರಹದ ಲೆಕ್ಕ ಕೋರಿಸಬೇಕೆಂದು ಸಭಾಸದರ ಪರವಾಗಿ ಬಂದ ಸೂಚನೆಯನ್ನು ಜಿಲ್ಲಾಧಿಪರು ಸ್ವೀಕರಿಸಿದರು. ದವಸಗಳ ಲೆಕ್ಕ ಸರಿಯಾಗಿ ಸಿಗುತ್ತಿಲ್ಲ, ಸಿಕ್ಕಿದಷ್ಟರ ಲೆಕ್ಕ ಕೊಡಲ್ಪಡುವವಾಗಿ ಜಿಲ್ಲಾಧಿಪರು ಸ್ಪಷ್ಟ ಮಾಡಿದರು. ಪತ್ರಿಕಾಳು, ಹಿಂಡಿ ಮೊದಲಾದ ದವಸಗಳ ಆಹಾರಸಾಮಗ್ರಿಗಳ ಅಭಾವದಲ್ಲಿ ಜನರು ಕಡಿ ಯಾಕ್ಕಿಯನ್ನು ದವಸಗಳಿಗೆ ಹಾಕಿ ಮನುಷ್ಯರ ಕೆಲ ಆಹಾರದ ಪರಿಮಾಣವನ್ನು ಕಡಿಮೆ ಮಾಡುತ್ತಾರೆಂದು ಸಭಾಸದರು ಅರಿಕೆ ಮಾಡಿಕೊಂಡರು

ಬೇಸಾಯ ಸಾಹಿತ್ಯಗಳ ಬಗ್ಗೆ ಅವಶ್ಯವಿರುವ ಕಬ್ಬಿಣವನ್ನು ಸಿವಿಲ ಸಪ್ಲಾಯ-ಅಂಗಡಿಗಳಲ್ಲಿ ಮಾರಾಟಕ್ಕೆ ಇಡುವ ಕ್ರಮ ಕೈಕೊಳ್ಳಬೇಕಾಗಿ ಬಂದ ಸೂಚನೆಯು ವಿಚಾರವಾಗುವದೆಂದು ಜಿಲ್ಲಾಧಿಪರು ನುಡಿದರು

ಆಮೇಲೆ ಜವಳಿ-ನಿಯಂತ್ರಣದ ವಿಷಯ ಬಂತು "ಬಿ" ಲಾಯಸೆನ್ಸದಾರರ ನಡಾವಳಿಯ ಸಂಬಂಧದಲ್ಲಿ ಕೇಳಿ ಬಂದ ಹಲವಾರು ಆರೋಪಗಳ ಉಲ್ಲೇಖವಾಯಿತು. ಶ್ರೀ ಶಾಸ್ತ್ರಿಗಳಂಥವರು "ಬಿ" ಲಾಯಸೆನ್ಸದಾರರಾದರೂ ಇಂಥ ಆರೋಪಗಳು ಬರುವದು ತಪ್ಪಲಿಕ್ಕಿಲ್ಲವಾಗಿ ಜಿಲ್ಲಾಧಿಪರು ನುಡಿದು, ಈ ಆರೋಪಗಳಿಗೆ ಬೆಲೆ ಕೊಡಬಾರದೆಂದರು. ಆರೋಪಗಳು ನಿರಾಧಾರವಿರುತ್ತವೆಂದೂ ಹೊಗೆಯಿಲ್ಲದಿದ್ದವರು ಆರೋಪ ಮಾಡುತ್ತಾರೆಂದೂ ಸಹ ಉದ್ಗರಿಸಿದರು; ಮತ್ತು ಈಗಿನ 'ಬಿ' ಲ್ಯಾಸನ್ಸಿನ ಸ್ವಲ್ಪ ಪೂರ್ವೇತಿಹಾಸ ಹೇಳಿದರು. "೧೯೪೪ರಲ್ಲಿ ಸರಕಾರವು ಜವಳಿಯ ನಿಯಂತ್ರಣವನ್ನು ಕೈಕೊಂಡಿತು, ಮತ್ತು ನಮ್ಮ ಜಿಲ್ಲೆಗೆ ಹಂಚಿಕೊಟ್ಟ ಜವಳಿಯನ್ನು ತರಿಸಲಿಕ್ಕೆ [illegible] ಸೆಂಟ್ರಲ ಬೇಂಕಿಗೆ ನೇಮಿಸಿತು, ಬೇಂಕಿನವರು ಹಂಚಿಕೊಟ್ಟಷ್ಟು ಜವಳಿ ಗಂಟುಗಳನ್ನು ತರಿಸಲಿಲ್ಲ. ಮುಂಬಯಿಯಲ್ಲಿ ವ್ಯವಹಾರ ಮಾಡಬೇಕಾದರೆ ವ್ಯಾಪಾರ-ವ್ಯವಹಾರಗಳ ಸಂಬಂಧ ಬೇಕಾಗುತ್ತದೆ, ವ್ಯಾಪಾರಿ ಕಸಬು ಬೇಕಾಗುತ್ತದೆ. ಸಂಘಗಳಲ್ಲಿ ಈ ಗುಣಗಳಿಲ್ಲ. ಮೇಲಾಗಿ ಬೇಂಕಿನ ಕಡೆ ಈ ವ್ಯವಹಾರಕ್ಕೆ ತಕ್ಕಷ್ಟು ಭಂಡವಾಳ ಇದ್ದಿಲ್ಲ. ಇದಕ್ಕೆ ಸಾಧಾರಣ ೧೫ ಲಕ್ಷ ರೂ ತಗಲುತ್ತದೆ. ಸೆಂಟ್ರಲ್ ಬೇಂಕಿನವರು ಎಲ್ಲ ಜವಳಿ ತರದ್ದರಿಂದ ಜಿಲ್ಲೆಯೊಳಗೆ ಕಷ್ಟ ಒದಗಿತು. ಇಂಥ ಪ್ರಸಂಗದಲ್ಲಿ ಬೇರೆ ಯಾರೂ "ಬಿ" ಲ್ಯಾಸನ್ಸ ಕೊಳ್ಳಲಿಕ್ಕೆ ಸಿದ್ಧರಿದ್ದಿಲ್ಲ. ಆಗ ಈಗಿನ "ಬಿ" ಲ್ಯಾಸನ್ಸದಾರರು ಮುಂದೆ ಬಂದು, ಬೇಕಷ್ಟು ಭಂಡವಾಳ ಹಾಕಿ, ನೇಮಿಸಿಕೊಟ್ಟ ಜವಳಿಯನ್ನು ತತ್ಪರತೆಯಿಂದ ತರಿಸಿ ಜಿಲ್ಲೆಯವರಿಗೆ ಹಂಚಿದರು. ಈಗ ಈ ವ್ಯವಹಾರಕ್ಕೆ ಒಂದು ಬಗೆಯ ಸ್ಥಿರತೆ ಬಂದಿದೆ. ಆದರಿಂದ ಅದನ್ನು ಕೊಳ್ಳಲು ಪ್ರೀತಿಯುಂಟಾಗಿದೆ." ಹೀಗೆ ಜಿಲ್ಲಾಧಿಪರು "ಬಿ" ಲ್ಯಾಸನ್ಸದಾರರ ಉಪಕಾರದ ಇತಿಹಾಸ ಹೇಳಿದರು. ಒಬ್ಬ ಲ್ಯಾಸನ್ಸದಾರನಿಗಿಂತ ೨ ಇಲ್ಲವೆ ೪ ಲ್ಯಾಸನ್ಸದಾರರನ್ನು ನೇಮಿಸುವದುತ್ತಮವೆಂಬದೊಂದು ಸೂಚನೆ ಮುಂದೆ ಬಂತು. ಆ ಕುರಿತು ಆಲೋಚನೆ ಮಾಡಲ್ಪಡುವದಾಗಿ ಜಿಲ್ಲಾಧಿಪರು ನುಡಿದರು. ಮುಂಬಯಿಯಲ್ಲಿ ಸರಕು ಸಿಗಬೇಕಾದರೆ ನಿಯಂತ್ರಣ ಬೆಲೆಗಿಂತ ಹೆಚ್ಚು ಹಣ ಕೊಡಬೇಕಾಗುತ್ತದೆಂದೂ, ಬೇಂಕುಗಳಿಗೆ ಅದನ್ನು ಕೊಡಬರುವದಿಲ್ಲವೆಂದೂ, ಆ ಕಾರಣದಿಂದ ಎಲ್ಲ ಜವಳಿ ತರಲು ಬೇಂಕಿಗೆ ತೊಂದರೆಯಾಯಿತೆಂದೂ ಸಭಾಸದರೊಬ್ಬರು ಹೇಳಿದರು. ಅದೇನಿದ್ದಾಗ್ಯೂ ಹಂಚಿಕೊಟ್ಟ ಜವಳಿ ಬೇಂಕಿನಿಂದ ತರಲಾಗಲಿಲ್ಲೆಂಬದು ಸ್ಪಷ್ಟವುಂಟೆಂದು ಜಿಲ್ಲಾಧಿಪರು ಆ ಮಾತಿಗೆ ಸಮಾಧಾನ ಹೇಳಿದರು. ಬೇಂಕುಗಳಲ್ಲಿ ವ್ಯಾಪಾರದ ಕಸಬು ಕಾಣುವದಿಲ್ಲೆಂದರು. ಇದೇ ವಿಷಯದ ಮೇಲೆ ಮಾತಾಡುವಾಗ ನೇಮಿಸಿಕೊಟ್ಟ ಎಲ್ಲ ಪತ್ರಿಕಾಳನ್ನು ಬೇಂಕುಗಳು ತರಿಸಲಿಲ್ಲೆಂದೂ ಜಿಲ್ಲಾಧಿಪರು ದೂರಿದರು. ಒಂದು ಬೇಂಕು ಜವಳಿಯ ಉದ್ಯೋಗದಲ್ಲಿ ೨ ಲಕ್ಷ ರೂಗಳ ತನಕ ಹಣ ತೊಡಗಿಸಲಿಕ್ಕೆ ಸಿದ್ಧವಿರುವರೆಂದೂ ಅದಕ್ಕೆ "ಬಿ" ಲಾಯ್ಸನ್ಸ್ ಕೊಡಬಹುದೆಂದೂ ಒಬ್ಬ ಗೃಹಸ್ಥರು ಸೂಚಿಸಿದರು. ಹೀಗೆ ಗಲ್ಲ ಸಂಕೀರ್ಣ ಚರ್ಚೆಯಾಗಿ ಸಭೆಯ ಕೆಲಸ ಮುಗಿಯಿತು

ಮೇಲೆ ಹೇಳಿದ ಹೊಸ ಸಲಹೆಗಾರ ಮಂಡಳವನ್ನು ಪ್ರಾಂತಿಕ ಸರಕಾರವು ರದ್ದುಪಡಿಸುವದೆಂದೂ ಅದರಿಂದ ಈ ಸಭೆಯಲ್ಲಾದ ಆಯ್ಕೆ ಮೊದಲಾದ ಕಾರ್ಯಕಲಾಪವೆಲ್ಲ ರದ್ದಾಗುವದೆಂದೂ ಒಂದು ಸುದ್ದಿ ಕೇಳಬರುತ್ತದೆ.

SAREES of select colours with silk and jari borders and 5, 6, 7, 8 & 9 yards in length are sold by us at prices ranging from Rs 2-12-0 to 15 per yard. Brocades are charged extra. Address your orders to —

Kumarswamy & Co.,
Cloth Merchants,
Rangiah Gowden Street,
Coimbatore (S I)

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು)

ಶಿರಸಿ— (ತಾ ೩೦ ೬-೪೬) ಮಳೆ ವಿಪರೀತ. ಮಳೆಯಿಂದ ಹಳ್ಳಿಗಳ ವ್ಯವಹಾರ ನಿಂತುಹೋಗಿದೆ

ಅಡಿಕೆಯ ದರ ಕೇಜಿಯಲ್ಲುಂಟು. ಮುಂಬಯಿ ಪೇಟೆಯಲ್ಲಿ ಪಂಚೈವ್ಹೇಟಿಗೂ ೧೦ ದರವಾದ ವಾರ್ತೆಯುಂಟು. ದರವಿನ್ನೂ ಏರುವದೆಂಬ ಆಶೆಯಿಂದ ಅಡಿಕೆ ಶಿಲ್ಕಿದ್ದವರು ಕೈಬಿಟ್ಟು ಮಾರುವದಿಲ್ಲ

ಶಿರಸಿ ಕಾಲೇಜ ಸಮಿತಿಯವರ ವಿನಂತಿಯಂತೆ ಇಲ್ಲಿಯ ಫಂಡಗಂಡಾಯವನ್ನೂ ತಿರುಗಿ ಕೊಡುವ ಕೆಲಸಕ್ಕೆ ಕೈಹಾಕಲ್ಪಟ್ಟಿದೆ. ಆದರೆ ಬಹುತೇಕ ಧನಿಕರು ತಮ್ಮ ಫಂಡಗಂಡಾಯ ಮೊದಲೇ ತಿರುಗಿ ಪಡಕೊಂಡಿದ್ದಾರೆ ಈ ಊರವರಿಂದ ಅಂತು ೧೫ ಸಾವಿರ ರೂಪಾಯಿ ವಸೂಲ ಮಾಡಲ್ಪಟ್ಟಿತ್ತು. ಅದರಲ್ಲಿ ೩ನೆಯ ೧ ಅಂಶ ಶ್ರೀಮಂತರಿಂದಲೇ ವಸೂಲಾಗಿತ್ತು. ಅವರೇ ಮೊದಲು ಕಚೇರಿಯಲ್ಲಿ ಮುತ್ತಿ ತಮ್ಮ ಹಣ ವಸೂಲ ಕೊಂಡರು! ಈಗ ಉಳಿದವರು ಬಡವರು ಮಾತ್ರ. ಕಾಲೇಜ–ಸಮಿತಿಗೆ ದಾನ ಕೊಡುವ ಆಸ್ಥೆ ಅವರಲ್ಲಿಲ್ಲ

೧೯೪೨ರ ಆಂದೋಲನದಲ್ಲಿ ಪೋಲೀಸರ ಅತ್ಯಾಚಾರಗಳಿಗೊಳಗಾದ ಕೆಲವರು ಆ ಅತ್ಯಾಚಾರಗಳ ಚೌಕಶಿಯಾಗಬೇಕೆಂದು ಸರಕಾರಕ್ಕೆ ಅರ್ಜಿಗಳನ್ನು ಮಾಡಿದ್ದಾರೆ. ಸರಕಾರದವರು ಆ ಅರ್ಜಿಗಳನ್ನು ಚೌಕಶಿಗಾಗಿ ಜಿಲ್ಲಾಧಿಪರ ಕಡೆ ಕಳಿಸಿರಬೇಕು. ನಿಮ್ಮ ಸಾಕ್ಷಿದಾರರನ್ನು ಕರಕೊಂಡು, ಎಲ್ಲ ಪುರಾವೆ ಸಹಿತ ಕಾರವಾರಕ್ಕೆ ಬರಬೇಕೆಂದು ಜಿಲ್ಲಾಧಿಪರು ಈ ಅರ್ಜಿದಾರರಿಗೆ ಅಪ್ಪಣೆ ಮಾಡಿದ್ದಾರೆ. ಪ್ರವಾಸ ಮಾಡುವದು ಕಷ್ಟಕರವಾಗಿರುವ ಈ ಕಾಲದಲ್ಲಿ ಹೀಗೆ ಸಾಕ್ಷಿಗಾರರನ್ನು ಕಟ್ಟಿಕೊಂಡು ೬೦–೮೦ ಮೈಲು ದೂರವಿರುವ ಕಾರವಾರಕ್ಕೆ ಬರಬೇಕಾದರೆ ಮತ್ತು ಆ ಬಗ್ಗೆ ಹಣ ವೆಚ್ಚ ಮಾಡಹಚ್ಚಿದರೆ, ಆ ಕಷ್ಟ ಮತ್ತು ವೆಚ್ಚ ಸಹಿಸಲಾಗದೆ ಜನರು ತಮ್ಮ ಅರ್ಜಿಗಳನ್ನು ತಿರುಗಿ ತಕ್ಕೊಂಡು ಬಿಡುವರು ಮತ್ತು ಚೌಕಶಿಯ ಕಷ್ಟ ತಮಗೆ ತಪ್ಪುವದು ಎಂಬೀ ವಿಚಾರದಿಂದ ಜಿಲ್ಲಾಧಿಪರು ಈ ಮಾರ್ಗ ಹಿಡಿದಿರಬಹುದೆಂದು ಜನರ ಭಾವನೆಯಾಗಿದೆ. ಜಿಲ್ಲಾಧಿಪರಲ್ಲಿ ಅಂತಹ ವಿಚಾರವಿಲ್ಲದಿದ್ದರೆ ಅವರು ಶಿರಸಿಯಲ್ಲೇ ಕೆಲವು ದಿನ ಮುಕ್ಕಾಮು ಮಾಡಿ ಚೌಕಶಿ ಮಾಡುತ್ತಿದ್ದಿಲ್ಲವೇ ? ಎಂದವರ ವಾದ. ಕಾಂಗ್ರೆಸ ಮಂತ್ರಿಗಳು ಇತ್ತ ಗಮನಿಸಬೇಕಾಗಿ ಅರಿಕೆ

ಇಲ್ಲಿಯ ಖಾದಿ ಅಂಗಡಿಯಲ್ಲೂ ಕಳ್ಳ ಸಂತೆಗಾರಂಥವಾದ ದೂರು ಕೇಳಬರುತ್ತಿದೆ. ಖಾದಿ-ವ್ರತಸ್ಥರನೇಕರು ಇಲ್ಲಿ ಖಾದಿ ಸಿಗುವದಿಲ್ಲೆಂದು ಬೇರೂರುಗಳಿಂದ ಖಾದಿ ತರಿಸಿಕೊಳ್ಳುತ್ತಾರೆ. ಚರಖಾ ಸಂಘದವರು ಇತ್ತ ಗಮನಿಸಬೇಕಾಗಿ ಅರಿಕೆಯುಂಟು

ಸಿದ್ಧಾಪುರ ತಾಲೂಕಿನ ಹಾರ್ಸಿಕಟ್ಟೆ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ನರಭಕ್ಷಕ ಹುಲಿಯ ಅಂಜಿಕೆಯಿರುವದರಿಂದ ಆ ಕಡೆಯ ಜನರು ಊರು ಬಿಟ್ಟು ಹೊರಬೀಳಲೊಲ್ಲುವದಿಲ್ಲ. ಸದರಿ ಹುಲಿಯು ಈ ೩ ತಿಂಗಳಲ್ಲಿ ೧೪—೨೦ ಜನರ ಆಹುತಿ ತಕ್ಕೊಂಡಿದೆಯಂತೆ. ೧೦–೧೨ ದಿನಗಳ ಹಿಂದೆ ಒಬ್ಬ ಎಳೆ ಹುಡುಗನನ್ನು ಆ ಹುಲಿ ಕೊಂದ ವಾರ್ತೆಯಿದೆ. ಈ ಹುಲಿಯ ಬೇಟೆಯಾಡಲು ಪೋಲೀಸರು ಬಹಳ ಪ್ರಯತ್ನ ಮಾಡಿದರಂತೆ ಆದರೆ ಅದು ಎಲ್ಲೂ ಅವರ ಕಣ್ಣಿಗೆ ಬೀಳಲಿಲ್ಲವಂತೆ ಈ ಹುಲಿಯ ಹಾವಳಿಯ ಮೂಲಕ ಹಾರ್ಸಿಕಟ್ಟೆ ಸೀಮೆಯವರಿಗೆ ಇಲ್ಲಿಯ ದಿವಾಣ ಕೋರ್ಟಿಗೆ ಬರಲು ಕಷ್ಟವಾಗಿದೆ ಅವರ ಕಷ್ಟ ನೋಡಿ ಯಾರಿಗಾದರೂ ಕನಿಕರ ಹುಟ್ಟುವದು. ಆದರೆ ಇಲ್ಲಿಯ ನ್ಯಾಯಾಧೀಶರಿಗೆ ಮಾತ್ರ ಏನೂ ಕರುಣೆ ಹುಟ್ಟುವದಿಲ್ಲ. ಹಾರ್ಸಿಕಟ್ಟೆ ಬದಿಯ ಪಕ್ಷಗಾರರ ವಕೀಲರು ಎಲ್ಲ ಕಷ್ಟಗಳನ್ನು ನಿವರಿಸಿ ಅವರ ದಾವೆಗಳ ವಿಚಾರ ಮುಂದೂಡಬೇಕಾಗಿ ಅರ್ಜಿ ಮಾಡಿದರೆ ನ್ಯಾಯಾಧೀಶರು ಕಟ್ಟನೆ ಆ ಅರ್ಜಿ ತಿರಸ್ಕರಿಸಿಬಿಡುತ್ತಾರೆ! ೨-೪ ತಾಸುಗಳ ಅವಧಿಯನ್ನಾದರೂ ಕೊಡಿರೆಂದು ಬೇಡಿದರೂ ಅವರು ಒಪ್ಪುವದಿಲ್ಲ! ಇದಕ್ಕೆ ನ್ಯಾಯದಾನವೆನಬೇಕೋ ನ್ಯಾಯದ ವಿಟಂಬನೆಯೆನಬೇಕೋ ಎಂದು ತ್ರಸ್ತ ಜನರು ಉದ್ವೇಗಗೊಂಡು ಪ್ರಶ್ನೆ ಮಾಡುತ್ತಾರೆ ಮೇಲಧಿಕಾರಿಗಳು ಈ ನ್ಯಾಯಾಧೀಶರಿಗೆ ಬುದ್ಧಿವಾದ ಹೇಳುವದುಚಿತ

ಊರಲ್ಲಿ ತೆಂಗಿನೆಣ್ಣೆ ಸಿಗುವದು ಕಷ್ಟವಾಗಿದೆ. ೧ ತಿಂಗಳ ಹಿಂದೆ ಬೇಂಕಿನವರು ೫೦ ಡಬ್ಬಿ ಎಣ್ಣೆ ತರಿಸಿದ್ದರಂತೆ ಸೀಧಾ ಅಂಗಡಿಗಳಲ್ಲಿಟ್ಟು ಅದನ್ನು ಮಾರಲ್ಪಡುವದೆಂದು ವ್ಯವಸ್ಥೆಯಾಗಿತ್ತು, ಆದರೆ ಸೀಧಾ-ಅಂಗಡಿಗಳಲ್ಲಿ ಅಷ್ಟು ಎಣ್ಣೆ ಬರಲಿಲ್ಲವಂತೆ! ಪರದೆಯ ಹಿಂದೆಯೇ ಅದರ ಬಟವಡೆಯಾಗಿ ಹೋಯಿತಂತೆ!

ಜವಳಿ ವರ್ತಕರ ಕಳ್ಳಾಟಗಳಂತೂ ಸೀಮೆಯಿಲ್ಲದಾಗಿದೆ ಅವರ ಗಂಟು ಕೈಗೆ ಬರುತ್ತಲೇ ವರ್ತಕರು ಚಲೋ ಓಳೆಗಳ ತುಂಡುಗಳನ್ನು ತಾವು ಅಧಿಕ ದರದಲ್ಲಿ ತೆಗೆದಿಡುತ್ತಾರೆ! ಜನರು ಅವನ್ನು ನೋಡಿಕೊಂಡು ಮರಳಿ ಹೋದರಾಯಿತು !

ಸರಕಾರದವರು ಕೊಡುವ ಸೀಧಾ-ಅಕ್ಕಿಯಲ್ಲಿ ಭತ್ತ ಬಹಳವಿರುತ್ತದೆಂದು ಜನರ ಗಲಭೆ. ಆ ಅಕ್ಕಿಯೂ ಪುನಃ ಭತ್ತ ಕೊಲದಿಟ್ಟ ಅಕ್ಕಿಯಂತೆ ಇರುತ್ತದೆ! ಅದನ್ನು ಮೆರಿಸಿಕೊಂಡನಕ ಉಣ್ಣಲಾಗುವದಿಲ್ಲ ಹೀಗೆ ಮೆರಿಸಿಕೊಂಡು ಸ್ವಚ್ಛ ಮಾಡಿದಲ್ಲಿ ಒಂದು ಪಾಯಲಿ ಅಕ್ಕಿ ೩ ಸೇರು ಆಗುತ್ತದಂತೆ ಅದರಿಂದ ಸೀಧಾ ಅಂಗಡಿಯಲ್ಲಿ ಸಿಗುವ ಅಕ್ಕಿ ಎಷ್ಟಕ್ಕೂ ಸಾಲುವದಿಲ್ಲೆಂದೂ ಕಳ್ಳ ಪೇಟೆಯಿಂದ ಅಕ್ಕಿ ತಂದನಕ ನಿರ್ವಾಹವಾಗುವದಿಲ್ಲೆಂದೂ ಜನರು ದೂರುತ್ತಾರೆ ಕೂಲಿಗಾಗಿ ಘಟ್ಟದ ಕೆಳಗಿಂದ ಬಂದ ಜನರಿಗಂತೂ ಸೀಧಾ ಸಿಗುವದಿಲ್ಲ ಅವರಿಗೆ ಕಳ್ಳ ಪೇಟೆಯೇ ಆಧಾರ. ಅದರಿಂದ ಇಲ್ಲಿ ಕಳ್ಳ ವ್ಯಾಪಾರಕ್ಕೆ ಒಳ್ಳೇ ಅನುಕೂಲ ವಾತಾವರಣವುಂಟು. ಕಳ್ಳ ಪೇಟೆ ನಿರ್ನಾಮ ಮಾಡುವ ಉದ್ದುದ್ದ ಮಾತುಗಳನ್ನಾಡುವ ಸರಕಾರಿ ಅಧಿಕಾರಿಗಳ ಧೋರಣೆಯಿಂದಲೇ ಆ ಕಳ್ಳ ಪೇಟೆಗೆ ಪ್ರೋತ್ಸಾಹ ಸಿಗುತ್ತಿರುವದು ಮಾತ್ರ ವಿಷಾದಕರ!

ಸ್ಥಳಿಕ ಮೋಟಾರ ಬಂಡಿಗಳಿಗೊಂದು ನಿಯಮ ಮತ್ತು ಪರಸ್ಥಳಿಕ ಮೋಟಾರಗಳಿಗೆ ಬೇರೊಂದು ನಿಯಮ ಹೀಗೆ ಭೇದಭಾವ ಮಾಡಿದ್ದು ಪ್ರಕಟವಾದ ನಿಯಮಗಳಲ್ಲೇನೂ ಕಂಡುಬರುವದಿಲ್ಲ ಇಲ್ಲಿಯ ಪೋಲೀಸರಿಗೆ ಬಂದಿರುವ ನಿಯಮಗಳಲ್ಲಿ ಮಾತ್ರ ಹಾಗೇನಾದರೂ ಭೇದ ಕಲ್ಪಿಸಿದ್ದುಂಟೋ ಏನೋ! ಸ್ಥಳಿಕ ಮೋಟಾರ ಬಂಡಿಗಳು ಎಷ್ಟೇ ಭಾರ ಹೇರಿಕೊಂಡು ಊರೊಳಗೆ ಓಡಾಡಿದರೂ ಅವರು ಆಕ್ಷೇಪಿಸುವದಿಲ್ಲ! ಪರಸ್ಥಳಿಕ ಮೋಟಾರಗಳು ಒಂದಿಷ್ಟು ಹೆಚ್ಚಿಗೆ ಭಾರ ಹಾಕಿದ್ದು ಕಂಡರೆ ಮಾತ್ರ ಅವರು ಕೂಡಲೇ ಪ್ರಕರಣ ಮಾಡುತ್ತಾರೆ, ಖಟ್ಲೆ ಹೂಡುತ್ತಾರೆ! ಪೋಲೀಸರ ಈ ಕುತಂತ್ರಗಳನ್ನರಿತ ರೆಸಿಡೆಂಟ ಮೆಜಿಸ್ಟ್ರೇಟರು ಆರೋಪಿಗಳಿಗೆ ೨೦-೨೦ ರೂ ಗಳಂತೆ ದಂಡ ವಿಧಿಸಿ ಬಿಡುಗಡೆ ಮಾಡಿದರು. ಇದರಿಂದ ಪೋಲೀಸರಿಗೆ ಸಮಾಧಾನವಾಗಲಿಲ್ಲ! ಅದರಿಂದ ಒಂದು ಖಟ್ಲೆಯನ್ನು ಅವರು ತಾಲೂಕ ಮೆಜಿಸ್ಟ್ರೇಟರ ಮುಂದೆ ದಾಖಲಪಡಿಸಿದರು ಆ ಖಟ್ಲೆಯಲ್ಲಿ ಮೆಜಿಸ್ಟ್ರೇಟರು ಬಹಳ ವಿಚಾರ ಮಾಡಿ, ಮೋಟಾರ ನಡೆಸಲು ಪ್ರತಿಬಂಧವಿದ್ದ ರಸ್ತೆಯ ಮೇಲೆ ಮೋಟಾರ ನಡೆಸಿದ್ದು ಮತ್ತು ನೇಮ ಮೀರಿ ಭಾರ ಹೇರಿದ್ದು ಹೀಗೆ ಎರಡು ಅಪರಾಧಗಳನ್ನು ಹಾಕಿ ಆರೋಪಿಗೆ ರೂ ೧೭೫ ದಂಡ ವಿಧಿಸಿದರು. ಆಗ ಪೋಲೀಸರಿಗೆ ಪೂರ್ಣ ಸಮಾಧಾನವಾಯಿತು. ಬನವಾಸಿಯಿಂದ (ಕಳ್ಳ ಹಾಗೂ ಸರಕಾರಿ) ಭತ್ತ ಹೇರಿಕೊಂಡು ಬರುವ ಪ್ರತಿಯೊಂದು ಮೋಟಾರ ಬಂಡಿಯನ್ನು ತಪಾಸ ಮಾಡಿದರೆ ಅವುಗಳಲ್ಲಿ ಮಿತಿಮೀರಿ ಭಾರ ಹಾಕಿದ್ದು ಕಂಡು ಬರುವಂತುಂಟು. ಆದರೆ ಪೋಲೀಸರು ಆ ಮೋಟಾರಗಳ ಕಡೆ ಕಣ್ಣೆತ್ತಿ ಸಹ ನೋಡುವದಿಲ್ಲ! ಪರಸ್ಥರ ಬಂಡಿಗಳಷ್ಟೇ ಅವರಿಗೆ ಕಾಣುತ್ತವೆ! ಅವರ ದೃಷ್ಟಿಯಲ್ಲೇನಾದರೂ ದೋಷವುಂಟೋ ಏನೆಂಬುದರ ತಪಾಸಣೆಯನ್ನು ಪೋಲೀಸ ಸಾಹೇಬರು ಮಾಡಿಸಿಕೊಳ್ಳಬಾರದೇ ?

ನಮ್ಮಲ್ಲಿ (ಹೋಲಸೇಲ) ಠೋಕ ವ (ರಿಟೇಲ) ಚಿಲ್ಲರೆ

ಡಿನೇಚರ್ಡ ಸ್ಪಿರಿಟ್

ಮಾರಲಿಕ್ಕೆ ಸಿಗುತ್ತದೆ.

ವಿ. ಎಮ್. ಮಿರ್ಜಾನಕರ,

ಲಾಯಸನ್ಸ, ಮೋಟರ ಸ್ಟೆಂಡ,ಕುಮಟಾ.

ಪ್ರಕಟನೆ.

ಸಿ. ೧೫

ಕುಮಟಾ ದಿವಾಣಿ ಕೋರ್ಟಿನಲ್ಲಿ.

ಮೂಲ ನಂಬರ ೧೮೩–೧೯೪೫.

೧ ಬೋಳು ಬಿಂನ ಬೀರಪ್ಪ ಗೌಡ ಕುಕ್ಕೆಕೇರಿ, ಪ್ರಾಯ ೪೦.
೨ ಹುಲಿಯಪ್ಪ ಬಿಂನ ಸುಕ್ರು ಕವನಮನೆ, ಪ್ರಾಯ ೩೫, ಜಾತಿ ಹಾಲಕ್ಕಿ ವಕ್ಕಲ, ಕಸಬು ರೈತ, ಸಾಕಿನ ಕುಮಟಾ ತಾಲೂಕ ಗೋಕರ್ಣ ನಿವಾಸಿಕರು .... } ವಾದಿರು.

ವ॥ ವಿ॥ ಎನ್. ಜಿ. ಕಾನಭಾಗ.

— ವಿರುದ್ಧ —

೧. ಜಟ್ಟಿ ಬಿಂನ ಹುಲಿಯಾ ಬಾಬಣ್ಣನ ಮನೆ, ಪ್ರಾಯ ೫೦
೨. ಕಂತ್ರಿ ಬಿಂನ ಶಿವಯ್ಯ ಕಲ್ಲರಿಮನೆ, ಪ್ರಾಯ ೪೦.
೩ ಹಮ್ಮ ಬಿಂನ ಗುರುವಾ ಕಲ್ಲರಿಮನೆ, ಪ್ರಾಯ ೪೫.
೪ ತಿಪ್ಪಯ್ಯ ಬಿಂನ ರಾಮಾ ಕಂತ್ರಿಮನೆ, ಪ್ರಾಯ ೪೨
೫. ಹುಲಿಯಾ ಬಿಂನ ಲಿಂಗಯ್ಯ ಲಿಂಗಯ್ಯನಮನೆ, ಪ್ರಾಯ ೪೦.
೬. ಸುಕ್ರು ಬಿಂನ ಮಂಜಾಳ.ಬುದ್ದ್ಯಂತನಮನೆ, ಪ್ರಾಯ ೨೫, ಎಲ್ಲರೂ ಹಾಲಕ್ಕಿವಕ್ಕಲ ಜಾತಿಯವರು, ರೈತ ಕಸಬಿನವರು, ಕುಮಟಾ ತಾಲೂಕ ಗೋಕರ್ಣ ಪೈಕಿ ತಾರಮಕ್ಕಿ ನಿವಾಸಿಕರು .... } ಪ್ರತಿವಾದಿರು.

ದಾವಾ ರೂಪಾಯಿ ೨೮೨—೦—೦.

ಸಿ. ಪಿ. ಸಿ. ಆರ್ಡರ ೧ ರೂಲ ೮ ರನ್ವಯ ಪ್ರಕಟನೆ ಹೊರಡಿಸುವದೇನಂದರೆ'—

೧ನೇ ವಾದಿ, ೧ನೇ ಪ್ರತಿವಾದಿ ಮತ್ತು ಬಾಕಿ ವಾದಿ–ಪ್ರತಿವಾದಿರ ಹಿರಿಯರು ತಾಡಿ ಗೋಕರ್ಣ ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ನಡೆಯತಕ್ಕ ನಿತ್ಯ ನೈಮಿತ್ತಿಕ ಕೆಲಸಗಳನ್ನು ಮಾಡಿಕೊಡಲಿಕ್ಕೆ ತಾ. ೨೫-೩–೧೯೧೫ ನೇಗೆ ಬರಕೊಟ್ಟ ಕರಾರಿನಂತೆ ಪ್ರತಿವಾದಿರು ನಡೆಯದ್ದರಿಂದ, ಆ ಕುರಿತು ವಾದಿರಮೇಲೆ ಬಂದ ಜವಾಬದಾರಿಯಂತೆ ವಾದಿರು ಆ ಕೆಲಸ ಮಾಡಬೇಕಾದ್ದರಿಂದ, ವಾದಿರಿಗೆ ಶ್ರೀ ದೇವಸ್ಥಾನದಿಂದ ಸಂದ ವೇತನ ವಗೈರೆ ಕೊಡಲಾಗಿ ಬಾಕಿ ಸಲ್ಲತಕ್ಕದ್ದಾಗುವ ರಕಮನ್ನು ಪಡಕೊಳ್ಳಲು ಎಲ್ಲರ ತರ್ಫನಿಂದ ವಾದಿರು ಈ ದಾವೆ ಮಾಡುತ್ತಾರೆ. ಆ ಕುರಿತು ಯಾರಿಗಾದರೂ ಏನಾದರೂ ಹೇಳಿಕೆಯನ್ನು ಕೋರ್ಟಿಗೆ ಸಮಕ್ಷ ಅರಿಕೆ ಮಾಡಿಕೊಳ್ಳುವದಿದ್ದಲ್ಲಿ ಅವನ್ನು ತಾರೀಖು ೧೫–೭–೧೯೪೬ನೇಗೆ ಸ್ವತಃ ಇಲ್ಲವೆ ವಕೀಲರ ಮುಖಾಂತರ ಕೋರ್ಟಿಗೆ ಅರಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಪ್ರಕರಣದಲ್ಲಿ ದಾಖಲಾಗುವ ಪುರಾವೆಯ ಮೇಲಿಂದ ಕೋರ್ಟಿಗೆ ಯುಕ್ತ ತೋರಿದ ನಿರ್ಣಯ ಕೊಡಲ್ಪಡುವದು ತಿಳಿಯುವದು

ಕುಮಟಾ,
ತಾ ೬—೭—೧೯೪೬

R N. Phenani,
Clerk of the Court,
Civil Judge's Court, Kumta.

ಜಾಹೀರ ನೋಟೀಸು.

೧ ಮಹಾದೇವ ಸುಬ್ರಾಯ ಹೆಗಡೆ ಮತ್ತು ೨ ಆ॥ ರಾಮಚಂದ್ರ ಸುಬ್ರಾಯ ಹೆಗಡೆ ಅಪ್ರಾಯಸ್ಥ ರಕ್ಷಕ ಅವಿಭಕ್ತ ಅಣ್ಣ ೧ನೇಯವನು ಇಬ್ಬರೂ ಸಾ॥ ಮೊಣ್ಸಕೇರಿ ತಾಲೂಕ ಶಿರಸಿ ಇವರು ಇದರ ಮೂಲಕ ಜಾಹೀರಪಡಿಸುವದೇನಂದರೆ.— ಮಾರ್ಜಿನದಲ್ಲಿ ಬರೆಸಿದ ಹೀಪನಳ್ಳಿ ಗ್ರಾಮ (ಮೊಣ್ಸಕೇರಿ)ದ ಆಸ್ತಿಗಳು ನಮ್ಮ ಮಾಲ್ಕಿಯವಾಗಿದ್ದು ನಾರಾಯಣ ನಾಗಪ್ಪ ಹೆಗಡೆ ಮೊಣ್ಸಕೇರಿ ಇವರಿಗೆ ಚಾಲಗೇಣಿಗಿದ್ದು ಸದ್ರಿ ನಾರಾಯಣ ಹೆಗಡೆರು ನಮ್ಮ ಗೇಣಿ ಸುರಳಿತ ಕೊಡದೆ ಬಾಕಿ ಉಳಿಸಿಕೊಂಡಿರುವದರಿಂದ ಬಾಕಿಯಿರುವ ಗೇಣಿ ಹಣ ಮತ್ತು ಆಸ್ತಿಯ ಕಬಜೆಯ ಬಗ್ಗೆ ನಾವು ದಾವೆ ಮಾಡಲಿದ್ದೇವೆ. ಆ ದಾವೆಗೆ ವ್ಯತ್ಯಯ ತಂದು ಅಡೆತಡೆಪಡಿಸುವ ಯಾ ಮೋಸಗೊಳಿಸುವ ಇರಾದೆಯಿಂದ ಸದರಿ ಹೆಗಡೆರು ಆಸ್ತಿ ಪರಾಧೀನಪಡಿಸುವ ಯಾ ಆಸ್ತಿಯೊಳಗಿನ ಬೆಳೆ ಫಲಗುತ್ತಿಗೆಗೆ ಕೊಡುವ ಆಲೋಚನೆ ನಡಿಸಿರುವರಾಗಿ ಕೇಳಿದೆ. ಸದ್ರಿ ನಾರಾಯಣ ಹೆಗಡೆರಿಗೆ ಆಸ್ತಿ ಯಾ ಬೆಳೆ ಪರಾಧೀನಪಡಿಸುವ ಹಕ್ಕು ಇಲ್ಲ. ಕಾರಣ ಸದ್ರಿ ಆಸ್ತಿಯ ಬಗ್ಗೆ ಯಾರೂ ಸದ್ರಿ ನಾರಾಯಣ ಹೆಗಡೆರ ಕೂಡ ಏನೂ ವ್ಯವಹಾರ ಮಾಡಬಾರದು. ಯಾರಾದರೂ ಮಾಡಿಕೊಂಡಲ್ಲಿ ಅವರು ನಮ್ಮ ಗೇಣಿ ಮತ್ತು ಕಬಜೆ ಬಗ್ಗೆ ನಾವು ಹೂಡಬಹುದಾದ ದಾವೆ-ಕ್ರಮಗಳಿಗೆ ಹೊಣೆಗಾರರಾಗಿ ಹಾನಿಗೆ ಗುರಿಯಾಗಬೇಕಾದೀತು.

ಸ ನಂ	ಕ್ಷೇತ್ರ	ಆಕಾರ
೫೨	೦—೩೯—೦	೧೪—೦—೦
೪೬ ೨	೦—೪—೬	೨—೭—೮
೭೬ ೧	೦—೧೬—೮	೧—೬—೦
೧೪–೨	೦—೪—೦	೦—೬—೬

ಶಿರಸಿ,
ತಾ ೧-೭-೪೬. }

ಮಹಾದೇವ ಸುಬ್ರಾಯ ಹೆಗಡೆ, ಮೊಣ್ಸಕೇರಿ.
(ಸ್ವಂತ ನಾತೆಯಿಂದಲೂ ಅಪ್ರಾಯಸ್ಥನ ರಕ್ಷಕ ನಾತೆಯಿಂದಲೂ)

ಜಿಲ್ಲಾ ಆಹಾರ ಸಲಹೆ ಮಂಡಳದ ಸಭೆಯ ಕಾರ್ಯಕಲಾಪ

ಜಿಲ್ಲಾಧಿಪರ ಆಹಾರ ಸಲಹೆಗಾರರ ಮಂಡಲ ಹೊಸ್ತ ಪುನರ್ಘಟಿಸಲ್ಪಟ್ಟಿದೆ. ಈ ಮಂಡಲದಲ್ಲಿ ಈಗ ಸ್ಥಾನಿಕ ಕಾನಡಾದ ಮಂಡಳಗಳ ಸದಸ್ಯರಾದ (೧) ಶ್ರೀ ಶಿವರಾಮ ಶಾಸ್ತ್ರಿ, (೨) ಶಿವರಾಮ ರಾಮಚಂದ್ರ ಪ್ರಭು (೩) [illegible] ಗೌಂಡಕಾರ, (೪) ಜೀ ಎಚ್ ಕಮರುದ್ದೀನ, ಮತ್ತು (೫) ಮಹಾಬಲೇಶ್ವರ ಭಟ್ಟ, ಗೋಕರ್ಣ ಈ ಐವರೂ ಜಿಲ್ಲಾ ಲೋಕಲ್ ಬೋರ್ಡ ಅಧ್ಯಕ್ಷ ಶ್ರೀ ದತ್ತ ನಾಯ್ಕ ಮತ್ತು [illegible] ಸೆಂಟ್ರಲ ಬೆಂಕಿನ ಅಧ್ಯಕ್ಷ ಶ್ರೀ [illegible] ಇವರೂ, ಶ್ರೀ (೧) ರಾಮಚಂದ್ರ ಕೇಶವ ನಾಯ್ಕ, ಅಂಕೋಲಾ, (೨) ವಿಶ್ವೇಶ್ವರ ಹೆಗಡೆ ವಕೀಲ, ಕುಮಟಾ (೩) [illegible] ವಕೀಲ, ಕುಮಟಾ (೪) ಗೋವಿಂದ ನಾಯ್ಕ, ಹೆರವಟ್ಟ (೫) ಶಂಕರ [illegible] ವಕೀಲ, ಹೊನ್ನಾವರ, (೬) ಜಿ ವ್ಹಿ ನಾಡಿಗ ವಕೀಲ, ಶಿರ್ಸಿ (೭) ಶೇಷಗಿರಿರಾವ ಕೇಶವೈನ, ಶಿರ್ಸಿ (೮) ಗೋಪಾಲ ರಾವ [illegible] ಸಿದ್ದಾಪುರ, (೯) ರಾಮಚಂದ್ರ ಹೆಗಡೆ ಸೂಲವಳ್ಳಿ (೧೦) ಅನಂತ ಭಟ್ಟ ಯಲ್ಲಾಪುರ (೧೧) [illegible] ಹೆಗಡೆ, ಯಲ್ಲಾಪುರ (೧೨) ಶಾಂತಾರಾಮ [illegible] ನಕರ, ಹಳಿಯಾಳ (೧೩) ಲಕ್ಷ್ಮಣ ಫರನೀಸ ವಕೀಲ, ಹಳಿಯಾಳ (೧೪) ಗಣಪತಿ ಕಾಮತ, ಅಂಕೋಲಾ, [illegible] ಈ ಮಂದಿ ಸ್ಥಾನಿಕ ಪ್ರತಿನಿಧಿಗಳೂ ಕೂಡ ಸದಸ್ಯರಿದ್ದಾರೆ.

ಈ ಹೊಸ ಸಲಹೆಗಾರ ಮಂಡಳದ ಮೊದಲನೇ ಸಭೆ ಕಳೆದ [illegible] ಜಿಲ್ಲಾಧಿಪರ ಕಚೇರಿಯಲ್ಲಿ ನೆರೆಯಿತು. ಮೊಟ್ಟಮೊದಲು ಮಂಡಳದ ಅಧ್ಯಕ್ಷ ಜಿಲ್ಲಾಧಿಪರು ಸಭಿಕರನ್ನು ಸ್ವಾಗತಿಸಿ, ತಮಗೆ ಸಲಹೆ ಕೊಡುವದಿಷ್ಟೇ ಮಂಡಲದ ಕರ್ತವ್ಯವೆಂದೂ ಆ ಸಲಹೆಯನ್ನು ತಾವು ಮನ್ನಿಸಿದಲ್ಲಿ ಅದರಂತೆ ಮುಂದಿನ ಏರ್ಪಾಟು ಆಗುತ್ತದೆಂದೂ ಮಂಡಳದ ಸಲಹೆ ತಮಗೆ ಮಾನ್ಯವಾಗದಿದ್ದಲ್ಲಿ ತಾವು ಸರಕಾರಕ್ಕೆ ಬರೆದು ಅದರ ಹುಕುಮಿನಂತೆ ವರ್ತಿಸುವವರೆಂದೂ ಪ್ರಸ್ತಾವನೆ ಮಾಡಿ ಸಭಾಕಾರ್ಯವನ್ನು ಪ್ರಾರಂಭಿಸಿದರು. ಹಿಂದಿನ ಸಭೆಯ ವರದಿ ಓದಿಯಾದ ಬಳಿಕ ಆಹಾರದ ಅಂದಾಜ ಪತ್ರಿಕೆ ಓದಲ್ಪಟ್ಟಿತು. ಈ ಪತ್ರಿಕೆಯಂತೆ ಸರಕಾರದ ಸಂಗ್ರಹದಲ್ಲಿ ಜೂನ ೨೨ ೧೯ನೇಗೆ ೭೮೪೫೧ ಟನ್ ಆಹಾರ-ಧಾನ್ಯಗಳುಂಟು. ಅಕ್ಟೋಬರ ಕೊನೆಯ ತನಕ [illegible] ಟನ್ ಧಾನ್ಯ ಖರ್ಚಿಯಾಗಬಹುದು. ಅಕ್ಟೋಬರ ತಿಂಗಳ ಕೊನೆಯ ವರೆಗೆ ೭೪೫೭೫ ಟನ್ ಧಾನ್ಯ ಜಿಲ್ಲೆಯಲ್ಲಿ ಹಂಚಲಿಕ್ಕೆ ಬೇಕು. ಅಂದರೆ ನವಂಬರ ತಾ ೧ಕ್ಕೆ ೬೨೯ ಟನ್ ಧಾನ್ಯ ಶಿಲ್ಕು ಉಳಿಯಬಹುದು. ಗೋಧಿಯ ಶಿಲ್ಕು ಇದೀಗ ೧೬೭ ಟನ್ ಮತ್ತು ರಾಗಿಯ ಶಿಲ್ಕು ೧೨೫ ಟನ್ ಉಂಟು. ಜುಲೈ ತಾ ೧೫ರೊಳಗೆ ಇವು ಮುಗಿಯುವವು, ಮತ್ತು ಮುಂದೆ ಸಪ್ಟಂಬರ ತನಕ ಅವು ಸಿಗುವ ಸಂಭವವಿಲ್ಲವಾಗಿ ಅಂದಾಜ ಪತ್ರಿಕೆಯಲ್ಲಿ ಕಾಣಿಸಿತು. ಈ ಬಗ್ಗೆ ಚರ್ಚೆ ನಡೆದಾಗ ೧೦೦೦ ಟನ್ ಗೋಧಿ ದೊರಕುವ ಬಗ್ಗೆ ಪ್ರಯತ್ನ ನಡೆದಿರುತ್ತದೆಂದೂ ಸಪ್ಟಂಬರ-ಅಕ್ಟೋಬರ ಸುಮಾರಿಗೆ ಅದು ಸಿಗುವದಾಗಿಯೂ ಜಿಲ್ಲಾಧಿಪರು ಹೇಳಿದರು. ಸೀಧಾ-ಅಂಗಡಿಗಳನ್ನು ವ್ಯಕ್ತಿಗಳಿಗೆ ಕೊಡದೆ ಸಂಘಗಳಿಗೆ ಕೊಡಬೇಕಾಗಿ ಒಂದು ಸೂಚನೆ ಬಂತು. ಸಂಘಗಳಲ್ಲಿ ವ್ಯಾಪಾರಿಗಳ ಕೌಶಲ್ಯವಿಲ್ಲ, ವ್ಯಾಪಾರ ಕಸಬಿನ ಜ್ಞಾನವಿಲ್ಲ, ಆದ್ದರಿಂದ ವ್ಯಾಪಾರಿ ವ್ಯಕ್ತಿಗಳ ಶೀಲ ನೋಡಿ ಜಿಲ್ಲಾಧಿಪರು ಕೆಲ ಪ್ರಾಂತದ ವ್ಯಕ್ತಿಗಳಿಗೆ ಸೀಧಾ ಅಂಗಡಿಗಳನ್ನು ಕೊಟ್ಟಿದ್ದಾರೆಂದು ಖುಲಾಸೆ ಮಾಡಿ ಆ ವಿಷಯವನ್ನು ಮುಗಿಸಿದರು. ಆ ಮೇಲೆ ಶ್ರೀ ಶೇಷಗಿರಿರಾವ ಕೇಶವೈನರು ಮಂಡಳದ ಉಪಾಧ್ಯಕ್ಷರಾಗಿಯೂ, ಶ್ರೀ ನರಸಿಂಹ ರಂಗಭಾಗವತ ಸ್ಥಾನಿಕ ಆಹಾರ ಮಂಡಳದ ಸಭಾಸದರಾಗಿಯೂ, ಶ್ರೀ ದತ್ತ ನಾಯ್ಕ, ಗಣಪತಿ ಕಾಮತ, ವಿಶ್ವೇಶ್ವರ ಹೆಗಡೆ, ಮಹಾಬಲೇಶ್ವರ ಜೋಶಿ, ನಾಡಿಗ, ಯಲ್ಲಾಪುರಕರ ಮತ್ತು [illegible] ಇವರು ಕಾರ್ಯಕಾರಿ ಮಂಡಳದ ಸದಸ್ಯರಾಗಿ ಆರಿಸಲ್ಪಟ್ಟರು.

ಆ ಮೇಲೆ ಜಿಲ್ಲಾಧಿಪರ ಅನುಜ್ಞೆಯಿಂದ ಸಾಮಾನ್ಯ ಚರ್ಚೆ ನಡೆಯಿತು. ಸರಕಾರದ ಅಕ್ಕಿ ಭತ್ತಗಳ ಖರೀದಿ ದರಕ್ಕೂ ಮಾರಾಟದ ದರಕ್ಕೂ ಬಹಳ ಅಂತರವಿರುತ್ತದೆಂದೂ ಅಕ್ಕಿಯ ದರ ಇಳಿಸಬೇಕಾಗಿಯೂ ಒಬ್ಬರು ಸೂಚಿಸಿದರು. ೧ ವರ್ಷದಿಂದ ದರದ ವಿಷಯದ ಅಭ್ಯಾಸ ತಾವು ಮಾಡುತ್ತಿದ್ದೇವೆಂದೂ ಅಂಕಿ ಸಂಖ್ಯೆಗಳನ್ನು ಸರಕಾರಕ್ಕೆ ಸೂಚಿಸ್ತೇವೆಂದೂ ದರ ಇಳಿಸಲಿಕ್ಕೆ ಸದ್ಯಕ್ಕೆ ಸಾಧ್ಯವಿಲ್ಲೆಂದೂ ಜಿಲ್ಲಾಧಿಪರು ಉತ್ತರಿಸಿದರು. ಈ ವ್ಯವಹಾರದಲ್ಲಿ ಸರಕಾರಕ್ಕೆ ಲಕ್ಷಾವಧಿ ರೂಪಾಯಿಗಳ ನಷ್ಟವಾಗಿದೆ ಎಂದೂ ಅವರು ತಿಳಿಸಿದರು. ನಷ್ಟದ ಕಾರಣ [illegible] ಹಳಿಯಾಳದಿಂದ ಕಾರವಾರಕ್ಕೆ ಅಕ್ಕಿ [illegible] ಖರ್ಚು ಬೀಳುತ್ತದೆ, ಆದ್ದರಿಂದ ದರ ಇಳಿಸಲಿಕ್ಕೆ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲೆಂದೂ ಜಿಲ್ಲಾಧಿಪರು ಒತ್ತಾಯಪೂರ್ವಕ ಹೇಳಿದರು. ಆದರೂ ಸಭಿಕರು ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ಪುನಃ ಪರೀಕ್ಷಿಸಿ ಸಾಧ್ಯವಾದರೆ ದರದ ಪುನರ್ವಿಮರ್ಶೆ ಮಾಡಲಾಗಿ ಕೊನೆಗೆ ಒಂದು ಪ್ರಸ್ತಾವನೆಯನ್ನಿತ್ತರು. ಸರಕಾರವು ಅಗ್ಗ ಮತ್ತು ಹಂಗಿನ ಅಕ್ಕಿಗಳನ್ನು ಭಿನ್ನ ಭಿನ್ನವೆಂದೆಣಿಸಿ ಖರೀದಿ

(ನೇ ಪುಟದ ಮೇಲೆ ಮುಂದುವರಿಸಿದೆ)

ದಿ ಕೊಮರ್ಶಿಯಲ್ ಕಾರ್ಪೊರೇಶನ್,
ಕುಮಟಾ.
ನಮ್ಮಲ್ಲಿ ಎಸೆಲ್ ಮಶಿನ್ ಕಂಪನಿಯ
ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ
ವಿ ಎಮ್. ಮಿಜಾರಕರ,
ಮೋಟರ ಸ್ಟೆಂಡ, **ಕುಮಟಾ**

ಆಜ್ಞೆ.

ನಂಬರ ೬೦
ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ. ೨೮-೬-೧೯೪೬

ಭಾರತ ಸಂರಕ್ಷಣ ಕಾನೂನಿನ ೮೧ನೆಯ ನಿಯಮದ ೨ನೆಯ ಉಪನಿಯಮವು ಹಾಗೂ ಗೃಹ-ಖಾತೆ (ರಾಜಕೀಯ ಯುದ್ಧ) ಇಲಾಖೆಯವರು ತಾ ೧೫-೧೦-೧೯೪೪ನೇಗೆ ಹೊರಡಿಸಿದ ಎಸ್ ಡಿ II-೧೭೩೦ನೇ ನಂಬರದ ಸರಕಾರಿ ಪ್ರಕಟನೆ ಇವುಗಳನ್ವಯ ದೊರೆತ ಎಲ್ಲ ಅಧಿಕಾರಗಳನ್ನೂ, ಹೀಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ, ಮತ್ತು ಸಕ್ಕರೆಯ ಠೋಕ ಹಾಗೂ ಕಿರಕೋಳ ಧಾರಣೆಗಳನ್ನು ನಿರ್ದಿಷ್ಟಗೊಳಿಸಿದ ಹಿಂದಿನ ಎಲ್ಲ ಆಜ್ಞೆಗಳನ್ನು ರದ್ದುಗೊಳಿಸಿ, ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದಲ್ಲಿ ಕಾಣಿಸಿದ ಸ್ಥಳಗಳಲ್ಲಿ, ಅವುಗಳೆದುರಿಗೆ ತೋರಿಸಿದ ಬೆಲೆಗಿಂತ ಹೆಚ್ಚಿಗೆ ಬೆಲೆಗೆ ಯಾರೂ ಸಕ್ಕರೆಯನ್ನು ಮಾರತಕ್ಕದ್ದಲ್ಲವಾಗಿ ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ, ಇವರು ಈ ಮೂಲಕ ವಿಧಿಸುತ್ತಾರೆ.

ಯಾರಾದರೂ ಈ ಆಜ್ಞೆಯ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅವನಿಗಾಗಬಹುದಾದ ಬೇರೆ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ, ಅವನ ಅಪರಾಧದ ತನಿಖೆ ಮಾಡುವ ನ್ಯಾಯಾಧೀಶನು, ಯಾವ ಸಕ್ಕರೆಯ ಸಂಗ್ರಹದ ಸಂಬಂಧದಲ್ಲಿ ಸದರಿ ಅಪರಾಧವಾಗಿರುತ್ತದೆಂದು ಮನವರಿಕೆಯಾಗುತ್ತದೋ ಆ ಸಕ್ಕರೆಯ ಸಂಗ್ರಹವನ್ನು, ಅದರ ಆವರಣ ಪಾತ್ರಗಳ ಸಹಿತ, ಸರಕಾರ ಜಮಾ ಮಾಡಲು ವಿಧಿಸಬಹುದು.

ಟಿಪ್ಪಣಿಗಳು— (೧) ೨೮ ರತ್ತಲಿನ ೧ ಮಣ ಯಾ ಹೆಚ್ಚಿಗೆ ಸಕ್ಕರೆಯ ಮಾರಾಟ ಠೋಕ ಮಾರಾಟವೆಂದು ಗಣಿಸಲ್ಪಡತಕ್ಕದ್ದು (೨) ಯಾವನೊಬ್ಬ ವ್ಯಾಪಾರಿಯು ಯಾರೊಬ್ಬರಿಗೆ ಸಕ್ಕರೆ ಮಾರಿದಾಗ ಕೆಳಗೆ ಕಾಣಿಸಿದ ದರಗಳಿಂದ ಅದಾ ಬೆಲೆಯು ಲೆಕ್ಕ ಮಾಡಿ, ಹೀಗೆ ಲೆಕ್ಕಾಚಾರದಿಂದ ಬರುವ ಬೆಲೆಯಲ್ಲಿ ೧/ ಯಾ ಹೆಚ್ಚಿಗೆ ಪೈಗಳು ಬರುತ್ತಿದ್ದರೆ ಅವನ್ನು ಪೂರ್ಣ ಪೈ ಎಂದು ಹಿಡಿದು ಮತ್ತು ೧/ ಪೈಗಳಿಗಿಂತ ಕಡಿಮೆಯಿರುವ ಪೈಗಳನ್ನು ಬಿಟ್ಟುಕೊಟ್ಟು ಬೆಲೆಯನ್ನು ರೂಪಾಯಿ, ಆಣೆ, ಪೈಗಳಿಗೆ ಪರಿವರ್ತಿಸತಕ್ಕದ್ದು

ಭಾರತ ರಕ್ಷಣ ನಿಯಮಾವಲಿಯ ೧೧೯ನೆಯ ಕಲಮಿನ ೧ನೆಯ ಒಳ ಕಲಮಿನನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಗೊಳಿಸಬೇಕು

(೧) ಆಜ್ಞೆಯ ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗೆಝೆಟಿನ (೧ನೇ ಭಾಗ) ಮುಂದಿನ ಸಂಚಿಕೆಯಲ್ಲಿ ಪ್ರಕಟಿಗೊಳಿಸಬೇಕು

(೨) ಒಂದು ಪ್ರತಿಯ ಕನ್ನಡ ಅನುವಾದವನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟಿಸಬೇಕು —
(ಅ) "ಕಾನಡಾವೃತ್ತ" ಕುಮಟಾ (ಬ) "ವಿಚಾರ" ಕಾರವಾರ

(೩) ಆಜ್ಞೆಯ ಇಂಗ್ಲಿಷ ಪ್ರತಿಗಳನ್ನೂ ಅದರ ಕನ್ನಡ ಅನುವಾದಗಳನ್ನೂ ಜಿಲ್ಲೆಯೊಳಗಿನ ಎಲ್ಲ ತಾಲೂಕ ಹಾಗೂ ಮಹಾಲ ಕಚೇರಿಗಳಲ್ಲೂ, ಪೋಲೀಸ-ಕಚೇರಿಗಳಲ್ಲೂ, ಕಲೆಕ್ಟರ [illegible] (ಪೂರೈಕೆ ಖಾತೆ) ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಹಚ್ಚಬೇಕು

(೪) ಆಜ್ಞೆಯ ಕನ್ನಡ ಅನುವಾದಗಳನ್ನು ಜಿಲ್ಲೆಯಲ್ಲಿರುವ ಎಲ್ಲ ಠೋಕ ಹಾಗೂ ಕಿರಕೋಳ ಸಕ್ಕರೆ ಮಾರಾಟ ಮಾಡುವ ವರ್ತಕರಿಗೆ ಪೂರೈಸಬೇಕು

ಪರಿಶಿಷ್ಟ.

ಸ್ಥಳದ ಹೆಸರು (೧)		೨। ಬಂಗಾಲಿ ಮಣ ತೂಕದ ಸಕ್ಕರೆಯ ಚೀಲದ ಠೋಕ ಧಾರಣೆ (೨)	೧ನೆಯ ಸ್ತಂಭದಲ್ಲಿ ಕಾಣಿಸಿದ ಸ್ಥಳಗಳಲ್ಲೂ ಆ ಸ್ಥಳದಿಂದ ೫ ಮೈಲು ಯಾ ಕಡಿಮೆ ಅಂತರದಲ್ಲಿರುವ ಗ್ರಾಮಗಳಲ್ಲೂ ಮಾರಬೇಕಾದ ಕಿರಕೋಳ ದರ— ಪ್ರತಿ ೨ ರತ್ತಲಿಗೆ (೩)	೧ನೇ ಸ್ತಂಭದಲ್ಲಿ ಕಾಣಿಸಿದ ಸ್ಥಳದಿಂದ ೫ ಮೈಲಿಗಿಂತ ಹೆಚ್ಚಿಗೆ ಅಂತರದಲ್ಲಿರುವ ಗ್ರಾಮಗಳಲ್ಲಿ ಮಾರಬೇಕಾದ ಕಿರಕೋಳ ದರ— ಪ್ರತಿ ೨ ರತ್ತಲಿಗೆ (೪)
ಕಾರವಾರ	ರೂ	೫[illegible]—೦—೩	೦—೮—೩	೦—೮—೪
ಅಂಕೋಲಾ	"	೫೫—೩—೦	೦—೮—೦	೦—೮—೪
ಕುಮಟಾ	"	೫೫—[illegible]—೦	೦—೮—೨	೦—೮—೪
ಹೊನ್ನಾವರ	"	೫೪—೧೨—೦	೦—೮—೩	೦—೮—೪
ತದಡಿ	"	೫೪—೨—೦	೦—೮—೦	೦—೮—೭
ಭಟಕಳ	"	೬೦—೩—೦	೦—೮—೯	೦—೯—೦
ಸಿದ್ದಾಪುರ	"	೫೮—೨—೦	೦—೮—೬	೦—೮—೯
ಶಿರ್ಸಿ	"	೫೪—೯—೦	೦—೮—೦	೦—೮—೪
ಯಲ್ಲಾಪುರ	"	೫೨—೦—೦	೦—೭—೯	೦—೮—೦
ಮುಂಡಗೋಡ	"	೫೩—೦—೦	೦—೭—೯	೦—೮—೦
ಹಳಿಯಾಳ	"	೫೧—೧೧—೦	೦—೭—೬	೦—೭—೯
ಸುಪಾ	"	೫೫—೯—೦	೦—೮—೪	೦—೮—೬

V. NANJAPPA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

THE BANK OF RURAL INDIA, LTD.,
(INCORPORATED IN BRITISH INDIA)
Head Office: **"SATYABHAMA BHUVANAM" KARWAR.** N K
THE BOARD OF DIRECTORS OF THE BANK HAVE
PLEASURE TO ANNOUNCE THE OPENING OF
SUB BRANCHES AT THE FOLLOWING PLACES
AT AN EARLY DATE
BHATKAL (N. Kanara)
ANKOLA (N. Kanara)
SIDDAPUR (N. Kanara)
Karwar
27-6 1946
P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸ'ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರ ವರ್ಷಕ್ಕೆ ೩-೧-೦
„ „ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೨-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೧ ಆಣೆ ಹೆಚ್ಚಿಗೆ
ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270 Monday, 15th July, 1946

ಕಾನಡಾವೃತ್ತ

ವರ್ಷ ೨೯.] THE KANARA NEWS. [ಸಂಚಿಕೆ ೩

ಕುಮಟಾ:- ಸೋಮವಾರ, ತಾ. ೧೫ ಮಾಹೆ ಜುಲೈ ೧೯೪೬ನೇ ಇಸವಿ.

ಜಾಹೀರಾತುಗಳ ದರ.-
[illegible] ಇಂಚು ಉದ್ದ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಸ್ಥಾನಿಕ ವೃತ್ತಾಂತ

(೪ನೇ ಪುಟದಿಂದ ಮುಂದರಿಸಿದ್ದು)

ಗಾಡಿಯಲ್ಲಿ ಹಾಕಿ ಸಿದ್ದಾಪುರಕ್ಕೆ ಕಳಿಸಿದರು ಸಿದ್ದಾಪುರ ತಾಲೂಕ ಕಚೇರಿಯ ಹತ್ತರವೇ ಪೋಲೀಸರು ಆ ಧಕ್ಕೆ ಹಿಡಿದು ಕಚೇರಿಗೆ ಒಯ್ದರು ಮರುದಿನ ರಾ| ಹೆಗಡೆಯವರು ಅಲ್ಲಿ ಒಂದು ವಿನಾಯಿತೆಂದು ಪೋಲೀಸ ಠಾಣಾಯಲ್ಲಿ ಚೌಕಶಿ ಮಾಡಿದರು ಪೋಲೀಸರು ಆ ತಮಗೆ ಕೊಟ್ಟ ಮಾತುಗಳನ್ನಾಡಿ, ದಸ್ತಗಿರಿ ಮಾಡಿ, ಕೊನೆಗೆ ಜಾಮೀನ ಮೇಲೆ ಬಿಟ್ಟರೆಂದು ರಾ| ಹೆಗಡೆಯವರು ಹೇಳುತ್ತಾರೆ. ಮುಂದೆ ಅವರ ಮೇಲಿನ ಖಟ್ಲೆ ತಾ ೧೧-೬-೪೬ಕ್ಕೆ ಅಲ್ಲಿಯ ಅವ್ವಲ ಕಾರಕೂನರ ಮುಂದ ವಿಚಾರಕ್ಕೆ ಬಂತು ಅದರಂತೆ ೧೩ ಮೈಲು ನಡೆದು ಅವರು ಸಿದ್ದಾಪುರಕ್ಕೆ ಬಂದರು ಆದರೆ ಆ ದಿನ ಫಿರ್ಯಾದಿ ಪೋಲೀಸನೇ ಹಾಜರಾಗಲಿಲ್ಲ! ಅದರಿಂದ ಖಟ್ಲೆ ತಾ ೨೬ಕ್ಕೆ ಬಿತ್ತು ಫಿರ್ಯಾದಿಯು ತನಗೆ ವೃಥಾ ಖರ್ಚಿಗೆ ಹಾಕಿದನೆಂದು ರಾ| ಹೆಗಡೆಯವರು ದೂರುತ್ತಾರೆ ತಾ ೨೬ಕ್ಕೆ ಪುನಃ ಖಟ್ಲೆ ವಿಚಾರಕ್ಕೆ ಬಂದಾಗ ಅವ್ವಲ ಕಾರಕೂನರು (ಮೆಜಿಸ್ಟ್ರೇಟರು) ತಮ್ಮ ಸಂಪೂರ್ಣ ಹಕೀಕತ್ತು ಕೇಳಿಕೊಳ್ಳದೆ ತಮಗೆ ರೂ ೧೦ ದಂಡ ವಿಧಿಸಿದರೆಂದು ರಾ| ಹೆಗಡೆಯವರು ದೂರುತ್ತಾರೆ ತಮ್ಮ ಕೃತ್ಯದ ಗತಿಯೇನೆಂದು ಅವರು ಕೇಳಲಾಗಿ, ಹಿಂದಿನಿಂದ ತಿಳಿಸಲಾದೀತೆಂದು ಮೆಜಿಸ್ಟ್ರೇಟರು ಹೇಳಿದರಂತೆ ಕಾಯದೆಯನ್ನರಿಯದ ಒಡ್ಡ ರೈತನಿಗೆ ಅಧಿಕಾರಿಗಳು ಹೀಗೆ ದಣಿಸಬಹುದೇ ಎಂದು ರಾ| ಹೆಗಡೆಯವರು ವ್ಯಗ್ರಗೊಂಡು ಪ್ರಶ್ನೆ ಮಾಡುತ್ತಾರೆ [ರಾ| ಹೆಗಡೆಯವರು ಹೇಳಿದ ಕಥೆ ಸುಳ್ಳಿರಲಾರದು ಅವರು ಪರವಾನೆ ಪಡಕೊಂಡದ್ದನ್ನೂ, ಆ ಪರವಾನೆಯ ಆಧಾರದಿಂದ — ಅದರ ಅವಧಿ ಮೀರಿದ್ದಿರಬಹುದು — ಧಕ್ಕೆವನ್ನು ಸರಕಾರಕ್ಕೇ ಕೊಡಲು ಒಯ್ಯುತ್ತಿದ್ದದ್ದನ್ನೂ ಅನುಲಕ್ಷಿಸಿ ಪೋಲೀಸರೇ ಮೊದಲು ಖಟ್ಲೆ ಮಾಡಬಾರದಾಗಿತ್ತು ಪೋಲೀಸರು ವಿಚಾರಹೀನರಾಗಿ ಖಟ್ಲೆ ಮಾಡಿ ಕೊಟ್ಟರೂ, ಮೆಜಿಸ್ಟ್ರೇಟರು ಅದೊಂದು ತಾಂತ್ರಿಕ (technical) ಅಪರಾಧನೆಂದೆನಿಸಿ ಮತ್ತು ಇಂ. ಪಿ. ಕೋಡಿನ ಕಲಮು ೯೫ರೊಳಗಿನ ತತ್ವ ನೆನೆದು ಖಟ್ಲೆಯ ನಿರ್ಣಯ ಮಾಡಬೇಕಿತ್ತು. ರಾ| ಹೆಗಡೆಯವರಿಗಾದ ಶಿಕ್ಷೆ ನ್ಯಾಯದ ಎಲ್ಲೆ ಮೀರಿದೆಯೆಂಬುದು ನಿರ್ವಿವಾದ. ಜಿಲ್ಹಾಧಿಪರು ಇತ್ತ ಗಮನ ಕೊಟ್ಟು ರಾ| ಹೆಗಡೆಯವರಿಗೆ ನ್ಯಾಯ ಕೊಡಿಸಬೇಕಾಗಿ ಸೂಚನೆಯಿದೆ —ಸಂ]

ಕಾರವಾರ— (ತಾ ೧೩-೭-೪೬) ಇಲ್ಲಿಯ ಮ್ಯು||ಯ ಭಂಗಿಗಳೂ ಕಸಗುಡಿಸುವವರೂ ತಮಗ ಸರಕಾರಿ ಪ್ರಮಾಣದಿಂದಲೇ ತುಟ್ಟಿ ಬತ್ತೆ ಕೊಡಬೇಕೆಂದೂ ಇಲ್ಲದಿದ್ದರೆ ತಾವು ಕೆಲಸ ನಿಲ್ಲಿಸುವೆವಾಗಿಯೂ ಮ್ಯು||ಗೆ ಮೊದಲೇ ತಿಳಿಸಿಟ್ಟು ಮತ್ತು ತಮ್ಮ ಬೇಡಿಕೆ ಮನ್ನಿಸಲ್ಪಡದಿದ್ದದ್ದರಿಂದ ತಾ ೯-೭-೪೬ ರಿಂದ ಸಂಪು ಹೂಡಿದ್ದರು ಆದರೆ ಮ್ಯು||ಯ ಹಿಂದಿನ ಅಧ್ಯಕ್ಷ ರಾ|ಬ|| ಶೇಣಿಂಗರು ಮಧ್ಯಸ್ಥಿಕೆ ಮಾಡಿದ್ದರಿಂದ ಮರುದಿನ ಸಂಪು ತಾ ೧೦ರ ವರೆಗೆ ತಹಕೂಬ ಮಾಡಲ್ಪಟ್ಟಿತು ಭಂಗಿ ಜನರ ಬೇಡಿಕೆಯ ವಿಚಾರ ಮಾಡಲು ಅಷ್ಟರೊಳಗೆ ಮ್ಯು||ಯ ಸಭೆ ಸೇರಲಿದೆ ಶಿಕ್ಷಕರಿಗೂ, ಟಪಾಲ-ಪೇದೆಗಳಿಗೂ ಸಂಪು ಹೂಡಲು ಉತ್ತೇಜನ ಕೊಡುವಂತಹ ಮತ್ತು ಬಡ ನೌಕರರಿಗ ಯೋಗ್ಯ ಸಂಬಳ ಸೌಕರ್ಯಗಳು ಸಿಗಬೇಕೆಂದು ಹಗಲಿರುಳು ಹಾಡುವ ಗೃಹಸ್ಥರು ಮ್ಯು||ಯ ಅಧ್ಯಕ್ಷರಿರುವಾಗ ಇಲ್ಲಿಯ ಭಂಗಿಗಳೂ ಡ್ರೇನವಾಲಿಗಳೂ ಸಂಪು ಹೂಡಬೇಕಾದ ಪ್ರಸಂಗ ಬಂದದ್ದು ತೀರ ವಿಸ್ಮಯಕಾರಕವಿರುತ್ತದೆ ಭಂಗಿಗಳು ಪೂರ್ವ ಸೂಚನೆ ಕೊಟ್ಟಿದ್ದಿಲ್ಲೆಂದೂ, ಅವರ ಸಂಪು ಕಾನೂನ ವಿರುದ್ಧವಿದ್ದದೆಂದೂ ಅವರು ಪ್ರಚಾರ ನಡಿಸಿದ್ದಂತೂ ಅತ್ಯಂತ ಆಶ್ಚರ್ಯಕರ!

ಇಲ್ಲೂ ಟಪಾಲ ಪೇದೆಗಳ ಸಂಪು ಪ್ರಾರಂಭವಾಗಿದೆ

ನಮ್ಮಾ ಜಿಲ್ಹೆಯ ಹಳ್ಳಿಗಳಲ್ಲಿ [illegible] ಸೇದುವ ಶೇಂದಿನ ಗಿಡಗಳನ್ನು ಕಡಿಯಬೇಕೆಂದು ಮುಂಬಯಿ ಸರಕಾರದವರು ನಿರ್ಣಯಿಸಿದ್ದಾರೆ ಈ ಬಗ್ಗೆ ಕಲೆಕ್ಟರರೂ ಮಂಜೂರಾಗಿದೆ

ಉಳವರೆ, ಮಿರ್ಜಾನ, ದೀವಗಿ, ಶರಾವತಿ ಮತ್ತು ವೆಂಕಟಾಪುರ ಹೊಳೆಗಳಲ್ಲಿ ಹೊಸದ [illegible]ಗಳನ್ನು ಇಡುವ ಆಲೋಚನೆಯಿಂದ, ಇಂಜನೀರ ಇಲಾಖೆಯಿಂದ ಆ ಬಗ್ಗೆ ಮುಕ್ತದ್ವಾರದಿಂದ ಸವಾಲು ಬೇಡಿದ್ದರಷ್ಟೇ ಕಳೆದ ವಾರ ಈ ಸವಾಲುಗಳಾಗಲಿದ್ದವು ಆದರೆ ವೆಂಕಟಾಪುರ ಹೊಳೆಯ ವಿನಹ ಬೇರೆ ಯಾವ ಹೊಳೆಗೂ ಸವಾಲು ಬರಲಿಲ್ಲ ವೆಂಕಟಾಪುರ ಹೊಳೆಗೆ ರೂ ೧೧೨೦ದ ಸವಾಲು ಬಂತು ಅದು ಮಂಜೂರ ಆಗಬಹುದಂತೆ ವೆಂಕಟಾಪುರ ಹೊಳೆಯನ್ನು [illegible] ತಾರ ಮಾಡುವದಾಗಿಯೂ ತಿಳಿಯುತ್ತದೆ ಹೀಗೆ ಏನೇ ತರಗತಿಯ ತಾರಿಯಾದ ಮೇಲೆ ಆ ತಾರಿ ದಾಟುವ ಜನ-ಜಾನುವಾರಗಳೂ ಸರಕೂ ಈಗಿರುವ ಹಾಸಲಿನ ಇಮ್ಮಡಿ ತಾರಿ ಹಾಸಲು ಕೊಡಬೇಕಾಗುವದು! ಮೋಟರಿಂದ ತಾರಿ ದಾಟುವ ಪ್ರಯಾಣಿಕರು ಈಗ ೧ ಬಿಲ್ಲಿ ಕೊಡುತ್ತಾರೆ ಲಾಂಚ ಬಂದ ಮೇಲೆ ಅವರು ೩ ಬಿಲ್ಲಿ ಕೊಡಬೇಕಾಗುವದು! ಈ ಲಾಂಚ ಪ್ರಯಾಣಿಕರಿಗಷ್ಟೇ ಉಪಯೋಗದ್ದು ಜಾನುವರಗಳಿಗೂ, ಸರಕುಗಳಿಗೂ, ವಾಹನಗಳಿಗೂ ಅದು ಉಪಯೋಗಕ್ಕೆ ಬೀಳುವಂತಿಲ್ಲ! ವೆಂಕಟಾಪುರ ಹಾದಿ ಅಂದರೆ ಕರಾವಳಿಯ ಮಂಗಳೂರಿನ ಎಲ್ಲ ತಾರಿಗಳಲ್ಲಿ ತೀರ ಕಿರಿದಾದ ತಾರಿ, ಅನೇಕ ರೀತಿಯಲ್ಲಿ ನೀಗಿಸಬಹುದಾದ ತಾರಿ ಅದಕ್ಕೆ ಲಾಂಚಿನ ಅವಶ್ಯಕತೆ ಅಷ್ಟೇನಿಲ್ಲ ಹಾಗಿದ್ದರೂ ಅಲ್ಲಿ ಒಂದು ಲಾಂಚ ಇಟ್ಟು ಸರಕಾರವು ವರ್ಷಕ್ಕೆ ೨೦೦೦ ರೂ ಗಳನ್ನು ದಾನ ಮಾಡಿಕೊಳ್ಳುವದೂ, ಜನರ ತಲೆಯ ಮೇಲೆ ಪುನಃ ಇಮ್ಮಡಿ, ಮುಮ್ಮಡಿ ಸುಂಕ ಹೇರುವದೂ ಎಲ್ಲಿಯ ಜಾಣತನವೋ ದೇವರೇ ಬಲ್ಲ!

ಅಂಕೋಲಾ— (ತಾ ೧೪-೭-೧೯೪೬) ಅವರ್ಸೆಯ ರಾ| ರಾಮಚಂದ್ರ ಅಣ್ಣಪ್ಪ ನಾಯಕ ಎಂಬವರ [illegible]ಯು ಕಳೆದ ಜುಲಾಯಿ ತಿಂಗಳಲ್ಲಿ ಮುಂಬಯಿಯಲ್ಲಿ ತೀರಿಕೊಂಡ ವರ್ತಮಾನ ಬರುತ್ತಲೇ ರಾತ್ರಿಯ ಕಾಲದಲ್ಲಿ ಅವಳ ಮನೆಯ ಕದ ಮುರಿದು ಒಳಗಿದ್ದ ಸಾಮಾನು ಕದ್ದೊಯ್ದರೆಂಬ ಆರೋಪ ಹೊರಿಸಿ, ಸದರಿ ನಾಯಕರು ರಾ| ಮಾಸ್ತರ ನಾಯಕ ಎಂಬವರ ವಿರುದ್ಧ ಇಲ್ಲಿಯ ಪೋಲೀಸರ ಕಡೆ ಒಂದು ಫಿರ್ಯಾದು ಕೊಟ್ಟಿದ್ದರು ಪೋಲೀಸರು ಆ ಪ್ರಕರಣದಲ್ಲಿ ಸರಿಯಾದ ಕ್ರಮ ನಡಿಸದ್ದರಿಂದ ರಾ| ರಾಮಚಂದ್ರ ನಾಯಕರು ಮಾಮಲೇದಾರರ ಮುಂದೆ ತಮ್ಮ ದೂರು ದಾಖಲಗೊಳಿಸಿದರು ಅವರ ಆ ಅರ್ಜಿ ಪ್ರಾಂತ ಸಾಹೇಬರ ಕಡೆಗೆ ಹೋಯಿತು, ಅದು ಈಗ ಶಿರ್ಸಿ ವಿಭಾಗದ ಸಬಡಿವಿಜನಲ್ ಮೆಜಿಸ್ಟ್ರೇಟರ ಮುಂದ ವಿಚಾರಕ್ಕೆ ಬಂತು ರಾ| ನಾಯಕರು ಕಾರವಾರಕ್ಕೂ ಗೋಕರ್ಣಕ್ಕೂ ಕೂಡಿ ೪ ೫ ಸಾರೆ ತಿರುಗಾಟ ಮಾಡಿದ ಮೇಲೆ ಅದು ಕಳೆದ ತಾ ೧೧ಕ್ಕೆ ವಿಚಾರಕ್ಕೆ ಬಂತು ರಾ| ರಾಮಚಂದ್ರ ನಾಯಕರು ತಮ್ಮ ಸಾಕ್ಷಿದಾರರಿಗೆ ಕರಕೊಂಡು ಅಂದು ಕಾರವಾರಕ್ಕೆ ಹೋಗಿದ್ದರು ರಾ| ರಾಮಚಂದ್ರ ನಾಯಕರು ತೀರ ಬಡವರಿದ್ದಾರೆ ವಕೀಲರನ್ನು ಕೊಡುವಷ್ಟು ಶಕ್ತಿ ಅವರಿಗಿಲ್ಲ ಆದರೂ ಅಂದು ಸಬಡಿವಿಜನಲ್ ಮೆಜಿಸ್ಟ್ರೇಟರು ಯಾರೊಬ್ಬ ವಕೀಲರನ್ನು ಕೊಡಹೇಳಿ ಮತ್ತು ವಕೀಲರನ್ನು ಕೊಡಲು ಅವಧಿ ಬೇಕೆಂದು ಫಿರ್ಯಾದಿ ಕಡೆಯಿಂದ ಒಂದು ಅರ್ಜಿ [illegible]ದು, ಫಿರ್ಯಾದಿಯ ವಿಚಾರವನ್ನು ನಿನ್ನೆಯ ತನಕ ಮುಂದೂಡಿದರಂತೆ ನಿನ್ನೆ ನಾಯಕರು ಮೆಜಿಸ್ಟ್ರೇಟರ ಮುಂದೆ ಹಾಜರಾಗಿ, ವಕೀಲರನ್ನು ಕೊಡುವ ಸಾಮರ್ಥ್ಯ ತಮಗಿಲ್ಲೆಂದೂ ತಮಗೆ ತಿಳಿದಂತೆ ತಾವು ತಮ್ಮ ಖಟ್ಲೆ ನಡಿಸುತ್ತೇವೆಂಬೂ ಹೇಳಿಕೊಂಡರಂತೆ ಆದರೂ ವಕೀಲರನ್ನು ಕೊಡಬೇಕಾಗಿ ಅವರಿಗೆ ನಿರ್ಬಂಧಿಸಿ ಮೆಜಿಸ್ಟ್ರೇಟರು ಖಟ್ಲೆಯ ವಿಚಾರವನ್ನು ಮುಂದಿನ ತಿಂಗಳ ತಾ ೭ಕ್ಕೆ ಮುಂದೂಡಿದ್ದಾರೆ! ವಕೀಲರನ್ನು ಕರತರುವ ಶಕ್ತಿಯಿಲ್ಲದ ಬಡವನಿಗೆ ವಕೀಲರನ್ನು ಕರೆದುಕೊಂಡು ಬಾ ಎಂದು ಮೆಜಿಸ್ಟ್ರೇಟರು ಈ ರೀತಿ ಒತ್ತಾಯ ಮಾಡಿ ಯಾಕೆ ದಣಿಸುತ್ತಾರೆ ಎಂಬುದೊಂದು ನಿಗೂಢ ಸಮಸ್ಯೆ!

ತಾ ೧೧ಕ್ಕೆ ಇಲ್ಲಿಯ ಟಪಾಲ ಪೇದೆಗಳು ಸಂಪು ಹೂಡಿದ್ದಿಲ್ಲ ಮೊನ್ನೆಯಿಂದ ಸಂಪಿನಲ್ಲಿ ಸೇರಿದ್ದಾರೆ

ಯಲ್ಲಾಪುರ— (ತಾ ೯-೭-೪೬) ಅಡಿಕೆ ಬೆಳೆಸುವ ಮತ್ತು ಅಡಿಕೆ ಶಿಲ್ಕು ಇದ್ದ ವ್ಯಕ್ತಿಯೊಬ್ಬರು ಈ ಜುಲಾಯಿ ತಿಂಗಳಿಂದ "ಸ್ಟೋರ ರೂಮಿ" (ಅಡಿಕೆ ಇಡುವ ಕೋಣೆ) ನ ವ್ಯವಸ್ಥೆ ಮಾಡಬೇಕೆಂತಲೂ, ಆ ಬಗ್ಗೆ ಬೇರೊಂದು ಲಾಯಸೆನ್ಸ ತಕ್ಕೊಳ್ಳಬೇಕೆಂತಲೂ, ಹಾಗೆ ಲಾಯಸೆನ್ಸ ಪಡಕೊಂಡ ವಿನಹ ಅಡಿಕೆಯನ್ನು "ಪೆರಮಿಟ"ಕ್ಕೆ ಒಯ್ಯಲು ಬರುವಂತಿಲ್ಲೆಂತಲೂ ಅಡಿಕೆ ತೆರಿಗೆ ಅಧಿಕಾರಿಗಳು ಒಂದು ಹೊಸ ಫರ್ಮಾನು ಹೊರಡಿಸಿದ್ದಾರೆ ದೂರ ದೂರದ ಹಳ್ಳಿಗರು ತೆರಿಗೆ-ಅಧಿಕಾರಿಗಳ ಕೇಂದ್ರ ಕಚೇರಿಗೆ ಬಂದು, ದೊಡ್ಡ ಬರಕೊಟ್ಟು, ಲಾಯಸೆನ್ಸ ಪಡೆಯಲಿಕ್ಕೆ ಎಷ್ಟು ದಿನಗಳು ಬೇಕೋ ಏನೋ! ಅಲ್ಲಿಯ ವರೆಗೆ ಅಡಿಕೆಯುಳ್ಳವರು ಅಡಿಕೆ ಮಾರಬಾರದೆಂದರೆ, ಈಗ ಅಡಿಕೆ ದರ ಹೆಚ್ಚಿಗಾದದ್ದರ ಲಾಭ ಅವರಿಗೆ ಸಿಗಲಿಕ್ಕಿಲ್ಲೆಂದರ್ಥ! ಅಧಿಕಾರಿಗಳು ತೋಟಿಗಾರರಿಗೆ ಹೀಗೆ ಹಿಂಸೆಗೀಡುಮಾಡುವದು ಯುಕ್ತವಲ್ಲ ಅವರು ಪುನರಾಲೋಚನೆ ಮಾಡಿ, ಟಿ. ಕಿ. ಎರ ಸಹಾಯದಿಂದ ಅಡಿಕೆಯನ್ನು ಪೇಟೆಗೆ ತಂದು ಮಾರಲು ರೈತರಿಗೆ ಅನುವು ಕೊಡಬೇಕಾಗಿ ಅರಿಕೆಯಿದೆ

ಹಳಿಯಾಳ— (ತಾ ೧೩-೭-೪೬) ಅವಲಕ್ಕಿ, ಚುರುಮುರಿ ಮಾಡಿ ಜೀವನ ಸಾಗಿಸುತ್ತಿದ್ದ ನೂರಾರು ಜನರಿಗೆ, ಬೇಕಾದ ಭತ್ತ ಸರಕಾರದಿಂದ ಸಿಗುವದು ನಿಂತದ್ದರಿಂದ, ಬಹಳ ಕಷ್ಟವಾಗಿದೆ ಅವಲಕ್ಕಿ-ಚುರಮುರಿ ಸಿಗದೆ ಜನರಿಗೂ ಕಷ್ಟ ಸರಕಾರದವರು ವಿಶಾಲ ವಿಚಾರ ಮಾಡಿ ಅವಲಕ್ಕಿ ಮುಂತಾದವುಗಳ ಬಗ್ಗೆ ಬೇಕಾದ ಭತ್ತ ಕೊಡಿಸಬೇಕಾಗಿ ಅರಿಕೆಯಿದೆ

The Agricultural & Industrial Bank, Ltd.
(Incorporated in British India Liability of Members limited)
Head Office 'LAXMI NIVAS' Buildings, COONDAPOOR. S. I.
BRANCHES:- ANKOLA BELGAUM, COONDAPOOR, DHARWAR
GOKARN, GADAG, HUBLI, HAVERI, KARWAR,
KUMTA, MANGALORE, NAGAR, SHIMOGA,
SOMWARPET, SIRSI, VIRAJPET &
BOMBAY OFFICE
at 384, M. Jaipuria House, KALBADEVI
A BANK FAMILIAR TO ALL, SERVING THE PEOPLE
WITH 17 BRANCHES
RECORD OF PROGRESS.

	1939 Rs	1943 Rs	1946 Rs
PAID UP CAPITAL	46,060/—	1,62,610 —	4 07,662/—
DEPOSITS	3,56,041/—	15,39 232 —	43 31,959/—
WORKING FUNDS	4,89 404	22 34,241 —	62,52,284/—

ALL KINDS OF MODERN BANKING BUSINESS TRANSACTED.
COONDAPOOR, 7th June, 1946
K. Vittaldas Shenai,
Managing Director

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆ ಬಹಳ ಕಡಿಮೆ ಇತ್ತು. ವಾರದಲ್ಲಿ ೨-೩ ಇಂಚುಗಳಿಗಿಂತ ಹೆಚ್ಚಿಗೆ ಮಳೆಯಾಗಿಲ್ಲ. ಗಾಳಿ ಬೀಸುವದು ಬೀಳುತ್ತದೆ. ರಾತ್ರಿ ಅಷ್ಟು [illegible] ಬೆಟ್ಟದ ಭಾಗದ ಅಷ್ಟು ಗದ್ದೆಗಳಲ್ಲಿ [illegible] ಅಭಾವದಲ್ಲಿ ನೆಟ್ಟಿ ಮಾಡುವದು ಕಷ್ಟವಾಗಿದೆ. ಬೇಗನೇ ಮಳೆಯಾಗದಿದ್ದರೆ ಭತ್ತದ ಸಸಿಗಳು ಹಾಳಾಗಿ ಹೋಗುವವು. ಆದರೆ ನಿನ್ನೆ ಸಂಜೆಯಿಂದ ಮಳೆ [illegible]

ತಾ ೧೬-೭-೧೯೪೬ ರಿಂದ ಅಕ್ಕಿಯ ಮಾರಾಟದ [illegible] ಸರಕಾರದವರು [illegible] ಇಲಾಖೆಯ ಕ್ಷೇತ್ರಗಳಲ್ಲಿ [illegible] ರೂ ೧-೭-೦ ಮತ್ತು ದೊಡ್ಡಕ್ಕಿಯ ದರ [illegible] ರೂ ೧ [illegible] ಇರಲ್ಪಟ್ಟಿದೆ. [illegible] ಕ್ಷೇತ್ರಗಳಲ್ಲಿ ಸಣ್ಣಕ್ಕಿಯ ದರ ರೂ ೧-೫- ಮತ್ತು [illegible] ದೊಡ್ಡಕ್ಕಿಯ ದರ ಅನುಕ್ರಮವಾಗಿ ರೂ ೧-೧-೬ ಮತ್ತು ೧-೦-೬ ಇರಲ್ಪಟ್ಟಿದೆ. [illegible] ಕ್ಷೇತ್ರದಲ್ಲಿ ಹಾಗೂ [illegible] ದಲ್ಲಿ ಸಣ್ಣಕ್ಕಿಯ ದರ ರೂ ೧-೪-೦ ಮತ್ತು ದೊಡ್ಡಕ್ಕಿಯ ದರ ರೂ ೧-೨-೦ ಉಂಟು. [illegible] ಕ್ಷೇತ್ರಗಳಲ್ಲಿ ಈ ದರಗಳು ಅನುಕ್ರಮವಾಗಿ ರೂ ೧-೩-೬ ಮತ್ತು ರೂ ೧-೦-೨ ಇರಲ್ಪಟ್ಟಿವೆ.

ಪತ್ರಿಕೆಗಳ ಸಂಬಂಧದಲ್ಲಿ ಇಲ್ಲಿಯ [illegible] ಅತ್ಯಂತ ತೋರುತ್ತಿದೆ. ಆದರೆ ತಾಲೂಕಿನ [illegible] ವಾರಾಟಕ್ಕೆ ಬರುತ್ತಿಲ್ಲವು! ಪತ್ರಿಕೆಗಳಿಲ್ಲದೆ ಹಡಹುವ ದಿನಗಳು ದೂರಾಗಿಹೋಗಿವೆ, ಹಾಲು ಹಿಂದಿನ ದಿನಗಳು ಬಂದಿವೆ, ಆದ್ರೆ ಹಿಂದಿನ ಅಲ್ಪಸ್ವಲ್ಪ [illegible] ಸಾರ ಬಹಳ ಕಡಿಮೆ! ಹಾಲಿಗೆ ಬೆಳಿಗ್ಗೆಯೇ ಬರುವ [illegible] ಜನರ ಗುಲ್ಲು! ಹಳ್ಳಿಗಳಲ್ಲಿ ನಗರದಲ್ಲಿ [illegible] ಅಗ ಹುಷ್ಟು ಕಣ್ಣಿಗೇ ಬೀಳುವದಿಲ್ಲ. ಸರಕಾರದವರ [illegible] ಹಿಂದಿಯೂ ಕೂಡ ಇನ್ನೂ ಬರುವದರಲ್ಲೇ ಉಂಟು! ಅದು ಕದಾಚಿತ್ ನೆಲಗಳ್ಳಿಯ [illegible] ತಯಾರಾದ ಮೇಲೆ ಬಂದು ತಪ್ಪಿದರೂ ತಪ್ಪಬಹುದು! ಇಲ್ಲಿಯ ಅರ್ಬನ್ ಸಹಕಾರಿ ಬ್ಯಾಂಕಿಗೆ [illegible] ಬಂದಿವೆ. [illegible] ಕಾಂಗ್ರೆಸ ಮಂತ್ರಿಮಂಡಳ ಬಂದರೂ ನಿಯಂತ್ರಣಾಧಿಕಾರಿಗಳ [illegible] ಸ್ವೈರ ಲೀಲಾ-ವಿಲಾಸಗಳಿಗೆ ಇನ್ನೂ [illegible] ತಪ್ಪಿರುವದಿಲ್ಲ, ನಿರ್ಬಂಧವೂ [illegible] ವದಿಲ್ಲ. ಆದರಿಂದ ಈ ನಿಯಂತ್ರಣವೆಂಬುದು ಜನಸಾಮಾನ್ಯರಿಗೆ ಉಪಕಾರಿಯಾಗುವದರ ಬದಲು ಅತ್ಯಂತ ಅಸಹಾಯಕ [illegible] ಸಾರ್ವಜನಿಕರು ಉದ್ವೇಗಗೊಂಡು [illegible] ನಿಯಂತ್ರಣದಿಂದ [illegible] ಕಾಂಗ್ರೆಸ ಮಂತ್ರಿಮಂಡಳವು ಇದೀ ನಿಯಂತ್ರಣ [illegible] ಪ್ರಯತ್ನ ಮಾಡಬೇಕಾಗಿ ಅವರ ಅಂಬೋಣವುಂಟು.

ಈ ವರ್ಷ ಹೊಸದಾಗಿ ಆರಿಸಲ್ಪಟ್ಟ ಜಿಲ್ಹಾ ಕಾಂಗ್ರೆಸ ಸಮಿತಿಯ ಪ್ರಥಮ ಸಭೆ [illegible] ಬರುವ ರವಿವಾರ ತಾ ೨೧-೭-೪೬ ನೇ ಮಧ್ಯಾಹ್ನ ೩ ಘಂಟೆಗೆ [illegible] ಆರಿಸಿ ಭರ್ವಾಡಿ [illegible] ಕೂಡಲಿದೆಯೆಂದೂ, ಈ ಸಭೆಯಲ್ಲಿ ಹೊಸ ಅಧಿಕಾರಿ ವರ್ಗದ ಆಯ್ಕೆ, ಕಳೆದ ವರ್ಷದ ಲೆಕ್ಕ-ಪತ್ರಗಳ ಮಂಜೂರಿ, ಹೊಸ ವರ್ಷದ ಮುಂಗಡ ಪತ್ರಿಕೆಯು ಮನ್ನಣೆ ಇತ್ಯಾದಿ ಕಾರ್ಯಗಳು ನಡೆಯುವವೆಂದೂ ಎಲ್ಲ ಸದಸ್ಯರೂ ನಿಮಂತ್ರಿತರೂ [illegible] ಬರಬೇಕೆಂದೂ ಸಮಿತಿಯ ಕಾರ್ಯದರ್ಶಿಗಳು ವಿನಂತಿಸುತ್ತಾರೆ. ಟಪಾಲ ಕಚೇರಿಗಳ ಸಂಪಿನ ಮೂಲಕ [illegible] ಸದಸ್ಯರಿಗೆ ಪ್ರತ್ಯೇಕವಾದ ನಿಮಂತ್ರಣಗಳು [illegible] ಸಂಭವವುಂಟು. ಅಂತಹ [illegible] ಪತ್ರಿಕೆಯ ಮೂಲಕ ಸಾರಿದ ಈ ನಿಮಂತ್ರಣವನ್ನು [illegible] ಕಾರ್ಯದರ್ಶಿಗಳ ಆಶೆಯುಂಟು.

ಕಳೆದ ಮಂಗಳವಾರ ರಾತ್ರಿ ಗುಡ್ಡದ ಅಡಿಗಿರುವ [illegible] ಮನೆಗೆ ಇಲ್ಲಿಯ ಪೋಲಿಸರು [illegible] ಮಾಡಬೇಕಿದ್ದವರು [illegible] ದಿಂದ ಸಂಗತಿ ಗುಪ್ತವಿಡಲ್ಪಟ್ಟಿದ್ದರಿಂದ ಇಷ್ಟು ಜನರ [illegible] ಸಿಕ್ಕಿದರು. [illegible] ಮತ್ತು [illegible] ಸಂಕೆ [illegible] ಪೋಲೀಸ ಪೇದೆಗಳಿಗೆ [illegible] ಒಬ್ಬರೂ ಸಿಗುತ್ತಿದ್ದಿಲ್ಲ! [illegible] ಪೇದೆಗಳು [illegible] ಪೋಲೀಸರಿಗೂ [illegible] ರೇಡ್ ಮಾಡಬೇಕಿದ್ದವರು ಇದನ್ನು [illegible] ಆರಿಸಿಕೊಂಡಬೇಕಾಗಿ ಸೂಚನೆ ಮಾಡಿ

[illegible] ಕೊಲಿಜ ಸಮಿತಿಗೆ ಇತ್ತೀಚಿಗೆ [illegible] ಗಿದ್ದ [illegible] ಮಾಸೂರಿನಿಂದ ರೂ ೧೦೦, [illegible] ರೂ [illegible], [illegible] ಅನಂತ ಶ್ರೀಧರ ಗೋರೆ ಇವರಿಂದ ರೂ ೧೦೦, [illegible] ಇವರಿಂದ ರೂ ೧೦೦, [illegible] (ವಾರ್ಷಿಕ ರೂ ೨೦೦ ರಲ್ಲಿ) ರೂ ೧೦೦ [illegible] ಇವರಿಂದ (ವಾರ್ಷಿಕ ರೂ ೨೦೦ ದಲ್ಲಿ) ರೂ ೧೦೦, ಮತ್ತು ಇತರರಿಂದ ರೂ ೧೩೨-೧೦-೦ ಹೀಗೆ ರೂಪಾಯಿ [illegible] ದೇಣಿಗೆ ಬಂದಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

[illegible] ಹೊನ್ನಾವರ [illegible] ಗ್ರಾಮಗಳಲ್ಲಿ (ಸಮುದ್ರತೀರದ) [illegible] ಹರಡಿ ಬಿದ್ದಿದೆಯೆಂದೂ [illegible] ಜನರೇ [illegible] ಮತ್ತು [illegible] ಕಾಯಿಲೆ [illegible] ವೈದ್ಯಾಧಿಕಾರಿಗಳು [illegible] ಜನರು [illegible] ಇವರ ಮನೆಯಲ್ಲಿ [illegible] ಅಧಿಕಾರಿಗಳು [illegible] ಮಾಡಿದಾಗ [illegible] ಸಿಕ್ಕಿದೆಯೆಂದು ತಿಳಿಯುತ್ತದೆ. [illegible] ಬಹಳ [illegible] ಮನಸ್ಸಿಗೆ [illegible] ಎಷ್ಟೋ ಮದ್ಯಪಾನಿಗಳು [illegible] ಮದ್ಯಪಾನ [illegible] (ಮಂತ್ರಿಗಳು [illegible]) [illegible] ಇವರಿಂದ [illegible] ಗ್ರಾಮ ಪಂಚಾಯತಿಗಳು ಇವನ್ನು ಅಲ್ಲೇ ಇವೆಯೆಂದು ತಿಳಿಯುತ್ತದೆ.

ಹೊನ್ನಾವರ— (ತಾ ೯-೭-೧೯೪೬) [illegible] ತಾಲೂಕಿನ [illegible] ತಾಲೂಕಿನಲ್ಲೇ [illegible] ಅದರಿಂದ ಅವರು ತಮ್ಮ ವರಿಗೆ ಬಿನ ಕೊಟ್ಟಿಯೂ [illegible]

ಆಜ್ಞೆ.

ನಂ ೩೧

ಕಾರವಾರ, ತಾ ೨೨ ಜೂನ ೧೯೪೬

ಭಾರತ ಸಂರಕ್ಷಣಾ ಕಾನೂನಿನ ೮೧ನೆಯ ನಿಯಮದ ೨ನೆಯ ಒಳನಿಯಮದಿಂದಲೂ ಗೃಹಖಾತೆ (ರಾಜಕೀಯ ಯುದ್ಧ) ಯವರು ತಾ ೧೫-೯-೧೯೪೪ಕ್ಕೆ ಹೊರಡಿಸಿದ [illegible] ೧೯೬೦ನೇ ನಂಬರದ ಸರಕಾರಿ ಪ್ರಕಟಣೆಯಂತೆಯೂ ದೊರೆತ ಅಧಿಕಾರಗಳನ್ನೂ ಹೀಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಮತ್ತು ತಾ [illegible] ೧೯೪೬ರ [illegible]ನೇ ನಂಬರಿನ ತಮ್ಮ ಆಜ್ಞೆಯನ್ನು ರದ್ದುಗೊಳಿಸಿ ಕಾನಡಾ ಜಿಲ್ಹೆಯ ಜಿಲ್ಹಾ ಮೆಜಿಸ್ಟ್ರೇಟರು ಈ ಮೂಲಕ ಆಜ್ಞೆ ಮಾಡುತ್ತಾರೇನೆಂದರೆ

ಕಾನಡಾ ಜಿಲ್ಹೆಯ ಗಡಿಗಳೊಳಗಿನ ಯಾವದೇ ಸ್ಥಳದಿಂದ ಸದರಿ ಜಿಲ್ಹೆಯ ಗಡಿಗಳ ಹೊರಗಿರುವ ಮುಂಬಯಿ ಪ್ರಾಂತದ ಯಾವದೇ ಸ್ಥಳಕ್ಕೆ ಕಾನಡಾ ಜಿಲ್ಹೆಯ ಜಿಲ್ಹಾ-ಮೆಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಮತ್ತು ಆ ಅಪ್ಪಣೆಯೊಳಗಿನ ಶರ್ತುಗಳಿಗೆ ವ್ಯತಿರಿಕ್ತವಾಗಿ ಯಾರೂ ನೆಲಮಾರ್ಗದಿಂದ, ರೇಲ್ವೆಯಿಂದ, ದೋಣಿಯ ಮಾರ್ಗವಾಗಿಯೂ ಸಮುದ್ರ ಮಾರ್ಗವಾಗಿ ಪತ್ರಿಕಾಳು ಒಯ್ಯತಕ್ಕದ್ದಲ್ಲ.

ಯಾರಾದರೂ ಈ ಆಜ್ಞೆಯ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅವನಿಗಾಗಬಹುದಾದ ಬೇರೆ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ, ಅವನ ಅಪರಾಧದ ತನಿಖೆ ಮಾಡುವ ನ್ಯಾಯಾಧೀಶರು ಯಾವ ಪತ್ರಿಕಾಳಿನ ಸಂಗ್ರಹದ ಸಂಬಂಧದಲ್ಲಿ ಆ ಅಪರಾಧವಾಗಿರುತ್ತದೆಂದು ಮನವರಿಕೆಯಾಗುತ್ತದೋ ಅಂಥ ಆ ಸಂಗ್ರಹವನ್ನು, ಅದರ ಆವರಣ ಸಾಧನಗಳ ಸಹಿತ, ಸರಕಾರಜಮಾ ಮಾಡಲು ವಿಧಿಸಬಹುದು.

ಹಿಂದುಸ್ಥಾನ ಸಂರಕ್ಷಣಾ ಕಾನೂನಿನ ೧೧೯ನೆಯ ಕಲಮಿನ ೧ನೆಯ ಒಳಕಲಮಿಗನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸಿಕೊಳ್ಳಬೇಕು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝೆಟಿನಲ್ಲಿ ಪ್ರಕಟಿಸಬೇಕು,

(ಬ) ಆಜ್ಞೆಯ ಕನ್ನಡ ಅನುವಾದದ ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿಕೊಳ್ಳಬೇಕು —
(೧) ವಿಟಾರಿ", ಕಾರವಾರ, (೨) "ಕಾನಡಾವೃತ್ತ", ಕುಮಟಾ

(ಕ) ಆಜ್ಞೆಯ ಕನ್ನಡ ಅನುವಾದದ ಪ್ರತಿಗಳನ್ನು ಜಿಲ್ಹೆಯೊಳಗಿನ ಎಲ್ಲ ಮಾಮಲೇದಾರರ ಕಚೇರಿಗಳಲ್ಲೂ ಜಿಲ್ಹಾ ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಅಂಟಿಸಬೇಕು.

V. NANJAPPA.
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ.

[illegible] ರಿಗೆ ಪ್ರತಿಕೂಲವಾಗಿಯೂ ಕೆಲಸ ಮಾಡುತ್ತಾರೆಂಬಲ್ಲ, ಓದುಗರು ಬರೆಯುತ್ತಾರೆ. ಹೀಗೆ ಸ್ಥಾನಿಕ ಜನರಿಗೆ ತಮ್ಮ ಊರಲ್ಲೇ ಯಾ ತಾಲೂಕಿನಲ್ಲೇ ಸೇವೆ ಮಾಡುವ ಯೋಜನೆಯನ್ನು ಸರಕಾರದವರು ಎಂದಿನಿಂದ ಪ್ರಾರಂಭಿಸುವರೆಂದೂ ಅವರು ಕೇಳುತ್ತಾರೆ.

ಪತ್ರಿಕಾಳು ಸಿಗದ ದಿನಗಳಲ್ಲಿ ಬಹಳ ಕಷ್ಟವಾಗಿದೆಯೆಂದೂ ಗೇಣಿದಾರರಿಬ್ಬರು ದೂರುತ್ತಾರೆ.

(ತಾ ೧೪-೭-೪೬) ಇಷ್ಟು ದಿನ ಮಳೆಯಿದ್ದಿಲ್ಲ. ಇಂದಿನಿಂದ ಬೀಳುತ್ತಿದೆ.

ಬರುವ ಅಕ್ಟೋಬರ ತಿಂಗಳಲ್ಲಿ ಇಲ್ಲಿಯ ನಗರ ಸಭೆಯ ತ್ರೈವಾರ್ಷಿಕ ಚುನಾವಣೆಗಳಾಗಲಿವೆ. ಆ ಬಗ್ಗೆ ಮತದಾರರ ಪಟ್ಟಿ ಯಾದಿಗಳು ತಯಾರಾಗಿ ಪ್ರಸಿದ್ಧವಾಗಿವೆ. ಈ ಯಾದಿಗಳಲ್ಲಿ ಎಷ್ಟೋ ನಿಜವಾದ ಮತಾಧಿಕಾರವುಳ್ಳ ಎಷ್ಟೋ ಜನರ ಹೆಸರುಗಳಿಲ್ಲ, ಮತಾಧಿಕಾರವಿಲ್ಲದ [illegible]

ಆಜ್ಞೆ.

ನಂ ೩೧

ಕಾರವಾರ, ತಾ ೧ ಜುಲೈ ೧೯೪೬

ಭಾರತ ಸಂರಕ್ಷಣಾ ಕಾನೂನಿನ ೮೧ನೆಯ ನಿಯಮದ ೨ನೆಯ ಒಳನಿಯಮದಿಂದಲೂ ಗೃಹಖಾತೆ (ರಾಜಕೀಯ ಯುದ್ಧ)ಯವರು ತಾ ೧೫-೯-೧೯೪೪ಕ್ಕೆ ಹೊರಡಿಸಿದ [illegible] ೧೯೬೦ನೇ ನಂಬರದ ಸರಕಾರಿ ಪ್ರಕಟಣೆಯಂತೆಯೂ ದೊರೆತ ಅಧಿಕಾರಗಳನ್ನೂ ಹೀಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಮತ್ತು ತಾ ೨೭-೩-೧೯೪೬ರ ೩೧ನೇ ನಂಬರಿನ ತಮ್ಮ ಆಜ್ಞೆಯನ್ನು ರದ್ದುಗೊಳಿಸಿ, ಕಾನಡಾ ಜಿಲ್ಹೆಯ ಜಿಲ್ಹಾ ಮೆಜಿಸ್ಟ್ರೇಟರು ಈ ಮೂಲಕ ಆಜ್ಞೆ ಮಾಡುತ್ತಾರೇನೆಂದರೆ

ಯಾರೊಬ್ಬನ ಸಂಗ್ರಹದಲ್ಲಿ ಕಾನಡಾ ಜಿಲ್ಹೆಯ ಚತುಃಸೀಮೆಯೊಳಗೆ (ಪ್ರತಿ ಚೀಲದಲ್ಲಿ ೫ ಕ್ವಿಂಟೇಲ-ಮಣ ಪತ್ರಿಕಾಳಿರುವ) ೧೦ ಚೀಲಗಳಿಗೂ ಮಿಕ್ಕಿ ಪತ್ರಿಕಾಳು ಇರುತ್ತಿದ್ದರೆ — ಅದು ಪೂರ್ಣ ಸ್ವಂತ ಮಾಲ್ಕಿಯದಿರಲಿ, ಬೇರೊಬ್ಬರ ಬಗ್ಗೆ ಇಟ್ಟುಕೊಂಡದ್ದಿರಲಿ ಅಥವಾ ತನ್ನ ಹಾಗೂ ಬೇರೆಯವರ ಭಾಗೀದಾರಿಗೆ ಒಪ್ಪಿದ್ದಿರಲಿ— ಅವನು ತಾ ೧—೮—೧೯೪೬ ರಿಂದ ಮುಂದೆ ಪ್ರತಿ (ತಿಂಗಳ) ೫ ನೇ ತಾರೀಕಿಗೆ ಹಿಂದಿನ ತಿಂಗಳ ಕೊನೆಯ ದಿನ ತನ್ನ ಕಡೆಗಿದ್ದ ಪತ್ರಿಕಾಳಿನ ಸಂಗ್ರಹದ ನಿಜಮಾಪ ಮತ್ತು ಪೂರ್ಣ ಮಾಹಿತಿಯನ್ನು, ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟದಲ್ಲಿ ಕೊಟ್ಟ ನಮೂನೆಯ ಪತ್ರಕದ ಮೂಲಕ, ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ ಇವರಿಗೆ ಸಾದರಪಡಿಸತಕ್ಕದ್ದು.

ಇದಲ್ಲದೆ ವಿಧಿಸುವದೇನಂದರೆ— ಸದರಿ ಮಾಹಿತಿ-ಪತ್ರಕದ ಒಂದು ಪ್ರತಿಯನ್ನು ಆಯಾ ತಾಲೂಕಿನ/ಪೇಟೆಯ ಮಾಮಲೇದಾರರಿಗೂ/ಮಹಾಲಕರಿಗಳಿಗೂ ಒಪ್ಪಿಸತಕ್ಕದ್ದು.

ಪರಿಶಿಷ್ಟ
ಮಾಹಿತಿ ಪತ್ರಕದ ನಮೂನೆ

೧ ಪತ್ರಕ ಕೊಡುವವನ ಪೂರ್ಣ ಹೆಸರು ಮತ್ತು ವಿಳಾಸ
೨ ಸಂಗ್ರಹದಲ್ಲಿದ್ದ ಜೇನಸಿನ ಹೆಸರು,
೩ (ಅ) ತನ್ನ ಸ್ವಂತ ಮಾಲ್ಕಿಯದಾಗಿ,
(ಬ) ಬೇರೆಯವರ ಬಗ್ಗೆಗಿ,
(ಕ) ತನ್ನ ಹಾಗೂ ಬೇರೆಯವರ ಭಾಗೀದಾರಿಗೆ ಒಪ್ಪಿದ್ದಾಗಿ ತನ್ನಲ್ಲಿದ್ದ ಸಂಗ್ರಹದ ಪರಿಮಾಣ
೪ ತನ್ನ ಕಡೆ ಬೇರೆಯವರ ಭಾಗೀದಾರಿಗೆ ಒಪ್ಪಿದ ಸಂಗ್ರಹವಿದ್ದಲ್ಲಿ ಆ ಭಾಗೀದಾರರ ಪೂರ್ಣ ಹೆಸರುಗಳು ಮತ್ತು ವಿಳಾಸಗಳು ಹಾಗೂ ಪ್ರತಿಯೊಬ್ಬ ಭಾಗೀದಾರನ ಬಗ್ಗೆ ಎಷ್ಟು ಸಂಗ್ರಹ ಉಂಟೆಂಬುವದರ ಪರಿಮಾಣ

ಯಾರಾದರೂ ಈ ಆಜ್ಞೆಯ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅವನಿಗೆ ವಿಧಿಸಬಹುದಾದ ಬೇರೆ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ ಅವನ ಅಪರಾಧದ ವಿಚಾರ ಮಾಡುವ ನ್ಯಾಯಾಧೀಶರು, ಯಾವ ಪತ್ರಿಕಾಳಿನ ಸಂಗ್ರಹದ ಸಂಬಂಧದಲ್ಲಿ ಆ ಅಪರಾಧವಾಗಿರುತ್ತದೆಂದು ಮನವರಿಕೆಯಾಗುತ್ತದೋ ಅಂಥ ಆ ಸಂಗ್ರಹವನ್ನು, ಅದರ ಆವರಣ ಸಾಧನಗಳ ಸಹಿತ, ಸರಕಾರಜಮಾ ಮಾಡಲು ವಿಧಿಸಬಹುದು.

ಹಿಂದುಸ್ಥಾನ ಸಂರಕ್ಷಣಾ ಕಾನೂನಿನ ೧೧೯ನೆಯ ಕಲಮಿನ ೧ನೆಯ ಒಳಕಲಮಿಗನುಸಾರವಾಗಿ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸಿಕೊಳ್ಳಬೇಕು —

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗಾಝೆಟಿನಲ್ಲಿ ಪ್ರಕಟಿಸಬೇಕು

(ಬ) ಆಜ್ಞೆಯ ಕನ್ನಡ ಅನುವಾದದ ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿಕೊಳ್ಳಬೇಕು —
(೧) 'ವಿಟಾರಿ' ಕಾರವಾರ (೨) "ಕಾನಡಾವೃತ್ತ" ಕುಮಟಾ

(ಕ) ಆಜ್ಞೆಯ ಕನ್ನಡ ಅನುವಾದದ ಪ್ರತಿಗಳನ್ನು ಜಿಲ್ಹೆಯೊಳಗಿನ ಎಲ್ಲ ಮಾಮಲೇದಾರ ಕಚೇರಿಗಳಲ್ಲೂ ಜಿಲ್ಹಾ ಕಚೇರಿಯಲ್ಲೂ ಇರುವ ನೋಟೀಸ-ಬೋರ್ಡುಗಳಿಗೆ ಹಚ್ಚಬೇಕು

V NANJAPPA.
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

ಎಷ್ಟೋ ಜನರ ಹೆಸರುಗಳು ಸೇರಿಕೊಂಡಿವೆ ನಾಗರಿಕರು ಕಾಲದಲ್ಲಿ ಎಚ್ಚತ್ತು, ತಕ್ರಾರ ಅರ್ಜಿಗಳನ್ನು ಮಾಡಿ ಈ ದೋಷಗಳನ್ನು ಸರಿಪಡಿಸಿಕೊಳ್ಳಬೇಕು

ಹೊಸದಾಗಿ ಬಂದಿರುವ ಪತ್ರಿಕಾಳಿನ ರೇಶನ ಧಾರಣೆ ಖಂಡಿ ೧ಕ್ಕೆ ರೂ ೧೦ ೪-೬ ಇದ್ದಲ್ಪಟ್ಟಿದೆ ವ್ಯಾಪಾರದ ಅನುಭವಪೂರ್ಣರಾದವರೊಬ್ಬರು ಈ ದರ ಬಗ್ಗೆ ಹೇಳುವದೇನೆಂದರೆ ಮುಂಬಯಿ ೧ಕ್ಕೆ ರೂ ೧ ೧-೬ ರಂತೆ [illegible] ಪತ್ರಿಕಾಳಿನ ಬೆಲೆ ರೂ ೬-೧೧-೬, ಮೋಟರ ಭಾಡಿಗೆ (ಖಂಡಿ ೧ಕ್ಕೆ) ರೂ ೨-೯-೦, ಕುಮಟಾ— ಹೊನ್ನಾವರ ಮ್ಯುನಿಸಿಪಲ ಜಕಾತ ೦-೩-೬, ಮುಂಬಯಿಯಲ್ಲಿ ಹಮಾಲಿ ೦-೧-೦, ಇಲ್ಲಿಯ ಹಮಾಲ ೦-೦-೬, ತೂಕ ಹಾಗಲು ೦-೧-೦, ಖಾಲಿ ಚೀಲ-ಸುತ್ತಿ ವಗೈರೆ ೦-೮-೦, ಹೋಲ-ಸೇಲ್ ದಾರ (ರಾ॥ ಹಳದೀಪುರಕರ) ರ ದಲಾಲಿ ೦-೮-೦, ಸ್ಥಾನಿಕ ಏಜಂಟ (ಅರ್ಬನ ಬೇಂಕ) ರ ದಲಾಲಿ ೦-೬-೦ ಹೀಗೆ ಇವೆಲ್ಲ ಕೂಡಿ, ಒಂದ ಖಂಡಿ ಪತ್ರಿಕಾಳನ್ನು ರೂ ೧೧-೧-೬ಕ್ಕೆ ಮಾರಬಹುದಾಗಿ ಲೆಕ್ಕ ಹಾಕಿದ್ದಾರೆ ವ್ಯಾಪಾರಸ್ಥರು ಹೇಳುವ ಈ ದರಕ್ಕೂ ಜಿಲ್ಲಾಧಿಪರು ನಿರ್ಧರಿಸಿಕೊಟ್ಟ ದರಕ್ಕೂ ರೂ ೧-೬ ರ ಭಿನ್ನತೆಯುಂಟು ಈ ಅಭ್ಯಂತರ ಬರುವ ಕಾರಣವನ್ನು ಜಿಲ್ಲಾಧಿಪರು ಸ್ಪಷ್ಟಗೊಳಿಸಬೇಕು

ಪೇಟೆಯಲ್ಲೀಗ ಕಳವುಗಳಾಗುತ್ತಿವೆ ಕಳ್ಳರು ಅಂಗಡಿಗಳ ಬೀಗಗಳಿಗಾಗುವ ಕೀಲಿಕೈ ತಯಾರಿಸಿಕೊಂಡು, ಬೀಗ ತೆಗೆದು ಕಳವು ಮಾಡುತ್ತಾರೆ! ಬೆಳಿಗ್ಗೆ ಅಂಗಡಿಯ ಬಾಗಿಲು ತೆರೆಯುವಾಗ ಬೀಗ ಸರಿಯಾಗಿದೆ ಆದರೆ ಬಾಗಿಲು ತೆಗೆದು ಒಳಗೆ ಹೋಗಿ ನೋಡಿದರೆ ಕೆಲವೊಂದು ಸಾಮಾನು ಇದ್ದಲ್ಲಿಂದ ಇಲ್ಲದಿದ್ದದ್ದು ಕಂಡು ಬರುತ್ತದೆ! ಈ ಸಂಗತಿಗಳನ್ನು ಪೋಲೀಸರಿಗೆ ತಿಳಿಸಿದರೆ 'ಕೊಂಗ್ರೆಸ ಸರಕಾರಕ್ಕೆ ಅರ್ಜಿ ಮಾಡಿರಿ" ಎಂದು ಅವರು ಹೇಳುತ್ತಾರಂತೆ! ಪ್ರಾಂತಿಕ ಸರಕಾರದವರು ಈ ಪೋಲೀಸರಿಗೆ ಕೊಂಗ್ರೆಸ ಸರಕಾರವಿಲ್ಲದ ಪ್ರಾಂತಗಳಿಗೆ ಕಳಿಸಿಕೊಡುವ ವ್ಯವಸ್ಥೆ ಮಾಡುವದು ಶ್ರೇಯಸ್ಕರ

ಭಟಕಳ— (ತಾ. ೧೧-೭-೧೯೪೬) ಇಲ್ಲಿಯ ಟಪಾಲ ಪೇದೆಗಳು ಇಂದಿನಿಂದ ಕೆಲಸಕ್ಕೆ ಹೋಗದಿರುವದೆಂದು ಕಟ್ಟು ಮಾಡಿದ್ದಾರೆ ಈ ಹೊತ್ತು ಊರಲ್ಲಿ ಟಪಾಲ ಬಟವಡೆಯಾಗಲಿಲ್ಲ

ಶಿರ್ಸಿ— ಖಾದಿಯ ಕಳ್ಳಸಂತೆಯ ವ್ಯಾಪಾರ ಚರಖಾ ಸಂಘದ ಖಾದಿ ಅಂಗಡಿಯಲ್ಲಿ ಇಲ್ಲವೆಂದು ಅಂಗಡಿಯವರು ತಿಳಿಸುತ್ತಾರೆ ನೂಲು ಕೊಡದೆ ಖಾದಿ ಕೊಳ್ಳುವವರು ಹೆಚ್ಚಾದ್ದರಿಂದಲೂ, ಹಾಗೆ ಖಾದಿ ಕೊಡಲು ನೇಮದಂತೆ ಬರುವದಿಲ್ಲವಾದ್ದರಿಂದಲೂ, ಕೊಂಗ್ರೆಸ ಮುಖಂಡರೆಂಬವರು ಕೆಲವರು (ರಾ॥ ಛಾವಾ ವಗೈರೆ ಜನರು ಈ ವ್ಯಾಪಾರದಲ್ಲಿ ಪ್ರಮುಖರಂತೆ!) 'ಚರಸಂಘ'ದ ಅನಧಿಕೃತ ಖಾದಿಯನ್ನು ತಂದು ಮಾರಹತ್ತಿರುವದರಿಂದಲೂ, ನೂಲು ಕೊಡದೆ ಆ ಖಾದಿ (?) ಸಿಗುತ್ತಿರುವದರಿಂದ ಖಾದಿ ಭಕ್ತರೆಂಬವರು ಹೆಚ್ಚಾಗಿ ಆ ಖಾದಿಯನ್ನೇ ಖರೀದಿ ಮಾಡುತ್ತಿರುವದರಿಂದಲೂ ತಮ್ಮ ವ್ಯಾಪಾರ ಇಳಿಮುಖವಾಗಿದೆಯೆಂದು ಸದರಿ ಅಂಗಡಿಯವರು ತಿಳಿಸುತ್ತಾರೆ ಹೀಗೆ "ಖಾದಿ ಭಕ್ತ"ರೇ ಖಾದಿ-ಭಾಂಡಾರದವರ ಕೈ ಕಟ್ಟಿರುವದರಿಂದ ಮತ್ತು [illegible]ನೇನೂ ಸಹಾಯ ಮಾಡುತ್ತಿರುವದಿಲ್ಲವಾದ್ದರಿಂದ ತಮಗೆ ಆಗಾಗ ಖಾದಿ ತರಿಸಿಕೊಳ್ಳಲಾಗುವದಿಲ್ಲೆಂದೂ ಅವರು ಒಪ್ಪುತ್ತಾರೆ ಖಾದಿ ಶಿಲ್ಕು ಇಲ್ಲದಿದ್ದಾಗ ಬಂದು ತಮಗೆ ಖಾದಿ ಸಿಗಲಿಲ್ಲೆಂಬ ಸಿಟ್ಟಿನಿಂದ ತಮ್ಮ ಮೇಲೆ ಕಳ್ಳ ಸಂತೆಯ ಆರೋಪ ಮಾಡುವದು ಅನುಚಿತವೆಂದು ಅವರ ಅಂಬೋಣ

ಹನುಮಂತ ದೇವಸ್ಥಾನದ ಸೀಧಾ ಅಂಗಡಿಯ ಕಾರಕೂನನು ಎಷ್ಟು ಉದ್ಧಟ ಮತ್ತು ಉನ್ಮತ್ತನಿದ್ದಾನೆಂಬುದು ಮೊನ್ನೆ ಪುನಃ ಹೊರಬಿದ್ದಿದೆ ರಾ॥ ಸೊಳಗಾರ ವೆಂಕಟರಮಣ ಶೆಟ್ಟಿಯವರಿಗೆ ತಾನು ಉದ್ಧಟತೆಯಿಂದ ನಡೆಸಿದ ಸಂಗತಿ 'ವೃತ್ತ'ದಲ್ಲಿ ಬಂದದ್ದು ನೋಡಿಯಾದರೂ ಆತ ತನ್ನ ನಡತೆ ಸುಧಾರಿಸುವನೆಂಬ ಆಶೆಯಿತ್ತು, ಆದರೆ ಹಾಗೇನೂ ಮಾಡದೆ ಈ ಕಾರಕೂನನು ರಾ॥ ಹೆಗಡೆಗೆ ಒಂದು ನೋಟೀಸು ಕೊಟ್ಟಿದ್ದಾನೆ! ನೋಟೀಸು ಮುಟ್ಟಿದ ೩ ದಿನಗಳಲ್ಲಿ ರಾ॥ ಹೆಗಡೆಯವರು ತನ್ನ ಯಜಮಾನನ ಮುಂದೆ ಹಾಜರಾಗಿ ಅವರಿಗೆ ತಾನು ಉದ್ಧಟತೆಯ ಮಾತುಗಳನ್ನಾಡಿದ್ದು ರುಜು ಮಾಡಿಕೊಡಬೇಕಂತೆ! ಹಿಂದೆಯೂ ತಾನು "ಮಿಸಿ ಪ್ರೋಸಿಕ್ಯೂಶನ"ದ್ದನ್ನು ಈ ಕಾರಕೂನನು ಮರೆತಂತೆ ತೋರುತ್ತದೆ ಈ ಕಾರಕೂನನಿಗೆ ಬುದ್ಧಿ ಕಲಿಸುವ ದ್ವಾರವೂ ಇಲ್ಲವೇ?

೨೦ ಗ್ರಾಮಗಳ ೬೫೦೦ ಜನರಿಗೆ ಸೀಧಾ ಸಾಮುಗ್ರಿ ಹಂಚುವದಿರುವದರಿಂದ ಹಾಗೂ ತಮ್ಮ (ಹುಲೇಕಲ್ಲ) ಸೀಧಾ ಅಂಗಡಿಯು ಶಿಬಂದಿ ಹೆಚ್ಚಿಸಬೇಕಾಯಿತೆಂದೂ, ಪತ್ರಿಕಾಳಿನ ದರ ಗೊತ್ತಾಗಿದ್ದಿಲ್ಲವಾದ್ದರಿಂದ [illegible] ೭ ಆಣೆಯಂತೆ ಮಾರಿಸಿದೆವೆಂದೂ ಹಿಂದಿನಿಂದ ದರ ಬರುವ ಬಂದ ಮೇಲೆ ಹೆಚ್ಚಿಗೆ ತಕ್ಕೊಂಡ ಹಣ ಆಯಾ ಜನರಿಗೆ ತಿರುಗಿ ಕೊಡಿಸುವ ವ್ಯವಸ್ಥೆ ಮಾಡಿದ್ದೇವೆಂದೂ ಹುಲೇಕಲ್ಲ ಯೋಗ್ಯ ದರದ ಅಂಗಡಿಯ ಚೇರಮನ್ನರು ತಿಳಿಸುತ್ತಾರೆ

(ತಾ ೧೨-೭-೪೬) ನಿನ್ನೆಯಿಂದ ಇಲ್ಲಿ ಅಂಚೆ-ಪೇದೆಗಳು ಮುಷ್ಕರ ಹೂಡಿದ್ದಾರೆ ಆದರಿಂದ ಅಂಚೆ-ಇಲಾಖೆಯವರು ಊರೊಳಗಿನ ಟಪಾಲ ಪೆಟ್ಟಿಗೆಗಳನ್ನು ತೆಗೆದಿಟ್ಟಿದ್ದಾರೆ ಟಪಾಲ ಕಚೇರಿಯಲ್ಲಿ ಈಗ ೫ ೬ ದಿನಗಳಿಂದ ಮನಿಯಾರ್ಡರ, ರಜಿಸ್ಟರ ವಗೈರೆ ಜವಾಬದಾರಿಯ ವ್ಯವಹಾರ ಸ್ವೀಕರಿಸುವದಿಲ್ಲ ಜನರು ತಮ್ಮ ಟಪಾಲನ್ನು ಕಚೇರಿಗೇ ಹೋಗಿ ತಕ್ಕೊಳ್ಳಬೇಕಾಗಿದೆ

ಕಳೆದ ಮಂಗಳವಾರ ರಾತ್ರಿ ಕಳ್ಳರು ನಡುಪೇಟೆಯಲ್ಲಿರುವ ಒಂದು ಜವಳಿ ಅಂಗಡಿಯ ಮುಂದಿನ ಹಲಿಗೆಯಲ್ಲಿ ಗಂಡಿ ಮಾಡಿ, ಆ ಗಂಡಿಯೊಳಗಿಂದ ಒಳಗಿದ್ದ ಹಣದ ಪೆಟ್ಟಿಗೆಯನ್ನು ಗಂಡಿಯ ತನಕ ಎಳೆದುಕೊಂಡು, ಅದರೊಳಗಿದ್ದ ಹಣವನ್ನೂ ಆಭರಣಗಳನ್ನೂ ದೋಚಿಕೊಂಡು ಹೋಗಿದ್ದಾರೆ ಈ ಕಳವಿನ ತಂತ್ರ ಹಾಗೆ ಏನಿಲ್ಲೆಂದರೂ ೨-೪ ತಾಸುಗಳ ವರೆಗೆ ನಡೆದಿರಬೇಕು ಆದರೂ ಅದು ಪೇಟೆಯಲ್ಲಿ ಗಸ್ತು ಮಾಡುತ್ತಿದ್ದ (?) ಪೋಲೀಸರಿಗೆ ಅದರ ಸುಳಿವು ಹತ್ತಲಿಲ್ಲ! ಪೋಲೀಸರ ಈ ಕಾರ್ಯದಕ್ಷತೆಯನ್ನು ಹೊಗಳಬೇಕೋ ತಕ್ಕ ಬಹುಮಾನವನ್ನು ಕೊಡಬೇಕೋ ತಿಳಿಯದು ?

ಸಿದ್ದಾಪುರ— ಇಲ್ಲಿಯ ಕನ್ನಡ ಶಾಲೆಯ ಮುಖ್ಯಾಧ್ಯಾಪಕರ ಮಗಳಾದ ಕುಮಾರಿ ಪದ್ಮಾವತಿ [illegible] ಇಸಳೂರ ಇವಳು ಈ ವರ್ಷದ ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಗೂ ಕುಳಿತಿದ್ದಳು, ಪುನಃ ಗಂಡು ಮಕ್ಕಳ ಮುಲ್ಕೀ ಪರೀಕ್ಷೆಗೂ ಕುಳಿತಿದ್ದಳು ಮೊದಲಿನ ಪರೀಕ್ಷೆಯಲ್ಲಿ ೪೧೮ ಗುಣಗಳನ್ನು ದೊರಕಿಸಿ, ಅಷ್ಟೇ ಗುಣಗಳನ್ನು ದೊರಕಿಸಿದ ಕುಮಾರಿ ಇಂದಿರಾ ಗೋಪಾಲರಾವ ದೇವ ಇವರೊಡನೆ ಇಡೀ ಜಿಲ್ಲೆಯಲ್ಲಿ ಪ್ರಥಮ ಸ್ಥಾನವನ್ನೂ, ಎರಡನೆಯ ಪರೀಕ್ಷೆಯಲ್ಲಿ ೪೩೪ ಗುಣಗಳನ್ನು ದೊರಕಿಸಿ ಶಿರ್ಸಿ ಕೇಂದ್ರದಲ್ಲಿ ಪ್ರಥಮ ಸ್ಥಾನವನ್ನೂ ಪಡೆದಿದ್ದಾಳೆ ಈ ಬಗ್ಗೆ ಪದ್ಮಾವತಿಯು ಅಭಿನಂದನಾರ್ಹಳಿದ್ದಾಳೆ

ಇಲ್ಲಿಯ ಸೀಧಾ ಅಂಗಡಿಯಲ್ಲಿ ಅಂತೋನ ಗೋನಸಾಲ್ವಿಸ ಎಂಬವನಿಗೆ ೧೭॥ ರೂಪಾಯಿ ಪತ್ರಿಕಾಳಿನ ಬದಲು ೧೬। ರೂಪಾಯಿ ಕೊಟ್ಟರೆಂಬ (ಕಳೆದ ವಾರದ 'ವೃತ್ತ'ದಲ್ಲಿ ಬಂದ) ಟೀಕೆಗೆ ಪ್ರತ್ಯುತ್ತರವಾಗಿ ರಾ॥ ಕೋರೀಕರರು ತಿಳಿಸುವದೇನಂದರೆ 'ಅಂತೋನನು ೧೬। ರೂಪಾಯಿ ಮಾತ್ರ ಈಗ ಕೊಡಿರಿ, ಉಳಿದ ೭೦ ರೂಪಾಯಿ ತರುವಾಯ ಒಯ್ಯುತ್ತೇನೆ ಎಂದು ಹೇಳಿ ೧೬। ರೂಪಾಯಿ ಪತ್ರಿಕಾಳು ಮಾತ್ರ ಒಯ್ದಿದ್ದನು ತರುವಾಯ ಅವನು ಪತ್ರಿಕಾಳು ತರಬೇಕೆಂದ ಜನರಿಗೆ ಮೋಸಗೊಳಿಸುವ ಉದ್ದೇಶದಿಂದ ಹೀಗೆ ಮಾಡಿರಬಹುದು ಹಿಂದುಗಡೆ ಅವನು ಬಂದು ಉಳಿದ ೭೦ ರೂಪಾಯಿ ಒಯ್ದನು ಹೊರತು ಅಂಗಡಿಯವರು ತೂಕದಲ್ಲಿ ಮೋಸ ಮಾಡಿದ್ದೆಂಬುದು ನಿಜವಲ್ಲ " ಇತ್ಯಾದಿ

ಬಿದ್ರಕಾನ ಸೀಮೆಯ ೮-೯ ಹಳ್ಳಿಗಳಲ್ಲಿ ಹಾವಳಿಯನ್ನೆಬ್ಬಿಸಿರುವ ನರಭಕ್ಷಕ ಹುಲಿಯ ಕಾಟ ಇನ್ನೂ ತಪ್ಪಿದ ಹಾಗಿಲ್ಲ ಈ ಹುಲಿಯ ಅಂಜಿಕೆಯಿಂದ ತೋಟಗಳಲ್ಲಿ [illegible]ಲು ಬರುತ್ತಿದ್ದ ಘಟ್ಟದ ಕೆಳಗಿನ ಕೂಲಿಯಾಳುಗಳು ಈ ವರ್ಷ ಬರಲಿಲ್ಲ ಆದರಿಂದ ತೋಟಗಳು [illegible] ಹಾಳು ಬೀಳಹತ್ತಿವೆ ಹುಲಿಗೆ ಅಂಜಿ ಜನರು ಪೇಟೆಯಿಂದ ಸೊಪ್ಪು ತರುವದಿಲ್ಲ ಸೀಧಾ ಅಂಗಡಿಗಳಿಗೆ ಹೋಗಿ ಸೀಧಾ ಸಾಮುಗ್ರಿ ತರಲಿಕ್ಕೂ ಜನರು ಅಂಜುತ್ತಾರೆ ೧೫ ದಿನಗಳ ಹಿಂದೆ ಸಿದ್ದಾಪುರದಿಂದ ಹಾರ್ಸಿಕಟ್ಟೆಗೆ ಹೋಗುತ್ತಿದ್ದ ಇಬ್ಬರಿಗೆ ಹಾದಿಯಲ್ಲಿ ಈ ಹುಲಿಯು ನಿಂತಿದ್ದು ಕಾಣಿಸಿತು ಆಗ ಅವರು ಪ್ರಸಂಗಾವಧಾನದಿಂದ ಹಿಡಿದ ಹುಲಿಯ ಮೇಲೆ ತಮ್ಮ ಕೈಲಿದ್ದ ಕಂಬಳಿಯನ್ನು ಬೀಸಿದ್ದರಿಂದ ಹುಲಿಯು ಓಡಿಹೋಯಿತಂತೆ ನಾಟಗೋಡ ಹಳ್ಳಿಯಲ್ಲಿ ಎರಡೇ ಮನೆಗಳಿವೆ ಅದರೊಳಗಿನ ಒಂದು ಮನೆಯವನು ಹುಲಿಗೆ ತುತ್ತಾದ್ದರಿಂದ ಆ ಮನೆಯವರು ಊರು ಬಿಟ್ಟು ದೇಶಾಂತರಕ್ಕೆ ಹೋಗಿದ್ದಾರೆ! ಇನ್ನೊಂದು ಮನೆಯವರೂ ದೇಶಾಂತರ ಮಾಡುವ ಆಲೋಚನೆಯಲ್ಲಿದ್ದಾರೆ! ಆದರಿಂದ ಆ ಹಳ್ಳಿಯ ಹೊಲಭೂಮಿಗಳೂ ತೋಟಗಳೂ ಈಗ ಬಂಜರ ಬೀಳುವ ಸ್ಥಿತಿಯಲ್ಲಿವೆ! ಹುಲಿಯ ಬೇಟೆಗೆಂದು ಬಂದ ಜನರು ಹುಲಿ ಎಲ್ಲೂ ಸಿಗಲಿಲ್ಲೆಂದು ಹೇಳುತ್ತ ತಿರುಗಿ ಹೋದರು ಜಿಲ್ಲಾಧಿಪರು ಎರಡು ಯಾ ಮೂರು ಪಂಜರಗಳನ್ನಾದರೂ ತಯಾರಿಸಿ ಕೊಟ್ಟರೆ ಉಪಾಯದಿಂದ ಹುಲಿ ಹಿಡಿಯಬಹುದಾಗಿ ಕೆಲವರ ಅಂಬೋಣವುಂಟು ಜಿಲ್ಲಾಧಿಪರು ಇತ್ತ ಗಮನಿಸಬೇಕಾಗಿ ಅರಿಕೆಯುಂಟು

ತ್ಯಾಗ್ಲಿಯ ರಾ॥ ಎಸ್. ಲಕ್ಷ್ಮೀನಾರಾಯಣ ಹೆಗಡೆಯವರ ಕೆಲವೊಂದು ಆಸ್ತಿ ೭ ಮೈಲು ದೂರದಲ್ಲಿರುವ ನಿಡಗೋಡ ಹಳ್ಳಿಯಲ್ಲುಂಟು ಅಲ್ಲಿಂದ ಸಿದ್ದಾಪುರ ಸರಕಾರಿ ಉಗ್ರಾಣಕ್ಕೆ ೩ ಖಂಡಿ ಪತ್ರಿ ಒಯ್ಯಲು ನಿಡಗೋಡ ಶಾನಭೋಗರು ಕಳೆದ ಫೆಬ್ರುವರಿಯಲ್ಲಿ ಅವರಿಗೆ ಒಂದು ಪರವಾನೆ-ಚೀಟಿ ಕೊಟ್ಟಿದ್ದರು ಆದರೆ ಅಸ್ವಸ್ಥತೆಯ ಕಾರಣ ಪರವಾನೆಯಲ್ಲಿ ಕಾಣಿಸಿದ ಅವಧಿಯೊಳಗೆ ಪತ್ರಿ ಸಿದ್ದಾಪುರಕ್ಕೆ ಹೊಂದಿಸಲು ರಾ॥ ಹೆಗಡೆಯವರಿಗೆ ಸಾಧ್ಯವಾಗಲಿಲ್ಲ ಅವಧಿಯೊಳಗೇ ಪತ್ರಿ ಸ್ಥಳಾಂತರಿಸಬೇಕು ಮತ್ತು ಅವಧಿ ತೀರಿದರೆ ಅವಧಿ ಬೆಳಸಿಕೊಳ್ಳಬೇಕಾಗುತ್ತದೆ ಎಂಬ ಸಂಗತಿ ಅವರಿಗೆ ಗೊತ್ತಿದ್ದಿಲ್ಲ ಫೆಬ್ರುವರಿಯಲ್ಲಿ ಕೊಟ್ಟ ಪರವಾನೆಯೋ[illegible] ಅವರು ಮಾರ್ಚದಲ್ಲಿ ೪ ಖಂಡಿ ಪತ್ರಿ

(೧ನೇ ಪುಟದ ಮೇಲೆ ಮುಂದರಿಸಿದೆ)

ಕುಮಟಾ ಅರ್ಬನ ಕೋ. ಬೇಂಕ, ಲಿ.

ಈ ಬೇಂಕಿನ ನಂ ೫ ಶೇರದಾರರ ಶೇರುಗಳ ಮೇಲೆ ನಿಯಮಗಳಂತೆ ಇನ್ನು ಮುಂದೆ ಡಿವ್ಹಿಡೆಂಡು ಸಿಗತಕ್ಕದ್ದಿಲ್ಲವಾದ್ದರಿಂದ ವಾರಸದಾರರು ಮೃತರ ಹಸರಲ್ಲಿರುವ ಶೇರು-ಹಣ ಮತ್ತು ಅದರ ಮೇಲಿನ ತಾ ೩೦-೬-೧೯೪೬ನೇತನ ಜಮಾ ಬರುವ ಡಿವ್ಹಿಡೆಂಡ ಹಣ ಪಡೆಯತಕ್ಕದ್ದು

ಕುಮಟಾ,
ತಾ. ೧೩-೭-೪೬

Annapa R. Pai,
ಚೆಅರಮನ್.

SALES TAX

DEALERS with a turnover exceeding Rs 10,000/- in 1944-45 must get registered under the Bombay Sales Tax Act

The Last Date for making applications is **31st July 1946.**

Copies of the form of application can be had from SALES TAX OFFICER, DHARWAR or HUBLI, and LOCAL MAMLATDAR or MAHALKARI (Govt Advt)

ನಮ್ಮಲ್ಲಿ (ಹೋಲಸೇಲ) ರೀತಿ ವ (ರಿಟೇಲ) ಪ್ರಕಾರ

ಡಿನೇಚರ್ಡ ಸ್ಪಿರಿಟ್

ವಾರರಲ್ಲಿ ಸಿಗುತ್ತದೆ

ವಿ ಎಮ್. ಮಿಜಾರನಕರ,
ಲಾಯನ್ಸ, ಮೋಟರ ಸ್ಟೇಂಡ, ಕುಮಟಾ

ದಿ ಕೊಮರ್ಶಿಯಲ್ ಕೊರ್ಪೋರೇಶನ್,
ಕುಮಟಾ.

ನಮ್ಮಲ್ಲಿ ಬಾಸೆಲ್ ಮಿಶನ್ ಕಂಪನಿಯ ಎಲ್ಲ ತರದ ಹಂಚು ಯೋಗ್ಯ ದರದಿಂದ ಸಿಗುತ್ತದೆ

ವಿ ಎಮ್. ಮಿಜಾರನಕರ,
ಮೋಟರ ಸ್ಟೇಂಡ, ಕುಮಟಾ

THE BANK OF RURAL INDIA, LTD.,
(INCORPORATED IN BRITISH INDIA)
Head Office: "SATYABHAMA BHUVANAM" KARWAR. N. K.

THE BOARD OF DIRECTORS OF THE BANK HAVE PLEASURE TO ANNOUNCE THE OPENING OF SUB BRANCHES AT THE FOLLOWING PLACES AT AN EARLY DATE

BHATKAL (N. Kanara)
ANKOLA (N. Kanara)
SIDDAPUR (N. Kanara)

Karwar,
27-6-1946

P. X. GRACIOUS,
MANAGING DIRECTOR

ಪ್ರಸಿದ್ಧಿ

ನಂ ೧೫೪

ಕಾರವಾರ, ತಾ. [illegible] ೧೯೪೬

ಭಾರತ ಸಂರಕ್ಷಣಾ ಕಾನೂನಿನ ೮೧ನೆಯ ನಿಯಮದ ೪ನೆಯ ಉಪನಿಯಮ ಹಾಗೂ ಗೃಹ ಖಾತೆ (ರಾಜಕೀಯ ಯುದ್ಧ) ಯವರು ತಾ. [illegible] ರಲ್ಲಿ ಹೊರಡಿಸಿದ [illegible] ನೇ ನಂಬರ ಸರಕಾರಿ ಪ್ರಕಟಣೆ ಇವುಗಳನ್ವಯ ದೊರೆತ ಅಧಿಕಾರಗಳನ್ನೂ, ಹೀಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ಆಜ್ಞೆ ಮಾಡುತ್ತಾರೇನೆಂದರೆ — ಜಿಲ್ಲಾ ಮೆಜಿಸ್ಟ್ರೇಟ ಕಾನಡಾ ಇವರು ದಯಪಾಲಿಸಿದ ಪರವಾನಗಿಯಿಲ್ಲದೆ ಹಾಗೂ ಆ ಪರವಾನಗಿಯೊಳಗಿನ ಶರತ್ತುಗಳಿಗೆ ವ್ಯತಿರಿಕ್ತವಾಗಿ ಯಾರೂ ಕಾನಡಾ ಜಿಲ್ಲೆಯ ಗಡಿಗಳೊಳಗಿನ ಯಾವುದೇ ಸ್ಥಳದಿಂದ ಸದರಿ ಜಿಲ್ಲೆಯ ಗಡಿಯ ಹೊರಗಿರುವ ಯಾವುದೇ ಸ್ಥಳಕ್ಕೆ ತೆಂಗಿನಕಾಯಿಗಳನ್ನು ನೆಲಮಾರ್ಗದಿಂದ ರೇಲ್ವೆಯಿಂದ [illegible] ಮಾರ್ಗವಾಗಿ ಇಲ್ಲವೆ ಸಮುದ್ರ ಮಾರ್ಗವಾಗಿ ಒಯ್ಯಕೂಡದು.

ಯಾರಾದರೂ ಈ ಆಜ್ಞೆಯ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅವನಿಗೆ ವಿಧಿಸಬಹುದಾದ ಬೇರೆ ಯಾವುದೇ ಶಿಕ್ಷೆಗೆ ಧಕ್ಕೆಯಿಲ್ಲದೆ, ಅವನ ಅಪರಾಧದ ವಿಚಾರ ಮಾಡುವ ನ್ಯಾಯಾಧೀಶನು ಯಾವ ತೆಂಗಿನಕಾಯಿಗಳ ಸಂಗ್ರಹದ ಸಂಬಂಧದಲ್ಲಿ ಸದರಿ ಅಪರಾಧ ಆಗಿದೆಯೆಂದು ಮನವರಿಕೆಯಾಗುತ್ತದೋ ಆ ಸಂಗ್ರಹವನ್ನು, ಅದರ ಆವರಣ ಸ್ವರೂಪಗಳ ಸಹಿತ, ಸರಕಾರದವರ ವಶ ಮಾಡಲು ವಿಧಿಸಬಹುದು.

ಹಿಂದುಸ್ಥಾನ ಸಂರಕ್ಷಣಾ ಕಾನೂನಿನ ೧೧೯ನೆಯ ಕಲಮದ ೧ನೆಯ ಉಪಕಲಮಗಳ ಮೇರೆಗೆ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸಲ್ಪಡಬೇಕು.

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗೆಝೆಟಿನಲ್ಲಿ ಪ್ರಕಟಿಸಬೇಕು.

(ಬ) ಆಜ್ಞೆಯ ಕನ್ನಡ ಅನುವಾದದ ಪ್ರತಿಯನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಿಪಡಿಸಬೇಕು —

(೧) "ವಿಚಾರ" ಕಾರವಾರ, (೨) "ಕಾನಡಾ ವೃತ್ತ", ಕುಮಟಾ

(ಕ) ಆಜ್ಞೆಯ ಕನ್ನಡ ಪ್ರತಿಗಳನ್ನು ಜಿಲ್ಲೆಯೊಳಗಿನ ಎಲ್ಲ ಮಾಮಲೇದಾರ ಕಚೇರಿಗಳಲ್ಲೂ ಜಿಲ್ಲಾ ಪೋಲೀಸ ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಹಚ್ಚಬೇಕು.

V NANJAPPA, ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

ಪ್ರಸಿದ್ಧಿ

ನಂ [illegible]

ಕಾರವಾರ, ತಾ ೨೭ ಜೂನ ೧೯೪೬

ಭಾರತ ಸಂರಕ್ಷಣಾ ಕಾನೂನಿನ ೮೧ನೆಯ ನಿಯಮದ ೪ನೆಯ ಉಪನಿಯಮದಂತೆಯೂ ಗೃಹ ಖಾತೆ (ರಾಜಕೀಯ ಯುದ್ಧ) ಯವರು ತಾ [illegible] ಕ್ಕೆ ಹೊರಡಿಸಿದ [illegible] ನೇ ನಂಬರದ ಸರಕಾರಿ ಪ್ರಕಟಣೆಯಂತೆಯೂ ದೊರೆತ ಅಧಿಕಾರಗಳನ್ನೂ ಹೀಗೆ ಮಾಡಲು ಅಧಿಕಾರ ಕೊಡುವಂತಹ ಬೇರೆ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ಮತ್ತು ತಾ [illegible] ನೇ ನಂಬರದ ತಮ್ಮ [illegible] ಯನ್ನು ರದ್ದುಗೊಳಿಸಿ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ಆಜ್ಞೆ ಮಾಡುತ್ತಾರೇನೆಂದರೆ

ಯಾರ ಕಡೆ ಸ್ವಂತದ ಮಾಲ್ಕಿಯಾಗಿ ಇಲ್ಲವೆ ಬೇರೆಯವರ ಕಡೆಯಿಂದ ಇಲ್ಲವೆ ತನ್ನ ಪಾಲಿಗೆ ಬೇರೆಯವರ [illegible] ಮಾಲ್ಕಿಯಾಗಿ ಕಾನಡಾ ಜಿಲ್ಲೆಯ ಯಾವ [illegible] ಯಾವ ಜಾಗೆಯಲ್ಲಿರುವ ಯಾವುದೇ ಜಾಗ್ರ [illegible] ಅಥವಾ ಸಂಗ್ರಹಾಲಯದಲ್ಲಿ, ಪ್ರತಿ ಬೇಲಕ್ಕೆ [illegible] ಕ್ಕಿಂತ ಹೆಚ್ಚು [illegible] ಕಾನಡಾ ಜಿಲ್ಲೆಯ ಸಂಬಂಧದಲ್ಲಿ [illegible] ಅಸ್ತಿತ್ವ [illegible] ನ ಸದರಿ [illegible] ಸಂಗ್ರಹವನ್ನು ಸದರಿ [illegible] ಇಲ್ಲವೆ ಸಂಗ್ರಹಾಲಯದಿಂದ ಸ್ಥಳಾಂತರಿಸಕೂಡದು ಅಥವಾ ಅದರ ವಿಲೆ ಮಾಡಕೂಡದು.

ಯಾರಾದರೂ ಈ ಆಜ್ಞೆಯ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅವನಿಗೆ ವಿಧಿಸಬಹುದಾದ ಬೇರೆ ಯಾವುದೇ ಶಿಕ್ಷೆಗೆ ಧಕ್ಕೆಯಿಲ್ಲದೆ ಅವನ ಅಪರಾಧದ ವಿಚಾರ ಮಾಡುವ ನ್ಯಾಯಾಧೀಶನು ಯಾವ [illegible] ಸಂಗ್ರಹದ ಸಂಬಂಧದಲ್ಲಿ [illegible] ಅಪರಾಧವಾಗಿರುತ್ತದೆಂದು ಮನವರಿಕೆಯಾಗುತ್ತದೋ ಆ ಸಂಗ್ರಹವನ್ನು ಅದರ ಆವರಣ ಸ್ವರೂಪಗಳ ಸಹಿತ, ಸರಕಾರದವರ ವಶ ಮಾಡಲು ವಿಧಿಸಬಹುದು.

ಹಿಂದುಸ್ಥಾನ ಸಂರಕ್ಷಣಾ ಕಾನೂನಿನ ೧೧೯ನೆಯ ಕಲಮದ ೧ನೆಯ ಉಪಕಲಮಗಳ ಮೇರೆಗೆ ಈ ಆಜ್ಞೆಯನ್ನು ಈ ಕೆಳಗಿನಂತೆ ಪ್ರಕಟಿಸಲ್ಪಡಬೇಕು.

(ಅ) ಒಂದು ಪ್ರತಿಯನ್ನು ಮುಂಬಯಿ ಸರಕಾರದ ಗೆಝೆಟಿನಲ್ಲಿ ಪ್ರಕಟಿಸಬೇಕು.

(ಬ) ಒಂದು ಪ್ರತಿಯ ಕನ್ನಡ ಅನುವಾದವನ್ನು ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಸಿದ್ಧಿಪಡಿಸಬೇಕು —

(೧) "ವಿಚಾರ", ಕಾರವಾರ, (೨) "ಕಾನಡಾ ವೃತ್ತ", ಕುಮಟಾ

(ಕ) ಆಜ್ಞೆಯ ಕನ್ನಡ ಪ್ರತಿಗಳನ್ನು ಜಿಲ್ಲೆಯೊಳಗಿನ ಎಲ್ಲ ಮಾಮಲೇದಾರ ಕಚೇರಿಗಳಲ್ಲೂ ಜಿಲ್ಲಾ ಪೋಲೀಸ ಕಚೇರಿಯಲ್ಲೂ ಇರುವ ನೋಟೀಸ ಬೋರ್ಡುಗಳಿಗೆ ಹಚ್ಚಬೇಕು.

V.Nanjappa, ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಮುಂಬಯಿ ಮಾರಾಟದ ಕರ.

ತಾ ೩೧ ಮಾರ್ಚ ೧೯೪೫ನೇ ತೇದಿಗೆ ಅಂತ್ಯವಾಗುವ ವರುಷದಲ್ಲಿ ಯಾರ ಆಂತು (gross turnover) ಕೊಡತಕ್ಕಂಥ ವ್ಯವಹಾರವು ರೂ. ೧೦,೦೦೦ಕ್ಕೆ ಮಿಕ್ಕಿತ್ತೋ ಅಂಥ ಮುಂಬಯಿ ಪ್ರಾಂತದೊಳಗಿನ ಎಲ್ಲ ವ್ಯಾಪಾರಿಗಳು ಮುಂಬಯಿ ಮಾರಾಟದ ತೆರಿಗೆಯ ಕಾನೂನಿನನ್ವಯ ತಮ್ಮ ಹೆಸರು ನೋಂದಿಸಿಕೊಳ್ಳುವ ಬಗ್ಗೆ ಅರ್ಜಿ ಮಾಡಬೇಕು. ಇಂತಹ ಅರ್ಜಿ [illegible] ಮುಂಬಯಿ ಮಾರಾಟದ ತೆರಿಗೆಯ ನಿಯಮಗಳಲ್ಲಿ ನಿರ್ದಿಷ್ಟ ಮಾಡಿದ ನಮೂನೆ ನಂಬರ ೨ ರಂತೆ ಇರಬೇಕು ಮತ್ತು ಅದನ್ನು ತಾ ೨೧ ಜುಲಾಯಿ ೧೯೪೬ರೊಳಗಾಗಿ ಮಾಡಬೇಕು. ಅರ್ಜಿಯು ಅಚ್ಚು ಹಾಕಿದ ಫಾರ್ಮಿನ ಮೇಲಾಗಲಿ ನಿರ್ದಿಷ್ಟ ಮಾಡಿದ ನಮೂನೆಯಂತೆಯೇ ಇರುವ ಕೈಬರಹದ ಇಲ್ಲವೆ ಟೈಪು ಮಾಡಿಸಿದ ಕಾಗದದ ಮೇಲಾಗಲಿ ಇರತಕ್ಕದ್ದು.

ಕಾನಡಾ ಜಿಲ್ಲೆಯೊಳಗಿನ ವ್ಯಾಪಾರಿಗಳು ತಮ್ಮ ಅರ್ಜಿಗಳನ್ನು "ಸೇಲ್ಸ ಟ್ಯಾಕ್ಸ ಒಫಿಸರ, ಹುಬ್ಬಳ್ಳಿ" ಇವರಿಗೆ ಕಳಿಸಬೇಕು. ಅರ್ಜಿಯ ಅಚ್ಚು ಹಾಕಿದ ಫಾರ್ಮುಗಳು ಸೇಲ್ಸ ಟ್ಯಾಕ್ಸ ಒಫಿಸರ, ಹುಬ್ಬಳ್ಳಿ ಇವರ ಕಚೇರಿಗೆ ಬರೆದುಕೊಂಡರೆ ಕೆಲವೇ ದಿನಗಳಲ್ಲಿ ಸಿಗುವವು. ಸ್ಥಾನಿಕ ಮಾಮಲೇದಾರ ಮಹಾಲಕರಿಗಳ ಕಚೇರಿಯಲ್ಲೂ ಅವು ಸಿಗುವವು. ಮುಂಬಯಿ ಮಾರಾಟದ ತೆರಿಗೆಯ ನಿಯಮಗಳಲ್ಲಿ ನಿರ್ದಿಷ್ಟ ಮಾಡಿದ ನಮೂನೆ ನಂಬರ ೨ರ (ಅರ್ಜಿಯ) ಮಾದರಿಯನ್ನು ಈ ಕೆಳಗೆ ಕೊಟ್ಟಿದೆ

V. NANJAPPA, ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

FORM II

(ಅರ್ಜಿಯ ಮುಂಬದಿ)

Application for registration under Section 8 of the Bombay Sales Tax Act 1946

(See rule 6)

To

THE SALES TAX OFFICER

I

carrying on the business known as

where [illegible] place of business within the jurisdiction of the Sales Tax Officer in the district of

is situated [illegible] Flat No. Name of Building

Municipal No. Building Ward Locality

road village

post office taluka

hereby apply for registration in respect of the said business under the Bombay Sales Tax Act, 1946

The Business is

* wholly
mainly
partly
partly
partly

The accounts of the business are kept in the language. Its gross turnover during the year ending the 31st March 19 , was **Rs (in figures)

(Rupees in words)

The following classes of goods are ordinarily purchased —

(a) for purposes of manufacture

(b) for resale

(c) for use in the execution of a contract

The following classes of goods are manufactured for sale —

The following classes of goods are
Goods are not imported direct from places outside the Bombay Province

* Enter here whether business is wholly agriculture, horticulture, mining, manufacturing, wholesale distribution, retail distribution, contracting, catering, or any combination of two or more of them

** State gross turnover for the year from 1st April 1944 to 31st March 1945.

(ಅರ್ಜಿಯ ಹಿಂಬದಿ)

I have additional places of business and warehouses at the addresses * enumerated below and have no other warehouse or place of business in the district of

Complete list of additional places of business —

Complete list of warehouses —

I have places of business and warehouses in the Province of Bombay outside the district of

Complete list of places of business —

Complete list of warehouses —

In the case of business not being a Company registered under the Indian Companies Act the following particulars must be furnished —

Serial No	Full name of the Partner including his surname and father's name	Permanent address of the partner	Extent of interest in the partnership

The above statements are true to the best of my knowledge and belief.

Date 19 Signature

* Give all the particulars of addresses as in para I above

Note — Strike out phrases or paragraphs not applicable

(ಅರ್ಜಿಗೆ ಪಾವತಿಯ ಬಗ್ಗೆ ಈ ಕೆಳಗಿನ ಮಾದರಿಯ ಒಂದು ಕಾಗದ ಜೋಡಿಸಬೇಕು)

ACKNOWLEDGMENT

Received an application in Form II from

for registration under section 8 of the Bombay Sales Tax Act, 1946

Receiving Officer

ಇದನ್ನು ಪಾಂಡುರಂಗ ಕೃಷ್ಣ ಕಾಸಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವಾರ [illegible] ಕೆನರಾ ಪ್ರೆಸ್"ದಲ್ಲಿ ಮುದ್ರಿಸಿ [illegible]

ವರ್ಗಣಿಯ ದರ
ಕುಮಟೆಯಲ್ಲಿ
[illegible]
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

Reg. No. B. 1270 Monday, 22nd July, 1946.

ಕಾನಡಾವೃತ್ತ

ವರ್ಷ ೨೯.] THE KANARA NEWS. [ಸಂಚಿಕೆ ೪.

ಕುಮಟಾ:- ಸೋಮವಾರ, ತಾ ೨೨ ನೇ ಜುಲೈ ೧೯೪೬ನೇ ಇಸವಿ

ಜಾಹೀರಾತುಗಳ ದರ:-
[illegible]
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವುದು.

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

[illegible]

[illegible]

[illegible]

[illegible]

[illegible]

ಹೊನ್ನಾವರ— (ತಾ ೨೦-೭-೪೬) [illegible]

[illegible]

[illegible]

[illegible]

[illegible]

[illegible]

[illegible]

[illegible]

ಬೈಲೂರ— [illegible]

[illegible]

ಶಿರಾಲಿ— (ತಾ ೧೭-೭-೪೬) [illegible]

[illegible]

ಭಟಕಳ— (ತಾ ೨೦-೭-೪೬) [illegible]

ಶಿರಸಿ— (ತಾ ೨೧-೭-೪೬) [illegible]

(೪ನೇ ಪುಟದ ಮೇಲೆ ಮುಂದರಿಸಿದೆ)

The Agricultural & Industrial Bank, Ltd.
[Incorporated in British India Liability of Members limited]
Head Office LAXMI NIVAS Buildings, COONDAPOOR. S. I.

Authorised Capital	Rs. 25,00,000
Issued & Subscribed Capital	" 11,61,850
Paid up Capital & Reserves	" 6,07,747-2-0

(as on 30-6 1946)
Total working Resources exceed Rs 50 Lakhs
All kinds of Banking business transacted

COONDAPOOR,
1st July, 1946

K Vittaldas Shenai,
Managing Director